
ಶ್ರೀಮನ್ಮಹಾಭಾರತ

ಭಾರತ ದರ್ಶನ ಪ್ರಕಾಶನ



ಶಾಂತಿಪರ್ವ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಸಂಪುಟ ೨೫

ಭಾರತ ದರ್ಶನ ಪ್ರಕಾಶನ

ಶ್ರೀಮನ್ಮಹಾಭಾರತ

(ವ್ಯಾಸಭಾರತದ ಕನ್ನಡ ಸರಳಾನುವಾದ)

ಭಾತಿ ಸರ್ವೇಷು ವೇದೇಷು
ರತಿಃ ಸರ್ವೇಷು ಜನ್ತುಷು ।
ತರಣಂ ಸರ್ವತೀರ್ಥಾನಾಂ
ತೇನ ಭಾರತಮುಚ್ಯತೇ ॥

ಸಂಪುಟ 25

ಮುದ್ರಕರು:
ಭಾರತ ದರ್ಶನ ಮುದ್ರಣಾಲಯ
163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ: 080-26765381

ಪ್ರಥಮ ಇ-ಮುದ್ರಣ ಜನವರಿ ೨೦೧೪

ಆದಿ ಅಧ್ಯಕ್ಷರು:

ಪರಮಪೂಜ್ಯ ಶ್ರೀ ಶ್ರೀ
ರಂಗಪ್ರಿಯಮಹಾದೇಶಿಕಸ್ವಾಮಿಗಳವರು

ಆದಿ ವ್ಯವಸ್ಥಾಪಕ ಸಂಪಾದಕರು:

ದಿ|| ಕೆ.ಎಸ್. ಕೌಶಿಕ್ ('ವಿಶ್ವಾಮಿತ್ರ')

ಆದಿ ಸಂಪಾದಕರು:

ದಿ|| ವಿದ್ವಾನ್ ಹೆಚ್.ಎನ್. ರಂಗಸ್ವಾಮೀ

ಆದಿ ಸಂಪಾದಕರು:

ದಿ|| ವಿದ್ವಾನ್ ರಾಮೇಶ್ವರಾವಧಾನೀ

ಸಂಪಾದಕ ಮಂಡಲಿ:

ಶ್ರೀ ಶ್ರೀಹರಿ
ಶ್ರೀ ನೆ.ವೆಂ. ಶ್ರೀನಿವಾಸರಾಯ

ಶ್ರೀ ಎ. ಸೂರ್ಯನಾರಾಯಣ್,M.A. B.Com., B.L.,
ಕೋಶಾಧ್ಯಕ್ಷರು

ವಿನಮ್ರವಚನಗಳು

ಕರುಣಾಮಯನಾದ ಪರಮಾತ್ಮನ ದಯೆಯಿಂದಲೂ, ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ ಶ್ರೀಮನ್ಮಹಾಭಾರತದ ಇಪ್ಪತ್ತೈದನೆಯ ಕುಸುಮರೂಪವಾದ ಸಂಪುಟವನ್ನು ಭಗವತ್ಪಾದಾರವಿಂದಗಳಲ್ಲಿ ಭಕ್ತಿ ಪೂರ್ವಕವಾಗಿ ಸಮರ್ಪಿಸಿ ಪ್ರಸಾದರೂಪವಾದ ಈ ಸಂಪುಟವನ್ನು ನಮ್ಮ ಪ್ರಿಯವಾಚಕರ ಅಂಜಲಿಪುಟಗಳಲ್ಲಿಡುತ್ತಿದ್ದೇವೆ. ಈ ಸಂಪುಟದಲ್ಲಿ ಮೋಕ್ಷ ಧರ್ಮಪರ್ವದ ೩೧೮ನೆಯ ಅಧ್ಯಾಯವು ಮುಗಿದಿದೆ. ಹಿಂದಿನ ಸಂಪುಟ ದಲ್ಲಿಯೇ ಸೂಚಿಸಿದ್ದಂತೆ ಶಾಂತಿಪರ್ವದಲ್ಲಿ ಇನ್ನೂ ಒಂದು ಸಂಪುಟಕ್ಕೆ ಸಾಕಾಗುವಷ್ಟು ಗ್ರಂಥವು ಉಳಿದಿದೆ. ಈ ಸಂಪುಟವು ಅಧ್ಯಾತ್ಮಪಿಪಾಸುಗಳಿಗೆ ರಸವತ್ತಾಗಿದೆ. ಇದರಲ್ಲಿ ಸಾಂಖ್ಯ ಮತ್ತು ಯೋಗಗಳ ವಿಸ್ತಾರವಾದ ವರ್ಣನೆಯಿದೆ. ವಿಷಯಗಳ ಪ್ರತಿಪಾದನೆಯು ಸರಳವೂ, ಬೋಧ ಪ್ರದವೂ, ನಿಶ್ಚಯಾತ್ಮಕವೂ ಆಗಿದೆ.

೨೪ನೆಯ ಸಂಪುಟದ ಪ್ರಕಾಶನವಾದನಂತರ ೧೦ ಮತ್ತು ೧೩ನೆಯ ಸಂಪುಟಗಳ ಪುನರ್ಮುದ್ರಣವನ್ನು ಮುಗಿಸಿ ಈ ಸಂಪುಟವನ್ನು ಹೊರ ತಂದಿರುತ್ತೇವೆ. ಪ್ರಸಕ್ತ ಏಳು ಸಂಪುಟಗಳ ಪುನರ್ಮುದ್ರಣವಾಗಬೇಕಾಗಿದೆ. ಮೂರು-ನಾಲ್ಕು ತಿಂಗಳ ಅವಧಿಯಲ್ಲಿ ಇನ್ನೂ ನಾಲ್ಕೈದು ಸಂಪುಟಗಳು ಮುಗಿದುಹೋಗಲಿವೆ. ಹೊಸ ಗ್ರಾಹಕರಾಗಲೀ ಹಳೆಯ ಗ್ರಾಹಕರಾಗಲೀ– ಈ ಬಗೆಗೆ ಆತಂಕಪಡಬೇಕಾಗಿಲ್ಲ. ನಮ್ಮ ಕಾರ್ಯಕ್ರಮದಂತೆ ಒಂದು ಹಳೆಯ ಮತ್ತು ಒಂದು ಹೊಸ ಸಂಪುಟವನ್ನು ಅನುಕ್ರಮವಾಗಿ ಮುದ್ರಿಸುತ್ತೇವೆ. ಆದರೆ ನಮ್ಮ ಪ್ರಾರ್ಥನೆಯನ್ನು ಮಾತ್ರ ನಮ್ಮ ಪ್ರಿಯಗ್ರಾಹಕರು ನೆರವೇರಿಸಿಕೊಡಲಿಲ್ಲವೆಂದು ವಿಷಾದಿಸಬೇಕಾಗಿದೆ. ಒಬ್ಬ ಗ್ರಾಹಕರು ಇಬ್ಬ ರನ್ನಾದರೂ ಗ್ರಾಹಕರನ್ನಾಗಿ ಮಾಡಿಕೊಡಬೇಕೆಂಬುದು ನಮ್ಮ ಪ್ರಾರ್ಥನೆ ಯಾಗಿದ್ದಿತು. ಈಗ ನಮಗೆ ಎಂಟು ಸಾವಿರ ಗ್ರಾಹಕರಿದ್ದು, ನಾವು ಇವರ ನೆರವಿನಿಂದ ಎರಡು ಸಾವಿರ ಹೊಸ ಗ್ರಾಹಕರಾದರೂ ಸಿಗುವರೆಂಬ ಆಶಯದಿಂದಿದ್ದೆವು. ಈ ಕಾರಣದಿಂದಲೇ ಪ್ರತಿಯೊಬ್ಬರಿಗೂ ಪ್ರಾರ್ಥನಾ ಪತ್ರವನ್ನೂ – ಬ್ಯಾಂಕಿನ ಸೌಲಭ್ಯಗಳ ಬಗೆಗೆ ಇರುವ ಪರಿಪತ್ರಗಳನ್ನೂ ಕಳುಹಿಸಲಾಗಿದ್ದಿತು. ಆದರೆ ಅಂದಿನಿಂದ ಇಂದಿನವರೆಗೆ ನಮಗೆ ದೊರೆತಿರುವ

ಗ್ರಾಹಕರು ಎರಡು ನೂರ ಹದಿನೆಂಟು ಮಂದಿ ಮಾತ್ರ (218). ಹಿಂದಿನಿಂದಲೂ ಅಭಿಮಾನವನ್ನು ತೋರುತ್ತಿರುವ ಕೆಲವು ಮಂದಿ ಗ್ರಾಹಕರಲ್ಲಿ ಒಬ್ಬೊಬ್ಬರು ಎಂಟು-ಹತ್ತು ಮಂದಿಯನ್ನು ಗ್ರಾಹಕರನ್ನಾಗಿ ಮಾಡಿಕೊಟ್ಟಿರುತ್ತಾರೆ. ಇಂತಹ 10-15 ಮಂದಿ ಹಿತೈಷಿಗಳ ಮೂಲಕ ಎಂಬತ್ತೆಂಟು ಮಂದಿ ಗ್ರಾಹಕರಾಗಿರುತ್ತಾರೆ. ಉಳಿದ 130 ಗ್ರಾಹಕರನ್ನು 80 ಮಂದಿ ಗ್ರಾಹಕರು ಒದಗಿಸಿಕೊಟ್ಟಿರುತ್ತಾರೆ. ಅರ್ಥಾತ್ ನಮ್ಮ ಪ್ರಾರ್ಥನೆಗೆ ಓಗೊಟ್ಟು ಕಾರ್ಯಮಾಡಿರುವವರ ಸಂಖ್ಯೆ 8,000 ಗ್ರಾಹಕರಲ್ಲಿ 100 ಮಂದಿ ಮಾತ್ರ.

ನಮ್ಮ ಪ್ರಿಯಗ್ರಾಹಕರಲ್ಲಿ ಪುನಃ ವಿನಂತಿಸುತ್ತೇವೆ. ಧರ್ಮದ ವಿಷಯದಲ್ಲಿ ಅಲಸಿಕೆಯು ಸಲ್ಲದು. ಇಂದು ಮಾಡಬೇಕಾದುದನ್ನು ಇಂದೇ ಮಾಡಿಬಿಡಬೇಕು. ನಾಳೆಗೆ ಮುಂದೂಡಬಾರದು. ಮಂಗಳಮಯವಾದ ಮಹಾಭಾರತದ ಸಂಪುಟಗಳು ನಿಮ್ಮ ಮನೆಗಳಲ್ಲಿರುವಂತೆಯೇ ಬೇರೆಯವರ ಮನೆಗಳಲ್ಲಿಯೂ ಇರಬೇಕೆಂದು ನಿಮಗೆ ಅನಿಸುವುದಿಲ್ಲವೇ? ನಿಮ್ಮ ಅಸಂಖ್ಯಾತರಾದ ಸ್ನೇಹಿತರಲ್ಲಿ–ಅಸಂಖ್ಯಾತರಾದ ಬಂಧುಗಳಲ್ಲಿ ಇಬ್ಬರನ್ನು ಆರಿಸಿಕೊಳ್ಳಿರಿ. ಅವರಿಗೆ ಈ ಮಹಾಗ್ರಂಥವನ್ನು ಕೊಂಡುಕೊಳ್ಳಬೇಕೆಂದು ಒತ್ತಾಯಮಾಡಿರಿ. ಒತ್ತಾಯಮಾಡುವುದು ದೋಷವಲ್ಲ. ಕಹಿಯಾದ ಔಷಧವನ್ನು ಬಲವಂತವಾಗಿಯೇ ಕುಡಿಸಬೇಕಾಗುತ್ತದೆ. ಮೇಲಾಗಿ ಮಹಾಭಾರತವು ಕಹಿಯೂ ಅಲ್ಲ. ಓದಲು ತೊಡಗಿಸುವುದೊಂದೇ ನಮ್ಮ ಕರ್ತವ್ಯವಾಗಿರುತ್ತದೆ.

ಎಪ್ಪತ್ತು-ಎಪ್ಪತ್ತೈದು ವಯಸ್ಸಿನ ವೃದ್ಧರೊಬ್ಬರಿಗೆ ಸದಾ ಕಾದಂಬರಿಗಳನ್ನು ಓದುವುದರಲ್ಲಿಯೇ ಹವ್ಯಾಸವಿದ್ದಿತು. ಅವರು ಆಢ್ಯರಾಗಿದ್ದರು. ಅವರಿಗೆ ಸಂಪುಟಗಳನ್ನು ಕೊಟ್ಟು ಬರುವಂತೆ ಅವರ ಸ್ನೇಹಿತರೊಬ್ಬರು ಮಾಡಿದ್ದ ಸಲಹೆಯಂತೆ ನಮ್ಮ ಪ್ರತಿನಿಧಿಗಳು ಅವರ ಮನೆಗೆ ಇಪ್ಪತ್ತು ಸಂಪುಟಗಳ ಪೆಟ್ಟಿಗೆಯನ್ನು ಹೊತ್ತುಕೊಂಡು ಹೋದರು. ಕಾದಂಬರಿಯನ್ನು ಹಿಡಿದಿದ್ದ ಆ ವೃದ್ಧರು ಪುಸ್ತಕಗಳ ಕಂತೆಯನ್ನು ನೋಡಿದ ಕೂಡಲೇ ಹೌಹಾರಿದರು. "ಇದನ್ನು ಯಾರ್ರೀ ಓದುತ್ತಾರೆ? ನಮ್ಮ ಮನೆಯಲ್ಲಿ ಇಟ್ಟುಕೊಳ್ಳಲು ಜಾಗವೆಲ್ಲಿದೆ? ಇದನ್ನು ಇಲ್ಲಿಗೆ ತರಲು

ನಿಮಗೆ ಯಾರು ಹೇಳಿದರು? " – ಇದೇ ನಮ್ಮ ಪ್ರತಿನಿಧಿಗಳಿಗೆ ದೊರೆತ ಅದ್ಭುತಸ್ವಾಗತ! ಬೇಸತ್ತ ನಮ್ಮ ಪ್ರತಿನಿಧಿಗಳು ಸಂಪುಟಗಳನ್ನು ವಾಪಸು ತರದಿದ್ದುದೇ ಒಂದು ಹೆಚ್ಚಳ. ಮೇಲಾಗಿ ಮುದುಕರ ಸ್ನೇಹಿತರು ಹಣದ ಬಗೆಗೆ ಯೋಚಿಸಬೇಕಾಗಿಲ್ಲವೆಂದು ಆಶ್ವಾಸನೆಯನ್ನಿತ್ತಿದ್ದ ಕಾರಣ ನಮ್ಮ ಪ್ರತಿನಿಧಿಗಳು ಮಂಗಳಮಯವಾದ ಸಂಪುಟಗಳ ಪೆಟ್ಟಿಗೆಯನ್ನು ಅಲ್ಲಿಯೇ ಬಿಟ್ಟು ಹಿಂದಿರುಗಿದರು. ಒಂದು ವರ್ಷವಾದರೂ ಹಣವು ಯಾರಿಂದಲೂ ಬರಲಿಲ್ಲ. ಸಂಪುಟಗಳನ್ನಾದರೂ ವಾಪಸು ತರುವ ಆಶಯದಿಂದ ಪುನಃ ನಮ್ಮ ಪ್ರತಿನಿಧಿಗಳು ಅವರ ಮನೆಗೆ ಹೋದರು. ಆಗ ನಮ್ಮ ಪ್ರತಿನಿಧಿಗಳಿಗೆ ಅಚ್ಚರಿಯೊಂದು ಕಾದಿದ್ದಿತು. ಒಂದು ವರ್ಷದ ಹಿಂದೆ ಸಂಪುಟಗಳ ಬಗೆಗೆ ಮೂದಲಿಸಿದ್ದ ವೃದ್ಧರ ಕೈಗಳನ್ನು ಮಹಾಭಾರತದ ಸಂಪುಟವು ಅಲಂಕರಿಸಿದ್ದಿತು. ನಮ್ಮ ಪ್ರತಿನಿಧಿಗಳನ್ನು ಕಂಡೊಡನೆಯೇ ಉತ್ಸಾಹದ ಸ್ವಾಗತವೂ ಸಿಕ್ಕಿತು. ತಿಂಡಿ-ಕಾಫಿಗಳ ಉಪಚಾರವೂ ಆಗಿ ಚಂದಾಹಣವೂ ಸಿಕ್ಕಿತು. ಈಗ ಆ ಮಹನೀಯರು ಕಾದಂಬರಿಗಳನ್ನು ದೂರವಾಗಿಟ್ಟು ಯಾವಾಗಲೂ ಮಹಾಭಾರತದ ವ್ಯಾಸಂಗದಲ್ಲಿಯೇ ತೊಡಗಿದ್ದಾರೆ. ಇದೊಂದು ನಿದರ್ಶನ.

'ನಿಮ್ಮ ಪುರಾಣ ಯಾರಿಗೆ ಬೇಕು?' – ಎಂಬ ತಾತ್ಸಾರವಿರುವುದು ಸ್ವಾಭಾವಿಕ. ಆದರೆ ಮಹಾಭಾರತವು ಸಾಮಾನ್ಯರು ತಿಳಿದಿರುವಂತೆ ಗೊಡ್ಡು ಪುರಾಣವಲ್ಲ. ಕುಮಾರವ್ಯಾಸನ ಮಾತಿನಲ್ಲಿ : "ಅರಸುಗಳಿಗಿದು ವೀರ, ದ್ವಿಜರಿಗೆ ಪರಮವೇದದ ಸಾರ, ಯೋಗೀಶ್ವರರ ತತ್ತ್ವವಿಚಾರ, ಮಂತ್ರಿಜನಕೆ ಬುದ್ಧಿಗುಣ." ಈ ಎಲ್ಲವೂ ಇದಕ್ಕಿಂತಲೂ ಹೆಚ್ಚಿನ ವಿಷಯಗಳೂ ಮಹಾ ಭಾರತದಲ್ಲಿವೆ. ಮನುಷ್ಯನು ಸುಸಂಸ್ಕೃತನಾಗಬೇಕಾದರೆ ನಿಜವಾದ ಭಾರ ತೀಯನಾಗಬೇಕಾದರೆ ಮಹಾಭಾರತವನ್ನು ಅಧ್ಯಯನಮಾಡಲೇಬೇಕು. ವಿಶ್ವವನ್ನೇ ಆರ್ಯಮಯವನ್ನಾಗಿ ಮಾಡುವ ಮಹಾತತ್ತ್ವಗಳು ಇದರಲ್ಲಡ ಗಿವೆ. ಆದುದರಿಂದ ಇದರ ಪ್ರಚಾರಕಾರ್ಯವೂ ಎಲ್ಲರಿಗೂ ಸೇರಿದ್ದಾಗಿದೆ. ಆದುದರಿಂದ ನಮ್ಮ ಗ್ರಾಹಕರೆಲ್ಲರೂ ಇದು ತಮ್ಮ ಕರ್ತವ್ಯವೆಂದು ಭಾವಿಸಿ ಇಬ್ಬರನ್ನಾದರೂ ಗ್ರಾಹಕರನ್ನು ಮಾಡಿಕೊಡಲೇಬೇಕೆಂದು ಒತ್ತಾಯ ಪೂರ್ವಕವಾಗಿ ಪ್ರಾರ್ಥಿಸುತ್ತೇವೆ. ಈ ಮಹಾಪವಿತ್ರಕಾರ್ಯವು ಪೂರ್ಣ

ವಾಗಬೇಕಾದರೆ–ಸರ್ವತೋಮುಖವಾಗಿ ಬೆಳೆಯಬೇಕಾದರೆ–ಗುರು ಮತ್ತು ಭಗವಂತರ ಪೂರ್ಣಾನುಗ್ರಹವಿರಬೇಕು. ಅಂತೆಯೇ ಭಗವತ್ಸ್ವರೂಪರಾದ ನಮ್ಮ ಗ್ರಾಹಕರ ಒತ್ತಾಸೆಯೂ ಇರಬೇಕು. ಆದುದರಿಂದ ಮುಂದಿನ–ಮಂಗಳಮಯವಾದ ಶಾಂತಿಪರ್ವದ ಕಡೆಯ ಸಂಪುಟವು ಹೊರಬೀಳುವ ವೇಳೆಗಾದರೂ ನಮ್ಮ ಗ್ರಾಹಕರು ನಮ್ಮ ಪ್ರಾರ್ಥನೆಗೆ ಮನ್ನಣೆಯನ್ನಿತ್ತು, ಪ್ರತಿಜ್ಞೆಯನ್ನಾದರೂ ಕೈಗೊಂಡು ಇಬ್ಬರು ಗ್ರಾಹಕರನ್ನಾದರೂ ಮಾಡಿ ಕೊಡುವರೆಂಬ ಭರವಸೆಯಿಂದಿರುತ್ತೇವೆ. ಈಗ ಗ್ರಾಹಕರನ್ನು ಮಾಡಿಕೊಟ್ಟಿರುವ ಮಹನೀಯರೆಲ್ಲರಿಗೂ ನಮ್ಮ ಕೃತಜ್ಞತೆಯನ್ನು ಅರ್ಪಿಸುವುದಲ್ಲದೇ ಅವರು ತಮ್ಮ ಪ್ರಯತ್ನವನ್ನು ಮುಂದುವರಿಸುತ್ತಲೇ ಇರಬೇಕೆಂದೂ ಕೇಳಿಕೊಳ್ಳುತ್ತೇವೆ.

೨೪ನೆಯ ಸಂಪುಟದ ಪ್ರಕಾಶನಸಮಾರಂಭವು 22-5-1982ನೇ ಶನಿವಾರ ಸಾಯಂಕಾಲ ವಿಶ್ವೇಶ್ವರಪುರದಲ್ಲಿರುವ ಆನಂದಕಲ್ಯಾಣಮಂದಿರದ ಭವ್ಯಸಭಾಂಗಣದಲ್ಲಿ ಪರಮಪೂಜ್ಯ ಸದ್ಗುರು ಸಂತ ಭದ್ರಗಿರಿ ಶ್ರೀ ಕೇಶವ ದಾಸ್‌ಜೀಯವರ ಘನ ಅಧ್ಯಕ್ಷತೆಯಲ್ಲಿ ನಡೆಯಿತು. ಸಮಾರಂಭವು ವೇದಘೋಷದಿಂದ ಪ್ರಾರಂಭವಾಯಿತು. ಕು|| ನಾಗವೇಣಿಯವರು ಉಭಯ ಭಾಷಾವಿದ್ವಾನ್ ಹೆಚ್.ವಿ. ನಾರಾಯಣಶಾಸ್ತ್ರಿಗಳು ರಚಿಸಿದ್ದ ಸ್ವಾಗತ ಪದ್ಯಮಾಲಿಕೆಯನ್ನು ಸುಶ್ರಾವ್ಯವಾಗಿ ಹಾಡಿದರು. ವಿದ್ವಾನ್ ಹೆಚ್. ಎನ್. ರಂಗಸ್ವಾಮಿಯವರು ಪ್ರಕಾಶನದ ಪ್ರಗತಿಯ ಬಗೆಗೆ ಸಿಂಹಾವ ಲೋಕನಮಾಡಿ ಗ್ರಾಹಕರು ಹೆಚ್ಚು ಸಂಖ್ಯೆಯಲ್ಲಿ ಆಗಬೇಕೆಂದೂ–ಹೆಚ್ಚು ತ್ತಿರುವ ಬೆಲೆಗಳನ್ನು ಮನಗಂಡು ಹಿಂದೆ ಪೂರ್ಣಮಾಲೆಗೆ ಗ್ರಾಹಕರಾಗಿರು ವವರೆಲ್ಲರೂ ಹೆಚ್ಚು ಮಾಡಿರುವಷ್ಟು ಚಂದಾಹಣವನ್ನು ಕೊಟ್ಟು ಒತ್ತಾಸೆ ನೀಡಬೇಕೆಂದೂ–ಕಳಕಳಿಯಿಂದ ವಿನಂತಿಸಿಕೊಂಡರು. ೨೪ನೆಯ ಸಂಪುಟದ ಪ್ರಕಾಶನವಾದನಂತರ ಶ್ರೀಮತೀ ಪ್ರಮೀಳಾ ಮುರಳೀಧರ್‌ರವರು ಪ್ರಕಾ ಶಿತಸಂಪುಟದಿಂದ ಆಯ್ದ ಶ್ಲೋಕಗಳನ್ನು ಸುಶ್ರಾವ್ಯವಾಗಿ ಹಾಡಿದರು. ತಮ್ಮ ಅಮೃತಹಸ್ತದಿಂದ ೨೪ನೆಯ ಸಂಪುಟವನ್ನು ಪ್ರಕಾಶನಗೊಳಿಸಿ ಕೊಟ್ಟ ಶ್ರೀ ಕೇಶವದಾಸ್‌ಜೀಯವರು ಅಧ್ಯಕ್ಷಪೀಠದಿಂದ ಮಾತನಾಡುತ್ತಾ–'ವಿಶ್ವಶಾಂತಿ, ತ್ಯಾಗ, ಸೌಹಾರ್ದ, ಪ್ರಪತ್ತಿ, ಅನುರಕ್ತಿ ಇತ್ಯಾದಿ ತತ್ತ್ವ

ಗಳನ್ನೇ ಬೋಧಿಸುವ ಮಹಾಭಾರತಗ್ರಂಥವು ಪಂಚಮವೇದ. ಇಂತಹ ಅನುಪಮಗ್ರಂಥದ ಸಂಪೂರ್ಣವಾದ ಕನ್ನಡ ಅವತರಣಿಕೆಯ ಯೋಜನೆಯು ಅದ್ವಿತೀಯಸ್ತುತ್ಯಕಾರ್ಯ. ಮೌಂಟ್ ಎವರೆಸ್ಟಿನ ಆರೋಹಣಕ್ಕಿಂತಲೂ ಈ ಸಾಧನೆಯು ಅಧಿಕವಾದುದು'–ಎಂದು ಹೇಳಿ ಎಲ್ಲರೂ ಈ ಸಂಪುಟಗಳನ್ನು ಪಡೆದುಕೊಂಡು ಪ್ರೋತ್ಸಾಹಿಸುವುದಲ್ಲದೇ ಇಂತಹ ಕಾರ್ಯಕ್ಕೆ ಉದಾರ ವಾದ ಕೊಡುಗೆಯನ್ನೂ ನೀಡಬೇಕೆಂದು ಉಪದೇಶಿಸಿ, ಐದು ನೂರ ಒಂದು ರೂಪಾಯಿಗಳನ್ನು ಅನುಗ್ರಹಿಸಿ ಭಾರತ ದರ್ಶನ ಪ್ರಕಾಶನಕ್ಕೆ ಕೊಡುವುದರ ಮೂಲಕ ತಾವು ಉಪದೇಶಿಸಿದುದನ್ನು ಕೃತಿಯಲ್ಲಿಯೂ ತೋರಿಸಿದರು.

ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ವರದದೇಶಿಕಾಚಾರ್ಯರಂಗ ಪ್ರಿಯರು ೨೪ನೆಯ ಸಂಪುಟದಲ್ಲಿರುವ ರಸವತ್ತಾದ ಭಾಗಗಳನ್ನು ವಿದ್ವತ್ಪೂರ್ಣವಾದ ಮತ್ತು ನಿರರ್ಗಳವಾದ ಭಾಷಣದಿಂದ ಶ್ರೋತೃಗಳಿಗೆ ಪರಿಚಯಮಾಡಿಕೊಟ್ಟರು.

ರಾಮಚಂದ್ರಾಪುರಮಠದ ಪರಮಹಂಸ ಪರಿವ್ರಾಜಕಾಚಾರ್ಯ ಜಗದ್ಗುರು ಶ್ರೀಶಂಕರಾಚಾರ್ಯ ಶ್ರೀ ಶ್ರೀ ರಾಘವೇಂದ್ರಭಾರತೀಸ್ವಾಮಿ ಗಳವರು ಕಳುಹಿಸಿಕೊಟ್ಟಿದ್ದ ಸುವರ್ಣಮಂತ್ರಾಕ್ಷತೆಯನ್ನು ಪರಮಪೂಜ್ಯ ಶ್ರೀ ಕೇಶವದಾಸ್‌ಜೀಯವರು ಸಂಪಾದಕಮಂಡಲಿಯ ವಿದ್ವಾಂಸರಿಗೆ ಅನುಗ್ರಹಿಸಿ ಕೊಟ್ಟರು. ವಿದ್ವಾನ್ ರಾಮೇಶ್ವರಾವಧಾನಿಗಳ ವಂದನಾರ್ಪಣೆ ಮತ್ತು ಶಾಂತಿಪಾಠಗಳೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಶ್ರೀಮನ್ಮಹಾಭಾರತದ ೨೪ನೇ ಸಂಪುಟದ ಉಪಪ್ರಕಾಶನಕಾರ್ಯಕ್ರಮವನ್ನು ಅಲ್ಲಿನ ವಿಶ್ವ ಹಿಂದೂ ಪರಿಷತ್ತಿನವರು ವ್ಯವಸ್ಥೆಮಾಡಿದ್ದರು. ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗುಂಡಯ್ಯಶೆಟ್ಟಿಯವರು ಸ್ಥಳೀಯ ಆಢ್ಯ ವರ್ತಕರಾದ ಶ್ರೀ ಬಿ. ಚಿನ್ನಪ್ಪಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಂಪುಟವನ್ನು ಪ್ರಕಾಶನಗೊಳಿಸಿದರು. ಪ್ರಕಾಶನ ಸಂಸ್ಥೆಯ ಅಧ್ಯಕ್ಷರಾದ ವೇ॥ಬ್ರ॥ಶ್ರೀ॥ ಎಚ್. ಎಸ್. ವರದದೇಶಿಕಾಚಾರ್ಯರಂಗಪ್ರಿಯರವರು ಸಂಪುಟವನ್ನು

ಪರಿಚಯಿಸಿದರು. ಶ್ರೀ ಜೆ. ಎಸ್. ಪಾರ್ಥಸಾರಥಿಯವರಿಂದ ಹಾಗೂ ಶ್ರೀ ಟಿ.ಎನ್. ಪ್ರಭಾಕರ್‌ರವರಿಂದ ಸ್ವಾಗತ-ವಂದನಾರ್ಪಣೆಗಳು ನಡೆದುವು. ತರುಣಕಾರ್ಯಕರ್ತರಾದ ಶ್ರೀ ಬಿ.ಆರ್. ವಿಶ್ವನಾಥರವರು ತೀವ್ರಶ್ರಮವಹಿಸಿ, ಆ ಊರಿನಲ್ಲಿ ಒಂದು ನೂರು ಗ್ರಾಹಕರನ್ನು ಮಾಡಿಕೊಡಲು ಪಣತೊಟ್ಟು ಪ್ರಗತಿಯ ಹಾದಿಯಲ್ಲಿದ್ದಾರೆ. ಅಲ್ಲಿನ ಎಲ್ಲ ಕಾರ್ಯಕರ್ತರಿಗೂ ನಮ್ಮ ಶುಭಾಶಯಗಳು.

ಈ ಸಂಪುಟಕ್ಕೆ ಡಾ|| ಎನ್. ಎಸ್. ಅನಂತರಂಗಾಚಾರ್ಯರು ವಿದ್ವತ್ಪೂರ್ಣವಾದ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿರುತ್ತಾರೆ. ಇವರಿಗೆ ನಮ್ಮ ಹೃತ್ಪೂರ್ವಕವಾದ ವಂದನೆಗಳು.

ಒಂದು ದಿನದ ವಿಚ್ಛಿತ್ತಿಯೂ ಇಲ್ಲದೇ ನಾವು ಸತತವಾಗಿ ಹೊಸ ಮತ್ತು ಹಳೆಯ ಸಂಪುಟಗಳನ್ನು ಪ್ರಕಾಶಿಸುತ್ತಲೇ ಇರುವುದರಿಂದ ಸಂಪಾದಕ ಮಂಡಲಿಯ ವಿದ್ವಾಂಸರು ವಿಶ್ರಾಂತಿಯೇ ಇಲ್ಲದೇ ಕೆಲಸಮಾಡಬೇಕಾಗಿದೆ. ಆದರೂ ಕೂಡ ಸ್ವಲ್ಪವಾದರೂ ಬೇಸರಿಕೆಯಿಲ್ಲದೇ ಸಂಪಾದನಾ ಕಾರ್ಯವನ್ನು ಈ ಘನವಿದ್ವಾಂಸರು ಶ್ರದ್ಧೆಯಿಂದ, ಪ್ರೀತಿಯಿಂದ, ವಿಶ್ವಾಸ ದಿಂದ ನಿರ್ವಹಿಸಿಕೊಡುತ್ತಿದ್ದಾರೆ. ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ವರದದೇಶಿಕಾಚಾರ್ಯರಂಗಪ್ರಿಯರು ಸೂಕ್ತವಾದ ಸಲಹೆಗಳನ್ನಿತ್ತು ಗ್ರಂಥ ಪರಿಶೋಧನೆಯಲ್ಲಿ ಸಂಪೂರ್ಣವಾದ ಸಹಕಾರವನ್ನೀಯುತ್ತಿದ್ದಾರೆ. ನಿಃಸ್ಪೃಹತೆಗೆ ಸಾಕಾರಮೂರ್ತಿಗಳಂತಿರುವ ಇವರೆಲ್ಲರಿಗೂ ಹೃತ್ಪೂರ್ವಕವಾದ ವಂದನೆ ಗಳನ್ನು ಸಮರ್ಪಿಸುತ್ತೇವೆ. ಪರಮಕಾರುಣಿಕನಾದ ಭಗವಂತನು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕಾರವೀಯುತ್ತಿರುವ ಸಕಲರಿಗೂ ಆಯುರಾರೋಗ್ಯ- ಐಶ್ವರ್ಯಾದಿಗಳನ್ನು ಅನುಗ್ರಹಿಸಲೆಂದು ಅಂತಃಕರಣ ಪೂರ್ವಕವಾದ ಪ್ರಾರ್ಥನೆಯೊಡನೆ ವಿರಮಿಸುತ್ತೇವೆ.

—ಪ್ರಕಾಶಕರು.

ಶಾನ್ತಿಃ ಪುಷ್ಟಿಸ್ತುಷ್ಟಿಶ್ಚಾಸ್ತು. ಸಮಸ್ತಸನ್ಮಙ್ಗಲಾನಿ ಭವನ್ತು.

ಮುನ್ನುಡಿ

ಶ್ರೀಮನ್ಮಹಾಭಾರತ ಮತ್ತು ಶ್ರೀಮದ್ರಾಮಾಯಣ – ಇವೆರಡೂ ಭಾರತೀಯಸಂಸ್ಕೃತಿಯನ್ನು ಉಜ್ವಲವಾಗಿ ಬೆಳಗುವ ಪ್ರಕಾಶಸ್ತಂಭಗಳಾಗಿವೆ. 'ಪಂಚಮವೇದ' ಎಂದೂ '**ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ ಕ್ವಚಿತ್**' ಎಂದೂ ಪ್ರಶಂಸೆಗೆ ಪಾತ್ರವಾಗಿರುವ ಮಹಾಭಾರತ ಶ್ರೀಕೃಷ್ಣದ್ವೈಪಾಯನವ್ಯಾಸರ ವಿಶ್ವಪ್ರಜ್ಞೆಗೆ ಸಾಕ್ಷಿಯಾಗಿದೆ. ರೋಚಕವಾದ ಆಖ್ಯಾನೋಪಾಖ್ಯಾನಗಳಿಂದ ಮಾನವಜೀವನದ ಪರಮಮೌಲ್ಯಗಳನ್ನೂ, ಗೊತ್ತು-ಗುರಿಗಳನ್ನೂ ನಿಖರವಾಗಿಯೂ ನೇರವಾಗಿಯೂ ತಿಳಿಸಿಕೊಡುವ ಈ ಮಹಾಕೃತಿ ಒಂದು ದೇಶಕ್ಕೆ, ಒಂದು ಕಾಲಕ್ಕೆ, ಒಂದು ಜನಾಂಗಕ್ಕೆ ಎಂದು ಸೀಮಿತವಾಗದೇ ಎಲ್ಲ ಕಾಲಕ್ಕೂ, ಎಲ್ಲ ದೇಶಕ್ಕೂ, ಎಲ್ಲ ಜನಾಂಗಗಳಿಗೂ ಅನ್ವಯಿಸುವುದಾಗಿದೆ. ಶಾಶ್ವತಧರ್ಮಸ್ವರೂಪವನ್ನೂ, ಚಿರಂತನ ಸತ್ಯಗಳನ್ನೂ ನಿರ್ಭೀತಿಯಿಂದ ಉದ್ಘೋಷಿಸುವುದು ಈ ಮಹಾಕೃತಿ.

ವೇದರಹಸ್ಯವನ್ನೂ, ವೇದಸಂಸ್ಕೃತಿಯನ್ನೂ – ಮಂಜುಳವಾದ ರೀತಿಯಲ್ಲಿ ಪ್ರತಿಪಾದಿಸುವ ಇತಿಹಾಸ-ಪುರಾಣಗಳ ಅಧ್ಯಯನವನ್ನು ಮಾಡದೇ ವೇದಹೃದಯವನ್ನರಿಯುವುದು ಶಕ್ಯವಿಲ್ಲವೆಂದು ನಮ್ಮ ಹಿರಿಯರು :

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ।
ಬಿಭೇತ್ಯಲ್ಪಶ್ರುತಾದ್ವೇದಃ ಮಾಮಯಂ ಪ್ರತರಿಷ್ಯತಿ ॥

ಎಂದು ಉಪದೇಶಿಸಿದರು. ವ್ಯಾಸರ ವಿಶ್ವಪ್ರಜ್ಞೆ ಎಂಥವರನ್ನೂ ಬೆರಗುಗೊಳಿಸುವುದು. ಯಾವ ಸಾಮಾನ್ಯಮನುಷ್ಯನೂ ಇಂಥ ಕೃತಿಯನ್ನು ರಚಿಸಲಾರ. ಆದುದರಿಂದಲೇ–

ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್ ।
ಕೋ ಹ್ಯನ್ಯೋ ಭುವಿ ಮೈತ್ರೇಯ ಮಹಾಭಾರತಕೃದ್ಭವೇತ್ ॥

ಎಂದು ವಿಷ್ಣುಪುರಾಣದಲ್ಲಿ ವ್ಯಾಸರಿಗೆ ಭಕ್ತಿಪೂರ್ವಕವಾದ ನಮನವನ್ನು ಅರ್ಪಿಸಿದೆ.

ಭಾರತ ದರ್ಶನ ಪ್ರಕಾಶನದವರು ಈ ಮಹಾಕೃತಿಯ ಪ್ರಕಾಶನ ಮತ್ತು ಪ್ರವರ್ತನಕ್ಕಾಗಿ ತಮ್ಮನ್ನೇ ಅರ್ಪಿಸಿಕೊಂಡಿದ್ದಾರೆ. ಮೂವತ್ತು

ಸಂಪುಟಗಳಲ್ಲಿ ಶ್ರೀಮನ್ಮಹಾಭಾರತದ ಕನ್ನಡಾನುವಾದವನ್ನು ಕನ್ನಡಜನತೆಗೆ ಸಮರ್ಪಿಸಲು ಸಂಕಲ್ಪಿಸಿ ಪರಮಾತ್ಮನ ಅನುಗ್ರಹದಿಂದ 24 ಸಂಪುಟಗಳನ್ನು ಈಗಾಗಲೇ ಹೊರತಂದು, ಈಗ ಈ 25ನೆಯ ಸಂಪುಟವನ್ನು ಪ್ರಕಾಶ ಪಡಿಸುತ್ತಿದ್ದಾರೆ. ನಿರೀಕ್ಷೆಗನುಗುಣವಾದ ಸಹಾಯ-ಸಹಕಾರಗಳು ಒದಗದಿದ್ದರೂ ಧೃತಿಗೆಡದೇ ಮೊದಲಿನ ಯೋಜನೆಗನುಗುಣವಾಗಿ ಒಂದಾದ ಮೇಲೊಂದರಂತೆ ಈ ಸಂಪುಟಗಳನ್ನು ಹೊರತಂದಿದ್ದಾರೆ. ಇಷ್ಟು ದೂರ ಕೈಹಿಡಿದು ನಡೆಸಿದ ದೈವ ಈ ಯೋಜನೆಯನ್ನು ಪೂರ್ಣಗೊಳಿಸುವುದರಲ್ಲಿ ಸಂಶಯವಿಲ್ಲ. 'ಶೇಷಾಧ್ವಲೇಶನಯನೇಕ ಇವಾತಿ ಭಾರಃ?' ಈ ಸ್ತುತ್ಯವಾದ ಪ್ರಯತ್ನಕ್ಕೆ ಎಲ್ಲ ಬಗೆಯ ಸಹಾಯ, ಸಹಕಾರ ಮತ್ತು ಬೆಂಬಲಗಳು ಎಲ್ಲರಿಂದಲೂ ಲಭಿಸುವಂತಾಗಲೆಂದು ಹಾರೈಸುತ್ತೇವೆ.

ಈಗ ಪ್ರಕಾಶವಾಗುತ್ತಿರುವ ಇಪ್ಪತ್ತೈದನೆಯ ಸಂಪುಟ ಶಾಂತಿಪರ್ವಕ್ಕೆ ಸೇರಿದ ಭಾಗವಾಗಿದೆ. ಮೋಕ್ಷಧರ್ಮಪರ್ವವೆಂದು ವಿಖ್ಯಾತವಾಗಿರುವ ಈ ಭಾಗದಲ್ಲಿ ಸಮಗ್ರವಾಗಿ ಪರಮಧರ್ಮಸ್ವರೂಪದ ನಿರೂಪಣೆಯೇ ಇದೆ. ಧರ್ಮದ ಬಗೆಗೆ ಏಳುವ ಸಂಶಯಗಳನ್ನು ಪ್ರಸ್ತಾಪಮಾಡಿ ಅವುಗಳಿಗೆ ಸದುತ್ತರಗಳನ್ನು ಇಲ್ಲಿ ಪ್ರತಿಪಾದಿಸಿದೆ. 'ಸದಾಚಾರವು ಯಾವುದು?' ಎಂಬುವುದನ್ನು ಮನಗಾಣಿಸುವುದೇ ಇದರ ವಿಷಯ ಎನ್ನಬಹುದು. ಮೊದಲಿಗೆ ಬರುವ ಜಾಜಲಿ-ತುಲಾಧಾರಸಂವಾದರೂಪವಾದ ಆಖ್ಯಾನ ಈ ಧರ್ಮರಹಸ್ಯವನ್ನು ಮನಗಾಣಿಸುತ್ತದೆ. ತುಲಾಧಾರ ವೈಶ್ಯ-ಧರ್ಮವ್ಯಾಧ ನಂತೆ ಪರಮಧರ್ಮಜ್ಞ. ಅವನ ತಕ್ಕಡಿ ಹೇಗೆ ಸರ್ವರ ವಿಷಯದಲ್ಲಿಯೂ ಸಮನಾಗಿದೆಯೋ ಹಾಗೆ ಅವನೂ ಸಹ ಎಲ್ಲರಲ್ಲಿಯೂ ಸರ್ವಸಮಭಾವ ಹೊಂದಿದ್ದಾನೆ.

ನಾನುರುದ್ಧ್ಯೇ ನಿರುದ್ಧ್ಯೇ ವಾ ನ ದ್ವೇಷ್ಮಿ ನ ಚ ಕಾಮಯೇ ।
ಸಮೋಽಹಂ ಸರ್ವಭೂತೇಷು ಪಶ್ಯ ಮೇ ಜಾಜಲೇ ವ್ರತಮ್ ॥

(ಪು. 2330)

ಸರ್ವಭೂತಸಮಭಾವಕ್ಕಿಂತಲೂ ಹೆಚ್ಚಿನ ಸಿದ್ಧಿ ಮತ್ತಾವುದು? ಮತ್ತೊಬ್ಬರಿಗೆ ಕೆಡುಕನ್ನೆಣಿಸದೇ ಇರುವುದರಿಂದ ಒಬ್ಬನು ಬ್ರಹ್ಮಭಾವವನ್ನು ಹೊಂದಬಹುದು–

ಯದಾ ನ ಕುರುತೇ ಭಾವಂ ಸರ್ವಭೂತೇಷು ಪಾಪಕಮ್ ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಂಪದ್ಯತೇ ತದಾ ॥ (ಪು. 2332)

ಮುಂದೆ ಬರುವ ಗೌತಮ-ಚಿರಕಾರಿಯ ಉಪಾಖ್ಯಾನ ಯಾವ ಕೆಲಸ ಮಾಡಬೇಕಾದರೂ ಚೆನ್ನಾಗಿ ವಿಮರ್ಶೆಮಾಡಿ ಮಾಡಬೇಕೇ ವಿನಾ ದುಡುಕಬಾರದೆಂಬುದನ್ನು ಮನಗಾಣಿಸುತ್ತದೆ.

ಚಿರಂ ಧಾರಯತೇ ದೋಷಂ ಚಿರಂ ಕರ್ಮ ನಿಯಚ್ಛತಿ ।
ಪಶ್ಚಾತ್ತಾಪಕರಂ ಕರ್ಮ ನ ಕಿಂಚಿದುಪಪದ್ಯತೇ ॥ (ಪು. 2381)

ಸ್ಯೂಮರಶ್ಮಿ ಮತ್ತು ಕಪಿಲರ ಸಂವಾದ ಬಹಳ ಮನೋಜ್ಞವಾಗಿದೆ. ಮನುಷ್ಯನು ಮಾಡಬೇಕಾದುದೇನು, ಬಿಡಬೇಕಾದುದೇನು, ಹೇಗೆ ಇಂದ್ರಿಯ ಗಳನ್ನು ಕಾಯ್ದುಕೊಳ್ಳಬೇಕು?–ಎಂಬುವುದನ್ನು ಕಪಿಲರು ಉಪದೇಶಿಸುತ್ತಾರೆ.

ನಾಕ್ಷೈರ್ದೀವ್ಯೇನ್ನಾದದೀತಾನ್ಯವಿತ್ತಂ
ನ ವಾಯೋನೀಯಸ್ಯ ಶೃತಂ ಪ್ರಗೃಹ್ಣಾತ್ ।
ಕ್ರುದ್ಧೋ ನ ಚೈವ ಪ್ರಹರೇತ ಧೀಮಾನ್
ತಥಾಸ್ಯ ತತ್ಪಾಣಿಪಾದಂ ಸುಗುಪ್ತಮ್ ॥
ನಾಕ್ರೋಶಮೃಚ್ಛೇತ್ ನ ವೃಥಾ ವದೇಚ್ಚ
ನ ಪೈಶುನಂ ಜನವಾದಂ ಚ ಕುರ್ಯಾತ್ ।
ಸತ್ಯವ್ರತೋ ಮಿತಭಾಷೋಽಪ್ರಮತ್ತಃ
ತಥಾಸ್ಯ ವಾಗ್ದ್ವಾರಮಥೋ ಸುಗುಪ್ತಮ್ ॥

(ಪು. 2411)

ಎಲ್ಲ ಕಾಲದ ಎಲ್ಲ ಜನರಿಗೂ ಆವಶ್ಯಕವಾಗಿ ಅನ್ವಯಿಸುವ ನೀತಿ ಸಂಹಿತೆ ಇಲ್ಲಿದೆ. ಇಷ್ಟನ್ನು ಸಾಧಿಸಿದರೆ ಸಾಕು. ಜೀವನ ಸುಖಮಯ ವಾಗುತ್ತದೆ.

ಶಮ-ದಮಾದಿ ಸಾಧನೆ ಅತ್ಯಾವಶ್ಯಕ. ಶಾಸ್ತ್ರಶ್ರದ್ಧೆಯೇ ಸಾಲದು. ಶಾಸ್ತ್ರಜ್ಞಾನ ಮಾತ್ರವೇ ಸಾಲದು. ಶಾಸ್ತ್ರದ ಹೃದಯವನ್ನರಿಯಬೇಕು.

ಯಾಥಾತಥ್ಯಮವಿಜ್ಞಾಯ ಶಾಸ್ತ್ರಾಣಾಂ ಶಾಸ್ತ್ರದಸ್ಯವಃ ।
ಬ್ರಹ್ಮಸ್ತೇನಾ ನಿರಾರಂಭಾ ದಂಭಮೋಹವಶಾನುಗಾಃ ॥ (ಪು. 2421)

ಅರ್ಥ-ಕಾಮಗಳು ಹೆಚ್ಚೋ ಅಥವಾ ಧರ್ಮ-ತಪಸ್ಸುಗಳು ಹೆಚ್ಚೋ ಎನ್ನುವ ಪ್ರಶ್ನೆಯ ನಿರ್ಣಯ ಬ್ರಾಹ್ಮಣ ಮತ್ತು ಕುಂಡಧಾರಮೇಘದ ಉಪಾಖ್ಯಾನದಲ್ಲಿ ಆಗಿದೆ. ಮುಂದೆ ಬರುವ ರೋಚಕವಾದ ತಂದೆ-ಮಕ್ಕಳ ಸಂವಾದವೊಂದರಲ್ಲಿ ಉನ್ನತಿಯೂ-ಅವನತಿಯೂ ನಮ್ಮ ಕೈಲೇ ಇದೆ ಎನ್ನುವುದನ್ನು ಬೋಧಿಸಿದೆ.

ಅಮೃತಂ ಚೈವ ಮೃತ್ಯುಶ್ಚ ದ್ವಯಂ ದೇಹೇ ಪ್ರತಿಷ್ಠಿತಮ್ ।
ಮೃತ್ಯುರಾಪದ್ಯತೇ ಮೋಹಾತ್ ಸತ್ಯೇನಾಪದ್ಯತೇಽಮೃತಮ್ ॥

(ಪು. 2483)

ಬ್ರಹ್ಮಪ್ರಾಪ್ತಿಗೆ ಉಪಾಯ ಯಾವುದು? ಎಂಬುದು ವೃತ್ರ-ಶುಕ್ರರ ಸಂವಾದದ ವಿಷಯ. ಮುಂದೆ ವೃತ್ರವಧನಿರೂಪಣೆಯೂ, ದಕ್ಷಯಜ್ಞ ಧ್ವಂಸದ ಕಥಾನಕವೂ, ದಕ್ಷಕೃತ ಶಿವಸ್ತುತಿಯೂ ಇವೆ. ಅಧ್ಯಾತ್ಮಜ್ಞಾನವನ್ನೂ ಅದರ ಸತ್ಫಲವನ್ನೂ ವಿವರಿಸುವುದಕ್ಕೆ ಒಂದು ಅಧ್ಯಾಯ ಮೀಸಲಾಗಿದೆ.

ಮುಂದೆ ಬರುವ ಸಮಂಗ-ನಾರದರ ಸಂವಾದದಲ್ಲಿ ಸಮಂಗನು ಶೋಕರಹಿತನ ಸ್ಥಿತಿಯನ್ನು ಹೀಗೆ ತಿಳಿಸುತ್ತಾನೆ :

ಅರ್ಥಕಾಮೌ ಪರಿತ್ಯಜ್ಯ ವಿಶೋಕೋ ವಿಗತಜ್ವರಃ ।
ತೃಷ್ಣಾಮೋಹೌ ತು ಸಂತ್ಯಜ್ಯ ಚರಾಮಿ ಪೃಥಿವೀಮಿಮಾಮ್ ॥

(ಪುಟ 2611)

ಅರ್ಥ-ಕಾಮಗಳಲ್ಲಿ ಆಶೆ ಇಲ್ಲದವನಿಗೆ ಶೋಕವಾಗಲೀ ಮೋಹ ವಾಗಲೀ ಉಂಟಾಗದಷ್ಟೇ?

ಶ್ರೇಯಸ್ಸು ಯಾವುದು ಎಂಬ ಪ್ರಶ್ನೆಗೆ ಉತ್ತರವನ್ನು ನಾರದರು ಗಾಲವನಿಗೆ ತಿಳಿಸುತ್ತಾರೆ. ಪಾಪಕರ್ಮಗಳಿಂದ ದೂರವಾಗುವುದು, ಸಜ್ಜನರ

ಜೊತೆಗೆ ಸೇರುವುದು, ಪುಣ್ಯಶೀಲತೆಯನ್ನು ಬೆಳೆಸಿಕೊಳ್ಳುವುದು ಮೊದ ಲಾದುವು ಶ್ರೇಯಸ್ಸಿಗೆ ಕರೆದೊಯ್ಯುವುವು.

ನಿವೃತ್ತಿಃ ಕರ್ಮಣಃ ಪಾಪಾತ್ ಸತತಂ ಪುಣ್ಯಶೀಲತಾ ।
ಸದ್ಭಿಶ್ಚ ಸಮುದಾಚಾರಃ ಶ್ರೇಯ ಏತದಸಂಶಯಮ್ ॥
ಮಾರ್ದವಂ ಸರ್ವಭೂತೇಷು ವ್ಯವಹಾರೇಷು ಚಾರ್ಜವಮ್ ।
ವಾಕ್ಚೈವ ಮಧುರಾ ಪ್ರೋಕ್ತಾ ಶ್ರೇಯ ಏತದಸಂಶಯಮ್ ॥

(ಪು. 2616)

ಇವುಗಳಲ್ಲಿ ಒಂದು ಸಿದ್ಧಿಸಿದರೂ ಸಾಕು! ನಮ್ಮ ಭಾಗ್ಯದ ಬಾಗಿಲು ತೆರೆದಂತೆಯೇ.

ಅರಿಷ್ಟನೇಮಿಯು ಸಗರನಿಗೆ ಮಾಡುವ ಉಪದೇಶ ನಮ್ಮ ಒಳಗಣ್ಣನ್ನು ತೆರೆಯಿಸುತ್ತದೆ. ಯಾವುದೂ ನಮ್ಮನ್ನೇ ಅವಲಂಬಿಸಿಲ್ಲ. ನಾವಿಲ್ಲದಿದ್ದರೆ ಉಳಿದವರ ಗತಿಯೇನು ಎಂದು ನಾವು ಚಿಂತಿಸಬೇಕಾಗಿಲ್ಲ. ಒಬ್ಬೊಬ್ಬರೂ ತಮ್ಮ ತಮ್ಮ ಆಸಕ್ತಿ, ಅನಾಸಕ್ತಿಗಳಿಗನುಸಾರವಾಗಿ ಫಲಗಳನ್ನು ಪಡೆಯುತ್ತಾರೆ.

ಸ್ವಜನೇ ನ ಚ ತೇ ಚಿಂತಾ ಕರ್ತವ್ಯಾ ಮೋಕ್ಷಬುದ್ಧಿನಾ ।
ಇಮೇ ಮಯಾ ವಿನಾಭೂತಾಃ ಭವಿಷ್ಯನ್ತಿ ಕಥಂ ತ್ವಿತಿ ॥

(ಪು. 2631)

ಮುಂದೆ ಬರುವ ಪರಾಶರಗೀತೆ ಗಮನಾರ್ಹವಾದುದು. ಧರ್ಮಾ ಚರಣೆಯಿಂದಲೇ ಶ್ರೇಯಸ್ಸು–ಎಂಬುದನ್ನು ಪರಾಶರರು ಒತ್ತಿ ಹೇಳುತ್ತಾರೆ.

ಧರ್ಮ ಏವ ಕೃತಃ ಶ್ರೇಯಾನ್ ಇಹ ಲೋಕೇ ಪರತ್ರ ಚ ।
ತಸ್ಮಾದ್ಧಿ ಪರಮಂ ನಾಸ್ತಿ ಯಥಾ ಪ್ರಾಹುರ್ಮನೀಷಿಣಃ ॥

(ಪು. 2646)

ಪುರುಷನು ಜಿತೇಂದ್ರಿಯನಾಗಿ ಧರ್ಮಶೀಲನಾಗಬೇಕು. ಎಲ್ಲರನ್ನೂ ತನ್ನಂತೆ ಕಾಣಬೇಕು. ತನಗಿಂತ ದೊಡ್ಡವರನ್ನು ಗೌರವಿಸಬೇಕು. ಸತ್ಯ ಮತ್ತು ಶೀಲಗಳಿಂದಲೇ ಸುಖ ಎಂದು ತಿಳಿಯಬೇಕು.

ದಮಾನ್ವಿತಃ ಪುರುಷಃ ಧರ್ಮಶೀಲಃ
ಭೂತಾನಿ ಚಾತ್ಮಾನಮಿವಾನುಪಶ್ಯೇತ್ ।
ಗರೀಯಸಃ ಪೂಜಯೇದಾತ್ಮಶಕ್ತ್ಯಾ
ಸತ್ಯೇನ ಶೀಲೇನ ಸುಖಂ ನರೇಂದ್ರ ॥ (ಪು. 2659)

ವೇದೋಪದೇಶದ ರಹಸ್ಯ ಸತ್ಯನಿಷ್ಠೆ. ಸತ್ಯದ ರಹಸ್ಯ ಇಂದ್ರಿಯ ನಿಗ್ರಹ. ಇಂದ್ರಿಯ ನಿಗ್ರಹದ ಫಲ ಮೋಕ್ಷ.

ವೇದಸ್ಯೋಪನಿಷತ್ಸತ್ಯಂ ಸತ್ಯಸ್ಯೋಪನಿಷದ್ದಮಃ ।
ದಮಸ್ಯೋಪನಿಷನ್ಮೋಕ್ಷಃ ಏತತ್ಸರ್ವಾನುಶಾಸನಮ್ ॥ (ಪು. 2728)

ಇಲ್ಲಿ ಬರುವ ಒಂದೊಂದು ವಿಷಯವೂ ಹೀಗೆ ಮಹತ್ವಪೂರ್ಣ ವಾಗಿದೆ.

ಭಾರತ ದರ್ಶನ ಪ್ರಕಾಶನವು ಶ್ರೀಮನ್ಮಹಾಭಾರತದ ಕನ್ನಡ ಅನುವಾದವನ್ನು ಹೀಗೆ ಪ್ರಕಾಶಪಡಿಸಿ ಕನ್ನಡಿಗರಿಗೆ ಮಹೋಪಕಾರ ಮಾಡುತ್ತಿದೆ. ಮುಖ್ಯವೆಂದು ಕಂಡುಬಂದ ಮೂಲಶ್ಲೋಕಗಳನ್ನು ಉದಾಹರಿಸುವುದು ಕೃತಿಗೆ ಅಪೂರ್ವವಾದ ಶೋಭೆಯನ್ನು ತಂದಿದೆ. ವ್ಯಾಸರ ವಾಣಿಯನ್ನು ಸವಿಯುವ ಅವಕಾಶವನ್ನು ಓದುಗರಿಗೆ ಒದಗಿಸಿದೆ. ಅನುವಾದದ ಶೈಲಿ ಬಹಳ ಮನೋಜ್ಞವಾಗಿ ಎಲ್ಲರಿಗೂ ತಿಳಿಯುವಂತಿದೆ. ಅಲ್ಲಲ್ಲಿ ಬೇಕೆನಿಸಿದ ಕಡೆ ವಿಶೇಷವಾದ ವಿವರಣೆಗಳನ್ನು ಕೊಟ್ಟಿರುವುದು ಬೋಧಪ್ರದವಾಗಿದೆ.

ಕನ್ನಡದ ಬಂಧುಗಳೆಲ್ಲ ಈ ಮಹಾಪ್ರಯತ್ನಕ್ಕೆ ಪೂರ್ಣವಾದ ಬೆಂಬಲವನ್ನು ಕೊಡಲಿ. ಈ ಸಂಪುಟಗಳನ್ನು ಅಧ್ಯಯನಮಾಡಲಿ. ಈ ಸದಾವಕಾಶವನ್ನು ಸದುಪಯೋಗಪಡಿಸಿಕೊಳ್ಳಲಿ. ಈ ಕಾವ್ಯರತ್ನದ ಪ್ರಭಾವಕ್ಕೆ ಹೆಚ್ಚು ಹೆಚ್ಚು ಒಳಗಾಗಲಿ–ಎಂದು ಹಾರೈಸುತ್ತಾ, ಈ ಯೋಜನೆಯನ್ನು ಯಶಸ್ವಿಗೊಳಿಸುತ್ತಿರುವ ಭಾರತ ದರ್ಶನ ಪ್ರಕಾಶನದವರನ್ನು ಅಭಿನಂದಿಸುತ್ತಾ, ಈ ಎರಡು ಮಾತುಗಳನ್ನು ಬರೆದು ಪುಣ್ಯಗಳಿಸಲು ಅವಕಾಶವೊದಗಿಸಿದುದಕ್ಕಾಗಿ ನನ್ನ ಕೃತಜ್ಞತೆಯನ್ನು ಸೂಚಿಸುತ್ತೇನೆ.

ಬೆಂಗಳೂರು
26-9-82 ಎನ್. ಎಸ್. ಅನಂತರಂಗಾಚಾರ್ಯ

ಮಹಾಭಾರತ-ಶಾಂತಿಪರ್ವ-ಇಪ್ಪತ್ತೈದನೆಯ ಸಂಪುಟದ ವಿಷಯಾನುಕ್ರಮಣಿಕೆ

ಅಧ್ಯಾಯ	ವಿಷಯಗಳು		ಪುಟಸಂಖ್ಯೆ

ವಾಚಕರ ಅನಿಸಿಕೆಗಳು

ಸನ್ಮಾನ್ಯ ಸಂಪಾದಕರಿಗೆ ನಮಸ್ಕಾರಗಳು,

ನೀವು ಪ್ರಕಟಿಸುತ್ತಿರುವ 'ಭಾರತ ದರ್ಶನ' ಗ್ರಂಥಮಾಲೆಯು ನಿಜಕ್ಕೂ ಅತ್ಯಂತ ಶ್ರೇಷ್ಠಮಟ್ಟದ್ದಾಗಿದೆ. ಗೀತಾಪ್ರೆಸ್ಸಿನವರು ಮಾಡಿರುವ ಉಪಕಾರಕ್ಕೆ ಸಾಟಿಯಾಗಿದೆ. ಕನ್ನಡ ಜನ ಇದರ ಪೂರ್ಣಪ್ರಯೋಜನ ಪಡೆಯುವರೆಂಬ ಭರವಸೆ ನನಗಿದೆ. ನನಗಂತೂ ವಿದೇಶದಲ್ಲಿ ಕಲ್ಪವೃಕ್ಷದಂತಿದೆ ಇದು.

ತಮ್ಮ

ಭಾರತೀಯ ವಿದ್ಯಾಭವನ — ಮತ್ತೂರು ಕೃಷ್ಣಮೂರ್ತಿ

4-A, ಕಾನ್ಸಲೇಟ್‌ಟೌನ್ ರೋಡ್, ಲಂಡನ್. — ರಿಜಿಸ್ಟ್ರಾರ್

ಮ।। ರಾ।। ಕೌಶಿಕರಿಗೆ ವಿಜ್ಞಾಪನೆಗಳು,

ನೀವುಗಳು ಶ್ರಮವಹಿಸಿ ಪ್ರಕಾಶನಪಡಿಸುತ್ತಿರುವ ಭಾರತ ಪುರಾಣ ವನ್ನು ಬಹಳ ಉತ್ಸಾಹದಿಂದ ಓದುತ್ತಿದ್ದೇನೆ.

ಭಗವಂತನು ನಿಮ್ಮೆಲ್ಲರಿಗೂ ಮುಂದಿನ ಸಂಪುಟಗಳನ್ನು ಜಾಗ್ರತೆ ಪೂರ್ಣಗೊಳಿಸಲು ಶಕ್ತಿ ನೀಡಲೆಂದು ನಾನು ಪ್ರಾರ್ಥಿಸುತ್ತೇನೆ.

305, ಹೆರ್ನಾಂಡೋ RDSE — ಇಂತಿ ವಿಜ್ಞಾಪನೆಗಳು

ವಿಂಟರ್ ಹೆವನ್, FLA 3380. — ಆರ್. ಚಂದ್ರಶೇಖರ್, ಎಂ.ಡಿ.

ಸನ್ಮಾನ್ಯರಲ್ಲಿ ವಿನಂತಿ,

ದಯಾಮಯನಾದ ಪರಮಾತ್ಮನ ದಿವ್ಯ ಅನುಗ್ರಹದಿಂದ ೨೪ನೆಯ ಸಂಪುಟವನ್ನು ಓದುಗರ ಕೈಯಲ್ಲಿ ಕೊಟ್ಟು ತಾವು ಕೃತಾರ್ಥರಾಗಿದ್ದೀರಿ ಎಂಬುದನ್ನು ನಾನು ಇಲ್ಲಿ ಹೇಳಲು ಸಂತೋಷವೆನಿಸಿದೆ. ಇದೇ ಪ್ರಕಾರ ಇನ್ನು ಮುಂದೆ ಹೊರಡಲಿರುವ ಸಂಪುಟಗಳು ತಮ್ಮಿಂದ ನಮ್ಮ ಕೈಸೇರಿದರೆ ತಮ್ಮ ಪುಣ್ಯದಲ್ಲಿ ನಾವೂ ಓದಿಯಾದರೂ ಅಳಿಲಿನಂತೆ ಕೃತಾರ್ಥರಾಗುವೆವು, ಎಂದು ಎರಡೂ ಕೈಗಳನ್ನೆತ್ತಿ ಹೇಳಬಲ್ಲೆ. ತಮಗೆ ಅನೇಕ ಅಡ್ಡಿ-ಆತಂಕಗಳು ಒದಗಿಬಂದರೂ ಅದಕ್ಕೆ ಅಂಜದೇ ; ಅಳುಕದೇ 'ಮಹಾಭಾರತ' ಸಂಪುಟಗಳನ್ನು ಹೊರತರುವುದನ್ನು ನೋಡಿದರೆ ಆ ಭಗವಂತನೇ ನಿಮಗೆ ಆ ಶಕ್ತಿಕೊಟ್ಟು ನಡೆಸುತ್ತಲಿರುವನು ಎಂದು ನಾನು ನಂಬಿದ್ದೇನೆ.

ಪೋಸ್ಟ್ ತುಂಗಲ್ — ಇತಿ ತಮ್ಮ ಓದುಗ

ತಾ।। ಜಮಖಂಡಿ — ಶ್ರೀ ಬಿ.ಆರ್. ವಾಗಮೊಡೆ, ಟೀಚರ್.

ಎರಡನೆಯ ಮುದ್ರಣದ ಪ್ರಸ್ತಾವನೆ

ಪರಮಾತ್ಮನ ದಯೆಯಿಂದ ಈ ಸಂಪುಟದ ಪುನರ್ಮುದ್ರಣವನ್ನು ಮುಗಿಸುತ್ತಿದ್ದೇವೆ. ನೂರಾರು ಗ್ರಾಹಕರು 3 ವರ್ಷಗಳಿಂದ ನಿರೀಕ್ಷಿಸುತ್ತಿರುವ ಸಂಪುಟವಿದು. ಅಂತೆಯೇ 26ನೆಯ ಸಂಪುಟವನ್ನೂ ನಿರೀಕ್ಷಿಸುತ್ತಿದ್ದಾರೆ. ಈ ಎರಡು ಸಂಪುಟಗಳನ್ನು ಕೊಟ್ಟರೆ ಐದುನೂರಕ್ಕಿಂತಲೂ ಹೆಚ್ಚಿನ ಗ್ರಾಹಕರಿಗೆ ಮಹಾಭಾರತದ ಪೂರ್ಣಮಾಲೆಯು ದೊರೆತಂತಾಗುತ್ತದೆ. ಒಬ್ಬೊಬ್ಬ ಗ್ರಾಹಕರಿಗೆ ಪೂರ್ಣಮಾಲೆಯನ್ನು ಪೂರ್ಣಗೊಳಿಸಿಕೊಟ್ಟಾಗಲೂ ಆನಂದವಾಗುತ್ತದೆ. ನಮ್ಮ ಭಾರವು ಕಳೆಯಿತೆಂಬ ಒಂದು ಆನಂದ. ಪೂರ್ಣಭಾರತವು ಗ್ರಾಹಕರಿಗೆ ಸಿಕ್ಕಿತೆಂಬ ಆನಂದ. ಸಂಪುಟಗಳನ್ನು ನಿರೀಕ್ಷಿಸಿದಷ್ಟು ಬೇಗ ಸಿಕ್ಕಲಿಲ್ಲವೆಂದು ನಿಂದಿಸುವವರೂ ಇದ್ದಾರೆ. ಆದರೆ ಇಂತಹ ಮಹಾಕಾರ್ಯಗಳಲ್ಲಿ ಸಾವಕಾಶವು ಅನಿವಾರ್ಯವಾಗುತ್ತದೆ. ಕೆಲವು ವೇಳೆ ಅನೇಕ ಗ್ರಂಥಗಳು ಪುನರ್ಮುದ್ರಣವನ್ನು ಕಾಣದೆಯೂ ಹೋಗಬಹುದು. ಪುನರ್ಮುದ್ರಣವೆಂಬುದು ಅತಿ ದುಸ್ತರವಾದ ಕಾರ್ಯ. ಆದರೂ ಪರಮಾತ್ಮನ ದಿವ್ಯಕೃಪೆಯಿಂದಾಗಿ ಮಹಾಭಾರತ ಸಂಪುಟಗಳ ಪುನರ್ಮುದ್ರಣಕಾರ್ಯವು ಎಡೆಬಿಡದೆ ನಡೆಯುತ್ತಿದೆ. ಅವನ ಅಭಯ ಹಸ್ತವು ಈ ಸಂಸ್ಥೆಯ ಮೇಲಿರುವುದರಿಂದಲೇ ನಾವೂ ಕೂಡ ಉಳಿದ ಸಂಪುಟಗಳನ್ನು ಕೊಡುವ ಆಶ್ವಾಸನೆಯನ್ನಿತ್ತು ಪೂರ್ಣಮಾಲೆಗೆ ಗ್ರಾಹಕರನ್ನು ನೊಂದಾಯಿಸಿಕೊಳ್ಳುತ್ತಿದ್ದೇವೆ. 1-2-1990ರಿಂದ ಪೂರ್ಣಮಾಲೆಯ ಚಂದಾಹಣವನ್ನು ಸ್ವಲ್ಪ ಹೆಚ್ಚಿಸುವುದು ಅನಿವಾರ್ಯವಾಗಿದೆ. ಗ್ರಾಹಕರು ಸಹಕರಿಸಿ ಹೊಸ ಗ್ರಾಹಕರನ್ನು ಸತತವಾಗಿ ಮಾಡಿಕೊಡುತ್ತಿದ್ದು ಪ್ರೋತ್ಸಾಹಿಸ ಬೇಕಾಗಿ ಪ್ರಾರ್ಥಿಸುತ್ತೇವೆ.

–ಪ್ರಕಾಶಕರು

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ
ಶ್ರೀಮದ್ರಾಮಚಂದ್ರಾಪುರಮಠಸ್ಥ



ಶ್ರೀಮದ್ರಾಘವೇಂದ್ರಭಾರತೀ ಶ್ರೀಸ್ವಾಮಿಭಿಃ

ಅಸ್ಮದತ್ಯಂತ ಪ್ರಿಯಶಿಷ್ಯ ಭಾರತ ದರ್ಶನ ಸಂಪಾದಕ–ಶ್ರೀಯುತ ಕೇಶವ ಸುಬ್ರಹ್ಮಣ್ಯ ಕೌಶಿಕರು, ತ್ಯಾಗರಾಜನಗರ, ಬೆಂಗಳೂರು-ಇವರಿಗೆ

II ಶ್ರೀಮನ್ನಾರಾಯಣಸ್ಮರಣಪುರಸ್ಸರಂ ಸಂದಿಷ್ಟೋಽಯಂ ಸಂದೇಶಃ II

ಆದಾಗಿ, ನೀವು ಶ್ರೀಮನ್ಮಹಾಭಾರತದ ೨೫ನೇ ಸಂಪುಟವನ್ನು ಶೀಘ್ರದಲ್ಲಿಯೇ ಹೊರತರುತ್ತಿರುವುದನ್ನು ತಿಳಿದು ಅತೀವ ಸಂತಸವಾಯಿತು.

ನಿಮ್ಮ ಹೇಳಿಕೆಯಂತೆ ಈ ಮಧ್ಯದಲ್ಲಿ ಹಿಂದಿನ ಎರಡು ಸಂಪುಟಗಳ ಪುನರ್ಮುದ್ರಣವನ್ನು ಮುಗಿಸಿ ಈ ಹೊಸ ಸಂಪುಟವನ್ನು ಹೊರತಂದಿರು

ವುದು ಸಾಹಸದ ಕಾರ್ಯವೇ ಸರಿ. ನಿಶ್ಚಯವಾಗಿಯೂ ಪರಮಾತ್ಮನೇ ಸೂತ್ರಧಾರನಾಗಿ ನಿಂತಿದ್ದು ನಿಮ್ಮಿಂದ ಈ ಮಹಾಕಾರ್ಯವನ್ನು ಆಗುಮಾಡಿ ಸುತ್ತಿದ್ದಾನೆ ಎಂಬುದು ಅನುಭವಸಿದ್ಧ ವಿಷಯ.

ಇಲ್ಲಿ ಬಂದಿರುವ ಸಾಂಖ್ಯ-ಯೋಗದ ವಿಷಯಗಳು ಗೀತೆಯಲ್ಲಿ ಬಂದಿರುವುದಕ್ಕೆ ವ್ಯಾಖ್ಯಾನರೂಪದಲ್ಲಿ ಇರುವಂಥವುಗಳೆಂದು ಹೇಳಬಹುದು. ಶ್ರೀಕೃಷ್ಣನು ಗೀತೆಯಲ್ಲಿ ಹೇಳಿರುವ– 'ಏಕಂ ಸಾಂಖ್ಯಂ ಚ ಯೋಗಂ ಚ'–ಎಂಬುದು ಇಲ್ಲಿಯೂ ಪ್ರತಿಪಾದಿತವಾಗಿದೆ. ಸಾಂಖ್ಯಕಾರರು ಚೇತನ ವನ್ನು ಪಂಚವಿಂಶಕ ಅಥವಾ ಇಪ್ಪತ್ತೈದನೆಯವನೆಂದು ಕರೆದಿರುತ್ತಾರೆ. ಈ ಇಪ್ಪತ್ತೈದನೆಯ ಸಂಪುಟದಲ್ಲಿ ಇಪ್ಪತ್ತೈದನೆಯವನಾದ ಚೇತನನ ಸಮಗ್ರ ವಿಷಯವೂ ಅಡಗಿರುವುದು ಒಂದು ಐತಿಹ್ಯವೇ ಸರಿ. ಪರಾಶರ, ವಸಿಷ್ಠ, ಯಾಜ್ಞವಲ್ಕ್ಯಾದಿಗಳ ಆತ್ಮೋದ್ಧಾರಪರಗಳಾದ ಸೂಕ್ತಿಗಳಿಂದ ಈ ಸಂಪುಟವು ವ್ಯಾಪ್ತವಾಗಿದೆ. ೨೮೪ನೆಯ ಅಧ್ಯಾಯದಲ್ಲಿ ಬಂದಿರುವ ಶಿವಸ್ತೋತ್ರವು ಮನೋಜ್ಞವಾಗಿದೆ. ಇಂತಹ ತತ್ತ್ವಮುಕ್ತಾಮಣಿಗಳಿಂದ ಕೂಡಿರುವ ಜ್ಞಾನ ಭಂಡಾರವಾದ ಕನ್ನಡ ಮಹಾಭಾರತವು ಕನ್ನಡಬಾಂಧವರೆಲ್ಲರ ಮನೆ ಯಲ್ಲಿಯೂ ರಾರಾಜಿಸುತ್ತಿರಲಿ. ಈ ಮಹಾಗ್ರಂಥವು ಸರ್ವತ್ರ ಪ್ರಸಾರ ಹೊಂದಲಿ. ಭಕ್ತಿ-ಶ್ರದ್ಧಾದರಣೆಗಳಿಂದ ನೀವು ಕೈಗೊಂಡಿರುವ ಈ ಮಹಾಕಾರ್ಯವು ಶ್ರೀಸೀತಾರಾಮಚಂದ್ರ-ಚಂದ್ರಮೌಳೀಶ್ವರರ ಪರಮಾನು ಗ್ರಹದಿಂದ ತ್ವರಿತ ಪರಿಪೂರ್ಣವಾಗಲೆಂದು ಸುವರ್ಣಮಂತ್ರಾಕ್ಷತೆಯೊಂದಿಗೆ ಹಾರೈಸುತ್ತೇವೆ.

ಇತಿ ಶ್ರೀಮನ್ನಾರಾಯಣಸ್ಮೃತಯಃ

ಮಿತಿ :- ಶ್ರೀ ದುಂದುಭಿ ಸಂ॥ದ ಅಧಿಕಾಶ್ವಯುಜ ಕೃಷ್ಣ ತೃತೀಯಾ
ಭೌಮವಾಸರೇ (5-10-82)

ವಸತಿ :- ತೀರ್ಥರಾಜಪುರವಿರಾಜಿತ ತುಂಗಾತೀರಸ್ಥ ತೀರ್ಥಹಳ್ಳಿ,
ಶ್ರೀರಾಮಚಂದ್ರಾಪುರ ಮಠೇ

ಶ್ರೀಮಹಾಗಣಪತಯೇನಮಃ ಶ್ರೀಸರಸ್ವತ್ಯೈನಮಃ ಶ್ರೀಸದ್ಗುರವೇನಮಃ

ಓಂ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಶ್ರೀಮನ್ಮಹಾಭಾರತ - ಶಾಂತಿಪರ್ವ
ಇಪ್ಪತ್ತೈದನೆಯ ಸಂಪುಟ

೨೬೦ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಯುಧಿಷ್ಠಿರನು ಧರ್ಮದ ಪ್ರಾಮಾಣಿಕತೆಯ ಬಗೆಗೆ ಸಂದೇಹಿಸಿದುದು

ಪಾರಿಕ್ಷಿತ! ಯುಧಿಷ್ಠಿರನು ಹೇಳುತ್ತಾನೆ :

ಸೂಕ್ಷ್ಮಂ ಸಾಧು ಸಮಾದಿಷ್ಟಂ ಭವತಾ ಧರ್ಮಲಕ್ಷಣಮ್ ।
ಪ್ರತಿಭಾ ತ್ವಸ್ತಿ ಮೇ ಕಾಚಿತ್ತಾಂ ಬ್ರೂಯಾಮನುಮಾನತಃ ॥೧॥

"ಪಿತಾಮಹ! ಸೂಕ್ಷ್ಮವಾದ ಧರ್ಮಲಕ್ಷಣವನ್ನು ನೀನು ಚೆನ್ನಾಗಿಯೇ ಉಪದೇಶಿಸಿರುವೆ. ಆದರೆ ಈ ಧರ್ಮಲಕ್ಷಣದ ವಿಷಯದಲ್ಲಿ ಇನ್ನೂ ಕೆಲವು ವಿಷಯಗಳು ನನ್ನ ಸ್ಫುರಣೆಗೆ ಬಂದಿವೆ. ಅದು ಹೀಗಿರಬಹುದೋ ಎಂಬ ಊಹೆಯಿಂದ ಅವನ್ನೇ ನಾನು ನಿನಗೆ ಹೇಳುತ್ತೇನೆ.

ಭೂಯಾಂಸೋ ಹೃದಯೇ ಯೇ ಮೇ ಪ್ರಶ್ನಾಸ್ತೇ ವ್ಯಾಹೃತಾಸ್ತ್ವಯಾ ।
ಇದಂ ತ್ವನ್ಯತ್ಪ್ರವಕ್ಷ್ಯಾಮಿ ನ ರಾಜನ್ನಿಗ್ರಹಾದಿವ ॥೨॥

ನನ್ನ ಮನಸ್ಸಿನಲ್ಲಿ ಅನೇಕವಿಧವಾದ ಪ್ರಶ್ನೆಗಳಿದ್ದುವು. ಆ ಎಲ್ಲ ಪ್ರಶ್ನೆಗಳಿಗೂ ನೀನು ಯಥಾಯೋಗ್ಯವಾಗಿಯೇ ಉತ್ತರಿಸಿರುವೆ. ಈಗ ಬೇರೊಂದು ಪ್ರಶ್ನೆಯನ್ನು ಕೇಳುವವನಿದ್ದೇನೆ. ಆದರೆ ಈ ಪ್ರಶ್ನೆಯನ್ನು ನಾನು ತಿಳಿಯಬೇಕೆಂದು ಕೇಳುತ್ತಿರುವೆನೇ ಹೊರತು ಕುತರ್ಕದ ಕಾರಣದಿಂದ ಕೇಳುತ್ತಿಲ್ಲ.

ಇಮಾನಿ ಹಿ ಪ್ರಾಣಯನ್ತಿ ಸೃಜನ್ತ್ಯುತ್ತಾರಯನ್ತಿ ಚ ।
ನ ಧರ್ಮಃ ಪರಿಪಾಠೇನ ಶಕ್ಯೋ ಭಾರತ ವೇದಿತುಮ್ ॥೩॥

ಭಾರತ! ಪ್ರಾಣಿಗಳು ತಾವೇ ಸ್ವಯಂಪ್ರಯತ್ನದಿಂದಲೇ ಬದುಕುತ್ತವೆ. ಬೇರೆಯ ಪ್ರಾಣಿಗಳನ್ನೂ ಉತ್ಪತ್ತಿಮಾಡುತ್ತವೆ. ಹಾಗೆಯೇ ಶರೀರವನ್ನೂ ಕೊನೆಗಾಣಿಸುತ್ತವೆ. ಇವೆಲ್ಲವೂ ಸ್ವಾಭಾವಿಕವಾಗಿಯೇ ನಡೆಯುತ್ತವೆ. ಆದರೆ ವೇದಗಳನ್ನು ಪಠನಮಾಡಿದ ಮಾತ್ರದಿಂದಲೇ ಧರ್ಮವನ್ನು ತಿಳಿಯಲು ಸಾಧ್ಯವಾಗುವುದಿಲ್ಲ.

ಅನ್ಯೋ ಧರ್ಮಃ ಸಮಸ್ಥಸ್ಯ ವಿಷಮಸ್ಥಸ್ಯ ಚಾಪರಃ ।
ಆಪದಸ್ತು ಕಥಂ ಶಕ್ಯಾಃ ಪರಿಪಾಠೇನ ವೇದಿತುಮ್ ॥೪॥

ಒಳ್ಳೆಯ ಸ್ಥಿತಿಯಲ್ಲಿರುವವನಿಗೆ ಒಂದು ಧರ್ಮವು ಹೇಳಲ್ಪಟ್ಟಿದೆ. ಕಷ್ಟದಲ್ಲಿರುವವನಿಗೆ ಮತ್ತೊಂದು ವಿಧವಾದ ಧರ್ಮವು ಹೇಳಲ್ಪಟ್ಟಿದೆ. ವೇದಪಠನಮಾತ್ರದಿಂದಲೇ ಆಪದ್ಧರ್ಮದ ಲಕ್ಷಣಗಳು ಹೇಗೆ ತಾನೇ ತಿಳಿಯಲ್ಪಡುವುವು?

ಸದಾಚಾರೋ ಮತೋ ಧರ್ಮಃ ಸನ್ತಸ್ತ್ವಾಚಾರಲಕ್ಷಣಾಃ ।
ಸಾಧ್ಯಾಸಾಧ್ಯಂ ಕಥಂ ಶಕ್ಯಂ ಸದಾಚಾರೋ ಹ್ಯಲಕ್ಷಣಃ ॥೫॥

'ಸತ್ಪುರುಷರ ಆಚರಣೆಯೇ ಧರ್ಮವಾಗುತ್ತದೆ. ಧರ್ಮಾಚರಣೆಯ ಲಕ್ಷಣವುಳ್ಳವರು ಸತ್ಪುರುಷರು'–ಎಂದು ಹೇಳಿರುವುದರಿಂದ ಸದಾಚಾರ ಮತ್ತು ಸತ್ಪುರುಷರು ಅನ್ಯೋನ್ಯಾಶ್ರಯವನ್ನು ಹೊಂದಿದಂತಾಗುತ್ತದೆ. ಸದಾಚಾರ ಎಂಬುದಕ್ಕೆ ನಿರ್ದಿಷ್ಟವಾದ ಲಕ್ಷಣವು ಇಲ್ಲದೇ ಇರುವುದರಿಂದ ಸದಾಚಾರವನ್ನು ಪರಿಪಾಲಿಸುವುದು ಸಾಧ್ಯ ಅಥವಾ ಅಸಾಧ್ಯ–ಎಂದು ಹೇಗೆ ತಾನೇ ಹೇಳಲು ಸಾಧ್ಯವಾಗುತ್ತದೆ?

ದೃಶ್ಯತೇ ಹಿ ಧರ್ಮರೂಪೇಣಾಧರ್ಮಂ ಪ್ರಾಕೃತಶ್ಚರನ್ ।
ಧರ್ಮಂ ಚಾಧರ್ಮರೂಪೇಣ ಕಶ್ಚಿದಪ್ರಾಕೃತಶ್ಚರನ್ ॥೬॥

ಸಾಮಾನ್ಯರಾದ ಕೆಲವು ಮನುಷ್ಯರು ಧರ್ಮದ ರೂಪದಲ್ಲಿ ಅಧರ್ಮವನ್ನು ಮಾಡುತ್ತಿರುವುದೂ–ಅಪ್ರಾಕೃತರಾದ ಕೆಲವರು (ಶಿಷ್ಟರು) ಅಧರ್ಮ

ರೂಪದಲ್ಲಿ ಧರ್ಮವನ್ನು ಆಚರಿಸುತ್ತಿರುವುದೂ ಈ ಲೋಕದಲ್ಲಿ ಅನೇಕ ಸಂದರ್ಭಗಳಲ್ಲಿ ಕಂಡುಬಂದಿದೆ.

(ಆಚರಣೆಯ ಮಾತ್ರದಿಂದಲೇ ಧರ್ಮಾಧರ್ಮಗಳ ನಿರ್ಣಯವನ್ನು ಮಾಡಲು ಸಾಧ್ಯವಿಲ್ಲ. ಕೆಲವು ವೇಳೆ ಸಾಮಾನ್ಯಮನುಷ್ಯರು ಧರ್ಮ ಕಾರ್ಯವನ್ನು ಮಾಡಿದರೂ ಅದು ಅಧರ್ಮವಾಗಿ ಕಾಣುತ್ತದೆ. ಶಿಷ್ಟ ರಾದವರು ಅಧರ್ಮಕಾರ್ಯವನ್ನು ಮಾಡಿದರೂ ಅದು ಧರ್ಮವಾಗಿ ಕಾಣುತ್ತದೆ. ಅಂತಹ ಸಂದರ್ಭದಲ್ಲಿ ಭ್ರಷ್ಟರು ಶಿಷ್ಟಾಚಾರಯುಕ್ತರಾಗಿ ಕಾಣುವುದರಿಂದಲೂ – ಶಿಷ್ಟರು ಭ್ರಷ್ಟಾಚಾರಯುಕ್ತರಾಗಿ ಕಾಣುವುದ ರಿಂದಲೂ ಸದಾಚಾರಲಕ್ಷಣವನ್ನು ನಿರ್ಣಯಿಸುವುದಕ್ಕಾಗುವುದಿಲ್ಲ.) [ಶಾಂತಿ ಪರ್ವದ ೧೪೧ನೇ ಅಧ್ಯಾಯದ ಚಾಂಡಾಲ-ವಿಶ್ವಾಮಿತ್ರರ ಸಂವಾದವನ್ನು ಉದಾಹರಣೆಯನ್ನಾಗಿ ತೆಗೆದುಕೊಳ್ಳಬಹುದು.]

ಪುನರಸ್ಯ ಪ್ರಮಾಣಂ ಹಿ ನಿರ್ದಿಷ್ಟಂ ಶಾಸ್ತ್ರಕೋವಿದೈಃ ।
ವೇದವಾದಾಶ್ಚಾನುಯುಗಂ ಹ್ರಸನ್ತೀತೀಹ ನಃ ಶ್ರುತಮ್ ॥೭॥

ಶಾಸ್ತ್ರಪರಿಣತರು ಧರ್ಮಕ್ಕೆ ವೇದವೇ ಪ್ರಮಾಣವೆಂದು ನಿರ್ದೇಶ ಮಾಡಿರುತ್ತಾರೆ. ಆದರೆ ಒಂದು ಯುಗಕ್ಕೂ ಮತ್ತು ಮತ್ತೊಂದು ಯುಗಕ್ಕೂ ವೇದವು ಕ್ಷೀಣಿಸುತ್ತಾ ಹೋಗುವುದೆಂಬುದನ್ನೂ ನಾವು ಕೇಳಿದ್ದೇವೆ. ಹಾಗಾಗುವುದರಿಂದ ಧರ್ಮದ ಸಂಬಂಧದಲ್ಲಿ ವೇದಗಳಲ್ಲಿ ಹೇಳಿರುವ ಪ್ರಮಾಣವು ಯುಗ-ಯುಗಕ್ಕೂ ವ್ಯತ್ಯಾಸವಾಗುತ್ತಾ ಹೋಗುತ್ತದೆ. ಆದುದರಿಂದ ಧರ್ಮಕ್ಕೆ ವೇದವೇ ಪ್ರಮಾಣವಾಗುವುದೆಂಬುದನ್ನೂ ಹೇಳಲು ಬರುವುದಿಲ್ಲ.

ಅನ್ಯೇ ಕೃತಯುಗೇ ಧರ್ಮಾಸ್ತ್ರೇತಾಯಾಂ ದ್ವಾಪರೇ ಪರೇ ।
ಅನ್ಯೇ ಕಲಿಯುಗೇ ಧರ್ಮಾ ಯಥಾಶಕ್ತಿ ಕೃತಾ ಇವ ॥೮॥

ಕೃತಯುಗದಲ್ಲಿ ಕೆಲವು ಬೇರೆಯ ಧರ್ಮಗಳಿರುತ್ತವೆ. ತ್ರೇತಾ-ದ್ವಾಪರಗಳಲ್ಲಿ ಬೇರೆ ಬೇರೆ ಧರ್ಮಗಳೇ ಇರುತ್ತವೆ. ಕಲಿಯುಗದಲ್ಲಿ ಕೃತ-ತ್ರೇತಾ-ದ್ವಾಪರಗಳಿಗಿಂತಲೂ ಭಿನ್ನವಾದ ಬೇರೆ ಕೆಲವು ಧರ್ಮಗಳಿರುತ್ತವೆ.

ಆದುದರಿಂದ ಮನುಷ್ಯರ ಶಕ್ತಿಗೆ ಅನುಸಾರವಾಗಿ ಧರ್ಮದ ವ್ಯವಸ್ಥೆಯನ್ನು ಮಾಡಿರುವಂತೆ ಕಾಣುತ್ತದೆ.

ಆಮ್ನಾಯವಚನಂ ಸತ್ಯಮಿತ್ಯಯಂ ಲೋಕಸಂಗ್ರಹಃ ।
ಆಮ್ನಾಯೇಭ್ಯಃ ಪುನರ್ವೇದಾಃ ಪ್ರಸೃತಾಃ ಸರ್ವತೋಮುಖಾಃ ॥೯॥

'ವೇದಗಳ ವಚನವು ಸತ್ಯವಾದುದು'–ಎಂಬ ಈ ಮಾತು ಲೋಕ ರಂಜನೆಗೆ ಮಾತ್ರವೇ ಆಗಿದೆ. ಏಕೆಂದರೆ : ವೇದಗಳಿಂದಲೇ ಅನೇಕಪ್ರಕಾರ ವಾದ ಸ್ಮೃತಿಗಳು ಸರ್ವತೋಮುಖವಾಗಿ ಬೆಳೆದಿವೆ.

ತೇ ಚೇತ್ಸರ್ವಪ್ರಮಾಣಂ ವೈ ಪ್ರಮಾಣಂ ಹ್ಯತ್ರ ವಿದ್ಯತೇ ।
ಪ್ರಮಾಣೇಽಪ್ಯಪ್ರಮಾಣೇನ ವಿರುದ್ಧೇ ಶಾಸ್ತ್ರತಾ ಕುತಃ ॥೧೦॥

ಕೆಲವರು ಸಂಪೂರ್ಣವೇದಗಳೂ ಪ್ರಮಾಣವೆಂದೇ ಹೇಳುತ್ತಾರೆ. ವೇದಗಳಲ್ಲಿ ಪರಸ್ಪರ ವಿರುದ್ಧವಾದ ವಾಕ್ಯಗಳೂ ಕಂಡುಬರುತ್ತವೆ. ಅವುಗಳಲ್ಲಿ ಒಂದರ ದೃಷ್ಟಿಯಿಂದ ಮತ್ತೊಂದು ಅಪ್ರಮಾಣವಾಗುತ್ತದೆ. ಆಗ ಅಪ್ರಮಾಣವಾದ ವಾಕ್ಯಗಳು ಪ್ರಮಾಣವನ್ನು ಬಾಧಿಸಿದಂತಾಗುತ್ತದೆ. ಹಾಗಾದರೆ ವೇದಕ್ಕೆ ಶಾಸ್ತ್ರತ್ವವು (ಶಾಸನಮಾಡುವ ಅಧಿಕಾರವು) ಹೇಗೆ ಉಂಟಾಗುತ್ತದೆ?

ಧರ್ಮಸ್ಯ ಕ್ರಿಯಮಾಣಸ್ಯ ಬಲವದ್ಭಿರ್ದುರಾತ್ಮಭಿಃ ।
ಯಾ ಯಾ ವಿಕ್ರಿಯತೇ ಸಂಸ್ಥಾ ತತಃ ಸಾಪಿ ಪ್ರಣಶ್ಯತಿ ॥೧೧॥

ಧರ್ಮದ ಅನುಷ್ಠಾನವು ಯಥಾವತ್ತಾಗಿ ನಡೆಯುತ್ತಿರುವಾಗ ಬಲಿಷ್ಠ ರಾದ ದುರಾತ್ಮರು ಮಧ್ಯದಲ್ಲಿ ಪ್ರವೇಶಿಸಿ ಧರ್ಮದ ಮೂಲಸ್ಥಾನವನ್ನೇ ವಿಕೃತಗೊಳಿಸುತ್ತಾರೆ. ಅನಂತರ ಧರ್ಮದ ಆ ಮೂಲಸ್ಥಾನವೇ ವಿನಾಶವಾಗಿ ಹೋಗುತ್ತದೆ. (ತಿರುಳಿಲ್ಲದ ಧರ್ಮವು ಮಾತ್ರವೇ ಉಳಿದಿರುತ್ತದೆ.)

ವಿದ್ಮ ಚೈವಂ ನ ವಾ ವಿದ್ಮ ಶಕ್ಯಂ ವಾ ವೇದಿತುಂ ನ ವಾ ।
ಅಣೀಯಾನ್ ಕ್ಷುರಧಾರಾಯಾ ಗರೀಯಾನಪಿ ಪರ್ವತಾತ್ ॥೧೨॥

ಧರ್ಮವನ್ನು ನಾವು ತಿಳಿದಿರುವೆವೋ–ಇಲ್ಲವೋ? ಧರ್ಮಸ್ವರೂಪ ವನ್ನು ತಿಳಿದುಕೊಳ್ಳಲು ಸಾಧ್ಯವಾಗುವುದೋ–ಅಥವಾ ತಿಳಿಯಲು ಸಾಧ್ಯ ವಾಗುವುದೇ ಇಲ್ಲವೋ?–ಆದರೆ ಧರ್ಮದ ವಿಷಯವಾಗಿ ಇಷ್ಟು ಮಾತ್ರ

ಹೇಳಬಹುದಾಗಿದೆ. ಧರ್ಮವೆಂಬುದು ಕತ್ತಿಯ ಅಲುಗಿಗಿಂತಲೂ ಸೂಕ್ಷ್ಮ ವಾದುದು ಮತ್ತು ಪರ್ವತಕ್ಕಿಂತಲೂ ದೊಡ್ಡದಾದುದು.

ಗನ್ಧರ್ವನಗರಾಕಾರಃ ಪ್ರಥಮಂ ಸಮ್ಪ್ರದೃಶ್ಯತೇ ।
ಅನ್ವೀಕ್ಷ್ಯಮಾಣಃ ಕವಿಭಿಃ ಪುನರ್ಗಚ್ಛತ್ಯದರ್ಶನಮ್ ॥೧೩॥

ಧರ್ಮವೆಂಬುದು ಪ್ರಥಮವೀಕ್ಷಣೆಗೆ ಗಂಧರ್ವನಗರದಂತೆ (ಆಕಾಶದಲ್ಲಿ ಮೋಡಗಳಲ್ಲಿ ಕಾಣುವ ವಿಚಿತ್ರತರವಾದ ಸನ್ನಿವೇಶಗಳಂತೆ) ಸುಂದರವಾಗಿಯೂ–ಮನೋಹರವಾಗಿಯೂ ಕಾಣುತ್ತದೆ. ಆದರೆ ಅದನ್ನೇ ವಿಶೇಷರೂಪದಲ್ಲಿ ವಿಚಾರಮಾಡುವ ವಿದ್ವಾಂಸರಿಗೆ ಅದು ಕಾಣಿಸುವುದೇ ಇಲ್ಲ. ಮಾಯವಾಗಿಬಿಡುತ್ತದೆ. (ಸ್ವರ್ಗಾದಿಗಳು ಸುಂದರವಾಗಿ ಕಾಣುತ್ತವೆ. ಜ್ಞಾನಿಯ ದೃಷ್ಟಿಯಿಂದ ಶೂನ್ಯವಾಗುತ್ತವೆ.)

ನಿಪಾನಾನೀವ ಗೋಭ್ಯೋಽಪಿ ಕ್ಷೇತ್ರೇ ಕುಲ್ಯೇ ಚ ಭಾರತ ।
ಸ್ಮೃತಿರ್ಹಿ ಶಾಶ್ವತೋ ಧರ್ಮೋ ವಿಪ್ರಹೀಣೋ ನ ದೃಶ್ಯತೇ ॥೧೪॥

ಹಸುಗಳು ನೀರು ಕುಡಿಯುವ ತೊಟ್ಟಿಯೂ ಮತ್ತು ಕ್ಷೇತ್ರಗಳಿಗೆ (ಗದ್ದೆಗಳಿಗೆ) ನೀರು ಹಾಯಿಸುವ ಕಾಲುವೆಯೂ ಯಾವಾಗಲೂ ಒಂದೇ ಸಮನಾಗಿರುವುದಿಲ್ಲ. (ಅವುಗಳಲ್ಲಿರುವ ನೀರು ವ್ಯಯಹೊಂದುವುದರಿಂದ ಬದಲಾಯಿಸುತ್ತವೆ.) ಹಾಗೆಯೇ ಸ್ಮೃತಿಯೂ ಒಂದೇ ರೀತಿಯಾಗಿರದೆ ಕಾಲ-ಕಾಲಕ್ಕೆ ವ್ಯತ್ಯಾಸವಾಗುತ್ತದೆ. ಆದುದರಿಂದ ನಾಶಹೊಂದದೇ ಇರುವ ಶಾಶ್ವತವಾದ ಧರ್ಮವೇ ಇಲ್ಲ. (ವೇದಾ ವಿಭಿನ್ನಾಃ ಸ್ಮೃತಯೋ ವಿಭಿನ್ನಾಃ.)

ಕಾಮಾದನ್ಯೇಚ್ಛಯಾ ಚಾನ್ಯೇಕಾರಣೈರಪರೈಸ್ತಥಾ ।
ಅಸನ್ತೋಽಪಿ ವೃಥಾಚಾರಂ ಭಜನ್ತೇ ಬಹವೋಽಪರೇ ॥೧೫॥

ಏಕೆಂದರೆ ಆ ಸಮಯದಲ್ಲಿ ಕೆಲವರು ಕಾಮನೆಗಳ ಪೂರಣಕ್ಕಾಗಿ ಧರ್ಮಕಾರ್ಯಗಳನ್ನು ಮಾಡುತ್ತಾರೆ. ಬೇರೆ ಯಾವುದಾದರೂ ಇಚ್ಛೆ ಯಿಂದಲೂ ಕೆಲವರು ಧರ್ಮವನ್ನು ಮಾಡುತ್ತಾರೆ. ಅನ್ಯಮನುಷ್ಯರು ಇತರ ಅನೇಕಕಾರಣಗಳಿಂದ ಧರ್ಮಾಚರಣೆಯನ್ನು ಮಾಡುತ್ತಾರೆ.

ಹಲವು ಅಸಾಧುಪುರುಷರು ಕೂಡ ತೋರಿಕೆಗಾಗಿಯೇ ವ್ಯರ್ಥವಾದ ಧರ್ಮಾಚರಣೆಯನ್ನು ಮಾಡುತ್ತಾರೆ.

ಧರ್ಮೋ ಭವತಿ ಸ ಕ್ಷಿಪ್ರಂ ಪ್ರಲಾಪಸ್ತ್ವೇವ ಸಾಧುಷು ।
ಅಥೈತಾನಾಹುರುನ್ಮತ್ತಾನಪಿ ಚಾವಹಸನ್ತ್ಯುತ ॥೧೬॥

ಮುಂದೆ ಬರುವ ದಿವಸಗಳಲ್ಲಿ ಅದೇ ಧರ್ಮವೆಂದು ತಿಳಿಯಲ್ಪಡುತ್ತದೆ. ಸಾಧು-ಸತ್ಪುರುಷರಲ್ಲಿರುವ ಯಥಾರ್ಥವಾದ ಧರ್ಮವು ಮೂಢರ ದೃಷ್ಟಿಯಿಂದ ಅಪಲಾಪಮಾತ್ರವಾಗಿರುತ್ತದೆ. ಮೂಢರು, ಅಂತಹ ಸಾಧು-ಸತ್ಪುರುಷರನ್ನು ಹುಚ್ಚರೆಂದು ಕರೆಯುತ್ತಾ ಅಪಹಾಸ್ಯಮಾಡುತ್ತಾರೆ.

ಮಹಾಜನಾ ಹ್ಯುಪಾವೃತ್ತಾ ರಾಜಧರ್ಮಂ ಸಮಾಶ್ರಿತಾಃ ।
ನ ಹಿ ಸರ್ವಹಿತಃ ಕಶ್ಚಿದಾಚಾರಃ ಸಮ್ಪ್ರವರ್ತತೇ ॥೧೭॥

ಮಹಾಜನರೂ (ದ್ರೋಣಾದಿಗಳೂ) ಸ್ವಧರ್ಮದಿಂದ ಹಿಂದಿರುಗಿ ಕ್ಷತ್ರಿಯಧರ್ಮವನ್ನು ಆಶ್ರಯಿಸಿದ್ದಾರೆ. ಆದುದರಿಂದ ಸರ್ವರಿಗೂ ಹಿತಕರವಾದ ಸಮಾನರೂಪವಾದ ಯಾವ ಆಚಾರವೂ ಪ್ರಚಲಿತವಾಗಿರುವುದಿಲ್ಲ.

ತೇನೈವಾನ್ಯಃ ಪ್ರಭವತಿ ಸೋಽಪರಂ ಬಾಧತೇ ಪುನಃ ।
ದೃಶ್ಯತೇ ಚೈವ ಸ ಪುನಸ್ತುಲ್ಯರೂಪೋ ಯದೃಚ್ಛಯಾ ॥೧೮॥

ಇಂತಹ ಧರ್ಮದ ಆಚರಣೆಯಿಂದಲೇ ಕೆಲವರು (ವಿಶ್ವಾಮಿತ್ರಾದಿ ಮಹಾಪುರುಷರು) ಔನ್ನತ್ಯವನ್ನು ಹೊಂದಿದರು. ಅದೇ ರೀತಿಯಲ್ಲಿ ಕೆಲವರು (ರಾವಣಾದಿ ರಾಕ್ಷಸರು) ತಪೋರೂಪಧರ್ಮದ ಬಲದಿಂದಲೇ ಅನ್ಯರಿಗೆ ಪೀಡೆಯನ್ನುಂಟುಮಾಡುತ್ತಿದ್ದರು. ಕಶ್ಯಪಾದಿ ಮಹರ್ಷಿಗಳು ಈಶ್ವರೇಚ್ಛೆಯಿಂದ ಧರ್ಮದ ಮೂಲಕವಾಗಿಯೇ ಸಮತ್ವವನ್ನು ಪಡೆದುಕೊಂಡಿರುವುದೂ ಕಂಡುಬರುತ್ತದೆ.

ಯೇನೈವಾನ್ಯಃ ಪ್ರಭವತಿ ಸೋಽಪರಾನಪಿ ಬಾಧತೇ ।
ಆಚಾರಾಣಾಮನೈಕಾಗ್ರ್ಯಂ ಸರ್ವೇಷಾಮುಪಲಕ್ಷಯೇತ್ ॥೧೯॥

ಒಬ್ಬನು ಧರ್ಮವನ್ನು ಆಶ್ರಯಿಸಿ ಔನ್ನತ್ಯವನ್ನು ಹೊಂದುತ್ತಾನೆ. ಮತ್ತೊಬ್ಬನು ಅದೇ ಧರ್ಮವನ್ನೇ ಆಶ್ರಯಿಸಿ ಇತರರನ್ನು ಪೀಡಿಸುತ್ತಾನೆ.

ಆದುದರಿಂದ ಧರ್ಮಾಚರಣೆಯನ್ನು ಮಾಡಿದರೂ–ಎಲ್ಲರಲ್ಲಿಯೂ ಆಚಾರ-ವ್ಯವಹಾರಗಳಲ್ಲಿ ಏಕತ್ವವಿರುವುದಿಲ್ಲವೆಂಬುದು–ಸ್ಪಷ್ಟವಾಗಿ ಕಂಡುಬರುತ್ತದೆ.

ಚಿರಾಭಿಪನ್ನಃ ಕವಿಭಿಃ ಪೂರ್ವಂ ಧರ್ಮ ಉದಾಹೃತಃ ।
ತೇನಾಚಾರೇಣ ಪೂರ್ವೇಣ ಸಂಸ್ಥಾ ಭವತಿ ಶಾಶ್ವತೀ ॥೨೦॥

ಪಿತಾಮಹನೇ! ಹಿಂದೆ ವಿದ್ವಾಂಸರು ಬಹಳ ಕಾಲದಿಂದ ಆಚರಿಸುತ್ತಿದ್ದ ಧರ್ಮವನ್ನು ನೀನು ಹೇಳಿರುವೆ. ಹಿಂದೆ ಪ್ರಚಲಿತವಾಗಿದ್ದ ಆ ಧರ್ಮದ ಆಚರಣೆಯ ಮೂಲಕವಾಗಿಯೇ ಸಮಾಜದ ಮರ್ಯಾದೆಯು ಬಹಳ ಕಾಲದವರೆಗೂ ಚೆನ್ನಾಗಿರುತ್ತದೆ.”

೨೬೦ನೆಯ ಅಧ್ಯಾಯವು ಮುಗಿಯಿತು.

೨೬೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜಾಜಲಿಯ ಘೋರತಪಸ್ಸು: ತಲೆಯ ಮೇಲೆ ಪಕ್ಷಿಯು ಗೂಡು ಕಟ್ಟಿದುದರಿಂದ ಅವನಿಗುಂಟಾದ ಆತ್ಮಾಭಿಮಾನ: ಆಕಾಶವಾಣಿಯ ಪ್ರೇರಣೆಯಂತೆ ವೈಶ್ಯನಾದ ತುಲಾಧಾರನ ಬಳಿಗೆ ಜಾಜಲಿಯ ಆಗಮನ

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಧರ್ಮದ ವಿಷಯದಲ್ಲಿ ಜಾಜಲಿಗೂ ಮತ್ತು ವೈಶ್ಯನಾದ ತುಲಾಧಾರನಿಗೂ ನಡೆದ ಸಂವಾದರೂಪವಾದ ಪುರಾತನವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಹಿಂದೆ ಜಾಜಲಿ ಎಂಬ ಹೆಸರಿನ ಪ್ರಸಿದ್ಧನಾದ ಬ್ರಾಹ್ಮಣನೊಬ್ಬ ನಿದ್ದನು. ಅವನು ಬಹಳ ಕಾಲದವರೆಗೆ ಅರಣ್ಯದಲ್ಲಿಯೇ ವಾಸವಾಗಿದ್ದು ಅಲ್ಲಿಯೇ ತಿರುಗಾಡಿಕೊಂಡಿರುತ್ತಿದ್ದನು. ಮಹಾತಪಸ್ವಿಯಾಗಿದ್ದ ಜಾಜಲಿಯು ಒಮ್ಮೆ ಸಮುದ್ರತೀರಕ್ಕೆ ಹೋಗಿ ಘೋರವಾದ ತಪಸ್ಸನ್ನು ಮಾಡಿದನು. ಅವನು ನಿಯಮದಿಂದಿರುತ್ತಾ ನಿಯತವಾದ ಭೋಜನವನ್ನು ಮಾಡುತ್ತಿದ್ದನು. ನಾರುಮಡಿಯನ್ನುಟ್ಟು ಮೃಗಚರ್ಮವನ್ನು ಹೊದೆದುಕೊಂಡಿದ್ದನು. ಜಟೆಯನ್ನು ಬಿಟ್ಟಿದ್ದನು. ಪ್ರಜ್ಞಾವಂತನಾದ ಆ

ಮುನಿಯು ಅನೇಕವರ್ಷಗಳವರೆಗೆ ಮೈಮೇಲೆ ಕೊಳೆಯನ್ನೂ, ಕೆಸರನ್ನೂ ಧರಿಸಿಕೊಂಡೇ ನಿಂತಿದ್ದನು. ಸಮುದ್ರದ ನೀರಿನಲ್ಲಿಯೇ ವಾಸಮಾಡುತ್ತಿದ್ದ, ಮಹಾತೇಜಸ್ವಿಯಾಗಿದ್ದ, ಮನೋವೇಗಗತಿಯುಳ್ಳವನಾಗಿದ್ದ ಆ ವಿಪ್ರ ಶ್ರೇಷ್ಠನು ಒಮ್ಮೆ ಎಲ್ಲ ಲೋಕಗಳನ್ನೂ ನೋಡುತ್ತಾ ಸಂಚರಿಸುತ್ತಿದ್ದನು. ಸಾಗರಾಂತವಾದ, ವನ-ಕಾನನಗಳಿಂದ ಯುಕ್ತವಾಗಿದ್ದ ಭೂಮಿಯೆಲ್ಲವನ್ನೂ ನಿರೀಕ್ಷಿಸಿದನಂತರ ಪುನಃ ಜಲವಾಸಮಾಡಲು ಪ್ರಾರಂಭಿಸಿದ ಜಾಜಲಿಯು ಒಮ್ಮೆ ಹೀಗೆ ಚಿಂತಿಸಿದನು :

ನ ಮಯಾ ಸದೃಶೋಽಸ್ತೀಹ ಲೋಕೇ ಸ್ಥಾವರಜಙ್ಗಮೇ ।
ಅಪ್ಸು ವೈಹಾಯಸಂ ಗಚ್ಛೇನ್ಮಯಾ ಯೋಽನ್ಯಃ ಸಹೇತಿ ವೈ ॥೬॥

"ಈ ಲೋಕದಲ್ಲಿಯೂ ಮತ್ತು ಲೋಕದಲ್ಲಿರುವ ಸ್ಥಾವರ-ಜಂಗಮ ಗಳಲ್ಲಿಯೂ ನನಗೆ ಸಮಾನನಾದವನು ಮತ್ತಾರೂ ಇರುವುದಿಲ್ಲ. ನನ್ನೊಡನೆ ನೀರಿನಲ್ಲಿ ಮತ್ತು ಆಕಾಶದಲ್ಲಿ ಸಂಚರಿಸಲು ಯಾರಿಗೆ ತಾನೇ ಸಾಧ್ಯವಿದೆ?"

ರಾಕ್ಷಸರಿಗೆ ಕಾಣಿಸದೇ ನೀರಿನ ಮಧ್ಯದಲ್ಲಿಯೇ ವಾಸಮಾಡಿಕೊಂಡಿದ್ದ ಜಾಜಲಿಯು ಹೀಗೆ ಹೇಳಿದೊಡನೆಯೇ ಪಿಶಾಚರು (ರಾಕ್ಷಸರು) ಮುನಿಯನ್ನು ಕುರಿತು–'ನೀನು ಹೀಗೆ ಹೇಳುವುದು ಸರಿಯಲ್ಲ'–ಎಂದು ಹೇಳಿದರು.

ಪಿಶಾಚರು ಮುಂದುವರಿದು ಹೇಳಿದರು :

"ದ್ವಿಜಶ್ರೇಷ್ಠನೇ! ಕಾಶಿಯಲ್ಲಿ ಮಹಾಯಶೋವಂತನಾದ ವೈಶ್ಯ ಧರ್ಮವನ್ನು ಪರಿಪಾಲಿಸುತ್ತಿರುವ ತುಲಾಧಾರನೆಂಬುವವನಿದ್ದಾನೆ. ಅವನು ಕೂಡ ನೀನು ಹೇಳಿದಂತೆ ಹೇಳತಕ್ಕವನಲ್ಲ."

ಮಹಾಭೂತಗಳು ಹೀಗೆ ಹೇಳಿದನಂತರ ಮಹಾತಪಸ್ವಿಯಾದ ಜಾಜಲಿಯು ಭೂತಗಳಿಗೆ ಪ್ರತ್ಯುತ್ತರಿಸಿದನು.: "ಪ್ರಾಜ್ಞನಾದ, ಯಶೋವಂತ ನಾದ ತುಲಾಧಾರನನ್ನು ನಾನೀಗಲೇ ಸಂದರ್ಶಿಸುತ್ತೇನೆ."

ಹೀಗೆ ಹೇಳಿದ ಜಾಜಲಿಯನ್ನು ರಾಕ್ಷಸರು ಸಾಗರದಿಂದ ಮೇಲಕ್ಕೆತ್ತಿ ಒಂದು ಸ್ಥಳದಲ್ಲಿ ನಿಲ್ಲಿಸಿ ಹೇಳಿದರು :

"ದ್ವಿಜಶ್ರೇಷ್ಠನೇ! ಈ ಮಾರ್ಗವನ್ನೇ ಹಿಡಿದು ಕಾಶೀಪಟ್ಟಣಕ್ಕೆ ಹೋಗು."

ಜಾಜಲಿಯು ಭೂತಗಳಿಂದ ಹೀಗೆ ಹೇಳಲ್ಪಟ್ಟನಂತರ ಖಿನ್ನ ಮನೋಭಾವದಿಂದಲೇ ವಾರಾಣಸಿಯಲ್ಲಿದ್ದ ತುಲಾಧಾರನ ಬಳಿಗೆ ಹೋಗಿ ಅವನೊಡನೆ ಹೇಳಿದನು."

ಜನಮೇಜಯ! ಭೀಷ್ಮನು ಮುಂದೆ ಹೇಳುವುದರಲ್ಲಿದ್ದಾಗಲೇ ಯುಧಿಷ್ಠಿರನು ಭೀಷ್ಮನನ್ನು ಪ್ರಶ್ನಿಸಿದನು :

ಕಿಂ ಕೃತಂ ದುಷ್ಕರಂ ತಾತ ಕರ್ಮ ಜಾಜಲಿನಾ ಪುರಾ ।
ಯೇನ ಸಿದ್ಧಿಂ ಪರಾಂ ಪ್ರಾಪ್ತಸ್ತನ್ಮೇ ವ್ಯಾಖ್ಯಾತುಮರ್ಹಸಿ ॥೧೨॥

"ತಂದೆಯೇ! ಅಂತಹ ಪರಮಶ್ರೇಷ್ಠವಾದ ಸಿದ್ಧಿಯನ್ನು ಪಡೆಯಲು ಜಾಜಲಿಯು ಹಿಂದೆ ಅತಿದುಷ್ಕರವಾದ ಯಾವ ಕಾರ್ಯವನ್ನು ಮಾಡಿದ್ದನು? ಈ ವಿಷಯವನ್ನು ನನಗೆ ಹೇಳುವ ಕೃಪೆಮಾಡು."

"ಯುಧಿಷ್ಠಿರ! ಜಾಜಲಿಯು ಅತಿಘೋರವಾದ ತಪಸ್ಸಿನಲ್ಲಿ ನಿರತನಾಗಿದ್ದನು. ಪ್ರತಿನಿತ್ಯವೂ ಬೆಳಿಗ್ಗೆ ಮತ್ತು ಸಾಯಂಕಾಲಗಳಲ್ಲಿ ಸ್ನಾನ ಮತ್ತು ಸಂಧ್ಯಾವಂದನೆಗಳನ್ನು ಮಾಡುತ್ತಾ ವಿಧಿಪೂರ್ವಕವಾಗಿ ಅಗ್ನಿಹೋತ್ರವನ್ನು ಮಾಡುತ್ತಿದ್ದನು. ವೇದಗಳ ಅಧ್ಯಯನದಲ್ಲಿ ತತ್ಪರನಾಗಿದ್ದನು. ವಾನಪ್ರಸ್ಥಾಶ್ರಮದ ವಿಧಾನವನ್ನು ತಿಳಿದವನಾಗಿದ್ದನಲ್ಲದೇ–ಅದರ ಪರಿಪಾಲನೆಯನ್ನೂ ಮಾಡುತ್ತಿದ್ದನು. ಬ್ರಹ್ಮರ್ಷಿಯಾದ ಜಾಜಲಿಯು ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದನು. ಅವನು ಅರಣ್ಯದಲ್ಲಿ ತಪಸ್ಸಿನಲ್ಲಿಯೇ ನಿರತನಾಗಿರುತ್ತಿದ್ದನು. ಆದರೆ ತಾನು ಧರ್ಮಜ್ಞನೆಂಬ ಅಭಿಮಾನವನ್ನು ಹೊಂದಿರಲಿಲ್ಲ. ವರ್ಷಾಕಾಲಗಳಲ್ಲಿ ಆಕಾಶವನ್ನೇ ಹೊದ್ದಿಕೆಯನ್ನಾಗಿ ಮಾಡಿಕೊಂಡು ಮಲಗುತ್ತಿದ್ದನು. ಹೇಮಂತರ್ತುವಿನಲ್ಲಿ ನೀರಿನೊಳಗೆ ಕುಳಿತು ತಪಸ್ಸುಮಾಡುತ್ತಿದ್ದನು. ಗ್ರೀಷ್ಮರ್ತುವಿನಲ್ಲಿ ಗಾಳಿಯ ಬಡಿತವನ್ನೂ ಬಿಸಿಲಿನ ತಾಪವನ್ನೂ ಸಹಿಸಿಕೊಳ್ಳುತ್ತಿದ್ದನು. ಅಂತಹ ಘೋರವಾದ ತಪಸ್ಸನ್ನು ಮಾಡುತ್ತಿದ್ದರೂ ಜಾಜಲಿಗೆ ನಿಜವಾದ ಧರ್ಮದ ಜ್ಞಾನವುಂಟಾಗಲೇ ಇಲ್ಲ. ಅವನು ಭೂಮಿಯಲ್ಲಿ ಹೊರಳಾಡುತ್ತಿದ್ದನು. ದುಃಖವನ್ನುಂಟುಮಾಡುವ ವಿಧ-ವಿಧವಾದ ಮುಳ್ಳಿನ ಹಾಸಿಗೆಗಳಲ್ಲಿ ಮಲಗುತ್ತಿದ್ದನು.

ಹೀಗೆ ಜಾಜಲಿಯು ಕಠೋರವ್ರತನಿಷ್ಠನಾಗಿರುತ್ತಿರಲಾಗಿ, ಒಮ್ಮೆ ವರ್ಷಾಕಾಲದಲ್ಲಿ ಆಕಾಶವನ್ನೇ ಹೊದ್ದಿಕೆಯನ್ನಾಗಿ ಮಾಡಿಕೊಂಡು ಬಯಲಿನಲ್ಲಿ ತಪಸ್ಸುಮಾಡುತ್ತಾ ನಿಂತಿದ್ದನು. ಅಂತರಿಕ್ಷದಿಂದ ಧಾರಾಕಾರವಾಗಿ ಮಳೆಯು ಸುರಿಯುತ್ತಿದ್ದಿತು. ಅದನ್ನು ಲೆಕ್ಕಿಸದೆ ಜಾಜಲಿಯು ತಲೆಯಿಂದ ಜಲಧಾರೆಯನ್ನು ಬಾರಿ-ಬಾರಿಗೂ ಸಹಿಸಿಕೊಳ್ಳುತ್ತಿದ್ದನು. ಅದರಿಂದಾಗಿ ಅವನ ತಲೆಯು ಸಂಪೂರ್ಣವಾಗಿ ನೆನೆದು ಕೂದಲುಗಳು ಜಡೆಗಟ್ಟಿಕೊಂಡುವು. ಅವನು ಪ್ರತಿನಿತ್ಯವೂ ಅರಣ್ಯದಲ್ಲಿ ಸಂಚರಿಸುತ್ತಿದ್ದುದರಿಂದ ಅವನ ಶರೀರವು ಮಲಿನವಾಗಿದ್ದಿತು. ಆದರೆ ಅವನ ಮನಸ್ಸು ನಿರ್ಮಲವಾಗಿದ್ದಿತು. ಮಹಾತಪಸ್ವಿಯಾದ ಜಾಜಲಿಯೊಮ್ಮೆ ವಾಯುವನ್ನೇ ಸೇವಿಸುತ್ತಾ ನಿರಾಹಾರನಾಗಿ ಕಟ್ಟಿಗೆಯಂತೆ ಸ್ಥಿರಚಿತ್ತನಾಗಿ ಅರಣ್ಯದ ಒಂದು ಸ್ಥಳದಲ್ಲಿ ನಿಂತುಬಿಟ್ಟನು. ಅವನು ಮುಂದೆ ಅಲ್ಲಿಂದ ಚಲಿಸಲೇ ಇಲ್ಲ. ನಿಶ್ಚೇಷ್ಟನಾಗಿ ಸ್ಥಾಣುವಿನಂತೆ (ಮೋಟುಮರದಂತೆ) ನಿಂತಿದ್ದ ಜಾಜಲಿಯ ಜಡೆಗಟ್ಟಿದ ಶಿರಸ್ಸಿನಲ್ಲಿ ಕುಲಿಂಗ (ಗುಬ್ಬಚ್ಚಿ) ದಂಪತಿಗಳು ಗೂಡುಮಾಡಿಕೊಂಡುವು. ದಯಾವಂತನಾದ, ಬ್ರಹ್ಮರ್ಷಿಯಾದ ಜಾಜಲಿಯು ಪಕ್ಷಿಯುಗ್ಮಗಳು ಹುಲ್ಲು-ಹಣಬೆಗಳನ್ನು ತಂದು ತನ್ನ ತಲೆಯ ಮೇಲೆ ಗೂಡು ಕಟ್ಟಿಕೊಳ್ಳುತ್ತಿದ್ದರೂ ಅದನ್ನು ಉಪೇಕ್ಷಿಸಿಬಿಟ್ಟನು. ತಲೆಯನ್ನು ಒಮ್ಮೆಯಾದರೂ ಕೊಡವಿಕೊಳ್ಳಲೂ ಇಲ್ಲ. ಅವುಗಳಿಗೆ ತೊಂದರೆಯಾಗದಂತೆ ಮತ್ತಷ್ಟು ಸ್ಥಿರನಾಗಿಯೇ ನಿಂತಿದ್ದನು. ಮಹಾತಪಸ್ವಿಯು ಯಾವಾಗ ಸ್ವಲ್ಪವೂ ವಿಚಲಿತನಾಗದೇ ಸ್ತಂಭದಂತೆ ನಿಂತಲ್ಲಿಯೇ ನಿಂತಿರುತ್ತಿದ್ದನೋ– ಆಗ ಆ ಗುಬ್ಬಚ್ಚಿಗಳಿಗೆ ವಿಶ್ವಾಸವುಂಟಾಗಿ ಅವನ ತಲೆಯಲ್ಲಿ ಕಟ್ಟಿದ್ದ ಗೂಡಿನಲ್ಲಿಯೇ ಸುಖವಾಗಿ ವಾಸಮಾಡತೊಡಗಿದುವು. ವರ್ಷಾಕಾಲವು ಮುಗಿದು ಶರತ್ಕಾಲವು ಪ್ರಾರಂಭವಾಯಿತು. ಕಾಮಮೋಹಿತವಾದ ಆ ಗುಬ್ಬಚ್ಚಿಗಳು ಸಂತಾನೋತ್ಪಾದನಾವಿಧಿಯಿಂದ ಪರಸ್ಪರ ಸಮಾಗಮವನ್ನು ಮಾಡಿದುವು. ಮಹರ್ಷಿಯ ವಿಷಯದಲ್ಲಿ ವಿಶೇಷವಾದ ವಿಶ್ವಾಸವಿದ್ದುದರಿಂದ ಅವುಗಳು ಅವನ ತಲೆಯಮೇಲಿದ್ದ ಗೂಡಿನಲ್ಲಿಯೇ ಮೊಟ್ಟೆಗಳನ್ನಿಟ್ಟುವು. ಕಠೋರ ವ್ರತನಿಷ್ಠನಾಗಿದ್ದ, ತೇಜಸ್ವಿಯಾಗಿದ್ದ ಜಾಜಲಿಯು ತನ್ನ ತಲೆಯ ಮೇಲಿ

ರುವ ಗೂಡಿನಲ್ಲಿ ಗುಬ್ಬಚ್ಚಿಗಳು ಮೊಟ್ಟೆಯಿಟ್ಟಿವೆಯೆಂಬುದನ್ನೂ ತಿಳಿದುಕೊಂಡನು. ಮಹಾತೇಜಸ್ವಿಯಾದ ಜಾಜಲಿಯು ಸ್ವಲ್ಪವಾದರೂ ಅಲುಗಾಡದೆಯೇ ನಿಂತಿದ್ದನು. ಧರ್ಮದಲ್ಲಿಯೇ ನಿಯತಮನಸ್ಕನಾಗಿದ್ದ ಅವನಿಗೆ ತಲೆಯನ್ನಲುಗಾಡಿಸಿ ಪಕ್ಷಿಗಳಿಗೆ ತೊಂದರೆಯುಂಟಾಗುವಂತೆ ಮಾಡುವ ಅಧರ್ಮಕಾರ್ಯವು ರುಚಿಸಲಿಲ್ಲ. ಅನುದಿನವೂ ಆ ಪಕ್ಷಿಗಳು ಬೆಳಗಾದೊಡನೆಯೇ ಆಹಾರಾರ್ಥವಾಗಿ ಹೊರಗೆ ಹೋಗಿ ಸಾಯಂಕಾಲವಾಗುತ್ತಲೇ ಋಷಿಯ ತಲೆಯಲ್ಲಿದ್ದ ಗೂಡಿಗೆ ಬರುತ್ತಿದ್ದುವು. ಅಲ್ಲಿ ಅವುಗಳಿಟ್ಟಿದ್ದ ಮೊಟ್ಟೆಗಳು ಸುರಕ್ಷಿತವಾಗಿರುವುದನ್ನು ನೋಡಿ ಅವುಗಳಿಗೆ ಆ ಋಷಿಯ ವಿಷಯದಲ್ಲಿ ಮತ್ತಷ್ಟು ವಿಶ್ವಾಸವು ಉಂಟಾಗಿದ್ದಿತು. ಹೀಗೆಯೇ ಅವು ಜಾಜಲಿಯ ತಲೆಯಲ್ಲಿದ್ದ ಗೂಡಿನಲ್ಲಿ ಅತ್ಯಂತಪ್ರಸನ್ನತೆಯಿಂದ ವಾಸಮಾಡುತ್ತಿದ್ದುವು. ಮೊಟ್ಟೆಗಳು ಬಲಿತನಂತರ ಒಡೆದು ಅವುಗಳಿಂದ ಪುಟ್ಟ ಹಕ್ಕಿಗಳು ಹೊರಬಂದುವು ಮತ್ತು ಅಲ್ಲಿಯೇ ಅವು ಬೆಳೆಯತೊಡಗಿದುವು. ಆದರೂ ಜಾಜಲಿಯು ಅಲುಗಾಡಲಿಲ್ಲ. ದೃಢವಾಗಿ ವ್ರತವನ್ನು ಪರಿಪಾಲಿಸುತ್ತಿದ್ದ, ಧರ್ಮಾತ್ಮನಾದ, ಏಕಾಗ್ರಚಿತ್ತನಾದ ಜಾಜಲಿಯು ನಿಶ್ಚೇಷ್ಟನಾಗಿ ಗುಬ್ಬಚ್ಚಿಗಳ ಮರಿಗಳನ್ನು ರಕ್ಷಿಸುತ್ತಾ ಅಲ್ಲಿಯೇ ನಿಂತಿದ್ದನು. ಸ್ವಲ್ಪಕಾಲವು ಕಳೆದನಂತರ ಮರಿಗಳು ರೆಕ್ಕೆಗಟ್ಟಿ ಪಕ್ಷಿಗಳಾದುವು. ಗುಬ್ಬಚ್ಚಿಯ ಮರಿಗಳಿಗೆ ರೆಕ್ಕೆಗಳು ಬಂದಿರುವುದನ್ನೂ ಜಾಜಲಿಯು ತಿಳಿದುಕೊಂಡನು. ವ್ರತಶೀಲನಾದ, ಬುದ್ಧಿವಂತರಲ್ಲಿ ಶ್ರೇಷ್ಠನಾದ ಜಾಜಲಿಯು ಒಮ್ಮೆ ಆ ಮರಿಗಳೆಲ್ಲವೂ ರೆಕ್ಕೆಯನ್ನು ಹೊಂದಿ ಹಾರಾಡುತ್ತಾ ತನ್ನ ಬಳಿಗೆ ಬರುತ್ತಿರುವುದನ್ನು ಕಂಡು ಪರಮಪ್ರೀತನಾದನು. ಅದೇ ರೀತಿಯಲ್ಲಿ ಗುಬ್ಬಚ್ಚಿಗಳು ತಾವಿಟ್ಟಿದ್ದ ಮೊಟ್ಟೆಗಳು ಮರಿಗಳಾಗಿ ಗರಿಗಟ್ಟಿ ಹಾರುತ್ತಿರುವುದನ್ನು ಕಂಡು ಸಂತೋಷವನ್ನು ಹೊಂದಿದುವು. ಜಾಜಲಿಯ ತಲೆಯಲ್ಲಿದ್ದ ಆ ಗೂಡಿನಲ್ಲಿಯೇ ಗುಬ್ಬಚ್ಚಿಗಳು ತಮ್ಮ ಸಂತಾನದೊಡನೆ ನಿರ್ಭಯವಾಗಿ ವಾಸಮಾಡುತ್ತಿದ್ದುವು. ವಿಪ್ರಶ್ರೇಷ್ಠನಾದ ಜಾಜಲಿಯು ಪುಟ್ಟಮರಿಗಳಿಗೆ ರೆಕ್ಕೆಗಳು ಬಂದಿರುವುದನ್ನೂ ಮತ್ತು ಅವುಗಳೂ ದೊಡ್ಡ ಗುಬ್ಬಚ್ಚಿಗಳಂತೆ ಪ್ರಾತಃಕಾಲದಲ್ಲಿ ಗೂಡಿನಿಂದ ಹೊರಕ್ಕೆ ಹಾರಿಕೊಂಡುಹೋಗಿ ಸಾಯಂಕಾಲವಾಗುತ್ತಲೇ ಪುನಃ ಗೂಡಿಗೆ

ಬರುತ್ತಿದ್ದುದನ್ನೂ ನೋಡುತ್ತಲೇ ಇದ್ದನು. ಆದರೆ ಅವನು ಅಲುಗಾಡು ತ್ತಲೇ ಇರಲಿಲ್ಲ. ಕೆಲವು ಸಮಯಗಳಲ್ಲಿ ದೊಡ್ಡ ಗುಬ್ಬಚ್ಚಿಗಳು ತಮ್ಮ ಮರಿಗಳನ್ನು ಗೂಡಿನಲ್ಲಿಯೇ ಬಿಟ್ಟುಹೋಗುತ್ತಿದ್ದುವು. ಮರಿಗಳು ಕೂಡ ಒಮ್ಮೆ ಹೊರಕ್ಕೆ ಹೋಗುತ್ತಿದ್ದುವು. ಮತ್ತೊಮ್ಮೆ ಒಳಕ್ಕೆ ಬರುತ್ತಿದ್ದುವು. ತನ್ನ ತಲೆಯ ಮೇಲೆ ಇಷ್ಟೆಲ್ಲಾ ಕೋಲಾಹಲವು ನಡೆಯುತ್ತಿದ್ದರೂ ಜಾಜಲಿಯು ಚಲಿಸಲೇ ಇಲ್ಲ. ದಿವಸಗಳು ಕಳೆದಂತೆ ಮರಿಗಳೆಲ್ಲವೂ ದೊಡ್ಡವಾದುವು. ಪ್ರಾತಃಕಾಲ ಗೂಡುಬಿಟ್ಟು ಹೊರಟರೆ ತಂಗುವ ಸಲುವಾಗಿ ಪುನಃ ಸಾಯಂಕಾಲವೇ ಗೂಡಿಗೆ ಬಂದು ಸೇರಿಕೊಳ್ಳುತ್ತಿದ್ದುವು. ಒಮ್ಮೆ ಐದು ದಿವಸಗಳವರೆಗೆ ಹೊರಗೆ ಹೋಗಿದ್ದ ಪಕ್ಷಿಗಳು ಆರನೆಯ ದಿವಸ ಋಷಿಯ ತಲೆಯ ಮೇಲಿದ್ದ ತಮ್ಮ ಗೂಡಿಗೆ ಬರುತ್ತಿದ್ದುವು. ಆಗಲೂ ಜಾಜಲಿಯು ಅಲುಗಾಡದೇ ನಿಂತಿದ್ದನು. ಆ ಪಕ್ಷಿಗಳೆಲ್ಲವೂ ಬಲಿಷ್ಠವಾಗಿದ್ದುವು. ಆದುದರಿಂದ ಅವುಗಳು ಕ್ರಮೇಣ ಬಹಳ ದಿವಸಗಳವರೆಗೆ ಗೂಡಿಗೆ ಹಿಂದಿರುಗುತ್ತಲೇ ಇರಲಿಲ್ಲ. ಒಮ್ಮೆ ಆಕಾಶಗಾಮಿಗಳಾದ ಆ ಪಕ್ಷಿಗಳು ಗೂಡಿನಿಂದ ಹಾರಿಹೋಗಿ ಒಂದು ತಿಂಗಳು ಹಿಂದಿರುಗಲೇ ಇಲ್ಲ. ಆಗ ಜಾಜಲಿಯು ತಾನು ನಿಂತಿದ್ದ ಸ್ಥಳದಿಂದ ಚಲಿಸಿದನು. ತನ್ನ ತಲೆಯ ಮೇಲೆ ಗೂಡುಮಾಡಿಕೊಂಡಿದ್ದ ಪಕ್ಷಿಗಳೆಲ್ಲವೂ ಅದೃಶ್ಯವಾಗಿಹೋದನಂತರ ಜಾಜಲಿಗೆ ವಿಸ್ಮಯವುಂಟಾಯಿತು. ತಾನು ಸಿದ್ಧಪುರುಷನೆಂದೇ ಅವನು ಭಾವಿಸಿಕೊಂಡುಬಿಟ್ಟನು. ಅದರಿಂದಾಗಿ ಅವನಲ್ಲಿ ಅಹಂಕಾರವು ಪ್ರವೇಶಿಸಿತು. ನಿಯಮಪೂರ್ವಕವಾಗಿ ವ್ರತಾಚರಣೆ ಯನ್ನು ಮಾಡುತ್ತಿದ್ದ, ಸಭ್ಯಹೃದಯನಾದ, ಯೋಗ್ಯನಾದ ಜಾಜಲಿಯು ಹಾಗೆ ಹೊರಟುಹೋದ ಪಕ್ಷಿಗಳನ್ನು ನೋಡಿ ಅತ್ಯಂತಪ್ರಸನ್ನವಾದ ಮನಸ್ಸನ್ನು ಹೊಂದಿದನು. ಅನಂತರ ಮಹಾತಪಸ್ವಿಯಾದ ಜಾಜಲಿಯು ನದಿಯಲ್ಲಿ ಸ್ನಾನಮಾಡಿ ಸಂಧ್ಯಾವಂದನೆಯನ್ನು ಮಾಡಿದ ನಂತರ ಅಗ್ನಿಹೋತ್ರದ ಮೂಲಕ ವಾಗಿ ಅಗ್ನಿಯನ್ನು ತೃಪ್ತಿಗೊಳಿಸಿ, ಆಗತಾನೇ ಉದಯಿಸುತ್ತಿದ್ದ ಸೂರ್ಯನ ಉಪಸ್ಥಾನವನ್ನು (ಧ್ಯಾನವನ್ನು) ಮಾಡಿದನು. ಜಪಮಾಡುವವರಲ್ಲಿ ಶ್ರೇಷ್ಠನಾದ ಜಾಜಲಿಯು ತನ್ನ ತಲೆಯ ಮೇಲೆ ಗೂಡು ಕಟ್ಟಿಕೊಂಡಿದ್ದ ಗುಬ್ಬಚ್ಚಿಗಳನ್ನೇ

ಸ್ಮರಿಸುತ್ತಾ ತನ್ನನ್ನು ಮಹಾಧರ್ಮಾತ್ಮನೆಂದು ಭಾವಿಸಿಕೊಂಡು –'ಧರ್ಮವು ನನಗೆ ಸಿಕ್ಕಿಬಿಟ್ಟಿತು! ನಾನು ಧರ್ಮಾತ್ಮನಾದೆನು'–ಎಂದು ಸ್ಪಷ್ಟವಾಗಿ ಉದ್ಘೋಷಿಸಿದನು. ಜಾಜಲಿಯು ಉದ್ಘೋಷಿಸಿದುದಕ್ಕೆ ಉತ್ತರವಾಗಿ ಅಂತರಿಕ್ಷದಲ್ಲಿ ಮಾತು ಕೇಳಿಬಂದಿತು. ಅದನ್ನು ಜಾಜಲಿಯೂ ಕೇಳಿಸಿ ಕೊಂಡನು. ಆಕಾಶವಾಣಿಯು ಹೀಗೆ ಹೇಳಿತು :

ಧರ್ಮೇಣ ನ ಸಮಸ್ತ್ವಂ ವೈ ತುಲಾಧಾರಸ್ಯ ಜಾಜಲೇ ।
ವಾರಾಣಸ್ಯಾಂ ಮಹಾಪ್ರಾಜ್ಞಸ್ತುಲಾಧಾರಃ ಪ್ರತಿಷ್ಠಿತಃ ।
ಸೋಽಪ್ಯೇವಂ ನಾರ್ಹತೇ ವಕ್ತುಂ ಯಥಾ ತ್ವಂ ಭಾಷಸೇ ದ್ವಿಜ ॥

"ಜಾಜಲಿಯೇ! ಧರ್ಮದಲ್ಲಿ ನೀನು ತುಲಾಧಾರನಿಗೆ ಸಮಾನನಲ್ಲ. ಮಹಾಪ್ರಾಜ್ಞನಾದ ತುಲಾಧಾರನು ವಾರಾಣಸಿಯಲ್ಲಿ ವಾಸಮಾಡುತ್ತಿದ್ದಾನೆ. ನೀನು ಹೇಳಿದಂತೆ ತುಲಾಧಾರನೂ ತನ್ನ ಧಾರ್ಮಿಕತೆಯ ವಿಷಯವಾಗಿ ಹೇಳಲಾರನು."*

ಯುಧಿಷ್ಠಿರ! ಆಕಾಶದ ಕಡೆಯಿಂದ ಬಂದ ಮಾತನ್ನು ಕೇಳಿ ಜಾಜಲಿಯು ಕ್ರೋಧವಶನಾದನು. ತುಲಾಧಾರನನ್ನು ಸಂದರ್ಶಿಸುವ ಇಚ್ಛೆಯಿಂದ ಪ್ರಯಾಣಹೊರಟ ಜಾಜಲಿಯು ಸಾಯಂಕಾಲದವರೆಗೂ ನಡೆದು ಆ ವೇಳೆಗೆ ಸಿಕ್ಕಿದ ಗ್ರಾಮದಲ್ಲಿ ರಾತ್ರಿಯಲ್ಲಿ ತಂಗುತ್ತಾ, ಪುನಃ ಬೆಳಗಾದೊಡನೆಯೇ ನಿತ್ಯಕರ್ಮಗಳನ್ನು ಮುಗಿಸಿ ಪ್ರಯಾಣಮಾಡುತ್ತಾ, ಭೂಮಿಯಲ್ಲಿ ಅಲೆದನು. ಹೀಗೆಯೇ ಪ್ರಯಾಣಮಾಡುತ್ತಿದ್ದಾಗ ಬಹಳ ಕಾಲಾನಂತರ ಜಾಜಲಿಯು ವಾರಾಣಸಿಯನ್ನು ಸೇರಿದನು. ಅಲ್ಲಿ ಅವನು ಪದಾರ್ಥಗಳನ್ನು ಮಾರುತ್ತಿದ್ದ ತುಲಾಧಾರನನ್ನು ನೋಡಿದನು. ವಿವಿಧ ಪದಾರ್ಥಗಳ ಕ್ರಯ-ವಿಕ್ರಯಗಳಿಂದಲೇ ಜೀವನವನ್ನು ನಿರ್ವಹಿಸುತ್ತಿದ್ದ ತುಲಾಧಾರನು ತನ್ನ ಬಳಿಗೆ ಬ್ರಾಹ್ಮಣನು ಬರುತ್ತಿರುವುದನ್ನು ನೋಡಿ ದೊಡನೆಯೇ ಪರಮಹೃಷ್ಟನಾಗಿ ಮೇಲೆದ್ದು ಮುಂದೆ ಹೋಗಿ ಸ್ವಾಗತವನ್ನಿತ್ತು ಮನೆಗೆ ಕರೆತಂದು ಯಥಾಯೋಗ್ಯವಾಗಿ ಸತ್ಕರಿಸಿದನು. ಬಳಿಕ ಜಾಜಲಿಯನ್ನು ಕುರಿತು ಹೇಳಿದನು :

---

* ಈ ಹಿಂದೆ ಪಿಶಾಚಿಗಳು ಹೀಗೆ ಹೇಳಿದುವೆಂದು ಬಂದಿದೆ.

“ಬ್ರಾಹ್ಮಣಶ್ರೇಷ್ಠನೇ! ನೀನು ಇಲ್ಲಿಗೆ ಬರುವ ವಿಷಯವು ನನಗೆ ಮೊದಲೇ ತಿಳಿದಿದ್ದಿತು. ಇದರಲ್ಲಿ ಸಂದೇಹವೇ ಇಲ್ಲ. ನಾನೀಗ ಹೇಳಲಿರುವ ಮಾತನ್ನು ಕೇಳು. ನೀನು ಸಮುದ್ರತೀರದ ನೀರಿರುವ ಪ್ರದೇಶವನ್ನು ಆಶ್ರಯಿಸಿ ಮಹಾತಪಸ್ಸನ್ನು ಮಾಡಿದೆ. ಆದರೆ ಹಿಂದೆ ನಿನಗೆ ಮಹಾತಪಸ್ಸನ್ನು ಮಾಡಿಯೂ–‘ನಾನು ಮಹಾಧರ್ಮಾತ್ಮನು’–ಎಂಬ ಭಾವನೆಯೇ ಉಂಟಾಗಿರಲಿಲ್ಲ. ಅಹಂಕಾರವೆಂಬುದನ್ನೇ ನೀನು ಆ ಸಮಯದಲ್ಲಿ ಅರಿಯದವನಾಗಿದ್ದೆ. ನೀನು ತಪಸ್ಸಿನಲ್ಲಿ ಸಿದ್ಧಿಯನ್ನು ಪಡೆದನಂತರ ಸ್ಥಾಣುವಿನಂತೆ ನಿಂತಿದ್ದ ನಿನ್ನ ತಲೆಯ ಮೇಲೆ ಗುಬ್ಬಚ್ಚಿ ದಂಪತಿಗಳು ಗೂಡುಕಟ್ಟಿಕೊಂಡು ಮೊಟ್ಟೆಗಳನ್ನಿಟ್ಟು ಮರಿಗಳನ್ನು ಮಾಡಿದುವು. ಅವುಗಳೆಲ್ಲವನ್ನೂ ನೀನು ಚೆನ್ನಾಗಿಯೇ ರಕ್ಷಿಸಿದೆ. ಮರಿಗಳಿಗೆ ಯಾವಾಗ ರೆಕ್ಕೆಗಳು ಬೆಳೆದುವೋ ಮತ್ತು ಅವುಗಳು ಯಾವಾಗ ಕಾಳು-ಕಡ್ಡಿಗಳಿಗಾಗಿ ಅತ್ತಲಿತ್ತ ಹಾರಿಕೊಂಡು ಹೋಗತೊಡಗಿದುವೋ– ಆಗ ಪಕ್ಷಿಗಳ ಪಾಲನೆಯಿಂದ ಪ್ರಾಪ್ತವಾದ ಧರ್ಮವನ್ನೇ ಶ್ರೇಷ್ಠಧರ್ಮವೆಂದು ಭಾವಿಸತೊಡಗಿದೆ. ‘ನಾನು ಧರ್ಮವನ್ನು ಹೊಂದಿದೆನು’–ಎಂಬುದಾಗಿಯೂ ನೀನು ಸ್ಪಷ್ಟವಾಗಿ ಉದ್ಘೋಷಿಸಿದೆ. ಅದಕ್ಕೆ ಉತ್ತರವಾಗಿ ಆಕಾಶವಾಣಿಯು ನನ್ನ ವಿಷಯವಾಗಿ ಹೇಳಿದುದೆಲ್ಲವನ್ನೂ ನೀನು ಕೇಳಿಸಿಕೊಂಡೆ. ಅದರಿಂದ ನೀನು ಕ್ರೋಧವಶನಾಗಿ ನನ್ನನ್ನು ನೋಡಬೇಕೆಂಬ ಕಾರಣದಿಂದ ಇಲ್ಲಿಗೆ ಆಗಮಿಸಿರುವೆ. ದ್ವಿಜಶ್ರೇಷ್ಠನೇ! ನಾನು ನಿನಗೆ ಯಾವ ಪ್ರಿಯವಾದ ಕಾರ್ಯವನ್ನು ಮಾಡಿಕೊಡಲಿ? ದಯಮಾಡಿ ಹೇಳು.”

೨೬೧ನೆಯ ಅಧ್ಯಾಯವು ಮುಗಿಯಿತು.

೨೬೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜಾಜಲಿ-ತುಲಾಧಾರರ ನಡುವೆ ಧರ್ಮದ ವಿಷಯದಲ್ಲಿ ಸಂಭಾಷಣೆ

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಬುದ್ಧಿವಂತನಾದ ತುಲಾಧಾರನು ಜಾಜಲಿಯನ್ನು

ಕುರಿತು ಹೀಗೆ ಹೇಳಿದನಂತರ ಜಾಪಕರಲ್ಲಿ ಶ್ರೇಷ್ಠನಾದ, ಧೀಮಂತನಾದ ಜಾಜಲಿಯು ತುಲಾಧಾರನಿಗೆ ಈ ಮಾತನ್ನು ಹೇಳಿದನು :

"ಮಹಾಮತಿಯೇ! ವೈಶ್ಯಕುಲೋತ್ಪನ್ನನೇ! ತುಲಾಧಾರ! ಸಕಲ ವಿಧವಾದ ರಸಗಳನ್ನೂ, ಗಂಧಗಳನ್ನೂ, ವನಸ್ಪತಿಗಳನ್ನೂ, ಓಷಧಿಗಳನ್ನೂ ಕಂದ-ಮೂಲ-ಫಲಗಳನ್ನೂ ವಿಕ್ರಯಿಸುತ್ತಿರುವ ನಿನಗೆ ಧರ್ಮದಲ್ಲಿಯೇ ನಿಷ್ಠವಾಗಿರುವ ಬುದ್ಧಿಯು ಎಲ್ಲಿಂದ ಬಂದಿತು? ನೀನು ಈ ಜ್ಞಾನವನ್ನು ಹೇಗೆ ಪಡೆದುಕೊಂಡೆ? ಈ ವಿಷಯದಲ್ಲಿ ಎಲ್ಲವನ್ನೂ ಆಮೂಲಾಗ್ರವಾಗಿ ನನ್ನೊಡನೆ ಹೇಳು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಯಶೋವಂತನಾದ ಬ್ರಾಹ್ಮಣನು ಹೀಗೆ ಹೇಳಿದನಂತರ ಧರ್ಮದ ತತ್ತ್ವಾರ್ಥವನ್ನು ತಿಳಿದಿದ್ದ, ವೈಶ್ಯನಾದ ತುಲಾಧಾರನು ಧರ್ಮಸೂಕ್ಷ್ಮಗಳನ್ನು ಜಾಜಲಿಗೆ ಹೇಳತೊಡಗಿದನು :

"ವಿಪ್ರೋತ್ತಮ! ಸರ್ವಪ್ರಾಣಿಗಳಿಗೂ ಹಿತಕರವಾದ, ಎಲ್ಲರೊಡನೆಯೂ ಮೈತ್ರೀಭಾವವನ್ನುಂಟುಮಾಡುವ ಯಾವ ಧರ್ಮವನ್ನು ಜನರು ಪುರಾತನವಾದುದೆಂದು ತಿಳಿದಿರುವರೋ – ಅಂತಹ ಸನಾತನಧರ್ಮವನ್ನು ನಾನು ಅದರಲ್ಲಿರುವ ರಹಸ್ಯಗಳ (ಸೂಕ್ಷ್ಮವಿಷಯಗಳ) ಸಹಿತವಾಗಿ ತಿಳಿದುಕೊಂಡಿರುತ್ತೇನೆ.

ಅದ್ರೋಹೇಣೈವ ಭೂತಾನಾಮಲ್ಪದ್ರೋಹೇಣ ವಾ ಪುನಃ ।
ಯಾ ವೃತ್ತಿಃ ಸ ಪರೋ ಧರ್ಮಸ್ತೇನ ಜೀವಾಮಿ ಜಾಜಲೇ ॥೬॥

ಜಾಜಲಿಯೇ! ಯಾವ ವಿಧವಾದ ಜೀವನನಿರ್ವಹಣೆಯಿಂದ ಪ್ರಾಣಿಮಾತ್ರಕ್ಕೆ ದ್ರೋಹವಾಗುವುದಿಲ್ಲವೋ ಅಥವಾ ಅತ್ಯಲ್ಪದ್ರೋಹವಾಗುವುದೋ–ಅಂತಹ ಜೀವನವೃತ್ತಿಯನ್ನು ಅನುಸರಿಸುವುದೇ ಶ್ರೇಷ್ಠವಾದ ಧರ್ಮ. ನಾನು ಅಂತಹುದೇ ಜೀವನವೃತ್ತಿಯನ್ನು ಆಶ್ರಯಿಸಿ ಜೀವಿಸುತ್ತಿದ್ದೇನೆ.

ಪರಚ್ಛಿನ್ನೈಃ ಕಾಷ್ಠತೃಣೈರ್ಮಯೇದಂ ಶರಣಂ ಕೃತಮ್ ।
ಅಲಕ್ತಂ ಪದ್ಮಕಂ ತುಙ್ಗಂ ಗನ್ಧಾಂಶ್ಚೋಚ್ಚಾವಚಾಂಸ್ತಥಾ ॥೭॥

ರಸಾಂಶ್ಚ ತಾಂಸ್ತಾನ್ವಿಪ್ರರ್ಷೇ ಮದ್ಯವರ್ಜ್ಯಾನ್ಬಹೂನಹಮ್ ।
ಕ್ರೀತ್ವಾ ವೈ ಪ್ರತಿವಿಕ್ರೀಣೇ ಪರಹಸ್ತಾದಮಾಯಯಾ ॥೮॥

ಇತರರು ಕತ್ತರಿಸಿದ ಕಟ್ಟಿಗೆಗಳಿಂದಲೂ ಮತ್ತು ಹುಲ್ಲಿನಿಂದಲೂ ನಾನು ಈ ಗುಡಿಸಿಲನ್ನು ಕಟ್ಟಿಕೊಂಡಿರುತ್ತೇನೆ. ಅರಗು, ಪದ್ಮಕ (ಒಂದು ಮೂಲಿಕೆ), ಸುರಹೊನ್ನೇಮರದ ತೊಗಟೆ, ನಾನಾವಿಧವಾದ ಗಂಧಗಳು, ಮದ್ಯವನ್ನು ಬಿಟ್ಟು ಉಳಿದ ನಾನಾವಿಧವಾದ ರಸಗಳು–ಇವೇ ಮುಂತಾದುವನ್ನು ಇತರರಿಂದ ಕ್ರಯಕ್ಕೆ ತೆಗೆದುಕೊಂಡು, ಮೋಸ-ತಟವಟ-ವಂಚನೆಗಳಿಲ್ಲದೆ ಇತರರಿಗೆ ಮಾರಿ, ಅದರಿಂದ ಬರುವ ಲಾಭಾಂಶದಿಂದ ನನ್ನ ಜೀವನವನ್ನು ನಿರ್ವಹಿಸುತ್ತಿದ್ದೇನೆ.

ಸರ್ವೇಷಾಂ ಯಃ ಸುಹೃನ್ನಿತ್ಯಂ ಸರ್ವೇಷಾಂ ಚ ಹಿತೇ ರತಃ ।
ಕರ್ಮಣಾ ಮನಸಾ ವಾಚಾ ಸ ಧರ್ಮಂ ವೇದ ಜಾಜಲೇ ॥೯॥

ಜಾಜಲಿಯೇ! ಯಾವನು ಮಾತು, ಮನಸ್ಸು ಮತ್ತು ಕಾರ್ಯಗಳಿಂದ ಎಲ್ಲ ಪ್ರಾಣಿಗಳಿಗೂ ಸುಹೃದನಾಗಿರುವನೋ ಮತ್ತು ಎಲ್ಲ ಪ್ರಾಣಿಗಳ ಹಿತದಲ್ಲಿಯೂ ಆಸಕ್ತನಾಗಿರುವನೋ–ಅಂತಹವನು ಧರ್ಮದ ಸ್ವರೂಪ ವನ್ನು ತಿಳಿದಿರುತ್ತಾನೆ.

ನಾನುರುಧ್ಯೇ ನಿರುಧ್ಯೇ ವಾ ನ ದ್ವೇಷ್ಮಿ ನ ಚ ಕಾಮಯೇ ।
ಸಮೋಽಹಂ ಸರ್ವಭೂತೇಷು ಪಶ್ಯ ಮೇ ಜಾಜಲೇ ವ್ರತಮ್ ।
ತುಲಾ ಮೇ ಸರ್ವಭೂತೇಷು ಸಮಾ ತಿಷ್ಠತಿ ಜಾಜಲೇ ॥೧೦॥

ನಾನು ಒಬ್ಬನನ್ನು ತೃಪ್ತಿಪಡಿಸಲೂ ಹೋಗುವುದಿಲ್ಲ; ಅತೃಪ್ತಿಪಡಿ ಸಲೂ ಹೋಗುವುದಿಲ್ಲ. ಒಬ್ಬನನ್ನು ದ್ವೇಷಿಸುವುದೂ ಇಲ್ಲ; ಪ್ರೀತಿಸುವುದೂ ಇಲ್ಲ. ಸರ್ವಪ್ರಾಣಿಗಳ ವಿಷಯದಲ್ಲಿಯೂ ಸಮಭಾವ ದಿಂದಿರುತ್ತೇನೆ. ನನ್ನ ತಕ್ಕಡಿಯು ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಸಮವಾಗಿ ನಿಂತಿರುತ್ತದೆ. (ಒಬ್ಬನಿಗೆ ಹೆಚ್ಚಾಗಿಯೂ ತೂಗುವುದಿಲ್ಲ; ಮತ್ತೊಬ್ಬನಿಗೆ ಕಡಿಮೆಯಾಗಿಯೂ ತೂಗುವುದಿಲ್ಲ.) ಜಾಜಲಿಯೇ! ನನ್ನ ಈ ವ್ರತವನ್ನು ನೀನು ಗಮನಿಸು.

ನಾಹಂ ಪರೇಷಾಂ ಕೃತ್ಯಾನಿ ಪ್ರಶಂಸಾಮಿ ನ ಗರ್ಹಯೇ ।
ಆಕಾಶಸ್ಯೇವ ವಿಪ್ರೇನ್ದ್ರ ಪಶ್ಯಲ್ಲೋಕಸ್ಯ ಚಿತ್ರತಾಮ್ ॥೧೧॥

ವಿಪ್ರೇಂದ್ರನೇ! ಆಕಾಶದಲ್ಲಿರುವ ವಿಚಿತ್ರತರವಾದ ಗ್ರಹ-ನಕ್ಷತ್ರಗಳಂತೆ ಲೋಕದಲ್ಲಿ ನಡೆಯುವ ವಿಚಿತ್ರತರವಾದ ಸಂಗತಿಗಳನ್ನು ನೋಡುತ್ತಾ ಇರುವ ನಾನು ಇತರರು ಮಾಡಿದ ಕಾರ್ಯಗಳನ್ನು ಪ್ರಶಂಸೆಮಾಡುವುದೂ ಇಲ್ಲ, ನಿಂದಿಸುವುದೂ ಇಲ್ಲ. (ಆಕಾಶದಂತೆ ನಿರ್ಲಿಪ್ತನಾಗಿರುತ್ತೇನೆ).

ಇತಿ ಮಾಂ ತ್ವಂ ವಿಜಾನೀಹಿ ಸರ್ವಲೋಕಸ್ಯ ಜಾಜಲೇ ।
ಸಮಂ ಮತಿಮತಾಂ ಶ್ರೇಷ್ಠ ಸಮಲೋಷ್ಟಾಶ್ಮಕಾಞ್ಚನಮ್ ॥೧೨॥

ಬುದ್ಧಿವಂತರಲ್ಲಿ ಶ್ರೇಷ್ಠನಾದ ಜಾಜಲಿಯೇ! ಹೀಗೆ ನೀನು ನನ್ನನ್ನು ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಸರ್ವಸಮಭಾವವಿರುವವನೆಂದೂ ಮತ್ತು ಮಣ್ಣುಹೆಂಟೆ-ಕಲ್ಲು ಮತ್ತು ಚಿನ್ನಗಳನ್ನು ಸಮಾನವನ್ನಾಗಿ ಭಾವಿಸಿರುವವನೆಂದೂ–ತಿಳಿಯುವವನಾಗು.

ಯಥಾನ್ಧಬಧಿರೋನ್ಮತ್ತಾ ಉಚ್ಛ್ವಾಸಪರಮಾಃ ಸದಾ ।
ದೇವೈರಪಿಹಿತದ್ವಾರಾಃ ಸೋಪಮಾ ಪಶ್ಯತೋ ಮಮ ॥೧೩॥

ದೇವತೆಗಳಿಂದ ಮುಚ್ಚಲ್ಪಟ್ಟ ನೇತ್ರಾದಿ ಇಂದ್ರಿಯದ್ವಾರಗಳುಳ್ಳ ಮನುಷ್ಯರು ಕುರುಡರೂ, ಕಿವುಡರೂ, ಹುಚ್ಚರೂ ಆಗಿ ಕೇವಲ ಉಸಿರಾಟವುಳ್ಳವರಾಗಿರುತ್ತಾರೆ. ಲೋಕದಲ್ಲಿ ಮನುಷ್ಯರನ್ನು ನೋಡುವ ನನಗೂ ಇದೇ ಉಪಮಾನವನ್ನು ಕೊಡಬಹುದು. (ನಾನು ನೋಡುತ್ತಿರುವವನಂತೆ ಕಂಡರೂ ಯಾರನ್ನೂ ನೋಡುತ್ತಿರುವುದಿಲ್ಲ. ಆದುದರಿಂದ ನನ್ನನ್ನು ಕುರುಡನೆನ್ನುತ್ತಾರೆ. ಒಬ್ಬರು ಹೇಳಿದ ಮಾತನ್ನು ಕೇಳುತ್ತಿರುವವನಂತೆ ಕಂಡುಬಂದರೂ ನಾನು ನಿಜವಾಗಿಯೂ ಯಾರೊಬ್ಬರ ಮಾತನ್ನೂ ಕೇಳುತ್ತಿರುವುದಿಲ್ಲ. ಆದುದರಿಂದ ನನ್ನನ್ನು ಕಿವುಡನೆಂದೂ ಹೇಳುತ್ತಾರೆ. ಯಾವಾಗಲೂ ನಾನು ಅಧ್ಯಾತ್ಮದಲ್ಲಿಯೇ ಆಸಕ್ತನಾಗಿರುವುದರಿಂದ ನನ್ನನ್ನು ಕೆಲವರು ಹುಚ್ಚನೆಂದೂ ಹೇಳುತ್ತಾರೆ.)

ಯಥಾ ವೃದ್ಧಾತುರಕೃಶಾ ನಿಃಸ್ಪೃಹಾ ವಿಷಯಾನ್ಪ್ರತಿ ।
ತಥಾರ್ಥಕಾಮಭೋಗೇಷು ಮಮಾಪಿ ವಿಗತಾ ಸ್ಪೃಹಾ ॥೧೪॥

ಯಾವ ರೀತಿಯಲ್ಲಿ ವೃದ್ಧರಿಗೆ, ರೋಗಿಗಳಿಗೆ ಮತ್ತು ದುರ್ಬಲರಿಗೆ ವಿಷಯಭೋಗಗಳಲ್ಲಿ ಆಸಕ್ತಿಯೇ ಇರುವುದಿಲ್ಲವೋ–ಹಾಗೆಯೇ ನನಗೂ ಅರ್ಥ-ಕಾಮಭೋಗಗಳಲ್ಲಿ ಆಸಕ್ತಿಯು ಹೊರಟುಹೋಗಿದೆ.

ಯದಾ ಚಾಯಂ ನ ಬಿಭೇತಿ ಯದಾ ಚಾಸ್ಮಾನ್ನ ಬಿಭ್ಯತಿ ।
ಯದಾ ನೇಚ್ಛತಿ ನ ದ್ವೇಷ್ಟಿ ಬ್ರಹ್ಮ ಸಮ್ಪದ್ಯತೇ ತದಾ ॥೧೫॥

ಯಾವಾಗ ಪುರುಷನು ಬೇರೆಯವರಿಂದ ಭಯಪಡುವುದಿಲ್ಲವೋ ಮತ್ತು ಯಾವಾಗ ಇವನಿಂದಲೂ ಬೇರೆಯವರು ಭಯಪಡುವುದಿಲ್ಲವೋ, ಯಾವಾಗ ಇವನು ಯಾವುದನ್ನೂ ಇಚ್ಛಿಸುವುದಿಲ್ಲವೋ ಮತ್ತು ಯಾರನ್ನೂ ದ್ವೇಷಿಸುವುದಿಲ್ಲವೋ–ಆಗ ಬ್ರಹ್ಮಭಾವವನ್ನು ಹೊಂದುತ್ತಾನೆ.

ಯದಾ ನ ಕುರುತೇ ಭಾವಂ ಸರ್ವಭೂತೇಷು ಪಾಪಕಮ್ ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಮ್ಪದ್ಯತೇ ತದಾ ॥೧೬॥

ಯಾವಾಗ ಮನುಷ್ಯನು ಕರ್ಮದಿಂದಾಗಲೀ, ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ–ಸಮಸ್ತಪ್ರಾಣಿಗಳಲ್ಲಿಯೂ ಪಾಪದ ಭಾವನೆಯನ್ನು ಇಟ್ಟುಕೊಳ್ಳುವುದಿಲ್ಲವೋ–ಆಗ ಆ ಮನುಷ್ಯನು ಬ್ರಹ್ಮಭಾವವನ್ನು ಹೊಂದುತ್ತಾನೆ.

ನ ಭೂತೋ ನ ಭವಿಷ್ಯೋಽಸ್ತಿ ನ ಚ ಧರ್ಮೋಽಸ್ತಿ ಕಶ್ಚನ ।
ಯೋಽಭಯಃ ಸರ್ವಭೂತಾನಾಂ ಸ ಪ್ರಾಪ್ನೋತ್ಯಭಯಂ ಪದಮ್ ॥೧೭॥

ಯಾವನಿಗೆ (ಜ್ಞಾನದಿಂದ ದಗ್ಧವಾಗಿರುವುದರಿಂದ) ಹಿಂದಿನ ಪಾಪಗಳೂ ಇಲ್ಲವೋ, ಹಾಗೆಯೇ ಒಳ್ಳೆಯವನಾಗಿರುವುದರಿಂದ ಮುಂದೆಯೂ ಪಾಪಗಳು ಸಂಭವಿಸುವುದಿಲ್ಲವೋ, ಮಾಡಬೇಕಾದ ಧರ್ಮವನ್ನು ಕರ್ತವ್ಯ ದೃಷ್ಟಿಯಿಂದ ಮಾಡಿಬಿಟ್ಟಿರುವುದರಿಂದ ಮಾಡಬೇಕಾದ ಧರ್ಮವೇ ಇರುವುದಿಲ್ಲವೋ, ಯಾವನು ಎಲ್ಲ ಪ್ರಾಣಿಗಳಿಗೂ ಅಭಯದಾನವನ್ನು ಮಾಡಿರು

ವನೋ–ಅಂತಹ ಮಹಾತ್ಮನು ನಿರ್ಭಯವಾದ ಬ್ರಹ್ಮಪದವನ್ನು ಹೊಂದುತ್ತಾನೆ.

ಯಸ್ಮಾದುದ್ವಿಜತೇ ಲೋಕಃ ಸರ್ವೋ ಮೃತ್ಯುಮುಖಾದಿವ ।
ವಾಕ್ಕ್ರೂರಾದ್ದಣ್ಡಪರುಷಾತ್ಸ ಪ್ರಾಪ್ನೋತಿ ಮಹದ್ಭಯಮ್ ॥೧೮॥

ಮೃತ್ಯುವಿನ ಮುಖವನ್ನು ಕಂಡಂತೆ ಎಲ್ಲ ಲೋಕವೂ (ಎಲ್ಲ ಜನರೂ) ಯಾವನನ್ನು ಕಂಡು ಉದ್ವಿಗ್ನವಾಗುವುದೋ, ಯಾವನು ಕಠೋರವಾದ ಮಾತುಗಳನ್ನಾಡುವನೋ ಮತ್ತು ಕಠಿಣವಾದ ಶಿಕ್ಷೆಗಳನ್ನು ವಿಧಿಸುವನೋ–ಅಂತಹವನು ಮಹಾಭಯವನ್ನು ಹೊಂದುತ್ತಾನೆ.

ಯಥಾವದ್ವರ್ತಮಾನಾನಾಂ ವೃದ್ಧಾನಾಂ ಪುತ್ರಪೌತ್ರಿಣಾಮ್ ।
ಅನುವರ್ತಾಮಹೇ ವೃತ್ತಮಹಿಂಸ್ರಾಣಾಂ ಮಹಾತ್ಮನಾಮ್ ॥೧೯॥

ಪುತ್ರ-ಪೌತ್ರರಿಂದ ಸಂಪನ್ನರಾದ, ಶಾಸ್ತ್ರೋಕ್ತವಾದ ರೀತಿಯಲ್ಲಿ ಆಚಾರ-ವ್ಯವಹಾರಗಳನ್ನಿಟ್ಟುಕೊಂಡಿರುವ, ಯಾರಿಗೂ ಹಿಂಸೆಮಾಡುವ ಸ್ವಭಾವವಿಲ್ಲದಿರುವ, ಮಹಾತ್ಮರಾದ ವೃದ್ಧರ ಸದ್ವೃತ್ತಿಗಳನ್ನೇ ಅನುಸರಿಸಿ ನಾವು ನಡೆಯುತ್ತಿದ್ದೇವೆ.

ಪ್ರಣಷ್ಟಃ ಶಾಶ್ವತೋ ಧರ್ಮಸ್ತ್ವನಾಚಾರೇಣ ಮೋಹಿತಃ ।
ತೇನ ವೈದ್ಯಸ್ತಪಸ್ವೀ ವಾ ಬಲವಾನ್ವಾ ವಿಮುಹ್ಯತೇ ॥೨೦॥

ಅನಾಚಾರದ ಕಾರಣದಿಂದ ವಿಮೋಹಿತವಾಗಿ ಶಾಶ್ವತವಾದ ಸನಾತನ ಧರ್ಮವೂ ನಷ್ಟವಾಗಿ ಹೋಗುತ್ತಿದೆ. ಈ ಕಾರಣದಿಂದಲೇ ವಿದ್ವಾಂಸರೂ, ತಪಸ್ವಿಗಳೂ, ಕಾಮ-ಕ್ರೋಧಗಳನ್ನು ಜಯಿಸಿ ಮನೋಬಲವನ್ನು ಹೊಂದಿರುವವರು ಕೂಡ ಮೋಹವಶರಾಗುತ್ತಾರೆ.

ಆಚಾರಾಜ್ಜಾಜಲೇ ಪ್ರಾಜ್ಞಃ ಕ್ಷಿಪ್ರಂ ಧರ್ಮಮವಾಪ್ನುಯಾತ್ ।
ಏವಂ ಯಃ ಸಾಧುಭಿರ್ದಾನ್ತಶ್ಚರೇದದ್ರೋಹಚೇತಸಾ ॥೨೧॥

ಜಾಜಲಿಯೇ! ಜಿತೇಂದ್ರಿಯನಾದ ಯಾವ ಪುರುಷನು ತನ್ನ ಮನಸ್ಸಿನಲ್ಲಿ ಇತರರಿಗೆ ದ್ರೋಹವನ್ನೆಣಿಸದೇ ಸಾಧುಪುರುಷರಿಂದ ಆಚರಿಸಲ್ಪಡುತ್ತಿರುವ ಸದಾಚಾರಗಳನ್ನೇ ಅನುಸರಿಸುತ್ತಾನೆಯೋ–ಅಂತಹ ಪ್ರಾಜ್ಞನು

ವೇದಬೋಧಿತವಾದ ಸದಾಚಾರಗಳನ್ನು ಪರಿಪಾಲಿಸುವುದರಿಂದ ಬಹಳ ಶೀಘ್ರವಾಗಿಯೇ ಧರ್ಮದ ರಹಸ್ಯವನ್ನು ತಿಳಿದುಕೊಳ್ಳುತ್ತಾನೆ.

ನದ್ಯಾಂ ಚೇಹ ಯಥಾ ಕಾಷ್ಠಮುಹ್ಯಮಾನಂ ಯದೃಚ್ಛಯಾ ।
ಯದೃಚ್ಛಯೈವ ಕಾಷ್ಠೇನ ಸಂಧಿಂ ಗಚ್ಛೇತ ಕೇನಚಿತ್ ॥೨೨॥

ತತ್ರಾಪರಾಣಿ ದಾರೂಣಿ ಸಂಸೃಜ್ಯನ್ತೇ ಪರಸ್ಪರಮ್ ।
ತೃಣಕಾಷ್ಠಕರೀಷಾಣಿ ಕದಾಚಿನ್ನ ಸಮೀಕ್ಷಯಾ ॥೨೩॥

ನದಿಯ ಪ್ರವಾಹದಲ್ಲಿ ತಾನೇ ತಾನಾಗಿ ತೇಲಿಬರುತ್ತಿರುವ ಕಟ್ಟಿಗೆಯೊಂದು ತಾನೇ ತಾನಾಗಿ ತೇಲಿಬರುತ್ತಿರುವ ಮತ್ತೊಂದು ಕಟ್ಟಿಗೆಯೊಡನೆ ಸೇರಿಕೊಳ್ಳುತ್ತದೆ. ಆ ಎರಡು ಕಟ್ಟಿಗೆಗಳೂ ತೇಲಿಹೋಗುತ್ತಿರುವಾಗ ಇನ್ನೂ ಹಲವಾರು ಕಟ್ಟಿಗೆಗಳೂ ನೀರಿನ ಪ್ರವಾಹದಲ್ಲಿ ಕೊಚ್ಚಿಕೊಂಡು ಬಂದು ಮೊದಲು ಸೇರಿಕೊಂಡಿದ್ದ ಎರಡು ಕಟ್ಟಿಗೆಗಳ ಜೊತೆಗೇ ಸೇರಿಕೊಳ್ಳುತ್ತವೆ. ಅವುಗಳ ಜೊತೆಗೆ ಹುಲ್ಲು, ಕಟ್ಟಿಗೆ, ಬೆರಣಿಯ ಚೂರುಗಳೂ ಸೇರಿಕೊಳ್ಳುತ್ತವೆ. ಅವೆಲ್ಲವೂ ಆಕಸ್ಮಿಕವಾಗಿ ಒಂದೆಡೆಯಲ್ಲಿ ಸೇರಿಕೊಳ್ಳುವುವೇ ಹೊರತು ಒಂದೆಡೆಯಲ್ಲಿ ಸೇರಿಕೊಳ್ಳಲು ಯಾವ ಪೂರ್ವಯೋಜಿತವಾದ ಕ್ರಮವೂ ಇರುವುದಿಲ್ಲ. ಅದೇ ರೀತಿಯಲ್ಲಿ ಸಂಸಾರದಲ್ಲಿಯೂ ಪರಸ್ಪರ ಸಂಯೋಗ-ವಿಯೋಗಗಳು ಆಗುತ್ತಲೇ ಇರುತ್ತವೆ.

ಯಸ್ಮಾನ್ನೋದ್ವಿಜತೇ ಭೂತಂ ಜಾತು ಕಿಂಚಿತ್ಕಥಂಚನ ।
ಅಭಯಂ ಸರ್ವಭೂತೇಭ್ಯಃ ಸ ಪ್ರಾಪ್ನೋತಿ ಸದಾ ಮುನೇ ॥೨೪॥

ಯಾವನಿಂದ ಯಾವುದೇ ಪ್ರಾಣಿಯೂ ಯಾವಾಗಲೂ ಯಾವುದೇ ರೀತಿಯಲ್ಲಿಯೂ ಉದ್ವೇಗಗೊಳ್ಳುವುದಿಲ್ಲವೋ–ಅಂತಹವನು ಎಲ್ಲ ಪ್ರಾಣಿಗಳಿಂದಲೂ, ಎಲ್ಲ ಕಾಲಗಳಲ್ಲಿಯೂ ಅಭಯವನ್ನು ಹೊಂದುತ್ತಾನೆ.

ಯಸ್ಮಾದುದ್ವಿಜತೇ ವಿದ್ವನ್ಸರ್ವಲೋಕೋ ವೃಕಾದಿವ ।
ಕ್ರೋಶತಸ್ತೀರಮಾಸಾದ್ಯ ಯಥಾ ಸರ್ವೇ ಜಲೇಚರಾಃ ॥೨೫॥

ವಿದ್ವಾಂಸನೇ! ನದಿಯ ತೀರಕ್ಕೆ ಬಂದು ಗಟ್ಟಿಯಾಗಿ ಕೂಗಿಕೊಳ್ಳುವ ತೋಳಕ್ಕೆ ನದಿಯಲ್ಲಿರುವ ಜಲಚರಪ್ರಾಣಿಗಳು ಹೇಗೆ ಭಯಪಡುವುವೋ–ಹಾಗೆಯೇ ಕಠೋರಸ್ವಭಾವವಿರುವವನ ದೆಸೆಯಿಂದಲೂ

ಸರ್ವಲೋಕವೂ ಉದ್ವೇಗಗೊಳ್ಳುತ್ತದೆ. (ಅಂತಹ ಕ್ರೂರಿಗೆ ಎಲ್ಲ ಪ್ರಾಣಿಗಳೂ ಭಯಪಡುತ್ತವೆ.)

ಏವಮೇವಾಯಮಾಚಾರಃ ಪ್ರಾದುರ್ಭೂತೋ ಯತಸ್ತತಃ ।
ಸಹಾಯವಾನ್ದ್ರವ್ಯವಾನ್ಯಃ ಸುಭಗೋಽಥ ಪರಸ್ತಥಾ ॥೨೬॥

ಹೀಗೆ ಈ ಅಭಯದಾನರೂಪವಾದ ಆಚಾರವು, ಅಭಯನೀಡುವ ಸ್ವಭಾವವು ಎಲ್ಲಿರುವುದೋ–ಅಲ್ಲಿಂದಲೇ (ಬ್ರಹ್ಮದಿಂದಲೇ) ಪ್ರಾದುರ್ಭೂತವಾಗಿದೆ. ಯಾವನು ಈ ಅಭಯಾಚಾರವನ್ನು ಪರಿಪಾಲಿಸುವನೋ–ಅವನು ಸಹಾಯಕರಿಂದ ಕೂಡಿದವನಾಗುತ್ತಾನೆ. ದ್ರವ್ಯವಂತನಾಗುತ್ತಾನೆ. ಸೌಭಾಗ್ಯಶಾಲಿಯಾಗುತ್ತಾನೆ. ಶ್ರೇಷ್ಠನೆನಿಸಿಕೊಳ್ಳುತ್ತಾನೆ.

ತತಸ್ತಾನೇವ ಕವಯಃ ಶಾಸ್ತ್ರೇಷು ಪ್ರವದನ್ತ್ಯುತ ।
ಕೀರ್ತ್ಯರ್ಥಮಲ್ಪಹೃಲ್ಲೇಖಾಃ ಪಟವಃ ಕೃತ್ಸ್ನನಿರ್ಣಯಾಃ ॥೨೭॥

ಯಾರು ಅಭಯದಾನಮಾಡಲು ಸಮರ್ಥರೋ–ಅವರನ್ನೇ ವಿದ್ವಾಂಸರು ಶಾಸ್ತ್ರಗಳಲ್ಲಿ (ಶಾಸ್ತ್ರಜ್ಞರಲ್ಲಿ) ಶ್ರೇಷ್ಠರಾದವರೆಂದು ಹೇಳುತ್ತಾರೆ. ಆದರೆ ಅವರಲ್ಲಿ ಕೆಲವರು ತಮ್ಮ ಹೃದಯಗಳಲ್ಲಿ ಕ್ಷಣಭಂಗುರವಾದ ವಿಷಯೇಚ್ಛುಗಳಾಗಿ–ಕೀರ್ತಿಕಾಮರಾಗಿ ಅಭಯದಾನವ್ರತವನ್ನು ಪರಿಪಾಲಿಸುತ್ತಾರೆ. ಜ್ಞಾನಪಟುಗಳಾದವರು ಪೂರ್ಣರೂಪವಾದ ಪರಬ್ರಹ್ಮದ ಪ್ರಾಪ್ತಿಗಾಗಿಯೇ ಅಭಯದಾನವ್ರತವನ್ನು ಪರಿಪಾಲಿಸುತ್ತಾರೆ.

ತಪೋಭಿರ್ಯಜ್ಞದಾನೈಶ್ಚ ವಾಕ್ಯೈಃ ಪ್ರಜ್ಞಾಶ್ರಿತೈಸ್ತಥಾ ।
ಪ್ರಾಪ್ನೋತ್ಯಭಯದಾನಸ್ಯ ಯದ್ಯತ್ಫಲಮಿಹಾಶ್ನುತೇ ॥೨೮॥

ತಪಸ್ಸು, ಯಜ್ಞ, ದಾನ ಮತ್ತು ಜ್ಞಾನಸಂಬಂಧವಾದ ಉಪದೇಶಗಳ ಮೂಲಕವಾಗಿ ಮನುಷ್ಯನು ಇಲ್ಲಿ ಯಾವ ಯಾವ ಫಲಗಳನ್ನು ಹೊಂದುವನೋ–ಆ ಎಲ್ಲ ಫಲಗಳನ್ನೂ ಅಭಯದಾನದಿಂದಲೇ ಪಡೆದುಕೊಳ್ಳುತ್ತಾನೆ.

ಲೋಕೇ ಯಃ ಸರ್ವಭೂತೇಭ್ಯೋ ದದಾತ್ಯಭಯದಕ್ಷಿಣಾಮ್ ।
ಸ ಸರ್ವಯಜ್ಞೈರೀಜಾನಃ ಪ್ರಾಪ್ನೋತ್ಯಭಯದಕ್ಷಿಣಾಮ್ ॥೨೯॥

ಲೋಕದಲ್ಲಿ ಯಾವನು ಎಲ್ಲರಿಗೂ ಅಭಯವೆಂಬ ದಕ್ಷಿಣೆಯನ್ನು

ಕೊಡುವನೋ–ಅವನು ಸಮಸ್ತವಾದ ಯಜ್ಞಗಳನ್ನೂ ಮಾಡಿದವನಾಗುತ್ತಾನೆ. ಎಲ್ಲರಿಂದಲೂ ಅಭಯರೂಪವಾದ ದಕ್ಷಿಣೆಯನ್ನೂ ಪಡೆದುಕೊಳ್ಳುತ್ತಾನೆ.

ನ ಭೂತಾನಾಮಹಿಂಸಾಯಾ ಜ್ಯಾಯಾನ್ಧರ್ಮೋಽಸ್ತಿ ಕಶ್ಚನ ।
ಯಸ್ಮಾನ್ನೋದ್ವಿಜತೇ ಭೂತಂ ಜಾತು ಕಿಂಚಿತ್ಕಥಂಚನ ।
ಸೋಽಭಯಂ ಸರ್ವಭೂತೇಭ್ಯಃ ಸಮ್ಪ್ರಾಪ್ನೋತಿ ಮಹಾಮುನೇ ॥೩೦॥

ಪ್ರಾಣಿಗಳನ್ನು ಹಿಂಸೆಮಾಡದೇ ಇರುವಿಕೆಗಿಂತಲೂ ಶ್ರೇಷ್ಠವಾದ ಧರ್ಮವೇ ಬೇರೊಂದಿರುವುದಿಲ್ಲ. ಮಹಾಮುನಿಯೇ! ಯಾವನಿಂದ ಯಾವುದೇ ಪ್ರಾಣಿಯೂ, ಯಾವುದೇ ಸಮಯದಲ್ಲಿಯೂ, ಯಾವುದೇ ರೀತಿಯಲ್ಲಿಯೂ ಉದ್ವೇಗಗೊಳ್ಳುವುದಿಲ್ಲವೋ–ಅಂತಹವನು ಸರ್ವಪ್ರಾಣಿಗಳಿಂದಲೂ ಅಭಯವನ್ನು ಹೊಂದುತ್ತಾನೆ.

ಯಸ್ಮಾದುದ್ವಿಜತೇ ಲೋಕಃ ಸರ್ಪಾದ್ವೇಶ್ಮಗತಾದಿವ ।
ನ ಸ ಧರ್ಮಮವಾಪ್ನೋತಿ ಇಹಲೋಕೇ ಪರತ್ರ ಚ ॥೩೧॥

ಮನೆಯಲ್ಲಿ ಹೊಕ್ಕಿರುವ ಸರ್ಪದ ದೆಸೆಯಿಂದ ಹೆದರಿಕೊಳ್ಳುವಂತೆ–ಯಾವನ ದೆಸೆಯಿಂದ ಜನವು ಭಯಗೊಳ್ಳುವುದೋ, ಅವನು ಈ ಲೋಕದಲ್ಲಾಗಲೀ ಪರಲೋಕದಲ್ಲಾಗಲೀ ಯಾವ ವಿಧವಾದ ಧರ್ಮಫಲವನ್ನೂ ಹೊಂದುವುದಿಲ್ಲ.

ಸರ್ವಭೂತಾತ್ಮಭೂತಸ್ಯ ಸರ್ವಭೂತಾನಿ ಪಶ್ಯತಃ ।
ದೇವಾಪಿ ಮಾರ್ಗೇ ಮುಹ್ಯನ್ತಿ ಅಪದಸ್ಯ ಪದೈಷಿಣಃ ॥೩೨॥

ಎಲ್ಲ ಪ್ರಾಣಿಗಳಿಗೂ ಆತ್ಮಭೂತನಾಗಿರುವ, ಸಕಲಪ್ರಾಣಿಗಳನ್ನೂ ನೋಡುತ್ತಿರುವ, ನಿರ್ದಿಷ್ಟವಾದ ಯಾವ ನೆಲೆಯೂ ಇಲ್ಲದಿರುವ (ಸರ್ವಾಂತರ್ಯಾಮಿಯಾದ) ಪರಮಾತ್ಮನ ಪರಮಪದವನ್ನು ಹೊಂದಲು ಬಯಸುವವನ ಆತ್ಮದರ್ಶನಮಾರ್ಗದಲ್ಲಿ ದೇವತೆಗಳು ಕೂಡ ವಿಮೋಹಗೊಳ್ಳುತ್ತಾರೆ.

ದಾನಂ ಭೂತಾಭಯಸ್ಯಾಹುಃ ಸರ್ವದಾನೇಭ್ಯ ಉತ್ತಮಮ್ ।
ಬ್ರವೀಮಿ ತೇ ಸತ್ಯಮಿದಂ ಶ್ರದ್ದಧಸ್ವ ಚ ಜಾಜಲೇ ॥೩೩॥

ಪ್ರಾಣಿಗಳಿಗೆ ಅಭಯದಾನಮಾಡುವುದು ಎಲ್ಲ ದಾನಗಳಿಗಿಂತಲೂ ಶ್ರೇಷ್ಠವಾದುದೆಂದು ಹೇಳುತ್ತಾರೆ. ಜಾಜಲಿಯೇ! ನಾನು ನಿನಗೆ ಈ ಮಾತು ಸತ್ಯವೆಂದು ಹೇಳುತ್ತಿದ್ದೇನೆ. ನೀನು ನನ್ನ ಮಾತಿನಲ್ಲಿ ವಿಶ್ವಾಸವನ್ನಿಡು.

ಸ ಏವ ಸುಭಗೋ ಭೂತ್ವಾ ಪುನರ್ಭವತಿ ದುರ್ಭಗಃ ।
ವ್ಯಾಪತ್ತಿಂ ಕರ್ಮಣಾಂ ದೃಷ್ಟ್ವಾ ಜುಗುಪ್ಸನ್ತಿ ಜನಾಃ ಸದಾ ॥೩೪॥

ಯಾರು ಸ್ವರ್ಗಾದಿ ಕಾಮನೆಗಳಿಂದ ಧರ್ಮಕಾರ್ಯಗಳನ್ನು ಮಾಡುವರೋ–ಅವರು ಸ್ವರ್ಗಾದಿಫಲಗಳನ್ನು ಪಡೆದು ಸೌಭಾಗ್ಯವಂತರಾಗುತ್ತಾರೆ. ಆದರೆ ಅವರೇ ಪುಣ್ಯವು ಕ್ಷೀಣಿಸಿದ ನಂತರ ಸ್ವರ್ಗದಿಂದ ಚ್ಯುತರಾಗಿ ದುರ್ಭಾಗ್ಯರಾಗುತ್ತಾರೆ. ಕಾಮ್ಯಕರ್ಮಫಲಗಳು ಕಾಲಾನುಕ್ರಮವಾಗಿ ನಷ್ಟವಾಗಿ ಹೋಗುವುವೆಂಬುದನ್ನು ನೋಡಿ ಪ್ರಾಜ್ಞರಾದ ಜನರು ಕಾಮ್ಯಕರ್ಮಗಳ ವಿಷಯದಲ್ಲಿ ಜುಗುಪ್ಸೆಯನ್ನೇ ಹೊಂದುತ್ತಾರೆ.

ಅಕಾರಣೋ ಹಿ ನೈವಾಸ್ತಿ ಧರ್ಮಃ ಸೂಕ್ಷ್ಮೋ ಹಿ ಜಾಜಲೇ ।
ಭೂತಭವ್ಯಾರ್ಥಮೇವೇಹ ಧರ್ಮಪ್ರವಚನಂ ಕೃತಮ್ ॥೩೫॥

ಜಾಜಲಿಯೇ! ಧರ್ಮದ ಸ್ವರೂಪವು ಸೂಕ್ಷ್ಮವಾದುದು. ಧರ್ಮವು ನಿಷ್ಪ್ರಯೋಜನವಲ್ಲ. ಪ್ರಾಣಿಗಳ ಮಂಗಳಕ್ಕಾಗಿಯೇ ಧರ್ಮದ ಪ್ರವಚನವು (ಶಾಸ್ತ್ರಗಳಲ್ಲಿ) ವೇದಗಳಲ್ಲಿ ಹೇಳಲ್ಪಟ್ಟಿದೆ. (ಭೂತ ಎಂಬುದಕ್ಕೆ ಬ್ರಹ್ಮವೆಂದೂ–ಭವ್ಯ ಎಂಬುದಕ್ಕೆ ಸ್ವರ್ಗವೇ ಮೊದಲಾದುವೆಂದೂ ವ್ಯಾಖ್ಯಾನಕಾರರು ಅರ್ಥಮಾಡಿರುತ್ತಾರೆ. ಭೂತಂ = ಬ್ರಹ್ಮ, ಭವ್ಯಂ = ಸ್ವರ್ಗಾದಿ, ಉಭಯಾರ್ಥವೇಹ ಧರ್ಮಾಣಾಂ ಶಮದಮಾದೀನಾಂ ಯಜ್ಞಾದೀನಾಂ ಚ ಪ್ರವಚನಂ = ಅಧ್ಯಯನಂ ವೇದಕೃತಮ್.)

ಸೂಕ್ಷ್ಮತ್ವಾನ್ನ ಸ ವಿಜ್ಞಾತುಂ ಶಕ್ಯತೇ ಬಹುನಿಹ್ನವಃ ।
ಉಪಲಭ್ಯಾನ್ತರಾ ಚಾನ್ಯಾನಾಚಾರಾನವಬುಧ್ಯತೇ ॥೩೬॥

ಧರ್ಮವು ಬಹಳ ಸೂಕ್ಷ್ಮವಾಗಿರುವುದರಿಂದ ಎಲ್ಲರಿಂದಲೂ ಅದನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಅದರ ನಿಜಸ್ವರೂಪವನ್ನು ಮುಚ್ಚಿಡುವ

ಅನೇಕ ಮಾರ್ಗಗಳೇ ಇವೆ. ಸತ್ಪುರುಷರ ಸಾನ್ನಿಧ್ಯದಲ್ಲಿದ್ದು ಅವರ ಆಚಾರ-ವ್ಯವಹಾರಗಳನ್ನು ಅನುಸರಿಸುವ ಮನುಷ್ಯನು ಧರ್ಮದ ರಹಸ್ಯವನ್ನು ತಿಳಿದುಕೊಳ್ಳುತ್ತಾನೆ.

ಯೇ ಚ ಛಿನ್ದನ್ತಿ ವೃಷಣಾನ್ಯೇ ಚ ಭಿನ್ದನ್ತಿ ನಸ್ತಕಾನ್ ।
ವಹನ್ತಿ ಮಹತೋ ಭಾರಾನ್ಬಧ್ನನ್ತಿ ದಮಯನ್ತಿ ಚ ॥೩೭॥

ಹತ್ವಾ ಸತ್ತ್ವಾನಿ ಖಾದನ್ತಿ ತಾನ್ಕಥಂ ನ ವಿಗರ್ಹಸೇ ।
ಮಾನುಷಾ ಮಾನುಷಾನೇವ ದಾಸಭಾವೇನ ಭುಞ್ಜತೇ ॥೩೮॥

ಕೆಲವು ಜನರು ಹೋರಿಗಳ ಬೀಜಗಳನ್ನು ಒಡೆಯುತ್ತಾರೆ. ಮೂಗಿನ ಹೊಳ್ಳೆಗಳನ್ನು ಒಡೆದು ಮೂಗುದಾರವನ್ನು ಹಾಕುತ್ತಾರೆ. ಅವುಗಳನ್ನು ನೇಗಿಲುಗಳಿಗೂ ಗಾಡಿಗಳಿಗೂ ಕಟ್ಟುತ್ತಾರೆ. ಅವುಗಳ ಮೇಲೆ ಮಹಾಭಾರವನ್ನು ಹೊರಿಸುತ್ತಾರೆ. ಅವು ಮುಂದಕ್ಕೆ ಹೆಜ್ಜೆಗಳನ್ನಿಡದಿದ್ದರೆ ನಿಗ್ರಹಿಸುತ್ತಾರೆ. ಕೆಲವರು ಪ್ರಾಣಿಗಳನ್ನೇ ಕೊಂದು ತಿನ್ನುತ್ತಾರೆ. ಕೆಲವು ಮನುಷ್ಯರು ಇತರ ಮನುಷ್ಯರನ್ನೇ ಗುಲಾಮರನ್ನಾಗಿಟ್ಟುಕೊಂಡು ಅವರ ಶ್ರಮದ ಫಲವನ್ನು ತಾವು ಉಪಭೋಗಿಸುತ್ತಾರೆ. ಅಂತಹವರನ್ನು ನೀನೇಕೆ ನಿಂದಿಸುವುದಿಲ್ಲ?

ವಧಬನ್ಧನಿರೋಧೇನ ಕಾರಯನ್ತಿ ದಿವಾನಿಶಮ್ ।
ಆತ್ಮನಶ್ಚಾಪಿ ಜಾನಾತಿ ಯದ್ದುಃಖಂ ವಧಬನ್ಧನೇ ॥೩೯॥

ಜನರು ಹಿಂಸೆ ಮತ್ತು ಬಂಧನಗಳಿಂದ ತಮಗಾದರೂ ಎಂತಹ ದುಃಖವಾಗುತ್ತದೆಯೆಂಬುದನ್ನು ತಿಳಿದಿರುತ್ತಾರೆ. ಆದರೂ ಕೂಡ ಇತರರನ್ನು ಹಿಂಸೆಗೊಳಪಡಿಸಿ, ಬಂಧನದಲ್ಲಿಟ್ಟು ಹಗಲು-ರಾತ್ರಿಗಳೆಂಬ ವ್ಯತ್ಯಾಸವೇ ಇಲ್ಲದೆ ದುಡಿಮೆಮಾಡಿಸಿಕೊಳ್ಳುತ್ತಾರೆ. ಅಂತಹವರನ್ನು ನೀನೇಕೆ ನಿಂದಿಸುವುದಿಲ್ಲ?

ಪಞ್ಚೇನ್ದ್ರಿಯೇಷು ಭೂತೇಷು ಸರ್ವಂ ವಸತಿ ದೈವತಮ್ ।
ಆದಿತ್ಯಶ್ಚನ್ದ್ರಮಾ ವಾಯುರ್ಬ್ರಹ್ಮಾ ಪ್ರಾಣಃ ಕ್ರತುರ್ಯಮಃ ।
ತಾನಿ ಜೀವಾನಿ ವಿಕ್ರೀಯ ಕಾ ಮೃತೇಷು ವಿಚಾರಣಾ ॥೪೦॥

ಪಂಚೇಂದ್ರಿಯಗಳಿಂದ ಕೂಡಿರುವ ಎಲ್ಲಾ ಪ್ರಾಣಿಗಳಲ್ಲಿಯೂ ಸೂರ್ಯ, ಚಂದ್ರ, ವಾಯು, ಬ್ರಹ್ಮಾ, ಪ್ರಾಣ, ಯಜ್ಞ ಮತ್ತು ಯಮರಾಜ–ಈ ಎಲ್ಲ ದೇವತೆಗಳೂ ನಿವಾಸಮಾಡುತ್ತಾರೆ. ದೇವತೆಗಳ ನಿವಾಸಭೂತವಾದ ಶರೀರವನ್ನು ಹೊಂದಿರುವ ಪ್ರಾಣಿಗಳನ್ನು ಯಾವನು ಮಾರಿ ಜೀವಿಸುವನೋ ಅವನಿಗೆ ಪಾಪವೇ ಸಂಘಟಿಸುತ್ತದೆ. ಹೀಗಿರುವಾಗ ಸತ್ತಪ್ರಾಣಿಗಳನ್ನು ಮಾರುವುದರ ವಿಷಯದಲ್ಲಿ ಹೇಳುವುದೇನಿದೆ?

ಅಜೋಽಗ್ನಿರ್ವರುಣೋ ಮೇಷಃ ಸೂರ್ಯೋಽಶ್ವಃ ಪೃಥಿವೀ ವಿರಾಟ್ ।
ಧೇನುರ್ವತ್ಸಶ್ಚ ಸೋಮೋ ವೈ ವಿಕ್ರೀಯೈತನ್ನ ಸಿಧ್ಯತಿ ॥೪೧॥

ಟಗರು ಅಗ್ನಿಯ ಸ್ವರೂಪವಾಗಿದೆ. ಆಡು ವರುಣನ ಸ್ವರೂಪವಾಗಿದೆ. ಕುದುರೆಯು ಸೂರ್ಯಸ್ವರೂಪವಾಗಿದೆ. ಪೃಥ್ವಿಯು ವಿರಾಡ್ರೂಪವಾಗಿದೆ. ಹಸು ಮತ್ತು ಕರುಗಳು ಚಂದ್ರಸ್ವರೂಪಗಳಾಗಿವೆ. ಇಂತಹ ದೇವತಾರೂಪಗಳಿಂದ ಕೂಡಿರುವ ಪ್ರಾಣಿಗಳನ್ನು ಮಾರಿದರೆ ಯಾವುದೂ ಸಿದ್ಧಿಸುವುದಿಲ್ಲ (ಶುಭವಾಗುವುದಿಲ್ಲ).

ಕಾ ತೈಲೇ ಕಾ ಘೃತೇ ಬ್ರಹ್ಮನ್ಮಧುನ್ಯಪ್ಯೌಷಧೇಷು ವಾ ।
ಅದಂಶಮಶಕೇ ದೇಶೇ ಸುಖಸಂವರ್ಧಿತಾನ್ಪಶೂನ್ ॥೪೨॥

ತಾಂಶ್ಚ ಮಾತುಃ ಪ್ರಿಯಾಞ್ಜ್ಞಾನನ್ನಾಕ್ರಮ್ಯ ಬಹುಧಾ ನರಾಃ ॥೪೩॥
ಬಹುದಂಶಾಕುಲಾನ್ದೇಶಾನ್ನಯನ್ತಿ ಬಹುಕರ್ದಮಾನ್ ।
ವಾಹಸಮ್ಪೀಡಿತಾ ಧುರ್ಯಾಃ ಸೀದನ್ತ್ಯವಿಧಿನಾ ಪರೇ ॥೪೪॥

ಬ್ರಾಹ್ಮಣೋತ್ತಮ! ಎಣ್ಣೆ, ತುಪ್ಪ, ಜೇನುತುಪ್ಪ ಮತ್ತು ಓಷಧಿಗಳು–ಇವುಗಳನ್ನು ವಿಕ್ರಯಿಸುವುದರಿಂದ ಯಾವ ಹಾನಿಯಿದೆ? (ಇವುಗಳನ್ನು ವಿಕ್ರಯಿಸುವುದರಿಂದ ಧರ್ಮಕ್ಕೆ ಹಾನಿಯಾಗುವುದಿಲ್ಲ.) ಸೊಳ್ಳೆಗಳೂ ಕಾಡುನೊಣಗಳೂ ಇಲ್ಲದಿರುವ ದೇಶಗಳಲ್ಲಿ ಸುಖದಿಂದ ಬೆಳೆದ ಹಸುವಿನ ಕರುಗಳನ್ನು–ಅವುಗಳನ್ನು ತಾಯಿಗೆ ಪ್ರಿಯವಾದುವುಗಳೆಂದು ತಿಳಿದಿದ್ದರೂ, ಅವು ತಾಯಿಯನ್ನು ಅಗಲಿ ಬರಲು ಇಷ್ಟಪಡದೇ ಹಿಂದು-ಹಿಂದಕ್ಕೆ ಹೋಗುತ್ತಿದ್ದರೂ – ಕ್ರೂರಿಗಳಾದ ಜನರು ಆ ಕರುಗಳನ್ನು ಆಕ್ರಮಿಸಿಕೊಂಡು

ದರ-ದರನೆ ಎಳೆಯುತ್ತಾ ಕಾಡುನೊಣಗಳಿಂದಲೂ, ಸೊಳ್ಳೆಗಳಿಂದಲೂ ಮತ್ತು ಕೆಸರಿನಿಂದಲೂ ಕೂಡಿರುವ ದೇಶಕ್ಕೆ ಒಯ್ಯುತ್ತಾರೆ. ಇಷ್ಟುಮಾತ್ರ ವಲ್ಲದೇ ಅವುಗಳನ್ನು ನೀತಿ-ನಿಯಮಗಳಿಲ್ಲದೆ ಗಾಡಿಗಳಿಗೆ ಅಥವಾ ನೇಗಿಲುಗಳಿಗೆ ಕಟ್ಟಿ ಬಹಳವಾಗಿ ಪೀಡಿಸುತ್ತಾರೆ. ಹೀಗೆ ಅತಿಯಾದ ಭಾರವನ್ನು ಹೊರೆಸುವುದರಿಂದ ಪೀಡಿಸಲ್ಪಟ್ಟ ಹೋರಿಗಳು ಬಹಳ ಬೇಗ ವಿನಾಶಹೊಂದುತ್ತವೆ.

ನ ಮನ್ಯೇ ಭ್ರೂಣಹತ್ಯಾಪಿ ವಿಶಿಷ್ಟಾ ತೇನ ಕರ್ಮಣಾ ।
ಕೃಷಿಂ ಸಾಧ್ವಿತಿ ಮನ್ಯನ್ತೇ ಸಾ ಚ ವೃತ್ತಿಃ ಸುದಾರುಣಾ ॥೪೫॥

ಭ್ರೂಣಹತ್ಯೆಯೂ ಹೋರಿಗಳನ್ನು ಪೀಡಿಸುವ ಪಾಪಕರ್ಮಕ್ಕಿಂತಲೂ ಅಧಿಕವಾದ ಪಾಪಕರ್ಮವೆಂದು ನಾನು ಭಾವಿಸುವುದಿಲ್ಲ. ಕೆಲವರು ಕೃಷಿಯು ಒಳ್ಳೆಯದೆಂದು ಭಾವಿಸುತ್ತಾರೆ. ಆದರೆ ಕೃಷಿವೃತ್ತಿಯೂ ಅತ್ಯಂತಕ್ರೂರವಾದುದೇ ಆಗಿದೆ.

ಭೂಮಿಂ ಭೂಮಿಶಯಾಂಶ್ಚೈವ ಹನ್ತಿ ಕಾಷ್ಠಮಯೋಮುಖಮ್ ।
ತಥೈವಾನಡುಹೋ ಯುಕ್ತಾನ್ಸಮವೇಕ್ಷಸ್ವ ಜಾಜಲೇ ॥೪೬॥

ಜಾಜಲಿಯೇ! ಕಬ್ಬಿಣದ ಗುಳವೇ ಅಗ್ರಭಾಗದಲ್ಲಿರುವ ನೇಗಿಲು ಭೂಮಿಯನ್ನು ಪೀಡಿಸುವುದಲ್ಲದೇ ಭೂಮಿಯೊಳಗಿರುವ ಹುಳು-ಹುಪ್ಪಟೆ ಗಳನ್ನೂ ಕೊಲ್ಲುತ್ತದೆ. ಹಾಗೆಯೇ ನೇಗಿಲಿಗೆ ಕಟ್ಟಿರುವ ಎತ್ತುಗಳ ಪಾಡನ್ನಾದರೂ ನೋಡು.

ಅಘ್ನ್ಯಾ ಇತಿ ಗವಾಂ ನಾಮ ಕ ಏತಾ ಹನ್ತುಮರ್ಹತಿ ।
ಮಹಚ್ಚಕಾರಾಕುಶಲಂ ವೃಷಂ ಗಾಂ ವಾ ಲಭೇತ್ತು ಯಃ ॥೪೭॥

'ಅಘ್ನ್ಯಾಃ' (ಕೊಲ್ಲಲ್ಪಡತಕ್ಕುವುಗಳಲ್ಲ) ಎಂಬುದೇ ಗೋವುಗಳ ಹೆಸರಾಗಿದೆ. ಅವುಗಳ ಹೆಸರೇ ಅವುಗಳನ್ನು ಹಿಂಸೆಮಾಡಬಾರದು ಅಥವಾ ಕೊಲ್ಲಬಾರದು ಎಂದು ಸೂಚಿಸುತ್ತಿರುವಾಗ ಅಂತಹ ಹಸುಗಳನ್ನು ಯಾರು ತಾನೇ ಕೊಲ್ಲಲು ಅಥವಾ ಪೀಡಿಸಲು ಇಚ್ಛಿಸುತ್ತಾರೆ? ಯಾರು ಹಸುವನ್ನಾಗಲೀ ಎತ್ತನ್ನಾಗಲೀ ಕೊಲ್ಲುವರೋ–ಅಂತಹವರು ಅಶುಭಕರವಾದ ಮಹಾಪಾಪ ವನ್ನು ಮಾಡಿದವರಾಗುತ್ತಾರೆ.

ಹಿಂದೊಮ್ಮೆ ಯತಿಗಳೂ ಮತ್ತು ಋಷಿಗಳೂ ನಹುಷನ ಬಳಿಗೆ ಹೋಗಿ ಅವನೊಡನೆ ಈ ಮಾತುಗಳನ್ನು ಹೇಳಿದರು :

ಗಾಂ ಮಾತರಂ ಚಾಪ್ಯವಧೀರ್ವೃಷಭಂ ಚ ಪ್ರಜಾಪತಿಮ್ ।
ಅಕಾರ್ಯಂ ನಹುಷಾಕಾರ್ಷೀರ್ಲಪ್ಸ್ಯಾಮಸ್ತ್ವತ್ಕೃತೇ ವ್ಯಥಾಮ್ ॥೪೯॥

"ನಹುಷನೇ! ನೀನು ತಾಯಿಯಾದ ಗೋವನ್ನೂ–ಪ್ರಜಾಪತಿಯಾದ ಎತ್ತನ್ನೂ ಕೊಂದಿರುವೆ. ಇದರಿಂದ ನೀನು ಮಾಡಬಾರದ ಪಾಪಕಾರ್ಯವನ್ನು ಮಾಡಿರುವೆ. ನೀನು ಮಾಡಿರುವ ಈ ಕುತ್ಸಿತವಾದ ಕಾರ್ಯದಿಂದಾಗಿ ನಾವೆಲ್ಲರೂ ಬಹಳ ವ್ಯಥಿತರಾಗಿದ್ದೇವೆ." ಜಾಜಲಿಯೇ! ಹೀಗೆ ನಹುಷನೊಡನೆ ಹೇಳಿದನಂತರ ಮಹಾಭಾಗರಾದ ಋಷಿಗಳು ನಹುಷನು ಮಾಡಿದ ಪಾಪವನ್ನು ನೂರೊಂದು ರೋಗಗಳನ್ನಾಗಿ ಪರಿವರ್ತಿಸಿ ಎಲ್ಲ ಪ್ರಾಣಿಗಳ ಮೇಲೂ ಅದನ್ನು ಹಾಕಿಬಿಟ್ಟರು. ನಹುಷನನ್ನು ಭ್ರೂಣಹತ್ಯೆ ಮಾಡಿದವನೆಂದು ನಿಂದಿಸಿದ್ದಲ್ಲದೇ–'ನೀನು ಮಾಡುವ ಯಜ್ಞದಲ್ಲಿ ಹವಿಸ್ಸನ್ನು ಆಹುತಿಯನ್ನಾಗಿ ಅಗ್ನಿಗೆ ಹಾಕುವುದಿಲ್ಲ'–ಎಂಬುದಾಗಿಯೂ ಅವನೊಡನೆ ಹೇಳಿಬಿಟ್ಟರು.

ತತ್ತ್ವಾರ್ಥದರ್ಶಿಗಳಾದ, ಮಹಾತ್ಮರಾದ ಋಷಿಗಳೂ ಮತ್ತು ಯತಿಗಳೂ ನಹುಷನೊಡನೆ ಹೀಗೆ ಹೇಳಿದನಂತರ ಧ್ಯಾನಾಸಕ್ತರಾಗಿ ಕುಳಿತಿದ್ದಾಗ–ನಹುಷನು ಆ ಪಾಪಕಾರ್ಯವನ್ನು ಮನಃಪೂರ್ವಕವಾಗಿ ಮಾಡಿಲ್ಲವೆಂಬುದನ್ನೂ ಅಜ್ಞಾನದ ಕಾರಣದಿಂದ ಅದು ಸಂಭವಿಸಿತೆಂಬುದನ್ನೂ ತಿಳಿದು ಶಾಂತರಾದರು. ಜಾಜಲಿಯೇ! ಹೀಗೆ ಅಮಂಗಳಕರವಾದ ಮತ್ತು ಭಯಂಕರವಾದ ಆಚಾರಗಳು ನಡೆಯುತ್ತಿರುವುದನ್ನು ನೀನು ನೋಡುತ್ತಿದ್ದರೂ ಈ ಆಚಾರ-ವ್ಯವಹಾರಗಳು ಹಿಂದಿನಿಂದಲೂ ನಡೆದು ಬಂದಿವೆಯೆಂಬ ಕಾರಣದಿಂದ, ನೀನು ನಿಪುಣನೇ ಆಗಿದ್ದರೂ ಅವುಗಳ ದೌಷ್ಟ್ಯವನ್ನು ತಿಳಿದವನಾಗಿಲ್ಲ.

ಕಾರಣಾದ್ಧರ್ಮಮನ್ವಿಚ್ಛೇನ್ನ ಲೋಕಚರಿತಂ ಚರೇತ್ ।
ಯೋ ಹನ್ಯಾದ್ಯಶ್ಚ ಮಾಂ ಸ್ತೌತಿ ತತ್ರಾಪಿ ಶೃಣು ಜಾಜಲೇ ॥೫೨॥

ಸಮೌ ತಾವಪಿ ಮೇ ಸ್ಯಾತಾಂ ನ ಹಿ ಮೇಽಸ್ತಿ ಪ್ರಿಯಾಪ್ರಿಯಮ್ ।
ಏತದೀದೃಶಕಂ ಧರ್ಮಂ ಪ್ರಶಂಸನ್ತಿ ಮನೀಷಿಣಃ ॥೫೪॥

ಸಕಾರಣವಾಗಿ ಧರ್ಮದ ಸ್ವರೂಪವನ್ನು ತಿಳಿದುಕೊಳ್ಳಬೇಕು. (ತಿಳಿದು ಕರ್ಮಗಳನ್ನು ಮಾಡಬೇಕು.) ಲೋಕವು ಏನು ಮಾಡಿರುವುದೋ ಅಥವಾ ಯಾವುದನ್ನು ಮಾಡುತ್ತದೆಯೋ–ಅದನ್ನು ವಿಚಾರಮಾಡದೇ ಅನುಕರಣೆ ಮಾಡಲು ಹೋಗಬಾರದು. (ಅಂಧಾನುಕರಣೆಯನ್ನು ಮಾಡಬಾರದು.) ಜಾಜಲಿಯೇ! ನಾನು ನನ್ನ ವಿಷಯವನ್ನೇ ಹೇಳುತ್ತೇನೆ, ಕೇಳು. ಯಾವನು ನನ್ನನ್ನು ಹಿಂಸಿಸುವನೋ ಮತ್ತು ಯಾವನು ನನ್ನನ್ನು ಪ್ರಶಂಸೆಮಾಡುವನೋ– ಅವರಿಬ್ಬರೂ ನನ್ನ ದೃಷ್ಟಿಯಲ್ಲಿ ಸಮಾನರೇ ಸರಿ. ಅವರಲ್ಲಿ ಹಿಂಸೆ ಮಾಡಿದವನನ್ನು ಅಪ್ರಿಯನೆಂದೂ ನಾನು ಭಾವಿಸುವುದಿಲ್ಲ. ಪ್ರಶಂಸೆ ಮಾಡಿದವನನ್ನು ಪ್ರಿಯನೆಂದೂ ಭಾವಿಸುವುದಿಲ್ಲ. ವಿದ್ವಾಂಸರಾದವರು ಇಂತಹ ಸರ್ವಸಮತ್ವರೂಪವಾದ ಧರ್ಮವನ್ನೇ ಪ್ರಶಂಸೆಮಾಡುತ್ತಾರೆ.

ಉಪಪತ್ತ್ಯಾ ಹಿ ಸಮ್ಪನ್ನೋ ಯತಿಭಿಶ್ಚೈವ ಸೇವ್ಯತೇ ।
ಸತತಂ ಧರ್ಮಶೀಲೈಶ್ಚ ನಿಪುಣೇನೋಪಲಕ್ಷಿತಃ ॥೫೫॥

ವಿವೇಚನೆಯಿಂದ ಸಂಪನ್ನವಾದ ಈ ಸಮತ್ವನೈಪುಣ್ಯದಿಂದ ಗುರುತಿಸಲ್ಪಟ್ಟ ಧರ್ಮವು–ಯತಿಗಳಿಂದಲೂ ಧರ್ಮಶೀಲರಿಂದಲೂ ಯಾವಾಗಲೂ ಸೇವಿಸಲ್ಪಡುತ್ತದೆ.”

೨೬೨ನೆಯ ಅಧ್ಯಾಯವು ಮುಗಿಯಿತು.

೨೬೩ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ತುಲಾಧಾರನು ಜಾಜಲಿಗೆ ಆತ್ಮಯಜ್ಞದ ವಿಷಯದ ಧರ್ಮವನ್ನು ಉಪದೇಶಿಸಿದುದು

ಧರ್ಮಜ! ಜಾಜಲಿಯು ಹೇಳುತ್ತಾನೆ :

“ವಣಿಕ್ಶ್ರೇಷ್ಠನೇ! ತಕ್ಕಡಿಯನ್ನು ಹಿಡಿದಿರುವ ನೀನು ಪ್ರಾಣಿಗಳಿಗೆ ಸ್ವರ್ಗದ್ವಾರವನ್ನೂ ಮತ್ತು ಜೀವನವೃತ್ತಿಯನ್ನೂ ಪ್ರತಿರೋಧಿಸು ವಂತಹ ಧರ್ಮವನ್ನೇ ಪ್ರಾರಂಭಿಸಿರುವೆ. ಕೃಷಿಯಿಂದಲೇ ಅನ್ನದ ಉತ್ಪತ್ತಿ

ಯಾಗುತ್ತದೆ. ಆ ಅನ್ನದಿಂದಲೇ ನೀನೂ ಜೀವಿಸಿರುವೆ. ಪಶುಗಳಿಂದಲೂ ಮತ್ತು ಓಷಧಿಗಳಿಂದಲೂ (ಪೈರು-ಪಚ್ಚೆಗಳಿಂದಲೂ) ಮನುಷ್ಯರು ಜೀವನ ಮಾಡುತ್ತಾರೆ. ಅನ್ನವನ್ನೇ ಆಶ್ರಯಿಸಿ ಯಜ್ಞಗಳೂ ಹುಟ್ಟಿವೆ. ಎತ್ತುಗಳಿಗೆ ಕಷ್ಟವಾಗುವುದೆಂಬ ಭಾವನೆಯಿಂದ ಕೃಷಿಯೇ ಮೊದಲಾದುವನ್ನು ತ್ಯಜಿಸಿ ಬಿಟ್ಟರೆ ಪ್ರಪಂಚದ ಜೀವನವೇ ಸ್ಥಗಿತವಾಗುತ್ತದೆ. ಲೋಕವೇ ಉಳಿಯು ವುದಿಲ್ಲ. ಮೇಲಾಗಿ ನೀನು ನಾಸ್ತಿಕತೆಯ ಮಾತನ್ನೂ ಆಡುತ್ತಿರುವೆ."

ತುಲಾಧಾರನು ಹೇಳುತ್ತಾನೆ :

"ಜಾಜಲಿಬ್ರಾಹ್ಮಣನೇ! ನಾನು ನಿನಗೆ ಹಿಂಸೆಯಿಂದ ಅತಿರಿಕ್ತವಾದ ಜೀವನವು ಯಾವುದೆಂಬುದನ್ನು ಹೇಳುತ್ತೇನೆ. ನಿಶ್ಚಯವಾಗಿಯೂ ನಾನು ನಾಸ್ತಿಕನಲ್ಲ. ಯಜ್ಞವನ್ನು ನಾನೆಂದಿಗೂ ದೂಷಿಸತಕ್ಕವನಲ್ಲ. ಆದರೆ ಯಜ್ಞದ ಯಥಾರ್ಥಸ್ವರೂಪವನ್ನು ತಿಳಿದವರು ಸುದುರ್ಲಭರು (ಸುಲಭವಾಗಿ ಸಿಕ್ಕುವುದಿಲ್ಲ).

ನಮೋ ಬ್ರಾಹ್ಮಣಯಜ್ಞಾಯ ಯೇ ಚ ಯಜ್ಞವಿದೋ ಜನಾಃ ।
ಸ್ವಯಜ್ಞಂ ಬ್ರಾಹ್ಮಣಾ ಹಿತ್ವಾ ಕ್ಷತ್ರಯಜ್ಞಮಿಹಾಸ್ಥಿತಾಃ ॥೫॥

ಬ್ರಾಹ್ಮಣರಿಗೆ ಯಾವ ಯಜ್ಞದ ವಿಧಾನವಿರುವುದೋ ಅದಕ್ಕೆ ನಾನು ನಮಸ್ಕಾರಮಾಡುತ್ತೇನೆ. ಆ ಬ್ರಾಹ್ಮಣಯಜ್ಞವನ್ನು ಯಾರು ಚೆನ್ನಾಗಿ ತಿಳಿದುಕೊಂಡಿರುವರೋ–ಅಂತಹ ಪೂಜ್ಯರಾದ ದೇವಸ್ವರೂಪರಾದ ಬ್ರಾಹ್ಮಣರಿಗೂ ನಮಸ್ಕಾರಮಾಡುತ್ತೇನೆ. ಆದರೆ ಈಗ ಬ್ರಾಹ್ಮಣರು ತಮ್ಮ ಯಜ್ಞವನ್ನು ಪರಿತ್ಯಾಗಮಾಡಿ ಕ್ಷತ್ರಿಯೋಚಿತವಾದ ಯಜ್ಞದ ಅನುಷ್ಠಾನದಲ್ಲಿ ಪ್ರವೃತ್ತರಾಗಿದ್ದಾರೆ.

ಲುಬ್ಧೈರ್ವಿತ್ತಪರೈರ್ಬ್ರಹ್ಮನ್ನಾಸ್ತಿಕೈಃ ಸಮ್ಪ್ರವರ್ತಿತಮ್ ।
ವೇದವಾದಾನವಿಜ್ಞಾಯ ಸತ್ಯಾಭಾಸಮಿವಾನೃತಮ್ ॥೬॥

ಲೋಭಿಗಳಾದ ಮತ್ತು ಧನಸಂಗ್ರಹಾಕಾಂಕ್ಷಿಗಳಾದ ನಾಸ್ತಿಕರು ವೇದವಚನಗಳ ಯಥಾರ್ಥಸ್ವರೂಪವನ್ನು ತಿಳಿಯದೇ ಸತ್ಯದಂತೆ ತೋರುವ ಮಿಥ್ಯಾಯಜ್ಞಗಳನ್ನೇ ಪ್ರಚಾರಮಾಡುತ್ತಿದ್ದಾರೆ.

ಇದಂ ದೇಯಮಿದಂ ದೇಯಮಿತಿ ಚಾಯಂ ಪ್ರಶಸ್ಯತೇ ।
ಅತಃ ಸ್ತೈನ್ಯಂ ಪ್ರಭವತಿ ವಿಕರ್ಮಾಣಿ ಚ ಜಾಜಲೇ ॥೭॥

ಜಾಜಲಿಯೇ! ಶ್ರುತಿಗಳಲ್ಲಿ ಮತ್ತು ಸ್ಮೃತಿಗಳಲ್ಲಿ–'ಇಂತಹ ಯಜ್ಞದಲ್ಲಿ ಇಷ್ಟೇ ದಕ್ಷಿಣೆಯನ್ನು ಕೊಡಬೇಕು ; ಅಷ್ಟೇ ದಕ್ಷಿಣೆಯನ್ನು ಕೊಡಬೇಕು ; ಅಷ್ಟು ದಕ್ಷಿಣೆಯನ್ನು ಕೊಡುವುದರಿಂದಲೇ ಯಜ್ಞವು ಪೂರ್ಣವಾಗುತ್ತದೆ ; ದಕ್ಷಿಣೆಯನ್ನು ಕೊಡದಿದ್ದರೂ ಅಥವಾ ಅಲ್ಪದಕ್ಷಿಣೆಯನ್ನು ಕೊಟ್ಟರೂ ಯಜ್ಞದ ಫಲವು ಸಿದ್ಧಿಸುವುದಿಲ್ಲ ; ವಿಪರೀತವಾದ ಫಲವೇ ಪ್ರಾಪ್ತವಾಗುತ್ತದೆ. ದಕ್ಷಿಣೆಯನ್ನು ಕೊಡಲು ಶಕ್ತಿಯಿದ್ದರೂ ಲೋಭದಿಂದ ಕೊಡಬೇಕಾದಷ್ಟು ದಕ್ಷಿಣೆಯನ್ನು ಕೊಡದಿದ್ದರೆ ಯಜಮಾನನು ಕಳ್ಳನಾಗುತ್ತಾನೆ. ಕಳ್ಳತನಮಾಡಿದ ಪಾಪವು ಅವನಿಗೆ ಬರುತ್ತದೆ'–ಎಂಬುದಾಗಿ ಹೇಳಿದೆ.

ಯದೇವ ಸುಕೃತಂ ಹವ್ಯಂ ತೇನ ತುಷ್ಯನ್ತಿ ದೇವತಾಃ ।
ನಮಸ್ಕಾರೇಣ ಹವಿಷಾ ಸ್ವಾಧ್ಯಾಯೈರೌಷಧೈಸ್ತಥಾ ।
ಪೂಜಾ ಸ್ಯಾದ್ದೇವತಾನಾಂ ಹಿ ಯಥಾ ಶಾಸ್ತ್ರನಿದರ್ಶನಮ್ ॥೮॥

ಶುಭಕರ್ಮಗಳ ಮೂಲಕವಾಗಿ ಸಂಗ್ರಹಿಸುವ ಹೋಮದ್ರವ್ಯ ದಿಂದಲೇ ದೇವತೆಗಳು ಸಂತುಷ್ಟರಾಗುತ್ತಾರೆ. ನಮಸ್ಕಾರ, ಹವಿಸ್ಸು (ತುಪ್ಪ), ಅಧ್ಯಯನ-ಅಧ್ಯಾಪನ ಮತ್ತು ಅನ್ನ–ಇವುಗಳಿಂದಲೇ ದೇವತೆಗಳನ್ನು ಪೂಜೆಮಾಡಲು ಸಾಧ್ಯವಿದೆಯೆಂದು ಶಾಸ್ತ್ರಗಳಲ್ಲಿಯೂ ನಿದರ್ಶಿತವಾಗಿದೆ. (ಆದರೂ ಜನರು ಅಪಾರವಾದ ಹಣದ ವ್ಯಯದಿಂದ ಸಾಧ್ಯವಾಗುವ ಇಷ್ಟಾಪೂರ್ತಗಳನ್ನೂ–ಯಜ್ಞ, ಅಗ್ನಿಹೋತ್ರ, ತಪಸ್ಸು, ವೇದಾನುಪಾಲನ, ಆತಿಥ್ಯ-ವೈಶ್ವದೇವಗಳು, ಬಾವಿ, ಕೆರೆ, ಅನ್ನಸತ್ರ, ದೇವಾಲಯ ಮುಂತಾ ದುವುಗಳ ನಿರ್ಮಾಣಗಳನ್ನೂ ಮಾಡುತ್ತಾರೆ. ಇದಕ್ಕೆ ಅವರ ಮನಃ ಕಾಮನೆಗಳೇ ಕಾರಣವಾಗಿರುತ್ತವೆ.)

ಇಷ್ಟಾಪೂರ್ತಾದಸಾಧೂನಾಂ ವಿಗುಣಾ ಜಾಯತೇ ಪ್ರಜಾ ॥೯॥

ಹೀಗೆ ಕಾಮನೆಗಳಿಂದ ಪ್ರೇರಿತರಾಗಿ ಅನ್ಯಾಯಾರ್ಜಿತವಾದ, ಶುದ್ಧ ವಲ್ಲದ ದ್ರವ್ಯದಿಂದ ಇಷ್ಟಾಪೂರ್ತಗಳನ್ನು ಮಾಡುವ ಅಸಾಧುಗಳಿಗೆ ಅವರಿಗೆ ಅನುಗುಣವಾದ ಕಾಮಾಭಿಭೂತವಾದ ಸಂತಾನವೇ ಹುಟ್ಟುತ್ತದೆ.

ಲುಬ್ಧೇಭ್ಯೋ ಜಾಯತೇ ಲುಬ್ಧಃ ಸಮೇಭ್ಯೋ ಜಾಯತೇ ಸಮಃ ।
ಯಜಮಾನಾ ಯಥಾತ್ಮಾನಮೃತ್ವಿಜಶ್ಚ ತಥಾ ಪ್ರಜಾಃ ॥೧೦॥

ಲುಬ್ಧರಾದವರಿಗೆ ಲುಬ್ಧರಾದ ಮಕ್ಕಳೇ ಹುಟ್ಟುತ್ತಾರೆ ; ಸಮದರ್ಶಿಗಳಾದವರಿಗೆ ಸಮದರ್ಶಿಗಳಾದ ಮಕ್ಕಳೇ ಹುಟ್ಟುತ್ತಾರೆ. ಯಜಮಾನನೂ ಮತ್ತು ಋತ್ವಿಜರೂ ಯಾವ ರೀತಿಯಲ್ಲಿ ಅನೇಕವಿಧವಾದ ಕಾಮನೆಗಳಿಂದ ಕೂಡಿದ ಮನಸ್ಸುಳ್ಳವರಾಗಿರುವರೋ–ಅದೇ ರೀತಿಯಲ್ಲಿ ಅವರ ಮಕ್ಕಳೂ ಅನೇಕವಿಧವಾದ ಕಾಮನೆಗಳಿಂದಲೇ ಕೂಡಿದವರಾಗಿರುತ್ತಾರೆ.

ಯಜ್ಞಾತ್ಪ್ರಜಾ ಪ್ರಭವತಿ ನಭಸೋಽಮ್ಬು ಇವಾಮಲಮ್ ।
ಅಗ್ನೌ ಪ್ರಾಸ್ತಾಹುತಿರ್ಬ್ರಹ್ಮನ್ನಾದಿತ್ಯಮುಪಗಚ್ಛತಿ ।
ಆದಿತ್ಯಾಜ್ಜಾಯತೇ ವೃಷ್ಟಿರ್ವೃಷ್ಟೇರನ್ನಂ ತತಃ ಪ್ರಜಾಃ ॥೧೧॥

ಯಾವ ರೀತಿಯಲ್ಲಿ ಆಕಾಶದಿಂದ ನಿರ್ಮಲವಾದ ಮಳೆಯು ಬೀಳುವುದೋ–ಅದೇ ರೀತಿಯಲ್ಲಿ ಶುದ್ಧಭಾವದಿಂದ ಮಾಡಿದ ಯಜ್ಞದಿಂದ ಶುದ್ಧವಾದ ಸಂತಾನೋತ್ಪತ್ತಿಯಾಗುತ್ತದೆ. ವಿಪ್ರಶ್ರೇಷ್ಠನೇ! ಅಗ್ನಿಯಲ್ಲಿ ಮಂತ್ರಪೂರ್ವಕವಾಗಿ ಹಾಕುವ ಹೋಮದ್ರವ್ಯವು ಆದಿತ್ಯನಿಗೆ ಹೋಗಿ ಸೇರುತ್ತದೆ. ಆದಿತ್ಯನಿಂದ ವೃಷ್ಟಿಯು ಹುಟ್ಟುತ್ತದೆ. ವೃಷ್ಟಿಯಿಂದ ಅನ್ನವು ಹುಟ್ಟುತ್ತದೆ. ಅನ್ನದಿಂದ ಪ್ರಜೆಗಳು ಹುಟ್ಟುತ್ತಾರೆ ಮತ್ತು ಜೀವನ ನಿರ್ವಹಣೆಯನ್ನು ಮಾಡುತ್ತಾರೆ.

ತಸ್ಮಾತ್ಸುನಿಷ್ಠಿತಾಃ ಪೂರ್ವೇ ಸರ್ವಾನ್ಕಾಮಾಂಶ್ಚ ಲೇಭಿರೇ ।
ಅಕೃಷ್ಟಪಚ್ಯಾ ಪೃಥಿವೀ ಆಶೀರ್ಭಿರ್ವೀರುಧೋಽಭವನ್ ॥೧೨॥

ಹಿಂದಿನವರು ಧರ್ಮದಲ್ಲಿ ಒಳ್ಳೆಯ ನಿಷ್ಠೆಯುಳ್ಳವರಾಗಿರುತ್ತಾ ಶ್ರದ್ಧಾಪೂರ್ವಕವಾಗಿ ಯಜ್ಞಗಳಲ್ಲಿ ಪ್ರವೃತ್ತರಾಗುತ್ತಿದ್ದರು. ಎಲ್ಲ ವಿಧವಾದ ಕಾಮನೆಗಳನ್ನೂ ಹೊಂದುತ್ತಿದ್ದರು. ಕೃಷಿಮಾಡದೆಯೇ ಭೂಮಿಯು ಬೆಳೆಯನ್ನು ಕೊಡುತ್ತಿದ್ದಿತು. ಶುಭಸಂಕಲ್ಪಮಾತ್ರದಿಂದಲೇ ಫಲ-ಪುಷ್ಪಗಳನ್ನು ಕೊಡುವ ಬಳ್ಳಿಗಳು ಬೆಳೆಯುತ್ತಿದ್ದುವು.

ನ ತೇ ಯಜ್ಞೇಷ್ವಾತ್ಮಸು ವಾ ಫಲಂ ಪಶ್ಯನ್ತಿ ಕಿಂಚನ ।

ಶಙ್ಕಮಾನಾಃ ಫಲಂ ಯಜ್ಞೇ ಯೇ ಯಜೇರನ್ಕಥಂಚನ ।
ಜಾಯನ್ತೇಽಸಾಧವೋ ಧೂರ್ತಾ ಲುಬ್ಧಾ ವಿತ್ತಪ್ರಯೋಜನಾಃ ॥೧೪॥

ಅವರು ಯಜ್ಞದಲ್ಲಿ ತಮಗಾಗಿ ಯಾವ ಫಲವನ್ನೂ ನಿರೀಕ್ಷಿಸುತ್ತಿರಲಿಲ್ಲ. ಯಜ್ಞದಲ್ಲಿ ತಾವು ಸಂಕಲ್ಪಿಸಿದ ಫಲವು ಸಿಕ್ಕುವುದೋ ಇಲ್ಲವೋ ಎಂಬ ಸಂದೇಹದಿಂದ ಯಾರು ಯಜ್ಞಮಾಡುವರೋ–ಅವರು ಅಸತ್ಪುರುಷರಾಗಿ, ಧೂರ್ತರಾಗಿ, ಲುಬ್ಧರಾಗಿ ಐಶ್ವರ್ಯವೇ ಮುಖ್ಯವಾದ ಪ್ರಯೋಜನವುಳ್ಳವರಾಗಿ (ಧನಪಿಶಾಚಿಗಳಾಗಿ) ಹುಟ್ಟುತ್ತಾರೆ.

ಸ ಸ್ಮ ಪಾಪಕೃತಾಂ ಲೋಕಾನ್ಗಚ್ಛೇದಶುಭಕರ್ಮಣಾ ।
ಪ್ರಮಾಣಮಪ್ರಮಾಣೇನ ಯಃ ಕುರ್ಯಾದಶುಭಂ ನರಃ ।
ಪಾಪಾತ್ಮಾ ಸೋಽಕೃತಪ್ರಜ್ಞಃ ಸದೈವೇಹ ದ್ವಿಜೋತ್ತಮ ॥೧೫॥

ಬ್ರಾಹ್ಮಣಶ್ರೇಷ್ಠನೇ! ಯಾವ ಮನುಷ್ಯನು ಪ್ರಮಾಣಭೂತವಾದ ವೇದವನ್ನು ತನ್ನ ಅಪ್ರಾಮಾಣಿಕವಾದ ಕುತರ್ಕಗಳ ಮೂಲಕವಾಗಿ ಅಮಂಗಳಕರವಾದುದೆಂದು ನಿಶ್ಚಯಿಸುತ್ತಾನೆಯೋ–ಅಂತಹವನ ಬುದ್ಧಿಯು ಶುದ್ಧವಾದುದಲ್ಲ. ಅವನ ಮನಸ್ಸು ಯಾವಾಗಲೂ ಪಾಪಕಾರ್ಯಗಳಲ್ಲಿಯೇ ಸೇರಿಕೊಂಡಿರುತ್ತದೆ. ಅವನು ತನ್ನ ಅಶುಭವಾದ ಪಾಪಕರ್ಮದಿಂದ ಪಾಪಿಷ್ಠರು ಹೋಗುವ ನರಕವೇ ಮುಂತಾದ ಲೋಕಗಳಿಗೆ ಹೋಗುತ್ತಾನೆ.

ಕರ್ತವ್ಯಮಿತಿ ಕರ್ತವ್ಯಂ ವೇತ್ತಿ ವೈ ಬ್ರಾಹ್ಮಣೋ ಭಯಮ್ ।
ಬ್ರಹ್ಮೈವ ವರ್ತತೇ ಲೋಕೇ ನೈವ ಕರ್ತವ್ಯತಾಂ ಪುನಃ ॥೧೬॥

ಯಾವನು ಮಾಡಬೇಕಾದ ವೇದೋಕ್ತಕರ್ಮಗಳನ್ನು ಮಾಡುವುದು ತನ್ನ ಕರ್ತವ್ಯವೆಂದು ತಿಳಿದಿರುವನೋ ಮತ್ತು ಹಾಗೆ ಮಾಡದಿದ್ದರೆ ಭಯಕ್ಕೆ ಕಾರಣವಾಗುವುದೆಂದು ಭಾವಿಸುವನೋ, ಯಾವನ ದೃಷ್ಟಿಯಲ್ಲಿ ಋತ್ವಿಕ್-ಹವಿಸ್ಸು-ಮಂತ್ರ ಮತ್ತು ಅಗ್ನಿಯೇ ಮೊದಲಾದುವುಗಳು ಬ್ರಹ್ಮಮಯ ವಾಗಿರುವುವೋ, ಯಾವನು ಕರ್ತವ್ಯವೆಂದು ಕರ್ಮಗಳನ್ನು ಮಾಡಿಯೂ ಕರ್ತೃತ್ವಾಭಿಮಾನವನ್ನು ತೊರೆದಿರುವನೋ–ಅವನೇ ನಿಜವಾದ ಬ್ರಾಹ್ಮಣನು. (ಕರ್ತೃತ್ವಾಭಿಮಾನವನ್ನೂ ಫಲಾಭಿಸಂಧಿಯನ್ನೂ ಬಿಟ್ಟು ಎಲ್ಲವೂ ಬ್ರಹ್ಮಮಯುವೆಂದು ಭಾವಿಸಿ ಬ್ರಹ್ಮಾರ್ಪಣಭಾವದಿಂದ ಕರ್ಮಗಳನ್ನು ಮಾಡುವವರು ಶ್ರೇಷ್ಠರು. ಶ್ರೀಗೀತೆ ಅ. ೪-ಶ್ಲೋಕ ೨೪)

(ಕರ್ಮಗಳಿಗೆ ಅನುಗುಣವಾದ ಕಾಮಾಭಿಭೂತವಾದ (ಗುಣಹೀನವಾದ) ಸಂತಾನವೇ ಹುಟ್ಟುತ್ತದೆ.)

ವಿಗುಣಂ ಚ ಪುನಃ ಕರ್ಮ ಜ್ಯಾಯ ಇತ್ಯನುಶುಶ್ರುಮ ।
ಸರ್ವಭೂತೋಪಘಾತಶ್ಚ ಫಲಭಾವೇ ಚ ಸಂಯಮಃ ॥೧೭॥

ಕರ್ಮಗಳಲ್ಲಿ ಲೋಪ-ದೋಷಗಳುಂಟಾದರೆ ಅದು ಫಲಕೊಡುವುದಿಲ್ಲವೆಂದೂ, ಗುಣಹೀನವಾಗುವುದೆಂದೂ ಮತ್ತು ಸಕಲಪ್ರಾಣಿಗಳಿಗೂ ವಿಪತ್ಕಾರಿಯಾಗುವುದೆಂದೂ ಕೇಳಿದ್ದೇವೆ. ಆದರೆ ಅದೇ ಕರ್ಮವನ್ನು ನಿಷ್ಕಾಮಭಾವನೆಯಿಂದ ಮಾಡಿದರೆ ಅದು ಶ್ರೇಷ್ಠವಾದ ಕರ್ಮವಾಗುತ್ತದೆ. ಆದುದರಿಂದ ಕರ್ಮಠನು ಯಾವಾಗಲೂ ಫಲದ ವಿಷಯದಲ್ಲಿ ಸಂಯಮದಿಂದ ವರ್ತಿಸಬೇಕು. (ಫಲದ ಅಭಿಲಾಷೆಯಿಂದ ಕರ್ಮವನ್ನು ಮಾಡಬಾರದು.)

ಸತ್ಯಯಜ್ಞಾ ದಮಯಜ್ಞಾ ಅರ್ಥಲುಬ್ಧಾರ್ಥತೃಪ್ತಯಃ ।
ಉತ್ಪನ್ನತ್ಯಾಗಿನಃ ಸರ್ವೇ ಜನಾ ಆಸನ್ನಮತ್ಸರಾಃ ॥೧೮॥

ಹಿಂದಿನ ಕಾಲದಲ್ಲಿ ಬ್ರಾಹ್ಮಣರು ಸತ್ಯನಿಷ್ಠಾರೂಪವಾದ ಮತ್ತು ಇಂದ್ರಿಯಸಂಯಮರೂಪವಾದ ಯಜ್ಞಗಳನ್ನು ಮಾಡುತ್ತಿದ್ದರು. ಅವರು ಪರಮಪುರುಷಾರ್ಥದ (ಮೋಕ್ಷದ) ಲೋಭಿಗಳಾಗಿದ್ದರು. ಲೌಕಿಕವಾದ ಧನವು ಎಷ್ಟು ಲಭಿಸಿದರೆ ಅಷ್ಟರಿಂದಲೇ ತೃಪ್ತರಾಗಿರುತ್ತಿದ್ದರು. ನಾಳೆಗೆ ಬೇಕೆಂದು ಯಾವ ವಸ್ತುವನ್ನೂ ಸಂಗ್ರಹಿಸಿಡದೇ ಲಭಿಸಿದ ವಸ್ತುಗಳನ್ನೂ ತ್ಯಾಗಮಾಡಿಬಿಡುತ್ತಿದ್ದರು. ಈರ್ಷ್ಯಾ-ದ್ವೇಷಗಳಿಂದ ರಹಿತರಾಗಿದ್ದರು.

ಕ್ಷೇತ್ರಕ್ಷೇತ್ರಜ್ಞತತ್ತ್ವಜ್ಞಾಃ ಸ್ವಯಜ್ಞಪರಿನಿಷ್ಠಿತಾಃ ।
ಬ್ರಾಹ್ಮಂ ವೇದಮಧೀಯನ್ತಸ್ತೋಷಯನ್ತ್ಯಪರಾನಪಿ ॥೧೯॥

ಅವರು ಶರೀರದ ಮತ್ತು ಆತ್ಮದ ತತ್ತ್ವವನ್ನು ತಿಳಿದವರಾಗಿದ್ದರು. ಆತ್ಮಯಜ್ಞಪರಾಯಣರಾಗಿದ್ದರು. ಉಪನಿಷತ್ತುಗಳ ಅಧ್ಯಯನದಲ್ಲಿಯೇ ತತ್ಪರರಾಗಿರುತ್ತಾ ತಾವೂ ಸಂತುಷ್ಟರಾಗಿ ಇತರರನ್ನೂ ಸಂತುಷ್ಟಿಗೊಳಿಸುತ್ತಿದ್ದರು.

ಅಖಿಲಂ ದೈವತಂ ಸರ್ವಂ ಬ್ರಹ್ಮ ಬ್ರಹ್ಮಣಿ ಸಂಶ್ರಿತಮ್ ।
ತುಷ್ಯನ್ತಿ ತೃಪ್ಯತೋ ದೇವಾಸ್ತೃಪ್ತಾಸ್ತೃಪ್ತಸ್ಯ ಜಾಜಲೇ ॥೨೦॥

ಎಲ್ಲ ದೇವತೆಗಳೂ, ಅಖಿಲವಾದ ವೇದಗಳೂ ಬ್ರಹ್ಮವಿದನಲ್ಲಿಯೇ ಆಶ್ರಯವನ್ನು ಹೊಂದಿವೆ. ಆದುದರಿಂದ ಬ್ರಹ್ಮವಿದನು ತೃಪ್ತಿಹೊಂದಿದರೆ ದೇವತೆಗಳೂ ಸಂತುಷ್ಟರಾಗುತ್ತಾರೆ ಮತ್ತು ತೃಪ್ತರಾಗುತ್ತಾರೆ.

ಯಥಾ ಸರ್ವರಸೈಸ್ತೃಪ್ತೋ ನಾಭಿನನ್ದತಿ ಕಿಂಚನ ।
ತಥಾ ಪ್ರಜ್ಞಾನತೃಪ್ತಸ್ಯ ನಿತ್ಯತೃಪ್ತಿಃ ಸುಖೋದಯಾ ॥೨೧॥

ಸರ್ವರಸಗಳಿಂದಲೂ ತೃಪ್ತನಾದವನು ಯಾವ ರಸವನ್ನೂ ಪ್ರಶಂಸೆ ಮಾಡಲು ಹೋಗುವುದಿಲ್ಲ. ಹಾಗೆಯೇ ಜ್ಞಾನತೃಪ್ತನಾದವನು ಬೇರೆ ಯಾವುದರಿಂದಲೂ ತೃಪ್ತಿಯನ್ನು ಅಪೇಕ್ಷಿಸುವುದಿಲ್ಲ. ಜ್ಞಾನತೃಪ್ತಿಯೆಂಬುದು ಸುಖೋದರ್ಕವಾದ ನಿತ್ಯತೃಪ್ತಿಯೇ ಆಗಿದೆ.

ಧರ್ಮಾಧಾರಾ ಧರ್ಮಸುಖಾಃ ಕೃತ್ಸ್ನವ್ಯವಸಿತಾಸ್ತಥಾ ।
ಅಸ್ತಿ ನಸ್ತತ್ತ್ವತೋ ಭೂಯ ಇತಿ ಪ್ರಾಜ್ಞಸ್ತ್ವವೇಕ್ಷತೇ ॥೨೨॥

ನಮ್ಮಲ್ಲನೇಕರು ಧರ್ಮವನ್ನೇ ಆಧಾರವನ್ನಾಗಿಟ್ಟುಕೊಂಡು ಕರ್ಮಗಳನ್ನು ಮಾಡುತ್ತಿರುತ್ತಾರೆ. ಧರ್ಮಮಾರ್ಗದಲ್ಲಿರುವುದೇ ಪರಮಸುಖವೆಂದು ಭಾವಿಸುವವರೂ ಇದ್ದಾರೆ. ಅವರು ಸಂಪೂರ್ಣವಾಗಿ ಕರ್ತವ್ಯಾಕರ್ತವ್ಯಗಳನ್ನು ನಿಶ್ಚಯಮಾಡಿ ಕರ್ಮಗಳನ್ನು ಮಾಡುತ್ತಿರುತ್ತಾರೆ. ಆದರೆ ನಾವು ಯಾವುದನ್ನು ಧರ್ಮದ ಯಥಾರ್ಥರೂಪವೆಂದು ತಿಳಿದಿರುವೆವೋ ಅದಕ್ಕಿಂತಲೂ ದೊಡ್ಡದಾದ ವ್ಯಾಪಕವಾದ ಪರಮಾತ್ಮತತ್ತ್ವವಿರುವುದೆಂದು ಪ್ರಾಜ್ಞರಾದವರು ಹೇಳುತ್ತಾರೆ.

ಜ್ಞಾನವಿಜ್ಞಾನಿನಃ ಕೇಚಿತ್ಪರಂ ಪಾರಂ ತಿತೀರ್ಷವಃ ॥೨೩॥

ಅತೀವ ಪುಣ್ಯದಂ ಪುಣ್ಯಂ ಪುಣ್ಯಾಭಿಜನಸಂಹಿತಮ್ ।
ಯತ್ರ ಗತ್ವಾ ನ ಶೋಚನ್ತಿ ನ ಚ್ಯವನ್ತಿ ವ್ಯಥನ್ತಿ ಚ ॥೨೪॥

ಸಂಸಾರಸಾಗರದ ಪಾರವನ್ನು ದಾಟಲಿಚ್ಛಿಸುವ ಜ್ಞಾನ-ವಿಜ್ಞಾನ ಸಂಪನ್ನರಾದ ಕೆಲವು ಪುರುಷರು ಅತ್ಯಂತಪುಣ್ಯದಾಯಕವಾದ, ಪವಿತ್ರ

ವಾದ, ಪುಣ್ಯಾತ್ಮರಿಂದ ಕೂಡಿರುವ ಬ್ರಹ್ಮಲೋಕವನ್ನು ಹೊಂದುತ್ತಾರೆ. ಅಲ್ಲಿಗೆ ಹೋದನಂತರ ಅವರು ಶೋಕಪಡುವುದಿಲ್ಲ. ಅಲ್ಲಿಂದ ಚ್ಯುತರಾಗುವುದಿಲ್ಲ ಮತ್ತು ವ್ಯಥಿತರೂ ಆಗುವುದಿಲ್ಲ.

ತೇ ತು ತದ್ಬ್ರಹ್ಮಣಃ ಸ್ಥಾನಂ ಪ್ರಾಪ್ನುವನ್ತೀಹ ಸಾತ್ತ್ವಿಕಾಃ ।
ನೈವ ತೇ ಸ್ವರ್ಗಮಿಚ್ಛನ್ತಿ ನ ಯಜನ್ತಿ ಯಶೋಧನೈಃ ॥೨೫॥

ಸತಾಂ ವರ್ತ್ಮಾನುವರ್ತನ್ತೇ ಯಜನ್ತೇ ಚಾವಿಹಿಂಸಯಾ ।
ವನಸ್ಪತೀನೋಷಧೀಶ್ಚ ಫಲಂ ಮೂಲಂ ಚ ತೇ ವಿದುಃ ।
ನ ಚೈತಾನೃತ್ವಿಜೋ ಲುಬ್ಧಾ ಯಾಜಯನ್ತಿ ಫಲಾರ್ಥಿನಃ ॥೨೬॥

ಅಂತಹ ಸಾತ್ತ್ವಿಕರು ಬ್ರಹ್ಮಪದವನ್ನೇ ಸೇರುತ್ತಾರೆ. ಅವರು ಸ್ವರ್ಗವನ್ನೂ ಅಪೇಕ್ಷಿಸುವುದಿಲ್ಲ. ಧನಕ್ಕಾಗಲೀ–ಯಶಸ್ಸಿಗಾಗಲೀ ಯಜ್ಞಮಾಡುವುದಿಲ್ಲ. ಸತ್ಪುರುಷರ ಮಾರ್ಗವನ್ನೇ ಅನುಸರಿಸುತ್ತಾ ಹಿಂಸಾರಹಿತವಾದ ಯಜ್ಞವನ್ನು ಮಾಡುತ್ತಾರೆ. ವನಸ್ಪತಿಗಳನ್ನೂ (ಸಮಿತ್ತುಗಳನ್ನೂ), ಓಷಧಿಗಳನ್ನೂ (ಅನ್ನವನ್ನೂ), ಫಲ-ಮೂಲಗಳನ್ನೂ ಅವರು ಯಜ್ಞದ ಹವಿಸ್ಸನ್ನಾಗಿ ಭಾವಿಸುತ್ತಾರೆ. ಧನವೆಂಬ ಫಲವನ್ನೇ ಅಪೇಕ್ಷಿಸುವ ಲೋಭಿಗಳಾದ ಋತ್ವಿಜರು ಇಂತಹ ಸಾತ್ತ್ವಿಕರಿಗೆ ಯಜ್ಞವನ್ನು ಮಾಡಿಸುವುದಿಲ್ಲ.

ಸ್ವಮೇವ ಚಾರ್ಥಂ ಕುರ್ವಾಣಾ ಯಜ್ಞಂ ಚಕ್ರುಃ ಪುನರ್ದ್ವಿಜಾಃ ।
ಪರಿನಿಷ್ಠಿತಕರ್ಮಾಣಃ ಪ್ರಜಾನುಗ್ರಹಕಾಮ್ಯಯಾ ॥೨೭॥

ನಿಷ್ಕೃಷ್ಟವಾದ ಜ್ಞಾನದಿಂದ ಕರ್ಮಗಳನ್ನು ಮಾಡುವ ಜ್ಞಾನಿಗಳಾದ ಬ್ರಾಹ್ಮಣರು, ಲೋಕದ ಜನರಿಗೆ ಹಿತವನ್ನುಂಟುಮಾಡುವ ಅಪೇಕ್ಷೆಯಿಂದ ತಮ್ಮನ್ನೇ ಯಜ್ಞದ ಉಪಕರಣವನ್ನಾಗಿ ಭಾವಿಸಿಕೊಂಡು ಮಾನಸಿಕ ಯಜ್ಞವನ್ನು ಮಾಡುತ್ತಾರೆ.

ತಸ್ಮಾತ್ತಾನೃತ್ವಿಜೋ ಲುಬ್ಧಾ ಯಾಜಯನ್ತ್ಯಶುಭಾನ್ನರಾನ್ ॥೨೮॥

ಪ್ರಾಪಯೇಯುಃ ಪ್ರಜಾಃ ಸ್ವರ್ಗಂ ಸ್ವಧರ್ಮಾಚರಣೇನ ವೈ ।
ಇತಿ ಮೇ ವರ್ತತೇ ಬುದ್ಧಿಃ ಸಮಾ ಸರ್ವತ್ರ ಜಾಜಲೇ ॥೨೯॥

ಜಾಜಲಿಯೇ! ಲೋಭಿಗಳಾದ ಋತ್ವಿಜರು ಅಶುಭಫಲದಾಯಕ ಗಳಾದ (ಮೋಕ್ಷೇಚ್ಛೆಯಿಂದ ರಹಿತವಾದ) ಯಜ್ಞಗಳನ್ನು ಮನುಷ್ಯರಿಂದ ಮಾಡಿಸುತ್ತಾರೆ. ಸಾಧುಗಳಾದವರು ಸ್ವಧರ್ಮಾಚರಣೆಯಿಂದಲೇ (ತಮ್ಮ ತಮ್ಮ ವರ್ಣಾಶ್ರಮಧರ್ಮಾಚರಣೆಯಿಂದಲೇ) ಇತರರಿಗೆ ಸ್ವರ್ಗವನ್ನು ಹೊಂದಿಸಬಲ್ಲರು. ಇದನ್ನು ಆಲೋಚಿಸಿಯೇ ನನ್ನ ಬುದ್ಧಿಯು ಸರ್ವತ್ರ ಸಮಭಾವದಿಂದಿದೆ.

ಯಾನಿ ಯಜ್ಞೇಷ್ವಿಹೇಜ್ಯನ್ತಿ ಸದಾ ಪ್ರಾಜ್ಞಾ ದ್ವಿಜರ್ಷಭಾಃ ।
ತೇನ ತೇ ದೇವಯಾನೇನ ಪಥಾ ಯಾನ್ತಿ ಮಹಾಮುನೇ ॥೩೦॥

ಮಹಾಮುನಿಯೇ! ಪ್ರಾಜ್ಞರಾದ ದ್ವಿಜಶ್ರೇಷ್ಠರು ಅಪುನರಾವೃತ್ತಿ ಮಾರ್ಗದರ್ಶಕರಾದ ಯಾವ ದೇವತೆಗಳನ್ನು ಯಜ್ಞಗಳಲ್ಲಿ ಆರಾಧಿಸು ತ್ತಾರೆಯೋ–ಆ ದೇವತೆಗಳ ಅನುಗ್ರಹದಿಂದ ಅವರು ದೇವಯಾನ ಮಾರ್ಗದ ಮೂಲಕವಾಗಿ ಊರ್ಧ್ವಲೋಕಗಳಿಗೆ ಪ್ರಯಾಣಮಾಡುತ್ತಾರೆ.

ಆವೃತ್ತಿಸ್ತಸ್ಯ ಚೈಕಸ್ಯ ನಾಸ್ತ್ಯಾವೃತ್ತಿರ್ಮನೀಷಿಣಃ ।
ಉಭೌ ತೌ ದೇವಯಾನೇನ ಗಚ್ಛತೋ ಜಾಜಲೇ ಯಥಾ ॥೩೧॥

ಜಾಜಲಿಯೇ! ಯಾವನು ಕಾಮನೆಗಳಲ್ಲಿ ಆಸಕ್ತನಾಗಿರುವನೋ–ಆ ಮನುಷ್ಯನಿಗೆ ಈ ಪ್ರಪಂಚದಲ್ಲಿ ಪುನಃ ಹುಟ್ಟು-ಸಾವುಗಳುಂಟು. ಜ್ಞಾನಿ ಯಾದವನಿಗೆ ಪುನರಾವೃತ್ತಿಯಿಲ್ಲ. ಯದ್ಯಪಿ ಇಬ್ಬರೂ ದೇವಯಾನದ ಮೂಲಕವೇ ಊರ್ಧ್ವಲೋಕಗಳಿಗೆ ಹೋದರೂ ಸಂಕಲ್ಪಭೇದದಿಂದ ಒಬ್ಬನಿಗೆ ಪುನರಾವೃತ್ತಿಯೂ ಮತ್ತೊಬ್ಬನಿಗೆ ಅಪುನರಾವೃತ್ತಿಯೂ ಉಂಟಾಗುತ್ತದೆ.

ಸ್ವಯಂ ಚೈಷಾಮನಡುಹೋ ಯುಜ್ಯನ್ತಿ ಚ ವಹನ್ತಿ ಚ ।
ಸ್ವಯಮುಸ್ರಾಶ್ಚ ದುಹ್ಯನ್ತೇ ಮನಃಸಂಕಲ್ಪಸಿದ್ಧಿಭಿಃ ॥೩೨॥

ಸಂಕಲ್ಪಸಿದ್ಧಿಯಿರುವ ಜ್ಞಾನಿಗಳಾದ ಮಹಾತ್ಮರ ಮನಸ್ಸಿನಲ್ಲಿ ಇಚ್ಛೆ ಯೇನಾದರೂ ಉಂಟಾದರೆ, ಎತ್ತುಗಳು ತಾವೇ ಗಾಡಿಯ ನೊಗದ ಎರಡು ಕಡೆಗಳಲ್ಲಿಯೂ ನಿಂತು ಹಗ್ಗದಿಂದ ಬಿಗಿದುಕೊಂಡು ಗಾಡಿಯನ್ನು ಎಳೆದು

ಕೊಂಡು ಹೋಗುತ್ತವೆ. ಹಸುಗಳು ಕರೆಯದೆಯೇ ಹಾಲನ್ನು ಕೆಚ್ಚಲಿನಿಂದ ಸುರಿಸುತ್ತವೆ.

ಸ್ವಯಂ ಯೂಪಾನುಪಾದಾಯ ಯಜನ್ತೇ ಸ್ವಾಪ್ತದಕ್ಷಿಣೈಃ ।
ಯಸ್ತಥಾ ಭಾವಿತಾತ್ಮಾ ಸ್ಯಾತ್ಸ ಗಾಮಾಲಬ್ಧುಮರ್ಹತಿ ॥೩೩॥

ಸಂಕಲ್ಪಸಿದ್ಧರಾದವರು ಮಾನಸಿಕವಾಗಿಯೇ ಯೂಪವನ್ನು ಸ್ಥಾಪಿಸಿ ಯಥೇಚ್ಛವಾದ ದಕ್ಷಿಣೆಗಳ ಮೂಲಕವಾಗಿ ಯಾಗಮಾಡುತ್ತಾರೆ. ಅಂತಹ ಚಿತ್ತಶುದ್ಧಿಯುಳ್ಳ ಸಂಕಲ್ಪಸಿದ್ಧರು ಮಾನಸಿಕವಾಗಿಯೇ ಗವಾಲಂಭನವನ್ನು ಮಾಡಬಲ್ಲರು.

ಓಷಧೀಭಿಸ್ತಥಾ ಬ್ರಹ್ಮನ್ಯಜೇರಂಸ್ತೇ ನ ತಾದೃಶಾಃ ।
ಇತಿ ತ್ಯಾಗಂ ಪುರಸ್ಕೃತ್ಯ ತಾದೃಶಂ ಪ್ರಬ್ರವೀಮಿ ತೇ ॥೩೪॥

ಬ್ರಾಹ್ಮಣೋತ್ತಮ! ಆದುದರಿಂದ ಯೋಗಸಿದ್ಧಿಯನ್ನು ಪಡೆದ ಮಹಾಪುರುಷರು ಅನ್ನಾದಿಗಳ ಮೂಲಕವಾಗಿ ಯಜ್ಞವನ್ನು ಮಾಡಬಲ್ಲರು. ಆದರೆ ಧನಲುಬ್ಧರಾದ ಋತ್ವಿಜರು ಇಂತಹ ಮಾನಸಿಕಯಜ್ಞವನ್ನು ಮಾಡಲಾರರು. ಕರ್ಮಫಲವನ್ನು ತ್ಯಾಗಮಾಡುವವರ ಮಹಿಮೆಯು ಇಷ್ಟು ಅದ್ಭುತವಾಗಿದೆ. ಆದುದರಿಂದ ನಾನು ತ್ಯಾಗಧರ್ಮವನ್ನೇ ಮುಖ್ಯವನ್ನಾಗಿಟ್ಟುಕೊಂಡು ಇಂತಹ ಮಾತುಗಳನ್ನು ಹೇಳುತ್ತಿದ್ದೇನೆ.

ನಿರಾಶಿಷಮನಾರಮ್ಭಂ ನಿರ್ನಮಸ್ಕಾರಮಸ್ತುತಿಮ್ ।
ಅಕ್ಷೀಣಂ ಕ್ಷೀಣಕರ್ಮಾಣಂ ತಂ ದೇವಾ ಬ್ರಾಹ್ಮಣಂ ವಿದುಃ ॥೩೫॥

ಯಾವನ ಮನಸ್ಸಿನಲ್ಲಿ ಯಾವ ವಿಧವಾದ ಕಾಮನೆಗಳೂ ಇಲ್ಲವೋ, ಫಲದ ಇಚ್ಛೆಯಿಂದ ಯಾವನು ಕರ್ಮಗಳನ್ನು ಆರಂಭಿಸುವುದಿಲ್ಲವೋ, ನಮಸ್ಕಾರಗಳಿಂದಲೂ ಹೊಗಳಿಕೆಗಳಿಂದಲೂ ದೂರವಾಗಿರುವನೋ, ಯಾವನ ಆತ್ಮಧರ್ಮವು ಯಾವಾಗಲೂ ಕ್ಷಯಿಸುವುದಿಲ್ಲವೋ, ಬಂಧನ ವನ್ನುಂಟುಮಾಡತಕ್ಕ ಕಾರ್ಯಗಳು ಯಾವನಲ್ಲಿ ಕ್ಷೀಣಿಸಿವೆಯೋ– ಅಂತಹವನನ್ನು ಬ್ರಾಹ್ಮಣನೆಂದು ದೇವತೆಗಳು ತಿಳಿಯುತ್ತಾರೆ.

ನ ಶ್ರಾವಯನ್ನ ಚ ಯಜನ್ನ ದದದ್ಬ್ರಾಹ್ಮಣೇಷು ಚ ।

ಕಾಮ್ಯಾಂ ವೃತ್ತಿಂ ಲಿಪ್ಸಮಾನಃ ಕಿಂ ಗತಿಂ ಯಾತಿ ಜಾಜಲೇ ।
ಇದಂ ತು ದೈವತಂ ಕೃತ್ವಾ ಯಥಾ ಯಜ್ಞಮವಾಪ್ನುಯಾತ್ ॥೩೬॥

ಜಾಜಲಿಯೇ! ಅಧ್ಯಯನ-ಅಧ್ಯಾಪನಗಳನ್ನು ಮಾಡದೆ, ಯಜ್ಞ ಮಾಡದೆ, ಬ್ರಾಹ್ಮಣರಿಗೆ ದಾನವನ್ನು ಕೊಡದೆ, ವರ್ಣೋಚಿತವಾದ ಯಾವ ಕರ್ಮಗಳನ್ನೂ ಮಾಡದೆ ಕೇವಲ ಕಾಮ್ಯವೃತ್ತಿಯಲ್ಲಿಯೇ ಇರಬೇಕೆಂದು ಆಶಿಸುವವನು ಯಾವ ಸದ್ಗತಿಯನ್ನು ತಾನೇ ಹೊಂದಬಲ್ಲನು? ಆದರೆ ಎಲ್ಲ ಕರ್ಮಗಳನ್ನೂ ನಿಷ್ಕಾಮಭಾವನೆಯಿಂದ ಪರಮಾತ್ಮನ ಪ್ರೀತ್ಯರ್ಥವಾಗಿ ಮಾಡುವವನು ಯಜ್ಞದ ಯಥಾವತ್ತಾದ ಫಲವನ್ನು (ಮೋಕ್ಷಫಲವನ್ನು) ಹೊಂದುತ್ತಾನೆ.”

ಜಾಜಲಿಯು ಹೇಳುತ್ತಾನೆ :

ನ ವೈ ಮುನೀನಾಂ ಶೃಣುಮಃ ಸ್ಮ ತತ್ತ್ವಂ
ಪೃಚ್ಛಾಮಿ ತೇ ವಾಣಿಜ ಕಷ್ಟಮೇತತ್ ।
ಪೂರ್ವೇ ಪೂರ್ವೇ ಚಾಸ್ಯ ನಾವೇಕ್ಷಮಾಣಾ
ನಾತಃ ಪರಂ ತಮೃಷಯಃ ಸ್ಥಾಪಯನ್ತಿ ॥೩೭॥

“ವಣಿಕ್ಶ್ರೇಷ್ಠನೇ! ನಾನು ಆತ್ಮವಿದರಾದ ಮುನಿಗಳ ಮಾನಸಿಕಯಜ್ಞದ ತತ್ತ್ವಗಳನ್ನು ಕೇಳುತ್ತಿಲ್ಲ. ಮೇಲಾಗಿ ಆ ತತ್ತ್ವಗಳು ಗ್ರಹಿಸುವುದಕ್ಕೂ ಬಹಳ ಕಠಿಣವಾಗಿಯೇ ಇವೆ. ಹಿಂದಿನ ಕಾಲದ ಋಷಿಗಳು ಈ ವಿಷಯದಲ್ಲಿ ಹೆಚ್ಚು ವಿಚಾರಮಾಡಿರುವುದಿಲ್ಲ. ಒಂದು ವೇಳೆ ವಿಚಾರಮಾಡಿ ಸಿದ್ಧಿಯನ್ನು ಪಡೆದುಕೊಂಡಿದ್ದರೂ ಈ ಪರತತ್ತ್ವವನ್ನು ಜಗತ್ತಿನಲ್ಲಿ ಸ್ಥಾಪಿಸಲಿಲ್ಲ. ಈ ಕಾರಣಗಳಿಂದ ಈ ಪರತತ್ತ್ವದ ವಿಷಯವಾಗಿ ನಾನು ನಿನ್ನನ್ನೇ ಕೇಳುತ್ತಿದ್ದೇನೆ.

ಯಸ್ಮಿನ್ನೇವಾತ್ಮತೀರ್ಥೇ ನ ಪಶವಃ ಪ್ರಾಪ್ನುಯುರ್ಮಖಮ್ ।
ಅಥ ಸ್ಮ ಕರ್ಮಣಾ ಕೇನ ವಾಣಿಜ ಪ್ರಾಪ್ನುಯಾತ್ಸುಖಮ್ ।
ಶಂಸ ಮೇ ತನ್ಮಹಾಪ್ರಾಜ್ಞ ಭೃಶಂ ವೈ ಶ್ರದ್ದಧಾಮಿ ತೇ ॥೩೮॥

ನೀನು ಹೇಳಿದಂತೆ ಪಶುಸಮಾನರಾದ ಅಜ್ಞಾನಿಗಳಾದ ಮನುಷ್ಯರು ದೇಹವೆಂಬ ಪುಣ್ಯಭೂಮಿಯಲ್ಲಿ ಆತ್ಮಯಜ್ಞವನ್ನು ಮಾಡಲಾರರು. ಅಂತಹ

ವರು ಯಾವ ಇತರ ಕರ್ಮಗಳಿಂದ ಮೋಕ್ಷಸುಖವನ್ನು ಹೊಂದುತ್ತಾರೆ? ಮಹಾಪ್ರಾಜ್ಞನೇ! ವಣಿಜನೇ! ಈ ವಿಷಯವನ್ನು ನನಗೆ ಹೇಳು. ನನಗೆ ನಿನ್ನ ವಿಷಯದಲ್ಲಿ ಅಧಿಕವಾದ ಶ್ರದ್ಧೆಯುಂಟಾಗಿದೆ."

ತುಲಾಧಾರನು ಹೇಳುತ್ತಾನೆ :

ಉತ ಯಜ್ಞಾ ಉತಾಯಜ್ಞಾ ಮಖಂ ನಾರ್ಹನ್ತಿ ತೇ ಕ್ವಚಿತ್ ।
ಆಜ್ಯೇನ ಪಯಸಾ ದಧ್ನಾ ಪೂರ್ಣಾಹುತ್ಯಾ ವಿಶೇಷತಃ ।
ವಾಲೈಃ ಶೃಙ್ಗೇಣ ಪಾದೇನ ಸಮ್ಭವತ್ಯೇವ ಗೌರ್ಮಖಮ್ ॥೩೯॥

"ದಾಂಭಿಕರಾದ ಕೆಲವರು ಮಾಡುವ ಯಜ್ಞವು ಅಶ್ರದ್ಧೆಯೇ ಮೊದಲಾದ ದೋಷಗಳಿಂದ ಕೂಡಿರುವುದರಿಂದ–'ಯಜ್ಞ'–ಎಂದು ಎನಿಸಿಕೊಳ್ಳುವುದೇ ಇಲ್ಲ. ಅಂತಹವರು ಮಾನಸಿಕವಾದ ಯಜ್ಞವನ್ನು ಮಾಡಲೂ ಯೋಗ್ಯರಾಗಿರುವುದಿಲ್ಲ. ಕ್ರಿಯಾತ್ಮಕವಾದ ಯಜ್ಞವನ್ನು ಮಾಡಲೂ ಯೋಗ್ಯರಾಗಿರುವುದಿಲ್ಲ. ಶ್ರದ್ಧಾಳುವಾದವನು ತುಪ್ಪ, ಹಾಲು, ಮೊಸರು, ಅದರಲ್ಲಿಯೂ ವಿಶೇಷವಾಗಿ ಪೂರ್ಣಾಹುತಿ–ಇವುಗಳಿಂದಲೇ ತನ್ನ ಯಜ್ಞವನ್ನು ಪೂರ್ಣಮಾಡುತ್ತಾನೆ. ಇಷ್ಟು ಮಾಡುವುದಕ್ಕೂ ಅಶಕ್ತನಾದವನು ಗೋಪುಚ್ಛದಿಂದ ಪಿತೃತರ್ಪಣಾದಿಗಳನ್ನೂ, ಗೋಶೃಂಗ ದಿಂದ ದೇವತಾಭಿಷೇಕವನ್ನೂ ಮಾಡಿ, ಹಸುವಿನ ಕಾಲಿನ ಧೂಳಿಯನ್ನು ತಲೆಯಲ್ಲಿ ಧರಿಸಿ ಗೋವನ್ನು ಸ್ಪರ್ಶಿಸಿ ಯಜ್ಞವನ್ನು ಪೂರ್ಣಗೊಳಿಸುತ್ತಾನೆ.

ಪತ್ನೀಂ ಚಾನೇನ ವಿಧಿನಾ ಪ್ರಕರೋತಿ ನಿಯೋಜಯನ್ ।
ಇಷ್ಟಂ ತು ದೈವತಂ ಕೃತ್ವಾ ಯಥಾ ಯಜ್ಞಮವಾಪ್ನುಯಾತ್ ॥೪೦॥

ಹಿಂಸಾಯಜ್ಞವನ್ನು ಮಾಡದೆ ಆಜ್ಯಾದಿಗಳ ಮೂಲಕವಾಗಿ ಯಜ್ಞ ಮಾಡುವ ವಿಧಾನದಲ್ಲಿಯೇ ಶ್ರದ್ಧಾರೂಪಳಾದ ಪತ್ನಿಯನ್ನೂ ಮಾನಸಿಕವಾಗಿ ಮಾಡಿಕೊಳ್ಳಬೇಕು. ಯಾಗವನ್ನೇ ದೇವತೆಯನ್ನಾಗಿ ಭಾವಿಸಿ ಶ್ರದ್ಧೆಯಿಂದ ದೇವತಾರಾಧನೆಯನ್ನು ಮಾಡಿ ಯಜ್ಞಸ್ವರೂಪನಾದ ಪರಮಾತ್ಮನನ್ನು ಹೊಂದಬೇಕು.

ಪುರೋಡಾಶೋ ಹಿ ಸರ್ವೇಷಾಂ ಪಶೂನಾಂ ಮೇಧ್ಯ ಉಚ್ಯತೇ ।
ಸರ್ವಾ ನದ್ಯಃ ಸರಸ್ವತ್ಯಃ ಸರ್ವೇ ಪುಣ್ಯಾಃ ಶಿಲೋಚ್ಚಯಾಃ ॥೪೨॥

ಎಲ್ಲ ನದಿಗಳೂ ಸರಸ್ವತೀನದಿಯ ರೂಪಗಳೇ ಆಗಿವೆ. ಎಲ್ಲ ಪರ್ವತಗಳೂ ಪುಣ್ಯತಮಪ್ರದೇಶಗಳೇ ಆಗಿವೆ. ಅದೇ ರೀತಿಯಲ್ಲಿ ಯಜ್ಞಕ್ಕೆ ಸಕಲಪಶುಗಳಿಗಿಂತಲೂ* ಪುರೋಡಾಶವೇ ಪವಿತ್ರವಾದ ಹವಿಸ್ಸೆಂದು ಹೇಳಲ್ಪಟ್ಟಿದೆ.

ಜಾಜಲೇ ತೀರ್ಥಮಾತ್ಮೈವ ಮಾ ಸ್ಮ ದೇಶಾತಿಥಿರ್ಭವ ।
ಏತಾನೀದೃಶಜಾನ್ಧರ್ಮಾನಾಚರನ್ನಿಹ ಜಾಜಲೇ ।
ಕಾರಣೈರ್ಧರ್ಮಮನ್ವಿಚ್ಛನ್ಸ ಲೋಕಾನಾಪ್ನುತೇ ಶುಭಾನ್ ॥೪೩॥

ಜಾಜಲಿಯೇ! ಈ ಶರೀರವೇ ಒಂದು ಪುಣ್ಯಕ್ಷೇತ್ರವಾಗಿದೆ. ತೀರ್ಥಯಾತ್ರೆಯ ಸಲುವಾಗಿ ನೀನು ಅತಿಥಿಯಾಗಿ ದೇಶಾಟನೆಯನ್ನು ಮಾಡಬೇಕಾಗಿಲ್ಲ. ಯಾರು ನಾನು ಹೇಳಿರುವ ಅಹಿಂಸಾಪ್ರಧಾನವಾದ ಧರ್ಮವನ್ನು ಆಚರಿಸುವರೋ – ಅಂತಹವರು ಸಾಧಾರಣವಾದ ಅಥವಾ ಸುಲಭವಾದ ಸಲಕರಣೆಗಳಿಂದಲೇ ಧರ್ಮಾಚರಣೆಯನ್ನು ಮಾಡುತ್ತಾ ಶುಭಪ್ರದವಾದ ಲೋಕಗಳನ್ನು ಹೊಂದುತ್ತಾರೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಹೀಗೆ ಹಿಂಸಾರಹಿತವಾದ ಯುಕ್ತಿಯುಕ್ತವಾದ ಮತ್ತು ಶ್ರೇಷ್ಠಪುರುಷರಿಂದ ಆಚರಿಸಲ್ಪಡುವ ಧರ್ಮವನ್ನೇ ವೈಶ್ಯನಾದ ತುಲಾಧಾರನು ಸದಾ ಪ್ರಶಂಸೆಮಾಡುತ್ತಿದ್ದನು.”

೨೬೩ನೆಯ ಅಧ್ಯಾಯವು ಮುಗಿಯಿತು.

೨೬೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜಾಜಲಿಗೆ ಪಕ್ಷಿಗಳ ಉಪದೇಶ

ಧರ್ಮಜ! ತುಲಾಧಾರನು ಮುಂದುವರಿಸಿ ಹೇಳುತ್ತಾನೆ :

“ಜಾಜಲಿಯೇ! ನಾನು ಯಾವ ಈ ಧರ್ಮಮಾರ್ಗವನ್ನು ನಿರೂಪಿಸಿರುವೆನೋ–ಅದನ್ನು ಸತ್ಪುರುಷರು ಅನುಸರಿಸುವರೇ ಅಥವಾ ಅಸತ್ಪುರುಷರು ಅನುಸರಿಸುವರೇ?–ಎಂಬುದನ್ನು ಚೆನ್ನಾಗಿ ಸಮಾಲೋಚಿಸಿ

* ಪುರೋಡಾಶ = ಅಕ್ಕಿಹಿಟ್ಟಿನಿಂದ ಮಾಡಿ ಕಪಾಲಗಳಲ್ಲಿ (ಮಣ್ಣಿನ ಮಡಕೆಗಳಲ್ಲಿ) ಬೇಯಿಸಿದ ಪದಾರ್ಥ–ರೊಟ್ಟಿ.

ನೋಡು. ಅನಂತರ ನಿನಗೆ ಈ ಮಾರ್ಗದ ಯಥಾರ್ಥಜ್ಞಾನವಾಗುತ್ತದೆ. ಅಲ್ಲಿ ನೋಡು ಆಕಾಶದಲ್ಲಿ ಗಿಡಗವೇ ಮೊದಲಾದ ಅನೇಕಜಾತಿಯ ಪಕ್ಷಿಗಳು ಸುತ್ತಲೂ ಹಾರಾಡುತ್ತಿವೆ. ಅವುಗಳಲ್ಲಿ ನಿನ್ನ ತಲೆಯಲ್ಲಿಯೇ ಹುಟ್ಟಿ ಬೆಳೆದ ಪಕ್ಷಿಗಳೂ ಇವೆ. ಮಹಾಬ್ರಾಹ್ಮಣನೇ! ಅಲ್ಲಲ್ಲಿ ಹೋಗಿ ಸೇರಿಕೊಳ್ಳುತ್ತಿರುವ ಆ ಪಕ್ಷಿಗಳನ್ನು ನೀನು ಆಹ್ವಾನಿಸು. ಕಾಲುಗಳನ್ನು ದೇಹಗಳಲ್ಲಿ ಅಡಗಿಸಿಕೊಂಡು ಹಾರಾಡುತ್ತಿರುವ ಅವುಗಳನ್ನು ನೋಡು. ನಿನ್ನಿಂದ ಪರಿಪಾಲಿಸಲ್ಪಟ್ಟಿರುವ ಆ ಪಕ್ಷಿಗಳು ನಿನ್ನನ್ನು ತಂದೆಯೆಂದೇ ಭಾವಿಸಿವೆ. ನೀನು ಆ ಪಕ್ಷಿಗಳ ತಂದೆ ಎಂಬುದರಲ್ಲಿ ಸಂಶಯವೇ ಇಲ್ಲ. ಆದುದರಿಂದ ನಿನ್ನ ಆ ಪುತ್ರರನ್ನು ಕರೆದು ಪ್ರಶ್ನಿಸು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಬಳಿಕ ಜಾಜಲಿಯು ಆ ಪಕ್ಷಿಗಳನ್ನು ಆಹ್ವಾನಿಸಿದನು. ಅವನ ಧರ್ಮಯುಕ್ತವಾದ ಮಾತನ್ನು ಕೇಳಿ ಆ ಪಕ್ಷಿಗಳೂ ಅಲ್ಲಿಗೆ ಬಂದುವು ಮತ್ತು ಅವು ಮನುಷ್ಯರಂತೆಯೇ ಸ್ಪಷ್ಟವಾಗಿ ಮಾತುಗಳನ್ನು ಉಚ್ಚರಿಸುತ್ತಿದ್ದುವು. ಅವು ಜಾಜಲಿಯನ್ನು ಕುರಿತು ಹೀಗೆ ಹೇಳಿದುವು :

ಅಹಿಂಸಾದಿಕೃತಂ ಕರ್ಮ ಇಹ ಚೈವ ಪರತ್ರ ಚ ।
ಶ್ರದ್ಧಾಂ ನಿಹನ್ತಿ ವೈ ಬ್ರಹ್ಮನ್ಸಾ ಹತಾ ಹನ್ತಿ ತಂ ನರಮ್ ॥೬॥

"ಅಹಿಂಸೆ ಮತ್ತು ದಯೆ ಇತ್ಯಾದಿ ಗುಣಗಳಿಂದ ಪ್ರೇರಿತವಾಗಿ ಮಾಡಿದ ಕರ್ಮವು ಇಹಲೋಕ-ಪರಲೋಕಗಳೆರಡರಲ್ಲಿಯೂ ಉತ್ತಮವಾದ ಫಲವನ್ನು ಕೊಡುತ್ತದೆ. ಮನಸ್ಸಿನಲ್ಲಿ ಹಿಂಸೆಯ ಭಾವನೆಯೇನಾದರೂ ಇದ್ದುದಾದರೆ ಆ ಭಾವನೆಯೇ ಶ್ರದ್ಧೆಯನ್ನು ನಾಶಗೊಳಿಸುತ್ತದೆ ಮತ್ತು ನಷ್ಟವಾಗುವ ಶ್ರದ್ಧೆಯು ಕರ್ಮಮಾಡಿದ ಮನುಷ್ಯನನ್ನೂ ನಾಶಪಡಿಸುತ್ತದೆ.

ಸಮಾನಾಂ ಶ್ರದ್ದಧಾನಾನಾಂ ಸಂಯತಾನಾಂ ಸುಚೇತಸಾಮ್ ।
ಕುರ್ವತಾಂ ಯಜ್ಞ ಇತ್ಯೇವ ನ ಯಜ್ಞೋ ಜಾತು ನೇಷ್ಯತೇ ॥೭॥

ಯಾರಿಗೆ ಲಾಭಾಲಾಭಗಳು ಸಮಾನವಾಗಿರುವುವೋ, ಯಾರು ಶ್ರದ್ಧಾಳುಗಳಾಗಿರುವರೋ, ಜಿತೇಂದ್ರಿಯರಾಗಿರುವರೋ, ಶುದ್ಧಚಿತ್ತರಾಗಿ

ರುವರೋ, ಯಾಗವನ್ನು ಕರ್ತವ್ಯದೃಷ್ಟಿಯಿಂದ ಮಾಡುವರೋ–ಅಂತಹವರು ಮಾಡುವ ಯಜ್ಞವು ಯಾವುದೇ ಕಾರಣದಿಂದಲೂ ನಿಷ್ಫಲವಾಗುವುದಿಲ್ಲ.

ಶ್ರದ್ಧಾ ವೈವಸ್ವತೀ ಸೇಯಂ ಸೂರ್ಯಸ್ಯ ದುಹಿತಾ ದ್ವಿಜ ।
ಸಾವಿತ್ರೀ ಪ್ರಸವಿತ್ರೀ ಚ ಬಹಿರ್ವಾಙ್ಮನಸೀ ತತಃ ॥೮॥

ಬ್ರಾಹ್ಮಣೋತ್ತಮನೇ! ಶ್ರದ್ಧೆಯು ಸೂರ್ಯನ ಮಗಳು.; ಆದುದರಿಂದಲೇ ಅವಳ ಹೆಸರು ವೈವಸ್ವತೀ. ಅವಳನ್ನು ಸಾವಿತ್ರೀ, ಪ್ರಸವಿತ್ರೀ (ವಿಶುದ್ಧವಾದ ಜನ್ಮವನ್ನು ಕೊಡುವವಳು)–ಎಂದೂ ಕರೆಯುತ್ತಾರೆ. ವಾಕ್ಕು ಮತ್ತು ಮನಸ್ಸುಗಳು ಶ್ರದ್ಧೆಗಿಂತಲೂ ಬಹಿರಂಗಗಳು. ನಿಶ್ಚಯಾತ್ಮಕವಾದುದು ಶ್ರದ್ಧೆ. ಸಂಕಲ್ಪಾತ್ಮಕವಾದುದೂ ಸಂಶಯಾತ್ಮಕವಾದುದೂ ಮನಸ್ಸು. ಆದುದರಿಂದ ಮನಸ್ಸು ಶ್ರದ್ಧೆಗಿಂತಲೂ ಬಹಿರಂಗವಾದುದು. ಅದಕ್ಕಿಂತಲೂ ಬಾಹ್ಯತರವಾದುದು ವಾಣಿ. ಅರ್ಥಾತ್ ಜಪ ಧ್ಯಾನ ಧರ್ಮಾಪೇಕ್ಷೆಗಳಲ್ಲಿ ಶ್ರದ್ಧೆಯೇ ಶ್ರೇಷ್ಠವಾದುದು.

ವಾಗ್ವೃದ್ಧಂ ತ್ರಾಯತೇ ಶ್ರದ್ಧಾ ಮನೋವೃದ್ಧಂ ಚ ಭಾರತ ।
ಶ್ರದ್ಧಾವೃದ್ಧಂ ವಾಙ್ಮನಸೀ ನ ಕರ್ಮ ತ್ರಾತುಮರ್ಹತಿ ॥೯॥

ಮಂತ್ರಗಳನ್ನು ಹೇಳುವಾಗ ವರ್ಣಗಳ ಉಚ್ಚಾರಣೆಯಲ್ಲಿ ಅಥವಾ ಸ್ವರದಲ್ಲಿ ವ್ಯತ್ಯಾಸವಾದರೂ, ಮನಸ್ಸಿನಲ್ಲಿ ಅಸ್ಥಿರತೆಯಿದ್ದರೂ–ಶ್ರದ್ಧಾಪೂರ್ವಕವಾಗಿ ಕರ್ಮಮಾಡಿದರೆ ಸ್ಖಾಲಿತ್ಯದೋಷವನ್ನು ಶ್ರದ್ಧೆಯು ನಿವಾರಿಸುತ್ತದೆ. ಆದರೆ ಮಂತ್ರಗಳನ್ನು ಸ್ವರಸಹಿತವಾಗಿ ಹೇಳಿದರೂ ಮನಸ್ಸನ್ನು ಸಂಯಮದಲ್ಲಿಯೇ ಇಟ್ಟುಕೊಂಡರೂ–ಶ್ರದ್ಧೆಯಿಲ್ಲದೇ ಮಾಡಿದ ಕರ್ಮವು ಕರ್ತೃವನ್ನು ರಕ್ಷಿಸುವುದಿಲ್ಲ.

ಈ ವಿಷಯದಲ್ಲಿ ಹಿಂದಿನ ಚರಿತ್ರೆಯನ್ನು ತಿಳಿದವರು ಬ್ರಹ್ಮನ ಗೀತೆಗಳಿಂದ ಕೂಡಿದ ಹಾಡುಗಳನ್ನು ಕೀರ್ತನೆಮಾಡುತ್ತಾರೆ.

ಶುಚೇರಶ್ರದ್ದಧಾನಸ್ಯ ಶ್ರದ್ದಧಾನಸ್ಯ ಚಾಶುಚೇಃ ।
ದೇವಾ ವಿತ್ತಮಮನ್ಯಂತ ಸದೃಶಂ ಯಜ್ಞಕರ್ಮಣಿ ॥೧೦॥

ಶ್ರೋತ್ರಿಯಸ್ಯ ಕದರ್ಯಸ್ಯ ವದಾನ್ಯಸ್ಯ ಚ ವಾರ್ಧುಷೇಃ ।
ಮೀಮಾಂಸಿತ್ವೋಭಯಂ ದೇವಾಃ ಸಮಮನ್ನಮಕಲ್ಪಯನ್ ॥೧೧॥

"ಯಜ್ಞಕರ್ಮಗಳಲ್ಲಿ ಬಳಸುವ ದ್ರವ್ಯಗಳ ವಿಷಯವಾಗಿ ದೇವತೆಗಳು–

ಶುಚಿಯಾಗಿದ್ದರೂ ಶ್ರದ್ಧೆಯಿಲ್ಲದವನ ದ್ರವ್ಯವನ್ನೂ, ಅಶುಚಿಯಾಗಿದ್ದರೂ ಶ್ರದ್ಧೆಯಿಂದ ಕೊಡಿರುವವನ ದ್ರವ್ಯವನ್ನೂ ಸಮವಾಗಿ ಭಾವಿಸಿದರು. ಅದೇ ರೀತಿಯಲ್ಲಿ ಕೃಪಣನಾದ ಶ್ರೋತ್ರಿಯನ ಅನ್ನವನ್ನೂ, ಉದಾರಿಯಾದ ಬಡ್ಡಿಯ ಹಣದಿಂದ ಜೀವಿಸುವವನ ಅನ್ನವನ್ನೂ ದೇವತೆಗಳು ಚೆನ್ನಾಗಿ ಪರ್ಯಾಲೋಚಿಸಿ ಸಮಾನವೆಂದು ನಿಶ್ಚಯಿಸಿದರು.

ಪ್ರಜಾಪತಿಸ್ತಾನುವಾಚ ವಿಷಮಂ ಕೃತಮಿತ್ಯುತ ।
ಶ್ರದ್ಧಾಪೂತಂ ವದಾನ್ಯಸ್ಯ ಹತಮಶ್ರದ್ಧಯೇತರತ್ ॥೧೨॥

ಭೋಜ್ಯಮನ್ನಂ ವದಾನ್ಯಸ್ಯ ಕದರ್ಯಸ್ಯ ನ ವಾರ್ಧುಷೇಃ ।
ಅಶ್ರದ್ದಧಾನ ಏವೈಕೋ ದೇವಾನಾಂ ನಾರ್ಹತೇ ಹವಿಃ ।
ತಸ್ಯೈವಾನ್ನಂ ನ ಭೋಕ್ತವ್ಯಮಿತಿ ಧರ್ಮವಿದೋ ವಿದುಃ ॥೧೪॥

ಆದರೆ ದೇವತೆಗಳ ಅಭಿಪ್ರಾಯವು ಬ್ರಹ್ಮನಿಗೆ ಸರಿ ಎನಿಸಲಿಲ್ಲ. ಅಂತೆಯೇ ಪ್ರಜಾಪತಿಯು ದೇವತೆಗಳನ್ನು ಕುರಿತು ಹೇಳಿದನು :

"ದೇವತೆಗಳೇ! ನೀವು ಕಲ್ಪಿಸಿರುವ ಸಮಾನತೆಯು ಸರಿಯಲ್ಲ. ಉದಾರಿಯಾದವನು ಅಶುಚಿಯಾಗಿದ್ದರೂ ಶ್ರದ್ಧಾಪೂರ್ವಕವಾಗಿ ಕೊಡುವ ಅನ್ನವೇ ಪವಿತ್ರವಾದುದು. ಉದಾರಿಯಾದವನು ಶುಚಿಯಾಗಿದ್ದರೂ ಶ್ರದ್ಧಾಪೂರ್ವಕವಾಗಿ ಕೊಡದಿದ್ದರೆ ಅದು ಅಪವಿತ್ರವಾಗುತ್ತದೆ ಮತ್ತು ಅಂತಹ ದಾನವು ನಷ್ಟಪ್ರಾಯವೇ ಆಗುತ್ತದೆ.

ಕೃಪಣನಾದ ಶ್ರೋತ್ರಿಯನ ಅನ್ನವನ್ನು ತಿನ್ನಬಾರದು. ಉದಾರಿಯಾದ ವಾರ್ಧುಷಿಯ (ಬಡ್ಡಿಹಣದಿಂದ ಜೀವಿಸುವವನ) ಅನ್ನವನ್ನು ತಿನ್ನಬಹುದು. ಅಶ್ರದ್ಧೆಯಿಂದ ಕೊಡಿರುವ ಯಾವನೊಬ್ಬನೂ ದೇವತೆಗಳಿಗೆ ಹವಿಸ್ಸನ್ನು ಅರ್ಪಿಸಲು ಅರ್ಹನಲ್ಲ. ಅಂತಹ ಅಶ್ರದ್ಧೆಯಿಂದ ಕೂಡಿರುವವನ ಅನ್ನವನ್ನು ತಿನ್ನಲೇಬಾರದೆಂದು ಧರ್ಮವನ್ನು ತಿಳಿದವರು ಹೇಳುತ್ತಾರೆ.'

ಅಶ್ರದ್ಧಾ ಪರಮಂ ಪಾಪಂ ಶ್ರದ್ಧಾ ಪಾಪಪ್ರಮೋಚಿನೀ ।
ಜಹಾತಿ ಪಾಪಂ ಶ್ರದ್ಧಾವಾನ್ಸರ್ಪೋ ಜೀರ್ಣಾಮಿವ ತ್ವಚಮ್ ॥

ಅಶ್ರದ್ಧೆಯೆಂಬುದು ಪರಮಪಾಪವನ್ನುಂಟುಮಾಡತಕ್ಕುದು. ಶ್ರದ್ಧೆಯು

ಪಾಪವನ್ನು ಹೋಗಲಾಡಿಸತಕ್ಕುದು. ಸರ್ಪವು ತನ್ನಲ್ಲಿರುವ ಜೀರ್ಣವಾದ ಪೊರೆಯನ್ನು ಕಳಚಿಹಾಕುವಂತೆ–ಶ್ರದ್ಧಾವಂತನು ಪಾಪವನ್ನು ತ್ಯಾಗಮಾಡುತ್ತಾನೆ.

ಜ್ಯಾಯಸೀ ಯಾ ಪವಿತ್ರಾಣಾಂ ನಿವೃತ್ತಿಃ ಶ್ರದ್ಧಯಾ ಸಹ ।
ನಿವೃತ್ತಶೀಲದೋಷೋ ಯಃ ಶ್ರದ್ಧಾವಾನ್ಪೂತ ಏವ ಸಃ ॥೧೬॥

ಶ್ರದ್ಧೆಯ ಜೊತೆಗೆ ಕಾಮ-ಕ್ರೋಧಾದಿಗಳಿಂದಲೂ ನಿವೃತ್ತಿಹೊಂದುವುದು ಪವಿತ್ರಕಾರ್ಯಗಳೆಲ್ಲಕ್ಕೂ ಹಿರಿದಾದುದು. ಇದಕ್ಕಿಂತಲೂ ಪವಿತ್ರವಾದ ಕಾರ್ಯವೇ ಬೇರೊಂದಿಲ್ಲ. ಶ್ರದ್ಧಾವಂತನಾದ ಯಾವ ಪುರುಷನು ಸೌಶೀಲ್ಯಕ್ಕೆ ದೋಷಪ್ರಾಯವಾದ ಕಾಮ-ಕ್ರೋಧಗಳಿಂದ ನಿವೃತ್ತಿಹೊಂದುವನೋ–ಅಂತಹವನು ಪರಮಪವಿತ್ರನೇ ಸರಿ.

ಕಿಂ ತಸ್ಯ ತಪಸಾ ಕಾರ್ಯಂ ಕಿಂ ವೃತ್ತೇನ ಕಿಮಾತ್ಮನಾ ।
ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ ॥೧೭॥

ಶ್ರದ್ಧಾವಂತನಾದವನಿಗೆ ತಪಸ್ಸಿನಿಂದ ಆಗಬೇಕಾದುದೇನಿದೆ? ಆಚಾರ-ವ್ಯವಹಾರಗಳಿಂದಾಗಲೀ, ಆತ್ಮಚಿಂತನೆಯಿಂದಾಗಲೀ ಆಗಬೇಕಾದುದೇನಿದೆ? (ಶ್ರದ್ಧೆಯೇ ಅವನಿಗೆ ಸಕಲಸರ್ವಸ್ವವನ್ನೂ ಸಿದ್ಧಮಾಡಿಕೊಡುತ್ತದೆ. ಶ್ರದ್ಧೆಯಿಲ್ಲದೇ ಮಾಡುವ ತಪಸ್ಸಿನಿಂದಾಗಲೀ, ಆಚಾರ-ವ್ಯವಹಾರಗಳಿಂದಾಗಲೀ, ಆತ್ಮಚಿಂತನೆಯಿಂದಾಗಲೀ ಯಾವ ಪ್ರಯೋಜನವೂ ಇಲ್ಲ.) ಅಂತಹ ಪುರುಷನು (ಶ್ರದ್ಧಾಮಯನು) ಯಾವುದರ ಮೇಲೆ ಶ್ರದ್ಧೆಯಿಡುವನೋ ಅವನು ಅದೇ ಆಗಿಬಿಡುತ್ತಾನೆ. (ಶ್ರದ್ಧಾಮಯೋಽಯಂ ಪುರುಷಃ ಯೋ ಯಚ್ಛ್ರದ್ಧಃ ಸ ಏವ ಸಃ ॥ ಶ್ರೀಗೀತೆ ಅ. ೧೭–ಶ್ಲೋ. ೩) ಸಾತ್ತ್ವಿಕವಾದ ಕರ್ಮಗಳಲ್ಲಿ ಶ್ರದ್ಧೆಯುಳ್ಳವನಾದರೆ ಸಾತ್ತ್ವಿಕನೇ ಆಗುತ್ತಾನೆ. ರಾಜಸಿಕವಾದ ಕರ್ಮಗಳಲ್ಲಿ ಶ್ರದ್ಧೆಯುಳ್ಳವನಾದರೆ ರಾಜಸನೇ ಆಗುತ್ತಾನೆ. ಅಂತೆಯೇ ತಾಮಸಿಕವಾದ ಕರ್ಮಗಳಲ್ಲಿ ಶ್ರದ್ಧೆಯುಳ್ಳವನಾದರೆ ತಾಮಸನೇ ಆಗುತ್ತಾನೆ. ಆತ್ಮಾನುಸಂಧಾನದಲ್ಲಿ ಶ್ರದ್ಧೆಯುಳ್ಳವನಾದರೆ ಆತ್ಮರೂಪನೇ ಆಗುತ್ತಾನೆ.) ಧರ್ಮಾರ್ಥಗಳನ್ನು ಸಾಕ್ಷಾತ್ಕರಿಸಿಕೊಂಡಿರುವ (ಕರತಲಾಮಲಕವಾಗಿ ತಿಳಿದುಕೊಂಡಿರುವ)

ಸತ್ಪುರುಷರು ಧರ್ಮವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ. ನಾವೂ ಈ ಧರ್ಮದ ವಿಷಯವಾಗಿ ಜಿಜ್ಞಾಸೆಮಾಡುತ್ತಿದ್ದಾಗ ಶ್ರದ್ಧೆಯ ಸಂಬಂಧವಾದ ಈ ಧರ್ಮವು ಧರ್ಮದರ್ಶನನೆಂಬ ಮುನಿಯಿಂದ ನಮಗೆ ತಿಳಿಯಿತು.

ಮಹಾಪ್ರಾಜ್ಞನೇ! ಜಾಜಲಿಯೇ! ನಾವು ಹೇಳಿರುವ ಈ ಮಾತಿನ ಮೇಲೆ ಶ್ರದ್ಧೆಯಿಡು. ನಾವು ಹೇಳಿದ ರೀತಿಯಲ್ಲಿ ಶ್ರದ್ಧಾವಂತನಾಗಿ ಕರ್ಮಾಚರಣೆಮಾಡುವುದರಿಂದ ಪರಮಗತಿಯನ್ನು ಹೊಂದುವೆ.

ಶ್ರದ್ಧಾವಾಞ್ಶ್ರದ್ದಧಾನಶ್ಚ ಧರ್ಮಶ್ಚೈವ ಹಿ ಜಾಜಲೇ ।
ಸ್ವವರ್ತ್ಮನಿ ಸ್ಥಿತಶ್ಚೈವ ಗರೀಯಾನೇವ ಜಾಜಲೇ ॥೧೯॥

ಜಾಜಲಿಯೇ! ಶ್ರದ್ಧಾವಂತನಾದ ಶ್ರದ್ಧಾಳುವು ಧರ್ಮದ ಸ್ವರೂಪನೇ ಆಗಿರುತ್ತಾನೆ. ಯಾವನು ಶ್ರದ್ಧಾಪೂರ್ವಕವಾಗಿ ಸ್ವಧರ್ಮದಲ್ಲಿಯೇ ಪ್ರತಿಷ್ಠಿತನಾಗಿರುವನೋ–ಅಂತಹವನು ಎಲ್ಲರಿಗಿಂತಲೂ ಶ್ರೇಷ್ಠನೆನಿಸಿ ಕೊಳ್ಳುತ್ತಾನೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಈ ಘಟನೆಯು ನಡೆದ ಸ್ವಲ್ಪ ದಿವಸಗಳಲ್ಲಿಯೇ ಮಹಾಪ್ರಾಜ್ಞರಾದ ತುಲಾಧಾರನೂ ಮತ್ತು ಜಾಜಲಿಯೂ ತಮ್ಮ ತಮ್ಮ ಶುಭಕರ್ಮಗಳಿಂದ ಜಯಿಸಲ್ಪಟ್ಟ ಶುಭಲೋಕಗಳನ್ನು ಹೊಂದಿದವರಾಗಿ ತಮ್ಮ ಸ್ಥಾನಗಳಲ್ಲಿ ಸುಖದಿಂದ ವಿಹರಿಸುತ್ತಿದ್ದರು.

ಹೀಗೆ ತುಲಾಧಾರನು ಬಹುವಿಧವಾದ ಪ್ರಯೋಜನವನ್ನುಂಟು ಮಾಡುವ ಮಾತುಗಳನ್ನು ಜಾಜಲಿಗೆ ಹೇಳಿದನು. ಸನಾತನಧರ್ಮವನ್ನು ಬೋಧಿಸಿದನು. ಆ ಬ್ರಾಹ್ಮಣನು ವಿಖ್ಯಾತನಾದ, ಪ್ರಭಾವಶಾಲಿಯಾದ ತುಲಾಧಾರನ ಮಾತುಗಳನ್ನು ಕೇಳಿ ಆ ಮಾತುಗಳಲ್ಲಡಗಿದ್ದ ತತ್ತ್ವಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡನು. ತುಲಾಧಾರನು ಜಾಜಲಿಗೆ ಮಾಡಿದ ಉಪದೇಶವು ಬಹುಜನಸಮ್ಮತವಾದ ಅರ್ಥದಿಂದ ಯುಕ್ತವಾಗಿದ್ದಿತು. ಅವನ ಉಪದೇಶವನ್ನು ಕೇಳಿದನಂತರ ಜಾಜಲಿಯು ಶಾಂತಿಯನ್ನು ಹೊಂದಿದನು. ತುಲಾಧಾರನು ಮಾಡಿದ ಉಪದೇಶವನ್ನು ನಾನು ನಿನಗೆ ದೃಷ್ಟಾಂತ

ರೂಪವಾಗಿ ಹೇಳಿದ್ದೇನೆ. ಧರ್ಮಜ! ಪುನಃ ನನ್ನಿಂದ ಬೇರೆ ಯಾವ ವಿಷಯವನ್ನು ಕೇಳಲು ಇಚ್ಛಿಸಿರುವೆ?"

೨೬೪ನೆಯ ಅಧ್ಯಾಯವು ಮುಗಿಯಿತು.

೨೬೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ವಿಚಖ್ನುರಾಜನಿಂದ ಅಹಿಂಸಾಧರ್ಮದ ಪ್ರಶಂಸೆ

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಪ್ರಾಣಿಗಳಲ್ಲಿ ದಯೆಯಿಡಬೇಕೆಂಬ ವಿಷಯದಲ್ಲಿ ವಿಚಖ್ನುರಾಜನು ಪ್ರಜೆಗಳ ಮೇಲಿನ ಅನುಕಂಪದಿಂದ ಹೇಳಿದ ಪುರಾತನ ವಾದ ಇತಿಹಾಸರೂಪವಾದ ಗೀತೆಯನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೂ ಹೇಳುತ್ತೇನೆ ; ಕೇಳು.

ಗವಾಲಂಭನಯಜ್ಞದ ಸಮಯದಲ್ಲಿ ಕತ್ತರಿಸಲ್ಪಟ್ಟ ಕುತ್ತಿಗೆಯುಳ್ಳ ಹೋರಿಯನ್ನು ನೋಡಿ ಯಜ್ಞಶಾಲೆಯಲ್ಲಿದ್ದ ಹಸುಗಳು ಬಹಳವಾಗಿ ವಿಲಪಿಸುತ್ತಿದ್ದುದನ್ನು ವಿಚಖ್ನುರಾಜನೊಮ್ಮೆ ನೋಡಿದನು. ಗವಾಲಂಭನವು ನಡೆಯುವುದರಲ್ಲಿದ್ದಾಗ (ಪ್ರಾಣಿಹಿಂಸೆಯು ನಡೆಯುವುದರಲ್ಲಿದ್ದಾಗ) 'ಸ್ವಸ್ತಿ **ಗೋಭ್ಯೋऽಸ್ತು ಲೋಕೇಷು** – ಲೋಕಗಳಲ್ಲಿರುವ ಗೋವುಗಳೆಲ್ಲಕ್ಕೂ ಮಂಗಳವಾಗಲಿ'–ಎಂಬ ಶುಭಾಶಿಷವನ್ನು ರಾಜನು ಕಲ್ಪಿಸಿದನು ಮತ್ತು ಸ್ವಸ್ತಿ **ಗೋಭ್ಯೋऽಸ್ತು ಲೋಕೇಷು** ಎಂದು ತಾನು ಹೇಳಿದುದಕ್ಕೆ ವಿವರಣೆಯನ್ನು ಕೊಟ್ಟನು.

ಅವ್ಯವಸ್ಥಿತಮರ್ಯಾದೈರ್ವಿಮೂಢೈರ್ನಾಸ್ತಿಕೈರ್ನರೈಃ ।
ಸಂಶಯಾತ್ಮಭಿರವ್ಯಕ್ತೈರ್ಹಿಂಸಾ ಸಮನುವರ್ಣಿತಾ ॥೪॥

"ಯಾರು ಧರ್ಮದ ಮರ್ಯಾದೆಯಿಂದ ಭ್ರಷ್ಟರಾಗಿರುವರೋ, ಮೂರ್ಖರೋ, ನಾಸ್ತಿಕರೋ, ಆತ್ಮನ ವಿಷಯದಲ್ಲಿ ಸಂದೇಹವುಳ್ಳವರೋ, ಅಪ್ರಸಿದ್ಧರೋ–ಅಂತಹವರು ಮಾತ್ರವೇ ಹಿಂಸೆಯನ್ನು ಸಮರ್ಥಿಸುತ್ತಾರೆ.

ಸರ್ವಕರ್ಮಸ್ವಹಿಂಸಾ ಹಿ ಧರ್ಮಾತ್ಮಾ ಮನುರಬ್ರವೀತ್ ।
ಕಾಮಕಾರಾದ್ವಿಹಿಂಸನ್ತಿ ಬಹಿರ್ವೇದ್ಯಾಂ ಪಶೂನ್ನರಾಃ ॥೫॥

ಧರ್ಮಾತ್ಮನಾದ ಮನುವು ಎಲ್ಲ ಕರ್ಮಗಳಲ್ಲಿಯೂ ಅಹಿಂಸೆಯನ್ನೇ ಪ್ರತಿಪಾದಿಸಿದ್ದಾನೆ. ಮನುಷ್ಯರು ತಮ್ಮ ಆಸೆಯನ್ನು ಪೂರೈಸಿಕೊಳ್ಳಲು ಬಹಿರ್ವೇದಿಯಲ್ಲಿ ಪಶುಗಳನ್ನು ಬಲಿಗೊಡುತ್ತಾರೆ.

ತಸ್ಮಾತ್ಪ್ರಮಾಣತಃ ಕಾರ್ಯೋ ಧರ್ಮಃ ಸೂಕ್ಷ್ಮೋ ವಿಜಾನತಾ ।
ಅಹಿಂಸಾ ಸರ್ವಭೂತೇಭ್ಯೋ ಧರ್ಮೇಭ್ಯೋ ಜ್ಯಾಯಸೀ ಮತಾ ॥

ಆದುದರಿಂದ ವಿದ್ವಾಂಸನಾದವನು ವೈದಿಕಪ್ರಮಾಣಗಳಿಂದ ಧರ್ಮ ಸೂಕ್ಷ್ಮವನ್ನು ನಿರ್ಣಯಿಸಬೇಕು. ಎಲ್ಲ ಪ್ರಾಣಿಗಳಿಗೂ ಎಲ್ಲ ಧರ್ಮಗಳಿಗಿಂತಲೂ ಅಹಿಂಸಾಧರ್ಮವೇ ಶ್ರೇಷ್ಠವಾದುದೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

ಉಪೋಷ್ಯ ಸಂಶಿತೋ ಭೂತ್ವಾ ಹಿತ್ವಾ ವೇದಕೃತಾಃ ಶ್ರುತೀಃ ।
ಆಚಾರ ಇತ್ಯನಾಚಾರಃ ಕೃಪಣಾಃ ಫಲಹೇತವಃ ॥೭॥

ಉಪವಾಸಮಾಡುತ್ತಾ ಕಠಿನವಾದ ವ್ರತಗಳನ್ನು ಪರಿಪಾಲಿಸಬೇಕು. ವೇದದಲ್ಲಿರುವ ಕಾಮ್ಯಫಲಗಳಿಗೆ ಸಂಬಂಧಿಸಿದ ಕರ್ಮಗಳನ್ನು ಪರಿತ್ಯಾಗ ಮಾಡಬೇಕು. ಸಕಾಮಕರ್ಮಗಳನ್ನು ಅನಾಚಾರಕರ್ಮಗಳೆಂದು ಭಾವಿಸಿ ಅವುಗಳಲ್ಲಿ ಪ್ರವೃತ್ತನಾಗಬಾರದು. ಕ್ಷುದ್ರರಾದವರು ಮಾತ್ರವೇ ಫಲೇಚ್ಛೆಯಿಂದ ಕರ್ಮಗಳನ್ನು ಮಾಡುತ್ತಾರೆ.

ಯದಿ ಯಜ್ಞಾಂಶ್ಚ ವೃಕ್ಷಾಂಶ್ಚ ಯೂಪಾಂಶ್ಚೋದ್ದಿಶ್ಯ ಮಾನವಾಃ ।
ವೃಥಾ ಮಾಂಸಂ ನ ಖಾದನ್ತಿ ನೈಷ ಧರ್ಮಃ ಪ್ರಶಸ್ಯತೇ ॥೮॥

'ಯಾವ ಮನುಷ್ಯನೂ ವೃಥಾ ವೃಕ್ಷಗಳನ್ನು ಕಡಿಯುವುದಿಲ್ಲ ; ಯಜ್ಞದ ಯೂಪಸ್ತಂಭಕ್ಕಾಗಿ ವೃಕ್ಷಗಳನ್ನು ಕಡಿಯುತ್ತಾನೆ. ಮಾಂಸವನ್ನು ತಿನ್ನುವುದಿಲ್ಲ. ಯಜ್ಞಾಂಗವಾಗಿ ಉಪಯೋಗಿಸಿದ ಪಶುವಿನ ಮಾಂಸವನ್ನು ಪ್ರಸಾದರೂಪವಾಗಿ ಭಕ್ಷಿಸುತ್ತಾನೆ'–ಎಂಬ ವಾದವೂ ಸಮೀಚೀನವಾಗಿ ಕಾಣುವುದಿಲ್ಲ. ಏಕೆಂದರೆ : ಇಂತಹ ಹಿಂಸಾಧರ್ಮವನ್ನು ಯಾರೂ ಪ್ರಶಂಸೆಮಾಡುವುದಿಲ್ಲ.

ಸುರಾ ಮತ್ಸ್ಯಾ ಮಧು ಮಾಂಸಮಾಸವಂ ಕೃಸರೌದನಮ್ ।
ಧೂರ್ತೈಃ ಪ್ರವರ್ತಿತಂ ಹ್ಯೇತನ್ನೈತದ್ವೇದೇಷು ಕಲ್ಪಿತಮ್ ॥೯॥

ಸುರೆ, ಮೀನು, ಜೇನುತುಪ್ಪ, ಮಾಂಸ, ಮದ್ಯ, ಎಳ್ಳನ್ನ–ಇವುಗಳೆಲ್ಲ ವನ್ನೂ ಧೂರ್ತರಾದವರು ಯಜ್ಞದ ಸಂಭಾರಗಳೆಂದು ಕಲ್ಪಿಸಿದ್ದಾರೆ. ಆದರೆ ವೇದಗಳಲ್ಲಿ ಇವುಗಳ ಉಪಯೋಗವಿಧಾನಗಳಿರುವುದಿಲ್ಲ.

ಮಾನಾನ್ಮೋಹಾಚ್ಚ ಲೋಭಾಚ್ಚ ಲೌಲ್ಯಮೇತತ್ಪ್ರಕಲ್ಪಿತಮ್ ।

ಆ ಧೂರ್ತರು ಅಭಿಮಾನ, ಲೋಭ-ಮೋಹಗಳಿಗೆ ವಶೀಭೂತರಾಗಿ ಲೋಲುಪತೆಗೋಸ್ಕರ (ಬಾಯಿಚಪಲವನ್ನು ತೀರಿಸಿಕೊಳ್ಳಲು) ಸುರಾ-ಮತ್ಸ್ಯ-ಮಧು-ಮಾಂಸಗಳನ್ನು ಕಲ್ಪಿಸಿಕೊಂಡರು.

ವಿಷ್ಣುಮೇವಾಭಿಜಾನನ್ತಿ ಸರ್ವಯಜ್ಞೇಷು ಬ್ರಾಹ್ಮಣಾಃ ।
ಪಾಯಸೈಃ ಸುಮನೋಭಿಶ್ಚ ತಸ್ಯಾಪಿ ಯಜನಂ ಸ್ಮೃತಮ್ ॥೧೧॥

ಎಲ್ಲ ಯಜ್ಞಗಳಲ್ಲಿಯೂ ಬ್ರಾಹ್ಮಣರು ಶ್ರೀವಿಷ್ಣುವನ್ನೇ ಪರದೈವವೆಂದು ತಿಳಿದು ಆರಾಧಿಸುತ್ತಾರೆ. ಪಾಯಸಗಳಿಂದಲೂ–ಸುಮನೋಹರವಾದ ಪುಷ್ಪಗಳಿಂದಲೂ ನಾರಾಯಣನನ್ನು ಪೂಜಿಸುವ ವಿಧಾನವು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ.

ಯಜ್ಞಿಯಾಶ್ಚೈವ ಯೇ ವೃಕ್ಷಾಃ ವೇದೇಷು ಪರಿಕಲ್ಪಿತಾಃ ।
ಯಚ್ಚಾಪಿ ಕಿಂಚಿತ್ಕರ್ತವ್ಯಮನ್ಯಚ್ಚೋಕ್ಷೈಃ ಸುಸಂಸ್ಕೃತಮ್ ।
ಮಹಾಸತ್ತ್ವೈಃ ಶುದ್ಧಭಾವೈಃ ಸರ್ವಂ ದೇವಾರ್ಹಮೇವ ತತ್ ॥೧೨॥

ವೇದಗಳಲ್ಲಿ ಯಜ್ಞಸಂಬಂಧವಾದ ಯಾವ ವೃಕ್ಷಗಳು ಹೇಳಿವೆಯೋ ಅವುಗಳನ್ನು ಯಜ್ಞಗಳಲ್ಲಿ ಉಪಯೋಗಿಸಲೇಬೇಕು. ಶುದ್ಧವಾದ ಆಚಾರ-ವಿಚಾರವುಳ್ಳ ಸಾತ್ತ್ವಿಕನಾದ ಪುರುಷನು ವಿಶುದ್ಧವಾದ ಭಾವನೆಯನ್ನಿಟ್ಟು ಕೊಂಡು ಪ್ರೋಕ್ಷಣವೇ ಮೊದಲಾದ ಉತ್ತಮಸಂಸ್ಕಾರಗಳಿಂದ ಯಾವುದೇ ಹವಿಸ್ಸನ್ನು ಸಿದ್ಧಗೊಳಿಸಿದರೂ–ಆ ಹವಿಸ್ಸು ದೇವತೆಗಳ ಅರ್ಪಣೆಗೆ ಅರ್ಹವೇ ಆಗಿರುತ್ತದೆ.”

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಶರೀರಮಾಪದಶ್ಚಾಪಿ ವಿವದನ್ತ್ಯವಿಹಿಂಸತಃ ।
ಕಥಂ ಯಾತ್ರಾ ಶರೀರಸ್ಯ ನಿರಾರಮ್ಭಸ್ಯ ಸೇತ್ಸ್ಯತೇ ॥೧೩॥

"ಪಿತಾಮಹ! ಕಟ್ಟಾ ಅಹಿಂಸಾವಾದಿಯ ಶರೀರ ಮತ್ತು ಆಪತ್ತುಗಳು ಪರಸ್ಪರಸಂಘರ್ಷಿಸುತ್ತವೆ. ಕಳ್ಳನು ಮನೆಗೆ ನುಗ್ಗಿದಾಗ ಅವನನ್ನು ಹಿಡಿದು ಶಿಕ್ಷೆಗೆ ಗುರಿಪಡಿಸಬೇಕೆಂದು ಮನಸ್ಸು ಹೇಳುತ್ತದೆ. ಆದರೆ ಮತ್ತೊಬ್ಬನಿಗೆ ಹಿಂಸೆಯಾಗುವುದರಿಂದ ಕಳ್ಳನನ್ನು ಹಿಡಿಯಬಾರದೆಂದು ಕಟ್ಟಾ ಅಹಿಂಸಾ ವಾದಿಯ ಆ ಮನಸ್ಸೇ ಪುನಃ ಹೇಳುತ್ತದೆ. ಹೀಗೆ ಆಪತ್ಕಾಲದಲ್ಲಿ ಎರಡಕ್ಕೂ ಘರ್ಷಣೆಯಾಗುತ್ತದೆ. ಎರಡನೆಯದಾಗಿ : ಆಪತ್ಕಾಲದಲ್ಲಿ ಶರೀರದ ಶೋಷಣೆಯಾಗುತ್ತದೆ. ಅದನ್ನು ತಪ್ಪಿಸಿಕೊಂಡು ಆಪತ್ತನ್ನು ವಿನಾಶಗೊಳಿಸ ಬೇಕೆಂದು ಶರೀರವು ಬಯಸುತ್ತದೆ. ಆಪತ್ತನ್ನು ನಿವಾರಿಸಿಕೊಳ್ಳಬೇಕಾದರೆ– ಹಿಂಸೆಮಾಡಬೇಕಾಗುತ್ತದೆ. ಭೂಮಿಯಲ್ಲಿರುವ ಕ್ರಿಮಿ-ಕೀಟಾದಿಗಳಿಗೆ ಹಿಂಸೆಯಾಗುವುದೆಂಬ ಭಯದಿಂದ ಕೃಷಿಯನ್ನೇ ಆರಂಭಿಸದಿದ್ದರೆ ಕೆಲಸ ಮಾಡದವನ ಜೀವನದ ನಿರ್ವಹಣೆಯಾದರೂ ಹೇಗಾಗುತ್ತದೆ?"

ಭೀಷ್ಮನು ಹೇಳುತ್ತಾನೆ :

ಯಥಾ ಶರೀರಂ ನ ಗ್ಲಾಯೇನ್ನೇಯಾನ್ಮೃತ್ಯುವಶಂ ಯಥಾ ।
ತಥಾ ಕರ್ಮಸು ವರ್ತೇತ ಸಮರ್ಥೋ ಧರ್ಮಮಾಚರೇತ್ ॥೧೪॥

"ಯುಧಿಷ್ಠಿರ! ಹಿಂಸೆಯನ್ನು ಮಾಡಬಾರದೆಂದರೆ ಕೃಷಿಯನ್ನೇ ಬಿಟ್ಟುಬಿಡಬೇಕೆಂಬ ಅರ್ಥವಲ್ಲ. ಅಹಿಂಸಾಧರ್ಮವನ್ನು ಪರಿಪಾಲಿಸು ವಾಗಲೂ ಶರೀರವು ಕ್ಷೀಣವಾಗಿ ಹೋಗದಂತೆ–ಅಕಾಲಮೃತ್ಯುವಿಗೆ ವಶವಾಗದಂತೆ–ಕರ್ಮಗಳನ್ನು ಮಾಡಬೇಕು. ಶರೀರಸಾಮರ್ಥ್ಯ ವಿರುವವನೇ ಧರ್ಮವನ್ನು ಆಚರಿಸಬಲ್ಲನು."

ಎ೬೫ನೆಯ ಅಧ್ಯಾಯವು ಮುಗಿಯಿತು.

೨೬೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಮಹರ್ಷಿ ಗೌತಮರ ಮತ್ತು ಚಿರಕಾರಿಯ ಉಪಾಖ್ಯಾನ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಥಂ ಕಾರ್ಯಂ ಪರೀಕ್ಷೇತ ಶೀಘ್ರಂ ವಾಥ ಚಿರೇಣ ವಾ ।
ಸರ್ವಥಾ ಕಾರ್ಯ ದುರ್ಗೇಽಸ್ಮಿನ್ಭವಾನ್ನಃ ಪರಮೋ ಗುರುಃ ॥೧॥

"ಪಿತಾಮಹನೇ! ನೀನೇ ನಮಗೆ ಪರಮಗುರುವಾಗಿರುವೆ. ಆದುದರಿಂದ ನೀನು ಈ ನನ್ನ ಪ್ರಶ್ನೆಗೆ ದಯಮಾಡಿ ಉತ್ತರಿಸು. ಗುರುಜನರ ಮಾತನ್ನು ನಡೆಸಿಕೊಡಲೇಬೇಕಾದ ಸಂದರ್ಭವು ಒದಗಿಬರುತ್ತದೆ. ಆದರೆ ಗುರುಜನರ ಆ ಆಜ್ಞೆಯು ಹಿಂಸಾಪ್ರಧಾನವಾಗಿದ್ದು ಅನುಚಿತವಾಗಿಯೂ ಇರುತ್ತದೆ. ಅಂತಹ ಸಂದರ್ಭದಲ್ಲಿ ಗುರುಜನರು ಆಜ್ಞೆಮಾಡಿರುವರೆಂಬ ಕಾರಣದಿಂದಲೇ ಆ ಕಾರ್ಯವು ಅನುಚಿತವಾಗಿಯೇ ಇದ್ದರೂ–ಹಿಂದೆ-ಮುಂದೆ ನೋಡದೆ, ಔಚಿತ್ಯವನ್ನು ಪರೀಕ್ಷಿಸಹೋಗದೇ ನಡೆಸಿಕೊಡಬೇಕೇ ಅಥವಾ ಯುಕ್ತಾಯುಕ್ತತೆಯನ್ನು ವಿವೇಚಿಸಿ ಸಾವಕಾಶವಾಗಿ ಕಾರ್ಯ ಮಾಡಬೇಕೇ? ಅಂತಹ ಸಂದರ್ಭದಲ್ಲಿ ಹೇಗೆ ಕಾರ್ಯಮಾಡಬೇಕು?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಆಂಗಿರಸರ ಕುಲದಲ್ಲಿ ಹುಟ್ಟಿದ ಚಿರಕಾರಿಯು ಹೇಗೆ ನಡೆದುಕೊಂಡನೆಂಬ ಪುರಾತನವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಚಿರಕಾರಿಯ ಕಾರ್ಯವಿಧಾನವನ್ನು ನೋಡಿ ಅವನಿಗೆ ಆಜ್ಞಾಪಿಸಿದ ತಂದೆಯೇ ಅವನನ್ನು ಹೀಗೆ ಪ್ರಶಂಸಿಸಿದನು :

ಚಿರಕಾರಿಕ ಭದ್ರಂ ತೇ ಭದ್ರಂ ತೇ ಚಿರಕಾರಿಕ ।
ಚಿರಕಾರೀ ಹಿ ಮೇಧಾವೀ ನಾಪರಾಧ್ಯತಿ ಕರ್ಮಸು ॥೩॥

"ಚಿರಕಾರಿಯೇ! ನಿನಗೆ ಮಂಗಳವಾಗಲಿ.; ಚಿರಕಾರಿಯೇ! ನಿನಗೆ ಶುಭವಾಗಲಿ. ಚಿರಕಾರಿಯು ಮಹಾಬುದ್ಧಿವಂತನು. ಅವನು ಕಾರ್ಯಗಳನ್ನು ಮಾಡುವುದರಲ್ಲಿ ಎಂದೂ ಅಪರಾಧಮಾಡತಕ್ಕವನಲ್ಲ."

ಯುಧಿಷ್ಠಿರ! ಗೌತಮನಿಗೆ ಮಹಾಪ್ರಾಜ್ಞನಾದ ಚಿರಕಾರೀ ಎಂಬ ಮಗನಿದ್ದನು. ಅವನು ಎಲ್ಲ ಕಾರ್ಯಗಳನ್ನೂ ಮತ್ತು ಕಾರ್ಯದ ಪರಿಣಾಮಗಳನ್ನೂ ಚೆನ್ನಾಗಿ ವಿಮರ್ಶಿಸಿದ ನಂತರವೇ ನಿಧಾನವಾಗಿ ಯುಕ್ತ ಕಾರ್ಯಗಳನ್ನು ಮಾಡುತ್ತಿದ್ದನು.

ಚಿರಂ ಸ ಚಿನ್ತಯತ್ಯರ್ಥಾಂಶ್ಚಿರಂ ಜಾಗ್ರಚ್ಚಿರಂ ಸ್ವಪನ್ ।
ಚಿರಂ ಕಾರ್ಯಾಭಿಪತ್ತಿಂ ಚ ಚಿರಕಾರೀ ತಥೋಚ್ಯತೇ ॥೯॥

ಅವನು ಯಾವುದೇ ವಿಷಯದಲ್ಲಾಗಲೀ ಬಹಳ ಕಾಲ ವಿಚಾರಮಾಡುತ್ತಿದ್ದನು. ಬಹಳ ಸಮಯದವರೆಗೂ ಎಚ್ಚರವಾಗಿಯೇ ಇರುತ್ತಿದ್ದನು. ಮಲಗಿದನೆಂದರೆ ಬಹಳ ಹೊತ್ತಿನವರೆಗೂ ನಿದ್ರಿಸುತ್ತಿದ್ದನು. ಬಹಳ ಸಾವಕಾಶವಾಗಿಯೇ ಅವನು ಕಾರ್ಯಗಳನ್ನು ಪೂರ್ಣಗೊಳಿಸುತ್ತಿದ್ದನು. ಈ ಕಾರಣಗಳಿಂದ ಅವನನ್ನು ಎಲ್ಲರೂ 'ಚಿರಕಾರೀ' ಎಂದೇ ಕರೆಯತೊಡಗಿದರು. ಮುಂದಾಗುವುದನ್ನು ಬುದ್ಧಿಶಕ್ತಿಯಿಂದ ಯೋಚಿಸದಿರುವ ಅಲ್ಪವಾದ ಬುದ್ಧಿಯುಳ್ಳ ಜನರು ಚಿರಕಾರಿಯನ್ನು ಮಂದಸ್ವಭಾವದವನೆಂದೂ– ದುರ್ಬುದ್ಧಿಯವನೆಂದೂ ಹೇಳುತ್ತಿದ್ದರು. ಒಮ್ಮೆ ಗೌತಮನು ತನ್ನ ಪತ್ನಿಯು ಮಾಡಿದ ವ್ಯಭಿಚಾರದಿಂದ ಕುಪಿತನಾಗಿ ತನ್ನ ಇತರ ಎಲ್ಲ ಮಕ್ಕಳನ್ನೂ ಬಿಟ್ಟು ಚಿರಕಾರಿಯನ್ನೇ ಕರೆದು–'ಜಹೀಮಾಂ ಜನನೀಂ'–'ಈ ನಿನ್ನ ತಾಯಿಯನ್ನು ಸಂಹರಿಸು'–ಎಂದು ಆಜ್ಞಾಪಿಸಿದನು. ಜಾಪಕರಲ್ಲಿ ಶ್ರೇಷ್ಠನಾದ ಮಹಾಭಾಗನಾದ ಗೌತಮನು ಯಾವುದೊಂದನ್ನೂ ವಿಮರ್ಶಿಸದೆಯೇ ಮಗನಿಗೆ ಹೀಗೆ ಆಜ್ಞೆಮಾಡಿ ಅರಣ್ಯಕ್ಕೆ ಹೊರಟುಹೋದನು. ಚಿರಕಾರಿಯು ತನ್ನ ಸ್ವಭಾವಾನುಗುಣವಾಗಿ ತಂದೆಯು ಆಜ್ಞೆಮಾಡಿದ ಬಹಳ ಹೊತ್ತಿನ ಮೇಲೆ–'ಆಗಲಿ'– ಎಂದುತ್ತರಿಸಿದನು. ಅವನು ಎಲ್ಲ ಕಾರ್ಯಗಳನ್ನೂ ನಿಧಾನವಾಗಿಯೇ ಮಾಡುವವನಾದುದರಿಂದ ಬಹಳ ಹೊತ್ತಿನವರೆಗೆ ತನ್ನ ತಂದೆಯು ಮಾಡಿದ ಆಜ್ಞೆಯನ್ನೇ ಕುರಿತು ವಿಮರ್ಶಾಪೂರ್ವಕವಾಗಿ ಚಿಂತಿಸುತ್ತಿದ್ದನು. ಅವನ ವಿಚಾರಸರಣಿಯು ಹೀಗಿದ್ದಿತು :

ಪಿತುರಾಜ್ಞಾಂ ಕಥಂ ಕುರ್ಯಾಂ ನ ಹನ್ಯಾಂ ಮಾತರಂ ಕಥಮ್ ।
ಕಥಂ ಧರ್ಮಚ್ಛಲೇನಾಸ್ಮಿನ್ನಿಮಜ್ಜೇಯಮಸಾಧುವತ್ ॥೧೦॥

"ತಂದೆಯ ಆಜ್ಞೆಯನ್ನು ಹೇಗೆ ಕಾರ್ಯಗತಮಾಡಲಿ? ತಾಯಿಯನ್ನು ಹೇಗೆ ಸಂಹರಿಸದಿರಲಿ? ಇವರೆಡೂ ಆಗಬೇಕಾಗಿದೆ. ಕೆಟ್ಟ ಮನುಷ್ಯನಂತೆ ಈ ಧರ್ಮಸಂಕಟದಲ್ಲಿ ಮುಳುಗಿಹೋಗದಿರುವ ಪರಿಯೆಂತು?

ಪಿತುರಾಜ್ಞಾ ಪರೋ ಧರ್ಮಃ ಸ್ವಧರ್ಮೋ ಮಾತೃರಕ್ಷಣಮ್ ।
ಅಸ್ವತನ್ತ್ರಂ ಚ ಪುತ್ರತ್ವಂ ಕಿಂ ತು ಮಾಂ ನಾನುಪೀಡಯೇತ್ ॥೧೧॥

ತಂದೆಯ ಆಜ್ಞೆಯನ್ನು ಪರಿಪಾಲಿಸುವುದು ಶ್ರೇಷ್ಠವಾದ ಧರ್ಮ. ತಾಯಿಯನ್ನು ರಕ್ಷಿಸುವುದು ಪುತ್ರನ ಸ್ವಧರ್ಮ ಅಥವಾ ಪ್ರಧಾನಧರ್ಮವೇ ಆಗಿದೆ. ಮೇಲಾಗಿ ಪುತ್ರತ್ವವು ಸ್ವತಂತ್ರವಾದುದಲ್ಲ. ಪುತ್ರನು ಯಾವಾಗಲೂ ತಂದೆ-ತಾಯಿಯರ ಅಧೀನಕ್ಕೆ ಒಳಪಟ್ಟವನಾಗಿರುತ್ತಾನೆ. ಇಂತಹ ಸಂದರ್ಭದಲ್ಲಿ ಅಧರ್ಮವು ನನ್ನನ್ನು ಪೀಡಿಸದಿರುವಂತೆ ನಾನು ಹೇಗೆ ವರ್ತಿಸಲಿ?

ಸ್ತ್ರಿಯಂ ಹತ್ವಾ ಮಾತರಂ ಚ ಕೋ ಹಿ ಜಾತು ಸುಖೀ ಭವೇತ್ ।
ಪಿತರಂ ಚಾಪ್ಯವಜ್ಞಾಯ ಕಃ ಪ್ರತಿಷ್ಠಾಮವಾಪ್ನುಯಾತ್ ॥೧೨॥

ಸ್ತ್ರೀಯನ್ನು ಅದರಲ್ಲಿಯೂ ತಾಯಿಯನ್ನು ಸಂಹಾರಮಾಡಿ ಯಾವನು ತಾನೇ ಯಾವಾಗಲಾದರೂ ಸುಖಿಯಾಗಿರಬಲ್ಲನೇ? (ಮಾತೃಹತ್ಯೆಮಾಡಿದವನಿಗೆ ಸುಖವೆಂಬುದೇ ಇಲ್ಲ.) ತಂದೆಯ ಆಜ್ಞೆಯನ್ನು ಅನಾದರಣೆಮಾಡಿ ಯಾವನು ತಾನೇ ಸಮಾಜದಲ್ಲಿ ಗೌರವವನ್ನು ಪಡೆದುಕೊಳ್ಳುತ್ತಾನೆ?

ಅನವಜ್ಞಾ ಪಿತುರ್ಯುಕ್ತಾ ಧಾರಣಂ ಮಾತೃರಕ್ಷಣಮ್ ।
ಯುಕ್ತಕ್ಷಮಾವುಭಾವೇತೌ ನಾತಿವರ್ತೇತ ಮಾಂ ಕಥಮ್ ॥೧೩॥

ತಂದೆಯ ಆಜ್ಞೆಯನ್ನು ತಿರಸ್ಕರಿಸದಿರುವುದು ಉಚಿತವಾದುದು ; ಅಂತೆಯೇ ತಾಯಿಯನ್ನು ರಕ್ಷಿಸುವುದೂ ಮಗನ ಕರ್ತವ್ಯವೇ ಆಗಿರುತ್ತದೆ. ಈ ಎರಡು ಧರ್ಮಗಳೂ ಯುಕ್ತವೂ ಉಚಿತವೂ ಆಗಿವೆ. ಎರಡು ಧರ್ಮಗಳನ್ನೂ ಉಲ್ಲಂಘಿಸದಿರಲು ನನಗೆ ಹೇಗೆ ಸಾಧ್ಯವಾಗುತ್ತದೆ?

ಪಿತಾ ಹ್ಯಾತ್ಮಾನಮಾಧತ್ತೇ ಜಾಯಾಯಾಂ ಜಜ್ಞಿವಾನಿತಿ ।
ಶೀಲಚಾರಿತ್ರಗೋತ್ರಸ್ಯ ಧಾರಣಾರ್ಥಂ ಕುಲಸ್ಯ ಚ ॥೧೪॥

ತಂದೆಯಾದವನು ತನ್ನ ಶೀಲ, ಸದಾಚಾರ, ಕುಲ ಮತ್ತು ಗೋತ್ರ

ಗಳನ್ನು ರಕ್ಷಿಸುವ ಸಲುವಾಗಿ ತನ್ನ ಪತ್ನಿಯ ಗರ್ಭದಲ್ಲಿ ತನ್ನನ್ನೇ ರೇತಸ್ಸಿನ ರೂಪದಲ್ಲಿ ನಿಕ್ಷೇಪಿಸುತ್ತಾನೆ ಮತ್ತು ಪುತ್ರರೂಪದಲ್ಲಿ (ಭಾರ್ಯೆಯ ಗರ್ಭದಿಂದ) ಹೊರಬರುತ್ತಾನೆ.

ಸೋಽಹಂ ಮಾತ್ರಾ ಸ್ವಯಂ ಪಿತ್ರಾ ಪುತ್ರತ್ವೇ ಪ್ರಕೃತಃ ಪುನಃ ।
ವಿಜ್ಞಾನಂ ಮೇ ಕಥಂ ನ ಸ್ಯಾದ್ದ್ವೌ ಬುದ್ಧ್ಯೇ ಚಾತ್ಮಸಮ್ಭವಮ್ ॥೧೫॥

ಈ ಕಾರಣದಿಂದ ನಾನು ತಾಯಿಯಿಂದಲೂ ಮತ್ತು ತಂದೆಯಿಂದಲೂ ಪುತ್ರರೂಪದಲ್ಲಿ ಜನ್ಮತಾಳಿದ್ದೇನೆ. ನನ್ನ ಹುಟ್ಟಿಗೆ ತಾಯಿ- ತಂದೆಗಳಿಬ್ಬರೂ ಕಾರಣರೆಂಬುದನ್ನು ನಾನು ತಿಳಿದುಕೊಂಡಿರುತ್ತೇನೆ. ಹೀಗಿರುವಾಗ ತಂದೆಯ ಆಜ್ಞೆಯನ್ನು ಅನಾದರಣೆಮಾಡದಂತಹ ಮತ್ತು ತಾಯಿಯನ್ನೂ ರಕ್ಷಿಸುವಂತಹ ವಿಶೇಷಜ್ಞಾನವು ಇನ್ನೂ ನನಗೇಕೆ ಉಂಟಾಗಿಲ್ಲ?

ಜಾತಕರ್ಮಣಿ ಯತ್ಪ್ರಾಹ ಪಿತಾ ಯಚ್ಚೋಪಕರ್ಮಣಿ ।
ಪರ್ಯಾಪ್ತಃ ಸ ದೃಢೀಕಾರಃ ಪಿತುರ್ಗೌರವನಿಶ್ಚಯೇ ॥೧೬॥

ಜಾತಕರ್ಮದ ಸಮಯದಲ್ಲಿ – 'ಆತ್ಮಾ ವೈ ಪುತ್ರನಾಮಾಸಿ' ಎಂದು ಹೇಳುವುದೂ–ಉಪನಯನದ ಸಮಯದಲ್ಲಿ – '**ಆಚಾರ್ಯದೇವೋ ಭವ । ಅಪೋಶಾನ । ಕರ್ಮ ಕುರು**'–ಮುಂತಾಗಿ ಆಜ್ಞೆಮಾಡು ವುದೂ–ತಂದೆಯೇ ಅತ್ಯಧಿಕನಾದವನೆಂಬ ನಿಶ್ಚಯದಲ್ಲಿ ಸಾಕಷ್ಟಾದ ದೃಢೀಕಾರವೇ ಆಗಿದೆ.

ಗುರುರಗ್ರ್ಯಃ ಪರೋ ಧರ್ಮಃ ಪೋಷಣಾಧ್ಯಾಪನಾನ್ವಿತಃ ।
ಪಿತಾ ಯದಾಹ ಧರ್ಮಃ ಸ ವೇದೇಷ್ವಪಿ ಸುನಿಶ್ಚಿತಃ ॥೧೭॥

ತಂದೆಯು ಭರಣ-ಪೋಷಣಾದಿಗಳನ್ನು ಮಾಡುವುದರಿಂದಲೂ ಒಳ್ಳೆಯ ಶಿಕ್ಷಣವನ್ನು ಕೊಡಿಸುವುದರಿಂದಲೂ ಪುತ್ರನಿಗೆ ಪ್ರಧಾನಗುರುವೇ ಆಗಿರುತ್ತಾನೆ ಮತ್ತು ಧರ್ಮದ ಸಾಕ್ಷಾತ್ಸ್ವರೂಪನೇ ಆಗಿದ್ದಾನೆ. ಆದುದರಿಂದ ತಂದೆಯು ಯಾವುದನ್ನು ಹೇಳಿದರೂ ಅದು ಧರ್ಮವೇ ಆಗುತ್ತದೆ. ತಂದೆಯ ಮಾತನ್ನು ಧರ್ಮಯುಕ್ತವಾದುದೆಂದೇ ಭಾವಿಸಬೇಕು. ವೇದಗಳಲ್ಲಿಯೂ ಇದು ನಿಶ್ಚಿತವಾಗಿದೆ.

ಪ್ರೀತಿಮಾತ್ರಂ ಪಿತುಃ ಪುತ್ರಃ ಸರ್ವಂ ಪುತ್ರಸ್ಯ ವೈ ಪಿತಾ ।
ಶರೀರಾದೀನಿ ದೇಯಾನಿ ಪಿತಾ ತ್ವೇಕಃ ಪ್ರಯಚ್ಛತಿ ॥೧೮॥

ತಂದೆಯಾದವನಿಗೆ ಮಗನು ಪ್ರೀತಿಸ್ವರೂಪನೇ ಆಗಿರುತ್ತಾನೆ. ಅಂತೆಯೇ ಮಗನಿಗೆ ತಂದೆಯೇ ಸರ್ವಸ್ವವೂ ಆಗಿರುತ್ತಾನೆ. ತಂದೆಯಾದವನು ಮಾತ್ರವೇ ಮಗನಿಗೆ ಶರೀರವೇ ಮೊದಲಾದ ಕೊಡಬಹುದಾದ ವಸ್ತುಗಳೆಲ್ಲವನ್ನೂ ಕೊಡುತ್ತಾನೆ.

ತಸ್ಮಾತ್ಪಿತುರ್ವಚಃ ಕಾರ್ಯಂ ನ ವಿಚಾರ್ಯಂ ಕದಾಚನ ।
ಪಾತಾಕಾನ್ಯಪಿ ಪೂಯನ್ತೇ ಪಿತುಃ ಶಾಸನಕಾರಿಣಃ ॥೧೯॥

ಈ ಕಾರಣಗಳಿಂದ ತಂದೆಯ ಆಜ್ಞೆಯನ್ನು ಪರಿಪಾಲಿಸಲೇಬೇಕು. ತಂದೆಯ ಆಜ್ಞೆಯ ವಿಷಯವಾಗಿ ಯಾವಾಗಲೂ ವಿಚಾರಮಾಡಲೇ ಬಾರದು. ತಂದೆಯ ಆಜ್ಞೆಯನ್ನು ಪರಿಪಾಲಿಸುವವನಿಗೆ ಅನೇಕಾನೇಕ ಮಹಾಪಾಪಗಳೂ ವಿನಾಶಹೊಂದುತ್ತವೆ.

ಭೋಗ್ಯೇ ಭೋಜ್ಯೇ ಪ್ರವಚನೇ ಸರ್ವಲೋಕನಿದರ್ಶನೇ ।
ಭರ್ತ್ರಾ ಚೈವ ಸಮಾಯೋಗೇ ಸೀಮನ್ತೋನ್ನಯನೇ ತಥಾ ॥೨೦॥

ಮಗನಿಗೆ ವಸ್ತ್ರವೇ ಮೊದಲಾದ ಭೋಗ್ಯವಸ್ತುಗಳನ್ನು ಒದಗಿಸಿಕೊಡುವುದರಲ್ಲಿಯೂ, ಅನ್ನ-ಪಾನಾದಿ ಭೋಜ್ಯವಸ್ತುಗಳನ್ನು ಒದಗಿಸಿಕೊಡುವುದರಲ್ಲಿಯೂ, ಶಾಸ್ತ್ರಾದಿಗಳನ್ನು (ವಿದ್ಯೆಯನ್ನು) ಅಧ್ಯಯನಮಾಡಿಸುವುದರಲ್ಲಿಯೂ, ಲೋಕವ್ಯವಹಾರಗಳನ್ನು ತಿಳಿಸಿಕೊಡುವುದರಲ್ಲಿಯೂ, ಗರ್ಭಾಧಾನ-ಪುಂಸವನ-ಸೀಮನ್ತೋನ್ನಯನವೇ ಮೊದಲಾದ ಕರ್ಮಗಳ ಮೂಲಕವಾಗಿ ಸಂಸ್ಕರಿಸುವುದರಲ್ಲಿಯೂ ತಂದೆಯೇ ಪ್ರಭುವಾಗಿದ್ದಾನೆ. (ಮುಖ್ಯ ಕಾರಣನಾಗಿದ್ದಾನೆ.)

ಪಿತಾ ಧರ್ಮಃ ಪಿತಾ ಸ್ವರ್ಗಃ ಪಿತಾ ಹಿ ಪರಮಂ ತಪಃ ।
ಪಿತರಿ ಪ್ರೀತಿಮಾಪನ್ನೇ ಸರ್ವಾಃ ಪ್ರೀಯನ್ತಿ ದೇವತಾಃ ॥೨೧॥

ಆದುದರಿಂದ ತಂದೆಯೇ ಧರ್ಮಸ್ವರೂಪನು. ತಂದೆಯೇ ಸ್ವರ್ಗಸುಖದಾಯಕನು. ಪಿತೃಶುಶ್ರೂಷೆಯೇ ಶ್ರೇಷ್ಠವಾದ ತಪಸ್ಸು. ತಂದೆಯು ಪ್ರೀತನಾದನೆಂದರೆ ಸಮಸ್ತದೇವತೆಗಳೂ ಸುಪ್ರೀತರಾಗುತ್ತಾರೆ.

ಆಶಿಷಸ್ತಾ ಭಜನ್ತ್ಯೇನಂ ಪರುಷಂ ಪ್ರಾಹ ಯತ್ಪಿತಾ ।
ನಿಷ್ಕೃತಿಃ ಸರ್ವಪಾಪಾನಾಂ ಪಿತಾ ಯಚ್ಚಾಭಿನನ್ದತಿ ॥೨೨॥

ಸತ್ಪುತ್ರನ ವಿಷಯದಲ್ಲಿ ತಂದೆಯಾದವನು ಹೇಳಿದ ಕಠೋರವಾದ ಮಾತೂ ಆಶೀರ್ವಾದವಾಗಿ ಪುತ್ರನನ್ನು ಹೊಂದುತ್ತದೆ. ತಂದೆಯು ಮಗನ ವಿಧೇಯತೆಗೆ ಸಂತೋಷಿಸಿ ಮಗನ ವಿಷಯದಲ್ಲಿ ನಾಲ್ಕು ಒಳ್ಳೆಯ ಮಾತುಗಳನ್ನಾಡಿದರೆ–ಅದು ಸರ್ವಪಾಪಗಳ ಪ್ರಾಯಶ್ಚಿತ್ತವಾಗಿ ಪರಿಣಮಿಸುತ್ತದೆ.

ಮುಚ್ಯತೇ ಬನ್ಧನಾತ್ಪುಷ್ಪಂ ಫಲಂ ವೃಕ್ಷಾತ್ಪ್ರಮುಚ್ಯತೇ ।
ಕ್ಲಿಶ್ಯನ್ನಪಿ ಸುತಂ ಸ್ನೇಹೈಃ ಪಿತಾ ಪುತ್ರಂ ನ ಮುಞ್ಚತಿ ॥೨೩॥

ಹೂವು ತೊಟ್ಟಿನಿಂದ ಕಳಚಿ ಕೆಳಗೆ ಬೀಳುತ್ತದೆ. ಗಳಿತವಾದ ಹಣ್ಣು ವೃಕ್ಷದಿಂದ ಕೆಳಕ್ಕೆ ಬೀಳುತ್ತದೆ. ಆದರೆ ಯಾವುದೇ ಕಷ್ಟಸಮಯದಲ್ಲಾದರೂ ಪುತ್ರಪ್ರೇಮದಿಂದ ಲಾಲಿಸಿ-ಪಾಲಿಸಿರುವ ಮಗನನ್ನು ತಂದೆಯೆಂದಿಗೂ ಬಿಟ್ಟುಬಿಡುವುದಿಲ್ಲ.

ಏತದ್ವಿಚಿನ್ತಿತಂ ತಾವತ್ಪುತ್ರಸ್ಯ ಪಿತೃಗೌರವಮ್ ।
ಪಿತಾ ನಾಲ್ಪತರಂ ಸ್ಥಾನಂ ಚಿನ್ತಯಿಷ್ಯಾಮಿ ಮಾತರಮ್ ॥೨೪॥

ಮಗನಿಗೆ ತಂದೆಯ ವಿಷಯದಲ್ಲಿ ಎಷ್ಟು ಗೌರವವಿರಬೇಕೆಂಬುದನ್ನು ಇದುವರೆಗೆ ವಿವೇಚಿಸಿದ್ದಾಯಿತು. ಮಗನ ಸಂಬಂಧದಲ್ಲಿ ತಂದೆಯ ಸ್ಥಾನವು ಅಲ್ಪವಾದುದೇನೂ ಅಲ್ಲ. ಇನ್ನು ಮುಂದೆ ನಾನು ಮಗನ ಸಂಬಂಧದಲ್ಲಿ ತಾಯಿಯ ಸ್ಥಾನವೇನೆಂಬುದನ್ನು ವಿವೇಚಿಸುತ್ತೇನೆ.

ಯೋ ಹ್ಯಯಂ ಮಯಿ ಸಂಘಾತೋ ಮರ್ತ್ಯತ್ವೇ ಪಾಞ್ಚಭೌತಿಕಃ ।
ಅಸ್ಯ ಮೇ ಜನನೀ ಹೇತುಃ ಪಾವಕಸ್ಯ ಯಥಾರಣಿಃ ॥೨೫॥

ಪಂಚಭೂತಗಳ ಸಂಬಂಧವಾದ ಯಾವ ಸಂಘಟನೆಯು ಈ ನನ್ನ ಮನುಷ್ಯಶರೀರರೂಪದಲ್ಲಿ ಪರ್ಯವಸಾನಹೊಂದಿರುವುದೋ–ಇದಕ್ಕೆ ಮುಖ್ಯಕಾರಣಳು ನನ್ನ ತಾಯಿಯೇ ಆಗಿದ್ದಾಳೆ. ಅಗ್ನಿಯ ಪ್ರಾದು

ಭ್ರಾವಕ್ಕೆ ಅರಣಿಯು ಕಾರಣವಾಗಿರುವಂತೆ–ನನ್ನ ಶರೀರಕ್ಕೆ ತಾಯಿಯು ಕಾರಣಳು.

ಮಾತಾ ದೇಹಾರಣಿಃ ಪುಂಸಾಂ ಸರ್ವಸ್ಯಾರ್ತಸ್ಯ ನಿರ್ವೃತಿಃ ।
ಮಾತೃಲಾಭೇ ಸನಾಥತ್ವಮನಾಥತ್ವಂ ವಿಪರ್ಯಯೇ ॥೨೬॥

ತಾಯಿಯು ಮನುಷ್ಯರಿಗೆ ಶರೀರರೂಪವಾದ ಅಗ್ನಿಯನ್ನು ಪ್ರಕಟಗೊಳಿಸುವ ಅರಣಿಯೇ ಆಗಿದ್ದಾಳೆ. ಪ್ರಪಂಚದಲ್ಲಿ ಆರ್ತರಾಗಿರುವವರೆಲ್ಲರಿಗೂ ಸುಖ-ಸಾಂತ್ವನಗಳನ್ನು ಕೊಡುವವಳು ತಾಯಿಯೇ. ತಾಯಿಯಿರುವವನು ಸನಾಥನು. ತಾಯಿಯಿಲ್ಲದವನು ಅನಾಥನು.

ನ ಚ ಶೋಚತಿ ನಾಪ್ಯೇನಂ ಸ್ಥಾವಿರ್ಯಮಪಕರ್ಷತಿ ।
ಶ್ರಿಯಾ ಹೀನೋಽಪಿ ಯೋ ಗೇಹಮಮ್ಬೇತಿ ಪ್ರತಿಪದ್ಯತೇ ॥೨೭॥

ತಾಯಿಯಿರುವವನು ಯಾವಾಗಲೂ ಯಾವುದಕ್ಕೂ ಶೋಕಪಡುವುದಿಲ್ಲ. ಶೋಕವಾಗಲೀ, ಚಿಂತೆಯಾಗಲೀ ಇಲ್ಲದೇ ಇರುವುದರಿಂದ ವೃದ್ಧಾಪ್ಯವೂ ಅವನನ್ನು ಆಕ್ರಮಿಸುವುದಿಲ್ಲ. ನಿರ್ಧನನಾಗಿದ್ದರೂ– "ಅಮ್ಮಾ!" ಎಂದು ಕೂಗುತ್ತಾ ಮನೆಯೊಳಗೆ ಪ್ರವೇಶಿಸುವ ಜೀವನ್ಮಾತೃಕನಿಗೆ ದುಃಖವಿಲ್ಲ ; ಮುಪ್ಪಿನ ಆಕ್ರಮಣವಿಲ್ಲ.

ಪುತ್ರಪೌತ್ರೋಪಪನ್ನೋಽಪಿ ಜನನೀಂ ಯಃ ಸಮಾಶ್ರಿತಃ ।
ಅಪಿ ವರ್ಷಶತಸ್ಯಾನ್ತೇ ಸ ದ್ವಿಹಾಯನವಚ್ಚರೇತ್ ॥೨೮॥

ಒಬ್ಬ ಮನುಷ್ಯನಿಗೆ ಮಕ್ಕಳು-ಮೊಮ್ಮಕ್ಕಳೂ ಆಗಿರಬಹುದು. ಅವನಿಗೆ ನೂರು ವರ್ಷಗಳೂ ತುಂಬಿರಬಹುದು. ಆದರೆ ನೂರು ವರ್ಷಗಳು ತುಂಬಿದನಂತರವೂ ಆ ಮನುಷ್ಯನು ತನ್ನ ತಾಯಿಯನ್ನಾಶ್ರಯಿಸಿದಾಗ (ತಾಯಿಯ ಬಳಿಯಲ್ಲಿ ಕುಳಿತಾಗ) ಎರಡು ವರ್ಷದ ಮಗುವಿನಂತೆಯೇ ವರ್ತಿಸುತ್ತಾನೆ.

ಸಮರ್ಥಂ ವಾಸಮರ್ಥಂ ವಾ ಕೃಶಂ ವಾಪ್ಯಕೃಶಂ ತಥಾ ।
ರಕ್ಷತ್ಯೇವ ಸುತಂ ಮಾತಾ ನಾನ್ಯಃ ಪೋಷ್ಟಾ ವಿಧಾನತಃ ॥೨೯॥

ಮಗನು ಸಮರ್ಥನಾಗಿರಲಿ – ಅಸಮರ್ಥನಾಗಿರಲಿ ; ಕೃಶನಾಗಿರಲೀ–

ಸ್ಥೂಲನಾಗಿರಲಿ ; ತಾಯಿಯಾದವಳು ಯಾವ ವಿಧವಾದ ತಾರತಮ್ಯವನ್ನೂ ತೋರದೇ ರಕ್ಷಿಸಿಯೇ ರಕ್ಷಿಸುತ್ತಾಳೆ. ವಿಹಿತವಾದ ರೀತಿಯಲ್ಲಿ ಮಕ್ಕಳನ್ನು ಪೋಷಿಸತಕ್ಕವರಲ್ಲಿ ತಾಯಿಯನ್ನು ಬಿಟ್ಟು ಬೇರೆ ಯಾರೂ ಇರುವುದಿಲ್ಲ.

ತದಾ ಸ ವೃದ್ಧೋ ಭವತಿ ತದಾ ಭವತಿ ದುಃಖಿತಃ ।
ತದಾ ಶೂನ್ಯಂ ಜಗತ್ತಸ್ಯ ಯದಾ ಮಾತ್ರಾ ವಿಯುಜ್ಯತೇ ॥೩೦॥

ಮನುಷ್ಯನು ಯಾವಾಗ ತಾಯಿಯಿಂದ ವಿಯೋಗವನ್ನು ಹೊಂದುವನೋ–ಆಗ ಅವನು ವೃದ್ಧನಾಗುತ್ತಾನೆ. ದುಃಖಿತನಾಗುತ್ತಾನೆ. ಆಗಲೇ ಅವನಿಗೆ ಜಗತ್ತೆಲ್ಲವೂ ಶೂನ್ಯವಾಗಿ ಕಾಣುತ್ತದೆ.

ನಾಸ್ತಿ ಮಾತೃಸಮಾ ಛಾಯಾ ನಾಸ್ತಿ ಮಾತೃಸಮಾ ಗತಿಃ ।
ನಾಸ್ತಿ ಮಾತೃಸಮಂ ತ್ರಾಣಂ ನಾಸ್ತಿ ಮಾತೃಸಮಾ ಪ್ರಿಯಾ ॥೩೧॥

ತಾಯಿಗೆ ಸಮಾನವಾದ ನೆರಳು (ಆಶ್ರಯವು) ಬೇರೆ ಯಾವುದೂ ಇರುವುದಿಲ್ಲ. ತಾಯಿಗೆ ಸಮಾನವಾದ ಗತಿಯೂ ಬೇರೆ ಯಾವುದೂ ಇರುವುದಿಲ್ಲ. ತಾಯಿಗೆ ಸಮಾನವಾದ ರಕ್ಷಣೆಯೂ ಬೇರೆ ಯಾವುದೂ ಇರುವುದಿಲ್ಲ. ತಾಯಿಗೆ ಸಮಾನವಾದ ಪ್ರಿಯವಸ್ತುವೂ ಬೇರೆ ಯಾವುದೂ ಇರುವುದಿಲ್ಲ.

ಕುಕ್ಷಿಸಂಧಾರಣಾದ್ಧಾತ್ರೀ ಜನನಾಜ್ಜನನೀ ಸ್ಮೃತಾ ।
ಅಙ್ಗಾನಾಂ ವರ್ಧನಾದಮ್ಬಾ ವೀರಸೂತ್ವೇನ ವೀರಸೂಃ ॥೩೨॥

ತಾಯಿಯು ಮಗುವನ್ನು ಹೊಟ್ಟೆಯಲ್ಲಿ (ಗರ್ಭಕೋಶದಲ್ಲಿ) ಧಾರಣೆ ಮಾಡಿಕೊಳ್ಳುವುದರಿಂದ ಅವಳಿಗೆ 'ಧಾತ್ರೀ'–ಎಂಬ ಹೆಸರು ಬಂದಿದೆ. ನವ ಮಾಸಗಳು ಕಳೆದನಂತರ ಮಗುವಿಗೆ ಜನ್ಮವೀಯುವುದರಿಂದ ತಾಯಿಯು 'ಜನನೀ'–ಎಂದು ಕರೆಯಲ್ಪಡುತ್ತಾಳೆ. ಹುಟ್ಟಿದ ಮಗುವಿಗೆ ಕಾಲ-ಕಾಲಕ್ಕೆ ಸ್ತನ್ಯ-ಅನ್ನ-ಆಹಾರಗಳನ್ನಿತ್ತು ಅದರ ಅಂಗಾಂಗಗಳನ್ನು ವರ್ಧಿಸುವುದರಿಂದ (ಪಾಲನೆ-ಪೋಷಣೆಗಳನ್ನೂ ಮಾಡುವುದರಿಂದ) 'ಅಂಬಾ' ಎಂದು ಕರೆಯಲ್ಪಡುತ್ತಾಳೆ. ವೀರಸಂತಾನವನ್ನು ಪಡೆಯುವುದರಿಂದ ಸ್ತ್ರೀಯನ್ನು 'ವೀರಸೂಃ' ಎಂದು ಕರೆಯುತ್ತಾರೆ.

ಶಿಶೋಃ ಶುಶ್ರೂಷಣಾಚ್ಛುಶ್ರೂರ್ಮಾತಾ ದೇಹಮನನ್ತರಮ್ ।
ಚೇತನಾವಾನ್ನರೋ ಹನ್ಯಾದ್ಯಸ್ಯ ನಾಸುಷಿರಂ ಶಿರಃ ॥೩೩॥

ಹುಟ್ಟಿದ ಮಗುವಿನ ಶುಶ್ರೂಷೆಮಾಡುವುದರಿಂದ ತಾಯಿಗೆ 'ಶುಶ್ರೂಃ'–ಎಂಬ ಹೆಸರೂ ಬಂದಿದೆ. ತಾಯಿಯೆಂಬುವಳು ತನ್ನದೇ ಆದ ಅತ್ಯಂತನಿಕಟವರ್ತಿಯಾದ ಮತ್ತೊಂದು ಶರೀರ. ಯಾವನ ತಲೆಯು ವಿಚಾರಶೂನ್ಯವಾಗಿಲ್ಲವೋ–ಅಂತಹ ಬುದ್ಧಿವಂತನಾದ ಮನುಷ್ಯನು ತನ್ನ ತಾಯಿಯನ್ನೆಂದಿಗೂ ಕೊಲ್ಲಲಾರನು.

ದಮ್ಪತ್ಯೋಃ ಪ್ರಾಣಸಂಶ್ಲೇಷೇ ಯೋಽಭಿಸಂಧಿಃ ಕೃತಃ ಕಿಲ ।
ತಂ ಮಾತಾ ಚ ಪಿತಾ ಚೇತಿ ಭೂತಾರ್ಥೋ ಮಾತರಿ ಸ್ಥಿತಃ ॥೩೪॥

ದಂಪತಿಗಳ ಸುರತಕಾಲದಲ್ಲಿ 'ಪುತ್ರೋ ಮೇ ಗೌರೋ ಜಾಯೇತ। ವೇದಂ ಬ್ರವೀತು' 'ಶುಭ್ರವರ್ಣದ ಮಗನು ಹುಟ್ಟಲಿ. ಹುಟ್ಟಿದ ಮಗನು ವೇದಾಧ್ಯಯನ ಮಾಡಲಿ'–ಇತ್ಯಾದಿ ಯಾವ ಅಭಿಲಾಷೆಗಳುಂಟಾಗುವುವೋ–ಆ ಅಭಿಲಾಷೆಗಳು ತಾಯಿ-ತಂದೆಗಳಿಬ್ಬರಲ್ಲಿಯೂ ಇದ್ದರೂ ಯಥಾರ್ಥವಾಗಿ ತಾಯಿಯ ಹೃದಯದಲ್ಲಿಯೇ ಈ ವಿಧವಾದ ಅಭಿಲಾಷೆಗಳೆಲ್ಲವೂ ವಿಶೇಷವಾಗಿ ತುಂಬಿಕೊಂಡಿರುತ್ತವೆ.

ಮಾತಾ ಜಾನಾತಿ ಯದ್ಗೋತ್ರಂ ಮಾತಾ ಜಾನಾತಿ ಯಸ್ಯ ಸಃ ।
ಮಾತುರ್ಭರಣಮಾತ್ರೇಣ ಪ್ರೀತಿಃ ಸ್ನೇಹಃ ಪಿತುಃ ಪ್ರಜಾಃ ॥೩೫॥

ತಾಯಿಯಾದವಳು ತನ್ನ ಮಗನು ಯಾವ ಗೋತ್ರಕ್ಕೆ ಸೇರಿದವನೆಂಬುವುದನ್ನು ತಿಳಿದುಕೊಂಡಿರುತ್ತಾಳೆ ಮತ್ತು ತನ್ನ ಹೊಟ್ಟೆಯಲ್ಲಿ ಹುಟ್ಟಿರುವವನು ಯಾವ ಪುರುಷನಿಗೆ ಸಂಬಂಧಿಸಿದವನೆಂಬುದ್ನೂ ತಿಳಿದಿರುತ್ತಾಳೆ. ತಾಯಿಯಾದವಳಿಗೆ ಗರ್ಭದಲ್ಲಿ ಒಂಬತ್ತು ತಿಂಗಳು ಶಿಶುವನ್ನು ಧಾರಣೆ ಮಾಡಿಕೊಂಡಿರುವ ಕಾರಣದಿಂದಲೇ ವಿಶೇಷವಾದ ಪ್ರೀತಿಯೂ ಸ್ನೇಹವೂ ಉಂಟಾಗುತ್ತದೆ. ಆದರೆ ಸಂತಾನಗಳು ಮಾತ್ರ ತಂದೆಯ ಅಧೀನಕ್ಕೆ ಒಳಪಟ್ಟಿರುತ್ತವೆ.

ಪಾಣಿಬನ್ಧಂ ಸ್ವಯಂ ಕೃತ್ವಾ ಸಹ ಧರ್ಮಮುಪೇತ್ಯ ಚ ।
ಯದಾ ಯಾಸ್ಯನ್ತಿ ಪುರುಷಾಃ ಸ್ತ್ರಿಯೋ ನಾರ್ಹನ್ತಿ ವಾಚ್ಯತಾಮ್ ॥೩೬॥

ಪುರುಷನು ಕನ್ಯೆಯೊಬ್ಬಳ ಪಾಣಿಗ್ರಹಣವನ್ನು ತಾನೇ ಮಾಡಿಕೊಂಡು – 'ಧರ್ಮೇ ಚ-ಅರ್ಥೇ ಚ-ಕಾಮೇ ಚ-ಇಮಾಂ ನಾತಿ ಚರಾಮಿ' – ಎಂದು ಪ್ರತಿಜ್ಞೆಯನ್ನೂ ಮಾಡಿ ಉಭಯಸಮಾನವಾದ ಗೃಹಸ್ಥಧರ್ಮವನ್ನು ಸ್ವೀಕರಿಸುತ್ತಾನೆ. ಹೀಗೆ ಶಾಸ್ತ್ರವಿಧಿಗೆ ಅನುಸಾರವಾಗಿ ವಿವಾಹವಾದ ಪುರುಷರೂ ಕೆಲವು ವೇಳೆ ಧರ್ಮಪತ್ನಿಯನ್ನು ಪರಿತ್ಯಜಿಸಿ ಹೊರಟುಹೋಗುತ್ತಾರೆ. ಅಂತಹ ಸಮಯದಲ್ಲಿ ಅಬಲೆಯರಾದ ಸ್ತ್ರೀಯರು ವ್ಯಭಿಚಾರಕ್ಕೆ ಗುರಿಯಾದರೆ ದೋಷಭಾಗಿಗಳಾಗುವುದಿಲ್ಲ.

ಭರಣಾದ್ಧಿ ಸ್ತ್ರಿಯೋ ಭರ್ತಾ ಪಾಲನಾದ್ಧಿ ಪತಿಸ್ತಥಾ ।
ಗುಣಸ್ಯಾಸ್ಯ ನಿವೃತ್ತೌ ತು ನ ಭರ್ತಾ ನ ಪುನಃ ಪತಿಃ ॥೩೭॥

ಪತ್ನಿಯ ಭರಣ-ಪೋಷಣಾದಿಗಳನ್ನು ಮಾಡುವುದರಿಂದ ಪುರುಷನು ಭರ್ತೃವೆಂದು ಕರೆಯಲ್ಪಡುತ್ತಾನೆ. ಪಾಲನೆಮಾಡುವುದರಿಂದ ಪತಿಯೆಂದು ಕರೆಯಲ್ಪಡುತ್ತಾನೆ. ಭರಣ, ಪಾಲನ–ಈ ಎರಡು ಗುಣಗಳೂ ಪುರುಷನಲ್ಲಿಲ್ಲದಿದ್ದರೆ (ಶಾಸ್ತ್ರೋಕ್ತವಾಗಿ ಮದುವೆಯಾಗಿದ್ದರೂ) ಅಂತಹ ಪುರುಷನು ಪತಿಯೂ ಅಲ್ಲ ; ಭರ್ತೃವೂ ಅಲ್ಲ.

ಏವಂ ಸ್ತ್ರೀ ನಾಪರಾಧ್ನೋತಿ ನರ ಏವಾಪರಾಧ್ಯತಿ ।
ವ್ಯುಚ್ಚರಂಶ್ಚ ಮಹಾದೋಷಂ ನರ ಏವಾಪರಾಧ್ಯತಿ ॥೩೮॥

ಹೀಗೆ ಸ್ತ್ರೀಯು ಕೆಲವು ವೇಳೆ ಅಪರಾಧಮಾಡುವುದೇ ಇಲ್ಲ. ಪುರುಷನೇ ಅಪರಾಧಮಾಡುತ್ತಾನೆ. ವ್ಯಭಿಚಾರವೆಂಬ ಮಹಾಪಾಪಕರ್ಮವನ್ನು ಮಾಡುತ್ತಾ ಪುರುಷನೇ ಅಪರಾಧಿಯಾಗುತ್ತಾನೆ.

ಸ್ತ್ರಿಯಾ ಹಿ ಪರಮೋ ಭರ್ತಾ ದೈವತಂ ಪರಮಂ ಸ್ಮೃತಮ್ ।
ತಸ್ಯಾತ್ಮನಾ ತು ಸದೃಶಮಾತ್ಮಾನಂ ಪರಮಂ ದದೌ ॥೩೯॥

ಸ್ತ್ರೀಗೆ ಪತಿಯೇ ಪರಮಶ್ರೇಷ್ಠನಾದವನು. ಸ್ತ್ರೀಗೆ ಎಲ್ಲ ದೇವತೆಗಳಿಗಿಂತಲೂ ಪತಿಯೇ ಪರಮೋತ್ಕೃಷ್ಟವಾದ ದೇವತೆಯೆಂದು ಹೇಳಲ್ಪಟ್ಟಿದೆ. ತನ್ನ ಪತಿಯ ಶರೀರಕ್ಕೆ ಅನುರೂಪವಾದ ಶರೀರವನ್ನೂ ವೇಷ-ಭೂಷಣಗಳನ್ನೂ ಧರಿಸಿ ಬಂದಿದ್ದ ಇಂದ್ರನನ್ನು ನೋಡಿ–ತನ್ನ ಶ್ರೇಷ್ಠವಾದ ಶರೀರವನ್ನು ನನ್ನ ತಾಯಿಯು ಅವನಿಗೆ ಅರ್ಪಿಸಿದಳು. (ಪತಿಯೆಂಬ ಬುದ್ಧಿ

ಯಿಂದ ಅವಳು ಈ ಕಾರ್ಯವನ್ನು ಮಾಡಿದಳೇ ಹೊರತು ವ್ಯಭಿಚಾರ ಬುದ್ಧಿಯಿಂದ ಮಾಡಲಿಲ್ಲ. ವ್ಯಭಿಚಾರಮಾಡಲೆಂದೇ ಬಂದವನು ಇಂದ್ರನು. ಅವನೇ ಅಪರಾಧಿಯು.)

ನಾಪರಾಧೋಽಸ್ತಿ ನಾರೀಣಾಂ ನರ ಏವಾಪರಾಧ್ಯತಿ ।
ಸರ್ವಕಾರ್ಯಾಪರಾಧ್ಯತ್ವಾನ್ನಾಪರಾಧ್ಯನ್ತಿ ಚಾಙ್ಗನಾಃ ॥೪೦॥

ಇಂತಹ ಸಂದರ್ಭಗಳಲ್ಲಿ ಸ್ತ್ರೀಯ ಅಪರಾಧವೇನೂ ಇರುವುದಿಲ್ಲ. ಪುರುಷನೇ ಅಪರಾಧಿಯಾಗುತ್ತಾನೆ. ಸರ್ವಕಾರ್ಯಗಳಲ್ಲಿಯೂ ಸ್ತ್ರೀಯರಿಗೆ ಶ್ರೇಷ್ಠತೆಯಿಲ್ಲದೇ ಇರುವುದರಿಂದ (ಪುರುಷರೇ ಎಲ್ಲ ಕಾರ್ಯಗಳಿಗೂ ಮುಂದಾಗುವುದರಿಂದ) ಅಂಗನೆಯರು ಅಪರಾಧಮಾಡುವುದೇ ಇಲ್ಲ.

ಯಶ್ಚ ನೋಕ್ತೋಽಥ ನಿರ್ದೇಶಃ ಸ್ತ್ರಿಯಾ ಮೈಥುನತೃಪ್ತಯೇ ।
ತಸ್ಯ ಸ್ಮಾರಯತೋ ವ್ಯಕ್ತಮಧರ್ಮೋ ನಾಸ್ತಿ ಸಂಶಯಃ ॥೪೧॥

ಸ್ತ್ರೀಯೊಬ್ಬಳು ಸುರತಸುಖದ ತೃಪ್ತಿಗಾಗಿ ಯಾವುದೇ ವಿಧವಾದ ಸೂಚನೆಗಳನ್ನು ಕೊಡದಿದ್ದರೂ ಸುರತಕ್ರಿಯೆಗೆ ಆ ಸ್ತ್ರೀಯನ್ನು ಪ್ರಚೋದಿಸುವ ಪುರುಷನಿಗೆ ಪಾಪದ ಸಂಘಟನೆಯಾಗುತ್ತದೆ. ಇದರಲ್ಲಿ ಸಂಶಯವೇ ಇಲ್ಲ.

ಏವಂ ನಾರೀಂ ಮಾತರಂ ಚ ಗೌರವೇ ಚಾಧಿಕೇ ಸ್ಥಿತಾಮ್ ।
ಅವಧ್ಯಾಂ ತು ವಿಜಾನೀಯುಃ ಪಶವೋಽಪ್ಯವಿಚಕ್ಷಣಾಃ ॥೪೨॥

ಹೀಗೆ ವಿಚಾರಮಾಡಿ ನಾರಿಯನ್ನು–ಅದರಲ್ಲಿಯೂ ತಂದೆಗಿಂತಲೂ ಉನ್ನತಸ್ಥಾನದಲ್ಲಿರುವ ತಾಯಿಯನ್ನು–ಅವಧ್ಯಳು ಎಂಬುದಾಗಿ ಅಜ್ಞಾನಿಗಳಾದ ಪಶುಗಳೂ ತಿಳಿದುಕೊಂಡಿರುತ್ತವೆ. (ಹೀಗಿರುವಾಗ ವಿವೇಚನಾ ಶಕ್ತಿಯನ್ನು ಹೊಂದಿರುವ ನಾನು ಹೇಗೆ ತಾನೇ ತಾಯಿಯನ್ನು ಕೊಲ್ಲಲಿ?)

ದೇವತಾನಾಂ ಸಮಾವಾಯಮೇಕಸ್ಥಂ ಪಿತರಂ ವಿದುಃ ।
ಮರ್ತ್ಯಾನಾಂ ದೇವತಾನಾಂ ಚ ಸ್ನೇಹಾದಭ್ಯೇತಿ ಮಾತರಮ್ ॥೪೩॥

ತಂದೆಯ ಉಪಸ್ಥಿತಿಯನ್ನು ಒಂದೇ ಕಡೆಯಲ್ಲಿರುವ ದೇವತೆಗಳ ಸಮೂಹವೆಂದು ವಿದ್ವಾಂಸರು ಭಾವಿಸುತ್ತಾರೆ. ತಂದೆಯ ಸಾನ್ನಿಧ್ಯವಿದ್ದರೆ

ದೇವತೆಗಳ ಸಮೂಹದ ಸಾನ್ನಿಧ್ಯವಿದೆಯೆಂದೇ ತಿಳಿಯಬೇಕು. ಆದರೆ ಮನುಷ್ಯರ ಮತ್ತು ದೇವತೆಗಳ ಸಮೂಹವೇ ಸ್ನೇಹವಶದಿಂದ ತಾಯಿಯಿರುವ ಕಡೆಗೇ ಆಗಮಿಸುತ್ತದೆ ; ಅರ್ಥಾತ್ ತಂದೆಯಿದ್ದರೆ ದೇವತೆಗಳ ಸಮೂಹವು ಮಾತ್ರವೇ ಇದ್ದಂತಾಗುತ್ತದೆ. ತಾಯಿಯಿರುವೆಡೆಯಲ್ಲಿ ದೇವತೆಗಳ ಮತ್ತು ಮರ್ತ್ಯರ ಸಮೂಹವು ಸಾಕ್ಷಾತ್ತಾಗಿಯೇ ಇರುತ್ತದೆ.”

(ಈ ಶ್ಲೋಕದ ಭಾವಾರ್ಥವನ್ನು ತಿಳಿಸುತ್ತಾ ವ್ಯಾಖ್ಯಾನಕಾರರು **ಪಿತೃತೋಷಣೇನ ಸ್ವರ್ಗಪ್ರಾಪ್ತಿಃ**–ಪಿತೃಶುಶ್ರೂಷೆಯಿಂದ ಸ್ವರ್ಗಪ್ರಾಪ್ತಿಯಾಗುತ್ತದೆ. **ಮಾತಾ ತು ಅದೃಷ್ಟದ್ವಾರಾ ಲೋಕದ್ವಯಪ್ರದಾ**– ತಾಯಿಯಾದರೋ ಅದೃಷ್ಟದ ಮೂಲಕವಾಗಿ ಇಹ ಮತ್ತು ಪರಲೋಕಗಳಲ್ಲಿಯೂ ಸುಖವನ್ನುಂಟುಮಾಡುತ್ತಾಳೆ–ಎಂದು ವಿವರಿಸಿರುತ್ತಾರೆ.)

ಯುಧಿಷ್ಠಿರ! ಹೀಗೆ ತಂದೆಯ ಆಜ್ಞಾಪರಿಪಾಲನೆಯ ಯುಕ್ತಾಯುಕ್ತತೆಯನ್ನು ವಿಮರ್ಶಿಸುತ್ತಿದ್ದ, ವಿಳಂಬವಾಗಿಯೇ ಕಾರ್ಯಮಾಡುವ ಸ್ವಭಾವದವನಾಗಿದ್ದ ಚಿರಕಾರಿಯು ಯೋಚಿಸುತ್ತಲೇ ಬಹಳ ಕಾಲವನ್ನು ಕಳೆದುಬಿಟ್ಟನು. ಆ ವೇಳೆಗೆ ಅರಣ್ಯಕ್ಕೆ ಹೋಗಿದ್ದ ಚಿರಕಾರಿಯ ತಂದೆಯೂ ಆಗಮಿಸಿದನು. ಅಷ್ಟರಲ್ಲಿ ತಾಯಿಯನ್ನು ಕೊಲ್ಲುವಂತೆ ಆಜ್ಞಾಪಿಸಿದ್ದ ಗೌತಮನ ಮನಸ್ಸೂ ಬದಲಾಯಿಸಿದ್ದಿತು. ಮಹಾಪ್ರಾಜ್ಞನಾದ, ತಪೋನಿಷ್ಠನಾದ ಮೇಧಾತಿಥಿಗೌತಮನು ಸಂದರ್ಭಾನುಸಾರವಾಗಿ ನಡೆದ ಪತ್ನಿಯ ವ್ಯತಿಕ್ರಮವನ್ನು (ವ್ಯಭಿಚಾರವನ್ನು) ವಿಮರ್ಶಿಸಿ ಅವಳನ್ನು ಸಂಹರಿಸಲು ಮಗನಿಗೆ ಆಜ್ಞಾಪಿಸಿದ್ದುದಕ್ಕಾಗಿ ಪಶ್ಚಾತ್ತಾಪಪಟ್ಟನು. ಬಹಳವಾಗಿ ಪರಿತಪಿಸುತ್ತಿದ್ದ ಗೌತಮನು ದುಃಖದಿಂದ ಕಣ್ಣೀರುಸುರಿಸುತ್ತಾ ವೇದಾಧ್ಯಯನದ ಮತ್ತು ಧೈರ್ಯದ (ಕೋಪವನ್ನು ಜಯಿಸಿದ್ದುದರ) ಪ್ರಭಾವದಿಂದ ಹೀಗೆ ಹೇಳಿದನು :

ಆಶ್ರಮಂ ಮಮ ಸಮ್ಪ್ರಾಪ್ತಸ್ತ್ರಿಲೋಕೇಶಃ ಪುರಂದರಃ ।
ಅತಿಥಿವ್ರತಮಾಸ್ಥಾಯ ಬ್ರಾಹ್ಮಣಂ ರೂಪಮಾಸ್ಥಿತಃ ॥೪೭॥

ಸ ಮಯಾ ಸಾನ್ತ್ವಿತೋ ವಾಗ್ಭಿಃ ಸ್ವಾಗತೇನಾಭಿಪೂಜಿತಃ ।
ಅರ್ಘ್ಯಂ ಪಾದ್ಯಂ ಯಥಾನ್ಯಾಯಂ ಮಯಾ ಚ ಪ್ರತಿಪಾದಿತಃ ॥೪೮॥

"ಮೂರು ಲೋಕಗಳಿಗೂ ಸ್ವಾಮಿಯಾದ ಇಂದ್ರನು ಬ್ರಾಹ್ಮಣವೇಷವನ್ನು ಧರಿಸಿ ಅತಿಥಿವ್ರತವನ್ನು ಆಶ್ರಯಿಸಿ ನನ್ನ ಆಶ್ರಮಕ್ಕೆ ಬಂದಿದ್ದನು. ನಾನು ಅವನನ್ನು ವಿನಯಪೂರ್ವಕವಾದ ಮಾತುಗಳಿಂದ ಸಾಂತ್ವನಗೊಳಿಸಿ ಸ್ವಾಗತವನ್ನಿತ್ತು ಗೌರವಿಸಿದೆನು. ಬ್ರಾಹ್ಮಣವೇಷದಲ್ಲಿ ಬಂದಿದ್ದ ಇಂದ್ರನಿಗೆ ಯಥೋಕ್ತವಾದ ರೀತಿಯಲ್ಲಿ ಅರ್ಘ್ಯ-ಪಾದ್ಯಾದಿಗಳನ್ನಿತ್ತು ಸತ್ಕರಿಸಿದೆನು.

ಪರವಾನಸ್ಮಿ ಚೇತ್ಯುಕ್ತಃ ಪ್ರಣಯಿಷ್ಯತಿ ತೇನ ಚ ।
ಅತ್ರ ಚಾಕುಶಲೇ ಜಾತೇ ಸ್ತ್ರಿಯಾ ನಾಸ್ತಿ ವ್ಯತಿಕ್ರಮಃ ॥೪೯॥

ಹೀಗೆ ಸತ್ಕರಿಸಿದನಂತರ ನಾನು ಆ ಬ್ರಾಹ್ಮಣನೊಡನೆ ಹೇಳಿದೆನು : "ಭಗವನ್! ನಾನು ನಿನ್ನ ಅಧೀನನಾಗಿರುತ್ತೇನೆ. ನಿನ್ನಿಂದ ನಾನು ಸನಾಥನಾದೆನು." ಹೀಗೆ ಹೇಳಿದುದರಿಂದ ಆಗಮಿಸಿರುವ ಅತಿಥಿಯು ನನ್ನ ವಿಷಯದಲ್ಲಿ ಸುಪ್ರೀತನಾಗುವನೆಂಬ ಭಾವನೆಯು ನನ್ನದಾಗಿದ್ದಿತು. ಆದರೆ ಬ್ರಾಹ್ಮಣವೇಷದಲ್ಲಿ ಬಂದಿದ್ದ ಇಂದ್ರನ ವಿಷಯಲೋಲುಪತೆಯಿಂದಾಗಿ ದುಃಖದಾಯಕವಾದ ಘಟನೆಯು ನಡೆದುಹೋಯಿತು. ಇದರಲ್ಲಿ ನನ್ನ ಪತ್ನಿಯ ಅಪರಾಧವೇನೂ ಇರುವುದಿಲ್ಲ.

ಏವಂ ನ ಸ್ತ್ರೀ ನ ಚೈವಾಹಂ ನಾಧ್ವಗಸ್ತ್ರಿದಶೇಶ್ವರಃ ।
ಅಪರಾಧ್ಯತಿ ಧರ್ಮಸ್ಯ ಪ್ರಮಾದಸ್ತ್ವಪರಾಧ್ಯತಿ ॥೫೦॥

ಈ ಸಂದರ್ಭದಲ್ಲಿ ನನ್ನ ಪತ್ನಿಯೂ ಅಪರಾಧಿನಿಯಲ್ಲ. ನಾನೂ ಅಪರಾಧಿಯಲ್ಲ. ಪಥಿಕನಾಗಿ ಬ್ರಾಹ್ಮಣವೇಷದಲ್ಲಿ ಆಗಮಿಸಿದ ದೇವತೆಗಳ ಅಧಿಪತಿಯಾದ ಇಂದ್ರನೂ ಅಪರಾಧಿಯಲ್ಲ. ಸ್ತ್ರೀವಧೆಯನ್ನು ಮಾಡುವಂತೆ ಮಗನಿಗೆ ಆಜ್ಞೆಮಾಡಿ ಧರ್ಮದ ವಿಷಯದಲ್ಲಿ ಎಚ್ಚರತಪ್ಪಿದುದೇ ಅಪರಾಧವಾಗಿದೆ.

ಈರ್ಷ್ಯಾಜಂ ವ್ಯಸನಂ ಪ್ರಾಹುಸ್ತೇನ ಚೈವೋರ್ಧ್ವರೇತಸಃ ।
ಈರ್ಷ್ಯಯಾ ತ್ವಹಮಾಕ್ಷಿಪ್ತೋ ಮಗ್ನೋ ದುಷ್ಕೃತಸಾಗರೇ ॥೫೧॥

ಊರ್ಧ್ವರೇತಸ್ಕರಾದ ಋಷಿಗಳು ಈ ಪ್ರಮಾದವನ್ನು ಈರ್ಷ್ಯೆಯಿಂದ ಹುಟ್ಟಿದ ವ್ಯಸನವೆನ್ನುತ್ತಾರೆ. ಈರ್ಷ್ಯೆಯಿಂದಲೇ ನಾನು ಪಾಪಸಾಗರದಲ್ಲಿ ಎಸೆಯಲ್ಪಟ್ಟವನಾಗಿ ಮುಳುಗಿಹೋದೆನು.

ಹತ್ವಾ ಸಾಧ್ವೀಂ ಚ ನಾರೀಂ ಚ ವ್ಯಸನಿತ್ವಾಚ್ಚ ವಾಸಿತಾಮ್ ।
ಭರ್ತವ್ಯತ್ವೇನ ಭಾರ್ಯಾಂ ಚ ಕೋ ನು ಮಾಂ ತಾರಯಿಷ್ಯತಿ ॥

ಹೀಗೆ ವಿಶೇಷವಾದ ಅನುರಾಗವಿದ್ದುದರಿಂದ ಮನೆಯಲ್ಲೇ ವಾಸಿಸುತ್ತಿದ್ದ (ಸ್ತ್ರೀವ್ಯಸನಿಯಾದ ಇಂದ್ರನಿಂದ ಬಲಾತ್ಕರಿಸಲ್ಪಟ್ಟ) ಸಾಧ್ವಿಯಾಗಿದ್ದ, ಭರಿಸಿ-ಪೋಷಿಸಬೇಕಾಗಿದ್ದುದರಿಂದ ಭಾರ್ಯೆಯೂ ಆಗಿದ್ದ ಸ್ತ್ರೀಯನ್ನು ಕೊಂದ ಬಳಿಕ ನನ್ನನ್ನು ಯಾರು ತಾನೇ ಸ್ತ್ರೀಹತ್ಯಾಮಹಾಪಾಪದಿಂದ ಪಾರುಮಾಡುತ್ತಾರೆ?

ಅನ್ತರೇಣ ಮಯಾಜ್ಞಪ್ತಶ್ಚಿರಕಾರೀತ್ಯುದಾರಧೀಃ ।
ಯದ್ಯದ್ಯ ಚಿರಕಾರೀ ಸ್ಯಾತ್ಸ ಮಾಂ ತ್ರಾಯೇತ ಪಾತಕಾತ್ ॥೫೩॥

ನಾನು ಉದಾರಬುದ್ಧಿಯುಳ್ಳವನಾದ ಚಿರಕಾರಿಗೆ ತನ್ನ ತಾಯಿಯನ್ನು ಕೊಲ್ಲುವಂತೆ ಆಜ್ಞಾಪಿಸಿದ್ದೆನು. ಈಗ ಅವನು ಹೆಸರಿಗೆ ತಕ್ಕಂತೆ ಕಾರ್ಯ ಮಾಡುವುದರಲ್ಲಿ ವಿಳಂಬವನ್ನೇ ಮಾಡಿದ್ದರೆ–ಆಗ ಅವನು ನನ್ನನ್ನು ಈ ಮಹಾಪಾತಕದಿಂದ ಪಾರುಮಾಡಿಯಾನು."–ಹೀಗೆ ಯೋಚಿಸಿ ಗೌತಮನು ಚಿರಕಾರಿಯೊಡನೆ ಹೇಳಿದನು :

ಚಿರಕಾರಿಕ ಭದ್ರಂ ತೇ ಭದ್ರಂ ತೇ ಚಿರಕಾರಿಕ ।
ಯದ್ಯದ್ಯ ಚಿರಕಾರೀ ತ್ವಂ ತತೋಽಸಿ ಚಿರಕಾರಿಕಃ ॥೫೪॥

"ಮಗು! ಚಿರಕಾರಿ! ನಿನಗೆ ಮಂಗಳವಾಗಲಿ. ವಿಳಂಬಿಯೇ! ನಿನಗೆ ಕಲ್ಯಾಣವಾಗಲಿ. ಈ ಸಮಯದಲ್ಲಿ ನೀನು ನಿನ್ನ ಹೆಸರಿಗೆ ಅನುಗುಣವಾಗಿ ಕಾರ್ಯದಲ್ಲಿ ವಿಳಂಬವನ್ನೇ ಮಾಡಿದ್ದರೆ ನೀನು ನಿಶ್ಚಯವಾಗಿಯೂ ಚಿರಕಾರಿಯೇ ಆಗುವೆ. 'ಚಿರಕಾರೀ' ಎಂಬ ನಿನ್ನ ಹೆಸರು ಸಾರ್ಥಕವಾಗುತ್ತದೆ.

ತ್ರಾಹಿ ಮಾಂ ಮಾತರಂ ಚೈವ ತಪೋ ಯಚ್ಚಾರ್ಜಿತಂ ಮಯಾ ।
ಆತ್ಮಾನಂ ಪಾತಕೇಭ್ಯಶ್ಚ ಭವಾದ್ಯ ಚಿರಕಾರಿಕಃ ॥೫೫॥

ಪುತ್ರ! ಈಗ ನೀನು ವಿಳಂಬವಾಗಿ ಕಾರ್ಯಮಾಡುವವನಾಗು. ನನ್ನನ್ನೂ, ನಿನ್ನ ತಾಯಿಯನ್ನೂ ಮತ್ತು ನಾನು ಮಾಡಿರುವ ತಪಸ್ಸಿನ ಫಲವನ್ನೂ ಸಂರಕ್ಷಿಸು. ಮಾತೃಹತ್ಯಾ-ಸ್ತ್ರೀಹತ್ಯಾಪಾತಕಗಳಿಂದ ನಿನ್ನನ್ನೂ ರಕ್ಷಿಸಿಕೊ.

ಸಹಜಂ ಚಿರಕಾರಿತ್ವಮತಿಪ್ರಜ್ಞತಯಾ ತವ ।
ಸಫಲಂ ತತ್ತಥಾ ತೇಽಸ್ತು ಭವಾದ್ಯ ಚಿರಕಾರಿಕಃ ॥೫೭॥

ನೀನು ಅತ್ಯಂತಬುದ್ಧಿವಂತನಾಗಿರುವುದರಿಂದ ಚಿರಕಾರಿತ್ವವೆಂಬುದು ನಿನಗೆ ಸಹಜವಾದ ಗುಣವಾಗಿದೆ. ಆ ಚಿರಕಾರಿತ್ವವು ಈಗ ಸಫಲವಾಗಲಿ. ಈಗ ನೀನು ಕಾರ್ಯದಲ್ಲಿ ವಿಳಂಬಮಾಡು.

ಚಿರಮಾಶಂಸಿತೋ ಮಾತ್ರಾ ಚಿರಂ ಗರ್ಭೇಣ ಧಾರಿತಃ ।
ಸಫಲಂ ಚಿರಕಾರಿತ್ವಂ ಕುರು ತ್ವಂ ಚಿರಕಾರಿಕ ॥೫೮॥

ನಿನ್ನ ತಾಯಿಯು ನಿನ್ನನ್ನು ಮಗನನ್ನಾಗಿ ಪಡೆದುಕೊಳ್ಳಬೇಕೆಂದು ಬಹಳ ಕಾಲದಿಂದಲೂ ಆಶಿಸಿದ್ದಳು. ಬಹಳ ಕಾಲದವರೆಗೆ ನಿನ್ನನ್ನು ಗರ್ಭದಲ್ಲಿ ಧರಿಸಿದ್ದಳು. ಚಿರಕಾರಿಕನೇ! ಕಾರ್ಯದಲ್ಲಿ ವಿಳಂಬಮಾಡುವ ನಿನ್ನ ಸ್ವಭಾವವನ್ನು ಸಫಲಗೊಳಿಸು.

ಚಿರಾಯತೇ ಚ ಸಂತಾಪಾಚ್ಚಿರಂ ಸ್ವಪಿತಿ ವಾರಿತಃ ।
ಆವಯೋಶ್ಚಿರಸಂತಾಪಾದವೇಕ್ಷ್ಯ ಚಿರಕಾರಿಕಃ ॥೫೯॥

ನನ್ನ ಪ್ರಿಯಪುತ್ರನಾದ ಚಿರಕಾರಿಯು–ದುಃಖವೇ ಸನ್ನಿಹಿತವಾಗಿದ್ದರೂ ವಿಳಂಬಿಸಿ ಕಾರ್ಯಮಾಡುವ ಸ್ವಭಾವವನ್ನು ಬಿಡುವವನಲ್ಲ. ಬೇಡವೆಂದರೂ ಬಹಳ ಹೊತ್ತಿನವರೆಗೂ ಮಲಗತಕ್ಕವನು. ನಮಗೆ ಪ್ರಾಪ್ತವಾಗಲಿರುವ ಚಿರಕಾಲದ ಸಂತಾಪವನ್ನು ಗಮನಿಸಿಯಾದರೂ ಇಂದು ನನ್ನ ಮಗನು ವಿಳಂಬದಿಂದ ಕಾರ್ಯಮಾಡಿದವನಾಗಲಿ. (ನಾನು ಹೇಳಿದಂತೆ ಅಹಲ್ಯೆಯನ್ನು ಸಂಹರಿಸದಿರಲಿ.)"

ಯುಧಿಷ್ಠಿರ! ಗೌತಮಮಹರ್ಷಿಯು ಹೀಗೆ ಬಹುದುಃಖಿತನಾಗಿ ತನ್ನ ಸಮೀಪದಲ್ಲಿಯೇ ಇದ್ದ ಚಿರಕಾರಿಯನ್ನು ನೋಡಿದನು. ಚಿರಕಾರಿಯು ತಂದೆಯನ್ನು ನೋಡಿದೊಡನೆಯೇ ಪರಮದುಃಖಿತನಾಗಿ ಕತ್ತಿಯನ್ನು ಬಿಸುಟು ತಂದೆಯ ಪಾದಗಳ ಮೇಲೆ ತಲೆಯನ್ನಿಟ್ಟುಕೊಂಡು ತಂದೆಯನ್ನು ಪ್ರಸನ್ನಗೊಳಿಸಲು ಉಪಕ್ರಮಿಸಿದನು. ತಲೆಯಿಂದ ಕಾಲುಗಳನ್ನು ಮುಟ್ಟುತ್ತಾ ಭೂಮಿಯ ಮೇಲೆ ಚಿರಕಾರಿಯು ಬಿದ್ದುದನ್ನೂ–ಲಜ್ಜಿತಳಾದ ಪತ್ನಿಯು ನಿಶ್ಚೇಷ್ಟಳಾಗಿ ನಿಂತಿರುವುದನ್ನೂ ಕಂಡು ಗೌತಮನು ಪರಮಾ

ನಂದವನ್ನು ಹೊಂದಿದನು. ಜನರಿಂದ ರಹಿತವಾಗಿದ್ದ ಆ ಆಶ್ರಮದಲ್ಲಿದ್ದ ಮಹಾತ್ಮನಾದ ಗೌತಮನು ಪತ್ನಿಯನ್ನೂ–ಧರ್ಮದಲ್ಲಿಯೇ ಏಕಾಗ್ರಚಿತ್ತನಾಗಿದ್ದ ಮಗನಾದ ಚಿರಕಾರಿಯನ್ನೂ ಪುನಃ ಯಾವಾಗಲೂ ಬಿಟ್ಟು ಹೋಗಲಿಲ್ಲ.

ಪತ್ನಿಯು ಮಾಡಿದ ಅಪರಾಧವನ್ನು ಗಮನಿಸಿದ ಗೌತಮನು ಕುಪಿತನಾಗಿ ಚಿರಕಾರಿಗೆ ತಾಯಿಯನ್ನು ಸಂಹರಿಸುವಂತೆ ಆಜ್ಞೆಮಾಡಿ ಜಪ-ಧ್ಯಾನಾದಿಗಳನ್ನು ಮಾಡಲು ಅರಣ್ಯಕ್ಕೆ ಹೊರಟುಹೋದನು. ಚಿರಕಾರಿಯು ಶಸ್ತ್ರಪಾಣಿಯೇ ಆಗಿದ್ದರೂ ತಾಯಿಯ ಸಂಹಾರದ ವಿಷಯವಾಗಿ ಯುಕ್ತಾಯುಕ್ತತೆಯನ್ನು ವಿಚಾರಮಾಡುತ್ತಾ ಬಹಳ ಹೊತ್ತಿನ ವರೆಗೂ ವಿನೀತನಾಗಿಯೇ ನಿಂತಿದ್ದನು. ಆ ಕಾರಣದಿಂದಲೇ ತಂದೆಯ ಆದೇಶದಂತೆ ಚಿರಕಾರಿಯು ತಾಯಿಯ ವಧೆಮಾಡಲಿಲ್ಲ.

ತನ್ನ ಪಾದಗಳಲ್ಲಿ ಬಿದ್ದ ಮಗನನ್ನು ನೋಡಿ ಗೌತಮನು– 'ಚಿರಕಾರಿಯು ಭಯದಿಂದಾಗಿ ಕತ್ತಿಯನ್ನು ಹಿಡಿಯುವ ಚಾಪಲ್ಯವನ್ನು ಮರೆಮಾಚುತ್ತಿದ್ದಾನೆ' – ಎಂಬುದಾಗಿ ಭಾವಿಸಿದನು. ಬಳಿಕ ಗೌತಮನು ಯಾವುದೇ ಸಮಯದಲ್ಲಿಯೂ ವಿಳಂಬವಾಗಿ ಕಾರ್ಯಮಾಡುವ ಸ್ವಭಾವವನ್ನು ಹೊಂದಿರುವುದಕ್ಕಾಗಿ ಚಿರಕಾರಿಯನ್ನು ಬಹಳ ಹೊತ್ತಿನವರೆಗೂ ಪ್ರಶಂಸಿಸಿದನು. ಬಹಳ ಹೊತ್ತಿನವರೆಗೂ ಮಗನ ನೆತ್ತಿಯನ್ನು ಆಘ್ರಾಣಿಸುತ್ತಲೇ ಇದ್ದನು. ಅನಂತರ ಬಹಳ ಹೊತ್ತಿನವರೆಗೂ ಮಗನನ್ನು ಗಾಢವಾಗಿ ಆಲಿಂಗಿಸಿಕೊಂಡಿದ್ದನು. 'ಚಿರಂ ಜೀವ ಪುತ್ರಕ!'–'ಮಗನೇ ಬಹಳ ಕಾಲದವರೆಗೂ ಜೀವಿಸಿರು'–ಎಂದು ಗೌತಮನು ಚಿರಕಾರಿಯನ್ನು ಹೃತ್ಪೂರ್ವಕವಾಗಿ ಹರಸಿದನು. ಪ್ರೀತಿ-ಹರ್ಷಾದಿಗಳಿಂದ ತುಂಬಿಹೋಗಿದ್ದ ಗೌತಮನು ಮಗನನ್ನು ಶ್ಲಾಘಿಸಿ ಈ ಮಾತನ್ನು ಹೇಳಿದನು :

ಚಿರಕಾರಿಕ ಭದ್ರಂ ತೇ ಚಿರಕಾರೀ ಚಿರಂ ಭವ ।
ಚಿರಾಯ ಯದಿ ತೇ ಸೌಮ್ಯ ಚಿರಮಸ್ಮಿ ನ ದುಃಖಿತಃ ॥೬೭॥

"ಚಿರಕಾರಿಕನೇ! ನಿನಗೆ ಮಂಗಳವಾಗಲಿ. ಚಿರಕಾರಿಯಾದ ನೀನು

ಚಿರಂಜೀವಿಯಾಗಿರು. ನೀನು ಬಹಳ ಕಾಲದವರೆಗೂ ಇದೇ ವಿಧವಾದ ಸ್ವಭಾವವುಳ್ಳವನಾಗಿದ್ದರೆ ಚಿರಕಾಲದವರೆಗೂ ನನಗೆ ಯಾವ ವಿಧವಾದ ದುಃಖವೂ ಇರುವುದಿಲ್ಲ. (ನಿನ್ನ ಚಿರಕಾರಿತ್ವದಿಂದ ನಾನು ಬಹುಕಾಲ ದುಃಖಿತನಾಗುವಂತೆ ಆಗಲಿಲ್ಲ.)"

ವಿದ್ವಾಂಸನಾದ ಮುನಿಶ್ರೇಷ್ಠನಾದ ಗೌತಮನು ಹೀಗೆ ಹೇಳಿದನಲ್ಲದೇ ಬಹಳ ಹೊತ್ತಿನವರೆಗೆ ಯೋಚಿಸಿ ಕಾರ್ಯಮಾಡುವ ಧೀರರಾದ ಚಿರಕಾರಿಗಳ ಗುಣೋದ್ದೇಶಗಳನ್ನೊಳಗೊಂಡ ಶ್ಲೋಕಗಳನ್ನು ಹೇಳಿದನು :

ಚಿರೇಣ ಮಿತ್ರಂ ಬಧ್ನೀಯಾಚ್ಚಿರೇಣ ಚ ಕೃತಂ ತ್ಯಜೇತ್ ।
ಚಿರೇಣ ಹಿ ಕೃತಂ ಮಿತ್ರಂ ಚಿರಂ ಧಾರಣಮರ್ಹತಿ ॥೬೯॥

"ಬಹಳ ಕಾಲದವರೆಗೂ ಚೆನ್ನಾಗಿ ಯೋಚಿಸಿ ಒಬ್ಬನೊಡನೆ ಮೈತ್ರಿಯನ್ನು ಬೆಳೆಸಬೇಕು. ಮೈತ್ರಿಯನ್ನು ಬೆಳೆಸಿದ ನಂತರ ಬೇಗ ಮೈತ್ರಿಯನ್ನು ಕಳೆದುಕೊಳ್ಳಬಾರದು. ಒಂದು ವೇಳೆ ಕಳೆದುಕೊಳ್ಳಬೇಕಾಗಿ ಬಂದರೂ ಸಾಧಕ-ಬಾಧಕಗಳನ್ನು ಬಹಳ ಕಾಲದವರೆಗೆ ಯೋಚಿಸಿದ ನಂತರವೇ ಮಿತ್ರನನ್ನು ತ್ಯಜಿಸಬೇಕು. ಬಹಳ ಕಾಲದವರೆಗೂ ಯೋಚಿಸಿ ಒಬ್ಬನೊಡನೆ ಮಾಡಿಕೊಂಡ ಮೈತ್ರಿಯು ಚಿರಕಾಲದವರೆಗೂ ದೃಢವಾಗಿರಲು ಯೋಗ್ಯವಾಗಿರುತ್ತದೆ.

ರಾಗೇ ದರ್ಪೇ ಚ ಮಾನೇ ಚ ದ್ರೋಹೇ ಪಾಪೇ ಚ ಕರ್ಮಣಿ ।
ಅಪ್ರಿಯೇ ಚೈವ ಕರ್ತವ್ಯೇ ಚಿರಕಾರೀ ಪ್ರಶಸ್ಯತೇ ॥೭೦॥

ರಾಗ, ದರ್ಪ, ಅಭಿಮಾನ, ದ್ರೋಹ, ಪಾಪಕರ್ಮ ಮತ್ತು ಅಪ್ರಿಯವಾದ ಕಾರ್ಯ–ಇವುಗಳ ವಿಷಯದಲ್ಲಿ ಯಾವನು ವಿಳಂಬಿಸುತ್ತಾನೆಯೋ–ಅವನು ಪ್ರಶಂಸೆಗೆ ಅರ್ಹನಾಗುತ್ತಾನೆ.

ಬನ್ಧೂನಾಂ ಸುಹೃದಾಂ ಚೈವ ಭೃತ್ಯಾನಾಂ ಸ್ತ್ರೀಜನಸ್ಯ ಚ ।
ಅವ್ಯಕ್ತೇಷ್ವಪರಾಧೇಷು ಚಿರಕಾರೀ ಪ್ರಶಸ್ಯತೇ ॥೭೧॥

ಬಂಧುಗಳು, ಗೆಳೆಯರು, ಸೇವಕರು, ಸ್ತ್ರೀಯರು–ಇವರ ಅವ್ಯಕ್ತವಾದ ಅಪರಾಧಗಳಲ್ಲಿ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿ ಬಂದಾಗ ಬಹಳ ಕಾಲದವರೆಗೂ ಯೋಚಿಸಿ ಕಾರ್ಯಮಾಡುವ ಚಿರಕಾರಿಯು ಪ್ರಶಂಸೆಗೆ ಪಾತ್ರನಾಗುತ್ತಾನೆ."

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಹೀಗೆ ಗೌತಮನು ತನ್ನ ಮಗನು ವಿಳಂಬಿಸಿ ಕಾರ್ಯ ಮಾಡುವ ಸ್ವಭಾವವನ್ನು ಹೊಂದಿರುವುದಕ್ಕಾಗಿ ಅತ್ಯಂತಪ್ರಸನ್ನನಾದನು. ಹೀಗೆ ಎಲ್ಲ ಕಾರ್ಯಗಳನ್ನೂ ಸಾವಧಾನವಾಗಿ ವಿಚಾರಮಾಡಿ ಅನಂತರ ಒಂದು ನಿರ್ಣಯಕ್ಕೆ ಬಂದು ಕಾರ್ಯಮಾಡುವ ಪುರುಷನು ಬಹಳ ಕಾಲದವರೆಗೂ ಪಶ್ಚಾತ್ತಾಪಪಡಬೇಕಾಗುವುದಿಲ್ಲ.

ಚಿರಂ ಧಾರಯತೇ ರೋಷಂ ಚಿರಂ ಕರ್ಮ ನಿಯಚ್ಛತಿ ।
ಪಶ್ಚಾತ್ತಾಪಕರಂ ಕರ್ಮ ನ ಕಿಂಚಿದುಪಪದ್ಯತೇ ॥೭೪॥

ಯಾವನು ಬಹಳ ಕಾಲದವರೆಗೂ ರೋಷವನ್ನು ತನ್ನಲ್ಲಿಯೇ ಧಾರಣೆ ಮಾಡಿಕೊಂಡಿರುವನೋ (ಯಾವುದೇ ಕಾರಣದಿಂದಲೂ ಕೋಪವನ್ನು ಹೊರಗೆಡಹುವುದಿಲ್ಲವೋ), ರೋಷಸಂಬಂಧವಾದ ಕರ್ಮವನ್ನು ಬಹಳ ಕಾಲದವರೆಗೂ ತಡೆದು ನಿಲ್ಲಿಸುವನೋ–ಅಂತಹವನು ಮಾಡುವ ಯಾವುದೇ ಕರ್ಮವೂ ಪಶ್ಚಾತ್ತಾಪಕರವಾಗುವುದಿಲ್ಲ (ಪಶ್ಚಾತ್ತಾಪ ಪಡಬೇಕಾದಂತಹ ಯಾವ ಕಾರ್ಯವನ್ನೂ ಮಾಡುವುದಿಲ್ಲ).

ಚಿರಂ ವೃದ್ಧಾನುಪಾಸೀತ ಚಿರಮನ್ವಾಸ್ಯ ಪೂಜಯೇತ್ ।
ಚಿರಂ ಧರ್ಮಂ ನಿಷೇವೇತ ಕುರ್ಯಾಚ್ಚಾನ್ವೇಷಣಂ ಚಿರಮ್ ॥೭೫॥

ಬಹಳ ಕಾಲದವರೆಗೂ ವೃದ್ಧರ ಸೇವೆಯನ್ನು ಮಾಡುತ್ತಲೇ ಇರಬೇಕು. ಬಹಳ ಕಾಲದವರೆಗೂ ಜ್ಞಾನವೃದ್ಧರನ್ನೇ ಅನುಸರಿಸಿಕೊಂಡಿರುತ್ತಾ ಅವರನ್ನು ಸಂಪೂಜಿಸಬೇಕು. ಬಹಳ ಕಾಲದವರೆಗೂ ಧರ್ಮೋಪಾಸನೆಯನ್ನು ಮಾಡಬೇಕು ಮತ್ತು ಬಹಳ ಕಾಲದವರೆಗೂ ಧರ್ಮವನ್ನು ಅನುಸಂಧಾನ ಮಾಡುತ್ತಲೇ ಇರಬೇಕು.

ಚಿರಮನ್ವಾಸ್ಯ ವಿದುಷಶ್ಚಿರಂ ಶಿಷ್ಟಾನ್ನಿಷೇವ್ಯ ಚ ।
ಚಿರಂ ವಿನೀಯ ಚಾತ್ಮಾನಂ ಚಿರಂ ಯಾತ್ಯನವಜ್ಞತಾಮ್ ॥೭೬॥

ಬಹಳ ಸಮಯ ವಿದ್ವಾಂಸರ ಜೊತೆಯಲ್ಲಿಯೇ ಇರುತ್ತಾ, ಬಹಳ ಹೊತ್ತಿನವರೆಗೂ ಶಿಷ್ಟರನ್ನು ಸೇವಿಸುತ್ತಾ, ದೀರ್ಘಕಾಲ ಮನಸ್ಸನ್ನು

ನಿಗ್ರಹಿಸಿರುವವನು ಬಹಳ ಕಾಲದವರೆಗೂ ತಿರಸ್ಕರಣೀಯನಾಗಿರುವುದಿಲ್ಲ. ಅರ್ಥಾತ್ ಸಮ್ಮಾನಿಸಲ್ಪಡುತ್ತಾನೆ.

ಬ್ರುವತಶ್ಚ ಪರಸ್ಯಾಪಿ ವಾಕ್ಯಂ ಧರ್ಮೋಪಸಂಹಿತಮ್ ।
ಚಿರಂ ಪೃಷ್ಟೋಽಪಿ ಚ ಬ್ರೂಯಾಚ್ಚಿರಂ ನ ಪರಿತಪ್ಯತೇ ॥೭೭॥

ಧರ್ಮಕ್ಕೆ ಸಂಬಂಧಿಸಿದ ಮಾತುಗಳನ್ನು ಹೇಳುವವನು–ಇತರರಿಂದ ಧರ್ಮಸಂಬಂಧವಾದ ಪ್ರಶ್ನೆಗಳು ಕೇಳಲ್ಪಟ್ಟರೆ–ಧರ್ಮೋಪದೇಶಕನು ಬಹಳ ಕಾಲದವರೆಗೂ ಯೋಚಿಸಿ ಉತ್ತರಿಸಬೇಕು. ಹೀಗೆ ಮಾಡುವುದರಿಂದ ಧರ್ಮೋಪದೇಶಕನಾಗಲೀ–ಪ್ರಶ್ನೆಮಾಡುವವನಾಗಲೀ ಬಹಳ ಕಾಲ ದವರೆಗೂ ಪರಿತಾಪಪಡುವಂತಾಗುವುದಿಲ್ಲ.”

ಯುಧಿಷ್ಠಿರ! ಈ ಪ್ರಕರಣವು ನಡೆದನಂತರ ಮಹಾತಪಸ್ವಿಯಾದ ಬ್ರಹ್ಮರ್ಷಿಯಾದ ಗೌತಮನು ಆ ಆಶ್ರಮದಲ್ಲಿಯೇ ಅನೇಕವರ್ಷಗಳವರೆಗೂ ವಾಸಿಸುತ್ತಿದ್ದು ಕಡೆಯಲ್ಲಿ ಚಿರಕಾರಿಯೊಡನೆ ಸ್ವರ್ಗಕ್ಕೆ ಹೋದನು.”

೨೬೬ನೆಯ ಅಧ್ಯಾಯವು ಮುಗಿಯಿತು.

೨೬೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ದ್ಯುಮತ್ಸೇನ–ಸತ್ಯವಂತರ ಸಂವಾದ : ಅಹಿಂಸಾಪೂರ್ವಕವಾದ ರಾಜ್ಯಶಾಸನದ ಶ್ರೇಷ್ಠತೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಥಂ ರಾಜಾ ಪ್ರಜಾ ರಕ್ಷೇನ್ನ ಚ ಕಿಂಚಿತ್ಪ್ರಘಾತಯೇತ್ ।
ಪೃಚ್ಛಾಮಿ ತ್ವಾಂ ಸತಾಂ ಶ್ರೇಷ್ಠ ತನ್ಮೇ ಬ್ರೂಹಿ ಪಿತಾಮಹ ॥೧॥

“ಸತ್ಪುರುಷರಲ್ಲಿ ಶ್ರೇಷ್ಠನಾದವನೇ! ಪಿತಾಮಹ! ಯಾರೊಬ್ಬರನ್ನೂ ಹಿಂಸಿಸದೇ ರಾಜನಾದವನು ಹೇಗೆ ಪ್ರಜೆಗಳನ್ನು ರಕ್ಷಿಸಬೇಕು?–ಎಂಬ ವಿಷಯವನ್ನು ಪ್ರಶ್ನಿಸುತ್ತಿದ್ದೇನೆ. ಈ ವಿಷಯವನ್ನು ನನಗೆ ವಿವರಿಸಿ ಹೇಳು.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಈ ವಿಷಯದಲ್ಲಿ ದ್ಯುಮತ್ಸೇನನಿಗೂ ಮತ್ತು ಸತ್ಯ

ವಂತನಿಗೂ ನಡೆದ ಪುರಾತನವಾದ, ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೂ ಹೇಳುತ್ತೇನೆ.

ದ್ಯುಮತ್ಸೇನನ ರಾಜ್ಯದಲ್ಲಿ ಒಂದು ದಿನ ತಂದೆಯಾದ ದ್ಯುಮತ್ಸೇನನ ಆಜ್ಞೆಯಂತೆ ಅಪರಾಧಿಗಳನ್ನು ಶೂಲಕ್ಕೇರಿಸಲು ಒಯ್ಯುತ್ತಿರಲಾಗಿ, ಅದನ್ನು ಕಂಡ ಸತ್ಯವಂತನು – ಅದುವರೆಗೆ ಯಾರೂ ರಾಜನೊಡನೆ ಹೇಳದಿದ್ದ ಈ ಮಾತನ್ನು ತಂದೆಯಾದ ದ್ಯುಮತ್ಸೇನನೊಡನೆ ಹೇಳಿದನು :

ಅಧರ್ಮತಾಂ ಯಾತಿ ಧರ್ಮೋ ಯಾತ್ಯಧರ್ಮಶ್ಚ ಧರ್ಮತಾಮ್ ।
ವಧೋ ನಾಮ ಭವೇದ್ಧರ್ಮೋ ನೈತದ್ಭವಿತುಮರ್ಹತಿ ॥೪॥

“ತಂದೆಯೇ! ರಾಜ್ಯವ್ಯವಹಾರದಲ್ಲಿ ಕೆಲವು ವೇಳೆ ಧರ್ಮವು ಅಧರ್ಮದ ಸ್ವರೂಪವನ್ನು ಹೊಂದುತ್ತದೆ. ಅಂತೆಯೇ ಅಧರ್ಮವೂ ಧರ್ಮವಾಗಿ ಪರಿಣಮಿಸುತ್ತದೆ. ವಧಿಸುವುದು ಧರ್ಮವೆಂದಾದರೆ ಧರ್ಮವು (ಪ್ರಾಣಿಹಿಂಸಕವಾದ) ಅಧರ್ಮವಾದಂತಾಯಿತು. ಅಧರ್ಮವು (ಪ್ರಾಣಿಹಿಂಸೆಯು) ಧರ್ಮವಾದಂತಾಯಿತು. ಆದುದರಿಂದ ಈ ದಸ್ಯುವಧೆಯು ಸರಿಯಲ್ಲ.”

ದ್ಯುಮತ್ಸೇನನು ಹೇಳುತ್ತಾನೆ :

ಅಥ ಚೇದವಧೋ ಧರ್ಮೋಽಧರ್ಮಃ ಕೋ ಜಾತು ಚಿದ್ಭವೇತ್ ।
ದಸ್ಯವಶ್ಚೇನ್ನ ಹನ್ಯೇರನ್ಸತ್ಯವನ್ಸಂಕರೋ ಭವೇತ್ ॥೫॥

“ಸತ್ಯವಂತನೇ! ಅಪರಾಧಿಯನ್ನು ವಧೆಮಾಡದಿರುವುದು ಧರ್ಮವೆನ್ನುವುದಾದರೆ–ಅಧರ್ಮವೆಂಬುದು ಯಾವುದು? ಅದು ಯಾವಾಗಲೂ ಇರುವುದಿಲ್ಲ. ದರೋಡೆಕಾರರನ್ನೂ, ಕಳ್ಳರನ್ನೂ ಹಿಡಿದು ವಧೆಮಾಡದಿದ್ದರೆ ಪ್ರಜೆಗಳಲ್ಲಿ ವರ್ಣಸಂಕರವೂ–ಧರ್ಮಸಂಕರವೂ ಉಂಟಾಗುತ್ತದೆ.

ಮಮೇದಮಿತಿ ನಾಸ್ಯೈತತ್ಪ್ರವರ್ತೇತ ಕಲೌ ಯುಗೇ ।
ಲೋಕಯಾತ್ರಾ ನ ಚೈವ ಸ್ಯಾದಥ ಚೇದ್ವೇತ್ಥ ಶಂಸ ನಃ ॥೬॥

ಕಲಿಯುಗವು ಪ್ರಾರಂಭವಾದನಂತರ ‘ಇದು ನನ್ನ ವಸ್ತು–ಅವನ ವಸ್ತುವಲ್ಲ’ ಎಂದು ಹೇಳಿಕೊಂಡು ಎಲ್ಲರ ಸಮಕ್ಷದಲ್ಲಿಯೇ ಪರದ್ರವ್ಯವನ್ನು ಅಪಹರಿಸಿಕೊಂಡು ಹೋಗುತ್ತಾರೆ. ಅಂತಹ ದರೋಡೆಗಳಿಗೆ ಅವಕಾಶ

ವನ್ನಿತ್ತು ದರೋಡೆಕಾರರನ್ನು ಸಂಹರಿಸದಿದ್ದರೆ ಲೋಕವ್ಯವಹಾರವೇ ನಡೆಯುವುದಿಲ್ಲ. ದರೋಡೆಕಾರರನ್ನು ವಧೆಮಾಡುವುದಕ್ಕೆ ಬದಲಾಗಿ ದರೋಡೆಗಳನ್ನು ತಪ್ಪಿಸುವ ಬೇರೆ ಯಾವುದಾದರೂ ಉಪಾಯವು ನಿನಗೆ ತಿಳಿದಿದ್ದರೆ ಅದನ್ನು ನಮಗೆ ಹೇಳು."

ಸತ್ಯವಂತನು ಹೇಳುತ್ತಾನೆ :

ಸರ್ವಂ ಏತೇ ತ್ರಯೋ ವರ್ಣಾಃ ಕಾರ್ಯಾ ಬ್ರಾಹ್ಮಣಬನ್ಧನಾಃ ।
ಧರ್ಮಪಾಶನಿಬದ್ಧಾನಾಮನ್ಯೋಽಪ್ಯೇವಂ ಚರಿಷ್ಯತಿ ॥೭॥

"ತಂದೆಯೇ! ಕ್ಷತ್ರಿಯ, ವೈಶ್ಯ, ಶೂದ್ರ–ಈ ಮೂರು ವರ್ಣದವರನ್ನೂ ಬ್ರಾಹ್ಮಣರಿಗೆ ಅಧೀನರನ್ನಾಗಿ ಮಾಡಬೇಕು. ಯಾವಾಗ ಬ್ರಾಹ್ಮಣರನ್ನೇ ಅನುಸರಿಸಿ ಉಳಿದ ಮೂರು ವರ್ಣದವರೂ ಧರ್ಮಪಾಶದಿಂದ ಕಟ್ಟಲ್ಪಟ್ಟವರಾಗಿ ಧರ್ಮವನ್ನು ಯಾವುದೇ ವಿಧವಾದ ಲೋಪವೂ ಇಲ್ಲದಂತೆ ಆಚರಿಸುವರೋ–ಆಗ ದಸ್ಯುಗಳೇ ಮುಂತಾದವರೂ ನಾಲ್ಕು ವರ್ಣದವರಂತೆಯೇ ಧರ್ಮವನ್ನು ಆಚರಿಸಲು ಪ್ರಾರಂಭಿಸುತ್ತಾರೆ.

ಯೋ ಯಸ್ತೇಷಾಮುಪಚರೇತ್ತಮಾಚಕ್ಷೀತ ವೈ ದ್ವಿಜಃ ।
ಅಯಂ ಮೇ ನ ಶೃಣೋತೀತಿ ತಸ್ಮಿನ್ರಾಜಾ ಪ್ರಧಾರಯೇತ್ ॥೮॥

ಅವರಲ್ಲಿ ಯಾರಾದರೂ ಅಪಚಾರವನ್ನು ಮಾಡಿದರೆ ಬ್ರಾಹ್ಮಣನು ಒಡನೆಯೇ ರಾಜನ ಬಳಿಗೆ ಹೋಗಿ– 'ಇಂತಹವನು ನನ್ನ ಉಪದೇಶವನ್ನು ಕೇಳುತ್ತಿಲ್ಲ'–ಎಂದು ದೂರುಕೊಡಬೇಕು. ಅನಂತರವೇ ರಾಜನಾದವನು ಅಪರಾಧಿಗೆ ಶಿಕ್ಷೆಯನ್ನು ವಿಧಿಸಬೇಕು.

ತತ್ತ್ವಾಭೇದೇನ ಯಚ್ಛಾಸ್ತ್ರಂ ತತ್ಕಾರ್ಯಂ ನಾನ್ಯಥಾವಿಧಮ್ ।
ಅಸಮೀಕ್ಷ್ಯೈವ ಕರ್ಮಾಣಿ ನೀತಿಶಾಸ್ತ್ರಂ ಯಥಾವಿಧಿ ॥೯॥

ಶಿಕ್ಷೆಯನ್ನು ವಿಧಿಸುವಾಗಲೂ ಪಂಚಭೂತಗಳೂ ಪ್ರತ್ಯೇಕವಾಗದಂತೆ (ಪ್ರಾಣಾಪಾಯವಾಗದಂತೆ) ಯಾವ ಶಿಕ್ಷೆಯಿರುವುದೋ–ಅಂತಹ ಶಿಕ್ಷೆಯನ್ನೇ ವಿಧಿಸಬೇಕು. ನೀತಿಶಾಸ್ತ್ರವನ್ನು ಯಥಾವಿಧಿಯಾಗಿ ಅಧ್ಯಯನಮಾಡದೇ ಅಪರಾಧಿಯ ಕಾರ್ಯಗಳನ್ನು ಚೆನ್ನಾಗಿ ಪರಿಶೀಲಿಸದೇ ಶಿಕ್ಷೆಯನ್ನು ವಿಧಿಸಬಾರದು.

ದಸ್ಯೂನ್ನಿಹನ್ತಿ ವೈ ರಾಜಾ ಭೂಯಸೋ ವಾಪ್ಯನಾಗಸಃ ।
ಭಾರ್ಯಾ ಮಾತಾ ಪಿತಾ ಪುತ್ರೋ ಹನ್ಯನ್ತೇ ಪುರುಷೇಣ ತೇ ।
ಪರೇಣಾಪಕೃತೋ ರಾಜಾ ತಸ್ಮಾತ್ಸಮ್ಯಕ್ಪ್ರಧಾರಯೇತ್ ॥೧೦॥

ರಾಜನು ದರೋಡೆಕಾರರನ್ನು ವಧಿಸುತ್ತಾನೆ. ಹಾಗೆಯೇ ಸರಿಯಾಗಿ ವಿಚಾರಮಾಡದೇ ಅನೇಕರಾದ ನಿರಪರಾಧಿಗಳನ್ನೂ ವಧಿಸುತ್ತಾನೆ. ಅದರ ಪರಿಣಾಮವಾಗಿ ಮರಣದಂಡನೆಗೆ ಒಳಗಾದವನ ಹೆಂಡತಿ, ತಾಯಿ, ತಂದೆ, ಮಗ–ಇವರೇ ಮುಂತಾದವರು ಜೀವಿಕೆಗೆ ಅವಕಾಶವಿಲ್ಲದೇ ಮರಣವನ್ನಪ್ಪುತ್ತಾರೆ. ಆದುದರಿಂದ ಇತರರಿಂದ ಅಪಕೃತನಾದ ರಾಜನು ಅವರಿಗೆ ಶಿಕ್ಷೆಯನ್ನು ವಿಧಿಸುವ ಮೊದಲು ಚೆನ್ನಾಗಿ ವಿಚಾರಮಾಡಬೇಕು. (ಅವಸರದಲ್ಲಿ ಯಾರಿಗೇ ಆಗಲಿ, ಮರಣದಂಡನೆಯನ್ನು ವಿಧಿಸಬಾರದು.)

ಅಸಾಧುಶ್ಚೈವ ಪುರುಷೋ ಲಭತೇ ಶೀಲಮೇಕದಾ ।
ಸಾಧೋಶ್ಚಾಪಿ ಹ್ಯಸಾಧುಭ್ಯಃ ಶೋಭನಾ ಜಾಯತೇ ಪ್ರಜಾ ॥೧೧॥

ಅಸಾಧುವಾಗಿದ್ದರೂ (ದಸ್ಯುವಾಗಿದ್ದರೂ) ಒಂದೊಂದುವೇಳೆ ಸಾಧುವಿನ ಸಹವಾಸದಿಂದ ಸುಧಾರಣೆಯನ್ನು ಹೊಂದಿ ಒಳ್ಳೆಯ ಶೀಲವನ್ನು ಪಡೆದುಕೊಳ್ಳುತ್ತಾನೆ. ದುಷ್ಟಪುರುಷರಿಂದಲೂ ಸತ್ಸಂತಾನದ ಉತ್ಪತ್ತಿಯಾಗುತ್ತದೆ.

ನ ಮೂಲಘಾತಃ ಕರ್ತವ್ಯೋ ನೈಷ ಧರ್ಮಃ ಸನಾತನಃ ।
ಅಪಿ ಸ್ವಲ್ಪವಧೇನೈವ ಪ್ರಾಯಶ್ಚಿತ್ತಂ ವಿಧೀಯತೇ ॥೧೨॥

ಆದುದರಿಂದ ದುಷ್ಟರಿಗೆ ಮರಣದಂಡನೆಯನ್ನು ವಿಧಿಸಿ ವಂಶದ ಮೂಲವೇ ವಿನಾಶವಾಗುವಂತೆ ಮಾಡಬಾರದು. ಹಾಗೆ ಮಾಡುವುದು ಸನಾತನಧರ್ಮವಲ್ಲ. ಅಪರಾಧಕ್ಕೆ ಅನುಸಾರವಾಗಿ ಅಲ್ಪವಧೆಯೇ (ಹಸ್ತಚ್ಛೇದ-ಪಾದಚ್ಛೇದ ಇತ್ಯಾದಿಗಳು) ಪ್ರಾಯಶ್ಚಿತ್ತರೂಪವಾಗಿ ವಿಧಿಸಲ್ಪಟ್ಟಿದೆ.

ಉದ್ವೇಜನೇನ ಬನ್ಧೇನ ವಿರೂಪಕರಣೇನ ಚ ।
ವಧದಣ್ಡೇನ ತೇ ಕ್ಲಿಶ್ಯಾ ನ ಪುರೋಹಿತಸಂಸದಿ ॥೧೩॥

ಯದಾ ಪುರೋಹಿತಂ ವಾ ತೇ ಪರ್ಯೇಯುಃ ಶರಣೈಷಿಣಃ ।
ಕರಿಷ್ಯಾಮಃ ಪುನರ್ಬ್ರಹ್ಮನ್ನ ಪಾಪಮಿತಿ ವಾದಿನಃ ॥೧೪॥

ತದಾ ವಿಸರ್ಗಮರ್ಹಾಃ ಸ್ಯುರಿತೀದಂ ಧಾತೃಶಾಸನಮ್ ।
ಬಿಭ್ರದ್ದಣ್ಡಾಜಿನಂ ಮುಣ್ಡೋ ಬ್ರಾಹ್ಮಣೋಽರ್ಹತಿ ಶಾಸನಮ್ ॥೧೫॥

ಮೊದಲನೆಯ ಸಲ ಅಪರಾಧಮಾಡಿದವನಿಗೆ – ಪುನಃ ಮಾಡಿದರೆ ಅವನಲ್ಲಿರುವ ಐಶ್ವರ್ಯವೆಲ್ಲವನ್ನೂ ಅಪಹರಿಸುವುದಾಗಿ–ಭಯಪಡಿಸಬೇಕು. ಪುನಃ ಅಪರಾಧಮಾಡಿದರೆ ಅವನಿಗೆ (ನಿಯತಕಾಲದವರೆಗೆ) ಕಾರಾಗೃಹವಾಸವನ್ನು ವಿಧಿಸಬೇಕು. ಮತ್ತೊಮ್ಮೆಯೂ ಅವನು ಅಪರಾಧ ಮಾಡಿದರೆ ಅವನ ಯಾವುದಾದರೂ ಅಂಗವನ್ನು ವಿಕೃತಗೊಳಿಸಬೇಕು. ಆದರೆ ಮರಣದಂಡನೆಯನ್ನೇ ವಿಧಿಸಿ ಅವನ ಬಂಧು-ಮಿತ್ರರಿಗೆ ಕ್ಲೇಶವುಂಟಾಗುವಂತೆ ಮಾಡಬಾರದು. ಪುರೋಹಿತರ ಸಭೆಯಲ್ಲಿ ಪ್ರಧಾನಪುರೋಹಿತನ ಬಳಿಗೆ ಹೋಗಿ ಶರಣಾರ್ಥಿಗಳಾದ ದಸ್ಯುಗಳು – 'ಬ್ರಾಹ್ಮಣೋತ್ತಮ! ಪುನಃ ನಾವು ಹೀಗೆ ಪಾಪಮಾಡುವುದಿಲ್ಲ'–ಎಂದು ಪ್ರತಿಜ್ಞಾಪೂರ್ವಕವಾಗಿ ಹೇಳಿದಲ್ಲಿ ಅಂತಹವರು ಬಂಧವಿಮೋಚನೆಗೆ ಅರ್ಹರಾಗುವರೆಂಬುದು ಬ್ರಹ್ಮನ ಶಾಸನವೇ ಆಗಿದೆ. ದಂಡವನ್ನು ಹಿಡಿದು, ಮುಂಡನವನ್ನು ಮಾಡಿಕೊಂಡು ಮೃಗಚರ್ಮವನ್ನು ಹೊದೆದಿರುವ ಬ್ರಾಹ್ಮಣಸಂನ್ಯಾಸಿಯೂ ಅಪರಾಧಮಾಡಿದಲ್ಲಿ ಶಿಕ್ಷಾರ್ಹನಾಗುತ್ತಾನೆ.

ಗರೀಯಾಂಸೋ ಗರೀಯಾಂಸಮಪರಾಧೇ ಪುನಃ ಪುನಃ ।
ತದಾ ವಿಸರ್ಗಮರ್ಹನ್ತಿ ನ ಯಥಾ ಪ್ರಥಮೇ ತಥಾ ॥೧೬॥

ಮನುಷ್ಯನು ಪುನಃ-ಪುನಃ ಅಪರಾಧಗಳನ್ನು ಮಾಡುತ್ತಲೇ ಇದ್ದರೆ ನ್ಯಾಯಪ್ರಮುಖರು ಅಂತಹ ಅಪರಾಧಿಗೆ ಗುರುತರವಾದ ಶಿಕ್ಷೆಯನ್ನೇ ವಿಧಿಸಬೇಕು. ಮೊದಲನೆಯ ಸಲ ಅಪರಾಧಮಾಡಿದಾಗ ಎಚ್ಚರಿಕೆಯನ್ನಿತ್ತು ಶಿಕ್ಷೆಯನ್ನು ವಿಧಿಸದೇ ಬಿಡುಗಡೆಮಾಡುವಂತೆ, ಪುನಃ-ಪುನಃ ಅಪರಾಧ ಮಾಡಿದಾಗ ಶಿಕ್ಷೆಯನ್ನು ವಿಧಿಸದೇ ಬಿಡುಗಡೆಹೊಂದಲು ಆ ಅಪರಾಧಿಯು ಅರ್ಹನಾಗುವುದಿಲ್ಲ."

ದ್ಯುಮತ್ಸೇನನು ಹೇಳುತ್ತಾನೆ :

ಯತ್ರ ತತ್ರೈವ ಶಕ್ಯೇರನ್ಸಂಯನ್ತುಂ ಸಮಯೇ ಪ್ರಜಾಃ ।
ಸ ತಾವಾನ್ಪ್ರೋಚ್ಯತೇ ಧರ್ಮೋ ಯಾವನ್ನ ಪ್ರತಿಲಙ್ಘ್ಯತೇ ॥೧೭॥

“ಮಗು! ಎಲ್ಲೆಲ್ಲಿ ಪ್ರಜೆಗಳನ್ನು ಧರ್ಮದ ಚೌಕಟ್ಟಿನಲ್ಲಿ ನಿಯಂತ್ರಿಸಲು ಸಾಧ್ಯವಾಗುವುದೋ–ಅಲ್ಲಲ್ಲಿಯೇ ಅವರನ್ನು ಸಮಯದಲ್ಲಿ ನಿಯಂತ್ರಿಸಬೇಕೆಂಬುದು ಧರ್ಮವಾಗಿದೆ. ಎಲ್ಲಿಯವರೆಗೆ ಧರ್ಮದ ಉಲ್ಲಂಘನೆಯಾಗುವುದಿಲ್ಲವೋ–ಅಲ್ಲಿಯವರೆಗೂ ಧರ್ಮವೆಂಬುದು ಉಳಿದಿರುತ್ತದೆ.

ಅಹನ್ಯಮಾನೇಷು ಪುನಃ ಸರ್ವಮೇವ ಪರಾಭವೇತ್ ।
ಪೂರ್ವೇ ಪೂರ್ವತರೇ ಚೈವ ಸುಶಾಸ್ಯಾ ಹ್ಯಭವಞ್ಜನಾಃ ॥೧೮॥

ಮೃದವಃ ಸತ್ಯಭೂಯಿಷ್ಠಾ ಅಲ್ಪದ್ರೋಹಾಲ್ಪಮನ್ಯವಃ ।
ಪುರಾ ಧಿಗ್ದಣ್ಡ ಏವಾಸೀದ್ವಾಗ್ದಣ್ಡಸ್ತದನನ್ತರಮ್ ॥೧೯॥

ಧರ್ಮದ ಉಲ್ಲಂಘನೆಯನ್ನು ಮಾಡುವ ದ್ರೋಹಿಗಳನ್ನು ಸಂಹರಿಸದಿದ್ದಲ್ಲಿ ರಾಜ್ಯದ ಎಲ್ಲ ಪ್ರಕಾರವಾದ ಆಡಳಿತಗಳೂ ಪರಾಭವಗೊಳ್ಳುತ್ತವೆ. ದುಷ್ಟರನ್ನು ಶಿಕ್ಷಿಸದೇ ಇರುವುದರಿಂದ ಸತ್ಪುರುಷರಿಗೆ ಹಾನಿಯುಂಟಾಗುತ್ತದೆ. ಹಿಂದಿನ ಮತ್ತು ಅದಕ್ಕಿಂತಲೂ ಹಿಂದಿನ ಪ್ರಜೆಗಳನ್ನು ಆಳುವುದು ಬಹಳ ಸುಲಭವಾಗಿತ್ತು. ಏಕೆಂದರೆ : ಅವರೆಲ್ಲರೂ ಸಾಮಾನ್ಯವಾಗಿ ಮೃದುಸ್ವಭಾವದವರೂ, ಸತ್ಯದಲ್ಲಿಯೇ ವಿಶೇಷವಾದ ಆಸಕ್ತಿಯುಳ್ಳವರೂ, ಅಲ್ಪಕೋಪರೂ, ಅಲ್ಪದ್ರೋಹಿಗಳೂ ಆಗಿದ್ದರು. ಆದುದರಿಂದ ಹಿಂದಿನವರು ‘ಧಿಕ್’ (ನಿನ್ನ ನಡತೆಗೆ ಧಿಕ್ಕಾರವಿರಲಿ!) ಎಂಬ ಮಾತನ್ನೇ ದೊಡ್ಡ ಶಿಕ್ಷೆಯೆಂದು ಭಾವಿಸುತ್ತಿದ್ದರು. ಕಾಲವು ಕಳೆದಂತೆ ಅಪರಾಧಿಗಳು ಧಿಗ್ದಂಡಕ್ಕೆ ಮಣಿಯಲಿಲ್ಲ. ವಾಗ್ದಂಡವು ಪ್ರಾರಂಭವಾಯಿತು. ಅಪರಾಧಿಗಳನ್ನು ನ್ಯಾಯಾಧಿಕಾರಿಗಳು ಸಾರ್ವಜನಿಕರ ಸಮಕ್ಷದಲ್ಲಿ ಕಟುವಾಗಿ ಟೀಕಿಸತೊಡಗಿದರು. ಕೆಲವು ಕಾಲದವರೆಗೆ ಪ್ರಜೆಗಳು ಅಂತಹ ವಾಗ್ದಂಡಕ್ಕೆ ಹೆದರುತ್ತಿದ್ದರು.

ಆಸೀದಾದಾನದಣ್ಡೋಽಪಿ ವಧದಣ್ಡೋಽದ್ಯ ವರ್ತತೇ ।
ವಧೇನಾಪಿ ನ ಶಕ್ಯನ್ತೇ ನಿಯನ್ತುಮಪರೇ ಜನಾಃ ॥೨೦॥

ವಾಗ್ದಂಡದ ಪರಿಣಾಮವು ಅಪರಾಧಿಗಳಲ್ಲಿ ಕಡಿಮೆಯಾಗುತ್ತಾ ಬರಲಾಗಿ, ಆದಾನದಂಡವು ಪ್ರಾರಂಭವಾಯಿತು. (ಅಪರಾಧಿಯ ಆಸ್ತಿ-ಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಆದಾನದಂಡ.) ಕಾಲಕ್ರಮ

ದಲ್ಲಿ ದಸ್ಯುಗಳು ಅಂತಹ ಶಿಕ್ಷೆಗೂ ಬಗ್ಗದೇ ಇದ್ದುದರಿಂದ ಈಗ ಮರಣದಂಡನೆಯು ಪ್ರಚಲಿತವಾಗಿದೆ. ಆದರೆ ಮರಣದಂಡನೆಯಿಂದಲೂ ಸಿಕ್ಕಿದ ಒಬ್ಬ ದ್ರೋಹಿಯನ್ನು ಮಾತ್ರ ವಧೆಮಾಡಬಹುದಾಗಿದೆಯೇ ಹೊರತು ಇತರ ದರೋಡೆಕಾರರನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. (ಆದುದರಿಂದ ದರೋಡೆಕಾರರು, ದ್ರೋಹಿಗಳು–ಎಲ್ಲಿಯೇ ಇದ್ದರೂ ಅವರನ್ನು ಹಿಡಿದು ಮರಣದಂಡನೆಯನ್ನು ವಿಧಿಸುವುದರಿಂದ ಮಾತ್ರವೇ ಧರ್ಮವನ್ನು ರಕ್ಷಿಸಲು ಸಾಧ್ಯವಾಗುತ್ತದೆ.)

ನೈವ ದಸ್ಯುರ್ಮನುಷ್ಯಾಣಾಂ ನ ದೇವಾನಾಮಿತಿ ಶ್ರುತಿಃ ।
ನ ಗನ್ಧರ್ವಪಿತೄಣಾಂ ಚ ಕಃ ಕಸ್ಯೇಹ ನ ಕಶ್ಚನ ॥೨೧॥

ದರೋಡೆಕಾರನು ಮನುಷ್ಯರಿಗಾಗಲೀ, ದೇವತೆಗಳಿಗಾಗಲೀ, ಗಂಧರ್ವ-ಪಿತೃಗಳಿಗಾಗಲೀ ಆತ್ಮೀಯನಲ್ಲ. ದೇವತೆಗಳೇ ಆದಿಯಾಗಿ ಎಲ್ಲರೂ ದಸ್ಯುವನ್ನು ದ್ವೇಷಿಸುವವರೇ ಆಗಿರುತ್ತಾರೆ. ಪ್ರಪಂಚದಲ್ಲಿ ಯಾವ ದರೋಡೆಕಾರನು ಯಾರಿಗೆ ಬೇಕಾದವನು–ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅವನು ಯಾರಿಗೂ ಬೇಡವಾದವನೆಂಬುದೇ ಯಥಾರ್ಥವಾದ ವಿಷಯವಾಗಿದೆ.

ಪದ್ಮಂ ಶ್ಮಶಾನಾದಾದತ್ತೇ ಪಿಶಾಚಾಚ್ಚಾಪಿ ದೈವತಮ್ ।
ತೇಷು ಯಃ ಸಮಯಂ ಕಶ್ಚಿತ್ಕುರ್ವೀತ ಹತಬುದ್ಧಿಷು ॥೨೨॥

ದರೋಡೆಕಾರನು ಶ್ಮಶಾನಕ್ಕೆ ಹೋಗಿ ಅಲ್ಲಿಂದಲಾದರೂ ಕಮಲವನ್ನು ತರುತ್ತಾನೆ. ಪಿಶಾಚದ ಮೂಲಕವಾದರೂ ದೇವತೆಗಳಿಗೆ ಸಂಬಂಧಿಸಿದ ಐಶ್ವರ್ಯವನ್ನು ಕೊಳ್ಳೆಹೊಡೆದುಕೊಂಡು ಬರುತ್ತಾನೆ. (ದಸ್ಯುವಿಗೆ ಯುಕ್ತಾಯುಕ್ತ ಸ್ಥಳವಿವೇಚನೆಯಿಲ್ಲ. ಶ್ಮಶಾನದಿಂದಲಾದರೂ ತಾವರೇ ಹೂವನ್ನು ಪೂಜೆಗೆ ತರುತ್ತಾನೆ. ಪಿಶಾಚವನ್ನೇ ದೇವತೆಯನ್ನಾಗಿ ಭಾವಿಸುತ್ತಾನೆ.) ಅಂತಹ ಬುದ್ಧಿಶೂನ್ಯರಾಗಿರುವ ದರೋಡೆಕಾರರ ವಿಷಯದಲ್ಲಿ ಯಾವನು ತಾನೇ ವಿಶ್ವಾಸವನ್ನಿಡುತ್ತಾನೆ?”

ಸತ್ಯವಂತನು ಹೇಳುತ್ತಾನೆ :

ತಾನ್ನ ಶಕ್ನೋಷಿ ಚೇತ್ಸಾಧೂನ್ಪರಿತ್ರಾತುಮಹಿಂಸಯಾ ।
ಕಸ್ಯಚಿದ್ಭೂತಭವ್ಯಸ್ಯ ಲಾಭೇನಾನ್ತಂ ತಥಾ ಕುರು ॥೨೩॥

"ತಂದೆಯೇ! ನೀನು ದರೋಡೆಕಾರರನ್ನು ಸಂಹರಿಸದೇ ಸತ್ಪುರುಷರನ್ನು ಸಂರಕ್ಷಿಸಲು ಅಸಮರ್ಥನಾದರೆ–ಲೋಕಕಲ್ಯಾಣಕ್ಕಾಗಿ ಆ ದಸ್ಯುಗಳನ್ನು ಸಂಹರಿಸಿಬಿಡು.*

ರಾಜಾನೋ ಲೋಕಯಾತ್ರಾರ್ಥಂ ತಪ್ಯನ್ತೇ ಪರಮಂ ತಪಃ ।
ತೇಽಪತ್ರಪನ್ತಿ ತಾದೃಗ್ಭ್ಯಸ್ತಥಾವೃತ್ತಾ ಭವನ್ತಿ ಚ ॥೨೪॥

ಪ್ರಜೆಗಳ ಜೀವನವು ಸುಖಕರವಾಗಿರಬೇಕೆಂಬ ಆಶಯದಿಂದ ರಾಜರು ಶ್ರೇಷ್ಠವಾದ ತಪಸ್ಸನ್ನು ಮಾಡುತ್ತಾರೆ. ತಮ್ಮ ಅಧಿಕಾರದಲ್ಲಿ ಪ್ರಜೆಗಳಿಗೆ ದರೋಡೆಕಾರರಿಂದ ತೊಂದರೆಯಾದಲ್ಲಿ ಅವರು ಅದಕ್ಕಾಗಿ ನಾಚಿಕೆಪಟ್ಟುಕೊಳ್ಳುತ್ತಾರೆ ಮತ್ತು ಅದಕ್ಕೆ ತಕ್ಕಂತೆ ನಡೆದುಕೊಳ್ಳುತ್ತಾರೆ.

ವಿತ್ರಾಸ್ಯಮಾನಾಃ ಸುಕೃತೋ ನ ಕಾಮಾದ್ಘ್ನನ್ತಿ ದುಷ್ಕೃತೀನ್ ।
ಸುಕೃತೇನೈವ ರಾಜಾನೋ ಭೂಯಿಷ್ಠಂ ಶಾಸತೇ ಪ್ರಜಾಃ ॥೨೫॥

ಶಿಕ್ಷೆಯಾಗುವುದೆಂಬ ಭಯದಿಂದಲೇ ಪ್ರಜೆಗಳು ಸತ್ಕರ್ಮಪರಾಯಣ ರಾಗುತ್ತಾರೆ. ಭಯವನ್ನುಂಟುಮಾಡಿ ಪ್ರಜೆಗಳನ್ನು ಸದ್ಧರ್ಮಪ್ರವೃತ್ತರನ್ನಾಗಿ ಮಾಡುವುದೇ ಶಿಕ್ಷೆಯ ಉದ್ದೇಶವಾಗಿದೆ. ಒಳ್ಳೆಯ ರಾಜರು ಎಂದಿಗೂ ದುಷ್ಕರ್ಮಿಗಳನ್ನು (ಸ್ವೇಚ್ಛೆಯಿಂದ) ಕೊಂದುಬಿಡುವುದಿಲ್ಲ. ಶ್ರೇಷ್ಠರಾದ ರಾಜರು ಸತ್ಕರ್ಮಗಳಿಂದಲೂ–ಸದ್ವ್ಯವಹಾರಗಳಿಂದಲೂ ಹೆಚ್ಚಾಗಿ ಪ್ರಜೆ ಗಳನ್ನು ಶಾಸನಮಾಡುತ್ತಾರೆ.

ಶ್ರೇಯಸಃ ಶ್ರೇಯಸೋಽಪ್ಯೇವಂ ವೃತ್ತಂ ಲೋಕೋಽನುವರ್ತತೇ।
ಸದೈವ ಹಿ ಗುರೋರ್ವೃತ್ತಮನುವರ್ತನ್ತಿ ಮಾನವಾಃ ॥೨೬॥

ಹೀಗೆ ಪರಮಶ್ರೇಷ್ಠನಾದ ರಾಜನ ಸದ್ವ್ಯವಹಾರಗಳನ್ನೇ ಪ್ರಜೆಗಳೂ

---

* ವ್ಯಾಖ್ಯಾನಕಾರರು ಭೂತಭವ್ಯಶಬ್ದಕ್ಕೆ ಕ್ರತುವೆಂದು ಅರ್ಥಮಾಡಿ ಯಾವುದಾದರೊಂದು ಯಜ್ಞದ ಲಾಭದಿಂದ ಅವರನ್ನು ಅಂತ್ಯಗೊಳಿಸು. ದಸ್ಯುಗಳನ್ನು ಯಜ್ಞದ ಪಶುಗಳನ್ನಾಗಿ ಮಾಡು. ಇದರಿಂದ ಅವರಿಗೆ ಸದ್ಗತಿಯಾದರೂ ಉಂಟಾಗಲಿ. ಪಾಪಿಷ್ಠಾ ಅಪಿ ಯಜ್ಞಪಶೂಭೂಯ ಸ್ವರ್ಗಂ ಯಾನ್ತಿ–ಎಂದು ವ್ಯಾಖ್ಯಾನಿಸಿದ್ದಾರೆ.

ಅನುಸರಣೆಮಾಡುತ್ತಾರೆ. ಸ್ವಾಭಾವಿಕವಾಗಿ ಮನುಷ್ಯರು ಯಾವಾಗಲೂ ಶ್ರೇಷ್ಠಪುರುಷನ (ರಾಜನ) ಆಚರಣೆಗಳನ್ನೇ ಅನುಸರಿಸಿ ನಡೆಯುತ್ತಾರೆ.

(ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ । ಯಥಾ ರಾಜಾ ತಥಾ ಪ್ರಜಾಃ–ಎಂಬುದನ್ನೇ ಈ ಶ್ಲೋಕದಲ್ಲಿ ಪ್ರತಿಪಾದಿಸಲಾಗಿದೆ.)

ಆತ್ಮಾನಮಸಮಾಧಾಯ ಸಮಾಧಿತ್ಸತಿ ಯಃ ಪರಾನ್ ।
ವಿಷಯೇಷ್ವಿನ್ದ್ರಿಯವಶಂ ಮಾನವಾಃ ಪ್ರಹಸನ್ತಿ ತಮ್ ॥೨೭॥

ಯಾವ ರಾಜನು ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳದೇ ವಿಷಯ ಸುಖಗಳಲ್ಲಿಯೇ ಮುಳುಗಿ ಇಂದ್ರಿಯಗಳಿಗೆ ದಾಸನಾಗಿರುವನೋ (ಯಾವಾಗಲೂ ವಿಷಯಾಸಕ್ತನಾಗಿರುವನೋ) ತಾನು ವಿಷಯಾಸಕ್ತನಾಗಿದ್ದರೂ ಇತರರಿಗೆ ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳುವಂತೆಯೂ ಮತ್ತು ಸದಾಚಾರ ಸಂಪನ್ನರಾಗಿರುವಂತೆಯೂ ಉಪದೇಶಿಸುವನೋ–ಅಂತಹ ರಾಜನನ್ನು ನೋಡಿ ಜನರು ಅಪಹಾಸ್ಯಮಾಡುತ್ತಾರೆ.

ಯೋ ರಾಜ್ಞೋ ದಮ್ಭಮೋಹೇನ ಕಿಂಚಿತ್ಕುರ್ಯಾದಸಾಮ್ಪ್ರತಮ್ ।
ಸರ್ವೋಪಾಯೈರ್ನಿಯಮ್ಯಃ ಸ ತಥಾ ಪಾಪಾನ್ನಿವರ್ತತೇ ॥೨೮॥

ಒಬ್ಬ ಮನುಷ್ಯನು ಅಥವಾ ದರೋಡೆಕಾರನು ದಂಭದಿಂದಲೋ ಮೋಹದಿಂದಲೋ ರಾಜನ ವಿಷಯದಲ್ಲಿ ಅನುಚಿತವಾಗಿ ನಡೆದುಕೊಂಡರೆ ಅಂತಹವನನ್ನು ಎಲ್ಲ ವಿಧವಾದ ಉಪಾಯಗಳಿಂದಲೂ ಹತೋಟಿಯಲ್ಲಿಟ್ಟುಕೊಳ್ಳಬೇಕು. ಹಾಗೆ ಮಾಡುವುದರಿಂದ ಅವನು ಪಾಪಕಾರ್ಯದಿಂದ ಹಿಮ್ಮೆಟ್ಟುತ್ತಾನೆ.

ಆತ್ಮೈವಾದೌ ನಿಯನ್ತವ್ಯೋ ದುಷ್ಕೃತಂ ಸಂನಿಯಚ್ಛತಾ ।
ದಣ್ಡಯೇಚ್ಚ ಮಹಾದಣ್ಡೈರಪಿ ಬನ್ಧೂನನನ್ತರಾನ್ ॥೨೯॥

ತನ್ನ ದೇಶದಲ್ಲಿ ನಡೆಯುವ ದುಷ್ಕೃತ್ಯಗಳನ್ನು ತಡೆಯಬೇಕೆಂದು ಇಚ್ಛಿಸುವ ರಾಜನು ಮೊದಲು ತನ್ನ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ಎರಡನೆಯದಾಗಿ : ಅಪರಾಧಮಾಡಿದ ತನ್ನ ಬಂಧುಗಳನ್ನೂ ಮತ್ತು ಜ್ಞಾತಿಗಳನ್ನೂ ಕ್ಷಮಿಸಹೋಗದೇ ಅವರನ್ನೂ ಉಗ್ರವಾಗಿ

ಶಿಕ್ಷಿಸಬೇಕು. (ನಿಷ್ಪಕ್ಷಪಾತಿಯಾದ ಜಿತೇಂದ್ರಿಯನಾದ ಅಂತಹ ರಾಜನು ಮಾತ್ರವೇ ತನ್ನ ದೇಶದಲ್ಲಿ ನಡೆಯುವ ದುಷ್ಕೃತ್ಯಗಳನ್ನು ತಡೆಯಬಲ್ಲನು.)

ಯತ್ರ ವೈ ಪಾಪಕೃನ್ನೀಚೋ ನ ಮಹದ್ದುಃಖಮರ್ಚ್ಛತಿ ।
ವರ್ಧನ್ತೇ ತತ್ರ ಪಾಪಾನಿ ಧರ್ಮೋ ಹ್ರಸತಿ ಚ ಧ್ರುವಮ್ ॥೩೦॥

ಯಾವ ದೇಶದಲ್ಲಿ ಮಹಾಪಾಪಕರ್ಮಗಳನ್ನು ಮಾಡುವ ನೀಚರು ಮಹಾದುಃಖವನ್ನು ಅನುಭವಿಸುವುದಿಲ್ಲವೋ–ಆ ದೇಶದಲ್ಲಿ ಪಾಪಕರ್ಮಗಳು ಹೆಚ್ಚುತ್ತಲೇ ಇರುತ್ತವೆ ಮತ್ತು ಧರ್ಮವೂ ನಿಶ್ಚಯವಾಗಿಯೂ ಕ್ಷೀಣಿಸುತ್ತಲೇ ಇರುತ್ತದೆ.

ತಂದೆಯೇ! ಕರುಣಾಶಾಲಿಯಾದ, ವಿದ್ವಾಂಸನಾದ ಬ್ರಾಹ್ಮಣನೊಬ್ಬನು ನನ್ನೊಡನೆ ಹೀಗೆ ಹೇಳಿದನು : "ಸತ್ಯವಂತ! ಹಿಂದಿನ ಪಿತಾಮಹರು ಕಾರುಣ್ಯದಿಂದ ಆಶ್ವಾಸನೆನೀಡುತ್ತಾ ಹೀಗೆ ನನಗೆ ಅನುಶಾಸನಮಾಡಿದರು. ಕೃತಯುಗದಲ್ಲಿ ರಾಜನು ಮೊದಲನೆಯದಾದ ಅಹಿಂಸಾರೂಪದ ದಂಡ ದಿಂದಲೇ ಪ್ರಜೆಗಳನ್ನು ಜಯಿಸಬೇಕು. (ತನ್ನ ಅಧೀನದಲ್ಲಿಟ್ಟುಕೊಳ್ಳಬೇಕು.)

ತ್ರೇತಾಯುಗವು ಪ್ರಾರಂಭವಾಗುತ್ತಲೇ ಧರ್ಮದ ಒಂದು ಪಾದವು ಊನವಾಗುತ್ತದೆ. ದ್ವಾಪರದಲ್ಲಿ ಧರ್ಮದ ನಾಲ್ಕು ಪಾದಗಳಲ್ಲಿ ಎರಡು ಪಾದಗಳು ಮಾತ್ರವೇ ಉಳಿದಿರುತ್ತವೆ. ಕಲಿಯುಗದಲ್ಲಿ ಒಂದು ಪಾದವು ಮಾತ್ರವೇ ಉಳಿದಿರುತ್ತದೆ.

ತಥಾ ಕಲಿಯುಗೇ ಪ್ರಾಪ್ತೇ ರಾಜ್ಞೋ ದುಶ್ಚರಿತೇನ ಹ ।
ಭವೇತ್ಕಾಲವಿಶೇಷೇಣ ಕಲಾ ಧರ್ಮಸ್ಯ ಷೋಡಶೀ ॥೩೪॥

ಕಲಿಯುಗವು ಪ್ರಾರಂಭವಾಗಿ ಮುಂದುವರಿಯುತ್ತಿದ್ದಂತೆ ರಾಜರ ದುಷ್ಕರ್ಮಗಳ ಕಾರಣದಿಂದ ಮತ್ತು ಕಾಲವಿಶೇಷದಿಂದ ಪೂರ್ಣಧರ್ಮದ ಹದಿನಾರನೆಯ ಒಂದು ಭಾಗವು ಮಾತ್ರವೇ ಉಳಿದಿರುತ್ತದೆ.

ಅಥ ಪ್ರಥಮಕಲ್ಪೇನ ಸತ್ಯವನ್ಸಂಕರೋ ಭವೇತ್ ।
ಆಯುಃ ಶಕ್ತಿಂ ಚ ಕಾಲಂ ಚ ನಿರ್ದಿಶ್ಯ ತಪ ಆದಿಶೇತ್ ॥೩೫॥

ಸತ್ಯವಂತ! ಆಗ ಮೊಟ್ಟಮೊದಲನೆಯದಾದ ಅಹಿಂಸಾತ್ಮಕವಾದ ಶಿಕ್ಷೆಯನ್ನೇ ವಿಧಿಸಿದರೆ ವರ್ಣಸಾಂಕರ್ಯವುಂಟಾಗಿಬಿಡುತ್ತದೆ. ಅಪರಾಧಿಯ ವಯಸ್ಸು, ಶಿಕ್ಷೆಯನ್ನು ತಡೆದುಕೊಳ್ಳಲು ಅವನಲ್ಲಿರುವ ಶಕ್ತಿ ಮತ್ತು ಕಾಲ ಇವುಗಳನ್ನು ಚೆನ್ನಾಗಿ ಪರ್ಯಾಲೋಚಿಸಿ ಅಪರಾಧಿಯನ್ನು ಶಿಕ್ಷಿಸಬೇಕು.

ಸತ್ಯಾಯ ಹಿ ಯಥಾ ನೇಹ ಜಹ್ಯಾದ್ಧರ್ಮಫಲಂ ಮಹತ್ ।
ಭೂತಾನಾಮನುಕಮ್ಪಾರ್ಥಂ ಮನುಃ ಸ್ವಾಯಮ್ಭುವೋಽಬ್ರವೀತ್ ॥೩೬॥

ಪ್ರಾಣಿಗಳ ಅನುಗ್ರಹಾರ್ಥವಾಗಿ ಸ್ವಾಯಂಭುವಮನುವು ಹೀಗೆ ಹೇಳಿದ್ದಾನೆ : "ಸತ್ಯಸಿದ್ಧಿಯ ಪ್ರಯೋಜನವು ಇಷ್ಟವಾದರೆ ಮಹತ್ತರವಾದ ಅಹಿಂಸಾಧರ್ಮವನ್ನು ಬಿಡಬಾರದು."

೨೬೭ನೆಯ ಅಧ್ಯಾಯವು ಮುಗಿಯಿತು.

೨೬೮ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಸ್ಯೂಮರಶ್ಮಿ ಮತ್ತು ಕಪಿಲರ ಸಂವಾದ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅವಿರೋಧೇನ ಭೂತಾನಾಂ ಯೋಗಃ ಷಾಡ್ಗುಣ್ಯಕಾರಕಃ ।
ಯಃ ಸ್ಯಾದುಭಯಭಾಗ್ಧರ್ಮಸ್ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹನೇ! ಪ್ರಾಣಿಗಳಿಗೆ ಅಹಿತವಾಗದಂತೆ ರಾಜನಿಗೆ ಇರಬೇಕಾದ ಆರು ಗುಣಗಳನ್ನು ಕೂಡಿಸಿಕೊಡತಕ್ಕ ಮತ್ತು ಭೋಗ-ಮೋಕ್ಷಗಳೆರಡಕ್ಕೂ ಸಾಧನಭೂತವಾದ ಧರ್ಮವು ಯಾವುದು?–ಎಂಬುದನ್ನು ನನಗೆ ಹೇಳು.

ಗಾರ್ಹಸ್ಥ್ಯಸ್ಯ ಚ ಧರ್ಮಸ್ಯ ಯೋಗಧರ್ಮಸ್ಯ ಚೋಭಯೋಃ ।
ಅದೂರಸಮ್ಪ್ರಸ್ಥಿತಯೋಃ ಕಿಂಸ್ವಿಚ್ಛ್ರೇಯಃ ಪಿತಾಮಹ ॥೨॥

ಭೀಷ್ಮಪಿತಾಮಹ! ಹೆಚ್ಚು ಅಂತರವಿಲ್ಲದ ಗಾರ್ಹಸ್ಥ್ಯಧರ್ಮ ಮತ್ತು ಯೋಗಧರ್ಮ–ಈ ಎರಡರಲ್ಲಿ ಯಾವುದು ಶ್ರೇಷ್ಠವಾದುದು?"

ಭೀಷ್ಮನು ಹೇಳುತ್ತಾನೆ :

ಉಭೌ ಧರ್ಮೌ ಮಹಾಭಾಗಾವುಭೌ ಪರಮದುಶ್ಚರೌ ।
ಉಭೌ ಮಹಾಫಲೌ ತೌ ತು ಸದ್ಭಿರಾಚರಿತಾವುಭೌ ॥೩॥

"ಯುಧಿಷ್ಠಿರ! ಗಾರ್ಹಸ್ಥ್ಯಧರ್ಮ ಮತ್ತು ಯೋಗಧರ್ಮಗಳೆರಡೂ ಮಹಾಸೌಭಾಗ್ಯವನ್ನು ಉಂಟುಮಾಡತಕ್ಕುವುಗಳು. ಆಚರಿಸಲು ಎರಡೂ ಕಷ್ಟಸಾಧ್ಯವಾದುವುಗಳು. ಆದರೆ ನಿಷ್ಠೆಯಿಂದ ಈ ಧರ್ಮಗಳನ್ನು ಪರಿಪಾಲಿಸಿದವರಿಗೆ ಮಹಾಫಲಗಳನ್ನು ಕೊಡತಕ್ಕುವುಗಳಾಗುತ್ತವೆ. ಈ ಎರಡು ಧರ್ಮಗಳೂ ಸತ್ಪುರುಷರಿಂದ ಆಚರಿಸಲ್ಪಟ್ಟಿವೆ.

ಕುಂತೀಪುತ್ರ! ನಾನೀಗ ಈ ಎರಡೂ ಧರ್ಮಗಳ ಪ್ರಾಮಾಣಿಕತೆಯನ್ನು ಪ್ರತಿಪಾದಿಸುತ್ತೇನೆ. ಧರ್ಮಾರ್ಥಗಳ ವಿಷಯದಲ್ಲಿ ನಿನ್ನನ್ನು ಸಂದೇಹರಹಿತನನ್ನಾಗಿ ಮಾಡುತ್ತೇನೆ. ನಾನು ಹೇಳಲಿರುವ ಮಾತನ್ನು ಏಕಾಗ್ರಚಿತ್ತನಾಗಿ ಕೇಳು. ಈ ವಿಷಯದಲ್ಲಿ ಕಪಿಲಮುನಿಗೂ ಮತ್ತು ಗೋವಿಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೂ ತಿಳಿಸುವೆನು, ಕೇಳು.

ಹಿಂದೆ ನಹುಷನು ವೇದಾನುಶಾಸನವನ್ನೇ ಪ್ರಾಚೀನವಾದುದೆಂದೂ, ಶಾಶ್ವತವಾದುದೆಂದೂ, ಸನಾತನವಾದುದೆಂದೂ ಭಾವಿಸಿ, ಅದರ ಗುರಿಯಾದ ಅರ್ಥವನ್ನು ಗ್ರಹಿಸದೇ ತನ್ನ ಮನೆಗೆ ಅತಿಥಿಯಾಗಿ ಆಗಮಿಸಿದ ತ್ವಷ್ಟ್ರುದೇವತೆಯನ್ನು ಒಲಿಸಿಕೊಳ್ಳಲು–'ತ್ವಾಷ್ಟ್ರಂ ಬಹುರೂಪಮಾಲಭೇತ' ಮುಂತಾಗಿ ಶ್ರುತಿಯಲ್ಲಿ ಹೇಳಿರುವಂತೆ ಗವಾಲಂಭನಮಾಡಲು ಉದ್ಯುಕ್ತನಾದನೆಂದು ಕೇಳಿದ್ದೇವೆ. ಆ ಸಮಯಕ್ಕೆ ಸರಿಯಾಗಿ ಸತ್ತ್ವಗುಣಸಂಪನ್ನನಾದ, ಇಂದ್ರಿಯಗಳನ್ನು ನಿಯಂತ್ರಿಸುವುದರಲ್ಲಿಯೇ ನಿರತನಾಗಿದ್ದ, ಮಿತಾಹಾರಿಯಾದ, ಉದಾರಚಿತ್ತನಾದ ಕಪಿಲನು ತ್ವಷ್ಟ್ರುವಿಗಾಗಿ ಕಟ್ಟಿಹಾಕಲ್ಪಟ್ಟಿದ್ದ ಧೇನುವನ್ನು ನೋಡಿದನು.

ಉತ್ತಮವಾದ, ಭಯರಹಿತವಾದ, ಸುಸ್ಥಿರವಾದ, ಸತ್ಯನಿಷ್ಠವಾದ, ಸದ್ಭಾವನಾಯುಕ್ತವಾದ ಮತ್ತು ಉತ್ಸಾಹಯುಕ್ತವಾದ ಬುದ್ಧಿಯನ್ನು ಹೊಂದಿದ್ದ ಕಪಿಲನು ಒಮ್ಮೆ– 'ವೇದಾ' – ಎಂದು ಮೂರು ಮಾತ್ರಾಕಾಲದ

ವರೆಗೆ ಪ್ಲುತವನ್ನು ಉಚ್ಚರಿಸುವುದರ ಮೂಲಕವಾಗಿ ವೇದಪುರುಷನನ್ನು ಸಂಬೋಧಿಸಿ ಹೇಳಿದನು. ("ನಿನ್ನ ಹೆಸರನ್ನು ಹೇಳಿಕೊಂಡು ಲೋಕದ ಜನರು ಇಂತಹ ಅನಾಚಾರಗಳನ್ನು ಮಾಡಲು ಉದ್ಯುಕ್ತರಾಗಿದ್ದಾರೆ!") ಆ ಸಮಯದಲ್ಲಿ ಸ್ಯೂಮರಶ್ಮಿ ಎಂಬ ಹೆಸರಿನ ಋಷಿಯು ತ್ವಷ್ಟ್ರುವಿನ ಆತಿಥ್ಯಕ್ಕಾಗಿ ಕಟ್ಟಿಹಾಕಲ್ಪಟ್ಟಿದ್ದ ಧೇನುವಿನೊಳಗೆ ಸೇರಿಕೊಂಡು ಕಪಿಲನಿಗೆ ಹೇಳಿದನು :

ಹಂಹೋ ವೇದಾಃ ಯದಿ ಮತಾ ಧರ್ಮಾಃ ಕೇನಾಪರೇ ಮತಾಃ ।

"ಅಹೋ ಕಪಿಲನೇ! ನಿನಗೆ ವೇದಗಳ ಪ್ರಾಮಾಣ್ಯದಲ್ಲಿಯೇ ಸಂದೇಹ ವಿರುವುದಾದರೆ ಇತರ ಧರ್ಮಶಾಸ್ತ್ರಗಳನ್ನು ಯಾವುದರ ಆಧಾರದಿಂದ ಪ್ರಮಾಣೀಕರಿಸಲು ಸಾಧ್ಯವಾಗುತ್ತದೆ?

ತಪಸ್ವಿನೋ ಧೃತಿಮನ್ತಃ ಶ್ರುತಿವಿಜ್ಞಾನಚಕ್ಷುಷಃ ।
ಸರ್ವಮಾರ್ಷಂ ಹಿ ಮನ್ಯನ್ತೇ ವ್ಯಾಹೃತಂ ವಿದಿತಾತ್ಮನಃ ॥೧೦॥

ಶ್ರುತಿ-ವಿಜ್ಞಾನಗಳನ್ನೇ ಕಣ್ಣುಗಳನ್ನಾಗಿ ಹೊಂದಿರುವ ಧೈರ್ಯಶಾಲಿಗಳಾದ ತಪಸ್ವಿಗಳು ವೇದವನ್ನು ನಿತ್ಯಜ್ಞಾನಸಂಪನ್ನನಾದ ಪರಮಾತ್ಮನ ನಿಃಶ್ವಾಸರೂಪವಾದ ವಾಣಿಯೆಂದು ತಿಳಿದಿರುತ್ತಾರೆ.

ತಸ್ಯೈವಂ ಗತತೃಷ್ಣಸ್ಯ ವಿಜ್ವರಸ್ಯ ನಿರಾಶಿಷಃ ।
ಕಾ ವಿವಕ್ಷಾಸ್ತಿ ವೇದೇಷು ನಿರಾರಮ್ಭಸ್ಯ ಸರ್ವತಃ ॥೧೧॥

ತೃಷ್ಣೆಯಿಂದ ರಹಿತನಾದ, ಉದ್ವೇಗಶೂನ್ಯನಾದ, ನಿಷ್ಕಾಮನಾದ, ಆರಂಭರಹಿತನಾದ ಪರಮೇಶ್ವರನ ನಿಃಶ್ವಾಸದಿಂದ ಹೊರಟಿರುವ ವೇದಗಳಲ್ಲಿ ವಿಪರೀತವಾದ ಯಾವ ವಾಕ್ಯಗಳಿವೆ? (ಕರ್ಮಹೀನನಾಗಿ ಸರ್ವಸ್ವವನ್ನೂ ತ್ಯಾಗಮಾಡಿರುವ ಕಾಮನಾರಹಿತನಾದ ಸಂನ್ಯಾಸಿಯಾದವನಿಗೆ ವೇದಗಳ ವಿಷಯದಲ್ಲಿ ಹೇಳುವುದೇನಿದೆ?)"

ಕಪಿಲನು ಹೇಳುತ್ತಾನೆ :

ನಾಹಂ ವೇದಾನ್ವಿನಿನ್ದಾಮಿ ನ ವಿವಕ್ಷಾಮಿ ಕರ್ಹಿಚಿತ್ ।
ಪೃಥಗಾಶ್ರಮಿಣಾಂ ಕರ್ಮಾಣ್ಯೇಕಾರ್ಥಾನೀತಿ ನಃ ಶ್ರುತಮ್ ॥೧೨॥

"ನಾನು ವೇದಗಳನ್ನು ನಿಂದೆಮಾಡುವುದಿಲ್ಲ. ವೇದವಿರುದ್ಧವಾದ ಮಾತುಗಳನ್ನೂ ಯಾವಾಗಲೂ ಹೇಳುವುದಿಲ್ಲ. ಪ್ರತ್ಯೇಕ-ಪ್ರತ್ಯೇಕವಾದ ಆಶ್ರಮಗಳಿಗೆ ಯಾವ-ಯಾವ ಕರ್ಮಗಳಿವೆಯೋ ಆಯಾ ಕರ್ಮಗಳ ಪ್ರಯೋಜನಗಳೆಲ್ಲವೂ ಒಂದೇ–ಎಂಬುದನ್ನು ನಾವು ಕೇಳಿದ್ದೇವೆ.

ಗಚ್ಛತ್ಯೇವ ಪರಿತ್ಯಾಗೀ ವಾನಪ್ರಸ್ಥಶ್ಚ ಗಚ್ಛತಿ ।
ಗೃಹಸ್ಥೋ ಬ್ರಹ್ಮಚಾರೀ ಚ ಉಭೌ ತಾವಪಿ ಗಚ್ಛತಃ ॥೧೩॥

ಸರ್ವಸಂಗಪರಿತ್ಯಾಗಿಯಾದ ಸಂನ್ಯಾಸಿಯು ಪರಮಪದಕ್ಕೆ ಹೋಗಿಯೇ ಹೋಗುತ್ತಾನೆ. ವಾನಪ್ರಸ್ಥನೂ ಅಲ್ಲಿಗೇ ಹೋಗುತ್ತಾನೆ. ಗೃಹಸ್ಥ ಮತ್ತು ಬ್ರಹ್ಮಚಾರಿ ಈ ಇಬ್ಬರೂ ಪರಮಪದಕ್ಕೇ ಹೋಗುತ್ತಾರೆ. (ಚತುರಾಶ್ರಮಿಗಳ ಕರ್ಮಗಳು ಬೇರೆ-ಬೇರೆ ಆದರೂ ಅವರ ಉದ್ದೇಶ ಮತ್ತು ಅವರು ತಲುಪುವ ಸ್ಥಳವು ಒಂದೇ ಆಗಿರುತ್ತದೆ.)

ದೇವಯಾನಾ ಹಿ ಪನ್ಥಾನಶ್ಚತ್ವಾರಃ ಶಾಶ್ವತಾ ಮತಾಃ ।
ಏಷಾಂ ಜ್ಯಾಯಃ ಕನೀಯಸ್ತ್ವಂ ಫಲೇಷೂಕ್ತಂ ಬಲಾಬಲಮ್ ॥೧೪॥

ನಾಲ್ಕು ಆಶ್ರಮಗಳೂ ಪರಮಪದಪ್ರಾಪ್ತಿಗೆ ದೇವಯಾನ ಎಂಬ ಹೆಸರಿನ ಶಾಶ್ವತವಾದ ನಾಲ್ಕು ಮಾರ್ಗಗಳಾಗಿವೆ. ಅವುಗಳಲ್ಲಿ ಶ್ರೇಷ್ಠತ್ವ ಕನಿಷ್ಠತ್ವಗಳೂ ಮತ್ತು ಬಲಾಬಲಗಳೂ ಆಯಾ ಆಶ್ರಮಗಳ ಫಲಗಳನ್ನು ನಿಮಿತ್ತಮಾಡಿಕೊಂಡು ಹೇಳಲ್ಪಟ್ಟಿವೆ.*

---

* ದೇವಯಾನ ಎಂಬುದಕ್ಕೆ ವ್ಯಾಖ್ಯಾನಕಾರರು ಆತ್ಮಸಾಕ್ಷಾತ್ಕರ್ತೃಗಳೆಂದು ಅರ್ಥ ಮಾಡಿರುತ್ತಾರೆ. ದೇವಂ ಆತ್ಮಾನಂ ಯಾನ್ತಿ ಏಭಿಃ ಇತಿ ದೇವಯಾನಾಃ–ಇವುಗಳಿಂದ (ಈ ಆಶ್ರಮಗಳಿಂದ) ಆತ್ಮನನ್ನು ಹೊಂದುತ್ತಾರೆ. (ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ.) ಆದುದರಿಂದ ಈ ನಾಲ್ಕು ಆಶ್ರಮಗಳಿಗೂ ದೇವಯಾನಗಳೆಂದೇ ಹೆಸರು. ಆಯಾ ಆಶ್ರಮಗಳ ಫಲಗಳನ್ನು ವ್ಯಾಖ್ಯಾನಕಾರರು ಗ್ರಂಥಾಂತರದಿಂದ ಉದ್ಧರಿಸಿದ್ದಾರೆ :

ಸಂನ್ಯಾಸೀ ಮೋಕ್ಷಮಾಪ್ನೋತಿ ಬ್ರಹ್ಮಲೋಕಂ ವನೀ ತಥಾ ।
ಸ್ವರ್ಲೋಕಮೃಷಿಲೋಕಂ ಚ ಗೃಹಸ್ಥಬ್ರಹ್ಮಚಾರಿಣೌ ॥

ಸಂನ್ಯಾಸಿಗೆ ನೇರವಾಗಿ ಮೋಕ್ಷಪ್ರಾಪ್ತಿ. ಉಳಿದ ಆಶ್ರಮಿಗಳಿಗೆ ಉತ್ತಮ ಲೋಕಗಳ ಪ್ರಾಪ್ತಿಯಾದನಂತರ ಮೋಕ್ಷಪ್ರಾಪ್ತಿ.

ಏವಂ ವಿದಿತ್ವಾ ಸರ್ವಾರ್ಥಾನಾರಭೇತೇತಿ ವೈದಿಕಮ್ ।
ನಾರಭೇತೇತಿ ಚಾನ್ಯತ್ರ ನೈಷ್ಠಿಕೀ ಶ್ರೂಯತೇ ಶ್ರುತಿಃ ॥೧೫॥

ಹೀಗೆ ಕರ್ಮಗಳ ಫಲಗಳನ್ನು ತಿಳಿದುಕೊಂಡು ಸ್ವರ್ಗಾದಿ ಫಲಗಳನ್ನು ಕೊಡುವ ಯಜ್ಞಕರ್ಮಗಳನ್ನು ಆರಂಭಿಸಬೇಕೆಂಬುದು ವೈದಿಕಮತವಾಗಿದೆ. ಮತ್ತೊಂದು ಕಡೆಯಲ್ಲಿ ಸಿದ್ಧಾಂತಭೂತವಾದ ಶ್ರುತಿಯು 'ಕರ್ಮಗಳನ್ನು ಆರಂಭಿಸಲೇ ಕೂಡದು' ಎಂದೂ ಹೇಳುತ್ತದೆ.*

ಅನಾಲಮ್ಭೇ ಹ್ಯದೋಷಃ ಸ್ಯಾದಾಲಮ್ಭೇ ದೋಷ ಉತ್ತಮಃ ।
ಏವಂ ಸ್ಥಿತಸ್ಯ ಶಾಸ್ತ್ರಸ್ಯ ದುರ್ವಿಜ್ಞೇಯಂ ಬಲಾಬಲಮ್ ॥೧೬॥

ಯಜ್ಞಕರ್ಮಗಳಲ್ಲಿ ಪಶ್ವಾಲಂಭನವನ್ನು ಮಾಡದಿದ್ದರೆ ದೋಷವೇನೂ ಉಂಟಾಗುವುದಿಲ್ಲ. ಆಲಂಭನ ಮಾಡಿದರೆ ಮಹಾದೋಷವೇ ಪ್ರಾಪ್ತವಾಗುತ್ತದೆ. ಇಂತಹ ಸ್ಥಿತಿಯಲ್ಲಿ ಶಾಸ್ತ್ರದ (ಶಾಸ್ತ್ರವಾಕ್ಯಗಳ) ಬಲಾಬಲವನ್ನು ತಿಳಿಯುವುದು ಅತ್ಯಂತಕಠಿನವೇ ಆಗುತ್ತದೆ.

(ಶ್ಲೋಕದ ಪೂರ್ವಾರ್ಧದ ಪಾಠಾಂತರವು ಹೀಗಿದೆ. **ಅನಾರಮ್ಭೇ ಹ್ಯದೋಷಃ ಸ್ಯಾದಾರಮ್ಭೇಽದೋಷ ಉತ್ತಮಃ ।** ಕೆಲಸವನ್ನು ಪ್ರಾರಂಭ ಮಾಡದೇ ಇರುವುದರಿಂದ ದೋಷವೇನೂ ಇಲ್ಲ. ಆರಂಭಮಾಡಿದರೂ ದೋಷವಿಲ್ಲ. ಇದೇ ಉತ್ತಮಪಕ್ಷ. ಮೊದಲಿನ ಪಾಠದಲ್ಲಿಯೂ **ಆಲಮ್ಭೇಽದೋಷಃ** ಎಂಬ ಅವಗ್ರಹದ ಚಿಹ್ನೆಯಿರುವುದೇ ಸ್ವಾರಸ್ಯವಾಗಿ ಕಾಣುತ್ತದೆ. ಏಕೆಂದರೆ : **ಅದೋಷಃ** ಎಂದು ಪದವಿಭಾಗಮಾಡಿದರೆ

---

* ಕರ್ಮಗಳನ್ನು ಮಾಡಬೇಕೆಂಬುದರ ಬಗೆಗೆ ಪ್ರಜಾಪತಿಯ ವಚನವು ಹೀಗಿದೆ :

ತ್ರಯೀವಿದ್ಯಾಂ ಬ್ರಹ್ಮಚರ್ಯಂ ಪ್ರಜಾತಿಂ
ಶ್ರದ್ಧಾಂ ತಪೋ ಯಜ್ಞಮನುಪ್ರದಾನಮ್ ।
ಯ ಏತಾನಿ ಕುರ್ವತೇ ತೈರಿತ್ಸಹಸ್ಮೋ
ರಜೋಭೂತಾ ಧ್ವಂಸತೇಽನ್ಯತ್ಪ್ರಶಂಸಮ್ ॥

ಕರ್ಮವನ್ನು ಮಾಡಕೂಡದೆಂಬುದಕ್ಕೆ ವಾರ್ತಿಕಕಾರರಿಂದ ಉದಾಹರಿಸಲ್ಪಟ್ಟಿರುವ ಭಲ್ಲವಿಶಾಖಾವಚನವು ಹೀಗಿದೆ :

ತ್ಯಾಗ ಏವ ಹಿ ಸರ್ವೇಷು ಮೋಕ್ಷಸಾಧನಮುತ್ತಮಮ್ ।
ತ್ಯಜತೈವ ಹಿ ವಿಜ್ಞೇಯಂ ತ್ಯಕ್ತುಃ ಪ್ರತ್ಯಕ್ಪರಂ ಪದಮ್ ॥

ಶ್ರುತಿಯ ಎರಡು ಪ್ರಕಾರವಾದ ವಾಕ್ಯಗಳನ್ನೂ ಹೇಳಿದಂತಾಗುತ್ತದೆ. ಪಶ್ವಾಲಂಭನ ಮಾಡದಿದ್ದರೂ ದೋಷವಿಲ್ಲ. ಪಶ್ವಾಲಂಭನೆಯೂ ದೋಷಯುಕ್ತವಲ್ಲ. ಇದೇ ಉತ್ತಮಪಕ್ಷ. ಹೀಗೆ ಅರ್ಥಮಾಡುವುದರಿಂದಲೇ ಉತ್ತರಾರ್ಧದ ಅರ್ಥಕ್ಕೆ ಸಾಮಂಜಸ್ಯವುಂಟಾಗುತ್ತದೆ.)

ಯದ್ಯತ್ರ ಕಿಞ್ಚಿತ್ಪ್ರತ್ಯಕ್ಷಮಹಿಂಸಾಯಾಃ ಪರಂ ಮತಮ್ ।
ಋತೇತ್ವಾಗಮಶಾಸ್ತ್ರೇಭ್ಯೋ ಬ್ರೂಹಿ ತದ್ಯದಿ ಪಶ್ಯಸಿ ॥೧೭॥

ಅಹಿಂಸೆಯೇ ಶ್ರೇಷ್ಠವಾದ ಧರ್ಮ. ಅದಕ್ಕಿಂತಲೂ ಶ್ರೇಷ್ಠವಾದ ಧರ್ಮವು ಬೇರೆ ಯಾವುದಾದರೂ ಇದೆಯೆಂಬುದಕ್ಕೆ ಪ್ರತ್ಯಕ್ಷಶ್ರುತಿವಾಕ್ಯಗಳೇನಾದರೂ ನಿನಗೆ ಕಂಡುಬಂದಿದ್ದರೆ ತಿಳಿಸು. ಆ ವಾಕ್ಯಗಳನ್ನು ಅಶಾಸ್ತ್ರೀಯವೆಂದು ತ್ಯಾಗಮಾಡಬೇಕಾಗಿಲ್ಲ."

ಸ್ವರ್ಗಕಾಮೋ ಯಜೇತೇತಿ ಸತತಂ ಶ್ರೂಯತೇ ಶ್ರುತಿಃ ।
ಫಲಂ ಪ್ರಕಲ್ಪ್ಯ ಪೂರ್ವಂ ಹಿ ತತೋ ಯಜ್ಞಃ ಪ್ರತಾಯತೇ ॥೧೮॥

ಸ್ಯೂಮರಶ್ಮಿಯು ಹೇಳುತ್ತಾನೆ :

" 'ಸ್ವರ್ಗಕಾಮೋ ಅಶ್ವಮೇಧೇನ ಯಜೇತ'–'ಸ್ವರ್ಗಕ್ಕೆ ಹೋಗಲು ಇಚ್ಛಿಸುವವನು ಅಶ್ವಮೇಧಯಾಗವನ್ನು ಮಾಡಬೇಕು'–ಎಂದು ಶ್ರುತಿಯು ಪದೇ ಪದೇ ಹೇಳುತ್ತದೆ. (ಇಂತಹ ವಾಕ್ಯಗಳು ವೇದದಲ್ಲಿ ಹಲವಾರು ಬಾರಿ ಬರುತ್ತವೆ). ಆದುದರಿಂದ ಮನುಷ್ಯನು ಮೊದಲು ಸ್ವರ್ಗಫಲವನ್ನು ಸಂಕಲ್ಪಿಸಿ ಅನಂತರ ಯಜ್ಞವನ್ನು ಪ್ರಾರಂಭಿಸುತ್ತಾನೆ. (ಸ್ವರ್ಗಕ್ಕೆ ಹೋಗಬೇಕೆಂಬ ಉದ್ದೇಶವೇ ಹೊರತು ಯಜ್ಞದ ಮೂಲಕವಾಗಿ ಪ್ರಾಣಿಯನ್ನು ಹಿಂಸಿಸಿ ಮಾಂಸವನ್ನು ಭಕ್ಷಿಸಬೇಕೆಂಬುದು ಉದ್ದೇಶವಲ್ಲ.)

ಅಜಶ್ಚಾಶ್ವಶ್ಚ ಮೇಷಶ್ಚ ಗೌಶ್ಚ ಪಕ್ಷಿಗಣಾಶ್ಚ ಯೇ ।
ಗ್ರಾಮ್ಯಾರಣ್ಯಾಶ್ಚೌಷಧಯಃ ಪ್ರಾಣಸ್ಯಾನ್ನಮಿತಿ ಶ್ರುತಿಃ ॥೧೯॥

ಕುರಿ, ಕುದುರೆ, ಆಡು, ಹಸು, ಪಕ್ಷಿಗಳು, ಗ್ರಾಮದಲ್ಲಿ ಸಿಕ್ಕುವ ಮತ್ತು ಅರಣ್ಯದಲ್ಲಿ ಸಿಕ್ಕುವ ಓಷಧಿಗಳು–ಪ್ರಾಣಕ್ಕೆ (ಜೀವನಕ್ಕೆ) ಅನ್ನಗಳಾಗುವುವೆಂದು ಶ್ರುತಿಯು ಹೇಳುತ್ತದೆ.

(ಮನುಷ್ಯರಿಗೆ ಅಶ್ವಾದಿಗಳೂ–ಪಕ್ಷಿಯೇ ಮೊದಲಾದುವುಗಳೂ ಅನ್ನವೆಂಬುದಕ್ಕೆ ಶ್ರುತಿಯ ಪ್ರಮಾಣವು ಹೀಗಿದೆ : ಸ ಹೋವಾಚ ಕಿಂ ಮೇಽನ್ನಂ ಭವಿಷ್ಯತೀತಿ ಯತ್ಕಿಂಚಿದಿದಮಾಶ್ವಭ್ಯ ಆಶಕುನಿಭ್ಯಃ ॥)

ತಥೈವಾನ್ನಂ ಹ್ಯಹರಹಃ ಸಾಯಂ ಪ್ರಾತರ್ನಿರೂಪ್ಯತೇ ।
ಪಶವಶ್ಚಾಥ ಧಾನ್ಯಂ ಚ ಯಜ್ಞಸ್ಯಾಙ್ಗಮಿತಿ ಶ್ರುತಿಃ ॥೨೦॥

ಅದೇ ರೀತಿಯಲ್ಲಿ ಪ್ರತಿನಿತ್ಯವೂ ಸಾಯಂಕಾಲ-ಪ್ರಾತಃಕಾಲಗಳಲ್ಲಿ ಅನ್ನವು ಪ್ರಾಣಕ್ಕೆ ಭೋಜ್ಯವಸ್ತುವೆಂದೂ–ಪಶುಗಳೂ ಮತ್ತು ಧಾನ್ಯವೂ ಯಜ್ಞದ ಅಂಗವೆಂದೂ ಶ್ರುತಿಯೇ ಹೇಳುತ್ತದೆ.

ಏತಾನಿ ಸಹ ಯಜ್ಞೇನ ಪ್ರಜಾಪತಿರಕಲ್ಪಯತ್ ।
ತೇನ ಪ್ರಜಾಪತಿರ್ದೇವಾನ್ಯಜ್ಞೇನಾಯಜತ ಪ್ರಭುಃ ॥೨೧॥

ಪ್ರಜಾಪತಿಯು ಯಜ್ಞದೊಡನೆಯೇ ಯಜ್ಞಾಂಗಗಳಾದ ಈ ಸಕಲ ವಸ್ತುಗಳನ್ನೂ ಸೃಷ್ಟಿಸಿದನು. ಪುನಃ ಪ್ರಜಾಪತಿಯೇ ಯಜ್ಞದ ಈ ಸಾಮಗ್ರಿಗಳ ಮೂಲಕವಾಗಿ ದೇವತೆಗಳಿಗಾಗಿ ಯಜ್ಞವನ್ನು ಮಾಡಿದನು.

ತದನ್ಯೋನ್ಯವರಾಃ ಸರ್ವೇ ಪ್ರಾಣಿನಃ ಸಪ್ತ ಸಪ್ತಧಾ ।
ಯಜ್ಞೇಷೂಪಾಕೃತಂ ವಿಶ್ವಂ ಪ್ರಾಹುರುತ್ತಮಸಂಜ್ಞಿತಮ್ ॥೨೨॥

ಏಳು-ಏಳು ಪ್ರಕಾರವಾದ ಯಾವ ಗ್ರಾಮದ ಮತ್ತು ಅರಣ್ಯದ ಪ್ರಾಣಿಗಳಿವೆಯೋ–ಅವುಗಳಲ್ಲಿ ಒಂದು ಮತ್ತೊಂದಕ್ಕಿಂತಲೂ ಶ್ರೇಷ್ಠವಾದುದು. ಯಜ್ಞದಲ್ಲಿ ಮಂತ್ರದಿಂದ ಅಭಿಮಂತ್ರಿಸಿ ಕೊಲ್ಲಲ್ಪಟ್ಟ ವಿಶ್ವದ ಪ್ರಾಣಿಗಳನ್ನು 'ಉತ್ತಮ' ಎಂಬ ಸಂಜ್ಞೆಯಿಂದ ಕರೆಯುತ್ತಾರೆ.*

---

* ಸಪ್ತಗ್ರಾಮ್ಯಪಶುಗಳು : **ಗೌರಜೋ ಮಾನುಷೋಽಶ್ವಶ್ಚ ಮೇಷಾಶ್ವತರಗರ್ದಭಾಃ । ಗ್ರಾಮ್ಯಾಃ ಸಪ್ತ ಸಮಾಖ್ಯಾತಾಃ ಪಶವಃ ಸಾಧುವೇದಿಭಿಃ ॥** ಹಸು, ಕುರಿ, ಮನುಷ್ಯ, ಕುದುರೆ, ಆಡು, ಹೇಸರಗತ್ತೆ, ಕತ್ತೆ–ಇವು ಏಳು ಗ್ರಾಮ್ಯಪಶುಗಳು. **ಸಿಂಹಾ ವ್ಯಾಘ್ರಾ ವರಾಹಾಶ್ಚ ಮಹಿಷಾ ವಾರಣಾಸ್ತಥಾ । ಋಕ್ಷಾಶ್ಚ ವಾನರಾಶ್ಚೈವ ಸಪ್ತಾರಣ್ಯಾಃ ಪ್ರಕೀರ್ತಿತಾಃ ॥** ಸಿಂಹಗಳು, ಹುಲಿಗಳು, ಕಾಡುಹಂದಿಗಳು, ಕಾಡೆಮ್ಮೆಗಳು, ಆನೆಗಳು, ಕರಡಿಗಳು ಮತ್ತು ಕಪಿಗಳು–ಈ ಏಳೂ ಅರಣ್ಯಪಶುಗಳೆಂದು ಪ್ರಸಿದ್ಧವಾಗಿವೆ.

ಏತಚ್ಚೈವಾಭ್ಯನುಜ್ಞಾತಂ ಪೂರ್ವೈಃ ಪೂರ್ವತರೈಸ್ತಥಾ ।
ಕೋ ಜಾತು ನ ವಿಚಿನ್ವೀತ ವಿದ್ವಾನ್ಸ್ವಾಂ ಶಕ್ತಿಮಾತ್ಮನಃ ॥೨೩॥

ಹಿಂದಿನವರೂ ಮತ್ತು ಅವರಿಗಿಂತಲೂ ಹಿಂದಿನವರೂ ಸಪ್ತಗ್ರಾಮ್ಯ ಪಶುಗಳನ್ನೂ–ಸಪ್ತಾರಣ್ಯಪಶುಗಳನ್ನೂ ಯಜ್ಞದ ಅಂಗಗಳೆಂದೇ ಭಾವಿಸಿದ್ದರು. ಆದುದರಿಂದ ಯಾವ ವಿದ್ವಾಂಸನು ತಾನೇ ತನ್ನ ಶಕ್ತಿಗೆ ಅನುಗುಣವಾಗಿ ತನ್ನ ಆಯುಷ್ಯದಲ್ಲಿ ಯಾವಾಗಲಾದರೊಮ್ಮೆ ಯಾವುದಾದರೂ ಯಜ್ಞವನ್ನು ಮಾಡದೇ ಇರುವನು?

ಪಶವಶ್ಚ ಮನುಷ್ಯಾಶ್ಚ ದ್ರುಮಾಶ್ಚೌಷಧಿಭಿಃ ಸಹ ।
ಸ್ವರ್ಗಮೇವಾಭಿಕಾಂಕ್ಷನ್ತೇ ನ ಚ ಸ್ವರ್ಗಸ್ತತೋ ಮಖಾತ್ ॥೨೪॥

ಪಶುಗಳು, ಮನುಷ್ಯರು, ಓಷಧಿಲತೆಗಳು, ವೃಕ್ಷಗಳು–ಈ ಎಲ್ಲರೂ ಸ್ವರ್ಗಾಪೇಕ್ಷಿಗಳೇ ಆಗಿರುತ್ತಾರೆ. ಯಜ್ಞದ ಹೊರತಾಗಿ ಸ್ವರ್ಗವು ಪ್ರಾಪ್ತವಾಗುವುದೂ ಇಲ್ಲ. ಆದುದರಿಂದ ಸ್ವರ್ಗಾಪೇಕ್ಷಿಗಳೆಲ್ಲರೂ ಯಜ್ಞಮಾಡುವುದು ಅನಿವಾರ್ಯವೇ ಆಗಿದೆ. ಪ್ರಾಣಿಗಳಿಗೆ ಯಜ್ಞವು ಸ್ವರ್ಗಪ್ರಾಪಕವಾದುದರಿಂದ ಇಲ್ಲಿ ಹಿಂಸೆಯ ಪ್ರಶ್ನೆಯೇ ಇಲ್ಲ. ನ ವಾ ಉ ವೇತಸ್ಮಿನ್ಮ್ರಿಯಸೇ ನರಿಷ್ಯಸಿ ದೇವಾಗ್ಂ ಇದೇಷಿ ಪಥಿಭಿಃ ಸುಗೇಭಿಃ – ಎಂಬ ವೇದಮಂತ್ರವೂ ಯಜ್ಞಕರ್ಮದಿಂದ ಪ್ರಾಣಿಗಳಿಗೆ ಹಿಂಸೆಯಾಗುವುದಿಲ್ಲವೆಂಬುದನ್ನು ದೃಢಪಡಿಸುತ್ತದೆ.

ಓಷಧ್ಯಃ ಪಶವೋ ವೃಕ್ಷಾ ವೀರುದಾಜ್ಯಂ ಪಯೋ ದಧಿ ।
ಹವಿರ್ಭೂಮಿರ್ದಿಶಃ ಶ್ರದ್ಧಾ ಕಾಲಶ್ಚೈತಾನಿ ದ್ವಾದಶ ॥೨೫॥

ಓಷಧಿಗಳು (ಯವಾದಿಗಳು), ಪಶುಗಳು, ವೃಕ್ಷಗಳು, ಬಳ್ಳಿಗಳು, ತುಪ್ಪ, ಹಾಲು, ಮೊಸರು, ಇತರ ಹವಿಸ್ಸುಗಳು, ಭೂಮಿ, ದಿಕ್ಕುಗಳು, ಶ್ರದ್ಧೆ ಮತ್ತು ಕಾಲ–ಈ ಹನ್ನೆರಡೂ ಯಜ್ಞದ ಅಂಗಗಳು.

ಋಚೋ ಯಜೂಂಷಿ ಸಾಮಾನಿ ಯಜಮಾನಶ್ಚ ಷೋಡಶ ।
ಅಗ್ನಿರ್ಜ್ಞೇಯೋ ಗೃಹಪತಿಃ ಸ ಸಪ್ತದಶ ಉಚ್ಯತೇ ॥೨೬॥

ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಯಜಮಾನ–ಈ

ನಾಲ್ಕು ಸೇರಿದರೆ ಯಜ್ಞಾಂಗಗಳು ಹದಿನಾರಾಗುತ್ತವೆ. ಗಾರ್ಹಪತ್ಯಾಗ್ನಿಯು ಹದಿನೇಳನೆಯ ಯಜ್ಞಾಂಗವಾಗಿದೆ.

ಅಙ್ಗಾನ್ಯೇತಾನಿ ಯಜ್ಞಸ್ಯ ಯಜ್ಞೋ ಮೂಲಮಿತಿ ಶ್ರುತಿಃ ।
ಆಜ್ಯೇನ ಪಯಸಾ ದಧ್ನಾ ಶಕೃತಾಮಿಕ್ಷಯಾ ತ್ವಚಾ ॥೨೮॥

ವಾಲೈಃ ಶೃಙ್ಗೇಣ ಪಾದೇನ ಸಮ್ಭವತ್ಯೇವ ಗೌರ್ಮುಖಮ್ ।
ಏವಂ ಪ್ರತ್ಯೇಕಶಃ ಸರ್ವಂ ಯದ್ಯದಸ್ಯ ವಿಧೀಯತೇ ॥೨೯॥

ಮೇಲೆ ಹೇಳಿದ ಹದಿನೇಳು ವಸ್ತುಗಳು ಯಜ್ಞಾಂಗಗಳಾಗಿವೆ. (ಯಜ್ಞಾದ್ಭವತಿ ಪರ್ಜನ್ಯಃ–ಎಂದು ಗೀತೆಯಲ್ಲಿ ಹೇಳಿರುವಂತೆ) ಪ್ರಪಂಚದ ವಿಸ್ತಾರಕ್ಕೆ ಯಜ್ಞವೇ ಮೂಲಕಾರಣವೆಂದು ಶ್ರುತಿಯು ಘೋಷಿಸುತ್ತದೆ. ತುಪ್ಪ, ಹಾಲು, ಮೊಸರು, ಸಗಣಿ, ಒಡೆದ ಹಾಲಿನ ಗಡ್ಡೆ, ಚರ್ಮ, ಬಾಲದ ಕೂದಲುಗಳು, ಕೊಂಬು, ಕಾಲು (ಗೊರಸು)–ಈ ಉಪಕರಣಗಳಿಂದ ಗೋಯಜ್ಞವನ್ನು ಮಾಡುತ್ತಾರೆ. ಹಾಗೆಯೇ ಯಾವ ಯಾವ ವಸ್ತುಗಳು ಸಂಗ್ರಹಕ್ಕೆ ವಿಧಿಸಲ್ಪಟ್ಟಿವೆಯೋ ಆಯಾ ವಸ್ತುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಸಂಗ್ರಹಿಸಲೇಬೇಕು.*

ಯಜ್ಞಂ ವಹನ್ತಿ ಸಮ್ಭೂಯ ಸಹರ್ತ್ವಿಗ್ಭಿಃ ಸದಕ್ಷಿಣೈಃ ।
ಸಂಹೃತ್ಯೈತಾನಿ ಸರ್ವಾಣಿ ಯಜ್ಞಂ ನಿರ್ವರ್ತಯನ್ತ್ಯುತ ॥೨೯॥

ಋತ್ವಿಜರು ಮತ್ತು ದಕ್ಷಿಣೆಗಳಿಂದ ಸಮೇತರಾಗಿ ಯಜ್ಞವನ್ನು ನಿರ್ವಹಿಸುತ್ತಾರೆ. ಯಜಮಾನನು ಈ ಎಲ್ಲ ವಸ್ತುಗಳನ್ನೂ ಸಂಗ್ರಹಿಸಿ ಯಜ್ಞವನ್ನು ಮಾಡುತ್ತಾನೆ.

ಯಜ್ಞಾರ್ಥಾನಿ ಹಿ ಸೃಷ್ಟಾನಿ ಯಥಾರ್ಥಾ ಶ್ರೂಯತೇ ಶ್ರುತಿಃ ।
ಏವಂ ಪೂರ್ವತರಾಃ ಸರ್ವೇ ಪ್ರವೃತ್ತಾಶ್ಚೈವ ಮಾನವಾಃ ॥೩೦॥

ಪ್ರಪಂಚದಲ್ಲಿರುವ ಎಲ್ಲ ವಸ್ತುಗಳೂ ಯಜ್ಞಾರ್ಥವಾಗಿಯೇ ಸೃಷ್ಟ

---

* ಗೋಯಜ್ಞಕ್ಕೆ ಇಲ್ಲಿ ಹೇಳಿರುವ ವಸ್ತುಗಳನ್ನು ಜೀವಿಸಿರುವ ಗೋವಿನಿಂದಲೇ ಸಂಗ್ರಹಿಸಬೇಕಾಗಿರುವುದರಿಂದ ಮತ್ತು ಸಂಗ್ರಹಿಸಬಹುದಾಗಿರುವುದರಿಂದ ಪಶುಹನನದ ಅವಶ್ಯಕತೆ ಇಲ್ಲವೆಂದು ಭಾವಿಸಬಹುದಾಗಿದೆ.

ವಾಗಿವೆ ಎಂದು ಶ್ರುತಿಯೇ ಸಾರುತ್ತದೆ. ಈ ಶ್ರುತಿವಾಕ್ಯವನ್ನೇ ಅವಲಂಬಿಸಿ ನಮ್ಮ ಹಿಂದಿನ ಮನುಷ್ಯರೆಲ್ಲರೂ ಯಜ್ಞದಲ್ಲಿಯೇ ಯಾವಾಗಲೂ ಪ್ರವೃತ್ತರಾಗುತ್ತಿದ್ದರು.

ನ ಹಿನಸ್ತಿ ನಾರಭತೇ ನಾಭಿದ್ರುಹ್ಯತಿ ಕಿಂಚನ ।
ಯಜ್ಞೋ ಯಷ್ಟವ್ಯ ಇತ್ಯೇವ ಯೋ ಯಜತ್ಯಫಲೇಪ್ಸಯಾ ॥೩೧॥

ಯಾವನು ಯಜ್ಞಮಾಡುವುದು ತನ್ನ ಕರ್ತವ್ಯವಾಗಿರುವುದೆಂದು ಭಾವಿಸಿ ಯಾವ ವಿಧವಾದ ಫಲವನ್ನೂ ಅಪೇಕ್ಷಿಸದೇ ನಿಷ್ಕಾಮನೆಯಿಂದ ಯಜ್ಞಮಾಡುವನೋ–ಅವನು ಪಶುಹಿಂಸಕನೂ ಆಗುವುದಿಲ್ಲ. ಯಾರಿಗೂ ದ್ರೋಹಿಯೂ ಆಗುವುದಿಲ್ಲ ಮತ್ತು ಅಹಂಕಾರಪೂರ್ವಕವಾಗಿ ಯಾವ ಕರ್ಮವನ್ನೂ ಆರಂಭಿಸುವುದೂ ಇಲ್ಲ.

ಯಜ್ಞಾಙ್ಗಾನ್ಯಪಿ ಚೈತಾನಿ ಯಜ್ಞೋಕ್ತಾನ್ಯನುಪೂರ್ವಶಃ ।
ವಿಧಿನಾ ವಿಧಿಯುಕ್ತಾನಿ ಧಾರಯನ್ತಿ ಪರಸ್ಪರಮ್ ॥೩೨॥

ಯಜ್ಞಶಾಸ್ತ್ರದಲ್ಲಿ (ಶ್ರೌತದಲ್ಲಿ) ಆನುಪೂರ್ವಿಯಾಗಿ ಹೇಳಲ್ಪಟ್ಟಿರುವ ಈ ಯಜ್ಞಸಾಮಗ್ರಿಗಳು ವಿಧಿಪೂರ್ವಕವಾಗಿ ಯಜ್ಞದಲ್ಲಿ ವಿನಿಯೋಗಿಸಲ್ಪಡು ತ್ತಿದ್ದು ಯಜ್ಞ ಮತ್ತು ಯಜ್ಞಾಂಗ–ಈ ಎರಡೂ ಪರಸ್ಪರವಾಗಿ ಒಂದು ಮತ್ತೊಂದನ್ನು ಧಾರಣೆಮಾಡಿಕೊಂಡಿವೆ.

ಆಮ್ನಾಯಮಾರ್ಷಂ ಪಶ್ಯಾಮಿ ಯಸ್ಮಿನ್ವೇದಾಃ ಪ್ರತಿಷ್ಠಿತಾಃ ।
ತಂ ವಿದ್ವಾಂಸೋಽನುಪಶ್ಯನ್ತಿ ಬ್ರಾಹ್ಮಣಸ್ಯಾನುದರ್ಶನಾತ್ ॥೩೩॥

ಋಷಿಪ್ರೋಕ್ತವಾದ ಧರ್ಮಶಾಸ್ತ್ರವನ್ನು ನಾನು ಚೆನ್ನಾಗಿ ಅಭ್ಯಸಿಸಿದ್ದೇನೆ. ಆ ಧರ್ಮಶಾಸ್ತ್ರದಲ್ಲಿಯೇ ಎಲ್ಲ ವೇದಗಳೂ ಪ್ರತಿಪಾದಿತವಾಗಿವೆ. ಕರ್ಮಪ್ರವರ್ತಕವಾದ ಬ್ರಾಹ್ಮಣವಾಕ್ಯಗಳೂ ಆರ್ಷವಾದ ಧರ್ಮಶಾಸ್ತ್ರ ಗಳಲ್ಲಿ ಕಂಡುಬರುವುದರಿಂದ ವಿದ್ವಾಂಸರು ಅಂತಹ ಆರ್ಷಗ್ರಂಥಗಳನ್ನು ಪ್ರಮಾಣಗ್ರಂಥಗಳೆಂದು ಭಾವಿಸುತ್ತಾರೆ.

ಬ್ರಾಹ್ಮಣಪ್ರಭವೋ ಯಜ್ಞೋ ಬ್ರಾಹ್ಮಣಾರ್ಪಣ ಏವ ಚ ।
ಅನುಯಜ್ಞಂ ಜಗತ್ಸರ್ವಂ ಯಜ್ಞಶ್ಚಾನುಜಗತ್ಸದಾ ॥೩೪॥

ವೇದದ ಬ್ರಾಹ್ಮಣಭಾಗದಿಂದಲೇ ಯಜ್ಞವು ಪ್ರಕಟಗೊಂಡಿದೆ. ಇದು ಬ್ರಾಹ್ಮಣನಿಗೇ ಅರ್ಪಿಸಲ್ಪಡುತ್ತದೆ. ಎಲ್ಲ ಜಗತ್ತೂ ಯಜ್ಞವನ್ನೇ ಅನುಸರಿಸಿರುತ್ತದೆ. ಹಾಗೆಯೇ ಯಜ್ಞವೂ ಜಗತ್ತನ್ನೇ ಅನುಸರಿಸಿರುತ್ತದೆ. ಜಗತ್ತು ಮತ್ತು ಯಜ್ಞ ಇವೆರಡೂ ಪರಸ್ಪರವಾಗಿ ಒಂದು ಮತ್ತೊಂದನ್ನು ಅವಲಂಬಿಸಿದೆ.

ಓಮಿತಿ ಬ್ರಹ್ಮಣೋ ಯೋನಿರ್ನಮಃ ಸ್ವಾಹಾ ಸ್ವಧಾ ವಷಟ್ ।
ಯಸ್ಯೈತಾನಿ ಪ್ರಯುಜ್ಯನ್ತೇ ಯಥಾಶಕ್ತಿ ಕೃತಾನ್ಯಪಿ ॥೩೫॥

"ಓಂ"–ಎಂಬುದು ವೇದದ ಮೂಲವಾಗಿದೆ. ನಮಃ-ಸ್ವಾಹಾಕಾರ-ಸ್ವಧಾಕಾರ-ವಷಟ್ಕಾರಗಳು ಯಾವನ ಯಜ್ಞದಲ್ಲಿ ಯಥಾಶಕ್ತಿ ಹೇಳಲ್ಪಡುತ್ತವೆಯೋ ಅವನ ಯಜ್ಞವು ಸಾಂಗೋಪಾಂಗವಾದಂತಾಗುತ್ತದೆ.

ನ ತಸ್ಯ ತ್ರಿಷು ಲೋಕೇಷು ಪರಲೋಕಭಯಂ ವಿದುಃ ।
ಇತಿ ವೇದಾ ವದನ್ತೀಹ ಸಿದ್ಧಾಶ್ಚ ಪರಮರ್ಷಯಃ ॥೩೬॥

ಹಾಗೆ ಯಜ್ಞಮಾಡಿದವನಿಗೆ ಮೂರು ಲೋಕಗಳಲ್ಲಿರುವ ಯಾವುದೇ ಪ್ರಾಣಿಯಿಂದಾಗಲೀ ಭಯವಿರುವುದಿಲ್ಲ. ಹೀಗೆಂದು ವೇದಗಳೇ ಉದ್ಘೋಷಿಸುತ್ತವೆ. ಸಿದ್ಧರೂ ಮತ್ತು ಶ್ರೇಷ್ಠರಾದ ಋಷಿಗಳೂ ಇದನ್ನೇ ಹೇಳುತ್ತಾರೆ.

ಋಚೋ ಯಜೂಂಷಿ ಸಾಮಾನಿ ಸ್ತೋಭಾಶ್ಚ ವಿಧಿಚೋದಿತಾಃ ।
ಯಸ್ಮಿನ್ನೇತಾನಿ ಸರ್ವಾಣಿ ಭವನ್ತೀಹ ಸ ವೈ ದ್ವಿಜಃ ॥೩೭॥

ಋಗ್ವೇದ, ಯಜುರ್ವೇದ, ಸಾಮವೇದ, ವಿಧಿವಿಹಿತವಾದ ಸಾಮಗಾನಕ್ಕೆ ಸಂಬಂಧಿಸಿದ 'ಹಾಽಽಯಿ' 'ಹಾಽಽವು' ಇತ್ಯಾದಿ ಸ್ತೋಭಗಳು ಯಾವನಲ್ಲಿ ಇರುತ್ತವೆಯೋ ಅವನೇ ನಿಜವಾದ ಬ್ರಾಹ್ಮಣನು.

ಅಗ್ನ್ಯಾಧೇಯೇ ಯದ್ಭವತಿ ಯಚ್ಚ ಸೋಮೇ ಸುತೇ ದ್ವಿಜ ।
ಯಚ್ಚೇತರೈರ್ಮಹಾಯಜ್ಞೈರ್ವೇದ ಯದ್ಭಗವಾನ್ಪುನಃ ॥೩೮॥

ದ್ವಿಜಶ್ರೇಷ್ಠನೇ! ಅಗ್ನ್ಯಾಧಾನ ಮತ್ತು ಸೋಮಯಾಗ–ಇವುಗಳನ್ನು ಮಾಡುವುದರಿಂದ ಯಾವ ಫಲವು ಲಭಿಸುವುದೆಂಬುದನ್ನೂ–ಇತರ

ಅನೇಕ ಮಹಾಯಜ್ಞಗಳನ್ನು ಮಾಡುವುದರಿಂದ ಯಾವ ಫಲವು ಲಭಿಸುವುದೆಂಬುದನ್ನೂ ಭಗವತ್ಸ್ವರೂಪನಾದ ನೀನೇ ತಿಳಿದುಕೊಂಡಿರುವೆ.

ತಸ್ಮಾದ್ಬ್ರಹ್ಮನ್ಯಜೇಚ್ಚೈವ ಯಾಜಯೇಚಾವಿಚಾರಯನ್ ।
ಯಜತಃ ಸ್ವರ್ಗವಿಧಿನಾ ಪ್ರೇತ್ಯ ಸ್ವರ್ಗಫಲಂ ಮಹತ್ ॥೬೯॥

ಬ್ರಾಹ್ಮಣೋತ್ತಮ! ಆದುದರಿಂದ, ಪ್ರತಿಯೊಬ್ಬ ಬ್ರಾಹ್ಮಣನೂ ಯಾವುದನ್ನೂ ಯೋಚಿಸಹೋಗದೇ ಯಜ್ಞವನ್ನು ಮಾಡಬೇಕು ಮತ್ತು ಇತರರಿಂದ ಮಾಡಿಸಲೂಬೇಕು. ಯಾವನು ಸ್ವರ್ಗಕಾಮನಾಗಿ ಸ್ವರ್ಗ ಪ್ರಾಪಕವಾದ ವಿಧಿಯನ್ನು ಅನುಸರಿಸಿ ಯಜ್ಞಮಾಡುವನೋ–ಅವನು ದೇಹತ್ಯಾಗಾನಂತರದಲ್ಲಿ ಮಹಾಸ್ವರ್ಗಫಲವನ್ನೇ ಹೊಂದುತ್ತಾನೆ. ಇದರಲ್ಲಿ ಸಂಶಯವೆಂಬುದೇ ಇಲ್ಲ.

ನಾಯಂ ಲೋಕೋಽಸ್ತ್ಯಯಜ್ಞಾನಾಂ ಪರಶ್ಚೇತಿ ವಿನಿಶ್ಚಯಃ ।
ವೇದವಾದವಿದಶ್ಚೈವ ಪ್ರಮಾಣಮುಭಯಂ ತದಾ ॥೭೦॥

ಯಜ್ಞವನ್ನು ಮಾಡದೇ ಇರುವವರಿಗೆ ಐಹಿಕಸುಖವಾಗಲೀ–ಪಾರಲೌಕಿಕಸುಖವಾಗಲೀ ಇಲ್ಲವೆಂಬುದು ನಿಶ್ಚಯ. ಯಾವನು ವೇದದಲ್ಲಿ ಹೇಳಿರುವ ವಿಷಯಗಳನ್ನು ಚೆನ್ನಾಗಿ ಅರಿತಿರುವನೋ–ಅವನು ಪ್ರವೃತ್ತಿ ಮತ್ತು ನಿವೃತ್ತಿಮಾರ್ಗಗಳೆರಡಕ್ಕೂ ಪ್ರಮಾಣಭೂತನಾಗುತ್ತಾನೆ.”

೨೬೮ನೆಯ ಅಧ್ಯಾಯವು ಮುಗಿಯಿತು.

೨೬೯ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪ್ರವೃತ್ತಿ ಮತ್ತು ನಿವೃತ್ತಿಮಾರ್ಗಗಳ ವಿಷಯದಲ್ಲಿ ಸ್ಯೂಮರಶ್ಮಿಗೂ-ಕಪಿಲನಿಗೂ ಸಂವಾದ

ಗೋವಿನಲ್ಲಿ ಸೇರಿಕೊಂಡು ಹೀಗೆ ಯಜ್ಞವನ್ನು ಪ್ರಶಂಸೆಮಾಡಿದ ಸ್ಯೂಮರಶ್ಮಿಯನ್ನು ಕುರಿತು ಕಪಿಲನು ಹೇಳುತ್ತಾನೆ :

ಏತಾವದನುಪಶ್ಯನ್ತಿ ಯತಯೋ ಯಾನ್ತಿ ಮಾರ್ಗಗಾಃ ।
ನೈಷಾಂ ಸರ್ವೇಷು ಲೋಕೇಷು ಕಶ್ಚಿದಸ್ತಿ ವ್ಯತಿಕ್ರಮಃ ॥೧॥

"ಯಮ-ನಿಯಮಾದಿ ವ್ರತನಿಷ್ಠರಾದ ಯತಿಗಳು ಜ್ಞಾನಮಾರ್ಗವನ್ನು ಆಶ್ರಯಿಸಿ ಪರಬ್ರಹ್ಮಪರಮಾತ್ಮನನ್ನು ಕಂಡುಕೊಳ್ಳುತ್ತಾರೆ. ಅವರು ಈ ದೃಶ್ಯಪ್ರಪಂಚವನ್ನು ನಶ್ವರವೆಂದು ಭಾವಿಸುತ್ತಾರೆ. ಸಮಸ್ತವಾದ ಲೋಕಗಳಲ್ಲಿಯೂ ಅವರಿಗೆ ಯಾವ ವಿಧವಾದ ಪ್ರತಿರೋಧವೂ ಇರುವುದಿಲ್ಲ.

ನಿರ್ದ್ವನ್ದ್ವಾ ನಿರ್ನಮಸ್ಕಾರಾ ನಿರಾಶೀರ್ಬನ್ಧನಾ ಬುಧಾಃ ।
ವಿಮುಕ್ತಾಃ ಸರ್ವಪಾಪೇಭ್ಯಶ್ಚರನ್ತಿ ಶುಚಯೋಽಮಲಾಃ ॥೨॥

ಯತಿಗಳು ಶೀತೋಷ್ಣ-ಸುಖ-ದುಃಖಾದಿ ದ್ವಂದ್ವಗಳಿಂದ ವಿಮುಕ್ತರಾಗಿರುತ್ತಾರೆ. ಅವರು ಯಾರೊಬ್ಬರಿಗೂ ನಮಸ್ಕಾರವನ್ನು ಮಾಡುವುದಿಲ್ಲ : ಆಶೀರ್ವಾದವನ್ನೂ ಮಾಡುವುದಿಲ್ಲ. ಅಂತಹ ವಿದ್ವಾಂಸರು ಕಾಮನೆಗಳೆಂಬ ಬಂಧನದಿಂದ ವಿಮುಕ್ತರಾಗಿರುತ್ತಾರೆ. ಸಕಲಪಾಪಗಳಿಂದಲೂ ಮುಕ್ತರಾಗಿರುತ್ತಾರೆ. ಶುಚಿಗಳಾದ ನಿತ್ಯಶುದ್ಧರಾದ ಅಂತಹ ಯತಿಗಳು ಸರ್ವತ್ರ ಸಂಚರಿಸುತ್ತಿರುತ್ತಾರೆ.

ಅಪವರ್ಗೇಽಥ ಸಂತ್ಯಾಗೇ ಬುದ್ಧೌ ಚ ಕೃತನಿಶ್ಚಯಾಃ ।
ಬ್ರಹ್ಮಿಷ್ಠಾ ಬ್ರಹ್ಮಭೂತಾಶ್ಚ ಬ್ರಹ್ಮಣ್ಯೇವ ಕೃತಾಲಯಾಃ ॥೩॥

ಮೋಕ್ಷವನ್ನು ಸಾಧಿಸಿಕೊಳ್ಳುವ ವಿಷಯದಲ್ಲಿಯೂ ಮತ್ತು ಅದಕ್ಕಾಗಿ ಸರ್ವಸಂಗಪರಿತ್ಯಾಗಮಾಡುವ ವಿಷಯದಲ್ಲಿಯೂ ಯತಿಗಳು ತಮ್ಮ ಬುದ್ಧಿಯಲ್ಲಿ ದೃಢವಾದ ನಿಶ್ಚಯವನ್ನೇ ಮಾಡಿಕೊಂಡಿರುತ್ತಾರೆ. ಯಾವಾಗಲೂ ಬ್ರಹ್ಮೋಪಾಸನೆಯಲ್ಲಿಯೇ ತತ್ಪರರಾಗಿರುವ ಅವರು ಬ್ರಹ್ಮಭೂತರಾಗಿ ಬ್ರಹ್ಮನಲ್ಲಿಯೇ ನಿವಾಸಮಾಡುತ್ತಿರುತ್ತಾರೆ. (ಬ್ರಹ್ಮವಸ್ತುವಿನ ಹೊರತಾಗಿ ಬೇರೆ ಯಾವುದನ್ನೂ ಯಾವಾಗಲೂ ಯೋಚಿಸದೇ ಇರುವುದೇ ಬ್ರಹ್ಮನಿವಾಸವಾಗುತ್ತದೆ.)

ವಿಶೋಕಾ ನಷ್ಟರಜಸಸ್ತೇಷಾಂ ಲೋಕಾಃ ಸನಾತನಾಃ ।
ತೇಷಾಂ ಗತಿಂ ಪರಾಂ ಪ್ರಾಪ್ಯ ಗಾರ್ಹಸ್ಥ್ಯೇ ಕಿಂ ಪ್ರಯೋಜನಮ್ ॥೪॥

ಸರ್ವದಾ ಬ್ರಹ್ಮಭಾವದಿಂದಿರುತ್ತಾ ಶೋಕರಹಿತರೂ ರಜೋಗುಣರಹಿತರೂ (ಕಾಮ-ಕ್ರೋಧಾದಿ ಶೂನ್ಯರೂ) ಆಗಿರುವ ಅಂತಹ ಯತಿಗಳಿಗೆ

ಲಭಿಸುವ ಲೋಕಗಳು ಶಾಶ್ವತವಾದುವುಗಳು. ಬ್ರಹ್ಮವಾದಿಗಳ ಪರಮೋತ್ಕೃಷ್ಟವಾದ ಗತಿಯನ್ನು ಹೊಂದುವ ಆ ಯತಿಗಳಿಗೆ ಗೃಹಸ್ಥಾಶ್ರಮದಿಂದಾಗಲೀ ಗ್ರಹಸ್ಥಾಶ್ರಮಕ್ಕೆ ಸಂಬಂಧಿಸಿದ ಯಜ್ಞ-ಯಾಗಾದಿಗಳಿಂದಾಗಲೀ ಏನು ಪ್ರಯೋಜನವಿದೆ?"

ಸ್ಯೂಮರಶ್ಮಿಯು ಹೇಳುತ್ತಾನೆ :

ಯದ್ಯೇಷಾ ಪರಮಾ ಕಾಷ್ಠಾ ಯದ್ಯೇಷಾ ಪರಮಾ ಗತಿಃ ।
ಗೃಹಸ್ಥಾನವ್ಯಪಾಶ್ರಿತ್ಯ ನಾಶ್ರಮೋಽನ್ಯಃ ಪ್ರವರ್ತತೇ ॥೫॥

"ಜ್ಞಾನವನ್ನು ಪಡೆದುಕೊಂಡು ಬ್ರಹ್ಮವಸ್ತುವನ್ನೇ ಆಶ್ರಯಿಸಿಕೊಂಡಿರುವುದೇ ಕಟ್ಟಕಡೆಯ ಎಲ್ಲೆಯಾಗಿದ್ದರೆ, ಶ್ರೇಷ್ಠವಾದ ಗತಿಯಾಗಿದ್ದರೆ ಗೃಹಸ್ಥಧರ್ಮವು ಅದಕ್ಕಿಂತಲೂ ಶ್ರೇಷ್ಠವಾದುದು. ಏಕೆಂದರೆ : ಗೃಹಸ್ಥಾಶ್ರಮದ ಆಶ್ರಯವಿಲ್ಲದೆ ಬೇರೆ ಯಾವ ಆಶ್ರಮವೂ ಮುಂದುವರಿಯಲು ಸಾಧ್ಯವೇ ಇಲ್ಲ. ಬ್ರಹ್ಮಚರ್ಯ, ವಾನಪ್ರಸ್ಥ, ಸಂನ್ಯಾಸ–ಈ ಮೂರು ಆಶ್ರಮಗಳೂ ಗೃಹಸ್ಥಾಶ್ರಮವನ್ನೇ ಆಶ್ರಯಿಸಿಕೊಂಡಿವೆ.

ಯಥಾ ಮಾತರಮಾಶ್ರಿತ್ಯ ಸರ್ವೇ ಜೀವನ್ತಿ ಜನ್ತವಃ ।
ಏವಂ ಗಾರ್ಹಸ್ಥ್ಯಮಾಶ್ರಿತ್ಯ ವರ್ತನ್ತ ಇತರಾಶ್ರಮಾಃ ॥೬॥

ಯಾವ ರೀತಿಯಲ್ಲಿ ಸಮಸ್ತಪ್ರಾಣಿಗಳೂ ತಾಯಿಯನ್ನೇ ಆಶ್ರಯಿಸಿ ಜೀವಧಾರಣೆಯನ್ನು ಹೊಂದುತ್ತವೆಯೋ ಅದೇ ರೀತಿಯಲ್ಲಿ ಉಳಿದ ಮೂರು ಆಶ್ರಮಗಳೂ ಗೃಹಸ್ಥಾಶ್ರಮವನ್ನು ಆಶ್ರಯಿಸಿಯೇ ಇರುತ್ತವೆ.

ಗೃಹಸ್ಥ ಏವ ಯಜತೇ ಗೃಹಸ್ಥಸ್ತಪ್ಯತೇ ತಪಃ ।
ಗಾರ್ಹಸ್ಥ್ಯಮಸ್ಯ ಧರ್ಮಸ್ಯ ಮೂಲಂ ಯತ್ಕಿಂಚಿದೇಜತೇ ॥೭॥

ಗೃಹಸ್ಥನೇ ಯಜ್ಞವನ್ನು ಮಾಡುತ್ತಾನೆ. ಗೃಹಸ್ಥನೇ ಕೃಚ್ಛ್ರ-ಚಾಂದ್ರಾಯಣಾದಿ ತಪಸ್ಸನ್ನೂ ಮಾಡುತ್ತಾನೆ. ಯಾವನಾದರೂ ಏನಾದರೊಂದು ಶುಭಕರ್ಮವನ್ನು (ಧರ್ಮವನ್ನು) ಮಾಡಿದರೆ ಅದಕ್ಕೆ ಮೂಲಕಾರಣವು ಗೃಹಸ್ಥಧರ್ಮವೇ ಆಗಿದೆ. (ಸಂನ್ಯಾಸಿಯು ಆತ್ಮಸಾಕ್ಷಾತ್ಕಾರವನ್ನು ಪಡೆದು

ಕೊಂಡರೆ ಅದಕ್ಕೆ ಮೂಲಕಾರಣನು ಗೃಹಸ್ಥನೇ ಆಗಿದ್ದಾನೆ ಬ್ರಹ್ಮಚಾರಿಯ ವಿದ್ಯಾಭ್ಯಾಸಕ್ಕೆ ಮೂಲಕಾರಣನೂ ಗೃಹಸ್ಥನೇ ಆಗಿದ್ದಾನೆ.)

ಪ್ರಜನಾದ್ಯಭಿನಿರ್ವೃತ್ತಾಃ ಸರ್ವೇ ಪ್ರಾಣಭೃತೋ ಜನಾಃ ।
ಪ್ರಜನಂ ಚಾಪ್ಯುತಾನ್ಯತ್ರ ನ ಕಥಂಚನ ವಿದ್ಯತೇ ॥೮॥

ಪ್ರಾಣಧಾರಿಗಳಾದ ಸಮಸ್ತಜನರೂ ಸಂತಾನಾದಿಪ್ರಾಪ್ತಿಯಿಂದ ಸುಖಾನುಭವವನ್ನು ಪಡೆಯುತ್ತಾರೆ. ಆದರೆ ಸಂತಾನದ ಉತ್ಪತ್ತಿಯು ಗೃಹಸ್ಥಾಶ್ರಮದ ಹೊರತಾಗಿ ಬೇರೆ ಯಾವ ಆಶ್ರಮದಿಂದಲೂ ಸಾಧ್ಯ ವಾಗುವುದಿಲ್ಲ.

ಯಾಸ್ತು ಸ್ಯುರ್ಬರ್ಹಿರೋಷಧ್ಯೋ ಬಹಿರನ್ಯಾಸ್ತಥಾದ್ರಿಜಾಃ ।
ಓಷಧಿಭ್ಯೋ ಬಹಿರ್ಯಸ್ಮಾತ್ಪ್ರಾಣಾತ್ಕಶ್ಚಿನ್ನ ದೃಶ್ಯತೇ ॥೯॥

ಪ್ರಾಣಸ್ವರೂಪವಾದ ಓಷಧಿಗಳಿಗಿಂತಲೂ ಬೇರೆಯದಾದುದು ಯಾವುದೂ ಇರುವುದಿಲ್ಲ. ಅಂತಹ ಓಷಧಿಗಳಲ್ಲಿ ಹೊರಗೆ ಬೆಳೆಯುವ ತೃಣಾದಿಗಳು, ಧಾನ್ಯಾದಿಗಳು, ಬೆಟ್ಟದಲ್ಲಿ ಬೆಳೆಯುವ ಸೋಮಲತೆಯೇ ಮೊದಲಾದುವುಗಳು–ಇವೆಲ್ಲಕ್ಕೂ ಗೃಹಸ್ಥಾಶ್ರಮವೇ ಮೂಲಕಾರಣವಾಗಿದೆ.

(**ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ । ಆದಿತ್ಯಾಜ್ಜಾಯತೇ ವೃಷ್ಟಿಃ ವೃಷ್ಟೇರನ್ನಂ ತತಃ ಪ್ರಜಾಃ।** ಎಂಬ ಸ್ಮೃತಿವಚನದಂತೆ ಗೃಹಸ್ಥನು ಯಜ್ಞಾಂಗವಾಗಿ ಯಜ್ಞೇಶ್ವರನಲ್ಲಿ ಮಾಡಿದ ಆಹುತಿಯು ಆದಿತ್ಯನನ್ನು ಹೊಂದುತ್ತದೆ. ಆದಿತ್ಯನಿಂದ ವೃಷ್ಟಿಯೂ, ವೃಷ್ಟಿಯಿಂದ ಅನ್ನವೂ (ಧಾನ್ಯಾದಿಗಳೂ), ಅನ್ನದಿಂದ ಪ್ರಜೆಗಳೂ ಹುಟ್ಟುತ್ತವೆ. ಆದುದರಿಂದ ಪ್ರಪಂಚದಲ್ಲಿ ಬೆಳೆದಿರುವ ಸಸ್ಯವರ್ಗಗಳೆಲ್ಲಕ್ಕೂ ಮೂಲಕಾರಣನು ಗೃಹಸ್ಥನೇ ಆಗಿರುತ್ತಾನೆ.)

ಕಸ್ಯೈಷಾ ವಾಗ್ಭವೇತ್ಸತ್ಯಾ ಮೋಕ್ಷೋ ನಾಸ್ತಿ ಗೃಹಾದಿತಿ ।
ಅಶ್ರದ್ದಧಾನೈರಪ್ರಾಜ್ಞೈಃ ಸೂಕ್ಷ್ಮದರ್ಶನವರ್ಜಿತೈಃ ॥೧೦॥

ನಿರಾಸೈರಲಸೈಃ ಶ್ರಾನ್ತೈಸ್ತಪ್ಯಮಾನೈಃ ಸ್ವಕರ್ಮಭಿಃ ।
ಶಮಸ್ಯೋಪರಮೋ ದೃಷ್ಟಃ ಪ್ರವ್ರಜ್ಯಾಯಾಮಪಣ್ಡಿತೈಃ ॥೧೧॥

'ಗೃಹಸ್ಥಾಶ್ರಮವನ್ನು ಪರಿಪಾಲಿಸುವುದರಿಂದ ಮೋಕ್ಷವು ಲಭಿಸುವುದಿಲ್ಲ' – ಎಂದು ಹೇಳುವ ಯಾರ ಮಾತು ತಾನೇ ಸತ್ಯವಾಗುತ್ತದೆ? ಗೃಹಸ್ಥಾಶ್ರಮಿಯೂ ಮೋಕ್ಷವನ್ನು ಪಡೆದುಕೊಳ್ಳಬಲ್ಲನು. ಯಾರು ಶ್ರದ್ಧಾರಹಿತರಾಗಿರುವರೋ, ಮೂಢರೋ, ಸೂಕ್ಷ್ಮದೃಷ್ಟಿಯಿಂದ ವಂಚಿತರಾಗಿರು ವರೋ, ಅಸ್ಥಿರವಾದ ಬುದ್ಧಿಯುಳ್ಳವರಾಗಿರುವರೋ, ಸೋಮಾರಿಗಳೋ, ಬಳಲಿರುವರೋ, ತಾವು ಹಿಂದೆ ಮಾಡಿದ ಕುಕರ್ಮಗಳಿಂದ ಪರಿತಪಿಸುತ್ತಿರುವರೋ–ಅಂತಹ ಅಜ್ಞಾನಿಗಳಾದ ಪುರುಷರು ಮಾತ್ರವೇ ಸಂನ್ಯಾಸಾಶ್ರಮವನ್ನು ಆಶ್ರಯಿಸಿ ಗೃಹಸ್ಥಾಶ್ರಮದಲ್ಲಿ ಶಾಂತಿಯ ಅಭಾವವಿರುವುದನ್ನು ಕಾಣುತ್ತಾರೆ.

ತ್ರೈಲೋಕ್ಯಸ್ಯೈವ ಹೇತುರ್ಹಿ ಮರ್ಯಾದಾ ಶಾಶ್ವತೀ ಧ್ರುವಾ ।
ಬ್ರಾಹ್ಮಣೋ ನಾಮ ಭಗವಾಞ್ಜನ್ಮಪ್ರಭೃತಿ ಪೂಜ್ಯತೇ ॥೧೨॥

ವೈದಿಕಧರ್ಮವೇ ಮೂರು ಲೋಕಗಳಿಗೂ ಕಾರಣಭೂತವಾಗಿದೆ. ಲೋಕಮರ್ಯಾದೆಯನ್ನು ರಕ್ಷಿಸುವುದಾಗಿದೆ. ಸನಾತನವೂ, ಶಾಶ್ವತವೂ ಆಗಿದೆ. ವೈದಿಕಧರ್ಮಪ್ರವರ್ತಕನಾದ ಬ್ರಾಹ್ಮಣನು ಎಲ್ಲರಿಗೂ ಪೂಜ್ಯನಾಗಿದ್ದಾನೆ. ಹುಟ್ಟಿದ ಮೊದಲ್ಗೊಂಡು ಅವನು ಎಲ್ಲರಿಂದಲೂ ಸಮಾದರಣೀಯನಾಗಿದ್ದಾನೆ.

ಪ್ರಾಗ್ಗರ್ಭಾಧಾನಾನ್ಮನ್ತ್ರಾ ಹಿ ಪ್ರವರ್ತನ್ತೇ ದ್ವಿಜಾತಿಷು ।
ಅವಿಶ್ರಮ್ಭೇಷು ವರ್ತನ್ತೇ ವಿಶ್ರಮ್ಭೇಷ್ವಪ್ಯಸಂಶಯಮ್ ॥೧೩॥

ದ್ವಿಜಾತಿಗಳಲ್ಲಿ (ಬ್ರಾಹ್ಮಣ-ಕ್ಷತ್ರಿಯ-ವೈಶ್ಯರಲ್ಲಿ) ಗರ್ಭಾಧಾನಕ್ಕೆ ಮೊದಲೇ ವೇದಮಂತ್ರಗಳು ಉಚ್ಚರಿಸಲ್ಪಡುತ್ತವೆ. ಲೌಕಿಕವಾದ ಮತ್ತು ಪಾರಲೌಕಿಕವಾದ ಎಲ್ಲ ಕರ್ಮಗಳಲ್ಲಿಯೂ ವೇದಮಂತ್ರಗಳು ನಿಃಸಂದೇಹವಾಗಿ ಉಚ್ಚರಿಸಲ್ಪಡುತ್ತವೆ.

ದಾಹೇ ಪುನಃ ಸಂಶ್ರಯಣೇ ಸಂಶ್ರಿತೇ ಪಾತ್ರಭೋಜನೇ ।
ದಾನೇ ಗವಾಂ ಪಶೂನಾಂ ವಾ ಪಿಣ್ಡಾನಾಮಪ್ಸು ಮಜ್ಜನೇ ॥೧೪॥

ಮರಣಹೊಂದಿದವನ ದಹನಸಂಸ್ಕಾರದಲ್ಲಿ, ಹುಟ್ಟಿದ ಸಮಯದಲ್ಲಿ, ದೇಹಧಾರಣಮಾಡಿದನಂತರ, ಮೃತನಾದವನ ತೃಪ್ತಿಗಾಗಿ ತರ್ಪಣ ಮತ್ತು

ಶ್ರಾದ್ಧಾದಿಗಳನ್ನು ಮಾಡುವ ಸಮಯದಲ್ಲಿ, ವೈತರಣೀನದಿಯನ್ನು ದಾಟುವ ಸಲುವಾಗಿ ಗೋದಾನ ಅಥವಾ ಇತರ ಪ್ರಾಣಿಗಳನ್ನು ದಾನಮಾಡುವ ಸಮಯದಲ್ಲಿ, ಶ್ರಾದ್ಧಕರ್ಮದಲ್ಲಿ ಪ್ರದತ್ತವಾದ ಪಿಂಡಗಳನ್ನು ನೀರಿನಲ್ಲಿ ವಿಸರ್ಜಿಸುವ ಸಮಯದಲ್ಲಿ–ವೇದಮಂತ್ರಗಳು ಉಚ್ಚರಿಸಲ್ಪಡುತ್ತವೆ.

ಅರ್ಚಿಷ್ಮನ್ತೋ ಬರ್ಹಿಷದಃ ಕವ್ಯಾದಾಃ ಪಿತರಸ್ತಥಾ ।
ಮೃತಸ್ಯಾಪ್ಯನುಮನ್ಯನ್ತೇ ಮನ್ತ್ರಾನ್ಮನ್ತ್ರಾಶ್ಚ ಕಾರಣಮ್ ॥೧೫॥

ಅರ್ಚಿಷ್ಮಂತರು, ಬರ್ಹಿಷದರು ಮತ್ತು ಕವ್ಯಾದರು–ಎಂಬ ಪಿತೃದೇವತೆಗಳು ಮೃತನಾದವನ ಸುಖ-ಶಾಂತಿ ಮತ್ತು ಪ್ರಸನ್ನತೆಗಾಗಿ ಮಂತ್ರಪಠನಕ್ಕೆ ಅನುಮತಿಯನ್ನು ಕೊಡುತ್ತಾರೆ. ಆದುದರಿಂದ ವೇದ ಮಂತ್ರಗಳೇ ಎಲ್ಲ ಧರ್ಮಗಳಿಗೂ ಮೂಲಕಾರಣಗಳಾಗಿವೆ.

ಏವಂ ಕ್ರೋಶತ್ಸು ವೇದೇಷು ಕುತೋ ಮೋಕ್ಷೋಽಸ್ತಿ ಕಸ್ಯಚಿತ್ ।
ಋಣವನ್ತೋ ಯದಾ ಮರ್ತ್ಯಾಃ ಪಿತೃದೇವದ್ವಿಜಾತಿಷು ॥೧೬॥

ಮನುಷ್ಯನು–ದೇವತೆಗಳಿಗೂ, ಪಿತೃಗಳಿಗೂ, ಋಷಿಗಳಿಗೂ ಋಣಿಯಾಗಿಯೇ ಹುಟ್ಟುವನೆಂದು ವೇದಗಳು ಕೂಗಿಕೊಳ್ಳುತ್ತಿರುವಾಗ ಈ ಮೂರು ಋಣಗಳಿಂದಲೂ ಮುಕ್ತನಾಗದ ಯಾವುದೇ ಮನುಷ್ಯನಿಗಾಗಲೀ ಮೋಕ್ಷವೆಂಬುದು ಎಲ್ಲಿದೆ?

(ಋಣಬಾಧೆಯಿಂದ ತಪ್ಪಿಸಿಕೊಳ್ಳುವುದೇ ಮೋಕ್ಷ. ಮನುಷ್ಯನು ಮೂರು ಋಣಗಳನ್ನು ಹೊತ್ತೇ ಹುಟ್ಟುತ್ತಾನೆ. ಆ ಋಣಗಳಿಂದ ಮುಕ್ತನಾಗಬೇಕಾದರೆ ಗೃಹಸ್ಥಾಶ್ರಮವನ್ನು ಸ್ವೀಕರಿಸಿ ವೇದವಿಹಿತವಾದ ಕರ್ಮಗಳನ್ನು ಮಾಡಲೇಬೇಕು. ಹಾಗೆ ಮಾಡದೇ ಕರ್ಮಮಾಡಬೇಕಾಗುವುದೆಂಬ ಆಲಸ್ಯದಿಂದ ಸಂನ್ಯಾಸವನ್ನು ಸ್ವೀಕರಿಸಿದರೆ ದೇವಋಣ, ಋಷಿಋಣ, ಪಿತೃಋಣ–ಈ ಮೂರು ಋಣಗಳಿಂದಲೂ ಮುಕ್ತನಾಗಲು ಸಾಧ್ಯವಾಗುವುದಿಲ್ಲ. ಅಂತಹವನಿಗೆ ಮೋಕ್ಷವು ದುರ್ಲಭವೇ ಸರಿ.)

ಶ್ರಿಯಾ ವಿಹೀನೈರಲಸೈಃ ಪಣ್ಡಿತೈಃ ಸಮ್ಪ್ರವರ್ತಿತಮ್ ।
ವೇದವಾದಾಪರಿಜ್ಞಾನಂ ಸತ್ಯಾಭಾಸಮಿವಾನೃತಮ್ ॥೧೭॥

ಸಂಪತ್ತಿನಿಂದ ಹೀನರಾದ (ದರಿದ್ರರಾದ), ಸೋಮಾರಿಗಳಾದ ಕೆಲವು ವಿದ್ವಾಂಸರು–'ಕರ್ಮಗಳ ತ್ಯಾಗದಿಂದ ಮೋಕ್ಷವು ಪ್ರಾಪ್ತವಾಗುತ್ತದೆ'– ಎಂಬ ನಿಷ್ಕರ್ಮವ್ರತವನ್ನು ಪ್ರಚುರಪಡಿಸಿರುತ್ತಾರೆ. ಆದರೆ ವಸ್ತುತಃ ಆ ಮತವು ಸತ್ಯದಂತೆಯೇ ಕಾಣುವ ಮಿಥ್ಯಾಮತವಾಗಿದ್ದು ವೇದಮಂತ್ರಗಳ ವಿಷಯದಲ್ಲಿ ಪರಿಜ್ಞಾನವಿಲ್ಲದಿರುವುದೂ ಆಗಿದೆ.

ನ ವೈ ಪಾಪೈರ್ಹ್ರಿಯತೇ ಕೃಷ್ಯತೇ ವಾ
ಯೋ ಬ್ರಾಹ್ಮಣೋ ಯಜತೇ ವೇದಶಾಸ್ತ್ರೈಃ ।
ಊರ್ಧ್ವಂ ಯಜ್ಞೈಃ ಪಶುಭಿಃ ಸಾರ್ಧಮೇತಿ ।
ಸಂತರ್ಪಿತಸ್ತರ್ಪಯತೇ ಚ ಕಾಮ್ಯೈಃ ॥೧೮॥

ಯಾವ ಬ್ರಾಹ್ಮಣನು ವೇದ-ಶಾಸ್ತ್ರಗಳಿಗೆ ಅನುಸಾರವಾಗಿ ಯಜ್ಞಾನುಷ್ಠಾನವನ್ನು ಮಾಡುವನೋ-ಅವನನ್ನು ಪಾಪಗಳು ಆಕ್ರಮಿಸುವುದಿಲ್ಲ. ಅಥವಾ ತಮ್ಮ ಕಡೆಗೆ ಸೆಳೆದುಕೊಳ್ಳುವುದಿಲ್ಲ. ಅಂತಹವನಿಂದ ಪಾಪಗಳು ದೂರ ನಿಲ್ಲುತ್ತವೆ. ಯಜ್ಞನಿಷ್ಠನಾದ ಬ್ರಾಹ್ಮಣನು ಸುಖ-ಭೋಗಾದಿಗಳಿಂದ ತಾನೂ ತೃಪ್ತಿಪಡುತ್ತಾನೆ ; ಇತರರನ್ನೂ ತೃಪ್ತಿಪಡಿಸುತ್ತಾನೆ. ಅವಸಾನಾನಂತರದಲ್ಲಿ ಯಜ್ಞದಲ್ಲಿ ದೇವತೆಗಳ ತೃಪ್ತಿಗಾಗಿ ಉಪಯೋಗಿಸಿದ ಪಶುಗಳೊಡನೆ ತಾನೂ ಪುಣ್ಯಲೋಕಗಳನ್ನು ಹೊಂದುತ್ತಾನೆ.

ನ ವೇದಾನಾಂ ಪರಿಭವಾನ್ನ ಶಾಠ್ಯೇನ ನ ಮಾಯಯಾ ।
ಮಹತ್ಪ್ರಾಪ್ನೋತಿ ಪುರುಷೋ ಬ್ರಹ್ಮಣಿ ಬ್ರಹ್ಮ ವಿನ್ದತಿ ॥೧೯॥

ವೇದಗಳನ್ನು ಅನಾದರಣೆಮಾಡುವುದರಿಂದಾಗಲೀ, ಔದ್ಧತ್ಯದಿಂದಾಗಲೀ, ಮಾಯೆಯಿಂದಾಗಲೀ–ಯಾವ ಮನುಷ್ಯನೂ ಪರಬ್ರಹ್ಮಪರಮಾತ್ಮನನ್ನು ಹೊಂದಲು ಸಾಧ್ಯವಾಗುವುದಿಲ್ಲ. ವೇದಗಳನ್ನೂ ಮತ್ತು ವೈದಿಕ ಕರ್ಮಗಳನ್ನೂ ಆಶ್ರಯಿಸುವುದರಿಂದ ಮಾತ್ರವೇ ಪುರುಷನು ಮಹದ್ಬ್ರಹ್ಮ ವಸ್ತುವನ್ನು ಹೊಂದುತ್ತಾನೆ."

ಕಪಿಲನು ಹೇಳುತ್ತಾನೆ :

ದರ್ಶಂ ಚ ಪೌರ್ಣಮಾಸಂ ಚ ಅಗ್ನಿಹೋತ್ರಂ ಚ ಧೀಮತಃ ।
ಚಾತುರ್ಮಾಸ್ಯಾನಿ ಚೈವಾಸಂಸ್ತೇಷು ಧರ್ಮಃ ಸನಾತನಃ ॥೨೦॥

"ಬುದ್ಧಿವಂತನಾದ ಮನುಷ್ಯನಿಗೆ ದರ್ಶ, ಪೌರ್ಣಮಾಸ, ಅಗ್ನಿಹೋತ್ರ, ಚಾತುರ್ಮಾಸ್ಯ–ಇತ್ಯಾದಿ ಕರ್ಮಗಳು ಹೇಳಲ್ಪಟ್ಟಿವೆ. ಏಕೆಂದರೆ : ಸನಾತನ ಧರ್ಮವು ಈ ಕರ್ಮಗಳಲ್ಲಿಯೇ ಪ್ರತಿಷ್ಠಿತವಾಗಿದೆ.

ಅನಾರಮ್ಭಾಃ ಸುಧೃತಯಃ ಶುಚಯೋ ಬ್ರಹ್ಮಸಂಜ್ಞಿತಾಃ ।
ಬ್ರಹ್ಮಣ್ಯೈವ ಸ್ಮ ತೇ ದೇವಾಂಸ್ತರ್ಪಯನ್ತ್ಯಮೃತೈಷಿಣಃ ॥೨೧॥

ಆದರೆ ಯಾರು ಸುದೃಢವಾದ ಬುದ್ಧಿಯಿಂದ ಕೂಡಿದವರಾಗಿ, ಪವಿತ್ರಾತ್ಮರಾಗಿ, ಸಂನ್ಯಾಸಾಶ್ರಮವನ್ನು ಸ್ವೀಕರಿಸಿ, ಯಜ್ಞವೇ ಮೊದಲಾದ ಕಾಮ್ಯಕರ್ಮಾನುಷ್ಠಾನಗಳಿಂದ ನಿವೃತ್ತರಾಗಿ, ಬ್ರಹ್ಮಭೂತರೆಂಬ ಸಂಜ್ಞೆಯನ್ನು ಪಡೆದು ಅಮೃತಸ್ವರೂಪನಾದ ಬ್ರಹ್ಮವಸ್ತುವನ್ನು ಪಡೆದುಕೊಳ್ಳಲು ಸದಾ ಕಾಲದಲ್ಲಿಯೂ ಇಚ್ಛಿಸುವರೋ–ಅಂತಹ ಮಹಾತ್ಮರಾದ ಯತಿಗಳು ಬ್ರಹ್ಮಜ್ಞಾನದಿಂದಲೇ ದೇವತೆಗಳನ್ನು ತೃಪ್ತಿಗೊಳಿಸುತ್ತಾರೆ.

ಸರ್ವಭೂತಾತ್ಮಭೂತಸ್ಯ ಸರ್ವಭೂತಾನಿ ಪಶ್ಯತಃ ।
ದೇವಾಪಿ ಮಾರ್ಗೇ ಮುಹ್ಯನ್ತಿ ಅಪದಸ್ಯ ಪದೈಷಿಣಃ ॥೨೨॥

ಯಾವನು ಸರ್ವಪ್ರಾಣಿಗಳಿಗೂ ಆತ್ಮರೂಪನಾಗಿರುವನೋ ಮತ್ತು ಎಲ್ಲ ಪ್ರಾಣಿಗಳನ್ನೂ ಆತ್ಮಭಾವದಿಂದಲೇ ಕಾಣುವನೋ–ಅಂತಹ ನಿಷ್ಕರ್ಮಿಯಾದ ಯತಿಯ ಜ್ಞಾನಮಾರ್ಗವನ್ನು ಕಾಣಲು ಇಚ್ಛಿಸುವ ದೇವತೆಗಳು ಕೂಡ ಮಾರ್ಗಮಧ್ಯದಲ್ಲಿ ಭ್ರಾಂತರಾಗುತ್ತಾರೆ. (ಯೋಗಿಯ ಜ್ಞಾನಮಾರ್ಗವು ದೇವತೆಗಳಿಗೂ ತಿಳಿದಿರುವುದಿಲ್ಲ.)

ಚತುರ್ದ್ವಾರಂ ಪುರುಷಂ ಚತುರ್ಮುಖಂ
ಚತುರ್ಧಾ ಚೈನಮುಪಯಾತಿ ವಾಚಾ ।
ಬಾಹುಭ್ಯಾಂ ವಾಚ ಉದರಾದುಪಸ್ಥಾ-
ತ್ತೇಷಾಂ ದ್ವಾರಂ ದ್ವಾರಪಾಲೋ ಬುಭೂಷೇತ್ ॥೨೩॥

ಮನುಷ್ಯನಿಗೆ ಕೈ-ಕಾಲುಗಳು, ಮಾತು, ಹೊಟ್ಟೆ ಮತ್ತು ಉಪಸ್ಥ– ಎಂಬ ನಾಲ್ಕು ದ್ವಾರಗಳಿವೆ. ಇವುಗಳಿಗೆ ದ್ವಾರಪಾಲಕನಾಗುವ ಇಚ್ಛೆಯನ್ನು ಮನುಷ್ಯನು ತಾಳಬೇಕು. ಅರ್ಥಾತ್ ಇವುಗಳನ್ನು ಮಾನವನು ಸಂಯಮದಲ್ಲಿಟ್ಟುಕೊಳ್ಳಬೇಕು. ಋಗ್ಯಜುಸ್ಸಾಮಾಥರ್ವಣಗಳೆಂಬ ನಾಲ್ಕು

ಮುಖಗಳನ್ನು ಹೊಂದಿರುವ ಪರಮಪುರುಷನನ್ನು ನಾಲ್ಕು ದ್ವಾರಗಳ ಸಂಯಮದಿಂದಲೂ–ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗ ಮತ್ತು ಅಷ್ಟಾಂಗಯೋಗಗಳೆಂಬ ನಾಲ್ಕು ಪ್ರಕಾರವಾದ ಉಪಾಯಗಳಿಂದಲೂ ಹೊಂದಬೇಕು.

ನಾಕ್ಷೈರ್ದೀವ್ಯೇನ್ನಾದದೀತಾನ್ಯವಿತ್ತಂ
ನ ವಾಯೋನೀಯಸ್ಯ ಶೃತಂ ಪ್ರಗೃಹ್ಣಾತ್ ।
ಕ್ರುದ್ಧೋ ನ ಚೈವ ಪ್ರಹರೇತ ಧೀಮಾಂ-
ಸ್ತಥಾಸ್ಯ ತತ್ಪಾಣಿಪಾದಂ ಸುಗುಪ್ತಮ್ ॥೨೪॥

ಬುದ್ಧಿವಂತನಾದ ಪುರುಷನು (ಪಣಕ್ಕಾಗಿ) ಪಗಡೆಯಾಡಬಾರದು. ಪರರ ಸ್ವತ್ತನ್ನು ಅಪಹರಿಸಬಾರದು. ನೀಚಪುರುಷನಿಂದ ಅನ್ನವನ್ನು* ಸ್ವೀಕರಿಸಬಾರದು. ಕೋಪಗೊಂಡು ಯಾರನ್ನೂ ಪ್ರಹರಿಸಬಾರದು. ಹೀಗೆ ಮಾಡಿದಲ್ಲಿ ಕೈ-ಕಾಲುಗಳೆಂಬ ದ್ವಾರವು ಸುರಕ್ಷಿತವಾಗಿರುತ್ತದೆ.

ನಾಕ್ರೋಶಮೃಚ್ಛೇನ್ನ ವೃಥಾ ವದೇಚ್ಚ
ನ ಪೈಶುನಂ ಜನವಾದಂ ಚ ಕುರ್ಯಾತ್ ।
ಸತ್ಯವ್ರತೋ ಮಿತಭಾಷೋಽಪ್ರಮತ್ತ-
ಸ್ತಥಾಸ್ಯ ವಾಗ್ದ್ವಾರಮಥೋ ಸುಗುಪ್ತಮ್ ॥೨೫॥

ಯಾರನ್ನೂ ನಿಂದಿಸಬಾರದು. ಯಾರೊಡನೆಯೂ ವ್ಯರ್ಥವಾಗಿ ಮಾತನಾಡಬಾರದು. ಯಾರ ಮೇಲೂ ಚಾಡಿಯನ್ನು ಹೇಳಬಾರದು. ಯಾರ ಮೇಲೂ ವ್ಯರ್ಥವಾದ ಆಪಾದನೆಯನ್ನು ಹೊರೆಸಬಾರದು. ಸತ್ಯ ನಿಷ್ಠನಾಗಿರಬೇಕು. ಮಿತಭಾಷಿಯಾಗಿರಬೇಕು. ಜಾಗರೂಕನಾಗಿರಬೇಕು. ಹೀಗಿದ್ದರೆ ಮಾತಿನ ದ್ವಾರವನ್ನು ಚೆನ್ನಾಗಿ ರಕ್ಷಣೆಮಾಡಿದಂತಾಗುತ್ತದೆ.

---

* ಶೃತಂ ಎಂಬುದಕ್ಕೆ ವ್ಯಾಖ್ಯಾನಕಾರರು ಅನ್ನ ಎಂದು ಅರ್ಥಮಾಡಿರುತ್ತಾರೆ. ನ ಶೃತಂ ಪ್ರಗೃಹ್ಣಾತ್=ನ ಯಾಜಯೇತ್. ನೀಚಪುರುಷನಿಗೆ ಯಜ್ಞಮಾಡಿಸಿ ಹವಿಸ್ಸನ್ನು (ಅನ್ನವನ್ನು) ತಿನ್ನಬಾರದು–ಎಂದು ವಿವರಣೆಯನ್ನು ಕೊಟ್ಟಿರುತ್ತಾರೆ.

ನಾನಾಶನಃ ಸ್ಯಾನ್ನ ಮಹಾಶನಃ ಸ್ಯಾ-
ದಲೋಲುಪಃ ಸಾಧುಭಿರಾಗತಃ ಸ್ಯಾತ್ ।
ಯಾತ್ರಾರ್ಥಮಾಹಾರಮಿಹಾದದೀತ
ತಥಾಸ್ಯ ಸ್ಯಾಜ್ಜಾಠರೀ ದ್ವಾರಗುಪ್ತಿಃ ॥೨೬॥

ಆಹಾರವನ್ನೇ ತಿನ್ನದೆಯೇ ಇರಬಾರದು. ಆಹಾರವನ್ನು ಅತಿಯಾಗಿ ತಿನ್ನಲೂಬಾರದು. ಭಕ್ಷ್ಯ-ಭೋಜ್ಯಾದಿಗಳಲ್ಲಿ ಲಾಲಸೆಯುಳ್ಳವನಾಗಿರ ಬಾರದು. (ಸಾತ್ತ್ವಿಕವಾದ ಆಹಾರವನ್ನು ಸೇವಿಸಬೇಕು.) ಬಂದ ಸಜ್ಜನರಿಗೆ ಆತಿಥ್ಯವನ್ನು ಮಾಡಬೇಕು. ಜೀವನನಿರ್ವಹಣೆಗೆ ಬೇಕಾಗುವಷ್ಟು ಮಾತ್ರವೇ ಆಹಾರವನ್ನು ತಿನ್ನಬೇಕು. ಹೀಗೆ ಮಾಡಿದರೆ ಹೊಟ್ಟೆಯೆಂಬ ದ್ವಾರದ ರಕ್ಷಣೆಯಾಗುತ್ತದೆ.

ನ ವೀರಪತ್ನೀಂ ವಿಹರೇತ ನಾರೀಂ
ನ ಚಾಪಿ ನಾರೀಮನೃತಾವಾಹ್ವಯೀತ ।
ಭಾರ್ಯಾವ್ರತಂ ಹ್ಯಾತ್ಮನಿ ಧಾರಯೀತ
ತಥಾಸ್ಯೋಪಸ್ಥದ್ವಾರಗುಪ್ತಿರ್ಭವೇತ ॥೨೭॥

ವೀರನ ಪತ್ನಿಯಾದ ಹೆಂಗಸಿನೊಡನೆ ವಿಹರಿಸಬಾರದು. ತನ್ನ ಪತ್ನಿಯೇ ಆದರೂ ಋತುಸಮಯದಲ್ಲಲ್ಲದೇ ಬೇರೆ ಸಮಯದಲ್ಲಿ ಸಮಾಗಮಕ್ಕೆ ಅವಳನ್ನು ಆಹ್ವಾನಿಸಬಾರದು. ಭಾರ್ಯಾವ್ರತವನ್ನು ಮನಸ್ಸಿನಲ್ಲಿ ಧಾರಣೆಮಾಡಿಕೊಂಡಿರಬೇಕು. (ಭಾರ್ಯೆಯ ಹೊರತಾಗಿ ಅನ್ಯಸ್ತ್ರೀಯೊಡನೆ ಸಮಾಗಮಮಾಡುವುದಿಲ್ಲವೆಂಬುದನ್ನು ಮನಸ್ಸಿನಲ್ಲಿ ದೃಢವಾಗಿ ಪ್ರತಿಜ್ಞೆ ಮಾಡಬೇಕು. ಇದೇ ಭಾರ್ಯಾವ್ರತ.) ಹೀಗೆ ಮಾಡಿದಲ್ಲಿ ಉಪಸ್ಥದ ರಕ್ಷಣೆಯಾಗುತ್ತದೆ.

(‘ವೀರ’ ಎಂಬುದಕ್ಕೆ ‘ಹೇ ವೀರ! ಯುಧಿಷ್ಠಿರ!’ ಎಂಬುದಾಗಿ ವ್ಯಾಖ್ಯಾನಕಾರರು ವ್ಯಾಖ್ಯಾನಮಾಡಿದ್ದಾರೆ. ಇಲ್ಲಿಯ ಸಂಭಾಷಣೆಯು ನೇರ ವಾಗಿ ಭೀಷ್ಮನಿಗೂ–ಯುಧಿಷ್ಠಿರನಿಗೂ ನಡೆಯುತ್ತಿಲ್ಲ. ಸ್ಯೂಮರಶ್ಮಿಗೂ–ಕಪಿಲನಿಗೂ ನಡೆಯುತ್ತಿದೆ. ಕಪಿಲನು ಸ್ಯೂಮರಶ್ಮಿಗೆ ಹೇಳುತ್ತಿರುವ ಮಾತಿದು. ಆದುದರಿಂದ ‘ವೀರ’ ಎಂಬುದಕ್ಕೆ ‘ಹೇ ಯುಧಿಷ್ಠಿರ!’ ಎಂದು ಅರ್ಥಮಾಡುವುದು ಸಮಂಜಸವಾಗಿ ಕಾಣುವುದಿಲ್ಲ. ಮುಂದೆ ಅವರು

‘ಪತ್ನೀಂ’ ಎಂಬುದಕ್ಕೆ ಯಜ್ಞಸಂಬನ್ಧಿನೀಂ ನಾರೀಂ-ಯಜ್ಞಕ್ಕೆ ಸಂಬಂಧಿಸಿದ ಹೆಂಗಸನ್ನು ನ ವಿಹರೇತ= ನ ವಿಭಜೇತ ತದುಪರಿಸ್ತ್ರ್ಯನ್ತರಕರಣೇನ ಧರ್ಮಾರ್ಥಕಾಮೇಷು ತಾಂ ವಿಭಾಗವತೀಂ ನ ಕುರ್ಯಾತ್– ಧರ್ಮಾರ್ಥಕಾಮಗಳಲ್ಲಿ ಅವಳನ್ನು ಭಾಗವುಳ್ಳವಳನ್ನಾಗಿ ಮಾಡಬಾರದು– ಎಂಬುದಾಗಿ ಅರ್ಥಮಾಡಿ ಯಜ್ಞಪ್ರಕರಣದಲ್ಲಿ ಆಪಸ್ತಂಬರು ಹೇಳಿರುವ ಸೂತ್ರವನ್ನು ಉದ್ಧರಿಸಿದ್ದಾರೆ. ಆದರೆ ಪಾಠಾಂತರದಲ್ಲಿ ‘ವೀರಪತ್ನೀಂ’ ಎಂದು ಒಂದೇ ಪದವಿರುವುದರಿಂದಲೂ ವೀರಪತ್ನಿಯೊಡನೆ ಮಾತ ನಾಡಲೂಬಾರದು ಎಂಬ ಲೋಕನ್ಯಾಯವಿರುವುದರಿಂದಲೂ ನಾವು ಆ ಪಾಠವನ್ನೇ ಅನುಸರಿಸಿದ್ದೇವೆ.)

ದ್ವಾರಾಣಿ ಯಸ್ಯ ಸರ್ವಾಣಿ ಸುಗುಪ್ತಾನಿ ಮನೀಷಿಣಃ ।
ಉಪಸ್ಥಮುದರಂ ಬಾಹೂ ವಾಕ್ಚತುರ್ಥೀ ಸ ವೈ ದ್ವಿಜಃ ॥೨೮॥

ಬುದ್ಧಿವಂತನಾದ ಯಾವ ಮನುಷ್ಯನು ಉಪಸ್ಥ, ಉದರ, ಕೈ-ಕಾಲುಗಳು ಮತ್ತು ಮಾತು–ಈ ನಾಲ್ಕು ದ್ವಾರಗಳನ್ನು ಚೆನ್ನಾಗಿ ರಕ್ಷಿಸಿಕೊಂಡಿರುವನೋ–ಅವನೇ ನಿಜವಾದ ಬ್ರಾಹ್ಮಣನು.

ಮೋಘಾನ್ಯಗುಪ್ತದ್ವಾರಸ್ಯ ಸರ್ವಾಣ್ಯೇವ ಭವನ್ತ್ಯುತ ।
ಕಿಂ ತಸ್ಯ ತಪಸಾ ಕಾರ್ಯಂ ಕಿಂ ಯಜ್ಞೇನ ಕಿಮಾತ್ಮನಾ ॥೨೯॥

ಈ ನಾಲ್ಕು ದ್ವಾರಗಳನ್ನೂ ಚೆನ್ನಾಗಿ ರಕ್ಷಣೆಮಾಡಿಕೊಳ್ಳದೇ ಇರುವವನ ಸಕಲಶುಭಕರ್ಮಗಳೂ ವ್ಯರ್ಥವಾಗಿ ಹೋಗುತ್ತವೆ. ಫಲದಾಯಕ ಗಳಾಗುವುದಿಲ್ಲ. ಕೈ-ಕಾಲುಗಳು, ಹೊಟ್ಟೆ, ಉಪಸ್ಥ, ಮಾತು–ಈ ನಾಲ್ಕರ ಮೇಲೆ ಹತೋಟಿಯನ್ನು ಇಟ್ಟುಕೊಳ್ಳದಿರುವ ಮನುಷ್ಯನಿಗೆ ತಪಸ್ಸಿನಿಂದಾ ಗಲೀ, ಯಜ್ಞದಿಂದಾಗಲೀ, ಆತ್ಮಚಿಂತನದಿಂದಾಗಲೀ–ಯಾವ ಪ್ರಯೋಜನ ವಿದೆ?

ಅನುತ್ತರೀಯವಸನಮನುಪಸ್ತೀರ್ಣಶಾಯಿನಮ್ ।
ಬಾಹೂಪಧಾನಂ ಶಾಮ್ಯನ್ತಂ ತಂ ದೇವಾ ಬ್ರಾಹ್ಮಣಂ ವಿದುಃ ॥೩೦॥

ಉತ್ತರೀಯವಸ್ತ್ರವೂ ಇಲ್ಲದೇ, ಹೊದ್ದಿಕೆಯಾಗಲೀ, ಹಾಸಿಗೆ ಯಾಗಲೀ ಇಲ್ಲದೇ ನೆಲದಲ್ಲಿ ಯಾವನು ನಿರಾತಂಕವಾಗಿ ಮಲಗುವನೋ,

ತೋಳನ್ನೇ ತಲೆದಿಂಬನ್ನಾಗಿ ಹೊಂದಿರುವನೋ ಮತ್ತು ಸದಾ ಶಾಂತಭಾವದಿಂದಿರುವನೋ–ಅಂತಹವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ದ್ವನ್ದ್ವಾರಾಮೇಷು ಸರ್ವೇಷು ಯ ಏಕೋ ರಮತೇ ಮುನಿಃ ।
ಪರೇಷಾಮನನುಧ್ಯಾಯಂಸ್ತಂ ದೇವಾ ಬ್ರಾಹ್ಮಣಂ ವಿದುಃ ॥೩೧॥

ಶೀತೋಷ್ಣ-ಸುಖ-ದುಃಖಾದಿ ದ್ವಂದ್ವರೂಪವಾಗಿರುವ ಉಪವನಗಳಲ್ಲಿ ಯಾವ ಮುನಿಯು ಆ ದ್ವಂದ್ವಗಳಿಂದ ನಿರ್ಬಾಧಿತನಾಗಿ ಏಕಾಕಿಯಾಗಿ ರಮಿಸುತ್ತಿರುವನೋ, ಇತರರ ಸುಖವನ್ನಾಗಲೀ–ದುಃಖವನ್ನಾಗಲೀ ಚಿಂತಿಸುವುದಿಲ್ಲವೋ–ಅಂತಹ ಮುನಿಯನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ಯೇನ ಸರ್ವಮಿದಂ ಬುದ್ಧಂ ಪ್ರಕೃತಿರ್ವಿಕೃತಿಶ್ಚ ಯಾ ।
ಗತಿಜ್ಞಃ ಸರ್ವಭೂತಾನಾಂ ತಂ ದೇವಾ ಬ್ರಾಹ್ಮಣಂ ವಿದುಃ ॥೩೨॥

ಯಾವನು ಈ ಸಂಪೂರ್ಣಜಗತ್ತನ್ನೂ, ಪ್ರಕೃತಿಯನ್ನೂ ಮತ್ತು ಅದರ ವಿಕಾರವನ್ನೂ ಚೆನ್ನಾಗಿ ತಿಳಿದುಕೊಂಡಿರುವನೋ, ಸರ್ವಪ್ರಾಣಿಗಳ ಗತಿಯನ್ನೂ ಉತ್ಪತ್ತಿ-ಲಯಗಳ ರಹಸ್ಯವನ್ನೂ ತಿಳಿದಿರುವನೋ–ಅಂತಹವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ಅಭಯಂ ಸರ್ವಭೂತೇಭ್ಯಃ ಸರ್ವೇಷಾಮಭಯಂ ಯತಃ ।
ಸರ್ವಭೂತಾತ್ಮಭೂತೋ ಯಸ್ತಂ ದೇವಾ ಬ್ರಾಹ್ಮಣಂ ವಿದುಃ ॥೩೩॥

ಯಾವನು ಸಮಸ್ತಪ್ರಾಣಿಗಳ ವಿಷಯದಲ್ಲಿಯೂ ಭಯರಹಿತನಾಗಿರುವನೋ ಮತ್ತು ಯಾವನ ವಿಷಯದಲ್ಲಿ ಎಲ್ಲ ಪ್ರಾಣಿಗಳೂ ಭಯರಹಿತವಾಗಿರುವುವೋ (ಸರ್ವಪ್ರಾಣಿಗಳಿಗೂ ಅಭಯದಾಯಕನಾಗಿರುವನೋ), ಸರ್ವಪ್ರಾಣಿಗಳಿಗೂ ಆತ್ಮಭೂತನಾಗಿರುವನೋ (ಬ್ರಹ್ಮತಾದಾತ್ಮ್ಯದಿಂದ ಎಲ್ಲ ಪ್ರಾಣಿಗಳಿಗೂ ಆತ್ಮನಾಗಿರುವನೋ)–ಅಂತಹವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ನಾನ್ತರೇಣಾನುಜಾನನ್ತಿ ದಾನಯಜ್ಞಕ್ರಿಯಾಫಲಮ್ ।
ಅವಿಜ್ಞಾಯ ಚ ತತ್ಸರ್ವಮನ್ಯದ್ರೋಚಯತೇ ಫಲಮ್ ॥೩೪॥

ಆದರೆ ಮೂಢರಾದವರು ಯಜ್ಞ ಮತ್ತು ದಾನಗಳಿಂದ ಪ್ರಾಪ್ತವಾಗಬಹುದಾದ ಸ್ವರ್ಗಾದಿ ಫಲಗಳನ್ನು ಬಿಟ್ಟು ಬೇರೆ ಯಾವುದನ್ನೂ ತಿಳಿದುಕೊಂಡಿರುವುದಿಲ್ಲ. ಮೋಕ್ಷ, ಆತ್ಮಸಾಕ್ಷಾತ್ಕಾರ, ಬ್ರಹ್ಮಭಾವ–ಇವೇ ಮುಂತಾದುವುಗಳ ವಿಷಯವಾಗಿ ಸ್ವಲ್ಪವಾದರೂ ತಿಳುವಳಿಕೆಯಿಲ್ಲದ ಅವರು ಸ್ವರ್ಗಾದಿ ಫಲಗಳಲ್ಲಿಯೇ ಅಭಿರುಚಿಯುಳ್ಳವರಾಗಿರುತ್ತಾರೆ.

ಸ್ವಕರ್ಮಭಿಃ ಸಂಶ್ರಿತಾನಾಂ ತಪೋ ಘೋರತ್ವಮಾಗತಮ್ ।
ತಂ ಸದಾಚಾರಮಾಶ್ರಿತ್ಯ ಪುರಾಣಂ ಶಾಶ್ವತಂ ಧ್ರುವಮ್ ॥೩೫॥

ಪುರಾತನವಾದ, ಶಾಶ್ವತವಾದ ಮತ್ತು ನಿಶ್ಚಲವಾದ ಯೋಗದ ಸದಾಚಾರಗಳನ್ನು ಆಶ್ರಯಿಸಿ ಸ್ವಕರ್ಮಗಳಲ್ಲಿ ನಿರತರಾಗಿರುವ ಜ್ಞಾನಿಗಳ ತಪಸ್ಸು–ಸಂಸಾರವೆಂಬ ಅಜ್ಞಾನಕ್ಕೆ ಘೋರವಾಗಿ ಪರಿಣಮಿಸುತ್ತದೆ. (ಸಂಸಾರವೆಂಬ ಅಜ್ಞಾನವನ್ನು ನಾಶಗೊಳಿಸುತ್ತದೆ.)

ಅಶಕ್ನುವನ್ತಶ್ಚರಿತುಂ ಕಿಂಚಿದ್ಧರ್ಮೇಷು ಸೂತ್ರಿತಮ್ ।
ನಿರಾಪದ್ಧರ್ಮ ಆಚಾರೋ ಹ್ಯಪ್ರಮಾದೋಽಪರಾಭವಃ ॥೩೬॥

ಪ್ರವೃತ್ತಿಮಾರ್ಗದಲ್ಲಿರುವ ಮನುಷ್ಯರು ಯೋಗಧರ್ಮಗಳಲ್ಲಿ ಸೂಚಿಸಲ್ಪಟ್ಟಿರುವ ಯಮ-ನಿಯಮಾದಿಗಳನ್ನು ಅನುಷ್ಠಾನಮಾಡಲು ಅಸಮರ್ಥರಾಗಿರುತ್ತಾರೆ. ಅಷ್ಟಾಂಗಯೋಗಕ್ಕೆ ಸಂಬಂಧಿಸಿದ ಯಮ-ನಿಯಮಾದಿ ಕರ್ಮಗಳು ಆಪತ್ತಿನಿಂದ ರಹಿತವಾಗಿರುತ್ತವೆ. ಪ್ರಮಾದರಹಿತವಾಗಿರುತ್ತವೆ. ಕಾಮ-ಕ್ರೋಧಾದಿಗಳಿಂದ ಪರಾಭವಹೊಂದುವುದಿಲ್ಲ. (ಅಷ್ಟಾಂಗಯೋಗ ನಿಷ್ಠನಿಗೆ ಕಾಮ-ಕ್ರೋಧಾದಿಗಳ ಉಪಟಳವಿರುವುದಿಲ್ಲ.)

ಫಲವನ್ತಿ ಚ ಕರ್ಮಾಣಿ ವ್ಯುಷ್ಟಿಮನ್ತಿ ಧ್ರುವಾಣಿ ಚ ।
ವಿಗುಣಾನಿ ಚ ಪಶ್ಯನ್ತಿ ತಥಾನೈಕಾನ್ತಿಕಾನಿ ಚ ॥೩೭॥

ಯೋಗಶಾಸ್ತ್ರದಲ್ಲಿ ಹೇಳಿರುವ ಕರ್ಮಗಳು ಶ್ರೇಷ್ಠವಾದ ಮತ್ತು ಶಾಶ್ವತವಾದ ಫಲಗಳನ್ನು ಕೊಡತಕ್ಕುವುಗಳಾಗಿವೆ. ಸಾಧಕನನ್ನು ಉನ್ನತಿಗೆ ಒಯ್ಯುತ್ತವೆ. ಆದರೆ ಪ್ರವೃತ್ತಿಮಾರ್ಗಿಗಳಾದ ಜನರು ಯೋಗಮಾರ್ಗವನ್ನು ಗುಣರಹಿತವಾದುದೆಂದೂ ನಿಯತವಾಗಿ ಫಲವನ್ನು ಕೊಡುವುದಲ್ಲವೆಂದೂ ಭಾವಿಸುತ್ತಾರೆ.

ಗುಣಾಶ್ಚಾತ್ರ ಸುದುರ್ಜ್ಞೇಯಾ ಜ್ಞಾತಾಶ್ಚಾತ್ರ ಸುದುಷ್ಕರಾಃ ।
ಅನುಷ್ಠಿತಾಶ್ಚಾನ್ತವನ್ತ ಇತಿ ತ್ವಮನುಪಶ್ಯಸಿ ॥೩೮॥

ಯಜ್ಞಗಳ ಗುಣಗಳು (ಸ್ವರೂಪ-ವಿಧಿ-ವಿಧಾನಗಳು, ಸಾಮಗ್ರಿಗಳು) ತಿಳಿಯಲು ದುಃಸಾಧ್ಯವಾದುವುಗಳು. ಒಂದು ವೇಳೆ ಅವುಗಳನ್ನು ತಿಳಿದು ಕೊಂಡರೂ ಯಜ್ಞಗಳ ಅನುಷ್ಠಾನವು ಸುದುಷ್ಕರವಾದುದು. ಒಂದು ವೇಳೆ ಅತ್ಯಂತಕಷ್ಟದಿಂದ ಅನುಷ್ಠಾನಮಾಡಿದರೂ ಅವುಗಳು ಶಾಶ್ವತವಾದ ಸುಖವನ್ನೂ ಕೊಡತಕ್ಕುವುಗಳಲ್ಲ. ಈ ವಿಷಯಗಳನ್ನು ನೀನೂ ತಿಳಿದು ಕೊಂಡಿರುವೆ."

ಸ್ಯೂಮರಶ್ಮಿಯು ಪ್ರಶ್ನಿಸುತ್ತಾನೆ :

ಯಥಾ ಚ ವೇದಪ್ರಾಮಾಣ್ಯಂ ತ್ಯಾಗಶ್ಚ ಸಫಲೋ ಯಥಾ ।
ತೌ ಪನ್ಥಾನಾವುಭೌ ವ್ಯಕ್ತೌ ಭಗವಂಸ್ತದ್ವದಸ್ವ ಮೇ ॥೩೯॥

"ಭಗವನ್! 'ಕರ್ಮವನ್ನು ಮಾಡು' 'ಕರ್ಮವನ್ನು ಬಿಡು' – ಎಂಬ ಪರಸ್ಪರವಿರುದ್ಧವಾದ ಈ ಎರಡು ಮಾರ್ಗಗಳೂ ಪ್ರಚಲಿತವಾಗಿವೆ. ಕರ್ಮಮಾರ್ಗವು ಯುಕ್ತವಲ್ಲವೆನ್ನುವುದಾದರೆ–ವೇದಪ್ರಾಮಾಣ್ಯವು ಹೇಗೆ ಸಿದ್ಧವಾಗುತ್ತದೆ? 'ನೈಷ್ಕರ್ಮ್ಯವು ಸರಿಯಲ್ಲ' – ಎನ್ನುವುದಾದರೆ ತ್ಯಾಗದ ಸಫಲತೆಯು ಹೇಗೆ ಉಂಟಾಗುತ್ತದೆ? ವೇದಪ್ರಾಮಾಣ್ಯವೂ ಸಿದ್ಧವಾಗ ಬೇಕು ; ತ್ಯಾಗವೂ ಫಲದಾಯಕವಾಗಬೇಕು. ಇವೆರಡನ್ನೂ ಸಮನ್ವಯಿ ಸುವುದು ಹೇಗೆಂಬುದನ್ನು ನನಗೆ ತಿಳಿಯಪಡಿಸು."

ಕಪಿಲನು ಹೇಳುತ್ತಾನೆ :

ಪ್ರತ್ಯಕ್ಷಮಿಹ ಪಶ್ಯನ್ತಿ ಭವನ್ತಃ ಸತ್ಪಥೇ ಸ್ಥಿತಾಃ ।
ಪ್ರತ್ಯಕ್ಷಂ ತು ಕಿಮತ್ರಾಸ್ತಿ ಯದ್ಭವನ್ತ ಉಪಾಸತೇ ॥೪೦॥

"ಸನ್ಮಾರ್ಗದಲ್ಲಿರುವ ನೀವುಗಳು ಯೋಗಮಾರ್ಗದ ಫಲವನ್ನು ಪ್ರತ್ಯಕ್ಷವಾಗಿಯೇ ಕಾಣಬಹುದಾಗಿದೆ. ಆದರೆ ನೀವು ಕರ್ಮಮಾರ್ಗ ದಲ್ಲಿದ್ದುಕೊಂಡು ಯಾವ ಯಜ್ಞಾನುಷ್ಠಾನಗಳನ್ನು ಮಾಡುವಿರೋ– ಆ ಯಜ್ಞಾನುಷ್ಠಾನದಲ್ಲಿ ಪ್ರತ್ಯಕ್ಷವಾದ ಫಲವು ಯಾವುದಿದೆ? (ಯೋಗ

ಮಾರ್ಗದಲ್ಲಿ ಆತ್ಮಸಾಕ್ಷಾತ್ಕಾರವನ್ನು ಪ್ರತ್ಯಕ್ಷವಾಗಿ ಪಡೆದುಕೊಳ್ಳಬಹುದಾಗಿದೆ. ಆದರೆ ಅಪ್ರತ್ಯಕ್ಷವಾದ ಸ್ವರ್ಗದ ಪ್ರಾಪ್ತಿಗಾಗಿ ಯಜ್ಞವನ್ನು ಮಾಡಬೇಕು. ಅರ್ಥಾತ್ ಯೋಗಮಾರ್ಗವು ಪ್ರತ್ಯಕ್ಷಫಲವನ್ನು ಕೊಡುವಂತೆ ಕರ್ಮಮಾರ್ಗವು ಪ್ರತ್ಯಕ್ಷಫಲವನ್ನು ಕೊಡುವುದಿಲ್ಲ.)”

ಸ್ಯೂಮರಶ್ಮಿಯು ಹೇಳುತ್ತಾನೆ :

ಸ್ಯೂಮರಶ್ಮಿರಹಂ ಬ್ರಹ್ಮಞ್ಜಿಜ್ಞಾಸಾರ್ಥಮಿಹಾಗತಃ ।
ಶ್ರೇಯಸ್ಕಾಮಃ ಪ್ರತ್ಯವೋಚಮಾರ್ಜವಾನ್ನ ವಿವಕ್ಷಯಾ ॥೪೧॥

“ಬ್ರಾಹ್ಮಣೋತ್ತಮನೇ! ನಾನು ಸ್ಯೂಮರಶ್ಮಿ ಎಂಬ ಹೆಸರಿನ ಬ್ರಾಹ್ಮಣನು. ಜ್ಞಾನದ ವಿಷಯವಾಗಿ ತಿಳಿದುಕೊಳ್ಳಲೆಂದೇ ಇಲ್ಲಿಗೆ ಬಂದು ಈ ಹಸುವಿನಲ್ಲಿ ಸೇರಿಕೊಂಡಿರುತ್ತೇನೆ. ಶ್ರೇಯಸ್ಕಾಮನಾದ ನಾನು ಋಜುತ್ವದಿಂದಲೇ ನಿನ್ನೊಡನೆ ಮಾತನಾಡುತ್ತಿದ್ದೇನೆ. ನಿನ್ನೊಡನೆ ವಾದ-ವಿವಾದಮಾಡುವ ಇಚ್ಛೆಯು ನನಗಿರುವುದಿಲ್ಲ. ನನ್ನ ಮನಸ್ಸಿನಲ್ಲಿ ಹುಟ್ಟಿರುವ ಭಯಾನಕವಾದ ಸಂಶಯಕ್ಕೆ ನೀನು ಸಮಾಧಾನವನ್ನು ಹೇಳು :

ಪ್ರತ್ಯಕ್ಷಮಿಹ ಪಶ್ಯನ್ತೋ ಭವನ್ತಃ ಸತ್ಪಥೇ ಸ್ಥಿತಾಃ ।
ಕಿಮತ್ರ ಪ್ರತ್ಯಕ್ಷತಮಂ ಭವನ್ತೋ ಯದುಪಾಸತೇ ।
ಅನ್ಯತ್ರ ತರ್ಕಶಾಸ್ತ್ರೇಭ್ಯ ಆಗಮಾರ್ಥಂ ಯಥಾಗಮಮ್ ॥೪೨॥

‘ಸನ್ಮಾರ್ಗದಲ್ಲಿದ್ದುಕೊಂಡು ಯೋಗಮಾರ್ಗದ ಫಲವನ್ನು ಪ್ರತ್ಯಕ್ಷವಾಗಿ ಕಾಣುವೆವು’–ಎಂದು ನೀವು ಹೇಳಿದಿರಿ. ನೀವು ಯಾವುದನ್ನು ಉಪಾಸನೆಮಾಡುವಿರಿ? ಅದರಲ್ಲಿ ನೀವು ಉತ್ಕೃಷ್ಟವಾದ ಯಾವುದನ್ನು ಕಾಣುವಿರಿ? ವೇದವಿರುದ್ಧವಾದ ತರ್ಕಗಳನ್ನು ಮಾಡುವ ಲೋಕಾಯತ-ಸೌಗತ-ಕಾಪಾಲಿಕಾದಿಶಾಸ್ತ್ರಗಳನ್ನು ವರ್ಜಿಸಿ ಯಥಾವತ್ತಾಗಿ ಆಗಮಶಾಸ್ತ್ರವನ್ನು ನಾನು ತಿಳಿದುಕೊಳ್ಳಬೇಕೆಂದಿರುತ್ತೇನೆ.

ಆಗಮೋ ವೇದವಾದಾಸ್ತು ತರ್ಕಶಾಸ್ತ್ರಾಣಿ ಚಾಗಮಃ ॥೪೩॥

ವೇದಮತವನ್ನು ಅನುಸರಣೆಮಾಡುವ ಶಾಸ್ತ್ರವು ಆಗಮ. ವೇದಕ್ಕೆ ಅನುಕೂಲವಾದ ತರ್ಕಶಾಸ್ತ್ರಗಳೂ (ವೇದಾರ್ಥವನ್ನು ನಿರ್ಣಯಿಸುವ ಪೂರ್ವೋತ್ತರಮೀಮಾಂಸಗಳೂ) ಆಗಮಗಳೇ ಆಗಿವೆ.

ಯಥಾಶ್ರಮಮುಪಾಸೀತ ಆಗಮಸ್ತತ್ರ ಸಿಧ್ಯತಿ ।
ಸಿದ್ಧಿಃ ಪ್ರತ್ಯಕ್ಷರೂಪಾ ಚ ದೃಶ್ಯತ್ಯಾಗಮನಿಶ್ಚಯಾತ್ ॥೪೪॥

ಯಾವ ಯಾವ ಆಶ್ರಮಗಳಿಗೆ ಯಾವ ಯಾವ ಧರ್ಮಗಳು ವಿಹಿತವಾಗಿವೆಯೋ ಆಯಾ ಆಶ್ರಮದಲ್ಲಿರುವವರು ಅವೇ ಧರ್ಮಗಳನ್ನೇ ಪರಿಪಾಲಿಸಬೇಕು. ಹೀಗೆ ಮಾಡುವುದರಿಂದ ವೇದ-ಶಾಸ್ತ್ರಗಳು ಸಫಲವಾಗುತ್ತವೆ. ಇದರಲ್ಲಿ ಸಿದ್ಧಿಯೂ ಪ್ರತ್ಯಕ್ಷರೂಪವೇ – ಪ್ರತ್ಯಕ್ಷವೆಂಬುದಕ್ಕೆ ವೇದವೇ ಪ್ರಮಾಣ. (ಯಾವ ಕಾಮನೆಯಿಂದಾದರೂ ಯಜ್ಞಗಳನ್ನು ಮಾಡಬಹುದು. ಪುತ್ರಕಾಮನೆಯಿಂದ ಪುತ್ರಕಾಮೇಷ್ಟಿಯನ್ನು ಮಾಡಿದರೆ ಪುತ್ರಪ್ರಾಪ್ತಿಯಾಗುತ್ತದೆ.) ಆದರೆ ನಿಶ್ಚಯಾತ್ಮಕವಾದ ಬುದ್ಧಿಯಿಲ್ಲದೇ ಸುಮ್ಮನೆ ಕರ್ಮಗಳನ್ನು ತ್ಯಾಗಮಾಡುವುದು ಯುಕ್ತವಲ್ಲ.

ನೌರ್ನಾವೀವ ನಿಬದ್ಧಾ ಹಿ ಸ್ರೋತಸಾ ಸನಿಬನ್ಧನಾ ।
ಹ್ರಿಯಮಾಣಾ ಕಥಂ ವಿಪ್ರ ಕುಬುದ್ಧೀಂಸ್ತಾರಯಿಷ್ಯತಿ ।
ಏತದ್ಬ್ರವೀತು ಭಗವಾನುಪಪನ್ನೋಽಸ್ಮ್ಯಧೀಹಿ ಭೋಃ ॥೪೫॥

ಶತ್ರುಪಕ್ಷದ ಹಡಗಿಗೆ ಕಟ್ಟಿಹಾಕಲ್ಪಟ್ಟಿರುವ ಹಡಗೊಂದು ಪ್ರವಾಹದಿಂದ ಶತ್ರುಪಕ್ಷದ ಹಡಗಿನೊಡನೆ ಅಪಹರಿಸಲ್ಪಡುವಂತೆ–ಕಾಮ-ಕ್ರೋಧಾದಿ ಶತ್ರುಗಳಿಂದಲೂ ಜನ್ಮಾಂತರದ ಕರ್ಮಫಲದಿಂದಲೂ ಬಂಧಿಸಲ್ಪಟ್ಟು ಸಂಸಾರವೆಂಬ ಮಹಾಪ್ರವಾಹದಲ್ಲಿ ತೇಲಿಹೋಗುತ್ತಿರುವ ಕುತ್ಸಿತ ಬುದ್ಧಿಯವರನ್ನು ನಿಷ್ಕರ್ಮವು ಹೇಗೆ ಉದ್ಧರಿಸುತ್ತದೆ? ಭಗವನ್! ನಾನು ನಿನಗೆ ವಿನೀತನಾಗಿದ್ದೇನೆ. ಈ ವಿಷಯವನ್ನು ನನಗೆ ತಿಳಿಸಿಕೊಡು. (ಬಂಧನವಾದೊಡನೆ ಬಂಧನದಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಬೇಕು. ಪ್ರಯತ್ನಿಸದೆ ಇದ್ದರೆ ಮತ್ತಾವುದೋ ಪ್ರವಾಹವು ಕೊಚ್ಚಿಕೊಂಡು ಹೊರಟುಹೋಗುತ್ತದೆ. ದಿಕ್ಕುಗಾಣದೆ ಎಲ್ಲಿಗೋ ಹೋಗಬೇಕಾಗುತ್ತದೆ. ನಿರ್ದಿಷ್ಟವಾದ ಸ್ಥಳಕ್ಕಂತೂ ಸೇರಲು ಸಾಧ್ಯವಾಗುವುದೇ ಇಲ್ಲ. ಸಂಸಾರಬಂಧನದಲ್ಲಿ ಸಿಕ್ಕಿಹಾಕಿಕೊಂಡನಂತರ ಬಿಡುಗಡೆಗೆ ಪ್ರಯತ್ನಿಸಬೇಕು. ವೇದೋಕ್ತವಾದ ಕರ್ಮಗಳೇ ಮಾನವನನ್ನು ಉದ್ಧರಿಸುತ್ತವೆ. ಹಾಗೆ ಮಾಡದೇ, ನಿಷ್ಕರ್ಮಿಯಾದರೆ ನೆಲೆಯಿಲ್ಲದ ಕಡೆಗೆ ಮಾನವನನ್ನು ವಿಧಿಯು ಸೆಳೆದುಕೊಂಡು

ಹೋಗುತ್ತದೆ. ಆದುದರಿಂದ ವೇದೋಕ್ತವಾದ ಯಜ್ಞ-ಯಾಗಾದಿ ಕರ್ಮಗಳನ್ನು ಮಾಡಲೇಬೇಕಲ್ಲವೆ?)

ನೈವ ತ್ಯಾಗೀ ನ ಸಂತುಷ್ಟೋ ನಾಶೋಕೋ ನ ನಿರಾಮಯಃ ।
ನ ನಿರ್ವಿಧಿತ್ಸೋ ನಾವೃತ್ತೋ ನಾಪವೃತ್ತೋಽಸ್ತಿ ಕಶ್ಚನ ॥೪೭॥

ನಿಶ್ಚಯವಾಗಿಯೂ ಈ ಜಗತ್ತಿನಲ್ಲಿ ಸಂಪೂರ್ಣವಾಗಿ ಎಲ್ಲವನ್ನೂ ತ್ಯಾಗಮಾಡಿರುವವನು ಯಾರೂ ಇಲ್ಲ. ಸಂತುಷ್ಟನಾದವನೂ ಇಲ್ಲ. ಶೋಕರಹಿತನೂ ಇಲ್ಲ. ನೀರೋಗಿಯೂ ಇಲ್ಲ. ಕರ್ಮಮಾಡುವ ಇಚ್ಛೆಯನ್ನು ಸಂಪೂರ್ಣವಾಗಿ ಬಿಟ್ಟಿರುವವನೂ ಇಲ್ಲ. ಉದ್ಯೋಗವಿಲ್ಲದವನೂ ಇಲ್ಲ. ಉದ್ಯೋಗವನ್ನು ಬಿಟ್ಟಿರುವವನೂ ಇಲ್ಲ.

ಭವನ್ತೋಽಪಿ ಚ ಹೃಷ್ಯನ್ತಿ ಶೋಚನ್ತಿ ಚ ಯಥಾ ವಯಮ್ ।
ಇನ್ದ್ರಿಯಾರ್ಥಾಶ್ಚ ಭವತಾಂ ಸಮಾನಾಃ ಸರ್ವಜನ್ತುಷು ॥೪೭॥

ವೇದಕರ್ಮನಿರತರಾದ ನಾವು ಸಂತೋಷಿಸುವ ಹಾಗೆಯೇ ಮತ್ತು ದುಃಖಿಸುವ ಹಾಗೆಯೇ ನೀವೂ ಸಂತೋಷಿಸುವಿರಿ ಮತ್ತು ದುಃಖಿಸುವಿರಿ. ವಿಶ್ವದಲ್ಲಿರುವ ಎಲ್ಲ ಪ್ರಾಣಿಗಳಂತೆಯೇ ಶಬ್ದ-ಸ್ಪರ್ಶಾದಿ ಇಂದ್ರಿಯಾರ್ಥಗಳು ನಿಮಗೂ ಸಮಾನವಾಗಿದೆ. ನೀವೂ ನಮ್ಮಂತೆಯೇ ಕೇಳುವಿರಿ ; ನೋಡುವಿರಿ ; ಸ್ಪರ್ಶಿಸುವಿರಿ ; ರುಚಿನೋಡುವಿರಿ ಮತ್ತು ವಾಸನೆಯನ್ನು ಆಘ್ರಾಣಿಸುವಿರಿ.

ಏವಂ ಚತುರ್ಣಾಂ ವರ್ಣಾನಾಮಾಶ್ರಮಾಣಾಂ ಪ್ರವೃತ್ತಿಷು ।
ಏಕಮಾಲಮ್ಬಮಾನಾನಾಂ ನಿರ್ಣಯೇ ಕಿಂ ನಿರಾಮಯಮ್ ॥೪೮॥

ಹೀಗೆ ನಾಲ್ಕು ವರ್ಣದವರೂ ಮತ್ತು ನಾಲ್ಕು ಆಶ್ರಮಿಗಳೂ ತಮ್ಮ ಎಲ್ಲ ಪ್ರವೃತ್ತಿಗಳಲ್ಲಿಯೂ ಕರ್ಮವನ್ನು ಮಾತ್ರವೇ ಅವಲಂಬಿಸಿರುತ್ತಾರೆ. ನಿರ್ಣಯರೂಪದಲ್ಲಿ ಇದಕ್ಕಿಂತಲೂ ಬೇರೆಯದಾದ ಉಪದ್ರವರಹಿತವಾದ ಯಾವ ಮಾರ್ಗವಿದೆ?”

ಕಪಿಲನು ಉತ್ತರಿಸುತ್ತಾನೆ :

ಯದ್ಯದಾಚರತೇ ಶಾಸ್ತ್ರಮರ್ಥಂ ಸರ್ವಪ್ರವೃತ್ತಿಷು ।
ಯಸ್ಯ ಯತ್ರ ಹ್ಯನುಷ್ಠಾನಂ ತತ್ರ ತತ್ರ ನಿರಾಮಯಮ್ ॥೪೯॥

“ನಾನಾವಿಧವಾದ ಕಾರ್ಯಗಳಲ್ಲಿ ಶಾಸ್ತ್ರವು ಯಾವು-ಯಾವುದನ್ನು ಮಾಡಲು ಯೋಗ್ಯವೆಂದು ಪ್ರತಿಪಾದಿಸುತ್ತದೆಯೋ ಮತ್ತು ಅಂತಹ ಕಾರ್ಯದ ಅನುಷ್ಠಾನವು ಎಲ್ಲಿರುವುದೋ–ಅಲ್ಲಿ ನಿರುಪದ್ರವವು ಅಥವಾ ಅಕ್ಷಯಸುಖವು ಪ್ರಾಪ್ತವಾಗುತ್ತದೆ. (ಅಹಿಂಸೆಯನ್ನು ಶಾಸ್ತ್ರವು ಪ್ರತಿಪಾದಿಸುತ್ತದೆ. ಅಹಿಂಸೆಯು ಅನುಷ್ಠಾನದಲ್ಲಿ ಎಲ್ಲಿರುವುದೋ–ಅಲ್ಲಿ ಅಕ್ಷಯ ಸುಖವುಂಟಾಗುತ್ತದೆ.)

ಜ್ಞಾನಂ ಪ್ಲಾವಯತೇ ಸರ್ವಂ ಯೋ ಜ್ಞಾನಂ ಹ್ಯನುವರ್ತತೇ ।
ಜ್ಞಾನಾದಪೇತ್ಯ ಯಾ ವೃತ್ತಿಃ ಸಾ ವಿನಾಶಯತಿ ಪ್ರಜಾಃ ॥೫೦॥

ಯಾವನು ಜ್ಞಾನಮಾರ್ಗವನ್ನು ಅನುಸರಿಸುವನೋ–ಅವನ ಸಮಸ್ತವಾದ ಸಂಸಾರಕಷ್ಟವನ್ನೂ ಆ ಜ್ಞಾನವೇ ಪರಿಹರಿಸುತ್ತದೆ. ಜ್ಞಾನವನ್ನು ಬಿಟ್ಟು ಯಾವ ವೃತ್ತಿಯಿರುವುದೋ–ಆ ವೃತ್ತಿಯು (ಕರ್ಮಮಾರ್ಗವು) ಪ್ರಜೆಗಳನ್ನು ಜನನ-ಮರಣಪ್ರವಾಹದಲ್ಲಿ ಮುಳುಗಿಸಿ ನಾಶಗೊಳಿಸುತ್ತದೆ.

ಭವನ್ತೋ ಜ್ಞಾನಿನೋ ವ್ಯಕ್ತಂ ಸರ್ವತಶ್ಚ ನಿರಾಮಯಾಃ ।
ಐಕಾತ್ಮ್ಯಂ ನಾಮ ಕಶ್ಚಿದ್ಧಿ ಕದಾಚಿದುಪಪದ್ಯತೇ ॥೫೧॥

ನೀವೆಲ್ಲರೂ ಜ್ಞಾನಿಗಳೇ ಆಗಿರುವಿರಿ. ಇದು ಸ್ಪಷ್ಟವಾಗಿಯೇ ಇದೆ. ಸರ್ವಪ್ರಕಾರದಿಂದಲೂ ನೀವು ಉಪದ್ರವರಹಿತರೂ ಆಗಿರುವಿರಿ. ಆದರೆ ಬ್ರಹ್ಮದೊಡನೆ ಐಕಾತ್ಮ್ಯಭಾವವು ನಿಮ್ಮಲ್ಲಿ ಯಾರಿಗಾದರೂ ಉಂಟಾಗಿರುವುದೇ? ಕರ್ಮಮಾರ್ಗಿಗಳಿಗೆ ಯಾವಾಗಲಾದರೂ ಇಂತಹ ಭಾವನೆಯು ಉಂಟಾಗಲು ಸಾಧ್ಯವಿರುವುದೇ?

(ಕರ್ಮನಿಷ್ಠರಿಗೂ ವೇದಜ್ಞಾನವು ತಿಳಿದಿದೆ. ತಮ್ಮ ನಿತ್ಯಕರ್ಮಗಳ ಫಲವಾಗಿ ಅವರು ನಿರುಪದ್ರವಿಗಳಾಗಿಯೂ ಇರುತ್ತಾರೆ. ಆದರೆ ಶಮ-ದಮಾದಿಗಳ ಅನುಷ್ಠಾನವಿಲ್ಲದಿರುವುದರಿಂದ ಅವರಲ್ಲಿ ಬ್ರಹ್ಮಭಾವವಿರುವುದಿಲ್ಲ.)

ಶಾಸ್ತ್ರಂ ಹ್ಯಬುದ್ಧ್ವಾ ತತ್ತ್ವೇನ ಕೇಚಿದ್ವಾದಬಲಾಜ್ಜನಾಃ ।
ಕಾಮದ್ವೇಷಾಭಿಭೂತತ್ವಾದಹಙ್ಕಾರವಶಂ ಗತಾಃ ॥೫೨॥

ಕೆಲವು ಜನರು ಶಾಸ್ತ್ರವನ್ನು ಯಥಾರ್ಥರೂಪದಿಂದ ತಿಳಿದುಕೊಳ್ಳದೇ ವಿತಂಡವಾದದ ಬಲದಿಂದ ರಾಗ-ದ್ವೇಷಗಳಿಂದ ಅಭಿಭೂತರಾಗಿ ಅಹಂಕಾರಕ್ಕೆ ಅಧೀನರಾಗಿರುತ್ತಾರೆ.

ಯಾಥಾತಥ್ಯಮವಿಜ್ಞಾಯ ಶಾಸ್ತ್ರಾಣಾಂ ಶಾಸ್ತ್ರದಸ್ಯವಃ ।
ಬ್ರಹ್ಮಸ್ತೇನಾ ನಿರಾರಮ್ಭಾ ದಮ್ಭಮೋಹವಶಾನುಗಾಃ ॥೫೩॥

ಶಾಸ್ತ್ರಗಳ ಯಥಾರ್ಥರೂಪವನ್ನು ತಿಳಿಯದಿರುವ, ಶಾಸ್ತ್ರಗಳ ವಾಕ್ಯಗಳನ್ನು ಅಲ್ಲಲ್ಲಿ ಕದ್ದು ತಮ್ಮ ಮತವೇ ಹೆಚ್ಚೆಂದು ಪ್ರತಿಪಾದಿಸುವ, ಬ್ರಹ್ಮವನ್ನೇ ಅಪಹರಿಸಿದ ಕಳ್ಳರು ಶಮ-ದಮಾದಿ ಸಾಧನಗಳನ್ನು ಅನುಷ್ಠಾನಮಾಡದೇ ದಂಭ-ಮೋಹಗಳಿಗೆ ವಶರಾಗುತ್ತಾರೆ.

ನೈರ್ಗುಣ್ಯಮೇವ ಪಶ್ಯನ್ತಿ ನ ಗುಣಾನನುಯುಞ್ಜತೇ ।
ತೇಷಾಂ ತಮಃಶರೀರಾಣಾಂ ತಮ ಏವ ಪರಾಯಣಮ್ ॥೫೪॥

ಅವರು ಶಮ-ದಮಾದಿ ಸಾಧನಗಳಲ್ಲಿ ನಿಷ್ಫಲತ್ವವನ್ನು ಕಾಣುತ್ತಾರೆ. ಜ್ಞಾನೈಶ್ವರ್ಯಾದಿ ಸದ್ಗುಣಗಳನ್ನು ವಿಮರ್ಶಿಸುವುದಿಲ್ಲ. ತಮೋಗುಣವೇ ತುಂಬಿರುವ ಅಂತಹ ಮನುಷ್ಯರಿಗೆ ಅಂಧಕಾರವೇ ನಿರಂತರವಾದ ಆಶ್ರಯವಾಗಿರುತ್ತದೆ.

ಯೋ ಯಥಾಪ್ರಕೃತಿರ್ಜನ್ತುಃ ಪ್ರಕೃತೇಃ ಸ್ಯಾದ್ವಶಾನುಗಃ ।
ತಸ್ಯ ದ್ವೇಷಶ್ಚ ಕಾಮಶ್ಚ ಕ್ರೋಧೋ ದಮ್ಭೋಽನೃತಂ ಮದಃ ।
ನಿತ್ಯಮೇವಾಭಿವರ್ತನ್ತೇ ಗುಣಾಃ ಪ್ರಕೃತಿಸಮ್ಭವಾಃ ॥೫೫॥

ಒಬ್ಬ ಮನುಷ್ಯನಲ್ಲಿ ಯಾವ ವಿಧವಾದ ಪ್ರಕೃತಿಯಿರುವುದೋ (ಸ್ವಭಾವವಿರುವುದೋ) ಆ ಪ್ರಕೃತಿಗೆ ಅವನು ವಶನಾಗಿ ವರ್ತಿಸುತ್ತಾನೆ. (ಸತ್ತ್ವಭಾವವಿದ್ದರೆ ಸಾತ್ತ್ವಿಕನಾಗಿಯೂ ತಾಮಸಿಕಸ್ವಭಾವವಿದ್ದರೆ ಕೋಪಿಷ್ಠನಾಗಿಯೂ ವರ್ತಿಸುತ್ತಾನೆ.) ತಾಮಸಶರೀರಿಗೆ ಅಥವಾ ತಮೋಗುಣಕ್ಕೆ ಅಧೀನನಾಗಿರುವವನಿಗೆ ಪ್ರಕೃತಿಜನ್ಯವಾದ ದ್ವೇಷ, ಕಾಮ, ಕ್ರೋಧ, ದಂಭ, ಮಿಥ್ಯೆ, ಮದ–ಇವೇ ಮುಂತಾದ ಗುಣಗಳು ಸರ್ವಕಾಲದಲ್ಲಿಯೂ ಇರುತ್ತವೆ.

ಏವಂ ಧ್ಯಾತ್ವಾನುಪಶ್ಯನ್ತಃ ಸಂತ್ಯಜೇಯುಃ ಶುಭಾಶುಭಮ್ ।
ಪರಾಂ ಗತಿಮಭೀಪ್ಸನ್ತೋ ಯತಯಃ ಸಂಯಮೇ ರತಾಃ ॥೫೬॥

ಸಂಯಮನಶೀಲರಾದ ಯತಿಗಳು ಪರಮಗತಿಯನ್ನು ಹೊಂದಬೇಕೆಂಬ ಇಚ್ಛೆಯಿಂದ ಹೀಗೆ ಚಿಂತಿಸುತ್ತಾ, ಕರ್ಮಮಾರ್ಗದಲ್ಲಿರುವ ಎಡರು-ತೊಡರುಗಳನ್ನು ಪ್ರತ್ಯಕ್ಷವಾಗಿಯೇ ಕಾಣುತ್ತಾ, ಪುಣ್ಯಕರ್ಮಗಳನ್ನೂ ಮತ್ತು ಪಾಪಕರ್ಮಗಳನ್ನೂ ಪರಿತ್ಯಾಗಮಾಡುತ್ತಾರೆ.”

ಸ್ಯೂಮರಶ್ಮಿಯು ಹೇಳುತ್ತಾನೆ :

“ಬ್ರಾಹ್ಮಣೋತ್ತಮನೇ! ಯಜ್ಞಾನುಷ್ಠಾನದ ವಿಷಯವಾಗಿ ಈ ಎಲ್ಲವನ್ನೂ ನಾನು ಶಾಸ್ತ್ರದಲ್ಲಿ ಪ್ರತಿಪಾದಿತವಾಗಿರುವುದನ್ನೇ ಹೇಳಿದ್ದೇನೆ. ಶಾಸ್ತ್ರದ ಅರ್ಥವನ್ನೂ ಚೆನ್ನಾಗಿ ತಿಳಿದುಕೊಳ್ಳದೇ ಯಾವುದೇ ಕಾರ್ಯಗಳೂ ಪ್ರಾರಂಭವಾಗುವುದಿಲ್ಲ.

ಯಃ ಕಶ್ಚಿನ್ನ್ಯಾಯ್ಯ ಆಚಾರಃ ಸರ್ವಂ ಶಾಸ್ತ್ರಮಿತಿ ಶ್ರುತಿಃ ।
ಯದನ್ಯಾಯ್ಯಮಶಾಸ್ತ್ರಂ ತದಿತ್ಯೇಷಾ ಶ್ರೂಯತೇ ಶ್ರುತಿಃ ॥೫೮॥

ನ್ಯಾಯಾನುಗುಣವಾದ ಆಚಾರವು ಯಾವುದಿರುವುದೋ–ಆ ಆಚಾರವೆಲ್ಲವೂ ಶಾಸ್ತ್ರವೇ ಎಂದು ವೇದವೇ ಹೇಳಿದೆ. ನ್ಯಾಯೋಚಿತವಲ್ಲದ (ಅನ್ಯಾಯದ) ಆಚಾರವು ಯಾವುದಿರುವುದೋ–ಅದು ಅಶಾಸ್ತ್ರೀಯವೆಂದೂ ಶ್ರುತಿಯೇ ಹೇಳಿದೆ. (ಸದಾಚಾರವೇ ಶಾಸ್ತ್ರ. ದುರಾಚಾರವೇ ಅಶಾಸ್ತ್ರ ಅಥವಾ ಶಾಸ್ತ್ರಕ್ಕೆ ವಿರುದ್ಧವಾದುದು.)

ನ ಪ್ರವೃತ್ತಿರ್ಋತೇ ಶಾಸ್ತ್ರಾತ್ಕಾಚಿದಸ್ತೀತಿ ನಿಶ್ಚಯಃ ।
ಯದನ್ಯದ್ವೇದವಾದೇಭ್ಯಸ್ತದಶಾಸ್ತ್ರಮಿತಿ ಶ್ರುತಿಃ ॥೫೯॥

ಶಾಸ್ತ್ರವನ್ನು ಬಿಟ್ಟು ಯಾವುದೇ ವಿಧವಾದ ಪ್ರವೃತ್ತಿಯೂ ಇಲ್ಲವೆಂದು ನಿಶ್ಚಯವಾಗಿಹೋಗಿದೆ. (ಪ್ರವೃತ್ತಿಮಾರ್ಗವು ಶಾಸ್ತ್ರವನ್ನೇ ಸಂಪೂರ್ಣವಾಗಿ ಅವಲಂಬಿಸಿದೆ.) ವೇದವಚನಕ್ಕೆ ಯಾವುದು ಬೇರೆಯಾಗಿರುವುದೋ–ಅದು ಅಶಾಸ್ತ್ರವೆಂದೂ (ಶಾಸ್ತ್ರಕ್ಕೆ ವಿರುದ್ಧವಾದ ಕಾರ್ಯವೆಂದೂ) ಶ್ರುತಿಯೇ ಹೇಳಿದೆ.

ಶಾಸ್ತ್ರಾದಪೇತಂ ಪಶ್ಯನ್ತಿ ಬಹವೋ ವ್ಯಕ್ತಮಾನಿನಃ ।
ಶಾಸ್ತ್ರದೋಷಾನ್ನ ಪಶ್ಯನ್ತಿ ಶೋಚನ್ತಿ ಚ ಯಥಾ ವಯಮ್ ।
ಇನ್ದ್ರಿಯಾರ್ಥಾಶ್ಚ ಭವತಾಂ ಸಮಾನಾಃ ಸರ್ವಜನ್ತುಷು ॥೬೦॥

ವ್ಯಕ್ತಫಲವನ್ನೇ ಬಹುಮಾನಿಸುವ ಅನೇಕರು ಅವ್ಯಕ್ತಫಲವನ್ನು ನೀಡುವ ಯಜ್ಞಾದಿಗಳನ್ನು ಶಾಸ್ತ್ರಕ್ಕಿಂತಲೂ ಹೊರತಾದುದನ್ನಾಗಿ ಕಾಣುತ್ತಾರೆ. ವ್ಯಕ್ತಫಲಪ್ರಾಪ್ತಿಗೆ (ಆತ್ಮಸಾಕ್ಷಾತ್ಕಾರಕ್ಕೆ) ಶಾಸ್ತ್ರಗಳಲ್ಲಿ ಹೇಳಿರುವ ದೋಷಗಳನ್ನು ಅವರು ಗಮನಿಸುವುದಿಲ್ಲ. (ಸುಖ-ದುಃಖಾದಿ ದ್ವಂದ್ವಗಳಿರುವುದು ಅಧ್ಯಾತ್ಮಸಾಧಕನಿಗೆ ದೋಷಗಳಾಗಿ ಪರಿಣಮಿಸುವುವೆಂದು ಶಾಸ್ತ್ರವು ಹೇಳುತ್ತದೆ.) ಆದರೆ ಅಧ್ಯಾತ್ಮಸಾಧಕರೂ ನಾವು ಶೋಕಿಸುವಂತೆಯೇ ಶೋಕಿಸುತ್ತಾರೆ. ನಿಮ್ಮ (ಅಧ್ಯಾತ್ಮವಿದ್ಯಾಪ್ರತಿಪಾದಕರ) ಇಂದ್ರಿಯಾರ್ಥಗಳೂ (ಶಬ್ದ-ಸ್ಪರ್ಶಾದಿಗಳೂ) ಸರ್ವಪ್ರಾಣಿಗಳ ವಿಷಯಸುಖಗಳಿಗೆ ಸಮಾನವಾಗಿಯೇ ಇರುತ್ತವೆ.

ಏವಂ ಚತುರ್ಣಾಂ ವರ್ಣಾನಾಮಾಶ್ರಮಾಣಾಂ ಪ್ರವೃತ್ತಿಷು ।
ಏಕಮಾಲಮ್ಬಮಾನಾನಾಂ ನಿರ್ಣಯೇ ಸರ್ವತೋದಿಶಮ್ ॥೬೧॥

ಆನನ್ತ್ಯಂ ವದಮಾನೇನ ಶಕ್ತೇನಾವರ್ಜಿತಾತ್ಮನಾ ।
ಅವಿಜ್ಞಾನಹತಪ್ರಜ್ಞಾ ಹೀನಪ್ರಜ್ಞಾಸ್ತಮೋವೃತಾಃ ॥೬೨॥

ಕರ್ಮವೊಂದನ್ನೇ ಆಶ್ರಯಿಸಿರುವ ನಾಲ್ಕು ವರ್ಣದವರ ಮತ್ತು ನಾಲ್ಕು ಆಶ್ರಮಿಗಳ ಪ್ರವೃತ್ತಿಗಳಲ್ಲಿರುವ ಲೋಪ-ದೋಷಗಳನ್ನು ಎಲ್ಲ ದೃಷ್ಟಿಗಳಿಂದಲೂ ನಿರ್ಣಯಿಸಿ ಹೇಳುವಾಗ ಪರಮಾತ್ಮನ ಆನಂತ್ಯವನ್ನು ಹೇಳುವ (ಎಲ್ಲವೂ ಬ್ರಹ್ಮಮಯವೆಂದೇ ಹೇಳುವ) ಊಹಾಪೋಹಕುಶಲನಾದ, ತ್ಯಾಗಶೀಲನಾದ ನೀನು–ವೇದೋಕ್ತವಾದ ಯಜ್ಞ-ಯಾಗಾದಿಗಳಲ್ಲಿ ತತ್ಪರರಾಗಿರತಕ್ಕವರನ್ನು ಅಜ್ಞಾನದಿಂದ ನಷ್ಟವಾದ ಬುದ್ಧಿಯುಳ್ಳವರೆಂದೂ, ಹೀನಪ್ರಜ್ಞೆಯುಳ್ಳವರೆಂದೂ, ತಮಸ್ಸಿನಿಂದಲೇ ಆವೃತರಾಗಿರುವವರೆಂದೂ ಹೇಳಿದೆ.

ಶಕ್ಯಂ ತ್ವೇಕೇನ ಯುಕ್ತೇನ ಕೃತಕೃತ್ಯೇನ ಸರ್ವಶಃ ।
ಪಿಣ್ಡಮಾತ್ರಂ ವ್ಯಪಾಶ್ರಿತ್ಯ ಚರಿತುಂ ವಿಜಿತಾತ್ಮನಾ ॥೬೩॥

ವೇದವಾದಂ ವ್ಯಪಾಶ್ರಿತ್ಯ ಮೋಕ್ಷೋಽಸ್ತೀತಿ ಪ್ರಭಾಷಿತುಮ್ ।
ಅಪೇತನ್ಯಾಯಶಾಸ್ತ್ರೇಣ ಸರ್ವಲೋಕವಿಗರ್ಹಿಣಾ ॥೬೪॥

ಏಕಾಕಿಯಾಗಿರುವ, ಯೋಗಯುಕ್ತನಾದ, ಕೃತಕೃತ್ಯನಾದ (ಮಾಡಬೇಕಾದ ಕರ್ತವ್ಯಗಳೆಲ್ಲವನ್ನೂ ಮುಗಿಸಿರುವ), ಜಿತೇಂದ್ರಿಯನಾದ, ಪ್ರಾಣಧಾರಣೆಗೆ ಬೇಕಾಗುವಷ್ಟು ಮಾತ್ರವೇ ಅನ್ನದ ತುತ್ತನ್ನು ಅವಲಂಬಿಸಿಕೊಂಡು ಕರ್ಮಮೀಮಾಂಸಾಶಾಸ್ತ್ರವನ್ನು ಬಿಟ್ಟು ಸರ್ವಲೋಕಗಳನ್ನೂ ನಿಂದಿಸುವ ನಿನಗೆ ಪ್ರಪಂಚದಲ್ಲಿ ಸರ್ವತ್ರ ಸಂಚರಿಸಲು ಶಕ್ಯವಿದೆ. ವೇದದ ವಾಕ್ಯಗಳನ್ನೇ ಅವಲಂಬಿಸಿ–'ಮೋಕ್ಷವೆಂಬುದು ಇದೆ'–ಎಂದು ಪ್ರತಿಪಾದಿಸಲು ಶಕ್ಯವಿದೆ.

ಇದಂ ತು ದುಷ್ಕರಂ ಕರ್ಮ ಕುಟುಮ್ಬಮಭಿಸಂಶ್ರಿತಮ್ ।
ದಾನಮಧ್ಯಯನಂ ಯಜ್ಞಃ ಪ್ರಜಾಸಂತಾನಮಾರ್ಜವಮ್ ॥೬೫॥

ಗೃಹಸ್ಥಾಶ್ರಮಕ್ಕೆ ಅನುಸಾರವಾಗಿ ಕುಟುಂಬದ ಭರಣ-ಪೋಷಣಾದಿ ಕಾರ್ಯಗಳು, ದಾನ, ಸ್ವಾಧ್ಯಾಯ, ಯಜ್ಞ, ಸಂತಾನೋತ್ಪಾದನೆ, ಸರಳತೆಯಿಂದ ಇತರರೊಡನೆ ವ್ಯವಹರಿಸುವುದು–ಇವುಗಳೆಲ್ಲವೂ ಮನುಷ್ಯನಿಗೆ ಆಚರಿಸಲು ಅತ್ಯಂತದುಷ್ಕರವೇ ಸರಿ.

ಯದ್ಯೇತದೇವಂ ಕೃತ್ವಾಪಿ ನ ವಿಮೋಕ್ಷೋಽಸ್ತಿ ಕಸ್ಯಚಿತ್ ।
ಧಿಕ್ಕರ್ತಾರಂ ಚ ಕಾರ್ಯಂ ಚ ಶ್ರಮಶ್ಚಾಯಂ ನಿರರ್ಥಕಃ ॥೬೬॥

ಇಷ್ಟು ಕಷ್ಟಪಟ್ಟು ವೇದವಿಹಿತವಾದ ಕರ್ಮಗಳನ್ನು ಮಾಡಿಯೂ ಒಬ್ಬನಿಗೆ ಮೋಕ್ಷವೇ ಇಲ್ಲವೆನ್ನುವುದಾದರೆ–ಕರ್ತೃವಿಗೂ ಧಿಕ್ಕಾರವಿರಲಿ! ವೇದವಿಹಿತವಾದ ಕರ್ಮಗಳಿಗೂ ಧಿಕ್ಕಾರವಿರಲಿ! ನಿನ್ನ ಅಭಿಪ್ರಾಯದಂತೆ ವೇದವಿಹಿತವಾದ ಕರ್ಮಗಳ ಸಲುವಾಗಿ ಮಾಡುವ ಶ್ರಮವೆಲ್ಲವೂ ನಿರರ್ಥಕವೇ ಸರಿ.

ನಾಸ್ತಿಕ್ಯಮನ್ಯಥಾ ಚ ಸ್ಯಾದ್ವೇದಾನಾಂ ಪೃಷ್ಠತಃ ಕ್ರಿಯಾ ।
ಏತಸ್ಯಾನನ್ತ್ಯಮಿಚ್ಛಾಮಿ ಭಗವಞ್ಛ್ರೋತುಮಞ್ಜಸಾ ॥೬೭॥

ವೇದಗಳನ್ನು ಅವಹೇಳನಮಾಡುವ ಈ ಕ್ರಿಯೆಯು ಜನರಲ್ಲಿ ನಾಸ್ತಿಕ್ಯವನ್ನೇ ಉಂಟುಮಾಡುವುದಾಗಿದೆ. ಆದುದರಿಂದ ವೇದಗಳ ಮೂಲಕ

ವಾಗಿಯೂ (ಕರ್ಮಕಾಂಡದ ಮೂಲಕವಾಗಿಯೂ) ಮೋಕ್ಷಪ್ರಾಪ್ತಿಯು ಹೇಗೆ ಸಾಧ್ಯವೆಂಬುದನ್ನು ನಿನ್ನಿಂದ ಶೀಘ್ರವಾಗಿ ಕೇಳಿ ತಿಳಿಯಬೇಕೆಂದಿರುತ್ತೇನೆ.

ತತ್ತ್ವಂ ವದಸ್ವ ಮೇ ಬ್ರಹ್ಮನ್ನುಪಸನ್ನೋಽಸ್ಮ್ಯಧೀಹಿ ಭೋಃ ।
ಯಥಾ ತೇ ವಿದಿತೋ ಮೋಕ್ಷಸ್ತಥೇಚ್ಛಾಮ್ಯುಪಶಿಕ್ಷಿತುಮ್ ॥೬೮॥

ಬ್ರಾಹ್ಮಣೋತ್ತಮ! ನನಗೆ ತತ್ತ್ವವನ್ನು ಹೇಳು. ನಿನಗೆ ನಾನು ಶಿಷ್ಯನಾಗಿದ್ದೇನೆ. ನನಗೆ ಉಪದೇಶಿಸು. ಮೋಕ್ಷವೆಂಬುದು ನಿನಗೆ ಹೇಗೆ ತಿಳಿದಿರುವುದೋ ಹಾಗೆಯೇ ನಾನೂ ಆ ಮೋಕ್ಷದ ವಿಷಯವನ್ನು ನಿನ್ನಿಂದ ತಿಳಿದುಕೊಳ್ಳಲು ಇಚ್ಛಿಸಿದ್ದೇನೆ.”

ಎ೬೯ನೆಯ ಅಧ್ಯಾಯವು ಮುಗಿಯಿತು.

೨೭೦ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಸ್ಯೂಮರಶ್ಮಿ–ಕಪಿಲರ ಸಂವಾದ : ವರ್ಣಾಶ್ರಮಧರ್ಮಾಚರಣೆಗಳ ಮೂಲಕವಾಗಿಯೇ ಮೋಕ್ಷಪ್ರಾಪ್ತಿಯಾಗುವ ವಿಧಾನಕಥನ

ಯುಧಿಷ್ಠಿರ! ಕಪಿಲನು ಹೇಳುತ್ತಾನೆ :

ವೇದಾಃ ಪ್ರಮಾಣಂ ಲೋಕಾನಾಂ ನ ವೇದಾಃ ಪೃಷ್ಠತಃ ಕೃತಾಃ ।
ದ್ವೇ ಬ್ರಹ್ಮಣೀ ವೇದಿತವ್ಯೇ ಶಬ್ದಬ್ರಹ್ಮ ಪರಂ ಚ ಯತ್ ॥೧॥

“ಸ್ಯೂಮರಶ್ಮಿಯೇ! ಎಲ್ಲ ಲೋಕಗಳಿಗೂ ವೇದಗಳೇ ಪ್ರಮಾಣ ಭೂತವಾಗಿವೆ. ವೇದಗಳನ್ನು ಯಾರೂ ಅವಹೇಳನಮಾಡಿಲ್ಲ. ಆದರೆ ಬ್ರಹ್ಮದ ಎರಡು ರೂಪಗಳನ್ನೂ ತಿಳಿದುಕೊಳ್ಳಬೇಕಾಗಿದೆ. ಅವುಗಳಲ್ಲಿ ಒಂದು ಶಬ್ದಬ್ರಹ್ಮಾತ್ಮಕವಾದ ವೇದಗಳು. ಮತ್ತೊಂದು ಪರಬ್ರಹ್ಮವಸ್ತು. (ಸಚ್ಚಿದಾನಂದರೂಪವಾದ ಪರಮಾತ್ಮನು.)

ಶಬ್ದಬ್ರಹ್ಮಣಿ ನಿಷ್ಣಾತಃ ಪರಂ ಬ್ರಹ್ಮಾಧಿಗಚ್ಛತಿ ।
ಶರೀರಮೇತತ್ಕುರುತೇ ಯದ್ವೇದೇ ಕುರುತೇ ತನುಮ್ ॥೨॥

ಕೃತಶುದ್ಧಶರೀರೋ ಹಿ ಪಾತ್ರಂ ಭವತಿ ಬ್ರಾಹ್ಮಣಃ ।
ಆನನ್ತ್ಯಮತ್ರ ಬುದ್ಧ್ವೇದಂ ಕರ್ಮಣಾಂ ತದ್ಬ್ರವೀಮಿ ತೇ ॥೩॥

ಯಾವನು ವೇದೋಕ್ತವಾದ ಕರ್ಮಗಳಲ್ಲಿ ನಿಷ್ಣಾತನಾಗಿರುವನೋ ಅವನು ಪರಬ್ರಹ್ಮವಸ್ತುವನ್ನು ಹೊಂದುತ್ತಾನೆ. ತಂದೆ-ತಾಯಿಗಳು ವೇದೋಕ್ತವಾದ ಗರ್ಭಾಧಾನದ ವಿಧಿಯಿಂದ ಬಾಲಕನ ಶರೀರಕ್ಕೆ ಜನ್ಮವನ್ನು ಕೊಡುತ್ತಾರೆ. ವೇದೋಕ್ತವಾದ ವಿಧಿಗಳಿಂದ ತಂದೆ-ತಾಯಿಗಳು ಬಾಲಕನನ್ನು ಗರ್ಭಾಧಾನವೇ ಮೊದಲ್ಗೊಂಡು ಎಲ್ಲ ಸಂಸ್ಕಾರಗಳಿಂದಲೂ ಸಂಸ್ಕರಿಸುತ್ತಾರೆ. ಹೀಗೆ ವೇದೋಕ್ತವಾದ ಗರ್ಭಾಧಾನ, ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಚೌಲೋಪನಯನಾದಿ ಸಂಸ್ಕಾರಗಳಿಂದ ಪರಿಶುದ್ಧವಾದ ಶರೀರವು ಬ್ರಹ್ಮಜ್ಞಾನಕ್ಕೆ ಸತ್ಪಾತ್ರವಾಗುತ್ತದೆ. ಕರ್ಮಗಳ ಆನಂತ್ಯಫಲವನ್ನು ಬುದ್ಧಿಯಿಂದ ವಿಮರ್ಶಿಸಿ ಅದನ್ನೇ ನಿನಗೆ ಹೇಳುತ್ತೇನೆ. (ಕರ್ಮಗಳಿಂದಲೂ ಮೋಕ್ಷಫಲವು ಹೇಗೆ ಸಿದ್ಧಿಸುವುದೆಂಬುದನ್ನು ಹೇಳುತ್ತೇನೆ.)

ಅನಾಗಮಮನೈತಿಹ್ಯಂ ಪ್ರತ್ಯಕ್ಷಂ ಲೋಕಸಾಕ್ಷಿಕಮ್ ।
ಧರ್ಮ ಇತ್ಯೇವ ಯೇ ಯಜ್ಞಾನ್ವಿತನ್ವನ್ತಿ ನಿರಾಶಿಷಃ ॥೪॥

'ಯಜ್ಞಮಾಡುವುದು ಕರ್ತವ್ಯ'–ಎಂಬುದಾಗಿ ಭಾವಿಸಿ, ಯಾವ ವಿಧವಾದ ಕಾಮನೆಗಳಿಗಾಗಿಯೂ ಸಂಕಲ್ಪಿಸದೇ ಯಾರು ಯಜ್ಞಗಳನ್ನು ಮಾಡುವರೋ–ಅವರಿಗೆ ಲಭಿಸುವ ಫಲವು ವೇದಗಳಲ್ಲಿ ಉಕ್ತವಾಗಿಲ್ಲ. ಇತಿಹಾಸಗಳಲ್ಲಿಯೂ ಉಕ್ತವಾಗಿಲ್ಲ. ನಿಷ್ಕಾಮನೆಯಿಂದ ಯಜ್ಞಮಾಡುವವರಿಗೆ ಲೋಕವೆಲ್ಲವೂ ಸಾಕ್ಷಿಯ ರೂಪದಲ್ಲಿ ಕಾಣುವ ಚಿತ್ತಶುದ್ಧಿಯೆಂಬ ಪ್ರತ್ಯಕ್ಷ ಫಲವೇ ಸಿಕ್ಕುತ್ತದೆ.

ಉತ್ಪನ್ನತ್ಯಾಗಿನೋಽಲುಬ್ಧಾಃ ಕೃಪಾಸೂಯಾವಿವರ್ಜಿತಾಃ ।
ಧನಾನಾಮೇಷ ವೈ ಪನ್ಥಾಸ್ತೀರ್ಥೇಷು ಪ್ರತಿಪಾದನಮ್ ॥೫॥

ಅನಾಶ್ರಿತಾಃ ಪಾಪಕರ್ಮ ಕದಾಚಿತ್ಕರ್ಮಯೋಗಿನಃ ।
ಮನಃಸಂಕಲ್ಪಸಂಸಿದ್ಧಾ ವಿಶುದ್ಧಜ್ಞಾನನಿಶ್ಚಯಾಃ ॥೬॥

ಯಾರು ಸ್ವಭಾವತಃ ತ್ಯಾಗಿಗಳಾಗಿರುವರೋ, ಲೋಭಿಗಳಲ್ಲವೋ, ಕೃಪಣತೆಯನ್ನೂ–ಅಸೂಯೆಯನ್ನೂ ವರ್ಜಿಸಿರುವರೋ, ಸತ್ಪಾತ್ರರಲ್ಲಿ ದಾನಮಾಡುವುದೇ ಧನದ ಸಾರ್ಥಕ್ಯಕ್ಕೆ ಇರುವ ಏಕೈಕಮಾರ್ಗ–ಎಂದು ಭಾವಿಸಿರುವರೋ, ಯಾವಾಗಲೂ ಪಾಪಕರ್ಮವನ್ನು ಆಶ್ರಯಿಸುವುದೇ ಇಲ್ಲವೋ–ಅಂತಹ ಕರ್ಮಯೋಗಿಗಳು ಮನಸ್ಸಿನ ಸಂಕಲ್ಪಗಳನ್ನು ಜಯಿಸುವುದರಲ್ಲಿ ಸಿದ್ಧರಾಗಿರುತ್ತಾರೆ ಮತ್ತು ವಿಶುದ್ಧವಾದ ಪರಬ್ರಹ್ಮಜ್ಞಾನದಲ್ಲಿ ದೃಢವಾದ ನಿಶ್ಚಯವುಳ್ಳವರಾಗಿರುತ್ತಾರೆ.

ಅಕ್ರುಧ್ಯನ್ತೋಽನಸೂಯನ್ತೋ ನಿರಹಙ್ಕಾರಮತ್ಸರಾಃ ।
ಜ್ಞಾನನಿಷ್ಠಾಸ್ತ್ರಿಶುಕ್ಲಾಶ್ಚ ಸರ್ವಭೂತಹಿತೇ ರತಾಃ ॥೭॥

ಕರ್ಮಯೋಗಿಗಳು ಯಾರ ಮೇಲೂ ಕೋಪಿಸಿಕೊಳ್ಳದೇ, ಯಾರ ವಿಷಯದಲ್ಲಿಯೂ ದೋಷವೆಣಿಸದೇ, ನಿರಹಂಕಾರಿಗಳಾಗಿ, ಮಾತ್ಸರ್ಯವಿಲ್ಲದವರಾಗಿ, ಪರಬ್ರಹ್ಮಜ್ಞಾನದಲ್ಲಿಯೇ ನಿಷ್ಠರಾಗಿ, ಜನ್ಮ, ಕರ್ಮ, ವಿದ್ಯೆ–ಈ ಮೂರರಲ್ಲಿಯೂ ಶುದ್ಧರಾಗಿ ಸರ್ವಪ್ರಾಣಿಗಳ ಹಿತದಲ್ಲಿಯೇ ನಿರತರಾಗಿರುತ್ತಾರೆ.

ಆಸನ್ಗೃಹಸ್ಥಾ ಭೂಯಿಷ್ಠಾ ಅವ್ಯುತ್ಕ್ರಾನ್ತಾಃ ಸ್ವಕರ್ಮಸು ।
ರಾಜಾನಶ್ಚ ತಥಾ ಯುಕ್ತಾ ಬ್ರಾಹ್ಮಣಾಶ್ಚ ಯಥಾವಿಧಿ ॥೮॥

ಹಿಂದಿನ ಕಾಲದಲ್ಲಿ ಗೃಹಸ್ಥರಾದ ಅನೇಕಬ್ರಾಹ್ಮಣರೂ ಮತ್ತು ರಾಜರೂ ಗೃಹಸ್ಥಾಶ್ರಮೋಕ್ತವಾದ ವೈದಿಕಕರ್ಮಗಳನ್ನು ಪರಿತ್ಯಜಿಸದೆ ಯಥಾವಿಧಿಯಾಗಿ ನಿಷ್ಕಾಮಭಾವನೆಯಿಂದ ಮಾಡುತ್ತಿದ್ದರು.

ಅಂತಹ ಕರ್ಮಯೋಗಿಗಳು ಯಾವಾಗಲೂ ಎಲ್ಲ ಪ್ರಾಣಿಗಳನ್ನೂ ಸಮಾನದೃಷ್ಟಿಯಿಂದ ಕಾಣುತ್ತಿದ್ದರು. ಸರಳತೆಯಿಂದ ಸಂಪನ್ನರಾಗಿದ್ದರು. ಸರ್ವದಾ ಸಂತುಷ್ಟರಾಗಿರುತ್ತಿದ್ದರು. ಜ್ಞಾನನಿಷ್ಠರಾಗಿರುತ್ತಿದ್ದರು. ಪ್ರತ್ಯಕ್ಷ ಫಲವನ್ನು (ಚಿತ್ತಶುದ್ಧಿಯನ್ನು) ಉಂಟುಮಾಡುವ ಧರ್ಮವನ್ನು ಅನುಷ್ಠಾನ ಮಾಡುತ್ತಿದ್ದರು. ಪರಿಶುದ್ಧರಾಗಿದ್ದರು. ಶಬ್ದಬ್ರಹ್ಮ ಮತ್ತು ಪರಬ್ರಹ್ಮಗಳೆರಡರಲ್ಲಿಯೂ ಅಪಾರವಾದ ಶ್ರದ್ಧೆಯುಳ್ಳವರಾಗಿದ್ದರು.

ಪುರಸ್ತಾದ್ಭಾವಿತಾತ್ಮಾನೋ ಯಥಾವಚ್ಚರಿತವ್ರತಾಃ ।
ಚರನ್ತಿ ಧರ್ಮಂ ಕೃಚ್ಛ್ರೇಽಪಿ ದುರ್ಗೇ ಚೈವಾಪಿ ಸಂಹತಾಃ ॥೧೦॥

ಸಂಹತ್ಯ ಧರ್ಮಂ ಚರತಾಂ ಪುರಾಸೀತ್ಸುಖಮೇವ ತತ್ ।
ತೇಷಾಂ ನಾಸೀದ್ವಿಧಾತವ್ಯಂ ಪ್ರಾಯಶ್ಚಿತ್ತಂ ಕಥಂಚನ ॥೧೧॥

ಅವರು ಅವಶ್ಯವಾದ ನಿಯಮಗಳನ್ನು ಯಥಾವತ್ತಾಗಿ ಮೊದಲು ಮಾಡಿ ತಮ್ಮ ಮನಸ್ಸನ್ನು ಶುದ್ಧಗೊಳಿಸುತ್ತಾರೆ. ಕಷ್ಟಸಮಯದಲ್ಲಿಯೂ ಧರ್ಮಾಚರಣೆಯನ್ನು ಮಾಡುತ್ತಾರೆ. ದುರ್ಗಮವಾದ ಸ್ಥಳದಲ್ಲಿಯೂ (ಧರ್ಮಾಚರಣೆಗೆ ಕಷ್ಟವಾದ ಸ್ಥಳದಲ್ಲಿಯೂ) ಪರಸ್ಪರವಾಗಿ ಸೇರಿಕೊಂಡು ಧರ್ಮಾಚರಣೆಯನ್ನು ಮಾಡುತ್ತಾರೆ. ಪರಸ್ಪರಸಹಕಾರದಿಂದ ಧರ್ಮಾ ಚರಣೆಗಳನ್ನು ಮಾಡುತ್ತಿದ್ದ ಹಿಂದಿನ ಆ ಕರ್ಮಯೋಗಿಗಳಿಗೆ ಹಾಗೆ ಮಾಡುವುದೇ ಸುಖಕರವಾಗಿದ್ದಿತು. ಹಾಗೆ ಪರಸ್ಪರವಾಗಿ ಕಲೆತು ಧರ್ಮಾ ಚರಣೆಯನ್ನು ಮಾಡುತ್ತಿದ್ದುದರಿಂದ ಕರ್ಮದಲ್ಲಿ ಲೋಪವೂ ಉಂಟಾಗು ತ್ತಿರಲಿಲ್ಲ. ಆದುದರಿಂದ ಅವರು ಮಂತ್ರಲೋಪ-ಕ್ರಿಯಾಲೋಪಗಳಿಗಾಗಿ ಪ್ರಾಯಶ್ಚಿತ್ತವನ್ನು ಯಾವಾಗಲೂ ಮಾಡಿಕೊಳ್ಳಬೇಕಾದ ಅವಶ್ಯಕತೆಯೇ ಉಂಟಾಗುತ್ತಿರಲಿಲ್ಲ.

ಸತ್ಯಂ ಹಿ ಧರ್ಮಮಾಸ್ಥಾಯ ದುರಾಧರ್ಷತಮಾ ಮತಾಃ ।
ನ ಮಾತ್ರಾಮನುರುಧ್ಯನ್ತೇ ನ ಧರ್ಮಚ್ಛಲಮನ್ತತಃ ॥೧೨॥

ಆ ಕರ್ಮಯೋಗಿಗಳು ಸತ್ಯ-ಧರ್ಮವನ್ನು ಆಶ್ರಯಿಸಿ ತಮ್ಮನ್ನು ಎದುರಿಸಲು ಅಸಾಧ್ಯವೆಂಬ ಅಭಿಪ್ರಾಯವನ್ನು ಜನರಲ್ಲಿ ಉಂಟುಮಾಡಿ ದ್ದರು. ಲೇಶಮಾತ್ರವೂ ಪ್ರಾಪಂಚಿಕಸುಖವನ್ನು ಅನುಸರಿಸಿ ಹೋಗುತ್ತಿರ ಲಿಲ್ಲ. ಅವಸಾನದವರೆಗೂ ಎಂದಿಗೂ ಕಪಟವಾದ ಧರ್ಮಾಚರಣೆಯನ್ನು ಮಾಡುತ್ತಿರಲಿಲ್ಲ.

ಯ ಏವ ಪ್ರಥಮಃ ಕಲ್ಪಸ್ತಮೇವಾಭ್ಯಾಚರನ್ನ ಹ ।
ತೇಷಾಂ ನಾಸೀದ್ವಿಧಾತವ್ಯಂ ಪ್ರಾಯಶ್ಚಿತ್ತಂ ಕದಾಚನ ॥೧೩॥

ಯಾವುದು ಶ್ರೇಷ್ಠಧರ್ಮವೋ ನಿಯತವಾದ ಧರ್ಮವೋ–ಅದನ್ನೇ ಅವರು ಜೊತೆಗೂಡಿಕೊಂಡು ಆಚರಿಸುತ್ತಿದ್ದರು. (ಆಪದ್ಧರ್ಮವನ್ನಾಗಲೀ,

ಹಾರಿಕೆಯ ಮತ್ತು ತೋರಿಕೆಯ ಧರ್ಮವನ್ನಾಗಲೀ ಆಚರಿಸುತ್ತಿರಲಿಲ್ಲ.) ಆ ಕಾರಣದಿಂದಲೇ ಅವರಿಗೆ ಮಂತ್ರಲೋಪ-ಕ್ರಿಯಾಲೋಪಾದಿಗಳಿಗಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾದ ಆವಶ್ಯಕತೆಯೇ ಯಾವಾಗಲೂ ಒದಗಿಬರುತ್ತಿರಲಿಲ್ಲ.

ತಸ್ಮಿನ್ವಿಧೌ ಸ್ಥಿತಾನಾಂ ಹಿ ಪ್ರಾಯಶ್ಚಿತ್ತಂ ನ ವಿದ್ಯತೇ ।
ದುರ್ಬಲಾತ್ಮನ ಉತ್ಪನ್ನಂ ಪ್ರಾಯಶ್ಚಿತ್ತಮಿತಿ ಶ್ರುತಿಃ ॥೧೪॥

ಹೀಗೆ ಯಥೋಕ್ತವಾದ ವಿಧಿಯಲ್ಲಿ ಪರಸ್ಪರಸಹಕಾರದಿಂದ ಶ್ರದ್ಧಾವಂತರಾಗಿ ಶುದ್ಧಾತ್ಮರಾಗಿ ನಿಷ್ಕಾಮಕರ್ಮಗಳನ್ನು ಮಾಡುವವರಿಗೆ ಪ್ರಾಯಶ್ಚಿತ್ತವೆಂಬುದೇ ಇಲ್ಲ. ಪ್ರಾಯಶ್ಚಿತ್ತವೆಂಬುದು ದುರ್ಬಲವಾದ ಮನಸ್ಸುಳ್ಳವರಿಗೆ ಮತ್ತು ಶರೀರವುಳ್ಳವರಿಗೆ ಮಾತ್ರವೇ ಹುಟ್ಟಿಕೊಂಡಿರುವುದೆಂದು ಶ್ರುತಿಯು ಹೇಳುತ್ತದೆ.

ಏವಂ ಬಹುವಿಧಾ ವಿಪ್ರಾಃ ಪುರಾಣಾ ಯಜ್ಞವಾಹನಾಃ ।
ತ್ರೈವಿದ್ಯವೃದ್ಧಾಃ ಶುಚಯೋ ವೃತ್ತವನ್ತೋ ಯಶಸ್ವಿನಃ ॥೧೫॥

ಹಿಂದೆ ಹೀಗೆ ಅನೇಕಬ್ರಾಹ್ಮಣರು ನಿಷ್ಕಾಮನೆಯಿಂದ ಯಜ್ಞಗಳನ್ನು ಮಾಡುತ್ತಿದ್ದರು. ಅವರು ವೇದವಿದ್ಯೆಯಲ್ಲಿ ವೃದ್ಧರಾಗಿದ್ದರು. (ವಿಶೇಷವಾದ ಪಾಂಡಿತ್ಯವನ್ನು ಹೊಂದಿದ್ದರು.) ಅಂತಃಶುದ್ಧಿ-ಬಹಿಃಶುದ್ಧಿಯುಳ್ಳವರಾಗಿದ್ದರು. ಸದಾಚಾರಸಂಪನ್ನರಾಗಿಯೂ ಯಶೋವಂತರಾಗಿಯೂ ಇದ್ದರು.

ಯಜನ್ತೋಽಹರಹರ್ಯಜ್ಞೈರ್ನಿರಾಶೀರ್ಬನ್ಧನಾ ಬುಧಾಃ ।
ತೇಷಾಂ ಯಜ್ಞಾಶ್ಚ ವೇದಾಶ್ಚ ಕರ್ಮಾಣಿ ಚ ಯಥಾಗಮಮ್ ॥

ಕಾಮನೆಗಳ ಬಂಧನದಿಂದ ಮುಕ್ತರಾಗಿದ್ದ ಅಂತಹ ವಿದ್ವಾಂಸರು ಅನುದಿನವೂ ಯಜ್ಞಗಳ ಮೂಲಕವಾಗಿ ದೇವತೆಗಳನ್ನು ಆರಾಧಿಸುತ್ತಿದ್ದರು. ಅವರು ಮಾಡುತ್ತಿದ್ದ ಯಜ್ಞಗಳು, ವೇದಗಳ ಅಧ್ಯಯನ ಮತ್ತು ಇತರ ದೈನಂದಿನಕರ್ಮಗಳು – ಈ ಎಲ್ಲವೂ ಶಾಸ್ತ್ರವಿಧಿಗೆ ಅನುಸಾರವಾಗಿಯೇ ಇರುತ್ತಿದ್ದುವು.

ಆಗಮಾಶ್ಚ ಯಥಾಕಾಲೇ ಸಂಕಲ್ಪಾಶ್ಚ ಯಥಾಕ್ರಮಮ್ ।
ಅಪೇತಕಾಮಕ್ರೋಧಾನಾಂ ದುಶ್ಚರಾಚಾರಕರ್ಮಣಾಮ್ ॥೧೭॥

ಕಾಮ-ಕ್ರೋಧಗಳನ್ನು ಕಳೆದುಕೊಂಡು ಬೇರೆಯವರಿಂದ ಮಾಡಲು ಸಾಧ್ಯವಾಗದ ಸದಾಚಾರಗಳನ್ನೂ ಸತ್ಕರ್ಮಗಳನ್ನೂ ಮಾಡುತ್ತಿದ್ದ ಆ ಕರ್ಮಯೋಗಿಗಳಿಗೆ ಶಾಸ್ತ್ರಗಳೂ ಕಾಲಾನುಗುಣವಾಗಿ ಸ್ಫುರಿಸುತ್ತಿದ್ದುವು. ಸತ್ಸಂಕಲ್ಪಗಳೂ ಕಾಲಾನುಕ್ರಮವಾಗಿ ಉಂಟಾಗುತ್ತಿದ್ದುವು.

ಸ್ವಕರ್ಮಭಿಃ ಶಂಸಿತಾನಾಂ ಪ್ರಕೃತ್ಯಾ ಶಂಸಿತಾತ್ಮನಾಮ್ ।
ಋಜೂನಾಂ ಶಮನಿತ್ಯಾನಾಂ ಸ್ವೇಷು ಕರ್ಮಸು ವರ್ತತಾಮ್ ॥೧೮॥

ಸರ್ವಮಾನನ್ತ್ಯಮೇವಾಸೀದಿತಿ ನಃ ಶಾಶ್ವತೀ ಶ್ರುತಿಃ ।
ತೇಷಾಮದೀನಸತ್ತ್ವಾನಾಂ ದುಶ್ಚರಾಚಾರಕರ್ಮಣಾಮ್ ॥೧೯॥

ತಾವು ಮಾಡುತ್ತಿದ್ದ ಸ್ವಧರ್ಮೋಕ್ತವಾದ ಕರ್ಮಗಳಿಂದ ಎಲ್ಲರ ಪ್ರಶಂಸೆಗೂ ಪಾತ್ರರಾಗಿದ್ದ, ಸ್ವಭಾವತಃ ಪರಿಶುದ್ಧಾತ್ಮರಾಗಿದ್ದ, ಸರಳ ಸ್ವಭಾವದವರಾಗಿದ್ದ, ಶಾಂತಿಪರಾಯಣರಾಗಿದ್ದ, ಸ್ವಧರ್ಮನಿಷ್ಠರಾಗಿದ್ದ, ಉದಾರಚಿತ್ತರಾಗಿದ್ದ, ಇತರರಿಂದ ಮಾಡಲು ಅಸಾಧ್ಯವಾದ ಸದಾಚಾರ-ಸತ್ಕರ್ಮಗಳನ್ನು ಮಾಡುತ್ತಿದ್ದ ಕರ್ಮಯೋಗಿಗಳ ಎಲ್ಲ ಕ್ರಿಯೆಗಳೂ ಅನಂತಫಲದಾಯಕಗಳೇ ಆಗಿದ್ದುವು. (ಅಕ್ಷಯವಾದ ಮೋಕ್ಷರೂಪ ಫಲವನ್ನೇ ಕೊಡುವುದಾಗಿದ್ದುವು.) ಈ ಮಾತನ್ನು ನಾವು ಸರ್ವಕಾಲದಲ್ಲಿಯೂ ಕೇಳುತ್ತಿದ್ದೆವು.

ಸ್ವಕರ್ಮಭಿಃ ಸಮ್ಭೃತಾನಾಂ ತಪೋ ಘೋರತ್ವಮಾಗತಮ್ ।

ತಾವು ಮಾಡುತ್ತಿದ್ದ ನಿಷ್ಕಾಮಕರ್ಮಗಳಿಂದಲೇ ಪರಿಪುಷ್ಟರಾಗಿದ್ದ ಆ ಕರ್ಮಯೋಗಿಗಳ ತಪಸ್ಸು ತೀಕ್ಷ್ಣತೆಯನ್ನು ಪಡೆಯಿತು.

ತಂ ಸದಾಚಾರಮಾಶ್ಚರ್ಯಂ ಪುರಾಣಂ ಶಾಶ್ವತಂ ಧ್ರುವಮ್ ।
ಅಶಕ್ನುವದ್ಭಿಶ್ಚರಿತುಂ ಕಿಂಚಿದ್ಧರ್ಮೇಷು ಸೂಕ್ಷ್ಮತಾಮ್ ॥೨೦॥

ಆಶ್ಚರ್ಯಕರವಾದ, ಸನಾತನವಾದ ಮತ್ತು ಶಾಶ್ವತವಾದ ಅಂತಹ ಸದಾಚಾರವನ್ನು ಪರಿಪಾಲಿಸಲು ಅಶಕ್ತರಾದವರಿಂದ ಧರ್ಮಗಳಲ್ಲಿ ಸ್ವಲ್ಪ ಸೂಕ್ಷ್ಮತೆಯುಂಟಾಯಿತು.

ನಿರಾಪದ್ಧರ್ಮ ಆಚಾರೋ ಹ್ಯಪ್ರಮಾದೋಽಪರಾಭವಃ ।
ಸರ್ವವರ್ಣೇಷು ಜಾತೇಷು ನಾಸೀತ್ಕಶ್ಚಿದ್ವ್ಯತಿಕ್ರಮಃ ॥೨೧॥

ಸರ್ವವರ್ಣಗಳೂ ಹುಟ್ಟಿದನಂತರ ವೇದೋಕ್ತವಾದ ಆಚಾರಗಳು ಆಪದ್ಧರ್ಮದಿಂದ ರಹಿತವಾಗಿದ್ದುವು. ಕರ್ಮಗಳಲ್ಲಿ ಪ್ರಮಾದಗಳಾಗಲೀ, ಪರಾಭವಗಳಾಗಲೀ (ಆಲಸ್ಯವಾಗಲೀ) ಇರಲಿಲ್ಲ. ಧರ್ಮಕಾರ್ಯಗಳಲ್ಲಿ ಯಾವ ವಿಧವಾದ ವ್ಯತಿಕ್ರಮವೂ ಇರಲಿಲ್ಲ.

ವ್ಯಸ್ತಮೇಕಂ ಚತುರ್ಧಾ ಹಿ ಬ್ರಾಹ್ಮಣಾ ಆಶ್ರಮಂ ವಿದುಃ ।
ತಂ ಸನ್ತೋ ವಿಧಿವತ್ಪ್ರಾಪ್ಯ ಗಚ್ಛನ್ತಿ ಪರಮಾಂ ಗತಿಮ್ ॥೨೨॥

ಗೃಹೇಭ್ಯ ಏವ ನಿಷ್ಕ್ರಮ್ಯ ವನಮನ್ಯೇ ಸಮಾಶ್ರಿತಾಃ ।
ಗೃಹಮೇವಾಭಿಸಂಶ್ರಿತ್ಯ ತತೋಽನ್ಯೇ ಬ್ರಹ್ಮಚಾರಿಣಃ ॥೨೩॥
ತ ಏತೇ ದಿವಿ ದೃಶ್ಯನ್ತೇ ಜ್ಯೋತಿರ್ಭೂತಾ ದ್ವಿಜಾತಯಃ ।
ನಕ್ಷತ್ರಾಣೀವ ಧಿಷ್ಣ್ಯೇಷು ಬಹವಸ್ತಾರಕಾಗಣಾಃ ॥೨೪॥

ಆನನ್ತ್ಯಮುಪಸಮ್ಪ್ರಾಪ್ತಾಃ ಸನ್ತೋಷಾದಿತಿ ವೈದಿಕಮ್ ॥೨೫॥

ಮೊದಲು ಒಂದೇ ಆಶ್ರಮವು ವ್ಯಕ್ತವಾಗಿದ್ದು ಅನಂತರ ಅದು ನಾಲ್ಕು ಪ್ರಕಾರವಾಗಿ ವಿಂಗಡಿಸಲ್ಪಟ್ಟಿತೆಂಬುದನ್ನು ಬ್ರಾಹ್ಮಣರೆಲ್ಲರೂ ತಿಳಿದು ಕೊಂಡಿರುತ್ತಾರೆ. ಶ್ರೇಷ್ಠಪುರುಷರು ಈ ನಾಲ್ಕು ಆಶ್ರಮಗಳನ್ನೂ ಅನುಕ್ರಮ ವಾಗಿ ಪ್ರವೇಶಿಸಿ ಆಯಾ ಆಶ್ರಮಗಳ ಧರ್ಮಗಳನ್ನು ಯಥೋಕ್ತವಾಗಿ ಪರಿಪಾಲಿಸುತ್ತಾ ಪರಮಗತಿಯನ್ನು ಹೊಂದುತ್ತಾರೆ. ಕೆಲವರು ಮನೆಯನ್ನು ಬಿಟ್ಟು ಹೊರಟು ಸಂನ್ಯಾಸಿಗಳಾಗಿ, ಕೆಲವರು ವಾನಪ್ರಸ್ಥರಾಗಿ, ಇನ್ನೂ ಕೆಲವರು ಗೃಹಸ್ಥಾಶ್ರಮದಲ್ಲಿಯೇ ಇದ್ದುಕೊಂಡು, ಬೇರೆ ಕೆಲವರು ಬ್ರಹ್ಮಚಾರಿಗಳಾಗಿಯೇ ಇದ್ದುಕೊಂಡು ಅವರವರ ಆಶ್ರಮಧರ್ಮಗಳನ್ನು ಪರಿಪಾಲಿಸುತ್ತಾ ಪರಮಪದವನ್ನು ಹೊಂದುತ್ತಾರೆ. ಬಹುಸಂಖ್ಯಾತವಾದ ತಾರಾಗಣಗಳು ಅವುಗಳ ಸ್ಥಾನಗಳಲ್ಲಿ ಅಶ್ವಿನ್ಯಾದಿ ನಕ್ಷತ್ರಗಳಾಗಿ ಕಾಣಿಸಿ ಕೊಳ್ಳುವಂತೆ – ಸಂತೋಷದಿಂದ ಪರಮಪದವನ್ನು ಹೊಂದಿದ ದ್ವಿಜರು ಜ್ಯೋತಿಸ್ಸ್ವರೂಪರಾಗಿ ಆಕಾಶದಲ್ಲಿ ಪ್ರಕಾಶಿಸುತ್ತಾರೆ–ಎಂಬುದು ವೈದಿಕ ಸಿದ್ಧಾಂತವಾಗಿದೆ.

ಯದ್ಯಾಗಚ್ಛನ್ತಿ ಸಂಸಾರಂ ಪುನರ್ಯೋನಿಷು ತಾದೃಶಾಃ ।
ನ ಲಿಪ್ಯನ್ತೇ ಪಾಪಕೃತ್ಯೈಃ ಕದಾಚಿತ್ಕರ್ಮಯೋನಿತಃ ॥೨೬॥

ಒಂದು ವೇಳೆ ಹಾಗೆ ಜ್ಯೋತಿರ್ಭೂತರಾದವರು ಕರ್ಮಾಧಿಕಾರ ಯುಕ್ತವಾದ ಯೋನಿಗಳಲ್ಲಿ ಹುಟ್ಟಿ ಸಂಸಾರವನ್ನು (ಪ್ರಪಂಚವನ್ನು) ಪ್ರವೇಶಿಸಿದರೂ–ಕರ್ಮಯೋನಿಗಳಲ್ಲಿ ಹುಟ್ಟಿದುದರ ಪರಿಣಾಮವಾಗಿ ತತ್ಸಂಬಂಧವಾದ ಪಾಪಕೃತ್ಯಗಳಿಂದ ಯಾವುದೇ ಕಾರಣದಿಂದಲೂ ಲಿಪ್ತ ರಾಗುವುದಿಲ್ಲ.

(ಜ್ಯೋತಿಃಸ್ವರೂಪರಾದವರು ಪುನಃ ಪ್ರಪಂಚದಲ್ಲಿ ಹುಟ್ಟಿದರೂ ಅವರಿಗೆ ಪಾಪಗಳ ಸೋಂಕಿರುವುದಿಲ್ಲ. ಪರಮಾತ್ಮನ ಇಚ್ಛೆಯಂತೆ ಲೋಕ ಕಲ್ಯಾಣಕ್ಕಾಗಿ ಅಂತಹವರು ಭೂಮಿಯಲ್ಲಿ ಅವತರಿಸುತ್ತಿರುತ್ತಾರೆ.)

ಏವಮೇವ ಬ್ರಹ್ಮಚಾರೀ ಶುಶ್ರೂಷುರ್ಘೋರನಿಶ್ಚಯಃ ।
ಏವಂ ಯುಕ್ತೋ ಬ್ರಾಹ್ಮಣಃ ಸ್ಯಾದನ್ಯೋ ಬ್ರಾಹ್ಮಣಕೋ ಭವೇತ್ ॥೨೭॥

ಹೀಗೆಯೇ ಗುರುಶುಶ್ರೂಷಾತತ್ಪರನಾದ, ಬ್ರಹ್ಮಚರ್ಯವ್ರತಪಾಲನೆ ಯಲ್ಲಿ ದೃಢವಾದ ನಿಶ್ಚಯವುಳ್ಳ, ಯೋಗಯುಕ್ತನಾದ ಬ್ರಹ್ಮಚಾರಿಯು ಉತ್ತಮಬ್ರಾಹ್ಮಣನಾಗುತ್ತಾನೆ. ಹಾಗಿಲ್ಲದವನು ಹೆಸರಿಗೆ ಮಾತ್ರವೇ ಬ್ರಾಹ್ಮಣನಾಗುತ್ತಾನೆ.

ಕರ್ಮೈವಂ ಪುರುಷಸ್ಯಾಹ ಶುಭಂ ವಾ ಯದಿ ವಾಶುಭಮ್ ।
ಏವಂ ಪಕ್ವಕಷಾಯಾಣಾಮಾನನ್ತ್ಯೇನ ಶ್ರುತೇನ ಚ ॥೨೮॥

ಸರ್ವಮಾನನ್ತ್ಯಮಾಸೀದ್ವೈ ಏವಂ ನಃ ಶಾಶ್ವತೀ ಶ್ರುತಿಃ ।
ತೇಷಾಮಪೇತತೃಷ್ಣಾನಾಂ ನಿರ್ಣಿಕ್ತಾನಾಂ ಶುಭಾತ್ಮನಾಮ್ ॥೨೯॥

ಶುಭವಾಗಲೀ ಅಶುಭವಾಗಲೀ–ಅದು ಮನುಷ್ಯನಿಗೆ ಕರ್ಮದಿಂದಲೇ ಸಿದ್ಧವಾಗುತ್ತದೆ. ಯಾರ ರಾಗ-ದ್ವೇಷಾದಿ ಕಷಾಯಗಳು ಪಕ್ವವಾಗಿರು ವುವೋ (ವಿನಾಶದ ಅಂಚನ್ನು ಮುಟ್ಟಿರುವುವೋ), ಯಾರು ಕಳೆದು ಹೋದ ಆಸೆಯುಳ್ಳವರಾಗಿರುವರೋ, ಹೋಗಲಾಡಿಸಲ್ಪಟ್ಟ ಪಾಪವುಳ್ಳವ

ರಾಗಿ ಶುಭಾತ್ಮರಾಗಿರುವರೋ–ಅಂತಹ ತತ್ತ್ವಜ್ಞಾನಿಗಳಾದ ಪುರುಷರಿಗೆ ಅನಂತವಾದ ಬ್ರಹ್ಮಜ್ಞಾನ ಮತ್ತು ಶಾಸ್ತ್ರಜ್ಞಾನಗಳ ಪ್ರಭಾವದಿಂದ ಎಲ್ಲವೂ ಬ್ರಹ್ಮಸ್ವರೂಪವೇ ಆಗಿಬಿಡುತ್ತದೆ–ಇಂತಹ ಮಾತನ್ನು ನಾವು ಸರ್ವಕಾಲ ಗಳಲ್ಲಿಯೂ ಕೇಳುತ್ತಲೇ ಇರುತ್ತೇವೆ.

ಚತುರ್ಥೋಪನಿಷದ್ಧರ್ಮಃ ಸಾಧಾರಣ ಇತಿ ಸ್ಮೃತಿಃ ।
ಸಂಸಿದ್ಧೈಃ ಸಾಧ್ಯತೇ ನಿತ್ಯಂ ಬ್ರಾಹ್ಮಣೈರ್ನಿಯತಾತ್ಮಭಿಃ ॥೩೦॥

ನಾಲ್ಕನೆಯ ಸಂನ್ಯಾಸಾಶ್ರಮಕ್ಕೆ ಸಂಬಂಧಿಸಿದಂತೆ ಇರುವ ಉಪನಿಷ ದ್ಧರ್ಮವು (ಶಮ-ದಮ-ವೈರಾಗ್ಯ-ಸೈರಣೆ ಇತ್ಯಾದಿಗಳು) ನಾಲ್ಕು ಆಶ್ರಮ ಗಳೂ ಅನುಸರಿಸಬೇಕಾದ ಸಾಧಾರಣವಾದ ಧರ್ಮಗಳು–ಎಂಬುದಾಗಿ ಸ್ಮೃತಿಯು ಹೇಳುತ್ತದೆ. ಆದರೆ ಮನಸ್ಸನ್ನು ನಿರೋಧಿಸಿರುವ, ತಪಸ್ಸಿನ ಸಿದ್ಧಿಯನ್ನು ಪಡೆದಿರುವ, ಬ್ರಹ್ಮನಿಷ್ಠರಾದ ಪುರುಷರಿಂದ ಮಾತ್ರವೇ ಈ ಉಪನಿಷದ್ಧರ್ಮವು ನಿತ್ಯವೂ ಸಾಧಿಸಲ್ಪಡುತ್ತದೆ. (ಸಾಮಾನ್ಯರು ಸಂನ್ಯಾಸ ಧರ್ಮವನ್ನು ನಿರಂತರವಾಗಿ ಆಚರಿಸಲಾರರು.)

ಸನ್ತೋಷಮೂಲಸ್ತ್ಯಾಗಾತ್ಮಾ ಜ್ಞಾನಾಧಿಷ್ಠಾನಮುಚ್ಯತೇ ।
ಅಪವರ್ಗಮತಿರ್ನಿತ್ಯೋ ಯತಿಧರ್ಮಃ ಸನಾತನಃ ॥೩೧॥

ಯಾವುದು ಆನಂದವೇ ಮೂಲವುಳ್ಳದ್ದಾಗಿದೆಯೋ, ತ್ಯಾಗವೇ ಶರೀರರೂಪವಾಗಿರುವುದೋ, ಜ್ಞಾನಕ್ಕೆ ಆಶ್ರಯಭೂತವಾಗಿರುವುದೋ, ಮೋಕ್ಷೈಕಬುದ್ಧಿಯುಳ್ಳದ್ದಾಗಿರುವುದೋ–ಅದನ್ನು ಸನಾತನವಾದ ಯತಿ ಧರ್ಮ ಅಥವಾ ಸಂನ್ಯಾಸಧರ್ಮವೆಂದು ಹೇಳುತ್ತಾರೆ.

ಸಾಧಾರಣಃ ಕೇವಲೋ ವಾ ಯಥಾಬಲಮುಪಾಸತೇ ।
ಗಚ್ಛತಾಂ ಗಚ್ಛತಾಂ ಕ್ಷೇಮಂ ದುರ್ಬಲೋಽತ್ರಾವಸೀದತಿ ।
ಬ್ರಹ್ಮಣಃ ಪದಮನ್ವಿಚ್ಛನ್ಸಂಸಾರಾನ್ಮುಚ್ಯತೇ ಶುಚಿಃ ॥೩೨॥

ಸರ್ವಸಾಧಾರಣವಾದ ಇತರ ಆಶ್ರಮಗಳಲ್ಲಿಯೇ ಇರಲಿ ಅಥವಾ ಸಂನ್ಯಾಸಾಶ್ರಮದಲ್ಲಿಯೇ ಇರಲಿ–ಅವನಲ್ಲಿರುವ ವೈರಾಗ್ಯಬಲಕ್ಕೆ ಅನುಸಾರ ವಾಗಿ ಈ ಉಪನಿಷದ್ಧರ್ಮವನ್ನು ಪುರುಷನು ಸಾಧಿಸಬಲ್ಲನು. ಈ ಮಾರ್ಗ ದಲ್ಲಿ ಮುಂದುವರಿದಂತೆ ಶುಭೋದಯವುಂಟಾಗುತ್ತದೆ. ಆದರೆ ಈ ಮಾರ್ಗ

ದಲ್ಲಿ ಮನಸ್ಸಿನ ದೌರ್ಬಲ್ಯದ ಅಥವಾ ವೈರಾಗ್ಯದ ದೌರ್ಬಲ್ಯವಿರುವವನು ಮುಗ್ಗರಿಸುತ್ತಾನೆ (ವಿನಾಶಹೊಂದುತ್ತಾನೆ). ಪರಿಶುದ್ಧಾತ್ಮನು ಬ್ರಹ್ಮಪದ ಪ್ರಾಪ್ತಿಗೆ ಪ್ರಯತ್ನಿಸುತ್ತಾ ಸಂಸಾರಬಂಧನದಿಂದ ವಿಮುಕ್ತನಾಗುತ್ತಾನೆ."

ಸ್ಯೂಮರಶ್ಮಿಃ :

ಯೇ ಭುಞ್ಜತೇ ಯೇ ದದತೇ ಯಜನ್ತೇಽಧೀಯತೇ ಚ ಯೇ ।
ಮಾತ್ರಾಭಿರುಪಲಬ್ಧಾಭಿರ್ಯೇ ವಾ ತ್ಯಾಗಂ ಸಮಾಶ್ರಿತಾಃ ॥೩೩॥

ಏತೇಷಾಂ ಪ್ರೇತ್ಯಭಾವೇ ತು ಕತಮಃ ಸ್ವರ್ಗಜಿತ್ತಮಃ ।
ಏತದಾಚಕ್ಷ್ವ ಮೇ ಬ್ರಹ್ಮನ್ಯಥಾತತ್ತ್ವೇನ ಪೃಚ್ಛತಃ ॥೩೪॥

"ಬ್ರಹ್ಮಸ್ವರೂಪನೇ! ತಮಗೆ ಪ್ರಾಪ್ತವಾಗುವ ಐಶ್ವರ್ಯಗಳಿಂದ ಸುಖೋಪಭೋಗಗಳನ್ನು ಅನುಭವಿಸುವವರು, ದಾನಕೊಡುವವರು, ಯಜ್ಞಮಾಡುವವರು, ಅಧ್ಯಯನವನ್ನು ಮಾಡುವವರು, ತ್ಯಾಗವನ್ನೇ ಆಶ್ರಯಿಸಿರುವವರು–ಇವರಲ್ಲಿ ಯಾರು ಮರಣಾನಂತರ ಸ್ವರ್ಗವನ್ನು ಜಯಿಸಿದವರಲ್ಲಿ ಶ್ರೇಷ್ಠರೆನಿಸಿಕೊಳ್ಳುತ್ತಾರೆ?"

ಕಪಿಲಃ :

ಪರಿಗ್ರಹಾಃ ಶುಭಾಃ ಸರ್ವೇ ಗುಣತೋಽಭ್ಯುದಯಾಶ್ಚ ಯೇ ।
ನ ತು ತ್ಯಾಗಸುಖಂ ಪ್ರಾಪ್ತಾ ಏತತ್ತ್ವಮಪಿ ಪಶ್ಯಸಿ ॥೩೫॥

"ಗುಣತಃ ಮುಂದಿನ ಅಭಿವೃದ್ಧಿಗೆ ಯಾವುವು ಕಾರಣಗಳಾಗುವುವೋ–ಆ ಎಲ್ಲ ಪರಿಗ್ರಹಗಳೂ (ಸಾಧನಗಳೂ) ಶುಭಾವಹಗಳೇ ಆಗಿವೆ. ಆದರೆ ತ್ಯಾಗದಿಂದ ಪ್ರಾಪ್ತವಾಗುವ ಸುಖವನ್ನು ಉಳಿದ ಯಾವ ಸಾಧನಗಳಿಂದಲೂ ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಇದನ್ನು ನೀನು ಪ್ರತ್ಯಕ್ಷವಾಗಿಯೇ ಕಾಣುತ್ತಿರುವೆ."

ಸ್ಯೂಮರಶ್ಮಿಃ :

ಭವನ್ತೋ ಜ್ಞಾನನಿಷ್ಠಾ ವೈ ಗೃಹಸ್ಥಾಃ ಕರ್ಮನಿಶ್ಚಯಾಃ ।
ಆಶ್ರಮಾಣಾಂ ಚ ಸರ್ವೇಷಾಂ ನಿಷ್ಠಾಯಾಮೈಕ್ಯಮುಚ್ಯತೇ ॥೩೬॥

ಏಕತ್ವೇನ ಪೃಥಕ್ತ್ವೇನ ವಿಶೇಷೋ ನಾತ್ರ ದೃಶ್ಯತೇ ।
ತದ್ಯಥಾವದ್ಯಥಾನ್ಯಾಯಂ ಭಗವಾನ್ಪ್ರಬ್ರವೀತು ಮೇ ॥೩೭॥

"ಭಗವನ್! ಕಪಿಲರೇ! ನೀವು ಬ್ರಹ್ಮನಿಷ್ಠರಾಗಿರುವಿರಿ. ಆದರೆ ಗೃಹಸ್ಥರು ಕರ್ಮನಿಷ್ಠರಾಗಿರುತ್ತಾರೆ. ಎಲ್ಲ ಆಶ್ರಮಗಳ ಕಾರ್ಯಸಿದ್ಧಿಯಲ್ಲಿ ಐಕ್ಯವಿರುವುದೆಂದು ಹೇಳುತ್ತಾರೆ. (ಎಲ್ಲ ಆಶ್ರಮಗಳ ಗುರಿಯೂ ಬ್ರಹ್ಮತತ್ತ್ವ ಸಾಧನೆಯೇ ಆಗಿದೆ.) ಆದುದರಿಂದ ಆಶ್ರಮಗಳು ಒಂದೇ ಆಗಿದ್ದರೂ ಪ್ರತ್ಯೇಕ-ಪ್ರತ್ಯೇಕವಾಗಿ ನಾಲ್ಕು ವಿಧವಾಗಿ ವಿಂಗಡಿಸಲ್ಪಟ್ಟಿದ್ದರೂ ಈ ಎರಡಕ್ಕೂ ಯಾವ ವ್ಯತ್ಯಾಸವೂ ನನಗೆ ಕಾಣುವುದಿಲ್ಲ. ಆದುದರಿಂದ ನೀವು ಈ ವಿಷಯವನ್ನು ಯಥೋಚಿತವಾಗಿ ಮತ್ತು ಯಥಾವತ್ತಾಗಿ ಹೇಳಿರಿ."

ಕಪಿಲಃ :

ಶರೀರಪಕ್ತಿಃ ಕರ್ಮಾಣಿ ಜ್ಞಾನಂ ತು ಪರಮಾ ಗತಿಃ ।
ಕಷಾಯೇ ಕರ್ಮಭಿಃ ಪಕ್ವೇ ರಸಜ್ಞಾನೇ ಚ ತಿಷ್ಠತಿ ॥೩೮॥

"ಸ್ಯೂಮರಶ್ಮಿಯೇ! ನಿಷ್ಕಾಮನೆಯಿಂದ ಮಾಡಿದ ವೇದೋಕ್ತವಾದ ಕರ್ಮಗಳು ಶರೀರವನ್ನು ಶುದ್ಧಗೊಳಿಸುತ್ತವೆ. ಆದರೆ ಜ್ಞಾನವೆಂಬುದು ಪರಮಶ್ರೇಷ್ಠವಾದ ಆಶ್ರಯಸ್ಥಾನವು. ನಿಷ್ಕಾಮಕರ್ಮಗಳ ಮೂಲಕವಾಗಿ ಮನುಷ್ಯನು ಕಾಮ-ಕ್ರೋಧಾದಿಗಳನ್ನು ವಿನಾಶಗೊಳಿಸಿದನಂತರ ರಸರೂಪ ವಾದ ಜ್ಞಾನದಲ್ಲಿ ಪ್ರತಿಷ್ಠಿತನಾಗುತ್ತಾನೆ (ಜ್ಞಾನಿಯಾಗುತ್ತಾನೆ).

ಆನೃಶಂಸ್ಯಂ ಕ್ಷಮಾ ಶಾನ್ತಿರಹಿಂಸಾ ಸತ್ಯಮಾರ್ಜವಮ್ ।
ಅದ್ರೋಹೋಽನಭಿಮಾನಶ್ಚ ಹ್ರೀಸ್ತಿತಿಕ್ಷಾಶಮಸ್ತಥಾ ॥೩೯॥

ಪನ್ಥಾನೋ ಬ್ರಹ್ಮಣಸ್ತ್ವೇತೇ ಏತೈಃ ಪ್ರಾಪ್ನೋತಿ ಯತ್ಪರಮ್ ।
ತದ್ವಿದ್ವಾನನುಬುಧ್ಯೇತ ಮನಸಾ ಕರ್ಮನಿಶ್ಚಯಮ್ ॥೪೦॥

ದಯೆ, ಕ್ಷಮೆ, ಶಾಂತಿ, ಅಹಿಂಸೆ, ಸತ್ಯನಿಷ್ಠೆ, ಸರಳತೆ, ಯಾರೊಬ್ಬ ರಿಗೂ ದ್ರೋಹವೆಸಗದಿರುವುದು, ಅಭಿಮಾನಶೂನ್ಯತೆ, ಲಜ್ಜೆ, ಸಹನೆ ಮತ್ತು ಶಮ–ಇವುಗಳು ಪರಬ್ರಹ್ಮಪ್ರಾಪ್ತಿಗೆ ಮಾರ್ಗಗಳಾಗಿವೆ. ಇವುಗಳ

ಆಚರಣೆಯ ಮೂಲಕವಾಗಿ ಮನುಷ್ಯನು ಪರಬ್ರಹ್ಮವಸ್ತುವನ್ನು ಹೊಂದುತ್ತಾನೆ. ಕರ್ಮಾನುಷ್ಠಾನಗಳ ಪರಿಣಾಮವಾಗಿ ಈ ಗುಣಗಳು ಮೈಗೂಡಿವೆಯೇ ಎಂಬುದನ್ನು ವಿದ್ವಾಂಸನಾದವನು ಮನಸ್ಸಿನಿಂದ ನಿಶ್ಚಯಿಸಿಕೊಳ್ಳಬೇಕು.

ಯಾಂ ವಿಪ್ರಾಃ ಸರ್ವತಃ ಶಾನ್ತಾ ವಿಶುದ್ಧಾ ಜ್ಞಾನನಿಶ್ಚಯಾಃ ।
ಗತಿಂ ಗಚ್ಛನ್ತಿ ಸನ್ತುಷ್ಟಾಸ್ತಾಮಾಹುಃ ಪರಮಾಂ ಗತಿಮ್ ॥೪೧॥

ಎಲ್ಲ ಪ್ರಕಾರದಿಂದಲೂ ಶಾಂತರಾಗಿಯೂ, ಶುದ್ಧಾತ್ಮರಾಗಿಯೂ, ಜ್ಞಾನನಿಷ್ಠರಾಗಿಯೂ ಇರುವ ವಿಪ್ರರು ಯಾವ ಗತಿಯನ್ನು ಹೊಂದುವರೋ–ಅದನ್ನು ಪರಮಗತಿಯೆಂದು ಹೇಳುತ್ತಾರೆ.

ವೇದಾಂಶ್ಚ ವೇದಿತವ್ಯಂ ಚ ವಿದಿತ್ವಾ ಚ ಯಥಾಸ್ಥಿತಮ್ ।
ಏವಂ ವೇದವಿದಿತ್ಯಾಹುರತೋಽನ್ಯೋ ವಾತರೇಚಕಃ ॥೪೨॥

ಯಾವನು ವೇದಗಳನ್ನೂ–ವೇದಗಳ ಮೂಲಕವಾಗಿ ತಿಳಿಯಲ್ಪಡುವ ಪರಬ್ರಹ್ಮವಸ್ತುವನ್ನೂ ಯಥಾವತ್ತಾಗಿ ತಿಳಿದುಕೊಂಡಿರುವನೋ–ಅಂತಹವನನ್ನು ವೇದವಿದನೆಂದು ಹೇಳುತ್ತಾರೆ. ಇದಕ್ಕೆ ಭಿನ್ನನಾದವನು ಒತ್ತುವಿಕೆಯಿಂದ ಗಾಳಿಯನ್ನು ಒಳಕ್ಕೆ ಸೆಳೆದುಕೊಳ್ಳುವ ಮತ್ತು ಹೊರಕ್ಕೆ ಬಿಡುವ ತಿದಿಗೆ ಸಮಾನನಾಗುತ್ತಾನೆ.

ಸರ್ವಂ ವಿದುರ್ವೇದವಿದೋ ವೇದೇ ಸರ್ವಂ ಪ್ರತಿಷ್ಠಿತಮ್ ।
ವೇದೇ ಹಿ ನಿಷ್ಠಾ ಸರ್ವಸ್ಯ ಯದ್ಯದಸ್ತಿ ಚ ನಾಸ್ತಿ ಚ ॥೪೩॥

ವೇದವನ್ನು ತಿಳಿದವರು ಸಕಲವನ್ನೂ ತಿಳಿದುಕೊಂಡಿರುತ್ತಾರೆ. ಏಕೆಂದರೆ : ವೇದಗಳಲ್ಲಿಯೇ ಎಲ್ಲವೂ ಪ್ರತಿಷ್ಠಿತವಾಗಿವೆ. ವ್ಯಕ್ತವಾದ ಮತ್ತು ಅವ್ಯಕ್ತವಾದ ಸಕಲವಸ್ತುಗಳ ವಿಷಯವೂ ವೇದದಲ್ಲಿ ನಿರೂಪಿತವಾಗಿದೆ.

ಏಷೈವ ನಿಷ್ಠಾ ಸರ್ವತ್ರ ಯತ್ತದಸ್ತಿ ಚ ನಾಸ್ತಿ ಚ ।
ಏತದನ್ತಂ ಚ ಮಧ್ಯಂ ಚ ಸಚ್ಚಾಸಚ್ಚ ವಿಜಾನತಃ ॥೪೪॥

ಯಾವ ವಸ್ತುವು ಸರ್ವಕಾಲದಲ್ಲಿಯೂ ಅಬಾಧಿತವಾಗಿ ಇರುತ್ತದೆ

ಮತ್ತು ಯಾವುದು ಇರುವುದಿಲ್ಲ–ಎಂಬುದನ್ನು ಪ್ರತಿಪಾದಿಸುವುದೇ ವೇದವೇ ಮೊದಲಾದ ಸಕಲಶಾಸ್ತ್ರಗಳಲ್ಲಿರುವ ಏಕೈಕನಿಷ್ಠೆಯಾಗಿದೆ. ಜ್ಞಾನಿಯ ದೃಷ್ಟಿಯಲ್ಲಿ ಸದಸದ್ರೂಪನಾದ ಪರಬ್ರಹ್ಮನೇ ಜಗತ್ತಿನ ಆದಿಯೂ-ಮಧ್ಯನೂ ಮತ್ತು ಅಂತ್ಯನೂ ಆಗಿದ್ದಾನೆ.

ಸಮಾಪ್ತಂ ತ್ಯಾಗ ಇತ್ಯೇವ ಸರ್ವವೇದೇಷು ನಿಷ್ಠಿತಮ್ ।
ಸಂತೋಷ ಇತ್ಯನುಗತಮಪವರ್ಗೇ ಪ್ರತಿಷ್ಠಿತಮ್ ॥೪೫॥

ಸಕಲಸರ್ವಸ್ವವನ್ನೂ ತ್ಯಾಗಮಾಡಿದನಂತರವೇ ಬ್ರಹ್ಮವಸ್ತುವಿನ ಪ್ರಾಪ್ತಿಯಾಗುವುದೆಂದು ಸಕಲವೇದಗಳಲ್ಲಿಯೂ ಹೇಳಿದೆ. ಆನಂದದಿಂದ ಅನುಗತವಾದ ಈ ತ್ಯಾಗವು ಮೋಕ್ಷದಲ್ಲಿ ಪರ್ಯವಸಾನಹೊಂದುತ್ತದೆ.

ಋತಂ ಸತ್ಯಂ ವಿದಿತಂ ವೇದಿತವ್ಯಂ
ಸರ್ವಸ್ಯಾತ್ಮಾ ಸ್ಥಾವರಂ ಜಙ್ಗಮಂ ಚ ।
ಸರ್ವಂ ಸುಖಂ ಯಚ್ಛಿವಮುತ್ತರಂ ಚ
ಬ್ರಹ್ಮಾವ್ಯಕ್ತಂ ಪ್ರಭವಶ್ಚಾವ್ಯಯಂ ಚ ॥೪೬॥

ಪರಬ್ರಹ್ಮವಸ್ತುವು ಋತವೂ ಆಗಿದೆ, ಸತ್ಯವೂ ಆಗಿದೆ. ತಿಳಿಯಲ್ಪಟ್ಟಿರುವುದೂ ಆಗಿದೆ. ತಿಳಿಯಲ್ಪಡುವುದೂ ಆಗಿದೆ. ಎಲ್ಲ ಪ್ರಾಣಿಗಳಿಗೂ ಆತ್ಮಸ್ವರೂಪವಾಗಿದೆ. ಸ್ಥಾವರ-ಜಂಗಮರೂಪವಾಗಿದೆ. ಸಂಪೂರ್ಣಸುಖಸ್ವರೂಪವಾಗಿದೆ. ಎಲ್ಲರ ಉತ್ಪತ್ತಿಗೂ ಕಾರಣಭೂತವಾಗಿದೆ. ಅವಿನಾಶಿಯಾಗಿದೆ.

ತೇಜಃ ಕ್ಷಮಾ ಶಾನ್ತಿರನಾಮಯಂ ಚ
ತಥಾವಿಧಂ ವ್ಯೋಮ ಸನಾತನಂ ಧ್ರುವಮ್ ।
ಏತೈಃ ಸರ್ವೈರ್ಗಮ್ಯತೇ ಬುದ್ಧಿನೇತ್ರೈ-
ಸ್ತಸ್ಮೈ ನಮೋ ಬ್ರಹ್ಮಣೇ ಬ್ರಾಹ್ಮಣಾಯ ॥೪೭॥

ಆಕಾಶದಂತೆ ನಿಸ್ಸಂಗನಾಗಿರುವ, ಸನಾತನನಾದ, ಶಾಶ್ವತನಾದ ಪರಬ್ರಹ್ಮನನ್ನು ತೇಜಸ್ಸು, ಕ್ಷಮೆ, ಶಾಂತಿ, ಆರೋಗ್ಯ, ಶುಭಕಾಮನೆ–ಇವುಗಳೆಲ್ಲದರ ಮೂಲಕವಾಗಿ ಜ್ಞಾನನೇತ್ರರಾದ ಪುರುಷರು ಹೊಂದುತ್ತಾರೆ.

ಅಂತಹ ಪರಬ್ರಹ್ಮವಸ್ತುವಿಗೂ ಮತ್ತು ಅದನ್ನು ಕಂಡುಕೊಂಡಿರುವ ಬ್ರಾಹ್ಮಣನಿಗೂ ನಮಸ್ಕಾರವಿರಲಿ."

೨೭೦ನೆಯ ಅಧ್ಯಾಯವು ಮುಗಿಯಿತು.

೨೭೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಅರ್ಥ-ಕಾಮಗಳ ಭೋಗಗಳಿಗಿಂತಲೂ ಧರ್ಮ ಮತ್ತು ತಪಸ್ಸುಗಳ ಉತ್ಕರ್ಷವನ್ನು ಪ್ರತಿಪಾದಿಸುವ ಬ್ರಾಹ್ಮಣನ ಮತ್ತು ಕುಂಡಧಾರಮೇಘದ ಉಪಾಖ್ಯಾನ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಧರ್ಮಮರ್ಥಂ ಚ ಕಾಮಂ ಚ ವೇದಾಃ ಶಂಸನ್ತಿ ಭಾರತ ।
ಕಸ್ಯ ಲಾಭೋ ವಿಶಿಷ್ಟೋಽತ್ರ ತನ್ಮೇ ಬ್ರೂಹಿ ಪಿತಾಮಹ ॥೧॥

"ಭಾರತನೇ! ಪಿತಾಮಹ! ವೇದಗಳು ಧರ್ಮಾರ್ಥ-ಕಾಮಗಳನ್ನು ಪ್ರಶಂಸೆಮಾಡುತ್ತವೆ. ಈ ಮೂರರಲ್ಲಿ ಯಾವುದನ್ನು ಪಡೆದುಕೊಳ್ಳುವುದು ಶ್ರೇಷ್ಠವಾದುದು? ಈ ವಿಷಯವನ್ನು ನನಗೆ ಹೇಳು."

ಭೀಷ್ಮನು ಉತ್ತರಿಸುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಕುಂಡಧಾರ ಎಂಬ ಮೇಘನು ತನ್ನ ಭಕ್ತನಿಗೆ ಪ್ರೀತಿಯಿಂದ ಮಾಡಿದ ಉಪಕಾರವನ್ನು ವರ್ಣಿಸುವ ಪುರಾತನವಾದ ಇತಿಹಾಸವನ್ನು ಹೇಳುತ್ತೇನೆ, ಕೇಳು.

ಹಿಂದೊಮ್ಮೆ ದರಿದ್ರಬ್ರಾಹ್ಮಣನೊಬ್ಬನು ಸಕಾಮನಾಗಿ ಧರ್ಮ ಮಾಡಲು (ಯಜ್ಞಮಾಡಲು) ನಿಶ್ಚಯಿಸಿದನು. ಯಜ್ಞವನ್ನು ಮಾಡುವ ಸಲುವಾಗಿ ಅವನು ಯಾವಾಗಲೂ ಧನವನ್ನೇ ಅಪೇಕ್ಷಿಸುತ್ತಿದ್ದನು. ಆ ಧನದ ಸಲುವಾಗಿಯೇ ಅವನು ದಾರುಣವಾದ ತಪಸ್ಸನ್ನು ಮಾಡಿದನು. ಯಜ್ಞಾರ್ಥವಾಗಿ ಧನವನ್ನು ಸಂಪಾದಿಸಬೇಕೆಂದು ನಿಶ್ಚಯಿಸಿದ ಆ ಬ್ರಾಹ್ಮಣನು ಭಕ್ತಿಪೂರ್ವಕವಾಗಿ ದೇವತೆಗಳನ್ನು ಸಂಪೂಜಿಸಿದನು. ಆದರೆ ದೇವತೆಗಳನ್ನು ಭಕ್ತಿಪೂರ್ವಕವಾಗಿ ಪೂಜಿಸಿದರೂ ಅವನು ತಾನು ಅಪೇ

ಕ್ಷಿಸಿದ್ದ ಧನವನ್ನು ಹೊಂದಲೇ ಇಲ್ಲ. (ದೇವತೆಗಳ ಪೂಜೆಯಿಂದ ಅವನಿಗೆ ಧನದ ಪ್ರಾಪ್ತಿಯಾಗಲಿಲ್ಲ.) ಅತ್ಯಂತಚಿಂತಾಕುಲನಾದ ಆ ಬ್ರಾಹ್ಮಣನು* 'ಮನುಷ್ಯರಿಂದ ಜಡತ್ವವನ್ನು ನೀಗಿಕೊಂಡ ಯಾವುದಾದರೂ ದೇವತೆಯು ನನಗೆ ಬೇಗ ಪ್ರಸನ್ನವಾಗಲಿ'–ಎಂದು ಪ್ರಾರ್ಥಿಸಿಕೊಂಡನು. ಸೌಮ್ಯವಾದ ಮನಸ್ಸಿನಿಂದ ಕೂಡಿ ಹೀಗೆ ಪ್ರಾರ್ಥಿಸಿಕೊಂಡೊಡನೆಯೇ ಆ ಬ್ರಾಹ್ಮಣನು ತನ್ನ ಸಮೀಪದಲ್ಲಿಯೇ ದೇವತೆಗಳ ಅನುಚರನಾದ ಕುಂಡಧಾರನೆಂಬ ಮೇಘನು ನಿಂತಿರುವುದನ್ನು ನೋಡಿದನು. ಮಹಾಬಾಹುವಾದ ಆ ಕುಂಡಧಾರನನ್ನು ನೋಡಿದೊಡನೆಯೇ ಆ ಬ್ರಾಹ್ಮಣನಿಗೆ ಅವನಲ್ಲಿ ಭಕ್ತಿಯು ಹುಟ್ಟಿತು. ಬ್ರಾಹ್ಮಣನು ಹೀಗೆ ಚಿಂತಿಸಿದನು :

ಅಯಂ ಮೇ ಧಾಸ್ಯತಿ ಶ್ರೇಯೋ ವಪುರೇತದ್ಧಿ ತಾದೃಶಮ್ ॥೭॥

"ಇವನು ನನಗೆ ಶ್ರೇಯಸ್ಸನ್ನು ಉಂಟುಮಾಡುತ್ತಾನೆ. ಇವನ ಶರೀರವೇ ಅಂತಹ ಶ್ರೇಯಃಪ್ರದವಾದ ಲಕ್ಷಣಗಳಿಂದ ಕೂಡಿದೆ. ಮೇಲಾಗಿ ಈ ದೇವನು ನನ್ನ ಸಮೀಪದಲ್ಲಿಯೇ ಇದ್ದಾನೆ. ಬೇರೆ ಯಾವ ಮನುಷ್ಯರೂ ಧನಾರ್ಥವಾಗಿಯೇ ಆಗಲೀ ಬೇರೆ ಯಾವ ಪ್ರಯೋಜನಕ್ಕೇ ಆಗಲೀ–ಈ ದೇವನನ್ನು ಆರಿಸಿಕೊಂಡಿರುವುದಿಲ್ಲ. ಆದುದರಿಂದ ಈ ದೇವನು ಬಹಳ ಶೀಘ್ರವಾಗಿಯೇ ಅಪಾರವಾದ ಧನವನ್ನು ನನಗೆ ಕೊಡುತ್ತಾನೆ."

ಹೀಗೆ ಯೋಚಿಸಿದ ಬ್ರಾಹ್ಮಣನು ಸಮೀಪಗತನಾಗಿದ್ದ ಕುಂಡಧಾರನನ್ನು ಧೂಪಗಳಿಂದಲೂ, ಗಂಧಗಳಿಂದಲೂ, ದೊಡ್ಡದಾದ ಮತ್ತು ಚಿಕ್ಕುದಾದ ಮಾಲೆಗಳಿಂದಲೂ, ವಿಧ-ವಿಧವಾದ ಪೂಜೋಪಹಾರಗಳಿಂದಲೂ ಪೂಜಿಸಿದನು. ಬ್ರಾಹ್ಮಣನ ಆ ಪೂಜೆಯಿಂದ ಜಲಧರನು ಅತ್ಯಲ್ಪ ಕಾಲದಲ್ಲಿಯೇ ಸಂತುಷ್ಟನಾದನು. ಬ್ರಾಹ್ಮಣನಿಗೆ ಉಪಕಾರಮಾಡುವೆನೆಂಬ

---

* **ಮಾನುಷ್ಯೈಃ ಅಜಡೀಕೃತಂ** =ಎಂದರೆ ಮನುಷ್ಯರು ಶಿಲಾರೂಪದಲ್ಲಿರುವ ಅಥವಾ ಜಡವಾಗಿರುವ ಕಲ್ಲನ್ನೇ ದೇವತೆಯೆಂದು ಪ್ರಾರ್ಥಿಸುತ್ತಾರೆ. ಮನುಷ್ಯರ ಭಕ್ತಿಯ ಪ್ರಭಾವದಿಂದಾಗಿ ಜಡರೂಪವಾಗಿರುವ ಆ ಶಿಲೆಯೇ ದೇವತ್ವವನ್ನು ಹೊಂದಿ ಇಷ್ಟಾರ್ಥಗಳನ್ನು ನೀಡುತ್ತದೆ. ಹೀಗೆ ಶಿಲೆಯು ದೇವತ್ವವನ್ನು ಹೊಂದಲು ಮನುಷ್ಯರೇ ಕಾರಣರಾಗುತ್ತಾರೆ.

ಸೂಚನೆಯನ್ನೀಯುವ ಈ ಮಾತನ್ನು ಕುಂಡಧಾರನು ಬ್ರಾಹ್ಮಣನಿಗೆ ಹೇಳಿದನು :



ಬ್ರಹ್ಮಘ್ನೇ ಚ ಸುರಾಪೇ ಚ ಚೌರೇ ಭಗ್ನವ್ರತೇ ತಥಾ ।
ನಿಷ್ಕೃತಿರ್ವಿಹಿತಾ ಸದ್ಭಿಃ ಕೃತಘ್ನೇ ನಾಸ್ತಿ ನಿಷ್ಕೃತಿಃ ॥೧೧॥

"ಬ್ರಹ್ಮಹತ್ಯೆಯನ್ನು ಮಾಡಿದವನಿಗೆ, ಸುರಾಪಾನವನ್ನು ಮಾಡಿದವನಿಗೆ, ಕಳ್ಳತನವನ್ನು ಮಾಡಿದವನಿಗೆ, ವ್ರತಭಂಗವನ್ನು ಮಾಡಿದವನಿಗೆ– ಸತ್ಪುರುಷರು ಪ್ರಾಯಶ್ಚಿತ್ತವನ್ನು ಹೇಳಿರುತ್ತಾರೆ. ಆದರೆ ಕೃತಘ್ನನಿಗೆ ಪ್ರಾಯಶ್ಚಿತ್ತವೇ ಇಲ್ಲ.

ಆಶಾಯಾಸ್ತನಯೋಽಧರ್ಮಃ ಕ್ರೋಧೋಽಸೂಯಾಸುತಃ ಸ್ಮೃತಃ ।
ಲೋಭಃ ಪುತ್ರೋ ನಿಕೃತ್ಯಾಸ್ತು ಕೃತಘ್ನೋ ನಾರ್ಹತಿ ಪ್ರಜಾಮ್ ॥

ಅಧರ್ಮನು ಆಸೆ ಎಂಬ ಸ್ತ್ರೀಯ ಮಗನು. ಕ್ರೋಧನು ಅಸೂಯೆ ಎಂಬ ಸ್ತ್ರೀಯ ಮಗನೆಂದು ಹೇಳಲ್ಪಟ್ಟಿದ್ದಾನೆ. ಲೋಭನು ಪೀಡೆಯ (ಶಾಠ್ಯದ) ಮಗ. ಆದರೆ ಕೃತಘ್ನನು ಸಂತಾನವನ್ನು ಪಡೆಯಲು ಯೋಗ್ಯನೇ ಅಲ್ಲ." ಹೀಗೆ ಹೇಳಿದ ನಂತರ ಕುಂಡಧಾರನು ತನ್ನ ತೇಜಸ್ಸಿನ ಪ್ರಭಾವದಿಂದ ಬ್ರಾಹ್ಮಣನನ್ನು ದರ್ಭೆಗಳ ಮೇಲೆ ಮಲಗುವಂತೆ ಮಾಡಿದನು. ಬಳಿಕ ಆ ಬ್ರಾಹ್ಮಣನು ಸ್ವಪ್ನದಲ್ಲಿ ಸಕಲಪ್ರಾಣಿಗಳನ್ನೂ ನೋಡಿದನು. ಶಮ, ದಮ, ತಪಸ್ಸು ಮತ್ತು ಭಕ್ತಿಭಾವಗಳಿಂದ ಸಂಪನ್ನನಾಗಿದ್ದ ಭೋಗಾದಿಗಳಿಂದ ರಹಿತನಾಗಿದ್ದ, ಶುದ್ಧಾತ್ಮನಾಗಿದ್ದ ಬ್ರಾಹ್ಮಣನು ಆ ರಾತ್ರಿಯಲ್ಲಿ ಕುಂಡಧಾರನು ಹೇಳಿದ್ದುದಕ್ಕೆ ನಿದರ್ಶನವಾದ ದೃಶ್ಯವೊಂದನ್ನು ಸ್ವಪ್ನದಲ್ಲಿ ಕಂಡನು. ಮಹಾತ್ಮನಾದ ಮಣಿಭದ್ರನು ಅಲ್ಲಿದ್ದು, ಯಾಚಕರ ಪ್ರಾರ್ಥನೆಗಳನ್ನು ದೇವತೆಗಳಿಗೆ ಸಲ್ಲಿಸುತ್ತಿದ್ದುದನ್ನೂ ಮತ್ತು ದೇವತೆಗಳು ಯಾಚಕರಿಗೆ ಅನುಗ್ರಹಿಸುವ ಫಲಗಳನ್ನು ಯಾಚಕರಿಗೆ ಸಮರ್ಪಿಸುತ್ತಿದ್ದುದನ್ನೂ ಬ್ರಾಹ್ಮಣನು ತನ್ನ ಕನಸಿನಲ್ಲಿ ಕಂಡನು. ಅಲ್ಲಿ ದೇವತೆಗಳು–ಆ ಯಾಚಕರು ಮಾಡಿದ ಶುಭಕರ್ಮಗಳಿಗೆ ಬದಲಾಗಿ ರಾಜ್ಯ-ಧನಾದಿಗಳನ್ನು ಅನುಗ್ರಹಿಸುತ್ತಿದ್ದರು. ಅದೇ ಯಾಚಕರು ಅಶುಭಕರ್ಮಗಳ ಫಲವನ್ನು ಉಪಭೋಗಿಸಬೇಕಾಗಿ ಬಂದೊಡನೆಯೇ–ಶುಭಕರ್ಮಗಳ ಸಲುವಾಗಿ ಹಿಂದೆ ತಾವು ಅನುಗ್ರಹಿಸಿಕೊಟ್ಟಿದ್ದ ರಾಜ್ಯ-ಧನಾದಿಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದರು. ಯಕ್ಷರೆಲ್ಲರೂ ನೋಡುತ್ತಿದ್ದಂತೆಯೇ ಮಹಾದ್ಯುತಿಮಂತನಾದ ಕುಂಡಧಾರನು ದೇವತೆಗಳ ಮುಂದೆ ಭೂಮಿಯ ಮೇಲೆ ಬಿದ್ದನು. ಬಳಿಕ ದೇವತೆಗಳ ಮಾತಿನಂತೆ ಮಹಾತ್ಮನಾದ ಮಣಿಭದ್ರನು ಭೂಮಿಯ ಮೇಲೆ ಬಿದ್ದಿದ್ದ ಕುಂಡಧಾರನನ್ನು ಕುರಿತು ನಿನಗೇನು ಬೇಕೆಂದು ಪ್ರಶ್ನಿಸಿದನು.

ಕುಂಡಧಾರನು ವಿನೀತನಾಗಿ ಹೇಳಿದನು :

"ಈ ಬ್ರಾಹ್ಮಣನು ನನ್ನ ಭಕ್ತನಾಗಿದ್ದಾನೆ. ದೇವತೆಗಳೇನಾದರೂ

ನನ್ನ ವಿಷಯದಲ್ಲಿ ಪ್ರಸನ್ನತೆಯುಳ್ಳವರಾಗಿದ್ದರೆ ಈ ಬ್ರಾಹ್ಮಣನಿಗೆ ಭವಿಷ್ಯ ದಲ್ಲಿ ಸುಖವಾಗುವಂತೆ ಅನುಗ್ರಹಿಸಬೇಕೆಂಬುದು ನನ್ನ ಆಶಯವಾಗಿದೆ."

ಯುಧಿಷ್ಠಿರ! ದೇವತೆಗಳ ಮಾತಿನಂತೆಯೇ ಮಣಿಭದ್ರನು ಮಹಾ ದ್ಯುತಿಮಂತನಾಗಿದ್ದ ಕುಂಡಧಾರನನ್ನು ಕುರಿತು ಪುನಃ ಹೇಳಿದನು :

"ಕುಂಡಧಾರ! ಮೇಲೇಳು. ನಿನಗೆ ಮಂಗಳವಾಗಲಿ. ಕೃತಾರ್ಥನಾಗು ; ಸುಖಿಯಾಗಿರು. ಈ ಬ್ರಾಹ್ಮಣನು ಧನಾರ್ಥಿಯಾಗಿದ್ದರೆ ಅವನಿಗೆ ಹಣವನ್ನು ಕೊಟ್ಟುಬಿಡು. ನಿನ್ನ ಸಖನಾದ ಈ ಬ್ರಾಹ್ಮಣನು ಎಷ್ಟು ಧನವನ್ನು ಪ್ರಾರ್ಥಿಸುವನೋ–ಅಷ್ಟು ಅಥವಾ ಅಸಂಖ್ಯಾತವಾದ ಧನವನ್ನು ದೇವತೆ ಗಳ ಆಜ್ಞೆಯಂತೆ ನಾನೇ ಕೊಡುತ್ತೇನೆ."

ಯುಧಿಷ್ಠಿರ! ಮಣಿಭದ್ರನು ಹೀಗೆ ಹೇಳಿದನಂತರ ಕುಂಡಧಾರನು ಬ್ರಾಹ್ಮಣನಿಗೆ ಧನವನ್ನು ಕೊಡುವ ಬಗೆಗೆ ಪುನಃ ಯೋಚಿಸಿದನು. ಮನುಷ್ಯರ ಜೀವನವು ಚಂಚಲವೂ ಅಶಾಶ್ವತವೂ ಆದುದರಿಂದ ಬ್ರಾಹ್ಮಣನ ತಪೋಬಲವನ್ನು ಹೆಚ್ಚಿಸಲು ನಿಶ್ಚಯಿಸಿ ಮಣಿಭದ್ರನೊಡನೆ ಹೇಳಿದನು :

"ಧನಪ್ರದನೇ! ಈ ಬ್ರಾಹ್ಮಣನ ಸಲುವಾಗಿ ನಾನು ಧನವನ್ನು ಯಾಚಿಸುವುದಿಲ್ಲ. ಬೇರೆಯ ರೀತಿಯಲ್ಲಿ ಇವನು ನಿನ್ನಿಂದ ಅನುಗೃಹೀತ ನಾಗಬೇಕೆಂದು ನನ್ನ ಆಶಯವಿದೆ. ರತ್ನಪೂರ್ಣವಾದ ಭೂಮಿಯನ್ನಾಗಲೀ, ರತ್ನಗಳ ರಾಶಿಯನ್ನಾಗಲೀ, ನಾನು ಈ ನನ್ನ ಭಕ್ತನಿಗೆ ಕೊಡಲು ಇಚ್ಛಿಸುವು ದಿಲ್ಲ. ಇವನು ಧಾರ್ಮಿಕನಾಗಲಿ. ಇವನ ಬುದ್ಧಿಯು ಧರ್ಮದಲ್ಲಿಯೇ ರಮಿಸಲಿ. ಧರ್ಮವನ್ನೇ ಆಶ್ರಯಿಸಿ ಇವನು ತನ್ನ ಜೀವನವನ್ನು ನಿರ್ವಹಿ ಸಲಿ. ಧರ್ಮಪ್ರಧಾನನಾಗಲಿ. ಇದನ್ನು ಈ ನನ್ನ ಭಕ್ತನಿಗೆ ಅನುಗ್ರಹಿಸ ಬೇಕೆಂಬುದು ನನ್ನ ಅಭಿಮತವಾಗಿದೆ."

ಮಣಿಭದ್ರನು ಹೇಳುತ್ತಾನೆ :

"ಕುಂಡಧಾರ! ರಾಜ್ಯ, ವಿವಿಧವಾದ ಸುಖಗಳು–ಈ ಎಲ್ಲವೂ ಧರ್ಮದ ಫಲದಿಂದ ಲಭಿಸತಕ್ಕುವುಗಳೇ ಆಗಿವೆ. ಆದುದರಿಂದ ಈ ಬ್ರಾಹ್ಮಣನು (ಧರ್ಮಕಾರ್ಯಮಾಡುವುದರಿಂದ ಉಂಟಾಗಬಹುದಾದ) ಕಾಯಕ್ಲೇಶಗಳಿಂದ ರಹಿತನಾಗಿ ಧರ್ಮದ ಫಲವನ್ನೇ ಅನುಭವಿಸಲಿ."

ಯುಧಿಷ್ಠಿರ! ಮಣಿಭದ್ರನು ಹೀಗೆ ಹೇಳಿದನಂತರವೂ ಮಹಾ ಯಶೋವಂತನಾದ ಕುಂಡಧಾರನು ತನ್ನ ಭಕ್ತನಾದ ಬ್ರಾಹ್ಮಣನಿಗೆ ಧರ್ಮದ ಮೇಲೆ ಆಸಕ್ತಿಯು ಹೆಚ್ಚುವಂತೆ ಅನುಗ್ರಹಿಸಬೇಕೆಂದು ಬಾರಿ-ಬಾರಿಗೂ ಒತ್ತಾಯಪೂರ್ವಕವಾಗಿ ಪ್ರಾರ್ಥಿಸಿದನು. ಅದರಿಂದ ದೇವತೆಗಳೂ ಸುಪ್ರೀತರಾದರು.

ದೇವತೆಗಳ ಪ್ರತಿನಿಧಿಯಾದ ಮಣಿಭದ್ರನು ಕುಂಡಧಾರನೊಡನೆ ಹೇಳಿದನು :

"ಕುಂಡಧಾರ! ನಿನ್ನ ವಿಷಯದಲ್ಲಿಯೂ ಮತ್ತು ಈ ಬ್ರಾಹ್ಮಣನ ವಿಷಯದಲ್ಲಿಯೂ ದೇವತೆಗಳು ಸುಪ್ರೀತರಾಗಿದ್ದಾರೆ. ದೇವತೆಗಳ ಅನು ಗ್ರಹದಿಂದಾಗಿ ನಿನ್ನ ಭಕ್ತನಾದ ಈ ಬ್ರಾಹ್ಮಣನು ಧರ್ಮಾತ್ಮನಾಗುತ್ತಾನೆ. ಇವನ ಬುದ್ಧಿಯು ಯಾವಾಗಲೂ ಧರ್ಮದಲ್ಲಿಯೇ ಸ್ಥಿರವಾಗಿರುತ್ತದೆ."

ಯುಧಿಷ್ಠಿರ! ಮಣಿಭದ್ರನ ಈ ಮಾತನ್ನು ಕೇಳಿ ಕೃತಕೃತ್ಯನಾದ ಕುಂಡಧಾರಮೇಘನು ಇತರರಿಂದ ಪಡೆಯಲು ದುಃಸಾಧ್ಯವಾದ ಮನಸ್ಸಿಗೆ ಅಭೀಷ್ಟವಾದ ವರವನ್ನು ಪಡೆದು ಪರಮಪ್ರೀತನಾದನು.

ಆ ವೇಳೆಗೆ ಎಚ್ಚರಗೊಂಡ ಬ್ರಾಹ್ಮಣನು ತನ್ನ ಸಮೀಪದಲ್ಲಿ ಮತ್ತು ಅಕ್ಕ-ಪಕ್ಕಗಳಲ್ಲಿ ಸೂಕ್ಷ್ಮವಾದ ನಾರುಬಟ್ಟೆಗಳು ಇಡಲ್ಪಟ್ಟುದನ್ನು ನೋಡಿ ದನು. ಒಡನೆಯೇ ಅವನಿಗೆ ವಿಷಾದವೂ ವೈರಾಗ್ಯವೂ ಉಂಟಾಯಿತು. 'ನನ್ನ ಪುಣ್ಯಮಯವಾದ ತಪಸ್ಸಿನ ಉದ್ದೇಶವನ್ನು ಈ ಕುಂಡಧಾರನೇ ತಿಳಿಯದಿದ್ದ ಮೇಲೆ ಬೇರೆ ಯಾರು ತಾನೇ ತಿಳಿದುಕೊಳ್ಳುವರು? ಆದುದರಿಂದ ನಾನು ಅರಣ್ಯಕ್ಕೇ ಹೊರಟುಹೋಗುತ್ತೇನೆ. ಅರಣ್ಯದಲ್ಲಿದ್ದು ಕೊಂಡು ಧರ್ಮದಿಂದ ಜೀವನವನ್ನು ನಿರ್ವಹಿಸುವುದೇ ಶ್ರೇಷ್ಠಮಾರ್ಗ ವಾಗಿದೆ' – ಹೀಗೆ ನಿಶ್ಚಯಿಸಿದ ಆ ಬ್ರಾಹ್ಮಣಶ್ರೇಷ್ಠನು ಅರಣ್ಯಕ್ಕೆ ಹೋಗಿ ವೈರಾಗ್ಯದಿಂದಲೂ–ದೇವತೆಗಳ ಅನುಗ್ರಹದಿಂದಲೂ ಅತ್ಯಂತಕಠೋರ ವಾದ ತಪಸ್ಸನ್ನು ಪ್ರಾರಂಭಿಸಿದನು. ದೇವತೆಗಳಿಗೂ ಮತ್ತು ಅತಿಥಿಗಳಿಗೂ ಅರ್ಪಿಸಿದ ನಂತರ ಉಳಿದ ಕಂದ-ಮೂಲ-ಫಲಗಳನ್ನು ಆಹಾರವನ್ನಾಗಿ ತೆಗೆದು

ಕೊಳ್ಳುತ್ತಿದ್ದನು. ಧರ್ಮದ ವಿಷಯದಲ್ಲಿ ಆ ಬ್ರಾಹ್ಮಣನಿಗೆ ದೃಢವಾದ ಬುದ್ಧಿಯುಂಟಾಯಿತು.

ಸ್ವಲ್ಪದಿವಸಗಳು ಕಳೆದನಂತರ ಆ ಬ್ರಾಹ್ಮಣನು ಮೂಲ-ಫಲಗಳನ್ನು ತ್ಯಜಿಸಿ ತರಗೆಲೆಗಳನ್ನೇ ಆಹಾರರೂಪದಲ್ಲಿ ಭಕ್ಷಿಸುತ್ತಿದ್ದನು. ಮತ್ತೂ ಕೆಲವು ದಿವಸಗಳು ಕಳೆದನಂತರ ಪರ್ಣಾಹಾರವನ್ನೂ ಪರಿತ್ಯಜಿಸಿ ಜಲಾಹಾರಿಯಾದನು. ಅನಂತರ ಜಲವನ್ನೂ ಪರಿತ್ಯಜಿಸಿ ವಾಯುವನ್ನೇ ಆಹಾರವನ್ನಾಗಿ ತೆಗೆದುಕೊಳ್ಳಲು ಉಪಕ್ರಮಿಸಿದನು. ವಾಯುಭಕ್ಷನಾಗಿಯೇ ಆ ಬ್ರಾಹ್ಮಣನು ಅನೇಕವರ್ಷಗಳನ್ನು ಕಳೆದನು. ವಾಯುಭಕ್ಷನಾಗಿದ್ದರೂ ಅವನ ಪ್ರಾಣಗಳು ಮಾತ್ರ ಕ್ಷೀಣಿಸಲಿಲ್ಲ. ಅದು ಎಲ್ಲರಿಗೂ ಪರಮಾದ್ಭುತವಾಗಿ ಕಂಡಿತು. ಧರ್ಮದಲ್ಲಿ ಶ್ರದ್ಧೆಯನ್ನಿಟ್ಟುಕೊಂಡು ಉಗ್ರವಾದ ತಪಸ್ಸನ್ನು ಆಚರಿಸುತ್ತಿದ್ದ ಅವನಿಗೆ ಬಹಳ ಕಾಲಾನಂತರದಲ್ಲಿ ದೀರ್ಘದೃಷ್ಟಿಯುಂಟಾಯಿತು. ಆಗ ಅವನ ಬುದ್ಧಿಯಲ್ಲಿ ಈ ವಿಚಾರವು ಹೊಳೆಯಿತು. 'ಸಂತುಷ್ಟನಾಗಿ ನಾನು ಯಾರಿಗಾದರೂ ಹಣವನ್ನು ಕೊಡುತ್ತೇನೆಂದು ಹೇಳಿದರೆ ಆ ನನ್ನ ಮಾತು ಸುಳ್ಳಾಗಲಾರದಲ್ಲವೇ? (ಯಾಚಕರಿಗೆ ಧನವನ್ನು ದಯಪಾಲಿಸುವ ಸಾಮರ್ಥ್ಯವು ನನಗೀಗ ಪ್ರಾಪ್ತವಾಗಿರುವುದಲ್ಲವೇ?)' ಈ ವಿಧವಾದ ಭಾವನೆಯು ಆ ಬ್ರಾಹ್ಮಣನಲ್ಲುಂಟಾಗಿ ಮುಖವು ಪ್ರಹೃಷ್ಟವಾಯಿತು. ಪುನಃ ಅವನು ತನ್ನ ತಪಸ್ಸನ್ನು ಮುಂದುವರಿಸಿದನು. ಮತ್ತೊಂದು ಸಿದ್ಧಿಯನ್ನು ಪಡೆದುಕೊಂಡನಂತರ ಪುನಃ ಅವನು ಹೀಗೆ ಚಿಂತಿಸಿದನು–'ನಾನು ಮನಸ್ಸಿನಲ್ಲಿ ಸಂಕಲ್ಪಿಸಿದೆನೆಂದರೆ ಆ ನನ್ನ ಸಂಕಲ್ಪವು ಎಷ್ಟೇ ಮಹತ್ತ್ವದ್ದಾಗಿದ್ದರೂ ಸಿದ್ಧಿಸುತ್ತದೆ. ನಾನು ಸಂತುಷ್ಟನಾಗಿ ಯಾವನಿಗಾದರೂ ರಾಜ್ಯವನ್ನು ಅನುಗ್ರಹಿಸಿದೆನೆಂದರೆ ಅವನು ಒಡನೆಯೇ ರಾಜನಾಗಿಬಿಡುತ್ತಾನೆ. ಈ ನನ್ನ ಮಾತು ಯಾವಾಗಲೂ ಸುಳ್ಳಾಗುವುದಿಲ್ಲ.'

ಬ್ರಾಹ್ಮಣನು ಹೀಗೆಯೇ ತಪಸ್ಸನ್ನು ಮುಂದುವರಿಸುತ್ತಿರಲಾಗಿ ಬ್ರಾಹ್ಮಣನ ತಪೋಯೋಗದಿಂದಲೂ–ಸೌಹಾರ್ದದಿಂದಲೂ ಪ್ರೇರಿತನಾದ ಕುಂಡಧಾರನೇ ಬ್ರಾಹ್ಮಣನಿಗೆ ಸಾಕ್ಷಾತ್ತಾಗಿ ಕಾಣಿಸಿಕೊಂಡನು. ಕುಂಡಧಾರನನ್ನು ನೋಡಿ ಬ್ರಾಹ್ಮಣನು ವಿಸ್ಮಿತನಾದನು ಮತ್ತು ಆಗಮಿಸಿದ

ಕುಂಡಧಾರನನ್ನು ಯಥಾವಿಧಿಯಾಗಿ ಸಂಪೂಜಿಸಿದನು. ಅನಂತರ ಕುಂಡ ಧಾರನು ಬ್ರಾಹ್ಮಣನೊಡನೆ ಹೇಳಿದನು : "ಬ್ರಾಹ್ಮಣೋತ್ತಮ! ನಿನಗೆ ತಪಸ್ಸಿನ ಪ್ರಭಾವದಿಂದ ಉತ್ತಮೋತ್ತಮವಾದ ದಿವ್ಯದೃಷ್ಟಿಯು ಪ್ರಾಪ್ತವಾಗಿದೆ. ಈ ದಿವ್ಯದೃಷ್ಟಿಯಿಂದ ನೀನು ಹಿಂದಿನ ರಾಜರು ಯಾವ ಗತಿಯನ್ನು ಹೊಂದಿರುವರೆಂಬುದನ್ನೂ ಮತ್ತು ಯಾವ ಲೋಕಗಳಿಗೆ ಅವರು ಹೋಗಿರುವರೆಂಬುದನ್ನೂ ನೋಡು." ಕುಂಡಧಾರನು ಹೀಗೆ ಹೇಳಿದನಂತರ ಆ ಬ್ರಾಹ್ಮಣನು ತನ್ನ ದಿವ್ಯದೃಷ್ಟಿಯಿಂದ ಸಾವಿರಾರು ರಾಜರು ನರಕದಲ್ಲಿ ಬಿದ್ದಿರುವುದನ್ನು ದೂರದಿಂದಲೇ ನೋಡಿದನು. ಬಳಿಕ ಕುಂಡಧಾರನು ಬ್ರಾಹ್ಮಣನಿಗೆ ಹೇಳಿದನು :

"ಬ್ರಾಹ್ಮಣೋತ್ತಮ! ನೀನು ಭಕ್ತಿಭಾವದಿಂದ ನನ್ನನ್ನು ಪೂಜಿಸಿದ ನಂತರ ನಾನು ಮಾಡುವ ಅನುಗ್ರಹದಿಂದ ನೀನು ದುಃಖಕ್ಕೆ ಭಾಗಿಯಾಗುವುದಾದರೆ ನಾನು ನಿನಗೇನು ಮಾಡಿದಂತಾಯಿತು? ನಿನಗೆ ಎಂತಹ ಅನುಗ್ರಹವನ್ನು ನಾನು ಮಾಡಿದಂತಾಗುತ್ತದೆ? ನಿನ್ನ ದಿವ್ಯದೃಷ್ಟಿಯಿಂದ ಆ ರಾಜರಿಗೆ ಒದಗಿರುವ ಅವಸ್ಥೆಯನ್ನು ಪುನಃ ಪುನಃ ನೋಡು. ಅವರ ಆ ದುರವಸ್ಥೆಯನ್ನು ನೋಡಿದ ಮನುಷ್ಯನು ಪ್ರಪಂಚದ ಕಾಮನೆಗಳನ್ನು ಹೇಗೆ ತಾನೇ ಬಯಸುತ್ತಾನೆ? ಯಾರು ಧನವನ್ನೂ ಮತ್ತು ಪ್ರಪಂಚದ ಕಾಮನೆಗಳನ್ನೂ ಅಪೇಕ್ಷಿಸುವರೋ–ಅಂತಹ ಮನುಷ್ಯರಿಗೆ ಸ್ವರ್ಗದ ಬಾಗಿಲು ಸಂಪೂರ್ಣವಾಗಿ ಮುಚ್ಚಿಹೋಗಿರುತ್ತದೆ."

ಯುಧಿಷ್ಠಿರ! ಹೀಗೆ ಕುಂಡಧಾರನು ಹೇಳಿದ ಬಳಿಕ ಬ್ರಾಹ್ಮಣನು ತನ್ನ ದಿವ್ಯದೃಷ್ಟಿಯ ಮೂಲಕವಾಗಿ ಭೋಗಿಗಳಾದ ಮನುಷ್ಯರನ್ನು ಕಾಮ, ಕ್ರೋಧ, ಲೋಭ, ಭಯ, ಮದ, ನಿದ್ರೆ, ತೂಕಡಿಕೆ, ಆಲಸ್ಯ–ಇವೇ ಮುಂತಾದ ಶತ್ರುಗಳು ಆಕ್ರಮಿಸಿಕೊಂಡಿರುವುದನ್ನು ನೋಡಿದನು.

ಕುಂಡಧಾರನು ಹೇಳುತ್ತಾನೆ :

"ಬ್ರಾಹ್ಮಣೋತ್ತಮ! ನೀನು ಈಗ ನೋಡುತ್ತಿರುವ ಕಾಮ-ಕ್ರೋಧಾದಿಗಳಿಂದಲೇ ಲೋಕಗಳೆಲ್ಲವೂ ಬಂಧಿಸಲ್ಪಟ್ಟಿವೆ. ದೇವತೆಗಳಿಗೆ ಯಾವಾಗಲೂ ಮನುಷ್ಯರಿಂದ ಭಯವಿದೆ. (ಮನುಷ್ಯರು ತಪಸ್ಸುಮಾಡಿ ತಮ್ಮ ಪದವಿಯನ್ನು ಅಪಹರಿಸುವರೆಂಬ ಭಯವಿದೆ.) ಈ ಕಾರಣದಿಂದಲೇ

ದೇವತೆಗಳ ನಿರ್ದೇಶದಂತೆ ಕಾಮ-ಕ್ರೋಧಾದಿಗಳು ಮನುಷ್ಯನು ಮಾಡುವ ತಪಸ್ಸಿಗೆ, ಧರ್ಮಕಾರ್ಯಗಳಿಗೆ ಸರ್ವಪ್ರಕಾರದಿಂದಲೂ ವಿಘ್ನವನ್ನುಂಟು ಮಾಡುತ್ತವೆ. ದೇವತೆಗಳ ಅನುಜ್ಞೆಯನ್ನು ಪಡೆದುಕೊಳ್ಳದೇ ಯಾವನೇ ಆದರೂ ನಿರ್ವಿಘ್ನವಾಗಿ ಧರ್ಮಕಾರ್ಯಗಳನ್ನು ಮಾಡಲಾರನು. ಧಾರ್ಮಿಕನಾಗಲಾರನು. ನಿನಗೆ ದೇವತೆಗಳ ಅನುಜ್ಞೆಯು ಸಿಕ್ಕಿತು. ನಿನ್ನ ಧರ್ಮಕಾರ್ಯವು ಅಥವಾ ತಪಸ್ಸು ಸಿದ್ಧಿಸಿತು. ಈಗ ನೀನು ನಿನ್ನ ತಪಸ್ಸಿನ ಪ್ರಭಾವದಿಂದ ಬೇರೆಯವರಿಗೆ ಅಥವಾ ಯಾಚಕರಿಗೆ ರಾಜ್ಯವನ್ನೂ, ಧನವನ್ನೂ ಅನುಗ್ರಹಿಸಿಕೊಡಲು ಸಮರ್ಥನಾಗಿರುವೆ."

ಯುಧಿಷ್ಠಿರ! ಕುಂಡಧಾರನು ಹೀಗೆ ಹೇಳಿದನಂತರ ಧರ್ಮಾತ್ಮನಾದ ಬ್ರಾಹ್ಮಣನು ಕುಂಡಧಾರಮೇಘನಿಗೆ ತಲೆಬಾಗಿ ಸಾಷ್ಟಾಂಗನಮಸ್ಕಾರಮಾಡಿ ವಿನಯಪೂರ್ವಕವಾಗಿ ಹೇಳಿದನು :

"ಕುಂಡಧಾರ! ನೀನು ನನಗೆ ಮಹಾನುಗ್ರಹವನ್ನೇ ಮಾಡಿರುವೆ. ನೀನು ನನ್ನ ಮೇಲಿಟ್ಟಿರುವ ಸ್ನೇಹಭಾವವನ್ನು ತಿಳಿಯದೇ ನಾನು ಲೋಭದಿಂದ ಕೂಡಿದವನಾಗಿ ನನಗೆ ದೇವತೆಗಳಿಂದ ಅನುಗ್ರಹಿಸಲ್ಪಟ್ಟಿದ್ದ ಧನಾಗಮವನ್ನು ತಪ್ಪಿಸಿದುದಕ್ಕಾಗಿ ನಿನ್ನ ವಿಷಯದಲ್ಲಿ ದ್ವೇಷವೆಣಿಸಿದ್ದೆನು. ಇದಕ್ಕಾಗಿ ನೀನು ನನ್ನನ್ನು ಕ್ಷಮಿಸಲು ಯೋಗ್ಯನಾಗಿರುವೆ." ಬ್ರಾಹ್ಮಣನು ಹೀಗೆ ಹೇಳಿದೊಡನೆಯೇ ಕುಂಡಧಾರನು – "ನಾನು ಹಿಂದೆಯೇ ಅದನ್ನು ಕ್ಷಮಿಸಿಬಿಟ್ಟಿದ್ದೇನೆ" – ಎಂದು ಹೇಳಿ ಬ್ರಾಹ್ಮಣನನ್ನು ಎರಡು ತೋಳುಗಳಿಂದಲೂ ತಬ್ಬಿಕೊಂಡು ಸಂತಯಿಸಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು. ಕುಂಡಧಾರನ ಅನುಗ್ರಹದಿಂದಾಗಿ ತಪಸ್ಸಿದ್ಧಿಯನ್ನು ಪಡೆದ ಬ್ರಾಹ್ಮಣನು ಎಲ್ಲ ಲೋಕಗಳನ್ನೂ ಸಂಚರಿಸಿದನು. ತಪಸ್ಸಿನ ಸಿದ್ಧಿಯಿಂದಾಗಿ ಆ ಬ್ರಾಹ್ಮಣನಿಗೆ ಆಕಾಶಗಮನ, ಸಂಕಲ್ಪಮಾತ್ರದಿಂದಲೇ ಅಭೀಷ್ಟವಾದ ವಸ್ತುಗಳನ್ನು ಪಡೆದುಕೊಳ್ಳುವುದು, ಧರ್ಮ-ಶಕ್ತಿ ಮತ್ತು ಯೋಗಗಳಿಂದ ಪಡೆಯಬಹುದಾದ ಪರಮಗತಿ–ಇವೆಲ್ಲವೂ ಸಾಧ್ಯವಾಯಿತು.

ದೇವತಾ ಬ್ರಾಹ್ಮಣಾಃ ಸನ್ತೋ ಯಕ್ಷಾ ಮಾನುಷಚಾರಣಾಃ ।
ಧಾರ್ಮಿಕಾನ್ಪೂಜಯನ್ತೀಹ ನ ಧನಾಢ್ಯಾನ್ನ ಕಾಮಿನಃ ॥೫೫॥

ದೇವತೆಗಳು, ಬ್ರಾಹ್ಮಣರು, ಸತ್ಪುರುಷರು, ಯಕ್ಷರು, ಮನುಷ್ಯರು, ಚಾರಣರು–ಇವರೆಲ್ಲರೂ ಈ ಜಗತ್ತಿನಲ್ಲಿ ಧಾರ್ಮಿಕರನ್ನು ಪೂಜಿಸುತ್ತಾರೆ. ಧನಿಕರನ್ನಾಗಲೀ–ಕಾಮೋಪಭೋಗಿಗಳನ್ನಾಗಲೀ ಪೂಜಿಸುವುದಿಲ್ಲ.

ಸುಪ್ರಸನ್ನಾ ಹಿ ತೇ ದೇವಾ ಯತ್ತೇ ಧರ್ಮೇ ರತಾ ಮತಿಃ ।
ಧನೇ ಸುಖಕಲಾ ಕಾಚಿದ್ಧರ್ಮೇ ತು ಪರಮಂ ಸುಖಮ್ ॥೫೬॥

ಯುಧಿಷ್ಠಿರ! ನಿನ್ನ ಬುದ್ಧಿಯೂ ಯಾವಾಗಲೂ ಧರ್ಮದಲ್ಲಿಯೇ ನಿರತವಾಗಿರುವುದರಿಂದ ಆ ದೇವತೆಗಳು ನಿನ್ನಲ್ಲಿ ಬಹಳವಾಗಿ ಪ್ರಸನ್ನರಾಗಿದ್ದಾರೆ. ಧನದಲ್ಲಿ ಸುಖವೆಂಬುದು ಲೇಶಮಾತ್ರವಿದೆ. ಆದರೆ ಧರ್ಮಾಚರಣೆಯಲ್ಲಿ ಪರಮಸುಖವಿದೆ.”

೨೭೧ನೆಯ ಅಧ್ಯಾಯವು ಮುಗಿಯಿತು.

೨೭೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಯಜ್ಞದಲ್ಲಿ ಹಿಂಸೆಯ ನಿಂದೆ: ಅಹಿಂಸೆಯ ಪ್ರಶಂಸೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಬಹೂನಾಂ ಯಜ್ಞತಪಸಾಮೇಕಾರ್ಥಾನಾಂ ಪಿತಾಮಹ ।
ಧರ್ಮಾರ್ಥಂ ನ ಸುಖಾರ್ಥಾರ್ಥಂ ಕಥಂ ಯಜ್ಞಃ ಸಮಾಹಿತಃ ॥೧॥

“ಪಿತಾಮಹ! ಲೋಕದಲ್ಲಿ ಯಜ್ಞಗಳೂ ಅನೇಕವಿಧವಾಗಿವೆ. ತಪಸ್ಸುಗಳೂ ಅನೇಕವಿಧವಾಗಿವೆ. ಆದರೆ ಅವುಗಳೆಲ್ಲದರ ಏಕಮಾತ್ರ ಉದ್ದೇಶವು ಭಗವತ್ಪ್ರೀತಿಯೇ ಆಗಿದೆ. ಆದರೆ ಅಂತಹ ಯಜ್ಞಗಳಲ್ಲಿ ಅಥವಾ ತಪಸ್ಸುಗಳಲ್ಲಿ ಸ್ವರ್ಗಸುಖಪ್ರಾಪ್ತಿಗಾಗಿ ಅಥವಾ ಧನಾರ್ಥವಾಗಿ ಅಲ್ಲದೇ ಕೇವಲ ಧರ್ಮಾರ್ಥವಾಗಿ ಮಾಡುವ ಯಜ್ಞಗಳು ಯಾವುವು? ಮತ್ತು ಅವುಗಳನ್ನು ಮಾಡುವ ವಿಧಾನವು ಯಾವುದು?”

ಭೀಷ್ಮನು ಉತ್ತರಿಸುತ್ತಾನೆ :

“ಯುಧಿಷ್ಠಿರ! ಹಿಂದಿನ ಕಾಲದಲ್ಲಿ ಉಂಛವೃತ್ತಿಯಿಂದ ಜೀವನವನ್ನು ನಿರ್ವಹಿಸುತ್ತಿದ್ದ ಒಬ್ಬ ಬ್ರಾಹ್ಮಣನು ಮಾಡಿದ ಯಜ್ಞದ ಸಂಬಂಧವಾಗಿ ನಾರದರು ನನ್ನೊಡನೆ ಹೇಳಿದ್ದ ಪ್ರಾಚೀನವಾದ ಇತಿಹಾಸವನ್ನು ಹೇಳು

ತ್ತೇನೆ. ನಾನೊಮ್ಮೆ ಅರಮನೆಯಲ್ಲಿದ್ದಾಗ ನನ್ನ ಬಳಿಗೆ ಆಗಮಿಸಿದ ದೇವರ್ಷಿಗಳಾದ ನಾರದರು ಧರ್ಮದ ಸಂಬಂಧವಾಗಿ ನಮ್ಮಿಬ್ಬರಲ್ಲಿಯೂ ಮಾತು-ಕತೆಗಳು ನಡೆಯುತ್ತಿದ್ದಾಗ ಈ ಉಪಾಖ್ಯಾನವನ್ನು ಹೇಳಿದರು :

ನಾರದರು ಹೇಳುತ್ತಾರೆ :

“ಧರ್ಮಪ್ರಧಾನವಾಗಿದ್ದ ವಿದರ್ಭದೇಶದಲ್ಲಿ ಉಂಛವೃತ್ತಿಯಿಂದ ಜೀವಿಸುತ್ತಿದ್ದ (ಭತ್ತದ ಕುಯಿಲಾದನಂತರ ಗದ್ದೆಯಲ್ಲಿ ಬಿದ್ದಿರುತ್ತಿದ್ದ ಧಾನ್ಯದ ಕಾಳುಗಳನ್ನು ಆಯ್ದು ತಂದು ಅದರಿಂದಲೇ ಜೀವನವನ್ನು ನಿರ್ವಹಿಸುತ್ತಿದ್ದ) ಬ್ರಹ್ಮರ್ಷಿಯೊಬ್ಬನು ವಾಸವಾಗಿದ್ದನು. ಒಮ್ಮೆ ಅವನು ಒಂದು ಯಜ್ಞವನ್ನು ಮಾಡಲು ಸಂಕಲ್ಪಿಸಿದನು.

ಬ್ರಾಹ್ಮಣನು ವಾಸಿಸುತ್ತಿದ್ದ ಆ ಸ್ಥಳದಲ್ಲಿ ಸಾಮೆಯ ಅಕ್ಕಿಯನ್ನೇ ಅನ್ನವಾಗಿ ತಿನ್ನಬೇಕಾಗಿದ್ದಿತು. ಸೂರ್ಯಪರ್ಣಿಯನ್ನೇ (ಕಾಡಿನ ಉದ್ದನ್ನೇ) ಬೇಳೆಯನ್ನಾಗಿ ಉಪಯೋಗಿಸಬೇಕಾಗಿದ್ದಿತು. ಸುವರ್ಚಲಾ (ಬ್ರಾಹ್ಮೀಲತೆ) ಎಂಬ ಸೊಪ್ಪು ಸಿಕ್ಕುತ್ತಿದ್ದಿತು. ಕಹಿಯಾದ ಮತ್ತು ರಸವಿಲ್ಲದ ಕಾಯಿ-ಪಲ್ಯಗಳು ಸಿಕ್ಕುತ್ತಿದ್ದುವು. ಆದರೆ ಬ್ರಾಹ್ಮಣನ ತಪಃಪ್ರಭಾವದಿಂದ ಆ ಪದಾರ್ಥಗಳೆಲ್ಲವೂ ರುಚಿಕರವಾಗಿದ್ದುವು.

ಉಪಗಮ್ಯ ವನೇ ಸಿದ್ಧಿಂ ಸರ್ವಭೂತಾವಿಹಿಂಸಯಾ ।
ಅಪಿ ಮೂಲಫಲೈರಿಷ್ಟೋ ಯಜ್ಞಃ ಸ್ವರ್ಗ್ಯಃ ಪರಂತಪ ॥೫॥

ಪರಂತಪನೇ! ಭೀಷ್ಮ! ಅರಣ್ಯಕ್ಕೆ ಹೋಗಿ ತಪಃಸಿದ್ಧಿಯನ್ನು ಪಡೆದು ಪ್ರಪಂಚದಲ್ಲಿರುವ ಸಕಲಪ್ರಾಣಿಗಳಲ್ಲಿ ಯಾವುದೊಂದು ಪ್ರಾಣಿಗೂ ಹಿಂಸೆ ಮಾಡದೇ ಮೂಲ-ಫಲಗಳಿಂದಲೇ ಮಾಡಿದ ಯಜ್ಞವೂ ಸ್ವರ್ಗಪ್ರಾಪಕ ವಾಗುತ್ತದೆ. ಆದರೆ ಬ್ರಾಹ್ಮಣನು ಹಿಂಸಾಪೂರ್ವಕವಾದ (ಪಶ್ವಾಲಂಭನ) ಯಜ್ಞವನ್ನೇ ಮಾಡಲು ನಿಶ್ಚಯಿಸಿದನು. ಸತ್ಯನೆಂಬ ಹೆಸರಿನ ಆ ಬ್ರಾಹ್ಮಣ ನಿಗೆ ವ್ರತಾದಿಗಳಿಂದ ಕೃಶಳಾಗಿದ್ದ, ಪರಮಪವಿತ್ರಳಾಗಿದ್ದ ಪುಷ್ಕರಧಾರಿಣೀ ಎಂಬ ಪತ್ನಿಯಿದ್ದಳು. ಅವಳಿಗೆ ಪಶ್ವಾಲಂಭನದಲ್ಲಿ ಇಷ್ಟವಿರಲಿಲ್ಲ. ಆದರೂ ಸತ್ಯನು ಅವಳನ್ನು ತನ್ನ ಯಜ್ಞಪತ್ನಿಯನ್ನಾಗಿ ಮಾಡಿಕೊಂಡನು. ಪತಿಯು ಶಾಪವನ್ನು ಕೊಟ್ಟಾನೆಂಬ ಭಯದಿಂದ ಪುಷ್ಕರಧಾರಿಣಿಯು ಸತ್ಯನ ಸ್ವಭಾ

ವಕ್ಕೆ ಅನುಸಾರವಾಗಿ ನಡೆದುಕೊಳ್ಳುತ್ತಿದ್ದಳು. ಹಳೆಯದಾದ ನವಿಲುಗರಿಗಳೆಲ್ಲವನ್ನೂ ಒಟ್ಟಾಗಿ ಸೇರಿಸಿ ಮಾಡಿದ ವಸ್ತ್ರವನ್ನವಳು ಉಟ್ಟುಕೊಂಡಿದ್ದಳೆಂದು ಹೇಳುತ್ತಾರೆ. ಯಜ್ಞವನ್ನಾಗಲೀ–ಯಜ್ಞದ ಫಲವನ್ನಾಗಲೀ ಇಚ್ಛಿಸದೇ ಇದ್ದ ಪುಷ್ಕರಧಾರಿಣಿಯು ಹೋತೃವಿನ ಆಜ್ಞೆಯಂತೆ ಯಜ್ಞದ ಕಾರ್ಯವನ್ನು ನಿರ್ವಹಿಸುತ್ತಿದ್ದಳು. ಧರ್ಮವಿದರಾದ ಶುಕ್ರಾಚಾರ್ಯರ ವಂಶಜನಾದ ಪರ್ಣಾದನೆಂಬುವನು ಆ ಯಜ್ಞದಲ್ಲಿ ಹೋತೃವಾಗಿದ್ದನು. ಆಲಂಭನಕ್ಕೆ ಯಾವ ಪಶುವೂ ಸಿಕ್ಕಿರಲಿಲ್ಲ. ಆ ಅರಣ್ಯದಲ್ಲಿ ಜಿಂಕೆಯೊಂದು ಬಹಳ ದಿವಸಗಳಿಂದಲೂ ಸತ್ಯನ ಜೊತೆಯಲ್ಲಿಯೇ ಇದ್ದಿತು. ಅದು ಸತ್ಯನ ಬಳಿಗೆ ಬಂದು ಹೇಳಿತು :

“ಬ್ರಾಹ್ಮಣೋತ್ತಮ! ನೀನು ಯಜ್ಞದ ಹೆಸರಿನಲ್ಲಿ ದುಷ್ಕೃತ್ಯವನ್ನು ಮಾಡುತ್ತಿರುವೆ. ಈ ಯಜ್ಞವೇನಾದರೂ ಅಂಗಹೀನ-ಮಂತ್ರಹೀನವಾದರೆ ಯಜಮಾನನಿಗೆ ಅದು ದುಷ್ಕರ್ಮವಾಗಿ ಪರಿಣಮಿಸುತ್ತದೆ. ಆದುದರಿಂದ ನೀನು ನನ್ನನ್ನೇ ಹೋತೃವಿಗೊಪ್ಪಿಸಿ (ಪಶ್ವಾಲಂಭನದ ಮೂಲಕ ಯಜ್ಞವನ್ನು ಪೂರ್ಣಗೊಳಿಸಿ) ನಿಷ್ಕಳಂಕನಾಗಿ ಸ್ವರ್ಗಕ್ಕೆ ಹೋಗು.” ಜಿಂಕೆಯು ಹೀಗೆ ಹೇಳಿದನಂತರ ಆ ಯಜ್ಞದ ವೇದಿಕೆಯಲ್ಲಿ ಸಾಕ್ಷಾತ್ ಸಾವಿತ್ರಿಯೇ ಕಾಣಿಸಿಕೊಂಡು ಸತ್ಯನಿಗೆ ಮೃಗವು ಹೇಳಿದಂತೆ ಮಾಡಲು ಸಲಹೆಯನ್ನಿತ್ತಳು. ಅದಕ್ಕೆ ಬ್ರಾಹ್ಮಣನು–“ನನ್ನ ಜೊತೆಯಲ್ಲಿಯೇ ಬಹಳ ದಿವಸಗಳಿಂದ ವಾಸಮಾಡುತ್ತಿರುವ ಜಿಂಕೆಯನ್ನು ನಾನು ಖಂಡಿತವಾಗಿಯೂ ಕೊಲ್ಲುವುದಿಲ್ಲ” – ಎಂದು ಉತ್ತರಿಸಿದನು. ಸತ್ಯನು ಹೀಗೆ ಹೇಳಿದನಂತರ ಸಾವಿತ್ರಿಯು ಹಿಂದಿರುಗಿ ಯಜ್ಞಾಗ್ನಿಯನ್ನು ಪ್ರವೇಶಿಸಿದಳು. ಪಶುವಿಲ್ಲದ ಯಜ್ಞದಲ್ಲಿ ನಡೆಯಬಹುದಾದ ನ್ಯೂನತೆಯನ್ನು ನೋಡುವ ಇಚ್ಛೆಯಿಂದ ಆಗಮಿಸಿದ್ದ ಸಾವಿತ್ರಿಯು ರಸಾತಳಕ್ಕೆ ಹೊರಟುಹೋದಳು. ಜಿಂಕೆಯು ಸಾವಿತ್ರೀ ದೇವಿಯ ಸಮ್ಮುಖದಲ್ಲಿ ಬದ್ಧಾಂಜಲಿಯಾಗಿ ನಿಂತಿದ್ದ ಸತ್ಯನನ್ನು ಕುರಿತು ತನ್ನನ್ನು ಯಜ್ಞಪಶುವನ್ನಾಗಿ ಉಪಯೋಗಿಸಿಕೊಳ್ಳುವಂತೆ ಪುನಃ ಪ್ರಾರ್ಥಿಸಿತು. ಸತ್ಯನು ಜಿಂಕೆಯನ್ನೆತ್ತಿ ತಬ್ಬಿಕೊಂಡು ಪ್ರೀತಿಯಿಂದ ಹೇಳಿದನು.: **‘ಗಮ್ಯತಾಂ’**– ‘ನೀನು ಇಲ್ಲಿಂದ ಹೊರಟುಹೋಗು.’ ಸತ್ಯನ ಮಾತಿನಂತೆ ಎಂಟು ಹೆಜ್ಜೆಗಳನ್ನು ಮುಂದಿಟ್ಟ ಜಿಂಕೆಯು ಪುನಃ ಹಿಂದಿರುಗಿ ಹೇಳಿತು :

ಸಾಧು ಹಿಂಸಯ ಮಾಂ ವತ್ಸ ಹತೋ ಯಾಸ್ಯಾಮಿ ಸದ್ಗತಿಮ್ ॥

"ವತ್ಸ! ವಿಧಿಪೂರ್ವಕವಾಗಿ ನನ್ನನ್ನು ಹಿಂಸಿಸು. (ಆಲಂಭನ ಮಾಡು.) ಯಜ್ಞಪಶುವಾಗಿ ಮರಣವನ್ನಪ್ಪುವ ನಾನು ಸದ್ಗತಿಯನ್ನು ಹೊಂದುತ್ತೇನೆ. ನಾನೀಗ ಕೊಡುವ ದಿವ್ಯದೃಷ್ಟಿಯಿಂದ ಆಕಾಶದ ಕಡೆಗೆ ನೋಡು. ಅಲ್ಲಿ ದಿವ್ಯರೂಪದ ಅಪ್ಸರೆಯರಿದ್ದಾರೆ. ಮಹಾತ್ಮರಾದ ಗಂಧರ್ವರ ವಿಚಿತ್ರವಾದ ವಿಮಾನಗಳಿವೆ."

ಹೀಗೆ ಜಿಂಕೆಯು ಹೇಳಿದನಂತರ ಆ ಮೃಗವು ದಯಪಾಲಿಸಿದ ದಿವ್ಯದೃಷ್ಟಿಯಿಂದ ಸತ್ಯನು ಆಕಾಶದ ಕಡೆಗೆ ನೋಡಿದನು. ಆಸೆಯಿಂದ ಕೂಡಿದ ಕಣ್ಣಿಗಳಿಂದ ಸುಂದರವಾದ ಆ ದೃಶ್ಯವನ್ನು ಬಹಳ ಹೊತ್ತಿನವರೆಗೂ ನೋಡುತ್ತಿದ್ದು ಅನಂತರ ಮೃಗವನ್ನು ನೋಡಿ ಹಿಂಸೆಯಲ್ಲಿಯೂ ಸ್ವರ್ಗಸುಖವಿದೆ ಎಂಬುದನ್ನು ನಿಶ್ಚಯಿಸಿದನು. (ಹಿಂಸಾಮಯವಾದ ಯಜ್ಞಮಾಡುವುದರಿಂದ ಸ್ವರ್ಗವು ಲಭಿಸುತ್ತದೆಂದು ನಿಶ್ಚಯಿಸಿದನು) ಕಾರಣಾಂತರದಿಂದ ಯಮಧರ್ಮನು ಜಿಂಕೆಯಾಗಿ ಅನೇಕವರ್ಷಗಳಿಂದ ಆ ಅರಣ್ಯದಲ್ಲಿ ವಾಸಮಾಡುತ್ತಿದ್ದನು. ಆ ಸಮಯದಲ್ಲಿ ಅವನು ಜಿಂಕೆಯ ರೂಪವನ್ನು ಕಳೆದುಕೊಂಡು ತನ್ನ ನಿಜಸ್ವರೂಪವನ್ನು ಹೊಂದಿದನು. ಹಿಂಸಾಮಯವಾಗಿರುವುದರಿಂದ ಈ ಯಜ್ಞದ ವಿಧಿಯು ಸಮೀಚೀನ ವಾಗಿಲ್ಲವೆಂದು ಯಮಧರ್ಮನು ಯೋಚಿಸಿದನು. 'ಮೃಗವನ್ನು ಯಜ್ಞದಲ್ಲಿ ಆಲಂಭನಮಾಡಿ ಸ್ವರ್ಗವನ್ನು ಪಡೆದುಕೊಳ್ಳುತ್ತೇನೆ'–ಎಂದು ಭಾವಿಸಿದ ಮಾತ್ರದಿಂದಲೇ ಸತ್ಯನು ಮಾಡಿದ್ದ ಮಹಾತಪಸ್ಸು ನಷ್ಟವಾಗಿ ಹೋಯಿತು. ಆದುದರಿಂದ ಹಿಂಸೆಯು ಯಜ್ಞಕ್ಕೆ ಯುಕ್ತವಲ್ಲ. **ಅಥ ಶ್ವೋಭೂತೇಽಷ್ಟಕಾಃ ಪಶುನಾ ಸ್ಥಾಲೀಪಾಕೇನ ವಾ**–ಎಂದಿರುವುದರಿಂದ ಪಶು ಸ್ಥಾನದಲ್ಲಿ ಅಹಿಂಸಾತ್ಮಕವಾದ ಸ್ಥಾಲೀಪಾಕವನ್ನೇ ಕಲ್ಪಿಸಿಕೊಳ್ಳಬಹುದಾಗಿದೆ. (ಇದೇ ಸೂತ್ರವನ್ನೇ ಅನುಸರಿಸಿ) ಭಗವಂತನಾದ ಯಮ ಧರ್ಮನೇ ಸ್ವತಃ ನಿಂತು ಸತ್ಯನಿಗೆ ಪಶುಹಿಂಸೆಯಿಂದ ವಿಹೀನವಾದ ಯಜ್ಞವನ್ನು ಮಾಡಿಸಿದನು. ಮುಂದೆ ಸತ್ಯನು ತಪಶ್ಚರಣೆಯಿಂದಲೇ ಹೆಚ್ಚಿನ

ಸಮಾಧಾನವನ್ನು ಪಡೆದುಕೊಂಡನು. ಸತ್ಯನ ಭಾರ್ಯೆಯಾದ ಪುಷ್ಕರಧಾರಿಣಿಗೂ ಇದರಿಂದ ಸಮಾಧಾನವಾಯಿತು.

ಅಹಿಂಸಾ ಸಕಲೋ ಧರ್ಮೋ ಹಿಂಸಾಧರ್ಮಸ್ತಥಾಹಿತಃ ।
ಸತ್ಯಂ ತೇಽಹಂ ಪ್ರವಕ್ಷ್ಯಾಮಿ ಯೋ ಧರ್ಮಃ ಸತ್ಯವಾದಿನಾಮ್ ॥

ಸತ್ಯನಿಷ್ಠವಾದ ಧರ್ಮವು ಯಾವುದೆಂಬ ವಿಷಯದಲ್ಲಿ ನಿನಗೆ ಸತ್ಯಸಂಗತಿಯನ್ನು ಹೇಳುತ್ತಿದ್ದೇನೆ. ಅಹಿಂಸೆಯೇ ಸತ್ಯವಾದಿಗಳ ಧರ್ಮ. ಸಕಲಧರ್ಮಗಳೂ ಅಹಿಂಸೆಯಲ್ಲಿಯೇ ಪ್ರತಿಷ್ಠಿತವಾಗಿವೆ. ಹಿಂಸೆಯೆಂಬುದು ಅಧರ್ಮವೂ ಮತ್ತು ಅಹಿತವನ್ನುಂಟುಮಾಡುವುದೂ ಆಗಿದೆ.”

೨೭೨ನೆಯ ಅಧ್ಯಾಯವು ಮುಗಿಯಿತು.*

೨೭೩ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಧರ್ಮ–ಅಧರ್ಮ–ವೈರಾಗ್ಯ ಮತ್ತು ಮೋಕ್ಷಗಳ ವಿಷಯದಲ್ಲಿ ಯುಧಿಷ್ಠಿರನ ನಾಲ್ಕು ಪ್ರಶ್ನೆಗಳು ಮತ್ತು ಅವಕ್ಕೆ ಭೀಷ್ಮನ ಉತ್ತರ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಥಂ ಭವತಿ ಪಾಪಾತ್ಮಾ ಕಥಂ ಧರ್ಮಂ ಕರೋತಿ ವಾ ।
ಕೇನ ನಿರ್ವೇದಮಾದತ್ತೇ ಮೋಕ್ಷಂ ವಾ ಕೇನ ಗಚ್ಛತಿ ॥೧॥

“ಭೀಷ್ಮಪಿತಾಮಹ! ಮನುಷ್ಯನು ಪಾಪಾತ್ಮನು ಹೇಗೆ ಆಗುತ್ತಾನೆ? ಅವನು ಧರ್ಮಾಚರಣೆಯನ್ನು ಹೇಗೆ ಮಾಡುತ್ತಾನೆ? ಯಾವ ಕಾರಣದಿಂದ

---

* ೨೭೨ನೆಯ ಅಧ್ಯಾಯವು ಯಜ್ಞನಿಂದಾಧ್ಯಾಯವೆಂದೇ ಪ್ರಸಿದ್ಧವಾಗಿದೆ. ಆದರೆ ಈ ಅಧ್ಯಾಯದಲ್ಲಿ ಹಿಂಸಾತ್ಮಕವಾದ ಯಜ್ಞವನ್ನು ಮಾಡಕೂಡದೆಂಬ ಅಭಿಪ್ರಾಯವು ಮೂಡಿಬಂದಿರುವುದೇ ಹೊರತು ಯಜ್ಞವನ್ನು ಮಾಡಲೇಕೂಡದೆಂಬ ಅಭಿಪ್ರಾಯವಿಲ್ಲ. ಹಿಂಸಾತ್ಮಕವಾದ ಯಜ್ಞವು ಸಾಧುವಲ್ಲವೆಂದು ಭಾವಿಸಿದ ಯಮಧರ್ಮನೇ ಪುನಃ ಸತ್ಯನಿಗೆ ಅಹಿಂಸಾತ್ಮಕವಾದ ಯಜ್ಞವನ್ನು ಮಾಡಿಸುವುದೇ ಇದಕ್ಕೆ ನಿದರ್ಶನ ವಾಗಿದೆ. ಮೇಲಾಗಿ ಸ್ವರ್ಗಕಾಮರು ಪಶ್ವಾಲಂಭನಯಜ್ಞವನ್ನು ಮಾಡಬಹುದು. ಅದನ್ನು ಮಾಡುವುದರಿಂದ ಪಶುವೂ ಮತ್ತು ಯಜಮಾನನೂ ಸ್ವರ್ಗಜಿತರಾಗುವ

ವೈರಾಗ್ಯವುಂಟಾಗುತ್ತದೆ? ಯಾವ ಉಪಾಯದಿಂದ ಮನುಷ್ಯನು ಮೋಕ್ಷವನ್ನು ಹೊಂದುತ್ತಾನೆ?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ನಿನಗೆ ಸರ್ವಧರ್ಮಗಳೂ ತಿಳಿದಿವೆ. ಲೋಕ ಮರ್ಯಾದೆಯ ರಕ್ಷಣೆಗಾಗಿ ನನ್ನನ್ನು ನೀನು ಪ್ರಶ್ನಿಸುತ್ತಿರುವೆ. ಆಗಲಿ ; ವೈರಾಗ್ಯದಿಂದ ಕೂಡಿದ ಮೋಕ್ಷ, ಪಾಪ ಮತ್ತು ಧರ್ಮ–ಇವುಗಳ ವಿಷಯವಾಗಿ ಮೊದಲಿನಿಂದಲೂ ಹೇಳುತ್ತೇನೆ, ಅವಧರಿಸು.

ವಿಜ್ಞಾನಾರ್ಥಂ ಹಿ ಪಞ್ಚಾನಾಮಿಚ್ಛಾ ಪೂರ್ವಂ ಪ್ರವರ್ತತೇ ।
ಪ್ರಾಪ್ಯೈಕಂ ಜಾಯತೇ ಕಾಮೋ ದ್ವೇಷೋ ವಾ ಭರತರ್ಷಭ ॥೩॥

ಮೊದಲು ಮನುಷ್ಯನಿಗೆ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳೆಂಬ ಐದು ಇಂದ್ರಿಯಾರ್ಥಗಳನ್ನು ಅನುಭವಿಸಬೇಕೆಂಬ ಇಚ್ಛೆಯುಂಟಾಗುತ್ತದೆ. ಆ ಐದು ಇಂದ್ರಿಯಾರ್ಥಗಳಲ್ಲಿ ಯಾವುದೇ ಒಂದನ್ನು ಅನುಭವಿಸಿದರೂ ಆ ಒಂದರಲ್ಲಿಯೇ ಅನುರಾಗವೋ ಅಥವಾ ದ್ವೇಷವೋ ಉಂಟಾಗುತ್ತದೆ. (ಸುಶ್ರಾವ್ಯವಾದ ಸಂಗೀತವನ್ನು ಕೇಳುವುದರಲ್ಲಿ ಇಚ್ಛೆಯುಂಟಾಗುತ್ತದೆ. ಗದ್ದಲವನ್ನು ಕೇಳುವುದರಲ್ಲಿ ಜಿಹ್ವಾಸೆಯುಂಟಾಗುತ್ತದೆ. ಹೀಗೆ ಇಂದ್ರಿಯಾರ್ಥಗಳು ಬೇಕೆನಿಸಿದರೂ–ಅವುಗಳಲ್ಲಿ ಬೇಕಾದುದೂ ಇರುತ್ತದೆ ; ಬೇಡವಾದುದೂ ಇರುತ್ತದೆ.)

ತತಸ್ತದರ್ಥಂ ಯತತೇ ಕರ್ಮ ಚಾರಭತೇ ಮಹತ್ ।
ಇಷ್ಟಾನಾಂ ರೂಪಗನ್ಧಾನಾಮಭ್ಯಾಸಂ ಪ್ರಚಿಕೀರ್ಷತಿ ॥೪॥

ರೆಂದು ಶಾಸ್ತ್ರವಚನವಿದೆ. ಆದರೆ ಅಧ್ಯಾತ್ಮಮಾರ್ಗವನ್ನು ಹಿಡಿದಿರುವವರಿಗೆ ಅಥವಾ ಆಧ್ಯಾತ್ಮಿಕತಪಸ್ಸನ್ನು ಮಾಡುತ್ತಿರುವವರಿಗೆ ಇಂತಹ ಕಾಮ್ಯಯಜ್ಞಗಳು ಬಂಧಕಗಳಾಗುತ್ತವೆ. ಇದಲ್ಲದೇ ಸ್ವರ್ಗಪ್ರಾಪ್ತಿಗೆ ಇತರ ಯಜ್ಞಮಾರ್ಗಗಳೂ ಇವೆ. ಪಶ್ವಾಲಂಭನವನ್ನು ಮಾಡದೆಯೇ ಆಚರಿಸಬಹುದಾದ ಯಜ್ಞಪ್ರಕ್ರಿಯೆಗಳೂ ಇವೆ. ಅವೇ ಶ್ರೇಷ್ಠವಾದುವುಗಳು. ಶ್ರೀಗೀತೆಯಲ್ಲಿ 'ಯಜ್ಞೋ ದಾನಃ ತಪಃ ಕರ್ಮ ಕಾರ್ಯಮೇವ ತತ್'–ಸನಾತನಧರ್ಮಾವಲಂಬಿಗಳು ಮಾಡಲೇಬೇಕಾಗಿರುವ ಕರ್ತವ್ಯಗಳಲ್ಲಿ ಯಜ್ಞವೂ ಒಂದಾಗಿದೆ–ಎಂದು ಹೇಳಿದೆ. ಇಷ್ಟು ವಿಷಯವನ್ನು ನಾವು ಈ ಅಧ್ಯಾಯದಿಂದ ಗ್ರಹಿಸಬಹುದಾಗಿದೆ.

ಶಬ್ದ-ಸ್ಪರ್ಶಾದಿ ಇಂದ್ರಿಯಾರ್ಥಗಳಲ್ಲಿ ಯಾವುದರ ಮೇಲೆ ಅನುರಾಗವುಂಟಾಗುವುದೋ–ಅದನ್ನು ಪಡೆದುಕೊಳ್ಳಲು ಮನುಷ್ಯನು ಪ್ರಯತ್ನಿಸುತ್ತಾನೆ. ಅದಕ್ಕಾಗಿಯೇ ದೊಡ್ಡ-ದೊಡ್ಡ ಕಾರ್ಯಗಳನ್ನೂ ಪ್ರಾರಂಭಿಸುತ್ತಾನೆ. ತಾನು ಇಚ್ಛಿಸಿದ ರೂಪ-ರಸ-ಗಂಧಗಳನ್ನು ಪುನಃ ಪುನಃ ಸೇವಿಸುತ್ತಲೇ ಇರುತ್ತಾನೆ.

ತತೋ ರಾಗಃ ಪ್ರಭವತಿ ದ್ವೇಷಶ್ಚ ತದನನ್ತರಮ್ ।
ತತೋ ಲೋಭಃ ಪ್ರಭವತಿ ಮೋಹಶ್ಚ ತದನನ್ತರಮ್ ॥೫॥

ಮೊದಲು ಇಂದ್ರಿಯವಿಷಯಗಳಲ್ಲಿ ಮನುಷ್ಯನಿಗೆ ಅನುರಾಗ ವುಂಟಾಗುತ್ತದೆ. ಪ್ರತಿಕೂಲವಿಷಯಗಳಲ್ಲಿ ದ್ವೇಷವುಂಟಾಗುತ್ತದೆ. ಪ್ರಾಪ್ತ ವಾದ ಅನುಕೂಲವಿಷಯದಲ್ಲಿ ಲೋಭವುಂಟಾಗುತ್ತದೆ. ಅನಂತರ ಮನು ಷ್ಯನು ಇಂದ್ರಿಯವಿಷಯಗಳಲ್ಲಿಯೇ ಮುಳುಗಿ ಮೋಹವಶನಾಗುತ್ತಾನೆ.

ಲೋಭಮೋಹಾಭಿಭೂತಸ್ಯ ರಾಗದ್ವೇಷಾನ್ವಿತಸ್ಯ ಚ ।
ನ ಧರ್ಮೇ ಜಾಯತೇ ಬುದ್ಧಿರ್ವ್ಯಾಜಾದ್ಧರ್ಮಂ ಕರೋತಿ ಚ ॥೬॥

ಲೋಭ-ಮೋಹಗಳಿಂದ ಆವೃತನಾದವನಿಗೆ, ರಾಗ-ದ್ವೇಷಗಳಿಂದ ಯುಕ್ತನಾದವನಿಗೆ–ಧರ್ಮದ ವಿಷಯದಲ್ಲಿ ಬುದ್ಧಿಯು ಹುಟ್ಟುವುದಿಲ್ಲ. ನೆಪಮಾತ್ರಕ್ಕಾಗಿ ಅಥವಾ ತೋರಿಕೆಗಾಗಿ ಅವನು ಧರ್ಮಾಚರಣೆಯನ್ನು ಮಾಡುತ್ತಾನೆ.

ವ್ಯಾಜೇನ ಚರತೇ ಧರ್ಮಮರ್ಥಂ ವ್ಯಾಜೇನ ರೋಚತೇ ।
ವ್ಯಾಜೇನ ಸಿದ್ಧ್ಯಮಾನೇಷು ಧನೇಷು ಕುರುನನ್ದನ ॥೭॥

ತತ್ರೈವ ಕುರುತೇ ಬುದ್ಧಿಂ ತತಃ ಪಾಪಂ ಚಿಕೀರ್ಷತಿ ।
ಸುಹೃದ್ಭಿರ್ವಾರ್ಯಮಾಣೋಽಪಿ ಪಣ್ಡಿತೈಶ್ಚಾಪಿ ಭಾರತ ।
ಉತ್ತರಂ ನ್ಯಾಯಸಮ್ಬದ್ಧಂ ಬ್ರವೀತಿ ವಿಧಿಚೋದಿತಮ್ ॥೮॥

ಅವನು ನೆಪಮಾತ್ರಕ್ಕೆ ಧರ್ಮಾಚರಣೆಯನ್ನು ಮಾಡುತ್ತಾನೆ. ಯಾವುದೋ ನೆಪವನ್ನು ಹೇಳಿ (ಧರ್ಮಕಾರ್ಯದ ಹೆಸರನ್ನು ಹೇಳಿ) ಹಣ ವನ್ನು ಸಂಪಾದಿಸುವುದರಲ್ಲಿಯೇ ಅವನಿಗೆ ಹೆಚ್ಚಿನ ಅಭಿರುಚಿಯಿರುತ್ತದೆ.

ವ್ಯಾಜಾಂತರದಿಂದ ಅವನಿಗೆ ಹಣದ ಸಂಪಾದನೆಯು ಸಿದ್ಧಿಸಿತೆಂದರೆ ಆ ಮಾರ್ಗವನ್ನೇ ಅವನು ಮನಃಪೂರ್ವಕವಾಗಿ ಮುಂದುವರಿಸಿಕೊಂಡು ಹೋಗುತ್ತಾನೆ. ಪಂಡಿತರೂ ಮತ್ತು ಸುಹೃದರೂ ಹಾಗೆ ಮಾಡಬಾರದೆಂದು ತಡೆದರೂ ಅವನು ವಂಚನೆಯ ಮೂಲಕವಾಗಿ ಹಣವನ್ನು ಸಂಪಾದಿಸುವ ಪಾಪಕಾರ್ಯವನ್ನು ಮುಂದುವರಿಸುತ್ತಲೇ ಇರುತ್ತಾನೆ. ಯಾರಾದರೂ ಅವನನ್ನು ಪ್ರಶ್ನಿಸಹೋದರೆ ಶಾಸ್ತ್ರವಾಕ್ಯಗಳನ್ನು ಆಧರಿಸಿ ನ್ಯಾಯಬದ್ಧವಾಗಿ ತೋರುವ ಉತ್ತರವನ್ನೇ ಕೊಡುತ್ತಾನೆ.

ಅಧರ್ಮಸ್ತ್ರಿವಿಧಸ್ತಸ್ಯ ವರ್ಧತೇ ರಾಗಮೋಹಜಃ ।
ಪಾಪಂ ಚಿನ್ತಯತೇ ಚೈವ ಪ್ರಬ್ರವೀತಿ ಕರೋತಿ ಚ ॥೯॥

ರಾಗ-ಮೋಹಗಳ ಪ್ರಭಾವದಿಂದಾಗಿ ಮನುಷ್ಯನಲ್ಲಿ ಮೂರು ವಿಧ ವಾದ ಅಧರ್ಮಗಳು ವೃದ್ಧಿಹೊಂದುತ್ತವೆ. ಅವನು ಯಾವಾಗಲೂ ಪಾಪ ಕಾರ್ಯಗಳನ್ನೇ ಚಿಂತಿಸುತ್ತಿರುತ್ತಾನೆ. ಪಾಪಕಾರ್ಯಗಳ ಮಾತುಗಳನ್ನೇ ಆಡುತ್ತಿರುತ್ತಾನೆ. ಪಾಪಯುಕ್ತವಾದ ಕರ್ಮಗಳನ್ನೇ ಮಾಡುತ್ತಿರುತ್ತಾನೆ.

ತಸ್ಯಾಧರ್ಮಪ್ರವೃತ್ತಸ್ಯ ದೋಷಾನ್ಪಶ್ಯನ್ತಿ ಸಾಧವಃ ।
ಏಕಶೀಲಾಶ್ಚ ಮಿತ್ರತ್ವಂ ಭಜನ್ತೇ ಪಾಪಕರ್ಮಿಣಃ ॥೧೦॥

ಸ ನೇಹ ಸುಖಮಾಪ್ನೋತಿ ಕುತ ಏವ ಪರತ್ರ ವೈ ॥೧೧॥

ಸತ್ಪುರುಷರು ಅಧರ್ಮಪ್ರವೃತ್ತನಾದ ಅಂತಹ ಮನುಷ್ಯನಲ್ಲಿರುವ ದೋಷಗಳನ್ನು ತಿಳಿದುಕೊಳ್ಳುತ್ತಾರೆ. (ಆದುದರಿಂದ ಅಂತಹವರಿಂದ ಸತ್ಪುರುಷರು ಬಹಳ ದೂರವಾಗಿರುತ್ತಾರೆ.) ಪಾಪಿಷ್ಠರಿಗೆ ಸಮಾನವಾದ ಸ್ವಭಾವವುಳ್ಳ ಪಾಪಕರ್ಮಿಗಳು ಆ ಅಧರ್ಮಮಾರ್ಗಿಗಳೊಡನೆ ಮಿತ್ರತ್ವ ವನ್ನು ಬೆಳೆಸುತ್ತಾರೆ. ಹೀಗೆ ಪಾಪಿಷ್ಠರಿಗೆ ಸತ್ಪುರುಷರ ಸಹವಾಸವು ಸಿಕ್ಕಲು ಅವಕಾಶವೇ ಇಲ್ಲದ ಕಾರಣ ಪಾಪಿಷ್ಠನಾದವನು ಈ ಲೋಕದಲ್ಲಿ ಸುಖವನ್ನು ಅನುಭವಿಸುವುದಿಲ್ಲ. ಇಲ್ಲಿಯೇ ಅವನಿಗೆ ಸುಖವಿಲ್ಲವೆಂದಮೇಲೆ ಪರಲೋಕದಲ್ಲಿಯಾದರೂ ಸುಖವು ಹೇಗೆ ಸಿಕ್ಕುತ್ತದೆ?

ಹೀಗೆ ಮನುಷ್ಯನು ಕಾಮ-ಕ್ರೋಧಾದಿಗಳಿಂದ ಆಕ್ರಮಿಸಲ್ಪಟ್ಟು ಪಾಪಿಷ್ಠನಾಗುತ್ತಾನೆ.

ಇನ್ನು ಮುಂದೆ ಧರ್ಮಾತ್ಮನ ವಿಷಯವನ್ನು ಕೇಳು :

ಯಥಾ ಕುಶಲಧರ್ಮಾ ಸ ಕುಶಲಂ ಪ್ರತಿಪದ್ಯತೇ ।
ಕುಶಲೇನೈವ ಧರ್ಮೇಣ ಗತಿಮಿಷ್ಟಾಂ ಪ್ರಪದ್ಯತೇ ॥೧೨॥

ಯಾವ ರೀತಿಯಲ್ಲಿ ಮನುಷ್ಯನು ಶುಭಕರ್ಮಗಳನ್ನು ಮಾಡುವನೋ ಅದೇ ರೀತಿಯಲ್ಲಿ ಅವನು ಶುಭಫಲಗಳನ್ನು ಪಡೆದುಕೊಳ್ಳುತ್ತಾನೆ. ಕ್ಷೇಮಕರವಾದ ಅಂತಹ ಧರ್ಮದಿಂದಲೇ ಅವನು ತನಗೆ ಇಷ್ಟವಾದ ಸದ್ಗತಿಯನ್ನು ಹೊಂದುತ್ತಾನೆ.

ಯ ಏತಾನ್ಪ್ರಜ್ಞಯಾ ದೋಷಾನ್ಪೂರ್ವಮೇವಾನುಪಶ್ಯತಿ ॥೧೩॥

ಕುಶಲಃ ಸುಖದುಃಖಾನಾಂ ಸಾಧೂಂಶ್ಚಾಪ್ಯಥ ಸೇವತೇ ।
ತಸ್ಯ ಸಾಧುಸಮಾಚಾರಾದಭ್ಯಾಸಾಚ್ಚೈವ ವರ್ಧತೇ ॥೧೪॥

ಯಾವನು ತನ್ನ ಬುದ್ಧಿಯಿಂದ ರಾಗ-ದ್ವೇಷಾದಿಗಳನ್ನು ಮೊದಲೇ ತಿಳಿದುಕೊಂಡು ಅವುಗಳಿಗೆ ವಶನಾಗುವುದಿಲ್ಲವೋ–ಅಂತಹವನು ಸುಖ-ದುಃಖಗಳನ್ನು ಸಮಾನವನ್ನಾಗಿ ಕಾಣುವುದರಲ್ಲಿ ಕುಶಲನಾಗುತ್ತಾನೆ. ಅಂತಹ ಕುಶಲಮತಿಯು ಸಾಧು-ಸತ್ಪುರುಷರ ಸೇವೆಯನ್ನು ಮಾಡುತ್ತಾನೆ. ಸತ್ಕರ್ಮಾಚರಣೆಯಿಂದಲೂ, ಸತ್ಸಂಗದಿಂದಲೂ–ಸುಳ್ಳನ್ನು ಹೇಳದಿರುವುದು, ಸರಳತೆಯಿಂದಿರುವುದು–ಇತ್ಯಾದಿ ಸದ್ಗುಣಗಳ ಸತತವಾದ ಅಭ್ಯಾಸದಿಂದಲೂ ಅವನ ಬುದ್ಧಿಯು ವರ್ಧಿಸುತ್ತದೆ.

ಪ್ರಜ್ಞಾ ಧರ್ಮೇ ಚ ರಮತೇ ಧರ್ಮಂ ಚೈವೋಪಜೀವತಿ ।
ಸೋಽಥ ಧರ್ಮಾದವಾಪ್ತೇಷು ಧನೇಷು ಕುರುತೇ ಮನಃ ॥೧೫॥

ಅವನ ಬುದ್ಧಿಯು ಧರ್ಮದಲ್ಲಿಯೇ ರಮಿಸುತ್ತದೆ. ಧರ್ಮವನ್ನೇ ಆಶ್ರಯಿಸುತ್ತದೆ. ಧರ್ಮದಿಂದ ಪ್ರಾಪ್ತವಾದ ಧನದಲ್ಲಿಯೇ ಅವನ ಮನಸ್ಸು ಸಂಲಗ್ನವಾಗುತ್ತದೆ. (ಪಾಪಕಾರ್ಯದ ಮೂಲಕವಾಗಿ ಧನವನ್ನು ಸಂಪಾದಿಸಲು ಇಷ್ಟಪಡುವುದಿಲ್ಲ.)

(ಯಾರಲ್ಲಿಯಾದರೂ ಯಾವುದಾದರೂ ಒಳ್ಳೆಯ ಗುಣಗಳನ್ನು ನೋಡಿದರೆ ಆ ಗುಣಗಳನ್ನು ಒಡನೆಯೇ ಗ್ರಹಿಸುತ್ತಾನೆ ಮತ್ತು ಅದನ್ನು

ಮೈಗೂಡಿಸಿಕೊಳ್ಳುತ್ತಾನೆ. ಶುಭಕಾಮನೆಯುಳ್ಳ ಮಿತ್ರರನ್ನು ಪಡೆದುಕೊಳ್ಳು ತ್ತಾನೆ. ಹೀಗೆ ಮಾಡುವುದರಿಂದ ಮನುಷ್ಯನು ಧರ್ಮಾತ್ಮನಾಗುತ್ತಾನೆ.)

ಸ ಮಿತ್ರಧನಲಾಭಾತ್ತು ಪ್ರೇತ್ಯ ಚೇಹ ಚ ನನ್ದತಿ ।
ಶಬ್ದೇ ಸ್ಪರ್ಶೇ ರಸೇ ರೂಪೇ ತಥಾ ಗನ್ಧೇ ಚ ಭಾರತ ॥೧೭॥

ಪ್ರಭುತ್ವಂ ಲಭತೇ ಜನ್ತುರ್ಧರ್ಮಸ್ಯೈತತ್ಫಲಂ ವಿದುಃ ।
ಸ ತು ಧರ್ಮಫಲಂ ಲಬ್ಧ್ವಾ ನ ಹೃಷ್ಯತಿ ಯುಧಿಷ್ಠಿರ ॥೧೮॥

ಧರ್ಮಾತ್ಮನು ಸನ್ಮಿತ್ರರ ಮತ್ತು ಧರ್ಮಮೂಲವಾದ ಧನದ ಲಾಭದಿಂದ ಇಹ-ಪರಗಳೆರಡರಲ್ಲಿಯೂ ಆನಂದಪಡುತ್ತಾನೆ. ಇಂದ್ರಿ ಯಾರ್ಥಗಳಾದ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳ ಮೇಲೆ ಪ್ರಭುತ್ವವನ್ನು ಹೊಂದುತ್ತಾನೆ. (ವಿಷಯಸುಖಗಳಿಗೆ ಮಾರುಹೋಗುವುದಿಲ್ಲ.) ವಿಷಯ ಸುಖಗಳಿಗೆ ಅಧೀನವಾಗದಿರುವುದೇ ಧರ್ಮಮಾರ್ಗಾನುಸರಣದ ಪರಿ ಣಾಮವೆಂದು ವಿದ್ವಾಂಸರು ತಿಳಿಯುತ್ತಾರೆ. ಧರ್ಮಾತ್ಮನಾದವನು ಧರ್ಮಕಾರ್ಯಕ್ಕೆ ಫಲವನ್ನು ಪಡೆದುಕೊಂಡರೂ ಅದರಿಂದವನು ಹಿಗ್ಗುವುದಿಲ್ಲ.

ಅತೃಪ್ಯಮಾಣೋ ನಿರ್ವೇದಮಾದತ್ತೇ ಜ್ಞಾನಚಕ್ಷುಷಾ ।
ಪ್ರಜ್ಞಾಚಕ್ಷುರ್ಯದಾ ಕಾಮೇ ರಸೇ ಗನ್ಧೇ ನ ರಜ್ಯತೇ ॥೧೯॥

ಶಬ್ದೇ ಸ್ಪರ್ಶೇ ತಥಾ ರೂಪೇ ನ ಚ ಭಾವಯತೇ ಮನಃ ।
ವಿಮುಚ್ಯತೇ ತದಾ ಕಾಮಾನ್ನ ಚ ಧರ್ಮಂ ವಿಮುಞ್ಚತಿ ॥೨೦॥

ಧರ್ಮಾತ್ಮನು ಶುಭಾಶುಭಫಲಗಳಲ್ಲಿ ತೃಪ್ತಿಯನ್ನು ಹೊಂದದೇ ಜ್ಞಾನದೃಷ್ಟಿಯನ್ನು ಆಶ್ರಯಿಸಿ ವೈರಾಗ್ಯವನ್ನು ಹೊಂದುತ್ತಾನೆ. (ಶುಭಾಶುಭ ಫಲಗಳೆರಡನ್ನೂ ದೂರೀಕರಿಸುತ್ತಾನೆ.) ಪ್ರಜ್ಞಾಚಕ್ಷುವು ಯಾವಾಗ ಕಾಮೋಪಭೋಗದಲ್ಲಿಯೂ, ರಸದಲ್ಲಿಯೂ, ಗಂಧದಲ್ಲಿಯೂ ಅನು ರಂಜನೆಯನ್ನು ಹೊಂದುವುದಿಲ್ಲವೋ, ಶಬ್ದ-ಸ್ಪರ್ಶ-ರೂಪಗಳಲ್ಲಿ ಮನಸ್ಸನ್ನು ತೊಡಗಿಸುವುದಿಲ್ಲವೋ–ಆಗ ಸಕಲವಿಧವಾದ ಕಾಮನೆಗಳಿಂದಲೂ ವಿಮುಕ್ತನಾಗುತ್ತಾನೆ. ಧರ್ಮವನ್ನು ತೊರೆಯುವುದಿಲ್ಲ.

ಸರ್ವತ್ಯಾಗೇ ಚ ಯತತೇ ದೃಷ್ಟ್ವಾ ಲೋಕಂ ಕ್ಷಯಾತ್ಮಕಮ್ ।
ತತೋ ಮೋಕ್ಷಾಯ ಯತತೇ ನಾನುಪಾಯಾದುಪಾಯತಃ ॥೨೧॥

ಶನೈರ್ನಿರ್ವೇದಮಾದತ್ತೇ ಪಾಪಂ ಕರ್ಮ ಜಹಾತಿ ಚ ।
ಧರ್ಮಾತ್ಮಾ ಚೈವ ಭವತಿ ಮೋಕ್ಷಂ ಚ ಲಭತೇ ಪರಮ್ ॥೨೨॥

ಪ್ರಪಂಚವು ನಶ್ವರವೆಂದು ಭಾವಿಸಿ ಸರ್ವಸಂಗಪರಿತ್ಯಾಗಮಾಡಲು ಪ್ರಾಜ್ಞನು ಪ್ರಯತ್ನಿಸುತ್ತಾನೆ. ಅಯೋಗ್ಯವಾದ ಉಪಾಯದಿಂದಲ್ಲ. (ಸ್ವರ್ಗಪ್ರಾಪಕವಾದ ಯಜ್ಞವನ್ನು ಮಾಡಿ ಅನಂತರ ಅದರ ಫಲವನ್ನು ತ್ಯಾಗಮಾಡುವುದರಿಂದಲ್ಲ) ಉಪಾಯದಿಂದಲೇ (ಶುಭಾಶುಭಕರ್ಮತ್ಯಾಗ ದಿಂದಲೇ) ಮೋಕ್ಷಕ್ಕೆ ಪ್ರಯತ್ನಿಸುತ್ತಾನೆ. ಹೀಗೆ ಅನುಕ್ರಮವಾಗಿ ವೈರಾಗ್ಯವನ್ನು ಹೊಂದಿ ಸಾಧಕನು ಪಾಪಕರ್ಮಗಳನ್ನು ಸಂಪೂರ್ಣವಾಗಿ ಪರಿತ್ಯಜಿಸುತ್ತಾನೆ. ಅವನು ಹೀಗೆ ಧರ್ಮಾತ್ಮನಾಗಿ ಶ್ರೇಷ್ಠವಾದ ಮೋಕ್ಷವನ್ನು ಹೊಂದುತ್ತಾನೆ.

ಯುಧಿಷ್ಠಿರ! ನೀನು ಕೇಳಿದ ಪಾಪ, ಧರ್ಮ, ವೈರಾಗ್ಯ ಮತ್ತು ಮೋಕ್ಷ–ಇವುಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಯಥಾವತ್ತಾಗಿ ಉತ್ತರಿಸಿ ದ್ದೇನೆ. ಆದುದರಿಂದ ಎಲ್ಲ ಪರಿಸ್ಥಿತಿಗಳಲ್ಲಿಯೂ ಧರ್ಮಮಾರ್ಗದಲ್ಲಿಯೇ ಪ್ರವರ್ತಿಸು. ಧರ್ಮದಲ್ಲಿಯೇ ಯಾವಾಗಲೂ ಸುಪ್ರತಿಷ್ಠಿತರಾಗಿರುವವರಿಗೆ ಶಾಶ್ವತವಾದ ಮೋಕ್ಷಸಿದ್ಧಿಯಾಗುತ್ತದೆ.”

೨೭೩ನೆಯ ಅಧ್ಯಾಯವು ಮುಗಿಯಿತು.

೨೭೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಮೋಕ್ಷಸಾಧನೆಯ ವರ್ಣನೆ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಮೋಕ್ಷಃ ಪಿತಾಮಹೇನೋಕ್ತ ಉಪಾಯಾನ್ನಾನುಪಾಯತಃ ।
ತಮುಪಾಯಂ ಯಥಾನ್ಯಾಯಂ ಶ್ರೋತುಮಿಚ್ಛಾಮಿ ಭಾರತ ॥೧॥

“ಭಾರತನೇ! ನೀನು ‘ಧರ್ಮಾತ್ಮರಾದವರು ಅಯೋಗ್ಯವಾದ ಉಪಾಯದಿಂದ ಮೋಕ್ಷವನ್ನು ಪಡೆಯುವುದಿಲ್ಲ. ಸದುಪಾಯದಿಂದಲೇ

ಪಡೆಯುತ್ತಾರೆ'–ಎಂದು ಹೇಳಿದೆ. ಮೋಕ್ಷಪ್ರಾಪ್ತಿಗೆ ಆ ಸದುಪಾಯವು ಯಾವುದೆಂಬುದನ್ನು ಕೇಳಲು ಇಚ್ಛಿಸಿದ್ದೇನೆ. ದಯಮಾಡಿ ಹೇಳು."

ಭೀಷ್ಮನು ಹೇಳುತ್ತಾನೆ :

"ಮಹಾಪ್ರಾಜ್ಞನೇ! ನಿಷ್ಪಾಪನೇ! ನೀನು ಉಚಿತವಾದ ಉಪಾಯಗಳಿಂದಲೇ ನೈಪುಣ್ಯದೃಷ್ಟಿಯಿಂದ ಸರ್ವಕಾಲದಲ್ಲಿಯೂ ಧರ್ಮವೇ ಮೊದಲಾದ ಪುರುಷಾರ್ಥಗಳನ್ನು ಹುಡುಕುತ್ತಿರುವೆ. ಆದುದರಿಂದ ನೀನು ಕೇಳಿರುವ ವಿಷಯಗಳನ್ನು ನಿನಗೆ ಹೇಳುವುದು ಯುಕ್ತವಾಗಿದೆ.

ಕರಣೇ ಘಟಸ್ಯ ಯಾ ಬುದ್ಧಿರ್ಘಟೋತ್ಪತ್ತೌ ನ ಸಾ ಮತಾ ।
ಏವಂ ಧರ್ಮಾಭ್ಯುಪಾಯೇಷು ನಾನ್ಯಧರ್ಮೇಷು ಕಾರಣಮ್ ॥೩॥

ಗಡಿಗೆಯ ಉತ್ಪತ್ತಿಯ ಕಾಲದಲ್ಲಿ ಯಾವ ಬುದ್ಧಿಯ ಆವಶ್ಯಕತೆಯಿದೆಯೋ–ಅದೇ ಬುದ್ಧಿಯೇ ಗಡಿಗೆಯು ಸಿದ್ಧವಾದ ನಂತರವೂ ಇರಬೇಕಾದ ಆವಶ್ಯಕತೆಯಿಲ್ಲ. ಅದೇ ರೀತಿಯಲ್ಲಿ ಚಿತ್ತಶುದ್ಧಿಗೆ ಉಪಾಯಭೂತವಾದ ಯಜ್ಞಾದಿಗಳ ಧರ್ಮವು ಗುರಿಮುಟ್ಟಿದನಂತರ (ಯಜ್ಞಾದಿ ಕರ್ಮಗಳಿಂದ ಚಿತ್ತಶುದ್ಧಿಯಾದನಂತರ) ಮೋಕ್ಷಸಾಧನರೂಪವಾದ ಶಮ-ದಮಾದಿ ಇತರ ಧರ್ಮಗಳಿಗೆ ಯಜ್ಞಧರ್ಮವು ಕಾರಣವಾಗುವುದಿಲ್ಲ.

ಪೂರ್ವೇ ಸಮುದ್ರೇ ಯಃ ಪನ್ಥಾಃ ಸ ನ ಗಚ್ಛತಿ ಪಶ್ಚಿಮಮ್ ।
ಏಕಃ ಪನ್ಥಾ ಹಿ ಮೋಕ್ಷಸ್ಯ ತನ್ಮೇ ವಿಸ್ತರತಃ ಶೃಣು ॥೪॥

ಪೂರ್ವಸಮುದ್ರಕ್ಕೆ ಹೋಗುವ ಹಾದಿಯು ಪಶ್ಚಿಮಸಮುದ್ರಕ್ಕೆ ಎಂದೂ ಹೋಗುವುದಿಲ್ಲ. ಹಾಗೆಯೇ ಮೋಕ್ಷಕ್ಕೂ ಒಂದೇ ಮಾರ್ಗವಿದೆ. ಅದನ್ನೇ ನಾನು ಸವಿಸ್ತರವಾಗಿ ಹೇಳುವೆನು ; ಕೇಳು, ಯುಧಿಷ್ಠಿರ!

ಕ್ಷಮಯಾ ಕ್ರೋಧಮುಚ್ಛಿನ್ದ್ಯಾತ್ಕಾಮಂ ಸಂಕಲ್ಪವರ್ಜನಾತ್ ।
ಸತ್ತ್ವಸಂಸೇವನಾದ್ಧೀರೋ ನಿದ್ರಾಂ ಚ ಚ್ಛೇತ್ತುಮರ್ಹತಿ ॥೫॥

ಧೀರನಾದ ಮುಮುಕ್ಷುವು ಕ್ಷಮೆಯಿಂದ ಕ್ರೋಧವನ್ನು ತ್ಯಜಿಸಬೇಕು. ಸಂಕಲ್ಪಮಾಡುವುದನ್ನು ಬಿಟ್ಟು ಕಾಮನೆಗಳನ್ನು ತ್ಯಜಿಸಬೇಕು. ಜ್ಞಾನ-ಧ್ಯಾನಾದಿ ಸಾತ್ತ್ವಿಕಗುಣಗಳ ಸಂಸೇವನೆಯಿಂದ ನಿದ್ರೆಯನ್ನು ವಿನಾಶಗೊಳಿಸಬೇಕು.

ಅಪ್ರಮಾದಾದ್ಭಯಂ ರಕ್ಷೇಚ್ಛ್ವಾಸಂ ಕ್ಷೇತ್ರಜ್ಞಶೀಲನಾತ್ ।
ಇಚ್ಛಾಂ ದ್ವೇಷಂ ಚ ಕಾಮಂ ಚ ಧೈರ್ಯೇಣ ವಿನಿವರ್ತಯೇತ್ ॥

ಜಾಗರೂಕತೆಯಿಂದ ಭಯವನ್ನು ದೂರಗೊಳಿಸಬೇಕು. ಕ್ಷೇತ್ರಜ್ಞನ ಸ್ವರೂಪದ ಅನುಸಂಧಾನದಿಂದ ಶ್ವಾಸವನ್ನು ಸ್ಥಗಿತಗೊಳಿಸಬೇಕು. ಇಚ್ಛಾ-ದ್ವೇಷ-ಕಾಮಗಳನ್ನು ಧೈರ್ಯದ ಆಶ್ರಯದಿಂದ ತೊಲಗಿಸಬೇಕು.

ಭ್ರಮಂ ಸಮ್ಮೋಹಮಾವರ್ತಮಭ್ಯಾಸಾದ್ವಿನಿವರ್ತಯೇತ್ ।
ನಿದ್ರಾಂ ಚ ಪ್ರತಿಭಾಂ ಚೈವ ಜ್ಞಾನಾಭ್ಯಾಸೇನ ತತ್ತ್ವವಿತ್ ॥೭॥

ತತ್ತ್ವವನ್ನು ತಿಳಿದಿರುವ ಮುಮುಕ್ಷುವು–ಭ್ರಮೆ, ಮೋಹ, ಸಂಶಯಗಳನ್ನು ಶಾಸ್ತ್ರಾಭ್ಯಾಸದಿಂದಲೂ–ಆಲಸ್ಯ ಮತ್ತು ಪ್ರತಿಭೆ (ಹೊಸ ಹೊಸದಾಗಿ ಪರಬ್ರಹ್ಮಪ್ರಾಪ್ತಿಗೆ ಪ್ರತಿಕೂಲವಾದ ವಿಷಯಗಳು ಹೊಳೆಯುವ ಬುದ್ಧಿ)ಗಳನ್ನು ಜ್ಞಾನದ ಅಭ್ಯಾಸದಿಂದಲೂ ನಿವಾರಣೆಮಾಡಿಕೊಳ್ಳಬೇಕು.*

ಉಪದ್ರವಾಂಸ್ತಥಾ ರೋಗಾನ್ಹಿತಜೀರ್ಣಮಿತಾಶನಾತ್ ।
ಲೋಭಂ ಮೋಹಂ ಚ ಸಂತೋಷಾದ್ವಿಷಯಾಂಸ್ತತ್ತ್ವದರ್ಶನಾತ್ ॥೮॥

ಶಾರೀರಕವಾದ ಉಪದ್ರವಗಳನ್ನೂ ಮತ್ತು ರೋಗಗಳನ್ನೂ ಹಿತಕರವಾದ–ಬೇಗ ಜೀರ್ಣವಾಗುವ ಮಿತವಾದ ಆಹಾರದಿಂದಲೂ, ಲೋಭ-ಮೋಹಗಳನ್ನು ಸಂತೋಷವಾಗಿರುವಿಕೆಯಿಂದಲೂ, ವಿಷಯಸುಖಗಳನ್ನು ಅವುಗಳ ಸ್ವಭಾವವನ್ನು ಯಥಾವತ್ತಾಗಿ ತಿಳಿಯುವುದರಿಂದಲೂ ಪರಿತ್ಯಜಿಸಬೇಕು.

ಅನುಕ್ರೋಶಾದಧರ್ಮಂ ಚ ಜಯೇದ್ಧರ್ಮಮವೇಕ್ಷಯಾ ।
ಆಯತ್ಯಾ ಚ ಜಯೇದಾಶಾಮರ್ಥಂ ಸಂಗವಿವರ್ಜನಾತ್ ॥೯॥

---

* ತಚ್ಚಿನ್ತನಂ ತತ್ಕಥನಮನ್ಯೋನ್ಯಂ ತತ್ಪ್ರಬೋಧನಮ್ । ಏತದೇಕ ಪರತ್ವಂ ಚ ಜ್ಞಾನಾಭ್ಯಾಸಂ ವಿದುರ್ಬುಧಾಃ ॥ ಪರಬ್ರಹ್ಮವಸ್ತುವಿನ ಚಿಂತನೆ, ಪರಬ್ರಹ್ಮದ ವಿಷಯವಾಗಿರುವ ಶಾಸ್ತ್ರಗಳ ಅಧ್ಯಯನ, ಪರಸ್ಪರವಾಗಿ ಅದನ್ನು ಕುರಿತು ಮಾತನಾಡುವುದು–ಇವನ್ನು ವಿದ್ವಾಂಸರು ಜ್ಞಾನಾಭ್ಯಾಸವೆಂದು ಹೇಳುತ್ತಾರೆ.

ಹಿಂಸಾರೂಪವಾದ ಅಧರ್ಮವನ್ನು ದಯಾಪರತೆಯಿಂದ ತ್ಯಜಿಸಬೇಕು. ವಿಚಾರಪೂರ್ವಕವಾಗಿ ಪಾಲನೆಮಾಡುವುದರಿಂದ ಧರ್ಮವನ್ನು ಜಯಿಸಬೇಕು. ಭವಿಷ್ಯದ ಪರಿಣಾಮವನ್ನು ಚಿಂತಿಸುತ್ತಾ ಆಶೆಯನ್ನು ಜಯಿಸಬೇಕು. ಆಸಕ್ತಿಯನ್ನು ತ್ಯಾಗಮಾಡಿ ಅರ್ಥವನ್ನು ಜಯಿಸಬೇಕು.

ಅನಿತ್ಯತ್ವೇನ ಚ ಸ್ನೇಹಂ ಕ್ಷುಧಾಂ ಯೋಗೇನ ಪಣ್ಡಿತಃ ।
ಕಾರುಣ್ಯೇನಾತ್ಮನಾ ಮಾನಂ ತೃಷ್ಣಾಂ ಚ ಪರಿತೋಷತಃ ॥೧೦॥

ವಿದ್ವಾಂಸನಾದವನು ವಸ್ತುಗಳ ಅನಿತ್ಯತೆಯನ್ನು (ವಸ್ತುಗಳು ವಿನಾಶವಾಗುವುದನ್ನು) ಚಿಂತಿಸುತ್ತಾ ಅವುಗಳ ಮೇಲಿನ ಸ್ನೇಹವನ್ನು ತೊರೆಯಬೇಕು. ಯೋಗಾಭ್ಯಾಸದಿಂದ ಹಸಿವನ್ನು ಜಯಿಸಬೇಕು. ಕಾರುಣ್ಯದಿಂದ ಆತ್ಮಾಭಿಮಾನವನ್ನು ತ್ಯಜಿಸಬೇಕು. ನಿತ್ಯಸಂತುಷ್ಟನಾಗಿರುತ್ತಾ ದುರಾಶೆಯನ್ನು ತೊರೆಯಬೇಕು.

ಉತ್ಥಾನೇನ ಜಯೇತ್ತನ್ದ್ರೀಂ ವಿತರ್ಕಂ ನಿಶ್ಚಯಾಜ್ಜಯೇತ್ ।
ಮೌನೇನ ಬಹುಭಾಷ್ಯಂ ಚ ಶೌರ್ಯೇಣ ಚ ಭಯಂ ತ್ಯಜೇತ್ ॥

ನಿರಂತರವಾದ ಉದ್ಯೋಗದಿಂದ ಆಲಸ್ಯವನ್ನು ದೂರಮಾಡಬೇಕು. ಶಾಸ್ತ್ರನಿಶ್ಚಯದಿಂದ ವಿಪರೀತವಾದ ತರ್ಕವನ್ನು ನಿಲ್ಲಿಸಬೇಕು. ಮೌನವ್ರತದಿಂದ ಬಹಳ ಮಾತನಾಡುವುದನ್ನು ನಿಲ್ಲಿಸಬೇಕು. ಶೌರ್ಯದಿಂದ ಭಯವನ್ನು ತ್ಯಜಿಸಬೇಕು.

ಯಚ್ಛೇದ್ವಾಙ್ಮನಸೀ ಬುದ್ಧ್ಯಾ ತಾಂ ಯಚ್ಛೇಜ್ಜ್ಞಾನಚಕ್ಷುಷಾ ।
ಜ್ಞಾನಮಾತ್ಮಾವಬೋಧೇನ ಯಚ್ಛೇದಾತ್ಮಾನಮಾತ್ಮನಾ ।
ತದೇತದುಪಶಾನ್ತೇನ ಬೋದ್ಧವ್ಯಂ ಶುಚಿಕರ್ಮಣಾ ॥೧೨॥

ಬುದ್ಧಿಯಿಂದ ಮಾತು ಮತ್ತು ಮನಸ್ಸನ್ನು (ಮನಸ್ಸಿನಿಂದ ಕೂಡಿದ ಸಕಲೇಂದ್ರಿಯಗಳನ್ನೂ) ನಿಯಂತ್ರಿಸಬೇಕು. ಬುದ್ಧಿಯನ್ನು ವಿವೇಕರೂಪವಾದ ಕಣ್ಣಿನ ಮೂಲಕವಾಗಿ ನಿಯಂತ್ರಿಸಬೇಕು. ಆತ್ಮಜ್ಞಾನದ ಮೂಲಕವಾಗಿ ಶಾಸ್ತ್ರಜ್ಞಾನವನ್ನು ಶಮನಗೊಳಿಸಬೇಕು. ಪರಮಾತ್ಮನ ನಿಯಂತ್ರಣಕ್ಕೆ ಆತ್ಮನನ್ನು ಒಳಪಡಿಸಬೇಕು. (ಆತ್ಮನನ್ನು ಪರಮಾತ್ಮನಲ್ಲಿ ಲೀನ

ಗೊಳಿಸಬೇಕು.) ಹೀಗೆ ಪವಿತ್ರವಾದ ಆಚಾರ-ವಿಚಾರಗಳಿಂದ ಯುಕ್ತನಾದ ಸಾಧಕನು ಸರ್ವಪ್ರಕಾರಗಳಿಂದಲೂ ಉಪರತನಾಗಿ ಶಾಂತಿಯನ್ನು ಹೊಂದಿ ಆತ್ಮವನ್ನು ಸಾಕ್ಷಾತ್ಕರಿಸಿಕೊಳ್ಳಬೇಕು.

ಯೋಗದೋಷಾನ್ಸಮುಚ್ಛಿದ್ಯ ಪಞ್ಚ ಯಾನ್ಕವಯೋ ವಿದುಃ ।
ಕಾಮಂ ಕ್ರೋಧಂ ಚ ಲೋಭಂ ಚ ಭಯಂ ಸ್ವಪ್ನಂ ಚ ಪಞ್ಚಮಮ್ ।
ಪರಿತ್ಯಜ್ಯ ನಿಷೇವೇತ ಯತವಾಗ್ಯೋಗಸಾಧನಾನ್ ॥೧೪॥

ವಿದ್ವಾಂಸರು ಯಾವ ಐದನ್ನು ಯೋಗದೋಷಗಳೆಂದು ಹೇಳುವರೋ ಅಂತಹ ಕಾಮ, ಕ್ರೋಧ, ಲೋಭ, ಭಯ ಮತ್ತು ಐದನೆಯದಾದ ನಿದ್ರೆ–ಇವುಗಳನ್ನು ಬೇರುಸಹಿತವಾಗಿ ಕಿತ್ತುಹಾಕಬೇಕು. ಈ ಐದನ್ನು ಸಂಪೂರ್ಣವಾಗಿ ತ್ಯಜಿಸಿದನಂತರ ಮಾತನ್ನು ಹಿಡಿತದಲ್ಲಿಟ್ಟುಕೊಂಡು (ಹೆಚ್ಚು ಮಾತನ್ನಾಡದೇ ಮಿತಭಾಷಿಯಾಗಿ) ಯೋಗಸಾಧನಗಳನ್ನು ಆಶ್ರಯಿಸಬೇಕು.

ಧ್ಯಾನಮಧ್ಯಯನಂ ದಾನಂ ಸತ್ಯಂ ಹ್ರೀರಾರ್ಜವಂ ಕ್ಷಮಾ ।
ಶೌಚಮಾಹಾರತಃ ಶುದ್ಧಿರಿನ್ದ್ರಿಯಾಣಾಂ ಚ ಸಂಯಮಃ ॥೧೫॥

ಏತೈರ್ವಿವರ್ಧತೇ ತೇಜಃ ಪಾಪ್ಮಾನಮುಪಹನ್ತಿ ಚ ।
ಸಿಧ್ಯನ್ತಿ ಚಾಸ್ಯ ಸಂಕಲ್ಪಾ ವಿಜ್ಞಾನಂ ಚ ಪ್ರವರ್ತತೇ ॥೧೬॥

ಧ್ಯಾನ, ಅಧ್ಯಯನ, ದಾನ, ಸತ್ಯ, ಲಜ್ಜೆ, ಸರಳತೆ, ಕ್ಷಮೆ, ಅಂತಶ್ಶುದ್ಧಿ-ಬಹಿಶ್ಶುದ್ಧಿಗಳು, ಆಹಾರಶುದ್ಧಿ, ಇಂದ್ರಿಯಸಂಯಮ – ಇವುಗಳು ಯೋಗಕ್ಕೆ ಸಾಧನಗಳಾಗಿವೆ. ಇವುಗಳ ಅನುಷ್ಠಾನದಿಂದ ತೇಜಸ್ಸು ವರ್ಧಿಸುತ್ತದೆ. ಇವು ಸಾಧಕನಲ್ಲಿರಬಹುದಾದ ಪಾಪಗಳೆಲ್ಲವನ್ನೂ ಹೋಗಲಾಡಿಸುತ್ತವೆ. ಇವುಗಳಿಂದ ಸಾಧಕನ ಸಂಕಲ್ಪಗಳೆಲ್ಲವೂ ಸಿದ್ಧಿಸುತ್ತವೆ. ಹೃದಯದಲ್ಲಿ ವಿಜ್ಞಾನದ ಆವಿರ್ಭಾವವಾಗುತ್ತದೆ.

ಧೂತಪಾಪಃ ಸ ತೇಜಸ್ವೀ ಲಘ್ವಾಹಾರೋ ಜಿತೇನ್ದ್ರಿಯಃ ।
ಕಾಮಕ್ರೋಧೌ ವಶೇ ಕೃತ್ವಾ ನಿನೀಷೇದ್ಬ್ರಹ್ಮಣಃ ಪದಮ್ ॥೧೭॥

ಹೀಗೆ ಪಾಪದಿಂದ ಮುಕ್ತನಾದ, ಮಿತಾಹಾರಿಯಾದ, ಜಿತೇಂದ್ರಿಯ

ನಾದ, ತೇಜಸ್ವಿಯಾದ ಆ ಸಾಧಕನು ಕಾಮ-ಕ್ರೋಧಗಳನ್ನು ವಶಪಡಿಸಿಕೊಂಡು ಬ್ರಹ್ಮಪದವನ್ನು ಹೊಂದಲು ಇಚ್ಛಿಸಬೇಕು.

ಅಮೂಢತ್ವಮಸಂಗಿತ್ವಂ ಕಾಮಕ್ರೋಧವಿವರ್ಜನಮ್ ।
ಅದೈನ್ಯಮನುದೀರ್ಣತ್ವಮನುದ್ವೇಗೋ ವ್ಯವಸ್ಥಿತಿಃ ॥೧೮॥

ಏಷ ಮಾರ್ಗೋ ಹಿ ಮೋಕ್ಷಸ್ಯ ಪ್ರಸನ್ನೋ ವಿಮಲಃ ಶುಚಿಃ ।
ತಥಾ ವಾಕ್ಕಾಯಮನಸಾಂ ನಿಯಮಃ ಕಾಮತೋಽನ್ಯಥಾ ॥೧೯॥

ಮೂಢನಾಗಿಲ್ಲದೇ ಇರುವುದು, ಅನಾಸಕ್ತಿ, ಕಾಮ-ಕ್ರೋಧಗಳ ತ್ಯಾಗ, ದೈನ್ಯವಿಲ್ಲದಿರುವುದು, ಗರ್ವವಿಲ್ಲದಿರುವುದು, ಉದ್ವೇಗವಿಲ್ಲದಿರುವುದು, ಚಿತ್ತಸ್ಥಿರತೆ, ವಾಕ್ಕಾಯ-ಮನಸ್ಸುಗಳ ನಿಯಮನ, ನಿಷ್ಕಾಮಭಾವ– ಇವುಗಳು ಮೋಕ್ಷಕ್ಕೆ ಸ್ವಚ್ಛವಾದ, ನಿರ್ಮಲವಾದ ಮತ್ತು ಪವಿತ್ರವಾದ ಮಾರ್ಗವಾಗಿವೆ."

೨೭೪ನೆಯ ಅಧ್ಯಾಯವು ಮುಗಿಯಿತು.

೨೭೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜೀವಾತ್ಮನು ದೇಹಭಾವದಿಂದ ಮುಕ್ತನಾಗುವ ವಿಷಯದಲ್ಲಿ ನಾರದ ಮತ್ತು ಅಸಿತದೇವಲರ ಸಂವಾದ

ಪಾರಿಕ್ಷಿತ! ಭೀಷ್ಮನು ಮುಂದುವರಿದು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ನಾರದರಿಗೂ ಮತ್ತು ಅಸಿತದೇವಲನಿಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಹಿಂದೊಮ್ಮೆ ನಾರದರು–ಬುದ್ಧಿವಂತರಲ್ಲಿ ಶ್ರೇಷ್ಠನಾದ, ವೃದ್ಧನಾದ ದೇವಲನು ಆಸನದಲ್ಲಿ ಶಾಂತಮನಸ್ಕನಾಗಿ ಕುಳಿತಿರುವುದನ್ನು ತಿಳಿದು ಪ್ರಾಣಿಗಳ ಉತ್ಪತ್ತಿ ಮತ್ತು ಲಯಗಳ ವಿಷಯವಾಗಿ ದೇವಲನನ್ನು ಪ್ರಶ್ನಿಸಿದರು :

ಕುತಃ ಸೃಷ್ಟಮಿದಂ ವಿಶ್ವಂ ಬ್ರಹ್ಮನ್ಸ್ಥಾವರಜಙ್ಗಮಮ್ ।
ಪ್ರಲಯೇ ಚ ಕಮಭ್ಯೇತಿ ತದ್ಭವಾನ್ಪ್ರಬ್ರವೀತು ಮೇ ॥೩॥

"ಬ್ರಹ್ಮನ್! ಸಮಸ್ತವಾದ ಈ ಚರಾಚರಜಗತ್ತು ಎಲ್ಲಿಂದ ಸೃಷ್ಟ

ವಾಯಿತು? ಹಾಗೂ ಪ್ರಲಯದಲ್ಲಿ ಯಾರಲ್ಲಿ ಲಯಹೊಂದುತ್ತದೆ?–ಈ ವಿಷಯವನ್ನು ದಯಮಾಡಿ ತಿಳಿಸು.”

ಯೇಭ್ಯಃ ಸೃಜತಿ ಭೂತಾನಿ ಕಾಲೇ ಭಾವಪ್ರಚೋದಿತಃ ।
ಮಹಾಭೂತಾನಿ ಪಞ್ಚೇತಿ ತಾನ್ಯಾಹುರ್ಭೂತಚಿನ್ತಕಾಃ ॥೪॥

ನಾರದರ ಪ್ರಶ್ನೆಗೆ ಉತ್ತರವಾಗಿ ದೇವಲನು ಹೇಳಿದನು :

“ದೇವರ್ಷಿಯೇ! ಸೃಷ್ಟಿಕಾಲದಲ್ಲಿ ಪರಮಾತ್ಮನು ಪ್ರಾಣಿಗಳ ವಾಸನಾಭಾವದಿಂದ ಪ್ರಚೋದಿತನಾಗಿ, ಸಮಯಗಳಲ್ಲಿ ಯಾವ ತತ್ತ್ವಗಳ ಮೂಲಕವಾಗಿ ಪ್ರಾಣಿಗಳನ್ನು ಸೃಷ್ಟಿಮಾಡುವನೋ–ಅವುಗಳನ್ನು ಭೌತಿಕ ವಿಜ್ಞಾನಿಗಳು ಪಂಚಮಹಾಭೂತಗಳೆಂದು ಹೇಳುತ್ತಾರೆ.

ತೇಭ್ಯಃ ಸೃಜತಿ ಭೂತಾನಿ ಕಾಲ ಆತ್ಮಪ್ರಚೋದಿತಃ ।
ಏತೇಭ್ಯೋ ಯಃ ಪರಂ ಬ್ರೂಯಾದಸದ್ಬ್ರೂಯಾದಸಂಶಯಮ್ ॥೫॥

ಪರಮಾತ್ಮನ ಪ್ರೇರಣೆಯಂತೆ ಕಾಲನು ಈ ಪಂಚತತ್ತ್ವಗಳ ಮೂಲಕ ವಾಗಿ ಸಮಸ್ತಪ್ರಾಣಿಗಳನ್ನೂ ಸೃಷ್ಟಿಮಾಡುತ್ತಾನೆ. ಈ ತತ್ತ್ವಗಳಿಗಿಂತಲೂ ಭಿನ್ನವಾದ ಅನ್ಯತತ್ತ್ವದಿಂದ ಪ್ರಪಂಚದ ಸೃಷ್ಟಿಯಾಗಿದೆಯೆಂದು ಯಾರು ಹೇಳುವರೋ–ಅವರು ನಿಸ್ಸಂದೇಹವಾಗಿ ಸುಳ್ಳನ್ನೇ ಹೇಳುವವರಾಗಿದ್ದಾರೆ.

ವಿದ್ಧಿ ನಾರದ ಪಞ್ಚೈತಾಞ್ಶಾಶ್ವತಾನಚಲಾನ್ಧ್ರುವಾನ್ ।
ಮಹತಸ್ತೇಜಸೋ ರಾಶೀನ್ಕಾಲಷಷ್ಠಾನ್ಸ್ವಭಾವತಃ ॥೬॥

ನಾರದ! ಪಂಚಮಹಾಭೂತಗಳು ಮತ್ತು ಆರನೆಯದಾದ ಕಾಲ–ಈ ಆರು ಶಾಶ್ವತವಾದುವುಗಳೆಂದೂ, ಅಚಲವಾದುವುಗಳೆಂದೂ, ಸ್ಥಿರವಾದುವು ಗಳೆಂದೂ ತಿಳಿ. ಸ್ವಾಭಾವಿಕವಾಗಿ ಇವುಗಳು ಮಹತ್ತತ್ತ್ವದ ತೇಜೋರಾಶಿಗಳೇ ಆಗಿವೆ.

ಆಪಶ್ಚೈವಾನ್ತರಿಕ್ಷಂ ಚ ಪೃಥಿವೀ ವಾಯುಪಾವಕೌ ।
ನಾಸೀದ್ಧಿಪರಮಂ ತೇಭ್ಯೋ ಭೂತೇಭ್ಯೋ ಮುಕ್ತಸಂಶಯಮ್ ॥೭॥

ನೀರು, ಆಕಾಶ, ಪೃಥ್ವೀ, ವಾಯು ಮತ್ತು ಅಗ್ನಿ–ಈ ಪಂಚಮಹಾ ಭೂತಗಳಿಂದ ಭಿನ್ನವಾದ ಬೇರೆ ಯಾವ ತತ್ತ್ವವೂ ಯಾವಾಗಲೂ ಇರುವುದಿಲ್ಲ. ಇದರಲ್ಲಿ ಸಂದೇಹವೇ ಇಲ್ಲ.

ನೋಪಪತ್ತ್ಯಾ ನ ವಾ ಯುಕ್ತ್ಯಾ ತ್ವಸದ್ಬ್ರೂಯಾದಸಂಶಯಮ್ ।
ವೇತ್ಥೈತಾನಭಿನಿರ್ವೃತ್ತಾನ್ಷಡೇತೇ ಯಸ್ಯ ರಾಶಯಃ ॥೮॥

ಯಾವುದೇ ಯುಕ್ತಿಯಿಂದಾಗಲೀ ಪ್ರಮಾಣದಿಂದಾಗಲೀ–ಈ ಆರಕ್ಕಿಂತಲೂ ಬೇರೆಯದಾದ ತತ್ತ್ವವನ್ನು ಹೇಳಲು ಸಾಧ್ಯವೇ ಇಲ್ಲ. ಹಾಗೆ ಯಾರಾದರೂ ಆರಕ್ಕಿಂತಲೂ ಬೇರೆಯದಾದ ತತ್ತ್ವವಿರುವುದೆನ್ನುವುದಾದರೆ ಅವರು ಸುಳ್ಳುಹೇಳುತ್ತಿರುವರೆಂದು ನಿಃಸಂದೇಹವಾಗಿ ಹೇಳಬಹುದು. ಈ ಆರು ತತ್ತ್ವಗಳು ಸರ್ವತ್ರ ಎಲ್ಲಾ ಕಾರ್ಯಗಳಲ್ಲಿಯೂ ಅನುಗತವಾಗಿರುವುದನ್ನೂ–ಆ ಕಾರ್ಯಗಳು ಯಾವುವೆಂಬುದನ್ನೂ ತಿಳಿದುಕೊಳ್ಳಬೇಕು.

ಪಞ್ಚೈವ ತಾನಿ ಕಾಲಶ್ಚ ಭಾವಾಭಾವೌ ಚ ಕೇವಲೌ ।
ಅಷ್ಟೌ ಭೂತಾನಿ ಭೂತಾನಾಂ ಶಾಶ್ವತಾನಿ ಭವಾತ್ಯಯೌ ॥೯॥

ಪಂಚಮಹಾಭೂತಗಳು, ಕಾಲ, ವಿಶುದ್ಧಭಾವ ಮತ್ತು ಅಭಾವ (ನಿತ್ಯವಾದ ಆತ್ಮತತ್ತ್ವ ಮತ್ತು ಪರಿವರ್ತನಶೀಲವಾದ ಮಹತ್ತತ್ತ್ವ)–ಈ ಎಂಟು ತತ್ತ್ವಗಳೂ ನಿತ್ಯವಾದುವುಗಳು. ಈ ಅಷ್ಟತತ್ತ್ವಗಳೇ ಚರಾಚರಪ್ರಾಣಿಗಳ ಉತ್ಪತ್ತಿಗೂ ಮತ್ತು ಲಯಕ್ಕೂ ಕಾರಣಗಳಾಗಿವೆ.

ಅಭಾವಂ ಯಾನ್ತಿ ತೇಷ್ವೇವ ತೇಭ್ಯಶ್ಚ ಪ್ರಭವನ್ತ್ಯಪಿ ।
ವಿನಷ್ಟೋಽಪ್ಯನು ತಾನ್ಯೇವ ಜನ್ತುರ್ಭವತಿ ಪಞ್ಚಧಾ ॥೧೦॥

ಪ್ರಪಂಚದಲ್ಲಿರುವ ಎಲ್ಲ ಪ್ರಾಣಿಗಳೂ ಈ ತತ್ತ್ವಗಳಲ್ಲಿಯೇ ಲೀನವಾಗುತ್ತವೆ ಮತ್ತು ಇವುಗಳಿಂದಲೇ ಪ್ರಕಟವಾಗುತ್ತವೆ. ವಿನಷ್ಟವಾದ ಪ್ರಾಣಿಯು (ಸತ್ತುಹೋದ ಪ್ರಾಣಿಯು) ಪುನಃ ಐದು ಭಾಗಗಳಾಗಿ ವಿಭಕ್ತವಾಗಿ ಆಯಾಯಾ ಭೂತಗಳಲ್ಲಿಯೇ ವಿಲೀನವಾಗುತ್ತದೆ.

ತಸ್ಯ ಭೂಮಿಮಯೋ ದೇಹಃ ಶ್ರೋತ್ರಮಾಕಾಶಸಮ್ಭವಮ್ ।
ಸೂರ್ಯಾಚ್ಚಕ್ಷುರಸುರ್ವಾಯೋರದ್ಭ್ಯಸ್ತು ಖಲು ಶೋಣಿತಮ್ ॥೧೧॥

ಪ್ರಾಣಿಯ ದೇಹವು ಪೃಥಿವೀಭೂತಮಯವಾಗಿರುತ್ತದೆ. ಪ್ರಾಣಿಯು ವಿನಷ್ಟವಾದನಂತರ ಭೂಮಿಯಲ್ಲಿ ಲೀನವಾಗುತ್ತದೆ. ಕಿವಿಗಳು ಆಕಾಶಭೂತದಿಂದ ಹುಟ್ಟಿರುತ್ತವೆ. ಪ್ರಾಣಿಯು ವಿನಷ್ಟವಾದನಂತರ ಕಿವಿಗಳು ಆಕಾಶದಲ್ಲಿ ವಿಲೀನವಾಗುತ್ತವೆ. ಕಣ್ಣುಗಳು ತೇಜೋಮಯನಾದ ಸೂರ್ಯನಿಂದ ಹುಟ್ಟಿರುತ್ತವೆ. ಪ್ರಾಣಿಯು ವಿನಷ್ಟವಾದನಂತರ ಕಣ್ಣುಗಳು ತೇಜಸ್ಸಿನಲ್ಲಿ (ಅಗ್ನಿಭೂತದಲ್ಲಿ) ಸೇರಿಹೋಗುತ್ತವೆ. ಪ್ರಾಣವು ವಾಯುವಿನಿಂದ ಹುಟ್ಟಿರುತ್ತದೆ. ಪ್ರಾಣಿಯು ವಿನಷ್ಟವಾದನಂತರ ಪ್ರಾಣವು ವಾಯುವಿನಲ್ಲಿ ಲೀನವಾಗುತ್ತದೆ. ರಕ್ತವು ನೀರಿನಿಂದ ಹುಟ್ಟಿರುತ್ತದೆ. ಪ್ರಾಣಿಯು ವಿನಷ್ಟವಾದ ನಂತರ ರಕ್ತವು ನೀರಿನಲ್ಲಿ (ಅಬ್ಭೂತದಲ್ಲಿ) ಸೇರಿಹೋಗುತ್ತದೆ.

ಚಕ್ಷುಷೀ ನಾಸಿಕಾ ಕರ್ಣೌ ತ್ವಗ್ಜಿಹ್ವೇತಿ ಚ ಪಞ್ಚಮೀ ।
ಇನ್ದ್ರಿಯಾಣೀನ್ದ್ರಿಯಾರ್ಥಾನಾಂ ಜ್ಞಾನಾನಿ ಕವಯೋ ವಿದುಃ ॥೧೨॥

ಕಣ್ಣು, ಮೂಗು, ಕಿವಿ, ಚರ್ಮ ಮತ್ತು ನಾಲಿಗೆ-ಈ ಐದು ಜ್ಞಾನೇಂದ್ರಿಯಗಳೆಂದೂ–ವಿಷಯಗಳನ್ನು ಗ್ರಹಿಸತಕ್ಕುವುಗಳೆಂದೂ ವಿದ್ವಾಂಸರು ಹೇಳುತ್ತಾರೆ.

ದರ್ಶನಂ ಶ್ರವಣಂ ಘ್ರಾಣಂ ಸ್ಪರ್ಶನಂ ರಸನಂ ತಥಾ ।
ಉಪಪತ್ತ್ಯಾ ಗುಣಾನ್ವಿದ್ಧಿ ಪಞ್ಚ ಪಞ್ಚಸು ಪಞ್ಚಧಾ ॥೧೩॥

ಹೊರಗಿನ ಪದಾರ್ಥಗಳನ್ನು ನೋಡುವುದು, ಕೇಳುವುದು, ವಾಸನೆ ನೋಡುವುದು, ಸ್ಪರ್ಶಿಸುವುದು ಮತ್ತು ರುಚಿ ನೋಡುವುದು–ಇವುಗಳು ಕ್ರಮವಾಗಿ ಕಣ್ಣು, ಕಿವಿ, ಮೂಗು, ತ್ವಚೆ ಮತ್ತು ನಾಲಿಗೆ–ಈ ಐದು ಇಂದ್ರಿಯಗಳ ಐದು ವಿಧವಾದ ವಿಷಯಗಳಲ್ಲಿ (ಗುಣಗಳಲ್ಲಿ) ಐದು ಪ್ರಕಾರಗಳಾಗಿವೆ. (ದರ್ಶನಾದಿ ಕ್ರಿಯೆಗಳ ರೂಪದಲ್ಲಿವೆ.)

ರೂಪಂ ಗನ್ಧೋ ರಸಃ ಸ್ಪರ್ಶಃ ಶಬ್ದಶ್ಚೈವಾಥ ತದ್ಗುಣಾಃ ।
ಇನ್ದ್ರಿಯೈರುಪಲಭ್ಯನ್ತೇ ಪಞ್ಚಧಾ ಪಞ್ಚ ಪಞ್ಚಭಿಃ ॥೧೪॥

ನೇತ್ರವೇ ಮೊದಲಾದ ಪಂಚೇಂದ್ರಿಯಗಳ ಮೂಲಕವಾಗಿ ರೂಪ, ಗಂಧ, ರಸ, ಸ್ಪರ್ಶ ಮತ್ತು ಶಬ್ದ–ಈ ಪಂಚಗುಣಗಳೂ ದರ್ಶನ, ಘ್ರಾಣ,

ಆಸ್ವಾದನ, ಸ್ಪರ್ಶನ ಮತ್ತು ಶ್ರವಣ–ಈ ಐದು ಪ್ರಕಾರವಾಗಿ ಪ್ರಕಟವಾಗುತ್ತವೆ.

ರೂಪಂ ಗನ್ಧಂ ರಸಂ ಸ್ಪರ್ಶಂ ಶಬ್ದಂ ಚೈವಾಥ ತದ್ಗುಣಾನ್ ।
ಇನ್ದ್ರಿಯಾಣಿ ನ ಬುಧ್ಯನ್ತೇ ಕ್ಷೇತ್ರಜ್ಞಸ್ತೈಸ್ತು ಬುಧ್ಯತೇ ॥೧೫॥

ರೂಪ, ಗಂಧ, ರಸ, ಸ್ಪರ್ಶ, ಶಬ್ದಗಳೆಂಬ ಈ ಐದು ಇಂದ್ರಿಯಗುಣಗಳನ್ನು ಇಂದ್ರಿಯಗಳು ತಾವೇ ತಿಳಿಯಲಾರವು. ಈ ಐದು ಇಂದ್ರಿಯಗಳ ಮೂಲಕವಾಗಿ ಕ್ಷೇತ್ರಜ್ಞನು (ಜೀವಾತ್ಮನು) ಈ ಐದು ಗುಣಗಳನ್ನೂ ಅನುಭವಿಸುತ್ತಾನೆ.

(ಇಂದ್ರಿಯಗಳು ಸಲಕರಣೆಗಳು ಮಾತ್ರ. ಪಾಯಸದ ಪಾತ್ರೆಯಲ್ಲಿನ ಸೌಟು ಇದ್ದಂತೆ. ಅವುಗಳೇ ವಿಷಯಗಳನ್ನು ಆಸ್ವಾದಿಸಲಾರವು.)

ಚಿತ್ತಮಿನ್ದ್ರಿಯಸಂಘಾತಾತ್ಪರಂ ತಸ್ಮಾತ್ಪರಂ ಮನಃ ।
ಮನಸಸ್ತು ಪರಾ ಬುದ್ಧಿಃ ಕ್ಷೇತ್ರಜ್ಞೋ ಬುದ್ಧಿತಃ ಪರಃ ॥೧೬॥

ಶರೀರ ಮತ್ತು ಇಂದ್ರಿಯಸಮುದಾಯಗಳಿಗಿಂತಲೂ ಚಿತ್ತವು ಶ್ರೇಷ್ಠವಾದುದು. ಚಿತ್ತಕ್ಕಿಂತಲೂ ಮನಸ್ಸು ಶ್ರೇಷ್ಠವಾದುದು. ಮನಸ್ಸಿಗಿಂತಲೂ ಬುದ್ಧಿಯು ಶ್ರೇಷ್ಠವಾದುದು. ಕ್ಷೇತ್ರಜ್ಞನು (ಜೀವಾತ್ಮನು) ಬುದ್ಧಿಗಿಂತಲೂ ಶ್ರೇಷ್ಠನಾದವನು.

ಪೂರ್ವಂ ಚೇತಯತೇ ಜನ್ತುರಿನ್ದ್ರಿಯೈರ್ವಿಷಯಾನ್ಪೃಥಕ್ ।
ವಿಚಾರ್ಯ ಮನಸಾ ಪಶ್ಚಾದಥ ಬುದ್ಧ್ಯಾ ವ್ಯವಸ್ಯತಿ ।
ಇನ್ದ್ರಿಯೈರುಪಲಬ್ಧಾರ್ಥಾನ್ಬುದ್ಧಿಮಾಂಸ್ತು ವ್ಯವಸ್ಯತಿ ॥೧೭॥

ಜೀವನು ಮೊದಲು ಇಂದ್ರಿಯಗಳ ಮೂಲಕವಾಗಿ ವಿಷಯಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಗ್ರಹಿಸುತ್ತಾನೆ. (ಜೀವನು ಕಣ್ಣಿನ ಮೂಲಕವಾಗಿ ಹಣ್ಣನ್ನು ನೋಡುತ್ತಾನೆ ಇತ್ಯಾದಿ) ಇಂದ್ರಿಯಗಳ ಮೂಲಕವಾಗಿ ಜೀವನಿಗೆ ವಿಷಯಗಳನ್ನು ಗ್ರಹಿಸಿಕೊಡುವುದು ಚಿತ್ತದ ಕೆಲಸ. ಎರಡನೆಯದಾಗಿ ಮನಸ್ಸು ಇಂದ್ರಿಯಾರ್ಥದ ವಿಷಯದಲ್ಲಿ ವಿಚಾರಮಾಡುತ್ತದೆ. (ಕಣ್ಣಿನ ಮೂಲಕವಾಗಿ ಗ್ರಹಿಸಿದ ಹಣ್ಣನ್ನು ತೆಗೆದುಕೊಳ್ಳಬೇಕೋ ಬೇಡವೋ–

ಎಂಬುದನ್ನು ವಿಚಾರಮಾಡುತ್ತದೆ.) ಇಷ್ಟುಮಾತ್ರ ಮನಸ್ಸಿನ ಕೆಲಸ. ಮುಂದೆ ಬುದ್ಧಿಯ ಮೂಲಕವಾಗಿ ಜೀವನು ಒಂದು ನಿರ್ಧಾರಕ್ಕೆ ಬರುತ್ತಾನೆ.

(ಇಂದ್ರಿಯದ ಮೂಲಕವಾಗಿ ನೋಡಿದ ವಿಷಯವನ್ನು (ಹಣ್ಣನ್ನು) ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಎಂಬುದನ್ನು ಅಂತಿಮವಾಗಿ ನಿರ್ಧರಿಸುವುದು ಬುದ್ಧಿಯ ಕೆಲಸವಾಗಿದೆ. ಮುಂದೆ ಬುದ್ಧಿಯುಕ್ತನಾದ ಜೀವನು ಇಂದ್ರಿಯಗಳ ಮೂಲಕ ಉಪಲಬ್ಧವಾದ ವಿಷಯಗಳನ್ನು ಅನುಭವಿಸುತ್ತಾನೆ. [ಹಣ್ಣನ್ನು ಆಸ್ವಾದಿಸುತ್ತಾನೆ.])

ಚಿತ್ತಮಿನ್ದ್ರಿಯಸಂಘಾತಂ ಮನೋ ಬುದ್ಧಿಸ್ತಥಾಷ್ಟಮೀ ।
ಅಷ್ಟೌ ಜ್ಞಾನೇನ್ದ್ರಿಯಾಣ್ಯಾಹುರೇತಾನ್ಯಧ್ಯಾತ್ಮಚಿನ್ತಕಾಃ ॥೧೮॥

ಅಧ್ಯಾತ್ಮತತ್ತ್ವಚಿಂತಕರು ತ್ವಕ್ಚಕ್ಷುಃಶ್ರೋತ್ರಾದಿ ಪಂಚೇಂದ್ರಿಯಗಳು, ಚಿತ್ತ, ಮನಸ್ಸು ಮತ್ತು ಎಂಟನೆಯದಾದ ಬುದ್ಧಿ–ಇವುಗಳನ್ನು ಎಂಟು ಜ್ಞಾನೇಂದ್ರಿಯಗಳೆಂದು ಹೇಳುತ್ತಾರೆ.

ಪಾಣಿಪಾದಂ ಚ ಪಾಯುಶ್ಚ ಮೇಹನಂ ಪಞ್ಚಮಂ ಮುಖಮ್ ।
ಇತಿ ಸಂಶಬ್ದ್ಯಮಾನಾನಿ ಶೃಣು ಕರ್ಮೇನ್ದ್ರಿಯಾಣ್ಯಪಿ ॥೧೯॥

ಕೈಗಳು, ಕಾಲುಗಳು, ಗುದ, ಉಪಸ್ಥ ಮತ್ತು ಮುಖ–ಈ ಐದನ್ನು ಕರ್ಮೇಂದ್ರಿಯಗಳೆಂದು ಕರೆಯುತ್ತಾರೆ. ಇವುಗಳ ವಿವರಣೆಯನ್ನೂ ಕೇಳು.

ಜಲ್ಪನಾಭ್ಯವಹಾರಾರ್ಥಂ ಮುಖಮಿನ್ದ್ರಿಯಮುಚ್ಯತೇ ।
ಗಮನೇನ್ದ್ರಿಯಂ ತಥಾ ಪಾದೌ ಕರ್ಮಣಃ ಕರಣೇ ಕರೌ ॥೨೦॥

ಮಾತನಾಡುವ ಸಲುವಾಗಿಯೂ ಮತ್ತು ತಿನ್ನುವ ಸಲುವಾಗಿಯೂ ಮುಖವು ಕರ್ಮೇಂದ್ರಿಯವಾಗಿ ಇರುವುದು. ಕಾಲುಗಳು ನಡೆಯುವ ಸಲುವಾಗಿಯೂ (ಗಮನೇಂದ್ರಿಯವಾಗಿಯೂ), ಕೈಗಳು ಕಾರ್ಯಮಾಡುವ ಸಲುವಾಗಿಯೂ (ಕರಣೇಂದ್ರಿಯವಾಗಿಯೂ) ಇವೆ.

ಪಾಯೂಪಸ್ಥಂ ವಿಸರ್ಗಾರ್ಥಮಿನ್ದ್ರಿಯೇ ತುಲ್ಯಕರ್ಮಣೀ ।
ವಿಸರ್ಗೇ ಚ ಪುರೀಷಸ್ಯ ವಿಸರ್ಗಂ ಚಾಪಿ ಕಾಮಿಕೇ ॥೨೧॥

ಪಾಯು ಮತ್ತು ಉಪಸ್ಥಗಳು ಕ್ರಮವಾಗಿ ಮಲ-ಮೂತ್ರಗಳನ್ನು ವಿಸರ್ಜಿಸುವ ಸಲುವಾಗಿಯೇ ಇವೆ. ಈ ಎರಡು ಇಂದ್ರಿಯಗಳಿಗೂ ತ್ಯಾಗರೂಪಕರ್ಮವು ಸಮಾನವಾಗಿದೆ. ಗುದವು ಮಲವನ್ನು ವಿಸರ್ಜಿಸುತ್ತದೆ. ಜನನೇಂದ್ರಿಯವು ಮೂತ್ರವನ್ನಲ್ಲದೇ–ಮೈಥುನಸಮಯದಲ್ಲಿ ವೀರ್ಯವನ್ನೂ ವಿಸರ್ಜಿಸುತ್ತದೆ.

ಬಲಂ ಷಷ್ಠಂ ಷಡೇತಾನಿ ವಾಚಾ ಸಮ್ಯಗ್ಯಥಾ ಮಮ ।
ಜ್ಞಾನಚೇಷ್ಟೇನ್ದ್ರಿಯಗುಣಾಃ ಸರ್ವೇಷಾಂ ಶಬ್ದಿತಾ ಮಯಾ ॥೨೨॥

ಈ ಐದು ಕರ್ಮೇಂದ್ರಿಯಗಳಲ್ಲದೇ ಬಲವು (ಪ್ರಾಣಸಮೂಹವು) ಆರನೆಯ ಕರ್ಮೇಂದ್ರಿಯವಾಗಿದೆ. ಹೀಗೆ ನಾನು ನನ್ನ ಮಾತಿನ ಮೂಲಕವಾಗಿ ನಿನಗೆ ಸಮಸ್ತವಾದ ಇಂದ್ರಿಯಗಳನ್ನೂ ಮತ್ತು ಅವುಗಳ ಜ್ಞಾನ, ಕರ್ಮ ಮತ್ತು ಗುಣಗಳನ್ನೂ ವಿವರಿಸಿ ಹೇಳಿದ್ದೇನೆ.

ಇನ್ದ್ರಿಯಾಣಾಂ ಸ್ವಕರ್ಮಭ್ಯಃ ಶ್ರಮಾದುಪರಮೋ ಯದಾ ।
ಭವತೀನ್ದ್ರಿಯಸಂತ್ಯಾಗಾದಥ ಸ್ವಪಿತಿ ವೈ ನರಃ ॥೨೩॥

ಇಂದ್ರಿಯಗಳು ತಮ್ಮ-ತಮ್ಮ ಕಾರ್ಯಗಳನ್ನು ಮಾಡಿ ಶ್ರಮದಿಂದ ಯಾವಾಗ ಶಾಂತವಾಗುವುವೋ–ಆಗ ಜೀವಾತ್ಮನು ಇಂದ್ರಿಯಗಳನ್ನು ತ್ಯಾಗ ಮಾಡಿ ನಿದ್ರಿಸುತ್ತಾನೆ.

ಇನ್ದ್ರಿಯಾಣಾಂ ವ್ಯುಪರಮೇ ಮನೋಽಪ್ಯುಪರತಂ ಯದಿ ।
ಸೇವತೇ ವಿಷಯಾನೇವ ತಂ ವಿದ್ಯಾತ್ಸ್ವಪ್ನದರ್ಶನಮ್ ॥೨೪॥

ಇಂದ್ರಿಯಗಳು ಉಪಶಮನಹೊಂದಿದರೂ ಮನಸ್ಸು ಉಪಶಮನ ಹೊಂದದಿದ್ದರೆ–ನಿದ್ರೆಯಲ್ಲಿಯೂ ಮನಸ್ಸು ವಿಷಯಗಳನ್ನು ಸೇವಿಸುತ್ತಲೇ ಇರುತ್ತದೆ. ಇದನ್ನು ಸ್ವಪ್ನದರ್ಶನಾವಸ್ಥೆಯೆಂದು ತಿಳಿಯಬೇಕು.

ಸಾತ್ತ್ವಿಕಾಶ್ಚೈವ ಯೇ ಭಾವಾಸ್ತಥಾ ತಾಮಸರಾಜಸಾಃ ।
ಕರ್ಮಯುಕ್ತಾನ್ಪ್ರಶಂಸನ್ತಿ ಸಾತ್ತ್ವಿಕಾನಿತರಾಂಸ್ತಥಾ ॥೨೫॥

ಜಾಗ್ರತರಾಗಿರುವಾಗ ಸಾತ್ತ್ವಿಕ - ರಾಜಸ - ತಾಮಸಭಾವನೆಗಳಿಂದ ಕೂಡಿರುವ ಮನುಷ್ಯರು ಕರ್ಮಯುಕ್ತವಾದ ಸಾತ್ತ್ವಿಕ-ರಾಜಸ-ತಾಮಸ

ಭಾವನೆಗಳನ್ನೇ ಕನಸಿನಲ್ಲಿಯೂ ಪ್ರಶಂಸೆಮಾಡುತ್ತಾರೆ. (ಅವರವರ ಗುಣಗಳಿಗೆ ಅನುಗುಣವಾಗಿ ಕನಸುಗಳಾಗುತ್ತವೆ.)

ಆನನ್ದಃ ಕರ್ಮಣಾಂ ಸಿದ್ಧಿಃ ಪ್ರತಿಪತ್ತಿಃ ಪರಾ ಗತಿಃ ।
ಸಾತ್ತ್ವಿಕಸ್ಯ ನಿಮಿತ್ತಾನಿ ಭಾವಾನ್ಸಂಶ್ರಯತೇ ಸ್ಮೃತಿಃ ॥೨೬॥

ಆನಂದ, ಕಾರ್ಯಸಿದ್ಧಿ, ಕರ್ತವ್ಯಜ್ಞಾನ ಮತ್ತು ಉತ್ತಮಗತಿ–ಈ ನಾಲ್ಕೂ ಸತ್ತ್ವಗುಣದ ಭಾವಗಳಾಗಿವೆ. ಸಾತ್ತ್ವಿಕನ ಸ್ಮೃತಿಯು ಈ ನಾಲ್ಕು ಭಾವನೆಗಳನ್ನೂ ಆಶ್ರಯಿಸಿರುತ್ತದೆ.

ಆದುದರಿಂದ ಸಾತ್ತ್ವಿಕನಾದ ಪುರುಷನು ಜಾಗ್ರದವಸ್ಥೆಯಲ್ಲಿರುವಂತೆಯೇ ಸ್ವಪ್ನದಲ್ಲಿಯೂ ಆನಂದಾದಿ ಭಾವನೆಗಳನ್ನು ಸ್ಮರಿಸುತ್ತಾನೆ.

ಜನ್ತುಷ್ವೇಕತಮೇಷ್ವೇವಂ ಭಾವಾ ಯೇ ವಿಧಿಮಾಸ್ಥಿತಾಃ ।
ಭಾವಯೋರೀಪ್ಸಿತಂ ನಿತ್ಯಂ ಪ್ರತ್ಯಕ್ಷಂ ಗಮನಂ ತಯೋಃ ॥೨೭॥

ಸಾತ್ತ್ವಿಕಪ್ರಾಣಿಗಳಿಗಿಂತಲೂ ಭಿನ್ನರಾದ ರಾಜಸ-ತಾಮಸಮನುಷ್ಯರಲ್ಲಿಯೂ ಅವರವರ ಕರ್ಮಗಳನ್ನು ಅನುಸರಿಸಿ ಯಾವ ಭಾವನೆಗಳಿರುತ್ತವೆಯೋ–ಆ ಭಾವನೆಗಳೇ ಅವರ ಸ್ಮೃತಿಯಲ್ಲಿಯೂ ಇರುತ್ತವೆ. ಅರ್ಥಾತ್ ಅಂತಹ ಮನುಷ್ಯರಿಗೆ ಜಾಗ್ರತ್ ಮತ್ತು ಸ್ವಪ್ನ ಈ ಎರಡು ಅವಸ್ಥೆಗಳಲ್ಲಿಯೂ ಅವರವರ ಅಭಿಲಾಷೆಗೆ ಅನುಸಾರವಾಗಿ ರಾಜಸ- ತಾಮಸಪದಾರ್ಥಗಳ ಪ್ರತ್ಯಕ್ಷದರ್ಶನವು ಆಗುತ್ತಲೇ ಇರುತ್ತದೆ.

ಇನ್ದ್ರಿಯಾಣಿ ಚ ಭಾವಾಶ್ಚ ಗುಣಾಃ ಸಪ್ತದಶ ಸ್ಮೃತಾಃ ।
ತೇಷಾಮಷ್ಟಾದಶೋ ದೇಹೀ ಯಃ ಶರೀರೇ ಸ ಶಾಶ್ವತಃ ॥೨೮॥

ಅಥವಾ ಸಶರೀರಾಸ್ತೇ ಗುಣಾಃ ಸರ್ವೇ ಶರೀರಿಣಾಮ್ ।
ಸಂಶ್ರಿತಾಸ್ತದ್ವಿಯೋಗೇ ಹಿ ಸಶರೀರಾ ನ ಸನ್ತಿ ತೇ ॥೨೯॥

ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು, ಚಿತ್ತ, ಮನಸ್ಸು, ಬುದ್ಧಿ, ಪ್ರಾಣ, ಸಾತ್ತ್ವಿಕ-ರಾಜಸ-ತಾಮಸಗಳೆಂಬ ಮೂರು ಭಾವಗಳು–ಹೀಗೆ ಒಟ್ಟು ಹದಿನೇಳು ಗುಣಗಳು ಶರೀರವನ್ನು ಆಶ್ರಯಿಸಿರುತ್ತವೆ. ಶರೀರದಲ್ಲಿರುವ ಜೀವಾತ್ಮನು ಹದಿನೆಂಟನೆಯವನು. ಅವನು ಶಾಶ್ವತನು. ಅಥವಾ ಶರೀರಯುಕ್ತವಾದ ಈ ಎಲ್ಲ ದೇಹಧಾರಿಗಳ ಗುಣ

ಗಳೂ ಜೀವಾತ್ಮನನ್ನು ಆಶ್ರಯಿಸಿರುತ್ತವೆ. ಜೀವಾತ್ಮನ ವಿಯೋಗವಾದೊಡನೆಯೇ ಶರೀರವು ಮೊದಲ್ಗೊಂಡು ಅದರಲ್ಲಿರುವ ಹದಿನೇಳು ಗುಣಗಳೂ ನಷ್ಟವಾಗಿ ಹೋಗುತ್ತವೆ (ಜೀವನೊಡನೆಯೇ ಎಲ್ಲ ಗುಣಗಳೂ ಹೊರಟು ಹೋಗುತ್ತವೆ).

ಅಥವಾ ಸಂನಿಪಾತೋಽಯಂ ಶರೀರಂ ಪಾಞ್ಚಭೌತಿಕಮ್ ।
ಏಕಶ್ಚ ದಶ ಚಾಷ್ಟೌ ಚ ಗುಣಾಃ ಸಹ ಶರೀರಿಣಾ ॥೩೦॥

ಅಥವಾ ಈ ತತ್ತ್ವಗಳ ಸಮುದಾಯವು ಪಾಂಚಭೌತಿಕವಾದ ಶರೀರವಾಗಿದೆ. ಒಂದು ಮಹತ್ತತ್ತ್ವ ಮತ್ತು ಜೀವಸಹಿತವಾದ ಹದಿನೆಂಟು ಗುಣಗಳು–ಇವುಗಳೆಲ್ಲವೂ ಈ ಸಮುದಾಯದಲ್ಲಿಯೇ ಅಂತರ್ಗತವಾಗಿವೆ.

ಊಷ್ಮಣಾ ಸಹ ವಿಂಶೋ ಸಂಘಾತಃ ಪಾಞ್ಚಭೌತಿಕಃ ।
ಮಹಾನ್ಸನ್ಧಾರಯತ್ಯೇತಚ್ಛರೀರಂ ವಾಯುನಾ ಸಹ ॥೩೧॥

ಜಠರಾನಲದೊಡನೆ ಮೇಲೆ ಹೇಳಿದ ತತ್ತ್ವಗಳನ್ನು ಗಣನೆಗೆ ತೆಗೆದುಕೊಂಡರೆ ಪಾಂಚಭೌತಿಕವಾದ ಈ ಶರೀರವು ಇಪ್ಪತ್ತು ಗುಣಗಳ ಸಮುದಾಯವಾಗಿದೆ. ಮಹತ್ತತ್ತ್ವವು ಪ್ರಾಣವಾಯುವಿನೊಡನೆ ಈ ಶರೀರವನ್ನು ಧರಿಸಿದೆ.

ತಸ್ಯ ಪ್ರಭಾವಯುಕ್ತಸ್ಯ ನಿಮಿತ್ತಂ ದೇಹಭೇದನೇ ।
ಯಥೈವೋತ್ಪದ್ಯತೇ ಕಿಂಚಿತ್ಪಞ್ಚತ್ವಂ ಗಚ್ಛತೇ ತಥಾ ॥೩೨॥

ಪುಣ್ಯಪಾಪವಿನಾಶಾನ್ತೇ ಪುಣ್ಯಪಾಪಸಮೀರಿತಃ ।
ದೇಹಂ ವಿಶತಿ ಕಾಲೇನ ತತೋಽಯಂ ಕರ್ಮಸಮ್ಭವಮ್ ॥೩೩॥

ದೇಹದ ವಿನಾಶದಲ್ಲಿ ಪ್ರಭಾವಯುಕ್ತವಾದ ಮಹತ್ತತ್ತ್ವಕ್ಕೆ ವಾಯುವು ನಿಮಿತ್ತಮಾತ್ರದ್ದಾಗಿರುತ್ತದೆ. ಯಾವ ರೀತಿಯಲ್ಲಿ ಘಟಾದಿಗಳು ನಿರ್ಮಾಣಗೊಂಡು ಪುನಃ ನಷ್ಟವಾಗಿ ಹೋಗುವುವೋ–ಅದೇ ರೀತಿಯಲ್ಲಿ ಪ್ರಾರಬ್ಧವಾದ ಪುಣ್ಯ-ಪಾಪಗಳು ಕ್ಷಯಿಸಿದನಂತರ ಶರೀರವು ಪಂಚತ್ವವನ್ನು ಹೊಂದುತ್ತದೆ. (ವಿನಾಶಹೊಂದುತ್ತದೆ.) ಸಂಚಿತವಾದ ಪಾಪ-ಪುಣ್ಯಗಳಿಂದ ಪ್ರೇರಿತವಾದ ಜೀವವು ಸಮಯಾನುಸಾರವಾಗಿ ಕರ್ಮಜನಿತವಾದ ಮತ್ತೊಂದು ಶರೀರವನ್ನು ಪ್ರವೇಶಿಸುತ್ತದೆ.

ಹಿತ್ವಾ ಹಿತ್ವಾ ಹ್ಯಯಂ ಪ್ರೈತಿ ದೇಹಾದ್ದೇಹಂ ಕೃತಾಶ್ರಯಃ ।
ಕಾಲಸಂಚೋದಿತಃ ಕ್ಷೇತ್ರೀ ವಿಶೀರ್ಣಾದ್ವಾ ಗೃಹಾದ್ಗೃಹಮ್ ॥೩೪॥

ಯಾವ ರೀತಿಯಲ್ಲಿ ಒಂದು ಮನೆಯಲ್ಲಿ ವಾಸಮಾಡುವ ಮನುಷ್ಯನು ವಾಸಮಾಡುತ್ತಿದ್ದ ಮನೆಯು ಹಳೆಯದಾದಂತೆ ಬೇರೆಯ ಮನೆಗಳಿಗೆ ವಾಸಮಾಡಲು ಹೋಗುತ್ತಾನೆಯೋ–ಅದೇ ರೀತಿಯಲ್ಲಿ ಕಾಲಪ್ರೇರಿತವಾದ ಜೀವವು ಕ್ರಮವಾಗಿ ಒಂದೊಂದು ಶರೀರವನ್ನು ಬಿಟ್ಟುಹೋಗುತ್ತಾ ಪೂರ್ವ ಜನ್ಮದ ಕರ್ಮಾನುರೂಪವಾಗಿ ನಿರ್ಮಿತವಾದ ಹೊಸ-ಹೊಸ ಶರೀರಗಳನ್ನು ಆಶ್ರಯಿಸುತ್ತಿರುತ್ತದೆ.

ತತ್ರ ನೈವಾನುತಪ್ಯನ್ತೇ ಪ್ರಾಜ್ಞಾ ನಿಶ್ಚಿತನಿಶ್ಚಯಾಃ ।
ಕೃಪಣಾಸ್ತ್ವನುತಪ್ಯನ್ತೇ ಜನಾ ಸಮ್ಬನ್ಧದರ್ಶಿನಃ ॥೩೫॥

ವಿದ್ವಾಂಸರಾದವರು – 'ಆತ್ಮನು ಶರೀರದಿಂದ ಸರ್ವಥಾ ಭಿನ್ನನಾಗಿದ್ದಾನೆ. ಅಸಂಗನೂ ಅವಿನಾಶಿಯೂ ಆಗಿದ್ದಾನೆ'–ಎಂಬ ನಿಶ್ಚಯಾತ್ಮಕ ಜ್ಞಾನವುಳ್ಳವರಾಗಿರುವುದರಿಂದ ದೇಹಾವಸಾನಕ್ಕಾಗಿ ಪರಿತಪಿಸುವುದಿಲ್ಲ. ಆದರೆ ಅಜ್ಞಾನಿಗಳಾದವರು ದೇಹಕ್ಕೂ ಆತ್ಮಕ್ಕೂ ಏಕತಾಸಂಬಂಧವಿರುವುದೆಂಬ ಭಾವನೆಯುಳ್ಳವರಾಗಿರುವುದರಿಂದ (ದೇಹಾತ್ಮಭಾವವುಳ್ಳವರಾಗಿರುವುದರಿಂದ) ಮರಣವನ್ನು ನೆನೆದು ದುಃಖಪಡುತ್ತಾರೆ.

ನ ಹ್ಯಯಂ ಕಸ್ಯಚಿತ್ಕಶ್ಚಿನ್ನಾಸ್ಯ ಕಶ್ಚ ನ ವಿದ್ಯತೇ ।
ಭವತ್ಯೇಕೋ ಹ್ಯಯಂ ನಿತ್ಯಂ ಶರೀರೇ ಸುಖದುಃಖಭಾಕ್ ॥೩೬॥

ಜೀವನು ಯಾರಿಗೂ ಸಂಬಂಧಿಸಿದವನೂ ಅಲ್ಲ. ಜೀವನಿಗೆ ಯಾವ ಸಂಬಂಧಿಯೂ ಇರುವುದಿಲ್ಲ. ಜೀವನು ನಿತ್ಯವೂ ಏಕಾಕಿಯಾಗಿರತಕ್ಕವನು. ಆದರೆ ಶರೀರದಲ್ಲಿದ್ದುಕೊಂಡು ಆ ಶರೀರವನ್ನು ತನ್ನದೆಂದು ಭಾವಿಸಿಕೊಂಡಿರುವುದರಿಂದ ಕರ್ಮಾನುಗುಣವಾಗಿ ಸುಖ-ದುಃಖಗಳನ್ನು ಅನುಭವಿಸುತ್ತಾನೆ.

ನೈವ ಸಂಜಾಯತೇ ಜನ್ತುರ್ನ ಚ ಜಾತು ವಿಪದ್ಯತೇ ।
ಯಾತಿ ದೇಹಮಯಂ ಮುಕ್ತ್ವಾ ಕದಾಚಿತ್ಪರಮಾಂ ಗತಿಮ್ ॥೩೭॥

ಜೀವವು ಹುಟ್ಟುವುದೂ ಇಲ್ಲ ; ಸಾಯುವುದೂ ಇಲ್ಲ. ಯಾವಾಗ ಲಾದರೂ ಈ ತತ್ತ್ವಜ್ಞಾನವುಂಟಾದಾಗ ಜೀವನು ಶರೀರದ ಮೇಲಿನ ಅಭಿಮಾನವನ್ನು ತೊರೆದು ಪರಮಗತಿಯನ್ನು ಹೊಂದುತ್ತಾನೆ.

ಪುಣ್ಯಪಾಪಮಯಂ ದೇಹಂ ಕ್ಷಪಯನ್ಕರ್ಮಸಂಕ್ಷಯಾತ್ ।
ಕ್ಷೀಣದೇಹಃ ಪುನರ್ದೇಹೀ ಬ್ರಹ್ಮತ್ವಮುಪಗಚ್ಛತಿ ॥೩೮॥

ಪುಣ್ಯ-ಪಾಪಮಯವಾಗಿರುವ ಈ ದೇಹವನ್ನು ಜೀವನು ಪ್ರಾರಬ್ಧ ಕರ್ಮಗಳನ್ನು ಅನುಭವಿಸುತ್ತಾ–ಕ್ಷೀಣಿಸುತ್ತಿರುತ್ತಾನೆ. ಹೀಗೆ ಶರೀರವು ನಾಶವಾದನಂತರ (ಪ್ರಾರಬ್ಧಕರ್ಮಗಳೆಲ್ಲವೂ ತೀರಿದನಂತರ) ಮುಕ್ತನಾದ ಆ ಪುರುಷನು ಬ್ರಹ್ಮಭಾವವನ್ನು ಹೊಂದುತ್ತಾನೆ.

ಪುಣ್ಯಪಾಪಕ್ಷಯಾರ್ಥಂ ಹಿ ಸಾಂಖ್ಯಜ್ಞಾನಂ ವಿಧೀಯತೇ ।
ತತ್ಕ್ಷಯೇ ಹ್ಯಸ್ಯ ಪಶ್ಯನ್ತಿ ಬ್ರಹ್ಮಭಾವೇ ಪರಾಂ ಗತಿಮ್ ॥೩೯॥

ಪುಣ್ಯ-ಪಾಪಗಳನ್ನು ಕ್ಷಯಿಸುವುದಕ್ಕಾಗಿಯೇ ಜ್ಞಾನಯೋಗದ ಸಾಧನೆಯು ಹೇಳಲ್ಪಟ್ಟಿದೆ. ಪಾಪ-ಪುಣ್ಯಗಳ ಕ್ಷಯವಾದೊಡನೆಯೇ ಜೀವಾತ್ಮನಿಗೆ ಬ್ರಹ್ಮಭಾವದ ಪ್ರಾಪ್ತಿಯಾಗುತ್ತದೆ. ವಿದ್ವಾಂಸರು ಇದನ್ನೇ ಪರಮಗತಿಯೆಂದು ಭಾವಿಸುತ್ತಾರೆ.”

೨೭೫ನೆಯ ಅಧ್ಯಾಯವು ಮುಗಿಯಿತು.

೨೭೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಆಶಾತ್ಯಾಗದ ವಿಷಯದಲ್ಲಿ ಮಾಂಡವ್ಯಮುನಿಗೂ-ಜನಕನಿಗೂ ನಡೆದ ಸಂವಾದ

ಪಾರಿಕ್ಷಿತ! ಯುಧಿಷ್ಠಿರನು ಹೇಳುತ್ತಾನೆ :

ಭ್ರಾತರಃ ಪಿತರಃ ಪೌತ್ರಾ ಜ್ಞಾತಯಃ ಸುಹೃದಃ ಸುತಾಃ ।
ಅರ್ಥಹೇತೋರ್ಹತಾಃ ಕ್ರೂರೈರಸ್ಮಾಭಿಃ ಪಾಪಕರ್ಮಭಿಃ ॥೧॥
ಯೇಯಮರ್ಥೋದ್ಭವಾ ತೃಷ್ಣಾ ಕಥಮೇತಾಂ ಪಿತಾಮಹ ।
ನಿವರ್ತಯೇಯಂ ಪಾಪಾನಿ ತೃಷ್ಣಯಾ ಕಾರಿತಾ ವಯಮ್ ॥೨॥

"ಪಿತಾಮಹ! ಪಾಪಕರ್ಮಿಗಳಾದ, ಕ್ರೂರಿಗಳಾದ ನಾವು–ಅರ್ಥದ ಕಾರಣಕ್ಕಾಗಿಯೇ ಸಹೋದರರನ್ನೂ, ತಂದೆಗಳನ್ನೂ, ಪೌತ್ರರನ್ನೂ, ಜ್ಞಾತಿಗಳನ್ನೂ, ಸುಹೃದರನ್ನೂ, ಮಕ್ಕಳನ್ನೂ ಸಂಹರಿಸಿದೆವು. ನಮ್ಮ ಈ ತೃಷ್ಣೆಯು ಅರ್ಥದಿಂದಲೇ ಹುಟ್ಟಿದುದಾಗಿದೆ. ಈ ತೃಷ್ಣೆಯ ಕಾರಣದಿಂದಲೇ ನಾವು ಮಹಾಪಾಪಗಳನ್ನು ಮಾಡಿದ್ದೇವೆ. ಮಹಾನುಭಾವ! ನಾವು ಇಂತಹ ತೃಷ್ಣೆಯನ್ನು ದೂರೀಕರಿಸುವುದೆಂತು?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ತೃಷ್ಣೆಯ ವಿಷಯವಾಗಿಯೇ ಪ್ರಶ್ನಿಸಿದ ಮಾಂಡವ್ಯ ಮುನಿಗೆ ವಿದೇಹರಾಜನಾದ ಜನಕನು ಹೇಳಿದ ಇತಿಹಾಸರೂಪವಾದ ಪುರಾತನವಾದ ಗೀತವನ್ನು ಉದಾಹರಿಸುತ್ತಾರೆ. ಅದನ್ನೇ ನಿನಗೂ ಹೇಳುತ್ತೇನೆ ; ಕೇಳು :

ಒಮ್ಮೆ ಜನಕರಾಜನು ಅರಮನೆಗೆ ಆಗಮಿಸಿದ ಮಾಂಡವ್ಯಮಹರ್ಷಿಯನ್ನು ಅರ್ಘ್ಯ-ಪಾದ್ಯಾದಿಗಳಿಂದ ಸತ್ಕರಿಸಿದನು. ಅನಂತರ ಸುಖಾಸನದಲ್ಲಿ ಕುಳಿತು ತೃಷ್ಣೆಯ ವಿಷಯವಾಗಿ ಪ್ರಶ್ನಿಸಿದ ಮಾಂಡವ್ಯಮುನಿಗೆ ಜನಕನು ಹೇಳಿದನು :

ಸುಸುಖಂ ಬತ ಜೀವಾಮಿ ಯಸ್ಯ ಮೇ ನಾಸ್ತಿ ಕಿಂಚನ ।
ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ದಹ್ಯತಿ ಕಿಂಚನ ॥೪॥

"ಮಹರ್ಷಿಯೇ! ನಾನು ಅತ್ಯಂತಸುಖದಿಂದ ಜೀವನವನ್ನು ಕಳೆಯುತ್ತಿದ್ದೇನೆ. ಏಕೆಂದರೆ : ಈ ಪ್ರಪಂಚದಲ್ಲಿ ನನ್ನದೆಂಬ ವಸ್ತುವು ಯಾವುದೂ ಇರುವುದಿಲ್ಲ. ಮಿಥಿಲಾಪಟ್ಟಣವೇ ಸುಟ್ಟುಹೋಗುತ್ತಿದ್ದರೂ ನನ್ನದೆಂಬ ಯಾವ ಪದಾರ್ಥವೂ ಸುಟ್ಟುಹೋಗುವುದಿಲ್ಲ.

ಅರ್ಥಾಃ ಖಲು ಸಮೃದ್ಧಾ ಹಿ ಬಾಢಂ ದುಃಖಂ ವಿಜಾನತಾಮ್ ।
ಅಸಮೃದ್ಧಾಸ್ತ್ವಪಿ ಸದಾ ಮೋಹಯನ್ತ್ಯವಿಚಕ್ಷಣಾನ್ ॥೫॥

ಯಚ್ಚ ಕಾಮಸುಖಂ ಲೋಕೇ ಯಚ್ಚ ದಿವ್ಯಂ ಮಹತ್ಸುಖಮ್ ।
ತೃಷ್ಣಾಕ್ಷಯಸುಖಸ್ಯೈತೇ ನಾರ್ಹತಃ ಷೋಡಶೀಂ ಕಲಾಮ್ ॥೬॥

ತಿಳಿವಳಿಕೆಯುಳ್ಳವರು ಸಮೃದ್ಧವಾದ ಐಶ್ವರ್ಯಗಳೆಲ್ಲವನ್ನೂ ದುಃಖ ದಾಯಕಗಳೆಂದೇ ಭಾವಿಸುತ್ತಾರೆ. ಮೂರ್ಖರಾದವರನ್ನು ಅಲ್ಪೈಶ್ವರ್ಯವೇ ವಿಮೋಹಗೊಳಿಸುತ್ತದೆ. ಲೋಕದಲ್ಲಿ ಕಾಮಸಂಬಂಧವಾದ ಸುಖವು ಯಾವುದಿರುವುದೋ–ಸ್ವರ್ಗಕ್ಕೆ ಸಂಬಂಧಿಸಿದಂತೆ ಮಹಾಸುಖವು ಯಾವುದಿರು ವುದೋ–ಆ ಎರಡು ಸುಖಗಳನ್ನೂ ತೃಷ್ಣಾಕ್ಷಯದಿಂದ ಪ್ರಾಪ್ತವಾಗುವ ಸುಖಕ್ಕೆ ಹೋಲಿಸಿದರೆ ಆ ಸುಖ ಹದಿನಾರನೆಯ ಒಂದು ಭಾಗದಷ್ಟು ಸುಖಕ್ಕೂ ಸಾಟಿಯಾಗುವುದಿಲ್ಲ.

ಯಥೈವ ಶೃಙ್ಗಂ ಗೋಃ ಕಾಲೇ ವರ್ಧಮಾನಸ್ಯ ವರ್ಧತೇ ।
ತಥೈವ ತೃಷ್ಣಾ ವಿತ್ತೇನ ವರ್ಧಮಾನೇನ ವರ್ಧತೇ ॥೭॥

ಹಸುವಿನ ಕರುವು ದೊಡ್ಡದಾದಂತೆ ಶರೀರದೊಡನೆ ಅದರ ಕೊಂಬು ಗಳೂ ಬೆಳೆಯುವಂತೆ ದಿನ-ದಿನಕ್ಕೂ ವರ್ಧಿಸುತ್ತಿರುವ ಧನದೊಡನೆ ಆಸೆಯೂ ವರ್ಧಿಸುತ್ತಿರುತ್ತದೆ.

ಕಿಂಚಿದೇವ ಮಮತ್ವೇನ ಯದಾ ಭವತಿ ಕಲ್ಪಿತಮ್ ।
ತದೇವ ಪರಿತಾಪಾಯ ನಾಶೇ ಸಮ್ಪದ್ಯತೇ ಪುನಃ ॥೮॥

ಯಾವುದೇ ವಸ್ತುವನ್ನೇ ಆಗಲಿ–ನನ್ನದೆಂದು ಭಾವಿಸಿಕೊಂಡರೆ–ಆ ವಸ್ತುವಿನ ಮೇಲೆ ಹೆಚ್ಚಿನ ಮಮತೆಯುಂಟಾಗುತ್ತದೆ. ಆ ವಸ್ತುವೇನಾದರೂ ನಷ್ಟವಾಗಿ ಹೋದರೆ ಪರಿತಾಪಕ್ಕೆ ಕಾರಣವಾಗುತ್ತದೆ.

(ಆದುದರಿಂದ ಯಾವುದೇ ವಸ್ತುವನ್ನೂ ನನ್ನದೆಂದು ಭಾವಿಸಿಕೊಳ್ಳ ಬಾರದು ಮತ್ತು ಯಾವುದರ ಮೇಲೂ ಹೆಚ್ಚು ಮಮತೆಯನ್ನಿಟ್ಟುಕೊಳ್ಳ ಬಾರದು.)

ನ ಕಾಮಾನನುರುಧ್ಯೇತ ದುಃಖಂ ಕಾಮೇಷು ವೈ ರತಿಃ ।
ಪ್ರಾಪ್ಯಾರ್ಥಮುಪಯುಞ್ಜೀತ ಧರ್ಮಂ ಕಾಮಾನ್ವಿವರ್ಜಯೇತ್ ॥೯॥

ಆದುದರಿಂದ ಕಾಮನೆಗಳನ್ನು ಅನುಸರಿಸಿಕೊಂಡು ಹೋಗ ಬಾರದು. ಕಾಮನೆಗಳಲ್ಲಿ ಆಸಕ್ತಿಯು ದುಃಖರೂಪವಾಗಿರುತ್ತದೆ. (ದುಃಖಕ್ಕೆ ಕಾರಣವಾಗುತ್ತದೆ.) ಒಂದು ವೇಳೆ ಧನವನ್ನು ಪಡೆದುಕೊಂಡರೂ

ಅದನ್ನು ಧರ್ಮಕಾರ್ಯದಲ್ಲಿಯೇ ವಿನಿಯೋಗಿಸಬೇಕು. ಕಾಮೋಪಭೋಗಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕು.

ವಿದ್ವಾನ್ಸರ್ವೇಷು ಭೂತೇಷು ಆತ್ಮನಾ ಸೋಪಮೋ ಭವೇತ್ ।
ಕೃತಕೃತ್ಯೋ ವಿಶುದ್ಧಾತ್ಮಾ ಸರ್ವಂ ತ್ಯಜತಿ ಚೈವ ಹ ॥೧೦॥

ವಿದ್ವಾಂಸನಾದವನು ಸರ್ವಪ್ರಾಣಿಗಳ ವಿಷಯದಲ್ಲಿಯೂ–'ತನ್ನಂತೆಯೇ ಅವುಗಳು' – ಎಂಬ ಭಾವನೆಯನ್ನಿಟ್ಟುಕೊಳ್ಳಬೇಕು. ಅದರಿಂದ ಅವನು ಕೃತಕೃತ್ಯನಾಗಿ ಮತ್ತು ಶುದ್ಧಚಿತ್ತನಾಗಿ ಸಮಸ್ತವಾದ ಕಾಮನೆಗಳನ್ನೂ ತ್ಯಾಗಮಾಡುತ್ತಾನೆ.

ಉಭೇ ಸತ್ಯಾನೃತೇ ತ್ಯಕ್ತ್ವಾ ಶೋಕಾನನ್ದೌ ಪ್ರಿಯಾಪ್ರಿಯೇ ।
ಭಯಾಭಯಂ ಚ ಸಂತ್ಯಜ್ಯ ಸ ಪ್ರಶಾನ್ತೋ ನಿರಾಮಯಃ ॥೧೧॥

(ಸಮಾಧಿಸ್ಥನಾಗಿ ಲೌಕಿಕವಾದ) ಸತ್ಯ-ಅನೃತಗಳನ್ನೂ, ಶೋಕ-ಆನಂದಗಳನ್ನೂ, ಪ್ರಿಯಾಪ್ರಿಯಗಳನ್ನೂ, ಭಯಾಭಯಗಳನ್ನೂ ತ್ಯಜಿಸಿದವನಾಗಿ ಪ್ರಶಾಂತನಾಗಿ ನಿರ್ವಿಕಾರನಾಗುತ್ತಾನೆ.

ಯಾ ದುಸ್ತ್ಯಜಾ ದುರ್ಮತಿಭಿರ್ಯಾ ನ ಜೀರ್ಯತಿ ಜೀರ್ಯತಃ ।
ಯೋಽಸೌ ಪ್ರಾಣಾನ್ತಿಕೋ ರೋಗಸ್ತಾಂ ತೃಷ್ಣಾಂ ತ್ಯಜತಃ ಸುಖಮ್ ॥೧೨॥

ಕೆಟ್ಟಬುದ್ಧಿಯುಳ್ಳವರಿಂದ ಯಾವುದನ್ನು ತ್ಯಜಿಸಲು ಸಾಧ್ಯವಾಗುವುದಿಲ್ಲವೋ, ಶರೀರವು ಜೀರ್ಣವಾಗಿ ಹೋಗುತ್ತಿದ್ದರೂ ಯಾವುದು ಜೀರ್ಣವಾಗುವುದಿಲ್ಲವೋ, ಯಾವುದು ಪ್ರಾಣಾಂತಿಕವಾದ ರೋಗವೋ–ಅಂತಹ ತೃಷ್ಣೆಯನ್ನು ತ್ಯಜಿಸುವವನಿಗೆ ಸುಖವುಂಟಾಗುತ್ತದೆ.

ಚಾರಿತ್ರಮಾತ್ಮನಃ ಪಶ್ಯಂಶ್ಚನ್ದ್ರಶುದ್ಧಮನಾಮಯಮ್ ।
ಧರ್ಮಾತ್ಮಾ ಲಭತೇ ಕೀರ್ತಿಂ ಪ್ರೇತ್ಯ ಚೇಹ ಯಥಾಸುಖಮ್ ॥

ನಿಷ್ಕಳಂಕನಾದ ಚಂದ್ರನಂತೆ–ಪರಿಶುದ್ಧನಾಗಿ ತನ್ನ ಚಾರಿತ್ರ್ಯವನ್ನು ಕಾಪಾಡಿಕೊಳ್ಳುತ್ತಾ ಇರುವ ಧರ್ಮಾತ್ಮನು ಈ ಲೋಕದಲ್ಲಿ ಕೀರ್ತಿ

ಯನ್ನೂ–ಸುಖವನ್ನೂ, ಪರಲೋಕದಲ್ಲಿ ಉತ್ತಮವಾದ ಸುಖವನ್ನೂ ಪಡೆಯುತ್ತಾನೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ವಿದೇಹರಾಜನು ಹೇಳಿದ ಮಾತನ್ನು ಕೇಳಿ ಮಾಂಡವ್ಯಮಹರ್ಷಿಯು ಸುಪ್ರೀತನಾದನು. ರಾಜನ ಮಾತನ್ನು ಪ್ರಶಂಸೆ ಮಾಡುತ್ತಾ ಮಾಂಡವ್ಯನು ಮೋಕ್ಷಮಾರ್ಗವನ್ನು ಆಶ್ರಯಿಸಿದನು.”

೨೭೬ನೆಯ ಅಧ್ಯಾಯವು ಮುಗಿಯಿತು.

೨೭೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶರೀರದ ಮತ್ತು ಸಂಸಾರದ ಅನಿತ್ಯತೆ: ಆತ್ಮಕಲ್ಯಾಣವನ್ನು ಇಚ್ಛಿಸುವವನ ಕರ್ತವ್ಯದ ವಿಷಯದಲ್ಲಿ ತಂದೆ-ಮಕ್ಕಳ ಸಂವಾದ

ಮಹಾರಾಜ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅತಿಕ್ರಾಮತಿ ಕಾಲೇಽಸ್ಮಿನ್ಸರ್ವಭೂತಭಯಾವಹೇ ।
ಕಿಂ ಶ್ರೇಯಃ ಪ್ರತಿಪದ್ಯೇತ ತನ್ಮೇ ಬ್ರೂಹಿ ಪಿತಾಮಹ ॥೧॥

“ಪಿತಾಮಹನೇ! ಸಕಲಪ್ರಾಣಿಗಳಿಗೂ ಭಯವನ್ನುಂಟುಮಾಡುವ ಈ ಕಾಲವು ಕಳೆದುಹೋಗುತ್ತಿರಲಾಗಿ (ಯಾವನು ಎಲ್ಲಿಯವರೆಗೆ ಬದುಕಿರುವನೆಂಬ ನಿಶ್ಚಯವಿಲ್ಲದಿರುವಾಗ) ಮನುಷ್ಯನು ಶ್ರೇಯಸ್ಕರವಾದ ಯಾವ ಕಾರ್ಯವನ್ನು ಮಾಡಬೇಕು? ಈ ವಿಷಯವನ್ನು ನನಗೆ ಹೇಳು.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಈ ವಿಷಯದಲ್ಲಿ ತಂದೆಗೆ ಮಗನೊಡನೆ ನಡೆದ ಇತಿಹಾಸರೂಪವಾದ ಹಿಂದಿನ ಸಂವಾದವನ್ನು ಉದಾಹರಿಸುತ್ತಾರೆ. ಅದನ್ನೇ ತಿಳಿಸುವೆನು. ಕೇಳು. ಪ್ರಾಚೀನಕಾಲದಲ್ಲಿ ಸ್ವಾಧ್ಯಾಯಪರಾಯಣನಾದ ಬ್ರಾಹ್ಮಣನೊಬ್ಬನಿಗೆ ಮಹಾಮೇಧಾವಿಯಾದ ಮಗನು ಹುಟ್ಟಿದನು. ಅವನಿಗೆ ‘ಮೇಧಾವೀ’ ಎಂದೇ ನಾಮಕರಣಮಾಡಿದ್ದರು. ಮೋಕ್ಷಧರ್ಮಜ್ಞಾನದಲ್ಲಿ ವಿಚಕ್ಷಣನಾಗಿದ್ದ ಮೇಧಾವಿಯು ಅಧ್ಯಯನ-ಅಧ್ಯಾಪನಗಳಲ್ಲಿಯೇ

ನಿರತನಾಗಿದ್ದ, ಮೋಕ್ಷಧರ್ಮದಲ್ಲಿ ಅಕುಶಲನಾದ ತಂದೆಯನ್ನು ಕುರಿತು ಹೇಳಿದನು :

ಧೀರಃ ಕಿಂಸ್ವಿತ್ತಾತ ಕುರ್ಯಾತ್ಪ್ರಜಾನ-
ನ್ಕ್ಷಿಪ್ರಂ ಹ್ಯಾಯುರ್ಭ್ರಶ್ಯತೇ ಮಾನವಾನಾಮ್ ।
ಪಿತಸ್ತಥಾಽಽಖ್ಯಾಹಿ ಯಥಾರ್ಥಯೋಗಂ
ಮಮಾನುಪೂರ್ವ್ಯಾ ಯೇನ ಧರ್ಮಂ ಚರೇಯಮ್ ॥

"ತಂದೆಯೇ! ಮನುಷ್ಯನ ಆಯುಷ್ಯವು ಶೀಘ್ರಗತಿಯಿಂದ ಕಳೆದು ಹೋಗುತ್ತಿರುತ್ತದೆ. ಈ ವಿಷಯವನ್ನು ಚೆನ್ನಾಗಿ ತಿಳಿದುಕೊಂಡಿರುವ ಧೀರನಾದ ಮನುಷ್ಯನು ಯಾವ ಧರ್ಮವನ್ನು ಅನುಷ್ಠಾನಮಾಡಬೇಕು? ಈಗ ನಾನು ಯಾವ ಧರ್ಮವನ್ನು ಆಚರಿಸಬೇಕೆಂಬುದನ್ನು ತಿಳಿದುಕೊಳ್ಳಲು ಅನುಕ್ರಮವಾಗಿ ಯಥಾವತ್ತಾಗಿ ಹೇಳು."

ತಂದೆಯು ಹೇಳುತ್ತಾನೆ :

ಅಧೀತ್ಯ ವೇದಾನ್ಬ್ರಹ್ಮಚರ್ಯೇಷು ಪುತ್ರ
ಪುತ್ರಾನಿಚ್ಛೇತ್ಪಾವನಾಯ ಪಿತೄಣಾಮ್ ।
ಅಗ್ನೀನಾಧಾಯ ವಿಧಿವಚ್ಚೇಷ್ಟಯಜ್ಞೋ
ವನಂ ಪ್ರವಿಶ್ಯಾಥ ಮುನಿರ್ಬುಭೂಷೇತ್ ॥೬॥

"ಮಗು! ಬ್ರಹ್ಮಚರ್ಯವ್ರತಸ್ಥನಾಗಿದ್ದು ವೇದಗಳನ್ನು ಅಧ್ಯಯನ ಮಾಡಿ, ಪಿತೃಗಳನ್ನು ಪಾವನಗೊಳಿಸಲು (ಪುತ್ ಎಂಬ ನರಕದಿಂದ ಉದ್ಧರಿಸಲು) ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಮಕ್ಕಳನ್ನು ಪಡೆಯುವ ಇಚ್ಛೆಯುಳ್ಳವನಾಗಬೇಕು. ವಿಧಿಪೂರ್ವಕವಾಗಿ ಅಗ್ನಿಗಳನ್ನು ಆಧಾನಮಾಡಿ ಆ ಅಗ್ನಿಗಳಲ್ಲಿ ಅಗ್ನಿಹೋತ್ರಾದಿಯಾಗಗಳನ್ನು ಮಾಡಬೇಕು. ಹೀಗೆ ಯಜ್ಞಾದಿಗಳನ್ನು ಮಾಡಿ ಅನಂತರ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಮುನಿವೃತ್ತಿಯಲ್ಲಿ ಆಸಕ್ತನಾಗಬೇಕು."

ಪುತ್ರನು ಹೇಳುತ್ತಾನೆ :

ಏವಮಭ್ಯಾಹತೇ ಲೋಕೇ ಸರ್ವತಃ ಪರಿವಾರಿತೇ ।
ಅಮೋಘಾಸು ಪತನ್ತೀಷು ಕಿಂ ಧೀರ ಇವ ಭಾಷಸೇ ॥೭॥

"ತಂದೆಯೇ! ಲೋಕವು ಹೀಗೆ ಮರ್ದಿಸಲ್ಪಡುತ್ತಿರುವಾಗ–ಎಲ್ಲ ಕಡೆಗಳಿಂದಲೂ ಆಕ್ರಮಿಸಲ್ಪಡುತ್ತಿರುವಾಗ–ಅಮೋಘವಾದ (ಶಕ್ತಿಗಳು) ಮೇಲೆ ಬೀಳುತ್ತಿರುವಾಗ ಇವುಗಳಾವುದನ್ನೂ ಗಮನಿಸದೇ ನೀನು ಧೀರ ಪುರುಷನಂತೆ ಎಂತಹ ಮಾತುಗಳನ್ನಾಡುತ್ತಿರುವೆ?"

ತಂದೆಯು ಪ್ರಶ್ನಿಸುತ್ತಾನೆ :

ಕಥಮಭ್ಯಾಹತೋ ಲೋಕಃ ಕೇನ ವಾ ಪರಿವಾರಿತಃ ।
ಅಮೋಘಾಃ ಕಾಃ ಪತನ್ತೀಹ ಕಿಂ ನು ಭೀಷಯಸೀವ ಮಾಮ್ ॥

"ಮಗು! ನೀನು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ. ಲೋಕವು ಹೇಗೆ ಮರ್ದಿತವಾಗುತ್ತಿದೆ? ಆಕ್ರಮಣವನ್ನು ಯಾರು ಮಾಡಿದ್ದಾರೆ? ಅಮೋಘವಾದ ಯಾವ ಶಕ್ತಿಗಳು ಮೇಲೆ ಬೀಳುತ್ತಿವೆ? ಹೀಗೆಲ್ಲ ಹೇಳಿ ನನ್ನನ್ನು ಭಯಪಡಿಸುತ್ತಿರುವೆಯಾ?"

ಮಗನು ಉತ್ತರಿಸುತ್ತಾನೆ :

ಮೃತ್ಯುನಾಭ್ಯಾಹತೋ ಲೋಕೋ ಜರಯಾ ಪರಿವಾರಿತಃ ।
ಅಹೋರಾತ್ರಾಃ ಪತನ್ತೀಮೇ ತಚ್ಚ ಕಸ್ಮಾನ್ನ ಬುಧ್ಯಸೇ ॥೯॥

"ತಂದೆಯೇ! ಲೋಕವು ಮೃತ್ಯುವಿನಿಂದ ಮರ್ದಿಸಲ್ಪಡುತ್ತಿದೆ. ಮುಪ್ಪಿನಿಂದ ಆಕ್ರಮಿಸಲ್ಪಟ್ಟಿದೆ. ಅಮೋಘವಾದ ಅಹೋರಾತ್ರಿಗಳು ಮನುಷ್ಯನ ಮೇಲೆ ಬೀಳುತ್ತಾ ಅವನ ಆಯುಷ್ಯವನ್ನು ನಿರಂತರವಾಗಿ ಕಬಳಿಸುತ್ತಲೇ ಇವೆ. ಈ ವಿಷಯವನ್ನು ನೀನೇಕೆ ಇದುವರೆಗೂ ತಿಳಿದುಕೊಂಡಿರುವುದಿಲ್ಲ?

ಯದಾಹಮೇವ ಜಾನಾಮಿ ನ ಮೃತ್ಯುಸ್ತಿಷ್ಠತೀತಿ ಹ ।
ಸೋಽಹಂ ಕಥಂ ಪ್ರತೀಕ್ಷಿಷ್ಯೇ ಜ್ಞಾನೇನಾಪಿ ಹಿತಶ್ಚರನ್ ॥೧೦॥

ಮೃತ್ಯುವು ನನ್ನ ಪ್ರಾರ್ಥನೆಯನ್ನು ಮನ್ನಿಸಿ, ಒಂದರೆಕ್ಷಣವಾದರೂ ನನ್ನಿಂದ ದೂರನಿಲ್ಲುವುದಿಲ್ಲವೆಂಬುದನ್ನು ನಾನು ತಿಳಿದಿರುವೆನು. ಜ್ಞಾನರೂಪವಾದ ಕವಚದಿಂದ ನನ್ನನ್ನು ರಕ್ಷಿಸಿಕೊಳ್ಳದೇ ತಿರುಗುತ್ತಿರುವ ನಾನು ಕಲ್ಯಾಣದ ಸಾಧನೆಗಾಗಿ ಕೂಡಲೇ ಯತ್ನಿಸದೇ ಮುಂದಿನ ದಿನಗಳನ್ನು ಪ್ರತೀಕ್ಷಿಸುತ್ತಾ ಹೇಗೆ ಕುಳಿತಿರಲಿ?

ರಾತ್ರ್ಯಾಂ ರಾತ್ರ್ಯಾಂ ವ್ಯತೀತಾಯಾಮಾಯುರಲ್ಪತರಂ ಯದಾ ।
ಗಾಧೋದಕೇ ಮತ್ಸ್ಯ ಇವ ಸುಖಂ ವಿನ್ದೇತ ಕಸ್ತದಾ ॥೧೧॥

ಒಂದೊಂದು ರಾತ್ರಿಯು ಕಳೆಯುತ್ತಿದ್ದಂತೆಯೇ ಆಯುಷ್ಯವೂ ಕಡಿಮೆಯಾಗುತ್ತಿರುವಾಗ–ಆಳವಿಲ್ಲದ ನೀರಿನಲ್ಲಿರುವ ಮೀನಿನಂತೆ–ಯಾವನು ತಾನೇ ಸುಖವಾಗಿರುತ್ತಾನೆ?

ಪುಷ್ಪಾಣೀವ ವಿಚಿನ್ವನ್ತಮನ್ಯತ್ರ ಗತಮಾನಸಮ್ ।
ಅನವಾಪ್ತೇಷು ಕಾಮೇಷು ಮೃತ್ಯುರಭ್ಯೇತಿ ಮಾನವಮ್ ॥೧೨॥

ಅರಣ್ಯದಲ್ಲಿ ಯಾವುದೋ ಕಡೆಗೆ ಗಮನವಿಟ್ಟು ಹೂಗಳನ್ನು ಬಿಡಿಸುತ್ತಿರುವಾಗ ಹಿಂಸ್ರಪ್ರಾಣಿಯು ಬಂದು ಆಕ್ರಮಿಸುವಂತೆ–ವಿಷಯಭೋಗಗಳಲ್ಲಿಯೇ ಆಸಕ್ತನಾದ ಮಾನವನನ್ನು ಕಾಮನೆಗಳು ಪೂರ್ಣವಾಗದೇ ಇರುವಾಗ ಮೃತ್ಯುವು ಆಕ್ರಮಿಸುತ್ತದೆ.

ಶ್ವಃ ಕಾರ್ಯಮದ್ಯ ಕುರ್ವೀತ ಪೂರ್ವಾಹ್ಣೇ ಚಾಪರಾಹ್ಣಿಕಮ್ ।
ನ ಹಿ ಪ್ರತೀಕ್ಷತೇ ಮೃತ್ಯುಃ ಕೃತಂ ವಾಸ್ಯ ನ ವಾ ಕೃತಮ್ ॥೧೩॥

ನಾಳೆಯ ಕೆಲಸವನ್ನು ಇಂದೇ ಮಾಡಿ ಮುಗಿಸಬೇಕು. ಅಪರಾಹ್ಣದಲ್ಲಿ ಮಾಡಬೇಕಾದ ಕಾರ್ಯವನ್ನು ಪ್ರಾತಃಕಾಲದಲ್ಲಿಯೇ ಮಾಡಬೇಕು. ಒಬ್ಬ ಮನುಷ್ಯನು ಮಾಡಬೇಕಾಗಿರುವ ಕಾರ್ಯವನ್ನು ಮಾಡಿರುವನೇ, ಇಲ್ಲವೇ?–ಎಂಬುದನ್ನು ಮೃತ್ಯುವು ನೋಡುತ್ತಾ ಕುಳಿತಿರುವುದಿಲ್ಲ.

ಅದ್ಯೈವ ಕುರು ಯಚ್ಛ್ರೇಯೋ ಮಾ ತ್ವಾಂ ಕಾಲೋಽತ್ಯಗಾನ್ಮಹಾನ್ ।
ಕೋ ಹಿ ಜಾನಾತಿ ಕಸ್ಯಾದ್ಯ ಮೃತ್ಯುಕಾಲೋ ಭವಿಷ್ಯತಿ ॥೧೪॥

ಶ್ರೇಯಸ್ಕರವಾದ ಕಾರ್ಯವು ಯಾವುದಿರುವುದೋ-ಆ ಕಾರ್ಯವನ್ನು ಕಾಲವು ಅತಿಕ್ರಮಿಸುವ ಮೊದಲೇ ಮಾಡಿ ಮುಗಿಸು. ಇಂದು ಯಾವನಿಗೆ ಮೃತ್ಯುವು ಸಂಭವಿಸುವುದೆಂದು ಯಾವನು ತಾನೇ ತಿಳಿದಿರುತ್ತಾನೆ?

ಅಕೃತೇಷ್ವೇವ ಕಾರ್ಯೇಷು ಮೃತ್ಯುರ್ವೈ ಸಮ್ಪ್ರಕರ್ಷತಿ ।
ಯುವೈವ ಧರ್ಮಶೀಲಃ ಸ್ಯಾದನಿಮಿತ್ತಂ ಹಿ ಜೀವಿತಮ್ ॥೧೫॥

ಮಾಡಬೇಕಾದ ಕಾರ್ಯಗಳು ಅನೇಕವಾಗಿರುವಾಗಲೇ ಮೃತ್ಯುವು ಮನುಷ್ಯನನ್ನು ತನ್ನ ಕಡೆಗೆ ಸೆಳೆದುಕೊಳ್ಳುತ್ತದೆ. ಆದುದರಿಂದ ಯುವಕನಾಗಿದ್ದಾಗಲೇ ಧರ್ಮಾಚರಣೆಯನ್ನು ಮಾಡಬೇಕು. (ಧರ್ಮಾಚರಣೆಯ ಕಾಲವಿನ್ನೂ ಸನ್ನಿಹಿತವಾಗಿಲ್ಲವೆಂದು ಉದಾಸೀನನಾಗಬಾರದು. ಧರ್ಮಾಚರಣೆಗೆ ಸರಿಯಾದ ಕಾಲವು ಯೌವನವೇ ಆಗಿದೆ.)

ಕೃತೇ ಧರ್ಮೇ ಭವೇತ್ಪ್ರೀತಿರಿಹ ಪ್ರೇತ್ಯ ಚ ಶಾಶ್ವತೀ ।
ಮೋಹೇನ ಹಿ ಸಮಾವಿಷ್ಟಃ ಪುತ್ರದಾರಾರ್ಥಮುದ್ಯತಃ ॥೧೬॥

ಕೃತ್ವಾ ಕಾರ್ಯಮಕಾರ್ಯಂ ವಾ ತುಷ್ಟಿಮೇಷಾಂ ಪ್ರಯಚ್ಛತಿ ।
ತಂ ಪುತ್ರಪಶುಸಮ್ಪನ್ನಂ ವ್ಯಾಸಕ್ತಮನಸಂ ನರಮ್ ।
ಸುಪ್ತಂ ವ್ಯಾಘ್ರಂ ಮಹೌಘೋ ವಾ ಮೃತ್ಯುರಾದಾಯ ಗಚ್ಛತಿ ॥೧೭॥

ಧರ್ಮಾಚರಣೆಯನ್ನು ಮಾಡಿದರೆ ಮಾನವನು ಈ ಲೋಕದಲ್ಲಿ ಪ್ರಸನ್ನತೆಯನ್ನೂ–ಪರಲೋಕದಲ್ಲಿ ಶಾಶ್ವತವಾದ ಸುಖವನ್ನೂ ಪಡೆಯುತ್ತಾನೆ. ಮೋಹಾವಿಷ್ಟನಾದ ಮಾನವನು ಮಡದಿ-ಮಕ್ಕಳಿಗಾಗಿ ಯೋಗ್ಯವಾದ ಕಾರ್ಯವನ್ನೋ–ಅಯೋಗ್ಯವಾದ ಕಾರ್ಯವನ್ನೋ ಮಾಡುತ್ತಾ ಅವರ ಭರಣ-ಪೋಷಣೆಗಳನ್ನು ಮಾಡಿ ಅವರನ್ನು ತೃಪ್ತಿಗೊಳಿಸುತ್ತಾನೆ. ಮಡದಿ-ಮಕ್ಕಳಿಂದಲೂ ಹಸು–ಕರು ಮುಂತಾದ ಪ್ರಾಣಿಗಳಿಂದಲೂ ಸಂಪನ್ನನಾಗಿ ಸಂಸಾರದಲ್ಲಿಯೇ ಆಸಕ್ತವಾದ ಮನಸ್ಸನ್ನು ಹೊಂದಿರುವ ಮನುಷ್ಯನನ್ನು–ನದಿಯ ದಡದಲ್ಲಿ ಮಲಗಿರುವ ಹುಲಿಯನ್ನು ಅನಿರೀಕ್ಷಿತವಾಗಿ ಬರುವ ಮಹಾಪ್ರವಾಹವು ಕೊಚ್ಚಿಕೊಂಡು ಹೋಗುವಂತೆ–ಅನಿರೀಕ್ಷಿತವಾಗಿ ಮೃತ್ಯುವು ಅಪಹರಿಸಿಕೊಂಡು ಹೋಗುತ್ತದೆ.

ಸಂಚಿನ್ವಾನಕಮೇವೈನಂ ಕಾಮಾನಾಮವಿತೃಪ್ತಕಮ್ ।
ವೃಕೀವೋರಣಮಾಸಾದ್ಯ ಮೃತ್ಯುರಾದಾಯ ಗಚ್ಛತಿ ॥೧೮॥

ಕಾಮೋಪಭೋಗಗಳಲ್ಲಿ ತೃಪ್ತಿಯನ್ನು ಹೊಂದದೇ ಸರ್ವಕಾಲದಲ್ಲಿಯೂ ಧನಾದಿ ಭೋಗವಸ್ತುಗಳ ಸಂಗ್ರಹದಲ್ಲಿಯೇ ಆಸಕ್ತನಾಗಿರುವ ಮನುಷ್ಯನನ್ನು–ಹೆಣ್ಣುತೋಳವು ಕುರಿಮರಿಯನ್ನು ಎತ್ತಿಕೊಂಡು ಹೋಗುವಂತೆ–ಮೃತ್ಯುವು ಅಪಹರಿಸಿಕೊಂಡು ಹೋಗುತ್ತದೆ.

ಇದಂ ಕೃತಮಿದಂ ಕಾರ್ಯಮಿದಮನ್ಯತ್ಕೃತಾಕೃತಮ್ ।
ಏವಮೀಹಾಸಮಾಯುಕ್ತಂ ಮೃತ್ಯುರಾದಾಯ ಗಚ್ಛತಿ ॥೧೯॥

'ಈ ಕಾರ್ಯವನ್ನು ಮುಗಿಸಿದ್ದಾಯಿತು. ಇನ್ನು ಈ ಕಾರ್ಯವನ್ನು ಮಾಡಬೇಕಾಗಿದೆ. ಈ ಮತ್ತೊಂದು ಕಾರ್ಯವು ಸ್ವಲ್ಪವಾಗಿದೆ ; ಇನ್ನೂ ಪೂರ್ಣವಾಗಬೇಕಾಗಿದೆ' – ಹೀಗೆ ಆಶಾಪೂರಣದಲ್ಲಿಯೇ ಆಸಕ್ತನಾದ ಮನುಷ್ಯನನ್ನು ಮೃತ್ಯುವು ಅಪಹರಿಸಿಕೊಂಡು ಹೋಗುತ್ತದೆ.

ಕೃತಾನಾಂ ಫಲಮಪ್ರಾಪ್ತಂ ಕಾರ್ಯಾಣಾಂ ಕರ್ಮಸಙ್ಗಿನಾಮ್ ।
ಕ್ಷೇತ್ರಾಪಣಗೃಹಾಸಕ್ತಂ ಮೃತ್ಯುರಾದಾಯ ಗಚ್ಛತಿ ॥೨೦॥

ಕೃಷಿ-ವಾಣಿಜ್ಯವೇ ಮೊದಲಾದ ಕರ್ಮಗಳ ಮೂಲಕವಾಗಿ ಹೊಲ, ಗದ್ದೆ, ಅಂಗಡಿ ಮತ್ತು ಗೃಹಕೃತ್ಯಗಳಲ್ಲಿಯೇ ಆಸಕ್ತನಾಗಿರುವ ಮನುಷ್ಯನನ್ನು–ಅವನು ಮಾಡಿದ ಕರ್ಮಗಳಿಗೆ ಫಲವನ್ನು ಹೊಂದುವ ಮೊದಲೇ ಯಾರಿಗೂ ತಿಳಿಯದಂತೆ ಮೃತ್ಯುವು ಅಪಹರಿಸಿಕೊಂಡು ಹೋಗುತ್ತದೆ.

ದುರ್ಬಲಂ ಬಲವನ್ತಂ ಚ ಪ್ರಾಜ್ಞಂ ಶೂರಂ ಜಡಂ ಕವಿಮ್ ।
ಅಪ್ರಾಪ್ತಸರ್ವಕಾಮಾರ್ಥಂ ಮೃತ್ಯುರಾದಾಯ ಗಚ್ಛತಿ ॥೨೧॥

ದುರ್ಬಲನನ್ನೂ, ಬಲಿಷ್ಠನನ್ನೂ, ಪ್ರಾಜ್ಞನನ್ನೂ, ಶೂರನನ್ನೂ, ಮೂರ್ಖನನ್ನೂ, ವಿದ್ವಾಂಸನನ್ನೂ–ಅವರವರ ಕಾಮನೆಗಳು ಪೂರ್ಣವಾಗುವ ಮುನ್ನವೇ ಮೃತ್ಯುವು ಅಪಹರಿಸಿಕೊಂಡು ಹೋಗುತ್ತದೆ.

ಮೃತ್ಯುರ್ಜರಾ ಚ ವ್ಯಾಧಿಶ್ಚ ದುಃಖಂ ಚಾನೇಕಕಾರಣಮ್ ।
ಅಸನ್ತ್ಯಾಜ್ಯಂ ಯದಾ ಮರ್ತ್ಯೈಃ ಕಿಂ ಸ್ವಸ್ಥ ಇವ ತಿಷ್ಠಸಿ ॥೨೨॥

ಮನುಷ್ಯರಿಂದ ತ್ಯಜಿಸಲು ಸರ್ವಥಾ ಸಾಧ್ಯವಾಗದಿರುವ ಮರಣ-ಮುಪ್ಪು-ರೋಗ ಮತ್ತು ಅನೇಕಕಾರಣಗಳಿಂದ ಉಂಟಾಗುವ ದುಃಖ–ಇವುಗಳು ದೇಹವನ್ನು ಆಕ್ರಮಿಸಿಕೊಂಡಿರುವಾಗ ಯಾವ ವಿಧವಾದ ಆತಂಕವೂ ಇಲ್ಲದವನಂತೆ ಹೀಗೇಕೆ ಕುಳಿತಿರುವೆ?

ಜಾತಮೇವಾನ್ತಕೋಽನ್ತಾಯ ಜರಾ ಚಾಭ್ಯೇತಿ ದೇಹಿನಮ್ ।
ಅನುಷಕ್ತಾ ದ್ವಯೇನೈತೇ ಭಾವಾಃ ಸ್ಥಾವರಜಙ್ಗಮಾಃ ॥೨೩॥

ದೇಹಿಯು ಹುಟ್ಟುತ್ತಲೇ ಆ ಹುಟ್ಟಿದ ಜೀವನನ್ನು ಕಡೆಗಾಣಿಸಲು ಮುಪ್ಪು-ಸಾವುಗಳು ಅವನನ್ನು ಹಿಂಬಾಲಿಸುತ್ತಿರುತ್ತವೆ. ಸಕಲಚರಾಚರ ಪ್ರಾಣಿಗಳೂ ಜರಾ-ಮರಣಗಳೆರಡರಿಂದಲೇ ಬಂಧಿಸಲ್ಪಟ್ಟಿವೆ.

ನ ಮೃತ್ಯುಸೇನಾಮಾಯಾನ್ತೀಂ ಜಾತು ಕಶ್ಚಿತ್ಪ್ರಬಾಧತೇ ।
ಬಲಾತ್ಸತ್ಯಮೃತೇ ತ್ವೇಕಂ ಸತ್ಯೇ ಹ್ಯಮೃತಮಾಶ್ರಿತಮ್ ॥೨೪॥

ಸತ್ಯವೊಂದರ ಹೊರತಾಗಿ ಬೇರೆ ಯಾವುದೇ ಆಗಲೀ–ಎದುರಾಗಿ ಬರುತ್ತಿರುವ ಮೃತ್ಯುಸೈನ್ಯವನ್ನು ಬಲದಿಂದ ಎದುರಿಸಿ ನಿಲ್ಲಲಾರದು. ಏಕೆಂದರೆ : ಸತ್ಯದಲ್ಲಿಯೇ ಅಮೃತವು (ಬ್ರಹ್ಮವು) ಪ್ರತಿಷ್ಠಿತವಾಗಿದೆ.

ಮೃತ್ಯೋರ್ವಾ ಗೃಹಮೇತದ್ವೈ ಯಾ ಗ್ರಾಮೇ ವಸತೋ ರತಿಃ ।
ದೇವಾನಾಮೇಷ ವೈ ಗೋಷ್ಠೋ ಯದರಣ್ಯಮಿತಿ ಶ್ರುತಿಃ ॥೨೫॥

ಗ್ರಾಮಗಳಲ್ಲಾಗಲೀ, ನಗರಗಳಲ್ಲಾಗಲೀ ಸ್ತ್ರೀ-ಪುತ್ರ-ಗೃಹಾದಿಗಳಲ್ಲಿ ಆಸಕ್ತಿಯನ್ನು ಹೊಂದಿ ವಾಸಮಾಡುತ್ತಿರುವವನ ಮನೆಯು ಮೃತ್ಯುವಿನ ಮನೆಗೆ ಸಮಾನವಾಗಿರುತ್ತದೆ. (ಅಂತಹ ಆಸಕ್ತಿಯೇ ಮನುಷ್ಯನನ್ನು ಮೃತ್ಯುವಿನ ದವಡೆಗೆ ತಳ್ಳುತ್ತದೆ) ವಿರಕ್ತಿಯಿಂದ ಮನೆಯನ್ನು ತ್ಯಜಿಸಿ ತಪಸ್ಸಿಗಾಗಿ (ಜ್ಞಾನಕ್ಕಾಗಿ) ಆಶ್ರಯಿಸುವ ಅರಣ್ಯವು ದೇವತೆಗಳ ಸ್ಥಾನ ವಾಗಿರುತ್ತದೆ–ಹೀಗೆ ಶ್ರುತಿವಚನವಿದೆ. (ಅರಣ್ಯದಲ್ಲಿ ಧ್ಯಾನಾಸಕ್ತನಾದ ಮುನಿಯು ಇಂದ್ರಿಯಗಳನ್ನೂ ಮನಸ್ಸನ್ನೂ ಬಂಧಿಸಿ ಮೃತ್ಯುವನ್ನು ಜಯಿಸುತ್ತಾನೆ.)

ನಿಬನ್ಧನೀ ರಜ್ಜುರೇಷಾ ಯಾ ಗ್ರಾಮೇ ವಸತೋ ರತಿಃ ।
ಛಿತ್ವೈನಾಂ ಸುಕೃತೋ ಯಾನ್ತಿ ನೈನಾಂ ಛಿನ್ದನ್ತಿ ದುಷ್ಕೃತಃ ॥೨೬॥

ಗ್ರಾಮಗಳಲ್ಲಿ ವಾಸಮಾಡುತ್ತಾ ಸ್ತ್ರೀ-ಪುತ್ರ-ಗೃಹ-ಧನಾದಿಗಳಲ್ಲಿ ಆಸಕ್ತವಾಗಿರುವುದು ಮನುಷ್ಯನನ್ನು ಬಲವಾಗಿ ಕಟ್ಟಿಹಾಕಿರುವ ಒಂದು ಹಗ್ಗವೇ ಆಗಿದೆ. ಸುಕೃತಿಗಳಾದವರು ಇಂತಹ ಬಲವಾದ ಹಗ್ಗವನ್ನು ಕತ್ತರಿಸಿ ಸಂಸಾರಬಂಧನದಿಂದ ಪಾರಾಗುತ್ತಾರೆ. ದುಷ್ಕೃತಿಗಳು ಹಗ್ಗವನ್ನು ಕತ್ತರಿಸಲು ಅಸಮರ್ಥರಾಗಿ ಸಂಸಾರಸಾಗರದಲ್ಲಿಯೇ ಬಿದ್ದು ತೊಳಲುತ್ತಿರುತ್ತಾರೆ.

ಯೋ ನ ಹಿಂಸತಿ ಸತ್ತ್ವಾನಿ ಮನೋವಾಕ್ಕರ್ಮಹೇತುಭಿಃ ।
ಜೀವಿತಾರ್ಥಾಪನಯನೈಃ ಪ್ರಾಣಿಭಿರ್ನ ಸ ವಧ್ಯತೇ ॥೨೭॥

ಯಾವ ಮನುಷ್ಯನು ಜೀವನ ಮತ್ತು ಪ್ರಯೋಜನಗಳನ್ನು ನಾಶ ಗೊಳಿಸುವ ಮಾತು, ಮನಸ್ಸು ಮತ್ತು ಶರೀರಸಂಬಂಧವಾದ ಕ್ರಿಯೆಗಳೆಂಬ ಕಾರಣಗಳಿಂದ ಪ್ರಾಣಿಗಳನ್ನು ಹಿಂಸಿಸುವುದಿಲ್ಲವೋ–ಅಂತಹ ಮನುಷ್ಯ ನನ್ನು–ಯಾವ ಹಿಂಸ್ರಪ್ರಾಣಿಗಳೂ ವಧಿಸುವುದಿಲ್ಲ.

ತಸ್ಮಾತ್ಸತ್ಯವ್ರತಾಚಾರಃ ಸತ್ಯವ್ರತಪರಾಯಣಃ ।
ಸತ್ಯಕಾಮಃ ಸಮೋ ದಾನ್ತಃ ಸತ್ಯೇನೈವಾನ್ತಕಂ ಜಯೇತ್ ॥೨೮॥

ಆದುದರಿಂದ ಮನುಷ್ಯನು ಯಾವಾಗಲೂ ಸತ್ಯವ್ರತದ ಆಚರಣೆ ಯುಳ್ಳವನಾಗಬೇಕು. (ಬ್ರಹ್ಮಪ್ರಾಪ್ತಿಗೆ ಸಾಧನಗಳಾದ ಯಮ-ನಿಯಮಾದಿ ವ್ರತಗಳನ್ನು ಆಚರಿಸಬೇಕು.) ಸತ್ಯವ್ರತಪರಾಯಣನಾಗಿರಬೇಕು. ಸತ್ಯಕಾಮ ನಾಗಿರಬೇಕು. ಎಲ್ಲರನ್ನೂ ಸಮಾನತೆಯಿಂದ ಕಾಣಬೇಕು. ಜಿತೇಂದ್ರಿಯ ನಾಗಿರಬೇಕು. ಹೀಗೆ ಸತ್ಯದಿಂದಲೇ ಮೃತ್ಯುವನ್ನು ಜಯಿಸಬೇಕು.

ಅಮೃತಂ ಚೈವ ಮೃತ್ಯುಶ್ಚ ದ್ವಯಂ ದೇಹೇ ಪ್ರತಿಷ್ಠಿತಮ್ ।
ಮೃತ್ಯುರಾಪದ್ಯತೇ ಮೋಹಾತ್ಸತ್ಯೇನಾಪದ್ಯತೇಽಮೃತಮ್ ॥೨೯॥

ಅಮೃತ ಮತ್ತು ಮೃತ್ಯು–ಇವೆರಡೂ ನಮ್ಮ ಶರೀರದಲ್ಲಿಯೇ ಪ್ರತಿಷ್ಠಿತವಾಗಿವೆ. ಮೋಹದಿಂದ ಮೃತ್ಯುವು ಸನ್ನಿಹಿತವಾಗುತ್ತದೆ. ಸತ್ಯನಿಷ್ಠೆ ಯಿಂದ ಅಮೃತದ ಪ್ರಾಪ್ತಿಯಾಗುತ್ತದೆ.

ಸೋಽಹಂ ಸತ್ಯಮಹಿಂಸಾರ್ಥೀ ಕಾಮಕ್ರೋಧಬಹಿಷ್ಕೃತಃ ।
ಸಮಾಶ್ರಿತ್ಯ ಸುಖಂ ಕ್ಷೇಮೀ ಮೃತ್ಯುಂ ಹಾಸ್ಯಾಮ್ಯಮೃತ್ಯುವತ್ ॥೩೦॥

ಆದುದರಿಂದ ನಾನು ಹಿಂಸಾಕರ್ಮದಿಂದ ದೂರವಾಗಿದ್ದು, ಸತ್ಯವನ್ನೇ ಅರಸುತ್ತಾ, ಸತ್ಯಪರಾಯಣನಾಗಿ, ಕಾಮ-ಕ್ರೋಧಗಳನ್ನು ಬಹಿಷ್ಕರಿಸಿ, ಸುಖವನ್ನು ಆಶ್ರಯಿಸಿ, ಎಲ್ಲರಿಗೂ ಕಲ್ಯಾಣವನ್ನು ಕೋರುತ್ತಾ ಅಮರನಂತೇ ಮೃತ್ಯುವನ್ನು ಹೊಡೆದೋಡಿಸುತ್ತೇನೆ.

ಶಾನ್ತಿಯಜ್ಞರತೋ ದಾನ್ತೋ ಬ್ರಹ್ಮಯಜ್ಞೇ ಸ್ಥಿತೋ ಮುನಿಃ ।
ವಾಙ್ಮನಃಕರ್ಮಯಜ್ಞಶ್ಚ ಭವಿಷ್ಯಾಮ್ಯುದಗಾಯನೇ ॥೩೧॥

ನಿವೃತ್ತಿಪರಾಯಣನಾಗಿ, ಶಾಂತಿರೂಪವಾದ ಯಜ್ಞದಲ್ಲಿ ತತ್ಪರನಾಗಿ, ಜಿತೇಂದ್ರಿಯನಾಗಿ, ಉಪನಿಷತ್ತುಗಳ ಅರ್ಥವನ್ನು ಚಿಂತಿಸುತ್ತಾ ಮುನಿವೃತ್ತಿಯಲ್ಲಿರುತ್ತೇನೆ. ಉತ್ತರಾಯಣಮಾರ್ಗದಲ್ಲಿ ಅಥವಾ ದೇವಮಾರ್ಗದಲ್ಲಿ ಹೋಗುವ ಸಲುವಾಗಿ ಜಪ-ಸ್ವಾಧ್ಯಾಯರೂಪವಾದ ವಾಗ್ಯಜ್ಞವನ್ನೂ, ಧ್ಯಾನರೂಪವಾದ ಮನೋಯಜ್ಞವನ್ನೂ, ಅಗ್ನಿಹೋತ್ರ-ಗುರುಶುಶ್ರೂಷಾದಿ ರೂಪಗಳಾದ ಕರ್ಮಯಜ್ಞಗಳನ್ನೂ ಮಾಡುತ್ತೇನೆ.

ಪಶುಯಜ್ಞೈಃ ಕಥಂ ಹಿಂಸ್ರೈರ್ಮಾದೃಶೋ ಯಷ್ಟುಮರ್ಹತಿ ।
ಅನ್ತವದ್ಭಿರುತ ಪ್ರಾಜ್ಞಃ ಕ್ಷತ್ರಯಜ್ಞೈಃ ಪಿಶಾಚವತ್ ॥೩೨॥

ನನ್ನಂತಹ ವಿದ್ವಾಂಸನು ಹಿಂಸಾಪ್ರಧಾನವಾದ ಪಶುಯಜ್ಞಗಳಿಂದ ಹೇಗೆ ತಾನೇ ದೇವತೆಗಳನ್ನು ಪೂಜಿಸುತ್ತಾನೆ? ಪಿಶಾಚಿಯಂತೆ ಪ್ರಾಣಿಗಳ ಶರೀರಗಳ ಮೂಲಕವಾಗಿ ಮಾಡುವ, ಅನಿತ್ಯವಾದ ಫಲಗಳನ್ನು ಕೊಡುವ ತಾಮಸಯಜ್ಞಗಳನ್ನು ಪ್ರಾಜ್ಞನಾದವನು ಮಾಡುವುದಿಲ್ಲ. (ಹೆಚ್ಚು ವಿವರಣೆಯನ್ನು 23ನೇ ಸಂಪುಟದ 1572ನೇ ಪುಟದಲ್ಲಿ ಕಾಣಬಹುದಾಗಿದೆ.)

ಆತ್ಮನ್ಯೇವಾತ್ಮನಾ ಜಾತ ಆತ್ಮನಿಷ್ಠೋಽಪ್ರಜಃ ಪಿತಃ ।
ಆತ್ಮಯಜ್ಞೋ ಭವಿಷ್ಯಾಮಿ ನ ಮಾಂ ತಾರಯತಿ ಪ್ರಜಾ ॥೩೩॥

ತಂದೆಯೇ! (ವಿವಾಹವಾಗದಿರುವುದರಿಂದ) ಸಂತಾನರಹಿತನಾದರೂ ನಾನು ಬ್ರಹ್ಮನಲ್ಲಿ ಬ್ರಹ್ಮರೂಪದಿಂದಲೇ ಹುಟ್ಟಿದವನಾಗಿದ್ದೇನೆ. ಬ್ರಹ್ಮನಿಷ್ಠನಾಗಿದ್ದೇನೆ. ನಾನು ಆತ್ಮಯಜ್ಞಕ್ಕೆ ಯಜಮಾನನಾಗುತ್ತೇನೆ. ಸಂತಾನವು ನನ್ನನ್ನು ಉದ್ಧರಿಸುವುದಿಲ್ಲ.

ಯಸ್ಯ ವಾಙ್ಮನಸೀ ಸ್ಯಾತಾಂ ಸಮ್ಯಕ್ಪ್ರಣಿಹಿತೇ ಸದಾ ।
ತಪಸ್ತ್ಯಾಗಶ್ಚ ಯೋಗಶ್ಚ ಸ ತೈಃ ಸರ್ವಮವಾಪ್ನುಯಾತ್ ॥೩೪॥

ಯಾರ ಮಾತು ಮತ್ತು ಮನಸ್ಸುಗಳು ಸರ್ವಕಾಲದಲ್ಲಿಯೂ ಸಮೀಚೀನವಾಗಿ ಏಕಾಗ್ರವಾಗಿರುವುವೋ, ಯಾವನು ತಪಸ್ಸಿನಿಂದಲೂ, ತ್ಯಾಗ

ದಿಂದಲೂ ಮತ್ತು ಯೋಗದಿಂದಲೂ ಸಂಪನ್ನನಾಗಿರುವನೋ–ಅಂತಹ ವನು ಸರ್ವಸಿದ್ಧಿಗಳನ್ನೂ ಪಡೆಯುತ್ತಾನೆ.

ನಾಸ್ತಿ ವಿದ್ಯಾಸಮಂ ಚಕ್ಷುರ್ನಾಸ್ತಿ ವಿದ್ಯಾಸಮಂ ಫಲಮ್ ।
ನಾಸ್ತಿ ರಾಗಸಮಂ ದುಃಖಂ ನಾಸ್ತಿ ತ್ಯಾಗಸಮಂ ಸುಖಮ್ ॥೩೫॥

ಲೋಕದಲ್ಲಿ ಬ್ರಹ್ಮವಿದ್ಯೆಗೆ (ಬ್ರಹ್ಮಜ್ಞಾನಕ್ಕೆ) ಸಮಾನವಾದ ಕಣ್ಣಿಲ್ಲ. ಬ್ರಹ್ಮಜ್ಞಾನಕ್ಕೆ ಸಮಾನವಾದ ಫಲವಿಲ್ಲ. ರಾಗಕ್ಕೆ (ಆಸಕ್ತಿಗೆ) ಸಮಾನವಾದ ದುಃಖವಿಲ್ಲ. ತ್ಯಾಗಕ್ಕೆ ಸಮಾನವಾದ ಸುಖವಿಲ್ಲ.

ನೈತಾದೃಶಂ ಬ್ರಾಹ್ಮಣಸ್ಯಾಸ್ತಿ ವಿತ್ತಂ
ಯಥೈಕತಾ ಸಮತಾ ಸತ್ಯತಾ ಚ ।
ಶೀಲೇ ಸ್ಥಿತಿರ್ದಣ್ಡನಿಧಾನಮಾರ್ಜವಂ
ತತಸ್ತತಶ್ಚೋಪರಮಃ ಕ್ರಿಯಾಭ್ಯಃ ॥೩೬॥

ಏಕತೆ, ಸರ್ವಪ್ರಾಣಿಗಳಲ್ಲಿಯೂ ಸಮಭಾವ, ಸತ್ಯನಿಷ್ಠೆ, ಸದಾಚಾರ ನಿಷ್ಠೆ, ಮಾತು, ಮನಸ್ಸು ಮತ್ತು ಶರೀರಗಳಿಂದ ಹಿಂಸಾತ್ಯಾಗ, ಸರಳತೆ, ಸಕಲವಿಧವಾದ ಕಾಮ್ಯಕರ್ಮಗಳಿಂದಲೂ ದೂರವಿರುವುದು – ಇವುಗಳಿಗೆ ಸಮಾನವಾದ ಸಂಪತ್ತು ಬ್ರಾಹ್ಮಣನಿಗೆ ಬೇರೆ ಯಾವುದೂ ಇಲ್ಲ.

ಕಿಂ ತೇ ಧನೈರ್ಬಾನ್ಧವೈರ್ವಾಪಿ ಕಿಂ ತೇ
ಕಿಂ ತೇ ದಾರೈರ್ಬ್ರಾಹ್ಮಣ ಯೋ ಮರಿಷ್ಯಸಿ ।
ಆತ್ಮಾನಮನ್ವಿಚ್ಛ ಗುಹಾಂ ಪ್ರವಿಷ್ಟಂ
ಪಿತಾಮಹಾಸ್ತೇ ಕ್ವ ಗತಾಃ ಪಿತಾ ಚ ॥೩೭॥

ಬ್ರಾಹ್ಮಣಶ್ರೇಷ್ಠನೇ! ತಂದೆಯೇ! ಎಂದಾದರೊಂದು ದಿನ ಸಾಯ ಲಿರುವ ನಿನಗೆ ಐಶ್ವರ್ಯಗಳಿಂದಾಗಲೀ–ಬಂಧುಗಳಿಂದಾಗಲೀ ಆಗಬೇಕಾದು ದೇನಿದೆ? ಪತ್ನೀ-ಪುತ್ರರಿಂದ ಆಗಬೇಕಾದುದೇನಿದೆ? ಹೃದಯ ಗುಹಾಶಯನಾಗಿರುವ ಪರಮಾತ್ಮನನ್ನು ಹುಡುಕು. ಯಮ-ನಿಯಮಾದಿ ಸಾಧನೆಗಳಿಂದ ಆತ್ಮಸಾಕ್ಷಾತ್ಕಾರವನ್ನು ಸಾಧಿಸು. ನಿನ್ನ ತಾತ-ಮುತ್ತಾ ತಂದಿರು ಎಲ್ಲಿಗೆ ಹೋಗಿದ್ದಾರೆ? ಅವರೆಲ್ಲರೂ ಮೃತ್ಯುವಶರಾದಂತೆಯೇ

ನೀನೂ ಮೃತ್ಯುವಶನಾಗುವೆ. ಅದಕ್ಕೆ ಅವಕಾಶವಾಗದಂತೆ ಅಮೃತತ್ವವನ್ನು ಪಡೆಯಲು ಸಾಧನೆಯನ್ನು ಮಾಡು."

ಭೀಷ್ಮನು ಯುಧಿಷ್ಠಿರನಿಗೆ ಹೇಳುತ್ತಾನೆ :

"ಯುಧಿಷ್ಠಿರ! ಮೇಧಾವಿಯು ಹೇಳಿದ ಮಾತನ್ನು ಕೇಳಿ ತಂದೆಯು ಮಗನು ಹೇಳಿದಂತೆಯೇ ಮಾಡಿದನು. ಹಾಗೆಯೇ ನೀನೂ ಸತ್ಯ-ಧರ್ಮ ಪರಾಯಣನಾಗಿ ಆಧ್ಯಾತ್ಮಿಕಚಿಂತನೆಯನ್ನು ಮಾಡುತ್ತಿರು."

೨೭೭ನೆಯ ಅಧ್ಯಾಯವು ಮುಗಿಯಿತು.

(ಮೋಕ್ಷಧರ್ಮದ ೧೭೫ನೆಯ ಅಧ್ಯಾಯವೇ ಇಲ್ಲಿ ಪುನರುಕ್ತವಾಗಿದೆ. ಅದೇ ಪ್ರಶ್ನೆಗಳು ಅದೇ ಉತ್ತರಗಳು. ಶ್ಲೋಕಗಳ ಸಂಖ್ಯೆಯು ಮಾತ್ರ ಕೆಲವು ಕಡೆ ಅದಲು-ಬದಲಾಗಿವೆ. ನಾಲ್ಕಾರು ಶ್ಲೋಕಗಳಲ್ಲಿ ಪದಗಳು ಸ್ವಲ್ಪ ವ್ಯತ್ಯಾಸಗೊಂಡಿವೆ. ಅದು ಹೊರತಾಗಿ ಬೇರೆ ಯಾವ ವ್ಯತ್ಯಾಸವೂ ಇಲ್ಲ. ಒಂದೇ ಅಧ್ಯಾಯವು ಎರಡು ಕಡೆಗಳಲ್ಲಿ ಹೇಗೆ ಬಂದಿತೆಂಬುದಕ್ಕೆ ಕಾರಣವು ತಿಳಿಯದು. ಗೋರಖಪುರದ ಪುಸ್ತಕದಲ್ಲಿಯೂ– ನೀಲಕಂಠರ ವ್ಯಾಖ್ಯಾನವಿರುವ ಪುಸ್ತಕಗಳಲ್ಲಿಯೂ ಹೀಗೆಯೇ ಪಾಠವಿದೆ. ನೀಲಕಂಠರು ಪುನರುಕ್ತಿಯನ್ನು ಗಮನಿಸಿದ್ದಾರೆ. ಪೂರ್ವೋಕ್ತಮೇವೇತಿಹಾಸಂ ಪ್ರಸ್ತೌತಿ–ಎಂದು ಹೇಳಿರುವರೇ ಹೊರತು ಕಾರಣವನ್ನು ಹೇಳಿಲ್ಲ. ಆದರೆ ಭಂಡಾರ್‌ಕರ್ ರಿಸರ್ಚ್ ಇನ್‌ಸ್ಟಿಟ್ಯೂಟಿನವರು ಪ್ರಕಟಿಸಿರುವ ಪುಸ್ತಕದಲ್ಲಿ ಈ ಅಧ್ಯಾಯವು ಒಂದೇ ಕಡೆ ಇದೆ. ಈ ಪ್ರಕರಣದಲ್ಲಿ ಈ ಅಧ್ಯಾಯವಿಲ್ಲ.)

೨೭೮ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಹಾರೀತಮುನಿಯಿಂದ ಪ್ರತಿಪಾದಿತವಾದ ಸಂನ್ಯಾಸಧರ್ಮದ ವರ್ಣನೆ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಿಂಶೀಲಃ ಕಿಂಸಮಾಚಾರಃ ಕಿಂವಿದ್ಯಃ ಕಿಂಪರಾಯಣಃ ।
ಪ್ರಾಪ್ನೋತಿ ಬ್ರಹ್ಮಣಃ ಸ್ಥಾನಂ ಯತ್ಪರಂ ಪ್ರಕೃತೇರ್ಧ್ರುವಮ್ ॥೧॥

"ಪಿತಾಮಹನೇ! ಪ್ರಕೃತಿಯಿಂದ ಆಚೆಗೆ ಪರಬ್ರಹ್ಮನ ಯಾವ ನಾಶ

ರಹಿತವಾದ ಪರಂಧಾಮವಿರುವುದೋ–ಅದನ್ನು ಯಾವ ವಿಧವಾದ ಶೀಲವಿರುವವನು, ಯಾವ ವಿಧವಾದ ಆಚಾರವುಳ್ಳವನು, ಯಾವ ವಿಧವಾದ ವಿದ್ಯೆಯುಳ್ಳವನು ಮತ್ತು ಯಾವ ಕರ್ಮದಲ್ಲಿ ತತ್ಪರನಾಗಿರುವವನು ಹೊಂದುತ್ತಾನೆ?"

ಭೀಷ್ಮನು ಹೇಳುತ್ತಾನೆ :

ಮೋಕ್ಷಧರ್ಮೇಷು ನಿರತೋ ಲಘ್ವಾಹಾರೋ ಜಿತೇನ್ದ್ರಿಯಃ ।
ಪ್ರಾಪ್ನೋತಿ ಪರಮಂ ಸ್ಥಾನಂ ಯತ್ಪರಂ ಪ್ರಕೃತೇರ್ಧ್ರುವಮ್ ॥೨॥

"ಯುಧಿಷ್ಠಿರ! ಮಿತಾಹಾರಿಯಾಗಿರತಕ್ಕವನೂ, ಜಿತೇಂದ್ರಿಯನಾಗಿರತಕ್ಕವನೂ, ಮೋಕ್ಷಧರ್ಮದ ಪಾಲನೆಯಲ್ಲಿ ಸದಾ ನಿರತನಾಗಿರತಕ್ಕವನೂ–ಪ್ರಕೃತಿಗಿಂತಲೂ ಅತೀತವಾದ ಅವಿನಾಶಿಯಾದ ಬ್ರಹ್ಮಪದವನ್ನು ಹೊಂದುತ್ತಾನೆ. ಈ ವಿಷಯದಲ್ಲಿ ಹಿಂದೆ ಹಾರೀತನು ಹೇಳಿದ್ದ ಗೀತೆಯನ್ನೇ ಹೇಳುತ್ತೇನೆ.

ಸ್ವಗೃಹಾದಭಿನಿಃಸೃತ್ಯ ಲಾಭೇಽಲಾಭೇ ಸಮೋ ಮುನಿಃ ।
ಸಮುಪೋಢೇಷು ಕಾಮೇಷು ನಿರಪೇಕ್ಷಃ ಪರಿವ್ರಜೇತ್ ॥೩॥

ಮುಮುಕ್ಷುವಾದವನು ಲಾಭ-ನಷ್ಟಗಳನ್ನು ಸಮಾನವನ್ನಾಗಿ ಭಾವಿಸಿ, ಕಾಮೋಪಭೋಗಗಳು ಸನ್ನಿಹಿತವಾಗಿದ್ದರೂ ಅವುಗಳಲ್ಲಿ ನಿರಪೇಕ್ಷನಾಗಿ, ಮುನಿವೃತ್ತಿಯನ್ನೇ ಆಶ್ರಯಿಸಿ ಮನೆಯಿಂದ ಹೊರಟುಹೋಗಬೇಕು.

ನ ಚಕ್ಷುಷಾ ನ ಮನಸಾ ನ ವಾಚಾ ದೂಷಯೇದಪಿ ।
ನ ಪ್ರತ್ಯಕ್ಷಂ ಪರೋಕ್ಷಂ ವಾ ದೂಷಣಂ ವ್ಯಾಹರೇತ್ಕ್ವಚಿತ್ ॥೪॥

ಕಣ್ಣಿನಿಂದಾಗಲೀ, ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ ಇತರರನ್ನು ದೂಷಿಸಬಾರದು ; ಇತರರ ದೋಷಗಳನ್ನು ಯೋಚಿಸಲೂಬಾರದು ; ಇತರರೊಡನೆ ಹೇಳಲೂಬಾರದು. ಪ್ರತ್ಯಕ್ಷದಲ್ಲಿಯೇ ಆಗಲೀ ಪರೋಕ್ಷದಲ್ಲಿಯೇ ಆಗಲೀ ಇತರರ ದೋಷಗಳನ್ನು ಹೇಳಬಾರದು.

ನ ಹಿಂಸ್ಯಾತ್ಸರ್ವಭೂತಾನಿ ಮೈತ್ರಾಯಣಗತಶ್ಚರೇತ್ ।
ನೇದಂ ಜೀವಿತಮಾಸಾದ್ಯ ವೈರಂ ಕುರ್ವೀತ ಕೇನಚಿತ್ ॥೫॥

ಪ್ರಾಣಿಮಾತ್ರದಲ್ಲಿ ಯಾವುದೇ ಪ್ರಾಣಿಯನ್ನೂ ಹಿಂಸಿಸಬಾರದು.

ಯಾರನ್ನೂ ಪೀಡಿಸಬಾರದು. ಎಲ್ಲರೊಡನೆಯೂ ಮೈತ್ರಿಯ ಭಾವದಿಂದಲೇ ವರ್ತಿಸಬೇಕು. ನಶ್ವರವಾದ ಈ ಜೀವನವನ್ನು ಹೊಂದಿ ಯಾರೊಡನೆಯೂ ದ್ವೇಷವನ್ನು ಕಟ್ಟಿಕೊಳ್ಳಬಾರದು.

ಅತಿವಾದಾಂಸ್ತಿತಿಕ್ಷೇತ ನಾಭಿಮನ್ಯೇತ ಕಂಚನ ।
ಕ್ರೋಧ್ಯಮಾನಃ ಪ್ರಿಯಂ ಬ್ರೂಯಾದಾಕ್ರುಷ್ಟಃ ಕುಶಲಂ ವದೇತ್ ॥೬॥

ಯಾರಾದರೂ ತನ್ನ ವಿಷಯದಲ್ಲಿ ಅಪ್ರಿಯವಾದ ಅಥವಾ ನಿಂದೆಯ ಮಾತುಗಳನ್ನಾಡಿದರೆ ಅದನ್ನು ಸಹಿಸಿಕೊಳ್ಳಬೇಕು. ಯಾರನ್ನು ಉದ್ದೇಶಿಸಿಯೂ ಅಹಂಕಾರಪಡಬಾರದು. (ಯಾವುದನ್ನೂ ಆಶಿಸಬಾರದು.) ಯಾರಾದರೂ ಕೋಪಗೊಂಡರೆ ಅವರೊಡನೆ ಪ್ರಿಯವಾದ ಮಾತುಗಳನ್ನಾಡಬೇಕು. ಒಬ್ಬನಿಂದ ದೂಷಿಸಲ್ಪಟ್ಟರೂ ಪ್ರತಿಯಾಗಿ ನಿಂದಿಸಹೋಗದೇ ನಿಂದಿಸಿದವನ ವಿಷಯದಲ್ಲಿ ಹಿತವಾದ ಮಾತನ್ನೇ ಹೇಳಬೇಕು.

ಪ್ರದಕ್ಷಿಣಂ ಚ ಸವ್ಯಂ ಚ ಗ್ರಾಮಮಧ್ಯೇ ಚ ನಾಚರೇತ್ ।
ಭೈಕ್ಷಚರ್ಯಾಮನಾಪನ್ನೋ ನ ಗಚ್ಛೇತ್ಪೂರ್ವಕೇತಿತಃ ॥೭॥

ಜನಸಮಾಜದಲ್ಲಿ ಯಾರಿಗೂ ಯಾವ ವಿಧವಾದ ಅನುಕೂಲವನ್ನಾಗಲೀ ಪ್ರತಿಕೂಲವನ್ನಾಗಲೀ ಮಾಡಲು ಹೋಗಬಾರದು. ಅಪರಿಚಿತವಾದ ದೂರದ ಮನೆಗೆ ಭಿಕ್ಷೆಗಾಗಿ ಹೋಗಬೇಕು. ಪೂರ್ವಪರಿಚಯವುಳ್ಳ ಯಾವುದಾದರೂ ಮನೆಗೆ ಊಟಕ್ಕೆ ಹೋಗಬಾರದು.

ಅವಕೀರ್ಣಃ ಸುಗುಪ್ತಶ್ಚ ನ ವಾಚಾ ಹ್ಯಪ್ರಿಯಂ ವದೇತ್ ।
ಮೃದುಃ ಸ್ಯಾದಪ್ರತಿಕ್ರೂರೋ ವಿಸ್ರಬ್ಧಃ ಸ್ಯಾದಕತ್ಥನಃ ॥೮॥

ಅವಧೂತನಾಗಿರಬೇಕು. ನಿಂದಾಸ್ತುತಿಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಬೇಕು. ಬೇರೆಯವನು ಆಡಿದುದಕ್ಕೆ ಪ್ರತಿಯಾಗಿ ಅವನ ವಿಷಯದಲ್ಲಿ ದುರ್ಭಾಷೆಗಳನ್ನಾಡಬಾರದು. ಸರ್ವದಾ ಮೃದುಸ್ವಭಾವದವನಾಗಿರಬೇಕು. ಯಾರ ವಿಷಯದಲ್ಲಿಯೂ ಕ್ರೌರ್ಯವನ್ನು ತೋರಬಾರದು. ನಿಶ್ಚಿಂತನಾಗಿರಬೇಕು. ವಿಶ್ವಾಸಿಯಾಗಿರಬೇಕು. ಬಡಾಯಿ ಕೊಚ್ಚಿಕೊಳ್ಳಬಾರದು.

ವಿಧೂಮೇ ನ್ಯಸ್ತಮುಸಲೇ ವ್ಯಙ್ಗಾರೇ ಭುಕ್ತವಜ್ಜನೇ ।
ಅತೀತಪಾತ್ರಸಂಚಾರೇ ಭಿಕ್ಷಾಂ ಲಿಪ್ಸೇತ ವೈ ಮುನಿಃ ॥೯॥

ಅಡಿಗೆಯ ಮನೆಯಿಂದ ಹೊಗೆಯು ಹೋಗುವುದು ಸಂಪೂರ್ಣವಾಗಿ ನಿಂತಿರಬೇಕು. ಭತ್ತವನ್ನು ಕುಟ್ಟುವ ಒನಕೆಯ ಶಬ್ದವಿರಬಾರದು. ಒಲೆಯಲ್ಲಿ ಬೆಂಕಿಯಿರಬಾರದು. ಮನೆಯವರೆಲ್ಲರೂ ಊಟಮಾಡಿರಬೇಕು. ಬಡಿಸುವ ಪಾತ್ರೆಗಳನ್ನು ಅಲ್ಲಿಂದಿಲ್ಲಿಗೂ–ಇಲ್ಲಿಂದಲ್ಲಿಗೂ ಒಯ್ಯುವುದು ನಿಂತಿರಬೇಕು. ಅಂತಹ ಸಮಯದಲ್ಲಿ ಸಂನ್ಯಾಸಿಯಾದವನು ಗೃಹಸ್ಥರ ಮನೆಯಿಂದ ಭಿಕ್ಷೆಯನ್ನು ಆಶಿಸಬೇಕು.

ಪ್ರಾಣಯಾತ್ರಿಕಮಾತ್ರಃ ಸ್ಯಾನ್ಮಾತ್ರಾಲಾಭೇಷ್ವನಾದೃತಃ ।
ಅಲಾಭೇ ನ ವಿಹನ್ಯೇತ ಲಾಭಶ್ಚೈನಂ ನ ಹರ್ಷಯೇತ್ ॥೧೦॥

ಸಂನ್ಯಾಸಿಯಾದವನು ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಸಾಕಾಗುವಷ್ಟು ಮಾತ್ರ ಅನ್ನವನ್ನು ಭಿಕ್ಷೆಯ ರೂಪದಲ್ಲಿ ಪಡೆದುಕೊಳ್ಳಲು ಪ್ರಯತ್ನಿಸಬೇಕು. ಹೆಚ್ಚು ಪ್ರಮಾಣದ ಅನ್ನದಲ್ಲಿ ಆದರವನ್ನು ತೋರಿಸಬಾರದು. ಒಂದು ವೇಳೆ ಅನ್ನವು ಸಿಕ್ಕದೆಯೇ ಇದ್ದರೂ ಅದರಿಂದ ಮನಸ್ಸಿಗೆ ಸಂಕಟವನ್ನೂ ತಂದುಕೊಳ್ಳಬಾರದು. ಸಿಕ್ಕಿದರೆ ಸಂತೋಷಪಡಲೂಬಾರದು.

ಲಾಭಂ ಸಾಧಾರಣಂ ನೇಚ್ಛೇನ್ನ ಭುಞ್ಜೀತಾಭಿಪೂಜಿತಃ ।
ಅಭಿಪೂಜಿತಲಾಭಂ ಹಿ ಜುಗುಪ್ಸೇತೈವ ತಾದೃಶಃ ॥೧೧॥

ಸಾಧಾರಣವಾದ (ಲೌಕಿಕವಾದ) ಲಾಭಕ್ಕೆ ಆಶಿಸಬಾರದು. ಹೆಚ್ಚು ಆದರ-ಗೌರವಗಳನ್ನು ತೋರಿಸುವ ಕಡೆ ಊಟಮಾಡಬಾರದು. ಮುಮುಕ್ಷುವಾದವನು ಆದರ, ಸತ್ಕಾರ ಮತ್ತು ಲೌಕಿಕವಾದ ಲಾಭಗಳ ವಿಷಯದಲ್ಲಿ ಜುಗುಪ್ಸೆಯನ್ನು ಹೊಂದಬೇಕು.

ನ ಚಾನ್ನದೋಷಾನ್ನಿನ್ದೇತ ನ ಗುಣಾನಭಿಪೂಜಯೇತ್ ।
ಶಯ್ಯಾಸನೇ ವಿವಿಕ್ತೇ ಚ ನಿತ್ಯಮೇವಾಭಿಪೂಜಯೇತ್ ॥೧೨॥

ಭಿಕ್ಷೆಯಲ್ಲಿ ಬಂದ ಅನ್ನದಲ್ಲಿ ಇರಬಹುದಾದ ದೋಷಗಳನ್ನು (ಬೇಯದೇ ಇರುವುದು, ಉಪ್ಪು-ಹುಳಿ-ಕಾರಗಳು ಹೆಚ್ಚು-ಕಡಿಮೆಯಾ

ಗಿರುವುದು–ಇತ್ಯಾದಿ) ನಿಂದಿಸಬಾರದು. ಅದರಲ್ಲಿರುವ ಗುಣಗಳನ್ನು ಹೇಳಿಕೊಂಡು ಅನ್ನದ ಪ್ರಶಂಸೆಯನ್ನೂ ಮಾಡಬಾರದು. ಯಾವಾಗಲೂ ಏಕಾಂತವಾದ ಸ್ಥಳದಲ್ಲಿಯೇ ಕುಳಿತುಕೊಳ್ಳುವುದನ್ನೂ ಮತ್ತು ಮಲಗುವುದನ್ನೂ ಸಮಾದರಿಸಬೇಕು.

ಶೂನ್ಯಾಗಾರಂ ವೃಕ್ಷಮೂಲಮರಣ್ಯಮಥವಾ ಗುಹಾಮ್ ।
ಅಜ್ಞಾತಚರ್ಯಾಂ ಗತ್ವಾನ್ಯಾಂ ತತೋಽನ್ಯತ್ರೈವ ಸಂವಿಶೇತ್ ॥೧೩॥

ಜನರಿಲ್ಲದ ಹಾಳುಮನೆಯಲ್ಲಾಗಲೀ, ವೃಕ್ಷದ ಬುಡದಲ್ಲಾಗಲೀ, ಅರಣ್ಯದಲ್ಲಾಗಲೀ, ಪರ್ವತದ ಗುಹೆಯಲ್ಲಾಗಲೀ ಅಥವಾ ಬೇರೆ ಯಾವುದಾದರೂ ಗುಪ್ತಸ್ಥಳದಲ್ಲಾಗಲೀ–ಮುಮುಕ್ಷುವು ಅಜ್ಞಾತನಾಗಿ ಇರುತ್ತಾ ಅಧ್ಯಾತ್ಮಚಿಂತೆಯಲ್ಲಿ ಮಗ್ನನಾಗಿರಬೇಕು.

ಅನುರೋಧವಿರೋಧಾಭ್ಯಾಂ ಸಮಃ ಸ್ಯಾದಚಲೋ ಧ್ರುವಃ ।
ಸುಕೃತಂ ದುಷ್ಕೃತಂ ಚೋಭೇ ನಾನುರುಧ್ಯೇತ ಕರ್ಮಣಾ ॥೧೪॥

ಜನರು ಹೊಂದಿಕೊಂಡು ನಡೆದರೂ, ವಿರೋಧಿಸಿದರೂ ಸಮಭಾವದಿಂದಲೇ ಇರಬೇಕು. ಹೊಂದಿಕೊಂಡು ನಡೆಯುವವರನ್ನು ಪ್ರೀತಿಸಲೂ ಬಾರದು. ವಿರೋಧಿಗಳನ್ನು ದ್ವೇಷಿಸಲೂ ಬಾರದು. ನಿಶ್ಚಲನಾಗಿಯೂ ಸ್ಥಿರಚಿತ್ತನಾಗಿಯೂ ಇರಬೇಕು. ಪುಣ್ಯಕರವಾದ ಅಥವಾ ಪಾಪಕರವಾದ ಕರ್ಮಗಳೆರಡನ್ನೂ ಮಾಡಬಾರದು.

ನಿತ್ಯತೃಪ್ತಃ ಸುಸಂತುಷ್ಟಃ ಪ್ರಸನ್ನವದನೇನ್ದ್ರಿಯಃ ।
ವಿಭೀರ್ಜಪ್ಯಪರೋ ಮೌನೀ ವೈರಾಗ್ಯಂ ಸಮುಪಾಶ್ರಿತಃ ॥೧೫॥

ಮುಮುಕ್ಷುವು ಸದಾ ತುಷ್ಟನಾಗಿಯೂ ತೃಪ್ತನಾಗಿಯೂ ಇರಬೇಕು. ಪ್ರಸನ್ನವಾದ ಮುಖ ಮತ್ತು ಇಂದ್ರಿಯಗಳುಳ್ಳವನಾಗಿರಬೇಕು. ಭಯರಹಿತನಾಗಿರಬೇಕು. ಪ್ರಣವಾದಿ ಜಪಗಳಲ್ಲಿ ನಿರತನಾಗಿರಬೇಕು. ವೈರಾಗ್ಯವನ್ನು ಚೆನ್ನಾಗಿ ಆಶ್ರಯಿಸಿ ಸರ್ವದಾ ಮೌನಿಯಾಗಿರಬೇಕು.

ಅಭ್ಯಸ್ತಂ ಭೌತಿಕಂ ಪಶ್ಯನ್ಭೂತಾನಾಮಾಗತಿಂ ಗತಿಮ್ ।
ನಿಃಸ್ಪೃಹಃ ಸಮದರ್ಶೀ ಚ ಪಕ್ವಾಪಕ್ವೇನ ವರ್ತಯನ್ ।
ಆತ್ಮನಾ ಯಃ ಪ್ರಶಾನ್ತಾತ್ಮಾ ಲಘ್ವಾಹಾರೋ ಜಿತೇನ್ದ್ರಿಯಃ ॥೧೬॥

ಮುಮುಕ್ಷುವು ಭೌತಿಕವಾದ ದೇಹೇಂದ್ರಿಯಗಳು ವಿನಷ್ಟವಾಗಿ ಹೋಗುವುದನ್ನೂ, ಪ್ರಾಣಿಗಳ ಜನನ-ಮರಣಗಳು ಅವ್ಯಾಹತವಾಗಿ ನಡೆಯುತ್ತಿರುವುದನ್ನೂ ಪ್ರತ್ಯಕ್ಷವಾಗಿ ನೋಡುತ್ತಾ, ಅವುಗಳ ಮೇಲಿನ ವ್ಯಾಮೋಹವು ವ್ಯರ್ಥವೆಂದು ಮನದಟ್ಟುಮಾಡಿಕೊಂಡು ಆಶೆಯೆಂಬುದನ್ನೇ ಸಂಪೂರ್ಣವಾಗಿ ತ್ಯಜಿಸಿಬಿಡಬೇಕು. ಸರ್ವತ್ರ ಸಮದರ್ಶಿಯಾಗಿರಬೇಕು. ಪಕ್ವಪದಾರ್ಥಗಳನ್ನೂ (ಅನ್ನವೇ ಮೊದಲಾದುವನ್ನೂ) ಅಪಕ್ವ ಪದಾರ್ಥಗಳನ್ನೂ (ಫಲ-ಮೂಲಾದಿಗಳನ್ನೂ) ಜೀವನನಿರ್ವಹಣೆಗೆ ಎಷ್ಟು ಬೇಕೋ ಅಷ್ಟು ಮಾತ್ರ ತಿನ್ನುತ್ತಾ, ಅಲ್ಪಾಹಾರನಾಗಿ ಜಿತೇಂದ್ರಿಯನಾಗಿರುತ್ತಾ ಆತ್ಮಲಾಭಾರ್ಥವಾಗಿ ಪ್ರಶಾಂತವಾದ ಮನಸ್ಸುಳ್ಳವನಾಗಿರಬೇಕು.

ವಾಚೋ ವೇಗಂ ಮನಸಃ ಕ್ರೋಧವೇಗಂ
ಹಿಂಸಾವೇಗಮುದರೋಪಸ್ಥವೇಗಮ್ ।
ಏತಾನ್ವೇಗಾನ್ವಿಷಹೇದ್ವೈ ತಪಸ್ವೀ
ನಿನ್ದಾ ಚಾಸ್ಯ ಹೃದಯಂ ನೋಪಹನ್ಯಾತ್ ॥೧೭॥

ತಪಸ್ವಿಯಾದ ಸಂನ್ಯಾಸಿಯು ಮಾತು, ಮನಸ್ಸು, ಕ್ರೋಧ, ಹಿಂಸೆ, ಹೊಟ್ಟೆ ಮತ್ತು ಉಪಸ್ಥ–ಇವುಗಳ ವೇಗವನ್ನು ಸಹಿಸಿಕೊಂಡು, ಇವುಗಳನ್ನು ತನ್ನ ವಶದಲ್ಲಿಟ್ಟುಕೊಳ್ಳಬೇಕು. ಇತರರು ಮಾಡುವ ನಿಂದೆಯು ಇವನ ಹೃದಯವನ್ನು ವಿಕಾರಗೊಳಿಸಬಾರದು.

ಮಧ್ಯಸ್ಥ ಏವ ತಿಷ್ಠೇತ ಪ್ರಶಂಸಾನಿನ್ದಯೋಃ ಸಮಃ ।
ಏತತ್ಪವಿತ್ರಂ ಪರಮಂ ಪರಿವ್ರಾಜಕ ಆಶ್ರಮೇ ॥೧೮॥

ಪ್ರಶಂಸೆ ಮತ್ತು ನಿಂದೆಗಳನ್ನು ಸಮಾನವನ್ನಾಗಿ ಕಾಣುತ್ತಾ ಎಲ್ಲರಲ್ಲಿಯೂ ಉದಾಸೀನನಾಗಿರಬೇಕು. ಯಾರಲ್ಲಿಯೂ ಪಕ್ಷಪಾತವನ್ನು ಮಾಡಬಾರದು. ಸಂನ್ಯಾಸಾಶ್ರಮದಲ್ಲಿ ಇಂತಹ ಆಚರಣೆಯು ಪರಮ ಪವಿತ್ರವೆಂದು ಹೇಳಲ್ಪಟ್ಟಿದೆ.

ಮಹಾತ್ಮಾ ಸರ್ವತೋ ದಾನ್ತಃ ಸರ್ವತ್ರೈವಾನಪಾಶ್ರಿತಃ ।
ಅಪೂರ್ವಚಾರಕಃ ಸೌಮ್ಯೋ ಅನಿಕೇತಃ ಸಮಾಹಿತಃ ॥೧೯॥

ಸಂನ್ಯಾಸಿಯು ವಿಶಾಲಹೃದಯದವನಾಗಿರಬೇಕು. ಸರ್ವಪ್ರಕಾರ ದಿಂದಲೂ ಜಿತೇಂದ್ರಿಯನಾಗಿರಬೇಕು. ಎಲ್ಲದರಲ್ಲಿಯೂ ಅಸಂಗನಾಗಿರ ಬೇಕು. ಪೂರ್ವಾಶ್ರಮದಲ್ಲಿದ್ದಾಗ ಪರಿಚಿತವಾದ ಸ್ಥಾನಗಳಲ್ಲಿ ಸಂಚರಿಸ ಬಾರದು. ಸೌಮ್ಯಸ್ವಭಾವದವನಾಗಿರಬೇಕು. ಮನೆ-ಮಠಗಳು ಯಾವುದೂ ಇರಬಾರದು. ಪರಮಾತ್ಮನಲ್ಲಿಯೇ ಸದಾ ಏಕಾಗ್ರಚಿತ್ತನಾಗಿರಬೇಕು.

ವಾನಪ್ರಸ್ಥಗೃಹಸ್ಥಾಭ್ಯಾಂ ನ ಸಂಸೃಜ್ಯೇತ ಕರ್ಹಿಚಿತ್ ।
ಅಜ್ಞಾತಲಿಪ್ಸಂ ಲಿಪ್ಸೇತ ನ ಚೈನಂ ಹರ್ಷ ಆವಿಶೇತ್ ॥೨೦॥

ವಾನಪ್ರಸ್ಥರೊಡನೆಯಾಗಲೀ – ಗೃಹಸ್ಥರೊಡನೆಯಾಗಲೀ ಯಾವಾ ಗಲೂ ಸಂಬಂಧವನ್ನಿಟ್ಟುಕೊಳ್ಳಬಾರದು. ತನ್ನ ಅಭಿಲಾಷೆಯನ್ನು ವ್ಯಕ್ತ ಪಡಿಸದೇ ಯಾವ ಪದಾರ್ಥವು ಸಿಕ್ಕುವುದೋ–ಅದನ್ನೇ ತೆಗೆದುಕೊಳ್ಳುವ ಇಚ್ಛೆಯುಳ್ಳವನಾಗಿರಬೇಕು. ಹಾಗೆ ಪ್ರಾಪ್ತವಾದಾಗ ತನಗೆ ಬೇಕಾದ ಪದಾರ್ಥವೇ ಸಿಕ್ಕಿದರೂ ಸಂತೋಷಪಡಬಾರದು.

ವಿಜಾನತಾಂ ಮೋಕ್ಷ ಏಷ ಶ್ರಮಃ ಸ್ಯಾದವಿಜಾನತಾಮ್ ।
ಮೋಕ್ಷಯಾನಮಿದಂ ಕೃತ್ಸ್ನಂ ವಿದುಷಾಂ ಹಾರಿತೋಽಬ್ರವೀತ್ ॥

ಈ ಸಂನ್ಯಾಸಾಶ್ರಮವು ಜ್ಞಾನಿಗಳಿಗೆ ಮೋಕ್ಷರೂಪವಾಗಿದೆ. ಅಜ್ಞಾನಿ ಗಳಿಗೆ ಶ್ರಮರೂಪವಾಗಿದೆ. ಹಾರಿತಮುನಿಯು ವಿದ್ವಾಂಸರ ಸಲುವಾಗಿ ಸಮಗ್ರವಾದ ಈ ಮೋಕ್ಷಮಾರ್ಗವನ್ನು ಹೇಳಿರುವನು.

ಅಭಯಂ ಸರ್ವಭೂತೇಭ್ಯೋ ದತ್ತ್ವಾ ಯಃ ಪ್ರವ್ರಜೇದ್ಗೃಹಾತ್ ।
ಲೋಕಾಸ್ತೇಜೋಮಯಾಸ್ತಸ್ಯ ತಥಾನನ್ತ್ಯಾಯ ಕಲ್ಪತೇ ॥೨೨॥

ಯಾವ ಮನುಷ್ಯನು ಸರ್ವಪ್ರಾಣಿಗಳಿಗೂ ಅಭಯವನ್ನಿತ್ತು ಮನೆ ಯನ್ನು ಬಿಟ್ಟು ಹೊರಟುಹೋಗುವನೋ–ಅವನಿಗೆ ತೇಜೋಮಯವಾದ ಲೋಕಗಳು ಲಭಿಸುತ್ತವೆ. ಹಾಗೂ ಅವನು ಅನಂತವಾದ ಪರಮಪದವನ್ನು ಹೊಂದಲು ಸಮರ್ಥನಾಗುತ್ತಾನೆ.”

ಖ೭೮ನೆಯ ಅಧ್ಯಾಯವು ಮುಗಿಯಿತು.*

---

* ಹಿಂದೆ ೨೪೫ನೆಯ ಅಧ್ಯಾಯದಲ್ಲಿಯೂ ಯುಧಿಷ್ಠಿರನು ಈ ಅಧ್ಯಾಯದಲ್ಲಿ

೨೭೯ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಬ್ರಹ್ಮಪ್ರಾಪ್ತಿಗೆ ಉಪಾಯ : ವೃತ್ರ-ಶುಕ್ರರ ಸಂವಾದ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಧನ್ಯಾ ಧನ್ಯಾ ಇತಿ ಜನಾಃ ಸರ್ವೇಽಸ್ಮಾನ್ಪ್ರವದನ್ತ್ಯುತ ।
ನ ದುಃಖಿತತರಃ ಕಶ್ಚಿತ್ಪುಮಾನಸ್ಮಾಭಿರಸ್ತಿ ಹ ॥೧॥

“ಪಿತಾಮಹ! ಎಲ್ಲ ಜನರೂ ನಮ್ಮನ್ನು ಕುರಿತು–“ಧನ್ಯರು! ಕುಂತಿಯ ಮಕ್ಕಳು ಅತ್ಯಂತ ಧನ್ಯರು!”–ಎಂದು ಹೇಳುತ್ತಾರೆ. ಆದರೆ ನಮಗಿಂತಲೂ ಅತ್ಯಂತದುಃಖಿತರಾದವರು ಈ ಪ್ರಪಂಚದಲ್ಲಿಯೇ ಯಾರೂ ಇಲ್ಲ.

ಲೋಕಸಮ್ಭಾವಿತೈರ್ದುಃಖಂ ಯತ್ಪ್ರಾಪ್ತಂ ಕುರುಸತ್ತಮ ।
ಪ್ರಾಪ್ಯ ಜಾತಿಂ ಮನುಷ್ಯೇಷು ದೇವೈರಪಿ ಪಿತಾಮಹ ॥೨॥

ದೇವತೆಗಳ ಮೂಲಕವಾಗಿ ಮಾನವಲೋಕದಲ್ಲಿ ಜನ್ಮವನ್ನು ಪಡೆದು ಹಾಗೂ ಎಲ್ಲ ಪ್ರಜೆಗಳಿಂದಲೂ ಸಮ್ಮಾನಿತರಾಗಿದ್ದರೂ–ನಮಗೆ ಇಂತಹ ಮಹತ್ತರವಾದ ದುಃಖವು ಪ್ರಾಪ್ತವಾಗಿದೆ.

ಕದಾ ವಯಂ ಕರಿಷ್ಯಾಮಃ ಸಂನ್ಯಾಸಂ ದುಃಖಸಂಜ್ಞಕಮ್ ।
ದುಃಖಮೇತಚ್ಛರೀರಾಣಾಂ ಧಾರಣಂ ಕುರುಸತ್ತಮ ॥೩॥

ಸಂಸಾರಿಗಳು ಯಾವುದನ್ನು ಅತಿದುಷ್ಕರವಾದ ಆಶ್ರಮವೆಂದು ಭಾವಿಸಿರುವರೋ–ಅಂತಹ ಸಂನ್ಯಾಸಾಶ್ರಮವನ್ನು ನಾವು ಯಾವಾಗ ಅವಲಂಬಿಸುತ್ತೇವೆ? ಕುರುಶ್ರೇಷ್ಠನೇ! ನಮಗಾದರೋ ಈ ಶರೀರಗಳನ್ನು ಧಾರಣೆಮಾಡಿಕೊಂಡಿರುವುದೂ ಬಹಳ ದುಃಖಕರವಾಗಿದೆ.

ಕೇಳಿರುವ ಪ್ರಶ್ನೆಗಳನ್ನೇ ಕೇಳಿರುತ್ತಾನೆ. ಆದರೆ ಅಲ್ಲಿ ಜೈಗೀಷವ್ಯನ ಉಪದೇಶವಿದೆ. ತಾತ್ಪರ್ಯವು ಒಂದೇ ಆಗಿದ್ದರೂ ಶ್ಲೋಕಗಳು ಭಿನ್ನವಾಗಿವೆ.

ವಿಮುಕ್ತಾಃ ಸಪ್ತದಶಭಿರ್ಹೇತುಭೂತೈಶ್ಚ ಪಞ್ಚಭಿಃ ।
ಇನ್ದ್ರಿಯಾರ್ಥೈರ್ಗುಣೈಶ್ಚೈವ ಅಷ್ಟಾಭಿಶ್ಚ ಪಿತಾಮಹ ॥೪॥

ನ ಗಚ್ಛನ್ತಿ ಪುನರ್ಭಾವಂ ಮುನಯಃ ಸಂಶಿತವ್ರತಾಃ ।
ಕದಾ ವಯಂ ಗಮಿಷ್ಯಾಮೋ ರಾಜ್ಯಂ ಹಿತ್ವಾ ಪರಂತಪ ॥೫॥

ಪರಂತಪನೇ! ಪಿತಾಮಹ! ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಪಂಚಪ್ರಾಣಗಳು, ಮನಸ್ಸು ಮತ್ತು ಬುದ್ಧಿ–ಈ ಹದಿನೇಳು ತತ್ತ್ವಗಳಿಂದಲೂ–ಸಂಸಾರಕ್ಕೆ ಕಾರಣಭೂತಗಳಾದ ಕಾಮ, ಕ್ರೋಧ, ಲೋಭ, ಭಯ ಮತ್ತು ಸ್ವಪ್ನಗಳಿಂದಲೂ–ಇಂದ್ರಿಯಾರ್ಥಗಳಾದ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳಿಂದಲೂ-ಸತ್ತ್ವ– ರಜಸ್ತಮಸ್ಸುಗಳೆಂಬ ಮೂರು ಗುಣಗಳಿಂದಲೂ–ಪಂಚಮಹಾಭೂತಗಳು, ಅವಿದ್ಯೆ, ಅಹಂಭಾವ ಮತ್ತು ಕರ್ಮಗಳೆಂಬ ಎಂಟು ತತ್ತ್ವಗಳಿಂದಲೂ ವಿಮುಕ್ತರಾದ, ಕಠೋರವ್ರತನಿಷ್ಠರಾದ ಮುನಿಗಳು ಪುನರ್ಜನ್ಮವನ್ನು ಹೊಂದುವುದಿಲ್ಲ. ನಾವೂ ಕೂಡ ರಾಜ್ಯವನ್ನು ಪರಿತ್ಯಾಗಮಾಡಿ ಅಂತಹ ಶ್ರೇಷ್ಠವಾದ ಸ್ಥಿತಿಯನ್ನು ಯಾವಾಗ ಪಡೆದುಕೊಳ್ಳುವೆವು?"

ಭೀಷ್ಮನು ಹೇಳುತ್ತಾನೆ :

ನಾಸ್ತ್ಯನನ್ತಂ ಮಹಾರಾಜ ಸರ್ವಂ ಸಂಖ್ಯಾನಗೋಚರಃ ।
ಪುನರ್ಭಾವೋಽಪಿ ವಿಖ್ಯಾತೋ ನಾಸ್ತಿ ಕಿಂಚಿದಿಹಾಚಲಮ್ ॥೬॥

"ಮಹಾರಾಜ! ದುಃಖವು ಅನಂತವಲ್ಲ. ಅಂತ್ಯವುಳ್ಳದ್ದು. ಪ್ರಪಂಚದಲ್ಲಿರುವ ಎಲ್ಲ ವಸ್ತುಗಳೂ ಸಂಖ್ಯೆಯ ಮಿತಿಯಲ್ಲಿಯೇ ಇವೆ. ಅಸಂಖ್ಯಾತವೆಂಬುದು ಯಾವುದೂ ಇಲ್ಲ. ಪುನರ್ಜನ್ಮವೂ ನಶ್ವರವೆಂಬುದು ಪ್ರಸಿದ್ಧವಾಗಿಯೇ ಇದೆ. ಆದುದರಿಂದ ಈ ಜಗತ್ತಿನಲ್ಲಿ ಯಾವ ವಸ್ತುವೂ ಅಚಲವೂ ಅಲ್ಲ ; ಸ್ಥಿರವೂ ಅಲ್ಲ.

ನ ಚಾಪಿ ಮನ್ಯಸೇ ರಾಜನ್ನೇಷ ದೋಷಃ ಪ್ರಸಜ್ಜತಃ ।
ಉದ್ಯೋಗಾದೇವ ಧರ್ಮಜ್ಞಾಃ ಕಾಲೇನೈವ ಗಮಿಷ್ಯಥ ॥೭॥

'ಐಶ್ವರ್ಯವೆಂಬುದು ದೋಷಯುಕ್ತವಾದುದು. ಏಕೆಂದರೆ : ಅದು

ಪ್ರಾಪಂಚಿಕವಿಷಯದಲ್ಲಿ ಆಸಕ್ತಿಯನ್ನು ಹುಟ್ಟಿಸುತ್ತದೆ. ಮೋಕ್ಷಮಾರ್ಗಕ್ಕೆ ಪ್ರತಿಬಂಧಕವಾಗಿದೆ'–ಎಂದು ನೀನು ಭಾವಿಸುವುದು ಉಚಿತವಲ್ಲ. ಏಕೆಂದರೆ: ಧರ್ಮಜ್ಞರಾಗಿರುವ ನೀವೆಲ್ಲರೂ ಶಮ-ದಮಾದಿ ಮೋಕ್ಷಸಾಧನಭೂತವಾದ ಉದ್ಯೋಗದ ಮೂಲಕವಾಗಿ ಸ್ವಲ್ಪಕಾಲದಲ್ಲಿಯೇ ಮೋಕ್ಷವನ್ನು ಪಡೆಯುವಿರಿ.

ನೇಶೋಽಯಂ ಸತತಂ ದೇಹೀ ನೃಪತೇ ಪುಣ್ಯಪಾಪಯೋಃ ।
ತತ ಏವ ಸಮುತ್ಥೇನ ತಮಸಾ ರುಧ್ಯತೇಽಪಿ ಚ ॥೮॥

ಮಹಾರಾಜ! ಈ ಜೀವನು ಪುಣ್ಯ-ಪಾಪಗಳ ಫಲವಾದ ಸುಖ-ದುಃಖಗಳನ್ನು ತನಗೆ ಇಚ್ಛೆಬಂದ ರೀತಿಯಲ್ಲಿ ಅನುಭವಿಸಲು ಸ್ವತಂತ್ರನಾಗಿರುವುದಿಲ್ಲ. ಈ ಕಾರಣದಿಂದಲೇ ಪುಣ್ಯ ಮತ್ತು ಪಾಪಗಳಿಂದ ಹುಟ್ಟಿರುವ ಸಂಸ್ಕಾರರೂಪವಾದ ಅಂಧಕಾರದಿಂದ ಜೀವನು ಆಚ್ಛಾದಿತನಾಗಿದ್ದಾನೆ.

ಯಥಾಞ್ಜನಮಯೋ ವಾಯುಃ ಪುನರ್ಮಾನಃ ಶಿಲಂ ರಜಃ ।
ಅನುಪ್ರವಿಶ್ಯ ತದ್ವರ್ಣೋ ದೃಶ್ಯತೇ ರಞ್ಜಯನ್ದಿಶಃ ॥೯॥

ತಥಾ ಕರ್ಮಫಲೈರ್ದೇಹೀ ರಞ್ಜಿತಸ್ತಮಸಾವೃತಃ ।
ವಿವರ್ಣೋ ವರ್ಣಮಾಶ್ರಿತ್ಯ ದೇಹೇಷು ಪರಿವರ್ತತೇ ॥೧೦॥

ಹೊಗೆಯಿಂದ ಆವೃತವಾಗಿ ಕಾಡಿಗೆಯ ಸಮೂಹದಂತೆ ಕಾಣುವ ವಾಯುವು ಮಣಿಶಿಲೆಯ ಧೂಳಿನೊಳಗೆ ಬೆರೆತು ಕೆಂಪಾಗಿಮಾಡಲ್ಪಟ್ಟು ಎಲ್ಲ ದಿಕ್ಕುಗಳನ್ನೂ ಕೆಂಪಾಗುವಂತೆ ಮಾಡುತ್ತದೆ. ಅದೇ ರೀತಿಯಲ್ಲಿ ಸ್ವಭಾವತಃ ವರ್ಣವಿಹೀನನಾದ ನಿತ್ಯಶುದ್ಧ-ನಿತ್ಯಬುದ್ಧನಾದ ಜೀವಾತ್ಮನು ತಮೋಮಯವಾದ ಅಜ್ಞಾನದಿಂದ ಆವೃತನಾಗಿ ಕರ್ಮಫಲದಿಂದ ರಂಜಿತನಾಗಿ (ಬಿಳುಪು, ಕೆಂಪು, ಕಪ್ಪು–ಇತ್ಯಾದಿ ವರ್ಣಗಳನ್ನು ಸತ್ತ್ವ-ರಜಸ್ತಮೋರೂಪಗಳಾದ ಕರ್ಮಗಳಿಗೆ ಅನುಗುಣವಾಗಿ ಹೊಂದುತ್ತಾ) ಭಿನ್ನ-ಭಿನ್ನವಾದ ಶರೀರಗಳ ಧರ್ಮವನ್ನು ಗ್ರಹಿಸುತ್ತಾ ಎಲ್ಲ ಪ್ರಾಣಿಗಳ ಶರೀರಗಳಲ್ಲಿಯೂ ಕಾಲಾನುಗುಣವಾಗಿ ಸಂಚರಿಸುತ್ತಿರುತ್ತಾನೆ.

(ವರ್ಣರಹಿತವಾದ ಗಾಳಿಯು ಸಂಪರ್ಕದೋಷದಿಂದಾಗಿ ಬಣ್ಣದಿಂದ

ಕೂಡಿರುವಂತೆ ಕಾಣುತ್ತದೆ. ಹಾಗೆಯೇ ಶುದ್ಧನಾದ ಜೀವಾತ್ಮನು ಸತ್ತ್ವ-ರಜಸ್ತಮೋಗುಣಗಳ ಸನ್ನಿಕರ್ಷದಿಂದಾಗಿ ಗುಣವಂತನಂತೆ ಕಾಣುತ್ತಾನೆ. ಹೊಗೆಯಿಂದ ಕೂಡಿದ ವಾಯುವನ್ನು ಹೊಗೆಯಿಂದ ಬೇರ್ಪಡಿಸಲು ಹೇಗೆ ಸುಲಭಸಾಧ್ಯವಲ್ಲವೋ ಹಾಗೆಯೇ ಒಮ್ಮೆ ಗುಣಗಳ ಅಂಕೆಗೆ ಒಳಪಟ್ಟ ಜೀವನು ಆ ಗುಣಗಳಿಂದ ಪ್ರತ್ಯೇಕವಾಗಲು ಸಾಧ್ಯವಾಗುವುದಿಲ್ಲ. ವರ್ಣ ರಂಜಿತನಾದ ವಾಯುವು ಅವಕಾಶವು ಸಿಕ್ಕಿದೆಡೆಗಳಲ್ಲಿ ನುಗ್ಗಿಹೋಗುವಂತೆ–ಗುಣಯುಕ್ತನಾದ ಜೀವನು ತನ್ನ ಗುಣಗಳಿಗೆ ಅನುಗುಣವಾದ ಶರೀರಗಳನ್ನು ಪ್ರವೇಶಿಸುತ್ತಿರುತ್ತಾನೆ.)

ಜ್ಞಾನೇನ ಹಿ ಯದಾ ಜನ್ತುರಜ್ಞಾನಪ್ರಭವಂ ತಮಃ ।
ವ್ಯಪೋಹತಿ ತದಾ ಬ್ರಹ್ಮ ಪ್ರಕಾಶತಿ ಸನಾತನಮ್ ॥೧೧॥

ಜೀವನು ಯಾವಾಗ ತತ್ತ್ವಜ್ಞಾನದ ಮೂಲಕವಾಗಿ ಅಜ್ಞಾನಜನಿತವಾದ ಅಂಧಕಾರವನ್ನು ದೂರೀಕರಿಸುವನೋ–ಆಗ ಅಂತಹ ಜೀವಿಯ ಹೃದಯ ದಲ್ಲಿ ಸನಾತನಬ್ರಹ್ಮವು ಪ್ರಕಾಶಗೊಳ್ಳುತ್ತದೆ.

ಅಯತ್ನಸಾಧ್ಯಂ ಮುನಯೋ ವದನ್ತಿ
ಯೇ ಚಾಪಿ ಮುಕ್ತಾಸ್ತ ಉಪಾಸಿತವ್ಯಾಃ ।
ತ್ವಯಾ ಚ ಲೋಕೇನ ಚ ಸಾಮರೇಣ
ತಸ್ಮಾನ್ನಮಸ್ಯಾಮಿ ಮಹರ್ಷಿಸಙ್ಘಾನ್ ॥೧೨॥

ಬ್ರಹ್ಮವಸ್ತುವಿನ ಪ್ರಾಪ್ತಿಯು ಕ್ರಿಯಾತ್ಮಕವಾದ ಪ್ರಯತ್ನದಿಂದ ಸಾಧ್ಯ ವಾಗಲಾರದೆಂದು ಮುನಿಗಳು ಹೇಳುತ್ತಾರೆ. ಆದುದರಿಂದ ಬ್ರಹ್ಮವಸ್ತುವಿನ ಪ್ರಾಪ್ತಿಯಾಗಬೇಕಾದರೆ ದೇವತೆಗಳಿಂದ ಸಹಿತವಾದ ಸಂಪೂರ್ಣ ಜಗತ್ತೂ ಮತ್ತು ನೀನೂ ಬ್ರಹ್ಮಜ್ಞಾನಿಗಳಾದ ಮಹರ್ಷಿಗಳ ಉಪಾಸನೆಯನ್ನು (ಶುಶ್ರೂಷೆಯನ್ನು) ಮಾಡಬೇಕು. ಈ ಕಾರಣದಿಂದಲೇ ನಾನು ಯಾವಾ ಗಲೂ ಮಹರ್ಷಿಗಳ ಸಮೂಹಕ್ಕೆ ನಮಸ್ಕಾರಮಾಡುತ್ತಿರುತ್ತೇನೆ. ಈ ವಿಷಯದಲ್ಲಿ ಹಿಂದೆ ದೇವತೆಗಳಿಂದ ಜಯಿಸಲ್ಪಟ್ಟು ಅಸಹಾಯಕನಾಗಿದ್ದ, ಸಕಲೈಶ್ವರ್ಯಗಳನ್ನೂ ಕಳೆದುಕೊಂಡಿದ್ದ, ರಾಜ್ಯಭ್ರಷ್ಟನಾಗಿದ್ದ ವೃತ್ರಾ ಸುರನು ತನ್ನ ಆಗಿನ ದುಃಸ್ಥಿತಿಗಾಗಿ ಸ್ವಲ್ಪವಾದರೂ ಶೋಕಿಸದೇ ಶತ್ರುಗಳ

ಮಧ್ಯದಲ್ಲಿ ಆಸಕ್ತಿಶೂನ್ಯವಾದ ಬುದ್ಧಿಯನ್ನೇ ಆಶ್ರಯಿಸಿ ಹೇಳಿದ ಗೀತೆಯನ್ನೂ ಮತ್ತು ಮಾಡಿದ ಕಾರ್ಯವನ್ನೂ ಏಕಾಗ್ರಚಿತ್ತನಾಗಿ ಕೇಳು.

ಐಶ್ವರ್ಯದಿಂದ ಭ್ರಷ್ಟನಾಗಿದ್ದ ವೃತ್ರಾಸುರನನ್ನು ದೈತ್ಯಾಚಾರ್ಯರಾದ ಶುಕ್ರರು ಪ್ರಶ್ನಿಸಿದರು :

ಕಾಚಿತ್ಪರಾಜಿತಸ್ಯಾದ್ಯ ನ ವ್ಯಥಾ ತೇಽಸ್ತಿ ದಾನವ ॥೧೫॥

“ದಾನವೇಶ್ವರ! ದೇವತೆಗಳಿಂದ ಪರಾಜಿತನಾಗಿರುವ ನಿನಗೆ ಯಾವ ವಿಧವಾದ ವ್ಯಥೆಯೂ ಇಲ್ಲ. ಇದಕ್ಕೆ ಕಾರಣವೇನು?”

ವೃತ್ರನು ಹೇಳುತ್ತಾನೆ :

ಸತ್ಯೇನ ತಪಸಾ ಚೈವ ವಿದಿತ್ವಾಸಂಶಯಂ ಹ್ಯಹಮ್ ।
ನ ಶೋಚಾಮಿ ನ ಹೃಷ್ಯಾಮಿ ಭೂತಾನಾಮಾಗತಿಂ ಗತಿಮ್ ॥೧೬॥

“ಬ್ರಾಹ್ಮಣೋತ್ತಮರೇ! ಸತ್ಯನಿಷ್ಠೆ ಮತ್ತು ತಪಸ್ಸಿನ ಪ್ರಭಾವಗಳಿಂದ ಜೀವಿಗಳ ಜನನ-ಮರಣಗಳ ರಹಸ್ಯವನ್ನು ನಾನು ನಿಃಸಂದೇಹವಾಗಿ ತಿಳಿದುಕೊಂಡಿರುತ್ತೇನೆ. ಆದುದರಿಂದಲೇ ನಾನು ಯಾವುದಕ್ಕೇ ಆದರೂ ಹರ್ಷಿಸುವುದೂ ಇಲ್ಲ ; ಶೋಕಿಸುವುದೂ ಇಲ್ಲ.

ಕಾಲಸಂಚೋದಿತಾ ಜೀವಾ ಮಜ್ಜನ್ತಿ ನರಕೇಽವಶಾಃ ।
ಪರಿತುಷ್ಟಾನಿ ಸರ್ವಾಣಿ ದಿವ್ಯಾನ್ಯಾಹುರ್ಮನೀಷಿಣಃ ॥೧೭॥

ಕಾಲನಿಂದ ಪ್ರೇರಿತರಾದ ಪಾಪಮಾಡಿದ ಜೀವರು ತಾವು ಮಾಡಿದ ಪಾಪದ ಫಲದಿಂದ ಸೆಳೆಯಲ್ಪಟ್ಟು ಅಸ್ವತಂತ್ರರಾಗಿ ನರಕದಲ್ಲಿ ಮುಳುಗುತ್ತಾರೆ. ಪುಣ್ಯವನ್ನು ಮಾಡಿದವರು ಪುಣ್ಯದ ಫಲದಿಂದ ಸ್ವರ್ಗಲೋಕಕ್ಕೆ ಹೋಗಿ ಅಲ್ಲಿ ಆನಂದವನ್ನು ಅನುಭವಿಸುತ್ತಾರೆ–ಎಂಬುದಾಗಿ ವಿದ್ವಾಂಸರು ಹೇಳುತ್ತಾರೆ.

ಕ್ಷಪಯಿತ್ವಾ ತು ತಂ ಕಾಲಂ ಗಣಿತಂ ಕಾಲಚೋದಿತಾಃ ।
ಸಾವಶೇಷೇಣ ಕಾಲೇನ ಸಮ್ಭವನ್ತಿ ಪುನಃ ಪುನಃ ॥೧೮॥

ಅವರವರು ಮಾಡಿದ ಪಾಪ ಮತ್ತು ಪುಣ್ಯಗಳಿಗೆ ಅನುಸಾರವಾಗಿ ನಿರ್ದಿಷ್ಟವಾದಷ್ಟು ಕಾಲ ನರಕದಲ್ಲಿಯೋ–ಸ್ವರ್ಗದಲ್ಲಿಯೋ ಕಳೆದು ಸ್ವಲ್ಪ

ಭಾಗ ಪಾಪಫಲ ಅಥವಾ ಪುಣ್ಯಫಲದೊಡನೆ ಪ್ರೇರಿತರಾಗಿ ಪುನಃ ಪುನಃ ಭೂಮಿಯಲ್ಲಿ ಜನ್ಮತಾಳುತ್ತಾರೆ.

(ಸ್ವರ್ಗಫಲವೆಂಬುದು ಅತ್ಯಂತಪುಣ್ಯವಂತರಿಗೂ, ನರಕಫಲವೆಂಬುದು ಅತ್ಯಂತಪಾಪಿಷ್ಠರಿಗೂ ಲಭ್ಯವಾಗುತ್ತದೆ. ಪಾಪಕ್ಕಿಂತಲೂ ಹೆಚ್ಚು ಪುಣ್ಯ ಮಾಡಿದವರು ಪುಣ್ಯಯೋನಿಗಳಲ್ಲಿ ಹುಟ್ಟುತ್ತಾರೆ. ಪುಣ್ಯಕ್ಕಿಂತಲೂ ಹೆಚ್ಚು ಪಾಪವುಳ್ಳವರು ಪಾಪಯೋನಿಗಳಲ್ಲಿ ಹುಟ್ಟುತ್ತಾರೆ. ಹೆಚ್ಚು ಪುಣ್ಯಮಾಡಿ ದವರು ಸ್ವರ್ಗಕ್ಕೆ ಹೋದರೂ ಅವರ ಪುಣ್ಯವು ಕಳೆದೊಡನೆಯೇ ಪುನಃ ಅವರು ಉತ್ತಮಯೋನಿಗಳಲ್ಲಿ ಜನ್ಮತಾಳುತ್ತಾರೆ. ಈ ಶ್ಲೋಕದಲ್ಲಿ ಹೇಳಿರುವಂತೆ ಪುಣ್ಯದ ಅವಶೇಷವು ಉಳಿದಿರುತ್ತದೆ. ಹೆಚ್ಚು ಪಾಪಮಾಡಿ ನರಕದಲ್ಲಿ ಬೀಳುವವರೂ ನಿರ್ದಿಷ್ಟಕಾಲದವರೆಗೆ ನರಕಯಾತನೆಯನ್ನು ಅನುಭವಿಸಿ ಪಾಪದ ಅವಶೇಷದಿಂದ ಪುನಃ ಪಾಪಯೋನಿಗಳಲ್ಲಿ ಜನ್ಮತಾಳು ತ್ತಾರೆ. ಯಾರೇ ಆಗಲೀ ನರಕದಲ್ಲಿ ಅಥವಾ ಸ್ವರ್ಗದಲ್ಲಿ ಶಾಶ್ವತವಾಗಿ ಇರುವುದಿಲ್ಲ.)

ತಿರ್ಯಗ್ಯೋನಿಸಹಸ್ರಾಣಿ ಗತ್ವಾ ನರಕಮೇವ ಚ ।
ನಿರ್ಗಚ್ಛನ್ತ್ಯವಶಾ ಜೀವಾಃ ಕಾಮಬನ್ಧನಬನ್ಧನಾಃ ॥೧೯॥

ಕಾಮನೆಗಳೆಂಬ ಕಟ್ಟುಗಳಿಂದ ಬಂಧಿಸಲ್ಪಟ್ಟವರಾಗಿ, ಅಸ್ವತಂತ್ರರಾಗಿ ಸಾವಿರಾರು ಜೀವಿಗಳು-ಪ್ರಾಣಿಗಳು, ಪಕ್ಷಿಗಳು, ಕ್ರಿಮಿಗಳು, ಜಲಚರಗಳು ಇವೇ ಮೊದಲಾದ ಸಾವಿರಾರು ತಿರ್ಯಗ್ಯೋನಿಗಳಲ್ಲಿ ಹುಟ್ಟಿ ನರಕವನ್ನೇ ಸೇರಿ ಅಲ್ಲಿ ನಿರ್ದಿಷ್ಟಕಾಲದವರೆಗೆ ನರಕವಾಸವನ್ನು ಅನುಭವಿಸಿ ಪುನಃ ಅಲ್ಲಿಂದ ಹೊರಹೊರಡುತ್ತಾರೆ.

ಏವಂ ಸಂಸರಮಾಣಾನಿ ಜೀವಾನ್ಯಹಮದೃಷ್ಟವಾನ್ ।
ಯಥಾ ಕರ್ಮ ತಥಾ ಲಾಭ ಇತಿ ಶಾಸ್ತ್ರನಿದರ್ಶನಮ್ ॥೨೦॥

ಹೀಗೆ ಅನೇಕಜೀವರು ಜನನ-ಮರಣಗಳ ಚಕ್ರದಲ್ಲಿ ಬಿದ್ದು ಒದ್ದಾಡು ತ್ತಿರುವುದನ್ನು ಅದೃಷ್ಟಜ್ಞಾನಿಯಾದ ನಾನು ನೋಡುತ್ತಲೇ ಇದ್ದೇನೆ. ಯಾವ ರೀತಿಯಲ್ಲಿ ಕರ್ಮವು ಮಾಡಲ್ಪಡುವುದೋ–ಅದಕ್ಕೆ ತಕ್ಕಂತೆಯೇ ಫಲವು ಲಭಿಸುವುದೆಂಬುದು ಶಾಸ್ತ್ರಗಳ ಸಿದ್ಧಾಂತವಾಗಿದೆ.

ತಿರ್ಯಗ್ಗಚ್ಛನ್ತಿ ನರಕಂ ಮಾನುಷ್ಯಂ ದೈವಮೇವ ಚ ।
ಸುಖದುಃಖೇ ಪ್ರಿಯೇ ದ್ವೇಷ್ಯೇ ಚರಿತ್ವಾ ಪೂರ್ವಮೇವ ಹ ॥೨೧॥

ಎಲ್ಲ ಪ್ರಾಣಿಗಳೂ ಮೊದಲು ಸುಖ-ದುಃಖಗಳನ್ನೂ, ಪ್ರಿಯಾಪ್ರಿಯಗಳನ್ನೂ ಅನುಭವಿಸಿ ಅನಂತರದಲ್ಲಿ ಆ ಜನ್ಮದಲ್ಲಿ ಮಾಡಿದ ಕರ್ಮಾನುಸಾರವಾಗಿ ನರಕಕ್ಕೆ ಹೋಗುತ್ತಾರೆ. ತಿರ್ಯಗ್ಯೋನಿಗಳಲ್ಲಿ ಹುಟ್ಟುತ್ತಾರೆ. ಮನುಷ್ಯಯೋನಿಗಳಲ್ಲಿ ಹುಟ್ಟುತ್ತಾರೆ. ಅಥವಾ ದೇವಯೋನಿಗಳಲ್ಲಿ ಹುಟ್ಟುತ್ತಾರೆ. (ಸ್ವರ್ಗಕ್ಕೆ ಹೋಗುತ್ತಾರೆ.) ಆ ಸ್ಥಾನಗಳು ಅವರವರ ಕರ್ಮಫಲಕ್ಕೆ ಅನುಸಾರವಾಗಿ ಲಭಿಸುತ್ತವೆ.

ಕೃತಾನ್ತವಿಧಿಸಂಯುಕ್ತಃ ಸರ್ವೋ ಲೋಕಃ ಪ್ರಪದ್ಯತೇ ।
ಗತಂ ಗಚ್ಛನ್ತಿ ಚಾಧ್ವಾನಂ ಸರ್ವಭೂತಾನಿ ಸರ್ವದಾ ॥೨೨॥

ಸಮಸ್ತಲೋಕವೂ (ಸಕಲಚರಾಚರಪ್ರಾಣಿಗಳೂ) ವಿಧಾತೃವಿನ ಕಟ್ಟಳೆಯಿಂದ ಕಟ್ಟಲ್ಪಟ್ಟುದಾಗಿ ಸುಖಗಳನ್ನೋ ಅಥವಾ ದುಃಖಗಳನ್ನೋ ಹೊಂದುತ್ತದೆ. ಎಲ್ಲ ಪ್ರಾಣಿಗಳೂ ಸರ್ವಕಾಲದಲ್ಲಿಯೂ ಸರ್ವರೂ ಸಂಚರಿಸುವ ಹಾದಿಯನ್ನೇ ಹಿಡಿದು ಹೋಗುತ್ತಿರುತ್ತವೆ.”

ಕಾಲಸಂಖ್ಯಾನಸಂಖ್ಯಾತಂ ಸೃಷ್ಟಿಸ್ಥಿತಿಪರಾಯಣಮ್ ।
ತಂ ಭಾಷಮಾಣಂ ಭಗವಾನುಶನಾ ಪ್ರತ್ಯಭಾಷತ ।
ಧೀಮಾನ್ದುಷ್ಟಪ್ರಲಾಪಾಂಸ್ತ್ವಂ ತಾತ ಕಸ್ಮಾತ್ಪ್ರಭಾಷಸೇ ॥೨೩॥

ಯಾರು ಕಾಲನೆಂಬ ಹೆಸರಿನಿಂದ ಪ್ರಸಿದ್ಧನಾಗಿರುವನೋ, ಸೃಷ್ಟಿ-ಸ್ಥಿತಿಗಳಿಗೆ ಯಾರು ಆಶ್ರಯನಾಗಿರುವನೋ–ಅಂತಹ ಪರಮಾತ್ಮನ ಹಿರಿಮೆಯನ್ನು ಪ್ರತಿಪಾದಿಸುತ್ತಿದ್ದ ವೃತ್ರಾಸುರನ ಮಾತನ್ನು ಕೇಳಿ ಭಗವಾನ್ ಶುಕ್ರರು ಹೇಳಿದರು :

“ಮಗು! ನೀನು ಬಹಳ ಬುದ್ಧಿವಂತನಾಗಿರುವೆ. ಆದರೂ ಅಸುರರ ಸ್ವಭಾವಕ್ಕೆ ವಿಪರೀತವಾದ, ದೋಷಯುಕ್ತವಾದ, ನಿರರ್ಥಕವಾದ ಇಂತಹ ಮಾತುಗಳನ್ನು ಏಕೆ ಹೇಳುತ್ತಿರುವೆ?”

ವೃತ್ರನು ಹೇಳುತ್ತಾನೆ :

“ಬ್ರಾಹ್ಮಣೋತ್ತಮರೇ! ನಿಮಗೂ ಮತ್ತು ಇತರ ಅನೇಕ

ವಿದ್ವಾಂಸರಿಗೂ ಸ್ಪಷ್ಟವಾಗಿ ತಿಳಿದಿರುವಂತೆ ನಾನು ಹಿಂದೆ ವಿಜಯದ ಲೋಭದಿಂದ ಮಹಾತಪಸ್ಸನ್ನೇ ಮಾಡಿದೆನು. ನನ್ನ ತೇಜಸ್ಸಿನಿಂದ ಮೂರು ಲೋಕಗಳನ್ನೂ ಆಕ್ರಮಿಸಿ ಪ್ರಾಣಿಗಳಲ್ಲಿದ್ದ ಗಂಧಗಳನ್ನೂ, ವಿಧ-ವಿಧವಾದ ರಸಗಳನ್ನೂ ಸಂಗ್ರಹಿಸಿಕೊಂಡು ಅಭಿವೃದ್ಧಿಯನ್ನು ಹೊಂದಿದೆನು. ನನ್ನ ಶರೀರದಿಂದ ಜ್ವಾಲೆಗಳ ಪಙ್ಕ್ತಿಗಳೇ ಹೊರಹೊಮ್ಮುತ್ತಿದ್ದುವು. ಭಯ ವೆಂಬುದೇ ಇಲ್ಲದೇ ಆಕಾಶದಲ್ಲಿಯೇ ಸಂಚರಿಸುತ್ತಿದ್ದೆನು. ಎಲ್ಲ ಪ್ರಾಣಿ ಗಳಿಂದಲೂ ಅಜೇಯನಾಗಿದ್ದೆನು. ತಪಸ್ಸಿನಿಂದ ಗಳಿಸಿದ್ದ ಐಶ್ವರ್ಯಗಳೆಲ್ಲವೂ ನಾನು ಮಾಡಿದ ದುಷ್ಕರ್ಮಗಳಿಂದಲೇ ಹಾಳಾಗಿಹೋದುವು. ಆದರೂ ನಾನು ಧೈರ್ಯವನ್ನು ಆಶ್ರಯಿಸಿ ಇಂತಹ ಪರಿಸ್ಥಿತಿಯು ಉಂಟಾದುದಕ್ಕಾಗಿ ದುಃಖಪಡುತ್ತಿಲ್ಲ. ಮಹಾತ್ಮನಾದ ಪುರುಷಶ್ರೇಷ್ಠನಾದ ಇಂದ್ರನು ಯುದ್ಧಮಾಡುವ ಇಚ್ಛೆಯಿಂದ ನನ್ನೆದುರಾಗಿ ನಿಂತಾಗ–ಅವನೊಡನೆ ಅವನ ಸಹಾಯಾರ್ಥವಾಗಿ ಆಗಮಿಸಿದ, ಸರ್ವರಿಗೂ ಪ್ರಭುವಾದ, ಭಗವಂತನಾದ, ನಾರಾಯಣನಾದ ಶ್ರೀಹರಿಯನ್ನು ನಾನು ನೋಡಿದೆನು.

ವೈಕುಣ್ಠಃ ಪುರುಷೋಽನನ್ತಃ ಶುಕ್ಲೋ ವಿಷ್ಣುಃ ಸನಾತನಃ ।
ಮುಞ್ಜಕೇಶೋ ಹರಿಶ್ಮಶ್ರುಃ ಸರ್ವಭೂತಪಿತಾಮಹಃ ॥೨೯॥

ಅವನು ವೈಕುಂಠವಾಸಿಯಾದುದರಿಂದ ವೈಕುಂಠನು. ಪರಮ ಪುರುಷನು. ಅಂತವಿಲ್ಲದವನು. ಶುಕ್ಲವರ್ಣನು. ಸರ್ವವ್ಯಾಪಕನು. ಸನಾತ ನನು. ಮುಂಜಹುಲ್ಲಿನಂತಹ ಕೇಶವುಳ್ಳವನು ; ಕಂದುಬಣ್ಣದ ಗಡ್ಡ-ಮೀಸೆ ಗಳುಳ್ಳವನು. ಸರ್ವಪ್ರಾಣಿಗಳಿಗೂ ಪಿತಾಮಹನು. ಭಗವನ್! ನಿಶ್ಚಯ ವಾಗಿಯೂ ನಾನು ಹಿಂದೆ ಮಾಡಿದ ತಪಸ್ಸಿನ ಫಲದಲ್ಲಿ ಸ್ವಲ್ಪ ಭಾಗವು ಉಳಿದಿದೆ. ಆದುದರಿಂದ ಈ ಕರ್ಮಫಲದ ವಿಷಯವಾಗಿ ನಿಮ್ಮನ್ನು ಪ್ರಶ್ನಿಸಲು ಇಚ್ಛಿಸುತ್ತೇನೆ.

ಐಶ್ವರ್ಯಂ ವೈ ಮಹದ್ಬ್ರಹ್ಮ ವರ್ಣೇ ಕಸ್ಮಿನ್ಪ್ರತಿಷ್ಠಿತಮ್ ।
ನಿವರ್ತತೇ ಚಾಪಿ ಪುನಃ ಕಥಮೈಶ್ವರ್ಯಮುತ್ತಮಮ್ ॥೩೦॥

ಅಣಿಮಾದಿ ಐಶ್ವರ್ಯಗಳೂ ಮತ್ತು ಮಹದ್ಬ್ರಹ್ಮವೂ ಯಾವ

ವರ್ಣದಲ್ಲಿ ಪ್ರತಿಷ್ಠಿತವಾಗಿವೆ? ಉತ್ತಮವಾದ ಆ ಐಶ್ವರ್ಯಗಳು ಹೇಗೆ ನಷ್ಟವಾಗಿ ಹೋಗುತ್ತವೆ?

ಕಸ್ಮಾದ್ಭೂತಾನಿ ಜೀವನ್ತಿ ಪ್ರವರ್ತನ್ತೇ ತಥಾ ಪುನಃ ।
ಕಿಂ ವಾ ಫಲಂ ಪರಂ ಪ್ರಾಪ್ಯ ಜೀವಸ್ತಿಷ್ಠತಿ ಶಾಶ್ವತಃ ॥೩೨॥

ಪ್ರಾಣಿಗಳು ಯಾವ ಕಾರಣದಿಂದ ಜೀವಂತವಾಗಿರುತ್ತವೆ? ಯಾವ ಕಾರಣದಿಂದ ಕರ್ಮಗಳಲ್ಲಿ ಪ್ರವೃತ್ತವಾಗುತ್ತವೆ? ಜೀವವು ಯಾವ ವಿಧವಾದ ಪರಮಫಲವನ್ನು ಪಡೆದುಕೊಂಡು ಅವಿನಾಶಿಯೂ–ಸನಾತನವೂ ಆಗುತ್ತದೆ?

ಕೇನ ವಾ ಕರ್ಮಣಾ ಶಕ್ಯಮಥ ಜ್ಞಾನೇನ ಕೇನ ವಾ ।
ತದವಾಪ್ತುಂ ಫಲಂ ವಿಪ್ರ ತನ್ಮೇ ವ್ಯಾಖ್ಯಾತುಮರ್ಹಸಿ ॥೩೩॥

ವಿಪ್ರಶ್ರೇಷ್ಠರೇ! ಯಾವ ಕರ್ಮದಿಂದ ಅಥವಾ ಯಾವ ಜ್ಞಾನದಿಂದ ಜೀವನು ಅವಿನಾಶಿಯೂ–ಸನಾತನವೂ ಆಗಬಹುದಾದ ಮಹಾಫಲವನ್ನು ಪಡೆದುಕೊಳ್ಳಬಹುದು? ಈ ವಿಷಯವನ್ನು ನನಗೆ ಹೇಳುವ ಕೃಪೆಮಾಡಿರಿ."

ಭೀಷ್ಮನು ಹೇಳುತ್ತಾನೆ :

"ರಾಜಸಿಂಹನೇ! ಪುರುಷಪ್ರವೀರನೇ! ಯುಧಿಷ್ಠಿರ! ವೃತ್ರಾಸುರನು ಹೀಗೆ ಪ್ರಶ್ನಿಸಿದನಂತರ ಆಚಾರ್ಯಶುಕ್ರರು ಆ ಸಮಯದಲ್ಲಿ ಹೇಳಿದ ಉತ್ತರವನ್ನೇ ನಿನ್ನೊಡನೆ ಹೇಳುವೆನು. ನಿನ್ನ ಸಹೋದರರೊಡನೆ ಏಕಾಗ್ರಚಿತ್ತನಾಗಿ ನಾನು ಹೇಳುವುದನ್ನು ಕೇಳು."

೨೭೯ನೆಯ ಅಧ್ಯಾಯವು ಮುಗಿಯಿತು.

ವೃತ್ರಾಸುರನಿಗೆ ಸನತ್ಕುಮಾರನಿಂದ ಅಧ್ಯಾತ್ಮವಿಷಯದ ಉಪದೇಶ : ಭೀಷ್ಮನಿಂದ ಯುಧಿಷ್ಠಿರನ ಸಂಶಯ ನಿವಾರಣೆ

ಶುಕ್ರಾಚಾರ್ಯರು ಹೇಳುತ್ತಾರೆ :

ನಮಸ್ತಸ್ಮೈ ಭಗವತೇ ದೇವಾಯ ಪ್ರಭವಿಷ್ಣವೇ ।
ಯಸ್ಯ ಪೃಥ್ವೀತಲಂ ತಾತ ಸಾಕಾಶಂ ಬಾಹುಗೋಚರಃ ॥೧॥

"ಆಕಾಶಸಹಿತವಾದ ಈ ಪೃಥ್ವಿಯು ಯಾವನ ಭುಜಬಲದಿಂದ ನಿಂತಿರುವುದೋ–ಮಹಾಪ್ರಭಾವಶಾಲಿಯಾದ ಭಗವಂತನಾದ ಅಂತಹ ಮಹಾವಿಷ್ಣುವಿಗೆ ನಮಸ್ಕಾರಮಾಡುತ್ತೇನೆ.

ಮೂರ್ಧಾ ಯಸ್ಯ ತ್ವನನ್ತಂ ಚ ಸ್ಥಾನಂ ದಾನವಸತ್ತಮ ।
ತಸ್ಯಾಹಂ ತೇ ಪ್ರವಕ್ಷ್ಯಾಮಿ ವಿಷ್ಣೋರ್ಮಾಹಾತ್ಮ್ಯಮುತ್ತಮಮ್ ॥೨॥

ದಾನವಶ್ರೇಷ್ಠನೇ! ಯಾವನ ತಲೆಯೂ ಮತ್ತು ಸ್ಥಾನವೂ ಅನಂತವಾದುದೋ–ಅಂತಹ ಭಗವಾನ್ ಮಹಾವಿಷ್ಣುವಿನ ಶ್ರೇಷ್ಠವಾದ ಮಾಹಾತ್ಮ್ಯವನ್ನು ಹೇಳುತ್ತೇನೆ."

ಯುಧಿಷ್ಠಿರ! ವೃತ್ರ-ಶುಕ್ರರಿಬ್ಬರೂ ಹೀಗೆ ಮಾತನಾಡುತ್ತಿದ್ದಾಗ ಅವರ ಸಂಶಯದ ನಿವಾರಣೆಗಾಗಿ ಮಹಾಮುನಿಯಾದ, ಧರ್ಮಾತ್ಮನಾದ, ಭಗವಂತನಾದ ಸನತ್ಕುಮಾರನು ಅಲ್ಲಿಗೆ ಆಗಮಿಸಿದನು. ಅಸುರೇಂದ್ರನಾದ ವೃತ್ರನಿಂದಲೂ–ಶುಕ್ರರಿಂದಲೂ ಪೂಜಿಸಲ್ಪಟ್ಟ ಮುನಿಶ್ರೇಷ್ಠನಾದ ಸನತ್ಕುಮಾರನು ಬಹುಮೂಲ್ಯವಾದ ಆಸನದಲ್ಲಿ ಕುಳಿತುಕೊಂಡನು.

ವರಾಸನದಲ್ಲಿ ಕುಳಿತಿದ್ದ ಮಹಾಪ್ರಾಜ್ಞನಾದ ಭಗವಾನ್ ಸನತ್ಕುಮಾರನನ್ನು ಕುರಿತು ಶುಕ್ರರು ಹೇಳಿದರು :

"ಸನತ್ಕುಮಾರ! ಈ ದಾನವಶ್ರೇಷ್ಠನಿಗೆ ಮಹಾವಿಷ್ಣುವಿನ ಉತ್ತಮೋತ್ತಮವಾದ ಮಾಹಾತ್ಮ್ಯವನ್ನು ತಿಳಿಯಪಡಿಸು."

ಶುಕ್ರರ ಮಾತನ್ನು ಕೇಳಿ ಸನತ್ಕುಮಾರನು ಬುದ್ಧಿವಂತನಾದ ವೃತ್ರಾಸುರನಿಗೆ ವಿಷ್ಣುವಿನ ಮಹಿಮೆಯಿಂದ ಯುಕ್ತವಾದ ಅರ್ಥವತ್ತಾದ ಈ ಮಾತುಗಳನ್ನು ಹೇಳತೊಡಗಿದನು :

"ದೈತ್ಯೇಶ್ವರ! ಪರಂತಪನೇ! ಭಗವಾನ್ ನಾರಾಯಣನ ಸಂಪೂರ್ಣವಾದ ಮತ್ತು ಉತ್ತಮೋತ್ತಮವಾದ ಮಾಹಾತ್ಮ್ಯವನ್ನು ಕೇಳು.

ವಿಷ್ಣುವಿನಲ್ಲಿಯೇ ಈ ಜಗತ್ತೆಲ್ಲವೂ ಪ್ರತಿಷ್ಠಿತವಾಗಿರುವುದೆಂಬುದನ್ನು ತಿಳಿಯಬೇಕು.

ಸೃಜತ್ಯೇಷ ಮಹಾಬಾಹೋ ಭೂತಗ್ರಾಮಂ ಚರಾಚರಮ್ ।
ಏಷ ಚಾಕ್ಷಿಪತೇ ಕಾಲೇ ಕಾಲೇ ವಿಸೃಜತೇ ಪುನಃ ॥೮॥

ಮಹಾಬಾಹುವೇ! ಮಹಾವಿಷ್ಣುವು ಸಮಗ್ರವಾದ ಈ ಚರಾಚರ ಪ್ರಾಣಿಸಮುದಾಯವನ್ನೂ ಸೃಷ್ಟಿಸುತ್ತಾನೆ. ಮುಂದೆ ಕಾಲವು ಸನ್ನಿಹಿತವಾದಾಗ ಅವನೇ ವಿನಾಶಗೊಳಿಸುತ್ತಾನೆ. ಸಮಯವು ಬಂದಾಗ ಪುನಃ ಸೃಷ್ಟಿಸುತ್ತಾನೆ.


ಅಸ್ಮಿನ್ಗಚ್ಛನ್ತಿ ವಿಲಯಮಸ್ಮಾಚ್ಚ ಪ್ರಭವನ್ತ್ಯುತ ।
ನೈಷ ಜ್ಞಾನವತಾ ಶಕ್ಯಸ್ತಪಸಾ ನೈವ ಚೇಜ್ಯಯಾ ।
ಸಮ್ಪ್ರಾಪ್ತುಮಿನ್ದ್ರಿಯಾಣಾಂ ತು ಸಂಯಮೇನೈವ ಶಕ್ಯತೇ ॥೯॥

ಸಮಸ್ತಪ್ರಾಣಿಗಳೂ ಮಹಾವಿಷ್ಣುವಿನಲ್ಲಿಯೇ ಲಯವಾಗುತ್ತವೆ. ಅವನಿಂದಲೇ ಪುನಃ ಪ್ರಾದುರ್ಭವಿಸುತ್ತವೆ. ಶಾಸ್ತ್ರಗಳ ಜ್ಞಾನದಿಂದಾಗಲೀ, ತಪಸ್ಸಿನಿಂದಾಗಲೀ, ಯಜ್ಞಕರ್ಮಗಳಿಂದಾಗಲೀ–ಅವನನ್ನು ಹೊಂದಲು ಸಾಧ್ಯವಾಗುವುದಿಲ್ಲ. ಇಂದ್ರಿಯಗಳ ಸಂಯಮದಿಂದ ಮಾತ್ರವೇ ಅವನನ್ನು ಹೊಂದಲು ಸಾಧ್ಯವಾಗುತ್ತದೆ.

ಬಾಹ್ಯೇ ಚಾಭ್ಯನ್ತರೇ ಚೈವ ಕರ್ಮಣೋರ್ಮನಸಿ ಸ್ಥಿತಃ ।
ನಿರ್ಮಲೀಕುರುತೇ ಬುದ್ಧ್ಯಾ ಸೋಽಮುತ್ರಾನನ್ತ್ಯಮಶ್ನುತೇ ॥೧೦॥

ಯಾವನು ಬಾಹ್ಯಾಭ್ಯಂತರ (ಯಜ್ಞ-ಶಮಾದಿ) ಶುಭಕರ್ಮಗಳಿಂದ ಮನಸ್ಸನ್ನು ಸ್ಥಿರಗೊಳಿಸಿ, ಬುದ್ಧಿಯ ಮೂಲಕವಾಗಿ ಶರೀರದ

ಹೊರಗೂ ಮತ್ತು ಒಳಗೂ ಎಲ್ಲವನ್ನೂ ಸ್ವಚ್ಛಗೊಳಿಸುತ್ತಾನೆಯೋ– ಅವನು ಪರಲೋಕದಲ್ಲಿ ಅನಂತವಾದ ಮೋಕ್ಷವನ್ನು ಹೊಂದುತ್ತಾನೆ.



ಯಥಾ ಹಿರಣ್ಯಕರ್ತಾ ವೈ ರೂಪ್ಯಮಗ್ನೌ ವಿಶೋಧಯೇತ್ ।
ಬಹುಶೋಽತಿಪ್ರಯತ್ನೇನ ಮಹತಾತ್ಮಕೃತೇನ ಹ ॥೧೧॥

ತದ್ವಜ್ಜಾತಿಶತೈರ್ಜೀವಃ ಶುದ್ಧ್ಯತೇಽನೇನ ಕರ್ಮಣಾ ।
ಯತ್ನೇನ ಮಹತಾ ಚೈವಾಪ್ಯೇಕಜಾತೌ ವಿಶುದ್ಧ್ಯತೇ ॥೧೨॥

ಅಕ್ಕಸಾಲಿಗನು ಯಾವ ರೀತಿಯಲ್ಲಿ ಹಲವು ಬಾರಿ ಬೆಳ್ಳಿಯನ್ನು

ಬೆಂಕಿಯಲ್ಲಿ ಹಾಕಿ ಅತಿಪ್ರಯತ್ನದಿಂದ ಶುದ್ಧಿಗೊಳಿಸುತ್ತಾನೆಯೋ– ಹಾಗೆಯೇ ಜೀವನು ನೂರಾರು ಜನ್ಮಗಳನ್ನು ಪಡೆದನಂತರ ಮನಸ್ಸನ್ನು ಶುದ್ಧಿಗೊಳಿಸುತ್ತಾನೆ. ಆದರೆ ಯಜ್ಞ ಮತ್ತು ಶಮ-ದಮಾದಿ ಕರ್ಮಗಳ ಮೂಲಕವಾಗಿ ಜೀವನು ಮಹಾಪ್ರಯತ್ನವನ್ನೇ ಮಾಡಿದರೆ ಒಂದೇ ಜನ್ಮದಲ್ಲಿಯೇ ಶುದ್ಧನಾಗಬಲ್ಲನು.

ಲೀಲಯಾಲ್ಪಂ ಯಥಾ ಗಾತ್ರಾತ್ಪ್ರಮೃಜ್ಯಾದಾತ್ಮನೋ ರಜಃ ।
ಬಹುಯತ್ನೇನ ಮಹತಾ ದೋಷನಿರ್ಹರಣಂ ತಥಾ ॥೧೩॥

ಯಾವ ರೀತಿಯಲ್ಲಿ ಮನುಷ್ಯನು ತನ್ನ ಶರೀರದಲ್ಲಿ ಸೇರಿಕೊಂಡಿರುವ ಅಲ್ಪವಾದ ಧೂಳನ್ನು ಸುಲಭಸಾಧ್ಯವಾದ ಪ್ರಯತ್ನದಿಂದ (ಕೊಡವಿಕೊಳ್ಳುವುದರಿಂದ) ಹೋಗಲಾಡಿಸಿಕೊಳ್ಳುವನೋ–ಅದೇ ರೀತಿಯಲ್ಲಿ ಶರೀರದ ಒಳಗೆ ಅಡಗಿರುವ ಮಹತ್ತರವಾದ ರಾಗ-ದ್ವೇಷಾದಿ ದೋಷಗಳನ್ನು ಮಹಾಪ್ರಯತ್ನದಿಂದ ಹೋಗಲಾಡಿಸಿಕೊಳ್ಳಬಹುದು.

ಯಥಾ ಚಾಲ್ಪೇನ ಮಾಲ್ಯೇನ ವಾಸಿತಂ ತಿಲಸರ್ಷಪಮ್ ।
ನ ಮುಞ್ಚತಿ ಸ್ವಕಂ ಗನ್ಧಂ ತದ್ವತ್ಸೂಕ್ಷ್ಮಸ್ಯ ದರ್ಶನಮ್ ॥೧೪॥

ಯಾವ ರೀತಿಯಲ್ಲಿ ಚಿಕ್ಕಮಾಲೆಯಿಂದ ಅಥವಾ ಸ್ವಲ್ಪವೇ ಹೂಗಳಿಂದ ಸುವಾಸಿತವಾದ (ನೆನೆಸಲ್ಪಟ್ಟ) ಎಳ್ಳಿನ ಮತ್ತು ಸಾಸವೆಯ ಎಣ್ಣೆಯು ತನ್ನಲ್ಲಿರುವ ಗಂಧವನ್ನು ಬಿಟ್ಟುಕೊಡುವುದಿಲ್ಲವೋ – ಅದೇ ರೀತಿಯಲ್ಲಿ ಮನುಷ್ಯನ ಪೂರ್ವಜನ್ಮಾನುಗತವಾಗಿ ಬಂದ ವಾಸನೆಗಳು ಸುಲಭವಾಗಿ ಬಿಟ್ಟುಹೋಗುವುದಿಲ್ಲ. ಅಂತೆಯೇ ಸೂಕ್ಷ್ಮವಾದ ಪರಬ್ರಹ್ಮವಸ್ತುವಿನ ಸಾಕ್ಷಾತ್ಕಾರವು ಆಗುವುದಿಲ್ಲ.

ತದೇವ ಬಹುಭಿರ್ಮಾಲ್ಯೈರ್ವಾಸ್ಯಮಾನಂ ಪುನಃ ಪುನಃ ।
ವಿಮುಞ್ಚತಿ ಸ್ವಕಂ ಗನ್ಧಂ ಮಾಲ್ಯಗನ್ಧೇ ಚ ತಿಷ್ಠತಿ ॥೧೫॥

ಏವಂ ಜಾತಿಶತೈರ್ಯುಕ್ತೋ ಗುಣೈರೇವ ಪ್ರಸಜ್ಜಿಷು ।
ಬುದ್ಧ್ಯಾ ನಿವರ್ತತೇ ದೋಷೋ ಯತ್ನೇನಾಭ್ಯಾಸಜೇನ ಹ ॥೧೬॥

ಆದರೆ ಅದೇ ಎಳ್ಳಿನ ಅಥವಾ ಸಾಸವೆಯ ಎಣ್ಣೆಯಲ್ಲಿ ಹತ್ತಾರು

ಮಾಲೆಗಳನ್ನು ನೆನೆಸಿದರೆ, ಹೆಚ್ಚು ಹೂಗಳನ್ನು ಪುನಃ ಪುನಃ ಹಾಕುತ್ತಿದ್ದರೆ ಆಗ ಆ ಎಣ್ಣೆಯು ತನ್ನ ಸ್ವಾಭಾವಿಕವಾದ ವಾಸನೆಯನ್ನು ಬಿಟ್ಟು ಪುಷ್ಪಮಾಲೆಯ ಗಂಧದಲ್ಲಿಯೇ ಸ್ಥಿರವಾಗಿ ಉಳಿಯುತ್ತದೆ. (ಪುಷ್ಪಕ್ಕಿರುವ ಗಂಧವನ್ನೇ ಹೊಂದುತ್ತದೆ.) ಹೀಗೆ ನೂರಾರು ಜನ್ಮಗ್ಳಿಂದ ಸತ್ವ-ರಜ ಸ್ತಮೋಗುಣಗಳಿಂದ ಆವಿರ್ಭೂತನಾಗಿ ಸ್ತ್ರೀ-ಪುತ್ರರೇ ಮೊದಲಾದವ ರೊಡನೆ ಸಂಸರ್ಗವನ್ನು ಹೊಂದಿದ ಜೀವಿಯು ಅಭ್ಯಾಸಜನ್ಯವಾದ ಪ್ರಯತ್ನದಿಂದಲೂ ಬುದ್ಧಿಯಿಂದಲೂ ಕಾಮ-ಕ್ರೋಧಾದಿ ದೋಷಗಳ ಸಮೂಹವನ್ನು ನಿವಾರಿಸಿಕೊಳ್ಳಬೇಕು.

ಕರ್ಮಣಾ ಸ್ವನುರಕ್ತಾನಿ ವಿರಕ್ತಾನಿ ಚ ದಾನವ ।
ಯಥಾ ಕರ್ಮವಿಶೇಷಾಂಶ್ಚ ಪ್ರಾಪ್ನುವನ್ತಿ ತಥಾ ಶೃಣು ॥೧೭॥

ದನುಪುತ್ರನೇ! ಕರ್ಮದಲ್ಲಿ ಆಸಕ್ತವಾದ ಪ್ರಾಣಿಗಳು ಮತ್ತು ಕರ್ಮದಲ್ಲಿ ನಿರಾಸಕ್ತವಾದ ಪ್ರಾಣಿಗಳು ರಾಗ ಮತ್ತು ವಿರಾಗಗಳಿಗೆ ಹೇತುಭೂತವಾದ ವಿಭಿನ್ನಕರ್ಮಗಳನ್ನು ಹೇಗೆ ಹೊಂದುತ್ತವೆಯೆಂಬುದನ್ನು ಹೇಳುವೆನು, ಕೇಳು.

ಯಥಾವತ್ಸಮ್ಪ್ರವರ್ತನ್ತೇ ಯಸ್ಮಿಂಸ್ತಿಷ್ಠನ್ತಿ ವಾ ವಿಭೋ ।
ತತ್ತೇಽನುಪೂರ್ವ್ಯಾ ವ್ಯಾಖ್ಯಾಸ್ಯೇ ತದಿಹೈಕಮನಾಃ ಶೃಣು ॥೧೮॥

ಪ್ರಭುವೇ! ಯಾವ ರೀತಿಯಲ್ಲಿ ಪ್ರಾಣಿಗಳು ಕರ್ಮಗಳಲ್ಲಿ ಪ್ರವೃತ್ತ ವಾಗುತ್ತವೆ? ಯಾವ ಕಾರಣದಿಂದ ಅದೇ ಸ್ಥಿತಿಯಲ್ಲಿ ಅವು ಮುಂದು ವರಿಯುತ್ತವೆ? ಯಾವ ಅವಸ್ಥೆಯಲ್ಲಿ ಅವು ಕರ್ಮಗಳಿಂದ ನಿವೃತ್ತ ವಾಗುತ್ತವೆ? ಈ ಎಲ್ಲವನ್ನೂ ನಿನಗೆ ಅನುಕ್ರಮವಾಗಿ ಹೇಳುತ್ತೇನೆ, ಕೇಳು.

ಅನಾದಿನಿಧನಃ ಶ್ರೀಮಾನ್ಹರಿರ್ನಾರಾಯಣಃ ಪ್ರಭುಃ ।
ದೇವಃ ಸೃಜತಿ ಭೂತಾನಿ ಸ್ಥಾವರಾಣಿ ಚರಾಣಿ ಚ ॥೧೯॥

ಸಂಪದ್ಯುಕ್ತನಾದ, ಪ್ರಭುವಾದ, ಹರಿನಾಮಕನಾದ ನಾರಾಯಣನು ಆದ್ಯಂತರಹಿತನು. ಅವನೇ ಈ ಚರಾಚರಪ್ರಾಣಿಗಳನ್ನು ಸೃಷ್ಟಿಸುತ್ತಾನೆ.

ಸ ವೈ ಸರ್ವೇಷು ಭೂತೇಷು ಕ್ಷರಶ್ಚಾಕ್ಷರ ಏವ ಚ ।
ಏಕಾದಶವಿಕಾರಾತ್ಮಾ ಜಗತ್ಪಿಬತಿ ರಶ್ಮಿಭಿಃ ॥೨೦॥

ಆ ನಾರಾಯಣನೇ ಸರ್ವಪ್ರಾಣಿಗಳಲ್ಲಿಯೂ ಕ್ಷರಾತ್ಮಕನಾಗಿಯೂ–ಅಕ್ಷರಾತ್ಮಕನಾಗಿಯೂ ಇದ್ದಾನೆ. (ಐದು ಜ್ಞಾನೇಂದ್ರಿಯಗಳು ಐದು ಕರ್ಮೇಂದ್ರಿಯಗಳು ಮತ್ತು ಮನಸ್ಸುಗಳೆಂಬ) ಹನ್ನೊಂದು ವಿಕಾರಗಳನ್ನು ಹೊಂದಿರುವ ಕ್ಷರಾಕ್ಷರಾತ್ಮಕನಾದ ಶ್ರೀಮನ್ನಾರಾಯಣನು ತನ್ನ ಕಿರಣಗಳಿಂದ ಜಗತ್ತೆಲ್ಲವನ್ನೂ ವ್ಯಾಪಿಸಿದ್ದಾನೆ.

ಪಾದೌ ತಸ್ಯ ಮಹೀಂ ವಿದ್ಧಿ ಮೂರ್ಧಾನಂ ದಿವಮಿತ್ಯುತ ।
ಬಾಹವಸ್ತು ದಿಶೋ ದೈತ್ಯ ಶ್ರೋತ್ರಮಾಕಾಶಮೇವ ಚ ॥೨೧॥

ತಸ್ಯ ತೇಜೋಮಯಃ ಸೂರ್ಯೋ ಮನಶ್ಚನ್ದ್ರಮಸಿ ಸ್ಥಿತಮ್ ।
ಬುದ್ಧಿರ್ಜ್ಞಾನಗತಾ ನಿತ್ಯಂ ರಸಸ್ತ್ವಪ್ಸು ಪ್ರತಿಷ್ಠಿತಃ ॥೨೨॥

ದೈತ್ಯರಾಜ! ಪೃಥ್ವಿಯೇ ಭಗವಾನ್ ವಿಷ್ಣುವಿನ ಎರಡು ಪಾದಗಳಾಗಿವೆ. ಸ್ವರ್ಗಲೋಕವೇ ಅವನ ಮಸ್ತಕವಾಗಿದೆ. ನಾಲ್ಕು ದಿಕ್ಕುಗಳೇ ನಾಲ್ಕು ತೋಳುಗಳಾಗಿವೆ. ಆಕಾಶವೇ ಕಿವಿಗಳಾಗಿವೆ. ತೇಜೋಮಯನಾದ ಸೂರ್ಯನೇ ಅವನ ಕಣ್ಣುಗಳ ರೂಪದಲ್ಲಿದ್ದಾನೆ. ಚಂದ್ರನೇ ಮನಸ್ಸಿನ ರೂಪದಲ್ಲಿದ್ದಾನೆ. ಅವನ ಬುದ್ಧಿಯು (ಮಹತ್ತತ್ತ್ವವು) ಜ್ಞಾನದಲ್ಲಿಯೇ ಅಂತರ್ಗತವಾಗಿದೆ. ರಸವು ನೀರಿನಲ್ಲಿ ಪ್ರತಿಷ್ಠಿತವಾಗಿದೆ. (ನೀರು ಮಹಾ ವಿಷ್ಣುವಿನ ರಸನೇಂದ್ರಿಯವಾಗಿದೆ.)

ಭ್ರುವೋರನನ್ತರಾಸ್ತಸ್ಯ ಗ್ರಹಾ ದಾನವಸತ್ತಮ ।
ನಕ್ಷತ್ರಚಕ್ರಂ ನೇತ್ರಾಭ್ಯಾಂ ಪಾದಯೋರ್ಭೂಶ್ಚ ದಾನವ ॥೨೩॥

ಎಲ್ಲ ಗ್ರಹಗಳೂ ಶ್ರೀಮನ್ನಾರಾಯಣನ ಎರಡು ಹುಬ್ಬುಗಳ ನಡುಭಾಗದಲ್ಲಿವೆ. ಕಣ್ಣುಗಳಿಂದ ನಕ್ಷತ್ರಮಂಡಲವು ಪ್ರಕಟವಾಗುತ್ತದೆ. ಈ ಪೃಥ್ವಿಯು ಅವನ ಎರಡು ಪಾದಗಳಲ್ಲಿ ಪ್ರತಿಷ್ಠಿತವಾಗಿದೆ.

ರಜಸ್ತಮಶ್ಚ ಸತ್ತ್ವಂ ಚ ವಿದ್ಧಿ ನಾರಾಯಣಾತ್ಮಕಮ್ ।
ಸೋಽಶ್ರಮಾಣಾಂ ಫಲಂ ತಾತ ಕರ್ಮಣಸ್ತತ್ಫಲಂ ವಿದುಃ ॥೨೪॥

ಸತ್ತ್ವ-ರಜಸ್ತಮೋಗುಣಗಳು ನಾರಾಯಣಮಯವೆಂಬುದನ್ನು ತಿಳಿ

ಯುವವನಾಗು. ಎಲ್ಲ ಆಶ್ರಮಧರ್ಮಗಳ ಫಲಸ್ವರೂಪನೂ ಅವನೇ ಆಗಿದ್ದಾನೆ. ಸಮಸ್ತಕರ್ಮಗಳಿಂದ ಲಭಿಸುವ ಫಲವೂ ಅವನೇ–ಎಂದು ವಿದ್ವಾಂಸರು ಹೇಳುತ್ತಾರೆ.

ಅಕರ್ಮಣಃ ಫಲಂ ಚೈವ ಸ ಏವ ಪರಮವ್ಯಯಃ ।
ಛನ್ದಾಂಸಿ ಯಸ್ಯ ರೋಮಾಣಿ ಹ್ಯಕ್ಷರಂ ಚ ಸರಸ್ವತೀ ॥೨೫॥

ಫಲತ್ಯಾಗರೂಪವಾದ ಯಾವ ನಿಷ್ಕಾಮಕರ್ಮವಿರುವುದೋ–ಅದರ ಫಲರೂಪನೂ ಅವಿನಾಶಿಯಾದ ಪರಮಾತ್ಮನೇ ಆಗಿದ್ದಾನೆ. ವೇದಮಂತ್ರಗಳೇ ಅವನ ರೋಮಕೋಟಿಗಳಾಗಿವೆ. ಪ್ರಣವವೇ ಅವನ ವಾಣಿಯಾಗಿದೆ.

ಬಹ್ವಾಶ್ರಯೋ ಬಹುಮುಖೋ ಧರ್ಮೋ ಹೃದಿ ಸಮಾಶ್ರಿತಃ ।
ಸ ಬ್ರಹ್ಮ ಪರಮೋ ಧರ್ಮಸ್ತಪಶ್ಚ ಸದಸಚ್ಚ ಸಃ ॥೨೬॥

ಅನೇಕ ವರ್ಣಗಳು ಮತ್ತು ಆಶ್ರಮಗಳು ಇವುಗಳನ್ನು ಆಶ್ರಯಿಸಿರುವ ಬಹುಪ್ರಕಾರವಾದ ಧರ್ಮವೂ ಅವನೇ ಆಗಿದ್ದಾನೆ. ಸರ್ವರ ಹೃದಯವನ್ನೂ ಆಶ್ರಯಿಸಿರುವ ಅವನೇ ಪರಬ್ರಹ್ಮವು. ಆತ್ಮದರ್ಶನ*ರೂಪವಾದ ಪರಮಧರ್ಮವೂ ಅವನೇ ಆಗಿದ್ದಾನೆ. ತಪಸ್ಸಿನ ಸ್ವರೂಪನೂ, ಕಾರ್ಯಕಾರಣನೂ ಅವನೇ ಆಗಿದ್ದಾನೆ.

ಶ್ರುತಿಶಾಸ್ತ್ರಗ್ರಹೋಪೇತಃ ಷೋಡಶರ್ತ್ವಿಕ್ಕ್ರತುಶ್ಚ ಸಃ ।
ಪಿತಾಮಹಶ್ಚ ವಿಷ್ಣುಶ್ಚ ಸೋಽಶ್ವಿನೌ ಸ ಪುರಂದರಃ ।
ಮಿತ್ರೋಽಥ ವರುಣಶ್ಚೈವ ಯಮೋಽಥ ಧನದಸ್ತಥಾ ॥೨೭॥

ವೇದ, ಶಾಸ್ತ್ರ ಮತ್ತು ಸೋಮಪಾತ್ರಸಹಿತರಾದ ಹದಿನಾರು ಋತ್ವಿಜರನ್ನೊಳಗೊಂಡ* ಯಜ್ಞವೂ ಶ್ರೀಮನ್ನಾರಾಯಣನೇ ಆಗಿದ್ದಾನೆ. ಬ್ರಹ್ಮಾ

---

* ಆತ್ಮಸಾಕ್ಷಾತ್ಕಾರವನ್ನೇ ಪರಮಧರ್ಮವೆಂದು ಯಾಜ್ಞವಲ್ಕ್ಯರು ಹೇಳಿದ್ದಾರೆ.

ಇಜ್ಯಾಚಾರದಮಾಹಿಂಸಾದಾನಸ್ವಾಧ್ಯಾಯಕರ್ಮಣಾಮ್ ।
ಅಯಂ ತು ಪರಮೋ ಧರ್ಮೋ ಯದ್ಯೋಗೇನಾತ್ಮದರ್ಶನಮ್ ॥

* ಯಜ್ಞದಲ್ಲಿ ಭಾಗವಹಿಸುವ ಹದಿನಾರು ಮಂದಿ ಋತ್ವಿಜರ ಯಾಜ್ಞಿಕ ನಾಮಧೇಯಗಳು ಹೀಗಿವೆ : ಬ್ರಹ್ಮಾ, ಬ್ರಾಹ್ಮಣಾಚ್ಛಂಸಿ, ಆಗ್ನೀಧ್ರ ಮತ್ತು ಪೋತಾ–ಈ ನಾಲ್ವರೂ ಬ್ರಹ್ಮಗಣದವರು. ಎಲ್ಲ ವೇದಗಳನ್ನೂ ತಿಳಿದವರಾಗಿರುತ್ತಾರೆ. ಹೋತಾ,

ವಿಷ್ಣು, ಅಶ್ವಿನೀಕುಮಾರರು, ಇಂದ್ರ, ಮಿತ್ರ, ವರುಣ, ಯಮ ಮತ್ತು ಕುಬೇರ–ಇವರೆಲ್ಲರೂ ಶ್ರೀಮನ್ನಾರಾಯಣನೇ. (ಅವನ ಅಂಶ, ಅವನ ದೇಹ ಅಥವಾ ರೂಪಗಳು.)

ತೇ ಪೃಥಗ್ದರ್ಶನಾಸ್ತಸ್ಯ ಸಂವಿದನ್ತಿ ತಥೈಕತಾಮ್ ।
ಏಕಸ್ಯ ವಿದ್ಧಿ ದೇವಸ್ಯ ಸರ್ವಂ ಜಗದಿದಂ ವಶೇ ॥೨೮॥

ಆ ದೇವತೆಗಳೆಲ್ಲರೂ ಶ್ರೀಮನ್ನಾರಾಯಣನ ಪ್ರತ್ಯೇಕ-ಪ್ರತ್ಯೇಕವಾದ ರೂಪಗಳೇ ಆಗಿರುತ್ತಾರೆ. ಇಂದ್ರಾವರುಣಾದಿ ದೇವತಾತ್ಮಕನಾಗಿರತಕ್ಕವನು ಅವನೊಬ್ಬನೇ ಎಂದು ಜ್ಞಾನಿಗಳಾದವರು ಚೆನ್ನಾಗಿ ತಿಳಿದಿರುತ್ತಾರೆ. ಈ ಸಕಲಜಗತ್ತೂ ಆ ಒಬ್ಬನೇ ಒಬ್ಬ ದೇವನ ಅಧೀನದಲ್ಲಿದೆಯೆಂಬುದನ್ನು ನೀನು ತಿಳಿ.

ನಾನಾಭೂತಸ್ಯ ದೈತ್ಯೇನ್ದ್ರ ತಸ್ಯೈಕತ್ವಂ ವದತ್ಯಯಮ್ ।
ಜನ್ತುಃ ಪಶ್ಯತಿ ವಿಜ್ಞಾನಾತ್ತತೋ ಬ್ರಹ್ಮ ಪ್ರಕಾಶತೇ ॥೨೯॥

ದೈತ್ಯರಾಜ! ಅನೇಕರೂಪಗಳಲ್ಲಿ ಪ್ರಕಟವಾಗಿರುವ ಪರಮಾತ್ಮನ ಏಕತ್ವವನ್ನು ವೇದವು **ಏಕಂ ಸನ್ತಂ ಬಹುಧಾ ಕಲ್ಪಯನ್ತಿ । ಯೋ ದೇವಾನಾಂ ನಾಮಧಾ ಏಕ ಏವ ।** ಇತ್ಯಾದಿ ವಾಕ್ಯಗಳಿಂದ ಪ್ರತಿಪಾದಿಸುತ್ತದೆ. ಮನುಷ್ಯನು ವಿಜ್ಞಾನದಿಂದ ಬ್ರಹ್ಮಸಾಕ್ಷಾತ್ಕಾರವನ್ನು ಮಾಡಿಕೊಳ್ಳುತ್ತಾನೆ. ಆಗ ಬ್ರಹ್ಮವಸ್ತುವು ಹೃದಯದಲ್ಲಿ ಪ್ರಕಾಶಿಸುತ್ತದೆ. (ವೇದವು ಪ್ರತಿಪಾದಿಸುವುದನ್ನು ಯೋಗಿಗಳು ಆತ್ಮಸಾಕ್ಷಾತ್ಕಾರದ ಮೂಲಕ ಕಂಡುಕೊಳ್ಳುತ್ತಾರೆ.)

ಮೈತ್ರಾವರುಣ, ಆಚ್ಛಾವಾಕ ಮತ್ತು ಗ್ರಾವಸ್ತೋತಾ–ಈ ನಾಲ್ವರು ಋಗ್ವೇದಿಗಳು. ಯಜ್ಞದಲ್ಲಿ ಋಗ್ವೇದಕ್ಕೆ ಸಂಬಂಧಿಸಿದ ಮಂತ್ರಗಳನ್ನು ಹೇಳುವವರು. ಅಧ್ವರ್ಯು, ಪ್ರತಿಪಸ್ಥಾತಾ, ನೇಷ್ಟಾ ಮತ್ತು ಉನ್ನೇತಾ–ಈ ನಾಲ್ವರು ಯಜುರ್ವೇದಿಗಳು. ಯಜ್ಞದಲ್ಲಿ ಯಜುರ್ವೇದಕ್ಕೆ ಸಂಬಂಧಿಸಿದ ಮಂತ್ರಗಳನ್ನು ಹೇಳುವವರು ಮತ್ತು ಕಾರ್ಯಗಳನ್ನು ಮಾಡುವವರು. ಉದ್ಗಾತಾ, ಪ್ರಸ್ತೋತಾ, ಪ್ರತಿಹರ್ತಾ ಮತ್ತು ಸುಬ್ರಹ್ಮಣ್ಯ–ಈ ನಾಲ್ವರು ಸಾಮವೇದಿಗಳು. ಯಜ್ಞದಲ್ಲಿ ಸಾಮವೇದಕ್ಕೆ ಸಂಬಂಧಿಸಿದ ಸಾಮಗಳನ್ನು ಗಾನಮಾಡುವವರು.

*** ಸಂಹಾರವಿಕ್ಷೇಪಸಹಸ್ರಕೋಟೀ-**
ಸ್ತಿಷ್ಠನ್ತಿ ಜೀವಾಃ ಪ್ರಚರನ್ತಿ ಚಾನ್ಯೇ ।
ಪ್ರಜಾವಿಸರ್ಗಸ್ಯ ಚ ಪಾರಿಮಾಣ್ಯಂ
ವಾಪೀಸಹಸ್ರಾಣಿ ಬಹೂನಿ ದೈತ್ಯ ॥೩೦॥

ದೈತ್ಯರಾಜ! ಸಾವಿರಕೋಟಿ ಸಂಹಾರ-ಸೃಷ್ಟಿಗಳಲ್ಲೂ ಕೆಲವು ಜೀವಿಗಳು (ಮುಕ್ತಾತ್ಮರು) ವಿಕಾರಹೊಂದದೇ ಹಾಗೆಯೇ ಇರುತ್ತಾರೆ. ಇತರ ಅಸಂಖ್ಯಜೀವಿಗಳು ಸಂಸಾರಕ್ಕೆ ವಶರಾಗಿ ಸಂಚರಿಸುತ್ತಾರೆ. (ವಿಕ್ಷೇಪಃ= ಸೃಷ್ಟಿಗೆ ಎರಚಲ್ಪಡುವಿಕೆ.) ಪ್ರಜಾಸೃಷ್ಟಿಯ ಪ್ರಮಾಣವು ಅನೇಕಸಾವಿರ ಬಾವಿಗಳ ನೀರನ್ನು ಉಪಯೋಗಿಸುವಷ್ಟು ಅಸಂಖ್ಯಾತವಾಗಿರುತ್ತದೆ. (ಒಂದು ಬಾವಿಯ ನೀರನ್ನು ಸಾವಿರ ಜನಗಳು ಉಪಯೋಗಿಸಬಹುದಾದರೆ ಹತ್ತು ಬಾವಿಗಳ ನೀರನ್ನು ಹತ್ತು ಸಾವಿರ ಮಂದಿ ಉಪಯೋಗಿಸಬಹುದು. ಬಾವಿಗಳ ಸಂಖ್ಯೆಗೆ ಅನುಗುಣವಾಗಿ ಪ್ರಜೆಗಳ ಸಂಖ್ಯೆ. ಸಾವಿರಾರು ಬಾವಿಗಳ ನೀರನ್ನು ಉಪಯೋಗಿಸುವ ಕೋಟ್ಯನುಕೋಟಿ ಪ್ರಜೆಗಳಿರು ವಂತೆ–ಕೋಟ್ಯನುಕೋಟಿ ಸಂಹಾರ-ಸೃಷ್ಟಿಗಳನ್ನು ಅನುಭವಿಸುವ ಜೀವ ಗಳೂ ಅಸಂಖ್ಯವಾಗಿವೆ.)

ವಾಪ್ಯಃ ಪುನರ್ಯೋಜನವಿಸ್ತೃತಾಸ್ತಾಃ
ಕ್ರೋಶಂ ಚ ಗಮ್ಭೀರತಯಾವಗಾಢಾಃ ।
ಆಯಾಮತಃ ಪಞ್ಚಶತಾಶ್ಚ ಸರ್ವಾಃ
ಪ್ರತ್ಯೇಕಶೋ ಯೋಜನತಃ ಪ್ರವೃದ್ಧಾಃ ॥೩೧॥
ವಾಪ್ಯಾ ಜಲಂ ಕ್ಷಿಪ್ಯತಿ ವಾಲಕೋಟ್ಯಾ-
ತ್ತ್ವಹ್ನಾ ಸಕೃಚ್ಚಾಪ್ಯಥ ನ ದ್ವಿತೀಯಮ್ ।

---

* ಸಂಹಾರವಿಕ್ಷೇಪ – ಎಂಬುದಕ್ಕೆ ವ್ಯಾಖ್ಯಾನಕಾರರು ಕಲ್ಪವೆಂದು ಅರ್ಥಮಾಡಿರುತ್ತಾರೆ. ಸಂಹರತ್ಯಸ್ಮಿನ್ ವಿಕ್ಷಿಪತ್ಯಸ್ಮಿನ್ನಿತಿ ವ್ಯುತ್ಪತ್ತ್ಯಾ ಸಂಹರ ವಿಕ್ಷೇಪಶಬ್ದಾಭ್ಯಾಂ ತಲ್ಲಯೋದಯ ಕಾಲಃ ಕಲ್ಪಸಂಜ್ಞಿಕ ಉಚ್ಯತೇ. ಸಂಹಾರಮಾಡುತ್ತಾನೆ ಕೆಳಕ್ಕೆ ಹಾಕುತ್ತಾನೆ ಎಂಬ ವ್ಯುತ್ಪತ್ತಿಯಿಂದ ಜಗತ್ತಿನ ಸೃಷ್ಟಿ ಮತ್ತು ಲಯಗಳೆಂಬ ಕಲ್ಪಸಂಜ್ಞಿಕವಾದ ಕಾಲವು ಹೇಳಲ್ಪಟ್ಟಿದೆ.

ತಾಸಾಂ ಕ್ಷಯೇ ವಿದ್ಧಿ ಪರಂ ವಿಸರ್ಗಂ
ಸಂಹಾರಮೇಕಂ ಚ ತಥಾ ಪ್ರಜಾನಾಮ್ ॥೩೨॥

(ಬಾವಿಗಳ ಪರಿಮಾಣವನ್ನು ಸನತ್ಕುಮಾರನು ಹೇಳುತ್ತಾನೆ.) ಪ್ರತಿಯೊಂದು ಬಾವಿಯೂ ಐದು ನೂರು ಯೋಜನಗಳಷ್ಟು ಉದ್ದವಾಗಿಯೂ–ಐದು ನೂರು ಯೋಜನಗಳಷ್ಟು ಅಗಲವಾಗಿಯೂ ಇರುವುದು. ಒಂದೊಂದು ಕ್ರೋಶದಷ್ಟು ಆಳವಾಗಿದೆ. ಅಷ್ಟು ಆಳವಾಗಿರುವುದರಿಂದ ಅವುಗಳಲ್ಲಿ ಇಳಿಯಲು ಸಾಧ್ಯವೇ ಇಲ್ಲ. ಅಂತಹ ಸಾವಿರಾರು ಬಾವಿಗಳ ನೀರನ್ನು ಕೂದಲೆಳೆಯ ತುದಿಯಿಂದ ದಿನಕ್ಕೊಂದು ತೊಟ್ಟಿನಂತೆ ತೆಗೆದು ಅವುಗಳನ್ನು ಬರಿದು ಮಾಡಿದಂದು ಪ್ರಜೆಗಳ ಸೃಷ್ಟಿ ಮತ್ತು ಸಂಹಾರಗಳು ನಿಲ್ಲುತ್ತವೆ. ಅರ್ಥಾತ್ ಸೃಷ್ಟಿ-ಸಂಹಾರಪ್ರವಾಹವು ಅನಂತವಾಗಿದೆ.

ಷಡ್ಜೀವವರ್ಣಾಃ ಪರಮಂ ಪ್ರಮಾಣಂ
ಕೃಷ್ಣೋ ಧೂಮ್ರೋ ನೀಲಮಥಾಸ್ಯ ಮಧ್ಯಮ್ ।
ರಕ್ತಂ ಪುನಃ ಸಹ್ಯತರಂ ಸುಖಂ ತು
ಹಾರಿದ್ರವರ್ಣಂ ಸುಸುಖಂ ಚ ಶುಕ್ಲಮ್ ॥೩೩॥

ಜೀವಗಳಿಗಿರುವ ಆರು ಬಣ್ಣಗಳು ಅವುಗಳ ಗತಿಗೆ ಪರಮಪ್ರಮಾಣವಾಗಿವೆ. ಅವುಗಳಲ್ಲಿ ಕಪ್ಪು ಮತ್ತು ಬೂದುಬಣ್ಣಗಳು ಅಧಮಗತಿಯನ್ನು ಸೂಚಿಸುತ್ತವೆ. ನೀಲಿ ಮತ್ತು ಕೆಂಪುಬಣ್ಣಗಳು ಸುಖ-ದುಃಖಗಳಿಂದ ಕೂಡಿರುವ ಮಧ್ಯಮಗತಿಯನ್ನು ಸೂಚಿಸುತ್ತವೆ. ಹಳದಿಯ ಬಣ್ಣವು ಇದಕ್ಕಿಂತಲೂ ಹೆಚ್ಚು ಸಹ್ಯವಾದ ಸುಖವನ್ನು ಸೂಚಿಸುತ್ತದೆ. ಬಿಳೀಬಣ್ಣವು ಅತ್ಯಂತಶುದ್ಧವಾದ ಸುಖವನ್ನು ಸೂಚಿಸುತ್ತದೆ.

ಪರಂ ತು ಶುಕ್ಲಂ ವಿಮಲಂ ವಿಶೋಕಂ
ಗತಕ್ಲಮಂ ಸಿದ್ಧ್ಯತಿ ದಾನವೇನ್ದ್ರ ।
ಗತ್ವಾ ತು ಯೋನಿಪ್ರಭವಾಣಿ ದೈತ್ಯ
ಸಹಸ್ರಶಃ ಸಿದ್ಧಿಮುಪೈತಿ ಜೀವಃ ॥೩೪॥

ದಾನವೇಶ್ವರ! ಇವುಗಳಲ್ಲಿ ಬಿಳಿಯ ಬಣ್ಣವು ಶ್ರೇಷ್ಠವಾದುದು. ನಿರ್ಮಲವಾದುದು. ಶೋಕರಹಿತವಾದುದು. ಪ್ರವೃತ್ತಿಮಾರ್ಗದ ಶ್ರಮ

ವಿಲ್ಲದೇ ಇರುವುದರಿಂದ ಮೋಕ್ಷಸಿದ್ಧಿಕಾರಕವೂ ಆಗಿದೆ. ಜೀವನು ಸಾವಿರಾರು ಯೋನಿಗಳಲ್ಲಿ ಜನ್ಮತಾಳಿದನಂತರ ಮನುಷ್ಯಯೋನಿಯಲ್ಲಿ ಜನಿಸಿ ಇಂತಹ ಶುಕ್ಲದ ಸಿದ್ಧಿಯನ್ನು ಪಡೆದುಕೊಳ್ಳುತ್ತಾನೆ.*

ಗತಿಂ ಚ ಯಾಂ ದರ್ಶನಮಾಹ ದೇವೋ
ಗತ್ವಾ ಶುಭಂ ದರ್ಶನಮೇವ ಚಾಪಿ ।
ಗತಿಃ ಪುನರ್ವರ್ಣಕೃತಾ ಪ್ರಜಾನಾಂ
ವರ್ಣಸ್ತಥಾ ಕಾಲಕೃತೋಽಸುರೇನ್ದ್ರ ॥೩೫॥

ಅಸುರೇಂದ್ರ! ದೇವರಾಜನಾದ ಇಂದ್ರನು ಮಂಗಳಮಯವಾದ ತತ್ತ್ವಜ್ಞಾನವನ್ನು ಪಡೆದುಕೊಂಡು ನಮ್ಮ ಸಮೀಪದಲ್ಲಿ ಯಾವ ಆತ್ಮಾನುಭವದ ವಿಷಯವಾಗಿ ಹೇಳಿರುವನೋ–ಅದೇ ಶುಕ್ಲವರ್ಣದವರು ಹೊಂದುವ ಪರಮಗತಿಯಾಗಿದೆ. ಉತ್ತಮ, ಮಧ್ಯಮ ಅಥವಾ ಅಧಮಗತಿಗಳು ವರ್ಣಕ್ಕೆ ತಕ್ಕಂತೆ ಪ್ರಾಪ್ತವಾಗುತ್ತವೆ. ಅಂತಹ ವರ್ಣವನ್ನು ಕಾಲಪರಿಪಾಕ ಕೃತವೆಂದು ಹೇಳುತ್ತಾರೆ.

ಶತಂ ಸಹಸ್ರಾಣಿ ಚತುರ್ದಶೇಹ
ಪರಾಗತಿರ್ಜೀವಗಣಸ್ಯ ದೈತ್ಯ ।
ಆರೋಹಣಂ ತತ್ಕೃತಮೇವ ವಿದ್ಧಿ
ಸ್ಥಾನಂ ತಥಾ ನಿಃಸರಣಂ ಚ ತೇಷಾಮ್ ॥೩೬॥

ದೈತ್ಯಶ್ರೇಷ್ಠನೇ! ಈ ಜಗತ್ತಿನಲ್ಲಿ ಜೀವಸಮುದಾಯದ ಗತಿಯು ಹದಿನಾಲ್ಕು ಲಕ್ಷ ವಿಧಿಗಳಾಗಿವೆಯೆಂದು ಹೇಳುತ್ತಾರೆ. (ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಮನಸ್ಸು, ಬುದ್ಧಿ, ಚಿತ್ತ ಮತ್ತು

---

* ತಮೋಗುಣವು ಅಧಿಕವಾಗಿದ್ದು ಸತ್ತ್ವಗುಣದ ನ್ಯೂನತೆಯಿದ್ದು ರಜೋಗುಣವು ಸಮಾವಸ್ಥೆಯಲ್ಲಿದ್ದರೆ–ಕೃಷ್ಣವರ್ಣವಾಗುತ್ತದೆ. ಇಂತಹ ಗುಣವಿರತಕ್ಕ ಜೀವನು ಸ್ಥಾವರನಾಗುತ್ತಾನೆ. ತಮೋಗುಣವು ಅಧಿಕವಾಗಿದ್ದು ರಜೋಗುಣದ ನ್ಯೂನತೆಯಿದ್ದು ಸತ್ತ್ವಗುಣವು ಸಮಾವಸ್ಥೆಯಲ್ಲಿದ್ದಲ್ಲಿ–ಬೂದುಬಣ್ಣವಾಗುತ್ತದೆ. ಇಂತಹ ಗುಣವಿರುವ ಜೀವನು ಪಶು-ಪಕ್ಷಿಗಳ ಯೋನಿಗಳಲ್ಲಿ ಜನ್ಮತಾಳುತ್ತಾನೆ. ರಜೋಗುಣವು ಅಧಿಕವಾಗಿದ್ದು ಸತ್ತ್ವಗುಣದ ನ್ಯೂನತೆಯಿದ್ದು ತಮೋಗುಣವು ಸಮಸ್ಥಿತಿಯಲ್ಲಿದ್ದರೆ–ನೀಲವರ್ಣವಾಗುತ್ತದೆ. ಇಂತಹ ಗುಣವಿರುವವನು

ಅಹಂಕಾರ–ಇವು ಹದಿನಾಲ್ಕು ಕಾರಣಗಳು. ಇವುಗಳ ಭೇದದಿಂದ ಹದಿನಾಲ್ಕು ವಿಧವಾದ ಗತಿಗಳುಂಟಾಗುತ್ತವೆ. ಪುನಃ ವಿಷಯಭೇದದಿಂದ ವೃತ್ತಿಭೇದವಾಗುವುದರಿಂದ ಹದಿನಾಲ್ಕು ಲಕ್ಷ ಗತಿಗಳು ಉಂಟಾಗುತ್ತವೆ.) ಜೀವನ ಊರ್ಧ್ವಲೋಕಗಮನವು ಕೂಡ ಈ ಹದಿನಾಲ್ಕು ಕಾರಣಗಳಿಂದಲೇ ಸಾಧ್ಯವಾಗುತ್ತದೆ.

(ವಿಭಿನ್ನಸ್ಥಾನಗಳಲ್ಲಿ ಸ್ಥಿರತೆಯಿಂದಿರುವುದು ಮತ್ತು ಆ ಸ್ಥಾನಗಳಿಂದ ಅಧಃಪತನವಾಗುವುದು–ಇವುಗಳೂ ಕೂಡ ಈ ಹದಿನಾಲ್ಕರ ಸಂಬಂಧ ದಿಂದಲೇ ಆಗುತ್ತವೆ. ಈ ವಿಷಯವನ್ನು ಸ್ಪಷ್ಟವಾಗಿ ತಿಳಿ. ಆದುದರಿಂದ ಈ ಹದಿನಾಲ್ಕು ಕಾರಣಗಳನ್ನು ಸಾತ್ತ್ವಿಕಮಾರ್ಗಾಭಿಮುಖವಾಗಿ ತಿರುಗಿಸಬೇಕು.)

ಕೃಷ್ಣಸ್ಯ ವರ್ಣಸ್ಯ ಗತಿರ್ನಿಕೃಷ್ಟಾ
ಸ ಸಜ್ಜತೇ ನರಕೇ ಪಚ್ಯಮಾನಃ ।
ಸ್ಥಾನಂ ತಥಾ ದುರ್ಗತಿಭಿಸ್ತು ತಸ್ಯ
ಪ್ರಜಾವಿಸರ್ಗಾನ್ಸುಬಹೂನ್ವದನ್ತಿ ॥೩೭॥

ಕೃಷ್ಣವರ್ಣದ ಗತಿಯು ಬಹಳ ನಿಕೃಷ್ಟವೆಂದು ಹೇಳಲ್ಪಟ್ಟಿದೆ. ಕೃಷ್ಣ ವರ್ಣವು ನರಕಪ್ರಾಪಕವಾದುದು. ನಿಷಿದ್ಧವಾದ ಕೆಲಸಗಳಲ್ಲಿ ಆಸಕ್ತಿ ಯನ್ನುಂಟುಮಾಡತಕ್ಕುದು. ಕೃಷ್ಣವರ್ಣದವನು ದುಷ್ಕರ್ಮಗಳ ಫಲ ದಿಂದಾಗಿ ನರಕದ ಬೆಂಕಿಯಲ್ಲಿ ಬೇಯಿಸಲ್ಪಡುತ್ತಾನೆ. ಅವನು ಕುಮಾರ್ಗ ದಲ್ಲಿ ಪ್ರವೃತ್ತನಾಗುವನು. ಹಿಂದೆ ಹೇಳಿದ ಹದಿನಾಲ್ಕು ಕಾರಣಗಳ

ಮನುಷ್ಯನಾಗಿ ಹುಟ್ಟುತ್ತಾನೆ. ರಜೋಗುಣವು ಅಧಿಕವಾಗಿದ್ದು ತಮೋಗುಣದ ನ್ಯೂನತೆಯಿದ್ದು ಸತ್ತ್ವಗುಣವು ಸಮವಾಗಿದ್ದರೆ ಅದು ಮಧ್ಯಮವರ್ಣವಾಗಿದ್ದು ಕೆಂಪುಬಣ್ಣವಾಗುತ್ತದೆ. ಇದನ್ನು ಅನುಗ್ರಹವರ್ಣವೆಂದು ಹೇಳುತ್ತಾರೆ. ಸತ್ತ್ವಗುಣವು ಅಧಿಕವಾಗಿದ್ದು ರಜೋಗುಣದ ನ್ಯೂನತೆಯಿದ್ದು ತಮೋಗುಣವು ಸಮಾವಸ್ಥೆಯಲ್ಲಿದ್ದರೆ–ಹಳದೀಬಣ್ಣವಾಗುತ್ತದೆ. ಇಂತಹ ಗುಣವಿರುವ ಜೀವನು ದೇವತೆಯಾಗುತ್ತಾನೆ. ಸತ್ತ್ವಗುಣವು ಅಧಿಕವಾಗಿದ್ದು ತಮೋಗುಣದ ನ್ಯೂನತೆಯಿದ್ದು ರಜೋಗುಣವು ಸಮಾವಸ್ಥೆಯಲ್ಲಿದ್ದರೆ–ಶುಕ್ಲವರ್ಣವಾಗುತ್ತದೆ. ಇದನ್ನು ಕೌಮಾರಸರ್ಗವೆನ್ನುತ್ತಾರೆ.

ಮೂಲಕ ಪಾಪಕಾರ್ಯಗಳನ್ನು ಮಾಡುತ್ತಲೇ ಇರುವುದರಿಂದ ಅನೇಕ ಕಲ್ಪಗಳವರೆಗೆ ನರಕದಲ್ಲಿ ವಾಸಮಾಡುತ್ತಾನೆಂದು ಋಷಿ-ಮುನಿಗಳು ಹೇಳುತ್ತಾರೆ.

ಶತಂ ಸಹಸ್ರಾಣಿ ತತಶ್ಚರಿತ್ವಾ
ಪ್ರಾಪ್ನೋತಿ ವರ್ಣಂ ಹರಿತಂ ತು ಪಶ್ಚಾತ್ ।
ಸ ಚೈವ ತಸ್ಮಿನ್ನಿವಸತ್ಯನೀಶೋ
ಯುಗಕ್ಷಯೇ ತಪಸಾ ಸಂವೃತಾತ್ಮಾ ॥೩೮॥

ಬಳಿಕ ಆ ಜೀವವು ಲಕ್ಷವರ್ಷಗಳವರೆಗೆ ನರಕದಲ್ಲಿಯೇ ಬಿದ್ದು ಒದ್ದಾಡುತ್ತಾ ಧೂಮ್ರವರ್ಣವನ್ನು ಹೊಂದಿ ಪಶು-ಪಕ್ಷಿಗಳೇ ಮೊದಲಾದ ತಿರ್ಯಗ್ಜಂತುಗಳ ಯೋನಿಗಳಲ್ಲಿ ಜನ್ಮವನ್ನು ಪಡೆಯುತ್ತದೆ. ಅಲ್ಲಿಯೂ ಕೂಡ ಜೀವವು ಅಸ್ವತಂತ್ರವಾಗಿ ಬಹಳ ದುಃಖದಿಂದ ವಾಸಮಾಡುತ್ತಿರುತ್ತದೆ. ಯುಗವು ಕಳೆದನಂತರ ತಪಸ್ಸಿನ, ಪುರಾತನಪುಣ್ಯದ ಅಥವಾ ವಿವೇಕದ ಪ್ರಭಾವದಿಂದ ಸುರಕ್ಷಿತವಾದ ಆತ್ಮವುಳ್ಳದ್ದಾಗಿ ನೀಲವರ್ಣಕ್ಕೆ ತಿರುಗುತ್ತದೆ.

ಸ ವೈ ಯದಾ ಸತ್ತ್ವಗುಣೇನ ಯುಕ್ತ-
ಸ್ತಮೋವ್ಯಪೋಹನ್ಘಟತೇ ಸ್ವಬುದ್ಧ್ಯಾ ।
ಸ ಲೋಹಿತಂ ವರ್ಣಮುಪೈತಿ ನೀಲಾ-
ನ್ಮನುಷ್ಯಲೋಕೇ ಪರಿವರ್ತತೇ ಚ ॥೩೯॥

ಯಾವಾಗ ಜೀವವು ಸತ್ತ್ವಗುಣದಿಂದ ಯುಕ್ತವಾಗುವುದೋ–ಆಗ ಆ ಜೀವವು ತನ್ನ ಬುದ್ಧಿಯ ಮೂಲಕವಾಗಿ ತಮೋಗುಣದ ಪ್ರವೃತ್ತಿಯನ್ನು ದೂರೀಕರಿಸುತ್ತಾ ತನ್ನ ಕಲ್ಯಾಣಕ್ಕಾಗಿ ಪ್ರಯತ್ನಿಸುತ್ತದೆ. ಅನಂತರ ಜೀವವು ನೀಲವರ್ಣವನ್ನು ಬಿಟ್ಟು ರಕ್ತವರ್ಣವನ್ನು ಹೊಂದುತ್ತದೆ ಮತ್ತು ಮನುಷ್ಯಲೋಕದಲ್ಲಿ ಹುಟ್ಟು-ಸಾವುಗಳ ಸುಳಿಯಲ್ಲಿ ಸಂಚರಿಸುತ್ತದೆ.

ಸ ತತ್ರ ಸಂಹಾರವಿಸರ್ಗಮೇಕಂ
ಸ್ವಧರ್ಮಜೈರ್ಬನ್ಧನೈಃ ಕ್ಲಿಶ್ಯಮಾನಃ ।

ತತಃ ಸ ಹಾರಿದ್ರಮುಪೈತಿ ವರ್ಣಂ
ಸಂಹಾರವಿಕ್ಷೇಪಶತೇ ವ್ಯತೀತೇ ॥೪೦॥

ಅನಂತರ ಆ ಜೀವವು ಮನುಷ್ಯಲೋಕದಲ್ಲಿ ಒಂದು ಕಲ್ಪದವರೆಗೆ ಸ್ವಧರ್ಮಜನಿತವಾದ ಬಂಧನಗಳಿಂದ ಕಟ್ಟಲ್ಪಟ್ಟು ಕ್ಲೇಶಗಳನ್ನು ಅನುಭವಿಸುತ್ತಾ ಸ್ವಲ್ಪ-ಸ್ವಲ್ಪವಾಗಿ ತನ್ನ ತಪಸ್ಸನ್ನು ಹೆಚ್ಚಿಸಿಕೊಳ್ಳುತ್ತಿರುತ್ತದೆ. ಆಗ ಆ ಜೀವವು ಅರಿಸಿನದ ಬಣ್ಣವನ್ನು ಹೊಂದಿ (ಸತ್ತ್ವಗುಣದ ಆಧಿಕ್ಯ, ರಜೋಗುಣದ ನ್ಯೂನತೆ ಮತ್ತು ತಮೋಗುಣದ ಸಮತೆಯನ್ನು ಹೊಂದಿ) ದೇವತಾಭಾವವನ್ನು ಹೊಂದುತ್ತದೆ. ದೇವತಾಭಾವದಲ್ಲಿ ನೂರಾರು ಕಲ್ಪಗಳನ್ನೂ ಕಳೆದು ಪುಣ್ಯವು ಕ್ಷಯಿಸಿದ ನಂತರ ಮನುಷ್ಯತ್ವವನ್ನು (ನೀಲಲೋಹಿತವರ್ಣವನ್ನು) ಹೊಂದುತ್ತದೆ.

ಹಾರಿದ್ರವರ್ಣಸ್ತು ಪ್ರಜಾವಿಸರ್ಗಾ-
ತ್ಸಹಸ್ರಶಸ್ತಿಷ್ಠತಿ ಸಂಚರನ್ವೈ ।
ಅವಿಪ್ರಮುಕ್ತೋ ನಿರಯೇ ಚ ದೈತ್ಯ
ತತಃ ಸಹಸ್ರಾಣಿ ದಶಾಪರಾಣಿ ॥೪೧॥

ಗತೀಃ ಸಹಸ್ರಾಣಿ ಚ ಪಞ್ಚ ತಸ್ಯ
ಚತ್ವಾರಿ ಸಂವರ್ತಕೃತಾನಿ ಚೈವ ।
ವಿಮುಕ್ತಮೇನಂ ನಿರಯಾಚ್ಚ ವಿದ್ಧಿ
ಸರ್ವೇಷು ಚಾನ್ಯೇಷು ಚ ಸಮ್ಭವೇಷು ॥೪೨॥

ದೈತ್ಯೇಶ್ವರ! ಸಾವಿರ ಕಲ್ಪಗಳವರೆಗೂ ದೇವತಾರೂಪದಲ್ಲಿಯೇ ಸಂಚರಿಸುತ್ತಿದ್ದರೂ ಜೀವವು ವಿಷಯಭೋಗಗಳಿಂದ ವಿಮುಕ್ತವಾಗುವುದಿಲ್ಲ. ಪ್ರತ್ಯೇಕಕಲ್ಪಗಳಲ್ಲಿ ಮಾಡಿದ ಅಶುಭಕರ್ಮಗಳ ಫಲವಾಗಿ ನರಕವಾಸವನ್ನು ಅನುಭವಿಸುತ್ತಿರುವ ಜೀವವು ಹತ್ತೊಂಬತ್ತು ಸಾವಿರ* ವಿಭಿನ್ನಗತಿಗಳನ್ನು ಹೊಂದುತ್ತದೆ. ಅನಂತರ ಜೀವಕ್ಕೆ ನರಕದಿಂದ ಮುಕ್ತಿಯು ಸಿಕ್ಕುತ್ತದೆ.

---

* ದಶೇಂದ್ರಿಯಗಳು, ಪಂಚಪ್ರಾಣಗಳು, ಬುದ್ಧಿ, ಮನಸ್ಸು, ಚಿತ್ತ ಮತ್ತು ಅಹಂಕಾರ–ಈ ಹತ್ತೊಂಬತ್ತು ಭೋಗಸಾಧನಗಳು. ವಿಷಯಗಳು ಮತ್ತು ವೃತ್ತಿ ಭೇದಗಳಿಂದ ಇವು ಹತ್ತೊಂಬತ್ತು ಸಾವಿರವಾಗುತ್ತವೆ.

ಮನುಷ್ಯಯೋನಿಯನ್ನು ಬಿಟ್ಟು ಉಳಿದೆಲ್ಲವೂ ಕೇವಲ ಸುಖ-ದುಃಖಗಳ ಭೋಗಯೋಗ್ಯವಾದ ಜನ್ಮಗಳೇ ಆಗಿವೆ.

ಸ ದೇವಲೋಕೇ ವಿಹರತ್ಯಭೀಕ್ಷ್ಣಂ
ತತಶ್ಚ್ಯುತೋ ಮಾನುಷತಾಮುಪೈತಿ ।
ಸಂಹಾರವಿಕ್ಷೇಪಶತಾನಿ ಚಾಷ್ಟೌ
ಮರ್ತ್ಯೇಷು ತಿಷ್ಠತ್ಯಮೃತತ್ವಮೇತಿ ॥೪೩॥

ಆ ಜೀವವು ದೇವಲೋಕದಲ್ಲಿ ನಿರಂತರವಾಗಿ ದೇವರೂಪವನ್ನು ಹೊಂದಿ ಸಂಚರಿಸುತ್ತಿರುತ್ತದೆ. ಪುಣ್ಯವು ಕ್ಷಯಿಸಿದೊಡನೆಯೇ ನೀಲ ಲೋಹಿತವರ್ಣವನ್ನು ಹೊಂದಿ ಸ್ವರ್ಗದಿಂದ ಚ್ಯುತವಾಗಿ ಮನುಷ್ಯಯೋನಿ ಯನ್ನು ಹೊಂದುತ್ತದೆ. ಆ ಜೀವವು ಮನುಷ್ಯಲೋಕದಲ್ಲಿ ಎಂಟು ನೂರು ಕಲ್ಪಗಳವರೆಗೂ ಹುಟ್ಟುತ್ತಲೂ-ಸಾಯುತ್ತಲೂ ಇರುತ್ತದೆ. ಅಷ್ಟರಲ್ಲಿ ಶುಭಕರ್ಮಫಲವನ್ನು ಸಂಗ್ರಹಿಸಿಕೊಂಡು ಅಮೃತತ್ತ್ವವನ್ನು ಹೊಂದುತ್ತದೆ.

ಸೋಽಸ್ಮಾದಥ ಭ್ರಶ್ಯತಿ ಕಾಲಯೋಗಾ-
ತ್ಕೃಷ್ಣೇ ತಲೇ ತಿಷ್ಠತಿ ಸರ್ವಕೃಷ್ಟೇ ।
ಯಥಾ ತ್ವಯಂ ಸಿದ್ಧ್ಯತಿ ಜೀವಲೋಕ-
ಸ್ತತ್ತೇಽಭಿಧಾಸ್ಯಾಮ್ಯಸುರಪ್ರವೀರ ॥೪೪॥

ಅಸುರಪ್ರವೀರನೇ! ಕಲ್ಪಾಂತರಗಳ ಪುಣ್ಯಕರ್ಮಫಲಗಳ ಸಂಗ್ರಹ ದಿಂದ ದೇವತ್ವವನ್ನು ಹೊಂದಿದರೂ ಆ ಜೀವವು ಪುಣ್ಯಫಲವು ಕ್ಷಯಿಸಿದ ನಂತರ ದೇವಲೋಕದಿಂದ ಚ್ಯುತವಾಗುತ್ತದೆ. ಆ ಜೀವವು ಕಾಲಾನುಗುಣ ವಾಗಿ ಪಾಪಕರ್ಮಗಳನ್ನು ಮಾಡುತ್ತಾ ಮರ್ತ್ಯಲೋಕದಿಂದಲೂ ಕೆಳಕ್ಕೆ ಬಿದ್ದುಹೋಗುತ್ತದೆ. ಎಲ್ಲಕ್ಕಿಂತಲೂ ನಿಕೃಷ್ಟವಾದ ಅತ್ಯಂತ ಕೆಳಗಿನದಾದ ಕೃಷ್ಣವರ್ಣವನ್ನು ಜೀವವು ಹೊಂದುತ್ತದೆ. (ತಮೋಗುಣಪ್ರಧಾನವಾದ ಸತ್ತ್ವಶೂನ್ಯವಾದ ರಜೋಗುಣಸಮಸ್ಥಿತಿಯ ಗುಣವನ್ನು ಹೊಂದಿ ಸ್ಥಾವರ ಜನ್ಮವನ್ನು ಪಡೆಯುತ್ತದೆ.) ಹೀಗೆ ಊರ್ಧ್ವಾರೋಹಣ-ಅಧಃಪತನಗಳೆಂಬ ಚಕ್ರದಲ್ಲಿ ಸಿಕ್ಕಿರುವ ಈ ಜೀವಸಮೂಹವು ಯಾವ ರೀತಿಯಲ್ಲಿ ಸಿದ್ಧಿಯನ್ನು ಹೊಂದುತ್ತದೆಂಬುದನ್ನು ಹೇಳುವೆನು, ಕೇಳು.

ದೈವಾನಿ ಸ ವ್ಯೂಹಶತಾನಿ ಸಪ್ತ
ರಕ್ತೋ ಹರಿದ್ರೋಽಥ ತಥೈವ ಶುಕ್ಲಃ ।
ಸಂಶ್ರಿತ್ಯ ಸಂಧಾವತಿ ಶುಕ್ಲಮೇತ-
ಮಷ್ಟಾವರಾನರ್ಚ್ಯತಮಾನ್ಸ ಲೋಕಾನ್ ॥೪೫॥

ಕೆಂಪು, ಹಳದಿ ಮತ್ತು ಬಿಳುಪಿನ ಜೀವನು ಏಳು ನೂರು ದಿವ್ಯಶರೀರಗಳನ್ನು ಆಶ್ರಯಿಸಿ ಅತ್ಯುತ್ತಮವಾದ, ಸುಪೂಜ್ಯವಾದ ಎಂಟು ಲೋಕಗಳಿಗೂ (ಭೂರಾದಿ ಏಳು ಉತ್ತಮಲೋಕಗಳಿಗೂ, ವಿಶುದ್ಧವಾದ ಬ್ರಹ್ಮಲೋಕಕ್ಕೂ) ಹೋಗುತ್ತಾನೆ.

ಅಷ್ಟೌ ಚ ಷಷ್ಟಿಂ ಚ ಶತಾನಿ ಚೈವ
ಮನೋನಿರುದ್ಧಾನಿ ಮಹಾದ್ಯುತೀನಾಮ್ ।
ಶುಕ್ಲಸ್ಯ ವರ್ಣಸ್ಯ ಪರಾ ಗತಿರ್ಯಾ
ತ್ರೀಣ್ಯೇವ ರುದ್ಧಾನಿ ಮಹಾನುಭಾವ ॥೪೬॥

ದೈತ್ಯೇಂದ್ರ! ಪ್ರಕೃತಿ, ಮಹತ್ತತ್ತ್ವ, ಅಹಂಕಾರ ಮತ್ತು ಪಂಚ ತನ್ಮಾತ್ರೆಗಳು–ಈ ಎಂಟು ; ಅರುವತ್ತು ತತ್ತ್ವಗಳು* ; ಇವುಗಳ ನೂರಾರು ವೃತ್ತಿಗಳು–ಇವೆಲ್ಲವೂ ಮಹಾತೇಜಸ್ವಿಗಳಾದ ಯೋಗಿಗಳ ಮನಸ್ಸಿಗೆ ಅಡ್ಡಿ ಯನ್ನುಂಟುಮಾಡತಕ್ಕುವುಗಳಾಗಿವೆ. ಶುಕ್ಲವರ್ಣದ ಗತಿಯು (ಪರಾಗತಿಯು) ಯಾವುದಿರುವುದೋ–ಆ ತುರೀಯಾವಸ್ಥೆಯು ಮೂರು ಗುಣಗಳನ್ನೂ ನಿರೋಧಿಸುವುದರಿಂದ ಪ್ರಾಪ್ತವಾಗುತ್ತದೆ.

ಸಂಹಾರವಿಕ್ಷೇಪಮನಿಷ್ಟಮೇಕಂ
ಚತ್ವಾರಿ ಚಾನ್ಯಾನಿ ವಸತ್ಯನೀಶಃ ।
ಷಷ್ಠಸ್ಯ ವರ್ಣಸ್ಯ ಪರಾ ಗತಿರ್ಯಾ
ಸಿದ್ಧಾವಸಿದ್ಧಸ್ಯ ಗತಕ್ಲಮಸ್ಯ ॥೪೭॥

ಪಾಪರಹಿತನಾದ ಸಿದ್ಧನಿಗೆ ಆರನೆಯದಾದ ಶುಕ್ಲವರ್ಣದ ಪರಾ

---

* ಐದು ಜ್ಞಾನೇಂದ್ರಿಯಗಳು ಮತ್ತು ಐದು ಕರ್ಮೇಂದ್ರಿಯಗಳು – ಈ ಹತ್ತು, ಸಾತ್ತ್ವಿಕ-ರಾಜಸ-ತಾಮಸಭೇದಗಳು ಮತ್ತು ಜಾಗ್ರತ್-ಸ್ವಪ್ನ-ಸುಷುಪ್ತಿಗಳ ಭೇದಗಳಿಂದ ಒಂದೊಂದು ಇಂದ್ರಿಯವೂ ಆರು ವಿಕಾರಗಳನ್ನು ಹೊಂದುವುದರಿಂದ ಒಟ್ಟು ಅರುವತ್ತು ಭೇದಗಳಾಗಿ ಪರಿಣಮಿಸುತ್ತವೆ.

ಗತಿಯು ಸಿದ್ಧಿಸದೇ ಇದ್ದರೂ–ಒಂದು ಕಲ್ಪದವರೆಗೆ ಮಹೋಲೋಕ-ಜನೋಲೋಕ-ತಪೋಲೋಕ-ಸತ್ಯಲೋಕಗಳಲ್ಲಿ ಕ್ರಮವಾಗಿ ವಾಸಮಾಡುತ್ತಿದ್ದು ಕಲ್ಪಾಂತದಲ್ಲಿ ಮುಕ್ತನಾಗುತ್ತಾನೆ. (**ತೇ ಬ್ರಹ್ಮಲೋಕೇ ತು ಪರಾನ್ತಕಾಲೇ ಪರಾಮೃತಾತ್ ಪರಿಮುಚ್ಯನ್ತಿ ಸರ್ವೇ**–ಈ ಶ್ರುತಿಯು ಇದನ್ನೇ ವಿಶದವಾಗಿ ಹೇಳುತ್ತದೆ.)

ಸಪ್ತೋತ್ತರಂ ತತ್ರ ವಸತ್ಯನೀಶಃ
ಸಂಹಾರವಿಕ್ಷೇಪಶತಂ ಸಶೇಷಮ್ ।
ತಸ್ಮಾದುಪಾವೃತ್ಯ ಮನುಷ್ಯಲೋಕೇ
ತತೋ ಮಹಾನ್ಮಾನುಷತಾಮುಪೈತಿ ॥೪೮॥

ಚೆನ್ನಾಗಿ ಯೋಗಸಾಧನೆಮಾಡಲು ಅಸಮರ್ಥನಾಗಿರುವ ಅಥವಾ ಯೋಗಭ್ರಷ್ಟನಾಗಿರುವ ಶುಕ್ಲವರ್ಣದವನು ನೂರು ಕಲ್ಪಗಳವರೆಗೆ ಮೇಲಿನ ಏಳು ಲೋಕಗಳಲ್ಲಿ ವಾಸಮಾಡುತ್ತಿರುತ್ತಾನೆ. ಪುನಃ ಅವನು ಉಳಿದಿರುವ ಕರ್ಮಸಂಸ್ಕಾರದೊಡನೆ ಅಲ್ಲಿಂದ ಹಿಂದಿರುಗಿ ಮಹಾಸತ್ತ್ವಸಂಪನ್ನವಾದ ಮನುಷ್ಯಶರೀರವನ್ನು ಹೊಂದಿ ಭೂಲೋಕದಲ್ಲಿ ಜನ್ಮತಾಳುತ್ತಾನೆ.

ತಸ್ಮಾದುಪಾವೃತ್ಯ ತತಃ ಕ್ರಮೇಣ
ಸೋಽಗ್ರೇಣ ಸಂತಿಷ್ಠತಿ ಭೂತಸರ್ಗಮ್ ।
ಸ ಸಪ್ತಕೃತ್ವಶ್ಚ ಪರೈತಿ ಲೋಕಾ-
ನ್ಸಂಹಾರವಿಕ್ಷೇಪಕೃತಪ್ರಭಾವಃ ॥೪೯॥

ಬಳಿಕ ಅವನು ಮನುಷ್ಯಯೋನಿಯಿಂದ ಬಿಡುಗಡೆಹೊಂದಿ ಅನುಕ್ರಮವಾಗಿ ಮುಂದು-ಮುಂದಿನ ದೇವಾದಿಯೋನಿಗಳಲ್ಲಿ ಹುಟ್ಟುತ್ತಾ ಎಲ್ಲ ಪ್ರಾಣಿವರ್ಗಕ್ಕೂ ಅಗ್ರಗಣ್ಯನಾಗಿರುತ್ತಾನೆ. ಹೀಗೆ ಮೇಲಿನ ಏಳು ಲೋಕಗಳಲ್ಲಿಯೂ ಪ್ರಭಾವಶಾಲಿಯಾಗಿ ಒಂದು ಕಲ್ಪದವರೆಗೆ ಅಲ್ಲಿಯೇ ಇರುತ್ತಾನೆ.

ಸಪ್ತೈವ ಸಂಹಾರಮುಪಪ್ಲವಾನಿ
ಸಮ್ಭಾವ್ಯ ಸಂತಿಷ್ಠತಿ ಜೀವಲೋಕೇ ।

ತತೋಽವ್ಯಯಂ ಸ್ಥಾನಮನನ್ತಮೇತಿ
ದೇವಸ್ಯ ವಿಷ್ಣೋರಥ ಬ್ರಹ್ಮಣಶ್ಚ ।
ಶೇಷಸ್ಯ ಚೈವಾಥ ನರಸ್ಯ ಚೈವ
ದೇವಸ್ಯ ವಿಷ್ಣೋಃ ಪರಮಸ್ಯ ಚೈವ ॥೫೦॥

ಪುನಃ ಆ ಯೋಗಿಯು ಭೂಲೋಕ-ಭುವರ್ಲೋಕ-ಸುವರ್ಲೋಕ–ಮಹೋಲೋಕ-ಜನೋಲೋಕ-ತಪೋಲೋಕ-ಸತ್ಯಲೋಕಗಳನ್ನೂ ವಿನಾಶ ಶೀಲಗಳೆಂದೂ–ಅನಿತ್ಯವಾದುವುಗಳೆಂದೂ ಭಾವಿಸಿ, ಪುನಃ ಶೋಕ-ಮೋಹ ಗಳಿಂದ ರಹಿತನಾಗಿ ಮನುಷ್ಯಲೋಕದಲ್ಲಿ ಜನ್ಮತಾಳುತ್ತಾನೆ. ಅಲ್ಲಿ ಅನ ವರತವಾದ ಸಾಧನೆಗಳಿಂದ ಆತ್ಮಸಾಕ್ಷಾತ್ಕಾರವನ್ನು ಪಡೆದು ಅನಂತವಾದ ಅವಿ ನಾಶಿಯಾದ ಸ್ಥಾನವನ್ನು ಪಡೆಯುತ್ತಾನೆ. ಕೆಲವರು ಆ ಸ್ಥಾನವನ್ನು ಮಹಾದೇವನ ಕೈಲಾಸಧಾಮವೆನ್ನುತ್ತಾರೆ. ಕೆಲವರು ಆ ಪರಮಪದವನ್ನೇ–ತದ್ವಿಷ್ಣೋಃ ಪರಮಂ ಪದಂ–ಎಂದು ಶ್ರುತಿಯು ಹೇಳುವ, ದೇವದೇವನಾದ, ಪರಮಶ್ರೇಷ್ಠನಾದ ವಿಷ್ಣುವಿನ ಸ್ಥಾನವೆನ್ನುತ್ತಾರೆ. ಕೆಲವರು ಬ್ರಹ್ಮನ ಸ್ಥಾನವೆನ್ನುತ್ತಾರೆ. ಕೆಲವರು ಶೇಷನ ಸ್ಥಾನವೆನ್ನುತ್ತಾರೆ. ಕೆಲವರು ಜೀವನ ಪರಮಧಾಮವೆನ್ನುತ್ತಾರೆ. ಮತ್ತೆ ಕೆಲವರು ಸರ್ವವ್ಯಾಪಕವಾದ ಪರಬ್ರಹ್ಮದ ಸ್ಥಾನವೆನ್ನುತ್ತಾರೆ.

ಸಂಹಾರಕಾಲೇ ಪರಿದಗ್ಧಕಾಯಾ
ಬ್ರಹ್ಮಾಣಮಾಯಾನ್ತಿ ಸದಾ ಪ್ರಜಾ ಹಿ ।
ಚೇಷ್ಟಾತ್ಮನೋ ದೇವಗಣಾಶ್ಚ ಸರ್ವೇ
ಯೇ ಬ್ರಹ್ಮಲೋಕೇ ಅಪರಾಃ ಸ್ಮ ತೇಽಪಿ ॥೫೧॥

ಜ್ಞಾನಾಗ್ನಿಯ ಮೂಲಕವಾಗಿ ಸೂಕ್ಷ್ಮ-ಸ್ಥೂಲ ಮತ್ತು ಕಾರಣಶರೀರ ಗಳನ್ನು ದಗ್ಧಗೊಳಿಸಿರುವ ಯೋಗಿಜನರು ಪ್ರಲಯಕಾಲದಲ್ಲಿ ಪರಬ್ರಹ್ಮ ಪರಮಾತ್ಮನನ್ನು ಸೇರುತ್ತಾರೆ. ಹೀಗೆಯೇ ಬ್ರಹ್ಮಲೋಕಕ್ಕಿಂತಲೂ ಕೆಳಗಿನ ಲೋಕದಲ್ಲಿರುವ, ಸಾಧನಶೀಲರಾದ, ದೈವೀಪ್ರಕೃತಿಸಂಪನ್ನರಾದ ಸಾಧಕ ರೆಲ್ಲರೂ ಪ್ರಲಯಕಾಲದಲ್ಲಿ ಪರಬ್ರಹ್ಮವನ್ನು ಸೇರುತ್ತಾರೆ.

ಪ್ರಜಾವಿಸರ್ಗಂ ತು ಸಶೇಷಕಾಲೇ
ಸ್ಥಾನಾನಿ ಸ್ವಾನ್ಯೇವ ಸರನ್ತಿ ಜೀವಾಃ ।
ನಿಃಶೇಷತಸ್ತತ್ಪದಂ ಯಾನ್ತಿ ಚಾನ್ತೇ
ಸರ್ವೇ ದೇವಾ ಯೇ ಸದೃಶಾ ಮನುಷ್ಯಾಃ ॥೫೨॥

ಪ್ರಳಯಕಾಲದಲ್ಲಿ ಯಾವ ಜೀವಗಳು ದೇವಭಾವವನ್ನು ಹೊಂದಿರುವುವೋ–ಆ ಜೀವಗಳು ತಮ್ಮ ಕರ್ಮಫಲವನ್ನು ಸಂಪೂರ್ಣವಾಗಿ ಉಪಭೋಗಿಸದಿದ್ದರೆ, ಉಪಭೋಗಿಸುವ ಮೊದಲೇ ಪ್ರಳಯಕಾಲವು ಸಂಭವಿಸಿದರೆ– ಪುನಃ ವಿಶ್ವದ ಸೃಷ್ಟಿಯಾದನಂತರ ಆ ಜೀವಗಳು ಹಿಂದಿನ ಕಲ್ಪದಲ್ಲಿದ್ದಂತೆ ದೇವಭಾವವನ್ನೇ ಹೊಂದಿ ಉಳಿದ ಕರ್ಮಫಲವನ್ನು ಉಪಭೋಗಿಸುತ್ತಾರೆ. ಕಲ್ಪಾಂತದಲ್ಲಿ ಕರ್ಮಫಲವನ್ನು ಪೂರ್ಣವಾಗಿ ಅನುಭವಿಸದಿರುವ ಎಲ್ಲ ದೇವತೆಗಳೂ ಪುನಃ ಜಗತ್ತಿನ ಸೃಷ್ಟಿಯಾದನಂತರ ಮನುಷ್ಯರಂತೆಯೇ ಭೂಲೋಕದಲ್ಲಿ ಮನುಷ್ಯರಾಗಿ ಜನ್ಮತಾಳುತ್ತಾರೆ.

(ಪ್ರಳಯದಿಂದ ಎಲ್ಲವೂ ನಾಶವಾದರೂ ಕರ್ಮಫಲವು ನಾಶವಾಗುವುದಿಲ್ಲ. ತತ್ತ್ವಜ್ಞಾನದಿಂದ ಮಾತ್ರವೇ ಪುಣ್ಯಾಪುಣ್ಯಕರ್ಮಫಲಗಳು ನಾಶವಾಗುತ್ತವೆ. ಅದುವರೆಗೂ ಜೀವವು ಹುಟ್ಟು-ಸಾವುಗಳ ಚಕ್ರದಲ್ಲಿ ಸಿಕ್ಕಿಸುತ್ತುತ್ತಲೇ ಇರುತ್ತದೆ.)

ಯೇ ತು ಚ್ಯುತಾಃ ಸಿದ್ಧಲೋಕಾತ್ಕ್ರಮೇಣ
ತೇಷಾಂ ಗತಿಂ ಯಾನ್ತಿ ತಥಾನುಪೂರ್ವ್ಯಾ ।
ಜೀವಾಃ ಪರೇ ತದ್ಬಲತುಲ್ಯ ರೂಪಾಃ
ಸ್ವಂ ಸ್ವಂ ವಿಧಿಂ ಯಾನ್ತಿ ವಿಪರ್ಯಯೇಣ ॥೫೩॥

ಕರ್ಮಫಲವು ಮುಗಿದನಂತರ ಸಿದ್ಧಲೋಕದಿಂದ (ಭೂರ್ಭುವಸ್ಸುವರ್ಲೋಕಗಳೇ ಮೊದಲಾದುವುಗಳಿಂದ) ಚ್ಯುತರಾಗಿ ಮರ್ತ್ಯಲೋಕದಲ್ಲಿ ಜನ್ಮತಾಳುವ ಯೋಗಿಗಳ ಸ್ಥಾನಗಳನ್ನು ಮರ್ತ್ಯಲೋಕದಲ್ಲಿ ಆ ಯೋಗಿಗಳ ಬಲವನ್ನೂ ತೇಜಸ್ಸನ್ನೂ ಪಡೆದ ಇತರ ಯೋಗಿಗಳು ಅಥವಾ ಜೀವರು

ಅನುಕ್ರಮವಾಗಿ ಪಡೆದುಕೊಳ್ಳುತ್ತಾರೆ. ಹೀಗೆ ಜೀವರು, ಫಲಾನುಭವದ ವ್ಯತ್ಯಾಸದಿಂದ ತಮ್ಮ ತಮ್ಮ ಅದೃಷ್ಟಸ್ಥಾನಗಳನ್ನು ಪಡೆದುಕೊಳ್ಳುತ್ತಾರೆ.

ಸ ಯಾವದೇವಾಸ್ತಿ ಸಶೇಷಭುಕ್ತೇ
ಪ್ರಜಾಶ್ಚ ದೇವ್ಯೌ ಚ ತಥೈವ ಶುಕ್ಲೇ ।
ತಾವತ್ತದಙ್ಗೇಷು ವಿಶುದ್ಧಭಾವಃ
ಸಂಯಮ್ಯ ಪಞ್ಚೇನ್ದ್ರಿಯರೂಪಮೇತತ್ ॥೫೪॥

ವಿಶುದ್ಧಭಾವದಿಂದ ಸಂಪನ್ನನಾದ ಸಿದ್ಧಪುರುಷನು ಎಲ್ಲಿಯವರೆಗೆ ಪಂಚೇಂದ್ರಿಯರೂಪವಾದ ಕರಣಸಮುದಾಯಗಳನ್ನು ಸಂಯಮಗೊಳಿಸಿ ಉಳಿದಿರುವ ಪ್ರಾರಬ್ಧಕರ್ಮಗಳನ್ನು ಉಪಭೋಗಿಸುತ್ತಿರುವನೋ–ಅಲ್ಲಿಯ ವರೆಗೂ ಪ್ರಜೆಗಳೂ (ಇಂದ್ರಿಯಗಳ ಅಧಿದೇವತೆಗಳೂ), ಪರಾವಿದ್ಯೆ ಮತ್ತು ಅಪರಾವಿದ್ಯೆ ಎಂಬ ಇಬ್ಬರೂ ದೇವಿಯರೂ ಅವನ ಶರೀರದಲ್ಲಿ ನಿವಾಸಮಾಡುತ್ತಿರುತ್ತಾರೆ.

ಶುದ್ಧಾಂ ಗತಿಂ ತಾಂ ಪರಮಾಂ ಪರೈತಿ
ಶುದ್ಧೇನ ನಿತ್ಯಂ ಮನಸಾ ವಿಚಿನ್ವನ್ ।
ತತೋಽವ್ಯಯಂ ಸ್ಥಾನಮುಪೈತಿ ಬ್ರಹ್ಮ
ದುಷ್ಪ್ರಾಪಮಭ್ಯೇತಿ ಸ ಶಾಶ್ವತಂ ವೈ ॥೫೫॥

ಯಾವ ಸಾಧಕನು ಯಾವಾಗಲೂ ಶುದ್ಧವಾದ ಮನಸ್ಸಿನಿಂದ ವಿಶುದ್ಧವಾದ ಪರಮಗತಿಯನ್ನು ಅನುಸಂಧಾನಮಾಡುವನೋ–ಅಂತಹ ಸಾಧಕನು ಪರಮಗತಿಯನ್ನು ಅವಶ್ಯವಾಗಿ ಹೊಂದುತ್ತಾನೆ. ಬಳಿಕ ಅವನು ಅವಿಕಾರಿಯೂ, ದುರ್ಲಭವೂ, ಸನಾತನವೂ ಆದ ಬ್ರಹ್ಮಪದವನ್ನು ಹೊಂದಿ ಅದರಲ್ಲಿಯೇ ಪ್ರತಿಷ್ಠಿತನಾಗುತ್ತಾನೆ.

ಮಹಾಸತ್ತ್ವನೇ! ದೈತ್ಯರಾಜ! ಈ ರೀತಿಯಲ್ಲಿ ನಾರಾಯಣನ ಬಲವನ್ನೂ ಮತ್ತು ಪ್ರಭಾವವನ್ನೂ ನಾನು ನಿನಗೆ ಹೇಳಿದ್ದೇನೆ."

ವೃತ್ರನು ಹೇಳುತ್ತಾನೆ :

ಏವಂ ಗತೇ ಮೇ ನ ವಿಷಾದೋಽಸ್ತಿ ಕಶ್ಚಿ-
ತ್ಸಮ್ಯಕ್ಚ ಪಶ್ಯಾಮಿ ವಚಸ್ತಥೈತತ್ ।

ಶ್ರುತ್ವಾ ತು ತೇ ವಾಚಮದೀನಸತ್ತ್ವ
ವಿಕಲ್ಮಷೋಽಸ್ಮ್ಯದ್ಯ ತಥಾ ವಿಪಾಪ್ಮಾ ॥೫೭॥

"ಉದಾರಚರಿತನಾದ ಸನತ್ಕುಮಾರನೇ! ವಿಷಯವು ಹೀಗಿರುವುದಾದರೆ ನನಗಾಗಿರುವ ದುಃಸ್ಥಿತಿಗಾಗಿ ನನಗೆ ಸ್ವಲ್ಪವೂ ವಿಷಾದವಿಲ್ಲ. ನೀನು ಹೇಳಿರುವ ಮಾತುಗಳನ್ನು ಚೆನ್ನಾಗಿ ತಿಳಿದುಕೊಂಡಿರುತ್ತೇನೆ ಮತ್ತು ಈ ಮಾತುಗಳ ಯಾಥಾರ್ಥ್ಯವನ್ನೂ ಮನನಮಾಡಿದ್ದೇನೆ. ನಾನು ನಿನ್ನ ಈ ಮಾತುಗಳನ್ನು ಕೇಳಿ ಪಾಪರಹಿತನೂ, ಕಲ್ಮಷರಹಿತನೂ ಆಗಿದ್ದೇನೆ.

ಪ್ರವೃತ್ತಮೇತದ್ಭಗವನ್ಮಹರ್ಷೇ
ಮಹಾದ್ಯುತೇಶ್ಚಕ್ರಮನನ್ತವೀರ್ಯಮ್ ।
ವಿಷ್ಣೋರನನ್ತಸ್ಯ ಸನಾತನಂ ತ-
ತ್ಸ್ಥಾನಂ ಸರ್ಗಾ ಯತ್ರ ಸರ್ವೇ ಪ್ರವೃತ್ತಾಃ ।
ಸ ವೈ ಮಹಾತ್ಮಾ ಪುರುಷೋತ್ತಮೋ ವೈ
ತಸ್ಮಿಞ್ಜಗತ್ಸರ್ವಮಿದಂ ಪ್ರತಿಷ್ಠಿತಮ್ ॥೫೮॥

ಮಹರ್ಷಿಯೇ! ಮಹಾತೇಜಸ್ವಿಯಾದ, ಅನಂತನಾದ, ಸರ್ವವ್ಯಾಪಿಯಾದ ಮಹಾವಿಷ್ಣುವಿನ ಅಮಿತವಾದ ಶಕ್ತಿಯಿಂದ ಕೂಡಿರುವ ಈ ಚಕ್ರವು ಹೀಗೆ ಸುತ್ತುತ್ತಿದೆ. ಈ ಸಕಲಜಗತ್ತೂ ಯಾವ ಸ್ಥಾನದಿಂದ ಹುಟ್ಟಿದುದೋ– ಅದು ಅನಂತವಾದ ಮಹಾವಿಷ್ಣುವಿನ ಸನಾತನವಾದ ಸ್ಥಾನವೇ ಆಗಿದೆ. ಮಹಾವಿಷ್ಣುವೇ ಮಹಾತ್ಮನು ಮತ್ತು ಪುರುಷೋತ್ತಮನು. ಅವನಲ್ಲಿಯೇ ಈ ಸಕಲಜಗತ್ತೂ ಪ್ರತಿಷ್ಠಿತವಾಗಿದೆ."

ಭೀಷ್ಮನು ಹೇಳುತ್ತಾನೆ!

"ಯುಧಿಷ್ಠಿರ! ವೃತ್ರಾಸುರನು ಹೀಗೆ ಹೇಳಿ ಪ್ರಾಣಗಳನ್ನು ತೊರೆದನು. ಆ ಸಮಯದಲ್ಲಿ ಮನಸ್ಸನ್ನು ಪರಮಾತ್ಮನಲ್ಲಿ ಯೋಜಿಸಿ ಅವನ ಧ್ಯಾನವನ್ನೇ ಮಾಡುತ್ತಿದ್ದು ಪರಂಧಾಮವನ್ನು ಹೊಂದಿದನು."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅಯಂ ಸ ಭಗವಾನ್ದೇವಃ ಪಿತಾಮಹ ಜನಾರ್ದನಃ ।
ಸನತ್ಕುಮಾರೋ ವೃತ್ರಾಯ ಯತ್ತದಾಖ್ಯಾತವಾನ್ಪುರಾ ॥೬೦॥

“ಪಿತಾಮಹ! ಹಿಂದೆ ಮಹಾತ್ಮನಾದ ಸನತ್ಕುಮಾರನು ವೃತ್ರಾಸುರನಿಗೆ ಯಾವನ ಸ್ವರೂಪವನ್ನು ವರ್ಣಿಸಿ ಹೇಳಿದನೋ–ಆ ಮಹಾವಿಷ್ಣುವೇ ನಮ್ಮ ಜನಾರ್ದನನಾದ ಶ್ರೀಕೃಷ್ಣನಾಗಿದ್ದಾನೆ. ಅಲ್ಲವೇ?”

ಭೀಷ್ಮನು ಹೇಳುತ್ತಾನೆ :

ಮೂಲಸ್ಥಾಯೀ ಮಹಾದೇವೋ ಭಗವಾನ್ಸ್ವೇನ ತೇಜಸಾ ।
ತತ್ಸ್ಥಃ ಸೃಜತಿ ತಾನ್ಭಾವಾನ್ನಾನಾರೂಪಾನ್ಮಹಾಮನಾಃ ॥೬೧॥

“ಯುಧಿಷ್ಠಿರ! ಮೂಲಕಾರಣರೂಪದಲ್ಲಿರುವ, ಮಹಾದೇವನಾದ, ಮಹಾಮನಸ್ವಿಯಾದ ಭಗವಾನ್ ನಾರಾಯಣನು ಚಿನ್ಮಯರೂಪದಲ್ಲಿದ್ದು ತನ್ನ ಪ್ರಭಾವದಿಂದ ನಾನಾರೂಪಗಳಾದ ಸಮಸ್ತಪದಾರ್ಥಗಳನ್ನೂ ಸೃಷ್ಟಿಸುತ್ತಾನೆ.

ತುರೀಯಾಂಶೇನ ತಸ್ಯೇಮಂ ವಿದ್ಧಿ ಕೇಶವಮಚ್ಯುತಮ್ ।
ತುರೀಯಾರ್ಧೇನ ಲೋಕಾಂಸ್ತ್ರೀನ್ಭಾವಯತ್ಯೇವ ಬುದ್ಧಿಮಾನ್ ॥೬೨॥

ತನ್ನ ಮಹಿಮೆಯಿಂದ ಯಾವಾಗಲೂ ಚ್ಯುತನಾಗದಿರುವ ಈ ಕೇಶವನು ಶ್ರೀಮನ್ನಾರಾಯಣನ ನಾಲ್ಕನೆಯ ಒಂದು ಅಂಶದಿಂದ ಸಂಪನ್ನ ನಾಗಿರುವನೆಂಬುದನ್ನು ತಿಳಿ. ಬುದ್ಧಿಮಂತನಾದ ಈ ಶ್ರೀಕೃಷ್ಣನು ಶ್ರೀಮನ್ನಾರಾಯಣನ ಎಂಟನೆಯ ಒಂದಂಶದಿಂದ ಮೂರು ಲೋಕಗಳನ್ನೂ ಸೃಷ್ಟಿಸಿದ್ದಾನೆ.

ಅರ್ವಾಕ್ಸ್ಥಿತಸ್ತು ಯಃ ಸ್ಥಾಯೀ ಕಲ್ಪಾಂತೇ ಪರಿವರ್ತತೇ ।
ಸ ಶೇತೇ ಭಗವಾನಪ್ಸು ಯೋಽಸಾವತಿಬಲಃ ಪ್ರಭುಃ ।
ತಾನ್ವಿಧಾತಾ ಪ್ರಸನ್ನಾತ್ಮಾ ಲೋಕಾಂಶ್ಚರತಿ ಶಾಶ್ವತಾನ್ ॥೬೩॥

ಹಿಂದೆ ಯಾವ ನಾರಾಯಣನು ಸ್ಥಾಯೀಭೂತನಾಗಿದ್ದನೋ ಅವನೇ

ಕಲ್ಪಾಂತರದಲ್ಲಿ ಮಗ್ಗುಲಾಗುತ್ತಾನೆ. (ಪಕ್ಕಕ್ಕೆ ಹೊರಳುತ್ತಾನೆ.) ಮಹಾಬಲಿಷ್ಠನಾದ, ಪ್ರಭುವಾದ ಶ್ರೀಮನ್ನಾರಾಯಣನು ಕಲ್ಪಾಂತರದಲ್ಲಿ ನೀರಿನಲ್ಲಿ ಪವಡಿಸಿರುತ್ತಾನೆ. ಪ್ರಸನ್ನಾತ್ಮನಾದ, ಸೃಷ್ಟಿಕರ್ತನಾದ ಈಶ್ವರನು ಶಾಶ್ವತವಾದ ಲೋಕಗಳಲ್ಲಿ ಸಂಚರಿಸುತ್ತಾನೆ.

ಸರ್ವಾಣ್ಯಶೂನ್ಯಾನಿ ಕರೋತ್ಯನನ್ತಃ
ಸನಾತನಃ ಸಂಚರತೇ ಚ ಲೋಕಾನ್ ।
ಸ ಚಾನಿರುದ್ಧಃ ಸೃಜತೇ ಮಹಾತ್ಮಾ
ತತ್ಸ್ಥಂ ಜಗತ್ಸರ್ವಮಿದಂ ವಿಚಿತ್ರಮ್ ॥೬೪॥

ಅನಂತನಾದ, ಸನಾತನನಾದ ಭಗವಾನ್ ಶ್ರೀಹರಿಯು ಸಮಸ್ತಕಾರಣಗಳಿಗೂ ಸತ್ತಾ-ಸ್ಫೂರ್ತಿಗಳನ್ನು ಕೊಟ್ಟು ಪೂರ್ಣಗೊಳಿಸಿ, ಲೀಲಾಶರೀರವನ್ನು ಧರಿಸಿ ಲೋಕಗಳಲ್ಲಿ ಸಂಚರಿಸುತ್ತಾನೆ. ಮಹಾವಿಷ್ಣುವಿನ ಗತಿಯನ್ನು ಯಾರಿಂದಲೂ ತಡೆಯಲು ಸಾಧ್ಯವಾಗುವುದಿಲ್ಲ. ಮಹಾತ್ಮನಾದ ಅವನೇ ಈ ಜಗತ್ತನ್ನು ಸೃಷ್ಟಿಸುತ್ತಾನೆ. ವಿಚಿತ್ರವಾದ ಈ ಎಲ್ಲ ಜಗತ್ತೂ ಅವನಲ್ಲಿಯೇ ಪ್ರತಿಷ್ಠಿತವಾಗಿದೆ."

ಯುಧಿಷ್ಠಿರನು ಹೇಳುತ್ತಾನೆ :

ವೃತ್ರೇಣ ಪರಮಾರ್ಥಜ್ಞ ದೃಷ್ಟಾ ಮನ್ಯೇಽತ್ಮನೋ ಗತಿಃ ।
ಶುಭಾ ತಸ್ಮಾತ್ಸ ಸುಖಿತೋ ನ ಶೋಚತಿ ಪಿತಾಮಹ ॥೬೫॥

"ಪರಮಾರ್ಥಜ್ಞನಾದ ಪಿತಾಮಹನೇ! ವೃತ್ರಾಸುರನು ಆತ್ಮದ ಯಥಾರ್ಥಸ್ವರೂಪವನ್ನು ಕಂಡುಕೊಂಡನು. ಆದುದರಿಂದಲೇ ಅವನು ಪರಮಸುಖಿಯಾದನು. ತನಗೆ ಪ್ರಾಪ್ತವಾದ ಪರಾಭವಕ್ಕಾಗಿ ಶೋಕಪಡಲಿಲ್ಲ. ಹೀಗೆ ನಾನು ಭಾವಿಸುತ್ತೇನೆ.

ಶುಕ್ಲಃ ಶುಕ್ಲಾಭಿಜಾತೀಯಃ ಸಾಧ್ಯೋ ನಾವರ್ತತೇಽನಘ ।
ತಿರ್ಯಗ್ಗತೇಶ್ಚ ನಿರ್ಮುಕ್ತೋ ನಿರಯಾಚ್ಚ ಪಿತಾಮಹ ॥೬೬॥

ನಿಷ್ಪಾಪನಾದ ಪಿತಾಮಹನೇ! ವೃತ್ರಾಸುರನು ಶುದ್ಧವಾದ ಕುಲದಲ್ಲಿಯೂ ಹುಟ್ಟಿದ್ದನು. ಸ್ವಭಾವದಿಂದಲೂ ಪರಿಶುದ್ಧನಾಗಿದ್ದನು. 'ಸಾಧ್ಯ'

ಎಂಬ ಹೆಸರಿನ ದೇವತೆಯೂ ಆಗಿದ್ದನು. ಅವನು ಪಶು-ಪಕ್ಷಿಗಳ ಯೋನಿಗಳಿಂದಲೂ–ನರಕದಿಂದಲೂ ಮುಕ್ತನಾಗಿ ಪುನಃ ಪ್ರಪಂಚಕ್ಕೆ ಹಿಂದಿರುಗಲಿಲ್ಲ. (ಬ್ರಹ್ಮದಲ್ಲಿಯೇ ಪ್ರತಿಷ್ಠಿತನಾದನು.)

ಹಾರಿದ್ರವರ್ಣೇ ರಕ್ತೇ ವಾ ವರ್ತಮಾನಸ್ತು ಪಾರ್ಥಿವ ।
ತಿರ್ಯಗೇವಾನುಪಶ್ಯೇತ ಕರ್ಮಭಿಸ್ತಾಮಸೈರ್ವೃತಃ ॥೬೭॥

ಹಳದಿಯ ಬಣ್ಣದವನೂ (ಸತ್ತ್ವಗುಣಾಧಿಕ್ಯ, ರಜೋಗುಣದ ನ್ಯೂನತೆ ಮತ್ತು ತಮೋಗುಣದ ಸಮತೆ ಇವುಗಳು ಇರತಕ್ಕವನು) ಮತ್ತು ರಕ್ತವರ್ಣನೂ (ರಜೋಗುಣಾಧಿಕ್ಯ, ತಮೋಗುಣದ ಶೂನ್ಯತೆ ಮತ್ತು ಸತ್ತ್ವಗುಣದ ಸಮತೆ ಇವುಗಳು ಇರತಕ್ಕವನು) ಕೆಲವು ವೇಳೆ ತಾಮಸವಾದ ಕರ್ಮಗಳಿಂದ ಆವೃತನಾಗಿ ತಿರ್ಯಗ್ಯೋನಿಗಳನ್ನು ಕಾಣಬೇಕಾಗುತ್ತದೆ.

ವಯಂ ತು ಭೃಶಮಾಪನ್ನಾ ರಕ್ತಾ ದುಃಖಸುಖೇಽಸುಖೇ ।
ಕಾಂ ಗತಿಂ ಪ್ರತಿಪತ್ಸ್ಯಾಮೋ ನೀಲಾಂ ಕೃಷ್ಣಾಧಮಾಮಥ ॥೬೮॥

ನಾವಾದರೋ ಅತ್ಯಧಿಕವಾದ ಆಪತ್ತಿಗೆ ಒಳಗಾಗಿದ್ದೇವೆ. ಸುಖ-ದುಃಖಗಳಲ್ಲಿ ಅಥವಾ ಕೇವಲ ದುಃಖದಲ್ಲಿಯೇ ಆಸಕ್ತರಾಗಿದ್ದೇವೆ. ಇಂತಹ ಸ್ಥಿತಿಯಲ್ಲಿ ನಾವು ನೀಲವರ್ಣದ ಮನುಷ್ಯಯೋನಿಯಲ್ಲಿ ಜನ್ಮತಾಳು ತ್ತೇವೆಯೋ ಅಥವಾ ಕೃಷ್ಣವರ್ಣದ ಅಧಮವಾದ ಸ್ಥಾವರಯೋನಿಯಲ್ಲಿ ಜನ್ಮವನ್ನು ಪಡೆಯುವೆವೋ–ಎಂಬುದು ತಿಳಿಯದಾಗಿದೆ."

ಭೀಷ್ಮನು ಹೇಳುತ್ತಾನೆ :

ಶುದ್ಧಾಭಿಜನಸಮ್ಪನ್ನಾಃ ಪಾಣ್ಡವಾಃ ಸಂಶಿತವ್ರತಾಃ ।
ವಿಹೃತ್ಯ ದೇವಲೋಕೇಷು ಪುನರ್ಮಾನುಷಮೇಷ್ಯಥ ॥೬೯॥

"ಯುಧಿಷ್ಠಿರ! ಪಾಂಡುವಿನ ಮಕ್ಕಳಾದ ನೀವೆಲ್ಲರೂ ವಿಶುದ್ಧವಾದ ಕುಲದಲ್ಲಿ ಹುಟ್ಟಿರುವಿರಿ. ಕಠೋರವ್ರತನಿಷ್ಠರಾಗಿರುವಿರಿ. ಆದುದರಿಂದ ನೀವೆಲ್ಲರೂ ಅವಸಾನಾನಂತರದಲ್ಲಿ ದೇವಲೋಕಗಳಲ್ಲಿ ಬಹಳ ಕಾಲದವರೆಗೆ ವಿಹರಿಸುತ್ತಿದ್ದು ಪುನಃ ಈ ಲೋಕದಲ್ಲಿ ಮನುಷ್ಯರಾಗಿ ಜನ್ಮತಾಳುವಿರಿ.

ಪ್ರಜಾವಿಸರ್ಗಂ ಚ ಸುಖೇನ ಕಾಲೇ
ಪ್ರತ್ಯೇತ್ಯ ದೇವೇಷು ಸುಖಾನಿ ಭುಕ್ತ್ವಾ ।
ಸುಖೇನ ಸಂಯಾಸ್ಯಥ ಸಿದ್ಧಸಂಖ್ಯಾಂ
ಮಾ ವೋ ಭಯಂ ಭೂದ್ವಿಮಲಾಃ ಸ್ಥ ಸರ್ವೇ ॥೭೦॥

ನೀವೆಲ್ಲರೂ ಕಾಲವಿಶೇಷದಲ್ಲಿ ಸುಖವಾಗಿ ಈ ಮಾನುಷ್ಯವನ್ನು ದಾಟಿ ದೇವಲೋಕಕ್ಕೆ ಹೋಗಿ ನಾನಾವಿಧವಾದ ಸುಖಗಳನ್ನು ಉಪಭೋಗಿಸುವಿರಿ. ಬಳಿಕ ಸುಖದಿಂದಲೇ ಸಿದ್ಧಿಯನ್ನು ಪಡೆದುಕೊಂಡು ಸಿದ್ಧರೆಂದೇ ಪರಿಗಣಿತ ರಾಗುವಿರಿ. ದುರ್ಗತಿಯು ಲಭಿಸುವುದೆಂದು ನೀವು ಭಯಪಡಬೇಕಾಗಿಲ್ಲ. ನೀವೆಲ್ಲರೂ ನಿರ್ಮಲರೂ ನಿಷ್ಪಾಪರೂ ಆಗಿರುವಿರಿ. ಆದುದರಿಂದ ಖಂಡಿತ ವಾಗಿಯೂ ನಿಮಗೆ ದುರ್ಗತಿಯುಂಟಾಗುವುದಿಲ್ಲ."

೨೮೦ನೆಯ ಅಧ್ಯಾಯವು ಮುಗಿಯಿತು.

೨೮೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಇಂದ್ರ-ವೃತ್ರರ ಯುದ್ಧದ ವರ್ಣನೆ

ಯುಧಿಷ್ಠಿರನು ಹೇಳುತ್ತಾನೆ :

"ತಾತ! ಅಮಿತತೇಜಸ್ವಿಯಾದ ವೃತ್ರಾಸುರನ ಧರ್ಮನಿಷ್ಠೆಯು ಅದ್ಭುತವಾಗಿದ್ದಿತು. ಅವನ ವಿಜ್ಞಾನವೂ ಅನುಪಮವಾಗಿದ್ದಿತು. ಭಗವಾನ್ ವಿಷ್ಣುವಿನಲ್ಲಿ ಅವನಿಗಿದ್ದ ಭಕ್ತಿಯೂ ಉಚ್ಚತರವಾಗಿದ್ದಿತು.

ಅಮಿತತೇಜಸ್ವಿಯಾದ ವಿಷ್ಣುವಿನ ಸ್ಥಾನವು ತಿಳಿಯಲು ದುಸ್ಸಾಧ್ಯ ವಾದುದು. ರಾಜಸಿಂಹನೇ! ವೃತ್ರಾಸುರನು ದುರ್ಜ್ಞೇಯವಾದ ವಿಷ್ಣುವಿನ ಸ್ಥಾನವನ್ನು ಹೇಗೆ ಪಡೆದುಕೊಂಡನು?

ಅಚ್ಯುತನೇ! ನೀನೇ ಈ ವಿಷಯವನ್ನು ಹೇಳಿರುವೆಯಾದ್ದರಿಂದ ನಾನು ಈ ವಿಷಯದಲ್ಲಿ ವಿಶ್ವಾಸವನ್ನಿಡುತ್ತೇನೆ. ಆದರೆ ವಿಷ್ಣುಭಕ್ತನಾದ ವೃತ್ರನ ವಧೆಗೆ ಸ್ಪಷ್ಟವಾದ ಕಾರಣವು ನನಗೆ ತಿಳಿಯದೇ ಇರುವುದರಿಂದ ಈ ವಿಷಯದಲ್ಲಿ ಪುನಃ ನಿನ್ನನ್ನು ಪ್ರಶ್ನಿಸಬೇಕೆಂಬ ಕುತೂಹಲವು ನನಗುಂಟಾಗಿದೆ.

ಪುರುಷರ್ಷಭನೇ! ವೃತ್ರಾಸುರನು ಧರ್ಮಿಷ್ಠನು. ವಿಷ್ಣುಭಕ್ತನು, ವೇದಾಂತದ ವಾಕ್ಯಗಳನ್ನು ಸಮನ್ವಯಿಸಿ ಹೇಳುವುದರಲ್ಲಿ ಕುಶಲನು ಮತ್ತು ತತ್ತ್ವಜ್ಞನು. ಅಂತಹವನನ್ನು ಇಂದ್ರನು ಹೇಗೆ ಸಂಹರಿಸಿದನು? ಏತಕ್ಕಾಗಿ ಸಂಹರಿಸಿದನು? ಪ್ರಶ್ನಿಸುತ್ತಿರುವ ನನಗೆ ಈ ಸಂಶಯವನ್ನು ನಿವಾರಿಸಿಕೊಡು. ವೃತ್ರನು ಶಕ್ರನಿಂದ ಹೇಗೆ ಜಯಿಸಲ್ಪಟ್ಟನೆಂಬುದನ್ನೂ ಹೇಳು. ಇಂದ್ರ-ವೃತ್ರರ ನಡುವೆ ಯುದ್ಧವು ಹೇಗೆ ನಡೆಯಿತು? ಮಹಾಬಾಹುವೇ! ಪಿತಾಮಹ! ನನಗೆ ಈ ವಿಷಯವನ್ನು ತಿಳಿಯಬೇಕೆಂದು ಅತ್ಯಂತಕುತೂಹಲವುಂಟಾಗಿದೆ. ಸವಿಸ್ತರವಾಗಿ ಹೇಳು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಬಹಳ ಹಿಂದಿನ ವೃತ್ತಾಂತವಿದು. ಇಂದ್ರನು ರಥದಲ್ಲಿ ಕುಳಿತು ವೃತ್ರಾಸುರನೊಡನೆ ಯುದ್ಧಮಾಡುವ ಸಲುವಾಗಿ ದೇವತೆಗಳೊಡನೆ ಯುದ್ಧಭೂಮಿಗೆ ತೆರಳಿದನು. ಅವನು ಅಲ್ಲಿ ತನ್ನ ಮುಂದೆ ಪರ್ವತೋಪಮನಾಗಿ ನಿಂತಿದ್ದ ವೃತ್ರಾಸುರನನ್ನು ನೋಡಿದನು. ವೃತ್ರಾಸುರನು ಐದು ನೂರು ಯೋಜನಗಳಷ್ಟು ಉದ್ದವಾಗಿಯೂ–ಮೂರು ನೂರು ಯೋಜನಗಳಿಗಿಂತಲೂ ಸ್ವಲ್ಪ ಹೆಚ್ಚು ಅಗಲವಾಗಿಯೂ ಇದ್ದನು. ಮೂರು ಲೋಕದವರಿಂದಲೂ ಜಯಿಸಲು ಅಸಾಧ್ಯನಾಗಿದ್ದ ವೃತ್ರಾಸುರನ ಅಂತಹ ಪರಮಾದ್ಭುತವಾದ ರೂಪವನ್ನು ನೋಡಿ ದೇವತೆಗಳೂ ಭಯಗೊಂಡರು. ಅವರ ಮನಸ್ಸಿಗೆ ಶಾಂತಿಯೆಂಬುದೇ ಇಲ್ಲವಾಯಿತು. ಆ ಸಮಯದಲ್ಲಿ ವೃತ್ರಾಸುರನ ಉತ್ತಮವಾದ ಮತ್ತು ವಿಶಾಲವಾದ ರೂಪವನ್ನು ನೋಡಿ ಭಯಪೀಡಿತನಾದ ಇಂದ್ರನ ಎರಡು ತೊಡೆಗಳೂ ಸೆಟೆದುನಿಂತುವು. (ನಿಶ್ಚಲವಾದುವು.) ಯುದ್ಧವು ಸನ್ನಿಹಿತವಾಗಲಾಗಿ ಸಮಸ್ತದೇವತೆಗಳ ಮತ್ತು ಅಸುರರ ಸೈನ್ಯಗಳಲ್ಲಿ ರಣವಾದ್ಯಗಳು ಮೊಳಗಿದುವು. ದೇವತೆಗಳಿಂದ ಪರಿವೃತನಾದ ಇಂದ್ರನು ತನ್ನೆದುರಾಗಿ ನಿಂತಿರುವುದನ್ನು ನೋಡಿ ವೃತ್ರನಿಗೆ ಗಾಬರಿಯೂ ಆಗಲಿಲ್ಲ ; ಭಯವೂ ಆಗಲಿಲ್ಲ. ಮಿಗಿಲಾಗಿ ವೃತ್ರನಿಗೆ ಯಾವ ಆಸ್ಥೆಯೂ ಉಂಟಾಗಲಿಲ್ಲ. ಆಗ ಸುರೇಂದ್ರನಾದ ಇಂದ್ರನಿಗೂ ಮಹಾತ್ಮನಾದ ವೃತ್ರನಿಗೂ ಮೂರು ಲೋಕಗಳಿಗೂ ಭಯವನ್ನುಂಟುಮಾಡುವ ಘೋರವಾದ ಯುದ್ಧವು ಪ್ರಾರಂಭವಾಯಿತು.

ದೇವತೆಗಳಿಂದಲೂ ಮತ್ತು ಅಸುರರ ಸೈನಿಕರಿಂದಲೂ ಪರಸ್ಪರವಾಗಿ ಬಿಡಲ್ಪಡುತ್ತಿದ್ದ ಕತ್ತಿಗಳಿಂದಲೂ, ಪಟ್ಟಿಶಗಳಿಂದಲೂ, ಶೂಲಗಳಿಂದಲೂ, ಶಕ್ತ್ಯಾಯುಧಗಳಿಂದಲೂ, ತೋಮರಗಳಿಂದಲೂ, ಮುದ್ಗರಗಳಿಂದಲೂ, ನಾನಾಪ್ರಕಾರವಾದ ಶಿಲೆಗಳಿಂದಲೂ, ಭಯಂಕರವಾಗಿ ಶಬ್ದಮಾಡುತ್ತಿದ್ದ ಮಹಾಧನುಸ್ಸುಗಳಿಂದಲೂ, ಅನೇಕಪ್ರಕಾರವಾದ ದಿವ್ಯಶಸ್ತ್ರಾಸ್ತ್ರಗಳಿಂದಲೂ, ಜ್ವಾಲೆಯನ್ನು ಹೊರಸೂಸುತ್ತಿದ್ದ ಪಂಜುಗಳಿಂದಲೂ ಆಕಾಶವು ಸಮಾಕುಲವಾಗಿದ್ದಿತು. ಪಿತಾಮಹನೇ ಮೊದಲಾದ ಸಮಸ್ತದೇವತೆಗಳೂ, ಮಹಾಭಾಗರಾದ ಋಷಿಗಳೂ, ಸಿದ್ಧರೂ, ಅಪ್ಸರೆಯರಿಂದ ಕೂಡಿದ ಗಂಧರ್ವರೂ ವಿಮಾನಾರೂಢರಾಗಿ ಅದ್ಭುತವಾದ ಆ ಯುದ್ಧವನ್ನು ನೋಡಲು ಅಲ್ಲಿಗೆ ಆಗಮಿಸಿದ್ದರು. ಬಳಿಕ ಧರ್ಮಾತ್ಮರಲ್ಲಿ ಶ್ರೇಷ್ಠನಾದ ವೃತ್ರಾಸುರನು ಅಂತರಿಕ್ಷವೆಲ್ಲವನ್ನೂ ಆಕ್ರಮಿಸಿ ಬಹಳ ಶೀಘ್ರವಾಗಿ ಇಂದ್ರ ನನ್ನು ಕಲ್ಲುಮಳೆಯಿಂದ ಮುಚ್ಚಿಬಿಟ್ಟನು. ಅದರಿಂದ ಕ್ರುದ್ಧರಾದ ದೇವತೆಗಳು ಎಲ್ಲ ಕಡೆಗಳಿಂದಲೂ, ಬಾಣಗಳ ಮಳೆಗರೆದು ವೃತ್ರನಿಂದ ಸುರಿಸಲ್ಪಡುತ್ತಿದ್ದ ಕಲ್ಲುಮಳೆಯನ್ನು ಹೋಗಲಾಡಿಸಿದರು. ಮಹಾಮಾಯಾವಿಯಾದ, ಮಹಾಬಲನಾದ ವೃತ್ರನು ಸುತ್ತಲೂ ಮಾಯಾಯುದ್ಧವನ್ನು ಮಾಡುತ್ತಾ ದೇವೇಂದ್ರನನ್ನು ಭ್ರಾಂತಿಗೊಳಿಸಿದನು. ವೃತ್ರಾಸುರನಿಂದ ಪೀಡಿಸಲ್ಪಟ್ಟ ದೇವೇಂದ್ರನು ಮೂರ್ಛಿತನಾದನು. ಒಡನೆಯೇ ವಸಿಷ್ಠರು ರಥಂತರಸಾಮಗಾಯನದಿಂದ ಇಂದ್ರನನ್ನು ಎಚ್ಚರಗೊಳಿಸಿ ಹೇಳಿದರು :

"ದೇವೇಂದ್ರ! ನೀನು ದೇವತೆಗಳಲ್ಲಿಯೇ ಶ್ರೇಷ್ಠನಾಗಿರುವೆ. ದೈತ್ಯಾ ಸುರಸಂಹಾರಕನೇ! ನೀನು ಮೂರು ಲೋಕಗಳ ಬಲದಿಂದಲೂ ಸಂಪನ್ನ ನಾಗಿರುವೆ. ಹೀಗಿದ್ದರೂ ನೀನು ವಿಷಾದಿಸುತ್ತಿರುವುದೇಕೆ? ಜಗದೀಶ್ವರನಾದ ಈ ಬ್ರಹ್ಮ, ವಿಷ್ಣು, ಮಹೇಶ್ವರ, ಭಗವಾನ್ ಸೋಮದೇವ, ಮಹರ್ಷಿಗಳು–ಇವರೆಲ್ಲರೂ ನೀನು ಉದ್ವಿಗ್ನನಾಗಿರುವುದನ್ನು ಕಂಡು ನಿನ್ನ ವಿಜಯಕ್ಕಾಗಿ ಸ್ವಸ್ತಿವಾಚನಗಳನ್ನು ಮಾಡುತ್ತಿದ್ದಾರೆ. ಒಬ್ಬ ಸಾಧಾರಣನಾದ ವ್ಯಕ್ತಿಯಂತೆ ವಿಮೋಹಗೊಳ್ಳಬೇಡ. ಶ್ರೇಷ್ಠವಾದ ಬುದ್ಧಿಯನ್ನು ಆಶ್ರಯಿಸಿ ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸು. ಸರ್ವಲೋಕವಂದಿತನಾದ, ಲೋಕ ಗುರುವಾದ, ಭಗವಾನ್ ತ್ರಿಲೋಚನನು ನಿನ್ನನ್ನು ಕೃಪಾದೃಷ್ಟಿಯಿಂದ

ನೋಡುತ್ತಿದ್ದಾನೆ. ಆದುದರಿಂದ ನೀನು ಮೋಹವನ್ನು ಪರಿತ್ಯಜಿಸು. ಬೃಹಸ್ಪತಿಯೇ ಮೊದಲಾದ ಬ್ರಹ್ಮರ್ಷಿಗಳೂ ವಿಜಯದ ಸಲುವಾಗಿ ನಿನ್ನನ್ನು ದಿವ್ಯವಾದ ಸ್ತೋತ್ರಗಳಿಂದ ಸ್ತುತಿಸುತ್ತಿದ್ದಾರೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಮಹಾತ್ಮರಾದ ವಸಿಷ್ಠರು ಇಂದ್ರನಿಗೆ ಹೀಗೆ ಬೋಧಿಸುತ್ತಿರಲಾಗಿ, ಮಹಾತೇಜಸ್ವಿಯಾದ ಇಂದ್ರನ ಬಲವು ಬಹಳವಾಗಿ ವೃದ್ಧಿಸಿತು. ಆಗ ಭಗವಾನ್ ಪಾಕಶಾಸನನು ಶ್ರೇಷ್ಠವಾದ ಬುದ್ಧಿಯನ್ನು ಆಶ್ರಯಿಸಿ ಮಹಾಯೋಗದಿಂದ ಯುಕ್ತನಾಗಿ ವೃತ್ರನು ನಿರ್ಮಿಸಿದ್ದ ಮಾಯೆಯನ್ನು ಹೋಗಲಾಡಿಸಿದನು. (ಆದರೂ ಇಂದ್ರನಿಗೆ ವೃತ್ರನನ್ನು ಸಂಹರಿಸಲು ಸಾಧ್ಯವಾಗಲಿಲ್ಲ.) ಬಳಿಕ ಅಂಗಿರಸನ ಮಗನಾದ, ಶ್ರೀಮಂತನಾದ ಬೃಹಸ್ಪತಿಯೂ ಮತ್ತು ಇತರ ಮಹರ್ಷಿಗಳೂ ವೃತ್ರನ ಮಹಾಪರಾಕ್ರಮವನ್ನು ಗಮನಿಸಿ ಮಹಾದೇವನ ಬಳಿಗೆ ಹೋಗಿ ಲೋಕಗಳ ಹಿತಾರ್ಥವಾಗಿ ವೃತ್ರಾಸುರನನ್ನು ವಿನಾಶಗೊಳಿಸುವ ಸಲುವಾಗಿ ಪರಶಿವನೊಡನೆ ಮಾತನಾಡಿದರು. ಆಗ ಜಗದೀಶ್ವರನಾದ ಭಗವಾನ್ ಶಂಕರನ ತೇಜಸ್ಸು ಭಯಂಕರವಾದ ಜ್ವರದ ಸ್ವರೂಪವನ್ನು ಹೊಂದಿ ಲೋಕೇಶ್ವರನಾದ ವೃತ್ರನ ಶರೀರವನ್ನು ಹೊಕ್ಕಿತು. ಸರ್ವಲೋಕಗಳ ಸಂರಕ್ಷಣೆಯಲ್ಲಿ ನಿರತನಾದ, ಸರ್ವಲೋಕಪೂಜಿತನಾದ, ದೇವದೇವನಾದ ಭಗವಾನ್ ವಿಷ್ಣುವೂ ಇಂದ್ರನ ವಜ್ರಾಯುಧದಲ್ಲಿ ಪ್ರವೇಶಿಸಿದನು. ಅನಂತರ ಬುದ್ಧಿವಂತನಾದ ಬೃಹಸ್ಪತಿ, ಮಹಾತೇಜಸ್ವಿಗಳಾದ ವಸಿಷ್ಠರು, ಮಹರ್ಷಿಗಳು–ಈ ಎಲ್ಲರೂ ಲೋಕಪೂಜಿತನಾದ, ವರದನಾದ ವಾಸವನನ್ನು ಸಂಧಿಸಿ ಏಕಾಗ್ರಚಿತ್ತರಾಗಿ 'ಪ್ರಭುವೇ! ವೃತ್ರನನ್ನು ಸಂಹರಿಸು'–ಎಂದು ಹೇಳಿದರು. ಅನಂತರ ಮಹೇಶ್ವರನು ಇಂದ್ರನೊಡನೆ ಹೇಳಿದನು :

"ಶಕ್ರ! ಈ ವೃತ್ರಮಹಾಸುರನು ದೊಡ್ಡದಾದ ಅಸುರಸೈನ್ಯದಿಂದ ಸಮಾವೃತನಾಗಿ ನಿನ್ನ ಮುಂದೆ ಯುದ್ಧಕ್ಕೆ ನಿಂತಿದ್ದಾನೆ. ಜ್ಞಾನನಿಷ್ಠನಾಗಿರುವುದರಿಂದ ಇವನು ಸಂಪೂರ್ಣವಿಶ್ವಕ್ಕೂ ಆತ್ಮಭೂತನಾಗಿದ್ದಾನೆ. ಇವನು ಎಲ್ಲಿಗೆ ಬೇಕಾದರೂ ಯಾವ ವಿಧವಾದ ತಡೆಯೂ ಇಲ್ಲದೇ ಹೋಗ

ಬಲ್ಲನು. ಬಹುಮಾಯನೆಂದು ವಿಖ್ಯಾತನಾಗಿದ್ದಾನೆ. ಮೂರು ಲೋಕಗಳವರಿಂದಲೂ ದುರ್ಜಯನಾದ, ಅಸುರಶ್ರೇಷ್ಠನಾದ ಈ ವೃತ್ರನನ್ನು ಯೋಗವನ್ನು ಆಶ್ರಯಿಸಿ (ಯಾವುದಾದರೂ ಉಪಾಯವನ್ನಾಶ್ರಯಿಸಿ) ಸಂಹರಿಸು. ಆದರೆ ಮಾತ್ರ ಇವನನ್ನು ಅವಹೇಳನಮಾಡಬೇಡ. ಈ ವೃತ್ರಾಸುರನು ಅಮಿತವಾದ ಬಲವನ್ನು ಪಡೆದುಕೊಳ್ಳುವ ಸಲುವಾಗಿಯೇ ಅರುವತ್ತು ಸಾವಿರ ವರ್ಷಗಳ ಕಾಲ ಬ್ರಹ್ಮನನ್ನು ಕುರಿತು ತಪಸ್ಸುಮಾಡಿರುವನು. ಬ್ರಹ್ಮನು ಪ್ರತ್ಯಕ್ಷನಾಗಿ ಇವನಿಗೆ ಮನೋವಾಂಛಿತವಾದ ವರವನ್ನು ದಯಪಾಲಿಸಿರುವನು. ಬ್ರಹ್ಮನು ಇವನಿಗೆ ಯೋಗಿಗಳ ಮಹತ್ತ್ವವನ್ನೂ, ಮಹಾಮಾಯತ್ವವನ್ನೂ, ಮಹಾಬಲತ್ವವನ್ನೂ, ಸರ್ವಶ್ರೇಷ್ಠವಾದ ತೇಜಸ್ಸನ್ನೂ ದಯಪಾಲಿಸಿದ್ದಾನೆ. ಇದೋ ನೋಡು, ನನ್ನ ತೇಜಸ್ಸು ನಿನ್ನ ಶರೀರದಲ್ಲಿ ಪ್ರವೇಶಿಸುತ್ತಿದೆ. ನನ್ನ ತೇಜೋರೂಪವಾದ ಜ್ವರದ ಕಾರಣದಿಂದ ಅಸ್ಥಿರಚಿತ್ತನಾಗಿರುವ ಇವನನ್ನು ಈಗಲೇ ವಜ್ರಾಯುಧದಿಂದ ಸಂಹರಿಸು.”

ಇಂದ್ರನು ಹೇಳುತ್ತಾನೆ :

“ಭಗವನ್! ಸುರಶ್ರೇಷ್ಠನೇ! ಶಂಕರನೇ! ನಿನ್ನ ಅನುಗ್ರಹದಿಂದ ದಿತಿಯ ಮಗನಾದ, ಎದುರಿಸಲು ಅಸಾಧ್ಯನಾದ ಈ ವೃತ್ರಾಸುರನನ್ನು ನೀನು ನೋಡುತ್ತಿರುವಂತೆಯೇ ವಜ್ರಾಯುಧದಿಂದ ಸಂಹರಿಸುತ್ತೇನೆ.”

ಭೀಷ್ಮನು ಹೇಳುತ್ತಾನೆ :

“ಮಹಾರಾಜ! ಯಾವಾಗ ಮಹಾದೈತ್ಯನಾದ ವೃತ್ರಾಸುರನಲ್ಲಿ ಮಹಾಘೋರವಾದ ಜ್ವರವು ಪ್ರವೇಶಿಸಿತೋ–ಆಗ ದೇವತೆಗಳಿಗೂ, ಋಷಿಗಳಿಗೂ ಉಂಟಾದ ಹರ್ಷದಿಂದ ಮಹಾಶಬ್ದವುಂಟಾಯಿತು. ಸಾವಿರಾರು ದುಂದುಭಿಗಳೂ, ಮಹಾಶಬ್ದದಿಂದ ಕೂಡಿದ ಶಂಖಗಳೂ, ಡೋಲುಗಳೂ, ನಗಾರಿಗಳೂ ಮೊಳಗಿದುವು. ಅದರ ಪರಿಣಾಮವಾಗಿ ಎಲ್ಲ ಅಸುರರಿಗೂ ಸ್ಮರಣಶಕ್ತಿಯೇ ಹೊರಟುಹೋಯಿತು. ಕ್ಷಣಮಾತ್ರದಲ್ಲಿ ವೃತ್ರಾಸುರನು ರಚಿಸಿದ್ದ ಮಾಯೆಯೆಲ್ಲವೂ ನಾಶವಾಯಿತು. ಅನಂತರ ಮಹಾದೇವನ ತೇಜೋರೂಪವಾದ ಜ್ವರವು ವೃತ್ರಾಸುರನಲ್ಲಿ ಪ್ರವೇಶಿಸಿದೆಯೆಂಬುದನ್ನು

ತಿಳಿದು ವೃತ್ರಾಸುರನ ವಧೆಗಾಗಿ ಇಂದ್ರನನ್ನು ಪ್ರಚೋದಿಸುತ್ತಿರುವರೋ ಎಂಬಂತೆ ದೇವತೆಗಳು ಶಕ್ರನನ್ನೂ ಮತ್ತು ಶಿವನನ್ನೂ ಸ್ತೋತ್ರಮಾಡುತ್ತಿದ್ದರು. ಋಷಿಗಳಿಂದ ಸ್ತುತಿಸಲ್ಪಡುತ್ತಿದ್ದ, ರಥಸ್ಥನಾಗಿದ್ದ, ಮಹಾತ್ಮನಾದ ಶಕ್ರನಿಗೆ ಯಾರಿಂದಲೂ ದಿಟ್ಟಿಸಿ ನೋಡಲೂ ಅಸಾಧ್ಯವಾದ ರೂಪವುಂಟಾಯಿತು."

೨೮೧ನೆಯ ಅಧ್ಯಾಯವು ಮುಗಿಯಿತು.

೨೮೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ವೃತ್ರಾಸುರನ ವಧೆ : ಅದರಿಂದ ಉಂಟಾದ ಬ್ರಹ್ಮಹತ್ಯಾ ದೋಷವನ್ನು ವಿಭಜಿಸಿ ನಾಲ್ಕು ಸ್ಥಳಗಳಲ್ಲಿ ಬ್ರಹ್ಮನು ನಿಕ್ಷೇಪಿಸಿದುದು

ಭೀಷ್ಮನು ಹೇಳುತ್ತಾನೆ :

"ಮಹಾರಾಜ! ಜ್ವರದಿಂದ ಆವಿಷ್ಟನಾದ ವೃತ್ರಾಸುರನ ಶರೀರದಲ್ಲಿ ಯಾವ ಯಾವ ಲಕ್ಷಣಗಳು ಉಂಟಾದುವೆಂಬುದನ್ನು ಹೇಳುವೆನು, ಕೇಳು. ಅವನ ಮುಖವು ಸುಡತೊಡಗಿತು. ಘೋರರೂಪವನ್ನು ತಾಳಿತು. ಆಕೃತಿಯು ಬಹಳವಾಗಿ ವಿಕಾರವನ್ನು ಹೊಂದಿತು. ಶರೀರವು ನಡುಗತೊಡಗಿತು. ಶ್ವಾಸೋಚ್ಛ್ವಾಸಗಳು ವೇಗವಾಗಿ ಆಡತೊಡಗಿದುವು. ತೀವ್ರವಾದ ರೋಮಾಂಚನವುಂಟಾಯಿತು. ಸುದೀರ್ಘವಾದ ನಿಃಶ್ವಾಸವು ಹೊರಹೊಮ್ಮುತ್ತಿದ್ದಿತು. ವೃತ್ರಾಸುರನ ಮುಖದಿಂದ ಅತ್ಯಂತಭಯಂಕರ ವಾದ, ಅಮಂಗಳರೂಪವಾದ ನರಿಯ ರೂಪದಲ್ಲಿ ಮಹಾಘೋರವಾದ ಅವನ ಸ್ಮೃತಿಯು–ಹೊರಬಿದ್ದಿತು. ಅವನ ಎರಡು ಪಕ್ಕಗಳಲ್ಲಿಯೂ ಪ್ರಜ್ವಲಿತವಾದ ಮತ್ತು ಪ್ರಕಾಶಮಾನವಾದ ಉಲ್ಕೆಗಳು ಬೀಳತೊಡಗಿದುವು. ರಣಹದ್ದುಗಳು, ಕಾಗೆಗಳು, ಬಕಗಳು–ಇವೇ ಮೊದಲಾದ ಪಕ್ಷಿಗಳು ಭಯಂಕರವಾಗಿ ಕರ್ಕಶವಾಗಿ ಕೂಗುತ್ತಿದ್ದುವು. ವೃಕ್ಷದ ಮೇಲ್ಭಾಗದಲ್ಲಿ ಕುಳಿತಿದ್ದ ಆ ಪಕ್ಷಿಗಳು ಚಕ್ರದಂತೆ ವೃತ್ರಾಸುರನ ತಲೆಯ ಮೇಲೆ ಹಾರಾಡುತ್ತಿದ್ದುವು.

ಬಳಿಕ ದೇವತೆಗಳಿಂದ ಅಭಿನಂದಿಸಲ್ಪಟ್ಟ ಇಂದ್ರನು ಆ ರಣಾಂಗಣದಲ್ಲಿ

ರಥದಲ್ಲಿ ಕುಳಿತು ವಜ್ರಾಯುಧವನ್ನು ಎತ್ತಿಹಿಡಿದು ದೈತ್ಯನ ಕಡೆಗೆ ನೋಡಿದನು.

ರಾಜೇಂದ್ರ! ತೀವ್ರವಾದ ಜ್ವರದಿಂದ ಪೀಡಿತನಾಗಿದ್ದ ಆ ಮಹಾಸುರನು, ಅಮಾನುಷವಾದ ಗರ್ಜನೆಯನ್ನು ಮಾಡುತ್ತಾ ಬಾರಿ-ಬಾರಿಗೂ ಆಕಳಿಸುತ್ತಿದ್ದನು. ಹೀಗೆ ಆಕಳಿಸುತ್ತಿದ್ದ ವೃತ್ರಾಸುರನ ಮೇಲೆ ಇಂದ್ರನು ವಜ್ರಾಯುಧವನ್ನು ಪ್ರಯೋಗಿಸಿದನು. ಮಹಾತೇಜಸ್ಸಿನಿಂದ ಕೂಡಿದ್ದ ಆ ವಜ್ರಾಯುಧವು ಕಾಲಾಗ್ನಿಗೆ ಸಮಾನವಾಗಿ ಕಾಣುತ್ತಿದ್ದಿತು. ಒಡನೆಯೇ ಇಂದ್ರಪ್ರಯುಕ್ತವಾದ ವಜ್ರಾಯುಧವು ದೈತ್ಯನಾದ ವೃತ್ರಾಸುರನನ್ನು ಕೆಳಕ್ಕೆ ಬೀಳಿಸಿತು. ವೃತ್ರಾಸುರನು ಹತನಾದುದನ್ನು ಕಂಡು ನಾಲ್ಕು ದಿಕ್ಕುಗಳಿಂದಲೂ ದೇವತೆಗಳ ಸಿಂಹನಾದಗಳು ಪುನಃ ಪುನಃ ಕೇಳಿಬರುತ್ತಿದ್ದುವು. ದಾನವಾರಿಯಾದ ಮಹಾಯಶೋವಂತನಾದ ಇಂದ್ರನು ವಿಷ್ಣುವಿನ ತೇಜಸ್ಸಿನಿಂದ ಆವಿಷ್ಟವಾಗಿದ್ದ ವಜ್ರಾಯುಧದಿಂದ ವೃತ್ರನನ್ನು ಸಂಹರಿಸಿ ದೇವಲೋಕವನ್ನು ಪ್ರವೇಶಿಸಿದನು.

ಬಳಿಕ ವೃತ್ರಾಸುರನ ಮೃತಶರೀರದಿಂದ ಸಂಪೂರ್ಣಜಗತ್ತಿಗೂ ಭಯವನ್ನುಂಟುಮಾಡುವ, ಮಹಾಘೋರವಾದ ಮತ್ತು ಕ್ರೂರಸ್ವಭಾವದ 'ಬ್ರಹ್ಮವಧ್ಯಾ' ಎಂಬ ಪಾತಕರೂಪವು ಪ್ರಕಟವಾಯಿತು. ಅದರ ಹಲ್ಲುಗಳು ಅತ್ಯಂತವಿಕಾರವಾಗಿದ್ದುವು. ಆಕೃತಿಯು ಕಪ್ಪಾಗಿಯೂ ಕಂದುಮಿಶ್ರಿತ ಹಳದಿಯಾಗಿಯೂ ಮತ್ತು ಭಯಂಕರವಾಗಿಯೂ ಇದ್ದಿತು. ತಲೆಗೂದಲುಗಳು ಕೆದರಿಕೊಂಡಿದ್ದುವು. ಕಣ್ಣುಗಳು ಘೋರವಾಗಿದ್ದುವು. ಅದು ಕಪಾಲಗಳ ಮಾಲಿಕೆಯನ್ನು ಕತ್ತಿನಲ್ಲಿ ಧರಿಸಿದ್ದಿತು. ಬ್ರಹ್ಮವಧ್ಯೆಯು ಕೃತ್ಯಾದೇವತೆಯಂತೆಯೇ ಕಾಣುತ್ತಿದ್ದಿತು. ಆ ಆಕೃತಿಯು ರಕ್ತದಿಂದ ತೋಯ್ದುಹೋಗಿದ್ದಿತು. ಹರಿದುಹೋಗಿದ್ದ ನಾರುಬಟ್ಟೆಯನ್ನು ಧರಿಸಿದ್ದಿತು. ಅಂತಹ ಭಯಂಕರವಾದ ರೂಪವನ್ನು ಹೊಂದಿದ್ದ ಬ್ರಹ್ಮವಧ್ಯೆಯು ವೃತ್ರಾಸುರನ ಮೃತಶರೀರದಿಂದ ಹೊರಬಂದು ದೇವೇಂದ್ರನನ್ನು ಹುಡುಕತೊಡಗಿತು. ಆ ಸಮಯದಲ್ಲಿ ವೃತ್ರವಿನಾಶಕನಾದ ಇಂದ್ರನು ಲೋಕಗಳ ಹಿತಾರ್ಥವಾಗಿ ಸ್ವರ್ಗಾಭಿಮುಖವಾಗಿ ಹೋಗುತ್ತಿದ್ದನು. ಯುದ್ಧಭೂಮಿಯಿಂದ ಹೊರಟು ಸ್ವರ್ಗಾಭಿಮುಖವಾಗಿ ಹೋಗುತ್ತಿದ್ದ ಮಹಾ

ತೇಜಸ್ವಿಯಾದ ಶಕ್ರನನ್ನು ನೋಡಿ ಬ್ರಹ್ಮವಧ್ಯೆಯು ಅವನನ್ನು ಹಿಡಿದು ಮರುಕ್ಷಣದಲ್ಲಿಯೇ ಅವನಲ್ಲಿ ಸೇರಿಕೊಂಡುಬಿಟ್ಟಿತು. ಹೀಗೆ ಇಂದ್ರನಿಗೆ ಬ್ರಹ್ಮವಧ್ಯೆಯಿಂದ ಭಯವುಂಟಾಗಲಾಗಿ ಇಂದ್ರನು ಕಮಲದ ನಾಳದಲ್ಲಿ ಸೇರಿಕೊಂಡು ಅಲ್ಲಿಯೇ ಅನೇಕವರ್ಷಗಳವರೆಗೆ ವಾಸಮಾಡಿಕೊಂಡಿದ್ದನು. ಪ್ರಯತ್ನಪೂರ್ವಕವಾಗಿಯೇ ಅನುಸರಿಸಿಕೊಂಡು ಬರುತ್ತಿದ್ದ ಬ್ರಹ್ಮಹತ್ಯೆಯಿಂದ ಆಕ್ರಮಿಸಲ್ಪಟ್ಟ ದೇವೇಂದ್ರನು ಕ್ಷಣಮಾತ್ರದಲ್ಲಿಯೇ ತೇಜಸ್ಸನ್ನು ಕಳೆದುಕೊಂಡನು. ಇಂದ್ರನು ಆ ಬ್ರಹ್ಮಹತ್ಯೆಯನ್ನು ಕಳೆದುಕೊಳ್ಳಲು ಬಹಳವಾಗಿ ಪ್ರಯತ್ನಿಸಿದನು. ಆದರೆ ಎಷ್ಟೇ ಪ್ರಯತ್ನಿಸಿದರೂ ತನ್ನಲ್ಲಿ ಸೇರಿಕೊಂಡಿದ್ದ ಬ್ರಹ್ಮಹತ್ಯೆಯನ್ನು ದೂರೀಕರಿಸಲು ಇಂದ್ರನಿಗೆ ಸಾಧ್ಯವಾಗಲೇ ಇಲ್ಲ. ಬ್ರಹ್ಮಹತ್ಯೆಯಿಂದ ಹಿಡಿಯಲ್ಪಟ್ಟಿದ್ದ ಇಂದ್ರನು ಅದೇ ಅವಸ್ಥೆಯಲ್ಲಿಯೇ ಬ್ರಹ್ಮನ ಬಳಿಗೆ ಹೋಗಿ ತಲೆಬಾಗಿ ನಮಸ್ಕರಿಸಿದನು. ದ್ವಿಜಶ್ರೇಷ್ಠನಾದ ವೃತ್ರಾಸುರನನ್ನು ವಧಿಸಿದ ಕಾರಣ ಬ್ರಹ್ಮಹತ್ಯೆಯಿಂದ ಇಂದ್ರನು ಹಿಡಿಯಲ್ಪಟ್ಟಿರುವನೆಂಬುದನ್ನು ತಿಳಿದು ಬ್ರಹ್ಮನು ಚಿಂತಾಪರನಾದನು. ಸ್ವಲ್ಪಕಾಲ ಯೋಚಿಸಿದ ನಂತರ ಪಿತಾಮಹನು ಮಧುರವಾದ ಮಾತಿನಿಂದ ಬ್ರಹ್ಮವಧ್ಯೆಯನ್ನು ಸಂತೈಸುತ್ತಾ ಹೇಳಿದನು :

"ಭಾಮಿನಿಯೇ! ತ್ರೈಲೋಕ್ಯಾಧಿಪತಿಯಾದ ದೇವೇಂದ್ರನನ್ನು ಬಿಟ್ಟುಬಿಡು. ನನಗೆ ಪ್ರಿಯವಾಗುವ ಈ ಕಾರ್ಯವನ್ನು ಮಾಡು. ಇದಕ್ಕೆ ಪ್ರತಿಯಾಗಿ ನಾನು ನಿನಗೆ ಯಾವ ಕಾರ್ಯವನ್ನು ಮಾಡಿಕೊಡಲಿ? ನೀನು ಯಾವ ಕಾಮನೆಯನ್ನು ಪೂರೈಸಿಕೊಳ್ಳಲು ಇಚ್ಛಿಸುವೆಯೆಂಬುದನ್ನು ಹೇಳು."

"ಬ್ರಹ್ಮದೇವ! ಮೂರು ಲೋಕದ ಜನರಿಂದಲೂ ಪೂಜಿಸಲ್ಪಡುವ ಮೂರು ಲೋಕಗಳನ್ನೂ ಸೃಷ್ಟಿಸಿರುವ ದೇವನೇ (ನೀನೇ) ಪ್ರೀತನಾಗಲಾಗಿ ನನ್ನೆಲ್ಲ ಅಭಿಲಾಷೆಗಳೂ ಪೂರ್ಣವಾದುವೆಂದೇ ಭಾವಿಸುತ್ತೇನೆ. ಈಗ ನನಗೆ ವಾಸಮಾಡಲು ಒಂದು ಸ್ಥಾನವನ್ನು ಕಲ್ಪಿಸಿಕೊಡು. ಸಂಪೂರ್ಣಜಗತ್ತಿನ ರಕ್ಷಣಾರ್ಥವಾಗಿ ನೀನೇ ಈ ಧರ್ಮದ ಮರ್ಯಾದೆಯನ್ನು ಸ್ಥಾಪಿಸಿರುವೆ. ಧರ್ಮದ ಮರ್ಯಾದೆಯನ್ನು ಸ್ಥಾಪಿಸಿದುದಲ್ಲದೇ–ಈ ಧರ್ಮವನ್ನೂ ನೀನೇ

ಆಚರಣೆಗೆ ತಂದಿರುವೆ. ಸರ್ವಲೋಕೇಶ್ವರ! ಪ್ರಭುವೇ! ಧರ್ಮಜ್ಞನೇ! ನಿನಗೆ ಪ್ರೀತಿಯಾಗುವುದಾಗಿದ್ದರೆ ನಾನೀಗಲೇ ಇಂದ್ರನನ್ನು ಬಿಟ್ಟು ಹೊರಡುತ್ತೇನೆ. ಆದರೆ ನಾನು ಮುಂದೆ ವಾಸಮಾಡಲು ನಿವಾಸವನ್ನು ಕಲ್ಪಿಸಿಕೊಡು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಬ್ರಹ್ಮವಧ್ಯೆಯು ಹೇಳಿದ ಮಾತನ್ನು ಕೇಳಿ ಪ್ರಜಾಪತಿಯು–'ಆಗಲಿ, ನಿನಗೆ ಸ್ಥಾನವನ್ನು ಕಲ್ಪಿಸಿಕೊಡುತ್ತೇನೆ'–ಎಂದು ಹೇಳಿ ಉಪಾಯವಾಗಿ ಶಕ್ರನಲ್ಲಿದ್ದ ಬ್ರಹ್ಮಹತ್ಯೆಯನ್ನು ಹೊರಬರುವಂತೆ ಮಾಡಿದನು.

ಬಳಿಕ ಬ್ರಹ್ಮನು ಅಲ್ಲಿಯೇ ಅಗ್ನಿದೇವನನ್ನು ಸ್ಮರಿಸಿದನು. ಕೂಡಲೇ ಅಗ್ನಿಯು ಬ್ರಹ್ಮನ ಬಳಿಗೆ ಆಗಮಿಸಿ ಅವನೊಡನೆ ಈ ಮಾತನ್ನು ಹೇಳಿದನು :

"ಅನಿಂದ್ಯನೇ! ಭಗವನ್! ನಿನ್ನ ಬಳಿಗೆ ಆಗಮಿಸಿದ್ದೇನೆ. ನಾನೀಗ ಏನು ಮಾಡಬೇಕಾಗಿದೆಯೆಂಬುದನ್ನೂ–ನನ್ನ ಕರ್ತವ್ಯವೇನೆಂಬುದನ್ನೂ ದಯ ಮಾಡಿ ತಿಳಿಸು."

"ಅಗ್ನಿದೇವ! ನಾನು ಈ ಇಂದ್ರನನ್ನು ಬ್ರಹ್ಮಹತ್ಯಾಪಾಪದಿಂದ ವಿಮುಕ್ತನನ್ನಾಗಿ ಮಾಡಲು ಈ ಬ್ರಹ್ಮಹತ್ಯೆಯನ್ನು ಹಲವು ಭಾಗಗಳನ್ನಾಗಿ ಮಾಡಲು ಇಚ್ಛಿಸಿದ್ದೇನೆ. ಇದರಲ್ಲಿ ನಾಲ್ಕನೆಯ ಒಂದು ಭಾಗವನ್ನು ನೀನೂ ಪ್ರತಿಗ್ರಹಿಸು."

"ಲೋಕಪೂಜಿತನೇ! ಪ್ರಭುವೇ! ಬ್ರಹ್ಮದೇವ! ನಿನ್ನ ಆಜ್ಞೆಯನ್ನು ಶಿರಸಾವಹಿಸಿದ್ದೇನೆ. ಆದರೆ ನಾನೂ ಈ ಬ್ರಹ್ಮಹತ್ಯಾದೋಷದಿಂದ ವಿಮುಕ್ತನಾಗಬೇಕಾಗಿದೆ. ಇದಕ್ಕೆ ಅಂತಿಮವಾದ ಅವಧಿಯು ಯಾವುದು? ನಾನು ಎಲ್ಲಿಯವರೆಗೂ ಬ್ರಹ್ಮಹತ್ಯೆಯ ಚತುರ್ಥಾಂಶವನ್ನು ಧರಿಸಿರಬೇಕು? ಇದನ್ನು ಪರಿಹರಿಸಿಕೊಳ್ಳುವುದು ಹೇಗೆ? ಇದರ ವಿಷಯವಾಗಿ ಯೋಚಿಸು. ಇದರ ವಿಷಯವಾಗಿ ತಿಳಿಯಲು ನಾನು ಇಚ್ಛೆಪಡುತ್ತೇನೆ."

ಯಸ್ತ್ವಾಂ ಜ್ವಲನ್ತಮಾಸಾದ್ಯ ಸ್ವಯಂ ವೈ ಮಾನವಃ ಕ್ವಚಿತ್ ।
ಬೀಜೌಷಧಿರಸೈರ್ವಹ್ನೇ ನ ಯಕ್ಷ್ಯತಿ ತಮೋವೃತಃ ॥೩೩॥

ತಮೇಷಾ ಯಾಸ್ಯತಿ ಕ್ಷಿಪ್ರಂ ತತ್ರೈವ ಚ ನಿವತ್ಸ್ಯತಿ ।
ಬ್ರಹ್ಮವಧ್ಯಾ ಹವ್ಯವಾಹ ವ್ಯೇತು ತೇ ಮಾನಸೋ ಜ್ವರಃ ॥೩೪॥

“ಅಗ್ನಿದೇವ! ಯಾವ (ಯಜ್ಞಮಾಡಲು ಅಧಿಕಾರವಿರುವ ಮತ್ತು ಸಾಮರ್ಥ್ಯವಿರುವ) ಮಾನವನು ಪ್ರಜ್ವಲಿಸುತ್ತಿರುವ ನಿನ್ನ ಬಳಿಗೆ ಬಂದಾಗ ತಮಸ್ಸಿನಿಂದ ಅಭಿಭೂತನಾಗಿ ಬೀಜ, ಓಷಧಿ ಮತ್ತು ರಸಗಳಿಂದ ಹೋಮವನ್ನು ಮಾಡುವುದಿಲ್ಲವೋ–ನಿನ್ನಲ್ಲಿರುವ ಈ ಬ್ರಹ್ಮಹತ್ಯೆಯು ಅವನ ಬಳಿಗೆ ಒಡನೆಯೇ ಹೋಗಿಬಿಡುತ್ತದೆ ಮತ್ತು ಅವನಲ್ಲಿಯೇ ನೆಲೆಸುತ್ತದೆ. ನನ್ನ ಈ ಆಶ್ವಾಸನೆಯಿಂದ ನಿನ್ನ ಮನಸ್ಸಿನ ಆತಂಕವು ದೂರವಾಗಲಿ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಬ್ರಹ್ಮನು ಹೀಗೆ ಹೇಳಿದನಂತರ ಹವ್ಯ-ಕವ್ಯಗಳ ಭೋಕ್ತೃವಾದ ಭಗವಾನ್ ಹವ್ಯವಾಹನನು ಪಿತಾಮಹನ ಮಾತನ್ನು ಅಂಗೀಕರಿಸಿದನು. ಒಡನೆಯೇ ಬ್ರಹ್ಮಹತ್ಯೆಯ ನಾಲ್ಕನೆಯ ಒಂದು ಭಾಗವು ಅಗ್ನಿಯಲ್ಲಿ ಸೇರಿಕೊಂಡಿತು. ಬ್ರಹ್ಮಹತ್ಯೆಯ ಒಂದು ಭಾಗವನ್ನು ಅಗ್ನಿಗೆ ಒಪ್ಪಿಸಿದನಂತರ ಪಿತಾಮಹನು ವೃಕ್ಷ, ತೃಣ ಮತ್ತು ಓಷಧಿಗಳ ಅಧಿದೇವತೆಗಳನ್ನು ಆಹ್ವಾನಿಸಿ ಅದೇ ಅಭಿಪ್ರಾಯವನ್ನೇ ಆ ದೇವತೆಗಳೊಡನೆಯೂ ಹೇಳಿದನು :

“ಮಹಾಭಯಂಕರವಾದ ಬ್ರಹ್ಮಹತ್ಯೆಯು ಇಂದ್ರನಿಂದ ಹೊರ ಬಂದಿದೆ. ಇದರಲ್ಲಿ ನಾಲ್ಕನೆಯ ಒಂದು ಭಾಗವನ್ನು ನೀವೂ ಪ್ರತಿಗ್ರಹಿಸಿರಿ.”

ಬ್ರಹ್ಮನು ಈ ರೀತಿಯಲ್ಲಿ ಎಲ್ಲ ವಿಷಯಗಳನ್ನೂ ಸ್ಪಷ್ಟವಾಗಿ ವೃಕ್ಷೌಷಧಿ-ತೃಣಾಧಿದೇವತೆಗಳ ಮುಂದಿಟ್ಟಾಗ ಅಗ್ನಿಯಂತೆಯೇ ಆ ದೇವತೆಗಳೂ ವ್ಯಥಿತರಾಗಿ ಬ್ರಹ್ಮನೊಡನೆ ಹೇಳಿದರು :

“ಲೋಕಪಿತಾಮಹನೇ! ಈ ಬ್ರಹ್ಮಹತ್ಯೆಯ ದೋಷದಿಂದ ನಾವು

ಯಾವಾಗ ಮುಕ್ತರಾಗುತ್ತೇವೆ? ಈ ಮೊದಲೇ ನಾವು ದೈವಾಭಿಭೂತರಾಗಿ ಸ್ಥಾವರಯೋನಿಗಳಲ್ಲಿ ಜನ್ಮತಾಳಿದ್ದೇವೆ. ಇಂತಹ ಸ್ಥಿತಿಯಲ್ಲಿರುವಾಗಲೂ ನೀನು ನಮ್ಮನ್ನು ಹಿಂಸಿಸುವುದು ಸರಿಯಿಲ್ಲ.

ವಯಮಗ್ನಿಂ ತಥಾ ಶೀತಂ ವರ್ಷಂ ಚ ಪವನೇರಿತಮ್ ।
ಸಹಾಮಃ ಸತತಂ ದೇವ ತಥಾ ಛೇದನಭೇದನೇ ॥೩೯॥

ಬ್ರಹ್ಮವಧ್ಯಾಮಿಮಾಮದ್ಯ ಭವತಃ ಶಾಸನಾದ್ವಯಮ್ ।
ಗ್ರಹೀಷ್ಯಾಮಸ್ತ್ರಿಲೋಕೇಶ ಮೋಕ್ಷಂ ಚಿನ್ತಯತಾಂ ಭವಾನ್ ॥೪೦॥

ತ್ರಿಲೋಕೇಶನೇ! ದೇವದೇವ! ಅಗ್ನಿ, ವಾಯು, ಶೀತ, ಮಳೆ, ಛೇದನ, ಭೇದನ–ಮುಂತಾದ ನಾನಾವಿಧವಾದ ಉಪಟಳಗಳನ್ನು ಸಹಿಸಿಕೊಂಡೇ ಬರುತ್ತಿದ್ದೇವೆ. ನಿನ್ನ ಆಜ್ಞೆಯಂತೆ ನಾವು ಬ್ರಹ್ಮವಧ್ಯೆಯ ನಾಲ್ಕನೆಯ ಒಂದು ಅಂಶವನ್ನೂ ಪರಿಗ್ರಹಿಸುತ್ತೇವೆ. ಆದರೆ ಇದರಿಂದ ಮೋಕ್ಷವು ಯಾವಾಗ?–ಎಂಬುದನ್ನು ದಯಮಾಡಿ ಯೋಚಿಸಿ ಹೇಳು."

ಪರ್ವಕಾಲೇ ತು ಸಮ್ಪ್ರಾಪ್ತೇ ಯೋ ವೈ ಛೇದನಭೇದನಮ್ ।
ಕರಿಷ್ಯತಿ ನರೋ ಮೋಹಾತ್ತಮೇಷಾನುಗಮಿಷ್ಯತಿ ॥೪೧॥

"ಸಂಕ್ರಾಂತಿ, ಗ್ರಹಣ, ಹುಣ್ಣಿಮೆ, ಅಮಾವಾಸ್ಯೆ–ಮೊದಲಾದ ಪರ್ವಕಾಲಗಳಲ್ಲಿ ಯಾವ ಮನುಷ್ಯನು ಮೋಹವಶನಾಗಿ ನಿಮ್ಮನ್ನು ಕತ್ತರಿಸಿ ಮುರಿದುಹಾಕುವನೋ ಅವನ ಹಿಂದೆಯೇ–ನಿಮ್ಮಲ್ಲಿರುವ ಈ ಬ್ರಹ್ಮ ವಧ್ಯೆಯು ಹೊರಟುಹೋಗುವಳು."

ಭೀಷ್ಮನು ಹೇಳುತ್ತಾನೆ :

"ವತ್ಸ! ಮಹಾತ್ಮನಾದ ಬ್ರಹ್ಮನು ಹೀಗೆ ಹೇಳಿದನಂತರ ವೃಕ್ಷೌಷಧಿ-ತೃಣಾಧಿದೇವತೆಗಳು ಹಾಗೆಯೇ ಆಗಲೆಂದು ಹೇಳಿ ಬ್ರಹ್ಮನನ್ನು ಸಂಪೂಜಿಸಿ ಎಲ್ಲಿಂದ ಬಂದಿದ್ದರೋ ಅಲ್ಲಿಗೇ ಹೊರಟುಹೋದರು.

ಅನಂತರ ಲೋಕಪಿತಾಮಹನಾದ ದೇವದೇವನಾದ ಬ್ರಹ್ಮನು ಅಪ್ಸರೆಯರನ್ನು ಆಹ್ವಾನಿಸಿ ಅವರನ್ನು ಮಧುರವಾದ ಮಾತುಗಳಿಂದ ಸಂತೈಸುತ್ತಾ ಹೇಳಿದನು :

“ವರಾಂಗನೆಯರೇ! ಈ ಬ್ರಹ್ಮವಧ್ಯೆಯು ಇಂದ್ರನಿಂದ ಹೊರಬಂದಿದೆ. ನನ್ನ ಆಜ್ಞೆಯಂತೆ ನೀವು ಇದರಲ್ಲಿ ನಾಲ್ಕನೆಯ ಒಂದಂಶವನ್ನು ಪ್ರತಿಗ್ರಹಿಸಿರಿ.”

“ದೇವೇಶ! ನಿನ್ನ ಆಜ್ಞಾನುಸಾರವಾಗಿ ನಾವು ಬ್ರಹ್ಮವಧ್ಯೆಯಲ್ಲಿ ನಾಲ್ಕನೆಯ ಒಂದು ಅಂಶವನ್ನು ಪರಿಗ್ರಹಿಸಲು ನಿಶ್ಚಯಿಸಿಬಿಟ್ಟಿದ್ದೇವೆ. ಆದರೆ ನಮಗೆ ಇದರಿಂದ ಮುಕ್ತಿಯು ಯಾವಾಗ? ಮತ್ತು ಹೇಗೆ?–ಎಂಬುದನ್ನು ಯೋಚಿಸಿ ಹೇಳುವ ಕೃಪೆಮಾಡು.”

ಚತುರ್ಮುಖನು ಹೇಳುತ್ತಾನೆ :

ರಜಸ್ವಲಾಸು ನಾರೀಷು ಯೋ ವೈ ಮೈಥುನಮಾಚರೇತ್ ।
ತಮೇಷಾ ಯಾಸ್ಯತಿ ಕ್ಷಿಪ್ರಂ ವ್ಯೇತು ವೋ ಮಾನಸೋ ಜ್ವರಃ ॥

“ಯಾವ ಮನುಷ್ಯನು ಸ್ತ್ರೀಯರು ರಜಸ್ವಲೆಯರಾಗಿರುವಾಗ ಅವ ರೊಡನೆ ಸಮಾಗಮವನ್ನು ಮಾಡುವನೋ–ಅಂತಹ ಮನುಷ್ಯನ ಹಿಂದೆ ಈ ಬ್ರಹ್ಮವಧ್ಯಾಂಶವು ಹೊರಟುಹೋಗುತ್ತದೆ ಮತ್ತು ಅವನಲ್ಲಿಯೇ ನೆಲೆಸುತ್ತದೆ. ಆದುದರಿಂದ ನಿಮ್ಮ ಮಾನಸಿಕವಾದ ಆತಂಕವು ದೂರವಾಗಲಿ.”

ಯುಧಿಷ್ಠಿರ! ಬ್ರಹ್ಮನ ಮಾತನ್ನು ಕೇಳಿ ಸಂತೋಷಗೊಂಡ ಅಪ್ಸರ ಸ್ತ್ರೀಯರು ಬ್ರಹ್ಮನೊಡನೆ–‘ಹಾಗೆಯೇ ಆಗಲಿ’–ಎಂದು ಹೇಳಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ವಿಹರಿಸತೊಡಗಿದರು.

ಬಳಿಕ ತ್ರಿಭುವನಗಳ ಸೃಷ್ಟಿಕರ್ತೃವಾದ, ಮಹಾತಪಸ್ವಿಯಾದ, ದೇವ ದೇವನಾದ ಪ್ರಜಾಪತಿಯು ನೀರಿನ ಅಧಿದೇವತೆಗಳನ್ನು ಕುರಿತು ಚಿಂತಿಸಿದನು. ಒಡನೆಯೇ ಆ ದೇವತೆಗಳು ಬ್ರಹ್ಮನ ಬಳಿಗೆ ಆಗಮಿಸಿದರು. ಆ ಅಬ್ದೇವತೆಗಳು ಮಹಾತೇಜಸ್ವಿಯಾದ ಬ್ರಹ್ಮನ ಬಳಿಗೆ ಬಂದು ಸಾಷ್ಟಾಂಗನಮಸ್ಕಾರವನ್ನು ಮಾಡಿ ಈ ಮಾತುಗಳನ್ನು ಹೇಳಿದರು :

“ಅರಿಂದಮನೇ! ಲೋಕೇಶನೇ! ನಿನ್ನ ಆಜ್ಞೆಯಂತೆ ಅಬ್ದೇವತೆಗಳಾದ ನಾವೆಲ್ಲರೂ ನಿನ್ನ ಬಳಿಗೆ ಆಗಮಿಸಿದ್ದೇವೆ. ನಿನ್ನ ಪ್ರೀತ್ಯರ್ಥವಾಗಿ ನಾವೇನು ಮಾಡಬೇಕೆಂಬುದನ್ನು ಆಜ್ಞಾಪಿಸು.”

“ಅಬ್ದೇವತೆಗಳೇ! ವೃತ್ರನನ್ನು ಸಂಹರಿಸಿದ ಕಾರಣ ಮಹಾ

ಭಯಂಕರವಾದ ಬ್ರಹ್ಮವಧ್ಯೆಯು ಇಂದ್ರನನ್ನು ಸೇರಿಕೊಂಡಿತು. ನನ್ನ ಆಜ್ಞೆಯಂತೆ ಅದೀಗ ಇಂದ್ರನಿಂದ ಹೊರಬಂದಿದೆ. ಈ ಬ್ರಹ್ಮವಧ್ಯೆಯಲ್ಲಿ ನಾಲ್ಕನೆಯ ಒಂದಂಶವನ್ನು ನೀವು ಪ್ರತಿಗ್ರಹಿಸಿರಿ."

"ದೇವೇಶ! ಪ್ರಭುವೇ! ನೀನು ಹೇಳಿದಂತೆಯೇ ಆಗಲಿ. ಆದರೆ ನಾವು ಯಾವಾಗ ಇದರಿಂದ ಮುಕ್ತರಾಗುತ್ತೇವೆ? ಮತ್ತು ಹೇಗೆ ಮುಕ್ತರಾಗುತ್ತೇವೆ?–ಎಂಬುದನ್ನು ಯೋಚಿಸಿ ಹೇಳುವ ಕೃಪೆಮಾಡು. ಲೋಕೇಶ! ನೀನು ಈ ಸಂಪೂರ್ಣಜಗತ್ತಿಗೂ ಪರಮಾಶ್ರಯನಾಗಿರುವೆ. ನಮ್ಮನ್ನು ಈ ಕಷ್ಟದಿಂದ ಉದ್ಧರಿಸುವ ಅನುಗ್ರಹಕ್ಕಿಂತಲೂ ಬೇರೆ ಯಾವ ಅನುಗ್ರಹವು ಬೇಕಾಗಿದೆ?"

ಅಲ್ಪಾ ಇತಿ ಮತಿಂ ಕೃತ್ವಾ ಯೋ ನರೋ ಬುದ್ಧಿಮೋಹಿತಃ ।
ಶ್ಲೇಷ್ಮಮೂತ್ರಪುರೀಷಾಣಿ ಯುಷ್ಮಾಸು ಪ್ರತಿಮೋಕ್ಷ್ಯತಿ ॥೫೪॥

ತಮಿಯಂ ಯಾಸ್ಯತಿ ಕ್ಷಿಪ್ರಂ ತತ್ರೈವ ಚ ನಿವತ್ಸ್ಯತಿ ।
ತಥಾ ವೋ ಭವಿತಾ ಮೋಕ್ಷ ಇತಿ ಸತ್ಯಂ ಬ್ರವೀಮಿ ವಃ ॥೫೫॥

"ಯಾವ ಮನುಷ್ಯನು ವಿಮೋಹಗೊಂಡ ಬುದ್ಧಿಯಿಂದ ನಿಮ್ಮನ್ನು ಅಲ್ಪರೆಂದೂ–ಏನು ಮಾಡಲೂ ಆಗದವರೆಂದೂ ಭಾವಿಸಿ ನಿಮ್ಮಲ್ಲಿ ಕಫ-ಮೂತ್ರ-ಪುರೀಷಗಳನ್ನು ವಿಸರ್ಜಿಸುವನೋ–ಅಂತಹವರನ್ನು ಅನುಸರಿಸಿ ಈ ಬ್ರಹ್ಮವಧ್ಯೆಯು ಹೊರಟುಹೋಗುತ್ತದೆ ಮತ್ತು ಅವನಲ್ಲಿಯೇ ಇದ್ದುಬಿಡುತ್ತದೆ. ಹೀಗೆ ನಿಮಗೆ ಬ್ರಹ್ಮವಧ್ಯೆಯಿಂದ ಮೋಕ್ಷವು ಸಿಕ್ಕುತ್ತದೆ. ನಾನು ಈ ಮಾತನ್ನು ಸತ್ಯವಾಗಿ ಹೇಳುತ್ತಿದ್ದೇನೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಬಳಿಕ ಬ್ರಹ್ಮವಧ್ಯೆಯು ದೇವರಾಜನಾದ ಇಂದ್ರನನ್ನು ಬಿಟ್ಟು ಬ್ರಹ್ಮದೇವನ ಆಜ್ಞೆಯಂತೆ ಅಗ್ನಿಯಲ್ಲಿಯೂ, ವೃಕ್ಷೌಷಧಿ-ತೃಣಗಳಲ್ಲಿಯೂ, ಅಪ್ಸರೆಯರಲ್ಲಿಯೂ, ನೀರುಗಳಲ್ಲಿಯೂ ನಾಲ್ಕು ಭಾಗಗಳಾಗಿ ಸೇರಿಕೊಂಡಿತು. ಜನಾಧಿಪನೇ! ಹೀಗೆ ವೃತ್ರನ ವಧೆಯಿಂದಾಗಿ ಇಂದ್ರನಿಗೆ ಬ್ರಹ್ಮಹತ್ಯಾಪಾಪವು ಪ್ರಾಪ್ತವಾಯಿತು. ಇಂದ್ರನು ಬ್ರಹ್ಮನಿಂದ ಅನುಜ್ಞೆಪಡೆದು ಅಶ್ವಮೇಧಯಾಗವನ್ನು ಮಾಡಿದನು. ಮಹಾಪ್ರಾಜ್ಞನೇ!

ವಾಸವನಿಗೆ ವೃತ್ರನನ್ನು ಸಂಹಾರಮಾಡಿದುದರಿಂದ ಬ್ರಹ್ಮಹತ್ಯೆಯು ಪ್ರಾಪ್ತವಾಯಿತೆಂದೂ ಅಶ್ವಮೇಧಯಾಗವನ್ನು ಮಾಡಿ ಅವನು ಶುದ್ಧಿಯನ್ನು ಹೊಂದಿದನೆಂದೂ ನಾವು ಕೇಳಿದ್ದೇವೆ. ದೇವರಾಜನಾದ ಇಂದ್ರನು ಸಹಸ್ರ ಸಂಖ್ಯೆಯಲ್ಲಿ ಶತ್ರುಗಳನ್ನು ಸಂಹರಿಸಿ, ತಪ್ಪಿಹೋಗಿದ್ದ ರಾಜ್ಯಲಕ್ಷ್ಮಿಯನ್ನು ಪಡೆದು ಅತುಲವಾದ ಆನಂದವನ್ನು ಹೊಂದಿದನು. ವೃತ್ರನ ರಕ್ತದಿಂದ ತಲೆಯಲ್ಲಿ ಕುಚ್ಚುಗಳಿರುವ ನವಿಲುಗಳೇ ಮೊದಲಾದ ಅನೇಕ ಜಾತಿಯ ಪಕ್ಷಿಗಳು ಹುಟ್ಟಿದುವು. ದ್ವಿಜರಿಂದಲೂ, ಯಜ್ಞದೀಕ್ಷಿತರಿಂದಲೂ ಮತ್ತು ತಪಸ್ವಿಗಳಿಂದಲೂ ಅವುಗಳು ಅಭಕ್ಷ್ಯಗಳೆಂದು ಪರಿಗಣಿಸಲ್ಪಟ್ಟಿವೆ.

ಸರ್ವಾವಸ್ಥಂ ತ್ವಮಪ್ಯೇಷಾಂ ದ್ವಿಜಾತೀನಾಂ ಪ್ರಿಯಂ ಕುರು ।
ಇಮೇ ಹಿ ಭೂತಲೇ ದೇವಾಃ ಪ್ರಥಿತಾಃ ಕುರುನನ್ದನ ॥೬೧॥

ಕುರುನಂದನ! ನೀನೂ ಕೂಡ ಈ ಬ್ರಾಹ್ಮಣರಿಗೆ ಸರ್ವಾವಸ್ಥೆಗಳಲ್ಲಿಯೂ ಪ್ರಿಯವನ್ನು ಮಾಡು. ಭೂಲೋಕದಲ್ಲಿ ಬ್ರಾಹ್ಮಣರೇ ದೇವತೆಗಳೆಂದು ವಿಖ್ಯಾತರಾಗಿರುತ್ತಾರೆ.

ಹೀಗೆ ಅಮಿತತೇಜಸ್ವಿಯಾದ ಶಕ್ರನು ಸೂಕ್ಷ್ಮಬುದ್ಧಿಯನ್ನು ಆಶ್ರಯಿಸಿ ಉಪಾಯದಿಂದ ಮಹಾಸುರನಾದ ವೃತ್ರನನ್ನು ಸಂಹರಿಸಿದನು. ಯಾವ ರೀತಿಯಲ್ಲಿ ಶತ್ರುಸೂದನನಾದ ದೇವದೇವನಾದ ಶತಕ್ರತುವು ವಿಜಯವನ್ನು ಗಳಿಸಿ ಅಪರಾಜಿತನಾದನೋ–ಅದೇ ರೀತಿಯಲ್ಲಿ ನೀನೂ ಕೂಡ ಈ ಭೂಮಂಡಲದಲ್ಲಿ ಅಪರಾಜಿತನಾಗುವೆ.

ಯೇ ತು ಶಕ್ರಕಥಾಂ ದಿವ್ಯಾಮಿಮಾಂ ಪರ್ವಸು ಪರ್ವಸು ।
ವಿಪ್ರಮಧ್ಯೇ ವದಿಷ್ಯನ್ತಿ ನ ತೇ ಪ್ರಾಪ್ಸ್ಯನ್ತಿ ಕಿಲ್ಬಿಷಮ್ ॥೬೪॥

ಪರ್ವ-ಪರ್ವಗಳಲ್ಲಿಯೂ ಯಾರು ಶಕ್ರನ ದಿವ್ಯವಾದ ಈ ಕಥೆಯನ್ನು ಬ್ರಾಹ್ಮಣರ ಮಧ್ಯದಲ್ಲಿ ಹೇಳುವರೋ–ಅಂತಹವರು ಯಾವಾಗಲೂ ಪಾಪವನ್ನು ಹೊಂದುವುದಿಲ್ಲ (ಅಂತಹವರಿಗೆ ಪಾಪವು ಸಂಘಟಿಸುವುದಿಲ್ಲ).

ಧರ್ಮಜ! ಹೀಗೆ ನಾನು ನಿನಗೆ ವೃತ್ರಾಸುರನ ಕಥಾಪ್ರಸಂಗದಲ್ಲಿ

ಇಂದ್ರನ ಅತ್ಯದ್ಭುತವಾದ ಕಾರ್ಯದ ಚರಿತ್ರೆಯನ್ನು ಹೇಳಿದ್ದೇನೆ. ಪುನಃ ನೀನು ನನ್ನಿಂದ ಇನ್ನಾವ ವಿಷಯವನ್ನು ಕೇಳಬೇಕೆಂದಿರುವೆ?"

೨೮೨ನೆಯ ಅಧ್ಯಾಯವು ಮುಗಿಯಿತು.

೨೮೩ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಈಶ್ವರನಿಂದ ದಕ್ಷಯಜ್ಞದ ಧ್ವಂಸ: ಶಿವನ ಕ್ರೋಧದಿಂದ ಜ್ವರದ ಉತ್ಪತ್ತಿ: ಜ್ವರದ ವಿವಿಧರೂಪಗಳು

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

"ಮಹಾಪ್ರಾಜ್ಞನಾದ ಸರ್ವಶಾಸ್ತ್ರವಿಶಾರದನಾದ ಪಿತಾಮಹನೇ! ವೃತ್ರಾಸುರನ ವಧೆಯ ಪ್ರಸಂಗದಲ್ಲಿ ಇನ್ನೂ ಕೆಲವು ವಿಷಯಗಳನ್ನು ತಿಳಿದುಕೊಳ್ಳಬೇಕೆನ್ನುವ ಇಚ್ಛೆಯು ನನಗುಂಟಾಗಿದೆ. ವೃತ್ರಾಸುರನು ಜ್ವರದಿಂದ ವಿಮೋಹಗೊಂಡಿದ್ದನೆಂದು ನೀನು ಹೇಳಿದೆ. ವಾಸವನು ವಜ್ರಾಯುಧದಿಂದ ಅವನನ್ನು ಸಂಹರಿಸಿದನೆಂದೂ ಹೇಳಿದೆ. ಮಹಾ ಪ್ರಾಜ್ಞನೇ! ವೃತ್ರನನ್ನು ವಿಮೋಹಗೊಳಿಸಿದ ಆ ಜ್ವರವು ಹೇಗೆ ಹುಟ್ಟಿತು? ಎಲ್ಲಿಂದ ಹುಟ್ಟಿತು? ಜ್ವರೋತ್ಪತ್ತಿಯ ವಿಷಯವನ್ನು ವಿಸ್ತಾರವಾಗಿಯೇ ನಿನ್ನಿಂದ ಕೇಳಿ ತಿಳಿಯಬೇಕೆಂದಿರುತ್ತೇನೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಲೋಕಪ್ರಸಿದ್ಧವಾದ ಜ್ವರೋತ್ಪತ್ತಿಯ ವೃತ್ತಾಂತವನ್ನು ಕೇಳು. ಈ ಪ್ರಸಂಗವು ಹೇಗೆ ನಡೆಯಿತೋ ಅದನ್ನು ಹಾಗೆಯೇ ವಿಸ್ತಾರ ವಾಗಿಯೇ ಹೇಳುತ್ತೇನೆ. ಪೂರ್ವಕಾಲದಲ್ಲಿ ಮೂರು ಲೋಕಗಳಿಂದಲೂ ಪೂಜಿಸಲ್ಪಡುತ್ತಿದ್ದ, ಸೂರ್ಯನಿಗೆ ಸಂಬಂಧಿಸಿದ, ಸರ್ವರತ್ನಗಳಿಂದಲೂ ಸಮಲಂಕೃತವಾಗಿದ್ದ ಅಪ್ರಮೇಯವಾದ, ಸರ್ವಲೋಕಗಳ ಜನರಿಗೂ ಅಗಮ್ಯವಾದ ಜ್ಯೋತಿಷ್ಕವೆಂಬ ಹೆಸರಿನ ಮೇರುಪರ್ವತದ ಶಿಖರವಿದ್ದಿತು. ಸುವರ್ಣಮಯವಾದ ಧಾತುಗಳಿಂದ ವಿಭೂಷಿತವಾಗಿದ್ದ ಆ ಪರ್ವತ ಶಿಖರದಲ್ಲಿ ಕುಳಿತಿದ್ದ ದೇವದೇವನಾದ ಪರಶಿವನು ಪರ್ಯಂಕದಲ್ಲಿ

ಕುಳಿತಿರುವಂತೆಯೇ ವಿರಾಜಿಸುತ್ತಿದ್ದನು. ಶೈಲರಾಜನ ಮಗಳಾದ ಪಾರ್ವತಿಯೂ ಪರಶಿವನ ಪಕ್ಕದಲ್ಲಿ ಕುಳಿತು ವಿರಾಜಿಸುತ್ತಿದ್ದಳು. ಅದೇ ರೀತಿಯಲ್ಲಿ ಮಹಾತ್ಮರಾದ ಅನೇಕದೇವತೆಗಳೂ, ಮಹಾತೇಜಸ್ವಿಗಳಾದ ವಸುಗಳೂ, ವೈದ್ಯಶ್ರೇಷ್ಠರಾದ ಮಹಾತ್ಮರಾದ ಅಶ್ವಿನೀದೇವತೆಗಳೂ, ಸುಹೃದರಿಂದ ಸಮಾವೃತನಾದ ಯಕ್ಷೇಶ್ವರನಾದ, ಕೈಲಾಸವಾಸಿಯಾದ, ಪ್ರಭುವಾದ, ಶ್ರೀಮಂತನಾದ ಕುಬೇರರಾಜನೂ, ಮಹಾಮುನಿಯಾದ ಶುಕ್ರನೂ ಮಹಾತ್ಮನಾದ ಮಹಾದೇವನನ್ನು ಅನುದಿನವೂ ಅಲ್ಲಿ ಉಪಾಸನೆ ಮಾಡುತ್ತಿದ್ದರು. ಸನತ್ಕುಮಾರನೇ ಮೊದಲಾದ ಮಹರ್ಷಿಗಳು, ಅಂಗಿರನೇ ಮೊದಲಾದ ಇತರ ದೇವರ್ಷಿಗಳು, ಗಂಧರ್ವರಾಜನಾದ ವಿಶ್ವಾವಸು, ನಾರದ-ಪರ್ವತರು, ಅಪ್ಸರೆಯರ ಅನೇಕಸಮುದಾಯಗಳು–ಇವರೆಲ್ಲರೂ ಆ ಪರ್ವತದ ತಪ್ಪಲಿಗೆ ಮಹಾದೇವನ ಪೂಜೆಗಾಗಿ ಅನೇಕಬಾರಿ ಬಂದು ಹೋಗುತ್ತಿದ್ದರು. ನಾನಾವಿಧವಾದ ಸುಗಂಧಗಳನ್ನು ಹೊತ್ತ, ಪವಿತ್ರವಾದ, ಸುಖದಾಯಕವಾದ, ಮಂಗಳಮಯವಾದ ವಾಯುವು ಅಲ್ಲಿ ಮಂದವಾಗಿ ಬೀಸುತ್ತಿದ್ದಿತು. ಸರ್ವರ್ತುಗಳ ಕುಸುಮಗಳಿಂದಲೂ ಕೂಡಿರುತ್ತಿದ್ದ ಹೂಗಳಿಂದ ಸುಶೋಭಿತವಾಗಿದ್ದ ಅನೇಕವೃಕ್ಷಗಳು ಆ ಶಿಖರದ ಮೇಲಿದ್ದುವು. ವಿದ್ಯಾಧರರೂ, ತಪೋಧನರಾದ ಸಿದ್ಧರೂ ಪಶುಪತಿಯಾದ ಮಹಾದೇವನನ್ನು ಉಪಾಸಿಸುತ್ತಿದ್ದರು. ಮಹಾದೇವನ ಅನುಚರರಾದ ಅಗ್ನಿಗೆ ಸಮಾನವಾದ ತೇಜಸ್ಸನ್ನು ಹೊಂದಿದ್ದ, ನಾನಾರೂಪಗಳನ್ನು ಧರಿಸಿದ್ದ ಭೂತಗಳೂ, ಮಹಾಭಯಂಕರವಾದ ರಾಕ್ಷಸರೂ–ಮಹಾಬಲಿಷ್ಠ ರಾದ, ಅನೇಕವಿಧವಾದ ರೂಪಗಳನ್ನು ಧರಿಸಿದ್ದ ಪಿಶಾಚರೂ ನಾನಾವಿಧ ವಾದ ಆಯುಧಗಳನ್ನೆತ್ತಿಕೊಂಡು ಪರಮಹೃಷ್ಟರಾಗಿ ಮಹಾದೇವನ ಸಮೀಪ ದಲ್ಲಿ ನಿಂತಿದ್ದರು. ಭಗವಾನ್ ನಂದಿಯು ಮಹಾದೇವನ ಅನುಮತಿಯನ್ನು ಪಡೆದು ಪ್ರಜ್ವಲಿಸುವ ಶೂಲವನ್ನು ಹಿಡಿದು ತನ್ನ ತೇಜಸ್ಸಿನಿಂದ ದೇದೀಪ್ಯಮಾನವಾಗಿ ಬೆಳಗುತ್ತಾ ಅಲ್ಲಿ ನಿಂತಿದ್ದನು. ಸರಿತ್ತುಗಳಿಗೆ ಶ್ರೇಷ್ಠಳಾದ, ಎಲ್ಲ ತೀರ್ಥಗಳ ಶುಭಜಲದಲ್ಲಿಯೂ ಪ್ರಾದುರ್ಭವಿಸುವ ಗಂಗಾದೇವಿಯು ದಿವ್ಯರೂಪವನ್ನು ಧರಿಸಿ ಮಹಾದೇವನನ್ನು ಉಪಾಸಿಸುತ್ತಿದ್ದಳು. ಹೀಗೆ ದೇವರ್ಷಿಗಳಿಂದೂ ದೇವತೆಗಳಿಂದಲೂ ಪೂಜಿಸಲ್ಪಡುತ್ತಿದ್ದ ಮಹಾತೇಜಸ್ವಿಯಾದ ಭಗವಾನ್ ಮಹಾದೇವನು

ಜ್ಯೋತಿಷ್ಕವೆಂಬ ಮೇರುಪರ್ವತದ ಶಿಖರದ ತಪ್ಪಲಿನಲ್ಲಿ ಅನುದಿನವೂ ವಿರಾಜಿಸುತ್ತಿದ್ದನು.

ಸ್ವಲ್ಪಕಾಲಾನಂತರದಲ್ಲಿ ದಕ್ಷ ಎಂಬ ಪ್ರಸಿದ್ಧನಾದ ಪ್ರಜಾಪತಿಯು ಪೂರ್ವೋಕ್ತವಾದ ಶಾಸ್ತ್ರೀಯವಿಧಾನವನ್ನು ಅನುಸರಿಸಿ ಯಜ್ಞಮಾಡಲು ಸಂಕಲ್ಪಿಸಿ ಅದಕ್ಕಾಗಿ ಸಿದ್ಧತೆಗಳನ್ನು ಮಾಡತೊಡಗಿದನು. ಆ ಸಮಯದಲ್ಲಿ ಇಂದ್ರನೇ ಮೊದಲಾದ ದೇವತೆಗಳು ಪರಸ್ಪರವಾಗಿ ಸೇರಿ ಸಮಾಲೋಚಿಸಿ ದಕ್ಷಪ್ರಜಾಪತಿಯ ಯಜ್ಞಕ್ಕೆ ಹೋಗಲು ನಿಶ್ಚಯಿಸಿದರು.

ಇಂದ್ರನೇ ಮೊದಲಾದ ಮಹಾತ್ಮರೆಲ್ಲರೂ ಮಹಾದೇವನ ಅನುಮತಿಯನ್ನು ಪಡೆದುಕೊಂಡು ಅಗ್ನಿ ಮತ್ತು ಸೂರ್ಯರ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿದ್ದ ವಿಮಾನಗಳ ಮೂಲಕವಾಗಿ ಗಂಗಾದ್ವಾರಕ್ಕೆ (ಹರಿದ್ವಾರಕ್ಕೆ) ಹೋದರು. ದೇವತೆಗಳೆಲ್ಲರೂ ದಕ್ಷಯಜ್ಞಕ್ಕೆ ಹೊರಟುದನ್ನು ನೋಡಿ ಸಾಧ್ವಿಯಾದ ಶೈಲರಾಜನ ಮಗಳಾದ ಪಾರ್ವತೀದೇವಿಯು ಪತಿಯಾದ ದೇವದೇವನಾದ ಪಶುಪತಿಯನ್ನು ಕುರಿತು ಈ ಮಾತನ್ನು ಹೇಳಿದಳು :

"ಭಗವನ್! ಪಶುಪತಿಯೇ! ಇಂದ್ರಾದಿದೇವತೆಗಳೆಲ್ಲರೂ ಎಲ್ಲಿಗೆ ಹೋಗುತ್ತಿದ್ದಾರೆ? ತತ್ತ್ವಜ್ಞನೇ! ಈ ವಿಷಯವನ್ನು ನನಗೆ ಯಥಾವತ್ತಾಗಿ ಹೇಳು. ಈಗ ನನ್ನ ಮನಸ್ಸಿನಲ್ಲಿ ದೊಡ್ಡದೊಂದು ಸಂಶಯವುಂಟಾಗಿದೆ."

"ಮಹಾಭಾಗಳೇ! ಪ್ರಜಾಪತಿಶ್ರೇಷ್ಠನಾದ ದಕ್ಷನು ಅಶ್ವಮೇಧ ಯಜ್ಞವನ್ನು ಮಾಡುತ್ತಾನೆ. ಅಲ್ಲಿಗೆ ಈ ದೇವತೆಗಳೆಲ್ಲರೂ ಹೋಗುತ್ತಿದ್ದಾರೆ."

"ಮಹಾದೇವ! ದಕ್ಷಪ್ರಜಾಪತಿಯು ಮಾಡುವ ಆ ಯಜ್ಞಕ್ಕೆ ನೀನೇಕೆ ಹೋಗುವುದಿಲ್ಲ? ಯಾವ ಪ್ರತಿಬಂಧಕದ ಕಾರಣದಿಂದ ನೀನಲ್ಲಿಗೆ ಹೋಗದಂತಾಗಿದೆ?"

ಸುರೈರೇವ ಮಹಾಭಾಗೇ ಪೂರ್ವಮೇತದನುಷ್ಠಿತಮ್ ।
ಯಜ್ಞೇಷು ಸರ್ವೇಷು ಮಮ ನ ಭಾಗ ಉಪಕಲ್ಪಿತಃ ॥೨೬॥

ಪೂರ್ವೋಪಾಯೋಪಪನ್ನೇನ ಮಾರ್ಗೇಣ ವರವರ್ಣಿನಿ ।
ನ ಮೇ ಸುರಾಃ ಪ್ರಯಚ್ಛನ್ತಿ ಭಾಗಂ ಯಜ್ಞಸ್ಯ ಧರ್ಮತಃ ॥೨೭॥

“ಮಹಾಭಾಗ್ಯಶಾಲಿನಿಯೇ! ಯಾವ ಯಜ್ಞದಲ್ಲಿಯೂ ನನಗೆ ನಿಯತವಾದ ಯಜ್ಞಭಾಗವಿರುವುದಿಲ್ಲ. ಈ ಪದ್ಧತಿಯನ್ನು ಹಿಂದೆ ದೇವತೆಗಳೇ ಅನುಷ್ಠಾನಕ್ಕೆ ತಂದರು. ಪೂರ್ವನಿಶ್ಚಿತವಾದ ನಿಯಮಕ್ಕೆ ಅನುಸಾರವಾಗಿ ಮತ್ತು ಧರ್ಮಾನುಸಾರವಾಗಿ ದೇವತೆಗಳು ನನಗೆ ಯಜ್ಞದ ಹವಿರ್ಭಾಗವನ್ನು ಕೊಡುವುದಿಲ್ಲ.”

ಭಗವನ್ಸರ್ವಭೂತೇಷು ಪ್ರಭಾವಾಭ್ಯಧಿಕೋ ಗುಣೈಃ ।
ಅಜಯ್ಯಶ್ಚಾಪ್ಯಧೃಷ್ಯಶ್ಚ ತೇಜಸಾ ಯಶಸಾ ಶ್ರಿಯಾ ॥೨೮॥

ಅನೇನ ತೇ ಮಹಾಭಾಗ ಪ್ರತಿಷೇಧೇನ ಭಾಗತಃ ।
ಅತೀವ ದುಃಖಮುತ್ಪನ್ನಂ ವೇಪಥುಶ್ಚ ಮಮಾನಘ ॥೨೯॥

“ಭಗವನ್! ನೀನು ವಿಶ್ವದಲ್ಲಿರುವ ಸಮಸ್ತಪ್ರಾಣಿಗಳಲ್ಲಿ ಎಲ್ಲ ಪ್ರಾಣಿಗಳಿಗಿಂತಲೂ ಪ್ರಭಾವದಲ್ಲಿ, ಗುಣದಲ್ಲಿ ಅಧಿಕನಾಗಿರುವೆ. ನೀನು ಯಾರಿಂದಲೂ ಜಯಿಸಲ್ಪಡದವನು. ಎದುರಿಸಲು ಅಸಾಧ್ಯನಾದವನು. ತೇಜಸ್ಸಿನಿಂದಲೂ, ಯಶಸ್ಸಿನಿಂದಲೂ, ಸಂಪತ್ತಿನಿಂದಲೂ ಸಂಪನ್ನನಾದವನು. ಮಹಾಭಾಗನೇ! ನಿನ್ನಂತಹವನಿಗೆ ಯಜ್ಞಭಾಗವನ್ನು ನಿಷೇಧಿಸಿರುವುದರಿಂದ ನನಗೆ ಹೆಚ್ಚು ದುಃಖವುಂಟಾಗಿದೆ. ನನ್ನ ಶರೀರವು ಕಂಪಿಸುತ್ತಿದೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಪತಿಯಾದ ಪಶುಪತಿಯೊಡನೆ ಹೀಗೆ ಹೇಳಿ ದಹಿಸಲ್ಪಡುತ್ತಿದ್ದ ಹೃದಯದಿಂದ ಕೂಡಿದವಳಾಗಿ ಪಾರ್ವತೀದೇವಿಯು ಮೌನಧರಿಸಿದಳು. ಪಾರ್ವತೀದೇವಿಯ ಹೃದ್ಗತವಾದ ಅಭಿಪ್ರಾಯವನ್ನೂ ಮತ್ತು ಅವಳು ಮುಂದೆ ಏನು ಮಾಡಬೇಕೆಂದಿರುವಳೆಂಬುದನ್ನೂ ತಿಳಿದು ಮಹಾದೇವನು ಅಲ್ಲಿಯೇ ನಿಂತಿರುವಂತೆ ನಂದಿಗೆ ಆಜ್ಞಾಪಿಸಿದನು. ಬಳಿಕ ಸರ್ವಯೋಗೇಶ್ವರರಿಗೂ ಈಶ್ವರನಾದ, ಮಹಾತೇಜಸ್ವಿಯಾದ, ದೇವದೇವನಾದ, ಪಿನಾಕಪಾಣಿಯಾದ ಮಹಾದೇವನು ಯೋಗಬಲವನ್ನು ಆಶ್ರಯಿಸಿ ಭಯಂಕರರಾದ ತನ್ನ

ಅನುಚರರಿಂದೊಡಗೂಡಿ ಒಡನೆಯೇ ದಕ್ಷನು ಮಾಡುತ್ತಿದ್ದ ಆ ಅಶ್ವಮೇಧಯಾಗವನ್ನು ವಿನಾಶಗೊಳಿಸಿದನು.

ಮಹಾದೇವನ ಅನುಚರರಲ್ಲಿ ಕೆಲವರು ದಕ್ಷನ ಯಜ್ಞವೇದಿಯ ಸಮೀಪದಲ್ಲಿ ನಿಂತು ಗಟ್ಟಿಯಾಗಿ ಸಿಂಹನಾದಗಳನ್ನು ಮಾಡುತ್ತಿದ್ದರು. ಕೆಲವರು ವಿಕಟಾಟ್ಟಹಾಸದಿಂದ ನಗುತ್ತಿದ್ದರು. ಕೆಲವರು ರಕ್ತದಿಂದ ಅಲ್ಲಿ ಪ್ರಜ್ವಲಿಸುತ್ತಿದ್ದ ಅಗ್ನಿಯನ್ನು ಆರಿಸಲು ಪ್ರಯತ್ನಿಸುತ್ತಿದ್ದರು. ವಿಕಾರವಾದ ಮುಖಗಳನ್ನು ಹೊಂದಿದ್ದ ಕೆಲವು ಪಾರ್ಷದರು ಯಜ್ಞದ ಯೂಪಗಳನ್ನು ಕಿತ್ತು ಯಜ್ಞಮಂಟಪದ ಸುತ್ತಲೂ ಸುತ್ತುತ್ತಿದ್ದರು. ಕೆಲವು ಪಿಶಾಚರು ತಮ್ಮ ಬಾಯಿಗಳಿಂದ ಅಲ್ಲಿದ್ದ ಪರಿಚಾರಕರನ್ನು ನುಂಗಿಹಾಕುತ್ತಿದ್ದರು. ಹೀಗೆ ಆ ಯಜ್ಞವು ಎಲ್ಲ ಕಡೆಗಳಿಂದಲೂ ಎಲ್ಲ ಪ್ರಕಾರಗಳಿಂದಲೂ ವಿಧ್ವಸ್ತ ವಾಗುತ್ತಿರಲಾಗಿ, ಭಯಗೊಂಡ ಯಜ್ಞಪುರುಷನು ಮೃಗದ ರೂಪವನ್ನು ಧರಿಸಿ ಆಕಾಶದ ಕಡೆಗೆ ಓಡಿಹೋದನು. ಯಜ್ಞಪುರುಷನು ಮೃಗರೂಪವನ್ನು ಧರಿಸಿ ಓಡುತ್ತಿರುವುದನ್ನು ಕಂಡು ಪ್ರಭುವಾದ ಮಹಾದೇವನು ಬಾಣದಿಂದ ಯುಕ್ತವಾದ ಧನುಸ್ಸನ್ನು ಹಿಡಿದುಕೊಂಡು ಆ ಮೃಗವನ್ನೇ ಅನುಸರಿಸಿ ಹೋದನು. ಹೀಗೆ ಪರಶಿವನು ಮೃಗವನ್ನು ಅಟ್ಟಿಸಿಕೊಂಡು ಹೋಗುತ್ತಿರಲಾಗಿ, ಕೋಪದ ಕಾರಣದಿಂದ ಮಹಾತೇಜಸ್ವಿಯಾದ ಸುರೇಶನಾದ ಮಹೇಶನ ಹಣೆಯಿಂದ ಘೋರವಾದ ಬೆವರಿನ ಬಿಂದುವು ಹೊರಚಿಮ್ಮಿತು. ಆ ಬೆವರಿನ ತೊಟ್ಟು ಭೂಮಿಯಲ್ಲಿ ಬಿದ್ದಮಾತ್ರದಿಂದಲೇ ಕಾಲಾಗ್ನಿಸದೃಶವಾದ ಮಹತ್ತಾದ ಅಗ್ನಿಯು ಪ್ರಾದುರ್ಭವಿಸಿತು.

ಆ ಅಗ್ನಿಯಿಂದ ಅತ್ಯಂತವಾಮನನಾದ, ರಕ್ತಾಕ್ಷನಾದ, ಕಂದುಬಣ್ಣದ ದಾಡಿ-ಮೀಸೆಗಳನ್ನು ಹೊಂದಿದ್ದ, ಮಹಾಭಯಂಕರನಾದ ಪುರುಷನು ಹುಟ್ಟಿದನು. ಆ ಪುರುಷನು ಊರ್ಧ್ವಕೇಶನಾಗಿದ್ದನು. (ಅವನ ಕೂದಲುಗಳೆಲ್ಲವೂ ಮೇಲ್ಮುಖನಾಗಿದ್ದುವು.) ಅವನ ಅಂಗಾಂಗಗಳೆಲ್ಲವೂ ಗಿಡಗ ಮತ್ತು ಗೂಬೆಗಳಿಗಿರುವಂತೆ ದಟ್ಟವಾದ ಕೂದಲಿನಿಂದ ಮುಚ್ಚಿಹೋಗಿದ್ದಿತು. ಶರೀರವು ವಿಕಾರವಾಗಿದ್ದಿತು. ಬಣ್ಣವು ಕಪ್ಪಾಗಿದ್ದಿತು. ಅವನು ಕೆಂಪುವಸ್ತ್ರವನ್ನು ಧರಿಸಿದ್ದನು. ಮಹಾಸತ್ತ್ವನಾದ ಆ ಪುರುಷನು–ಬೆಂಕಿಯು ಹುಲ್ಲಿನ ಮೆದೆ

ಯನ್ನು ಸುಟ್ಟುಹಾಕುವಂತೆ–ದಕ್ಷನ ಯಜ್ಞವನ್ನು ಸಂಪೂರ್ಣವಾಗಿ ಭಸ್ಮ ಮಾಡಿದನು. ಆ ಮಹಾಪುರುಷನು ಯಜ್ಞಮಂಟಪದಲ್ಲಿ ಸುತ್ತಲೂ ಸಂಚರಿಸುತ್ತಾ ದೇವತೆಗಳನ್ನೂ ಋಷಿಗಳನ್ನೂ ಓಡಿಸಿಬಿಟ್ಟನು. ಭಯಗೊಂಡ ದೇವತೆಗಳೂ–ಋಷಿಗಳೂ ದಿಕ್ಕಾಪಾಲಾಗಿ ಓಡಿಹೋದರು. ಆ ರುದ್ರಪುರುಷನು ಹಾಗೆ ಸಂಚರಿಸುತ್ತಿದ್ದಾಗ ಭೂಮಿಯು ಬಹಳವಾಗಿ ಕಂಪಿಸಿತು. ಆ ಸಮಯದಲ್ಲಿ ಪ್ರಪಂಚವೆಲ್ಲವೂ ಹಾಹಾಕಾರದಿಂದ ತುಂಬಿಹೋದುದನ್ನು ನೋಡಿ ಪ್ರಭುವಾದ ಪಿತಾಮಹನು ಮಹಾದೇವನನ್ನು ಸಂದರ್ಶಿಸಿ ಅವನೊಡನೆ ಹೇಳಿದನು:

ಭವತೋಽಪಿ ಸುರಾಃ ಸರ್ವೇ ಭಾಗಂ ದಾಸ್ಯನ್ತಿ ವೈ ಪ್ರಭೋ ।
ಕ್ರಿಯತಾಂ ಪ್ರತಿಸಂಹಾರಃ ಸರ್ವದೇವೇಶ್ವರ ತ್ವಯಾ ॥೪೫॥

"ಪ್ರಭುವೇ! ಸರ್ವದೇವೇಶ್ವರನೇ! ಎಲ್ಲ ದೇವತೆಗಳೂ ನಿನಗೂ ಯಜ್ಞದಲ್ಲಿ ಹವಿರ್ಭಾಗವನ್ನು ಕೊಡುತ್ತಾರೆ. ಈಗ ನೀನು ನಿನ್ನ ಕ್ರೋಧರೂಪವಾಗಿರುವ ಈ ಅಗ್ನಿಯನ್ನು ಶಾಂತಗೊಳಿಸು.

ಮಹಾದೇವನೇ! ಪರಂತಪನೇ! ಈ ಎಲ್ಲ ದೇವತೆಗಳೂ ಮತ್ತು ಎಲ್ಲ ಋಷಿಗಳೂ ನಿನ್ನ ಕ್ರೋಧದಿಂದಾಗಿ ಶಾಂತಿಯನ್ನು ಕಳೆದುಕೊಂಡಿದ್ದಾರೆ. (ಎಲ್ಲರೂ ಅಶಾಂತಿಯಿಂದ ಉದ್ವಿಗ್ನರಾಗಿದ್ದಾರೆ.)

ಧರ್ಮಜ್ಞನೇ! ವಿಬುಧಶ್ರೇಷ್ಠನೇ! ನಿನ್ನ ಬೆವರಿನಿಂದ ಹುಟ್ಟಿರುವ ಪುರುಷನು 'ಜ್ವರ' ಎಂಬ ಹೆಸರಿನಿಂದ ಲೋಕದಲ್ಲಿ ಪ್ರಚಲಿತನಾಗುತ್ತಾನೆ. ನಿನ್ನ ತೇಜೋರೂಪನಾದ ಈ ಜ್ವರಪುರುಷನು ಎಲ್ಲಿಯವರೆಗೆ ಒಂದೇ ರೂಪದಲ್ಲಿರುವನೋ–ಅಲ್ಲಿಯವರೆಗೆ ಈ ಸಮಗ್ರಜಗತ್ತಿನಿಂದಲೂ ಈ ಜ್ವರಪುರುಷನನ್ನು ಧರಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಈ ಜ್ವರವನ್ನು ಅನೇಕ ಪ್ರಕಾರವಾಗಿ ವಿಭಾಗಿಸು."

ಬ್ರಹ್ಮನು ಹೀಗೆ ಹೇಳಿದನಂತರ ಮತ್ತು ಶಿವನಿಗೆ ಯಜ್ಞದಲ್ಲಿ ಹವಿರ್ಭಾಗವೂ ಸಿದ್ಧವಾದನಂತರ ಅಮಿತತೇಜಸ್ವಿಯಾದ ಭಗವಾನ್ ಬ್ರಹ್ಮನೊಡನೆ ಮಹಾದೇವನು ಹಾಗೆಯೇ ಆಗಲೆಂದನು. ಪಿನಾಕಪಾಣಿಯಾದ

ಪರಶಿವನು ಆ ಸಮಯದಲ್ಲಿ ಅತ್ಯಂತಪ್ರಸನ್ನನಾಗಿ ಮಂದಹಾಸವನ್ನು ಬೀರಿದನು. ಬ್ರಹ್ಮನು ಹೇಳಿದಂತೆ ಭವನು ಯಜ್ಞಗಳಲ್ಲಿ ಹವಿರ್ಭಾಗವನ್ನು ಪಡೆದುಕೊಂಡನು.

ಪುತ್ರಕ! ಸರ್ವಧರ್ಮಜ್ಞನಾದ ಪರಶಿವನು ಬ್ರಹ್ಮನ ಪ್ರಾರ್ಥನೆಯಂತೆ ಸರ್ವಪ್ರಾಣಿಗಳ ಶಾಂತ್ಯರ್ಥವಾಗಿ ಜ್ವರವನ್ನು ಅನೇಕಪ್ರಕಾರವಾಗಿ ವಿಂಗಡಿಸಿದನು. ಯಾವ ಯಾವ ರೂಪದಲ್ಲಿ ಜ್ವರಗಳನ್ನು ಮಹಾದೇವನು ವಿಂಗಡಿಸಿದನೆಂಬುದನ್ನು ಹೇಳುವೆನು, ಕೇಳು.

ಶೀರ್ಷಾಭಿತಾಪೋ ನಾಗಾನಾಂ ಪರ್ವತಾನಾಂ ಶಿಲಾಜತು ।
ಅಪಾಂ ತು ನೀಲಿಕಾಂ ವಿದ್ಯಾನ್ನಿರ್ಮೋಕಂ ಭುಜಗೇಷು ಚ ॥೫೨॥

ಖೋರಕಃ ಸೌರಭೇಯಾಣಾಮೂಷರಂ ಪೃಥಿವೀತಲೇ ।
ಪಶೂನಾಮಪಿ ಧರ್ಮಜ್ಞ ದೃಷ್ಟಿಪ್ರತ್ಯವರೋಧನಮ್ ॥೫೩॥

ಆನೆಗಳ ಮಸ್ತಕದಲ್ಲಿ ಯಾವ ತಾಪ ಅಥವಾ ಪೀಡೆಯುಂಟಾಗುವುದೋ ಅದೇ ಅವುಗಳಲ್ಲಿ ಶಿವನು ನಿಕ್ಷೇಪಿಸಿರುವ ಜ್ವರವಾಗಿದೆ. ಪರ್ವತಗಳ ಜ್ವರವು ಶಿಲಾಜಿತುವಿನ (ಕಪ್ಪುಬಣ್ಣದ ಖನಿಜ) ರೂಪದಲ್ಲಿ ಪ್ರಕಟವಾಗುತ್ತದೆ. ನೀರಿನಲ್ಲಿ ಬೆಳೆಯುವ ನೀಲೀಗಿಡ ಅಥವಾ ಕರಿಯ ಲಕ್ಕಿಗಿಡವೇ ನೀರಿನ ಜ್ವರವಾಗಿದೆ. ಪೊರೆಯೇ ಸರ್ಪಗಳ ಜ್ವರವಾಗಿದೆ. ಹಸು ಮತ್ತು ಎತ್ತುಗಳಿಗೆ ಖೋರಕವೆಂಬ ಗೊರಸಿನ ರೋಗವೇ ಜ್ವರವಾಗಿದೆ. ಚೌಳುಮಣ್ಣಿನ ಪ್ರದೇಶವೇ ಪೃಥ್ವಿಯ ಜ್ವರವಾಗಿದೆ. ದೃಷ್ಟಿಶಕ್ತಿಗೆ ಯಾವುದು ಪ್ರತಿರೋಧಕವಾಗಿರುವುದೋ–ಅದು ಸರ್ವಪ್ರಾಣಿಗಳ ಜ್ವರವಾಗಿದೆ.

ರನ್ಧ್ರಾಗತಮಥಾಶ್ವಾನಾಂ ಶಿಖೋದ್ಭೇದಶ್ಚ ಬರ್ಹಿಣಾಮ್ ।
ನೇತ್ರರೋಗಃ ಕೋಕಿಲಸ್ಯ ಜ್ವರಃ ಪ್ರೋಕ್ತೋ ಮಹಾತ್ಮನಾ ॥೫೪॥

ಕುದುರೆಗಳ ಕುತ್ತಿಗೆಯಲ್ಲಿರುವ ರಂಧ್ರದಿಂದ ಹೊರಬರುವ ಮಾಂಸಖಂಡವೇ ಕುದುರೆಗಳಿಗೆ ಜ್ವರವಾಗಿರುತ್ತದೆ. ನವಿಲುಗಳಿಗೆ ತಲೆಯ ಮೇಲೆ ಹೊರಬಂದಿರುವ ಶಿಖೆಯೇ ಜ್ವರವಾಗಿರುತ್ತದೆ. ಕೋಗಿಲೆಗೆ ನೇತ್ರ

ರೋಗವೇ ಜ್ವರವಾಗಿರುತ್ತದೆ. ಮಹಾತ್ಮನಾದ ಶಿವನು ಈ ರೀತಿಯಲ್ಲಿ ಜ್ವರವಿರುವ ಸ್ಥಳಗಳನ್ನು ಹೇಳಿದನು.

ಅವೀನಾಂ ಪಿತ್ತಭೇದಶ್ಚ ಸರ್ವೇಷಾಮಿತಿ ನಃ ಶ್ರುತಮ್ ।
ಶುಕಾನಾಮಪಿ ಸರ್ವೇಷಾಂ ಹಿಕ್ಕಿಕಾ ಪ್ರೋಚ್ಯತೇ ಜ್ವರಃ ॥೫೫॥

ಎಲ್ಲ ಕುರಿಗಳಿಗೂ ಪಿತ್ತೋಲ್ಬಣವೇ ಜ್ವರವೆಂದು ನಾವು ಕೇಳಿದ್ದೇವೆ. ಸಮಸ್ತವಾದ ಗಿಳಿಗಳಿಗೂ ಬಿಕ್ಕಳಿಕೆಯೇ ಜ್ವರವೆಂದು ಹೇಳಲ್ಪಟ್ಟಿದೆ.

ಶಾರ್ದೂಲೇಷ್ವಥ ಧರ್ಮಜ್ಞ ಶ್ರಮೋ ಜ್ವರ ಇಹೋಚ್ಯತೇ ।
ಮಾನುಷೇಷು ತು ಧರ್ಮಜ್ಞ ಜ್ವರೋ ನಾಮೈಷ ಭಾರತ ॥೫೬॥

ಧರ್ಮಜ್ಞನೇ! ಬಳಲಿಕೆಯೇ ಹುಲಿಗಳಿಗೆ ಜ್ವರವಾಗಿದೆ. ಮನುಷ್ಯರಲ್ಲಿ ಇದು ಜ್ವರವೆಂಬ ಹೆಸರಿನಿಂದಲೇ ಪ್ರಸಿದ್ಧವಾಗಿದೆ.

ಮರಣೇ ಜನ್ಮನಿ ತಥಾ ಮಧ್ಯೇ ಚಾವಿಶತೇ ನರಮ್ ।
ಏತನ್ಮಾಹೇಶ್ವರಂ ತೇಜೋ ಜ್ವರೋ ನಾಮ ಸುದಾರುಣಃ ॥೫೭॥

ನಮಸ್ಯಶ್ಚೈವ ಮಾನ್ಯಶ್ಚ ಸರ್ವಪ್ರಾಣಿಭಿರೀಶ್ವರಃ ।
ಅನೇನ ಹಿ ಸಮಾವಿಷ್ಟೋ ವೃತ್ರೋ ಧರ್ಮಭೃತಾಂ ವರಃ ॥೫೮॥

ಭಗವಾನ್ ಮಹೇಶ್ವರನ ತೇಜೋರೂಪವಾದ ಈ ಜ್ವರವು ಅತ್ಯಂತ ದಾರುಣವಾದುದು. ಈ ಜ್ವರವು ಮೃತ್ಯುಕಾಲದಲ್ಲಿ, ಜನನಕಾಲದಲ್ಲಿ ಅಥವಾ ಮಧ್ಯವಯಸ್ಸಿನಲ್ಲಿ ಮನುಷ್ಯನ ಶರೀರವನ್ನು ಪ್ರವೇಶಿಸುತ್ತದೆ. ಸರ್ವಸಮರ್ಥವಾದ ಈ ಮಾಹೇಶ್ವರಜ್ವರವು ಸಮಸ್ತಪ್ರಾಣಿಗಳಿಗೂ ಮಾನ್ಯವೂ–ವಂದನೀಯವೂ ಆಗಿದೆ. ಧರ್ಮಾತ್ಮರಲ್ಲಿ ಶ್ರೇಷ್ಠನಾದ ವೃತ್ರನು ಇದೇ ಜ್ವರದಿಂದಲೇ ಸಮಾಕ್ರಾಂತನಾಗಿದ್ದನು. ಈ ಜ್ವರದ ಕಾರಣದಿಂದಲೇ ವೃತ್ರನು ಆಕಳಿಸುತ್ತಿದ್ದನು. ಆ ಸಮಯದಲ್ಲಿ ಇಂದ್ರನು ಅವನ ಮೇಲೆ ವಜ್ರಾಯುಧವನ್ನು ಪ್ರಯೋಗಿಸಿದನು. ಆಕಳಿಸಲು ತೆರೆದಿದ್ದ ವೃತ್ರನ ಬಾಯಿಯ ಮೂಲಕವಾಗಿ ವಜ್ರಾಯುಧವು ಒಳ ಹೊಕ್ಕು ವೃತ್ರನನ್ನು ಸೀಳಿತು. ವಜ್ರಾಯುಧದಿಂದ ಸೀಳಲ್ಪಟ್ಟ ಮಹಾಯೋಗಿಯಾದ ಮಹಾಸುರನು ಮಹಾತೇಜಸ್ವಿಯಾದ ವಿಷ್ಣುವಿನ ಶ್ರೇಷ್ಠವಾದ

ಸ್ಥಾನಕ್ಕೆ ಹೊರಟುಹೋದನು. (ಪರಮಪದವನ್ನು ಸೇರಿದನು.) ವಿಷ್ಣುಭಕ್ತಿಯ ಪ್ರಭಾವದಿಂದಲೇ ವೃತ್ರನ ಮೂಲಕ ಈ ಜಗತ್ತು ಸರ್ವತ್ರ ವ್ಯಾಪ್ತವಾಗಿದ್ದಿತು. ವಿಷ್ಣುವಿನ ತೇಜಸ್ಸಿನಿಂದ ಕೂಡಿದ್ದ ವಜ್ರಾಯುಧದಿಂದ ಯುದ್ಧದಲ್ಲಿ ಹತನಾದ ಮಹಾಸುರನು ವಿಷ್ಣುವಿನ ಸ್ಥಾನವನ್ನೇ ಸೇರಿದನು.

ಹೀಗೆ ನಾನು ವೃತ್ರಾಸುರನ ವಧೆಯ ಪ್ರಸಂಗದಲ್ಲಿ ಮಹಾಮಾಹೇಶ್ವರ ಜ್ವರವು ಹುಟ್ಟಿದ ವೃತ್ತಾಂತವನ್ನು ವಿಸ್ತಾರವಾಗಿ ಹೇಳಿದ್ದೇನೆ. ಪುತ್ರ! ಯುಧಿಷ್ಠಿರ! ಬೇರೆ ಯಾವ ವಿಷಯವನ್ನು ಹೇಳಲಿ?

ಇಮಾಂ ಜ್ವರೋತ್ಪತ್ತಿಮದೀನಮಾನಸಃ
ಪಠೇತ್ಸದಾ ಯಃ ಸುಸಮಾಹಿತೋ ನರಃ ।
ವಿಮುಕ್ತರೋಗಃ ಸ ಸುಖೀ ಮುದಾ ಯುತೋ
ಲಭೇತ ಕಾಮಾನ್ಸಯಥಾಮನೀಷಿತಾನ್ ॥೬೩॥

ಯಾವನು ಉದಾರಚಿತ್ತನಾಗಿ ಮತ್ತು ಏಕಾಗ್ರಮನಸ್ಕನಾಗಿ ಜ್ವರದ ಉತ್ಪತ್ತಿಗೆ ಸಂಬಂಧಿಸಿದ ಈ ಉಪಾಖ್ಯಾನವನ್ನು ಸರ್ವಕಾಲದಲ್ಲಿಯೂ ಪಠಿಸುವನೋ–ಅವನು ರೋಗಗಳಿಂದ ವಿಮುಕ್ತನಾಗಿ, ಸುಖಿಯಾಗಿ, ಸಂತೋಷಯುಕ್ತನಾಗಿ ಮನೋವಾಂಛಿತವಾದ ಕಾಮನೆಗಳೆಲ್ಲವನ್ನೂ ಪಡೆದುಕೊಳ್ಳುತ್ತಾನೆ."

ಉ೮೩ನೆಯ ಅಧ್ಯಾಯವು ಮುಗಿಯಿತು.

ಉ೮೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪಾರ್ವತಿಯ ರೋಷ-ಖೇದಗಳನ್ನು ನಿವಾರಣೆಮಾಡಲು ಶಿವನಿಂದ ದಕ್ಷನ ಯಜ್ಞಧ್ವಂಸ : ದಕ್ಷನ ಶಿವಸಹಸ್ರನಾಮ ಸ್ತೋತ್ರದಿಂದ ಸುಪ್ರೀತನಾದ ಶಿವನಿಂದ ದಕ್ಷನಿಗೆ ವರಪ್ರದಾನ : ಶಿವಸ್ತೋತ್ರದ ಮಹಿಮೆ

ಜನಮೇಜಯನು ಪ್ರಶ್ನಿಸುತ್ತಾನೆ :

"ವೈಶಂಪಾಯನರೇ! ವೈವಸ್ವತಮನ್ವಂತರದಲ್ಲಿ ಪ್ರಚೇತಸನ ಮಗ

ನಾದ ದಕ್ಷಪ್ರಜಾಪತಿಯು ಮಾಡಿದ ಅಶ್ವಮೇಧಯಾಗವು ಹೇಗೆ ವಿನಷ್ಟವಾಯಿತು? ತನ್ನನ್ನು ಯಜ್ಞಕ್ಕೆ ಆಹ್ವಾನಿಸಿ ಹವಿರ್ಭಾಗವನ್ನು ಕೊಡದಿರುವುದೇ ಪಾರ್ವತೀದೇವಿಯ ಕೋಪಕ್ಕೆ ಕಾರಣವೆಂದು ತಿಳಿದ ಸರ್ವಾತ್ಮನಾದ ಪ್ರಭುವಾದ ಪರಮೇಶ್ವರನು ಕ್ರುದ್ಧನಾದನು. ಯಜ್ಞವು ವಿನಷ್ಟವಾದ ನಂತರ ಪುನಃ ಈಶ್ವರನ ಪ್ರಸಾದದಿಂದ ಯಜ್ಞವು ಹೇಗೆ ಪೂರ್ಣವಾಯಿತು? ಇದನ್ನು ನಾನು ಕೇಳುವ ಇಚ್ಛೆಯಿಂದಿದ್ದೇನೆ. ಯಥಾವತ್ತಾಗಿ ಈ ವಿಷಯವನ್ನು ನನಗೆ ಹೇಳಿರಿ."

ವೈಶಂಪಾಯನರು ಹೇಳುತ್ತಾರೆ :

"ಜನಮೇಜಯ! ಹಿಂದೆ ಹಿಮವತ್ಪರ್ವತದ ತಪ್ಪಲಿನಲ್ಲಿ ಋಷಿಗಳಿಂದಲೂ–ಸಿದ್ಧರಿಂದಲೂ ಸಂಸೇವಿತವಾದ ಗಂಗಾದ್ವಾರವೆಂಬ (ಹರಿದ್ವಾರವೆಂಬ) ಮಂಗಳಮಯವಾದ ಪ್ರದೇಶದಲ್ಲಿ ದಕ್ಷನು ಅಶ್ವಮೇಧಯಜ್ಞವನ್ನು ಮಾಡಲು ಉಪಕ್ರಮಿಸಿದನು. ಗಂಧರ್ವಾಪ್ಸರೆಯರಿಂದ ವ್ಯಾಪ್ತವಾಗಿದ್ದ, ನಾನಾವಿಧವಾದ ವೃಕ್ಷಗಳಿಂದಲೂ–ಲತೆಗಳಿಂದಲೂ ಸಮಾವೃತವಾಗಿದ್ದ ಆ ಪ್ರದೇಶದಲ್ಲಿ ಋಷಿಗಳ ಸಮೂಹಗಳಿಂದ ಪರಿವೃತನಾಗಿದ್ದ, ಧರ್ಮಾತ್ಮರಲ್ಲಿ ಶ್ರೇಷ್ಠನಾದ ದಕ್ಷಪ್ರಜಾಪತಿಯನ್ನು ಪೃಥಿವೀ, ಅಂತರಿಕ್ಷ ಮತ್ತು ಸ್ವರ್ಗಲೋಕಗಳಲ್ಲಿ ವಾಸಮಾಡುತ್ತಿದ್ದವರೆಲ್ಲರೂ ಬದ್ಧಾಂಜಲಿಗಳಾಗಿ ಸಂಸೇವಿಸುತ್ತಿದ್ದರು. ದೇವ-ದಾನವ-ಗಂಧರ್ವರು, ಪಿಶಾಚ-ನಾಗರು, ರಾಕ್ಷಸರು, ಹಾಹಾ ಮತ್ತು ಹೂಹೂ ಎಂಬ ಗಂಧರ್ವರು, ತುಂಬುರು-ನಾರದರು, ವಿಶ್ವಾವಸು-ವಿಶ್ವಸೇನರು ಮತ್ತು ಇತರ ಗಂಧರ್ವಾಪ್ಸರೆಯರು ದಕ್ಷಪ್ರಜಾಪತಿಯ ಸೇವೆಯಲ್ಲಿ ತೊಡಗಿದ್ದರು. ಆದಿತ್ಯರು, ವಸುಗಳು, ರುದ್ರರು, ಸಾಧ್ಯರು, ಮರುದ್ಗಣಗಳು–ಇವರೇ ಮೊದಲಾದ ಯಜ್ಞಭಾಗಿಗಳಾದ ದೇವತೆಗಳು ಇಂದ್ರನೊಡನೆ ದಕ್ಷಪ್ರಜಾಪತಿಯ ಯಜ್ಞಮಂಟಪಕ್ಕೆ ಆಗಮಿಸಿದರು. ಊಷ್ಮಪರು, ಸೋಮಪರು, ಧೂಮಪರು, ಆಜ್ಯಪರು, ಪಿತೃದೇವತೆಗಳು, ಋಷಿಗಳು–ಇವರೆಲ್ಲರೂ ದಕ್ಷನ ಯಜ್ಞಕ್ಕೆ ಆಗಮಿಸಿದರು. ಇವರಲ್ಲದೇ ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ್ಜಗಳೆಂಬ ಇನ್ನೂ ಅನೇಕ ಚತುರ್ವಿಧಪ್ರಾಣಿಗಳೂ ಅಲ್ಲಿಗೆ ಆಗಮಿಸಿದುವು. ಆಹ್ವಾನಿಸಲ್ಪಟ್ಟಿದ್ದ

ದೇವತೆಗಳೆಲ್ಲರೂ ಪತ್ನೀಸಹಿತರಾಗಿ ವಿಮಾನಗಳಲ್ಲಿ ಕುಳಿತು ಪ್ರಜ್ವಲಿಸುತ್ತಿರುವ ಅಗ್ನಿಗೆ ಸಮಾನರಾಗಿ ವಿರಾಜಿಸುತ್ತಿದ್ದರು. ಅವರೆಲ್ಲರನ್ನೂ ನೋಡಿ ಅವರ ಸಮೂಹದಲ್ಲಿ ಪರಶಿವನನ್ನು ಕಾಣದೇ ರೋಷಾವಿಷ್ಟನಾದ ದಧೀಚಿಯು ಆ ಯಜ್ಞಮಂಟಪದಲ್ಲಿ ಹೇಳಿದನು :

ನಾಯಂ ಯಜ್ಞೋ ನ ವಾ ಧರ್ಮೋ ಯತ್ರ ರುದ್ರೋ ನ ಇಜ್ಯತೇ ।
ವಧಬನ್ಧಂ ಪ್ರಪನ್ನಾ ವೈ ಕಿಂ ನು ಕಾಲಸ್ಯ ಪರ್ಯಯಃ ॥೧೨॥

"ಸಜ್ಜನರೇ! ಯಾವ ಯಜ್ಞದಲ್ಲಿ ಈಶ್ವರನು ಆರಾಧಿಸಲ್ಪಡುವುದಿಲ್ಲವೋ–ಅದು ಯಜ್ಞವೂ ಅಲ್ಲ ; ಹಾಗೆ ಮಾಡುವುದು ಧರ್ಮವೂ ಅಲ್ಲ. ಇಂತಹ ಅಧರ್ಮಯುಕ್ತವಾದ ಯಜ್ಞವನ್ನು ವ್ಯವಸ್ಥೆಮಾಡಿರುವವರು ವಧಬಂಧನಗಳ ದುರ್ದಶೆಗೆ ಒಳಗಾಗುತ್ತಾರೆ. ನಿಶ್ಚಯವಾಗಿಯೂ ಪರಮೇಶ್ವರನನ್ನು ಆಹ್ವಾನಿಸದೇ ಯಜ್ಞವನ್ನು ಪ್ರಾರಂಭಿಸಿರುವುದು ಕಾಲದ ವೈಪರೀತ್ಯವೇ ಆಗಿದೆ.


ಕಿಂ ನು ಮೋಹಾನ್ನ ಪಶ್ಯನ್ತಿ ವಿನಾಶಂ ಪರ್ಯುಪಸ್ಥಿತಮ್ ।
ಉಪಸ್ಥಿತಂ ಮಹಾಘೋರಂ ನ ಬುಧ್ಯನ್ತಿ ಮಹಾಧ್ವರೇ ॥೧೩॥

ಈ ನ್ಯೂನತೆಯಿಂದ ವಿನಾಶವು ಸನ್ನಿಹಿತವಾಗಿರುವುದನ್ನು ಇವರೆಲ್ಲರೂ ಮೋಹವಶರಾಗಿ ಕಾಣುತ್ತಿಲ್ಲವೇನು? ನಿಶ್ಚಯವಾಗಿಯೂ ಸನ್ನಿಹಿತವಾಗಿರುವ ಮಹಾಭಯವನ್ನು ಇವರಾರೂ ತಿಳಿದವರಾಗಿಲ್ಲ."

ಜನಮೇಜಯ! ಮಹಾಯೋಗಿಯಾದ ದಧೀಚಿಯು ಹೀಗೆ ಹೇಳಿ ಜ್ಞಾನದ ಕಣ್ಣುಗಳಿಂದ ಎಲ್ಲವನ್ನೂ ನೋಡಿದನು. ಅವನು ಜ್ಞಾನನೇತ್ರದಿಂದ ಮಹಾದೇವನನ್ನೂ, ವರದಳಾದ ಮತ್ತು ಮಂಗಳಸ್ವರೂಪಳಾದ ಪಾರ್ವತೀದೇವಿಯನ್ನೂ, ಆ ದೇವಿಯ ಸಮೀಪದಲ್ಲಿಯೇ ಮಹಾತ್ಮರಾದ ನಾರದರು ನಿಂತಿರುವುದನ್ನೂ ನೋಡಿದನು. ದಿವ್ಯದರ್ಶನದಿಂದ ದಧೀಚಿಗೆ ಪರಮಸಂತೋಷವಾಯಿತು. 'ಈಶ್ವರನನ್ನು ಯಜ್ಞಕ್ಕೆ ಆಹ್ವಾನಿಸದೇ ಇರುವುದರಲ್ಲಿ ಈ ದೇವತೆಗಳೆಲ್ಲರೂ ಒಂದೇ ಅಭಿಪ್ರಾಯವುಳ್ಳವರಾಗಿದ್ದಾರೆ. ಈ ಕಾರಣದಿಂದಲೇ ಈಶ್ವರನು ಈ ಯಜ್ಞಕ್ಕೆ ಆಹ್ವಾನಿಸಲ್ಪಟ್ಟಿಲ್ಲ'–

ಎಂಬುದಾಗಿ ಯೋಗವಿದನಾದ ದಧೀಚಿಯು ನಿಶ್ಚಯಿಸಿ ಈಶ್ವರನಿಗೆ ಅಪಚಾರಮಾಡಿದುದಕ್ಕಾಗಿ ಯಜ್ಞಶಾಲೆಯಿಂದ ದೂರ ಹೋಗಿ ಹೇಳಿದನು :

ಅಪೂಜ್ಯಪೂಜನಾಚ್ಚೈವ ಪೂಜ್ಯಾನಾಂ ಚಾಪ್ಯಪೂಜನಾತ್ ।
ನೃಘಾತಕಸಮಂ ಪಾಪಂ ಶಶ್ವತ್ಪ್ರಾಪ್ನೋತಿ ಮಾನವಃ ॥೧೭॥



"ಪೂಜೆಗೆ ಯೋಗ್ಯರಲ್ಲದವರನ್ನು ಪೂಜಿಸುವುದರಿಂದಲೂ ಪೂಜೆಗೆ ಯೋಗ್ಯರಾದವರನ್ನು ಪೂಜಿಸದೇ ಇರುವುದರಿಂದಲೂ–ಮನುಷ್ಯನು ನರಹತ್ಯೆಯನ್ನು ಮಾಡುವುದರಿಂದ ಪ್ರಾಪ್ತವಾಗಬಹುದಾದ ಪಾಪವನ್ನು ಶಾಶ್ವತವಾಗಿ ಹೊಂದುತ್ತಾನೆ.

ಅನೃತಂ ನೋಕ್ತಪೂರ್ವಂ ಮೇ ನ ಚ ವಕ್ಷ್ಯೇ ಕದಾಚನ ।
ದೇವತಾನಾಮೃಷೀಣಾಂ ಚ ಮಧ್ಯೇ ಸತ್ಯಂ ಬ್ರವೀಮ್ಯಹಮ್ ॥೧೮॥

ಹಿಂದೆ ಯಾವಾಗಲೂ ನಾನು ಸುಳ್ಳು ಹೇಳಿದವನಲ್ಲ. ಮುಂದೆ ಯಾವಾಗಲೂ ಹೇಳುವುದೂ ಇಲ್ಲ. ದೇವತೆಗಳ ಮತ್ತು ಋಷಿಗಳ ಮಧ್ಯದಲ್ಲಿ ನಾನು ಸತ್ಯವಾದ ಮಾತನ್ನೇ ಹೇಳುತ್ತಿದ್ದೇನೆ.

ಆಗತಂ ಪಶುಭರ್ತಾರಂ ಸ್ರಷ್ಟಾರಂ ಜಗತಃ ಪತಿಮ್ ।
ಅಧ್ವರೇ ಹ್ಯಗ್ರಭೋಕ್ತಾರಂ ಸರ್ವೇಷಾಂ ಪಶ್ಯತ ಪ್ರಭುಮ್ ॥೧೯॥

ಸಂಪೂರ್ಣಜಗತ್ತಿನ ಸೃಷ್ಟಿಕರ್ತನಾದ, ಸಂಪೂರ್ಣಜೀವಗಳಿಗೂ ರಕ್ಷಕನಾದ, ಸ್ವಾಮಿಯಾದ, ಸರ್ವರಿಗೂ ಪ್ರಭುವಾದ ಈಶ್ವರನು ಇಲ್ಲಿಗೆ ಬರುವಂತೆ ಆಹ್ವಾನಿಸಿರಿ. ಯಜ್ಞದಲ್ಲಿ ಎಲ್ಲರಿಗೂ ಮೊದಲು ಅವನು ಪ್ರಥಮಾಹುತಿಯನ್ನು ಸ್ವೀಕರಿಸುವಂತೆ ಮಾಡಿರಿ.”

ದಕ್ಷನು ಹೇಳುತ್ತಾನೆ :

ಸನ್ತಿ ನೋ ಬಹವೋ ರುದ್ರಾಃ ಶೂಲಹಸ್ತಾಃ ಕಪರ್ದಿನಃ ।
ಏಕಾದಶಸ್ಥಾನಗತಾ ನಾಹಂ ವೇದ್ಮಿ ಮಹೇಶ್ವರಮ್ ॥೨೦॥

“ಕೈಯ್ಯಲ್ಲಿ ತ್ರಿಶೂಲವನ್ನು ಹಿಡಿದು ಜಟಾಜೂಟಧಾರಿಗಳಾದ ಅನೇಕ ರುದ್ರರು ನಮ್ಮಲ್ಲಿಯೇ ಇದ್ದಾರೆ. ಇವರು ಹನ್ನೊಂದು ಸಂಖ್ಯೆಯಲ್ಲಿದ್ದು ಹನ್ನೊಂದು ಸ್ಥಾನಗಳಲ್ಲಿದ್ದಾರೆ. ಇವರನ್ನು ಬಿಟ್ಟು ಮಹೇಶ್ವರನೆಂಬ ಹೆಸರಿನ ರುದ್ರನು ಯಾರೆಂಬುದು ನನಗೆ ತಿಳಿಯದು.”

ಸರ್ವೇಷಾಮೇವ ಮನ್ತ್ರೋಽಯಂ ಯೇನಾಸೌ ನ ನಿಮನ್ತ್ರಿತಃ ।
ಯಥಾಹಂ ಶಂಕರಾದೂರ್ಧ್ವಂ ನಾನ್ಯಂ ಪಶ್ಯಾಮಿ ದೈವತಮ್ ।
ತಥಾ ದಕ್ಷಸ್ಯ ವಿಪುಲೋ ಯಜ್ಞೋಽಯಂ ನ ಭವಿಷ್ಯತಿ ॥೨೧॥

“ಇದು ಇಲ್ಲಿ ನೆರೆದಿರುವವರೆಲ್ಲರೂ ಸೇರಿ ಮಾಡಿರುವ ಕುತಂತ್ರವಾಗಿದೆ. ಈ ಕುತಂತ್ರದ ಕಾರಣದಿಂದಲೇ ಈ ಯಜ್ಞಕ್ಕೆ ಪರಶಿವನು ಆಹ್ವಾನಿಸಲ್ಪಟ್ಟಿರುವುದಿಲ್ಲ. ಶಂಕರನಿಗಿಂತಲೂ ಮಿಗಿಲಾದ ಬೇರೆ ದೇವತೆಯನ್ನು ನಾನು ಕಂಡಿರುವುದಿಲ್ಲ. ಈ ಕಾರಣದಿಂದಲೇ ದಕ್ಷನ ವಿಪುಲವಾದ ಈ ಯಜ್ಞವು ಪೂರ್ಣವಾಗುವುದೂ ಇಲ್ಲ.”

ಏತನ್ಮಖೇಶಾಯ ಸುವರ್ಣಪಾತ್ರೇ
ಹವಿಃ ಸಮಸ್ತಂ ವಿಧಿಮನ್ತ್ರಪೂತಮ್ ।
ವಿಷ್ಣೋರ್ನಯಾಮ್ಯಪ್ರತಿಮಸ್ಯ ಭಾಗಂ
ಪ್ರಭುರ್ವಿಭುಶ್ಚಾಹವನೀಯ ಏಷಃ ॥೨೨॥

"ಮಹರ್ಷಿಯೇ! ಯಥಾವಿಧಿಯಾಗಿ ಮಂತ್ರಗಳಿಂದ ಪರಿಶುದ್ಧಗೊಳಿಸಲ್ಪಟ್ಟಿರುವ ಸಮಸ್ತವಾದ ಹವಿಸ್ಸನ್ನೂ ಸುವರ್ಣಪಾತ್ರೆಯಲ್ಲಿ ಯಜ್ಞೇಶನಾದ ವಿಷ್ಣುವಿನ ಸಲುವಾಗಿ ಇಟ್ಟಿದ್ದೇನೆ. ಅಪ್ರತಿಮನಾದ ವಿಷ್ಣುವಿಗೆ ಈ ಹವಿಸ್ಸಿನ ಭಾಗವನ್ನು ಸಮರ್ಪಿಸುತ್ತೇನೆ. ಮಹಾವಿಷ್ಣುವು ಪ್ರಭುವೂ ಆಗಿದ್ದಾನೆ ; ವಿಭುವೂ ಆಗಿದ್ದಾನೆ ; ಆಹವನೀಯಾಗ್ನಿಯೂ ಆಗಿದ್ದಾನೆ."

ಜನಮೇಜಯ! ಇತ್ತಲಾಗಿ ಪಾರ್ವತೀದೇವಿಯು ತನ್ನ ಪತಿಯನ್ನು ಯಜ್ಞಕ್ಕೆ ಆಹ್ವಾನಿಸದೇ ಇದ್ದುದರಿಂದ ದುಃಖಿತಳಾಗಿ ಹೇಳಿದಳು :

ಕಿಂ ನಾಮ ದಾನಂ ನಿಯಮಂ ತಪೋ ವಾ
ಕುರ್ಯಾಮಹಂ ಯೇನ ಪತಿರ್ಮಮಾದ್ಯ ।
ಲಭೇತ ಭಾಗಂ ಭಗವಾನಚಿನ್ತ್ಯೋ
ಹ್ಯರ್ಧಂ ತಥಾ ಭಾಗಮಥೋ ತೃತೀಯಮ್ ॥೨೩॥

"ನನ್ನ ಪತಿಯಾದ, ಅಚಿಂತ್ಯನಾದ ಭಗವಾನ್ ಮಹಾದೇವನು ಯಜ್ಞದ ಹವಿಸ್ಸಿನಲ್ಲಿ ಅರ್ಧಭಾಗವನ್ನೋ ಅಥವಾ ಮೂರನೆಯ ಒಂದು ಭಾಗವನ್ನೋ ಪಡೆದುಕೊಳ್ಳುವಂತಾಗಲೂ ನಾನು ಯಾವ ದಾನವನ್ನು ಮಾಡಲಿ? ಯಾವ ನಿಯಮಗಳನ್ನು ಪರಿಪಾಲಿಸಲಿ? ಯಾವ ತಪಸ್ಸನ್ನು ಮಾಡಲಿ?"

ಏವಂ ಬ್ರುವಾಣಾಂ ಭಗವಾನ್ಸ ಪತ್ನೀಂ
ಪ್ರಹೃಷ್ಟರೂಪಃ ಕ್ಷುಭಿತಾಮುವಾಚ ।
ನ ವೇತ್ಸಿ ಮಾಂ ದೇವಿ ಕೃಶೋದರಾಙ್ಗಿ
ಕಿಂ ನಾಮ ಯುಕ್ತಂ ವದನಂ ಮಖೇಶೇ ॥೨೪॥

ಮಂದಹಾಸದಿಂದ ನಗುತ್ತಿದ್ದ ಭಗವಾನ್ ಮಹೇಶನು ದುಃಖಿತಳಾಗಿ

ಹೀಗೆ ಹೇಳುತ್ತಿದ್ದ ಕ್ಷುಭಿತಳಾಗಿದ್ದ ಪಾರ್ವತೀದೇವಿಯನ್ನು ಕುರಿತು ಹೇಳಿದನು : "ಕೃಶವಾದ ಉದರವುಳ್ಳವಳೇ! ನಾನಾರೆಂಬುದನ್ನು ನೀನರಿಯೆ. ಯಜ್ಞಗಳಿಗೆ ಸ್ವಾಮಿಯಾಗಿರುವ ನನ್ನ ವಿಷಯದಲ್ಲಿ ನೀನು ಇಂತಹ ಮಾತುಗಳನ್ನಾಡಬಾರದು.

ಅಹಂ ವಿಜಾನಾಮಿ ವಿಶಾಲನೇತ್ರೇ
ಧ್ಯಾನೇನ ಹೀನಾ ನ ವಿದನ್ತ್ಯಸನ್ತಃ ।
ತವಾದ್ಯ ಮೋಹೇನ ಚ ಸೇನ್ದ್ರದೇವಾ
ಲೋಕಾಸ್ತ್ರಯಃ ಸರ್ವತ ಏವ ಮೂಢಾಃ ॥೨೫॥

ವಿಶಾಲನೇತ್ರಳೇ! ನಾನು ಎಲ್ಲ ವಿಷಯಗಳನ್ನೂ ತಿಳಿದುಕೊಂಡಿರುತ್ತೇನೆ. ಧ್ಯಾನಹೀನರಾದ ಮೂಢರು ಮಾತ್ರವೇ ನನ್ನನ್ನು ತಿಳಿದವರಾಗಿಲ್ಲ. ಈಗ ನಿನ್ನ ಈ ರೀತಿಯ ಮೋಹದಿಂದಾಗಿ ಇಂದ್ರಸಹಿತರಾದ ದೇವತೆಗಳೂ ಮೂರು ಲೋಕಗಳ ಪ್ರಜೆಗಳೂ ಸರ್ವಪ್ರಕಾರದಿಂದಲೂ ಕಿಂಕರ್ತವ್ಯತಾ ಮೂಢರಾಗಿಬಿಟ್ಟಿದ್ದಾರೆ.

ಮಾಮಧ್ವರೇ ಶಂಸಿತಾರಃ ಸ್ತುವನ್ತಿ
ರಥನ್ತರಂ ಸಾಮಗಾಶ್ಚೋಪಗಾನ್ತಿ ।
ಮಾಂ ಬ್ರಾಹ್ಮಣಾ ಬ್ರಹ್ಮವಿದೋ ಯಜನ್ತೇ
ಮಮಾಧ್ವರ್ಯವಃ ಕಲ್ಪಯನ್ತೇ ಚ ಭಾಗಮ್ ॥೨೬॥

ಯಜ್ಞದಲ್ಲಿ ಹೋತೃಗಳು ನನ್ನನ್ನು ಋಙ್ಮಂತ್ರಗಳಿಂದ ಸ್ತೋತ್ರ ಮಾಡುತ್ತಾರೆ. ಸಾಮಗರು ರಥಂತರಸಾಮದ ಮೂಲಕವಾಗಿ ನನ್ನ ಮಹಿಮೆಯನ್ನೇ ಗಾನಮಾಡುತ್ತಾರೆ. ವೇದವಿದರಾದ ಬ್ರಾಹ್ಮಣರು ನನ್ನನ್ನೇ ಉದ್ದೇಶಿಸಿ ಯಜ್ಞಮಾಡುತ್ತಾರೆ ಮತ್ತು ಅಧ್ವರ್ಯುಗಳು ನನಗೆ ಭಾಗವನ್ನು ಅರ್ಪಿಸುತ್ತಾರೆ."

ಸುಪ್ರಾಕೃತೋಽಪಿ ಪುರುಷಃ ಸರ್ವಃ ಸ್ತ್ರೀಜನಸಂಸದಿ ।
ಸ್ತೌತಿ ಗರ್ವಾಯತೇ ಚಾಪಿ ಸ್ವಮಾತ್ಮಾನಂ ನ ಸಂಶಯಃ ॥೨೭॥

"ಪತಿದೇವ! ಕೇವಲ ಸಾಮಾನ್ಯವ್ಯಕ್ತಿಯೇ ಆದರೂ ಹೆಂಗಸರೇ

ಸೇರಿರುವ ಸಭೆಯಲ್ಲಿ ಆತ್ಮಪ್ರಶಂಸೆಯನ್ನು ಮಾಡಿಕೊಳ್ಳುತ್ತಾನೆ ಮತ್ತು ತನಗಿರುವ ಗರ್ವವನ್ನು ತೋರ್ಪಡಿಸಿಕೊಳ್ಳುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ."

ನಾತ್ಮಾನಂ ಸ್ತೌಮಿ ದೇವೇಶಿ ಪಶ್ಯ ಮೇ ತನುಮಧ್ಯಮೇ ।
ಯಂ ಸ್ರಕ್ಷ್ಯಾಮಿ ವರಾರೋಹೇ ಯಾಗಾರ್ಥೇ ವರವರ್ಣಿನಿ ॥



"ದೇವೇಶ್ವರಿ! ನಾನು ಆತ್ಮಪ್ರಶಂಸೆಯನ್ನು ಮಾಡಿಕೊಳ್ಳುತ್ತಿಲ್ಲ. ತನುಮಧ್ಯಮೇ! ವರಾರೋಹೇ! ವರವರ್ಣಿನಿ! ನಿನ್ನ ದುಃಖಕ್ಕೆ ಕಾರಣವಾಗಿರುವ ದಕ್ಷನ ಯಜ್ಞದ ವಿನಾಶಾರ್ಥವಾಗಿ ನಾನು ಎಂತಹ ಅತುಲಪರಾಕ್ರಮಿಯನ್ನು ಸೃಷ್ಟಿಸುವೆನೆಂಬುದನ್ನಾದರೂ ನೋಡು."

ಜನಮೇಜಯ! ಭಗವಾನ್ ಶಂಕರನು ತನ್ನ ಪ್ರಾಣಗಳಿಗಿಂತಲೂ ಪ್ರಿಯಳಾದ, ಧರ್ಮಪತ್ನಿಯಾದ ಉಮೆಯೊಡನೆ ಹೀಗೆ ಹೇಳಿದನಂತರ ತನಗೆ ಹರ್ಷವನ್ನುಂಟುಮಾಡುವ ಭಯಂಕರನಾದ ಪುರುಷನೊಬ್ಬನನ್ನು ಮುಖದಿಂದ ಸೃಷ್ಟಿಸಿದನು.

ಹುಟ್ಟಿದೊಡನೆಯೇ ವಿನೀತನಾಗಿ ನಿಂತಿದ್ದ ಆ ಪುರುಷನಿಗೆ (ವೀರಭದ್ರನಿಗೆ) ಮಹೇಶನು ದಕ್ಷನ ಯಜ್ಞವನ್ನು ನಾಶಗೊಳಿಸುವಂತೆ ಆಜ್ಞಾಪಿಸಿದನು. ಮಹಾದೇವನ ಮುಖದಿಂದ ಹೊರಬಂದ ಸಿಂಹಸಮಾನ ವಿಕ್ರಮನಾದ ಆ ವೀರನು ಯಾರ ಸಹಾಯವೂ ಇಲ್ಲದೇ ಪಾರ್ವತೀ ದೇವಿಯ ದುಃಖ-ಕೋಪಗಳನ್ನು ಹೋಗಲಾಡಿಸುವ ಸಲುವಾಗಿ ಲೀಲಾಮಾತ್ರದಿಂದ ದಕ್ಷನ ಯಜ್ಞವನ್ನು ವಿನಾಶಗೊಳಿಸಿದನು. ಆ ಸಮಯದಲ್ಲಿ ಭವಾನಿಯ ಕೋಪದಿಂದ ಸಮುದ್ಭೂತಳಾಗಿದ್ದ, ಭಯಂಕರರೂಪಳಾಗಿದ್ದ ಮಹಾಕಾಲೀ ಮಹೇಶ್ವರಿಯು (ಭದ್ರಕಾಳಿಯು) ತನ್ನ ಪರಾಕ್ರಮವನ್ನು ತೋರಿಸುವ ಸಲುವಾಗಿ ಸೇವಕರಿಂದ ಅನುಸರಿಸಲ್ಪಟ್ಟವಳಾಗಿ ಆ ವೀರನೊಡನೆ ದಕ್ಷಯಜ್ಞಭೂಮಿಗೆ ಹೋದಳು.

ಪರಶಿವನ ಮುಖದಿಂದ ಹುಟ್ಟಿದ ಪುರುಷನು ಮಹಾದೇವನ ಅಭಿಮತವೇನೆಂಬುದನ್ನು ತಿಳಿದವನಾಗಿ ಭಗವಂತನಿಗೆ ತಲೆಬಾಗಿ ನಮಸ್ಕರಿಸಿದನು. ಬಲ-ರೂಪಗಳಿಂದ ಕೂಡಿದ್ದ ಆ ಪುರುಷನು ವೀರ್ಯದಲ್ಲಿ ಪರಶಿವನಿಗೆ ಸಮನಾಗಿದ್ದನು. ಆ ಭಗವಂತನು ಶಂಕರನ ಕ್ರೋಧದ ಪ್ರತಿರೂಪವೇ ಆಗಿದ್ದನು. ಅವನು ಅನಂತಬಲವೀರ್ಯನಾಗಿಯೂ, ಅನಂತಬಲಪೌರುಷವುಳ್ಳವನಾಗಿಯೂ ಇದ್ದನು. ವೀರಭದ್ರನೆಂದು ಖ್ಯಾತನಾಗಿದ್ದ ಆ ಪುರುಷನು ಪಾರ್ವತೀದೇವಿಯ ರೋಷವನ್ನೂ, ಖೇದವನ್ನೂ ಹೋಗಲಾಡಿಸುವವನಾಗಿದ್ದನು. ಅವನು ತನ್ನ ರೋಮಕೂಪಗಳಿಂದ ರೌಮ್ಯರೆಂಬ ಗಣೇಶ್ವರರನ್ನು ಸೃಷ್ಟಿಸಿದನು. ಅವರೆಲ್ಲರೂ ಭಯಂಕರರಾಗಿಯೂ, ಭಯಂಕರವಾದ ವೀರ್ಯ-ಪರಾಕ್ರಮವುಳ್ಳವರಾಗಿಯೂ ಇದ್ದು ರುದ್ರನಿಗೆ ಸಮಾನರಾಗಿದ್ದರು. ನೂರಾರು-ಸಾವಿರಾರು ಸಂಖ್ಯೆಯಲ್ಲಿ ಭಯಂಕರರೂಪರಾದ, ಮಹಾಕಾಯರಾದ ಆ ರೌಮ್ಯರು ಕಿಲ-ಕಿಲಾಶಬ್ದಗಳಿಂದ ಆಕಾಶವನ್ನೇ ಮುಚ್ಚುತ್ತಿರುವರೋ ಎಂಬಂತೆ ಗರ್ಜನೆಮಾಡುತ್ತಾ ದಕ್ಷನ ಯಜ್ಞವನ್ನು ಧ್ವಂಸಮಾಡುವ

ಉದ್ದೇಶದಿಂದ ಬಹಳ ಬೇಗ ಯಜ್ಞಭೂಮಿಯನ್ನು ಆಕ್ರಮಿಸಿದರು. ಗಣೇಶ್ವರರು ಮಾಡುತ್ತಿದ್ದ ಭಯಂಕರವಾದ ಕೋಲಾಹಲಮಹಾಶಬ್ದದಿಂದ ಅಲ್ಲಿದ್ದ ದೇವತೆಗಳೆಲ್ಲರೂ ಭಯಗೊಂಡರು. ಪರ್ವತಗಳು ಸೀಳಿ ಹೋದುವು. ಭೂಮಿಯು ನಡುಗಿತು. ಸುಂಟರಗಾಳಿಗಳು ರಭಸದಿಂದ ಸುತ್ತತೊಡಗಿದುವು. ಸಮುದ್ರವು ಕ್ಷೋಭೆಗೊಂಡಿತು. ಅಗ್ನಿಗಳು ಪ್ರಕಾಶಿಸುತ್ತಿರಲಿಲ್ಲ. ಸೂರ್ಯನೂ ಮಂದರಶ್ಮಿಯಾದನು. ಗ್ರಹಗಳೂ ಪ್ರಕಾಶಿಸುತ್ತಿರಲಿಲ್ಲ. ಚಂದ್ರನಾಗಲೀ-ನಕ್ಷತ್ರಗಳಾಗಲೀ ಪ್ರಕಾಶಿಸುತ್ತಿರಲಿಲ್ಲ. ಋಷಿಗಳೂ ತೇಜೋಹೀನರಾದರು. ದೇವತೆಗಳೂ ಮತ್ತು ಮನುಷ್ಯರೂ ನಿಸ್ತೇಜರಾದರು. ಹೀಗೆ ಎಲ್ಲೆಲ್ಲೂ ಕತ್ತಲು ಕವಿಯಲಾಗಿ ದಕ್ಷನಿಂದ ಅವಮಾನಿತರಾದ ಗಣೇಶ್ವರರು ಯಜ್ಞಮಂಟಪಕ್ಕೆ ನಾಲ್ಕು ಕಡೆಗಳಿಂದಲೂ ಬೆಂಕಿಯನ್ನಿಡತೊಡಗಿದರು. ಘೋರರೂಪಿಗಳಾದ ಕೆಲವು ಗಣೇಶ್ವರರು ಯಜ್ಞದ ಋತ್ವಿಜರನ್ನು ಪ್ರಹರಿಸುತ್ತಿದ್ದರು. ಕೆಲವರು ಯೂಪಗಳನ್ನೇ ಕಿತ್ತೊಗೆಯುತ್ತಿದ್ದರು. ಕೆಲವರು ಯಜ್ಞದ ಸಾಮಗ್ರಿಗಳನ್ನು ಒಡೆದುಹಾಕುತ್ತಿದ್ದರು. ಕೆಲವರು ಯಜ್ಞದ ಸದಸ್ಯರನ್ನು ಮರ್ದನಮಾಡುತ್ತಿದ್ದರು. ವಾಯುವೇಗ-ಮನೋವೇಗಗಳಿಂದ ಕೂಡಿದ್ದ ಕೆಲವರು ರೌಮ್ಯರು ಸದಸ್ಯರನ್ನು ಹೊಡೆಯಲು ಅಟ್ಟಿಸಿಕೊಂಡು ಇಲ್ಲಿಂದಲ್ಲಿಗೂ ಅಲ್ಲಿಂದಿಲ್ಲಿಗೂ ಓಡಾಡುತ್ತಿದ್ದರು. ಅಲ್ಲಿದ್ದ ಯಜ್ಞಪಾತ್ರೆಗಳನ್ನೂ, ದಿವ್ಯವಾದ ಆಭರಣಗಳನ್ನೂ ನುಚ್ಚುನೂರುಮಾಡುತ್ತಿದ್ದರು. ಸುತ್ತಲೂ ಎರಚಲ್ಪಟ್ಟಿದ್ದ ಆಭರಣಗಳ ಚೂರುಗಳು ಆಕಾಶದಲ್ಲಿರುವ ತಾರೆಗಳಂತೆಯೇ ಕಾಣುತ್ತಿದ್ದುವು. ಆ ಯಜ್ಞಮಂಟಪದ ಪಾಕಶಾಲೆಯಲ್ಲಿ ಪರ್ವತೋಪಮವಾದ ದಿವ್ಯಾನ್ನ-ಪಾನ-ಭಕ್ಷ್ಯಗಳ ರಾಶಿಗಳಿದ್ದುವು. ಘೃತ-ಪಾಯಸಗಳೆಂಬ ಕೆಸರಿನಿಂದ ಕೂಡಿದ್ದ ಕ್ಷೀರನದಿಗಳು ಅಲ್ಲಿ ಕಾಣುತ್ತಿದ್ದುವು. ದಿವ್ಯವಾದ ಮೊಸರು-ಮಜ್ಜಿಗೆಗಳು ನೀರಿನಂತೆಯೇ ಹರಿದುಹೋಗುತ್ತಿದ್ದುವು. ಬೆಲ್ಲ ಮತ್ತು ಸಕ್ಕರೆಗಳು ಮಳಲಿನ ದಿಬ್ಬಗಳಂತೆ ರಾಶಿ-ರಾಶಿಯಾಗಿ ಬಿದ್ದಿದ್ದುವು. ಅಲ್ಲಿದ್ದ ನದಿಗಳೆಲ್ಲವೂ ಷಡ್ರಸಯುಕ್ತವಾದ ಭೋಜನವನ್ನೇ ಪ್ರವಾಹರೂಪದಲ್ಲಿ ಒಯ್ಯುತ್ತಿದ್ದುವು. ಅಲ್ಲಲ್ಲಿಯೇ ಮನೋಹರವಾದ ಕಬ್ಬಿನ ರಸದ ಕಾಲುವೆಗಳಿದ್ದುವು. ಅನೇಕ ವಿಧವಾದ ಮಾಂಸಗಳ ರಾಶಿಗಳಿದ್ದುವು. ವಿಧ-ವಿಧವಾದ ಭಕ್ಷ್ಯಗಳ ರಾಶಿ

ಗಳಿದ್ದುವು. ದಿವ್ಯವಾದ ಪಾನಕ-ಲೇಹ್ಯ-ಚೋಷ್ಯಾದಿ ಯಾವ ಭೋಜನ ಪದಾರ್ಥಗಳು ಸಿಕ್ಕುತ್ತಿದ್ದುವೋ–ಅವೆಲ್ಲವನ್ನೂ ಗಣೇಶ್ವರರು ನಾನಾವಿಧ ವಾದ ಮುಖಗಳಿಂದ ತಿನ್ನುತ್ತಿದ್ದರು. ಉಳಿದ ಭೋಜನಪದಾರ್ಥಗಳನ್ನು ನಾಲ್ಕು ದಿಕ್ಕುಗಳಿಗೂ ಮನಬಂದಂತೆ ಎಸೆಯುತ್ತಿದ್ದರು.

ರುದ್ರನ ಕೋಪದಿಂದ ಹುಟ್ಟಿದ, ಮಹಾಕಾಯರಾದ, ಕಾಲಾಗ್ನಿ ಸದೃಶರಾದ ಗಣೇಶ್ವರರು ದೇವತೆಗಳ ಸೈನ್ಯವನ್ನು ಕ್ಷೋಭೆಗೊಳಿಸುತ್ತಾ ಮತ್ತು ಚದುರಿಸುತ್ತಾ ಯಜ್ಞಮಂಟಪದ ಸುತ್ತಲೂ ಸಂಚರಿಸುತ್ತಿದ್ದರು. ವಿಧ-ವಿಧವಾದ ಆಕಾರಗಳನ್ನು ಹೊಂದಿದ್ದ ರುದ್ರನ ಅನುಯಾಯಿಗಳು ಭಯಂಕರವಾದ ರೀತಿಯಲ್ಲಿ ಕ್ರೀಡಿಸುತ್ತಿದ್ದರು. ದೇವಾಂಗನೆಯರನ್ನು ಎತ್ತಿ ದೂರಕ್ಕೆ ಎಸೆಯುತ್ತಿದ್ದರು. ರುದ್ರನ ಕೋಪದಿಂದ ಹುಟ್ಟಿದ್ದ ಭಯಂಕರ ಕರ್ಮನಾದ ವೀರಭದ್ರನು ಸಕಲದೇವತೆಗಳಿಂದಲೂ ಪ್ರಯತ್ನಪೂರ್ವಕವಾಗಿ ಸಂರಕ್ಷಿಸಲ್ಪಡುತ್ತಿದ್ದ ದಕ್ಷನ ಯಜ್ಞವನ್ನು ಬಹಳ ಬೇಗ ಭಸ್ಮೀಭೂತವನ್ನಾಗಿ ಮಾಡಿಬಿಟ್ಟನು. ಅನಂತರ ಸರ್ವಪ್ರಾಣಿಗಳಿಗೂ ಭಯವನ್ನುಂಟುಮಾಡುವ ಭೀಷಣವಾದ ಗರ್ಜನೆಯನ್ನು ಮಾಡಿ ಯಜ್ಞಪುರುಷನ ತಲೆಯನ್ನು ಕತ್ತರಿಸಿ ಆನಂದತುಂದಿಲನಾಗಿ ಸಿಂಹನಾದವನ್ನು ಮಾಡಿದನು. ಬಳಿಕ ಬ್ರಹ್ಮಾದಿದೇವತೆಗಳೂ ದಕ್ಷಪ್ರಜಾಪತಿಯೂ ಬದ್ಧಾಂಜಲಿಗಳಾಗಿ ವೀರಭದ್ರ ನನ್ನು ಕುರಿತು–'ದೇವದೇವ! ನೀನಾರು?'–ಎಂದು ಪ್ರಶ್ನಿಸಿದರು.

ಅದಕ್ಕೆ ಉತ್ತರವಾಗಿ ವೀರಭದ್ರನು :

ನಾಹಂ ರುದ್ರೋ ನ ವಾ ದೇವೀ ನೈವ ಭೋಕ್ತುಮಿಹಾಗತಃ ।
ದೇವ್ಯಾ ಮನ್ಯುಕೃತಂ ಮತ್ವಾ ಕ್ರುದ್ಧಃ ಸರ್ವಾತ್ಮಕಃ ಪ್ರಭುಃ ॥

"ನಾನು ರುದ್ರನೂ ಅಲ್ಲ; ದೇವಿಯೂ ಅಲ್ಲ; ನಾನಿಲ್ಲಿಗೆ ಯಜ್ಞಭೋಜನವನ್ನು ಮಾಡಲು ಬಂದವನೂ ಅಲ್ಲ. ಈ ನಿನ್ನ ಯಜ್ಞವು ಪಾರ್ವತೀದೇವಿಗೆ ಕ್ರೋಧವನ್ನುಂಟುಮಾಡಿದೆಯೆಂದು ಭಾವಿಸಿ ಸರ್ವಾತ್ಮಕ ನಾದ ಪ್ರಭುವಾದ ಶಿವನು ಕ್ರುದ್ಧನಾದನು.

ನಾನಿಲ್ಲಿಗೆ ವಿಪ್ರಶ್ರೇಷ್ಠರಾದ ಋತ್ವಿಜರನ್ನು ನೋಡಲು ಬರಲಿಲ್ಲ. ಯಜ್ಞವನ್ನು ನೋಡಬೇಕೆಂಬ ಕುತೂಹಲದಿಂದಲೂ ಬರಲಿಲ್ಲ. ನಿನ್ನ ಯಜ್ಞವನ್ನು ಧ್ವಂಸಮಾಡುವ ಸಲುವಾಗಿಯೇ ಆಗಮಿಸಿರುವೆನೆಂಬುದನ್ನು ತಿಳಿ. ರುದ್ರನ ಕೋಪದಿಂದ ಹುಟ್ಟಿದ ನಾನು ವೀರಭದ್ರನೆಂದು ವಿಖ್ಯಾತನಾಗಿದ್ದೇನೆ. ದೇವಿಯ ಕೋಪದಿಂದ ಹುಟ್ಟಿದ ಇವಳು–'ಭದ್ರಕಾಲೀ'–ಎಂದು ವಿಖ್ಯಾತಳಾಗಿದ್ದಾಳೆ. ದೇವದೇವನಾದ ಈಶ್ವರನಿಂದ ಕಳುಹಿಸಲ್ಪಟ್ಟ ನಾವು ನೀನು ಮಾಡುತ್ತಿದ್ದ ಯಜ್ಞಮಂಟಪದ ಬಳಿಗೆ ಬಂದೆವು. ವಿಪ್ರೇಂದ್ರನೇ! (ದಕ್ಷನೇ!) ದೇವದೇವನಾದ ಉಮಾಪತಿಯಾದ ಶಿವನನ್ನು ಶರಣುಹೊಂದು. ಮಹಾದೇವನ ಕ್ರೋಧವೂ ಶ್ರೇಷ್ಠವಾದುದು. (ಮಂಗಳಮಯವಾಗಿಯೇ ಪರ್ಯವಸಾನಹೊಂದುತ್ತದೆ.) ಆದರೆ ಇತರ ದೇವತೆಗಳ ವರದಾನವೂ ಮಂಗಳದಾಯಕವಾಗುವುದಿಲ್ಲ."

ಧರ್ಮಾತ್ಮರಲ್ಲಿ ಶ್ರೇಷ್ಠನಾದ ದಕ್ಷನು ವೀರಭದ್ರನ ಮಾತನ್ನು ಕೇಳಿ ಶಿವನಿಗೆ ಮನಸ್ಸಿನಿಂದಲೇ ನಮಸ್ಕಾರಮಾಡಿ ಶಿವನನ್ನು ಸ್ತೋತ್ರಗಳಿಂದ ಸಂತೋಷಪಡಿಸತೊಡಗಿದನು :

ಪ್ರಪದ್ಯೇ ದೇವಮೀಶಾನಂ ಶಾಶ್ವತಂ ಧ್ರುವಮವ್ಯಯಮ್ ।
ಮಹಾದೇವಂ ಮಹಾತ್ಮಾನಂ ವಿಶ್ವಸ್ಯ ಜಗತಃ ಪತಿಮ್ ॥೫೭॥

"ಸಂಪೂರ್ಣಜಗತ್ತಿಗೂ ಶಾಸಕನೂ, ಪಾಲಕನೂ, ಶಾಶ್ವತನೂ, ಅಕ್ಷಯನೂ, ಅಖಂಡವಿಶ್ವಕ್ಕೂ ಒಡೆಯನೂ ಆಗಿರುವ ಮಹಾತ್ಮನಾದ ಮಹಾದೇವನನ್ನು ಶರಣುಹೊಂದುತ್ತೇನೆ."

ಬಳಿಕ ಬಹುನೇತ್ರನಾದ, ಶತ್ರುಜಿತನಾದ ಮಹಾದೇವನು ಮುಖದ ಮೂಲಕ ಪ್ರಯತ್ನಪೂರ್ವಕವಾಗಿ ಪ್ರಾಣಾಪಾನವಾಯುಗಳನ್ನು ನಿರೋಧಿಸಿ ಎಲ್ಲ ಕಡೆಗಳಲ್ಲಿಯೂ ದೃಷ್ಟಿಯನ್ನು ಪ್ರಸರಿಸುತ್ತಾ ಅಗ್ನಿಕುಂಡದಿಂದ ಹೊರಬಂದನು. ಆ ಸಮಯದಲ್ಲಿ ಪರಶಿವನು ಸಹಸ್ರಸೂರ್ಯರ ತೇಜಸ್ಸಿನಿಂದ ಬೆಳಗುತ್ತಿದ್ದನು. ಸಂವರ್ತಕಾಗ್ನಿಗೆ ಸಮಾನನಾಗಿ ಕಾಣುತ್ತಿದ್ದ ಪರಮೇಶ್ವರನು, ಮಂದಹಾಸವನ್ನು ಬೀರುತ್ತಾ ದಕ್ಷನನ್ನು ಕುರಿತು 'ನಾನು ನಿನಗೆ ಯಾವ ಕಾರ್ಯವನ್ನು ಮಾಡಿಕೊಡಲಿ?'–ಎಂದು ಪ್ರಶ್ನಿ

ಸಿದನು. ಆ ಸಮಯದಲ್ಲಿ ದೇವಗುರುವಾದ ಬೃಹಸ್ಪತಿಯು ವೇದಭಾಗದಲ್ಲಿನ ಮಖಾಧ್ಯಾಯವನ್ನು ರುದ್ರನ ಮುಂದೆ ಪಾರಾಯಣಮಾಡಿದನು. ಭಯದ ಶಂಕೆಯಿಂದ ಗಡ-ಗಡನೆ ನಡುಗುತ್ತಿದ್ದ, ಕಂಬನಿದುಂಬಿದ ಕಣ್ಣುಗಳುಳ್ಳ ಮುಖದಿಂದ ಕೂಡಿದ್ದ ದಕ್ಷಪ್ರಜಾಪತಿಯು ಬದ್ಧಾಂಜಲಿಯಾಗಿ ಶಿವನಿಗೆ ಹೇಳಿದನು :

"ಭಗವನ್! ನೀನು ನನ್ನ ವಿಷಯದಲ್ಲಿ ಪ್ರಸನ್ನನಾಗಿದ್ದರೆ–ನಿನಗೆ ನಾನು ಪ್ರಿಯನಾಗಿದ್ದರೆ–ನಾನು ನಿನ್ನ ಅನುಗ್ರಹಕ್ಕೆ ಯೋಗ್ಯನಾಗಿದ್ದರೆ– ನೀನು ನನಗೆ ವರಕೊಡುವ ಇಚ್ಛೆಯುಳ್ಳವನಾಗಿದ್ದರೆ–ನಾನು ಈ ವರವನ್ನು ನಿನ್ನಿಂದ ಬೇಡಿಕೊಳ್ಳುತ್ತೇನೆ.

ಬಹಳ ಕಾಲದ ಪ್ರಯತ್ನದಿಂದ ನಾನು ಈ ಯಜ್ಞದ ಸಂಭಾರಗಳನ್ನು ಸಂಗ್ರಹಿಸಿದ್ದೆನು. ನಿನ್ನ ಕಿಂಕರರಿಂದ ಯಜ್ಞದ ಸಂಭಾರಗಳೆಲ್ಲವೂ ನೀನೇ ಕಾಣುತ್ತಿರುವಂತೆ ಭಸ್ಮಮಾಡಲ್ಪಟ್ಟಿವೆ ; ತಿಂದುಹಾಕಲ್ಪಟ್ಟಿವೆ ; ಕುಡಿಯಲ್ಪಟ್ಟಿವೆ ; ನಾಶಗೊಳಿಸಲ್ಪಟ್ಟಿವೆ ; ಚೂರ್ಣಮಾಡಲ್ಪಟ್ಟಿವೆ ; ಎಸೆಯಲ್ಪಟ್ಟಿವೆ. ನನ್ನ ಬಹಳ ಕಾಲದ ಈ ಪ್ರಯತ್ನವು ನಿಷ್ಫಲವಾಗದಂತೆ ಅನುಗ್ರಹಿಸು, ದೇವ!"

ದಕ್ಷಪ್ರಜಾಪತಿಯ ಪ್ರಾರ್ಥನೆಯನ್ನು ಕೇಳಿ ಭಗನೇತ್ರಹರನಾದ, ಭಕ್ತಜನಪಾಪಹರನಾದ, ಧರ್ಮಾಧ್ಯಕ್ಷನಾದ, ವಿರೂಪಾಕ್ಷನಾದ, ಮುಕ್ಕಣ್ಣನಾದ, ಪ್ರಜಾಪಾಲಕನಾದ ಮಹಾದೇವನು 'ತಥಾಸ್ತು–ಹಾಗೆಯೇ ಆಗಲಿ' ಎಂದನು.

ಶಿವನಿಂದ ವರವನ್ನು ಪಡೆದುಕೊಂಡ ದಕ್ಷನು ಮಂಡಿಗಳನ್ನೂರಿ ನಮಸ್ಕರಿಸುತ್ತಾ ಸಾವಿರದ ಎಂಟು ನಾಮಗಳಿಂದ ವೃಷಭಧ್ವಜನನ್ನು ಸ್ತೋತ್ರಮಾಡಿದನು."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

"ಅನಘನೇ! ಪಿತಾಮಹ! ದಕ್ಷಪ್ರಜಾಪತಿಯು ಯಾವ ನಾಮಗಳಿಂದ ಮಹಾದೇವನನ್ನು ಸ್ತೋತ್ರಮಾಡಿದನು? ನನಗೆ ಆ ನಾಮಗಳನ್ನು ಕೇಳುವ ಶ್ರದ್ಧೆಯುಂಟಾಗಿದೆ. ದಯಮಾಡಿ ಹೇಳು."

ಭೀಷ್ಮನು ಹೇಳುತ್ತಾನೆ :

“ಅದ್ಭುತಕರ್ಮನಾದ, ದೇವದೇವನಾದ, ನಿಗೂಢವ್ರತನಾದ ಮಹಾದೇವನ ಗೂಢವಾಗಿರುವ ಮತ್ತು ಹೆಚ್ಚು ಬಳಕೆಯಲ್ಲಿರುವ ನಾಮಧೇಯಗಳನ್ನು ನೀನು ಏಕಾಗ್ರಚಿತ್ತನಾಗಿ ಕೇಳು.

ದಕ್ಷನು ಸ್ತೋತ್ರಮಾಡುತ್ತಾನೆ :

ನಮಸ್ತೇ ದೇವದೇವೇಶ ದೇವಾರಿಬಲಸೂದನ ।
ದೇವೇನ್ದ್ರಬಲವಿಷ್ಟಮ್ಭ ದೇವದಾನವಪೂಜಿತ ॥೯॥

“ದೇವದೇವೇಶ್ವರನೇ! ನಿನಗೆ ನಮಸ್ಕಾರಮಾಡುತ್ತೇನೆ. ದೇವವೈರಿಗಳಾದ ದಾನವರ ಸೈನ್ಯವನ್ನು ನಾಶಪಡಿಸತಕ್ಕವನೇ! ದೇವೇಂದ್ರನ ಬಲವನ್ನು ಸ್ತಬ್ಧಗೊಳಿಸಿದವನೇ! ದೇವ-ದಾನವಪೂಜಿತನೇ! ನಿನಗೆ ನಮಸ್ಕಾರಮಾಡುತ್ತೇನೆ. (೯)

ಸಹಸ್ರಾಕ್ಷ ವಿರೂಪಾಕ್ಷ ತ್ರ್ಯಕ್ಷ ಯಕ್ಷಾಧಿಪಪ್ರಿಯ ।
ಸರ್ವತಃ ಪಾಣಿಪಾದಾನ್ತ ಸರ್ವತೋಽಕ್ಷಿಶಿರೋಮುಖ ॥೧೦॥

ಸಾವಿರ ಕಣ್ಣುಗಳುಳ್ಳವನೇ! ವಿಕಾರವಾದ ಕಣ್ಣುಗಳುಳ್ಳವನೇ! ಮುಕ್ಕಣ್ಣನೇ! ಯಕ್ಷಾಧಿಪನಾದ ಕುಬೇರನಿಗೆ ಪ್ರಿಯನಾದವನೇ! ಎಲ್ಲ ಕಡೆಗಳಲ್ಲಿಯೂ ಕೈಗಳನ್ನೂ-ಕಾಲುಗಳನ್ನೂ ಹೊಂದಿರುವವನೇ! ಎಲ್ಲ ಕಡೆಗಳಲ್ಲಿಯೂ ಕಣ್ಣುಗಳನ್ನೂ, ಶಿರಸ್ಸುಗಳನ್ನೂ, ಮುಖಗಳನ್ನೂ ಹೊಂದಿರುವವನೇ! ನಿನಗೆ ನಮಸ್ಕಾರಮಾಡುತ್ತೇನೆ. (೧೦)

ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠಸಿ ।

ನೀನು ಎಲ್ಲ ಕಡೆಗಳಲ್ಲಿಯೂ ಕಿವಿಗಳನ್ನು ಹೊಂದಿರುವೆ. ವಿಶ್ವವೆಲ್ಲವನ್ನೂ ನೀನು ವ್ಯಾಪಿಸಿ ನಿಂತಿರುವೆ.

ಶಙ್ಕುಕರ್ಣ ಮಹಾಕರ್ಣ ಕುಮ್ಭಕರ್ಣಾರ್ಣವಾಲಯ ।
ಗಜೇನ್ದ್ರಕರ್ಣ ಗೋಕರ್ಣ ಪಾಣಿಕರ್ಣ ನಮೋಽಸ್ತು ತೇ ॥೧೧॥

ಶಂಕುಕರ್ಣನೇ! ಮಹಾಕರ್ಣನೇ! ಕುಂಭಕರ್ಣನೇ! ಸಮುದ್ರಾಲಯನೇ! ಗಜೇಂದ್ರ ಕರ್ಣನೇ! ಗೋಕರ್ಣನೇ! ಪಾಣಿಕರ್ಣನೇ! ನಿನಗೆ ನಮಸ್ಕಾರಮಾಡುತ್ತೇನೆ. (೧೨)

ಶತೋದರ ಶತಾವರ್ತ ಶತಜಿಹ್ವ ನಮೋಽಸ್ತು ತೇ ।

ಶತೋದರನೇ! (ನೂರು ಹೊಟ್ಟೆಗಳನ್ನು ಹೊಂದಿರುವವನೇ!) ಶತಾವರ್ತನೇ! (ನೂರು ಸುಳಿಗಳನ್ನು ಹೊಂದಿರುವವನೇ!) ಶತಜಿಹ್ವನೇ! (ನೂರು ನಾಲಿಗೆಗಳನ್ನು ಹೊಂದಿರುವವನೇ!) ನಿನಗೆ ನಮಸ್ಕಾರಮಾಡುತ್ತೇನೆ. (೨೦)

ಗಾಯನ್ತಿ ತ್ವಾ ಗಾಯತ್ರಿಣೋಽರ್ಚನ್ತ್ಯರ್ಕಮರ್ಕಿಣಃ ।
ಬ್ರಹ್ಮಾಣಂ ತ್ವಾ ಶತಕ್ರತುಮೂರ್ಧ್ವಂ ಖಮಿವ ಮೇನಿರೇ ॥೭೩॥

ಗಾಯತ್ರೀಮಂತ್ರವನ್ನು ಜಪಮಾಡುವವರು ನಿನ್ನ ಮಹಿಮೆಯನ್ನು ಗಾನಮಾಡುತ್ತಾರೆ. ಸೂರ್ಯೋಪಾಸಕರು ಸೂರ್ಯನ ರೂಪದಲ್ಲಿ ನಿನ್ನನ್ನೇ ಆರಾಧಿಸುತ್ತಾರೆ. ಋಷಿಗಳು ನಿನ್ನನ್ನೇ ಬ್ರಹ್ಮನೆಂದೂ, ಶತಕ್ರತುವೆಂದೂ ತಿಳಿಯುತ್ತಾರೆ. ಆಕಾಶದಂತೆ ನೀನು ಎಲ್ಲರಿಗಿಂತಲೂ ಉಚ್ಚತಮನೆಂದು ತಿಳಿಯುತ್ತಾರೆ. (ಗಾಯನ್ತಿ ತ್ವಾ ಗಾಯತ್ರಿಣಃ–ಎಂಬ ಯಜುರ್ವೇದದ ಮಂತ್ರವು ಸ್ವಲ್ಪ ವ್ಯತ್ಯಾಸದಿಂದ ಇಲ್ಲಿ ಹೇಳಲ್ಪಟ್ಟಿದೆ.)

ಮೂರ್ತೌ ಹಿ ತೇ ಮಹಾಮೂರ್ತೇ ಸಮುದ್ರಾಮ್ಬರ ಸಂನಿಭ ।
ಸರ್ವಾ ವೈ ದೇವತಾ ಹ್ಯಸ್ಮಿನ್ಗಾವೋ ಗೋಷ್ಠ ಇವಾಸತೇ ॥೭೪॥

ಸಮುದ್ರ ಮತ್ತು ಆಕಾಶಗಳಿಗೆ ಸಮಾನವಾಗಿ ಅಪಾರವಾದ ಮತ್ತು ಅನಂತವಾದ ರೂಪವನ್ನು ಧರಿಸಿರುವ ಮಹಾಮೂರ್ತಿಯಾದ ಮಹೇಶ್ವರನೇ! ಯಾವ ರೀತಿಯಲ್ಲಿ ಗೋಶಾಲೆಯಲ್ಲಿ ಗೋವುಗಳು ನಿವಾಸಮಾಡುತ್ತವೆಯೋ–ಅದೇ ರೀತಿಯಲ್ಲಿ ನಿನ್ನ ಈ ಮೂರ್ತಿಯಲ್ಲಿ ಎಲ್ಲ ದೇವತೆಗಳೂ ನಿವಾಸಮಾಡುತ್ತಿದ್ದಾರೆ.

ಭವಚ್ಛರೀರೇ ಪಶ್ಯಾಮಿ ಸೋಮಮಗ್ನಿಂ ಜಲೇಶ್ವರಮ್ ।
ಆದಿತ್ಯಮಥ ವೈ ವಿಷ್ಣುಂ ಬ್ರಹ್ಮಾಣಂ ಚ ಬೃಹಸ್ಪತಿಮ್ ॥೭೫॥

ನಿನ್ನ ಶರೀರದಲ್ಲಿ ಸೋಮನನ್ನೂ, ಅಗ್ನಿಯನ್ನೂ, ವರುಣನನ್ನೂ, ಸೂರ್ಯನನ್ನೂ, ವಿಷ್ಣುವನ್ನೂ, ಬ್ರಹ್ಮನನ್ನೂ, ದೇವಗುರುವಾದ ಬೃಹಸ್ಪತಿಯನ್ನೂ ಕಾಣುತ್ತಿದ್ದೇನೆ.

ಭಗವಾನ್ಕಾರಣಂ ಕಾರ್ಯಂ ಕ್ರಿಯಾ ಕರಣಮೇವ ಚ ।
ಅಸತಶ್ಚ ಸತಶ್ಚೈವ ತಥೈವ ಪ್ರಭವಾಪ್ಯಯೌ ॥೭೬॥

ಕಾರಣ, ಕಾರ್ಯ, ಕ್ರಿಯೆ (ಪ್ರಯತ್ನ), ಕರಣ–ಎಲ್ಲವೂ ಭಗವಂತನಾದ ನೀನೇ ಆಗಿರುವೆ. ಸತ್ ಮತ್ತು ಅಸತ್ ಪದಾರ್ಥಗಳ ಉತ್ಪತ್ತಿ ಸ್ಥಾನನೂ–ಲಯಸ್ಥಾನನೂ ನೀನೇ ಆಗಿರುವೆ.

ನಮೋ ಭವಾಯ ಶರ್ವಾಯ ರುದ್ರಾಯ ವರದಾಯ ಚ ।
ಪಶೂನಾಂ ಪತಯೇ ನಿತ್ಯಂ ನಮೋಽಸ್ತ್ವನ್ಧಕಘಾತಿನೇ ॥೭೭॥

ಎಲ್ಲರ ಉತ್ಪತ್ತಿಗೂ ಕಾರಣನಾದ, ಸಂಹಾರಕ್ಕೆ ಕಾರಣನಾದ, 'ರು' ವನ್ನು ಅರ್ಥಾತ್ ಭಕ್ತರ ಪಾಪ ಮತ್ತು ದುಃಖಗಳನ್ನು–'ದ್ರಃ' ದೂರಗೊಳಿಸುವ, ಭಕ್ತವರದನಾದ, ಪಶುಪತಿಯಾದ, ಅಂಧಕಾಸುರನನ್ನು ಸಂಹಾರಮಾಡಿದ ನಿನಗೆ ನಮಸ್ಕಾರಮಾಡುತ್ತೇನೆ. (೨೬)

ತ್ರಿಜಟಾಯ ತ್ರಿಶೀರ್ಷಾಯ ತ್ರಿಶೂಲವರಪಾಣಿನೇ ।
ತ್ರ್ಯಮ್ಬಕಾಯ ತ್ರಿನೇತ್ರಾಯ ತ್ರಿಪುರಘ್ನಾಯ ವೈ ನಮಃ ॥೭೮॥

ಮೂರು ಜಟೆಗಳನ್ನು ಧರಿಸಿರುವ, ಮೂರು ಶಿರಸ್ಸುಗಳನ್ನು ಹೊಂದಿರುವ, ಶ್ರೇಷ್ಠವಾದ ತ್ರಿಶೂಲವನ್ನು ಧರಿಸಿರುವ, ತ್ರ್ಯಂಬಂಕನಾದ, ತ್ರಿನೇತ್ರನಾದ, ತ್ರಿಪುರಾಸುರರನ್ನು ನಾಶಮಾಡಿದ ನಿನಗೆ ನಮಸ್ಕಾರಮಾಡುತ್ತೇನೆ. (೩೩)

ನಮಶ್ಚಣ್ಡಾಯ ಕುಣ್ಡಾಯ ಅಣ್ಡಾಯಾಣ್ಡಧರಾಯ ಚ ।
ದಣ್ಡಿನೇ ಸಮಕರ್ಣಾಯ ದಣ್ಡಿಮುಣ್ಡಾಯ ವೈ ನಮಃ ॥೭೯॥

ದುಷ್ಟರ ವಿಷಯದಲ್ಲಿ ಕೋಪಗೊಳ್ಳುವ, ಕುಂಡದಲ್ಲಿರುವ ಜಲದಂತೆ ಹೊಟ್ಟೆಯಲ್ಲಿ ಸಂಪೂರ್ಣಜಗತ್ತನ್ನೂ ಹೊಂದಿರುವ, ಬ್ರಹ್ಮಾಂಡಸ್ವರೂಪನಾದ, ಬ್ರಹ್ಮಾಂಡವನ್ನು ಧರಿಸಿರುವ, ಪಾಪಿಷ್ಠರನ್ನು ಶಿಕ್ಷಿಸುವ, ಎಲ್ಲವನ್ನೂ ಸಮವಾಗಿ ಕೇಳಿಸಿಕೊಳ್ಳುವ, ದಂಡವನ್ನು ಧರಿಸಿರುವ, ಸಂನ್ಯಾಸಿಯಾದ ನಿನಗೆ ನಮಸ್ಕಾರಮಾಡುತ್ತೇನೆ. (೪೦)

ನಮೋರ್ಧ್ವದಂಷ್ಟ್ರಕೇಶಾಯ ಶುಕ್ಲಾಯಾವತತಾಯ ಚ ।
ವಿಲೋಹಿತಾಯ ಧೂಮ್ರಾಯ ನೀಲಗ್ರೀವಾಯ ವೈ ನಮಃ ॥೮೦॥

ಊರ್ಧ್ವಮುಖವಾದ ಹಲ್ಲುಗಳನ್ನು ಹೊಂದಿರುವ, ಊರ್ಧ್ವಮುಖವಾದ ಕೇಶಗಳುಳ್ಳ, ಶುಕ್ಲನಾದ (ವಿಶುದ್ಧಬ್ರಹ್ಮನಾದ), ಜಗತ್ತಿನ ರೂಪದಲ್ಲಿ ಸರ್ವತ್ರ ವ್ಯಾಪ್ತನಾಗಿರುವ, ರಜೋಗುಣವನ್ನು ಕಳೆದುಕೊಂಡಿರುವ, ತಮೋಗುಣಕ್ಕೆ ಆಶ್ರಯನಾಗಿರುವ, ನೀಲಕಂಠನಾದ ನಿನಗೆ ನಮಸ್ಕಾರ ಮಾಡುತ್ತೇನೆ. (೪೭)

ನಮೋಽಸ್ತ್ವಪ್ರತಿರೂಪಾಯ ವಿರೂಪಾಯ ಶಿವಾಯ ಚ ।
ಸೂರ್ಯಾಯ ಸೂರ್ಯಮಾಲಾಯ ಸೂರ್ಯಧ್ವಜಪತಾಕಿನೇ ॥೪೮॥

ಅಪ್ರತಿಮವಾದ ರೂಪವುಳ್ಳ, ವಿಧ-ವಿಧವಾದ ರೂಪಗಳನ್ನು ಧರಿಸುವ, ಮಂಗಳದಾಯಕನಾದ, ಸೂರ್ಯಸ್ವರೂಪನಾದ, ಸೂರ್ಯ ಮಂಡಲದಲ್ಲಿ ಸುಶೋಭಿತನಾಗಿರುವ, ಸೂರ್ಯಧ್ವಜನಾದ, ಸೂರ್ಯ ಪತಾಕನಾದ ನಿನಗೆ ನಮಸ್ಕಾರಮಾಡುತ್ತೇನೆ. (೫೪)

ನಮಃ ಪ್ರಮಥನಾಥಾಯ ವೃಷಸ್ಕನ್ಧಾಯ ಧನ್ವಿನೇ ।
ಶತ್ರುಂದಮಾಯ ದಣ್ಡಾಯ ಪರ್ಣಚೀರಪಟಾಯ ಚ ॥೪೨॥

ಪ್ರಮಥಗಣಗಳಿಗೆ ನಾಥನಾದ, ಎತ್ತಿನ ಹೆಗಲಿಗೆ ಸಮಾನವಾದ ಹೆಗಲನ್ನು ಹೊಂದಿರುವ, ಪಿನಾಕಧನುಸ್ಸನ್ನು ಧರಿಸಿರುವ, ಶತ್ರುಗಳನ್ನು ದಮನಮಾಡುವ, ಪಾಪಿಗಳನ್ನು ಶಿಕ್ಷಿಸುವ ದಂಡಸ್ವರೂಪನಾದ, ಕಿರಾತನ ಅಥವಾ ತಪಸ್ವಿಯ ರೂಪದಲ್ಲಿ ಸಂಚರಿಸುತ್ತಿದ್ದಾಗ ಭೂರ್ಜಪತ್ರವನ್ನೂ ವಲ್ಕಲವನ್ನೂ ಧಾರಣೆಮಾಡಿದ್ದ (ಪರ್ಣಚೀರಪಟನಾದ) ನಿನಗೆ ನಮಸ್ಕಾರ ಮಾಡುತ್ತೇನೆ. (೬೦)

ನಮೋ ಹಿರಣ್ಯಗರ್ಭಾಯ ಹಿರಣ್ಯಕವಚಾಯ ಚ ।
ಹಿರಣ್ಯಕೃತಚೂಡಾಯ ಹಿರಣ್ಯಪತಯೇ ನಮಃ ॥೪೩॥

ಹಿರಣ್ಯವನ್ನು ಗರ್ಭದಲ್ಲಿ ಧರಿಸಿರುವ (ಸುವರ್ಣದ ಉತ್ಪತ್ತಿಗೆ ಕಾರಣನಾದ), ಹಿರಣ್ಮಯವಾದ ಕವಚವನ್ನು ಧರಿಸಿರುವ, ಹಿರಣ್ಮಯವಾದ ಮುಕುಟವನ್ನು ಧರಿಸಿರುವ, ಹಿರಣ್ಯಕ್ಕೆ ಅಧಿಪತಿಯಾದ ನಿನಗೆ ನಮಸ್ಕಾರಮಾಡುತ್ತೇನೆ. (೬೪)

ನಮಃ ಸ್ತುತಾಯ ಸ್ತುತ್ಯಾಯ ಸ್ತೂಯಮಾನಾಯ ವೈ ನಮಃ ।
ಸರ್ವಾಯ ಸರ್ವಭಕ್ಷಾಯ ಸರ್ವಭೂತಾನ್ತರಾತ್ಮನೇ ॥೮೪॥

ಸ್ತುತಿಮಾಡಲ್ಪಟ್ಟ, ಸ್ತುತಿಗೆ ಯೋಗ್ಯನಾದ, ಸ್ತುತಿಮಾಡಲ್ಪಡುತ್ತಿರುವ, ಸರ್ವಸ್ವರೂಪನಾದ, ಸರ್ವಭಕ್ಷನಾದ, ಸರ್ವಪ್ರಾಣಿಗಳಲ್ಲಿಯೂ ಅಂತರಾತ್ಮನಾಗಿರುವ ನಿನಗೆ ನಮಸ್ಕಾರಮಾಡುತ್ತೇನೆ. (೭೦)

ನಮೋ ಹೋತ್ರೇಽಥ ಮನ್ತ್ರಾಯ ಶುಕ್ಲಧ್ವಜಪತಾಕಿನೇ ।
ನಮೋ ನಾಭಾಯ ನಾಭ್ಯಾಯ ನಮಃ ಕಟಕಟಾಯ ಚ ॥೮೫॥

ಹೋತೃಸ್ವರೂಪನಾದ, ಮಂತ್ರಸ್ವರೂಪನಾದ, ಶುಕ್ಲಧ್ವಜನಾದ, ಶುಕ್ಲಪತಾಕನಾದ, ನಾಭಿಯಲ್ಲಿ ಸಂಪೂರ್ಣಜಗತ್ತನ್ನೂ ಧರಿಸಿರುವ, ಸಂಸಾರಚಕ್ರಕ್ಕೆ ನಾಭಿಸ್ಥಾನನಾಗಿರುವ, ಆವರಣಕ್ಕೂ ಆವರಣನಾಗಿರುವ ನಿನಗೆ ನಮಸ್ಕಾರಮಾಡುತ್ತೇನೆ. (೭೭)

ನಮೋಽಸ್ತು ಕೃಶನಾಸಾಯ ಕೃಶಾಙ್ಗಾಯ ಕೃಶಾಯ ಚ ।
ಸಂಹೃಷ್ಟಾಯ ವಿಹೃಷ್ಟಾಯ ನಮಃ ಕಿಲಕಿಲಾಯ ಚ ॥೮೬॥

ಸಣ್ಣಗಿರುವ (ತೆಳ್ಳಗಿರುವ) ಮೂಗುಳ್ಳ, ಕೃಶವಾದ ಅಂಗಗಳನ್ನು ಹೊಂದಿರುವ, ಕೃಶವಾದ ದೇಹವನ್ನು ಹೊಂದಿರುವ, ಹರ್ಷೋಲ್ಲಾಸಗಳಿಂದ ಪರಿಪೂರ್ಣನಾದ, ವಿಶೇಷವಾದ ಹರ್ಷಾನುಭವವನ್ನು ಪಡೆದಿರುವ, ಕಿಲ-ಕಿಲನೆ ನಗುವ ನಿನಗೆ ನಮಸ್ಕಾರಮಾಡುತ್ತೇನೆ. (೮೩)

ನಮೋಽಸ್ತು ಶಯಮಾನಾಯ ಶಯಿತಾಯೋತ್ಥಿತಾಯ ಚ ।
ಸ್ಥಿತಾಯ ಧಾವಮಾನಾಯ ಮುಂಡಾಯ ಜಟಿಲಾಯ ಚ ॥೮೭॥

ಸಮಸ್ತಪ್ರಾಣಿಗಳ ಹೃದಯಗುಹೆಗಳಲ್ಲಿಯೂ ಶಯನಮಾಡುವ, ಪ್ರಳಯಕಾಲದಲ್ಲಿ ಯೋಗನಿದ್ರೆಯನ್ನು ಆಶ್ರಯಿಸಿ ಮಲಗಿರುವ, ಸೃಷ್ಟಿಯ ಪ್ರಾರಂಭಕಾಲದಲ್ಲಿ ಪುನಃ ಜಾಗ್ರತನಾಗುವ, ಬ್ರಹ್ಮರೂಪನಾಗಿ ಸರ್ವತ್ರ ಪ್ರತಿಷ್ಠಿತನಾಗಿರುವ, ಕಾಲರೂಪನಾಗಿ ಸದಾಕಾಲದಲ್ಲಿಯೂ ಓಡುತ್ತಿರುವ, ಸಂನ್ಯಾಸಿಯ ರೂಪನಾದ, ಜಟಾಧಾರಿಯಾದ ನಿನಗೆ ನಮಸ್ಕಾರಮಾಡುತ್ತೇನೆ. (೯೦)

ನಮೋ ನರ್ತನಶೀಲಾಯ ಮುಖವಾದಿತ್ರವಾದಿನೇ ।
ನಾದ್ಯೋಪಹಾರಲುಬ್ಧಾಯ ಗೀತವಾದಿತ್ರಶಾಲಿನೇ ॥೮೮॥

ತಾಂಡವನೃತ್ಯಶೀಲನಾದ, ವಾದ್ಯಗಳನ್ನು ಬಾರಿಸುವುದರಲ್ಲಿ ಕುಶಲ ನಾಗಿರುವ, ಕಮಲಪುಷ್ಪಗಳನ್ನು ಕಾಣಿಕೆಯಾಗಿ ಪಡೆಯುವುದರಲ್ಲಿ ಸರ್ವದಾ ಉತ್ಸುಕನಾಗಿರುವ, ಗಾಯನ ಮತ್ತು ವಾದನಕಲೆಗಳಲ್ಲಿ ತತ್ಪರನಾಗಿರುವ ನಿನಗೆ ನಮಸ್ಕಾರಮಾಡುತ್ತೇನೆ. (೯೪)

ನಮೋ ಜ್ಯೇಷ್ಠಾಯ ಶ್ರೇಷ್ಠಾಯ ಬಲಪ್ರಮಥನಾಯ ಚ ।
ಕಾಲನಾಥಾಯ ಕಲ್ಯಾಯ ಕ್ಷಯಾಯೋಪಕ್ಷಯಾಯ ಚ ॥೮೯॥

ಸರ್ವರಿಗೂ ಹಿರಿಯನಾಗಿರತಕ್ಕ, ಗುಣಗಳಿಂದ ಸರ್ವರಿಗೂ ಶ್ರೇಷ್ಠ ನಾಗಿರತಕ್ಕ, ಬಲನೆಂಬ ರಾಕ್ಷಸನನ್ನು ಇಂದ್ರನ ರೂಪದಲ್ಲಿ ಮಥಿಸಿದ, ಕಾಲಕ್ಕೂ ಸ್ವಾಮಿಯಾದ, ಸರ್ವಸಮರ್ಥನಾದ, ಮಹಾಪ್ರಳಯ ಮತ್ತು ಅವಾಂತರಪ್ರಳಯಸ್ವರೂಪನಾದ ನಿನಗೆ ನಮಸ್ಕಾರಮಾಡುತ್ತೇನೆ. (೧೦೦)

ಭೀಮದುಂದುಭಿಹಾಸಾಯ ಭೀಮವ್ರತಧರಾಯ ಚ ।
ಉಗ್ರಾಯ ಚ ನಮೋ ನಿತ್ಯಂ ನಮೋಽಸ್ತು ದಶಬಾಹವೇ ॥೯೦॥

ಭಯಂಕರವಾದ ದುಂದುಭಿಸ್ವನದಂತೆ ಅಟ್ಟಹಾಸಮಾಡುವ, ಭಯಂಕರ ವಾದ ವ್ರತಾನುಷ್ಠಾನಗಳನ್ನು ಮಾಡುವ, ಉಗ್ರನಾದ, ದಶಭುಜನಾದ ನಿನಗೆ ನಮಸ್ಕಾರಮಾಡುತ್ತೇನೆ. (೧೦೫)

ನಮಃ ಕಪಾಲಹಸ್ತಾಯ ಚಿತಿಭಸ್ಮಪ್ರಿಯಾಯ ಚ ।
ವಿಭೀಷಣಾಯ ಭೀಷ್ಮಾಯ ಭೀಮವ್ರತಧರಾಯ ಚ ॥೯೧॥

ಕೈಯಲ್ಲಿ ಕಪಾಲವನ್ನು ಧರಿಸಿರುವ, ಚಿತಾಭಸ್ಮಪ್ರಿಯನಾದ, ಎಲ್ಲರಿಗೂ ಭಯವನ್ನುಂಟುಮಾಡುವವನಾದ, ನಿರ್ಭಯನಾದ, ಶಮ-ದಮಾದಿ ತೀಕ್ಷ್ಣವಾದ ವತ್ರಗಳನ್ನು ಧಾರಣೆಮಾಡಿರುವ ನಿನಗೆ ನಮಸ್ಕಾರಮಾಡು ತ್ತೇನೆ. (೧೧೦)

ನಮೋ ವಿಕೃತವಕ್ತ್ರಾಯ ಖಡ್ಗಜಿಹ್ವಾಯ ದಂಷ್ಟ್ರಿಣೇ ।
ಪಕ್ವಾಮಮಾಂಸಲುಬ್ಧಾಯ ತುಮ್ಬೀವೀಣಾಪ್ರಿಯಾಯ ಚ ॥೯೨॥

ವಿಕೃತವಾದ ಮುಖವುಳ್ಳ, ಖಡ್ಗಕ್ಕೆ ಸಮಾನವಾದ ನಾಲಿಗೆಯುಳ್ಳ, ಕೋರೆಯ ಹಲ್ಲುಗಳನ್ನು ಹೊಂದಿರುವ, ಯಜ್ಞದಲ್ಲಿ ಪಕ್ವವಾದ-ಶ್ಮಶಾನದಲ್ಲಿ ಅಪಕ್ವವಾದ ಮಾಂಸದಲ್ಲಿ ಆಸಕ್ತಿಯನ್ನು ಹೊಂದಿರುವ, ತುಂಬೀ (ಸೋರೆಬುರುಡೆಯ) ವಾದ್ಯಪ್ರಿಯನಾದ, ವೀಣಾವಾದ್ಯಪ್ರಿಯನಾದ ನಿನಗೆ ನಮಸ್ಕಾರಮಾಡುತ್ತೇನೆ. (೧೧೬)

ನಮೋ ವೃಷಾಯ ವೃಷ್ಯಾಯ ಗೋವೃಷಾಯ ವೃಷಾಯ ಚ ।
ಕಟಂಕಟಾಯ ದಣ್ಡಾಯ ನಮಃ ಪಚಪಚಾಯ ಚ ॥೯೩॥

ವೃಷ್ಣಿಕರ್ತನಾಗಿರುವ, ಧರ್ಮವನ್ನು ವೃದ್ಧಿಗೊಳಿಸುವ, ನಂದೀ ಸ್ವರೂಪನಾದ, ಧರ್ಮಸ್ವರೂಪನಾದ, ನಿತ್ಯಗತಿಶೀಲನಾದ, ಶಾಸಕನಾದ, ಸಂಪೂರ್ಣಪ್ರಾಣಿಗಳನ್ನೂ (ಕಾಲವೆಂಬ ಅಗ್ನಿಯಲ್ಲಿ ಹಾಕಿ) ಪಚನಮಾಡುವ ನಿನಗೆ ನಮಸ್ಕಾರಮಾಡುತ್ತೇನೆ. (೧೩೩)

ನಮಃ ಸರ್ವವರಿಷ್ಠಾಯ ವರಾಯ ವರದಾಯ ಚ ।
ವರಮಾಲ್ಯಗನ್ಧವಸ್ತ್ರಾಯ ವರಾತಿವರದೇ ನಮಃ ॥೯೪॥

ಸರ್ವಶ್ರೇಷ್ಠನಾದ, ವರಸ್ವರೂಪನಾದ, ವರದನಾದ, ಶ್ರೇಷ್ಠವಾದ ಮಾಲೆಯನ್ನು ಧರಿಸಿರುವ, ಶ್ರೇಷ್ಠವಾದ ಗಂಧವನ್ನು ಲೇಪಿಸಿಕೊಂಡಿರುವ, ಶ್ರೇಷ್ಠವಾದ ವಸ್ತ್ರವನ್ನು ತೊಟ್ಟುಕೊಂಡಿರುವ, ಭಕ್ತನ ಇಚ್ಛಾನುಸಾರವಾಗಿ ಅಥವಾ ಅವನು ಕೇಳಿದುದಕ್ಕಿಂತಲೂ ಮಿಗಿಲಾಗಿ ವರವನ್ನು ದಯಪಾಲಿಸುವ ನಿನಗೆ ನಮಸ್ಕಾರಮಾಡುತ್ತೇನೆ. (೧೩೦)

ನಮೋ ರಕ್ತವಿರಕ್ತಾಯ ಭಾವನಾಯಾಕ್ಷಮಾಲಿನೇ ।
ಸಮ್ಭಿನ್ನಾಯ ವಿಭಿನ್ನಾಯ ಛಾಯಾಯಾತಪನಾಯ ಚ ॥೯೫॥

ರಾಗಿಯಾದ ಮತ್ತು ವಿರಾಗಿಯಾದ, ಧ್ಯಾನಪರಾಯಣನಾದ, ರುದ್ರಾಕ್ಷಮಾಲೆಯನ್ನು ಧರಿಸಿರುವ, ಕಾರಣರೂಪದಿಂದ ಎಲ್ಲದರಲ್ಲಿಯೂ ವ್ಯಾಪ್ತನಾಗಿರುವ, ಕಾರ್ಯರೂಪದಿಂದ ಪ್ರತ್ಯೇಕ-ಪ್ರತ್ಯೇಕವಾಗಿ ಕಾಣುವ, ಸಂಪೂರ್ಣಜಗತ್ತಿಗೂ ನೆರಳನ್ನೂ–ಬಿಸಿಲಿನ ತಾಪವನ್ನೂ ಉಂಟುಮಾಡುವ ನಿನಗೆ ನಮಸ್ಕರಿಸುತ್ತೇನೆ. (೧೩೮)

ಅಘೋರಘೋರರೂಪಾಯ ಘೋರಘೋರತರಾಯ ಚ ।
ನಮಃ ಶಿವಾಯ ಶಾನ್ತಾಯ ನಮಃ ಶಾನ್ತತಮಾಯ ಚ ॥೯೬॥

ಶಾಂತಸ್ವರೂಪನಾದ, ಘೋರರೂಪನಾದ, ಭಯಂಕರನಾದ, ಅತ್ಯಂತ ಭಯಂಕರನಾದ, ಮಂಗಳಸ್ವರೂಪನಾದ, ಶಾಂತಮೂರ್ತಿಯಾದ, ಅತ್ಯಂತ ಶಾಂತಸ್ವರೂಪನಾದ ನಿನಗೆ ನಮಸ್ಕರಿಸುತ್ತೇನೆ. (೧೪೫)

ಏಕಪಾದ್ಬಹುನೇತ್ರಾಯ ಏಕಶೀರ್ಷ್ಣೇ ನಮೋಽಸ್ತು ತೇ ।
ರುದ್ರಾಯ ಕ್ಷುದ್ರಲುಬ್ಧಾಯ ಸಂವಿಭಾಗಪ್ರಿಯಾಯ ಚ ॥೯೭॥

ಏಕಪಾದನಾದ, ಬಹುನೇತ್ರನಾದ, ಏಕಶೀರ್ಷನಾದ, ಭಕ್ತರು ಕೊಡುವ ಅತ್ಯಲ್ಪವಾದ ವಸ್ತುವಿನಲ್ಲಿಯೂ ಆಸಕ್ತನಾದ, ಅದಕ್ಕೆ ಪ್ರತಿಯಾಗಿ ಅಪಾರವಾದ ಫಲವನ್ನು ದಯಪಾಲಿಸುವ ರುದ್ರನಿಗೆ ನಮಸ್ಕರಿಸುತ್ತೇನೆ. (೧೫೧)

ಪಞ್ಚಾಲಾಯ ಸಿತಾಙ್ಗಾಯ ನಮಃ ಶಮಶಮಾಯ ಚ ।
ನಮಶ್ಚಣ್ಡಿಕಘಣ್ಟಾಯ ಘಣ್ಟಾಯಾಘಣ್ಟಘಣ್ಟಿನೇ ॥೯೮॥

ವಿಶ್ವಕರ್ಮನಾದ, ಗೌರಾಂಗನಾದ, ಸದಾ ಶಾಂತನಾಗಿರುವ, ಶತ್ರುಗಳಿಗೆ ಭಯವನ್ನುಂಟುಮಾಡುವ ಘಂಟೆಯನ್ನು ಧರಿಸಿರುವ, ಘಂಟಾಸ್ವರೂಪನಾಗಿರುವ, ಅನಾಹತಧ್ವನಿಯ ರೂಪದಲ್ಲಿ ಶ್ರವಣಗೋಚರನಾಗುವ ನಿನಗೆ ನಮಸ್ಕರಿಸುತ್ತೇನೆ. (೧೫೭)

ಸಹಸ್ರಾಧ್ಮಾತಘಣ್ಟಾಯ ಘಣ್ಟಾಮಾಲಾಪ್ರಿಯಾಯ ಚ ।
ಪ್ರಾಣಘಣ್ಟಾಯ ಗನ್ಧಾಯ ನಮಃ ಕಲಕಲಾಯ ಚ ॥೯೯॥

ಸಾವಿರಾರು ಜನರಿಂದ ಬಾರಿಸಲ್ಪಡುವ ಸಾವಿರಾರು ಘಂಟೆಗಳನ್ನು ಹೊಂದಿರುವ, ಘಂಟಾಮಾಲಾಪ್ರಿಯನಾದ, ಪ್ರಾಣಾದಿ ಪಂಚವಾಯುಗಳನ್ನೇ ಧ್ವನಿಮಾಡುವ ಘಂಟೆಯ ರೂಪದಲ್ಲಿ ಹೊಂದಿರುವ, ಗಂಧಸ್ವರೂಪನಾದ, ಕೋಲಾಹಲನಾದ ನಿನಗೆ ನಮಸ್ಕಾರಮಾಡುತ್ತೇನೆ. (೧೬೨)

ಹೂಂ ಹೂಂ ಹೂಂಕಾರಪಾರಾಯ ಹೂಂ ಹೂಂಕಾರ ಪ್ರಿಯಾಯ ಚ ।
ನಮಃ ಶಮಶಮೇ ನಿತ್ಯಂ ಗಿರಿವೃಕ್ಷಾಲಯಾಯ ಚ ॥೧೦೦॥

ಹೂಂ (ಕ್ರೋಧ), ಹೂಂ (ಹಿಂಕಾರ), ಹೂಂ (ಆಕಾಶ-ಸೂರ್ಯ ಮತ್ತು ಈಶ್ವರ)–ಇವೆಲ್ಲರಿಂದಲೂ ಅತೀತನಾದ, ಪರಬ್ರಹ್ಮಸ್ವರೂಪನಾಗಿರುವ, ಹೂಂ-ಹೂಂನಾದಪ್ರಿಯನಾದ, 'ಶಾಂತರಾಗಿರಿ'–'ಶಾಂತರಾಗಿರಿ'–ಎಂದು ಹೇಳುತ್ತಾ ಸಕಲರಿಗೂ ಆಶ್ವಾಸನೆಯನ್ನು ನೀಡುತ್ತಿರುವ, ಪರ್ವತವನ್ನೇ ಆಲಯವನ್ನಾಗಿ ಹೊಂದಿರುವ, ವೃಕ್ಷವನ್ನೇ ಆಲಯವನ್ನಾಗಿ ಹೊಂದಿರುವ ನಿನಗೆ ನಮಸ್ಕಾರಮಾಡುತ್ತೇನೆ. (೧೬೭)

ಗರ್ಭಮಾಂಸಸೃಗಾಲಾಯ ತಾರಕಾಯ ತರಾಯ ಚ ।
ನಮೋ ಯಜ್ಞಾಯ ಯಜಿನೇ ಹುತಾಯ ಪ್ರಹುತಾಯ ಚ ॥೧೦೧॥

ಗರ್ಭಮಾಂಸಕ್ಕೆ (ವಪೆಗೆ) ಆಸೆಪಡುವುದರಲ್ಲಿ ನರಿಯಂತಿರುವ, ಭವಬಂಧನದಿಂದ ದಾಟಿಸುವವನೂ ಹಾಗೂ ಹರಿಗೋಲೂ ಆಗಿರುವ, ಯಜ್ಞರೂಪನಾಗಿರುವ, ಯಜಮಾನರೂಪನಾಗಿರುವ, ಹವನರೂಪನಾಗಿರುವ, ಅಗ್ನಿರೂಪನಾಗಿರುವ ನಿನಗೆ ನಮಸ್ಕಾರಮಾಡುತ್ತೇನೆ. (೧೭೪)

ಯಜ್ಞವಾಹಾಯ ದಾನ್ತಾಯ ತಪ್ಯಾಯಾತಪನಾಯ ಚ ।
ಸಮಸ್ತಟಾಯ ತಟ್ಯಾಯ ತಟಾನಾಂ ಪತಯೇ ನಮಃ ॥೧೦೨॥

ಯಜ್ಞದ ನಿರ್ವಾಹಕನಾಗಿರುವ ಅಥವಾ ದೇವತೆಗಳಿಗೆ ಹವಿಸ್ಸನ್ನೊಯ್ಯುವ ಅಗ್ನಿಯ ರೂಪದಲ್ಲಿರುವ, ದಾಂತನಾಗಿರುವ, ಭಕ್ತರ ಕಷ್ಟಗಳನ್ನು ನೋಡಿ ಪರಿತಪಿಸುವ, ಶತ್ರುಗಳಿಗೆ ಸಂತಾಪವನ್ನುಂಟುಮಾಡುವ, ನದಿಗಳ ದಡದ ರೂಪದಲ್ಲಿರುವ, ದಡವನ್ನು ಹೊಂದಿರುವ ನದೀ-ನದ-ಸರೋವರ-ಸಮುದ್ರರೂಪದಲ್ಲಿರುವ, ತಟಗಳನ್ನು ಪರಿಪಾಲಿಸುವ ನಿನಗೆ ನಮಸ್ಕಾರಮಾಡುತ್ತೇನೆ. (೧೮೧)

ಅನ್ನದಾಯಾನ್ನಪತಯೇ ನಮೋಽಸ್ತ್ವನ್ನಭುಜೇ ತಥಾ ।
ನಮಃ ಸಹಸ್ರಶೀರ್ಷಾಯ ಸಹಸ್ರಚರಣಾಯ ಚ ॥೧೦೩॥

ಅನ್ನದಾತನಾಗಿರುವ, ಅನ್ನಪತಿಯಾಗಿರುವ, ಅನ್ನದ ಭೋಕ್ತೃವಾದ, ಸಹಸ್ರಶೀರ್ಷನಾದ, ಸಹಸ್ರಚರಣನಾದ ನಿನಗೆ ನಮಸ್ಕರಿಸುತ್ತೇನೆ. (೧೮೬)

ಸಹಸ್ರೋದ್ಯತಶೂಲಾಯ ಸಹಸ್ರನಯನಾಯ ಚ ।
ನಮೋ ಬಾಲಾರ್ಕವರ್ಣಾಯ ಬಾಲರೂಪಧರಾಯ ಚ ॥೧೯೪॥

ಸಾವಿರಾರು ಶೂಲಗಳನ್ನು ಎತ್ತಿಹಿಡಿದಿರುವ, ಸಾವಿರ ಕಣ್ಣುಗಳುಳ್ಳ, ಪ್ರಾತಃಕಾಲದ ಸೂರ್ಯನ ದಿವ್ಯವರ್ಣವನ್ನು ಹೊಂದಿರುವ, ಬಾಲಕನ ರೂಪವನ್ನು ಧರಿಸಿರುವ ನಿನಗೆ ನಮಸ್ಕಾರಮಾಡುತ್ತೇನೆ. (೧೯೦)

ಬಾಲಾನುಚರಗೋಪ್ತಾಯ ಬಾಲಕ್ರೀಡನಕಾಯ ಚ ।
ನಮೋ ವೃದ್ಧಾಯ ಲುಬ್ಧಾಯ ಕ್ಷುಬ್ಧಾಯ ಕ್ಷೋಭಣಾಯ ಚ ॥

ಬಾಲರಾದ ಅನುಚರರ ರಕ್ಷಕನಾಗಿರುವ, ಬಾಲಕರೊಡನೆ ಆಟವಾಡುವ, ಎಲ್ಲರಿಗಿಂತಲೂ ವೃದ್ಧನಾಗಿರುವ, ಭಕ್ತಿ ಮತ್ತು ಪ್ರೇಮಗಳ ಲೋಭಿಯಾಗಿರುವ, ದುಷ್ಟರ ಪಾಪಕಾರ್ಯಗಳನ್ನು ನೋಡಿ ಕ್ಷುಬ್ಧನಾಗಿರುವ, ದುರಾಚಾರಿಗಳನ್ನು ಕ್ಷೋಭೆಗೊಳಿಸುವ ನಿನಗೆ ನಮಸ್ಕಾರಮಾಡುತ್ತೇನೆ. (೧೯೬)

ತರಙ್ಗಾಙ್ಕಿತಕೇಶಾಯ ಮುಞ್ಜಕೇಶಾಯ ವೈ ನಮಃ ।
ನಮಃ ಷಟ್ಕರ್ಮತುಷ್ಟಾಯ ತ್ರಿಕರ್ಮನಿರತಾಯ ಚ ॥೧೯೬॥

ಗಂಗಾತರಂಗದ ಚಿಹ್ನೆಯನ್ನು ಹೊಂದಿರುವ ಕೇಶರಾಶಿಯನ್ನು ಧರಿಸಿರುವ, ಮುಂಜಹುಲ್ಲಿಗೆ ಸಮಾನವಾದ ತಲೆಗೂದಲುಗಳುಳ್ಳ, ಯಜನ-ಯಾಜನ, ಅಧ್ಯಯನ-ಅಧ್ಯಾಪನ, ದಾನ-ಪ್ರತಿಗ್ರಹಗಳೆಂಬ ಷಟ್ಕರ್ಮಗಳಿಂದ ತುಷ್ಟನಾಗುವ, ಸೃಷ್ಟಿ-ಸ್ಥಿತಿ-ಲಯ-ಈ ಮೂರು ಕರ್ಮಗಳಲ್ಲಿ ನಿರತನಾದ ನಿನಗೆ ನಮಸ್ಕಾರಮಾಡುತ್ತೇನೆ. (೨೦೦)

ವರ್ಣಾಶ್ರಮಾಣಾಂ ವಿಧಿವತ್ಪೃಥಕ್ಕರ್ಮನಿವರ್ತಿನೇ ।
ನಮೋ ಘುಷ್ಯಾಯ ಘೋಷಾಯ ನಮಃ ಕಲಕಲಾಯ ಚ ॥೧೯೭॥

ವರ್ಣಗಳ ಮತ್ತು ಆಶ್ರಮಗಳ ಕರ್ಮಗಳನ್ನು ವಿಧಿವತ್ತಾಗಿ ವಿಭಾಗಮಾಡುವ, ಜಪನೀಯಮಂತ್ರರೂಪನಾದ, ಘೋಷರೂಪನಾದ, ಕೋಲಾಹಲಮಯನಾದ ನಿನಗೆ ನಮಸ್ಕಾರಮಾಡುತ್ತೇನೆ. (೨೦೪)

ಶ್ವೇತಪಿಙ್ಗಲನೇತ್ರಾಯ ಕೃಷ್ಣರಕ್ತೇಕ್ಷಣಾಯ ಚ ।
ಪ್ರಾಣಭಗ್ನಾಯ ದಣ್ಡಾಯ ಸ್ಫೋಟನಾಯ ಕೃಶಾಯ ಚ ॥೧೯೮॥

ಶ್ವೇತನೇತ್ರನಾದ, ಪಿಂಗಲನೇತ್ರನಾದ, ಕೃಷ್ಣನೇತ್ರನಾದ, ರಕ್ತೇಕ್ಷಣನಾದ, ಪ್ರಾಣವಾಯುವನ್ನು ಜಯಿಸಿರುವ, ಆಯುಧರೂಪನಾದ, ಪ್ರಳಯ ಕಾಲದಲ್ಲಿ ಬ್ರಹ್ಮಾಂಡವನ್ನು ಸ್ಫೋಟಿಸುವ, ಕೃಶದೇಹನಾದ ನಿನಗೆ ನಮಸ್ಕರಿಸುತ್ತೇನೆ. (೨೧೨)

ಧರ್ಮಕಾಮಾರ್ಥಮೋಕ್ಷಾಣಾಂ ಕಥನೀಯಕಥಾಯ ಚ ।
ಸಾಂಖ್ಯಾಯ ಸಾಂಖ್ಯಮುಖ್ಯಾಯ ಸಾಂಖ್ಯಯೋಗಪ್ರವರ್ತಿನೇ ॥೧೦೯॥

ಭಕ್ತರಿಗೆ ಧರ್ಮಾರ್ಥ-ಕಾಮ-ಮೋಕ್ಷಗಳೆಂಬ ಚತುರ್ವಿಧಪುರುಷಾರ್ಥಗಳನ್ನೂ ದಯಪಾಲಿಸುವ ವಿಷಯದಲ್ಲಿ ಸರ್ವತ್ರ ಕೀರ್ತಿತನಾಗಿರುವ, ಸಾಂಖ್ಯನಾದ, ಸಾಂಖ್ಯಶಾಸ್ತ್ರವನ್ನು ತಿಳಿದಿರುವವರಲ್ಲಿ ಅಗ್ರಗಣ್ಯನಾದ, ಸಾಂಖ್ಯಯೋಗಪ್ರವರ್ತಕನಾದ ನಿನಗೆ ನಮಸ್ಕರಿಸುತ್ತೇನೆ. (೨೧೬)

ನಮೋ ರಥ್ಯವಿರಥ್ಯಾಯ ಚತುಷ್ಪಥರಥಾಯ ಚ ।
ಕೃಷ್ಣಾಜಿನೋತ್ತರೀಯಾಯ ವ್ಯಾಲಯೋಜ್ಞೋಪವೀತಿನೇ ॥೧೧೦॥

ರಥದಲ್ಲಿ ಸಂಚರಿಸುವ, ರಥವಿಲ್ಲದೆಯೇ ಸಂಚರಿಸುವ, ಜಲ-ಅಗ್ನಿ-ವಾಯು ಮತ್ತು ಆಕಾಶಗಳೆಂಬ ನಾಲ್ಕು ಮಾರ್ಗಗಳಲ್ಲಿಯೂ ಸಂಚರಿಸುವ ರಥವುಳ್ಳ, ಕೃಷ್ಣಾಜಿನವನ್ನೇ ಉತ್ತರೀಯವನ್ನಾಗಿ ಧರಿಸಿರುವ, ಸರ್ಪವನ್ನೇ ಯಜ್ಞೋಪವೀತವನ್ನಾಗಿ ಧರಿಸಿರುವ ನಿನಗೆ ನಮಸ್ಕರಿಸುತ್ತೇನೆ. (೨೨೧)

ಈಶಾನ ವಜ್ರಸಂಘಾತ ಹರಿಕೇಶ ನಮೋಽಸ್ತು ತೇ ।
ತ್ರ್ಯಮ್ಬಕಾಮ್ಬಿಕನಾಥಾಯ ವ್ಯಕ್ತಾವ್ಯಕ್ತ ನಮೋಽಸ್ತು ತೇ ॥೧೧೧॥

ಈಶಾನಮೂರ್ತಿಯೇ! ವಜ್ರಕ್ಕೆ ಸಮಾನವಾದ ಶರೀರವುಳ್ಳವನೇ! ಹರಿಕೇಶನೇ! ನಿನಗೆ ನಮಸ್ಕರಿಸುತ್ತೇನೆ. ವ್ಯಕ್ತಾವ್ಯಕ್ತನೇ! ಮುಕ್ಕಣ್ಣನಾದ ಅಂಬಿಕಾಪತಿಯಾದ ನಿನಗೆ ನಮಸ್ಕರಿಸುತ್ತೇನೆ. (೨೨೮)

ಕಾಮ ಕಾಮದ ಕಾಮಘ್ನ ತೃಪ್ತಾತೃಪ್ತವಿಚಾರಿಣೇ ।
ಸರ್ವ ಸರ್ವದ ಸರ್ವಘ್ನ ಸಂಧ್ಯಾರಾಗ ನಮೋಽಸ್ತು ತೇ ॥೧೧೨॥

ಕಾಮಸ್ವರೂಪನೇ! ಕಾಮನೆಗಳನ್ನು ಪೂರ್ಣಗೊಳಿಸುವವನೇ!

ಕಾಮದೇವವಿನಾಶಕನೇ! ತೃಪ್ತರನ್ನು ವಿಚಾರಿಸುವವನೇ! ಅತೃಪ್ತರನ್ನೂ ವಿಚಾರಿಸುವವನೇ! ಸರ್ವನೇ! ಸರ್ವವನ್ನೂ ದಯಪಾಲಿಸುವವನೇ! ಸರ್ವವನ್ನೂ ಸಂಹರಿಸುವವನೇ! ಸಂಧ್ಯಾರಾಗನೇ! ನಿನಗೆ ನಮಸ್ಕರಿಸುತ್ತೇನೆ. (೨೩೭)

ಮಹಾಬಲ ಮಹಾಬಾಹೋ ಮಹಾಸತ್ತ್ವ ಮಹಾದ್ಯುತೇ ।
ಮಹಾಮೇಘಚಯಪ್ರಖ್ಯ ಮಹಾಕಾಲ ನಮೋಽಸ್ತು ತೇ ॥೧೧೩॥

ಮಹಾಬಲನೇ! ಮಹಾಬಾಹುವೇ! ಮಹಾಸತ್ತ್ವನೇ! ಮಹಾದ್ಯುತಿಯೇ! ಮಹಾಮೇಘಸಮೂಹಕ್ಕೆ ಸಮಾನವಾದ ಕಾಂತಿಯಿಂದ ಕೂಡಿರುವವನೇ! ಮಹಾಕಾಲನೇ! ನಿನಗೆ ನಮಸ್ಕಾರಮಾಡುತ್ತೇನೆ. (೨೪೩)

ಸ್ಥೂಲ ಜೀರ್ಣಾಙ್ಗ ಜಟಿಲೇ ವಲ್ಕಲಾಜಿನಧಾರಿಣೇ ।
ದೀಪ್ತಸೂರ್ಯಾಗ್ನಿಜಟಿಲೇ ವಲ್ಕಲಾಜಿನವಾಸಸೇ ।
ಸಹಸ್ರಸೂರ್ಯಪ್ರತಿಮ ತಪೋನಿತ್ಯ ನಮೋಽಸ್ತು ತೇ ॥೧೧೪॥

ಸ್ಥೂಲಸ್ವರೂಪನೇ! ಜೀರ್ಣವಾದ ಅಂಗವುಳ್ಳವನೇ! ಜಟಾಧಾರಿಯೇ! ನಾರುಮಡಿಯನ್ನೂ ಮೃಗಚರ್ಮವನ್ನೂ ಧರಿಸಿರುವವನೇ! ಸೂರ್ಯಾಗ್ನಿಗಳ ಪ್ರಭೆಗೆ ಸಮಾನವಾದ ಪ್ರಭೆಯನ್ನು ಹೊಂದಿರುವ ದೇದೀಪ್ಯಮಾನ ವಾಗಿರುವ ಜಟೆಯನ್ನು ಧರಿಸಿರುವವನೇ! ನಾರುಮಡಿಯನ್ನೂ, ಗಜ ಚರ್ಮವನ್ನೂ ವಸ್ತ್ರವನ್ನಾಗಿ ಧರಿಸಿರುವವನೇ! ಸಾವಿರ ಸೂರ್ಯರಿಗೆ ಸಮಾನವಾದ ತೇಜಸ್ಸಿನಿಂದ ಬೆಳಗುವವನೇ! ನಿತ್ಯವೂ ತಪಸ್ಸಿನಲ್ಲಿ ನಿರತನಾದವನೇ! ನಿನಗೆ ನಮಸ್ಕರಿಸುತ್ತೇನೆ. (೨೫೦)

ಉನ್ಮಾದನ ಶತಾವರ್ತ ಗಙ್ಗಾತೋಯಾರ್ದ್ರಮೂರ್ಧಜ ।
ಚನ್ದ್ರಾವರ್ತ ಯುಗಾವರ್ತ ಮೇಘಾವರ್ತ ನಮೋಽಸ್ತು ತೇ ॥೧೧೫॥

ಜಗತ್ತನ್ನು ಮೋಹಗೊಳಿಸುವವನೇ! ನೂರು ಸುಳಿಗಳಿರತಕ್ಕವನೇ! ಗಂಗೆಯ ನೀರಿನಿಂದ ತೋಯ್ದ ಕೂದಲಿನಿಂದ ಕೂಡಿರುವವನೇ! ಚಂದ್ರನ ಕ್ಷಯ-ವೃದ್ಧಿಗಳೆಂಬ ಆವೃತ್ತಿಗಳಿಗೆ ಕಾರಣನಾದವನೇ! ಯುಗಗಳ ಪುನರಾ

ವರ್ತನಗಳಿಗೆ ಕಾರಣನಾದವನೇ! ಮೇಘಗಳ ಪ್ರವರ್ತಕನೇ! ನಿನಗೆ ನಮಸ್ಕಾರಮಾಡುತ್ತೇನೆ. (೨೫೬)

ತ್ವಮನ್ನಮನ್ನಭೋಕ್ತಾ ಚ ಅನ್ನದೋಽನ್ನಭುಗೇವ ಚ ।
ಅನ್ನಸ್ರಷ್ಟಾ ಚ ಪಕ್ತಾ ಚ ಪಕ್ವಭುಕ್ಪವನೋಽನಲಃ ॥೧೧೬॥

ನೀನು ಅನ್ನಸ್ವರೂಪನು. ಅನ್ನದ ಭೋಕ್ತೃವು. ಅನ್ನದಾತನು. ಅನ್ನದ ರಕ್ಷಕನು. ಅನ್ನದ ಸ್ರಷ್ಟೃವು. ಅನ್ನವನ್ನು ಬೇಯಿಸುವವನು. ಪಕ್ವವಾದ ಅನ್ನವನ್ನು ತಿನ್ನುವವನು. ಪ್ರಾಣವಾಯುಸ್ವರೂಪನು. ಜಠರಾಗ್ನಿಸ್ವರೂಪನು. ಅಂತಹ ನಿನಗೆ ನಮಸ್ಕಾರಮಾಡುತ್ತೇನೆ. (೨೬೫)

ಜರಾಯುಜಾಣ್ಡಜಾಶ್ಚೈವ ಸ್ವೇದಜಾಶ್ಚ ತಥೋದ್ಭಿಜಾಃ ।
ತ್ವಮೇವ ದೇವದೇವೇಶ ಭೂತಗ್ರಾಮಶ್ಚತುರ್ವಿಧಃ ॥೧೧೭॥

ದೇವದೇವೇಶ್ವರ! ಜರಾಯುಜ, ಅಂಡಜ, ಸ್ವೇದಜ ಮತ್ತು ಉದ್ಭಿಜ್ಜ ಎಂಬ ನಾಲ್ಕು ಪ್ರಕಾರವಾದ ಪ್ರಾಣಿಸಮೂಹವೂ ನೀನೇ ಆಗಿರುವೆ. (೨೭೨)

ಚರಾಚರಸ್ಯ ಸ್ರಷ್ಟಾ ತ್ವಂ ಪ್ರತಿಹರ್ತಾ ತಥೈವ ಚ ।
ತ್ವಾಮಾಹುರ್ಬ್ರಹ್ಮವಿದುಷೋ ಬ್ರಹ್ಮ ಬ್ರಹ್ಮವಿದಾಂ ವರ ॥೧೧೮॥

ಬ್ರಹ್ಮವಿದರಲ್ಲಿ ಶ್ರೇಷ್ಠನಾದವನೇ! ಚರಾಚರಜಗತ್ತನ್ನು ಸೃಷ್ಟಿಮಾಡುವವನೂ ಮತ್ತು ಸಂಹಾರಮಾಡುವವನೂ ನೀನೇ ಆಗಿರುವೆ. ಬ್ರಹ್ಮವಿದರಾದವರು ನಿನ್ನನ್ನು 'ಬ್ರಹ್ಮ'–ಎಂದು ಹೇಳುತ್ತಾರೆ. (೨೭೬)

ಮನಸಃ ಪರಮಾ ಯೋನಿಃ ಖಂ ವಾಯುರ್ಜ್ಯೋತಿಷಾಂ ನಿಧಿಃ ।
ಋಕ್ಸಾಮಾನಿ ತಥೋಙ್ಕಾರಮಾಹುಸ್ತ್ವಾಂ ಬ್ರಹ್ಮವಾದಿನಃ ॥೧೧೯॥

ಬ್ರಹ್ಮವಾದಿಗಳಾದ ವಿದ್ವಾಂಸರು ನಿನ್ನನ್ನು ಮನಸ್ಸಿಗೆ ಪರಮಕಾರಣನೆಂದು ಹೇಳುತ್ತಾರೆ. ಆಕಾಶವೂ ಮತ್ತು ವಾಯುವೂ ನೀನೇ. ನಿನ್ನನ್ನು ತೇಜಸ್ಸುಗಳಿಗೆ ನಿಧಿಸ್ವರೂಪನೆಂದೂ ಹೇಳುತ್ತಾರೆ. ಋಕ್ಸಾಮಸ್ವರೂಪನೆಂದೂ–ಓಂಕಾರಸ್ವರೂಪನೆಂದೂ ಹೇಳುತ್ತಾರೆ. (೨೮೨)

ಹಾಯಿಹಾಯಿ ಹುವಾಹಾಯಿಹಾವುಹಾಯಿ ತಥಾಸಕೃತ್ ।
ಗಾಯನ್ತಿ ತ್ವಾಂ ಸುರಶ್ರೇಷ್ಠ ಸಾಮಗಾ ಬ್ರಹ್ಮವಾದಿನಃ ॥೧೨೦॥

ಸುರಶ್ರೇಷ್ಠನೇ! ಸಾಮಗಾನವನ್ನು ಮಾಡುವ ವೇದಾಧ್ಯಾಯಿಗಳು ಹಾ೩ಯಿ । ಹಾ೩ಯಿ । ಹುವಾ೩ । ಹಾ೩ಯಿ । ಹಾ೩ವು । ಹಾ೩ಯಿ । ಇವೇ ಮುಂತಾದ ವೇದಾಕ್ಷರಗಳಿಂದ ಹಲವಾರು ಬಾರಿ ನಿನ್ನ ಮಹಿಮೆಯನ್ನು ಗಾನಮಾಡುತ್ತಾರೆ. (೨೮೬)

ಯಜುರ್ಮಯೋ ಋಙ್ಮಯಶ್ಚ ತ್ವಮಾಹುತಿಮಯಸ್ತಥಾ ।
ಪಠ್ಯಸೇ ಸ್ತುತಿಭಿಶ್ಚೈವ ವೇದೋಪನಿಷದಾಂ ಗಣೈಃ ॥೧೨೧॥

ನೀನು ಯಜುರ್ವೇದಮಯನಾಗಿರುವೆ. ಋಗ್ವೇದಮಯನಾಗಿರುವೆ. ನಿನ್ನನ್ನು ಆಹುತಿಮಯನೆಂದೂ ಹೇಳುತ್ತಾರೆ. ವೇದಗಳೂ ಮತ್ತು ಉಪ ನಿಷತ್ತುಗಳೂ–ಮಂತ್ರಸಮೂಹಗಳ ಮೂಲಕವಾಗಿ–ನಿನ್ನ ಮಹಿಮೆಯನ್ನೇ ಪ್ರತಿಪಾದಿಸುತ್ತವೆ. (೨೯೧)

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ವರ್ಣಾವರಾಶ್ಚ ಯೇ ।
ತ್ವಮೇವ ಮೇಘಸಂಘಾಶ್ಚ ವಿದ್ಯುತ್ಸ್ತನಿತಗರ್ಜಿತಃ ॥೧೨೨॥

ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಮತ್ತು ಅಂತ್ಯಜರು ಇವರೆಲ್ಲರೂ ನಿನ್ನ ಸ್ವರೂಪರೇ ಆಗಿದ್ದಾರೆ. ಮೇಘಗಳ ಸಮೂಹ, ಮಿಂಚು, ಗುಡುಗು, ಸಿಡಿಲು–ಇವುಗಳೆಲ್ಲವೂ ನೀನೇ ಆಗಿರುವೆ. (೩೦೦)

ಸಂವತ್ಸರಸ್ತ್ವಮೃತವೋ ಮಾಸೋ ಮಾಸಾರ್ಧಮೇವ ಚ ।
ಯುಗಂ ನಿಮೇಷಾಃ ಕಾಷ್ಠಾಸ್ತ್ವಂ ನಕ್ಷತ್ರಾಣಿ ಗ್ರಹಾಃ ಕಲಾಃ ॥೧೨೩॥

ಸಂವತ್ಸರ, ಋತು, ಮಾಸ, ಪಕ್ಷ, ಯುಗ, ನಿಮೇಷ, ಕಾಷ್ಠಾ, ನಕ್ಷತ್ರ, ಗ್ರಹ ಮತ್ತು ಕಲಾ–ಇವುಗಳೆಲ್ಲವೂ ನೀನೇ ಆಗಿರುವೆ. (೩೧೦)

ವೃಕ್ಷಾಣಾಂ ಕಕುದೋಽಸಿ ತ್ವಂ ಗಿರೀಣಾಂ ಶಿಖರಾಣಿ ಚ ।
ವ್ಯಾಘ್ರೋ ಮೃಗಾಣಾಂ ಪತತಾಂ ತಾರ್ಕ್ಷ್ಯೋಽನನ್ತಶ್ಚ ಭೋಗಿನಾಮ್ ॥೧೨೪॥

ವೃಕ್ಷಗಳಲ್ಲಿ ವೃಕ್ಷಶ್ರೇಷ್ಠವಾದ ಅಶ್ವತ್ಥನು ನೀನೇ ಆಗಿರುವೆ. ಪರ್ವತ ಗಳಲ್ಲಿ ಶಿಖರಗಳು ನೀನು. ಮೃಗಗಳಲ್ಲಿ ವ್ಯಾಘ್ರನಾಗಿರುವೆ. ಪಕ್ಷಿಗಳಲ್ಲಿ ಗರುಡನಾಗಿರುವೆ. ಸರ್ಪಗಳಲ್ಲಿ ಅನಂತನಾಗಿರುವೆ. (೩೧೪)

ಕ್ಷೀರೋದೋ ಹ್ಯುದಧೀನಾಂ ಚ ಯನ್ತ್ರಾಣಾಂ ಧನುರೇವ ಚ ।
ವಜ್ರಃ ಪ್ರಹರಣಾನಾಂ ಚ ವ್ರತಾನಾಂ ಸತ್ಯಮೇವ ಚ ॥೧೨೫॥

ಸಮುದ್ರಗಳಲ್ಲಿ ಕ್ಷೀರಸಾಗರವಾಗಿರುವೆ. ಯಂತ್ರಗಳಲ್ಲಿ (ಅಸ್ತ್ರಗಳಲ್ಲಿ) ಧನುಸ್ಸಾಗಿರುವೆ. ಪ್ರಹರಿಸುವ ಆಯುಧಗಳಲ್ಲಿ ವಜ್ರಾಯುಧನಾಗಿರುವೆ. ವ್ರತಗಳಲ್ಲಿ ಸತ್ಯವಾಗಿರುವೆ. (೩೧೯)

ತ್ವಮೇವ ದ್ವೇಷ ಇಚ್ಛಾ ಚ ರಾಗೋ ಮೋಹಃ ಕ್ಷಮಾಕ್ಷಮೇ ।
ವ್ಯವಸಾಯೋ ಧೃತಿರ್ಲೋಭಃ ಕಾಮಕ್ರೋಧೌ ಜಯಾಜಯೌ ॥

ದ್ವೇಷ, ಇಚ್ಛೆ, ರಾಗ, ಮೋಹ, ಕ್ಷಮೆ, ಅಕ್ಷಮೆ, ವ್ಯವಸಾಯ, ಧೈರ್ಯ, ಲೋಭ, ಕಾಮ, ಕ್ರೋಧ, ಜಯ, ಪರಾಜಯ–ಇವೆಲ್ಲವೂ ನೀನೇ ಆಗಿರುವೆ. (೩೬೨)

ತ್ವಂ ಗದೀ ತ್ವಂ ಶರೀ ಚಾಪೀ ಖಟ್ವಾಙ್ಗೀ ಝರ್ಝರೀ ತಥಾ ।
ಛೇತ್ತಾ ಭೇತ್ತಾ ಪ್ರಹರ್ತಾ ತ್ವಂ ನೇತಾ ಮನ್ತಾ ಪಿತಾ ಮತಃ ॥

ನೀನು ಗದೆಯುಳ್ಳವನು ; ಶರವುಳ್ಳವನು ; ಚಾಪವುಳ್ಳವನು ; ತ್ರಿಶೂಲವುಳ್ಳವನು ; ಝರ್ಝರವೆಂಬ ಹೆಸರಿನ ಅಸ್ತ್ರವುಳ್ಳವನು ; ಛೇದಕನು ; ಭೇದಕನು ; ಪ್ರಹಾರಕನೂ ನೀನೇ ಆಗಿರುವೆ. ಸತ್ಪಥದಲ್ಲಿ ಒಯ್ಯುವವನು, ಶುಭವನ್ನು ಮನನಮಾಡುವವನು ಮತ್ತು ತಂದೆ ಎಲ್ಲವೂ ನೀನೇ ಆಗಿರುವೆ. (೩೪೩)

ದಶಲಕ್ಷಣಸಂಯುಕ್ತೋ ಧರ್ಮೋಽರ್ಥಃ ಕಾಮ ಏವ ಚ ।
ಗಙ್ಗಾ ಸಮುದ್ರಾಃ ಸರಿತಃ ಪಲ್ವಲಾನಿ ಸರಾಂಸಿ ಚ ॥೧೨೮॥
ಲತಾ ವಲ್ಯಸ್ತೃಣೌಷಧ್ಯಃ ಪಶವೋ ಮೃಗಪಕ್ಷಿಣಃ ।
ದ್ರವ್ಯಕರ್ಮಸಮಾರಮ್ಭಃ ಕಾಲಃ ಪುಷ್ಪಫಲಪ್ರದಃ ॥೧೨೯॥

ಹತ್ತು ಲಕ್ಷಣಗಳಿಂದ ಕೂಡಿರುವ ಧರ್ಮ, ಅರ್ಥ ಮತ್ತು ಕಾಮಗಳು ನೀನೇ ಆಗಿರುವೆ. ಗಂಗೆ, ಸಮುದ್ರ, ನದಿಗಳು, ಸಣ್ಣಕೊಳಗಳು, ಸರೋವರ ಗಳು, ಲತೆಗಳು, ಬಳ್ಳಿಗಳು, ತೃಣಗಳು, ಓಷಧಿಗಳು, ಪಶುಗಳು, ಮೃಗಗಳು, ಪಕ್ಷಿಗಳು, ದ್ರವ್ಯಯುಕ್ತವಾದ ಕರ್ಮಸಮಾರಂಭಗಳು, ಫಲ-ಪುಷ್ಪಗಳನ್ನು ಕೊಡುವ ಕಾಲ–ಎಲ್ಲವೂ ನೀನೇ ಆಗಿರುವೆ. (೩೬೧)

ಆದಿಶ್ಚಾನ್ತಶ್ಚ ದೇವಾನಾಂ ಗಾಯತ್ರ್ಯೋಙ್ಕಾರ ಏವ ಚ ।
ಹರಿತೋ ರೋಹಿತೋ ನೀಲಃ ಕೃಷ್ಣೋ ರಕ್ತಸ್ತಥಾರುಣಃ ।
ಕದ್ರುಶ್ಚ ಕಪಿಲಶ್ಚೈವ ಕಪೋತೋ ಮೇಚಕಸ್ತಥಾ ॥೧೩೦॥

ದೇವತೆಗಳ ಆದಿಯೂ ಮತ್ತು ಅಂತ್ಯನೂ ನೀನೇ ಆಗಿರುವೆ. ಗಾಯತ್ರೀ ಮತ್ತು ಓಂಕಾರಗಳೂ ನೀನೇ ಆಗಿರುವೆ. ಹರಿತ, ಲೋಹಿತ, ನೀಲ, ಕೃಷ್ಣ, ರಕ್ತ, ಅರುಣ, ಕದ್ರು, ಕಪಿಲ, ಕಪೋತ ಮತ್ತು ಮೇಚಕ ಈ ಹತ್ತು ವಿಧವಾದ ವರ್ಣಗಳೂ ನೀನೇ ಆಗಿರುವೆ. (೩೭೫)

ಅವರ್ಣಶ್ಚ ಸುವರ್ಣಶ್ಚ ವರ್ಣಕಾರೋ ಘನೋಪಮಃ ।
ಸುವರ್ಣನಾಮಾ ಚ ತಥಾ ಸುವರ್ಣಪ್ರಿಯ ಏವ ಚ ॥೧೩೧॥

ವರ್ಣರಹಿತನಾದುದರಿಂದ ಅವರ್ಣನೆಂದೂ, ಒಳ್ಳೆಯ ವರ್ಣದವನಾದುದರಿಂದ ಸುವರ್ಣನೆಂದೂ ನಿನ್ನನ್ನು ಕರೆಯುತ್ತಾರೆ. ವರ್ಣಗಳನ್ನು ಸೃಷ್ಟಿಸುವವನೂ ನೀನೇ ಆಗಿರುವೆ. ಮೇಘಕ್ಕೆ ಸಮಾನನಾಗಿರುವೆ. ನೀನು ಸುವರ್ಣನಾಮನು. ಸುವರ್ಣಪ್ರಿಯನೂ ಆಗಿರುವೆ. (೩೮೧)

ತ್ವಮಿನ್ದ್ರಶ್ಚ ಯಮಶ್ಚೈವ ವರುಣೋ ಧನದೋಽನಲಃ ।
ಉಪಪ್ಲವಶ್ಚಿತ್ರಭಾನುಃ ಸ್ವರ್ಭಾನುರ್ಭಾನುರೇವ ಚ ॥೧೩೨॥

ಇಂದ್ರ, ಯಮ, ವರುಣ, ಕುಬೇರ, ಅಗ್ನಿ, ಸೂರ್ಯ-ಚಂದ್ರ ಗ್ರಹಣಗಳು (ಕೇತು) ಚಿತ್ರಭಾನು (ಸೂರ್ಯ) ರಾಹು ಮತ್ತು ಭಾನು–ಈ ಎಲ್ಲರೂ ನಿನ್ನ ಸ್ವರೂಪರೇ ಆಗಿದ್ದಾರೆ. (೩೯೦)

ಹೋತ್ರಂ ಹೋತಾ ಚ ಹೋಮ್ಯಂ ಚ ಹುತಂ ಚೈವ ತಥಾ ಪ್ರಭುಃ ।
ತ್ರಿಸೌಪರ್ಣಂ ತಥಾ ಬ್ರಹ್ಮ ಯಜುಷಾಂ ಶತರುದ್ರಿಯಮ್ ॥೧೩೩॥

ಹೋತ್ರ (ಅಗ್ನಿ), ಹೋತಾ, ಹೋಮಮಾಡುವ ಪದಾರ್ಥ, ಹವನ ಕ್ರಿಯೆ ಮತ್ತು ಇವುಗಳಿಗೆ ಫಲದಾಯಕನಾದ ಪ್ರಭು–ಎಲ್ಲವೂ ನೀನೇ ಆಗಿರುವೆ. ಯಜುರ್ವೇದದ ತ್ರಿಸುಪರ್ಣದಲ್ಲಿ (ಈ ಹೆಸರಿನ ವೇದಮಂತ್ರಗಳಲ್ಲಿ) ಮತ್ತು ಯಜುರ್ವೇದದ ಶತರುದ್ರಿಯಪ್ರಕರಣದಲ್ಲಿ ಅನೇಕ ವೈದಿಕನಾಮಗಳಿವೆ. ಆ ಶುಭನಾಮಗಳೆಲ್ಲವೂ ನಿನ್ನವುಗಳೇ ಆಗಿವೆ. (೩೯೮)

ಪವಿತ್ರಂ ಚ ಪವಿತ್ರಾಣಾಂ ಮಙ್ಗಲಾನಾಂ ಚ ಮಙ್ಗಲಮ್ ।
ಗಿರಿಕೋ ಹಿಂಡುಕೋ ವೃಕ್ಷೋ ಜೀವಃ ಪುದ್ಗಲ ಏವ ಚ ॥೧೩೪॥

ಪ್ರಾಣಃ ಸತ್ತ್ವಂ ರಜಶ್ಚೈವ ತಮಶ್ಚಾಪ್ರಮದಸ್ತಥಾ ।
ಪ್ರಾಣೋಽಪಾನಃ ಸಮಾನಶ್ಚ ಉದಾನೋ ವ್ಯಾನ ಏವ ಚ ॥೧೩೫॥

ಉನ್ಮೇಷಶ್ಚ ನಿಮೇಷಶ್ಚ ಕ್ಷುತಂ ಜೃಮ್ಭಿತಮೇವ ಚ ।
ಲೋಹಿತಾನ್ತರ್ಗತಾ ದೃಷ್ಟಿರ್ಮಹಾವಕ್ತ್ರೋ ಮಹೋದರಃ ॥೧೩೬॥

ಪವಿತ್ರಗಳಲ್ಲಿ ಪವಿತ್ರನೂ, ಮಂಗಳಗಳಲ್ಲಿ ಮಂಗಳನೂ ನೀನೇ ಆಗಿರುವೆ. ನೀನು ಗಿರಿಕನು (ಅಚೇತನವಾದುದನ್ನು ಸಚೇತನವನ್ನಾಗಿ ಮಾಡುವವನು.) ಹಿಂಡುಕನು (ಗಮನಾಗಮನವನ್ನು ಮಾಡುವವನು.) ಸಂಸಾರವೃಕ್ಷ, ಜೀವ, ಶರೀರ, ಪ್ರಾಣ, ಸತ್ತ್ವ, ರಜಸ್ಸು, ತಮಸ್ಸು, ಅಪ್ರಮಾದ, ಪ್ರಾಣ, ಅಪಾನ, ಸಮಾನ, ಉದಾನ, ವ್ಯಾನ, ಉನ್ಮೇಷ, ನಿಮೇಷ, ಸೀನುವುದು, ಆಕಳಿಸುವುದು–ಇತ್ಯಾದಿ ಚೇಷ್ಟೆಗಳೆಲ್ಲವೂ ನೀನೇ ಆಗಿರುವೆ. ನಿನ್ನ ಅಗ್ನಿರೂಪವಾದ ಲೋಹಿತದೃಷ್ಟಿಯು ಅಂತರ್ಮುಖ ವಾಗಿದೆ. ನೀನು ಮಹಾವಕ್ತ್ರನೂ ಮಹೋದರನೂ ಆಗಿರುವೆ. (೪೩೨)

ಸೂಚೀರೋಮಾ ಹರಿಶ್ಮಶ್ರುರೂರ್ಧ್ವಕೇಶಶ್ಚಲಾಚಲಃ ।
ಗೀತವಾದಿತ್ರತತ್ತ್ವಜ್ಞೋ ಗೀತವಾದನಕಪ್ರಿಯಃ ॥೧೩೭॥

ಸೂಜಿಯಂತೆ ಕೂದಲುಗಳನ್ನು ಹೊಂದಿರುವ, ಕಂದುಬಣ್ಣದ ಮೀಸೆ-ದಾಡಿಗಳನ್ನು ಹೊಂದಿರುವ, ಊರ್ಧ್ವಕೇಶನಾದ, ಚರಾಚರಸ್ವರೂಪ ನಾದ, ಗೀತ-ವಾದ್ಯಗಳ ತತ್ತ್ವಜ್ಞನಾದ, ಗೀತ-ವಾದನಪ್ರಿಯನಾದ ನಿನಗೆ ನಮಸ್ಕರಿಸುತ್ತೇನೆ. (೪೩೮)

ಮತ್ಸ್ಯೋ ಜಲಚರೋ ಜಾಲ್ಯೋಽಕಲಃ ಕೇಲಿಕಲಃ ಕಲಿಃ ।
ಅಕಾಲಶ್ಚಾತಿಕಾಲಶ್ಚ ದುಷ್ಕಾಲಃ ಕಾಲ ಏವ ಚ ॥೧೩೮॥

ನೀನು ಮತ್ಸ್ಯರೂಪನಾಗಿರುವೆ. ಜಲಚರನಾಗಿರುವೆ. ಮೊಸಳೆಯ ರೂಪನಾಗಿರುವೆ. ಅವಯವಗಳಿಲ್ಲದವನಾಗಿರುವೆ. ಕೇಲಿಕಲೆಯಲ್ಲಿ ನಿಷ್ಣಾತನಾಗಿರುವೆ. ಕಲಹರೂಪನಾಗಿರುವೆ. ನೀನು ಅಕಾಲನೂ, ಅತಿ

ಕಾಲನೂ, ದುಷ್ಕಾಲನೂ ಮತ್ತು ಕಾಲನೂ ಆಗಿರುವೆ. ಅಂತಹ ನಿನಗೆ ನಮಸ್ಕಾರಮಾಡುತ್ತೇನೆ. (೪೪೮)

ಮೃತ್ಯುಃ ಕ್ಷುರಶ್ಚ ಕೃತ್ಯಶ್ಚ ಪಕ್ಷೋಽಪಕ್ಷಕ್ಷಯಂಕರಃ ।
ಮೇಘಕಾಲೋ ಮಹಾದಂಷ್ಟ್ರಃ ಸಂವರ್ತಕಬಲಾಹಕಃ ॥೧೩೯॥

ನೀನು ಮೃತ್ಯುವಾಗಿರುವೆ. ಕ್ಷುರನಾಗಿರುವೆ. (ಛೇದನಮಾಡುವ ಶಸ್ತ್ರವಾಗಿರುವೆ.) ಕೃತ್ಯವಾಗಿರುವೆ. (ಛೇದನಮಾಡಲ್ಪಡುವ ಪದಾರ್ಥ ವಾಗಿರುವೆ.) ಸತ್ಪುರುಷರ ಪಕ್ಷವನ್ನು ವಹಿಸುವವನಾಗಿರುವೆ. ಶತ್ರುಪಕ್ಷದ ನಾಶವನ್ನುಂಟುಮಾಡುವವನಾಗಿರುವೆ. ಮೇಘದಂತೆ ಕೃಷ್ಣವರ್ಣದವನಾಗಿ ರುವೆ. ಮಹಾದಂಷ್ಟ್ರನಾಗಿರುವೆ. ಪ್ರಳಯಕಾಲದ ಮೇಘಸ್ವರೂಪನಾಗಿ ರುವೆ. ಅಂತಹ ನಿನಗೆ ನಮಸ್ಕಾರಮಾಡುತ್ತೇನೆ. (೪೫೬)

ಘಣ್ಟೋಽಘಣ್ಟೋ ಘಟೀ ಘಣ್ಟೀ ಚರುಚೇಲೀ ಮಿಲೀಮಿಲೀ ।
ಬ್ರಹ್ಮಕಾಯಿಕಮಗ್ನೀನಾಂ ದಣ್ಡೀ ಮುಣ್ಡಸ್ತ್ರಿದಣ್ಡಧೃಕ್ ॥೧೪೦॥

ನೀನು ಘಂಟನು (ಪ್ರಕಾಶಮಾನನು), ಅಘಂಟನು (ಅವ್ಯಕ್ತವಾದ ಪ್ರಕಾಶವುಳ್ಳವನು), ಘಟಿಯು (ಮನುಷ್ಯರನ್ನು ಕರ್ಮಫಲದೊಡನೆ ಸಂಘಟಿಸುವವನು), ಘಂಟೆಯುಳ್ಳವನು, ಚರುಜೇಲಿಯು (ಜೀವರೊಡನೆ ಕ್ರೀಡೆಯಾಡುವವನು.) ಮಿಲೀಮಿಲಿಯು (ಕರಣರೂಪದಲ್ಲಿ ಎಲ್ಲರಲ್ಲಿಯೂ ವ್ಯಾಪಿಸಿರುವವನು.) ನೀನು ಬ್ರಹ್ಮಾಗ್ನಿಗಳ ಸ್ವರೂಪನಾಗಿರುವೆ. ದಂಡವನ್ನು ಧರಿಸಿರತಕ್ಕವನು, ಸಂನ್ಯಾಸಿಯು, ತ್ರಿದಂಡವನ್ನು ಧರಿಸಿರತಕ್ಕವನು. ಅಂತಹ ನಿನಗೆ ನಮಸ್ಕಾರಮಾಡುತ್ತೇನೆ. (ಓಂರುದ್ರ ಚೀಲಿ ಚೀಲಿ ಚಿಲಿ ಚಿಲಿ ಮಿಲಿ ಮಿಲಿ ಓಂ ಸ್ವಾಹಾ–ಎಂಬ ಅಷ್ಟಾದಶಾಕ್ಷರಾತ್ಮಕವಾದ ರುದ್ರಮಹಾ ಮಂತ್ರವೇ ಇಲ್ಲಿ ಉದ್ಧೃತವಾಗಿದೆ.) (೪೬೯)

ಚತುರ್ಯುಗಶ್ಚತುರ್ವೇದಶ್ಚಾತುರ್ಹೋತ್ರಪ್ರವರ್ತಕಃ ।
ಚಾತುರಾಶ್ರಮ್ಯನೇತಾ ಚ ಚಾತುರ್ವರ್ಣ್ಯಕರಶ್ಚ ಯಃ ॥೧೪೧॥

ಚತುರ್ಯುಗಗಳೂ ನಿನ್ನ ಸ್ವರೂಪಗಳೇ ಆಗಿವೆ. ಚತುರ್ವೇದಗಳೂ ನಿನ್ನ ಸ್ವರೂಪಗಳೇ ಆಗಿವೆ. ನಾಲ್ಕು ಪ್ರಕಾರವಾದ ಹೋತೃಕರ್ಮ ಪ್ರವರ್ತಕನೂ ನೀನೇ ಆಗಿರುವೆ. (ಚತುರ್ಹೋತ್ರಮಂತ್ರಪ್ರತಿಪಾದ್ಯನೂ

ನೀನೇ) ನಾಲ್ಕು ಆಶ್ರಮಗಳವರಿಗೂ ನೀನು ನಾಯಕನಾಗಿರುವೆ. ಚಾತು ರ್ವರ್ಣ್ಯಗಳನ್ನು ನೀನೇ ಸೃಷ್ಟಿಸಿರುವೆ. ಅಂತಹ ನಿನಗೆ ನಮಸ್ಕಾರಮಾಡು ತ್ತೇನೆ. [೪೭೪]

ಸದಾ ಚಾಕ್ಷಪ್ರಿಯೋ ಧೂರ್ತೋ ಗಣಾಧ್ಯಕ್ಷೋ ಗಣಾಧಿಪಃ ।
ರಕ್ತಮಾಲ್ಯಾಮ್ಬರಧರೋ ಗಿರಿಶೋ ಗಿರಿಕಪ್ರಿಯಃ ॥೧೪೨॥

ಸದಾಕಾಲದಲ್ಲಿಯೂ ಪಗಡೆಯಾಟದಲ್ಲಿ ಪ್ರಿಯನಾದ, (ಧೂರ್ತರಿಗೆ) ಧೂರ್ತನಾದ, ಗಣಗಳಿಗೆ ಅಧ್ಯಕ್ಷನಾದ, ಗಣಾಧಿಪನಾದ, ಕೆಂಪಾದ ಮಾಲೆಯನ್ನು ಧರಿಸಿರುವ, ಕೆಂಪಾದ ವಸ್ತ್ರವನ್ನುಟ್ಟಿರುವ, ಪರ್ವತದಲ್ಲಿ ಮಲಗುವ ಕಾಷಾಯವಸ್ತ್ರಪ್ರಿಯನಾದ ನಿನಗೆ ನಮಸ್ಕರಿಸುತ್ತೇನೆ. [೪೮೨]

ಶಿಲ್ಪಿಕಃ ಶಿಲ್ಪಿನಾಂ ಶ್ರೇಷ್ಠಃ ಸರ್ವಶಿಲ್ಪಪ್ರವರ್ತಕಃ ।
ಭಗನೇತ್ರಾಙ್ಕುಶಶ್ಚಣ್ಡಃ ಪೂಷ್ಣೋ ದನ್ತವಿನಾಶನಃ ॥೧೪೩॥

ಶಿಲ್ಪಿಯಾದ, ಶಿಲ್ಪಿಗಳಲ್ಲಿ ಶ್ರೇಷ್ಠನಾದ, ಸಕಲವಿಧವಾದ ಶಿಲ್ಪಕಲೆಗಳ ಪ್ರವರ್ತಕನಾದ, ಭಗದೇವತೆಯ ನೇತ್ರಾಪಹರಣದಲ್ಲಿ ಅಂಕುಶಪ್ರಾಯ ನಾದ, ಅತ್ಯಂತಕೋಪಿಷ್ಠನಾದ, ಪೂಷದೇವತೆಯ ಹಲ್ಲುಗಳನ್ನು ಮುರಿದ ನಿನಗೆ ನಮಸ್ಕಾರಮಾಡುತ್ತೇನೆ. [೪೮೮]

ಸ್ವಾಹಾ ಸ್ವಧಾ ವಷಟ್ಕಾರೋ ನಮಸ್ಕಾರೋ ನಮೋ ನಮಃ ।
ಗೂಢವ್ರತೋ ಗುಹ್ಯತಪಾಸ್ತಾರಕಸ್ತಾರಕಾಮಯಃ ॥೧೪೪॥

ಸ್ವಾಹಾ, ಸ್ವಧಾ, ವಷಟ್ಕಾರ, ನಮಸ್ಕಾರ, ನಮೋ ನಮಃ-ಈ ಪದ ಗಳೆಲ್ಲವೂ ನಿನ್ನ ನಾಮಧೇಯಗಳೇ ಆಗಿವೆ. ಗೂಢವ್ರತನಾದ, ಗುಹ್ಯತಪಸ್ವಿ ಯಾದ, ತಾರಕಮಂತ್ರಸ್ವರೂಪನಾದ, ನಕ್ಷತ್ರಗಳಿಂದ ವ್ಯಾಪ್ತವಾದ ಆಕಾಶ ರೂಪನಾದ ನಿನಗೆ ನಮಸ್ಕರಿಸುತ್ತೇನೆ. [೪೯೭]

ಧಾತಾ ವಿಧಾತಾ ಸಂಧಾತಾ ವಿಧಾತಾ ಧಾರಣೋಽಧರಃ ।
ಬ್ರಹ್ಮಾ ತಪಶ್ಚ ಸತ್ಯಂ ಚ ಬ್ರಹ್ಮಚರ್ಯಮಥಾರ್ಜವಮ್ ॥೧೪೫॥
ಭೂತಾತ್ಮಾ ಭೂತಕೃದ್ಭೂತೋ ಭೂತಭವ್ಯಭವೋದ್ಭವಃ ।
ಭೂರ್ಭುವಃ ಸ್ವರಿತಶ್ಚೈವ ಧ್ರುವೋ ದಾನ್ತೋ ಮಹೇಶ್ವರಃ ॥೧೪೬॥

ಧಾತಾ (ಧರಿಸುವವನು), ವಿಧಾತಾ (ಸೃಷ್ಟಿಸುವವನು), ಸಂಧಾತಾ

(ಜೋಡಿಸುವವನು), ವಿಧಾತಾ (ಅದೃಷ್ಟರೂಪನು), ಧಾರಣ (ಸರ್ವಕ್ಕೂ ಆಶ್ರಯಭೂತನಾದ ಕಾರಣಾತ್ಮನು), ಅಧರ (ಶುದ್ಧಾತ್ಮನು)–ಇವುಗಳೆಲ್ಲವೂ ನೀನೇ. ಬ್ರಹ್ಮಾ, ತಪಸ್ಸು, ಸತ್ಯ, ಬ್ರಹ್ಮಚರ್ಯ, ಸರಳತೆ–ಎಲ್ಲವೂ ನೀನೇ ಆಗಿರುವೆ. ನೀನು ಭೂತಾತ್ಮನು. ಭೂತಗಳನ್ನು ಸೃಷ್ಟಿಸುವವನೂ, ಭೂತನೂ (ನಿತ್ಯಸಿದ್ಧನು), ಭೂತ-ಭವಿಷ್ಯದ್ವರ್ತಮಾನಗಳ ಉತ್ಪತ್ತಿಗೆ ಕಾರಣನೂ, ಭೂಲೋಕ-ಭುವರ್ಲೋಕ-ಸ್ವರ್ಲೋಕನೂ ನೀನೇ ಆಗಿರುವೆ. ನೀನು ಧ್ರುವನು (ಶಾಶ್ವತನು), ದಾಂತನು (ಜಿತೇಂದ್ರಿಯನು) ಮತ್ತು ಮಹೇಶ್ವರನು. ನಿನಗೆ ನಮಸ್ಕಾರಮಾಡುತ್ತೇನೆ. [೫೧೮]

ದೀಕ್ಷಿತೋಽದೀಕ್ಷಿತಃ ಕ್ಷಾನ್ತೋ ದುರ್ದಾನ್ತೋಽದಾನ್ತನಾಶನಃ ।
ಚನ್ದ್ರಾವರ್ತೋ ಯುಗಾವರ್ತೋ ಸಂವರ್ತಃ ಸಮ್ಪ್ರವರ್ತಕಃ ॥೧೪೭॥

ದೀಕ್ಷಿತನಾದ (ಯಜ್ಞದೀಕ್ಷಿತನಾದ), ಅದೀಕ್ಷಿತನಾದ, ಕ್ಷಮಾವಂತನಾದ, ದುರ್ದಾಂತನಾದ, ಉದ್ಧತರಾದವರನ್ನು ನಾಶಗೊಳಿಸುವ, ಚಂದ್ರನ ವೃದ್ಧಿ-ಕ್ಷಯಗಳಿಗೆ ಕಾರಣನಾದ, ಯುಗಗಳ ಪರಿವರ್ತನೆಗೆ ಕಾರಣನಾದ, ಪ್ರಳಯರೂಪನಾದ, ಜಗತ್ತನ್ನು ಪುನಃ ಸೃಷ್ಟಿಸುವ ನಿನಗೆ ನಮಸ್ಕಾರಮಾಡುತ್ತೇನೆ. [೫೩೭]

ಕಾಮೋ ಬಿನ್ದುರಣುಃ ಸ್ಥೂಲಃ ಕರ್ಣಿಕಾರಸ್ರಜಪ್ರಿಯಃ ।
ನನ್ದೀಮುಖೋ ಭೀಮಮುಖಃ ಸುಮುಖೋ
ದುರ್ಮುಖೋಽಮುಖಃ ॥೧೪೮॥

ಚತುರ್ಮುಖೋ ಬಹುಮುಖೋ ರಣೇಷ್ವಗ್ನಿಮುಖಸ್ತಥಾ ।
ಹಿರಣ್ಯಗರ್ಭಃ ಶಕುನಿರ್ಮಹೋರಗಪತಿರ್ವಿರಾಟ್ ॥೧೪೯॥

ನೀನು ಕಾಮನು, ಬಿಂದುವು, ಅಣುವು (ಸೂಕ್ಷ್ಮನು), ಸ್ಥೂಲನು, ಕರ್ಣಿಕಾರಪುಷ್ಪದ ಮಾಲಿಕೆಯನ್ನು ಬಹಳವಾಗಿ ಪ್ರೀತಿಸುವವನು. ನಂದೀಮುಖನು, ಭೀಮಮುಖನು (ಭಯಂಕರವಾದ ಮುಖವುಳ್ಳವನು), ಸುಮುಖನು, ದುರ್ಮುಖನು, ಅಮುಖನು, (ಮುಖರಹಿತನು), ಚತುರ್ಮುಖನು, ಬಹುಮುಖನು. ಯುದ್ಧದ ಸಮಯದಲ್ಲಿ ಶತ್ರುಗಳನ್ನು

ಸಂಹರಿಸುವ ಕಾರಣದಿಂದ ಅಗ್ನಿಮುಖನು. ಹಿರಣ್ಯಗರ್ಭನು (ಬ್ರಹ್ಮನು), ಪಕ್ಷಿಸ್ವರೂಪನು, ಮಹಾಸರ್ಪಗಳ ಸ್ವಾಮಿಯು (ಅನಂತನು) ಮತ್ತು ವಿರಾಟ್‌ಸ್ವರೂಪನು. ಅಂತಹ ನಿನಗೆ ನಮಸ್ಕರಿಸುತ್ತೇನೆ. [೫೩೯]

ಅಧರ್ಮಹಾ ಮಹಾಪಾರ್ಶ್ವಶ್ಚಣ್ಡಧಾರೋ ಗಣಾಧಿಪಃ ।
ಗೋನರ್ದೋ ಗೋಪ್ರತಾರಶ್ಚ ಗೋವೃಷೇಶ್ವರವಾಹನಃ ॥೧೫೦॥

ತ್ರೈಲೋಕ್ಯಗೋಪ್ತಾ ಗೋವಿನ್ದೋ ಗೋಮಾರ್ಗೋಽಮಾರ್ಗ ಏವ ಚ ।
ಶ್ರೇಷ್ಠಃ ಸ್ಥಿರಶ್ಚ ಸ್ಥಾಣುಶ್ಚ ನಿಷ್ಕಮ್ಪಃ ಕಮ್ಪ ಏವ ಚ ॥೧೫೧॥

ದುರ್ವಾರಣೋ ದುರ್ವಿಷಹೋ ದುಃಸಹೋ ದುರತಿಕ್ರಮಃ ।
ದುರ್ಧರ್ಷೋ ದುಷ್ಪ್ರಕಮ್ಪಶ್ಚ ದುರ್ವಿಷೋ ದುರ್ಜಯೋ ಜಯಃ ॥

ಶಶಃ ಶಶಾಙ್ಕಃ ಶಮನಃ ಶೀತೋಷ್ಣಕ್ಷುಜ್ಜರಾಧಿಕೃತ್ ।
ಆಧಯೋ ವ್ಯಾಧಯಶ್ಚೈವ ವ್ಯಾಧಿಹಾ ವ್ಯಾಧಿರೇವ ಚ ॥೧೫೩॥

ನೀನು ಅಧರ್ಮದ ವಿನಾಶಕನು, ಮಹಾಪಾರ್ಶ್ವನು, ಚಂಡಧಾರನು, ಗಣಾಧಿಪನು, ಗೋನರ್ದನು (ಸಾರಸಪಕ್ಷಿಸ್ವರೂಪನು), ಗೋವುಗಳ ಆಪತ್ತನ್ನು ಪರಿಹರಿಸುವವನು, ನಂದಿಯನ್ನೇ ವಾಹನವನ್ನಾಗಿ ಹೊಂದಿರುವವನು, ಮೂರು ಲೋಕಗಳ ರಕ್ಷಕನು, ಗೋವಿಂದನು (ಶ್ರೀಕೃಷ್ಣಸ್ವರೂಪನು), ಗೋಮಾರ್ಗನು (ಇಂದ್ರಿಯಗಳ ಸಂಚಾಲಕನು), (ಇಂದ್ರಿಯಗಳಿಗೆ ಅಗೋಚರನು), ಶ್ರೇಷ್ಠನು, ಸ್ಥಿರನು, ಸ್ಥಾಣುವು, ಅಮಾರ್ಗನು, ನಿಷ್ಕಂಪನು, ಕಂಪನು, ದುರ್ವಾರಣನು (ತಡೆಯಲು ಅಸಾಧ್ಯನಾದವನು), ದುರ್ವಿಷಹನು (ಸಹಿಸಲು ಅಸಾಧ್ಯವಾದ ವೇಗವುಳ್ಳವನು), ದುಃಸಹನು, ದುರ್ಲಂಘ್ಯನು (ಅತಿಕ್ರಮಿಸಲು ಅಸಾಧ್ಯನಾದವನು), ದುರ್ಧರ್ಷನು, ದುಷ್ಪ್ರಕಂಪನು (ಅಳ್ಳಾಡಿ ಸಲು ಸಾಧ್ಯವಾಗದವನು), ದುರ್ವಿಷನು, ದುರ್ಜಯನು (ಜಯಿಸಲು ದುಃಸಾಧ್ಯ ನಾದವನು), ಜಯನು, ಶಶನು (ಶೀಘ್ರಗಾಮಿಯು), ಶಶಾಂಕನು (ಚಂದ್ರನು), ಶಮನನು (ಯಮರಾಜನು), ಶೀತ-ಉಷ್ಣ, ಹಸಿವು, ಮುಪ್ಪು, ಮಾನಸಿಕ ಚಿಂತೆ – ಇವುಗಳನ್ನು ಉಂಟು

ಮಾಡುವವನು. ಆ-ವ್ಯಾಧಿಗಳೂ ನಿನ್ನ ಸ್ವರೂಪಗಳೇ ಆಗಿವೆ. ವ್ಯಾಧಿಗಳನ್ನು ಹೋಗಲಾಡಿಸುವವನೂ, ವ್ಯಾಧಿಯೂ ಆಗಿರುವ ನಿನ್ನನ್ನು ನಮಸ್ಕರಿಸುತ್ತೇನೆ. (೫೭೨)

ಮಮ ಯಜ್ಞಮೃಗವ್ಯಾಧೋ ವ್ಯಾಧೀನಾಮಾಗಮೋ ಗಮಃ ।
ಶಿಖಣ್ಡೀ ಪುಣ್ಡರೀಕಾಕ್ಷಃ ಪುಣ್ಡರೀಕವನಾಲಯಃ ॥೧೫೪॥

ದಣ್ಡಧಾರಸ್ತ್ರ್ಯಮ್ಬಕಶ್ಚ ಉಗ್ರದಣ್ಡೋಽಣ್ಡನಾಶನಃ ।
ವಿಷಾಗ್ನಿಪಾಃ ಸುರಶ್ರೇಷ್ಠಃ ಸೋಮಪಾಸ್ತ್ವಂ ಮರುತ್ಪತಿಃ ॥೧೫೫॥

ನನ್ನ ಯಜ್ಞವೆಂಬ ಜಿಂಕೆಗೆ ವ್ಯಾಧನಾಗಿರುವೆ. ವ್ಯಾಧಿಗಳನ್ನು ಬರಿಸುವವನೂ–ಹೋಗಲಾಡಿಸುವವನೂ ನೀನೇ ಆಗಿರುವೆ. ನೆತ್ತಿಯ ಮೇಲೆ ನವಿಲಿನ ಗರಿಯನ್ನು ಧರಿಸಿರುವುದರಿಂದ ನೀನು ಶಿಖಂಡಿಯೆಂದು ಕರೆಯಲ್ಪಟ್ಟಿರುವೆ. ಕಮಲಕ್ಕೆ ಸಮಾನವಾದ ಕಣ್ಣುಗಳಿರುವುದರಿಂದ ಪುಂಡರೀಕಾಕ್ಷನಾಗಿರುವೆ. ಕಮಲಗಳಿಂದ ತುಂಬಿರುವ ಆ ವನದಲ್ಲಿ ನೀನು ವಾಸಮಾಡುತ್ತಿರುವೆ. ದಂಡವನ್ನು ಹಿಡಿದಿರುವುದರಿಂದ ದಂಡಧಾರನೆಂದು ಕರೆಯಲ್ಪಟ್ಟಿರುವೆ. ತ್ರ್ಯಂಬಕ, ಉಗ್ರದಂಡ ಮತ್ತು ಬ್ರಹ್ಮಾಂಡವನ್ನು ನಾಶ ಮಾಡುವುದರಿಂದ ಅಂಡನಾಶನ ಎಂಬ ಹೆಸರುಗಳಿಂದಲೂ ನಿನ್ನನ್ನು ಕರೆಯುತ್ತಾರೆ. ವಿಷವನ್ನೂ–ಅಗ್ನಿಯನ್ನೂ ಪಾನಮಾಡುವವನು ನೀನು. ಸುರಶ್ರೇಷ್ಠನು. ಸೋಮರಸವನ್ನು ಪಾನಮಾಡುವವನು. ಮರುದ್ಗಣಗಳಿಗೂ ಸ್ವಾಮಿಯಾಗಿರುವೆ. [೫೮೭]

ಅಮೃತಪಾಸ್ತ್ವಂ ಜಗನ್ನಾಥ ದೇವದೇವ ಗಣೇಶ್ವರ ।
ವಿಷಾಗ್ನಿಪಾ ಮೃತ್ಯುಪಾಶ್ಚ ಕ್ಷೀರಪಾಃ ಸೋಮಪಾಸ್ತಥಾ ।
ಮಧುಶ್ಚ್ಯುತಾನಾಮಗ್ರಪಾಸ್ತ್ವಮೇವ ತುಷಿತಾದ್ಯಪಾಃ ॥೧೫೬॥

ದೇವದೇವನೇ! ಗಣೇಶ್ವರನೇ (ಪ್ರಮಥಗಣಗಳಿಗೆ ಅಧಿಪತಿಯಾದವನೇ!) ಜಗನ್ನಾಥನೇ! ನೀನು ಅಮೃತಪಾನಮಾಡುವವನು. ಜಲವನ್ನು ಅಪಾನವನ್ನೂ ಪಾನಮಾಡುವವನು. ಮೃತ್ಯುವಿನಿಂದ ರಕ್ಷಿಸತಕ್ಕವನು, ಹಾಲನ್ನು ಕುಡಿಯತಕ್ಕವನು, ಯಜ್ಞಗಳಲ್ಲಿ ಸೋಮಪಾನ ಮಾಡತಕ್ಕವನು, ಸುಖದಿಂದ ಭ್ರಷ್ಟರಾದವರಿಗೆ ಪ್ರಧಾನರಕ್ಷಕನಾಗಿರುವೆ.

ತುಷಿತರೆಂಬ ದೇವತೆಗಳಿಗೆ ಆದಿಭೂತನಾದ ಬ್ರಹ್ಮನನ್ನು ರಕ್ಷಿಸತಕ್ಕವನು ನೀನೇ ಆಗಿರುವೆ. (೫೯೩)

ಹಿರಣ್ಯರೇತಾಃ ಪುರುಷಸ್ತ್ವಮೇವ
ತ್ವಂ ಸ್ತ್ರೀ ಪುಮಾಂಸ್ತ್ವಂ ಚ ನಪುಂಸಕಂ ಚ ।
ಬಾಲೋ ಯುವಾ ಸ್ಥವಿರೋ ಜೀರ್ಣದಂಷ್ಟ್ರ-
ಸ್ತ್ವಂ ನಾಗೇನ್ದ್ರ ಶಕ್ರಸ್ತ್ವಂ ವಿಶ್ವಕೃದ್ವಿಶ್ವಕರ್ತಾ ॥೧೫೭॥
ವಿಶ್ವಕೃದ್ವಿಶ್ವಕೃತಾಂ ವರೇಣ್ಯಸ್ತ್ವಂ ವಿಶ್ವಬಾಹೋ
ವಿಶ್ವರೂಪಸ್ತೇಜಸ್ವೀ ವಿಶ್ವತೋಮುಖಃ ।
ಚನ್ದ್ರಾದಿತ್ಯೌ ಚಕ್ಷುಷೀ ತೇ ಹೃದಯಂ ಚ ಪಿತಾಮಹಃ ॥

ನೀನು ಹಿರಣ್ಯರೇತಸನು (ಅಗ್ನಿಯು), ಪುರುಷನು (ಅಂತರ್ಯಾಮಿಯು), ಸ್ತ್ರೀಯೂ, ಪುರುಷನೂ, ನಪುಂಸಕನೂ, ಬಾಲಕನೂ, ಯುವಕನೂ, ಜೀರ್ಣದಂಷ್ಟ್ರನೂ, ಮುದುಕನೂ ನೀನೇ ಆಗಿರುವೆ. ನಾಗೇಶ್ವರನೇ! ನೀನು ಇಂದ್ರನು, ಜಗತ್ತಿನ ಸಂಹಾರಕನು, ಪ್ರಜಾಪತಿಯು. ಬ್ರಹ್ಮನು, ವಿಶ್ವವನ್ನು ರಚಿಸಿರುವ ಪ್ರಜಾಪತಿಗಳಲ್ಲಿ ಶ್ರೇಷ್ಠನಾದವನು. ವಿಶ್ವದ ಭಾರವನ್ನು ವಹಿಸಿರುವವನು, ವಿಶ್ವರೂಪನು, ತೇಜಸ್ವಿಯು, ಎಲ್ಲ ಕಡೆಗಳಲ್ಲಿಯೂ ಮುಖಗಳನ್ನು ಹೊಂದಿರುವವನು. ಚಂದ್ರ-ಸೂರ್ಯರು ನಿನ್ನ ಕಣ್ಣುಗಳಾಗಿದ್ದಾರೆ. ಪಿತಾಮಹನು ನಿನ್ನ ಹೃದಯವಾಗಿದ್ದಾನೆ. (೬೧೪)

ಮಹೋದಧಿಃ ಸರಸ್ವತೀ ವಾಗ್ಬಲಮನಲೋಽ-
ನಿಲಃ ಅಹೋರಾತ್ರಂ ನಿಮೇಷೋನ್ಮೇಷಕರ್ಮಾ ॥೧೫೯॥

ಮಹೋದಧಿಯೂ ನೀನೇ ಆಗಿರುವೆ. ಸರಸ್ವತಿಯೇ ನಿನ್ನ ವಾಣಿಯಾಗಿದ್ದಾಳೆ. ಅಗ್ನಿ ಮತ್ತು ವಾಯುಗಳು ನಿನ್ನ ಬಲವಾಗಿದ್ದಾರೆ. ನಿನ್ನ ಕಣ್ಣುಗಳನ್ನು ಮುಚ್ಚುವುದೂ ಮತ್ತು ತೆರೆಯುವುದೇ ರಾತ್ರಿ ಮತ್ತು ಹಗಲುಗಳು. (೬೨೨)

ನ ಬ್ರಹ್ಮಾ ನ ಚ ಗೋವಿನ್ದಃ ಪೌರಾಣಾ ಋಷಯೋ ನ ತೇ ।
ಮಾಹಾತ್ಮ್ಯಂ ವೇದಿತುಂ ಶಕ್ತಾ ಯಾಥಾತಥ್ಯೇನ ತೇ ಶಿವ ॥೧೬೦॥

ಶಿವನೇ! ಬ್ರಹ್ಮನಾಗಲೀ, ಗೋವಿಂದನಾಗಲೀ, ಪ್ರಾಚೀನರಾದ ಋಷಿ

ಗಳೇ ಆಗಲೀ–ಯಥಾವತ್ತಾಗಿ ನಿನ್ನ ಮಾಹಾತ್ಮ್ಯವು ಎಷ್ಟೆಂಬುದನ್ನು ತಿಳಿಯಲು ಸಮರ್ಥರಾಗಿಲ್ಲ.

ಯಾ ಮೂರ್ತಯಃ ಸುಸೂಕ್ಷ್ಮಾಸ್ತೇ ನ ಮಹ್ಯಂ ಯಾನ್ತಿ ದರ್ಶನಮ್ ।
ತ್ರಾಹಿ ಮಾಂ ಸತತಂ ರಕ್ಷ ಪಿತಾ ಪುತ್ರಮಿವೌರಸಮ್ ॥೧೬೧॥

ನಿನ್ನ ಅತ್ಯಂತಸೂಕ್ಷ್ಮವಾದ ಯಾವ ಮೂರ್ತಿಗಳಿವೆಯೋ–ಅವು ನನ್ನ ದೃಷ್ಟಿಗೆ ಗೋಚರವಾಗುವುದಿಲ್ಲ. ಪರಮೇಶ್ವರನೇ! ನನ್ನನ್ನು ಕಾಪಾಡು. ತಂದೆಯಾದವನು ಔರಸಪುತ್ರನನ್ನು ಸತತವಾಗಿ ರಕ್ಷಿಸುವಂತೆ–ನೀನು ನನ್ನನ್ನು ಸತತವಾಗಿ ಸಂರಕ್ಷಿಸು.

ರಕ್ಷ ಮಾಂ ರಕ್ಷಣೀಯೋಽಹಂ ತವಾನಘ ನಮೋಽಸ್ತು ತೇ ।
ಭಕ್ತಾನುಕಮ್ಪೀ ಭಗವಾನ್ಭಕ್ತಶ್ಚಾಹಂ ಸದಾ ತ್ವಯಿ ॥೧೬೨॥

ಅನಘನೇ! ನಾನು ನಿನ್ನಿಂದ ರಕ್ಷಿಸಲ್ಪಡಲು ಯೋಗ್ಯನಾಗಿದ್ದೇನೆ. ಆದುದರಿಂದ ನನ್ನನ್ನು ರಕ್ಷಿಸು. ನಾನು ನಿನಗೆ ನಮಸ್ಕಾರಮಾಡುತ್ತೇನೆ. ನೀನು ಭಕ್ತರ ಮೇಲೆ ದಯೆತೋರುವ ಭಗವಂತನಾಗಿರುವೆ. ನಾನು ನಿನ್ನಲ್ಲಿ ಸದಾ ಭಕ್ತಿಭಾವದಿಂದಿರುತ್ತೇನೆ.

ಯಃ ಸಹಸ್ರಾಣ್ಯನೇಕಾನಿ ಪುಂಸಾಮಾವೃತ್ಯ ದುರ್ದೃಶಃ ।
ತಿಷ್ಠತ್ಯೇಕಃ ಸಮುದ್ರಾನ್ತೇ ಸ ಮೇ ಗೋಪ್ತಾಸ್ತು ನಿತ್ಯಶಃ ॥೧೬೩॥

ಯಾವನು ಸಾವಿರಾರು ಮನುಷ್ಯರ ಮೇಲೆ ಮಾಯೆಯ ಜಾಲವನ್ನು ಬೀಸಿ ಮಾಯಾಮೋಹಿತರಾದ ಜನರಿಂದ ಸಂದರ್ಶಿಸಲು (ತಿಳಿಯಲು) ದುಃಸಾಧ್ಯನಾಗಿರುವನೋ, ಅದ್ವಿತೀಯನಾಗಿರುವನೋ, ಸಂಸಾರಸಮುದ್ರದ ದಡದಲ್ಲಿ ಪ್ರಕಾಶಮಾನವಾಗಿ ಕಾಣುವನೋ–ಅಂತಹ ಪರಮೇಶ್ವರನು ನಿತ್ಯವೂ ನನ್ನನ್ನು ಸಂರಕ್ಷಿಸಲಿ.

ಯಂ ವಿನಿದ್ರಾ ಜಿತಶ್ವಾಸಾಃ ಸತ್ತ್ವಸ್ಥಾಃ ಸಂಯತೇನ್ದ್ರಿಯಾಃ ।
ಜ್ಯೋತಿಃ ಪಶ್ಯನ್ತಿ ಯುಞ್ಜಾನಾಸ್ತಸ್ಮೈ ಯೋಗಾತ್ಮನೇ ನಮಃ ॥೧೬೪॥

ಯೋಗಿಗಳು ನಿದ್ರೆಯಿಲ್ಲದವರಾಗಿ ಪ್ರಾಣಗಳನ್ನು ಜಯಿಸಿ (ಪ್ರಾಣಾ

ಯಾಮಪರಾಯಣರಾಗಿ), ಇಂದ್ರಿಯಗಳನ್ನು ಜಯಿಸಿ, ಸತ್ತ್ವಗುಣದಲ್ಲಿಯೇ ಪ್ರತಿಷ್ಠಿತರಾಗಿ, ಮನಸ್ಸನ್ನು ಆತ್ಮನಲ್ಲಿ ಲೀನಗೊಳಿಸುತ್ತಾ ಜ್ಯೋತಿಃಸ್ವರೂಪನಾದ ಯಾವ ಪರಮಾತ್ಮನನ್ನು ನೋಡುವರೋ–ಅಂತಹ ಯೋಗಾತ್ಮನಾದ ಪರಮೇಶ್ವರನಿಗೆ ನಮಸ್ಕಾರಮಾಡುತ್ತೇನೆ.

ಜಟಿಲೇ ದಣ್ಡಿನೇ ನಿತ್ಯಂ ಲಮ್ಬೋದರಶರೀರಿಣೇ ।
ಕಮಣ್ಡಲುನಿಷಙ್ಗಾಯ ತಸ್ಮೈ ಬ್ರಹ್ಮಾತ್ಮನೇ ನಮಃ ॥೧೬೫॥

ಯಾವನು ಜಟೆಯನ್ನೂ–ದಂಡವನ್ನೂ ಧರಿಸಿರುವನೋ, ಯಾವನ ಉದರ ಮತ್ತು ಶರೀರಗಳು ವಿಶಾಲವಾಗಿರುವುವೋ, ಕಮಂಡಲುವೇ ಯಾವನಿಗೆ ಬತ್ತಳಿಕೆಯ ರೂಪದಲ್ಲಿರುವುದೋ–ಅಂತಹ ಬ್ರಹ್ಮನ ರೂಪದಲ್ಲಿ ವಿರಾಜಮಾನನಾದ ಪರಮೇಶ್ವರನಿಗೆ ನಮಸ್ಕರಿಸುತ್ತೇನೆ.

ಯಸ್ಯ ಕೇಶೇಷು ಜೀಮೂತಾ ನದ್ಯಃ ಸರ್ವಾಙ್ಗಸಂಧಿಷು ।
ಕುಕ್ಷೌ ಸಮುದ್ರಾಶ್ಚತ್ವಾರಸ್ತಸ್ಮೈ ತೋಯಾತ್ಮನೇ ನಮಃ ॥೧೬೬॥

ಯಾರ ಕೇಶಗಳಲ್ಲಿ ಮೇಘಗಳಿವೆಯೋ, ಅಂಗಾಂಗಗಳಲ್ಲಿರುವ ಸಂಧಿಗಳಲ್ಲಿ ನದಿಗಳಿವೆಯೋ, ಹೊಟ್ಟೆಯಲ್ಲಿ ನಾಲ್ಕು ಸಮುದ್ರಗಳೂ ಇವೆಯೋ–ಅಂತಹ ತೋಯಾತ್ಮನಾದ ಶಂಕರನಿಗೆ ನಮಸ್ಕರಿಸುತ್ತೇನೆ.

ಸಮ್ಭಕ್ಷ್ಯ ಸರ್ವಭೂತಾನಿ ಯುಗಾನ್ತೇ ಪರ್ಯುಪಸ್ಥಿತೇ ।
ಯಃ ಶೇತೇ ಜಲಮಧ್ಯಸ್ಥಸ್ತಂ ಪ್ರಪದ್ಯೇಽಮ್ಬುಶಾಯಿನಮ್ ॥೧೬೭॥

ಯುಗಾಂತವು ಸನ್ನಿಹಿತವಾಗಲಾಗಿ ಯಾವನು ಎಲ್ಲ ಪ್ರಾಣಿಗಳನ್ನೂ ಸಂಹರಿಸಿ ಜಲದ ಮಧ್ಯಭಾಗದಲ್ಲಿ ಪವಡಿಸುವನೋ–ಅಂತಹ ಜಲಶಾಯಿಯಾದ ಈಶ್ವರನನ್ನು ಶರಣುಹೊಂದುತ್ತೇನೆ.

ಪ್ರವಿಶ್ಯ ವದನಂ ರಾಹೋರ್ಯಃ ಸೋಮಂ ಪಿಬತೇ ನಿಶಿ ।
ಗ್ರಸತ್ಯರ್ಕಂ ಚ ಸ್ವರ್ಭಾನುರ್ಭೂತ್ವಾ ಮಾಂ ಸೋಽಭಿರಕ್ಷತು ॥೧೬೮॥

ಯಾರು ರಾತ್ರಿಯಲ್ಲಿ ರಾಹುವಿನ ಮುಖವನ್ನು ಪ್ರವೇಶಿಸಿ ಚಂದ್ರನಲ್ಲಿರುವ ಅಮೃತವನ್ನು ಪಾನಮಾಡುವನೋ ಮತ್ತು ತಾನೇ ರಾಹುವಾಗಿ ಸೂರ್ಯನನ್ನೂ ನುಂಗುವನೋ – ಅಂತಹ ಪರಮೇಶ್ವರನು ನನ್ನನ್ನು ರಕ್ಷಿಸಲಿ.

ಯೇ ಚಾನುಪತಿತಾ ಗರ್ಭಾ ಯಥಾ ಭಾಗಾನುಪಾಸತೇ ।
ನಮಸ್ತೇಭ್ಯಃ ಸ್ವಧಾ ಸ್ವಾಹಾ ಪ್ರಾಪ್ನುವನ್ತು ಮುದನ್ತು ತೇ ॥೧೬॥

ಬ್ರಹ್ಮನನ್ನು ಅನುಸರಿಸಿ ಹುಟ್ಟಿರುವ ದೇವತೆಗಳೂ ಮತ್ತು ಪಿತೃಗಳೂ ಬಾಲಕರಂತೆ ಯಜ್ಞಗಳಲ್ಲಿ ತಮ್ಮ ತಮ್ಮ ಹವಿರ್ಭಾಗಗಳನ್ನು ಪಡೆದು ಕೊಳ್ಳುತ್ತಾರೆ. ಅವರೆಲ್ಲರಿಗೂ ನಮಸ್ಕಾರಮಾಡುತ್ತೇನೆ. ಸ್ವಾಹಾಕಾರ ಮತ್ತು ಸ್ವಧಾಕಾರಗಳ ಮೂಲಕವಾಗಿ ಅವರು ತಮ್ಮ ಹವಿರ್ಭಾಗಗಳನ್ನು ಪಡೆದು ಕೊಂಡು ಸಂತೋಷವನ್ನು ಹೊಂದಲಿ.

ಯೇಽಙ್ಗುಷ್ಠಮಾತ್ರಾಃ ಪುರುಷಾ ದೇಹಸ್ಥಾಃ ಸರ್ವದೇಹಿನಾಮ್ ।
ರಕ್ಷನ್ತು ತೇ ಹಿ ಮಾಂ ನಿತ್ಯಂ ನಿತ್ಯಂ ಚಾಪ್ಯಾಯಯನ್ತು ಮಾಮ್ ॥

ಸರ್ವಪ್ರಾಣಿಗಳ ದೇಹಗಳಲ್ಲಿಯೂ ಅಂಗುಷ್ಠಪ್ರಮಾಣದ ಯಾವ ಪುರುಷರಿರುವರೋ–ಅವರು ನಿತ್ಯವೂ ನನ್ನನ್ನು ರಕ್ಷಿಸಲಿ ಮತ್ತು ವೃದ್ಧಿಗೊಳಿಸಲಿ.

ಯೇ ನ ರೋದನ್ತಿ ದೇಹಸ್ಥಾ ದೇಹಿನೋ ರೋದಯನ್ತಿ ಚ ।
ಹರ್ಷಯನ್ತಿ ನ ಹೃಷ್ಯನ್ತಿ ನಮಸ್ತೇಭ್ಯೋಽಸ್ತು ನಿತ್ಯಶಃ ॥೧೭೧॥

ಯಾರು ದೇಹದಲ್ಲಿಯೇ ಇದ್ದುಕೊಂಡು ತಾವು ರೋದನಮಾಡದೇ ದೇಹಧಾರಿಗಳು ರೋದನಮಾಡುವಂತೆ ಮಾಡುವರೋ ತಾವು ಸಂತೋಷ ಪಡದೇ ದೇಹಧಾರಿಗಳು ಸಂತೋಷಪಡುವಂತೆ ಮಾಡುವರೋ–ಅಂತಹ ರುದ್ರರಿಗೆ ನಮಸ್ಕಾರಮಾಡುತ್ತೇನೆ.

ಯೇ ನದೀಷು ಸಮುದ್ರೇಷು ಪರ್ವತೇಷು ಗುಹಾಸು ಚ ।
ವೃಕ್ಷಮೂಲೇಷು ಗೋಷ್ಠೇಷು ಕಾನ್ತಾರೇ ಗಹನೇಷು ಚ ॥೧೭೨॥
ಚತುಷ್ಪಥೇಷು ರಥ್ಯಾಸು ಚತ್ವರೇಷು ತಟೇಷು ಚ ।
ಹಸ್ತ್ಯಶ್ವರಥಶಾಲಾಸು ಜೀರ್ಣೋದ್ಯಾನಾಲಯೇಷು ಚ ॥೧೭೩॥
ಯೇಷು ಪಞ್ಚಸು ಭೂತೇಷು ದಿಶಾಸು ವಿದಿಶಾಸು ಚ ।
ಚನ್ದ್ರಾರ್ಕಯೋರ್ಮಧ್ಯಗತಾ ಯೇ ಚ ಚನ್ದ್ರಾರ್ಕರಶ್ಮಿಷು ॥೧೭೪॥
ರಸಾತಲಗತಾ ಯೇ ಚ ಯೇ ಚ ತಸ್ಮೈ ಪರಂ ಗತಾಃ ।
ನಮಸ್ತೇಭ್ಯೋ ನಮಸ್ತೇಭ್ಯೋ ನಮಸ್ತೇಭ್ಯೋಽಸ್ತು ನಿತ್ಯಶಃ ॥೧೭೫॥

ನದಿಗಳು, ಸಮುದ್ರಗಳು, ಪರ್ವತಗಳು, ಗುಹೆಗಳು, ವೃಕ್ಷಮೂಲಗಳು, ಗೋಶಾಲೆಗಳು, ದುರ್ಗಮವಾದ ಮಾರ್ಗಗಳು, ಅರಣ್ಯಗಳು, ನಾಲ್ಕು ಬೀದಿಗಳು ಸೇರುವ ಚೌಕಗಳು, ಬೀದಿಗಳು, ಮನೆಯ ಮುಂಭಾಗದ ಅಂಗಳಗಳು, ತೀರಗಳು, ಗಜಶಾಲೆಗಳು, ಅಶ್ವಶಾಲೆಗಳು, ರಥಶಾಲೆಗಳು, ಪುರಾತನವಾದ ತೋಟಗಳು, ಜೀರ್ಣವಾದ ಗೃಹಗಳು, ಪಂಚಭೂತಗಳು, ದಿಕ್ಕುಗಳು, ಉಪದಿಕ್ಕುಗಳು, ಸೂರ್ಯ-ಚಂದ್ರರ ಮಧ್ಯದಲ್ಲಿರುವ ಪದಾರ್ಥಗಳು, ಸೂರ್ಯ-ಚಂದ್ರರ ಕಿರಣಗಳು, ರಸಾತಲ ಮತ್ತು ಅದರ ಆಚೆಯ ಪ್ರದೇಶಗಳು–ಇವುಗಳೆಲ್ಲದರಲ್ಲಿಯೂ ಅಧಿಷ್ಠಾತೃದೇವತೆಗಳ ರೂಪದಲ್ಲಿ ವ್ಯಾಪಿಸಿರುವ ರುದ್ರರಿಗೆ ನಮಸ್ಕರಿಸುತ್ತೇನೆ. ಅವರೆಲ್ಲರಿಗೂ ನಮಸ್ಕರಿಸುತ್ತೇನೆ. ಅನುದಿನವೂ ಅವರೆಲ್ಲರಿಗೂ ನಮಸ್ಕರಿಸುತ್ತೇನೆ.

ಯೇಷಾಂ ನ ವಿದ್ಯತೇ ಸಂಖ್ಯಾ ಪ್ರಮಾಣಂ ರೂಪಮೇವ ಚ ।
ಅಸಂಖ್ಯೇಯಗುಣಾ ರುದ್ರಾ ನಮಸ್ತೇಭ್ಯೋಽಸ್ತು ನಿತ್ಯಶಃ ॥೧೭೬॥

ಯಾರ ಸಂಖ್ಯೆ, ಪ್ರಮಾಣ ಮತ್ತು ರೂಪಗಳಿಗೆ ಎಲ್ಲೆಯೇ ಇಲ್ಲವೋ–ಯಾರ ಗುಣಗಳನ್ನು ಎಣಿಸಲೇ ಸಾಧ್ಯವಾಗುವುದಿಲ್ಲವೋ–ಅಂತಹ ರುದ್ರರಿಗೆ ನಿತ್ಯವೂ ನನ್ನ ನಮಸ್ಕಾರವಿರಲಿ.

ಸರ್ವಭೂತಕರೋ ಯಸ್ಮಾತ್ಸರ್ವಭೂತಪತಿರ್ಹರಃ ।
ಸರ್ವಭೂತಾನ್ತರಾತ್ಮಾ ಚ ತೇನ ತ್ವಂ ನ ನಿಮನ್ತ್ರಿತಃ ॥೧೭೭॥

ಮಹಾದೇವ! ನೀನು ಎಲ್ಲ ಪ್ರಾಣಿಗಳಿಗೂ ಜನ್ಮದಾತನಾಗಿರುವೆ. ಸರ್ವಪ್ರಾಣಿಗಳ ಪಾಲಕನೂ, ಸರ್ವಪ್ರಾಣಿಗಳ ಸಂಹಾರಕನೂ ಆಗಿರುವೆ. ಸರ್ವಪ್ರಾಣಿಗಳ ಅಂತರಾತ್ಮನೂ ಆಗಿರುವೆ. ಅರ್ಥಾತ್ ನಮ್ಮೆಲ್ಲರಲ್ಲಿಯೂ ನೀನೇ ಇರುವೆಯಾದುದರಿಂದ ನಿನಗೆ ಪ್ರತ್ಯೇಕವಾಗಿ ಆಹ್ವಾನವನ್ನು ಕೊಡಲಿಲ್ಲ.

ತ್ವಮೇವ ಹೀಜ್ಯಸೇ ಯಸ್ಮಾದ್ಯಜ್ಞೈರ್ವಿವಿಧದಕ್ಷಿಣೈಃ ।
ತ್ವಮೇವ ಕರ್ತಾ ಸರ್ವಸ್ಯ ತೇನ ತ್ವಂ ನ ನಿಮನ್ತ್ರಿತಃ ॥೧೭೮॥

ವಿವಿಧದಕ್ಷಿಣಾಯುಕ್ತವಾದ ಯಜ್ಞಗಳಿಂದ ನಿನ್ನನ್ನು ಉದ್ದೇಶಿಸಿಯೇ

ಎಲ್ಲರೂ ಯಾಗಮಾಡುತ್ತಾರೆ. ನೀನೇ ಎಲ್ಲ ಕಡೆಗಳಲ್ಲಿಯೂ ಯಜಮಾನ ನಾಗಿರುವೆ. ಆದುದರಿಂದಲೇ ನಾನು ನಿನ್ನನ್ನು ಪ್ರತ್ಯೇಕವಾಗಿ ಆಹ್ವಾನಿಸಲಿಲ್ಲ.

ಅಥವಾ ಮಾಯಯಾ ದೇವ ಸೂಕ್ಷ್ಮಯಾ ತವ ಮೋಹಿತಃ ।
ಏತಸ್ಮಾತ್ಕಾರಣಾದ್ವಾಪಿ ತೇ ತ್ವಂ ನ ನಿಮನ್ತ್ರಿತಃ ॥೧೭೯॥

ಅಥವಾ ನಿನ್ನ ಸೂಕ್ಷ್ಮವಾದ ಮಾಯೆಯಿಂದ ನಾನು ವಿಮೋಹಿತ ನಾದೆನು. ಈ ಕಾರಣದಿಂದಲಾದರೂ ನಾನು ನಿನ್ನನ್ನು ಆಹ್ವಾನಿಸದೇ ಇದ್ದಿರ ಬಹುದು.

ಪ್ರಸೀದ ಮಮ ಭದ್ರಂ ತೇ ಭವ ಭಾವಗತಸ್ಯ ಮೇ ।
ತ್ವಯಿ ಮೇ ಹೃದಯಂ ದೇವ ತ್ವಯಿ ಬುದ್ಧಿರ್ಮನಸ್ತ್ವಯಿ ॥೧೮೦॥

ಪರಮೇಶ್ವರ! ನಿನಗೆ ಮಂಗಳವಾಗಲಿ. ನಾನು ಭಕ್ತಿಭಾವದಿಂದ ನಿನ್ನನ್ನು ಶರಣುಹೊಂದಿದ್ದೇನೆ. ನನ್ನ ವಿಷಯದಲ್ಲಿ ಪ್ರಸನ್ನನಾಗು. ನನ್ನ ಹೃದಯ, ಮನಸ್ಸು ಮತ್ತು ಬುದ್ಧಿಗಳು ನಿನ್ನಲ್ಲಿಯೇ ಸಮರ್ಪಿತವಾಗಿವೆ."

ಭೀಷ್ಮನು ಹೇಳುತ್ತಾನೆ :

ಯುಧಿಷ್ಠಿರ! ಹೀಗೆ ದಕ್ಷಪ್ರಜಾಪತಿಯು ಮಹಾದೇವನನ್ನು ಬಗೆ-ಬಗೆಯಾಗಿ ಸ್ತೋತ್ರಮಾಡಿ ವಿರಮಿಸಿದನು. ಭಗವಾನ್ ಶಂಕರನು ಸುಪ್ರೀತನಾಗಿ ದಕ್ಷನೊಡನೆ ಹೇಳಿದನು :

ಪರಿತುಷ್ಟೋಽಸ್ಮಿ ತೇ ದಕ್ಷ ಸ್ತವೇನಾನೇನ ಸುವ್ರತ ।
ಬಹುನಾತ್ರ ಕಿಮುಕ್ತೇನ ಮತ್ಸಮೀಪೇ ಭವಿಷ್ಯಸಿ ॥೧೮೨॥

"ಸುವ್ರತನೇ! ದಕ್ಷ! ನೀನು ಮಾಡಿರುವ ಸ್ತೋತ್ರದಿಂದ ನಾನು ಸುಪ್ರೀತನಾಗಿದ್ದೇನೆ. ಹೆಚ್ಚು ಹೇಳುವುದರಿಂದ ಪ್ರಯೋಜನವೇನು? ಮುಂದೆ ನೀನು ನನ್ನ ಸಮೀಪದಲ್ಲಿಯೇ ಯಾವಾಗಲೂ ಇರುವೆ.

ಅಶ್ವಮೇಧಸಹಸ್ರಸ್ಯ ವಾಜಪೇಯಶತಸ್ಯ ಚ ।
ಪ್ರಜಾಪತೇ ಮತ್ಪ್ರಸಾದಾತ್ಫಲಭಾಗೀ ಭವಿಷ್ಯಸಿ ॥೧೮೩॥

ಪ್ರಜಾಪತಿಯೇ! ನನ್ನ ಅನುಗ್ರಹದಿಂದ ಸಾವಿರ ಅಶ್ವಮೇಧಗಳ ಮತ್ತು ನೂರು ವಾಜಪೇಯಗಳ ಫಲಕ್ಕೆ ನೀನು ಭಾಗಿಯಾಗುವೆ."

ಯುಧಿಷ್ಠಿರ! ಹೀಗೆ ಹೇಳಿದ ಬಳಿಕ ಪುನಃ ವಾಕ್ಯವಿಶಾರದನಾದ ಲೋಕನಾಥನಾದ ಭಗವಾನ್ ಶಿವನು ದಕ್ಷನಿಗೆ ಆಶ್ವಾಸನೆಯನ್ನುಂಟು ಮಾಡುವ, ಯುಕ್ತಿಯುಕ್ತವಾದ, ಸರ್ವಸಮಂಜಸವಾದ ಈ ಮಾತುಗಳನ್ನು ಹೇಳಿದನು :

ದಕ್ಷ ದಕ್ಷ ನ ಕರ್ತವ್ಯೋ ಮನ್ಯುರ್ವಿಘ್ನಮಿಮಂ ಪ್ರತಿ ।
ಅಹಂ ಯಜ್ಞಹರಸ್ತುಭ್ಯಂ ದೃಷ್ಟಮೇತತ್ಪುರಾತನಮ್ ॥೧೮೫॥

"ದಕ್ಷನೇ! ನಿನ್ನ ಯಜ್ಞಕ್ಕೆ ನನ್ನಿಂದ ಈ ರೀತಿಯಲ್ಲಿ ವಿಘ್ನವುಂಟಾದುದಕ್ಕಾಗಿ ನೀನು ಖೇದಗೊಳ್ಳುವ ಕಾರಣವಿಲ್ಲ. ಹಿಂದಿನ ಕಲ್ಪದಲ್ಲಿಯೂ ನೀನು ಮಾಡಿದ ಯಜ್ಞವನ್ನು ನಾನೇ ನಾಶಗೊಳಿಸಿದ್ದೆನು. ಈಗಿನ ಘಟನೆಯೂ ಪೂರ್ವಕಲ್ಪಕ್ಕೆ ಅನುಸಾರವಾಗಿಯೇ ಇದೆ.

ಭೂಯಶ್ಚ ತೇ ವರಂ ದದ್ಮಿ ತಂ ತ್ವಂ ಗೃಹ್ಣೀಷ್ವ ಸುವ್ರತ ।
ಪ್ರಸನ್ನವದನೋ ಭೂತ್ವಾ ತದಿಹೈಕಮನಾಃ ಶೃಣು ॥೧೮೬॥

ಸುವ್ರತನೇ! ಪುನಃ ನಾನು ನಿನಗೆ ವರವನ್ನು ಕೊಡುತ್ತೇನೆ. ಪ್ರಸನ್ನವದನನಾಗಿ ನಾನು ಕೊಡಲಿರುವ ವರವನ್ನು ಪ್ರತಿಗ್ರಹಿಸು. ನಾನು ಯಾವ ವರವನ್ನು ಕೊಡುವೆನೆಂಬುದನ್ನು ಏಕಾಗ್ರಚಿತ್ತನಾಗಿ ಕೇಳು.

ವೇದಾತ್ಷಡಙ್ಗಾದುದ್ಧೃತ್ಯ ಸಾಂಖ್ಯಯೋಗಾಚ್ಚ ಯುಕ್ತಿತಃ ।
ತಪಃ ಸುತಪ್ತಂ ವಿಪುಲಂ ದುಶ್ಚರಂ ದೇವದಾನವೈಃ ॥೧೮೭॥

ಪೂರ್ವಕಾಲದಲ್ಲಿ ಷಡಂಗಯುಕ್ತವಾದ ವೇದಗಳು, ಸಾಂಖ್ಯಯೋಗ ಮತ್ತು ತರ್ಕ–ಇವುಗಳ ಆಶ್ರಯದಿಂದ ಮಹಾತಪಸ್ಸು ಯಾವುದೆಂಬುದನ್ನು ನಿಶ್ಚಯಿಸಿ, ದೇವ-ದಾನವರು ದುಶ್ಚರವಾದ ಬಹುದೀರ್ಘಕಾಲದ ಅಂತಹ ತಪಸ್ಸನ್ನು ಶ್ರದ್ಧೆಯಿಂದ ಆಚರಿಸಿದರು. (ಅದಕ್ಕಿಂತಲೂ ಉತ್ತಮವಾದ ವ್ರತವನ್ನು ಅಥವಾ ತಪಸ್ಸನ್ನು ನಾನು ನಿನ್ನೊಡನೆ ಹೇಳುತ್ತಿದ್ದೇನೆ.)

ಅಪೂರ್ವಂ ಸರ್ವತೋಭದ್ರಂ ಸರ್ವತೋಮುಖಮವ್ಯಯಮ್ ।
ಅಬ್ದೈರ್ದಶಾಹಸಂಯುಕ್ತಂ ಗೂಢಮಪ್ರಾಜ್ಞನಿನ್ದಿತಮ್ ॥೧೮೮॥

ವರ್ಣಾಶ್ರಮಕೃತೈರ್ಧರ್ಮೈರ್ವಿಪರೀತಂ ಕ್ವಚಿತ್ಸಮಮ್ ।
ಗತಾನ್ತೈರಧ್ಯವಸಿತಮತ್ಯಾಶ್ರಮಮಿದಂ ವ್ರತಮ್ ॥೧೮೯॥

ಮಯಾ ಪಾಶುಪತಂ ದಕ್ಷ ಶುಭಮುತ್ಪಾದಿತಂ ಪುರಾ ।
ತಸ್ಯ ಚೀರ್ಣಸ್ಯ ತತ್ಸಮ್ಯಕ್ಫಲಂ ಭವತಿ ಪುಷ್ಕಲಮ್ ।
ತಚ್ಚಾಸ್ತು ತೇ ಮಹಾಭಾಗ ತ್ಯಜ್ಯತಾಂ ಮಾನಸೋ ಜ್ವರಃ ॥೯೦॥

ದಕ್ಷ! ನಾನು ಹಿಂದೆ ಶುಭಕರವಾದ ಪಾಶುಪತವೆಂಬ ವ್ರತವನ್ನು ಪ್ರಕಟಿಸಿದೆನು. ಆ ವ್ರತವು ಅಪೂರ್ವವಾದುದು. ಸರ್ವಪ್ರಕಾರದಿಂದಲೂ ಮಂಗಳಕರವಾದುದು. ಸರ್ವತೋಮುಖವಾದುದು. (ಎಲ್ಲ ಆಶ್ರಮಿಗಳಿಗೂ ಮತ್ತು ವರ್ಣದವರಿಗೂ ಅನುಕೂಲಕರವಾದುದು.) ಮೋಕ್ಷ ಸಾಧಕವಾದುದರಿಂದ ಅವಿನಾಶಿಯಾದುದು. ಅನೇಕವರ್ಷಗಳ ಪ್ರಯತ್ನದಿಂದ ಸಾಧಿಸಲ್ಪಡತಕ್ಕುದು. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹಗಳೆಂಬ ಐದು ಯಮಗಳಿಂದಲೂ–ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ ಮತ್ತು ಈಶ್ವರನಲ್ಲಿ ಭಕ್ತಿ – ಎಂಬ ಐದು ನಿಯಮಗಳಿಂದಲೂ ಯುಕ್ತವಾದುದು. ರಹಸ್ಯವಾದುದು. ಪ್ರಾಜ್ಞರಲ್ಲದ ಮೂಢರಿಂದ ನಿಂದಿಸಲ್ಪಡತಕ್ಕುದು. ವರ್ಣಾಶ್ರಮೋಕ್ತವಾದ ಧರ್ಮಗಳಿಗಿಂತಲೂ ಕೆಲವು ಕಡೆಗಳಲ್ಲಿ ವಿಪರೀತವಾದುದು. ಕೆಲವು ಪ್ರಕರಣಗಳಲ್ಲಿ ಸಮವಾದುದು. ಅಂತವನ್ನು ಮುಟ್ಟಿರುವ ಅಧ್ಯಾತ್ಮಸಾಧಕರಿಂದ ಈ ಪಾಶುಪತವ್ರತವೇ ಶ್ರೇಷ್ಠವಾದುದೆಂದು ನಿಶ್ಚಯಿಸಲ್ಪಟ್ಟಿದೆ. ಈ ಪಾಶುಪತವ್ರತವು ಎಲ್ಲ ಆಶ್ರಮಕರ್ಮಗಳಿಗಿಂತಲೂ ಅತೀತವಾದುದು. ಇದರ ಅನುಷ್ಠಾನದಿಂದ ಉತ್ತಮವಾದ ಮತ್ತು ವಿಪುಲವಾದ ಫಲವು ಪ್ರಾಪ್ತವಾಗುತ್ತದೆ. ಮಹಾಭಾಗ್ಯಶಾಲಿಯೇ! ಅಂತಹ ಪಾಶುಪತವ್ರತವನ್ನು ಅನುಷ್ಠಾನಮಾಡಿದ ಫಲವು ನಿನಗೆ ಪ್ರಾಪ್ತವಾಗಲಿ. ಇನ್ನಾದರೂ ನೀನು ನಿನ್ನ ಮಾನಸಿಕವಾದ ಚಿಂತೆಯನ್ನು ಪರಿತ್ಯಜಿಸು.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ದಕ್ಷನಿಗೆ ಹೀಗೆಂದು ಹೇಳಿ ಅಮಿತಪರಾಕ್ರಮಿಯಾದ ಮಹಾದೇವನು ಪತ್ನಿಯಾದ ಪಾರ್ವತೀದೇವಿಯೊಡನೆಯೂ–ಅನುಚರರೊಡನೆಯೂ ಅಂತರ್ಧಾನಹೊಂದಿದನು.

ದಕ್ಷಪ್ರೋಕ್ತಂ ಸ್ತವಮಿಮಂ ಕೀರ್ತಯೇದ್ಯಃ ಶೃಣೋತಿ ವಾ ।
ನಾಶುಭಂ ಪ್ರಾಪ್ನುಯಾತ್ಕಿಂಚಿದ್ದೀರ್ಘಮಾಯುರವಾಪ್ನುಯಾತ್ ॥

ದಕ್ಷನು ಹೇಳಿದ ಈ ಸ್ತೋತ್ರವನ್ನು ಯಾವನು ಪಠಿಸುವನೋ ಮತ್ತು ಕೇಳುವನೋ–ಅವನೆಂದಿಗೂ ಸ್ವಲ್ಪವಾದರೂ ಅಮಂಗಲವನ್ನು ಹೊಂದುವುದಿಲ್ಲ. ದೀರ್ಘಾಯುಷ್ಯವನ್ನು ಹೊಂದುತ್ತಾನೆ.

ಯಥಾ ಸರ್ವೇಷು ದೇವೇಷು ವರಿಷ್ಠೋ ಭಗವಾಞ್ಛಿವಃ ।
ತಥಾ ಸ್ತವೋ ವರಿಷ್ಠೋಽಯಂ ಸ್ತವಾನಾಂ ಬ್ರಹ್ಮಸಮ್ಮಿತಃ ॥೧೯೩॥

ಯಾವ ರೀತಿಯಲ್ಲಿ ಭಗವಾನ್ ಶಿವನು ಎಲ್ಲ ದೇವತೆಗಳಿಗೂ ಶ್ರೇಷ್ಠನಾದವನೋ–ಅದೇ ರೀತಿಯಲ್ಲಿ ಈ ಸ್ತೋತ್ರವು ಎಲ್ಲ ಸ್ತೋತ್ರಗಳಿಗೂ ಶ್ರೇಷ್ಠವಾದುದು ಮತ್ತು ವೇದಕ್ಕೆ ಸಮಾನವಾದುದು.

ಯಶೋರಾಜ್ಯಸುಖೈಶ್ವರ್ಯಕಾಮಾರ್ಥಧನಕಾಂಕ್ಷಿಭಿಃ ।
ಶ್ರೋತವ್ಯೋ ಭಕ್ತಿಮಾಸ್ಥಾಯ ವಿದ್ಯಾಕಾಮೈಶ್ಚ ಯತ್ನತಃ ॥೧೯೪॥

ಯಶಸ್ಸು, ರಾಜ್ಯ, ಸುಖ, ಐಶ್ವರ್ಯ, ಕಾಮ, ಅರ್ಥ, ಧನ ಮತ್ತು ವಿದ್ಯೆಗಳನ್ನು ಅಪೇಕ್ಷಿಸುವವರು ಭಕ್ತಿಯನ್ನು ಆಶ್ರಯಿಸಿ ಪ್ರಯತ್ನಪೂರ್ವಕವಾಗಿ ಈ ಸ್ತೋತ್ರವನ್ನು ಕೇಳಬೇಕು.

ವ್ಯಾಧಿತೋ ದುಃಖಿತೋ ದೀನಶ್ಚೋರಗ್ರಸ್ತೋ ಭಯಾರ್ದಿತಃ ।
ರಾಜಕಾರ್ಯಾಭಿಯುಕ್ತೋ ವಾ ಮುಚ್ಯತೇ ಮಹತೋ ಭಯಾತ್ ॥

ರೋಗಗ್ರಸ್ತನಾಗಿರುವವನೂ, ದುಃಖಿತನಾಗಿರುವವನೂ, ದೀನನಾಗಿರುವವನೂ, ಕಳ್ಳನಿಂದ ಹಿಡಿಯಲ್ಪಟ್ಟಿರುವವನೂ, ಭಯದಿಂದ ಪೀಡಿಸಲ್ಪಡುತ್ತಿರುವವನೂ, ರಾಜಕಾರ್ಯದಲ್ಲಿ ಅಪರಾಧಮಾಡಿರುವವನೂ–ಈ ಸ್ತೋತ್ರವನ್ನು ಭಕ್ತಿಪೂರ್ವಕವಾಗಿ ಪಠಿಸುವುದರಿಂದ ಅಥವಾ ಕೇಳುವುದರಿಂದ ಪೂರ್ವೋಕ್ತವಾದ ಮಹಾಭಯಗಳಿಂದ ವಿಮುಕ್ತನಾಗುತ್ತಾನೆ.

ಅನೇನೈವ ತು ದೇಹೇನ ಗಣಾನಾಂ ಸಮತಾಂ ವ್ರಜೇತ್ ।
ತೇಜಸಾ ಯಶಸಾ ಚೈವ ಯುಕ್ತೋ ಭವತಿ ನಿರ್ಮಲಃ ॥೧೯೬॥

ಇಷ್ಟು ಮಾತ್ರವಲ್ಲ; ಈ ದೇಹದಲ್ಲಿಯೇ ಶಿವನ ಗಣಗಳಿಗೆ ಸಮಾನನಾಗುತ್ತಾನೆ. ತೇಜಸ್ಸಿನಿಂದಲೂ ಯಶಸ್ಸಿನಿಂದಲೂ–ಯುಕ್ತನಾಗಿ ನಿರ್ಮಲನಾಗುತ್ತಾನೆ.

ನ ರಾಕ್ಷಸಾಃ ಪಿಶಾಚಾ ವಾ ನ ಭೂತಾ ನ ವಿನಾಯಕಾಃ ।
ವಿಘ್ನಂ ಕುರ್ಯುರ್ಗೃಹೇ ತಸ್ಯ ಯತ್ರಾಯಂ ಪಠ್ಯತೇ ಸ್ತವಃ ॥೧೯೭॥

ಯಾವನ ಮನೆಯಲ್ಲಿ ಈ ಸ್ತೋತ್ರವು ಪಠಿಸಲ್ಪಡುವುದೋ–ಅವನ ಮನೆಯಲ್ಲಿ ಮತ್ತು ಅವನ ಕಾರ್ಯಗಳಲ್ಲಿ ರಾಕ್ಷಸರಾಗಲೀ, ಪಿಶಾಚರಾಗಲೀ, ಭೂತಗಣಗಳಾಗಲೀ, ವಿನಾಯಕರಾಗಲೀ ಯಾವ ವಿಧವಾದ ವಿಘ್ನವನ್ನೂ ಉಂಟುಮಾಡುವುದಿಲ್ಲ.

ಶೃಣುಯಾಚ್ಚೈವ ಯಾ ನಾರೀ ತದ್ಭಕ್ತಾ ಬ್ರಹ್ಮಚಾರಿಣೀ ।
ಪಿತೃಪಕ್ಷೇ ಭರ್ತೃಪಕ್ಷೇ ಪೂಜ್ಯಾ ಭವತಿ ದೇವವತ್ ॥೧೯೮॥

ಯಾವ ಸ್ತ್ರೀಯು ಭಗವಾನ್ ಶಂಕರನಲ್ಲಿ ಭಕ್ತಿಭಾವವನ್ನಿಟ್ಟು ಬ್ರಹ್ಮ ಚರ್ಯವ್ರತವನ್ನು ಪರಿಪಾಲಿಸುತ್ತಾ ಈ ಸ್ತೋತ್ರವನ್ನು ಕೇಳುವಳೋ– ಅವಳು ತಂದೆಯ ಕಡೆಯವರಿಗೂ, ಪತಿಯ ಕಡೆಯವರಿಗೂ ದೇವತೆಯಂತೆಯೇ ಆದರಣೀಯಳಾಗುತ್ತಾಳೆ.

ಶೃಣುಯಾದ್ಯಃ ಸ್ತವಂ ಕೃತ್ಸ್ನಂ ಕೀರ್ತಯೇದ್ವಾ ಸಮಾಹಿತಃ ।
ತಸ್ಯ ಸರ್ವಾಣಿ ಕರ್ಮಾಣಿ ಸಿದ್ಧಿಂ ಗಚ್ಛನ್ತ್ಯಭೀಕ್ಷ್ಣಶಃ ॥೧೯೯॥

ಯಾವನು ಏಕಾಗ್ರಚಿತ್ತನಾಗಿ ಈ ಸ್ತೋತ್ರವನ್ನು ಸಮಗ್ರವಾಗಿ ಪಠಿಸುವನೋ ಅಥವಾ ಕೇಳುವನೋ–ಅವನ ಎಲ್ಲ ಕಾರ್ಯಗಳೂ ಸರ್ವ ಕಾಲದಲ್ಲಿಯೂ ಸಿದ್ಧಿಸುತ್ತಲೇ ಇರುತ್ತವೆ.

ಮನಸಾ ಚಿನ್ತಿತಂ ಯಚ್ಚ ಯಚ್ಚ ವಾಚಾನುಕೀರ್ತಿತಮ್ ।
ಸರ್ವಂ ಸಮ್ಪದ್ಯತೇ ತಸ್ಯ ಸ್ತವಸ್ಯಾಸ್ಯಾನುಕೀರ್ತನಾತ್ ॥೨೦೦॥

ಈ ಸ್ತೋತ್ರವನ್ನು ನಿರಂತರವಾಗಿ ಪಠನಮಾಡುವ ಶಿವಭಕ್ತನಿಗೆ ಮನಸ್ಸಿನಲ್ಲಿ ಚಿಂತಿಸಿದ ಮತ್ತು ಮಾತಿನಿಂದ ವ್ಯಕ್ತಪಡಿಸಿದ ಸಮಸ್ತಕಾರ್ಯ ಗಳೂ ಸಿದ್ಧಿಸುತ್ತವೆ.

ದೇವಸ್ಯ ಚ ಗುಹಸ್ಯಾಪಿ ದೇವ್ಯಾ ನನ್ದೀಶ್ವರಸ್ಯ ಚ ।
ಬಲಿಂ ಸುವಿಹಿತಂ ಕೃತ್ವಾ ದಮೇನ ನಿಯಮೇನ ಚ ॥೨೦೧॥

ತತಸ್ತು ಯುಕ್ತೋ ಗೃಹ್ಣೀಯಾನ್ನಾಮಾನ್ಯಾಶು ಯಥಾಕ್ರಮಮ್ ।
ಈಪ್ಸಿತಾನ್ಲಭತೇ ಸೋಽರ್ಥಾನ್ಭೋಗಾನ್ಕಾಮಾಂಶ್ಚ ಮಾನವಃ ॥೨೦೨॥

ಮೃತಶ್ಚ ಸ್ವರ್ಗಮಾಪ್ನೋತಿ ತಿರ್ಯಕ್ಷು ಚ ನ ಜಾಯತೇ ।
ಇತ್ಯಾಹ ಭಗವಾನ್ವ್ಯಾಸಃ ಪರಾಶರಸುತಃ ಪ್ರಭುಃ ॥೨೦೩॥

ಸಾಧಕನು ಇಂದ್ರಿಯಗಳನ್ನು ಸಂಯಮದಲ್ಲಿಟ್ಟುಕೊಂಡು ಯಮ-ನಿಯಮಾದಿಗಳನ್ನು ಪರಿಪಾಲಿಸುತ್ತಾ ಮಹಾದೇವ, ಕಾರ್ತಿಕೇಯ, ಪಾರ್ವತೀ ದೇವಿ ಮತ್ತು ನಂದೀಶ್ವರರನ್ನು ವಿಧಿಪೂರ್ವಕವಾಗಿ ಪೂಜಿಸಿ ಏಕಾಗ್ರಚಿತ್ತನಾಗಿ ಈ ಸ್ತೋತ್ರದಲ್ಲಿ ಹೇಳಿರುವ ನಾಮಗಳನ್ನು ಕ್ರಮಶಃ ಪಾರಾಯಣ ಮಾಡಬೇಕು. ಹೀಗೆ ಪಾರಾಯಣಮಾಡುವುದರಿಂದ ಭಕ್ತನು ಮನೋವಾಂಛಿತವಾದ ಪದಾರ್ಥಗಳನ್ನೂ, ಸುಖೋಪಭೋಗಗಳನ್ನೂ, ಕಾಮನೆಗಳನ್ನೂ ಪಡೆದುಕೊಳ್ಳುತ್ತಾನೆ. ಮರಣಾನಂತರ ಸ್ವರ್ಗವನ್ನು ಹೊಂದುತ್ತಾನೆ. ಪಶು- ಪಕ್ಷಿಗಳೇ ಮೊದಲಾದ ಯೋನಿಗಳಲ್ಲಿ ಜನ್ಮವನ್ನು ಪಡೆಯುವುದಿಲ್ಲ. ಸರ್ವಸಮರ್ಥರಾದ ಪರಾಶರರ ಮಕ್ಕಳಾದ ವ್ಯಾಸರೇ ಈ ಪ್ರಕಾರವಾಗಿ ಹೇಳಿದ್ದಾರೆ.”

*೨೮೪ನೆಯ ಅಧ್ಯಾಯವು ಮುಗಿಯಿತು.

೨೮೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಅಧ್ಯಾತ್ಮಜ್ಞಾನ ಮತ್ತು ಅದರ ಫಲದ ವರ್ಣನೆ

ಜನಮೇಜಯ! ಯುಧಿಷ್ಠಿರನು ಹೇಳುತ್ತಾನೆ :

ಅಧ್ಯಾತ್ಮಂ ನಾಮ ಯದಿದಂ ಪುರುಷಸ್ಯೇಹ ವಿದ್ಯತೇ ।
ಯದಧ್ಯಾತ್ಮಂ ಯತಶ್ಚೈವ ತನ್ಮೇ ಬ್ರೂಹಿ ಪಿತಾಮಹ ॥೧॥

---

* ದಕ್ಷಯಜ್ಞವಿಧ್ವಂಸಪ್ರಕರಣವು ೨೮೩ ಮತ್ತು ೨೮೪ನೇ ಅಧ್ಯಾಯಗಳಲ್ಲಿ ಬಂದಿದೆ. ಒಂದಕ್ಕೊಂದಕ್ಕೆ ವ್ಯತ್ಯಾಸವಿದೆ. ಯಜ್ಞವು ಮೃಗವಾದ ಪ್ರಕರಣವು

“ಪಿತಾಮಹನೇ! ಶಾಸ್ತ್ರಗಳಲ್ಲಿ ಮನುಷ್ಯನಿಗೆ ‘ಅಧ್ಯಾತ್ಮ’–ಎಂಬ ಹೆಸರಿನ ಒಂದು ಪ್ರಕರಣವೂ ಇದೆ. ಅಧ್ಯಾತ್ಮವೆಂದರೆ ಯಾವುದು? ಅದು ಎಲ್ಲಿಂದ ಹೊರಟಿತು?–ಎಂಬುದನ್ನು ನನಗೆ ತಿಳಿಯಪಡಿಸು.”

ಭೀಷ್ಮನು ಹೇಳುತ್ತಾನೆ :

ಸರ್ವಜ್ಞಾನಂ ಪರಂ ಬುದ್ಧ್ವಾ ಯನ್ಮಾಂ ತ್ವಮನುಪೃಚ್ಛಸಿ ।
ತದ್ವ್ಯಾಖ್ಯಾಸ್ಯಾಮಿ ತೇ ತಾತ ತಸ್ಯ ವ್ಯಾಖ್ಯಾಮಿಮಾಂ ಶೃಣು ॥೨॥

“ಯುಧಿಷ್ಠಿರ! ನೀನು ಬುದ್ಧಿಪೂರ್ವಕವಾಗಿ ನನ್ನನ್ನು ಯಾವ ಅಧ್ಯಾತ್ಮದ ವಿಷಯವಾಗಿ ಪ್ರಶ್ನಿಸುತ್ತಿರುವೆಯೋ–ಅದು ಎಲ್ಲ ವಿಷಯಗಳ ಉತ್ತಮಜ್ಞಾನವನ್ನೂ ಉಂಟುಮಾಡುವುದಾಗಿದೆ. ಅಂತಹ ಅಧ್ಯಾತ್ಮವನ್ನು ನಾನು ನಿನಗೆ ವಿವರಿಸಿ ಹೇಳುತ್ತೇನೆ. ಆ ವಿವರಣೆಯನ್ನು ನೀನು ಏಕಾಗ್ರಚಿತ್ತನಾಗಿ ಕೇಳು.

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಞ್ಚಮಮ್ ।
ಮಹಾಭೂತಾನಿ ಭೂತಾನಾಂ ಸರ್ವೇಷಾಂ ಪ್ರಭವಾಪ್ಯಯೌ ॥೩॥

ಪೃಥಿವೀ, ವಾಯು, ಆಕಾಶ, ಜಲ ಮತ್ತು ಐದನೆಯದಾದ ತೇಜಸ್ಸು ಇವುಗಳು ಪಂಚಭೂತಗಳು. ಎಲ್ಲ ಪ್ರಾಣಿಗಳ ಸೃಷ್ಟಿ-ಲಯಗಳಿಗೂ ಇವು ಸ್ಥಾನಗಳಾಗಿವೆ.

ಸ ತೇಷಾಂ ಗುಣಸಂಘಾತಃ ಶರೀರಂ ಭರತರ್ಷಭ ।
ಸತತಂ ಹಿ ಪ್ರಲೀಯನ್ತೇ ಗುಣಾಸ್ತೇ ಪ್ರಭವನ್ತಿ ಚ ॥೪॥

ಭರತಶ್ರೇಷ್ಠನೇ! ಪ್ರಾಣಿಗಳ ಶರೀರವು ಪಂಚಮಹಾಭೂತಗಳ ಗುಣಗಳ ಸಮಾವೇಶವೇ ಆಗಿದೆ. ಕಾರ್ಯರೂಪದಲ್ಲಿ ಪರಿಣತವಾದ ಆ

೨೮೪ನೆಯ ಅಧ್ಯಾಯದಲ್ಲಿ ಬರುವುದಿಲ್ಲ. ವೀರಭದ್ರನ ಪ್ರಕರಣವು ೨೮೩ನೆಯ ಅಧ್ಯಾಯದಲ್ಲಿ ಬರುವುದಿಲ್ಲ. ದಧೀಚಿಯ ಪ್ರಕರಣವು ೨೮೩ನೆಯ ಅಧ್ಯಾಯದಲ್ಲಿ ಬರುವುದಿಲ್ಲ. ವೈಶಂಪಾಯನರು ಕಲ್ಪಾಂತರದ ಕಥೆಯನ್ನು ಹೇಳಿರುವರೆಂದು ಭಾವಿಸಬಹುದಾಗಿದೆ. ೨೮೪ನೆಯ ಅಧ್ಯಾಯದ ೬೬ನೆಯ ಶ್ಲೋಕದಲ್ಲಿ ಸಾವಿರದ ಎಂಟು ನೂರು ನಾಮಗಳಿಂದ ದಕ್ಷನು ಸ್ತೋತ್ರಮಾಡಿದನೆಂದು ಸ್ಪಷ್ಟವಾಗಿದೆ. ಆದರೆ ಭೀಷ್ಮನು ಹೇಳಿರುವ ಸ್ತೋತ್ರಗಳಲ್ಲಿ ಸಾವಿರದ ಎಂಟು ನಾಮಗಳಿರುವುದಿಲ್ಲ.

ಗುಣಗಳು ಸತತವಾಗಿ ಲೀನವಾಗುತ್ತಿರುತ್ತವೆ ಮತ್ತು ಪ್ರಕಟವಾಗುತ್ತಿರುತ್ತವೆ.

ತತಃ ಸೃಷ್ಟಾನಿ ಭೂತಾನಿ ತಾನಿ ಯಾನ್ತಿ ಪುನಃ ಪುನಃ ।
ಮಹಾಭೂತಾನಿ ಭೂತೇಭ್ಯ ಊರ್ಮಯಃ ಸಾಗರೇ ಯಥಾ ॥೫॥

ಸಾಗರದಲ್ಲಿ ಮೇಲೇಳುವ ಅಲೆಗಳು ಮತ್ತೆ ಮತ್ತೆ ಸಾಗರದಲ್ಲಿಯೇ ಒಂದಾಗಿ ಸೇರಿಕೊಳ್ಳುವಂತೆ–ಪಂಚಮಹಾಭೂತಗಳಿಂದ ಸೃಷ್ಟಿಸಲ್ಪಟ್ಟ ಪ್ರಾಣಿಗಳು ಮತ್ತೆ ಮತ್ತೆ ಆ ಪಂಚಮಹಾಭೂತಗಳಲ್ಲಿಯೇ ಒಂದಾಗಿ ಸೇರಿಕೊಳ್ಳುತ್ತವೆ.

ಪ್ರಸಾರಯಿತ್ವೇಹಾಙ್ಗಾನಿ ಕೂರ್ಮಃ ಸಂಹರತೇ ಯಥಾ ।
ತದ್ವದ್ಭೂತಾನಿ ಭೂತಾನಾಮಲ್ಪೀಯಾಂಸಿ ಸ್ಥವೀಯಸಾಮ್ ॥೬॥

ಯಾವ ರೀತಿಯಲ್ಲಿ ಆಮೆಯು ತನ್ನ ಕೈಕಾಲುಗಳನ್ನು ಹೊರಚಾಚಿದ್ದು ಪುನಃ ಒಳಕ್ಕೆ ಸೇರಿಸಿಕೊಳ್ಳುವುದೋ–ಅದೇ ರೀತಿಯಲ್ಲಿ ಸಮಸ್ತಪ್ರಾಣಿಗಳ ಶರೀರಗಳೂ ಆಕಾಶವೇ ಮೊದಲಾದ ಪಂಚಮಹಾಭೂತಗಳಿಂದ ಹುಟ್ಟುತ್ತವೆ. ಪುನಃ ಅವುಗಳಲ್ಲಿಯೇ ಲೀನವಾಗುತ್ತವೆ.

ಆಕಾಶಾತ್ಖಲು ಯೋ ಘೋಷಃ ಸಂಘಾತಸ್ತು ಮಹೀಗುಣಃ ।
ವಾಯೋಃ ಪ್ರಾಣೋ ರಸಸ್ತ್ವದ್ಭ್ಯೋ ರೂಪಂ ತೇಜಸ ಉಚ್ಯತೇ ॥೭॥

ಶರೀರದಲ್ಲಿ ಯಾವ ಶಬ್ದವುಂಟಾಗುವುದೋ–ಅದು ಆಕಾಶದ ಗುಣವಾಗಿದೆ. ಅವಯವಗಳ ಸಂಘಟನೆಯು (ಸ್ಥೂಲಶರೀರವು) ಪೃಥ್ವಿಯ ಗುಣವಾಗಿದೆ. ಪ್ರಾಣವು ವಾಯುವಿನ ಗುಣವಾಗಿದೆ. ರಸವು ಜಲದ ಗುಣವಾಗಿದೆ. ರೂಪವು ತೇಜಸ್ಸಿನ ಗುಣವೆಂದು ಹೇಳಲ್ಪಟ್ಟಿದೆ.

---

೬೨೨ ನಾಮಗಳಿವೆ. ಮುಂದಿನ ೨೦ ಶ್ಲೋಕಗಳನ್ನು ಒಂದೊಂದು ನಾಮಗಳೆಂದು ಭಾವಿಸಿದರೂ ೬೪೩ ನಾಮಗಳಾಗುತ್ತವೆ. ಫಲಶ್ರುತಿಯನ್ನು ಹೇಳುವಾಗ ಸಹಸ್ರ ನಾಮವೆಂದು ಎಲ್ಲಿಯೂ ಹೇಳಿಲ್ಲ. ಆದುದರಿಂದ ಶಿವಸ್ತೋತ್ರವೆಂದು ಹೇಳುವುದು ಉಚಿತವಾಗಿ ಕಾಣುತ್ತದೆ. ೨೮೩ ಮತ್ತು ೨೮೪ನೆಯ ಅಧ್ಯಾಯಗಳು ಭಂಡಾರ್ಕರ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನವರು ಪ್ರಕಟಿಸಿರುವ ಪುಸ್ತಕದಲ್ಲಿರುವುದಿಲ್ಲ.

ಇತ್ಯೇತನ್ಮಯಮೇವೈತತ್ಸರ್ವಂ ಸ್ಥಾವರಜಙ್ಗಮಮ್ ।
ಪ್ರಲಯೇ ಚ ತಮಭ್ಯೇತಿ ತಸ್ಮಾದುದ್ದಿಶ್ಯತೇ ಪುನಃ ॥೮॥

ಹೀಗೆ ಈ ಸಮಸ್ತವಾದ ಸ್ಥಾವರ-ಜಂಗಮಶರೀರಗಳೆಲ್ಲವೂ ಪಂಚ ಭೂತಮಯವೇ ಆಗಿದೆ. ಪ್ರಳಯಕಾಲದಲ್ಲಿ ಪಂಚಮಹಾಭೂತಗಳೆಲ್ಲವೂ ಪರಮಾತ್ಮನಲ್ಲಿ ಲೀನವಾಗಿ ಹೋಗುತ್ತವೆ. ಸೃಷ್ಟಿಯ ಆರಂಭದಲ್ಲಿ ಪುನಃ ಅವನಿಂದ ಪ್ರಕಟವಾಗುತ್ತವೆ.

ಮಹಾಭೂತಾನಿ ಪಞ್ಚೈವ ಸರ್ವಭೂತೇಷು ಭೂತಕೃತ್ ।
ವಿಷಯಾನ್ಕಲ್ಪಯಾಮಾಸ ಯಸ್ಮಿನ್ಯದನುಪಶ್ಯತಿ ॥೯॥

ಸಕಲಪ್ರಾಣಿಗಳನ್ನೂ ಸೃಷ್ಟಿಮಾಡುವ ಈಶ್ವರನು ಸಮಸ್ತಪ್ರಾಣಿ ಗಳಲ್ಲಿಯೂ ಪಂಚಮಹಾಭೂತಗಳನ್ನೇ ವಿಭಾಗಪೂರ್ವಕವಾಗಿ ಸಮಾವೇಶ ಗೊಳಿಸಿದ್ದಾನೆ. ದೇಹದಲ್ಲಿ ಈ ಭೂತಗಳಿಗೆ ಗೋಚರವಾಗುವ ವಿಷಯ ಗಳನ್ನೂ ಕಲ್ಪಿಸಿರುವನು.

ಶಬ್ದಶ್ರೋತ್ರೇ ತಥಾ ಖಾನಿ ತ್ರಯಮಾಕಾಶಯೋನಿಜಮ್ ।
ರಸಃ ಸ್ನೇಹಶ್ಚ ಜಿಹ್ವಾ ಚ ಅಪಾಮೇತೇ ಗುಣಾಃ ಸ್ಮೃತಾಃ ॥೧೦॥

ಶಬ್ದ, ಶ್ರೋತ್ರೇಂದ್ರಿಯ ಮತ್ತು ಶೂನ್ಯ–ಈ ಮೂರು ಆಕಾಶದ ಗುಣಗಳಾಗಿವೆ ಅಥವಾ ಕಾರ್ಯಗಳಾಗಿವೆ. ರಸ, ಸ್ನೇಹ ಮತ್ತು ನಾಲಿಗೆ ಈ ಮೂರು ಜಲದ ಗುಣಗಳಾಗಿವೆ ಅಥವಾ ಕಾರ್ಯಗಳಾಗಿವೆ.

ರೂಪಂ ಚಕ್ಷುರ್ವಿಪಾಕಶ್ಚ ತ್ರಿವಿಧಂ ಜ್ಯೋತಿರುಚ್ಯತೇ ।
ಘ್ರೇಯಂ ಘ್ರಾಣಂ ಶರೀರಂ ಚ ಏತೇ ಭೂಮಿಗುಣಾಃ ಸ್ಮೃತಾಃ ॥

ರೂಪ, ಕಣ್ಣು ಮತ್ತು ಪರಿಪಾಕ (ಬೇಯುವಿಕೆ)–ಈ ಮೂರು ತೇಜಸ್ಸಿನ ಗುಣಗಳಾಗಿವೆ. ಗಂಧ, ಘ್ರಾಣ ಮತ್ತು ಶರೀರಗಳು ಭೂಮಿಯ ಗುಣಗಳಾಗಿವೆ.

ಪ್ರಾಣಃ ಸ್ಪರ್ಶಶ್ಚ ಚೇಷ್ಟಾ ಚ ವಾಯೋರೇತೇ ಗುಣಾಃ ಸ್ಮೃತಾಃ ।
ಇತಿ ಸರ್ವಗುಣಾ ರಾಜನ್ವ್ಯಾಖ್ಯಾತಾಃ ಪಾಞ್ಚಭೌತಿಕಾಃ ॥೧೨॥

ಪ್ರಾಣ, ಸ್ಪರ್ಶ ಮತ್ತು ಚೇಷ್ಟೆಗಳು ವಾಯುವಿನ ಗುಣಗಳಾಗಿವೆ.

ಅಥವಾ ಕಾರ್ಯಗಳಾಗಿವೆ. ಹೀಗೆ ನಾನು ನಿನಗೆ ಪಂಚಮಹಾಭೂತಗಳ ಗುಣ-ಕರ್ಮಗಳನ್ನು ವರ್ಣಿಸಿ ಹೇಳಿದ್ದೇನೆ.

ಸತ್ತ್ವಂ ರಜಸ್ತಮಃ ಕಾಲಃ ಕರ್ಮ ಬುದ್ಧಿಶ್ಚ ಭಾರತ ।
ಮನಃಷಷ್ಠಾನಿ ಚೈತೇಷು ಈಶ್ವರಃ ಸಮಕಲ್ಪಯತ್ ॥೧೩॥

ಭರತನಂದನ! ಈಶ್ವರನು ಪ್ರಾಣಿಗಳ ಶರೀರಗಳಲ್ಲಿ ಸತ್ತ್ವ, ರಜಸ್ಸು, ತಮಸ್ಸು, ಕಾಲ, ಕರ್ಮ, ಬುದ್ಧಿ ಮತ್ತು ಮನಸ್ಸಿನಿಂದ ಸಹಿತವಾದ ಐದು ಜ್ಞಾನೇಂದ್ರಿಯಗಳು–ಈ ಎಲ್ಲವನ್ನೂ ಕಲ್ಪಿಸಿದ್ದಾನೆ.

ಯದೂರ್ಧ್ವಂ ಪಾದತಲಯೋರವಾಙ್ಮೂರ್ಧ್ನಶ್ಚ ಪಶ್ಯಸಿ ।
ಏತಸ್ಮಿನ್ನೇವ ಕೃತ್ಸ್ನೇಽಯಂ ವರ್ತತೇ ಬುದ್ಧಿರನ್ತರೇ ॥೧೪॥

ಕಾಲುಗಳ ತಳಭಾಗದಿಂದ ಮೇಲುಭಾಗದಲ್ಲಿ ಮತ್ತು ತಲೆಯಿಂದ ಕೆಳಭಾಗದಲ್ಲಿ ಯಾವ ಶರೀರವಿರುವುದೋ–ಆ ಶರೀರದ ಒಳಭಾಗದಲ್ಲಿ ಬುದ್ಧಿಯಿದ್ದು ಅದು ಸಮಗ್ರವಾಗಿ ಶರೀರವನ್ನು ವ್ಯಾಪಿಸಿದೆ.

ಇನ್ದ್ರಿಯಾಣಿ ನರೇ ಪಞ್ಚ ಷಷ್ಠಂ ತು ಮನ ಉಚ್ಯತೇ ।
ಸಪ್ತಮೀಂ ಬುದ್ಧಿಮೇವಾಹುಃ ಕ್ಷೇತ್ರಜ್ಞಃ ಪುನರಷ್ಟಮಃ ॥೧೫॥

ಮನುಷ್ಯನಲ್ಲಿ ಐದು ಜ್ಞಾನೇಂದ್ರಿಯಗಳಿವೆ. ಆರನೆಯದು ಮನಸ್ಸೆಂಬುದಾಗಿ ಹೇಳಲ್ಪಟ್ಟಿದೆ. ಏಳನೆಯದನ್ನು ಬುದ್ಧಿಯೆಂದು ಹೇಳುತ್ತಾರೆ. ಕ್ಷೇತ್ರಜ್ಞನು ಎಂಟನೆಯವನಾಗಿದ್ದಾನೆ.

ಇನ್ದ್ರಿಯಾಣಿ ಚ ಕರ್ತಾ ಚ ವಿಚೇತವ್ಯಾನಿ ಭಾಗಶಃ ।
ತಮಃ ಸತ್ತ್ವಂ ರಜಶ್ಚೈವ ತೇಽಪಿ ಭಾವಾಸ್ತದಾಶ್ರಯಾಃ ॥೧೬॥

ಐದು ಜ್ಞಾನೇಂದ್ರಿಯಗಳನ್ನೂ ಮತ್ತು ಕ್ಷೇತ್ರಜ್ಞನನ್ನೂ ಕಾರ್ಯ ವಿಭಾಗಕ್ಕೆ ಅನುಸಾರವಾಗಿ ಪ್ರತ್ಯೇಕವಾಗಿ ತಿಳಿದುಕೊಳ್ಳಬೇಕು. ಸತ್ತ್ವ-ರಜಸ್ತಮೋಗುಣಗಳೂ ಮತ್ತು ಅವುಗಳ ಸಾತ್ತ್ವಿಕ-ರಾಜಸ-ತಾಮಸಭಾವಗಳೂ ಜೀವಾತ್ಮನನ್ನೇ ಆಶ್ರಯಿಸಿರುತ್ತವೆ.

ಚಕ್ಷುರಾಲೋಚನಾಯೈವ ಸಂಶಯಂ ಕುರುತೇ ಮನಃ ।

ಬುದ್ಧಿರಧ್ಯವಸಾನಾಯ ಸಾಕ್ಷೀ ಕ್ಷೇತ್ರಜ್ಞ ಉಚ್ಯತೇ ।
ತಮಃ ಸತ್ತ್ವಂ ರಜಶ್ಚೇತಿ ಕಾಲಃ ಕರ್ಮ ಚ ಭಾರತ ॥೧೭॥

ಗುಣೈರ್ನೇನೀಯತೇ ಬುದ್ಧಿರ್ಬುದ್ಧಿರೇವೇನ್ದ್ರಿಯಾಣಿ ಚ ।
ಮನಃಷಷ್ಠಾನಿ ಸರ್ವಾಣಿ ಬುದ್ಧ್ಯಭಾವೇ ಕುತೋ ಗುಣಾಃ ॥೧೮॥

ಕಣ್ಣಿರುವುದು ಆಲೋಚನೆಗಾಗಿಯೇ. (ನೇತ್ರವೇ ಮೊದಲಾದ ಇಂದ್ರಿಯಗಳು ದರ್ಶನವೇ ಮೊದಲಾದ ವಿಷಯಗ್ರಹಣಗಳಿಗಾಗಿಯೇ ಇವೆ.) ಮನಸ್ಸು ಸಂಶಯಕಾರಕವು. ಬುದ್ಧಿಯು ವಿಷಯಗಳನ್ನು ಚೆನ್ನಾಗಿ ಸಮಾಲೋಚಿಸಿ ನಿಶ್ಚಯಿಸುತ್ತದೆ. ಕ್ಷೇತ್ರಜ್ಞನು (ಆತ್ಮವು) ಸಾಕ್ಷಿಭೂತನೆಂದು ಹೇಳುತ್ತಾರೆ. ಸತ್ತ್ವ, ರಜಸ್ಸು, ತಮಸ್ಸು, ಕಾಲ ಮತ್ತು ಕರ್ಮ–ಈ ಐದು ಗುಣಗಳ ಮೂಲಕವಾಗಿ ಬುದ್ಧಿಯು ನಾನಾ ವಿಷಯಗಳ ಕಡೆಗೆ ಬಾರಿ-ಬಾರಿಗೂ ಹೋಗುತ್ತಲೇ ಇರುತ್ತದೆ. ಬುದ್ಧಿಯು ಮನಸ್ಸಿನಿಂದ ಯುಕ್ತವಾದ ಎಲ್ಲ ಇಂದ್ರಿಯಗಳನ್ನೂ ಚಾಲನೆಗೊಳಿಸುತ್ತದೆ. ಬುದ್ಧಿಯು ಇಲ್ಲದೆಯೇ ಇದ್ದಿದ್ದರೆ ಇಂದ್ರಿಯಗಳಾಗಲೀ, ಗುಣಗಳಾಗಲೀ ಯಾವ ಕಾರ್ಯವನ್ನು ತಾನೇ ಮಾಡಬಲ್ಲುವು?

ಯೇನ ಪಶ್ಯತಿ ತಚ್ಚಕ್ಷುಃ ಶೃಣ್ವತೀ ಶ್ರೋತ್ರಮುಚ್ಯತೇ ।
ಜಿಘ್ರತೀ ಭವತಿ ಘ್ರಾಣಂ ರಸತೀ ರಸನಾ ರಸಾನ್ ॥೧೯॥

ಸ್ಪರ್ಶನಂ ಸ್ಪರ್ಶತೀ ಸ್ಪರ್ಶಾನ್ಬುದ್ಧಿರ್ವಿಕ್ರಿಯತೇಽಸಕೃತ್ ।
ಯದಾ ಪ್ರಾರ್ಥಯತೇ ಕಿಂಚಿತ್ತದಾ ಭವತಿ ಸಾ ಮನಃ ॥೨೦॥

ಬುದ್ಧಿಯು ಯಾವುದರ ಮೂಲಕವಾಗಿ ನೋಡುವುದೋ–ಆ ಇಂದ್ರಿಯದ ಹೆಸರು ನೇತ್ರ. ಬುದ್ಧಿಯು ಯಾವುದರ ಮೂಲಕ ಕೇಳುವುದೋ–ಅದು ಶ್ರೋತ್ರವೆಂದು ಕರೆಯಲ್ಪಡುತ್ತದೆ. ಬುದ್ಧಿಯು ಯಾವುದರ ಮೂಲಕ ಗಂಧವನ್ನು ಆಘ್ರಾಣಿಸುವುದೋ–ಆ ಇಂದ್ರಿಯಕ್ಕೆ ಘ್ರಾಣವೆಂದು ಹೆಸರು. ಬುದ್ಧಿಯು ಯಾವುದರ ಮೂಲಕವಾಗಿ ರಸಗಳನ್ನು ಆಸ್ವಾದನೆ ಮಾಡುವುದೋ–ಅದಕ್ಕೆ ರಸನೇಂದ್ರಿಯವೆಂದು ಹೆಸರು. ಬುದ್ಧಿಯು ಯಾವುದರ ಮೂಲಕವಾಗಿ ಪದಾರ್ಥಗಳನ್ನು ಸ್ಪರ್ಶಿಸುವುದೋ–ಅದಕ್ಕೆ ಸ್ಪರ್ಶೇಂದ್ರಿಯ ಅಥವಾ ತ್ವಚೆ ಎಂದು ಹೆಸರು. ಬುದ್ಧಿಯು ಹೀಗೆ

ಇಂದ್ರಿಯಗಳೊಡನೆ ಸೇರಿದಾಗ ಪದೇ-ಪದೇ ವಿಕಾರಗೊಳ್ಳುತ್ತಿರುತ್ತದೆ. ಯಾವಾಗ ಬುದ್ಧಿಯು ಏನನ್ನಾದರೂ ಅಪೇಕ್ಷಿಸುವುದೋ–ಆಗ ಆ ಬುದ್ಧಿಯೇ ಮನಸ್ಸಾಗಿ ಪರಿವರ್ತನೆಯನ್ನು ಹೊಂದುತ್ತದೆ.

ಅಧಿಷ್ಠಾನಾನಿ ಬುದ್ಧ್ಯಾ ಹಿ ಪೃಥಗೇತಾನಿ ಪಞ್ಚಧಾ ।
ಇನ್ದ್ರಿಯಾಣೀತಿ ತಾನ್ಯಾಹುಸ್ತೇಷು ದುಷ್ಟೇಷು ದುಷ್ಯತಿ ॥೨೧॥

ಬುದ್ಧಿಗೆ ಯಾವ ಪ್ರತ್ಯೇಕವಾದ ಆಶ್ರಯಸ್ಥಾನಗಳಿವೆಯೋ–ಅವುಗಳನ್ನೇ ಇಂದ್ರಿಯಗಳೆಂದು ಕರೆಯುತ್ತಾರೆ. ಆದುದರಿಂದ ಆಶ್ರಯಸ್ಥಾನಗಳಾದ ಇಂದ್ರಿಯಗಳು ದೂಷಿತವಾದರೆ ಬುದ್ಧಿಯೂ ದೂಷಿತವಾಗುತ್ತದೆ.

ಪುರುಷೇ ತಿಷ್ಠತೀ ಬುದ್ಧಿಸ್ತ್ರಿಷು ಭಾವೇಷು ವರ್ತತೇ ।
ಕದಾಚಿಲ್ಲಭತೇ ಪ್ರೀತಿಂ ಕದಾಚಿದಪಿ ಶೋಚತಿ ॥೨೨॥

ಪುರುಷನಲ್ಲಿ (ಸಾಕ್ಷೀಭೂತನಾದ ಆತ್ಮನಲ್ಲಿ) ಆಶ್ರಯವನ್ನು ಹೊಂದಿರುವ ಬುದ್ಧಿಯು ಸಾತ್ತ್ವಿಕ-ರಾಜಸ-ತಾಮಸಗಳೆಂಬ ಮೂರು ಭಾವಗಳಲ್ಲಿಯೂ ಇರುತ್ತದೆ. ಒಮ್ಮೆ (ಸತ್ತ್ವಗುಣವು ಅಧಿಕವಾದಾಗ) ಬುದ್ಧಿಯು ಆನಂದವನ್ನು ಅನುಭವಿಸುತ್ತದೆ. ಮತ್ತೊಮ್ಮೆ (ರಜೋಗುಣವು ಅಧಿಕವಾದಾಗ) ಶೋಕಿಸುತ್ತದೆ.

ನ ಸುಖೇನ ನ ದುಃಖೇನ ಕದಾಚಿದಪಿ ವರ್ತತೇ ।
ಸೇಯಂ ಭಾವಾತ್ಮಿಕಾ ಭಾವಾಂಸ್ತ್ರೀನೇತಾನ್ಪರಿವರ್ತತೇ ॥೨೩॥

ಕೆಲವು ವೇಳೆ (ತಮೋಗುಣದ ಆಧಿಕ್ಯದಿಂದ ವಿಮೋಹಗೊಂಡಾಗ) ಬುದ್ಧಿಯು ಸುಖ-ದುಃಖಗಳೆರಡರಿಂದಲೂ ಯುಕ್ತವಾಗಿರುವುದಿಲ್ಲ. (ನಿದ್ರಾಲಸ್ಯಗಳಲ್ಲಿಯೇ ಮಗ್ನವಾಗಿರುತ್ತದೆ.) ಹೀಗೆ ಭಾವಾತ್ಮಿಕವಾದ ಬುದ್ಧಿಯು ಸಾತ್ತ್ವಿಕ-ರಾಜಸ-ತಾಮಸಗಳೆಂಬ ಮೂರು ಭಾವಗಳನ್ನೂ ಅನುಸರಿಸುತ್ತಿರುತ್ತದೆ.

ಸರಿತಾಂ ಸಾಗರೋ ಭರ್ತಾ ಯಥಾ ವೇಲಾಮಿವೋರ್ಮಿವಾನ್ ।
ಇತಿ ಭಾವಗತಾ ಬುದ್ಧಿರ್ಭಾವೇ ಮನಸಿ ವರ್ತತೇ ॥೨೪॥

ಯಾವ ರೀತಿಯಲ್ಲಿ ಸರಿತ್ತುಗಳಿಗೆ ಪತಿಯಾದ ಸಮುದ್ರನು ಎತ್ತರವಾದ

ಅಲೆಗಳಿಂದ ಯುಕ್ತನಾಗಿದ್ದರೂ ತನ್ನ ತೀರಪ್ರದೇಶವನ್ನು ದಾಟಿಹೋಗುವುದಿಲ್ಲವೋ–ಅದೇ ರೀತಿಯಲ್ಲಿ ಸಾತ್ತ್ವಿಕಾದಿ ಭಾವಗಳಿಂದ ಯುಕ್ತವಾದ ಬುದ್ಧಿಯು ಮೂರು ಗುಣಗಳನ್ನೂ ಉಲ್ಲಂಘಿಸಿ ಹೋಗುವುದಿಲ್ಲ. (ಮೂರು ಗುಣಗಳಿಂದ ಅತೀತವಾಗುವುದಿಲ್ಲ.) ಭಾವನಾಮಯವಾದ ಮನಸ್ಸಿನಲ್ಲಿಯೇ ಸುತ್ತುತ್ತಿರುತ್ತದೆ.

ಪ್ರವರ್ತಮಾನಂ ತು ರಜಸ್ತದ್ಭಾವೇನಾನುವರ್ತತೇ ।
ಪ್ರಹರ್ಷಃ ಪ್ರೀತಿರಾನನ್ದಃ ಸುಖಂ ಸಂಶಾನ್ತಚಿತ್ತತಾ ।
ಕಥಂಚಿದುಪಪದ್ಯನ್ತೇ ಪುರುಷೇ ಸಾತ್ತ್ವಿಕಾ ಗುಣಾಃ ॥೨೫॥

ರಜೋಗುಣದ ಪ್ರವೃತ್ತಿಯುಂಟಾದಾಗ ಬುದ್ಧಿಯು ರಜೋಗುಣದ ಭಾವವನ್ನು ಅನುಸರಿಸಿಹೋಗುತ್ತದೆ. ಪುರುಷನಲ್ಲಿ ಯಾವುದೇ ಕಾರಣದಿಂದಲಾದರೂ ಅಧಿಕವಾದ ಹರ್ಷ, ಪ್ರೀತಿ, ಆನಂದ, ಸುಖ ಮತ್ತು ಚಿತ್ತಶಾಂತಿ–ಇವುಗಳು ಕಂಡುಬಂದಲ್ಲಿ ಅವನಲ್ಲಿ ಸಾತ್ತ್ವಿಕಗುಣಗಳಿವೆಯೆಂದು ತಿಳಿಯಬೇಕು.

ಪರಿದಾಹಸ್ತಥಾ ಶೋಕಃ ಸಂತಾಪೋಽಪೂರ್ತಿರಕ್ಷಮಾ ।
ಲಿಙ್ಗಾನಿ ರಜಸಸ್ತಾನಿ ದೃಶ್ಯನ್ತೇ ಹೇತ್ವಹೇತುಭಿಃ ॥೨೬॥

ಶರೀರದಲ್ಲಿ ಅಥವಾ ಮನಸ್ಸಿನಲ್ಲಿ ಸಕಾರಣವಾಗಿಯೋ ಅಥವಾ ನಿಷ್ಕಾರಣವಾಗಿಯೋ ದಾಹ, ಶೋಕ, ಸಂತಾಪ, ಅಪೂರ್ಣತೆ (ಅತೃಪ್ತಿ), ಅಸಹನೆ–ಇತ್ಯಾದಿ ಲಕ್ಷಣಗಳು ಕಂಡುಬಂದಲ್ಲಿ ಅವುಗಳು ರಜೋಗುಣಕ್ಕೆ ಸಂಬಂಧಿಸಿದುವುಗಳೆಂದು ತಿಳಿದುಕೊಳ್ಳಬೇಕು.

ಅವಿದ್ಯಾ ರಾಗಮೋಹೌ ಚ ಪ್ರಮಾದಃ ಸ್ತಬ್ಧತಾ ಭಯಮ್ ।
ಅಸಮೃದ್ಧಿಸ್ತಥಾ ದೈನ್ಯಂ ಪ್ರಮೋಹಃ ಸ್ವಪ್ನತನ್ದ್ರಿತಾ ॥೨೭॥

ಕಥಂಚಿದುಪವರ್ತನ್ತೇ ವಿವಿಧಾಸ್ತಾಮಸಾ ಗುಣಾಃ ॥೨೮॥

ಯಾವುದಾದರೂ ಕಾರಣದಿಂದ ಅವಿದ್ಯೆ, ರಾಗ, ಮೋಹ, ಪ್ರಮಾದ, ಸ್ತಬ್ಧತೆ, ಭಯ, ದಾರಿದ್ರ್ಯ, ದೈನ್ಯ, ಪ್ರಮೋಹ (ಮೂರ್ಛೆ), ಸ್ವಪ್ನ, ನಿದ್ರೆ, ಆಲಸ್ಯ–ಇವೇ ಮೊದಲಾದ ದೋಷಗಳು ಮನುಷ್ಯನಲ್ಲಿ ಕಾಣಿಸಿ

ಕೊಂಡಲ್ಲಿ–ಆ ದೋಷಗಳು ಅನೇಕವಿಧವಾದ ಸಂಬಂಧಪಟ್ಟ ವಿವಿಧರೂಪ ಗಳೆಂದು ತಿಳಿಯಬೇಕು.

ತತ್ರ ಯತ್ಪ್ರೀತಿಸಂಯುಕ್ತಂ ಕಾಯೇ ಮನಸಿ ವಾ ಭವೇತ್ ।
ವರ್ತತೇ ಸಾತ್ತ್ವಿಕೋ ಭಾವ ಇತ್ಯುಪೇಕ್ಷೇತ ತತ್ತಥಾ ॥೨೯॥

ಇಂತಹ ಸ್ಥಿತಿಯಲ್ಲಿ ಶರೀರದಲ್ಲಿ ಅಥವಾ ಮನಸ್ಸಿನಲ್ಲಿ ಪ್ರಸನ್ನತೆಯ ಭಾವನೆಯೇನಾದರೂ ಹುಟ್ಟಿದ ಪಕ್ಷದಲ್ಲಿ–ಅದನ್ನು ಸಾತ್ತ್ವಿಕಭಾವವೆಂದು ಭಾವಿಸಬೇಕು.

ಅಥ ಯದ್ದುಃಖಸಂಯುಕ್ತಮಪ್ರೀತಿಕರಮಾತ್ಮನಃ ।
ಪ್ರವೃತ್ತಂ ರಜ ಇತ್ಯೇವ ತದಸಂರಭ್ಯ ಚಿನ್ತಯೇತ್ ॥೩೦॥

ಮನಸ್ಸಿಗೆ ಅಪ್ರೀತಿಕರವೂ ದುಃಖಯುಕ್ತವೂ ಆದ ಭಾವವು ಉಂಟಾದಲ್ಲಿ ರಜೋಗುಣದ ಪ್ರವೃತ್ತಿಯಾಗಿರುವುದೆಂದು ಶಾಂತರಾಗಿ ತಿಳಿಯಬೇಕು.

ಅಥ ಯನ್ಮೋಹಸಂಯುಕ್ತಂ ಕಾಯೇ ಮನಸಿ ವಾ ಭವೇತ್ ।
ಅಪ್ರತರ್ಕ್ಯಮವಿಜ್ಞೇಯಂ ತಮಸ್ತದುಪಧಾರಯೇತ್ ॥೩೧॥

ಹೀಗೆಯೇ ದೇಹದಲ್ಲಿ ಅಥವಾ ಮನಸ್ಸಿನಲ್ಲಿ ಊಹೆಗೂ ನಿಲುಕದ, ತಿಳಿದುಕೊಳ್ಳಲು ಅಸಾಧ್ಯವಾದಂತಹ ಮೋಹಯುಕ್ತವಾದ ಭಾವವೇನಾ ದರೂ ಉಂಟಾದರೆ–ತಮೋಗುಣದ ಆವಿರ್ಭಾವವಾಗಿರುವುದೆಂದು ತಿಳಿದು ಕೊಳ್ಳಬೇಕು.

ಇತಿ ಬುದ್ಧಿಗತೀಃ ಸರ್ವಾ ವ್ಯಾಖ್ಯಾತಾ ಯಾವತೀರಿಹ ।
ಏತದ್ಬುದ್ಧ್ವಾ ಭವೇದ್ಬುದ್ಧಃ ಕಿಮನ್ಯದ್ಬುದ್ಧಲಕ್ಷಣಮ್ ॥೩೨॥

ಹೀಗೆ ಬುದ್ಧಿಗೆ ಎಷ್ಟು ವಿಧವಾದ ಅವಸ್ಥೆಗಳಿವೆಯೋ–ಅವೆಲ್ಲವನ್ನೂ ವಿವರಿಸಿ ಹೇಳಿಯಾಯಿತು. ಬುದ್ಧಿಯ ಈ ಎಲ್ಲ ಅವಸ್ಥೆಗಳನ್ನೂ ಸಂಪೂರ್ಣ ವಾಗಿ ತಿಳಿದುಕೊಂಡವನು ಜ್ಞಾನಿಯೇ ಆಗುತ್ತಾನೆ. ಇಷ್ಟು ಹೊರತಾಗಿ ಜ್ಞಾನಿಗೆ ಬೇರೆ ಯಾವ ಲಕ್ಷಣಗಳು ಬೇಕು?

ಸತ್ತ್ವಕ್ಷೇತ್ರಜ್ಞಯೋರೇತದನ್ತರಂ ವಿದ್ಧಿ ಸೂಕ್ಷ್ಮಯೋಃ ।
ಸೃಜತೇಽತ್ರ ಗುಣಾನೇಕ ಏಕೋ ನ ಸೃಜತೇ ಗುಣಾನ್ ॥೩೩॥

ಅತ್ಯಂತಸೂಕ್ಷ್ಮವಾದ ಬುದ್ಧಿ ಮತ್ತು ಕ್ಷೇತ್ರಜ್ಞರಲ್ಲಿ ಇರುವ ಒಂದು ವ್ಯತ್ಯಾಸವನ್ನು ಸ್ಪಷ್ಟವಾಗಿ ತಿಳಿ. ಈ ಎರಡರಲ್ಲಿ ಬುದ್ಧಿಯು ಸತ್ತ್ವಾದಿಗುಣಗಳನ್ನು ಸೃಷ್ಟಿಸುತ್ತದೆ. ಮತ್ತೊಂದು (ಆತ್ಮವು) ಗುಣಗಳನ್ನು ಸೃಷ್ಟಿಸುವುದಿಲ್ಲ. (ಕೇವಲ ಸಾಕ್ಷಿಭೂತವಾಗಿರುತ್ತದೆ.)

ಪೃಥಗ್ಭೂತೌ ಪ್ರಕೃತ್ಯಾ ತು ಸಮ್ಪ್ರಯುಕ್ತೌ ಚ ಸರ್ವದಾ ।
ಯಥಾ ಮತ್ಸ್ಯೋಽದ್ಭಿರನ್ಯಃ ಸ್ಯಾತ್ಸಮ್ಪ್ರಯುಕ್ತೋ ಭವೇತ್ತಥಾ ॥೩೪॥

ಸ್ವಭಾವತಃ ಬುದ್ಧಿ ಮತ್ತು ಕ್ಷೇತ್ರಜ್ಞರು ಭಿನ್ನರೇ ಆಗಿರುತ್ತಾರೆ. ಆದರೆ ಯಾವಾಗಲೂ ಪರಸ್ಪರವಾಗಿ ಸೇರಿಯೇ ಇರುತ್ತಾರೆ. ಯಾವ ರೀತಿ ಮೀನು ನೀರಿನಿಂದ ಭಿನ್ನವಾಗಿದ್ದರೂ ಯಾವಾಗಲೂ ನೀರಿನೊಡನೆಯೇ ಸೇರಿಕೊಂಡಿರುವುದೋ–ಅದೇ ರೀತಿಯಲ್ಲಿ ಬುದ್ಧಿ ಮತ್ತು ಆತ್ಮಗಳು ಪ್ರತ್ಯೇಕವಾಗಿದ್ದರೂ ಯಾವಾಗಲೂ ಪರಸ್ಪರವಾಗಿ ಸೇರಿಕೊಂಡೇ ಇರುತ್ತವೆ.

ನ ಗುಣಾ ವಿದುರಾತ್ಮಾನಂ ಸ ಗುಣಾನ್ವೇದ ಸರ್ವತಃ ।
ಪರಿದ್ರಷ್ಟಾ ಗುಣಾನಾಂ ತು ಸಂಸ್ರಷ್ಟಾ ಮನ್ಯತೇ ಯಥಾ ॥೩೫॥

ಸತ್ತ್ವಾದಿಗುಣಗಳು ಜಡವಾಗಿರುವುದರಿಂದ ಆತ್ಮನನ್ನು ತಿಳಿಯಲಾರವು. ಆದರೆ ಆತ್ಮನು ಚೇತನನಾಗಿರುವುದರಿಂದ ಗುಣಗಳನ್ನು ಎಲ್ಲ ಪ್ರಕಾರಗಳಿಂದಲೂ ತಿಳಿದುಕೊಂಡಿರುತ್ತಾನೆ. ವಸ್ತುತಃ ಅವನು ಗುಣಗಳಿಗೆ ಸಾಕ್ಷಿಭೂತನಾಗಿರುತ್ತಾನೆ. ಆದರೆ ಮೂಢರು ಅವನನ್ನು ಗುಣಗಳೊಡನೆ ಸೇರಿಕೊಂಡಿರುವವನೆಂದು ತಿಳಿದಿರುತ್ತಾರೆ.

ಆಶ್ರಯೋ ನಾಸ್ತಿ ಸತ್ತ್ವಸ್ಯ ಗುಣಸರ್ಗೇಣ ಚೇತನಾ ।
ಸತ್ತ್ವಮಸ್ಯ ಸೃಜನ್ತ್ಯನ್ಯೇ ಗುಣಾನ್ವೇದ ಕದಾಚನ ॥೩೬॥

ವಾಸ್ತವವಾಗಿ ಚೈತನ್ಯವು (ಪುರುಷನು) ಬುದ್ಧಿಸತ್ತ್ವಕ್ಕೆ ಆಶ್ರಯವಾಗುವುದಿಲ್ಲ. ಇತರ ಕಾರಣಗುಣಗಳು ಅದನ್ನು ಸೃಷ್ಟಿಸುತ್ತವೆಯೆಂದು ಆದರ ಕಾರಣಗಳಿಂದ ಊಹಿಸಬೇಕು. ಅವನು (ಪುರುಷನು) ಕೆಲವೊಮ್ಮೆ ಮಾತ್ರ (ಪ್ರಕೃತಿಸಂಸರ್ಗವೆಂಬ ಅಜ್ಞಾನವಿದ್ದಾಗ ಮಾತ್ರ) ತ್ರಿಗುಣಗಳನ್ನು ತಿಳಿಯುತ್ತಾನೆ.

ಸೃಜತೇ ಹಿ ಗುಣಾನ್ಸತ್ತ್ವಂ ಕ್ಷೇತ್ರಜ್ಞಃ ಪರಿಪಶ್ಯತಿ ।
ಸಮ್ಪ್ರಯೋಗಸ್ತಯೋರೇಷ ಸತ್ತ್ವಕ್ಷೇತ್ರಜ್ಞಯೋರ್ಧ್ರುವಃ ॥೩೭॥

ಬುದ್ಧಿಯು ಸತ್ತ್ವಾದಿಗುಣಗಳನ್ನು ಸೃಷ್ಟಿಸುತ್ತದೆ. ಕ್ಷೇತ್ರಜ್ಞನು ಸಾಕ್ಷಿಭೂತನಾಗಿ ನೋಡುತ್ತಿರುತ್ತಾನೆ. ಬುದ್ಧಿಗೂ ಮತ್ತು ಆತ್ಮನಿಗೂ ಈ ಸಂಬಂಧವು ಅನಾದಿಕಾಲದಿಂದಲೂ ನಡೆದುಬಂದಿದೆ.

ಇನ್ದ್ರಿಯೈಸ್ತು ಪ್ರದೀಪಾರ್ಥಂ ಕ್ರಿಯತೇ ಬುದ್ಧಿರನ್ತರಾ ।
ನಿಶ್ಚಕ್ಷುರ್ಭಿರಜಾನದ್ಭಿರಿನ್ದ್ರಿಯಾಣಿ ಪ್ರದೀಪವತ್ ॥೩೮॥

ಜ್ಞಾನಶಕ್ತಿಯಿಂದ ರಹಿತವಾದ, ತಿಳಿವಳಿಕೆಯಿಲ್ಲದ ಇಂದ್ರಿಯಗಳು ಅಪೇಕ್ಷಿತವಾದ ವಸ್ತುಗಳನ್ನು ಪ್ರಕಾಶಗೊಳಿಸುವ ಸಲುವಾಗಿ ಬುದ್ಧಿಯನ್ನು ಮಧ್ಯವರ್ತಿಯನ್ನಾಗಿ ಮಾಡಿಕೊಳ್ಳುತ್ತವೆ. ಇಂದ್ರಿಯಗಳು ವಸ್ತುಗಳನ್ನು ಪ್ರಕಾಶಗೊಳಿಸುವ ದೀಪಗಳಂತಿರುತ್ತವೆ.

ಏವಂ ಸ್ವಭಾವಮೇವೈತತ್ತದ್ಬುದ್ಧ್ವಾ ವಿಹರೇನ್ನರಃ ।
ಅಶೋಚನ್ನಪ್ರಹೃಷ್ಯಂಶ್ಚ ಸ ವೈ ವಿಗತಮತ್ಸರಃ ॥೩೯॥

(ಹೀಗೆ ಆತ್ಮನು ಅಸಂಗನು, ನಿರ್ಗುಣನು ಎಂಬುದಾಗಿ) ಆತ್ಮನ ಸ್ವಭಾವವನ್ನು ಅರಿತು ವಿಷಯಗಳಲ್ಲಿ ವಿಹರಿಸಬೇಕು. ದುಃಖವು ಒದಗಿದಾಗ ಶೋಕಿಸಬಾರದು. ಪ್ರಿಯವುಂಟಾದಾಗ ಸಂತೋಷಿಸಬಾರದು. ಹೀಗೆ ವರ್ತಿಸುವವನು (ಗುಣಾತೀತನಾದುದರಿಂದ) ಅಸೂಯಾರಹಿತನೆನಿಸುತ್ತಾನೆ.

ಸ್ವಭಾವಸಿದ್ಧಮೇವೈತದ್ಯದಿಮಾನ್ಸೃಜತೇ ಗುಣಾನ್ ।
ಊರ್ಣನಾಭಿರ್ಯಥಾ ಸೂತ್ರಂ ವಿಜ್ಞೇಯಾಸ್ತನ್ತುವದ್ಗುಣಾಃ ॥೪೦॥

ಜೇಡರ ಹುಳುವು ಬಲೆಯನ್ನು ತಾನೇ ಕಲ್ಪಿಸಿಕೊಳ್ಳುವಂತೆ– ಬುದ್ಧಿಯು ಗುಣಗಳನ್ನು ತಾನೇ ಸೃಷ್ಟಿಸಿಕೊಳ್ಳುವುದು ಸ್ವಭಾವಸಿದ್ಧವಾಗಿದೆ. ಆದುದರಿಂದ ಜೇಡರ ಬಲೆಯಂತೆ ಗುಣಗಳೆಂದೂ-ಜೇಡನಂತೆ ಬುದ್ಧಿಯೆಂದೂ ತಿಳಿದುಕೊಳ್ಳಬೇಕು.

ಪ್ರಧ್ವಸ್ತಾ ನ ನಿವರ್ತನ್ತೇ ಪ್ರವೃತ್ತಿರ್ನೋಪಲಭ್ಯತೇ ।
ಏವಮೇಕೇ ವ್ಯವಸ್ಯನ್ತಿ ನಿವೃತ್ತಿರಿತಿ ಚಾಪರೇ ॥೪೧॥

ಗುಣಗಳು ನಷ್ಟವಾಗಿಹೋದನಂತರ ಪುನಃ ಅವುಗಳು ಹಿಂದಿರುಗಿ ಬರುವುದಿಲ್ಲ. ಏಕೆಂದರೆ : ಪುನಃ ಅವುಗಳ ಪ್ರವೃತ್ತಿಯೇ ಕಂಡುಬರುವುದಿಲ್ಲ–ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಮತ್ತೆ ಕೆಲವು ವಿದ್ವಾಂಸರು ಗುಣಗಳು ನಷ್ಟವಾಗಿ ಹೋದನಂತರ ಪುನರಾವೃತ್ತಿಯ ಸಂಭವವೂ ಉಂಟೆಂದು ಹೇಳುತ್ತಾರೆ.

ಇತೀದಂ ಹೃದಯಗ್ರನ್ಥಿಂ ಬುದ್ಧಿಚಿನ್ತಾಮಯಂ ದೃಢಮ್ ।
ವಿಮುಚ್ಯ ಸುಖಮಾಸೀತ ವಿಶೋಕಶ್ಛಿನ್ನಸಂಶಯಃ ॥೪೨॥]

ಹೀಗೆ ಚಿಂತಾಮಯವಾದ ದೃಢವಾದ ಹೃದಯಗ್ರಂಥಿಯನ್ನು ಕಿತ್ತೊಗೆದು ಶೋಕ-ಸಂಶಯಗಳಿಂದ ರಹಿತನಾಗಿ ಸುಖದಿಂದಿರಬೇಕು.

ತಾಮ್ಯೇಯುಃ ಪ್ರಚ್ಯುತಾಃ ಪೃಥ್ವೀಂ ಮೋಹಪೂರ್ಣಾಂ ನದೀಂ ನರಾಃ ।
ಯಥಾ ಗಾಧಮವಿದ್ವಾಂಸೋ ಬುದ್ಧಿಯೋಗಮಯಂ ತಥಾ ॥೪೩॥

ನದಿಯ ಆಳವನ್ನು ತಿಳಿಯದಿರುವ ಮನುಷ್ಯನು ನೀರಿನಲ್ಲಿ ಜಾರಿ ಆಳಕ್ಕೆ ಬಿದ್ದು ಪ್ರಾಣಾಂತಿಕವಾದ ದುಃಖವನ್ನು ಅನುಭವಿಸುವಂತೆ–ಬುದ್ಧಿಯೋಗವನ್ನು (ಜ್ಞಾನಯೋಗವನ್ನು) ತಿಳಿಯದೇ ಇರುವ ಅಜ್ಞಾನಿಗಳು ಮೋಹಪೂರ್ಣವಾದ ಮತ್ತು ವಿಶಾಲವಾದ ಈ ಸಂಸಾರವೆಂಬ ನದಿಯಲ್ಲಿ ಬಿದ್ದು ಪರಿತಪಿಸುತ್ತಾರೆ.

ನೈವ ತಾಮ್ಯನ್ತಿ ವಿದ್ವಾಂಸಃ ಪ್ಲವನ್ತಃ ಪಾರಮಮ್ಭಸಃ ।
ಅಧ್ಯಾತ್ಮವಿದುಷೋ ಧೀರಾ ಜ್ಞಾನಂ ತು ಪರಮಂ ಪ್ಲವಃ ॥೪೪॥

ದಾಟುವ ಉಪಾಯವನ್ನು ತಿಳಿದಿರುವ ವಿದ್ವಾಂಸರಾದವರು ನದಿಯಲ್ಲಿ ದೋಣಿ, ಹಡಗು ಮೊದಲಾದುವುಗಳ ಮೂಲಕ ತೀರವನ್ನು ಸೇರುತ್ತಾರೆ. ಸ್ವಲ್ಪವಾದರೂ ಪರಿತಾಪಪಡುವುದಿಲ್ಲ. ಅದೇ ರೀತಿಯಲ್ಲಿ ಅಧ್ಯಾತ್ಮತತ್ತ್ವವನ್ನು ತಿಳಿದ ಧೀರರು ಅನಾಯಾಸವಾಗಿ ಸಂಸಾರಸಾಗರವನ್ನು ದಾಟುತ್ತಾರೆ.

ಸಂಸಾರವೆಂಬ ಅಗಾಧವಾದ ಸಮುದ್ರವನ್ನು ದಾಟಲು ಪರಮಜ್ಞಾನವೇ ಶ್ರೇಷ್ಠವಾದ ನಾವೆಯಾಗಿರುತ್ತದೆ.

ನ ಭವತಿ ವಿದುಷಾಂ ಮಹದ್ಭಯಂ
ಯದವಿದುಷಾಂ ಸುಮಹದ್ಭಯಂ ಭವೇತ್ ।
ನ ಹಿ ಗತಿರಧಿಕಾಸ್ತಿ ಕಸ್ಯಚಿ-
ತ್ಸಕೃದುಪದರ್ಶಯತೀಹ ತುಲ್ಯತಾಮ್ ॥೪೫॥

ಅಜ್ಞಾನಿಗಳಾಗಿರುವವರಿಗೆ ಯಾವ ಸಂಸಾರದಿಂದ ಮಹಾಭಯ ವುಂಟಾಗುವುದೋ–ಅದೇ ಸಂಸಾರದಿಂದ ಜ್ಞಾನಿಗಳಾದವರಿಗೆ ಕಿಂಚಿತ್ತಾದರೂ ಭಯವಿರುವುದಿಲ್ಲ. ಜ್ಞಾನಿಗಳಲ್ಲಿ ಯಾರಿಗೇ ಆದರೂ ಅಧಿಕವಾದ ಅಥವಾ ನ್ಯೂನವಾದ ಗತಿಯು ಪ್ರಾಪ್ತವಾಗುವುದಿಲ್ಲ. ಜ್ಞಾನಿಗಳೆಲ್ಲರೂ ಸರ್ವಸಮಾನವಾದ ಗತಿಯನ್ನೇ ಹೊಂದುತ್ತಾರೆ. (ಸಕೃದ್ವಿಭಾತೋ ಹ್ಯೇಷ ಬ್ರಹ್ಮಲೋಕಃ–ಇತ್ಯಾದಿ ಶ್ರುತಿಗಳು ಮೋಕ್ಷದಲ್ಲಿ ತಾರತಮ್ಯವಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತವೆ.)

ಯತ್ಕರೋತಿ ಬಹುದೋಷಮೇಕತ-
ಸ್ತಚ್ಚ ದೂಷಯತಿ ಯತ್ಪುರಾಕೃತಮ್ ।
ನಾಪ್ರಿಯಂ ತದುಭಯಂ ಕರೋತ್ಯಸೌ
ಯಚ್ಚ ದೂಷಯತಿ ಯತ್ಕರೋತಿ ಚ ॥೪೬॥

ಜ್ಞಾನಿಯು ತಾನು ಹಿಂದಿನ ಜನ್ಮಗಳಲ್ಲಿ ಮಾಡಿದ ಎಲ್ಲ ದುಷ್ಟಕರ್ಮಗಳನ್ನೂ ಜ್ಞಾನಬಲದಿಂದ ಖಂಡಿಸಿಬಿಡುತ್ತಾನೆ. ಅಲ್ಲದೇ ಈ ಜನ್ಮದಲ್ಲಿಯೂ ಕರ್ಮಗಳನ್ನು ರೂಪಿಸುವಿಕೆ ಮತ್ತು ದುಷ್ಟಕರ್ಮಗಳನ್ನು ಮಾಡುವಿಕೆ–ಎಂಬ ಎರಡು ಅನಿಷ್ಟಕಾರ್ಯಗಳನ್ನೂ ಮಾಡುವುದಿಲ್ಲ. (ಕರ್ಮನಿಂದನೆಯನ್ನಾಗಲೀ ನಿಂದ್ಯಕರ್ಮಗಳ ಆಚರಣೆಯನ್ನಾಗಲೀ ಮಾಡುವುದಿಲ್ಲ.)”

* ೨೮೫ನೆಯ ಅಧ್ಯಾಯವು ಮುಗಿಯಿತು.

---

* ೧೯೪ನೆಯ ಅಧ್ಯಾಯ ಮತ್ತು ೨೮೫ನೆಯ ಅಧ್ಯಾಯಗಳಲ್ಲಿ ಪ್ರಶ್ನೆಯು ಏಕರೂಪವಾಗಿದೆ. ಪದಗಳು ಸ್ವಲ್ಪ ವ್ಯತ್ಯಾಸವಾಗಿವೆ. ಭೀಷ್ಮನ ಉತ್ತರದಲ್ಲಿಯೂ

ಸಮಂಗನಿಂದ ನಾರದರಿಗೆ ಶೋಕರಹಿತಸ್ಥಿತಿಯ ವರ್ಣನೆ

ಪಾರಿಕ್ಷಿತ! ಯುಧಿಷ್ಠಿರನು ಹೇಳುತ್ತಾನೆ :

ಶೋಕಾದ್ದುಃಖಾಚ್ಚ ಮೃತ್ಯೋಶ್ಚ ತ್ರಸನ್ತೇ ಪ್ರಾಣಿನಃ ಸದಾ ।
ಉಭಯಂ ನೋ ಯಥಾ ನ ಸ್ಯಾತ್ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹನೇ! ಪ್ರಪಂಚದಲ್ಲಿರುವ ಎಲ್ಲ ಪ್ರಾಣಿಗಳೂ ಕಷ್ಟಕರವಾದ ದುಃಖ ಮತ್ತು ಮರಣಗಳಿಗೆ ಬಹಳವಾಗಿ ಭಯಪಡುತ್ತವೆ. ದುಃಖ-ಮೃತ್ಯುಗಳೆರಡರ ಭಯವೂ ಇಲ್ಲದಂತಾಗಲು ಏನು ಮಾಡಬೇಕೆಂಬುದರ ಬಗೆಗೆ ನನಗೆ ತಿಳಿಯಹೇಳು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ನಾರದರಿಗೂ ಮತ್ತು ಸಮಂಗನಿಗೂ ನಡೆದ ಸಂವಾದರೂಪವಾದ ಬಹಳ ಹಿಂದಿನ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನು ನಿನಗೂ ತಿಳಿಸುವೆನು.

ಮಹರ್ಷಿಗಳಾದ ನಾರದರು ಒಮ್ಮೆ ಸಮಂಗನನ್ನು ಪ್ರಶ್ನಿಸಿದರು :

ಉರಸೇವ ಪ್ರಣಮಸೇ ಬಾಹುಭ್ಯಾಂ ತರಸೀವ ಚ ।
ಸಮ್ಪ್ರಹೃಷ್ಟಮನಾ ನಿತ್ಯಂ ವಿಶೋಕ ಇವ ಲಕ್ಷ್ಯಸೇ ॥೩॥

"ಸಮಂಗನೇ! ಇತರರು ತಲೆಯನ್ನು ಬಗ್ಗಿಸಿ ನಮಸ್ಕರಿಸಿದರೆ ನೀನು

ಈ ಅಧ್ಯಾಯದಲ್ಲಿರುವ ಎಲ್ಲ ಶ್ಲೋಕಗಳೂ ಸಾಮಾನ್ಯವಾಗಿ ಪದಗಳ ವ್ಯತ್ಯಾಸದಿಂದ ೧೯೪ನೇ ಅಧ್ಯಾಯದಲ್ಲಿ ಬಂದಿವೆ. ೧೯೪ನೆಯ ಅಧ್ಯಾಯದಲ್ಲಿ ೬೩ ಶ್ಲೋಕಗಳಿವೆ. ೨೮೫ನೆಯ ಅಧ್ಯಾಯದಲ್ಲಿ ೪೬ ಶ್ಲೋಕಗಳಿವೆ. ಈ ಅಧ್ಯಾಯದಲ್ಲಿರುವುದಕ್ಕಿಂತಲೂ ೧೭ ಶ್ಲೋಕಗಳು ಹೆಚ್ಚಾಗಿವೆ. ಅದು ಹೊರತಾಗಿ ಎರಡು ಅಧ್ಯಾಯಗಳಲ್ಲಿಯೂ ಹೆಚ್ಚು ವ್ಯತ್ಯಾಸವೇನೂ ಕಂಡುಬರುವುದಿಲ್ಲ. ಆದರೆ ಈ ಪಾಠವು ಗೀತಾಪ್ರೆಸ್ಸಿನವರ ಪುಸ್ತಕದಲ್ಲಿಯೂ–ನೀಲಕಂಠರ ವ್ಯಾಖ್ಯಾನವಿರುವ ಪುಸ್ತಕದಲ್ಲಿಯೂ ಇದೆ. ಭಂ. ರಿ. ಇನ್‌ಸ್ಟಿಟ್ಯೂಟಿನವರು ಪ್ರಕಟಿಸಿರುವ ಪುಸ್ತಕದಲ್ಲಿ ಈ ಅಧ್ಯಾಯವಿರುವುದಿಲ್ಲ.

ಹೃದಯವನ್ನೇ ನೆಲಕ್ಕೆ ತಾಗಿಸಿ ದೀರ್ಘದಂಡನಮಸ್ಕಾರವನ್ನು ಮಾಡುವೆ. (ಅತ್ಯಂತವಿನಯಶಾಲಿಯಾಗಿರುವೆ.) ಯಾರ ಸಹಾಯವೂ ಇಲ್ಲದೇ ತೋಳುಗಳಿಂದಲೇ ಭವಸಾಗರವನ್ನು ಈಜುವವನಂತೆ ಕಾಣುತ್ತಿರುವೆ. ಸದಾ ಪ್ರಹೃಷ್ಟವಾದ ಮನಸ್ಸಿನಿಂದ ಕೂಡಿ ಶೋಕರಹಿತನಾಗಿರುವಂತೆಯೂ ಕಾಣುತ್ತಿರುವೆ.

ಉದ್ವೇಗಂ ನ ಹಿ ತೇ ಕಿಂಚಿತ್ಸುಸೂಕ್ಷ್ಮಮಪಿ ಲಕ್ಷಯೇ ।
ನಿತ್ಯತೃಪ್ತ ಇವ ಸ್ವಸ್ಥೋ ಬಾಲವಚ್ಚ ವಿಚೇಷ್ಟಸೇ ॥೪॥

ನಿನ್ನ ಮನಸ್ಸಿನಲ್ಲಿ ಅತ್ಯಲ್ಪವಾದ ಉದ್ವೇಗವಿರುವುದನ್ನೂ ನಾನು ಕಾಣುತ್ತಿಲ್ಲ. ನೀನು ನಿತ್ಯತೃಪ್ತನಂತೆ ಸ್ವಸ್ಥನಾಗಿರುವೆ. ಬಾಲಕನಂತೆ ವ್ಯವಹರಿಸುವೆ. ಹೀಗಿರಲು ನಿನಗೆ ಹೇಗೆ ಸಾಧ್ಯವಾಗಿದೆ?"

ಸಮಂಗನು ಹೇಳುತ್ತಾನೆ :

ಭೂತಂ ಭವ್ಯಂ ಭವಿಷ್ಯಂ ಚ ಸರ್ವಮೇತತ್ತು ಮಾನದ ।
ತೇಷಾಂ ತತ್ತ್ವಾನಿ ಜಾನಾಮಿ ತತೋ ನ ವಿಮನಾ ಹ್ಯಹಮ್ ॥೫॥

"ಮಾನದರೇ! ನಾನು ಭೂತ, ವರ್ತಮಾನ ಮತ್ತು ಭವಿಷ್ಯತ್ತುಗಳ ಸ್ವರೂಪಗಳನ್ನೂ ಮತ್ತು ಅವುಗಳ ತತ್ತ್ವವನ್ನೂ ತಿಳಿದಿರುತ್ತೇನೆ. ಇದರಿಂದಲೇ ನನ್ನ ಮನಸ್ಸಿನಲ್ಲಿ ಯಾವಾಗಲೂ ಉದ್ವೇಗವುಂಟಾಗುವುದಿಲ್ಲ.

ಉಪಕ್ರಮಾನಹಂ ವೇದ ಪುನರೇವ ಫಲೋದಯಾನ್ ।
ಲೋಕೇ ಫಲಾನಿ ಚಿತ್ರಾಣಿ ತತೋ ನ ವಿಮನಾಹ್ಯಹಮ್ ॥೬॥

ಕರ್ಮಗಳ ಆರಂಭಗಳನ್ನೂ ಮತ್ತು ಅವುಗಳ ಫಲೋದಯಕಾಲ ಗಳನ್ನೂ ತಿಳಿದಿರುತ್ತೇನೆ. ಲೋಕದಲ್ಲಿ ನಾನಾಪ್ರಕಾರವಾದ ವಿಚಿತ್ರವಾದ ಕರ್ಮಫಲಗಳು ಪ್ರಾಪ್ತವಾಗುವುದನ್ನೂ ತಿಳಿದಿರುತ್ತೇನೆ. ಈ ಕಾರಣದಿಂದಲೇ ನಾನು ಖಿನ್ನಮನಸ್ಕನಾಗುವುದಿಲ್ಲ.

ಅಗಾಧಾಶ್ಚಾಪ್ರತಿಷ್ಠಾಶ್ಚ ಗತಿಮನ್ತಶ್ಚ ನಾರದ ।
ಅನ್ಧಾ ಜಡಾಶ್ಚ ಜೀವನ್ತಿ ಪಶ್ಯಾಸ್ಮಾನಪಿ ಜೀವತಃ ॥೭॥

ನಾರದರೇ! ನೋಡಿರಿ! ಜೀವನದ ಆಳವನ್ನು ಕಂಡ ಜ್ಞಾನಿಗಳು,

ನೆಲೆಗಾಣದ ಮೂರ್ಖರು, ಗಮನಶಕ್ತಿಯುಳ್ಳ ಜಂಗಮಪ್ರಾಣಿಗಳು, ಕುರುಡರು-ಜಡರು–ಈ ಎಲ್ಲರೂ ಜೀವಿಸುತ್ತಿದ್ದಾರೆ. ಅವರಂತೆಯೇ ನಾವೂ ಜೀವಿಸುತ್ತಿದ್ದೇವೆ.

ವಿಹಿತೇನೈವ ಜೀವನ್ತಿ ಅರೋಗಾಙ್ಗಾ ದಿವೌಕಸಃ ।
ಬಲವನ್ತೋಽಬಲಾಶ್ಚೈವ ತಸ್ಮಾದಸ್ಮಾನ್ಸಭಾಜಯ ॥೮॥

ರೋಗರಹಿತವಾದ ಶರೀರವುಳ್ಳ ದೇವತೆಗಳು, ಬಲಿಷ್ಠರು, ದುರ್ಬಲರು–ಈ ಎಲ್ಲರೂ ಅವರವರ ಪ್ರಾರಬ್ಧಕರ್ಮಗಳಿಗೆ ಅನುಸಾರ ವಾಗಿ ಜೀವಿಸುತ್ತಿರುತ್ತಾರೆ. ಅದೇ ರೀತಿಯಲ್ಲಿ ನಾನೂ ಕೂಡ ಯಾವ ಉದ್ಯೋಗವಿಲ್ಲದಿದ್ದರೂ ಪ್ರಾರಬ್ಧಕರ್ಮವನ್ನೇ ಆಶ್ರಯಿಸಿ ಬದುಕಿದ್ದೇನೆ. ಆದುದರಿಂದ ನಾವು ನಿಷ್ಕರ್ಮಿಗಳೆಂದು ಭಾವಿಸಿ ಅನಾದರಿಸದೇ ನಮ್ಮ ವಿಷಯದಲ್ಲಿ ಆದರವನ್ನು ತೋರಿರಿ.

ಸಹಸ್ರಿಣೋಽಪಿ ಜೀವನ್ತಿ ಜೀವನ್ತಿ ಶತಿನಸ್ತಥಾ ।
ಶಾಕೇನ ಚಾನ್ಯೇ ಜೀವನ್ತಿ ಪಶ್ಯಾಸ್ಮಾನಪಿ ಜೀವತಃ ॥೯॥

ಸಾವಿರ ನಾಣ್ಯಗಳನ್ನು ಅಥವಾ ಗೋವುಗಳನ್ನು ಇಟ್ಟುಕೊಂಡಿರು ವವರೂ ಜೀವನ ನಡೆಸುತ್ತಾರೆ. ನೂರು ನಾಣ್ಯಗಳನ್ನು ಅಥವಾ ಗೋವು ಗಳನ್ನು ಇಟ್ಟುಕೊಂಡಿರುವವರೂ ಜೀವನ ನಡೆಸುತ್ತಾರೆ. ಕೆಲವರು ಕೇವಲ ಗೆಡ್ಡೆ-ಗೆಣಸುಗಳನ್ನೇ ತಿಂದು ಜೀವಿಸುತ್ತಾರೆ. ಅದೇ ರೀತಿಯಲ್ಲಿ ನಾವು ಜೀವಿಸುತ್ತಿರುವುದನ್ನಾದರೂ ನೋಡಿರಿ.

ಯದಾ ನ ಶೋಚೇಮಹಿ ಕಿಂ ನು ನಃ ಸ್ಯಾ-
ದ್ಧರ್ಮೇಣ ವಾ ನಾರದ ಕರ್ಮಣಾ ವಾ ।
ಕೃತಾನ್ತವಶ್ಯಾನಿ ಯದಾ ಸುಖಾನಿ
ದುಃಖಾನಿ ವಾ ಯನ್ನ ವಿಧರ್ಷಯನ್ತಿ ॥೧೦॥

ನಾರದರೇ! ಅಜ್ಞಾನವು ದೂರವಾಗಿರುವುದರಿಂದ ನಮಗೆ ಶೋಕ ವೆಂಬುದೇ ಇಲ್ಲದಿರುವಾಗ ಧರ್ಮದಿಂದಾಗಲೀ, ಫಲದಾಯಕವಾದ ಲೌಕಿಕ ಕರ್ಮದಿಂದಾಗಲೀ–ನಮಗೇನು ಪ್ರಯೋಜನವಿದೆ? ಸುಖವಾಗಲೀ, ದುಃಖ ವಾಗಲೀ–ಕಾಲಾಧೀನವಾಗಿರುವಾಗ ಅವುಗಳ ಬಗೆಗೆ ಯೋಚಿಸಬೇಕಾದು

ದೇನಿದೆ? ಕಾಲನ ಇಚ್ಛೆಯಂತೆ ಸುಖ-ದುಃಖಗಳು ಒಂದಾದ ಮೇಲೊಂದು ಬಂದು ಹೋಗುತ್ತಿರುತ್ತವೆ. ಕ್ಷಣಭಂಗುರವಾದ ಈ ಸುಖ-ದುಃಖಗಳು ಕಾಲಾಧೀನವೆಂಬ ರಹಸ್ಯವನ್ನರಿತ ಜ್ಞಾನಿಯನ್ನು ಅವು ಭಯಪಡಿಸಲಾರವು.

ಯಸ್ಮೈ ಪ್ರಾಜ್ಞಾಃ ಕಥಯನ್ತೇ ಮನುಷ್ಯಾಃ
ಪ್ರಜ್ಞಾಮೂಲಂ ಹೀನ್ದ್ರಿಯಾಣಾಂ ಪ್ರಸಾದಃ ।
ಮುಹ್ಯನ್ತಿ ಶೋಚನ್ತಿ ತಥೇನ್ದ್ರಿಯಾಣಿ
ಪ್ರಜ್ಞಾಲಾಭೋ ನಾಸ್ತಿ ಮೂಢೇನ್ದ್ರಿಯಸ್ಯ ॥೧೧॥

ಪ್ರಾಜ್ಞರಾದ ಮನುಷ್ಯರು ಯಾವುದನ್ನು 'ಪ್ರಜ್ಞೆ' ಎಂದು ಹೇಳುವರೋ–ಆ ಪ್ರಜ್ಞೆಯೇ ಇಂದ್ರಿಯಗಳ ಪ್ರಸನ್ನತೆಯ ಮೂಲವಾಗಿದೆ. ಪ್ರಜ್ಞೆಯಿಂದಲೇ ಶೋಕ-ಮೋಹಗಳು ನಷ್ಟವಾಗಿ ಇಂದ್ರಿಯಗಳ ಪ್ರಸನ್ನತೆ ಯುಂಟಾಗುತ್ತದೆ. ಪ್ರಜ್ಞೆಯು ಇಲ್ಲದಿದ್ದರೆ ಇಂದ್ರಿಯಗಳು ಮೋಹಗೊಳ್ಳು ತ್ತವೆ ಮತ್ತು ದುಃಖಿಸುತ್ತವೆ. ಮೂಢನಾದ (ಸ್ವೇಚ್ಛೆಯಿಂದ ಪ್ರವರ್ತಿಸುವ) ಇಂದ್ರಿಯಗಳುಳ್ಳವನಿಗೆ ಪ್ರಜ್ಞಾಲಾಭವಾಗುವುದಿಲ್ಲ.

ಮೂಢಸ್ಯ ದರ್ಪಃ ಸ ಪುನರ್ಮೋಹ ಏವ
ಮೂಢಸ್ಯ ನಾಯಂ ನ ಪರೋಽಸ್ತಿ ಲೋಕಃ ।
ನ ಹ್ಯೇವ ದುಃಖಾನಿ ಸದಾ ಭವನ್ತಿ
ಸುಖಸ್ಯ ವಾ ನಿತ್ಯಶೋ ಲಾಭ ಏವ ॥೧೨॥

ಮೂಢನಾದ ಮನುಷ್ಯನಿಗೆ ಗರ್ವವುಂಟಾಗುತ್ತದೆ. ಆ ಗರ್ವವೇ ಅವನಿಗೆ ಮೋಹರೂಪವಾಗಿ ಪರಿಣಮಿಸುತ್ತದೆ. ಮೂಢನಾದವನಿಗೆ ಈ ಲೋಕದಲ್ಲಿಯೂ ಸುಖವಿಲ್ಲ. ಪರಲೋಕದಲ್ಲಿಯೂ ಸುಖವಿಲ್ಲ. ಯಾವನಿಗೇ ಆಗಲೀ ಯಾವಾಗಲೂ ದುಃಖವಾಗಲೀ ಯಾವಾಗಲೂ ಸುಖವಾಗಲೀ-ಪ್ರಾಪ್ತವಾಗುವುದಿಲ್ಲ.

ಭವಾತ್ಮಕಂ ಸಮ್ಪರಿವರ್ತಮಾನಂ
ನ ಮಾದೃಶಃ ಸಂಜ್ವರಂ ಜಾತು ಕುರ್ಯಾತ್ ।
ಇಷ್ಟಾನ್ಭೋಗಾನ್ನಾನುರುಧ್ಯೇತ್ಸುಖಂ ವಾ
ನ ಚಿನ್ತಯೇದ್ದುಃಖಮಭ್ಯಾಗತಂ ವಾ ॥೧೩॥

ಸಂಸಾರದ ಸ್ವರೂಪವು ಕ್ಷಣ-ಕ್ಷಣಕ್ಕೂ ಪರಿವರ್ತನೆಯನ್ನು ಹೊಂದು ತ್ತಿರುವುದನ್ನೇ ಕಾಣುತ್ತಿರುವ ನನ್ನಂತಹ ಮನುಷ್ಯನು ಸುಖ-ದುಃಖಗಳ ವಿಷಯವಾಗಿ ಯಾವಾಗಲೂ ಸಂತಾಪಪಡುವುದಿಲ್ಲ. ಇಷ್ಟವಾದ ಭೋಗ ಗಳನ್ನೇ ಆಗಲೀ, ಸುಖವನ್ನೇ ಆಗಲೀ ಅನುಸರಿಸಿಕೊಂಡು ಹೋಗುವುದಿಲ್ಲ. ದುಃಖವು ಒದಗಿಬಂದರೆ ಚಿಂತಿಸುವುದೂ ಇಲ್ಲ.

ಸಮಾಹಿತೋ ನ ಸ್ಪೃಹಯೇತ್ಪರೇಷಾಂ
ನಾನಾಗತಂ ಚಾಭಿನನ್ದೇಚ್ಚ ಲಾಭಮ್ ।
ನ ಚಾಪಿ ಹೃಷ್ಯೇದ್ವಿಪುಲೇಽರ್ಥಲಾಭೇ
ತಥಾರ್ಥನಾಶೇ ಚ ನ ವೈ ವಿಷೀದೇತ್ ॥೧೪॥

ಯೋಗಾರೂಢನಾದವನು ಇತರರ ಐಶ್ವರ್ಯಕ್ಕಾಗಿ ಆಸೆಪಡಬಾರದು. ಮುಂದೆ ಆಗಬಹುದಾದ ಅರ್ಥಲಾಭಕ್ಕಾಗಿ ಸಂತೋಷಪಡಬಾರದು. ಅಪಾರ ವಾದ ಸಂಪತ್ತು ಸಿಕ್ಕಿದರೂ ಹರ್ಷಿತನಾಗಬಾರದು. ಇರುವ ಐಶ್ವರ್ಯವು ಹಾಳಾದರೂ ವಿಷಾದಿಸಬಾರದು.

ನ ಬಾನ್ಧವಾ ನ ಚ ವಿತ್ತಂ ನ ಕೌಲ್ಯಂ
ನ ಚ ಶ್ರುತಂ ನ ಚ ಮನ್ತ್ರಾ ನ ವೀರ್ಯಮ್ ।
ದುಃಖಾತ್ತ್ರಾತುಂ ಸರ್ವ ಏವೋತ್ಸಹನ್ತೇ
ಪರತ್ರ ಶೀಲೇನ ತು ಯಾನ್ತಿ ಶಾನ್ತಿಮ್ ॥೧೫॥

ಬಂಧು-ಬಾಂಧವರು, ಧನ, ಉತ್ತಮಕುಲಜನ್ಮ, ಶಾಸ್ತ್ರಾಧ್ಯಯನ, ಮಂತ್ರ, ಪರಾಕ್ರಮ–ಇವು ಯಾವುವೂ ಅಥವಾ ಇವುಗಳೆಲ್ಲ ಸೇರಿಯೂ ಯಾವ ಮನುಷ್ಯನನ್ನೂ ದುಃಖದಿಂದ ಪಾರುಮಾಡಲು ಸಮರ್ಥಗಳಾ ಗುವುದಿಲ್ಲ. ಆದರೆ ಶೀಲವೊಂದರಿಂದಲೇ ಮನುಷ್ಯನು ಪರಲೋಕದಲ್ಲಿ ಶಾಂತಿಯನ್ನು ಹೊಂದುತ್ತಾನೆ (ದುಃಖವನ್ನು ಜಯಿಸುತ್ತಾನೆ).

ನಾಸ್ತಿ ಬುದ್ಧಿರಯುಕ್ತಸ್ಯ ನಾಯೋಗಾದ್ವಿನ್ದತೇ ಸುಖಮ್ ।
ಧೃತಿಶ್ಚ ದುಃಖತ್ಯಾಗಶ್ಚೇತ್ಯುಭಯಂ ತು ಸುಖಂ ನೃಪ ॥೧೬॥

ಯಾವನ ಬುದ್ಧಿಯು ಯೋಗಯುಕ್ತವಾಗಿರುವುದಿಲ್ಲವೋ–ಅಂತಹವ

ನಿಗೆ ಸಮತ್ವಬುದ್ಧಿಯುಂಟಾಗುವುದಿಲ್ಲ. ಜ್ಞಾನಯೋಗವಿಲ್ಲದೇ ಸುಖವುಂಟಾಗುವುದಿಲ್ಲ. ಧೈರ್ಯ ಮತ್ತು ದುಃಖತ್ಯಾಗ–ಈ ಎರಡೇ ಶಾಶ್ವತವಾದ ಸುಖಕ್ಕೆ ಕಾರಣವಾಗುತ್ತವೆ.

ಪ್ರಿಯಂ ಹಿ ಹರ್ಷಜನನಂ ಹರ್ಷ ಉತ್ಸೇಕವರ್ಧನಃ ।
ಉತ್ಸೇಕೋ ನರಕಾಯೈವ ತಸ್ಮಾತ್ತಾನ್ಸಂತ್ಯಜಾಮ್ಯಹಮ್ ॥೧೭॥

ಪ್ರಿಯವಸ್ತುವಿನ ಲಾಭವು ಹರ್ಷವನ್ನುಂಟುಮಾಡುತ್ತದೆ. ಹರ್ಷವು ಅಭಿಮಾನವನ್ನು ಹೆಚ್ಚಿಸುತ್ತದೆ. ಅಂತಹ ಅಭಿಮಾನವೇ ಮನುಷ್ಯನನ್ನು ನರಕಕ್ಕೆ ಒಯ್ಯುತ್ತದೆ. ಆದುದರಿಂದ ನಾನು ಅವುಗಳೆಲ್ಲವನ್ನೂ ಪರಿತ್ಯಜಿಸಿದ್ದೇನೆ.

ಏತಾಞ್ಶೋಕಭಯೋತ್ಸೇಕಾನ್ಮೋಹನಾನ್ಸುಖದುಃಖಯೋಃ ।
ಪಶ್ಯಾಮಿ ಸಾಕ್ಷಿವಲ್ಲೋಕೇ ದೇಹಸ್ಯಾಸ್ಯ ವಿಚೇಷ್ಟನಾತ್ ॥೧೮॥

ಶೋಕ, ಭಯ ಮತ್ತು ಅಭಿಮಾನಗಳು ಪ್ರಾಣಿಗಳನ್ನು ಸುಖ-ದುಃಖಗಳಲ್ಲಿ ಸಿಲುಕಿಸಿ ವಿಮೋಹಗೊಳಿಸುತ್ತವೆ. ಆದುದರಿಂದ ಎಲ್ಲಿಯವರೆಗೆ ಈ ಶರೀರವು ಚಲನ-ವಲನಗಳಲ್ಲಿ ತೊಡಗಿರುತ್ತದೆಯೋ–ಅಲ್ಲಿಯವರೆಗೂ ನಾನು ಈ ಪ್ರಪಂಚದ ವ್ಯವಹಾರಗಳನ್ನು ಸಾಕ್ಷಿಯಂತೆ ನೋಡುತ್ತಿರುತ್ತೇನೆ.

ಅರ್ಥಕಾಮೌ ಪರಿತ್ಯಜ್ಯ ವಿಶೋಕೋ ವಿಗತಜ್ವರಃ ।
ತೃಷ್ಣಾಮೋಹೌ ತು ಸಂತ್ಯಜ್ಯ ಚರಾಮಿ ಪೃಥಿವೀಮಿಮಾಮ್ ॥೧೯॥

ಅರ್ಥ-ಕಾಮಗಳನ್ನು ಪರಿತ್ಯಜಿಸಿ, ತೃಷ್ಣೆ ಮತ್ತು ಮೋಹಗಳನ್ನು (ಅರ್ಥತೃಷ್ಣೆಯನ್ನು-ಕಾಮ-ಮೋಹಗಳನ್ನು) ಸಂಪೂರ್ಣವಾಗಿ ಪರಿತ್ಯಜಿಸಿ, ಶೋಕ-ಸಂತಾಪಗಳಿಂದ ರಹಿತನಾಗಿ ಈ ಜಗತ್ತಿನಲ್ಲಿ ಸಂಚರಿಸುತ್ತೇನೆ.

ನ ಚ ಮೃತ್ಯೋರ್ನ ಚಾಧರ್ಮಾನ್ನ ಲೋಭಾನ್ನ ಕುತಶ್ಚ ನ ।
ಪೀತಾಮೃತಸ್ಯೇವಾತ್ಯನ್ತಮಿಹ ವಾಮುತ್ರ ವಾ ಭಯಮ್ ॥೨೦॥

ಯಾವ ರೀತಿಯಲ್ಲಿ ಅಮೃತವನ್ನು ಪಾನಮಾಡಿದವನಿಗೆ ಮೃತ್ಯುವಿನ ಭಯವಿರುವುದಿಲ್ಲವೋ–ಅದೇ ರೀತಿಯಲ್ಲಿ ನಾನು ಕೂಡ ಈ ಲೋಕದಲ್ಲಾ

ಗಲೀ, ಪರಲೋಕದಲ್ಲಾಗಲೀ, ಮೃತ್ಯು-ಅಧರ್ಮ-ಲೋಭಗಳಿಗಾಗಲೀ, ಬೇರೆ ಯಾವುದಕ್ಕೇ ಆಗಲೀ ಸ್ವಲ್ಪವೂ ಭಯಪಡುವುದಿಲ್ಲ.

ಏತದ್ಬ್ರಹ್ಮನ್ವಿಜಾನಾಮಿ ಮಹತ್ಕೃತ್ವಾ ತಪೋಽವ್ಯಯಮ್ ।
ತೇನ ನಾರದ ಸಮ್ಪ್ರಾಪ್ತೋ ನ ಮಾಂ ಶೋಕಃ ಪ್ರಬಾಧತೇ ॥೨೧॥

ಬ್ರಾಹ್ಮಣೋತ್ತಮರಾದ ನಾರದರೇ! ನಾನು ಅಕ್ಷಯವಾದ ಮಹಾ ತಪಸ್ಸನ್ನು ಮಾಡಿ ಇಂತಹ ಜ್ಞಾನವನ್ನು ಪಡೆದುಕೊಂಡಿರುತ್ತೇನೆ. ಆದುದರಿಂದ ಶೋಕವು ಸಂಪ್ರಾಪ್ತವಾಗಿದ್ದರೂ ಅದು ನನ್ನನ್ನು ಬಾಧೆಪಡಿಸುವುದಿಲ್ಲ."

೨೮೬ನೆಯ ಅಧ್ಯಾಯವು ಮುಗಿಯಿತು.

೨೮೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ನಾರದರಿಂದ ಗಾಲವನಿಗೆ ಶ್ರೇಯಸ್ಸಿನ ಉಪದೇಶ

ಯುಧಿಷ್ಠಿರನು ಹೇಳುತ್ತಾನೆ :

ಅತತ್ತ್ವಜ್ಞಸ್ಯ ಶಾಸ್ತ್ರಾಣಾಂ ಸತತಂ ಸಂಶಯಾತ್ಮನಃ ।
ಅಕೃತವ್ಯವಸಾಯಸ್ಯ ಶ್ರೇಯೋ ಬ್ರೂಹಿ ಪಿತಾಮಹ ॥೧॥

"ಭೀಷ್ಮಪಿತಾಮಹನೇ! ಶಾಸ್ತ್ರದ ತತ್ತ್ವಗಳನ್ನು ತಿಳಿಯದವನಿಗೆ–ಎಲ್ಲದರಲ್ಲಿಯೂ ಸಂಶಯಾತ್ಮಕವಾದ ಮನಸ್ಸಿನಿಂದಲೇ ಕೂಡಿರುವವನಿಗೆ– ಪರಮಾರ್ಥಸಾಧನೆಗೆ ಪ್ರಯತ್ನವನ್ನೇ ಮಾಡದವನಿಗೆ–ಶ್ರೇಯಸ್ಸು ಹೇಗೆ ಉಂಟಾಗುವುದೆಂಬುದನ್ನು ತಿಳಿಸು."

ಭೀಷ್ಮನು ಹೇಳುತ್ತಾನೆ :

ಗುರುಪೂಜಾ ಚ ಸತತಂ ವೃದ್ಧಾನಾಂ ಪರ್ಯುಪಾಸನಮ್ ।
ಶ್ರವಣಂ ಚೈವ ಶಾಸ್ತ್ರಾಣಾಂ ಕೂಟಸ್ಥಂ ಶ್ರೇಯ ಉಚ್ಯತೇ ॥೨॥

"ಯುಧಿಷ್ಠಿರ! ಯಾವಾಗಲೂ ಗುರುಜನರ ಪೂಜೆ, ವೃದ್ಧರ ಸೇವೆ, ಶಾಸ್ತ್ರಗಳ ಶ್ರವಣ–ಈ ಮೂರೂ ಶ್ರೇಯಸ್ಸಿಗೆ ಪರಮಸಾಧನಗಳೆಂದು ಹೇಳಲ್ಪಟ್ಟಿವೆ.

ಈ ವಿಷಯದಲ್ಲಿ ಹಿಂದೆ ದೇವರ್ಷಿಗಳಾದ ನಾರದರಿಗೂ–ಗಾಲವನಿಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಒಮ್ಮೆ ಜಿತೇಂದ್ರಿಯನಾದ, ಶ್ರೇಯಸ್ಕಾಮನಾದ ಗಾಲವನು ತನ್ನ ಆಶ್ರಮಕ್ಕೆ ಆಗಮಿಸಿದ, ದೇವತೆಗಳ ವರ್ಚಸ್ಸಿಗೆ ಸಮಾನವಾದ ವರ್ಚಸ್ಸಿನಿಂದ ಬೆಳಗುತ್ತಿದ್ದ, ಮೋಹ ಮತ್ತು ಆಯಾಸಗಳಿಂದ ರಹಿತರಾಗಿದ್ದ, ಜ್ಞಾನತೃಪ್ತರಾಗಿದ್ದ, ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡಿದ್ದ, ವಿಪ್ರಶ್ರೇಷ್ಠರಾದ ನಾರದರೊಡನೆ ಹೇಳಿದನು :

ಯೈಃ ಕಶ್ಚಿತ್ಸಮ್ಮತೋ ಲೋಕೇ ಗುಣೈಶ್ಚ ಪುರುಷೋ ಮುನೇ ।
ಭವತ್ಯನಪಗಾನ್ಸರ್ವಾಂಸ್ತಾನ್ಗುಣಾನ್ಲಕ್ಷಯಾಮಹೇ ॥೫॥

"ಮುನಿಶ್ರೇಷ್ಠರೇ! ಪ್ರಪಂಚದಲ್ಲಿ ಒಬ್ಬ ಮನುಷ್ಯನು ಯಾವ ಗುಣಗಳಿಂದ ಸಮ್ಮಾನಿತನಾಗುವನೋ–ಅಂತಹ ಗುಣಗಳೆಲ್ಲವೂ ತಮ್ಮಲ್ಲಿ ಸ್ಥಿರವಾಗಿರುವುದನ್ನು ನಾವು ಕಾಣುತ್ತಿದ್ದೇವೆ.

ಭವಾನೇವಂವಿಧೋಽಸ್ಮಾಕಂ ಸಂಶಯಂ ಛೇತ್ತುಮರ್ಹತಿ ।
ಅಮೂಢಶ್ಚಿರಮೂಢಾನಾಂ ಲೋಕತತ್ತ್ವಮಜಾನತಾಮ್ ॥೬॥

ಹೀಗೆ ಸಕಲಸದ್ಗುಣಸಂಪನ್ನರಾದ ಜ್ಞಾನಿಗಳಾದ ನೀವು–ಲೋಕತತ್ತ್ವವನ್ನು (ಆತ್ಮಯಾಥಾತ್ಮ್ಯವನ್ನು) ತಿಳಿಯದಿರುವ, ಬಹಳ ಕಾಲದಿಂದಲೂ ಅಜ್ಞಾನದಲ್ಲಿಯೇ ಬಿದ್ದಿರುವ ನಮ್ಮಂತಹವರ ಸಂಶಯವನ್ನು ನಿವಾರಿಸಲು ಸಮರ್ಥರಾಗಿರುವಿರಿ.

ಜ್ಞಾನೇ ಹ್ಯೇವಂ ಪ್ರವೃತ್ತಿಃ ಸ್ಯಾತ್ಕಾರ್ಯಾಣಾಮವಿಶೇಷತಃ ।
ಯತ್ಕಾರ್ಯಂ ನ ವ್ಯವಸ್ಯಾಮಸ್ತದ್ಭವಾನ್ವಕ್ತುಮರ್ಹತಿ ॥೭॥

ನಾರದರೇ! ಶಾಸ್ತ್ರಗಳಲ್ಲಿ ಅನೇಕವಿಧವಾದ ಕರ್ತವ್ಯಕರ್ಮಗಳು ಹೇಳಲ್ಪಟ್ಟಿವೆ. ಆದರೆ ಅಲ್ಲಿ ಹೇಳಿರುವ ಅನೇಕ ಕರ್ಮಗಳಲ್ಲಿ–ಇಂತಹ ಕರ್ಮವನ್ನು ಹೀಗೆ ಮಾಡಿದರೆ ಜ್ಞಾನಮಾರ್ಗದಲ್ಲಿ ಪ್ರವೃತ್ತಿಯುಂಟಾಗುತ್ತದೆ–ಎಂಬುದನ್ನು ನಿಶ್ಚಯಿಸಲು ನಮಗೆ ಸಾಧ್ಯವಿಲ್ಲ. ಆದುದರಿಂದ ನಮಗೆ ಜ್ಞಾನಮಾರ್ಗದಲ್ಲಿ ಪ್ರವೃತ್ತಿಯುಂಟಾಗಲು ಯಾವ ಕಾರ್ಯವನ್ನು ಮಾಡ

ಬೇಕು? ಯಾವ ಕಾರ್ಯವನ್ನು ಮಾಡಕೂಡದು? – ಎಂಬುದನ್ನು ಹೇಗೆ ನಿಶ್ಚಯಿಸಬೇಕೆಂಬುದನ್ನು ದಯಮಾಡಿ ಹೇಳಿರಿ.

ಭಗವನ್ನಾಶ್ರಮಾಃ ಸರ್ವೇ ಪೃಥಗಾಚಾರದರ್ಶಿನಃ ।
ಇದಂ ಶ್ರೇಯ ಇದಂ ಶ್ರೇಯ ಇತಿ ಸರ್ವೇ ಪ್ರಬೋಧಿತಾಃ ॥೮॥

ಭಗವನ್! ಎಲ್ಲ ಆಶ್ರಮಗಳೂ ಪ್ರತ್ಯೇಕ-ಪ್ರತ್ಯೇಕವಾದ ಆಚಾರಗಳನ್ನೇ ಸೂಚಿಸತಕ್ಕುವುಗಳಾಗಿವೆ. ಇಷ್ಟು ಮಾತ್ರವಲ್ಲದೇ–'ಇದೇ ಶ್ರೇಯಸ್ಕರವಾದುದು–ಈ ಆಶ್ರಮವೇ ಮತ್ತು ಇದಕ್ಕೆ ಸಂಬಂಧಿಸಿದ ಆಚಾರವೇ ಶ್ರೇಯಸ್ಕರವಾದುದು'–ಎಂದು ಪ್ರತಿಯೊಂದು ಆಶ್ರಮಗಳೂ ಆಯಾ ಆಶ್ರಮಧರ್ಮಗಳನ್ನೇ ಪ್ರತಿಪಾದಿಸುತ್ತವೆ. ಎಲ್ಲ ಮನುಷ್ಯರ ಬುದ್ಧಿಯಲ್ಲಿಯೂ ಅವುಗಳ ಶ್ರೇಷ್ಠತೆಯನ್ನೇ ಬೋಧಿಸುತ್ತವೆ.

ತಾಂಸ್ತು ವಿಪ್ರಸ್ಥಿತಾನ್ದೃಷ್ಟ್ವಾ ಶಾಸ್ತ್ರೈಃ ಶಾಸ್ತ್ರಾಭಿನನ್ದಿನಃ ।
ಸ್ವಶಾಸ್ತ್ರೈಃ ಪರಿತುಷ್ಟಾಶ್ಚ ಶ್ರೇಯೋ ನೋಪಲಭಾಮಹೇ ॥೯॥

ಶಾಸ್ತ್ರಗಳಿಂದ ಪ್ರಬೋಧಿತರಾಗಿ ವಿಧ-ವಿಧವಾದ ಮಾರ್ಗಗಳನ್ನು ಹಿಡಿದು ಹೋಗುವವರು ತಮ್ಮ ತಮ್ಮ ಮಾರ್ಗಗಳನ್ನೇ ಪ್ರಶಂಸೆಮಾಡುತ್ತಿರುವುದನ್ನು ಕಂಡು ಇತರರು ತಾವು ಅನುಸರಿಸುತ್ತಿರುವ ಶಾಸ್ತ್ರಪ್ರಬೋಧಿತವಾದ ಮಾರ್ಗದಿಂದಲೇ ತೃಪ್ತರಾಗುತ್ತಾರೆ. (ಗೃಹಸ್ಥನು ಗೃಹಸ್ಥಾಶ್ರಮೋಕ್ತವಾದ ಮಾರ್ಗವನ್ನು ಅನುಸರಿಸುತ್ತಾ ಅದರಿಂದಲೇ ತೃಪ್ತನಾಗುತ್ತಾನೆ. ತನ್ನ ಆಶ್ರಮವೇ ಎಲ್ಲಕ್ಕಿಂತಲೂ ಶ್ರೇಷ್ಠವಾದ ಆಶ್ರಮವೆಂದು ಭಾವಿಸುತ್ತಾನೆ. ಶಾಸ್ತ್ರಗಳೂ ಗೃಹಸ್ಥಾಶ್ರಮವೇ ಶ್ರೇಷ್ಠವೆಂದು ಹೇಳುತ್ತವೆ. ಹಾಗೆಯೇ ಬ್ರಹ್ಮಚಾರಿಗಳೂ ಮತ್ತು ವಾನಪ್ರಸ್ಥರೂ ಆಯಾವರ್ಣಾಶ್ರಮಧರ್ಮಗಳನ್ನು ಅನುಸರಿಸುತ್ತಾ ಅದರಿಂದಲೇ ತೃಪ್ತರಾಗುತ್ತಾರೆ. ತಮ್ಮ ಆಶ್ರಮವೇ ಎಲ್ಲಕ್ಕಿಂತಲೂ ಶ್ರೇಷ್ಠವಾದ ಆಶ್ರಮವೆಂದು ಭಾವಿಸುತ್ತಾರೆ. ಬ್ರಹ್ಮಚಾರಿಗಳ ಮತ್ತು ವಾನಪ್ರಸ್ಥರ ಪ್ರಸಂಗದಲ್ಲಿ ಶಾಸ್ತ್ರಗಳೂ ಈ ಆಶ್ರಮಗಳೇ ಶ್ರೇಷ್ಠವಾದುವೆಂದು ಹೇಳುತ್ತವೆ.) ಎಲ್ಲರೂ ತಾವು ಅನುಸರಿಸುತ್ತಿರುವ ಆಶ್ರಮಧರ್ಮವೇ ಶ್ರೇಷ್ಠವೆಂದು ಹೇಳಿಕೊಳ್ಳುತ್ತಿರುವಾಗ – ಆಯಾ ಪ್ರಸಂಗದಲ್ಲಿ ಶಾಸ್ತ್ರಗಳೂ ಅದನ್ನೇ ಪ್ರತಿಪಾದಿಸುವಾಗ–

ನಮ್ಮ ಮನಸ್ಸಿನಲ್ಲಿ ಸಂಶಯವುಂಟಾಗಿ ನಿಜವಾದ ಶ್ರೇಯಸ್ಸಿನ ಮಾರ್ಗವನ್ನು ನಾವು ಹೊಂದುತ್ತಿಲ್ಲ.

ಶಾಸ್ತ್ರಂ ಯದಿ ಭವೇದೇಕಂ ಶ್ರೇಯೋ ವ್ಯಕ್ತಂ ಭವೇತ್ತದಾ ।
ಶಾಸ್ತ್ರೈಶ್ಚ ಬಹುಭಿರ್ಭೂಯಃ ಶ್ರೇಯೋ ಗುಹ್ಯಂ ಪ್ರವೇಶಿತಮ್ ॥

ಶಾಸ್ತ್ರವು ಒಂದೇ ಆಗಿದ್ದರೆ–ಶ್ರೇಯಸ್ಸನ್ನು ಹೊಂದುವ ಉಪಾಯವೂ ಆ ಒಂದು ಶಾಸ್ತ್ರದ ಮೂಲಕವಾಗಿಯೇ ಸ್ಪಷ್ಟವಾಗಿ ತಿಳಿಯುತ್ತಿದ್ದಿತು. ಶಾಸ್ತ್ರಗಳು ಬಹಳವಾಗಿದ್ದು ಶ್ರೇಯಸ್ಸಾಧನೆಯ ಉಪಾಯಗಳನ್ನೂ ನಾನಾಪ್ರಕಾರವಾಗಿ ಹೇಳುತ್ತಿರುವುದರಿಂದ ನಿಜವಾದ ಶ್ರೇಯಸ್ಸಾಧನೆಯ ಮಾರ್ಗವು ಯಾವುದೆಂಬುದು ರಹಸ್ಯವಾಗಿಯೇ ಉಳಿದುಬಿಟ್ಟಿದೆ.

ಏತಸ್ಮಾತ್ಕಾರಣಾಚ್ಛ್ರೇಯಃ ಕಲಿಲಂ ಪ್ರತಿಭಾತಿ ಮೇ ।
ಬ್ರವೀತು ಭಗವಾಂಸ್ತನ್ಮೇ ಉಪಸನ್ನೋಽಸ್ಮ್ಯಧೀಹಿ ಭೋಃ ॥೧೧॥

ಈ ಕಾರಣದಿಂದಲೇ ಶ್ರೇಯಸ್ಸಿನ ಸ್ವರೂಪವು ಎಲ್ಲಿಯೋ ಬೆರೆತುಹೋಗಿದೆಯೆಂದು ನನಗೆ ಭಾಸವಾಗುತ್ತಿದೆ. ಆದುದರಿಂದ ತಾವು ದಯಮಾಡಿ ನನಗೆ ಶ್ರೇಯಸ್ಸಾಧನೆಯ ಉಪಾಯವನ್ನು ಹೇಳಿರಿ. ನಾನು ತಮ್ಮ ಶಿಷ್ಯನಾಗಿದ್ದೇನೆ. ನಾರದರೇ! ದಯಮಾಡಿ ಶ್ರೇಯಸ್ಸಿನ ಮಾರ್ಗವನ್ನು ಉಪದೇಶಿಸಿರಿ.”

ನಾರದರು ಹೇಳುತ್ತಾರೆ :

ಆಶ್ರಮಾಸ್ತಾತ ಚತ್ವಾರೋ ಯಥಾಸಂಕಲ್ಪಿತಾಃ ಪೃಥಕ್ ।
ತಾನ್ಸರ್ವಾನನುಪಶ್ಯ ತ್ವಂ ಸಮಾಶ್ರಿತ್ಯೈತಿ ಗಾಲವ ॥೧೨॥

“ಗಾಲವ! ನಾಲ್ಕು ಆಶ್ರಮಗಳಿವೆ. ಶಾಸ್ತ್ರಗಳಲ್ಲಿ ಆಯಾಯಾ ಆಶ್ರಮಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ-ಪ್ರತ್ಯೇಕವಾದ ವ್ಯವಸ್ಥೆಯೂ ಹೇಳಲ್ಪಟ್ಟಿದೆ. ನೀನು ಜ್ಞಾನವನ್ನು ಆಶ್ರಯಿಸಿ (ಜ್ಞಾನವನ್ನೇ ಮುಖ್ಯವಾದ ಗುರಿಯನ್ನಾಗಿಟ್ಟುಕೊಂಡು) ಆ ಎಲ್ಲ ಆಶ್ರಮತತ್ತ್ವಗಳನ್ನೂ ಯಥಾರ್ಥರೂಪಗಳಲ್ಲಿ ಪರಿಶೀಲಿಸು.

ತೇಷಾಂ ತೇಷಾಂ ತಥಾ ಹಿ ತ್ವಮಾಶ್ರಮಾಣಾಂ ತತಸ್ತತಃ ।
ನಾನಾರೂಪಗುಣೋದ್ದೇಶಂ ಪಶ್ಯ ವಿಪ್ರ ಸ್ಥಿತಂ ಪೃಥಕ್ ॥೧೩॥

ವಿಪ್ರಶ್ರೇಷ್ಠನೇ! ಆಯಾ ಆಶ್ರಮಗಳಿಗೆ ಗುಣಯುಕ್ತವಾದ ಯಾವ ಧರ್ಮಗಳು ಹೇಳಲ್ಪಟ್ಟಿವೆಯೋ–ಅವುಗಳೆಲ್ಲಕ್ಕೂ ಪ್ರತ್ಯೇಕ-ಪ್ರತ್ಯೇಕವಾದ ಅಸ್ತಿತ್ವವೇ ಇದೆ. ಈ ವಿಷಯವನ್ನು ನೀನು ಮನಗಾಣು.

ನ ಯಾನ್ತಿ ಚೈವ ತೇ ಸಮ್ಯಗಭಿಪ್ರೇತಮಸಂಶಯಮ್ ।
ಅನ್ಯೇಽಪಶ್ಯಂಸ್ತಥಾ ಸಮ್ಯಗಾಶ್ರಮಾಣಾಂ ಪರಾಂ ಗತಿಮ್ ॥೧೪॥

ಸಾಧಾರಣಮನುಷ್ಯರು ಆಶ್ರಮಧರ್ಮಗಳಲ್ಲಿರುವ ನಿಜತತ್ತ್ವಗಳನ್ನು ನಿಃಸಂಶಯವಾಗಿ ತಿಳಿದುಕೊಂಡಿರುವುದಿಲ್ಲ. ಆದರೆ ಸಾಧಾರಣಪುರುಷರಿಂದ ಭಿನ್ನರಾದ ಯಾವ ತತ್ತ್ವಜ್ಞರಿರುವರೋ–ಅವರು ಆಶ್ರಮಧರ್ಮಗಳ ಪರಮತತ್ತ್ವವನ್ನು ಚೆನ್ನಾಗಿ ತಿಳಿದುಕೊಂಡಿರುತ್ತಾರೆ.

ಯತ್ತು ನಿಃಶ್ರೇಯಸಂ ಸಮ್ಯಕ್ತಚ್ಚೈವಾಸಂಶಯಾತ್ಮಕಮ್ ॥೧೫॥

ಅನುಗ್ರಹಂ ಚ ಮಿತ್ರಾಣಾಮಮಿತ್ರಾಣಾಂ ಚ ನಿಗ್ರಹಮ್ ।
ಸಂಗ್ರಹಂ ಚ ತ್ರಿವರ್ಗಸ್ಯ ಶ್ರೇಯ ಆಹುರ್ಮನೀಷಿಣಃ ॥೧೬॥

ಕಲ್ಯಾಣಕರವಾದ ಸಾಧನೆಯು ಯಾವುದಿರುವುದೋ–ಅದು ಯಾವಾಗಲೂ ಸಂಶಯರಹಿತವಾಗಿಯೇ ಇರುತ್ತದೆ. ಮಿತ್ರರಿಗೆ ಅಥವಾ ಸತ್ಪುರುಷರಿಗೆ ಅನುಗ್ರಹವನ್ನು ತೋರುವುದು, ಶತ್ರುಗಳಾದವರನ್ನು ನಿಗ್ರಹಿಸುವುದು, ಧರ್ಮ, ಅರ್ಥ ಮತ್ತು ಕಾಮಗಳನ್ನು ಸಂಗ್ರಹಿಸುವುದು–ಇವು ಶ್ರೇಯಸ್ಕರಗಳೆಂದು ವಿದ್ವಾಂಸರು ಹೇಳುತ್ತಾರೆ.

ನಿವೃತ್ತಿಃ ಕರ್ಮಣಃ ಪಾಪಾತ್ಸತತಂ ಪುಣ್ಯಶೀಲತಾ ।
ಸದ್ಭಿಶ್ಚ ಸಮುದಾಚಾರಃ ಶ್ರೇಯ ಏತದಸಂಶಯಮ್ ॥೧೭॥

ಪಾಪಕರ್ಮಗಳಿಂದ ದೂರವಿರುವುದು ; ಸತತವಾಗಿ ಪುಣ್ಯಕರ್ಮಗಳನ್ನೇ ಮಾಡುತ್ತಿರುವುದು ; ಸತ್ಪುರುಷರ ಸಹವಾಸದಲ್ಲಿದ್ದು ಸದಾಚಾರವನ್ನು ಪಾಲಿಸುವುದು–ಇವೆಲ್ಲವೂ ಶ್ರೇಯಸ್ಕರವಾದ ಕರ್ಮಗಳೆಂಬುದರಲ್ಲಿ ಸಂಶಯವೇ ಇಲ್ಲ.

ಮಾರ್ದವಂ ಸರ್ವಭೂತೇಷು ವ್ಯವಹಾರೇಷು ಚಾರ್ಜವಮ್ ।
ವಾಕ್ಚೈವ ಮಧುರಾ ಪ್ರೋಕ್ತಾ ಶ್ರೇಯ ಏತದಸಂಶಯಮ್ ॥೧೮॥

ಎಲ್ಲ ಪ್ರಾಣಿಗಳೊಡನೆಯೂ ಮೃದುತ್ವದಿಂದ ವ್ಯವಹರಿಸುವುದು ; ವ್ಯವಹಾರಗಳಲ್ಲಿ ಸರಳತೆಯಿಂದಿರುವುದು ; ಮಧುರವಾದ ಮಾತುಗಳನ್ನಾಡುವುದು–ಇವೆಲ್ಲವೂ ಶ್ರೇಯಸ್ಕರವಾದ ವಿಧಾನಗಳೆಂಬುದರಲ್ಲಿ ಸಂಶಯವೇ ಇಲ್ಲ.

ದೈವತೇಭ್ಯಃ ಪಿತೃಭ್ಯಶ್ಚ ಸಂವಿಭಾಗೋಽತಿಥಿಷ್ವಪಿ ।
ಅಸಂತ್ಯಾಗಶ್ಚ ಭೃತ್ಯಾನಾಂ ಶ್ರೇಯ ಏತದಸಂಶಯಮ್ ॥೧೯॥

ದೇವತೆಗಳಿಗೂ, ಪಿತೃದೇವತೆಗಳಿಗೂ ಮತ್ತು ಅತಿಥಿಗಳಿಗೂ ಅವರವರಿಗೆ ಸಲ್ಲಬೇಕಾದ ಬಲಿ-ತರ್ಪಣ-ಭೋಜನಗಳನ್ನು ಆಯಾ ಕಾಲಗಳಲ್ಲಿ ಅರ್ಪಿಸುವುದು, ಭರಣ-ಪೋಷಣೆಗಳಿಗೆ ಯೋಗ್ಯರಾದವರನ್ನು ತ್ಯಾಗಮಾಡದಿರುವುದು–ಇವೆಲ್ಲ ಕಾರ್ಯಗಳೂ ಶ್ರೇಯಸ್ಸಿಗೆ ಸಾಧಕಗಳಾಗುವುವೆಂಬುದರಲ್ಲಿ ಸಂಶಯವೇ ಇಲ್ಲ.

ಸತ್ಯಸ್ಯ ವಚನಂ ಶ್ರೇಯಃ ಸತ್ಯಜ್ಞಾನಂ ತು ದುಷ್ಕರಮ್ ।
ಯದ್ಭೂತಹಿತಮತ್ಯನ್ತಮೇತತ್ಸತ್ಯಂ ಬ್ರವೀಮ್ಯಹಮ್ ॥೨೦॥

ಸತ್ಯವನ್ನು ಹೇಳುವುದು ಶ್ರೇಯಸ್ಕರವಾದುದು. ಆದರೆ ಸತ್ಯವನ್ನು ಯಥಾರ್ಥರೂಪದಿಂದ ತಿಳಿಯುವುದು ಕಷ್ಟಸಾಧ್ಯವೇ ಸರಿ. ಪ್ರಾಣಿಗಳಿಗೆ ಅತ್ಯಂತಹಿತವು ಯಾವುದೋ–ಅದನ್ನೇ ಸತ್ಯವೆಂದು ನಾನು ಹೇಳುತ್ತೇನೆ.

ಅಹಂಕಾರಸ್ಯ ಚ ತ್ಯಾಗಃ ಪ್ರಮಾದಸ್ಯ ಚ ನಿಗ್ರಹಃ ।
ಸಂತೋಷಶ್ಚೈಕಚರ್ಯಾ ಚ ಕೂಟಸ್ಥಂ ಶ್ರೇಯ ಉಚ್ಯತೇ ॥೨೧॥

ಅಹಂಕಾರವನ್ನು ತ್ಯಾಗಮಾಡುವುದು, ಪ್ರಮಾದವನ್ನು ನಿಗ್ರಹಿಸುವುದು, ಯಾವಾಗಲೂ ಸಂತೋಷದಿಂದಲೇ ಇರುವುದು ಮತ್ತು ಏಕಾಂತವಾಸ–ಇವುಗಳು ನಿಶ್ಚಿತವಾದ ಶ್ರೇಯಃಕಾರಕಗಳೆಂದು ಹೇಳುತ್ತಾರೆ.

ಧರ್ಮೇಣ ವೇದಾಧ್ಯಯನಂ ವೇದಾನ್ತಾನಾಂ ತಥೈವ ಚ ।
ಜ್ಞಾನಾರ್ಥಾನಾಂ ಚ ಜಿಜ್ಞಾಸಾ ಶ್ರೇಯ ಏತದಸಂಶಯಮ್ ॥೨೨॥

ಧರ್ಮಾಚರಣಪೂರ್ವಕವಾಗಿ ವೇದ-ವೇದಾಂತಗಳ ಅಧ್ಯಯನ, ಜ್ಞಾನವಿಷಯಗಳ ಜಿಜ್ಞಾಸೆ–ಇವುಗಳು ಶ್ರೇಯಸ್ಸಿಗೆ ಸಾಧನಗಳೆಂಬುದರಲ್ಲಿ ಸಂಶಯವೇ ಇಲ್ಲ.

ಶಬ್ದರೂಪರಸಸ್ಪರ್ಶಾನ್ಸಹ ಗನ್ಧೇನ ಕೇವಲಾನ್ ।
ನಾತ್ಯರ್ಥಮುಪಸೇವೇತ ಶ್ರೇಯಸೋಽರ್ಥೀ ಕಥಂಚನ ॥೨೩॥

ಶ್ರೇಯಸ್ಕಾಮಿಯು ಶಬ್ದ-ರೂಪ-ರಸ-ಸ್ಪರ್ಶ-ಗಂಧಗಳೆಂಬ ವಿಷಯಗಳನ್ನು ಮಿತಿಮೀರಿ ಸೇವಿಸಬಾರದು.

ನಕ್ತಂಚರ್ಯಾಂ ದಿವಾಸ್ವಪ್ನಮಾಲಸ್ಯಂ ಪೈಶುನಂ ಮದಮ್ ।
ಅತಿಯೋಗಮಯೋಗಂ ಚ ಶ್ರೇಯಸೋಽರ್ಥೀ ಪರಿತ್ಯಜೇತ್ ॥೨೪॥

ಶ್ರೇಯಸ್ಕಾಮಿಯು ರಾತ್ರಿಯಲ್ಲಿ ಸಂಚರಿಸುವುದನ್ನೂ, ಹಗಲಿನಲ್ಲಿ ನಿದ್ರಿಸುವುದನ್ನೂ, ಸೋಮಾರಿತನವನ್ನೂ, ಚಾಡಿಹೇಳುವುದನ್ನೂ, ಮಾದಕ ಪದಾರ್ಥಗಳ ಸೇವನೆಯನ್ನೂ, ಅಧಿಕವಾದ ಆಹಾರಸೇವನೆಯನ್ನೂ, ನಿರಾಹಾರತ್ವವನ್ನೂ ಪರಿತ್ಯಜಿಸಬೇಕು.

ಆತ್ಮೋತ್ಕರ್ಷಂ ನ ಮಾರ್ಗೇತ ಪರೇಷಾಂ ಪರಿನಿನ್ದಯಾ ।
ಸ್ವಗುಣೈರೇವ ಮಾರ್ಗೇತ ವಿಪ್ರಕರ್ಷಂ ಪೃಥಗ್ಜನಾತ್ ॥೨೫॥

ಇತರರನ್ನು ನಿಂದಿಸುವುದರ ಮೂಲಕವಾಗಿ ತನ್ನ ಶ್ರೇಷ್ಠತೆಯನ್ನು ಊರ್ಜಿತಗೊಳಿಸಲು ಯತ್ನಿಸಬಾರದು. ಸಾಧಾರಣಮನುಷ್ಯರಿಗಿಂತಲೂ ತನ್ನಲ್ಲಿ ಯಾವ ಉತ್ಕೃಷ್ಟತೆಯಿರುವುದೋ–ಅದನ್ನು ತನ್ನ ಗುಣಗಳಿಂದಲೇ ಸಿದ್ಧಪಡಿಸಬೇಕು.

ನಿರ್ಗುಣಾಸ್ತ್ವೇವ ಭೂಯಿಷ್ಠಮಾತ್ಮಸಮ್ಭಾವಿತಾ ನರಾಃ ।
ದೋಷೈರನ್ಯಾನ್ಗುಣವತಃ ಕ್ಷಿಪನ್ತ್ಯಾತ್ಮಗುಣಕ್ಷಯಾತ್ ॥೨೬॥

ಗುಣಹೀನರಾದವರೇ ಹೆಚ್ಚಾಗಿ ತಮ್ಮ ಪ್ರಶಂಸೆಯನ್ನು ಮಾಡಿಕೊಳ್ಳುತ್ತಿರುತ್ತಾರೆ. ತಮ್ಮಲ್ಲಿ ಗುಣಗಳೇ ಇಲ್ಲದ ಕಾರಣ ಇತರ ಗುಣವಂತರನ್ನೂ ದೋಷಾರೋಪಣೆಗಳಿಂದ ಕೆಳಕ್ಕೆ ತಳ್ಳುತ್ತಾರೆ (ತಿರಸ್ಕರಿಸುತ್ತಾರೆ).

ಅನೂಚ್ಯಮಾನಾಸ್ತು ಪುನಸ್ತೇ ಮನ್ಯನ್ತು ಮಹಾಜನಾತ್ ।
ಗುಣವತ್ತರಮಾತ್ಮಾನಂ ಸ್ವೇನ ಮಾನೇನ ದರ್ಪಿತಾಃ ॥೨೭॥

ಮಹಾಜನರು ತಮ್ಮನ್ನು ನಿಂದಿಸದಿರುವುದರಿಂದ, ಸ್ವಾಭಿಮಾನದಿಂದ

ದರ್ಪಿತರಾದ ಗುಣಹೀನರು–ಮಹಾಗುಣವಂತರಿಗಿಂತಲೂ ತಮ್ಮನ್ನು ಅಧಿಕರಾದವರೆಂದು ಭಾವಿಸಿಕೊಳ್ಳುತ್ತಾರೆ.

ಅಬ್ರುವನ್ಕಸ್ಯಚಿನ್ನಿನ್ದಾಮಾತ್ಮಪೂಜಾಮವರ್ಣಯನ್ ।
ವಿಪಶ್ಚಿದ್ಗುಣಸಮ್ಪನ್ನಃ ಪ್ರಾಪ್ನೋತ್ಯೇವ ಮಹದ್ಯಶಃ ॥೨೮॥

ಆದರೆ ಯಾವನು ಯಾರ ನಿಂದೆಯನ್ನೂ ಮಾಡದೇ ಆತ್ಮಪ್ರಶಂಸೆಯನ್ನೂ ಮಾಡಿಕೊಳ್ಳದೇ ಉತ್ತಮಗುಣಸಂಪನ್ನನಾಗಿರುವನೋ–ಅಂತಹ ವಿದ್ವಾಂಸನು ಮಹಾಯಶಸ್ಸನ್ನು ಹೊಂದಿಯೇ ಹೊಂದುತ್ತಾನೆ.

ಅಬ್ರುವನ್ವಾತಿ ಸುರಭಿರ್ಗನ್ಧಃ ಸುಮನಸಾಂ ಶುಚಿಃ ।
ತಥೈವಾವ್ಯಾಹರನ್ಭಾತಿ ವಿಮಲೋ ಭಾನುರಮ್ಬರೇ ॥೨೯॥

ಪವಿತ್ರವಾದ ಮತ್ತು ಸುಮನೋಹರವಾದ ಹೂವುಗಳ ವಾಸನೆಯು ಯಾವ ಮಾತನ್ನೂ ಆಡದೇ ಪರಿಮಳವನ್ನು ಸುತ್ತಲೂ ಬೀರುತ್ತದೆ. ನಿರ್ಮಲನಾದ ಸೂರ್ಯನು ತನ್ನ ಯಾವ ಪ್ರಶಂಸೆಯನ್ನೂ ಮಾಡಿಕೊಳ್ಳದೇ ಆಕಾಶದಲ್ಲಿ ಪ್ರಕಾಶಿಸುತ್ತಾನೆ.

ಏವಮಾದೀನಿ ಚಾನ್ಯಾನಿ ಪರಿತ್ಯಕ್ತಾನಿ ಮೇಧಯಾ ।
ಜ್ವಲನ್ತಿ ಯಶಸಾ ಲೋಕೇ ಯಾನಿ ನ ವ್ಯಾಹರನ್ತಿ ಚ ॥೩೦॥

ಇವೇ ಮೊದಲಾದ ಬುದ್ಧಿಯಿಲ್ಲದ ಇನ್ನೂ ಅನೇಕವಸ್ತುಗಳೂ ಯಶಸ್ಸಿನಿಂದ ಪ್ರಜ್ವಲಿಸುತ್ತವೆ. ಆದರೆ ಅವು ತಮ್ಮಲ್ಲಿರುವ ಗುಣಗಳ ವಿಷಯವಾಗಿ ಏನನ್ನೂ ಹೇಳಿಕೊಳ್ಳುವುದಿಲ್ಲ. (ಬುದ್ಧಿಯಿಲ್ಲದ ವಸ್ತುಗಳೇ ತಮ್ಮಲ್ಲಿರುವ ಗುಣಗಳ ವಿಷಯವಾಗಿ ಪ್ರಶಂಸೆಮಾಡಿಕೊಳ್ಳದೇ ಗುಣಗಳ ಪ್ರಕಾಶನದಿಂದ ಕೀರ್ತಿಯನ್ನು ಗಳಿಸಿವೆಯೆಂದಮೇಲೆ ಬುದ್ಧಿಯಿರುವ ಮನುಷ್ಯನು ಹೀಗೆ ಮಾಡದಿದ್ದರೆ ಅವನು ಅವುಗಳಿಗಿಂತಲೂ ಕಡೆಯಾಗುತ್ತಾನೆ.)

ನ ಲೋಕೇ ದೀಪ್ಯತೇ ಮೂರ್ಖಃ ಕೇವಲಾತ್ಮಪ್ರಶಂಸಯಾ ।
ಅಪಿ ಚಾಪಿಹಿತಃ ಶ್ವಭ್ರೇ ಕೃತವಿದ್ಯಃ ಪ್ರಕಾಶತೇ ॥೩೧॥

ಮೂರ್ಖನಾದವನು ಎಷ್ಟೇ ಆತ್ಮಪ್ರಶಂಸೆಯನ್ನು ಮಾಡಿಕೊಂಡರೂ ಲೋಕದಲ್ಲಿ ಪ್ರಕಾಶಕ್ಕೆ ಬರಲಾಗುವುದಿಲ್ಲ. ವಿದ್ವಾಂಸನಾದವನು ಗುಹೆಯಲ್ಲಿಯೇ ಅಡಗಿಕೊಂಡಿದ್ದರೂ ಲೋಕವಿಖ್ಯಾತನಾಗುತ್ತಾನೆ (ಕೀರ್ತಿಯಿಂದ ಬೆಳಗುತ್ತಾನೆ).

ಅಸದುಚ್ಚೈರಪಿ ಪ್ರೋಕ್ತಃ ಶಬ್ದಃ ಸಮುಪಶಾಮ್ಯತಿ ।
ದೀಪ್ಯತೇ ತ್ವೇವ ಲೋಕೇಷು ಶನೈರಪಿ ಸುಭಾಷಿತಮ್ ॥೩೨॥

ಕೆಟ್ಟ ಮಾತನ್ನು ಎಷ್ಟೇ ಗಟ್ಟಿಯಾಗಿಯೇ ಹೇಳಿದರೂ–ಆ ಶಬ್ದವು ವಿಲೀನವಾಗುತ್ತದೆ (ನಿರರ್ಥಕವಾಗುತ್ತದೆ.) ಲೋಕದಲ್ಲಿ ಅಂತಹ ಮಾತನ್ನು ಯಾರೂ ಆದರಿಸುವುದಿಲ್ಲ. ಒಳ್ಳೆಯ ಮಾತನ್ನು ಮೆಲ್ಲಗೆ ಹೇಳಿದರೂ ಅದು ಎಲ್ಲ ಲೋಕಗಳಲ್ಲಿಯೂ ಸರ್ವಸಮಾದರಣೀಯವಾಗಿ ಪ್ರಕಾಶಿಸುತ್ತದೆ.

ಮೂಢಾನಾಮವಲಿಪ್ತಾನಾಮಸಾರಂ ಭಾಷಿತಂ ಬಹು ।
ದಶಯತ್ಯನ್ತರಾತ್ಮಾನಮಗ್ನಿರೂಪಮಿವಾಂಶುಮಾನ್ ॥೩೩॥

ಗರ್ವಿಷ್ಠರಾದ ಮೂಢರಾಡುವ ನಿಸ್ಸಾರವಾದ ಹಲವಾರು ಬಗೆಯ ಮಾತುಗಳು–ಸೂರ್ಯನು ಸೂರ್ಯಕಾಂತಮಣಿಯ ಮೂಲಕವಾಗಿ ತನ್ನ ದಾಹಕಶಕ್ತಿಯನ್ನು ಪ್ರಕಟಪಡಿಸುವಂತೆ–ದುಷ್ಟರ ಅಂತಃಕರಣವನ್ನು ಹೊರಪಡಿಸುತ್ತದೆ. (ದುಷ್ಟರಾಡುವ ಮಾತುಗಳಿಂದಲೇ ಅವರ ಅಂತಃಕರಣವನ್ನು ಕಂಡುಕೊಳ್ಳಬಹುದಾಗಿದೆ.)

ಏತಸ್ಮಾತ್ಕಾರಣಾತ್ಪ್ರಜ್ಞಾಂ ಮೃಗಯನ್ತೇ ಪೃಥಗ್ವಿಧಾಮ್ ।
ಪ್ರಜ್ಞಾಲಾಭೋ ಹಿ ಭೂತಾನಾಮುತ್ತಮಃ ಪ್ರತಿಭಾತಿ ಮೇ ॥೩೪॥

ಈ ಕಾರಣದಿಂದಲೇ ಶ್ರೇಯಸ್ಕಾಮಿಗಳಾದ ಸಾಧುಪುರುಷರು ಅನೇಕ ಶಾಸ್ತ್ರಗಳ ಅಧ್ಯಯನದಿಂದ ನಾನಾಪ್ರಕಾರವಾದ ಜ್ಞಾನಮಾರ್ಗಗಳನ್ನು ಹುಡುಕುತ್ತಾರೆ. ಎಲ್ಲ ಪ್ರಾಣಿಗಳಿಗೂ ಪ್ರಜ್ಞಾಲಾಭವೇ ಉತ್ತಮೋತ್ತಮವಾದ ಲಾಭವೆಂದು ನನಗೆ ಭಾಸವಾಗುತ್ತದೆ.

ನಾಪೃಷ್ಟಃ ಕಸ್ಯಚಿದ್ಬ್ರೂಯಾನ್ನಾಪ್ಯನ್ಯಾಯೇನ ಪೃಚ್ಛತಃ ।
ಜ್ಞಾನವಾನಪಿ ಮೇಧಾವೀ ಜಡವತ್ಸಮುಪಾವಿಶೇತ್ ॥೩೫॥

ಬುದ್ಧಿವಂತನಾದ ಮನುಷ್ಯನು ಪ್ರಜ್ಞಾವಂತನಾಗಿದ್ದರೂ ಪ್ರಶ್ನೆಮಾಡದಿರುವ ಯಾರೊಬ್ಬರಿಗೂ ಉಪದೇಶಿಸಲು ಹೋಗಬಾರದು. ನ್ಯಾಯಸಮ್ಮತವಲ್ಲದ ರೀತಿಯಲ್ಲಿ ಅಥವಾ ಅಪಹಾಸ್ಯಕ್ಕಾಗಿ ಪ್ರಶ್ನಿಸಿದರೂ ಉತ್ತರವನ್ನು ಕೊಡಬಾರದು. ಜಡನಂತೆ ಸುಮ್ಮನೆ ಕುಳಿತುಕೊಳ್ಳಬೇಕು.

ತತೋ ವಾಸಂ ಪರೀಕ್ಷೇತ ಧರ್ಮನಿತ್ಯೇಷು ಸಾಧುಷು ।
ಮನುಷ್ಯೇಷು ವದಾನ್ಯೇಷು ಸ್ವಧರ್ಮನಿರತೇಷು ಚ ॥೩೬॥

ಮನುಷ್ಯನು ಯಾವಾಗಲೂ ಧರ್ಮನಿತ್ಯರಾದ ಸತ್ಪುರುಷರ ಜೊತೆಯಲ್ಲಿಯೂ–ಸ್ವಧರ್ಮನಿರತರಾದ ಉದಾರಿಗಳಾದ ಮನುಷ್ಯರ ಜೊತೆಯಲ್ಲಿಯೂ–ವಾಸಮಾಡುವ ಇಚ್ಛೆಯುಳ್ಳವನಾಗಿರಬೇಕು.

ಚತುರ್ಣಾಂ ಯತ್ರ ವರ್ಣಾನಾಂ ಧರ್ಮವ್ಯತಿಕರೋ ಭವೇತ್ ।
ನ ತತ್ರ ವಾಸಂ ಕುರ್ವೀತ ಶ್ರೇಯೋರ್ಥೀ ವೈ ಕಥಂಚನ ॥೩೭॥

ನಾಲ್ಕು ವರ್ಣಗಳ ಧರ್ಮಗಳಿಗೆ ಎಲ್ಲಿ ಸಂಕರವಾಗುವುದೋ–ಅಲ್ಲಿ ಶ್ರೇಯಸ್ಕಾಮನಾದವನು ಯಾವುದೇ ಕಾರಣದಿಂದಲೂ ವಾಸಮಾಡಬಾರದು.

ನಿರಾರಮ್ಭೋಽಪ್ಯಯಮಿಹ ಯಥಾಲಬ್ಧೋಪಜೀವನಃ ।
ಪುಣ್ಯಂ ಪುಣ್ಯೇಷು ವಿಮಲಂ ಪಾಪಂ ಪಾಪೇಷು ಚಾಪ್ನುಯಾತ್ ॥

ಯಾವುದೇ ವಿಧವಾದ ಕಾಮ್ಯಕರ್ಮಗಳನ್ನೂ ಆರಂಭಿಸದವನೂ, ಯದೃಚ್ಛಾಲಾಭಸಂತುಷ್ಟನೂ (ಎಷ್ಟು ಸಿಕ್ಕಿದರೆ ಅಷ್ಟರಿಂದಲೇ ಜೀವನವನ್ನು ನಿರ್ವಹಿಸುವವನೂ)–ಪುಣ್ಯಪುರುಷರ ಜೊತೆಯಲ್ಲಿ ವಾಸಮಾಡುತ್ತಿದ್ದರೆ ನಿರ್ಮಲವಾದ ಪುಣ್ಯವನ್ನೇ ಹೊಂದುತ್ತಾನೆ. ಪಾಪಿಷ್ಠರ ಜೊತೆಯಲ್ಲಿ ವಾಸಮಾಡುತ್ತಿದ್ದರೆ ಪಾಪವನ್ನೇ ಹೊಂದುತ್ತಾನೆ.

ಅಪಾಮಗ್ನೇಸ್ತಥೇನ್ದೋಶ್ಚ ಸ್ಪರ್ಶಂ ವೇದಯತೇ ಯಥಾ ।
ತಥಾ ಪಶ್ಯಾಮಹೇ ಸ್ಪರ್ಶಮುಭಯೋಃ ಪುಣ್ಯಪಾಪಯೋಃ ॥೩೯॥

ಯಾವ ರೀತಿಯಲ್ಲಿ ನೀರು, ಅಗ್ನಿ ಮತ್ತು ಚಂದ್ರ–ಇವರ ಸಂಸರ್ಗದಿಂದ ಮನುಷ್ಯನಿಗೆ ಅನುಕ್ರಮವಾಗಿ ಶೀತೋಷ್ಣ-ಸುಖಗಳ ಸ್ಪರ್ಶಾನು

ಭವವು ಉಂಟಾಗುತ್ತದೆಯೋ–ಅದೇ ರೀತಿಯಲ್ಲಿ ಪುಣ್ಯವಂತರ ಸಂಸರ್ಗದಿಂದ ಪುಣ್ಯವನ್ನೂ ಪಾಪಿಷ್ಠರ ಸಂಸರ್ಗದಿಂದ ಪಾಪವನ್ನೂ ಪ್ರತ್ಯಕ್ಷವಾಗಿಯೇ ಅನುಭವಿಸುತ್ತೇವೆ.

ಅಪಶ್ಯನ್ತೋಽನುವಿಷಯಂ ಭುಞ್ಜತೇ ವಿಘಸಾಶಿನಃ ।
ಭುಞ್ಜಾನಾಶ್ಚಾತ್ಮವಿಷಯಾನ್ವಿಷಯಾನ್ವಿದ್ಧಿ ಕರ್ಮಣಾಮ್ ॥೪೦॥

ಯಜ್ಞಶೇಷವನ್ನು ತಿನ್ನುವವರು ಅದನ್ನು ಇಂದ್ರಿಯವಿಷಯವನ್ನಾಗಿ ಭಾವಿಸದೇ ನಿರ್ಲಿಪ್ತರಾಗಿ (ಪ್ರಸಾದಬುದ್ಧಿಯಿಂದ) ಸೇವಿಸುತ್ತಾರೆ. ಆದರೆ ಆಹಾರವನ್ನು ತಮ್ಮ ವಿಷಯಗಳನ್ನಾಗಿ (ಇಂದ್ರಿಯವಿಷಯಗಳನ್ನಾಗಿ) ಯಾರು ಸೇವಿಸುತ್ತಾರೆಯೋ ಅವರು ಕರ್ಮಗಳಿಗೆ ಗುರಿಯಾಗುತ್ತಾರೆಂದು ತಿಳಿ.

ಯತ್ರಾಗಮಯಮಾನಾನಾಮಸತ್ಕಾರೇಣ ಪೃಚ್ಛತಾಮ್ ।
ಪ್ರಬ್ರೂಯಾದ್ಬ್ರಾಹ್ಮಣೋ ಧರ್ಮಂ ತ್ಯಜೇತ್ತಂ ದೇಶಮಾತ್ಮವಾನ್ ॥೪೧॥

ಅನಾದರಪೂರ್ವಕವಾಗಿ ಆಗಮನವನ್ನು ಬಯಸುವವರಿಗೆ ಯಾವುದಾದರೂ ಸ್ಥಳದಲ್ಲಿ ಬ್ರಾಹ್ಮಣನೊಬ್ಬನು ಧರ್ಮೋಪದೇಶಮಾಡುತ್ತಿದ್ದರೆ ಅಂತಹ ಸ್ಥಳವನ್ನು ಬುದ್ಧಿವಂತನಾದವನು ಒಡನೆಯೇ ಪರಿತ್ಯಜಿಸಬೇಕು.

ಶಿಷ್ಯೋಪಾಧ್ಯಾಯಿಕಾವೃತ್ತಿರ್ಯತ್ರ ಸ್ಯಾತ್ಸುಸಮಾಹಿತಾ ।
ಯಥಾವಚ್ಛಾಸ್ತ್ರಸಂಪನ್ನಾ ಕಸ್ತಂ ದೇಶಂ ಪರಿತ್ಯಜೇತ್ ॥೪೨॥

ಎಲ್ಲಿ ಗುರು-ಶಿಷ್ಯರ ವ್ಯವಹಾರವು ಸುವ್ಯವಸ್ಥಿತವಾಗಿರುವುದೋ, ಯಥಾವತ್ತಾಗಿ ಶಾಸ್ತ್ರಸಮ್ಮತವಾಗಿರುವುದೋ–ಅಂತಹ ಸ್ಥಳವನ್ನು ಯಾರು ತಾನೇ ಪರಿತ್ಯಜಿಸುತ್ತಾರೆ?

ಆಕಾಶಸ್ಥಾ ಧ್ರುವಂ ಯತ್ರ ದೋಷಂ ಬ್ರೂಯುರ್ವಿಪಶ್ಚಿತಾಮ್ ।
ಆತ್ಮಪೂಜಾಭಿಕಾಮೋ ವೈ ಕೋ ವಸೇತ್ತತ್ರ ಪಣ್ಡಿತಃ ॥೪೩॥

ಎಲ್ಲಿಯ ಜನರು ಯಾವ ಆಧಾರವೂ ಇಲ್ಲದೇ ವಿದ್ವಾಂಸರ ಮೇಲೆ ನಿಶ್ಚಿತವಾದ ರೂಪದಲ್ಲಿ ದೋಷಾರೋಪಣೆಗಳನ್ನು ಮಾಡುವರೋ–ಅಂತಹ

ದೇಶದಲ್ಲಿ ಆತ್ಮಗೌರವವನ್ನುಳಿಸಿಕೊಂಡಿರಲು ಇಚ್ಛಿಸುವ ಯಾವ ಪಂಡಿತನು ತಾನೇ ವಾಸಮಾಡಿಕೊಂಡಿರುತ್ತಾನೆ?

ಯತ್ರ ಸಂಲೋಡಿತಾ ಲುಬ್ಧೈಃ ಪ್ರಾಯಶೋ ಧರ್ಮಸೇತವಃ ।
ಪ್ರದೀಪ್ತಮಿವ ಚೈಲಾನ್ತಂ ಕಸ್ತಂ ದೇಶಂ ನ ಸಂತ್ಯಜೇತ್ ॥೪೪॥

ಯಾವ ದೇಶದಲ್ಲಿ ಲುಬ್ಧರಾದವರು ಪ್ರಾಯಶಃ ಧರ್ಮದ ಎಲ್ಲ ಕಟ್ಟುಪಾಡುಗಳನ್ನೂ ವಿಧ್ವಂಸನಗೊಳಿಸಿರುವರೋ ಅಂತಹ ದೇಶವನ್ನು–ಸೆರಗುಹೊತ್ತಿಕೊಂಡೊಡನೆಯೇ ಉಟ್ಟಿರುವ ವಸ್ತ್ರವನ್ನೇ ಕಿತ್ತುಬಿಸಾಡುವಂತೆ ಧರ್ಮಮಾರ್ಗದಲ್ಲಿ ಬದುಕನ್ನು ನಡೆಸಲು ಇಚ್ಛಿಸುವ ಯಾವನು ತಾನೇ ಪರಿತ್ಯಜಿಸದೇ ಇರುವನು?

ಯತ್ರ ಧರ್ಮಮನಾಶಙ್ಕಾಶ್ಚರೇಯುರ್ವೀತಮತ್ಸರಾಃ ।
ಭವೇತ್ತತ್ರ ವಸೇಚ್ಚೈವ ಪುಣ್ಯಶೀಲೇಷು ಸಾಧುಷು ॥೪೫॥

ಆದರೆ ಯಾವ ದೇಶದಲ್ಲಿ ಜನರು ಮಾತ್ಸರ್ಯದಿಂದಲೂ ಸಂಶಯಗಳಿಂದಲೂ ವಿಹೀನರಾಗಿ ಧರ್ಮಾಚರಣೆಯನ್ನು ಮಾಡುತ್ತಿರುವರೋ–ಅಂತಹ ಪುಣ್ಯಶೀಲರಾದ ಸಾಧುಗಳಿರುವ ಸ್ಥಳದಲ್ಲಿ ಅವಶ್ಯವಾಗಿ ವಾಸಮಾಡಿಕೊಂಡಿರಬೇಕು.

ಧರ್ಮಮರ್ಥನಿಮಿತ್ತಂ ಚ ಚರೇಯುರ್ಯತ್ರ ಮಾನವಾಃ ।
ನ ತಾನನುವಸೇಜ್ಜಾತು ತೇ ಹಿ ಪಾಪಕೃತೋ ಜನಾಃ ॥೪೬॥

ಎಲ್ಲಿಯ ಜನರು ಹಣದ ಸಲುವಾಗಿ ಧರ್ಮಾಚರಣೆಯನ್ನು ಮಾಡುತ್ತಿರುವರೋ–ಅಂತಹವರ ಸಮೀಪದಲ್ಲಿ ಯಾವಾಗಲೂ ಯಾವುದೇ ಕಾರಣದಿಂದಲೂ ವಾಸಮಾಡಬಾರದು. ಏಕೆಂದರೆ: ಅಂತಹವರು ಸಂಪೂರ್ಣವಾಗಿ ಪಾಪಕರ್ಮಿಗಳೇ ಆಗಿರುತ್ತಾರೆ.

ಕರ್ಮಣಾ ಯತ್ರ ಪಾಪೇನ ವರ್ತನ್ತೇ ಜೀವಿತೇಪ್ಸವಃ ।
ವ್ಯವಧಾವೇತ್ತತಸ್ತೂರ್ಣಂ ಸಸರ್ಪಾಚ್ಛರಣಾದಿವ ॥೪೭॥

ಯಾವ ಸ್ಥಳದಲ್ಲಿ ಜನರು ಜೀವನದ ನಿರ್ವಹಣೆಗಾಗಿ ಪಾಪಕರ್ಮಗಳನ್ನೇ ಆಶ್ರಯಿಸಿರುವರೋ ಅಂತಹ ಸ್ಥಳದಿಂದ–ಹಾವು ಹೊಕ್ಕಿರುವ ಮನೆಯನ್ನು ಬಿಟ್ಟೋಡುವಂತೆ–ಬಹಳ ಬೇಗ ದೂರ ಹೊರಟುಹೋಗಬೇಕು.

ಯೇನ ಖಟ್ವಾಂ ಸಮಾರೂಢಃ ಕರ್ಮಣಾನುಶಯೀ ಭವೇತ್ ।
ಆದಿತಸ್ತನ್ನ ಕರ್ತವ್ಯಮಿಚ್ಛತಾ ಭವಮಾತ್ಮನಃ ॥೪೮॥

ಯಾವ ಪಾಪಕರ್ಮದ ಫಲದಿಂದ ಮಂಚದ ಮೇಲೆ ಮಲಗಿ (ರೋಗಿಯಾಗಿ) ದುಃಖ (ಪಶ್ಚಾತ್ತಾಪ) ಪಡಬೇಕಾಗುವುದೋ–ಅಂತಹ ಪಾಪಕರ್ಮವನ್ನು ಶ್ರೇಯಸ್ಕಾಮನಾದವನು ಮೊದಲಿನಿಂದಲೂ ಮಾಡಬಾರದು. (ಕೊನೆಗಾಲದಲ್ಲಿ ಪಶ್ಚಾತ್ತಾಪಪಡಬೇಕಾಗುವ ಪಾಪಕರ್ಮವನ್ನು ಶ್ರೇಯಸ್ಕಾಮನು ಮೊದಲೇ ಬಿಟ್ಟುಬಿಡಬೇಕು.)

ಯತ್ರ ರಾಜಾ ಚ ರಾಜ್ಞಶ್ಚ ಪುರುಷಾಃ ಪ್ರತ್ಯನನ್ತರಾಃ ।
ಕುಟುಮ್ಬಿನಾಮಗ್ರಭುಜಸ್ತ್ಯಜೇತ್ತದ್ರಾಷ್ಟ್ರಮಾತ್ಮವಾನ್ ॥೪೯॥

ಯಾವ ದೇಶದಲ್ಲಿ ರಾಜನೂ ಮತ್ತು ಅವನ ನಿಕಟವರ್ತಿಗಳಾಗಿರುವ ರಾಜಪುರುಷರೂ–ಕುಟುಂಬದ ಜನಗಳು ಮತ್ತು ಶ್ರೋತ್ರಿಯರು ಊಟಮಾಡುವ ಮೊದಲೇ ಊಟಮಾಡುವರೋ–ಅಂತಹ ದೇಶವನ್ನು ಬುದ್ಧಿವಂತನಾದವನು ಅವಶ್ಯವಾಗಿ ಪರಿತ್ಯಜಿಸಬೇಕು.

ಶ್ರೋತ್ರಿಯಾಸ್ತ್ವಗ್ರಭೋಕ್ತಾರೋ ಧರ್ಮನಿತ್ಯಾಃ ಸನಾತನಾಃ ।
ಯಾಜನಾಧ್ಯಾಪನೇ ಯುಕ್ತಾ ಯತ್ರ ತದ್ರಾಷ್ಟ್ರಮಾವಸೇತ್ ॥೫೦॥

ಯಾವ ದೇಶದಲ್ಲಿ ಯಾಜನ ಮತ್ತು ಅಧ್ಯಾಪನಗಳಲ್ಲಿ ಯುಕ್ತರಾದ, ಸನಾತನಧರ್ಮದಲ್ಲಿ ಶ್ರದ್ಧೆಯಿರುವ, ಧರ್ಮನಿತ್ಯರಾದ ಶ್ರೋತ್ರಿಯರು ಎಲ್ಲರಿಗಿಂತಲೂ ಮೊದಲು ಭೋಜನಮಾಡುವರೋ–ಆ ದೇಶದಲ್ಲಿ ಅವಶ್ಯವಾಗಿ ವಾಸಮಾಡಬೇಕು.

ಸ್ವಾಹಾಸ್ವಧಾವಷಟ್ಕಾರಾ ಯತ್ರ ಸಮ್ಯಗನುಷ್ಠಿತಾಃ ।
ಅಜಸ್ರಂ ಚೈವ ವರ್ತನ್ತೇ ವಸೇತ್ತತ್ರಾವಿಚಾರಯನ್ ॥೫೧॥

ಯಾವ ದೇಶದಲ್ಲಿ ಸ್ವಾಹಾಕಾರ (ಅಗ್ನಿಹೋತ್ರ), ಸ್ವಧಾಕಾರ (ಶ್ರಾದ್ಧ ಕರ್ಮ), ವಷಟ್ಕಾರ (ಯಜ್ಞಕರ್ಮ)–ಈ ಕರ್ಮಗಳು ಚೆನ್ನಾಗಿ ಅನುಷ್ಠಾನ ಮಾಡಲ್ಪಡುವುವೋ ಮತ್ತು ಆ ಕರ್ಮಗಳು ನಿರಂತರವಾಗಿ ನಡೆಯುತ್ತಿರುವುವೋ–ಅಂತಹ ದೇಶದಲ್ಲಿ ಯಾವುದನ್ನೂ ವಿಚಾರಮಾಡದೇ ವಾಸ ಮಾಡಬೇಕು.

ಅಶುಚೀನ್ಯತ್ರ ಪಶ್ಯೇತ ಬ್ರಾಹ್ಮಣಾನ್ವೃತ್ತಿಕರ್ಶಿತಾನ್ ।
ತ್ಯಜೇತ್ತದ್ರಾಷ್ಟ್ರಮಾಸನ್ನಮುಪಸೃಷ್ಟಮಿವಾಮಿಷಮ್ ॥೫೨॥

ಯಾವ ದೇಶದಲ್ಲಿ ಬ್ರಾಹ್ಮಣರು ಜೀವಿಕೆಗಾಗಿ ಕಷ್ಟಪಡುತ್ತಾ ಅಪರಿಶುದ್ಧವಾದ ಅವಸ್ಥೆಯಲ್ಲಿರುವುದನ್ನು ನೋಡುವರೋ ಆ ದೇಶವು ಅತಿ ಸಮೀಪದಲ್ಲಿಯೇ ಇದ್ದರೂ – ವಿಷಯುಕ್ತವಾದ ಭೋಜ್ಯವಸ್ತುವನ್ನು (ವಿಷದಿಗ್ಧಶಸ್ತ್ರಹತವಾದ ಪ್ರಾಣಿಯ ಮಾಂಸವನ್ನು) ತ್ಯಾಗಮಾಡುವಂತೆ ಆ ದೇಶವನ್ನು ಪರಿತ್ಯಜಿಸಬೇಕು.

ಪ್ರೀಯಮಾಣಾ ನರಾ ಯತ್ರ ಪ್ರಯಚ್ಛೇಯುರಯಾಚಿತಾಃ ।
ಸ್ವಸ್ಥಚಿತ್ತೋ ವಸೇತ್ತತ್ರ ಕೃತಕೃತ್ಯ ಇವಾತ್ಮವಾನ್ ॥೫೩॥

ಯಾವ ದೇಶದಲ್ಲಿ ಪ್ರಸನ್ನಚಿತ್ತರಾದ ಜನರು, ಯಾಚನೆಮಾಡದೇ ಇದ್ದರೂ ಸತ್ಪುರುಷರನ್ನು ಕರೆದು ಪುರಸ್ಕರಿಸಿ ಭಿಕ್ಷೆಯನ್ನು ನೀಡುವರೋ– ಅಂತಹ ದೇಶದಲ್ಲಿ ಜಿತೇಂದ್ರಿಯನಾದ ಸಾಧಕನು ಕೃತಕೃತ್ಯನಾದವನಂತೆ ಸ್ವಸ್ಥಚಿತ್ತನಾಗಿ ವಾಸಮಾಡಬೇಕು.

ದಣ್ಡೋ ಯತ್ರಾವಿನೀತೇಷು ಸತ್ಕಾರಶ್ಚ ಕೃತಾತ್ಮಸು ।
ಚರೇತ್ತತ್ರ ವಸೇಚ್ಚೈವ ಪುಣ್ಯಶೀಲೇಷು ಸಾಧುಷು ॥೫೪॥

ಯಾವ ದೇಶದಲ್ಲಿ ಉದ್ಧತರು ಶಿಕ್ಷಿಸಲ್ಪಡುವರೋ, ಜಿತಾತ್ಮರಾದ ಮಹಾತ್ಮರು ಸತ್ಕಾರವನ್ನು ಪಡೆಯುವರೋ – ಅಂತಹ ದೇಶದಲ್ಲಿ ಪುಣ್ಯಶಾಲಿಗಳಾದ ಸಾಧುಗಳ ಮಧ್ಯದಲ್ಲಿ ಸಂಚರಿಸಬೇಕು ಮತ್ತು ವಾಸಮಾಡಬೇಕು.

ಉಪಸೃಷ್ಟೇಷು ದಾನ್ತೇಷು ದುರಾಚಾರೇಷು ಸಾಧುಷು ।
ಅವಿನೀತೇಷು ಲುಬ್ಧೇಷು ಸುಮಹದ್ದಣ್ಡಧಾರಣಮ್ ॥೫೫॥

ಯಾರು ಜಿತೇಂದ್ರಿಯರಾದ ಸಾಧುಗಳ ವಿಷಯದಲ್ಲಿ ಕೋಪಗೊಳ್ಳು ವರೋ, ಸತ್ಪುರುಷರ ವಿಷಯದಲ್ಲಿ ಅತ್ಯಾಚಾರವನ್ನು ನಡೆಸುವರೋ, ಉದ್ಧತರಾಗಿರುವರೋ, ಲೋಭಿಗಳಾಗಿರುವರೋ–ಅಂತಹವರಿಗೆ ಕಠಿನ ವಾದ ಶಿಕ್ಷೆಯನ್ನು ವಿಧಿಸಬೇಕು.

ಯತ್ರ ರಾಜಾ ಧರ್ಮನಿತ್ಯೋ ರಾಜ್ಯಂ ಧರ್ಮೇಣ ಪಾಲಯೇತ್ ।
ಅಪಾಸ್ಯ ಕಾಮಾನ್ಕಾಮೇಶೋ ವಸೇತ್ತತ್ರಾವಿಚಾರಯನ್ ॥೫೬॥

ಯಾವ ದೇಶದಲ್ಲಿ ರಾಜನು ಸದಾ ಧರ್ಮಪರಾಯಣನಾಗಿರುವನೋ, ಧರ್ಮಾನುಸಾರವಾಗಿಯೇ ರಾಜ್ಯವನ್ನು ಪರಿಪಾಲಿಸುತ್ತಿರುವನೋ, ಸಮಸ್ತಕಾಮನೆಗಳಿಗೂ ಅಧಿಪತಿಯಾಗಿದ್ದು ವಿಷಯಭೋಗಗಳಿಂದ ವಿಮುಖನಾಗಿರುವನೋ–ಅಂತಹ ದೇಶದಲ್ಲಿ ಯಾವುದನ್ನೂ ವಿಚಾರಮಾಡದೇ ವಾಸಮಾಡಬೇಕು.

ಯಥಾಶೀಲಾ ಹಿ ರಾಜಾನಃ ಸರ್ವಾನ್ವಿಷಯವಾಸಿನಃ ।
ಶ್ರೇಯಸಾ ಯೋಜಯಂತ್ಯಾಶು ಶ್ರೇಯಸಿ ಪ್ರತ್ಯುಪಸ್ಥಿತೇ ॥೫೭॥

ರಾಜನ ಶೀಲ ಮತ್ತು ಸ್ವಭಾವಗಳು ಹೇಗಿರುವುವೋ–ಅವನ ಪ್ರಜೆಗಳ ಶೀಲ-ಸ್ವಭಾವಗಳೂ ಹಾಗೆಯೇ ಇರುತ್ತವೆ. (ರಾಜನು ಕಾಮಚಾರನಾಗಿರದಿದ್ದರೆ ಪ್ರಜೆಗಳೂ ಕಾಮಚಾರರಾಗಿರುವುದಿಲ್ಲ.) ಧರ್ಮಮೂಲವಾದ ರಾಜ್ಯಪರಿಪಾಲನೆಯಿಂದ ತಾನೂ ಶ್ರೇಯಸ್ಸನ್ನು ಪಡೆದುಕೊಳ್ಳುವುದಲ್ಲದೇ–ಪ್ರಜೆಗಳನ್ನೂ ಬಹಳ ಬೇಗ ಶ್ರೇಯಸ್ಸಿಗೆ ಭಾಗಿಗಳನ್ನಾಗಿ ಮಾಡುತ್ತಾನೆ.

ಗಾಲವ! ನಿನ್ನ ಪ್ರಶ್ನೆಗೆ ಅನುಸಾರವಾಗಿ ಶ್ರೇಯಸ್ಸಾಧಕವಾದ ಮಾರ್ಗಗಳನ್ನು ನಿನಗೆ ಹೇಳಿರುತ್ತೇನೆ. ಆತ್ಮದ ಶ್ರೇಯಸ್ಸನ್ನೇ ಪ್ರಧಾನವನ್ನಾಗಿಟ್ಟುಕೊಂಡು ಎಲ್ಲವನ್ನೂ ವರ್ಣಿಸಲು ಸಾಧ್ಯವಾಗುವುದೇ ಇಲ್ಲ. ಹೀಗೆ ಸ್ವವರ್ಣೋಚಿತವಾದ ವೃತ್ತಿಯಿಂದ ಜೀವನವನ್ನು ನಿರ್ವಹಿಸುತ್ತಾ ಪ್ರಾಣಿಗಳ ಹಿತದಲ್ಲಿಯೇ ಆಸಕ್ತನಾಗಿರುವ ಮನುಷ್ಯನಿಗೆ ಸ್ವಧರ್ಮಪರಿಪಾಲನಾರೂಪವಾದ ತಪೋನುಷ್ಠಾನದಿಂದ ಈ ಲೋಕದಲ್ಲಿಯೇ ಶ್ರೇಷ್ಠವಾದ ಶ್ರೇಯಸ್ಸು ಪ್ರತ್ಯಕ್ಷವಾಗಿಯೇ ಲಭಿಸುತ್ತದೆ.”

೨೮೭ನೆಯ ಅಧ್ಯಾಯವು ಮುಗಿಯಿತು.

೨೮೮ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಅರಿಷ್ಟನೇಮಿಯಿಂದ ಸಗರನಿಗೆ ವೈರಾಗ್ಯವನ್ನುಂಟುಮಾಡುವ ಮೋಕ್ಷವಿಷಯದ ಉಪದೇಶ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಥಂ ನು ಯುಕ್ತಃ ಪೃಥಿವೀಂ ಚರೇದಸ್ಮದ್ವಿಭೋ ನೃಪಃ ।
ನಿತ್ಯಂ ಕೈಶ್ಚ ಗುಣೈರ್ಯುಕ್ತಃ ಸಂಗಪಾಶಾದ್ವಿಮುಚ್ಯತೇ ॥೧॥

"ಪಿತಾಮಹ! ನನ್ನಂತಹ ರಾಜನು ಯಾವ ಸಾಧನೆ ಮತ್ತು ವ್ಯವಹಾರಗಳಿಂದ ಯುಕ್ತನಾಗಿ ಈ ಭೂಮಿಯಲ್ಲಿ ಸಂಚರಿಸಬೇಕು? ನಿತ್ಯವೂ ಯಾವ ಗುಣಗಳಿಂದ ಸಂಪನ್ನನಾದವನು ಸಂಗಬಂಧನದಿಂದ ಮುಕ್ತಿಯನ್ನು ಹೊಂದುತ್ತಾನೆ?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯವನ್ನೇ ಪ್ರಶ್ನಿಸಿದ ಸಗರನಿಗೆ ಅರಿಷ್ಟ ನೇಮಿಯು ಹೇಳಿದ ಪುರಾತನವಾದ ಇತಿಹಾಸರೂಪವಾದ ಉತ್ತರವನ್ನೇ ನಿನಗೂ ಹೇಳುತ್ತೇನೆ. ಒಮ್ಮೆ ಸಗರನು ಅರಿಷ್ಟನೇಮಿಯ ಬಳಿಗೆ ಹೋಗಿ ಪ್ರಶ್ನಿಸಿದನು :


ಕಿಂ ಶ್ರೇಯಃ ಪರಮಂ ಬ್ರಹ್ಮನ್ಕೃತ್ವೇಹ ಸುಖಮಶ್ನುತೇ ।
ಕಥಂ ನ ಶೋಚೇನ್ನ ಕ್ಷುಭ್ಯೇದೇತದಿಚ್ಛಾಮಿ ವೇದಿತುಮ್ ॥೩॥

"ಬ್ರಾಹ್ಮಣೋತ್ತಮನೇ! ಈ ಜಗತ್ತಿನಲ್ಲಿ ಮನುಷ್ಯನು ಪರಮ ಶ್ರೇಯಸ್ಕರವಾದ ಯಾವ ಕರ್ಮವನ್ನು ಮಾಡುವುದರಿಂದ ಸುಖವನ್ನು ಅನುಭವಿಸುತ್ತಾನೆ? ಮನುಷ್ಯನು ಶೋಕಿಸದಿರಲು ಮತ್ತು ಕಳವಳಗೊಳ್ಳ ದಿರಲು ಹೇಗೆ ಸಾಧ್ಯವಾಗುತ್ತದೆ? ಈ ವಿಷಯವನ್ನು ನಿನ್ನಿಂದ ತಿಳಿದುಕೊಳ್ಳ ಬೇಕೆಂದಿರುತ್ತೇನೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಸಗರಚಕ್ರವರ್ತಿಯಿಂದ ಹೀಗೆ ಪ್ರಶ್ನಿಸಲ್ಪಟ್ಟ, ಸರ್ವ

ಶಾಸ್ತ್ರಗಳನ್ನೂ ತಿಳಿದವರಲ್ಲಿ ಶ್ರೇಷ್ಠನಾದ ತಾರ್ಕ್ಷ್ಯನು (ಅರಿಷ್ಟನೇಮಿಯು) ಸಗರನಲ್ಲಿ ಸರ್ವೋತ್ಕೃಷ್ಟವಾದ ದೈವೀಸಂಪತ್ತು ಇರುವುದೆಂಬುದನ್ನು ತಿಳಿದು ಅವನಿಗೆ ಈ ಒಳ್ಳೆಯ ಮಾತನ್ನು ಹೇಳಿದನು :



ಸುಖಂ ಮೋಕ್ಷಸುಖಂ ಲೋಕೇ ನ ಚ ಮೂಢೋಽವಗಚ್ಛತಿ ।
ಪ್ರಸಕ್ತಃ ಪುತ್ರಪಶುಷು ಧನಧಾನ್ಯಸಮಾಕುಲಃ ॥೫॥

"ಸಗರ! ಲೋಕದಲ್ಲಿ ಮೋಕ್ಷಸುಖವೆಂಬುದೇ ನಿಜವಾದ ಸುಖವು. ಆದರೆ ಧನ-ಧಾನ್ಯಗಳ ಸಂಗ್ರಹಣೆಯಲ್ಲಿಯೇ ಮಗ್ನನಾಗಿರುವ, ಪುತ್ರ-ಪಶು ಗಳಲ್ಲಿಯೇ ಆಸಕ್ತನಾದ ಮೂಢನಿಗೆ ಅಂತಹ ಯಥಾರ್ಥಜ್ಞಾನವಿರುವುದಿಲ್ಲ.

ಸಕ್ತಬುದ್ಧಿರಶಾನ್ತಾತ್ಮಾ ನ ಶಕ್ಯಂ ತಚ್ಚಿಕಿತ್ಸಿತುಮ್ ।
ಸ್ನೇಹಪಾಶಸಿತೋ ಮೂಢೋ ನ ಸ ಮೋಕ್ಷಾಯ ಕಲ್ಪತೇ ॥೬॥

ಯಾವನ ಬುದ್ಧಿಯು ವಿಷಯಗಳಲ್ಲಿ ಆಸಕ್ತವಾಗಿರುವುದೋ, ಅದರಿಂದಲೇ ಅವನ ಮನಸ್ಸು ಅಶಾಂತವಾಗಿರುವುದೋ–ಅಂತಹ ಮನುಷ್ಯನಿಗೆ ಚಿಕಿತ್ಸೆಮಾಡಲು ಸಾಧ್ಯವೇ ಆಗುವುದಿಲ್ಲ. ಏಕೆಂದರೆ : ಸ್ನೇಹಪಾಶದಿಂದ ಬಂಧಿಸಲ್ಪಟ್ಟಿರುವ ಮೂಢನು ಮೋಕ್ಷವನ್ನು ಪಡೆಯಲು ಯೋಗ್ಯನಲ್ಲ.

ಸ್ನೇಹಜಾನಿಹ ತೇ ಪಾಶಾನ್ವಕ್ಷ್ಯಾಮಿ ಶೃಣು ತಾನ್ಮಮ ।
ಸಕರ್ಣಕೇನ ಶಿರಸಾ ಶಕ್ಯಾಃ ಶ್ರೋತುಂ ವಿಜಾನತಾ ॥೭॥

ಸಗರ! ನಾನು ನಿನಗೆ ಸ್ನೇಹಜನಿತವಾದ ಬಂಧನಗಳು ಯಾವುವೆಂಬುದನ್ನು ಹೇಳುತ್ತೇನೆ. ಅವುಗಳನ್ನು ಕೇಳು. ಕಿವಿಗೊಟ್ಟು ಕೇಳುವ ವಿದ್ವಾಂಸನಾದ ಮನುಷ್ಯನು ಈ ನನ್ನ ಮಾತುಗಳನ್ನು ಬುದ್ಧಿಪೂರ್ವಕವಾಗಿ ಕೇಳಬಲ್ಲನು.

ಸಮ್ಭಾವ್ಯ ಪುತ್ರಾನ್ಕಾಲೇನ ಯೌವನಸ್ಥಾನ್ನಿವೇಶ್ಯ ಚ ।
ಸಮರ್ಥಾಞ್ಜೀವನೇ ಜ್ಞಾತ್ವಾ ಮುಕ್ತಶ್ಚರ ಯಥಾಸುಖಮ್ ॥೮॥

ಕಾಲಾನುಗುಣವಾಗಿ ಮಕ್ಕಳನ್ನು ಪಡೆದುಕೊಂಡು, ಅವರು ಯುವಕರಾದಕೂಡಲೇ ಅವರಿಗೆ ವಿವಾಹಮಾಡಿ–ಅವರು ಬೇರೆಯವರ ಹಂಗಿಲ್ಲದೇ ತಮ್ಮ ಜೀವನವನ್ನು ನಿರ್ವಹಿಸಲು ಸಮರ್ಥರಾಗಿರುವರೆಂಬುದನ್ನು ತಿಳಿದ ಕೂಡಲೇ–ಅವರ ಸ್ನೇಹಪಾಶದಿಂದ ಮುಕ್ತನಾಗಿ ಸುಖವಾಗಿ ಭೂಮಿಯಲ್ಲಿ ಸಂಚರಿಸು.

ಭಾರ್ಯಾಂ ಪುತ್ರವತೀಂ ವೃದ್ಧಾಂ ಲಾಲಿತಾಂ ಪುತ್ರವತ್ಸಲಾಮ್ ।
ಜ್ಞಾತ್ವಾ ಪ್ರಜಹಿ ಕಾಲೇನ ಪರಾರ್ಥಮನುದೃಶ್ಯ ಚ ॥೯॥

ಪುತ್ರವತಿಯಾದ, ವೃದ್ಧೆಯಾದ, ಪುತ್ರರಿಂದ ಲಾಲಿಸಿ-ಪೋಷಿಸಲ್ಪಡುತ್ತಿರುವ ನಿನ್ನ ಭಾರ್ಯೆಯು ಮಕ್ಕಳ ವಿಷಯದಲ್ಲಿ ಹೆಚ್ಚಿನ ವಾತ್ಸಲ್ಯದಿಂದಿರುವಳೆಂಬುದನ್ನು ತಿಳಿದು, ನೀನು ಮೋಕ್ಷವನ್ನೇ ಪರಮಾರ್ಥವನ್ನಾಗಿ ಭಾವಿಸಿ ಯೋಗ್ಯವಾದ ಸಮಯದಲ್ಲಿ ಅವಳನ್ನೂ ಪರಿತ್ಯಜಿಸು.

ಸಾಪತ್ಯೋ ನಿರಪತ್ಯೋ ವಾ ಮುಕ್ತಶ್ಚರ ಯಥಾಸುಖಮ್ ।
ಇನ್ದ್ರಿಯೈರಿನ್ದ್ರಿಯಾರ್ಥಾಂಸ್ತ್ವಮನುಭೂಯ ಯಥಾವಿಧಿ ।
ಕೃತಕೌತೂಹಲಸ್ತೇಷು ಮುಕ್ತಶ್ಚರ ಯಥಾಸುಖಮ್ ॥೧೦॥

ಪುತ್ರವಂತನಾಗಿರು ; ಅಥವಾ ಪುತ್ರವಂತನಾಗದೆಯೇ ಇರು. ಹೇಗಿದ್ದರೂ ನೀನು ಯಥಾಸಮಯದಲ್ಲಿ ಭವಬಂಧನದಿಂದ ಮುಕ್ತನಾಗಿ ಸುಖದಿಂದ ಭೂಮಿಯಲ್ಲಿ ಸಂಚರಿಸು. ಇಂದ್ರಿಯಗಳ ಮೂಲಕವಾಗಿ ವಿಷಯಸುಖಗಳನ್ನು ಶಾಸ್ತ್ರಮರ್ಯಾದೆಗೆ ಅನುಗುಣವಾಗಿ ಅನುಭವಿಸಿ ವಿಷಯಸುಖಗಳನ್ನು ಅನುಭವಿಸಬೇಕೆಂಬ ಕುತೂಹಲವನ್ನು ತೊರೆದು ಎಲ್ಲದರಿಂದಲೂ ಮುಕ್ತನಾಗಿ ಸುಖದಿಂದ ಸಂಚರಿಸು.

ಉಪಪತ್ತ್ಯೋಪಲಬ್ಧೇಷು ಲೋಕೇಷು ಚ ಸಮೋ ಭವ ॥೧೧॥

ದೈವೇಚ್ಛೆಯಿಂದ ಉಪಲಬ್ಧವಾದ ಪದಾರ್ಥಗಳ ವಿಷಯದಲ್ಲಿ ಮತ್ತು ಜನರ ವಿಷಯದಲ್ಲಿ ಸಮಭಾವವನ್ನಿಡು.

ಮೋಕ್ಷದ ವಿಷಯವಾಗಿ ನಿನಗೀಗ ಸಂಕ್ಷೇಪವಾಗಿ ಹೇಳಿಯಾಯಿತು. ಈಗ ನಾನು ಇದೇ ವಿಷಯವಾಗಿ ವಿಸ್ತಾರವಾಗಿ ಹೇಳುತ್ತೇನೆ. ಅದನ್ನೂ ಕೇಳು.

ಮುಕ್ತಾ ವೀತಭಯಾ ಲೋಕೇ ಚರನ್ತಿ ಸುಖಿನೋ ನರಾಃ ।
ಸಕ್ತಭಾವಾ ವಿನಶ್ಯನ್ತಿ ನರಾಸ್ತತ್ರ ನ ಸಂಶಯಃ ॥೧೨॥

ಆಹಾರಸಂಚಯಾಶ್ಚೈವ ತಥಾ ಕೀಟಪಿಪೀಲಿಕಾಃ ।
ಅಸಕ್ತಾಃ ಸುಖಿನೋ ಲೋಕೇ ಸಕ್ತಾಶ್ಚೈವ ವಿನಾಶಿನಃ ॥೧೩॥

ಭವಬಂಧನದಿಂದ ಮುಕ್ತರಾದ ಪುರುಷರು ಸುಖಿಗಳಾಗಿರುತ್ತಾರೆ ಮತ್ತು ಭಯರಹಿತರಾಗಿ ಪ್ರಪಂಚದಲ್ಲಿ ಸುತ್ತಾಡುತ್ತಾರೆ. ವಿಷಯಗಳಲ್ಲಿ ಆಸಕ್ತಿಯನ್ನು ಹೊಂದಿರುವವರು ಕ್ರಿಮಿಗಳಂತೆ ಮತ್ತು ಇರುವೆಗಳಂತೆ ಜೀವನಪರ್ಯಂತವಾಗಿ ಆಹಾರಸಂಗ್ರಹವನ್ನೇ ಮಾಡುತ್ತಾ ವಿನಾಶಹೊಂದುತ್ತಾರೆ. ಆದುದರಿಂದ ಅನಾಸಕ್ತರು ಸುಖಿಗಳು. ಆಸಕ್ತರು ದುಃಖಿಗಳು ಮತ್ತು ವಿನಾಶಹೊಂದತಕ್ಕವರು.

ಸ್ವಜನೇ ನ ಚ ತೇ ಚಿನ್ತಾ ಕರ್ತವ್ಯಾ ಮೋಕ್ಷಬುದ್ಧಿನಾ ।
ಇಮೇ ಮಯಾ ವಿನಾಭೂತಾ ಭವಿಷ್ಯನ್ತಿ ಕಥಂ ತ್ವಿತಿ ॥೧೫॥

ಮೋಕ್ಷವನ್ನು ಹೊಂದಬೇಕೆಂಬ ಬುದ್ಧಿಯಿರುವ ನೀನು–'ನಾನಿಲ್ಲದೇ ಇವರು ಹೇಗೆ ಜೀವಿಸುವರು?'–ಎಂದು ಸ್ವಜನರ ವಿಷಯದಲ್ಲಿ ಚಿಂತಿಸ ಬಾರದು.

ಸ್ವಯಮುತ್ಪದ್ಯತೇ ಜನ್ತುಃ ಸ್ವಯಮೇವ ವಿವರ್ಧತೇ ।
ಸುಖದುಃಖೇ ತಥಾ ಮೃತ್ಯುಂ ಸ್ವಯಮೇವಾಧಿಗಚ್ಛತಿ ॥೧೬॥

ಯಾರ ಜೀವಿಕೆಗೂ ಯಾರೂ ಕಾರಣರಲ್ಲ. ಯಾವುದೇ ಪ್ರಾಣಿ ಯಾದರೂ ತಾನಾಗಿಯೇ ಜನ್ಮತಾಳುತ್ತದೆ. ತಾನಾಗಿಯೇ ವೃದ್ಧಿಯನ್ನು ಹೊಂದುತ್ತದೆ. ಹಾಗೆಯೇ ಸುಖ-ದುಃಖಗಳನ್ನೂ, ಕಡೆಯಲ್ಲಿ ಮರಣವನ್ನೂ ತಾನಾಗಿಯೇ ಹೊಂದುತ್ತದೆ.

ಭೋಜನಾಚ್ಛಾದನೇ ಚೈವ ಮಾತ್ರಾ ಪಿತ್ರಾ ಚ ಸಂಗ್ರಹಮ್ ।
ಸ್ವಕೃತೇನಾಧಿಗಚ್ಛನ್ತಿ ಲೋಕೇ ನಾಸ್ತ್ಯಕೃತಂ ಪುರಾ ॥೧೭॥

ಮನುಷ್ಯನು ತನ್ನ ಪೂರ್ವಜನ್ಮದ ಕರ್ಮಾನುಸಾರವಾಗಿ ಊಟ-ಉಪ ಚಾರಗಳನ್ನೂ, ಉಡುಗೆ-ತೊಡುಗೆಗಳನ್ನೂ, ತಾಯಿ-ತಂದೆಗಳ ಮೂಲಕ ಸಂಗ್ರಹವಾಗಿರುವ ಐಶ್ವರ್ಯವನ್ನೂ ಪಡೆದುಕೊಳ್ಳುತ್ತಾನೆ. ಈ ಪ್ರಪಂಚದಲ್ಲಿ ಪ್ರತಿಯೊಂದು ವಸ್ತುವೂ ಒಬ್ಬನು ಪೂರ್ವಜನ್ಮದಲ್ಲಿ ಮಾಡಿದ ಕರ್ಮ ಫಲಾನುಗುಣವಾಗಿ ಸಿಕ್ಕುವುದೇ ಹೊರತು ಅದಕ್ಕೆ ವ್ಯತಿರಿಕ್ತವಾಗಿ ಯಾವ ಪದಾರ್ಥವೂ ಸಿಕ್ಕುವುದಿಲ್ಲ.

ಧಾತ್ರಾ ವಿಹಿತಭಕ್ಷ್ಯಾಣಿ ಸರ್ವಭೂತಾನಿ ಮೇದಿನೀಮ್ ।
ಲೋಕೇ ವಿಪರಿಧಾವನ್ತಿ ರಕ್ಷಿತಾನಿ ಸ್ವಕರ್ಮಭಿಃ ॥೧೮॥

ಎಲ್ಲ ಪ್ರಾಣಿಗಳೂ ತಾವು ಹಿಂದೆ ಮಾಡಿದ ಕರ್ಮಗಳ ಫಲದಿಂದಲೇ ಸುರಕ್ಷಿತವಾಗಿ ಪ್ರಪಂಚದಲ್ಲಿ ಸುತ್ತಾಡುತ್ತವೆ. ಪ್ರಾಣಿಗಳ ಪ್ರಾರಬ್ಧಕರ್ಮಾ ನುಸಾರವಾಗಿ ವಿಧಾತೃವು ಯಾವ ಕಾಲಕ್ಕೆ ಯಾವ ಆಹಾರವನ್ನು ಕಲ್ಪಿಸಿರು ವನೋ–ಅದನ್ನೇ ಆ ಪ್ರಾಣಿಯು ಹೊಂದುತ್ತದೆ.

ಸ್ವಯಂ ಮೃತ್ಪಿಣ್ಡಭೂತಸ್ಯ ಪರತನ್ತ್ರಸ್ಯ ಸರ್ವದಾ ।
ಕೋ ಹೇತುಃ ಸ್ವಜನಂ ಪೋಷ್ಟುಂ ರಕ್ಷಿತುಂ ವಾ ದೃಢಾತ್ಮನಃ ॥೧೯॥

ಪ್ರತಿಯೊಬ್ಬ ಮನುಷ್ಯನೂ ಶರೀರದ ದೃಷ್ಟಿಯಿಂದ ಮಣ್ಣಿನ ಮುದ್ದೆಯಂತಿದ್ದಾನೆ. ಸರ್ವದಾ ಪರತಂತ್ರನಾಗಿಯೇ ಇದ್ದಾನೆ. ಅದೃಢವಾದ (ಅಳುಕು) ಮನಸ್ಸನ್ನು ಹೊಂದಿದ್ದಾನೆ. ಅಂತಹವನು ತನ್ನ ಮಡದಿ- ಮಕ್ಕಳನ್ನು ಪೋಷಿಸಲು ಮತ್ತು ರಕ್ಷಿಸಲು ಯಾವ ಕಾರಣವಿದೆ? ಹೇಗೆ ಸಮರ್ಥನಾಗುತ್ತಾನೆ?

ಸ್ವಜನಂ ಹಿ ಯದಾ ಮೃತ್ಯುರ್ಹನ್ತ್ಯೇವ ತವ ಪಶ್ಯತಃ ।
ಕೃತೇಽಪಿ ಯತ್ನೇ ಮಹತಿ ತತ್ರ ಬೋದ್ಧವ್ಯಮಾತ್ಮನಾ ॥೨೦॥

ನೀನೇ ಪ್ರೀತಿಯಿಂದ ಪಾಲಿಸಿ-ಪೋಷಿಸುತ್ತಿರುವ ಸ್ವಜನರನ್ನು ನೀನು ನೋಡುತ್ತಿರುವಂತೆಯೇ ಮೃತ್ಯುವು ಅಪಹರಿಸಿಕೊಂಡು ಹೋಗುತ್ತದೆ. ನೀನೆಷ್ಟೇ ಪ್ರಯತ್ನಿಸಿದರೂ ನಿನ್ನ ಪ್ರೀತಿಯ ಬಂಧುವನ್ನು ಮೃತ್ಯುವಿನಿಂದ ಬಿಡಿಸಿಕೊಳ್ಳಲು ಸಾಧ್ಯವಾಗುವುದೇ ಇಲ್ಲ. ಇದನ್ನು ನೀನು ವಿಚಾರಮಾಡ ಬೇಕು. ನಿನ್ನ ಸಾಮರ್ಥ್ಯವು ಎಷ್ಟೆಂಬುದನ್ನೂ ಪರಿಗಣಿಸಬೇಕು.

ಜೀವನ್ತಮಪಿ ಚೈವೈನಂ ಭರಣೇ ರಕ್ಷಣೇ ತಥಾ ।
ಅಸಮಾಪ್ತೇ ಪರಿತ್ಯಜ್ಯ ಪಶ್ಚಾದಪಿ ಮರಿಷ್ಯಸಿ ॥೨೧॥

ಕೆಲವು ವೇಳೆ ನಿನ್ನ ಸ್ವಜನರು ಜೀವಂತವಾಗಿರುವಾಗಲೇ ನೀನು ಅವರ ಭರಣ-ಪೋಷಣೆಗಳನ್ನು ಇನ್ನೂ ಮಾಡಬೇಕಾಗಿರುವಾಗಲೇ (ಮಕ್ಕಳಿನ್ನೂ ಚಿಕ್ಕವರಿರುವಾಗಲೇ) ಅವರೆಲ್ಲರನ್ನೂ ಪರಿತ್ಯಜಿಸಿ ನೀನೇ ಸತ್ತುಹೋಗುವೆ. (ಅವರ ಭರಣ-ಪೋಷಣೆಗಳು ಮುಗಿಯುವವರೆಗೂ ಜೀವಿಸಿರಲು ಕೂಡ ನೀನು ಸ್ವತಂತ್ರನಲ್ಲ.)

ಯದಾ ಮೃತಂ ಚ ಸ್ವಜನಂ ನ ಜ್ಞಾಸ್ಯಸಿ ಕದಾಚನ ।
ಸುಖಿತಂ ದುಃಖಿತಂ ವಾಪಿ ನನು ಬೋದ್ಧವ್ಯಮಾತ್ಮನಾ ॥೨೨॥

ಒಂದು ಸಮಯದಲ್ಲಿ ನಿನಗೆ ಅತ್ಯಂತಪ್ರೀತಿಪಾತ್ರರಾದ ಸ್ವಜನವೇ

(ಮಗನೇ) ಮರಣಹೊಂದುತ್ತಾನೆ. ಅವನು ಸತ್ತನಂತರ ಅವನೇನು ಸುಖ ದಿಂದಿರುವನೇ? ದುಃಖದಿಂದಿರುವನೇ?–ಎಂಬುದನ್ನು ನೀನು ಯಾವಾ ಗಲೂ ತಿಳಿಯುವುದಿಲ್ಲ. ಹೀಗಿರುವಾಗ ಅವನಿಗೂ ನಿನಗೂ ಎಷ್ಟರಮಟ್ಟಿನ ಸಂಬಂಧವಿರುವುದೆಂಬುದನ್ನು ಮನಸ್ಸಿನಲ್ಲಿಯೇ ಚಿಂತಿಸಬೇಡವೇ?

ಮೃತೇ ವಾ ತ್ವಯಿ ಜೀವೇ ವಾ ಯದಾ ಭೋಕ್ಷ್ಯತಿ ವೈ ಜನಃ ।
ಸ್ವಕೃತಂ ನನು ಬುದ್ಧ್ವೈವಂ ಕರ್ತವ್ಯಂ ಹಿತಮಾತ್ಮನಃ ॥೨೩॥

ನೀನು ಮೃತನಾಗು ಅಥವಾ ಜೀವಂತವಾಗಿಯೇ ಇರು. ನಿನ್ನ ಸ್ವಜನರು ತಾವು ಮಾಡಿದ ಕರ್ಮಫಲವನ್ನು ಅನುಭವಿಸಿಯೇ ತೀರುತ್ತಾರೆ. ಅವರ ಭರಣ-ಪೋಷಣೆಗಳನ್ನು ನೀನೇ ಮಾಡಬೇಕೆನ್ನುವ ಅಭಿಮಾನವು ನಿನಗೆ ಬೇಡ. ನೀನು ಮೃತನಾದ ನಂತರವೂ ಅವರ ಭರಣ-ಪೋಷಣೆಗಳು ವಿಧಿವಿಹಿತವಾದ ರೀತಿಯಲ್ಲಿ ನಡೆದೇ ತೀರುತ್ತದೆ. ಆದುದರಿಂದ–'ಸ್ವಜನರ ಭರಣ-ಪೋಷಣೆಗಳನ್ನು ನಾನು ಮಾಡಿದೆನು'–ಎಂದು ಭಾವಿಸದೇ ಅವರ ಮೇಲಿನ ಆಸಕ್ತಿಯನ್ನು ತೊರೆದು ನಿನ್ನ ಹಿತಸಾಧನೆಯಲ್ಲಿ ತೊಡಗುವುದು ನಿನ್ನ ಕರ್ತವ್ಯವಾಗಿದೆ.

ಏವಂ ವಿಜಾನಲ್ಲೋಕೇಽಸ್ಮಿನ್ಕಃ ಕಸ್ಯೇತ್ಯಭಿನಿಶ್ಚಿತಃ ।
ಮೋಕ್ಷೇ ನಿವೇಶಯ ಮನೋ ಭೂಯಶ್ಚಾಪ್ಯುಪಧಾರಯ ॥೨೪॥

ಹೀಗೆ ವಿಷಯವನ್ನು ಚೆನ್ನಾಗಿ ಮಥಿಸಿ ತಿಳಿದುಕೊಂಡು ಈ ಲೋಕ ದಲ್ಲಿ 'ಯಾರು? ಯಾರವನು?' ಎಂಬ ಬಗೆಗೆ ನಿಶ್ಚಿತವಾದ ಜ್ಞಾನವನ್ನು ಪಡೆದುಕೊಳ್ಳಬೇಕು. 'ಯಾರು ಯಾರಿಗೂ ಸಂಬಂಧಿಸಿದವರಲ್ಲ. ಅವರವರ ಪ್ರಾರಬ್ಧಕರ್ಮಾನುಸಾರವಾಗಿ ಪ್ರಾಣಿಗಳು ಎಲ್ಲಿಯೋ ಹುಟ್ಟಿ ಎಲ್ಲಿಯೋ ಯಾವಾಗಲೋ ಸತ್ತುಹೋಗುತ್ತವೆ'–ಎಂಬುದನ್ನು ನಿಶ್ಚಯಿಸಿಕೊಂಡು ಮೋಕ್ಷಮಾರ್ಗದಲ್ಲಿಯೇ ಬುದ್ಧಿಯನ್ನಿಡು. ನಾನು ಹೇಳಿರುವ ಈ ಮಾತು ಗಳನ್ನೇ ಮನಸ್ಸಿನಲ್ಲಿ ಅನುಸಂಧಾನವನ್ನು ಮಾಡುತ್ತಲೇ ಇರು.

ಕ್ಷುತ್ಪಿಪಾಸಾದಯೋ ಭಾವಾ ಜಿತಾ ಯಸ್ಯೇಹ ದೇಹಿನಃ ।
ಕ್ರೋಧೋ ಲೋಭಸ್ತಥಾ ಮೋಹಃ ಸತ್ತ್ವವಾನ್ಮುಕ್ತ ಏವ ಸಃ ॥೨೫॥

ಯಾವನು–ಹಸಿವು, ಬಾಯಾರಿಕೆ, ಕ್ರೋಧ, ಲೋಭ, ಮೋಹ–ಇವೇ ಮೊದಲಾದ ಭಾವಗಳನ್ನು ಜಯಿಸಿರುವನೋ–ಅಂತಹ ಸತ್ತ್ವಸಂಪನ್ನನಾದ ಮನುಷ್ಯನು ಮುಕ್ತನಾದಂತೆಯೇ ಸರಿ.

ದ್ಯೂತೇ ಪಾನೇ ತಥಾ ಸ್ತ್ರೀಷು ಮೃಗಯಾಯಾಂ ಚ ಯೋ ನರಃ ।
ನ ಪ್ರಮಾದ್ಯತಿ ಸಮ್ಮೋಹಾತ್ಸತತಂ ಮುಕ್ತ ಏವ ಸಃ ॥೨೬॥

ಯಾವನು ಮೋಹವಶನಾಗಿ ಜೂಜು, ಮದ್ಯಪಾನ, ಪರಸ್ತ್ರೀಸಂಸರ್ಗ, ಬೇಟೆಯಾಡುವುದು–ಇತ್ಯಾದಿ ವ್ಯಸನಗಳಲ್ಲಿ ಆಸಕ್ತನಾಗಿ ಎಚ್ಚರತಪ್ಪುವುದಿಲ್ಲವೋ–ಅವನು ಮುಕ್ತನೇ ಸರಿ.

ದಿವಸೇ ದಿವಸೇ ನಾಮ ರಾತ್ರೌ ರಾತ್ರೌ ಪುಮಾನ್ಸದಾ ।
ಭೋಕ್ತವ್ಯಮಿತಿ ಯಃ ಖಿನ್ನೋ ದೋಷಬುದ್ಧಿಃ ಸ ಉಚ್ಯತೇ ॥೨೭॥

ಯಾವನು ದಿನಬೆಳಗಾದರೆ–ರಾತ್ರಿಯಾದರೆ (ಇಂತಹ ಭೋಜನವನ್ನು ಮಾಡಬೇಕು ; ಇಂತಹ ಸುಖವನ್ನು ಅನುಭವಿಸಬೇಕು. ಹೇಗೆ ಸಾಧ್ಯವಾಗುತ್ತದೆ? ಅದಕ್ಕಾಗಿ ನಾನೀಗ ಏನು ಮಾಡಲಿ?)–ಎಂದು ಖಿನ್ನನಾಗಿ ಯಾವಾಗಲೂ ಭೋಜನ ಮತ್ತು ವಿಷಯಸುಖಗಳಿಗಾಗಿಯೇ ಚಿಂತಿಸುತ್ತಿರುವನೋ–ಅಂತಹವನನ್ನು ದೋಷಬುದ್ಧಿಯವನೆಂದು ಹೇಳುತ್ತಾರೆ.

ಆತ್ಮಭಾವಂ ತಥಾ ಸ್ತ್ರೀಷು ಮುಕ್ತಮೇವ ಪುನಃ ಪುನಃ ।
ಯಃ ಪಶ್ಯತಿ ಸದಾ ಯುಕ್ತೋ ಯಥಾವನ್ಮುಕ್ತ ಏವ ಸಃ ॥೨೮॥

ಯಾವನು ಸದಾ ಯೋಗಯುಕ್ತನಾಗಿ ಸ್ತ್ರೀಯರಲ್ಲಿ ಆತ್ಮಭಾವವು ಇಲ್ಲದಿರುವುದನ್ನು (ತನ್ನವಳೆಂಬ ಭಾವನೆಯಿಲ್ಲದಿರುವುದನ್ನು) ಯಾವಾಗ ಕಾಣುತ್ತಾನೆಯೋ (ಸ್ತ್ರೀಯು ಭೋಗ್ಯವಸ್ತುವೆಂದು ಭಾವಿಸುವುದಿಲ್ಲವೋ)–ಆಗ ಅವನು ಯಥಾವತ್ತಾಗಿ ಮುಕ್ತನೇ ಸರಿ.

ಸಮ್ಭವಂ ಚ ವಿನಾಶಂ ಚ ಭೂತಾನಾಂ ಚೇಷ್ಟಿತಂ ತಥಾ ।
ಯಸ್ತತ್ತ್ವತೋ ವಿಜಾನಾತಿ ಲೋಕೇಽಸ್ಮಿನ್ಮುಕ್ತ ಏವ ಸಃ ॥೨೯॥

ಯಾವನು ಈ ಲೋಕದಲ್ಲಿ ಪ್ರಾಣಿಗಳ ಹುಟ್ಟು-ಸಾವುಗಳನ್ನೂ

ಅವುಗಳ ಕ್ಷಣಭಂಗುರವಾದ ಜೀವನವ್ಯಾಪಾರವನ್ನೂ ಯಥಾವತ್ತಾಗಿ ತಿಳಿದಿರುವನೋ–ಅವನು ಮುಕ್ತನೇ ಸರಿ.

ಪ್ರಸ್ಥಂ ವಾಹಸಹಸ್ರೇಷು ಯಾತ್ರಾರ್ಥಂ ಚೈವ ಕೋಟಿಷು ।
ಪ್ರಾಸಾದೇ ಮಞ್ಚಕಂ ಸ್ಥಾನಂ ಯಃ ಪಶ್ಯತಿ ಸ ಮುಚ್ಯತೇ ॥೩೦॥

ಯಾವನು ಸಾವಿರಾರು–ಕೋಟ್ಯನುಕೋಟಿ ಗಾಡಿಗಳಲ್ಲಿ ತುಂಬಿರುವ ಧಾನ್ಯದಲ್ಲಿ ಅಂದಿನ ಹೊಟ್ಟೆಹೊರೆಯಲು ಒಂದು ಸೇರು ಧಾನ್ಯವು ಸಾಕೆಂದು ಭಾವಿಸುವನೋ–ದೊಡ್ಡದಾದೊಂದು ಸೌಧದಲ್ಲಿ ಮಲಗಲು ಮಂಚದಷ್ಟು ಸ್ಥಾನವು ಸಾಕೆಂದು ಭಾವಿಸುವನೋ–ಅವನು ಮುಕ್ತನಾಗುತ್ತಾನೆ.

ಮೃತ್ಯುನಾಭ್ಯಾಹತಂ ಲೋಕಂ ವ್ಯಾಧಿಭಿಶ್ಚೋಪಪೀಡಿತಮ್ ।
ಅವೃತ್ತಿಕರ್ಶಿತಂ ಚೈವ ಯಃ ಪಶ್ಯತಿ ಸ ಮುಚ್ಯತೇ ॥೩೧॥

ಯಾವನು ಲೋಕವು ಮೃತ್ಯುವಿನಿಂದ ಅಪ್ಪಳಿಸಲ್ಪಟ್ಟಿದೆಯೆಂಬುದನ್ನೂ, ಆಧಿ-ವ್ಯಾಧಿಗಳಿಂದ ಪೀಡಿಸಲ್ಪಡುತ್ತಿದೆಯೆಂಬುದನ್ನೂ, ಜೀವಿಕೆಯ ಅಭಾವ ದಿಂದ ಕೃಶವಾಗಿ ಮಾಡಲ್ಪಟ್ಟಿದೆಯೆಂಬುದನ್ನೂ ಸ್ಪಷ್ಟವಾಗಿ ಕಾಣುವನೋ–ಅಂತಹವನು ಭವಬಂಧನದಿಂದ ಮುಕ್ತನಾಗುತ್ತಾನೆ.

ಯಃ ಪಶ್ಯತಿ ಸ ಸಂತುಷ್ಟೋ ನ ಪಶ್ಯಂಶ್ಚ ವಿಹನ್ಯತೇ ।
ಯಶ್ಚಾಪ್ಯಲ್ಪೇನ ಸಂತುಷ್ಟೋ ಲೋಕೇಽಸ್ಮಿನ್ಮುಕ್ತ ಏವ ಸಃ ॥೩೨॥

ತಾನು ಸಂತುಷ್ಟನಾಗಿರುವುದನ್ನು ಯಾವನು ಕಾಣುವನೋ-ಅವನೇ ಮುಕ್ತನು. (ಸದಾ ತುಷ್ಟನೇ ಮುಕ್ತನು.) ತಾನು ಸಂತುಷ್ಟನಾಗಿರುವುದನ್ನು ಯಾವನು ಕಾಣುವುದಿಲ್ಲವೋ (ಸದಾ ಅಸಂತುಷ್ಟನಾಗಿಯೇ ಇರುವನೋ)–ಅವನು ಹಾಳಾಗಿಹೋಗುತ್ತಾನೆ. ಈ ಲೋಕದಲ್ಲಿ ಯಾವನು ಅಲ್ಪತೃಪ್ತನೋ ಅವನು ಮುಕ್ತನೇ ಸರಿ.

ಅಗ್ನೀಷೋಮಾವಿದಂ ಸರ್ವಮಿತಿ ಯಶ್ಚಾನುಪಶ್ಯತಿ ।
ನ ಚ ಸಂಸ್ಪೃಶ್ಯತೇ ಭಾವೈರದ್ಭುತೈರ್ಮುಕ್ತ ಏವ ಸಃ ॥೩೩॥

ಯಾವನು ಈ ಸಂಪೂರ್ಣಜಗತ್ತನ್ನೂ ಅಗ್ನಿ (ಜಠರಾಗ್ನಿ-ಭೋಕ್ತಾ)

ಸೋಮ (ಅನ್ನ-ಭೋಜ್ಯ)–ಈ ಇಬ್ಬರ ಸ್ವರೂಪವೆಂದು ಭಾವಿಸುವನೋ–ಅವನು ಮಾಯೆಯ ಅದ್ಭುತಭಾವಗಳಿಂದ (ಸುಖ-ದುಃಖಗಳಿಂದ) ಸ್ಪರ್ಶಿಸಲ್ಪಡುವುದಿಲ್ಲ. (ಅಂತಹವನನ್ನು ಮಾಯೆಯು ಆವರಿಸುವುದಿಲ್ಲ.) ಅವನು ಮುಕ್ತನೇ ಸರಿ.

ಪರ್ಯಙ್ಕಶಯ್ಯಾ ಭೂಮಿಶ್ಚ ಸಮಾನೇ ಯಸ್ಯ ದೇಹಿನಃ ।
ಶಾಲಯಶ್ಚ ಕದನ್ನಂ ಚ ಯಸ್ಯ ಸ್ಯಾನ್ಮುಕ್ತ ಏವ ಸಃ ॥೩೪॥

ಯಾವ ಮನುಷ್ಯನಿಗೆ ಹಂಸತೂಲಿಕಾತಲ್ಪವೂ ಮತ್ತು ಭೂಮಿಯೂ ಸಮಾನವೋ, ಶಾಲ್ಯನ್ನವೂ, ಕೆಟ್ಟುಹೋದ ಅನ್ನವೂ ಸಮಾನವೋ–ಅವನೇ ಮುಕ್ತನು.

ಕ್ಷೌಮಂ ಚ ಕುಶಚೀರಂ ಚ ಕೌಶೇಯಂ ವಲ್ಕಲಾನಿ ಚ ।
ಆವಿಕಂ ಚರ್ಮ ಚ ಸಮಂ ಯಸ್ಯ ಸ್ಯಾನ್ಮುಕ್ತ ಏವ ಸಃ ॥೩೫॥

ಯಾವನಿಗೆ ಸುವರ್ಣದ ಜರಿಯಿಂದ ಕೂಡಿರುವ ಪಟ್ಟೆವಸ್ತ್ರವೂ–ದರ್ಭೆಯ ಬಟ್ಟೆಯೂ ಸಮಾನವೋ, ರೇಷ್ಮೆಯ ವಸ್ತ್ರವೂ–ನಾರುಮಡಿಯೂ ಸಮಾನವೋ, ಉಣ್ಣೆಬಟ್ಟೆಯೂ–ಮೃಗಚರ್ಮವೂ ಸಮಾನವೋ ಅವನು ಮುಕ್ತನೇ ಸರಿ.

ಪಞ್ಚಭೂತಸಮುದ್ಭೂತಂ ಲೋಕಂ ಯಶ್ಚಾನುಪಶ್ಯತಿ ।
ತಥಾ ಚ ವರ್ತತೇ ದೃಷ್ಟ್ವಾ ಲೋಕೇಽಸ್ಮಿನ್ಮುಕ್ತ ಏವ ಸಃ ॥೩೬॥

ಯಾವನು ಲೋಕವನ್ನು ಪಂಚಭೂತಗಳಿಂದ ಹುಟ್ಟಿದುದನ್ನಾಗಿ ಭಾವಿಸುವನೋ – (ಪಂಚಭೂತಗಳಿಂದ ಎಲ್ಲ ಪ್ರಾಣಿಗಳೂ ಹುಟ್ಟಿರುವ ಕಾರಣ) ಎಲ್ಲ ಪ್ರಾಣಿಗಳನ್ನೂ ಸಮವಾಗಿ ಕಾಣುವನೋ – ಅವನು ಮುಕ್ತನೇ ಸರಿ.

ಸುಖದುಃಖೇ ಸಮೇ ಯಸ್ಯ ಲಾಭಾಲಾಭೌ ಜಯಾಜಯೌ ।
ಇಚ್ಛಾದ್ವೇಷೌ ಭಯೋದ್ವೇಗೌ ಸರ್ವಥಾ ಮುಕ್ತ ಏವ ಸಃ ॥೩೭॥

ಯಾವನಿಗೆ ಸುಖ-ದುಃಖಗಳೂ, ಲಾಭಾಲಾಭಗಳೂ, ಜಯ-ಪರಾಜಯಗಳೂ ಸಮಾನವೋ–ಯಾವನ ಇಚ್ಛೆ-ದ್ವೇಷ-ಭಯ-ಉದ್ವೇಗಗಳು ನಷ್ಟವಾಗಿ ಹೋಗಿವೆಯೋ–ಅವನು ಮುಕ್ತನೇ ಸರಿ.

ರಕ್ತಮೂತ್ರಪುರೀಷಾಣಾಂ ದೋಷಾಣಾಂ ಸಂಚಯಾಂಸ್ತಥಾ ।
ಶರೀರಂ ದೋಷಬಹುಲಂ ದೃಷ್ಟ್ವಾ ಚೈವ ವಿಮುಚ್ಯತೇ ॥೩೮॥

ಶರೀರವು ರಕ್ತ-ಮೂತ್ರ-ಪುರೀಷಗಳ ಆವಾಸಸ್ಥಾನವಾಗಿರುವುದನ್ನೂ, ವಾತ-ಪಿತ್ತ-ಕಫಗಳೆಂಬ ದೋಷಗಳಿಂದ ಕೂಡಿರುವುದನ್ನೂ, ಶರೀರದಲ್ಲಿನ ಇನ್ನೂ ಅನೇಕವಾದ ದೋಷಗಳನ್ನೂ ಯಾವನು ಮನಗಾಣುವನೋ– ಅವನು ಮುಕ್ತನಾಗುತ್ತಾನೆ.

ವಲೀಪಲಿತಸಂಯೋಗೇ ಕಾರ್ಶ್ಯಂ ವೈವರ್ಣ್ಯಮೇವ ಚ ।
ಕುಬ್ಜಭಾವಂ ಚ ಜರಯಾ ಯಃ ಪಶ್ಯತಿ ಸ ಮುಚ್ಯತೇ ॥೩೯॥

ಶರೀರಕ್ಕೆ ಮುಪ್ಪು ಆವಿರ್ಭವಿಸಿದೊಡನೆಯೇ ಚರ್ಮವು ಸುಕ್ಕಿ ಹೋಗುತ್ತದೆ. ತಲೆಗೂದಲು ನರೆಯುತ್ತದೆ. ದೇಹವು ಕೃಶವಾಗುತ್ತದೆ ಮತ್ತು ಕಾಂತಿಹೀನವಾಗುತ್ತದೆ. ಸೊಂಟವು ಬಗ್ಗಿ ಗೂನು ಉಂಟಾಗುತ್ತದೆ. ಅತ್ಯಂತಪ್ರಿಯವಾದ ತನ್ನ ಶರೀರಕ್ಕೆ ಇಂತಹ ಮುಪ್ಪು ಬರುವುದೆಂಬುದನ್ನು ಯಾವನು ಮನಗಾಣುವನೋ–ಅವನು ದೇಹಾಭಿಮಾನವನ್ನು ತೊರೆದು ಭವಬಂಧನದಿಂದ ಮುಕ್ತನಾಗುತ್ತಾನೆ.

ಪುಂಸ್ತ್ವೋಪಘಾತಂ ಕಾಲೇನ ದರ್ಶನೋಪರಮಂ ತಥಾ ।
ಬಾಧಿರ್ಯಂ ಪ್ರಾಣಮನ್ದತ್ವಂ ಯಃ ಪಶ್ಯತಿ ಸ ಮುಚ್ಯತೇ ॥೪೦॥

ವೃದ್ಧಾಪ್ಯವು ಸಮೀಪಿಸಿದಂತೆ ಪುರುಷತ್ವವೇ ಹೊರಟುಹೋಗುತ್ತದೆ. ದೃಷ್ಟಿಯು ಮಂದವಾಗುತ್ತದೆ. ಕಿವಿಯು ಕೇಳಿಸುವುದಿಲ್ಲ. ಪ್ರಾಣಶಕ್ತಿಯು ಕ್ಷೀಣಿಸುತ್ತದೆ. ಈ ಎಲ್ಲವನ್ನೂ ಯಾವನು ಮುಂದಾಗಿಯೇ ಮನಗಂಡು ಜೀವನವು ನಶ್ವರವೆಂದು ಭಾವಿಸುವನೋ–ಅವನು ಸಂಸಾರಬಂಧನದಿಂದ ಮುಕ್ತನಾಗುತ್ತಾನೆ.

ಗತಾನೃಷೀಂಸ್ತಥಾ ದೇವಾನಸುರಾಂಶ್ಚ ತಥಾ ಗತಾನ್ ।
ಲೋಕಾದಸ್ಮಾತ್ಪರಂ ಲೋಕಂ ಯಃ ಪಶ್ಯತಿ ಸ ಮುಚ್ಯತೇ ॥೪೧॥

ಎಷ್ಟೋ ಮಂದಿ ಋಷಿಗಳೂ, ದೇವತೆಗಳೂ, ಅಸುರರೂ–ಈ ಲೋಕ ದಿಂದ ಪರಲೋಕಕ್ಕೆ ಹೊರಟುಹೋದರು. ಇಲ್ಲಿ ಯಾರೂ ಶಾಶ್ವತವಾಗಿ

ಇರುವುದಿಲ್ಲ. ಹುಟ್ಟಿದವನಿಗೆ ಮರಣವೆಂಬುದು ಜೊತೆಯಲ್ಲಿಯೇ ಇರುತ್ತದೆ–ಎಂಬ ಈ ವಿಷಯವನ್ನು ಯಾವನು ಸೂಕ್ಷ್ಮಬುದ್ಧಿಯಿಂದ ಕಂಡುಕೊಳ್ಳುವನೋ–ಅವನು ಮುಕ್ತನಾಗುತ್ತಾನೆ.

ಪ್ರಭಾವೈರನ್ವಿತಾಸ್ತೈಸ್ತೈಃ ಪಾರ್ಥಿವೇನ್ದ್ರಾಃ ಸಹಸ್ರಶಃ ।
ಯೇ ಗತಾಃ ಪೃಥಿವೀಂ ತ್ಯಕ್ತ್ವಾ ಇತಿ ಜ್ಞಾತ್ವಾ ವಿಮುಚ್ಯತೇ ॥೪೨॥

ಅಂತಂತಹ ಪ್ರಭಾವಗಳಿಂದ ಯುಕ್ತರಾಗಿದ್ದ ಸಾವಿರಾರು ರಾಜ ಶ್ರೇಷ್ಠರೇ ಕಾಲವು ಸನ್ನಿಹಿತವಾದೊಡನೆಯೇ ಈ ಪ್ರಪಂಚವನ್ನು ಪರಿತ್ಯಜಿಸಿ ಹೊರಟುಹೋದರು. ಎಂತಹುದೇ ಪ್ರಭಾವ-ಪರಾಕ್ರಮಗಳಿಂದಲೂ ಅವ ರಿಲ್ಲಿ ಚಿರಕಾಲ ಇರಲು ಸಾಧ್ಯವಾಗಲೇ ಇಲ್ಲ. ಆದುದರಿಂದ ಈ ಜೀವನವು ನಶ್ವರವಾದುದು ಮತ್ತು ನಿರರ್ಥಕವಾದುದು–ಎಂಬುದನ್ನು ಯಾವನು ನಿದರ್ಶನಗಳಿಂದ ತಿಳಿದುಕೊಳ್ಳುವನೋ–ಅವನು ಭವಬಂಧನದಿಂದ ಮುಕ್ತನಾಗುತ್ತಾನೆ.

ಅರ್ಥಾಂಶ್ಚ ದುರ್ಲಭಾಂಲ್ಲೋಕೇ ಕ್ಲೇಶಾಂಶ್ಚ ಸುಲಭಾಂಸ್ತಥಾ ।
ದುಃಖಂ ಚೈವ ಕುಟುಮ್ಬಾರ್ಥೇ ಯಃ ಪಶ್ಯತಿ ಸ ಮುಚ್ಯತೇ ॥೪೩॥

ಪ್ರಪಂಚದಲ್ಲಿ ಅರ್ಥಪ್ರಾಪ್ತಿಯು ದುರ್ಲಭವಾದುದು. (ಹಣವು ಬಡಪೆಟ್ಟಿಗೆ ಸಿಕ್ಕುವುದಿಲ್ಲ.) ಕ್ಲೇಶಪ್ರಾಪ್ತಿಯು ಸುಲಭವಾದುದು. ಪ್ರತಿಕ್ಷಣ ದಲ್ಲಿಯೂ ಯಾವುದಾದರೂ ಕ್ಲೇಶಗಳು ಮನುಷ್ಯನನ್ನು ಪೀಡಿಸುತ್ತಲೇ ಇರುತ್ತವೆ. ಕುಟುಂಬದ ಭರಣ-ಪೋಷಣಗಳಿಗೂ ಹೆಚ್ಚು ದುಃಖವೇ ಆಗು ತ್ತದೆ. ಒಟ್ಟಿನಲ್ಲಿ ಜೀವನವೇ ದುಃಖಮಯ–ಎಂಬುದನ್ನು ಯಾವನು ಕಂಡು ಕೊಳ್ಳುವನೋ–ಅವನು ಮುಕ್ತನಾಗುತ್ತಾನೆ.

ಅಪತ್ಯಾನಾಂ ಚ ವೈಗುಣ್ಯಂ ಜನಂ ವಿಗುಣಮೇವ ಚ ।
ಪಶ್ಯನ್ಭೂಯಿಷ್ಠಶೋ ಲೋಕೇ ಕೋ ಮೋಕ್ಷಂ ನಾಭಿಪೂಜಯೇತ್ ॥

ಮಕ್ಕಳಲ್ಲಿ ಗುಣಹೀನತೆ, ಸಂಬಂಧಪಟ್ಟ ಜನರಲ್ಲಿ ವಿಪರೀತವಾದ ದುರ್ಗುಣಗಳು – ಇವನ್ನು ಲೋಕದಲ್ಲಿ ಹೆಚ್ಚು ಹೆಚ್ಚು ನೋಡುತ್ತಿದ್ದರೆ ಯಾವನು ತಾನೇ ಮೋಕ್ಷವನ್ನು ಆದರಿಸುವುದಿಲ್ಲ?

ಶಾಸ್ತ್ರಾಲ್ಲೋಕಾಚ್ಚ ಯೋ ಬುದ್ಧಃ ಸರ್ವಂ ಪಶ್ಯತಿ ಮಾನವಃ ।
ಅಸಾರಮಿವ ಮಾನುಷ್ಯಂ ಸರ್ವಥಾ ಮುಕ್ತ ಏವ ಸಃ ॥೪೫॥

ಯಾವ ಮನುಷ್ಯನು ಶಾಸ್ತ್ರಗಳ ಅಧ್ಯಯನದಿಂದಲೂ–ಲೌಕಿಕವಾದ ಅನುಭವಗಳಿಂದಲೂ ಜ್ಞಾನಸಂಪನ್ನನಾಗಿ ಮನುಷ್ಯತ್ವವನ್ನೇ ನಿಸ್ಸಾರವೆಂಬುದನ್ನು ಕಂಡುಕೊಳ್ಳುವನೋ–ಅವನು ಸರ್ವಥಾ ಮುಕ್ತನಾದಂತೆಯೇ ಸರಿ.

ಏತಚ್ಛ್ರುತ್ವಾ ಮಮ ವಚೋ ಭವಾಂಶ್ಚರತು ಮುಕ್ತವತ್ ।
ಗಾರ್ಹಸ್ಥ್ಯೇ ಯದಿ ವಾ ಮೋಕ್ಷೇ ಕೃತಾ ಬುದ್ಧಿರವಿಕ್ಲವಾ ॥೪೬॥

ಸಗರ! ನನ್ನ ಈ ಮಾತನ್ನು ಕೇಳಿದನಂತರ ನೀನು ನಿನ್ನ ಬುದ್ಧಿಯನ್ನು ವ್ಯಾಕುಲತೆಯಿಂದ ದೂರೀಕರಿಸಿ ಗೃಹಸ್ಥಾಶ್ರಮದಲ್ಲಾಗಲೀ ಸಂನ್ಯಾಸಾಶ್ರಮದಲ್ಲಾಗಲೀ–ಇದ್ದುಕೊಂಡು ಮುಕ್ತನಂತೆ ವ್ಯವಹರಿಸು."

ಸಗರಚಕ್ರವರ್ತಿಯು ಅರಿಷ್ಟನೇಮಿಯ ಉಪದೇಶವನ್ನು ಶ್ರದ್ಧೆಯಿಂದ ಕೇಳಿ ಮೋಕ್ಷೋಪಯೋಗಿಗಳಾದ ಗುಣಗಳಿಂದ ಸಂಪನ್ನನಾಗಿ ಪ್ರಜೆಗಳನ್ನು ಪರಿಪಾಲಿಸುತ್ತಿದ್ದನು."

೨೮೮ನೆಯ ಅಧ್ಯಾಯವು ಮುಗಿಯಿತು.

೨೮೯ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಭೃಗುವಿನ ಮಗನಾದ ಉಶನಸನ ಚರಿತ್ರೆ: ಉಶನಸನಿಗೆ ಶುಕ್ರನೆಂಬ ಹೆಸರು ಪ್ರಾಪ್ತವಾದುದು

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

"ಕುರುಪಿತಾಮಹ! ನನ್ನ ಮನಸ್ಸಿನಲ್ಲಿ ಬಹಳ ಕಾಲದಿಂದಲೂ ಕೌತೂಹಲಪೂರ್ಣವಾದ ಒಂದು ಪ್ರಶ್ನೆಯು ಉಳಿದುಕೊಂಡಿದೆ. ಅದಕ್ಕೆ ನಿನ್ನಿಂದ ಸಮಾಧಾನವನ್ನು ತಿಳಿದುಕೊಳ್ಳಬೇಕೆಂದಿರುತ್ತೇನೆ. ಮಹಾಮತಿಯಾದ, ಕವಿತ್ವಸಂಪನ್ನನಾದ, ದೇವರ್ಷಿಯಾದ ಉಶನಸನು ಯಾವಾಗಲೂ ಅಸುರರಿಗೆ ಪ್ರಿಯನೂ–ಸುರರಿಗೆ ಅಪ್ರಿಯನೂ ಹೇಗಾದನು?

ದಾನವರು ಸುರಶ್ರೇಷ್ಠರೊಡನೆ ವೈರವನ್ನು ಕಟ್ಟಿಕೊಂಡಿದ್ದರು.

ದೇವಾಸುರರು ನಿತ್ಯವೈರಿಗಳಾಗಿದ್ದರು. ಹೀಗಿದ್ದರೂ ದೇವತೆಗಳಿಗೆ ತೊಂದರೆಯಾಗುವ ರೀತಿಯಲ್ಲಿ ಉಶನಸನು ಮಹಾತೇಜಸ್ವಿಗಳಾದ ಅಸುರರ ಬಲವನ್ನು ಯಾವ ಕಾರಣದಿಂದ ಮತ್ತಷ್ಟು ಹೆಚ್ಚಿಸುತ್ತಿದ್ದನು? ದೇವತೆಗಳಂತೆಯೇ ಕಾಂತಿಯುಕ್ತನಾಗಿದ್ದ ಉಶನಸನು ಶುಕ್ರನೆಂಬ ಹೆಸರನ್ನು ಹೇಗೆ ಪಡೆದುಕೊಂಡನು? ಮಹೈಶ್ವರ್ಯವನ್ನು ಕೂಡ ಅವನು ಹೇಗೆ ಹೊಂದಿದನು? ಈ ಎಲ್ಲವನ್ನೂ ನನಗೆ ವಿಸ್ತಾರವಾಗಿ ಹೇಳು. ಭೀಷ್ಮಪಿತಾಮಹನೇ! ಯದ್ಯಪಿ ಉಶನಸನು ಮಹಾತೇಜಸ್ವಿಯೇ ಆಗಿದ್ದರೂ ಅವನೇಕೆ ಆಕಾಶದ ಮಧ್ಯಭಾಗದಲ್ಲಿ ಪ್ರಯಾಣಮಾಡುವುದಿಲ್ಲ? ಉಶನಸನ ಚರಿತ್ರೆಯನ್ನು ನಾನು ಆಮೂಲಾಗ್ರವಾಗಿ ಕೇಳಬೇಕೆಂದಿರುತ್ತೇನೆ."

ಭೀಷ್ಮನು ಹೇಳುತ್ತಾನೆ :

"ನಿಷ್ಪಾಪನೇ! ಮಹಾರಾಜ! ನಾನು ಈ ಹಿಂದೆ ಇದೇ ಉಶನಸನ ವಿಷಯವಾಗಿ ಕೇಳಿ ನನ್ನ ಬುದ್ಧಿಗೆ ಅನುಗುಣವಾಗಿ ಗ್ರಹಿಸಿಕೊಂಡಿದ್ದೇನೆ. ನೀನು ಕೇಳಿದ ಅವನ ಸಂಬಂಧವಾದ ಎಲ್ಲ ವಿಷಯಗಳನ್ನೂ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು :

ಭೃಗುವಿನ ಮಗನಾದ, ಮುನಿಶ್ರೇಷ್ಠನಾದ, ಸರ್ವಮಾನ್ಯನಾದ, ದೃಢವ್ರತನಾದ ಉಶನಸನು *ಒಂದು ವಿಶೇಷಕಾರಣದಿಂದಾಗಿ ದೇವತೆಗಳಿಗೆ ವಿರೋಧಿಯಾದನು.

ಆ ಸಮಯದಲ್ಲಿ ಇಂದ್ರನು ಮೂರು ಲೋಕಗಳಿಗೂ ಅಧಿಪತಿಯಾಗಿದ್ದನು. ಯಕ್ಷರಿಗೂ ಮತ್ತು ರಾಕ್ಷಸರಿಗೂ ಅಧಿಪತಿಯಾದ, ಪ್ರಭಾವಶಾಲಿಯಾದ, ಜಗತ್ಪತಿಯಾದ ಕುಬೇರನು ಇಂದ್ರನ ಕೋಶಾಧ್ಯಕ್ಷನಾಗಿದ್ದನು.

---

* ವಿಶೇಷಕಾರಣದ ನಿರೂಪಣೆ ಹೀಗಿದೆ : ಹಿಂದೊಂದು ಸಮಯದಲ್ಲಿ ಅಸುರರು ದೇವತೆಗಳಿಗೆ ಕಿರುಕುಳವನ್ನು ಕೊಟ್ಟು ಭೃಗುಪತ್ನಿಯ ಆಶ್ರಮಕ್ಕೆ ಬಂದು ಅಲ್ಲಿ ಅಡಗಿಕೊಂಡರು. ಅಸುರರು ಭೃಗುಪತ್ನಿಯನ್ನು ತಾಯಿಯೆಂದು ಭಾವಿಸಿ ಅವಳಿಗೆ ಶರಣಾಗತರಾದರು. ಭೃಗುಪತ್ನಿಯೂ ಅವರನ್ನು ಮಕ್ಕಳೆಂದೇ ಭಾವಿಸಿ ಅಭಯಪ್ರದಾನಮಾಡಿದಳು. ದೇವತೆಗಳು ಅಸುರರನ್ನು ಶಿಕ್ಷಿಸಲು ಬೆನ್ನಟ್ಟಿಬಂದಾಗ ಭೃಗುಪತ್ನಿಯ ಪ್ರಭಾವದಿಂದಾಗಿ ದೇವತೆಗಳು ಆಶ್ರಮದೊಳಕ್ಕೆ ಪ್ರವೇಶಿಸಲು ಸಾಧ್ಯವಾಗಲಿಲ್ಲ. ಆಗ ದೇವತೆಗಳೆಲ್ಲರೂ ವಿಷ್ಣುವನ್ನು ಶರಣುಹೊಂದಿದರು. ತ್ರಿಭುವನ

ಯೋಗಸಿದ್ಧನಾದ, ಮಹಾಮುನಿಯಾದ ಉಶನಸನು ಯೋಗಬಲದಿಂದ ಕುಬೇರನಲ್ಲಿ ಪ್ರವೇಶಿಸಿ ಧನಪತಿಯನ್ನು ತಡೆದು (ಅವನ ಶಕ್ತಿಯು ನಡೆಯದಂತೆ ಮಾಡಿ) ಅವನಲ್ಲಿದ್ದ ಐಶ್ವರ್ಯವೆಲ್ಲವನ್ನೂ ಅಪಹರಣ ಮಾಡಿಬಿಟ್ಟನು. ಉಶನಸನು ಐಶ್ವರ್ಯವನ್ನು ಅಪಹರಿಸಿದನಂತರ ಕುಬೇರ ನಿಗೆ ಸುಖವೆಂಬುದೇ ಇಲ್ಲವಾಯಿತು. ಕುಪಿತನೂ ಮತ್ತು ಉದ್ವಿಗ್ನನೂ ಆದ ಧನಪತಿಯು ದೇವದೇವನಾದ ಮಹಾದೇವನ ಬಳಿಗೆ ಹೋದನು. ಕುಬೇರನು ಮಹಾತೇಜಸ್ವಿಯಾದ, ದೇವಶ್ರೇಷ್ಠನಾದ, ಸೌಮ್ಯನಾದ, ಬಹು ರೂಪಿಯಾದ, ಮಂಗಳಸ್ವರೂಪನಾದ ರುದ್ರನಿಗೆ ತನ್ನ ಕಷ್ಟವನ್ನು ಹೇಳಿ ಕೊಂಡನು :

ಯೋಗಾತ್ಮಕೇನೋಶನಸಾ ರುದ್ಧ್ವಾ ಮಮ ಹೃತಂ ವಸು ।
ಯೋಗೇನಾತ್ಮಗತಂ ಕೃತ್ವಾ ನಿಃಸೃತಶ್ಚ ಮಹಾತಪಾಃ ॥೧೨॥

"ಪ್ರಭುವೇ! ಯೋಗಬಲದಿಂದ ಕೂಡಿರುವ ಉಶನಸನು ತನ್ನ ಶಕ್ತಿ ಯಿಂದ ನನ್ನನ್ನು ತಡೆದು ನನ್ನಲ್ಲಿದ್ದ ಐಶ್ವರ್ಯವೆಲ್ಲವನ್ನೂ ಅಪಹರಿಸಿಬಿಟ್ಟನು. ಮಹಾತಪಸ್ವಿಯಾದ ಅವನು ಯೋಗಬಲದಿಂದ ನನ್ನನ್ನು ತನ್ನ ಅಧೀನನನ್ನಾಗಿ ಮಾಡಿಕೊಂಡು ಐಶ್ವರ್ಯವನ್ನು ತನ್ನದನ್ನಾಗಿ ಮಾಡಿಕೊಂಡು ನನ್ನನ್ನು ಬಿಟ್ಟು ಹೊರಟುಹೋದನು."

ಮಿತ್ರನಾದ ಕುಬೇರನು ಹೇಳಿದ ಈ ಮಾತನ್ನು ಕೇಳಿದೊಡನೆಯೇ ಮಹಾಯೋಗಿಯಾದ, ಮಹೇಶ್ವರನು ಅತ್ಯಂತಕ್ರುದ್ಧನಾಗಿ ಕೆಂಗಣ್ಣನಾಗಿ ತ್ರಿಶೂಲವನ್ನು ಹಿಡಿದು ನಿಂತನು. ಶ್ರೇಷ್ಠವಾದ ತ್ರಿಶೂಲವನ್ನು ಹಿಡಿದು ರಭಸದಿಂದ ಮೇಲೆದ್ದು ನಿಂತ ತ್ರಿಶೂಲಿಯು – 'ಅವನೆಲ್ಲಿ? ಆ ಉಶನಸ

ಪಾಲಕನಾದ ಮಹಾವಿಷ್ಣುವು ದೇವತೆಗಳನ್ನೂ – ದೈವೀಸಂಪತ್ತನ್ನೂ ರಕ್ಷಿಸುವ ಸಲುವಾಗಿ ಚಕ್ರದಿಂದ ಅಸುರರನ್ನೂ ಮತ್ತು ಅಸುರರಿಗೆ ಪ್ರೋತ್ಸಾಹವನ್ನೀಯುತ್ತಿದ್ದ ಭೃಗುಪತ್ನಿಯ ಶಿರಸ್ಸನ್ನೂ ಕತ್ತರಿಸಿಬಿಟ್ಟನು. ಆ ಸಮಯದಲ್ಲಿ ಅಳಿದುಳಿದಿದ್ದ ಅಸುರರು ಭೃಗುವಿನ ಮಗನಾದ ಉಶನಸನನ್ನು ಮೊರೆಹೊಕ್ಕರು. ತಾಯಿಯ ವಧೆಯಿಂದ ಖಿನ್ನನಾಗಿದ್ದ ಉಶನಸನು ದೈತ್ಯರಿಗೆ ಅಭಯಪ್ರದಾನವನ್ನು ಮಾಡಿದನು. ಅಂದಿನಿಂದಲೂ ಉಶನಸನು ದೇವತೆಗಳೊಡನೆ ವಿರೋಧವನ್ನೇ ಬೆಳೆಸಿಕೊಂಡು ಬರುತ್ತಿದ್ದಾನೆ.

ನೆಲ್ಲಿ?'–ಎಂದು ಗರ್ಜಿಸಿದನು. ಮಹಾದೇವನು ಏನು ಮಾಡಲು ಇಚ್ಛಿಸಿದ್ದಾನೆಂಬುದನ್ನು ಯೋಗದೃಷ್ಟಿಯಿಂದ ತಿಳಿದ ಉಶನಸನು ಅವನಿಂದ ಬಹಳ ದೂರದಲ್ಲಿಯೇ ನಿಂತನು. ಮಹಾಯೋಗಿಯಾದ ಮಹಾತ್ಮನಾದ ಪರಶಿವನ ರೋಷದ ಪರಿಣಾಮವನ್ನು ತಿಳಿದು ಉಶನಸನು ದೂರಕ್ಕೆ ಹೊರಟುಹೋದನು. ಯೋಗಸಿದ್ಧನಾಗಿದ್ದ ಉಶನಸನು ಯೋಗದ ಮೂಲಕವಾಗಿ ಹೋಗುವುದನ್ನೂ, ಬರುವುದನ್ನೂ, ಒಂದು ನಿರ್ದಿಷ್ಟವಾದ ಸ್ಥಾನದಲ್ಲಿ ನಿಲ್ಲುವುದನ್ನೂ ತಿಳಿದುಕೊಂಡಿದ್ದನು. ಯೋಗಸಿದ್ಧಾತ್ಮನಾದ ಭಾರ್ಗವನು ತನ್ನ ಉಗ್ರವಾದ ತಪಸ್ಸಿನ ಮೂಲಕವಾಗಿ ಮಹಾತ್ಮನಾದ ಮಹೇಶ್ವರನನ್ನು ಧ್ಯಾನಮಾಡಿ ಶಿವನು ಹಿಡಿದಿದ್ದ ತ್ರಿಶೂಲದ ಅಗ್ರಭಾಗದಲ್ಲಿ ಕಾಣಿಸಿಕೊಂಡನು. ಧನುಸ್ಸನ್ನು ಹಿಡಿದಿದ್ದ ಪರಮೇಶ್ವರನು ತಪಸ್ಸಿದ್ಧನಾದ ಉಶನಸನನ್ನು ಗುರುತಿಸಿದನು. ಅವನು ತನ್ನ ಶೂಲದ ಮೇಲೆಯೇ ಇರುವನೆಂಬುದನ್ನು ತಿಳಿದು ದೇವೇಶನು ಧನುಸ್ಸಿದ್ದ ಕೈಯಿಂದ ಶೂಲವನ್ನು ಬಗ್ಗಿಸಿದನು.

ಆನತೇನಾಥ ಶೂಲೇನ ಪಾಣಿನಾಮಿತತೇಜಸಾ ।
ಪಿನಾಕಮಿತಿ ಚೋವಾಚ ಶೂಲಮುಗ್ರಾಯುಧಃ ಪ್ರಭುಃ ॥೧೮॥

ಅತ್ಯಂತಬಲಿಷ್ಠವಾಗಿದ್ದ ಶೂಲವು ಶಿವನ ಕೈಯಿಂದ ಬಗ್ಗಿಸಲ್ಪಟ್ಟು ಧನುಸ್ಸಿನ ರೂಪವನ್ನು ಹೊಂದಿತು. ಆಗ ಉಗ್ರಾಯುಧನಾದ ಪ್ರಭುವಾದ ಶಿವನು ಶೂಲವು ಧನುಸ್ಸಿನಂತೆ ಬಗ್ಗಿದ ಕಾರಣದಿಂದ ಶೂಲವನ್ನು ಪಿನಾಕವೆಂದು ಕರೆದನು. ತ್ರಿಶೂಲವನ್ನು ಬಗ್ಗಿಸುತ್ತಿದ್ದಂತೆಯೇ ಉಶನಸನು ಶಿವನ ಕೈಗೆ ಸಿಕ್ಕಿಕೊಂಡನು. ದೇವಾಧಿಪತಿಯಾದ ಉಮಾಪತಿಯು, ಭಾರ್ಗವನು ತನ್ನ ಅಂಗೈಯಲ್ಲಿ ಇದ್ದುದನ್ನು ನೋಡಿ ತನ್ನ ಬಾಯನ್ನು ಅಗಲವಾಗಿ ಹಿಗ್ಗಿಸಿ ನಿಧಾನವಾಗಿ ಕೈಯನ್ನು ಮೇಲೆತ್ತಿ ಕೈಯಿನ ಮಧ್ಯಭಾಗದಲ್ಲಿದ್ದ ಭಾರ್ಗವನನ್ನು ಬಾಯೊಳಕ್ಕೆ ಹಾಕಿಕೊಂಡನು. ಮಹೇಶ್ವರನ ಮುಖದ ಮೂಲಕವಾಗಿ ಹೊಟ್ಟೆಯನ್ನು ಪ್ರವೇಶಿಸಿದ, ಪ್ರಭುವಾದ, ಮಹಾತ್ಮನಾದ, ಭೃಗುಪುತ್ರನಾದ ಉಶನಸನು ಅಲ್ಲಿಯೂ ಸಂಚರಿಸತೊಡಗಿದನು."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

"ಪಿತಾಮಹ! ಮಹಾತೇಜಸ್ವಿಯಾದ ಉಶನಸನು ದೇವದೇವನಾದ

ಧೀಮಂತನಾದ ಉಮಾಪತಿಯ ಜಠರದಲ್ಲಿ ಏತಕ್ಕಾಗಿ ಸಂಚರಿಸುತ್ತಿದ್ದನು? ಮುಂದೆ ಅವನು ಅಲ್ಲಿ ಏನು ಮಾಡಿದನು?”

ಭೀಷ್ಮನು ಹೇಳುತ್ತಾನೆ :

“ನರೇಶ್ವರ! ಹಿಂದೆ (ಉಶನಸನು ಶಿವನ ಹೊಟ್ಟೆಯೊಳಗೆ ಪ್ರವೇಶಿಸಿದನಂತರ) ಮಹಾವ್ರತನಾದ, ಮಹಾದೇವನು ನೀರಿನ ಒಳಭಾಗವನ್ನು ಪ್ರವೇಶಿಸಿ ಸ್ಥಾಣುಭೂತನಾಗಿ (ಮೋಟುಮರದಂತೆ ಸ್ಥಿರಭಾವದಿಂದ ನಿಂತು) ಲಕ್ಷ-ಕೋಟಿವರ್ಷಗಳವರೆಗೆ ತಪಸ್ಸನ್ನು ಮಾಡುತ್ತಿದ್ದನು. ಅತ್ಯಂತ ದುಷ್ಕರವಾದ ಆ ಮಹಾತಪಸ್ಸನ್ನು ಪೂರೈಸಿದ ಮಹಾದೇವನು ಸರೋವರದಿಂದ ಹೊರಕ್ಕೆ ಬಂದನಂತರ ದೇವದೇವನಾದ ಬ್ರಹ್ಮನು ಅವನ ಬಳಿಗೆ ಹೋದನು. ಅವಿನಾಶಿಯಾದ ಬ್ರಹ್ಮನು ಪರಶಿವನನ್ನು ತಪೋವೃದ್ಧಿಯ ಸಂಬಂಧವಾದ ಕುಶಲಪ್ರಶ್ನೆಗಳನ್ನು ಕೇಳಿದನು. ಅದಕ್ಕೆ ಉತ್ತರವಾಗಿ ವೃಷಭಧ್ವಜನು–‘ತಪಃ ಸುಚೀರ್ಣಂ–ತಪಸ್ಸು ಚೆನ್ನಾಗಿ ಅನುಷ್ಠಿಸಲ್ಪಟ್ಟಿತು’– ಎಂದನು.

ಅನಂತರ ಮಹಾಮತಿಯಾದ, ಅಚಿಂತ್ಯಸ್ವರೂಪನಾದ, ಸದಾ ಸತ್ಯಧರ್ಮರತನಾದ ಶಂಕರನು ತಾನು ಜಲಮಧ್ಯದಲ್ಲಿ ತಪಸ್ಸುಮಾಡುತ್ತಿದ್ದಾಗ ಹೊಟ್ಟೆಯಲ್ಲಿದ್ದು ತನ್ನ ಸಂಪರ್ಕವನ್ನು ಹೊಂದಿದ್ದ ಕಾರಣ ಉಶನಸನೂ ತಪಸ್ಸಿನಿಂದ ವೃದ್ಧಿಯನ್ನು ಹೊಂದಿರುವುದನ್ನು ಅಂತರ್ದೃಷ್ಟಿಯಿಂದ ಕಂಡುಕೊಂಡನು. ಅದೇ ಕಾರಣದಿಂದಲೇ ಮಹಾಯೋಗಿಯಾದ ವೀರ್ಯವಂತನಾದ ಉಶನಸನು ತಪಸ್ಸಿನಿಂದಲೂ ಕುಬೇರನಿಂದ ಅಪಹರಿಸಲ್ಪಟ್ಟ ಧನದಿಂದಲೂ ಆಢ್ಯನಾಗಿ ಮೂರು ಲೋಕಗಳಲ್ಲಿಯೂ ವಿರಾಜಿಸಿದನು. ಅನಂತರ ಪಿನಾಕಪಾಣಿಯಾದ, ಯೋಗಾತ್ಮನಾದ ಮಹಾದೇವನು ಧ್ಯಾನಯೋಗವನ್ನು ಆಶ್ರಯಿಸಿದನು. ಆಗ ಉಶನಸನು ಉದ್ವಿಗ್ನನಾಗಿ ಶಿವನ ಹೊಟ್ಟೆಯಲ್ಲಿಯೇ ಉಡುಗಿಕೊಂಡನು. ಮಹಾಯೋಗಿಯಾದ ಉಶನಸನು ಅಲ್ಲಿಯೇ ಇದ್ದುಕೊಂಡು ಪರಮೇಶ್ವರನನ್ನು ಸ್ತೋತ್ರಮಾಡಿದನು. ಉಶನಸನು ಶಿವನ ಹೊಟ್ಟೆಯಿಂದ ಹೊರಬರಲು ಮಾರ್ಗವನ್ನು ಹುಡುಕುತ್ತಿದ್ದನು. ಆದರೆ ಮಹಾದೇವನು ಮಾರ್ಗವನ್ನು ಪ್ರತಿರೋಧಿಸುತ್ತಿದ್ದನು. ಶಿವನ ಹೊಟ್ಟೆ

ಯಲ್ಲಿದ್ದ ಮಹಾಮುನಿಯಾದ ಉಶನಸನು **'ಪ್ರಸಾದಂ ಕುರುಷ್ವ ಮಹಾದೇವ! ಪ್ರಸಾದಂ ಕುರುಷ್ವ!'** 'ಮಹಾದೇವನೇ! ನನ್ನನ್ನು ಅನುಗ್ರಹಿಸು'– ಎಂಬುದಾಗಿ ಶಿವನನ್ನು ಪುನಃ-ಪುನಃ ಪ್ರಾರ್ಥಿಸುತ್ತಿದ್ದನು.

ಪ್ರಸನ್ನನಾದ ಪರಮೇಶ್ವರನು ಉಶನಸನಿಗೆ–"ಉಶನಸ! ನನ್ನ ಜನನೇಂದ್ರಿಯದ ಮಾರ್ಗದಿಂದಲೇ ನಿನಗೆ ಇಲ್ಲಿಂದ ಬಿಡುಗಡೆಯಾಗಿ ಹೋಗಲು ಅವಕಾಶವು ಸಿಕ್ಕುತ್ತದೆ. ಆದುದರಿಂದ ಆ ಮಾರ್ಗದಿಂದಲೇ ನೀನು ಹೊರಕ್ಕೆ ಹೋಗು"–ಎಂದು ಹೇಳಿ ತ್ರಿದಶಶ್ರೇಷ್ಠನು ಉಳಿದೆಲ್ಲ ಮಾರ್ಗಗಳನ್ನೂ ಪ್ರತಿಬಂಧಿಸಿದನು.

ಯುಧಿಷ್ಠಿರ! ಎಲ್ಲ ಕಡೆಗಳಿಂದಲೂ ಮುಚ್ಚಲ್ಪಟ್ಟಿದ್ದರಿಂದ ಜನ ನೇಂದ್ರಿಯದ್ವಾರವನ್ನು ಕಾಣದೇ ಮಹಾಮುನಿಯು ಶಂಕರನ ದಿವ್ಯತೇಜಸ್ಸಿ ನಿಂದ ದಹಿಸಲ್ಪಡುತ್ತಿದ್ದು ಚಡಪಡಿಸುತ್ತಾ ಶಂಕರನ ಹೊಟ್ಟೆಯಲ್ಲಿ ಇಲ್ಲಿಂದಲ್ಲಿಗೂ ಅಲ್ಲಿಂದಿಲ್ಲಿಗೂ ಸುತ್ತಾಡುತ್ತಿದ್ದನು. ಕಟ್ಟಕಡೆಗೆ ಶುಕ್ರ (ವೀರ್ಯ) ರೂಪದಲ್ಲಿ ಪರಶಿವನ ಜನನೇಂದ್ರಿಯದಿಂದ ಹೊರಬಂದು ಶುಕ್ರನೆಂಬ ಅನ್ವರ್ಥನಾಮವನ್ನೇ ಪಡೆದುಕೊಂಡನು. ಈ ಕಾರಣದಿಂದಲೇ (ರೇತೋರೂಪನಾಗಿ ಶಿವನ ಜನನೇಂದ್ರಿಯದಿಂದ ಹೊರಬಂದ ಕಾರಣ ದಿಂದಲೇ) ಉಶನಸನು ಆಕಾಶದ ಮಧ್ಯಭಾಗದಲ್ಲಿ ಸಂಚರಿಸಲು ಅವಕಾಶವನ್ನು ಪಡೆದುಕೊಳ್ಳಲಿಲ್ಲ. ಉಶನಸನು ತನ್ನಿಂದ ಹೊರಬಂದು ದನ್ನೂ ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವುದನ್ನೂ ನೋಡಿ ಭವನು ರೋಷಾವಿಷ್ಟನಾಗಿ ಶೂಲಯುಕ್ತವಾಗಿದ್ದ ಕೈಯನ್ನು ಮೇಲೆತ್ತಿ ನಿಂತು ಕೊಂಡನು. ಆ ಸಮಯದಲ್ಲಿ ಪಾರ್ವತೀದೇವಿಯು ಕ್ರುದ್ಧನಾಗಿದ್ದ ತನ್ನ ಪತಿಯಾದ ಪಶುಪತಿಯನ್ನು ತಡೆಹಿಡಿದಳು. ಹಾಗೆ ದೇವಿಯು ಶಂಕರನನ್ನು ತಡೆದು ನಿಲ್ಲಿಸಲು ಶುಕ್ರನು ಪಾರ್ವತಿಗೆ ಪುತ್ರಭಾವವನ್ನು ಹೊಂದಿದನು. ಅನಂತರ ದೇವಿಯು ಶಂಕರನಿಗೆ ಹೇಳಿದಳು :

ಹಿಂಸನೀಯಸ್ತ್ವಯಾ ನೈವ ಮಮ ಪುತ್ರತ್ವಮಾಗತಃ ।
ನ ಹಿ ದೇವೋದರಾತ್ಕಶ್ಚಿನ್ನಿಃಸೃತೋ ನಾಶಮೃಚ್ಛತಿ ॥೩೫॥

"ಪತಿದೇವ! ನೀನು ಈ ಉಶನಸನನ್ನು ಖಂಡಿತವಾಗಿಯೂ ಸಂಹರಿಸ

ಬಾರದು. ಇವನೀಗ ನನ್ನ ಮಗನಾಗಿದ್ದಾನೆ. ದೇವನ ಹೊಟ್ಟೆಯಿಂದ ಹೊರಬಂದವನು ಯಾವನೇ ಆಗಿದ್ದರೂ ವಿನಾಶವನ್ನು ಹೊಂದಬಾರದು.”

ದೇವಿಯ ಆ ಮಾತಿನಿಂದ ಪ್ರಸನ್ನನಾದ ಭವನು ನಗುತ್ತಾ ದೇವಿಯೊಡನೆ–‘**ಗಚ್ಛತ್ವೇಷ ಯಥಾಕಾಮಂ**–ಇವನು ತನ್ನ ಇಚ್ಛೆಯಿದ್ದೆಡೆಗೆ ಹೊರಟುಹೋಗಲಿ’–ಎಂದು ಹೇಳಿದೊಡನೆಯೇ ಧೀಮಂತನಾದ, ಮಹಾಮುನಿಯಾದ ಶುಕ್ರನು ವರದನಾದ ಶಿವನಿಗೂ ವರದೆಯಾದ ಉಮಾದೇವಿಗೂ ಪ್ರಣಾಮಮಾಡಿ ತನಗೆ ಇಷ್ಟವಾದ ಸ್ಥಾನವನ್ನು ಹೊಂದಿದನು. ಯುಧಿಷ್ಠಿರ! ನೀನು ಉಶನಸನ ವಿಷಯವಾಗಿ ಕೇಳಿದ ಪ್ರಶ್ನೆಗೆ ಮಹಾತ್ಮನಾದ ಭಾರ್ಗವನ ಆ ಕಥೆಯನ್ನು ವಿಸ್ತಾರವಾಗಿ ನಿನಗೆ ಹೇಳಿದ್ದೇನೆ.”

೨೮೯ನೆಯ ಅಧ್ಯಾಯವು ಮುಗಿಯಿತು.

೨೯೦ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪರಾಶರಗೀತೆಯ ಪ್ರಾರಂಭ: ಪರಾಶರರಿಂದ ಜನಕರಾಜನಿಗೆ ಶ್ರೇಯಃಪ್ರಾಪ್ತಿಯ ಸಾಧನಗಳ ಉಪದೇಶ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

“ಮಹಾಬಾಹುವೇ! ಪಿತಾಮಹ! ಇನ್ನು ಮುಂದೆ ನನ್ನ ಶ್ರೇಯಃಪ್ರಾಪ್ತಿಗೆ ಯಾವ ಉಪಾಯವಿದೆಯೋ ಅದನ್ನು ಹೇಳು. ನಿನ್ನ ಅಮೃತಕ್ಕೆ ಸಮಾನವಾದ ಮಾತುಗಳನ್ನು ಕೇಳುತ್ತಿದ್ದಂತೆಲ್ಲಾ ನನಗೆ ಇನ್ನೂ ಕೇಳಬೇಕೆಂಬ ಆಸೆಯುಂಟಾಗುವುದೇ ಹೊರತು ತೃಪ್ತಿಯೇ ಆಗುವುದಿಲ್ಲ. ಪುರುಷಶ್ರೇಷ್ಠನೇ! ಪುರುಷನು ಯಾವ ಶುಭಕರ್ಮವನ್ನು ಮಾಡಿ ಇಹಲೋಕ-ಪರಲೋಕಗಳೆರಡಲ್ಲಿಯೂ ಶ್ರೇಯಸ್ಸನ್ನು ಹೊಂದುತ್ತಾನೆ? ಈ ವಿಷಯವನ್ನು ಹೇಳುವ ಕೃಪೆಮಾಡು.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಮಹಾಯಶೋವಂತನಾದ

ಜನಕರಾಜನು ಯಾವ ರೀತಿಯಲ್ಲಿ ಮಹಾತ್ಮರಾದ ಪರಾಶರರನ್ನು ಪ್ರಶ್ನಿಸಿದನು–ಎಂಬುದನ್ನು ಹೇಳುತ್ತೇನೆ.

ಜನಕನು ಪರಾಶರರನ್ನು ಪ್ರಶ್ನಿಸಿದನು :

ಕಿಂ ಶ್ರೇಯಃ ಸರ್ವಭೂತಾನಾಮಸ್ಮಿಂಲ್ಲೋಕೇ ಪರತ್ರ ಚ ।
ಯದ್ಭವೇತ್ಪ್ರತಿಪತ್ತವ್ಯಂ ತದ್ಭವಾನ್ಪ್ರಬ್ರವೀತು ಮೇ ॥೪॥

"ಪೂಜ್ಯರೇ! ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸಕಲಪ್ರಾಣಿಗಳಿಗೂ ಶ್ರೇಯಸ್ಕರವಾದ ಮಾರ್ಗವು ಯಾವುದು? ಯಾವ ಮಾರ್ಗವು ಅಂಗೀಕಾರಕ್ಕೆ ಯೋಗ್ಯವಾಗಿದೆ? ಈ ವಿಷಯವನ್ನು ನನಗೆ ದಯಮಾಡಿ ಹೇಳಿರಿ."

ಯುಧಿಷ್ಠಿರ! ಜನಕನು ಹೀಗೆ ಪ್ರಶ್ನಿಸಲಾಗಿ, ಎಲ್ಲ ಧರ್ಮಗಳ ವಿಧಾನಗಳನ್ನೂ ತಿಳಿದಿದ್ದ, ತಪಸ್ಸಿನಿಂದ ಯುಕ್ತರಾಗಿದ್ದ ಪರಾಶರರು ರಾಜನನ್ನು ಅನುಗ್ರಹಿಸಬೇಕೆಂಬ ಮನಸ್ಸಿನಿಂದ ಕೂಡಿದವರಾಗಿ ಹೀಗೆ ಹೇಳಿದರು :

ಧರ್ಮ ಏವ ಕೃತಃ ಶ್ರೇಯಾನಿಹ ಲೋಕೇ ಪರತ್ರ ಚ ।
ತಸ್ಮಾದ್ಧಿ ಪರಮಂ ನಾಸ್ತಿ ಯಥಾ ಪ್ರಾಹುರ್ಮನೀಷಿಣಃ ॥೬॥

"ಜನಕರಾಜ! ವಿದ್ವಾಂಸರು ಹೇಳುವಂತೆ ಧರ್ಮವನ್ನೇ ವಿಧಿ ಪೂರ್ವಕವಾಗಿ ಅನುಷ್ಠಾನಮಾಡುವುದರಿಂದ ಇಹ-ಪರಗಳೆರಡರಲ್ಲಿಯೂ ಶ್ರೇಯಸ್ಸುಂಟಾಗುತ್ತದೆ. ಶ್ರೇಯಸ್ಸಾಧನೆಗೆ ಧರ್ಮಕ್ಕಿಂತಲೂ ಉತ್ತಮವಾದ ಮಾರ್ಗವು ಮತ್ತೊಂದಿಲ್ಲ.

ಪ್ರತಿಪದ್ಯ ನರೋ ಧರ್ಮಂ ಸ್ವರ್ಗಲೋಕೇ ಮಹೀಯತೇ ।
ಧರ್ಮಾತ್ಮಕಃ ಕರ್ಮವಿಧಿರ್ದೇಹಿನಾಂ ನೃಪಸತ್ತಮ ॥೭॥

ರಾಜಸತ್ತಮನೇ! ಧರ್ಮವನ್ನು ಆಶ್ರಯಿಸಿದ ಮನುಷ್ಯನು ಸ್ವರ್ಗ ಲೋಕದಲ್ಲಿಯೂ ಸಮ್ಮಾನಿತನಾಗುತ್ತಾನೆ. ವೇದಗಳಲ್ಲಿ ಯಾವ ಧರ್ಮಾತ್ಮಕ ವಾದ ಕರ್ಮವಿಧಿಗಳು (ಸತ್ಯಂ ವದ-ಧರ್ಮಂ ಚರ-ಯಜೇತ-ಜುಹುಯಾತ್ ಇತ್ಯಾದಿಗಳು) ಹೇಳಲ್ಪಟ್ಟಿವೆಯೋ–ಅವುಗಳೇ ಧರ್ಮದ ಲಕ್ಷಣ ಗಳಾಗಿವೆ.

ತಸ್ಮಿನ್ನಾಶ್ರಮಿಣಃ ಸನ್ತಃ ಸ್ವಕರ್ಮಾಣೀಹ ಕುರ್ವತೇ ॥೮॥

ಎಲ್ಲ ಆಶ್ರಮಿಗಳೂ ವೇದೋಕ್ತವಾದ ಆ ಕರ್ಮವಿಧಿಗಳನ್ನೇ ಅನುಸರಿಸಿ ಇಲ್ಲಿ ಸ್ವಕರ್ಮಗಳನ್ನು ಮಾಡುತ್ತಿರುತ್ತಾರೆ.

ಚತುರ್ವಿಧಾ ಹಿ ಲೋಕೇಽಸ್ಮಿನ್ಯಾತ್ರಾ ತಾತ ವಿಧೀಯತೇ ।
ಮರ್ತ್ಯಾ ಯತ್ರಾವತಿಷ್ಠನ್ತೇ ಸಾ ಚ ಕಾಮಾತ್ಪ್ರವರ್ತತೇ ॥೯॥

ಈ ಲೋಕದಲ್ಲಿ ನಾಲ್ಕು ಪ್ರಕಾರವಾಗಿ ಜೀವಿಕೆಯ ವಿಧಾನಗಳಿವೆ. (ಬ್ರಾಹ್ಮಣನಿಗೆ ಪ್ರತಿಗ್ರಹ, ರಾಜನಿಗೆ ಕರಾದಾನ, ವೈಶ್ಯನಿಗೆ ಕೃಷ್ಯಾದಿಗಳು, ಶೂದ್ರನಿಗೆ ಸೇವೆ.) ಮನುಷ್ಯನು ಈ ನಾಲ್ಕು ಪ್ರಕಾರವಾದ ಜೀವಿಕೆಗಳಲ್ಲಿ ವರ್ಣಾನುಗುಣವಾಗಿ ಒಂದನ್ನು ಆಶ್ರಯಿಸಿಕೊಂಡಿರುತ್ತಾನೆ. ಈ ಜೀವಿಕೆಗಳು ದೈವೇಚ್ಛೆಯಿಂದಲೇ ಪ್ರಾಪ್ತವಾಗತಕ್ಕುವುಗಳು.

ಸುಕೃತಾಸುಕೃತಂ ಕರ್ಮ ನಿಷೇವ್ಯ ವಿವಿಧೈಃ ಕ್ರಮೈಃ ।
ದಶಾರ್ಧಪ್ರವಿಭಕ್ತಾನಾಂ ಭೂತಾನಾಂ ಬಹುಧಾ ಗತಿಃ ॥೧೦॥

ಲೋಕದಲ್ಲಿ ಪಂಚಭೂತಗಳಿಂದ ನಿರ್ಮಿತವಾಗಿರುವ ಪ್ರಾಣಿಯು (ಮನುಷ್ಯನು) ನಾನಾಪ್ರಕಾರವಾದ ಕ್ರಮಗಳಿಂದ ಪುಣ್ಯಾಪುಣ್ಯಕರ್ಮಗಳನ್ನು ಮಾಡುತ್ತಾ ಅವುಗಳಿಗೆ ತಕ್ಕಂತೆ ನಾನಾಗತಿಗಳನ್ನು ಹೊಂದುತ್ತಾನೆ.

ಸೌವರ್ಣಂ ರಾಜತಂ ಚಾಪಿ ಯಥಾ ಭಾಣ್ಡಂ ನಿಷಿಚ್ಯತೇ ।
ತಥಾ ನಿಷಿಚ್ಯತೇ ಜನ್ತುಃ ಪೂರ್ವಕರ್ಮವಶಾನುಗಃ ॥೧೧॥

ಯಾವ ರೀತಿಯಲ್ಲಿ ತಾಮ್ರವೇ ಮೊದಲಾದ ಪಾತ್ರೆಗಳ ಮೇಲೆ ಬೆಳ್ಳಿಯ ಅಥವಾ ಚಿನ್ನದ ಗಿಲಾವನ್ನು ಹಾಕಿಸಿದರೆ–ಆ ಪಾತ್ರೆಗಳು ಬೆಳ್ಳಿ ಅಥವಾ ಚಿನ್ನದ ಪಾತ್ರೆಗಳಂತೆಯೇ ಕಾಣುವುವೋ–ಅದೇ ರೀತಿಯಲ್ಲಿ ಪೂರ್ವಜನ್ಮದಲ್ಲಿ ಮಾಡಿದ ಶುಭಾಶುಭಕರ್ಮಗಳ ಫಲಗಳಿಗೆ ವಶೀಭೂತನಾದ ಪ್ರಾಣಿಯು ಆ ಕರ್ಮಫಲದಿಂದ ಆವರಿಸಲ್ಪಟ್ಟವನಾಗಿ ಪುಣ್ಯವಂತನಾಗಿ ಅಥವಾ ಪಾಪಿಷ್ಠನಾಗಿ ಕಾಣಿಸಿಕೊಳ್ಳುತ್ತಾನೆ.

ನಾಬೀಜಾಜ್ಜಾಯತೇ ಕಿಂಚಿನ್ನಾಕೃತ್ವಾ ಸುಖಮೇಧತೇ ।
ಸುಕೃತೈರ್ವಿನ್ದತೇ ಸೌಖ್ಯಂ ಪ್ರಾಪ್ಯ ದೇಹಕ್ಷಯಂ ನರಃ ॥೧೨॥

ಬೀಜವಿಲ್ಲದೇ ಯಾವ ಅಂಕುರವೂ ಮೊಳೆಯುವುದಿಲ್ಲ. ಹಾಗೆಯೇ ಪುಣ್ಯಕರ್ಮಗಳನ್ನು ಮಾಡದೇ ಯಾವ ಮನುಷ್ಯನೂ ಸುಖವನ್ನು ಹೊಂದುವುದಿಲ್ಲ. ಮನುಷ್ಯನು ದೇಹಕ್ಷಯವಾದನಂತರ ಇಲ್ಲಿ ಮಾಡಿದ ಸುಕೃತಗಳಿಂದಲೇ ಪುಣ್ಯಲೋಕಗಳನ್ನು ಹೊಂದಿ ಸೌಖ್ಯವನ್ನು ಪಡೆಯುತ್ತಾನೆ.

ದೈವಂ ತಾತ ನ ಪಶ್ಯಾಮಿ ನಾಸ್ತಿ ದೈವಸ್ಯ ಸಾಧನಮ್ ।
ಸ್ವಭಾವತೋ ಹಿ ಸಂಸಿದ್ಧಾ ದೇವಗನ್ಧರ್ವದಾನವಾಃ ॥೧೩॥

ತಾತ! ಜನಕರಾಜ! ಈ ವಿಷಯದಲ್ಲಿ ನಾಸ್ತಿಕರ ಅಭಿಪ್ರಾಯವು ಹೀಗಿರುತ್ತದೆ : 'ದೈವವೆಂಬುದನ್ನು ನಾನು ಕಾಣುತ್ತಿಲ್ಲ. ಮೇಲಾಗಿ ದೈವದ ಸಾಧನೆಯೇನೂ ಇರುವುದಿಲ್ಲ. ದೇವ-ಗಂಧರ್ವ-ದಾನವರೇ ಮೊದಲಾದ ಯೋನಿಗಳು ಸ್ವಭಾವತಃ ಸಿದ್ಧವಾದುವುಗಳು.'

ಪ್ರೇತ್ಯ ಜಾತಿಕೃತಂ ಕರ್ಮ ನ ಸ್ಮರನ್ತಿ ಸದಾ ಜನಾಃ ।
ತೇ ವೈ ತಸ್ಯ ಫಲಪ್ರಾಪ್ತೌ ಕರ್ಮ ಚಾಪಿ ಚತುರ್ವಿಧಮ್ ॥೧೪॥

ಅದಕ್ಕೆ ಸಮಾಧಾನವನ್ನು ಹೀಗೆ ಹೇಳಬಹುದಾಗಿದೆ : ಯಾವಾಗಲೂ ಜನರು ಮರಣಹೊಂದಿದ ನಂತರ ತಾವು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳನ್ನು ಸ್ಮರಿಸುವುದಿಲ್ಲ. (ಹಿಂದೆ ಮಾಡಿದ ಕರ್ಮಗಳು ಅವರ ಸ್ಮರಣೆಗೆ ಬರುವುದಿಲ್ಲ.) ಆದರೆ ಅವರೇ ಪೂರ್ವಜನ್ಮದಲ್ಲಿ ಮಾಡಿದ ಆ ಕರ್ಮಗಳ ಫಲವನ್ನು ಅನುಭವಿಸುವಾಗ ನಾಲ್ಕು ಪ್ರಕಾರವಾದ ಕರ್ಮಗಳನ್ನು ಕಾರಣವನ್ನಾಗಿ ಸ್ಮರಿಸಿಕೊಳ್ಳುತ್ತಾರೆ. ನಾಲ್ಕು ವಿಧವಾದ ಕರ್ಮಗಳೆಂದರೆ : ಮನಸ್ಸು-ಮಾತು-ಕಣ್ಣು ಮತ್ತು ಕ್ರಿಯೆಗಳ ಮೂಲಕವಾಗಿ ಮಾಡಿದುವುಗಳು.

(ಕೈಗೆ ಬಂದ ತುತ್ತು ಬಾಯಿಗೆ ಬರದಿದ್ದರೆ ಹಿಂದಿನ ಜನ್ಮದಲ್ಲಿ ಯಾರದೋ ಅನ್ನವನ್ನು ಅಪಹರಿಸಿದ್ದೇನೆಂದು ಸ್ಮರಿಸುತ್ತಾರೆ. ಮಗನು ವಿಧೇಯನಾಗಿಲ್ಲದಿದ್ದರೆ ಹಿಂದಿನ ಜನ್ಮದಲ್ಲಿ ತಾನು ತನ್ನ ತಂದೆಗೆ ವಿಧೇಯ ನಾಗದೇ ಇದ್ದಿರಬಹುದೆಂಬುದನ್ನು ಸ್ಮರಿಸುತ್ತಾನೆ. ಯಾವನಿಗಾದರೂ ಮೂರ್ಛೆರೋಗವು ಬರುತ್ತಿದ್ದರೆ ಹಿಂದಿನ ಜನ್ಮದಲ್ಲಿ ಹಸುವನ್ನು ಹೊಡೆದಿರ

ಬಹುದೆಂದು ಸ್ಮರಿಸುತ್ತಾರೆ. ಹೀಗೆ ಊಹೆಯಿಂದ ಇಂತಹ ಪಾಪಕರ್ಮವನ್ನು ಅಥವಾ ಪುಣ್ಯಕರ್ಮವನ್ನು ಮಾಡಿರಬಹುದೆಂಬುದನ್ನು ಸ್ಮರಿಸುತ್ತಾರೆ. ಹಾಗಲ್ಲದಿದ್ದರೆ ಈಗ ಪಾಪಕರ್ಮಗಳನ್ನು ಮಾಡುತ್ತಿರುವವನು ಸುಖವನ್ನು ಅನುಭವಿಸುವುದಕ್ಕೂ–ಸತ್ಪುರುಷನು ಕಷ್ಟವನ್ನು ಅನುಭವಿಸುವುದಕ್ಕೂ ಸಮಾಧಾನವೇ ಸಿಕ್ಕುವುದಿಲ್ಲ. ಇವೆಲ್ಲವೂ ಪೂರ್ವಕೃತಸುಕೃತ ಅಥವಾ ದುಷ್ಕೃತಗಳೆಂದು ಕಾರ್ಯ-ಕಾರಣಭಾವಗಳಿಂದ ಅನಿವಾರ್ಯವಾಗಿ ಹೇಳಲೇಬೇಕಾಗುತ್ತದೆ.)

ಲೋಕಯಾತ್ರಾಶ್ರಯಶ್ಚೈವ ಶಬ್ದೋ ವೇದಾಶ್ರಯಃ ಕೃತಃ ।
ಶಾನ್ತ್ಯರ್ಥಂ ಮನಸಸ್ತಾತ ನೈತದ್ವೃದ್ಧಾನುಶಾಸನಮ್ ॥೧೫॥

ಜನಕರಾಜ! 'ಜೀವನನಿರ್ವಹಣೆಗಾಗಿ ಮತ್ತು ಮನಶ್ಶಾಂತಿಗಾಗಿ ವೇದೋಕ್ತಶಬ್ದಗಳ ಪ್ರಮಾಣವು ಹೇಳಲ್ಪಟ್ಟಿದೆ. ಆದರೆ ವೇದಗಳಲ್ಲಿ ಜೀವನ ನಿರ್ವಹಣೆಗಾಗಿ ಯಾವ ಕರ್ಮಗಳು ವಿಧಿಸಲ್ಪಟ್ಟಿವೆಯೋ – ಅವುಗಳೆಲ್ಲವೂ ಕೇವಲ ಅಸಮರ್ಥರಾದವರಿಗೆ ಮಾತ್ರವೇ ಹೇಳಲ್ಪಟ್ಟಿವೆ. ದುಃಖಗೊಂಡ ಮನುಷ್ಯನಿಗೆ ಧೈರ್ಯಹೇಳಲು ಅಥವಾ ಅವನ ಮನಃಶಾಂತಿಗಾಗಿ ಪೂರ್ವ ಜನ್ಮದ ಪ್ರಸ್ತಾಪವನ್ನೆತ್ತುತ್ತಾರೆ'–ಎಂಬುದು ನಾಸ್ತಿಕರ ಮತವಾಗಿದೆ. ಆದರೆ ಇದು ವೃದ್ಧರ ಅಭಿಪ್ರಾಯವಾಗಿರುವುದಿಲ್ಲ ಅಥವಾ ಉಪದೇಶವಾಗಿರು ವುದಿಲ್ಲ. (ಕಾರ್ಯ-ಕಾರಣವಿಜ್ಞಾನಸಂಪನ್ನರೂ, ಯೋಗದಿಂದ ಜನ್ಮಾಂತರ ಗಳನ್ನು ಕಂಡುಕೊಂಡವರೂ ಆದ ಪತಂಜಲಿಗಳೇ ಮೊದಲಾದ ಜ್ಞಾನವೃದ್ಧರು ಕರ್ಮಫಲದ ವಿಷಯವಾಗಿ ಯೋಗಸೂತ್ರದಲ್ಲಿ ಹೀಗೆ ಹೇಳಿದ್ದಾರೆ : **ಸತಿ ಮೂಲೇ ತದ್ವಿಪಾಕೋ ಜಾತ್ಯಾಯುರ್ಭೋಗಾಃ ॥೧೩॥** ಸಾಧನಪಾದ. (ಸುಖ-ದುಃಖಗಳ) ಮೂಲವು ಇರುವಾಗ ಜನ್ಮ, ಆಯುಸ್ಸು ಮತ್ತು ಸುಖ-ದುಃಖಗಳ ಅನುಭವ–ಇವುಗಳ ರೂಪದಲ್ಲಿ ಪೂರ್ವಕೃತಕರ್ಮಗಳ ಫಲವಿರುತ್ತದೆ.)

ಚಕ್ಷುಷಾ ಮನಸಾ ವಾಚಾ ಕರ್ಮಣಾ ಚ ಚತುರ್ವಿಧಮ್ ।
ಕುರುತೇ ಯಾದೃಶಂ ಕರ್ಮ ತಾದೃಶಂ ಪ್ರತಿಪದ್ಯತೇ ॥೧೬॥

ಮನುಷ್ಯನು ಕಣ್ಣಿನಿಂದ, ಮನಸ್ಸಿನಿಂದ, ಮಾತಿನಿಂದ ಮತ್ತು ಕ್ರಿಯೆ

ಯಿಂದ ನಾಲ್ಕು ವಿಧವಾದ ಕರ್ಮಗಳನ್ನು ಹೇಗೆ ಮಾಡುವನೋ–ಆ ಕರ್ಮಗಳಿಗೆ ಅನುಸಾರವಾಗಿ ಅವುಗಳ ಫಲಗಳನ್ನೂ ಪಡೆದುಕೊಳ್ಳುತ್ತಾನೆ.

ನಿರನ್ತರಂ ಚ ಮಿಶ್ರಂ ಚ ಲಭತೇ ಕರ್ಮ ಪಾರ್ಥಿವ ।
ಕಲ್ಯಾಣಂ ಯದಿ ವಾ ಪಾಪಂ ನ ತು ನಾಶೋಽಸ್ಯ ವಿದ್ಯತೇ ॥೧೭॥

ಮನುಷ್ಯನು ಕರ್ಮಫಲಾನುರೂಪವಾಗಿ ಕೆಲವೊಮ್ಮೆ ಸುಖವನ್ನೂ, ಕೆಲವೊಮ್ಮೆ ದುಃಖವನ್ನೂ, ಕೆಲವೊಮ್ಮೆ ಸುಖ-ದುಃಖಗಳ ಮಿಶ್ರಫಲವನ್ನೂ ನಿರಂತರವಾಗಿ ಹೊಂದುತ್ತಲೇ ಇರುತ್ತಾನೆ. ಪುಣ್ಯಫಲವಾಗಲೀ ಪಾಪಫಲ ವಾಗಲೀ–ಅದನ್ನು ಅನುಭವಿಸಿದ ಹೊರತು ಅದು ವಿನಾಶಹೊಂದುವುದಿಲ್ಲ.

ಕದಾಚಿತ್ಸುಕೃತಂ ತಾತ ಕೂಟಸ್ಥಮಿವ ತಿಷ್ಠತಿ ।
ಮಜ್ಜಮಾನಸ್ಯ ಸಂಸಾರೇ ಯಾವದ್ದುಃಖಾದ್ವಿಮುಚ್ಯತೇ ॥೧೮॥

ತತೋ ದುಃಖಕ್ಷಯಂ ಕೃತ್ವಾ ಸುಕೃತಂ ಕರ್ಮ ಸೇವತೇ ।
ಸುಕೃತಕ್ಷಯಾದ್ದುಷ್ಕೃತಂ ತದ್ವಿದ್ಧಿ ಮನುಜಾಧಿಪ ॥೧೯॥

ಸಂಸಾರದಲ್ಲಿ ಮುಳುಗಿರುವ ಮನುಷ್ಯನ ಸುಕೃತವು (ಸುಕೃತದ ಫಲವು)–ಕೆಲವೊಮ್ಮೆ ದುಃಖವು (ದುಷ್ಕರ್ಮಫಲವು) ಕಳೆದುಹೋಗುವ ವರೆಗೂ–ಕೂಟಸ್ಥನಂತೆ (ನಿಶ್ಚಲನಾಗಿರುವ ಪುರುಷನಂತೆ) ತಟಸ್ಥವಾಗಿದ್ದು ಬಿಡುತ್ತದೆ. ಪಾಪಕರ್ಮದ ದುಃಖಫಲವನ್ನು ಪೂರ್ಣವಾಗಿ ಅನುಭವಿಸಿದ ನಂತರ ಜೀವನು ಆ ಪುಣ್ಯಕರ್ಮಗಳ ಸುಖರೂಪವಾದ ಫಲವನ್ನು ಅನು ಭವಿಸಲು ಆರಂಭಿಸುತ್ತಾನೆ. ಪುಣ್ಯಕರ್ಮಗಳ ಫಲವೆಲ್ಲವೂ ಮುಗಿದನಂತರ ಪುನಃ ದುಷ್ಕರ್ಮಗಳು ಕೊಟ್ಟ ಫಲವನ್ನು ಅನುಭವಿಸಬೇಕಾಗುತ್ತದೆ. ಮಹಾರಾಜ! ಈ ವಿಷಯವನ್ನು ನೀನು ಚೆನ್ನಾಗಿ ತಿಳಿಯುವವನಾಗು.

ದಮಃ ಕ್ಷಮಾ ಧೃತಿಸ್ತೇಜಃ ಸಂತೋಷಃ ಸತ್ಯವಾದಿತಾ ।
ಹ್ರೀರಹಿಂಸಾವ್ಯಸನಿತಾ ದಾಕ್ಷ್ಯಂ ಚೇತಿ ಸುಖಾವಹಾಃ ॥೨೦॥

ಇಂದ್ರಿಯನಿಗ್ರಹ, ಕ್ಷಮೆ, ಧೈರ್ಯ, ತೇಜಸ್ಸು, ಸಂತೋಷ, ಸತ್ಯ ಭಾಷಣ, ಲಜ್ಜೆ, ಅಹಿಂಸೆ, ದುರ್ವ್ಯಸನಗಳು ಇಲ್ಲದಿರುವುದು, ದಕ್ಷತೆ– ಇವುಗಳೆಲ್ಲವೂ ಸುಖವನ್ನುಂಟುಮಾಡುತ್ತವೆ.

ದುಷ್ಕೃತೇ ಸುಕೃತೇ ಚಾಪಿ ನ ಜನ್ತುರ್ನಿಯತೋ ಭವೇತ್ ।
ನಿತ್ಯಂ ಮನಃಸಮಾಧಾನೇ ಪ್ರಯತೇತ ವಿಚಕ್ಷಣಃ ॥೨೧॥

ವಿದ್ವಾಂಸನಾದ ಪುರುಷನು ಜೀವನಪರ್ಯಂತವಾಗಿ ಪಾಪ ಅಥವಾ ಪುಣ್ಯಕಾರ್ಯಗಳಲ್ಲಿಯೇ ಆಸಕ್ತನಾಗಿರದೆ ತನ್ನ ಮನಸ್ಸನ್ನು ಪರಮಾತ್ಮನ ಧ್ಯಾನಸಮಾಧಿಯಲ್ಲಿ ತೊಡಗಿಸಲು ಪ್ರಯತ್ನಿಸಬೇಕು.

ನಾಯಂ ಪರಸ್ಯ ಸುಕೃತಂ ದುಷ್ಕೃತಂ ಚಾಪಿ ಸೇವತೇ ।
ಕರೋತಿ ಯಾದೃಶಂ ಕರ್ಮ ತಾದೃಶಂ ಪ್ರತಿಪದ್ಯತೇ ॥೨೨॥

ಮನುಷ್ಯನು ಇತರರು ಮಾಡಿದ ದುಷ್ಕರ್ಮದ ಅಥವಾ ಸತ್ಕರ್ಮದ ಫಲವನ್ನು ಅನುಭವಿಸುವುದಿಲ್ಲ. ತಾನು ಎಂತಹ ಕರ್ಮಮಾಡಿರುವನೋ ಆ ಕರ್ಮಕ್ಕೆ ಅನುಗುಣವಾದ ಫಲವನ್ನು ಅನುಭವಿಸುತ್ತಾನೆ.

ಸುಖದುಃಖೇ ಸಮಾಧಾಯ ಪುಮಾನನ್ಯೇನ ಗಚ್ಛತಿ ।
ಅನ್ಯೇನೈವ ಜನಃ ಸರ್ವಃ ಸಂಗತೋ ಯಶ್ಚ ಪಾರ್ಥಿವ ॥೨೩॥

ವಿವೇಕಿಯಾದ ಪುರುಷನು ಸುಖ-ದುಃಖದಾಯಕವಾದ ಪುಣ್ಯಕರ್ಮ-ಪಾಪಕರ್ಮಗಳೆರಡನ್ನೂ ತನ್ನಲ್ಲಿಯೇ ವಿಲೀನಗೊಳಿಸಿ ಅನ್ಯಮಾರ್ಗದಿಂದ ಅರ್ಥಾತ್ ಮೋಕ್ಷಮಾರ್ಗದಿಂದ ಸದ್ಗತಿಯನ್ನು ಹೊಂದುತ್ತಾನೆ. ಯಾರು ಸ್ತ್ರೀ-ಪುತ್ರ-ಧನಾದಿಗಳಲ್ಲಿಯೇ ಆಸಕ್ತರಾಗಿರುವರೋ–ಅಂತಹ ಜನರು ಅನ್ಯ ಮಾರ್ಗವನ್ನು (ಕರ್ಮಮಾರ್ಗವನ್ನು) ಹಿಡಿದು ಹೋಗುತ್ತಾರೆ. ಇದರ ಫಲ ವಾಗಿ ಹುಟ್ಟು-ಸಾವುಗಳ ಚಕ್ರದಲ್ಲಿ ಸಿಕ್ಕಿ ತೊಳಲುತ್ತಿರುತ್ತಾರೆ.

ಪರೇಷಾಂ ಯದಸೂಯೇತ ನ ತತ್ಕುರ್ಯಾತ್ಸ್ವಯಂ ನರಃ ।
ಯೋ ಹ್ಯಸೂಯುಸ್ತಥಾಯುಕ್ತಃ ಸೋಽವಹಾಸಂ ನಿಯಚ್ಛತಿ ॥೨೪॥

ದುಷ್ಕರ್ಮಗಳನ್ನು ಮಾಡುವವನೆಂದು ಇತರರನ್ನು ನಿಂದಿಸುವ ಮನುಷ್ಯನು ತಾನು ಕೂಡ ಆ ದುಷ್ಕರ್ಮಗಳನ್ನು ಮಾಡಬಾರದು. ಯಾವನು ದುಷ್ಕರ್ಮವನ್ನು ಮಾಡಿದುದಕ್ಕಾಗಿ ಇತರರನ್ನು ದೂಷಿಸಿ ತಾನೇ ಆ ದುಷ್ಕರ್ಮವನ್ನು ಮಾಡುವನೋ–ಅಂತಹವನು ಇತರರ ಅಪಹಾಸ್ಯಕ್ಕೆ ಪಾತ್ರನಾಗುತ್ತಾನೆ.

ಭೀರೂ ರಾಜನ್ಯೋ ಬ್ರಾಹ್ಮಣಃ ಸರ್ವಭಕ್ಷ್ಯೋ
ವೈಶ್ಯೋನೀಹಾವಾನ್ಹೀನವರ್ಣೋಽಲಸಶ್ಚ ।
ವಿದ್ವಾಂಶ್ಚಾಶೀಲೋ ವೃತ್ತಹೀನಃ ಕುಲೀನಃ
ಸತ್ಯಾದ್ವಿಭ್ರಷ್ಟೋ ಧಾರ್ಮಿಕಃ ಸ್ತ್ರೀ ಚ ದುಷ್ಟಾ ॥೨೫॥
ರಾಗೀ ಯುಕ್ತಃ ಪಚಮಾನೋಽತ್ಮಹೇತೋ-
ರ್ಮೂರ್ಖೋ ವಕ್ತಾ ನೃಪಹೀನಂ ಚ ರಾಷ್ಟ್ರಮ್ ।
ಏತೇ ಸರ್ವೇ ಶೋಚ್ಯತಾಂ ಯಾನ್ತಿ ರಾಜ-
ನ್ಯಶ್ಚಾಯುಕ್ತಃ ಸ್ನೇಹಹೀನಃ ಪ್ರಜಾಸು ॥೨೬॥

ಜನಕರಾಜ! ಹೇಡಿಯಾದ ಕ್ಷತ್ರಿಯ, ಭಕ್ಷ್ಯಾಭಕ್ಷ್ಯಗಳ ವಿವೇಚನೆಯಿಲ್ಲದೇ ಸಿಕ್ಕಿದುದೆಲ್ಲವನ್ನೂ ತಿನ್ನುವ ಬ್ರಾಹ್ಮಣ, ಧನವನ್ನು ಸಂಪಾದಿಸಲು ಇಚ್ಛೆಯಿಲ್ಲದ ವೈಶ್ಯ, ಸೋಮಾರಿಯಾದ ಶೂದ್ರ, ಒಳ್ಳೆಯ ಶೀಲವಿಲ್ಲದ ವಿದ್ವಾಂಸ, ಸದಾಚಾರವ್ರತವನ್ನು ಪಾಲಿಸದಿರುವ ಕುಲೀನ, ಸತ್ಯದಿಂದ ಭ್ರಷ್ಟನಾಗಿರುವ ಧಾರ್ಮಿಕ, ದುರಾಚಾರಿಣಿಯಾದ ಹೆಂಗಸು, ವಿಷಯಾಸಕ್ತನಾದ ಯೋಗಿ, ತನಗೊಬ್ಬನಿಗಾಗಿಯೇ ಅಡಿಗೆಮಾಡಿಕೊಳ್ಳುವ ಗೃಹಸ್ಥ, ಮೂರ್ಖನಾದ ವಾಗ್ಮಿ, ರಾಜನಿಂದ ರಹಿತವಾದ ರಾಷ್ಟ್ರ, ಜಿತೇಂದ್ರಿಯನಲ್ಲದ ಮತ್ತು ಪ್ರಜೆಗಳಲ್ಲಿ ಸ್ನೇಹಶೂನ್ಯನಾದ ರಾಜ–ಇವರೆಲ್ಲರೂ ಪರ್ಯವಸಾನದಲ್ಲಿ ಶೋಚನೀಯರಾಗುತ್ತಾರೆ."

೨೯೦ನೆಯ ಅಧ್ಯಾಯವು ಮುಗಿಯಿತು.

೨೯೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪರಾಶರಗೀತಾ

ಕರ್ಮಫಲದ ಅನಿವಾರ್ಯತೆ ಮತ್ತು ಪುಣ್ಯಕರ್ಮದಿಂದ ಲಾಭ

ಪರಾಶರರು ಹೇಳುತ್ತಾರೆ :

ಮನೋರಥರಥಂ ಪ್ರಾಪ್ಯ ಇನ್ದ್ರಿಯಾಖ್ಯಹಯಂ ನರಃ ।
ರಶ್ಮಿಭಿರ್ಜ್ಞಾನಸಮ್ಭೂತೈರ್ಯೋ ಗಚ್ಛತಿ ಸ ಬುದ್ಧಿಮಾನ್ ॥೧॥

"ಮನೋರಥವೆಂಬ ರಥವು ದೊರೆತಾಗ ಅದಕ್ಕೆ ಇಂದ್ರಿಯಗಳೆಂಬ

ಕುದುರೆಗಳನ್ನು ಕಟ್ಟಿ, ಜ್ಞಾನದಿಂದ ಹುಟ್ಟಿದ ಲಗಾಮುಗಳ ಮೂಲಕವಾಗಿ ಕುದುರೆಗಳನ್ನು ನಿಯಂತ್ರಿಸುತ್ತಾ ಯಾವನು ಪ್ರಯಾಣಮಾಡುವನೋ–ಅವನೇ ಬುದ್ಧಿವಂತನು.

ಸೇವಾಶ್ರಿತೇನ ಮನಸಾ ವೃತ್ತಿಹೀನಸ್ಯ ಶಸ್ಯತೇ ।
ದ್ವಿಜಾತಿಹಸ್ತಾನ್ನಿರ್ವೃತ್ತಾ ನ ತು ತುಲ್ಯಾತ್ಪರಸ್ಪರಾತ್ ॥೨॥

(ಸೇವಾಧರ್ಮವು ಪ್ರಶಸ್ತವಲ್ಲ. ಆದರೂ) ವೃತ್ತಿಯಿಲ್ಲದ ಮನುಷ್ಯನಿಗೆ ಜೀವಿಕೆಗಾಗಿ ಸೇವೆಮಾಡುವ ಮನಸ್ಸಿದ್ದರೆ ಅವನು ಸಮರ್ಥರಾದ ದ್ವಿಜರ ಸೇವೆಯನ್ನೇ ಮಾಡಬೇಕು. (ಹೀನವರ್ಣದವರ ಸೇವೆಯನ್ನು ಮಾಡಬಾರದು.) ತನ್ನಂತೆಯೇ ವೃತ್ತಿಹೀನರಾದ ಇತರರ ಸೇವೆಯನ್ನೂ ಮಾಡಬಾರದು.

(ವ್ಯಾಖ್ಯಾನಕಾರರು ಆಶ್ರಿತೇನ ದ್ವಿಜ-ಅತಿಹಸ್ತಾನ್ನಿರ್ವೃತ್ತಾ ಎಂದು ಪದವಿಭಾಗಮಾಡಿ ವಿಶೇಷವಾದ ರೀತಿಯಲ್ಲಿ ಅರ್ಥಮಾಡಿರುತ್ತಾರೆ.: **ಆಶ್ರಿತೇನ ನಿರಾಲಮ್ಬೇನ ಮನಸಾ ಸ್ಥಿತಸ್ಯ ಅತ ಏವ ವೃತ್ತಿಹೀನಸ್ಯ ಸೇವಾ =ಭಕ್ತಿಧ್ಯಾನರೂಪೇಶ್ವರಪ್ರಣಧಾನಂ, ಶಸ್ಯತೇ = ನಿರ್ವಿಕಲ್ಪಸಮಾಧಿನಾಽವಸ್ಥಾನಂ ಶ್ರೇಷ್ಠಮಿತ್ಯರ್ಥಃ**–ನಿರಾಲಂಬವಾದ ಮನಸ್ಸಿನಿಂದ ಕೂಡಿರುವ ಅದರಿಂದಲೇ ವೃತ್ತಿಹೀನನಾಗಿರುವ ನಿಷ್ಕರ್ಮಸಂನ್ಯಾಸಿಗೆ ಮುಕ್ತಿಧ್ಯಾನರೂಪವಾದ ಈಶ್ವರಪ್ರತಿಪತ್ತಿಯು ನಿರ್ವಿಕಲ್ಪಸಮಾಧಿಯಿಂದ ಇರುವಿಕೆಯು ಶ್ರೇಷ್ಠವಾದುದು–ಎಂದರ್ಥ. **ಹೇ ದ್ವಿಜ! ಕೀದೃಶೀ ಸೇವಾ? ಅತಿಹಸ್ತಾನ್ನಿರ್ವೃತ್ತಾ ಅತಿ ಹಸ್ತಃ ಅತಿಕ್ರಾನ್ತಕರ್ಮಾ=ಕ್ಷೀಣಕರ್ಮಾ, ಬ್ರಹ್ಮವಿತ್ತಂ ಪ್ರಾಪ್ಯ ನಿರ್ವೃತ್ತಾ= ನಿಷ್ಪನ್ನಾ ಸದಾಚಾರ್ಯಪ್ರಸಾದಾಲ್ಲಬ್ಧಾ ನ ತು ಪರಸ್ಪರಾತ್ತುಲ್ಯಾನ್ನಿರ್ವೃತ್ತಾ.** ಕ್ಷೀಣಕರ್ಮನಾಗಿ, ಬ್ರಹ್ಮೈಶ್ವರ್ಯವನ್ನು ಹೊಂದಿ ಸದಾಚಾರ್ಯಪ್ರಸಾದಲಬ್ಧವಾದ ಸೇವೆ. ತನ್ನಂತೆಯೇ ಇರುವ ಬ್ರಹ್ಮಜ್ಞಾನಿಗಳಿಂದ ಲಬ್ಧವಾದುದಲ್ಲ. ಪರೋಕ್ಷಜ್ಞಾನಿಗಳಿಗೆ ಪರಸ್ಪರವಾಗಿ ಉಪದೇಶದ ಅಧಿಕಾರವಿಲ್ಲ. ಅಪರೋಕ್ಷಜ್ಞಾನಿಯೇ ಉಪದೇಶಕನಾಗಬಲ್ಲನು–ಇತ್ಯಾದಿಯಾಗಿ ವ್ಯಾಖ್ಯಾನಿಸಿದ್ದಾರೆ. ದ್ವಿಜಶಬ್ದಕ್ಕೆ ಕ್ಷತ್ರಿಯನೆಂದು ಅರ್ಥ

ಮಾಡಬಹುದಾದರೂ ಕ್ಷತ್ರಿಯನನ್ನು 'ಹೇ ದ್ವಿಜ' ಎಂದು ಸಂಬೋಧಿಸಿದ ಪ್ರಕರಣಗಳು ಕಂಡುಬರುವುದಿಲ್ಲ. ಆದುದರಿಂದ ಇವರ ವ್ಯಾಖ್ಯಾನವು ವಿದ್ವತ್ಪ್ರತಿಭೆಯಿಂದ ಕೂಡಿದ್ದರೂ ಸಮಂಜಸವಾಗಿದೆಯೆಂದು ಹೇಳುವ ಸಾಧ್ಯತೆಯಿಲ್ಲ. ಹಿಂದೀ ವ್ಯಾಖ್ಯಾನಕಾರರೂ ಇವರ ವ್ಯಾಖ್ಯಾನವನ್ನೇ ಸ್ವಲ್ಪಮಟ್ಟಿಗೆ ಅನುಸರಿಸಿದ್ದಾರೆ.)

ಆಯುರ್ನ ಸುಲಭಂ ಲಬ್ಧ್ವಾ ನಾವಕರ್ಷೇದ್ವಿಶಾಮ್ಪತೇ ।
ಉತ್ಕರ್ಷಾರ್ಥಂ ಪ್ರಯತೇತ ನರಃ ಪುಣ್ಯೇನ ಕರ್ಮಣಾ ॥೩॥

ಪ್ರಜಾನಾಥನೇ! ಮನುಷ್ಯನಿಗೆ ಆಯುಷ್ಯವೆಂಬುದು ಸುಲಭವಾಗಿ ಲಭಿಸತಕ್ಕುದಲ್ಲ. ಅದು ಅತ್ಯಂತ ದುರ್ಲಭವಾದುದು. ಅಂತಹ ಅಮೋಘ ವಾದ ಆಯುಷ್ಯವನ್ನು ಪಡೆದು ತನ್ನ ಅಧಃಪತನವನ್ನು ತಂದುಕೊಳ್ಳ ಬಾರದು. ಪುಣ್ಯಕರ್ಮಗಳ ಮೂಲಕವಾಗಿ ಆತ್ಮೋನ್ನತಿಗೆ ಸತತವಾಗಿ ಪ್ರಯತ್ನಿಸಬೇಕು.

ವರ್ಣೇಭ್ಯೋ ಹಿ ಪರಿಭ್ರಷ್ಟೋ ನ ವೈ ಸಮ್ಮಾನಮರ್ಹತಿ ।
ನ ತು ಯಃ ಸತ್ಕ್ರಿಯಾಂ ಪ್ರಾಪ್ಯ ರಾಜಸಂ ಕರ್ಮ ಸೇವತೇ ॥೪॥

ಯಾವ ಮನುಷ್ಯನು ದುಷ್ಕರ್ಮಗಳನ್ನು ಮಾಡಿ ವರ್ಣಗಳಿಂದ ಭ್ರಷ್ಟ ನಾಗಿ ಹೋಗುವನೋ–ಅಂತಹ ಮನುಷ್ಯನು ಸಮ್ಮಾನಕ್ಕೆ ಯೋಗ್ಯನಲ್ಲ. ಯಾವನು ಸಾತ್ತ್ವಿಕನಾಗಿದ್ದು ಸರ್ವರಿಂದಲೂ ಸಮ್ಮಾನಿತನಾಗಿ ಅನಂತರ ರಾಜಸಕರ್ಮಗಳನ್ನು ಮಾಡುವನೋ–ಅವನೂ ಸಮ್ಮಾನಕ್ಕೆ ಯೋಗ್ಯನಲ್ಲ.

ವರ್ಣೋತ್ಕರ್ಷಮವಾಪ್ನೋತಿ ನರಃ ಪುಣ್ಯೇನ ಕರ್ಮಣಾ ।
ದುರ್ಲಭಂ ತಮಲಬ್ಧ್ವಾ ಹಿ ಹನ್ಯಾತ್ಪಾಪೇನ ಕರ್ಮಣಾ ॥೫॥

ಮನುಷ್ಯನು ಪುಣ್ಯಕರ್ಮಗಳನ್ನು ಮಾಡುವುದರಿಂದ ಉತ್ತಮವರ್ಣ ದಲ್ಲಿ ಜನ್ಮವನ್ನು ಪಡೆಯುತ್ತಾನೆ. ಪಾಪಿಯಾದವನಿಗೆ ಉತ್ತಮವರ್ಣದಲ್ಲಿ ಜನ್ಮವು ಅತ್ಯಂತದುರ್ಲಭವೇ ಸರಿ. ಪಾಪಕರ್ಮಗಳನ್ನು ಆಚರಿಸುವವನು ಹಾಗೆ ಉತ್ತಮವರ್ಣದಲ್ಲಿ ಜನ್ಮವನ್ನು ಪಡೆಯದೇ ತನ್ನನ್ನೇ ಹಾಳುಮಾಡಿ ಕೊಳ್ಳುತ್ತಾನೆ.

ಅಜ್ಞಾನಾದ್ಧಿ ಕೃತಂ ಪಾಪಂ ತಪಸೈವಾಭಿನಿರ್ಣುದೇತ್ ।
ಪಾಪಂ ಹಿ ಕರ್ಮ ಫಲತಿ ಪಾಪಮೇವ ಸ್ವಯಂ ಕೃತಮ್ ।
ತಸ್ಮಾತ್ಪಾಪಂ ನ ಸೇವೇತ ಕರ್ಮ ದುಃಖಫಲೋದಯಮ್ ॥೬॥

ತಿಳಿಯದೇ ಮಾಡಿದ ಪಾಪವನ್ನು ತಪಸ್ಸುಗಳ ಮೂಲಕವಾಗಿ ಪರಿಹರಿಸಿಕೊಳ್ಳಬೇಕು. ತಾನು ಮಾಡಿದ ಪಾಪಕರ್ಮವು ಪಾಪರೂಪವಾದ ದುಃಖರೂಪವಾದ ಫಲವನ್ನೇ ಕೊಡುತ್ತದೆ. ಆದುದರಿಂದ ದುಃಖಮಯ ವಾದ ಫಲವನ್ನು ಕೊಡುವ ಪಾಪಕರ್ಮವನ್ನು ಯಾವಾಗಲೂ ಮಾಡಲೇ ಬಾರದು.

ಪಾಪಾನುಬನ್ಧಂ ಯತ್ಕರ್ಮ ಯದ್ಯಪಿ ಸ್ಯಾನ್ಮಹಾಫಲಮ್ ।
ತನ್ನ ಸೇವೇತ ಮೇಧಾವೀ ಶುಚಿಃ ಕುಶಲಿನಂ ಯಥಾ ॥೭॥

ಒಂದು ಕಾರ್ಯವು ಲೌಕಿಕವಾದ ಮಹಾಫಲವನ್ನೇ ಕೊಡುವುದಾಗಿ ದ್ದರೂ ಅದು ಪಾಪಕ್ಕೆ ಸಂಬಂಧಿಸಿದುದಾಗಿದ್ದರೆ – ಅದರಿಂದ ಪಾಪದ ಸಂಘಟನೆಯಾಗುವುದಾದರೆ–ಅಂತಹ ಕಾರ್ಯವನ್ನು ಮೇಧಾವಿಯಾದ ವನು ಮಾಡಲೇ ಬಾರದು. ಶುಚಿಯಾದವನು (ಸದಾಚಾರಸಂಪನ್ನನು) ನಾಪಿತನಿಂದ ದೂರವಿರುವಂತೆ – ಅಂತಹ ಪಾಪಕರ್ಮದಿಂದ ವಿದ್ವಾಂಸನು ದೂರವಿರಬೇಕು.

ಕಿಂ ಕಷ್ಟಮನುಪಶ್ಯಾಮಿ ಫಲಂ ಪಾಪಸ್ಯ ಕರ್ಮಣಃ ।
ಪ್ರತ್ಯಾಪನ್ನಸ್ಯ ಹಿ ತತೋ ನಾತ್ಮಾ ತಾವದ್ವಿರೋಚತೇ ॥೮॥

'ಪಾಪಕರ್ಮದ ಫಲರೂಪವಾಗಿ ನನಗೆ ಯಾವ ಕಷ್ಟವು ಪ್ರಾಪ್ತ ವಾಗಿದೆ? (ಅಧಿಕವಾಗಿ ಸಂಪಾದನೆಯಾಗುತ್ತಿದ್ದು ಸುಖವಾಗಿಯೇ ಇದ್ದೇನೆ.)' ಹೀಗೆ ಭಾವಿಸಿ ಪಾಪಕರ್ಮಗಳಲ್ಲಿಯೇ ಪ್ರವೃತ್ತನಾದ ಮನುಷ್ಯನಿಗೆ ಆತ್ಮ ಚಿಂತನೆಯು ರುಚಿಸುವುದಿಲ್ಲ.

ಪ್ರತ್ಯಾಪತ್ತಿಶ್ಚ ಯಸ್ಯೇಹ ಬಾಲಿಶಸ್ಯ ನ ಜಾಯತೇ ।
ತಸ್ಯಾಪಿ ಸುಮಹಾಂಸ್ತಾಪಃ ಪ್ರಸ್ಥಿತಸ್ಯೋಪಜಾಯತೇ ॥೯॥

ಈ ಪ್ರಪಂಚದಲ್ಲಿ ಯಾವನಿಗೆ ತತ್ತ್ವಜ್ಞಾನವು (ವೈರಾಗ್ಯವು)

ಉಂಟಾಗುವುದಿಲ್ಲವೋ–ಅಂತಹ ಮೂರ್ಖನು ಪರಲೋಕಕ್ಕೆ ಹೋದರೂ ಅಲ್ಲಿಯೂ ಅವನಿಗೆ ಮಹಾಸಂತಾಪವೇ ಪ್ರಾಪ್ತವಾಗುತ್ತದೆ.

ವಿರಕ್ತಂ ಶೋಧ್ಯತೇ ವಸ್ತ್ರಂ ನ ತು ಕೃಷ್ಣೋಪಸಂಹಿತಮ್ ।
ಪ್ರಯತ್ನೇನ ಮನುಷ್ಯೇನ್ದ್ರ ಪಾಪಮೇವಂ ನಿಬೋಧ ಮೇ ॥೧೦॥

ಬಣ್ಣವಿಲ್ಲದ ವಸ್ತ್ರವನ್ನು ಒಗೆದು ಸ್ವಚ್ಛಗೊಳಿಸಬಹುದು. ಆದರೆ ಕಪ್ಪುಬಟ್ಟೆಯನ್ನು ಎಷ್ಟೇ ಒಗೆದರೂ ಬಿಳಿಯದಾಗುವುದಿಲ್ಲ. ಹಾಗೆಯೇ ಅಜ್ಞಾನದಿಂದ ಮಾಡಿದ ಪಾಪಗಳನ್ನು ಕೃಚ್ಛ್ರ-ಚಾಂದ್ರಾಯಣಾದಿ ತಪಸ್ಸುಗಳಿಂದ ಕಳೆದುಕೊಳ್ಳಬಹುದು. ಅರ್ಥಲೋಭದಿಂದ ತಿಳಿದೂ ತಿಳಿದೂ ಮಾಡಿದ ಪಾಪಗಳನ್ನು ಕಳೆದುಕೊಳ್ಳಲು ಸಾಧ್ಯವೇ ಆಗುವುದಿಲ್ಲ.

ಸ್ವಯಂ ಕೃತ್ವಾ ತು ಯಃ ಪಾಪಂ ಶುಭಮೇವಾನುತಿಷ್ಠತಿ ।
ಪ್ರಾಯಶ್ಚಿತ್ತಂ ನರಃ ಕರ್ತುಮುಭಯಂ ಸೋಽಶ್ನುತೇ ಪೃಥಕ್ ॥೧೧॥

ಯಾವನು ತಿಳಿದೂ-ತಿಳಿದೂ ಪಾಪಕರ್ಮವನ್ನು ಮಾಡಿ ಅನಂತರ ತಾನು ಮಾಡಿದ ಪಾಪಕರ್ಮಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವ ಉದ್ದೇಶದಿಂದ ಪುಣ್ಯಕರ್ಮಗಳನ್ನು ಮಾಡುವನೋ–ಅವನು ಶುಭಾಶುಭ ಕರ್ಮಗಳ ಫಲವನ್ನು ಪ್ರತ್ಯೇಕ-ಪ್ರತ್ಯೇಕವಾಗಿಯೇ ಅನುಭವಿಸುತ್ತಾನೆ.

ಅಜ್ಞಾನಾತ್ತು ಕೃತಾಂ ಹಿಂಸಾಮಹಿಂಸಾ ವ್ಯಪಕರ್ಷತಿ ।
ಬ್ರಾಹ್ಮಣಾಃ ಶಾಸ್ತ್ರನಿರ್ದೇಶಾದಿತ್ಯಾಹುರ್ಬ್ರಹ್ಮವಾದಿನಃ ॥೧೨॥

ತಥಾ ಕಾಮಕೃತಂ ನಾಸ್ಯ ವಿಹಿಂಸೈವಾನುಕರ್ಷತಿ ।
ಇತ್ಯಾಹುರ್ಬ್ರಹ್ಮಶಾಸ್ತ್ರಜ್ಞಾ ಬ್ರಾಹ್ಮಣಾ ಬ್ರಹ್ಮವಾದಿನಃ ॥೧೩॥

ಅಜ್ಞಾನದಿಂದ ಮಾಡಿದ ಹಿಂಸೆಯ ಮೂಲಕವಾಗಿ ಸಂಭವಿಸಿದ ಪಾಪವನ್ನು ಅಹಿಂಸಾವ್ರತವು ತೊಡೆದುಹಾಕುತ್ತದೆ – ಎಂದು ಬ್ರಹ್ಮವಾದಿಗಳಾದ ಬ್ರಾಹ್ಮಣರು ಶಾಸ್ತ್ರನಿರ್ದೇಶಾನುಸಾರವಾಗಿ ಹೇಳಿರುತ್ತಾರೆ. ಆದರೆ ಇಚ್ಛಾಪೂರ್ವಕವಾಗಿಯೇ ಮಾಡಿದ ಹಿಂಸೆಯಿಂದ ಸಂಭವಿಸಿದ ಪಾಪವನ್ನು ಅಹಿಂಸಾವ್ರತವೂ ತೊಡೆದುಹಾಕಲಾರದು – ಎಂದು ಬ್ರಹ್ಮಶಾಸ್ತ್ರಜ್ಞರಾದ ಬ್ರಹ್ಮವಾದಿಗಳಾದ ಬಾಹ್ಮಣರು ಹೇಳುತ್ತಾರೆ.

ಅಹಂ ತು ತಾವತ್ಪಶ್ಯಾಮಿ ಕರ್ಮ ಯದ್ವರ್ತತೇ ಕೃತಮ್ ।
ಗುಣಯುಕ್ತಂ ಪ್ರಕಾಶಂ ವಾ ಪಾಪೇನಾನುಪಸಂಹಿತಮ್ ॥೧೪॥

ನಾನಾದರೋ ಈ ವಿಷಯವನ್ನು ಸ್ಪಷ್ಟರೂಪದಿಂದ ಹೀಗೆ ಕಾಣುತ್ತಿದ್ದೇನೆ : ಮಾಡಿದ ಕರ್ಮವು ಪಾಪಯುಕ್ತವಾಗಿರಲಿ, ಪುಣ್ಯಯುಕ್ತವಾಗಿರಲಿ–ಬಹಿರಂಗದಲ್ಲಿ ಮಾಡಿದುದಾಗಿರಲಿ, ಅಂತರಂಗದಲ್ಲಿಯೇ ಮಾಡಿದುದಾಗಿರಲಿ–ತಿಳಿದು ಮಾಡಲ್ಪಟ್ಟಿರಲಿ, ತಿಳಿಯದೆಯೇ ಮಾಡಲ್ಪಟ್ಟಿರಲಿ–ಅದಕ್ಕೆ ತಕ್ಕುದಾದ ಫಲವನ್ನು ಕೊಟ್ಟೇ ತೀರುತ್ತದೆ.

ಯಥಾ ಸೂಕ್ಷ್ಮಾಣಿ ಕರ್ಮಾಣಿ ಫಲನ್ತೀಹ ಯಥಾತಥಮ್ ।
ಬುದ್ಧಿಯುಕ್ತಾನಿ ತಾನೀಹ ಕೃತಾನಿ ಮನಸಾ ಸಹ ॥೧೫॥

ಭವತ್ಯಲ್ಪಫಲಂ ಕರ್ಮ ಸೇವಿತಂ ನಿತ್ಯಮುಲ್ಬಣಮ್ ।
ಅಬುದ್ಧಿಪೂರ್ವಂ ಧರ್ಮಜ್ಞ ಕೃತಮುಗ್ರೇಣ ಕರ್ಮಣಾ ॥೧೬॥

ಧರ್ಮಜ್ಞನೇ! ಬುದ್ಧಿಯಿಂದ ವಿಚಾರಮಾಡಿ ಮನಃಪೂರ್ವಕವಾಗಿ ಮಾಡಿದ ಸ್ಥೂಲವಾದ ಅಥವಾ ಸೂಕ್ಷ್ಮವಾದ ಕರ್ಮಗಳಿಗೆ ಯಥಾಯೋಗ್ಯವಾದ ಫಲವು ಸಿಕ್ಕಿಯೇ ಸಿಕ್ಕುತ್ತದೆ. ಹಾಗೆಯೇ ಹಿಂಸೆಯೇ ಮೊದಲಾದ ಉಗ್ರಕರ್ಮಗಳ ಮೂಲಕವಾಗಿ ತಿಳಿಯದೇ ಭಯಂಕರವಾದ ಪಾಪಗಳನ್ನು ಅನುದಿನವೂ ಮಾಡುತ್ತಿದ್ದರೆ–ಅದಕ್ಕೂ ತಕ್ಕಫಲವು ಸಿಕ್ಕಿಯೇ ಸಿಕ್ಕುತ್ತದೆ. ಆದರೆ ತಿಳಿದು ಮಾಡುವ ಕರ್ಮಕ್ಕಿಂತಲೂ ತಿಳಿಯದೇ ಮಾಡಿದ ಕರ್ಮಕ್ಕೆ ಫಲವು ಅಲ್ಪವಾಗಿರುತ್ತದೆ. ಇದೇ ಎರಡಕ್ಕೂ ಇರುವ ವ್ಯತ್ಯಾಸ.

ಕೃತಾನಿ ಯಾನಿ ಕರ್ಮಾಣಿ ದೈವತೈರ್ಮುನಿಭಿಸ್ತಥಾ ।
ನ ಚರೇತ್ತಾನಿ ಧರ್ಮಾತ್ಮಾ ಶ್ರುತ್ವಾ ಚಾಪಿ ನ ಕುತ್ಸಯೇತ್ ॥೧೭॥

ದೇವತೆಗಳಿಂದಾಗಲೀ, ಮುನಿಗಳಿಂದಾಗಲೀ–ಯಾವುದಾದರೂ ನಿಷಿದ್ಧ ಕರ್ಮವು ಮಾಡಲ್ಪಟ್ಟಿದ್ದರೆ – ಧರ್ಮಾತ್ಮನಾದ ಪುರುಷನು ಅಂತಹ ಕರ್ಮಗಳನ್ನು ತಾನೂ ಮಾಡಲು ಹೋಗಬಾರದು. ದೇವತೆಗಳೂ ಮತ್ತು ಋಷಿಗಳೂ ಅಂತಹ ಕರ್ಮಗಳನ್ನು ಮಾಡಿದರೆಂದು ಕೇಳಿದಾಗಲೂ ಅವರನ್ನು ನಿಂದಿಸಬಾರದು. (ಕೆಲವು ಕರ್ಮಗಳು ನಮಗೆ ನಿಷಿದ್ಧವಾಗಿ ಪಾಪಕರವಾಗಿದ್ದರೂ ಮಹಾಮಹಿಮರಾದ ದೇವತೆಗಳೂ, ಋಷಿಗಳೂ ಅವು

ಗಳನ್ನು ಆಚರಿಸಿದಾಗ – ಅವರಿಗೆ ಅವು ಪಾಪಕರವಾಗುವುದಿಲ್ಲ. ಕೆಲವು ವೇಳೆ ಅವರಿಗೂ ಪಾಪಕರಗಳಾಗಿದ್ದರೂ ಪಾಪಗಳನ್ನು ಪರಿಹರಿಸಿಕೊಳ್ಳುವ ಶಕ್ತಿಯು ಅವರಿಗಿದೆ. ಆದರೆ ಅಲ್ಪಶಕ್ತಿಯುಳ್ಳ ನಾವು ಅವುಗಳನ್ನು ಆಚರಿಸಿದರೆ ಪತಿತರಾಗುತ್ತೇವೆ. ತಪೋಬಲದಿಂದ ಪಾಪಮುಕ್ತರಾದ ಅಂತಹ ದೇವತೆಗಳನ್ನೂ–ಋಷಿಗಳನ್ನೂ ನಿಂದಿಸಿದರೆ ನಾವೇ ಪಾಪಕ್ಕೆ ಒಳಗಾಗುತ್ತೇವೆ.)

ಸಂಚಿನ್ತ್ಯ ಮನಸಾ ರಾಜನ್ವಿದಿತ್ವಾ ಶಕ್ಯಮಾತ್ಮನಃ ।
ಕರೋತಿ ಯಃ ಶುಭಂ ಕರ್ಮ ಸ ವೈ ಭದ್ರಾಣಿ ಪಶ್ಯತಿ ॥೧೮॥

ಜನಕರಾಜ! ಯಾವ ಮನುಷ್ಯನು ಮನಸ್ಸಿನಿಂದ ಚೆನ್ನಾಗಿ ವಿಚಾರ ಮಾಡಿ ನನಗೆ ಈ ಕಾರ್ಯವನ್ನು ಮಾಡಲು ಶಕ್ಯವಿದೆ – ಎಂದು ತಿಳಿದು ಶುಭಕರ್ಮವನ್ನು ಮಾಡುವನೋ – ಅವನು ಶುಭೋದಯವನ್ನು ಕಾಣು ತ್ತಾನೆ.

ನವೇ ಕಪಾಲೇ ಸಲಿಲಂ ಸಂನ್ಯಸ್ತಂ ಹೀಯತೇ ಯಥಾ ।
ನವೇತರೇ ತಥಾಭಾವಂ ಪ್ರಾಪ್ನೋತಿ ಸುಖಭಾವಿತಮ್ ॥೧೯॥

ಹೊಸದಾದ, ಬೇಯಿಸದೇ ಇರುವ ಮಡಕೆಯಲ್ಲಿಟ್ಟ ನೀರು ಬಹಳ ಬೇಗ ನಷ್ಟವಾಗಿಹೋಗುತ್ತದೆ. ಅದೇ ನೀರನ್ನು ಚೆನ್ನಾಗಿ ಬೇಯಿಸಿರುವ ಹಳೆಯದಾದ ಮಡಕೆಯಲ್ಲಿಟ್ಟರೆ ಅದು ಹಾಗೆಯೇ ಇರುತ್ತದೆ. ಹಾಗೆಯೇ ಅಪಕ್ವವಾದ ಮನಸ್ಸಿನಿಂದ ಕೂಡಿರುವ ಮನುಷ್ಯನು ಕಷ್ಟಗಳನ್ನು ಅನುಭವಿಸುತ್ತಾನೆ. ಸುಪಕ್ವವಾದ ಮನಸ್ಸಿನಿಂದ ಕೂಡಿರುವ ಮನುಷ್ಯನು ಸುಖಯುಕ್ತವಾದ ಫಲವನ್ನೇ ಹೊಂದುತ್ತಾನೆ.

ಸತೋಯೇಽನ್ಯತ್ತು ಯತ್ತೋಯಂ ತಸ್ಮಿನ್ನೇವ ಪ್ರಸಿಚ್ಯತೇ ।
ವೃದ್ಧೇ ವೃದ್ಧಿಮವಾಪ್ನೋತಿ ಸಲಿಲೇ ಸಲಿಲಂ ಯಥಾ ॥೨೦॥
ಏವಂ ಕರ್ಮಾಣಿ ಯಾನೀಹ ಬುದ್ಧಿಯುಕ್ತಾನಿ ಪಾರ್ಥಿವ ।
ಸಮಾನಿ ಚೈವ ಯಾನೀಹ ತಾನಿ ಪುಣ್ಯತಮಾನ್ಯಪಿ ॥೨೧॥

ಚೆನ್ನಾಗಿ ಬೇಯಿಸಿರುವ ಜಲಯುಕ್ತವಾದ ಮಡಕೆಯಲ್ಲಿ ಮತ್ತಷ್ಟು ನೀರನ್ನು ಹಾಕಿದರೆ ಆ ನೀರೂ ವೃದ್ಧಿಸುತ್ತದೆ. ಮಡಕೆಯೂ ಅಧಿಕವಾದ

ನೀರುಳ್ಳದ್ದಾಗುತ್ತದೆ. ಅದೇ ರೀತಿಯಲ್ಲಿ ಬುದ್ಧಿಯುಕ್ತವಾಗಿ ಶುಭಕರ್ಮಗಳನ್ನು ಮಾಡಿದುದರಿಂದ ಯಾವ ಪುಣ್ಯಫಲವು ಸಂಚಿತವಾಗಿರುವುದೋ ಅದರ ಜೊತೆಗೆ ಅದಕ್ಕೆ ಸಮಾನವಾದ ಮತ್ತಷ್ಟು ಪುಣ್ಯಕರ್ಮಗಳನ್ನು ಮಾಡಿದರೆ ಸಂಚಿತವಾದುದು ಮತ್ತು ನೂತನವಾದುದು ಎರಡೂ ಸೇರಿ ಅಧಿಕಪುಣ್ಯವಾಗುತ್ತದೆ. ಹೀಗೆ ಮಾಡುವುದರಿಂದ ಮನುಷ್ಯನು ಮಹಾ ಪುಣ್ಯಶಾಲಿಯಾಗುತ್ತಾನೆ.

ರಾಜ್ಞಾ ಜೇತವ್ಯಾಃ ಶತ್ರವಶ್ಚೋನ್ನತಾಶ್ಚ
ಸಮ್ಯಕ್ಕರ್ತವ್ಯಂ ಪಾಲನಂ ಚ ಪ್ರಜಾನಾಮ್ ।
ಅಗ್ನಿಶ್ಚೇಯೋ ಬಹುಭಿಶ್ಚಾಪಿ ಯಜ್ಞೈ-
ರನ್ತ್ಯೇ ಮಧ್ಯೇ ವಾ ವನಮಾಶ್ರಿತ್ಯ ಸ್ಥೇಯಮ್ ॥೨೨॥

ರಾಜನಾದವನು ಪ್ರವೃದ್ಧರಾದ ಶತ್ರುಗಳನ್ನು ನಾಲ್ಕು ಉಪಾಯಗಳಿಂದ ಜಯಿಸಬೇಕು. ಪ್ರಜೆಗಳನ್ನು ನ್ಯಾಯೋಚಿತವಾದ ರೀತಿಯಲ್ಲಿ ಪರಿಪಾಲನೆ ಮಾಡಬೇಕು. ಬಹುವಿಧವಾದ ಯಜ್ಞಗಳಿಂದ ಅಗ್ನಿದೇವನನ್ನು ತೃಪ್ತಿಗೊಳಿಸಬೇಕು. ವೈರಾಗ್ಯವುಂಟಾದನಂತರ ಮಧ್ಯವಯಸ್ಸಿನಲ್ಲಿಯೋ ಅಥವಾ ಇಳಿವಯಸ್ಸಿನಲ್ಲಿಯೋ ಅರಣ್ಯವನ್ನಾಶ್ರಯಿಸಿ ಅಲ್ಲಿಯೇ ವಾಸ ಮಾಡಬೇಕು.

ದಮಾನ್ವಿತಃ ಪುರುಷೋ ಧರ್ಮಶೀಲೋ
ಭೂತಾನಿ ಚಾತ್ಮಾನಮಿವಾನುಪಶ್ಯೇತ್ ।
ಗರೀಯಸಃ ಪೂಜಯೇದಾತ್ಮಶಕ್ತ್ಯಾ
ಸತ್ಯೇನ ಶೀಲೇನ ಸುಖಂ ನರೇನ್ದ್ರ ॥೨೩॥

ನರೇಂದ್ರ! ಪುರುಷನು ಜಿತೇಂದ್ರಿಯನಾಗಿದ್ದು ಧರ್ಮಶೀಲನಾಗಿ ಸಮಸ್ತಪ್ರಾಣಿಗಳನ್ನೂ ತನ್ನಂತೆಯೇ ಕಾಣಬೇಕು. ಯಾರು ವಿದ್ಯೆ ಮತ್ತು ತಪಸ್ಸುಗಳಲ್ಲಿ ತನಗಿಂತಲೂ ಅಧಿಕರಾಗಿರುವರೋ ಮತ್ತು ಗುರು ಜನರೋ-ಅವರನ್ನು ಯಥಾಶಕ್ತಿ ಸತ್ಕರಿಸಬೇಕು. ಸತ್ಯಭಾಷಣ ಮತ್ತು ಒಳ್ಳೆಯ ನಡತೆಗಳಿಂದ ಸುಖವುಂಟಾಗುತ್ತದೆ."

೨೯೧ನೆಯ ಅಧ್ಯಾಯವು ಮುಗಿಯಿತು.

ಪರಾಶರಗೀತಾ

ಧರ್ಮೋಪಾರ್ಜಿತವಾದ ಧನದ ಶ್ರೇಷ್ಠತೆ: ಅತಿಥಿಸತ್ಕಾರದ ಮಹತ್ತ್ವ: ಐದು ವಿಧವಾದ ಋಣಗಳಿಂದ ಮುಕ್ತನಾಗುವ ವಿಧಾನ: ಭಗವನ್ನಾಮದ ಮಹಿಮೆ: ಸದಾಚಾರದಿಂದ ಮತ್ತು ಗುರುಜನರ ಸೇವೆಯಿಂದ ಪ್ರಾಪ್ತವಾಗುವ ಲಾಭ

ಪರಾಶರರು ಹೇಳುತ್ತಾರೆ :

ಕಃ ಕಸ್ಯ ಚೋಪಕುರುತೇ ಕಶ್ಚ ಕಸ್ಮೈ ಪ್ರಯಚ್ಛತಿ ।
ಪ್ರಾಣೀ ಕರೋತ್ಯಯಂ ಕರ್ಮ ಸರ್ವಮಾತ್ಮಾರ್ಥಮಾತ್ಮನಾ ॥೧॥

“ಜನಕರಾಜ! ಯಾವನು ಯಾರಿಗೆ ಯಾವ ಉಪಕಾರಮಾಡುತ್ತಾನೆ? ಯಾವನು ಯಾರಿಗೆ ಏನನ್ನು ಕೊಡುತ್ತಾನೆ? ವಾಸ್ತವವಾಗಿ ನೋಡಿದರೆ ಮನುಷ್ಯನು ಈ ಎಲ್ಲ ಕರ್ಮಗಳನ್ನೂ (ಉಪಕಾರ, ದಾನ ಇತ್ಯಾದಿಗಳು) ಸ್ವಪ್ರಯೋಜನಕ್ಕಾಗಿಯೇ ಮಾಡುತ್ತಾನೆ.

ಗೌರವೇಣ ಪರಿತ್ಯಕ್ತಂ ನಿಃಸ್ನೇಹಂ ಪರಿವರ್ಜಯೇತ್ ।
ಸೋದರ್ಯಂ ಭ್ರಾತರಮಪಿ ಕಿಮುತಾನ್ಯಂ ಪೃಥಗ್ಜನಮ್ ॥೨॥

ಒಡಹುಟ್ಟಿದವನೇ ಆಗಿದ್ದರೂ ಮರ್ಯಾದೆಗೆಟ್ಟಿದ್ದರೆ ಮತ್ತು ಪ್ರೀತಿ ರಹಿತನಾಗಿದ್ದರೆ – ಅಂತಹವನನ್ನೂ ಪರಿತ್ಯಜಿಸಬೇಕು. ಹೀಗಿರುವಾಗ ಸಾಧಾರಣಮನುಷ್ಯರ ವಿಷಯದಲ್ಲಿ ಹೇಳುವುದೇನಿದೆ?

ವಿಶಿಷ್ಟಸ್ಯ ವಿಶಿಷ್ಟಾಚ್ಚ ತುಲ್ಯೌ ದಾನಪತಿಗ್ರಹೌ ।
ತಯೋಃ ಪುಣ್ಯತರಂ ದಾನಂ ತದ್ದ್ವಿಜಸ್ಯ ಪ್ರಯಚ್ಛತಃ ॥೩॥

ಶ್ರೇಷ್ಠನಾದ ಪುರುಷನು ಶ್ರೇಷ್ಠನಾದ ಪುರುಷನಿಗೆ ದಾನಕೊಡಬೇಕು. ಶ್ರೇಷ್ಠನಾದವನಿಂದಲೇ ದಾನವನ್ನು ಸ್ವೀಕರಿಸಬೇಕು. ದಾನ-ಪ್ರತಿಗ್ರಹ ಗಳೆರಡರ ವಿಷಯದಲ್ಲಿಯೂ ಶ್ರೇಷ್ಠರಿಗೆ ಸಾಮ್ಯ. ಆದರೂ ಶ್ರೇಷ್ಠನಾದವ ನಿಂದ ಪ್ರತಿಗ್ರಹಮಾಡುವುದಕ್ಕಿಂತಲೂ ಅವನಿಗೆ ದಾನಮಾಡುವುದೇ ಹೆಚ್ಚು ಪುಣ್ಯಕರವಾದುದು.

ನ್ಯಾಯಾಗತಂ ಧನಂ ಚೈವ ನ್ಯಾಯೇನೈವ ವಿವರ್ಧಿತಮ್ ।
ಸಂರಕ್ಷ್ಯಂ ಯತ್ನಮಾಸ್ಥಾಯ ಧರ್ಮಾರ್ಥಮಿತಿ ನಿಶ್ಚಯಃ ॥೪॥

ನ್ಯಾಯವಾದ ರೀತಿಯಲ್ಲಿ ಸಂಪಾದಿಸಿದ ಮತ್ತು ನ್ಯಾಯವಾದ ರೀತಿಯಲ್ಲಿ ಅಧಿಕಗೊಳಿಸಿದ ಧನವನ್ನು ಧರ್ಮಕಾರ್ಯಗಳನ್ನು ಮಾಡುವ ಉದ್ದೇಶದಿಂದ ಪ್ರಯತ್ನಪೂರ್ವಕವಾಗಿ ಸಂರಕ್ಷಿಸಬೇಕೆಂಬುದು ಜ್ಞಾನಿಗಳ ನಿಶ್ಚಯವಾಗಿದೆ.

ನ ಧರ್ಮಾರ್ಥೀ ನೃಶಂಸೇನ ಕರ್ಮಣಾ ಧನಮರ್ಜಯೇತ್ ।
ಶಕ್ತಿತಃ ಸರ್ವಕಾರ್ಯಾಣಿ ಕುರ್ಯಾನ್ನರ್ಧಿಮನುಸ್ಮರೇತ್ ॥೫॥

ಧರ್ಮಾಪೇಕ್ಷಿಯು ಕ್ರೂರವಾದ ಕರ್ಮಗಳ ಮೂಲಕವಾಗಿ ಹಣವನ್ನು ಸಂಪಾದಿಸಬಾರದು. ತನ್ನ ಶಕ್ತಿಗೆ ಅನುಗುಣವಾಗಿ ಎಲ್ಲ ಕಾರ್ಯಗಳನ್ನು ಮಾಡಬೇಕು. ಹಣವನ್ನು ಅಧಿಕಗೊಳಿಸುವ ವಿಷಯವನ್ನೇ ಯಾವಾಗಲೂ ಚಿಂತಿಸುತ್ತಿರಬಾರದು.

ಆಪೋ ಹಿ ಪ್ರಯತಃ ಶೀತಾಸ್ತಾಪಿತಾ ಜ್ವಲನೇನ ವಾ ।
ಶಕ್ತಿತೋಽತಿಥಯೇ ದತ್ತ್ವಾ ಕ್ಷುಧಾರ್ತಾಯಾಶ್ನುತೇ ಫಲಮ್ ॥೬॥

ಹಸಿವಿನಿಂದ ಪೀಡಿತನಾದ ಅತಿಥಿಗೆ ತಣ್ಣಗಿರುವ ನೀರನ್ನೋ, ಬೆಂಕಿಯಲ್ಲಿ ಕಾಯಿಸಿ ಬಿಸಿಮಾಡಿದ ನೀರನ್ನೋ, ಅನ್ನವನ್ನೋ ವಿನಯಶೀಲನಾಗಿ ತನ್ನ ಶಕ್ತಿಗೆ ಅನುಗುಣವಾಗಿ ಪವಿತ್ರಭಾವದಿಂದ ಅರ್ಪಿಸುವವನು ಉತ್ತಮವಾದ ಫಲವನ್ನು ಹೊಂದುತ್ತಾನೆ.

ರನ್ತಿದೇವೇನ ಲೋಕೇಷ್ಟಾ ಸಿದ್ಧಿಃ ಪ್ರಾಪ್ತಾ ಮಹಾತ್ಮನಾ ।
ಫಲಪತ್ರೈರಥೋ ಮೂಲೈರ್ಮುನೀನರ್ಚಿತವಾಂಶ್ಚ ಸಃ ॥೭॥

ಮಹಾತ್ಮನಾದ ರಂತಿದೇವನು ಫಲ-ಮೂಲ-ಪತ್ರಗಳಿಂದ ಋಷಿಜನರನ್ನು ಸತ್ಕರಿಸುತ್ತಿದ್ದನು. ಅದರಿಂದ ಆ ಮಹಾತ್ಮನಿಗೆ ಪ್ರಪಂಚದಲ್ಲಿ ಜನರು ಅಭಿಲಾಷಿಸುವ ಮಹಾಸಿದ್ಧಿಯು ಪ್ರಾಪ್ತವಾಯಿತು.

ತೈರೇವ ಫಲಪತ್ರೈಶ್ಚ ಸ ಮಾಠರಮತೋಷಯತ್ ।
ತಸ್ಮಾಲ್ಲೇಭೇ ಪರಂ ಸ್ಥಾನಂ ಶೈಬ್ಯೋಽಪಿ ಪೃಥಿವೀಪತಿಃ ॥೮॥

ಪೃಥ್ವೀಪಾಲಕನಾದ ಶೈಬ್ಯನೂ ಅದೇ ಫಲ-ಮೂಲ-ಪತ್ರಗಳಿಂದಲೇ ಮಾಠರನೆಂಬ ಮುನಿಯನ್ನು ಸಂತುಷ್ಟಿಗೊಳಿಸಿ ಅದರ ಫಲವಾಗಿ ಉತ್ತಮ ಸ್ಥಾನವನ್ನು ಹೊಂದಿದನು.

ದೇವತಾತಿಥಿಭೃತ್ಯೇಭ್ಯಃ ಪಿತೃಭ್ಯಶ್ಚಾತ್ಮನಸ್ತಥಾ ।
ಋಣವಾಞ್ಜಾಯತೇ ಮರ್ತ್ಯಸ್ತಸ್ಮಾದನೃಣತಾಂ ವ್ರಜೇತ್ ॥೯॥

ಪ್ರತಿಯೊಬ್ಬ ಮನುಷ್ಯನೂ ದೇವತೆಗಳ, ಅತಿಥಿಗಳ, ಭೃತ್ಯರ (ಕುಟುಂಬದ ಜನರ), ಪಿತೃಗಳ ಮತ್ತು ತನ್ನದೇ ಆದ ಋಣಗಳನ್ನು ಹೊತ್ತು ಹುಟ್ಟುತ್ತಾನೆ. ಆ ಋಣಗಳೆಲ್ಲವನ್ನೂ ಯಥಾವಿಧಿಯಾಗಿ ತೀರಿಸಿಕೊಳ್ಳು ವುದರ ಮೂಲಕ ಋಣಮುಕ್ತನಾಗಬೇಕು.

ಸ್ವಾಧ್ಯಾಯೇನ ಮಹರ್ಷಿಭ್ಯೋ ದೇವೇಭ್ಯೋ ಯಜ್ಞಕರ್ಮಣಾ ।
ಪಿತೃಭ್ಯಃ ಶ್ರಾದ್ಧದಾನೇನ ನೃಣಾಮಭ್ಯರ್ಚನೇನ ಚ ॥೧೦॥

ವೇದ-ಶಾಸ್ತ್ರಗಳ ಅಧ್ಯಯನದಿಂದ ಋಷಿಗಳ ಋಣವನ್ನೂ, ಯಜ್ಞ ಕರ್ಮದಿಂದ ದೇವತೆಗಳ ಋಣವನ್ನೂ, ಶ್ರಾದ್ಧ ಮತ್ತು ದಾನಗಳಿಂದ ಪಿತೃಋಣವನ್ನೂ, ಸ್ವಾಗತ-ಸತ್ಕಾರ-ಸೇವೆಗಳಿಂದ ಮನುಷ್ಯರ (ಅತಿಥಿಗಳ) ಋಣವನ್ನೂ ಪರಿಹರಿಸಿಕೊಳ್ಳಬೇಕು.

ವಾಚಾ ಶೇಷಾವಹಾರ್ಯೇಣ ಪಾಲನೇನಾತ್ಮನೋಽಪಿ ಚ ।
ಯಥಾವದ್ಭೃತ್ಯವರ್ಗಸ್ಯ ಚಿಕೀರ್ಷೇತ್ಕರ್ಮ ಆದಿತಃ ॥೧೧॥

ಹೀಗೆಯೇ ವೇದಗಳ ಅಧ್ಯಯನ-ಮನನಗಳಿಂದಲೂ, ಯಜ್ಞಶೇಷ ವನ್ನು (ವಿಘಸವನ್ನು) ಭೋಜನಮಾಡುವುದರಿಂದಲೂ, ತನ್ನನ್ನು ರಕ್ಷಿಸಿಕೊಳ್ಳುವುದರಿಂದಲೂ ಮನುಷ್ಯನು ಆತ್ಮಋಣದಿಂದ ವಿಮುಕ್ತನಾಗು ತ್ತಾನೆ. ಭರಣ-ಪೋಷಣೆಗಳಿಗೆ ಯೋಗ್ಯರಾದ ಕುಟುಂಬವರ್ಗದವರ ಪಾಲನ-ಪೋಷಣೆಗಳನ್ನು ಮೊದಲಿನಿಂದಲೂ ಯಥಾವತ್ತಾಗಿ ಮಾಡುತ್ತಿರ ಬೇಕು. ಅದರಿಂದ ಮನುಷ್ಯನು ಭೃತ್ಯಋಣದಿಂದ ಮುಕ್ತನಾಗುತ್ತಾನೆ.

ಪ್ರಯತ್ನೇನ ಚ ಸಂಸಿದ್ಧಾ ಧನೈರಪಿ ವಿವರ್ಜಿತಾಃ ।
ಸಮ್ಯಗ್ಘುತ್ವಾ ಹುತವಹಂ ಮುನಯಃ ಸಿದ್ಧಿಮಾಗತಾಃ ॥೧೨॥

ಐಶ್ವರ್ಯಗಳಿಂದ ರಹಿತರಾದ ಮುನಿಜನರೆಲ್ಲರೂ ತಮ್ಮ ಒಳ್ಳೆಯ ಪ್ರಯತ್ನಗಳಿಂದಲೇ ಸಿದ್ಧಿಯನ್ನು ಪಡೆದಿರುತ್ತಾರೆ. ಮುನಿಜನರು ವಿಧಿ ಪೂರ್ವಕವಾಗಿ ಅಗ್ನಿಹೋತ್ರವನ್ನು ಶ್ರದ್ಧೆಯಿಂದ ಮಾಡಿಯೇ ಸಿದ್ಧಿಯನ್ನು ಪಡೆದಿರುತ್ತಾರೆ.

ವಿಶ್ವಾಮಿತ್ರಸ್ಯ ಪುತ್ರತ್ವಮೃಚೀಕತನಯೋಽಗಮತ್ ।
ಋಗ್ಭಿಃ ಸ್ತುತ್ವಾ ಮಹಾಬಾಹೋ ದೇವಾನ್ವೈ ಯಜ್ಞಭಾಗಿನಃ ॥೧೩॥

ಮಹಾಬಾಹುವೇ! ಋಚೀಕನ ಮಗನಾದ ಶುನಶ್ಶೇಫನು ಯಜ್ಞದಲ್ಲಿ ಭಾಗವಹಿಸಿದ್ದ ದೇವತೆಗಳನ್ನು (ಇಂದ್ರ ಮತ್ತು ಉಪೇಂದ್ರರನ್ನು) ಋಙ್ಮಂತ್ರಗಳಿಂದ ಸ್ತೋತ್ರಮಾಡಿ ವಿಶ್ವಾಮಿತ್ರನ ಮಗನಾದನು.

ಗತಃ ಶುಕ್ರತ್ವಮುಶನಾ ದೇವದೇವಪ್ರಸಾದನಾತ್ ।
ದೇವೀಂ ಸ್ತುತ್ವಾ ತು ಗಗನೇ ಮೋದತೇ ಯಶಸಾ ವೃತಃ ॥೧೪॥

ಮಹರ್ಷಿಯಾದ ಉಶನಸನು ದೇವದೇವನಾದ ಮಹಾದೇವನನ್ನು ಪ್ರಾರ್ಥಿಸಿ ಅವನ ಅನುಗ್ರಹದಿಂದ ಶುಕ್ರತ್ವವನ್ನು ಪಡೆದನು ಮತ್ತು ಶುಕ್ರನೆಂಬ ಹೆಸರಿನಿಂದಲೇ ಪ್ರಸಿದ್ಧನಾದನು. ಅವನು ಪಾರ್ವತೀದೇವಿಯನ್ನು ಸ್ತುತಿಸಿ ಅವಳ ದಿವ್ಯಾನುಗ್ರಹದಿಂದ ಆಕಾಶದಲ್ಲಿ ಶ್ರೇಷ್ಠವಾದ ಗ್ರಹರೂಪದಲ್ಲಿ ಸ್ಥಾನವನ್ನು ಪಡೆದು ಯಶೋವಂತನಾಗಿ ಆನಂದಪಡುತ್ತಿದ್ದಾನೆ.

ಅಸಿತೋ ದೇವಲಶ್ಚೈವ ತಥಾ ನಾರದಪರ್ವತೌ ।
ಕಕ್ಷೀವಾಞ್ಜಾಮದಗ್ನ್ಯಶ್ಚ ರಾಮಸ್ತಾಣ್ಡ್ಯಸ್ತಥಾತ್ಮವಾನ್ ॥೧೫॥

ವಸಿಷ್ಠೋ ಜಮದಗ್ನಿಶ್ಚ ವಿಶ್ವಾಮಿತ್ರೋಽತ್ರಿರೇವ ಚ ।
ಭರದ್ವಾಜೋ ಹರಿಶ್ಮಶ್ರುಃ ಕುಣ್ಡಧಾರಃ ಶ್ರುತಶ್ರವಾಃ ॥೧೬॥

ಏತೇ ಮಹರ್ಷಯಃ ಸ್ತುತ್ವಾ ವಿಷ್ಣುಮೃಗ್ಭಿಃ ಸಮಾಹಿತಾಃ ।
ಲೇಭಿರೇ ತಪಸಾ ಸಿದ್ಧಿಂ ಪ್ರಸಾದಾತ್ತಸ್ಯ ಧೀಮತಃ ॥೧೭॥

ಅಸಿತ, ದೇವಲ, ನಾರದ, ಪರ್ವತ, ಕಕ್ಷೀವಂತ, ಜಮದಗ್ನಿಯ ಮಗನಾದ ಪರಶುರಾಮ, ಜಿತಮನಸ್ಕನಾದ ತಾಂಡ್ಯ, ವಸಿಷ್ಠ, ಜಮದಗ್ನಿ, ವಿಶ್ವಾಮಿತ್ರ, ಅತ್ರಿ, ಭರದ್ವಾಜ, ಹರಿಶ್ಮಶ್ರು, ಕುಂಡಧಾರ ಮತ್ತು

ಶ್ರುತಶ್ರವಸ – ಈ ಮಹರ್ಷಿಗಳೆಲ್ಲರೂ ಏಕಾಗ್ರಚಿತ್ತರಾಗಿ ವೇದಗಳಲ್ಲಿರುವ ಋಕ್ಕುಗಳಿಂದ ಭಗವಂತನಾದ ಮಹಾವಿಷ್ಣುವನ್ನು ಸ್ತುತಿಸಿ ಧೀಮಂತನಾದ ಶ್ರೀಹರಿಯ ಕೃಪೆಯಿಂದ ತಪಸ್ಸಿನ ಮೂಲಕ ಸಿದ್ಧಿಯನ್ನು ಪಡೆದರು.

ಅನರ್ಹಾಶ್ಚಾರ್ಹತಾಂ ಪ್ರಾಪ್ತಾಃ ಸನ್ತಃ ಸ್ತುತ್ವಾ ತಮೇವ ಹ ।
ನ ತು ವೃದ್ಧಿಮಿಹಾನ್ವಿಚ್ಛೇತ್ಕರ್ಮ ಕೃತ್ವಾ ಜುಗುಪ್ಸಿತಮ್ ॥೧೮॥

ಗೌರವಕ್ಕೆ ಅನರ್ಹರಾದವರು ಕೂಡ ಪರಮಕಾರುಣಿಕನಾದ ಶ್ರೀಹರಿಯನ್ನೇ ಸ್ತೋತ್ರಮಾಡಿ ಸಂತರೂ–ಪೂಜನೀಯರೂ ಆದರು. ಈ ಲೋಕದಲ್ಲಿ ಯಾರೇ ಆಗಲಿ ಜುಗುಪ್ಸಿತವಾದ ಪಾಪಕರ್ಮಗಳನ್ನು ಮಾಡಿ ಅಭ್ಯುದಯವನ್ನು ಬಯಸಬಾರದು.

ಯೇಽರ್ಥಾ ಧರ್ಮೇಣ ತೇ ಸತ್ಯಾ ಯೇಽಧರ್ಮೇಣ ಧಿಗಸ್ತು ತಾನ್ ।
ಧರ್ಮಂ ವೈ ಶಾಶ್ವತಂ ಲೋಕೇ ನ ಜಹ್ಯಾದ್ಧನಕಾಂಕ್ಷಯಾ ॥೧೯॥

ಧರ್ಮಮಾರ್ಗದಿಂದ ಯಾವ ಐಶ್ವರ್ಯಗಳು ಲಭ್ಯವಾಗುವುವೋ ಅವುಗಳೇ ನಿಜವಾದ ಐಶ್ವರ್ಯಗಳು. ಅಧರ್ಮಮಾರ್ಗದಿಂದ ಪ್ರಾಪ್ತವಾಗುವ ಐಶ್ವರ್ಯಗಳಿಗೆ ಧಿಕ್ಕಾರವಿರಲಿ! ಲೋಕದಲ್ಲಿ ಧರ್ಮವೇ ಶಾಶ್ವತವಾದುದು. (ಧನವು ಶಾಶ್ವತವಲ್ಲ). ಆದುದರಿಂದ ಧನವನ್ನು ಸಂಗ್ರಹಿಸಬೇಕೆನ್ನುವ ಆಸೆಯಿಂದ ಧರ್ಮವನ್ನು ತ್ಯಾಗಮಾಡಬಾರದು.

ಆಹಿತಾಗ್ನಿರ್ಹಿ ಧರ್ಮಾತ್ಮಾ ಯಃ ಸ ಪುಣ್ಯಕೃದುತ್ತಮಃ ।
ವೇದಾ ಹಿ ಸರ್ವೇ ರಾಜೇನ್ದ್ರ ಸ್ಥಿತಾಸ್ತ್ರಿಷ್ವಗ್ನಿಷು ಪ್ರಭೋ ॥೨೦॥

ಜನಕರಾಜ! ಯಾವನು ಪ್ರತಿನಿತ್ಯವೂ ಅಗ್ನಿಹೋತ್ರವನ್ನು ಮಾಡುವನೋ–ಅವನೇ ಧರ್ಮಾತ್ಮನು. ಅವನೇ ಪುಣ್ಯಕರ್ಮಿಗಳಲ್ಲಿ ಶ್ರೇಷ್ಠನಾದವನು. ಸಂಪೂರ್ಣವೇದಗಳೂ–ಆಹಿತಾಗ್ನಿಯು ಆರಾಧಿಸುವ ದಕ್ಷಿಣಾಗ್ನಿ, ಗಾರ್ಹಪತ್ಯ ಮತ್ತು ಆಹವನೀಯಗಳೆಂಬ ಮೂರು ಅಗ್ನಿಗಳಲ್ಲಿಯೇ ಪ್ರತಿಷ್ಠಿತವಾಗಿವೆ.

ಸ ಚಾಪ್ಯಗ್ನ್ಯಾಹಿತೋ ವಿಪ್ರಃ ಕ್ರಿಯಾ ಯಸ್ಯ ನ ಹೀಯತೇ ।
ಶ್ರೇಯೋ ಹ್ಯನಾಹಿತಾಗ್ನಿತ್ವಮಗ್ನಿಹೋತ್ರಂ ನ ನಿಷ್ಕ್ರಿಯಮ್ ॥೨೧॥

ಯಾವನ ಸದಾಚಾರ-ಸತ್ಕರ್ಮಗಳು ಯಾವುದೇ ಕಾರಣದಿಂದಲೂ ಲುಪ್ತವಾಗುವುದಿಲ್ಲವೋ – ಅವನು (ಅಗ್ನಿಹೋತ್ರವನ್ನು ಮಾಡದಿದ್ದರೂ) ಅಗ್ನಿಹೋತ್ರಿಯೇ ಆಗುತ್ತಾನೆ. ಸದಾಚಾರಪರನಾಗಿ ಸತ್ಕರ್ಮಗಳನ್ನು ಮಾಡುತ್ತಿದ್ದರೆ ಅಗ್ನಿಹೋತ್ರವನ್ನು ಮಾಡದಿದ್ದರೂ ಶ್ರೇಯಸ್ಸುಂಟಾಗುತ್ತದೆ. ಆದರೆ ಸದಾಚಾರ-ಸತ್ಕರ್ಮಗಳಿಂದ ವಿಹೀನನಾಗಿ ಅಗ್ನಿಹೋತ್ರವನ್ನು ಮಾಡುತ್ತಿದ್ದರೆ ಅವನ ಆ ಕರ್ಮವು ನಿಷ್ಫಲವಾಗುತ್ತದೆ.

ಅಗ್ನಿರಾತ್ಮಾ ಚ ಮಾತಾ ಚ ಪಿತಾ ಜನಯಿತಾ ತಥಾ ।
ಗುರುಶ್ಚ ನರಶಾರ್ದೂಲ ಪರಿಚರ್ಯಾ ಯಥಾತಥಮ್ ॥೨೨॥

ಪುರುಷಸಿಂಹನೇ! ಅಗ್ನಿ, ಆತ್ಮಾ, ತಾಯಿ, ಜನ್ಮದಾತನಾದ ತಂದೆ ಮತ್ತು ಗುರು–ಇವರೆಲ್ಲರನ್ನೂ ಯಥಾಯೋಗ್ಯವಾಗಿ ಸತ್ಕರಿಸಬೇಕು.

ಮಾನಂ ತ್ಯಕ್ತ್ವಾ ಯೋ ನರೋ ವೃದ್ಧಸೇವೀ
ವಿದ್ವಾನ್ಕ್ಲೀಬಃ ಪಶ್ಯತಿ ಪ್ರೀತಿಯೋಗಾತ್ ।
ದಾಕ್ಷ್ಯೇಣ ಹೀನೋ ಧರ್ಮಯುಕ್ತೋ ನದಾನ್ತೋ
ಲೋಕೇಽಸ್ಮಿನ್ಸ್ವೈ ಪೂಜ್ಯತೇ ಸದ್ಭಿರಾರ್ಯಃ ॥೨೩॥

ಯಾವನು ಆತ್ಮಾಭಿಮಾನವನ್ನು ತೊರೆದು ವೃದ್ಧರ ಸೇವೆಮಾಡುವನೋ, ವಿದ್ಯಾವಂತನಾಗಿ ಕಾಮೋಪಭೋಗಗಳಲ್ಲಿ ಅನಾಸಕ್ತನಾಗಿ ಎಲ್ಲರನ್ನೂ ಪ್ರೇಮಭಾವದಿಂದ ಕಾಣುವನೋ, ಅವರಲ್ಲಿ ತನ್ನ ಸಾಮರ್ಥ್ಯವನ್ನು ಪ್ರಕಟಿಸದೇ ಧರ್ಮಪರನಾಗಿರುವನೋ, ಅವರನ್ನು ದಮನಮಾಡುವುದಿಲ್ಲವೋ–ಅಂತಹ ಆರ್ಯನು ಈ ಲೋಕದಲ್ಲಿ ಸತ್ಪುರುಷರಿಂದ ಪೂಜಿಸಲ್ಪಡುತ್ತಾನೆ.”*

ಎಂಬತ್ತೊಂಬತ್ತೆರಡನೆಯ ಅಧ್ಯಾಯವು ಮುಗಿಯಿತು.

---

* ವ್ಯಾಖ್ಯಾನಕಾರರು : ದಾನತಿ ಛಿನತ್ತಿ ಇತಿ ದಾನ್ತಃ – ಕತ್ತರಿಸುವವನು ದಾಂತ. ತದನ್ಯಃ ನದಾನ್ತಃ–ಕತ್ತರಿಸದವನು ಅಥವಾ ಹಿಂಸಿಸದವನು, ಎಂದು ಅರ್ಥಮಾಡಿರುತ್ತಾರೆ.

ಪರಾಶರಗೀತಾ

ಶೂದ್ರನಿಗೆ ಸೇವಾವೃತ್ತಿಯ ಪ್ರಧಾನತೆ: ಸತ್ಸಂಗದ ಮಹಿಮೆ: ವರ್ಣಾಶ್ರಮಧರ್ಮಪಾಲನೆಯ ಮಹತ್ತ್ವ

ಪರಾಶರರು ಹೇಳುತ್ತಾರೆ :

ವೃತ್ತಿಃ ಸಕಾಶಾದ್ವರ್ಣೇಭ್ಯಸ್ತ್ರಿಭ್ಯೋ ಹೀನಸ್ಯ ಶೋಭನಾ ।
ಪ್ರೀತ್ಯೋಪನೀತಾ ನಿರ್ದಿಷ್ಟಾ ಧರ್ಮಿಷ್ಠಾನ್ಕುರುತೇ ಸದಾ ॥೧॥

“ಜನಕರಾಜ! ಮೂರು ವರ್ಣದವರ ಸೇವೆಯಿಂದ ಜೀವನವನ್ನು ನಿರ್ವಹಿಸುವುದೇ ಶೂದ್ರನಿಗೆ ಶುಭದಾಯಕವಾಗಿದೆ. ಶೂದ್ರರು ನಿರ್ದಿಷ್ಟ ವಾದ ಸೇವಾವೃತ್ತಿಯನ್ನು ಪ್ರೇಮಪೂರ್ವಕವಾಗಿ ಪರಿಪಾಲಿಸಿದರೆ ಆ ಸೇವಾ ವೃತ್ತಿಯೇ ಅವರನ್ನು ಧರ್ಮಿಷ್ಠರನ್ನಾಗಿ ಮಾಡುತ್ತದೆ.

ವೃತ್ತಿಶ್ಚೇನ್ನಾಸ್ತಿ ಶೂದ್ರಸ್ಯ ಪಿತೃಪೈತಾಮಹೀ ಧ್ರುವಾ ।
ನ ವೃತ್ತಿಂ ಪರತೋ ಮಾರ್ಗೇಚ್ಛುಶ್ರೂಷಾಂ ತು ಪ್ರಯೋಜಯೇತ್॥೨॥

ಒಂದು ವೇಳೆ ಶೂದ್ರನಿಗೆ ತಂದೆ-ತಾತಂದಿರ ಕಾಲದಿಂದ ಅನೂಚಾನ ವಾಗಿ ಬಂದ ನಿರ್ದಿಷ್ಟವಾದ ವೃತ್ತಿಯಿಲ್ಲದಿದ್ದರೆ – ಅವನು ಬೇರೆ ಯಾವುದೇ ವೃತ್ತಿಯನ್ನೂ ಅವಲಂಬಿಸಬಾರದು. ಮೂರು ವರ್ಣದವರ ಸೇವೆಯಿಂದಲೇ ತನ್ನ ಜೀವನವನ್ನು ಸಾರ್ಥಕಗೊಳಿಸಬೇಕು.

ಸದ್ಭಿಸ್ತು ಸಹ ಸಂಸರ್ಗಃ ಶೋಭತೇ ಧರ್ಮದರ್ಶಿಭಿಃ ।
ನಿತ್ಯಂ ಸರ್ವಾಸ್ವವಸ್ಥಾಸು ನಾಸದ್ಭಿರಿತಿ ಮೇ ಮತಿಃ ॥೩॥

ಅನುದಿನವೂ ಧರ್ಮದರ್ಶಿಗಳಾದ ಸತ್ಪುರುಷರ ಸಹವಾಸವೇ ಶೂದ್ರನಿಗೆ ಶೋಭಾದಾಯಕವಾಗುತ್ತದೆ. ಆದರೆ ಯಾವುದೇ ಪರಿಸ್ಥಿತಿ ಯಲ್ಲಿಯೂ ಅಸತ್ಪುರುಷರ ಸಹವಾಸವನ್ನು ಮಾಡಲೇಬಾರದೆಂಬುದು ನನ್ನ ಅಭಿಮತವಾಗಿದೆ.

ಯದೋದಯಗಿರೌ ದ್ರವ್ಯಂ ಸಂನಿಕರ್ಷೇಣ ದೀಪ್ಯತೇ ।
ತಥಾ ಸತ್ಸಂನಿಕರ್ಷೇಣ ಹೀನವರ್ಣೋऽಪಿ ದೀಪ್ಯತೇ ॥೪॥

ಯಾವ ರೀತಿಯಲ್ಲಿ ಉದಯಪರ್ವತದಲ್ಲಿರುವ ವಸ್ತುವು ಸೂರ್ಯನ ನಿಕಟಸಾನ್ನಿಧ್ಯದಿಂದ ಪ್ರಕಾಶಿಸುವುದೋ–ಅದೇ ರೀತಿಯಲ್ಲಿ ಸತ್ಪುರುಷರ ಸಾನ್ನಿಧ್ಯದಲ್ಲಿರುವಿಕೆಯಿಂದ ಹೀನವರ್ಣದವನೂ ಸದ್ಗುಣಗಳಿಂದ ಶೋಭಿಸುತ್ತಾನೆ.

ಯಾದೃಶೇನ ಹಿ ವರ್ಣೇನ ಭಾವ್ಯತೇ ಶುಕ್ಲಮಮ್ಬರಮ್ ।
ತಾದೃಶಂ ಕುರುತೇ ರೂಪಮೇತದೇವಮವೇಹಿ ಮೇ ॥೫॥

ಬೆಳ್ಳಗಿರುವ ಬಟ್ಟೆಯು ಯಾವ ಬಣ್ಣವನ್ನಾದರೂ ಹೊಂದುವಂತೆ–ಮನುಷ್ಯನು ಸತ್ಪುರುಷರ ಸಹವಾಸವನ್ನು ಮಾಡಿದರೆ ಸದ್ಗುಣಿಯಾಗುತ್ತಾನೆ. ದುಷ್ಟರ ಸಹವಾಸವನ್ನು ಮಾಡಿದರೆ ದುರ್ಗುಣಿಯಾಗುತ್ತಾನೆ.

ತಸ್ಮಾದ್ಗುಣೇಷು ರಜ್ಯೇಥಾ ಮಾ ದೋಷೇಷು ಕದಾಚನ ।
ಅನಿತ್ಯಮಿಹ ಮರ್ತ್ಯಾನಾಂ ಜೀವಿತಂ ಹಿ ಚಲಾಚಲಮ್ ॥೬॥

ಜನಕರಾಜ! ಆದುದರಿಂದ ನೀನು ಸದ್ಗುಣಗಳಲ್ಲಿ ಅಥವಾ ಸದ್ಗುಣಿಗಳಲ್ಲಿ ಪ್ರೀತಿಯನ್ನಿಡು. ದೋಷಗಳಲ್ಲಿ ಅಥವಾ ದುಷ್ಟರಲ್ಲಿ ಅನುರಾಗವನ್ನಿಡಬೇಡ. ಈ ಜಗತ್ತಿನಲ್ಲಿ ಮನುಷ್ಯರ ಜೀವನವು ಅನಿತ್ಯವೂ–ಚಂಚಲವೂ ಆಗಿರುತ್ತದೆ.

ಸುಖೇ ವಾ ಯದಿ ವಾ ದುಃಖೇ ವರ್ತಮಾನೋ ವಿಚಕ್ಷಣಃ ।
ಯಶ್ಚಿನೋತಿ ಶುಭಾನ್ಯೇವ ಸ ತನ್ತ್ರಾಣೀಹ ಪಶ್ಯತಿ ॥೭॥

ಯಾವ ವಿದ್ವಾಂಸನು ಸುಖದಲ್ಲಿಯೇ ಆಗಲೀ, ದುಃಖದಲ್ಲಿಯೇ ಆಗಲೀ–ಶುಭಕರ್ಮಗಳನ್ನೇ ಅನುಷ್ಠಾನಮಾಡುತ್ತಿರುವನೋ – ಅಂತಹ ವಿದ್ವಾಂಸನೇ ಶಾಸ್ತ್ರದರ್ಶಿಯಾಗುತ್ತಾನೆ (ಅವನೇ ಶಾಸ್ತ್ರಜ್ಞನು).

ಧರ್ಮಾದಪೇತಂ ಯತ್ಕರ್ಮ ಯದ್ಯಪಿ ಸ್ಯಾನ್ಮಹಾಫಲಮ್ ।
ನ ತತ್ಸೇವೇತ ಮೇಧಾವೀ ನ ತದ್ಧಿತಮಿಹೋಚ್ಯತೇ ॥೮॥

ಧರ್ಮಬಾಹಿರವಾದ ಕರ್ಮವು ಒಮ್ಮೊಮ್ಮೆ ಮಹಾಫಲದಾಯಕವೇ ಆಗಿದ್ದರೂ ಮೇಧಾವಿಯಾದವನು ಅದನ್ನು ಆಚರಿಸಲು ಹೋಗಬಾರದು. ಧರ್ಮಬಾಹಿರವಾದ ಅಂತಹ ಕಾರ್ಯವನ್ನು ಮಾಡುವುದು ಹಿತಕರವಲ್ಲ ವೆಂದು ಹೇಳುತ್ತಾರೆ.

ಯೋ ಹೃತ್ವಾ ಗೋಸಹಸ್ರಾಣಿ ನೃಪೋ ದದ್ಯಾದರಕ್ಷಿತಾ ।
ಸ ಶಬ್ದಮಾತ್ರಫಲಭಾಗ್ರಾಜಾ ಭವತಿ ತಸ್ಕರಃ ॥೯॥

ಯಾವ ರಾಜನು ಸಾವಿರಾರು ಹಸುಗಳನ್ನು ಇತರರಿಂದ ಬಲಾತ್ಕಾರ ವಾಗಿ ತೆಗೆದುಕೊಂಡು ಬೇರೆಯವರಿಗೆ ದಾನಮಾಡುವನೋ–ಪ್ರಜೆಗಳನ್ನು ರಕ್ಷಿಸುವುದಿಲ್ಲವೋ–ಅಂತಹ ರಾಜನು ಮಾಡಿದ ದಾನವು ಹೆಸರಿಗೆ ಮಾತ್ರವೇ ದಾನವಾಗುತ್ತದೆ. ಅಂತಹ ದಾನದಿಂದ ಯಾವ ಫಲವೂ ಲಭಿಸುವುದಿಲ್ಲ. ವಾಸ್ತವವಾಗಿ ಅವನು ಕಳ್ಳನೇ ಆಗುತ್ತಾನೆ.

ಸ್ವಯಮ್ಭೂರಸೃಜಚ್ಚಾಗ್ರೇ ಧಾತಾರಂ ಲೋಕಸತ್ಕೃತಮ್ ।
ಧಾತಾಸೃಜತ್ಪುತ್ರಮೇಕಂ ಲೋಕಾನಾಂ ಧಾರಣೇ ರತಮ್ ॥೧೦॥

ಪರಮೇಶ್ವರನು ಎಲ್ಲರಿಗಿಂತಲೂ ಮೊದಲು ಲೋಕಪೂಜಿತನಾದ ಬ್ರಹ್ಮನನ್ನು ಸೃಷ್ಟಿಸಿದನು. ಬ್ರಹ್ಮನು ಸಕಲಲೋಕಗಳನ್ನೂ ಧರಿಸುವುದರಲ್ಲಿ ನಿರತನಾದ (ಪರ್ಜನ್ಯನೆಂಬ) ಒಬ್ಬ ಮಗನನ್ನು ಪಡೆದುಕೊಂಡನು.

ತಮರ್ಚಯಿತ್ವಾ ವೈಶ್ಯಸ್ತು ಕುರ್ಯಾದತ್ಯರ್ಥಮೃದ್ಧಿಮತ್ ।
ರಕ್ಷಿತವ್ಯಂ ತು ರಾಜನ್ಯೈರುಪಯೋಜ್ಯಂ ದ್ವಿಜಾತಿಭಿಃ ॥೧೧॥

ಅಜಿಹ್ಮೈರಶಠಕ್ರೋಧೈರ್ಹವ್ಯಕವ್ಯಪ್ರಯೋಕ್ತೃಭಿಃ ।
ಶೂದ್ರೈರ್ನಿರ್ಮಾಜನಂ ಕಾರ್ಯಮೇವಂ ಧರ್ಮೋ ನ ನಶ್ಯತಿ ॥೧೨॥

ವೈಶ್ಯರು ಪರ್ಜನ್ಯನನ್ನು ಆರಾಧಿಸಿ ಕೃಷಿ ಮತ್ತು ಪಶುಪಾಲನೆಗಳಿಂದ ಐಶ್ವರ್ಯಸಮೃದ್ಧಿಯನ್ನು ಪಡೆಯಬೇಕು. ರಾಜನು ಅವರಲ್ಲಿರುವ ಐಶ್ವರ್ಯವನ್ನು ರಕ್ಷಿಸಬೇಕು. ಋಜುಮಾರ್ಗಿಗಳಾದ, ಶಠರಲ್ಲದ, ಕ್ರೋಧರಹಿತರಾದ, ಹವ್ಯ-ಕವ್ಯಗಳನ್ನು ಮಾಡಿಸುವ ಬ್ರಾಹ್ಮಣರು ವೈಶ್ಯನ ಐಶ್ವರ್ಯವನ್ನು ಯಜ್ಞಗಳಿಗಾಗಿಯೂ – ಲೋಕಹಿತವಾದ ಕಾರ್ಯಗಳಿ

ಗಾಗಿಯೂ ವಿನಿಯೋಗಿಸಬೇಕು. ಶೂದ್ರರು ಯಜ್ಞಮಂಟಪವೇ ಮೊದಲಾದುವುಗಳನ್ನು ಶುದ್ಧಿಗೊಳಿಸಬೇಕು. ಹೀಗೆ ಮಾಡುವುದರಿಂದ ಧರ್ಮವು ನಾಶಹೊಂದುವುದಿಲ್ಲ.

ಅಪ್ರಣಷ್ಟೋ ತತೋ ಧರ್ಮೋ ಭವನ್ತಿ ಸುಖಿತಾಃ ಪ್ರಜಾಃ ।
ಸುಖೇನ ತಾಸಾಂ ರಾಜೇನ್ದ್ರ ಮೋದನ್ತೇ ದಿವಿ ದೇವತಾಃ ॥೧೩॥

ಧರ್ಮವು ವಿನಾಶಹೊಂದದೇ ಪಾಲನೆಯಾಗುತ್ತಿದ್ದರೆ ಪ್ರಜೆಗಳೆಲ್ಲರೂ ಸುಖದಿಂದಿರುತ್ತಾರೆ. ಪ್ರಜೆಗಳು ಸುಖವಾಗಿದ್ದರೆ ಸ್ವರ್ಗದಲ್ಲಿರುವ ದೇವತೆಗಳು ಆನಂದಪಡುತ್ತಾರೆ (ಪ್ರಸನ್ನರಾಗುತ್ತಾರೆ).

ತಸ್ಮಾದ್ಯೋ ರಕ್ಷತಿ ನೃಪಃ ಸ ಧರ್ಮೇಣೇತಿ ಪೂಜ್ಯತೇ ।
ಅಧೀತೇ ಚಾಪಿ ಯೋ ವಿಪ್ರೋ ವೈಶ್ಯೋ ಯಶ್ಚಾರ್ಜನೇ ರತಃ ॥

ಯಶ್ಚ ಶುಶ್ರೂಷತೇ ಶೂದ್ರಃ ಸತತಂ ನಿಯತೇನ್ದ್ರಿಯಃ ।
ಅತೋಽನ್ಯಥಾ ಮನುಷ್ಯೇನ್ದ್ರ ಸ್ವಧರ್ಮಾತ್ಪರಿಹೀಯತೇ ॥೧೫॥

ಯಾವ ರಾಜನು ಧರ್ಮದಿಂದ ಪ್ರಜೆಗಳನ್ನು ರಕ್ಷಿಸುತ್ತಿರುವನೋ– ಅವನು ಆ ಧರ್ಮಾಚರಣೆಯ ಕಾರಣದಿಂದಲೇ ಲೋಕದಲ್ಲಿ ಪೂಜ್ಯನಾಗುತ್ತಾನೆ. ಹೀಗೆಯೇ ಧರ್ಮದಿಂದ ವೇದಾಧ್ಯಯನಮಾಡುವ ಬ್ರಾಹ್ಮಣ, ಧರ್ಮಾನುಸಾರವಾಗಿ ಐಶ್ವರ್ಯದ ಸಂಪಾದನೆಯಲ್ಲಿ ತತ್ಪರನಾದ ವೈಶ್ಯ, ಜಿತೇಂದ್ರಿಯನಾಗಿದ್ದುಕೊಂಡು ದ್ವಿಜರ ಸೇವೆಯಲ್ಲಿ ನಿರತನಾಗಿರುವ ಶೂದ್ರ– ಇವರೆಲ್ಲರೂ ತಮ್ಮ ತಮ್ಮ ಧರ್ಮಾಚರಣೆಗಳಲ್ಲಿ ತತ್ಪರರಾಗಿರುವುದರಿಂದ ಲೋಕದಲ್ಲಿ ಸಮ್ಮಾನಿತರಾಗುತ್ತಾರೆ. ಇದಕ್ಕೆ ವಿಪರೀತವಾಗಿ ನಡೆದುಕೊಂಡರೆ ಪ್ರಜೆಗಳೆಲ್ಲರೂ ತಮ್ಮ-ತಮ್ಮ ಧರ್ಮಗಳಿಂದ ಭ್ರಷ್ಟರಾಗುತ್ತಾರೆ.

ಪ್ರಾಣಸಂತಾಪನಿರ್ದಿಷ್ಟಾಃ ಕಾಕಿಣ್ಯೋಽಪಿ ಮಹಾಫಲಾಃ ।
ನ್ಯಾಯೇನೋಪಾರ್ಜಿತಾ ದತ್ತಾಃ ಕಿಮುತಾನ್ಯಾಃ ಸಹಸ್ರಶಃ ॥೧೬॥

ಪ್ರಾಣಗಳಿಗೆ ಕಷ್ಟವನ್ನಾದರೂ ಕೊಟ್ಟು (ಶ್ರಮವಹಿಸಿ) ನ್ಯಾಯದಿಂದ ಸಂಪಾದಿಸಿದುದರಲ್ಲಿ ಕವಡೆಯ ನಾಣ್ಯಗಳನ್ನು ದಾನವಾಗಿ ಕೊಟ್ಟರೂ

ಮಹಾಫಲವು ಪ್ರಾಪ್ತವಾಗುತ್ತದೆ. ಹೀಗಿರುವಾಗ ನ್ಯಾಯವಾಗಿ ಸಂಪಾದಿಸಿದ ಐಶ್ವರ್ಯದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಇತರ ಪದಾರ್ಥಗಳನ್ನು ದಾನ ಮಾಡಿದರೆ ಅದರ ಫಲದ ವಿಷಯವಾಗಿ ಹೇಳುವುದೇನಿದೆ?

ಸತ್ಕೃತ್ಯ ಹಿ ದ್ವಿಜಾತಿಭ್ಯೋ ಯೋ ದದಾತಿ ನರಾಧಿಪಃ ।
ಯಾದೃಶಂ ತಾದೃಶಂ ನಿತ್ಯಮಶ್ನಾತಿ ಫಲಮೂರ್ಜಿತಮ್ ॥೧೭॥

ಯಾವ ರಾಜನು ಬ್ರಾಹ್ಮಣರನ್ನು ಸತ್ಕರಿಸಿ ಅವರಿಗೆ ಎಷ್ಟು ದಾನವನ್ನು ಕೊಡುವನೋ–ಅದಕ್ಕೆ ಅನುಗುಣವಾದ ಉತ್ತಮಫಲಗಳನ್ನು ಅವನು ಯಾವಾಗಲೂ ಉಪಭೋಗಿಸುತ್ತಾನೆ.

ಅಭಿಗಮ್ಯ ಚ ತತ್ತುಷ್ಟ್ಯಾ ದತ್ತಮಾಹುರಭಿಷ್ಟುತಮ್ ।
ಯಾಚಿತೇನ ತು ಯದ್ದತ್ತಂ ತದಾಹುರ್ಮಧ್ಯಮಂ ಬುಧಾಃ ॥೧೮॥

ಸತ್ಪಾತ್ರನಾದ ಬ್ರಾಹ್ಮಣನ ಬಳಿಗೆ ತಾನಾಗಿಯೇ ಹೋಗಿ ಅವನನ್ನು ಸತ್ಕರಿಸಿ ಸಂತೋಷಗೊಳಿಸಿ ಯಾವ ದಾನವನ್ನು ಕೊಡುವನೋ–ಆ ದಾನವನ್ನು ಉತ್ತಮವಾದ ಪ್ರಶಂಸನೀಯವಾದ ದಾನವೆನ್ನುತ್ತಾರೆ. ಒಬ್ಬನು ಯಾಚಿಸಿದ ನಂತರ ಕೊಡುವ ದಾನಕ್ಕೆ ಮಧ್ಯಮಶ್ರೇಣಿಯ ದಾನವೆಂದು ವಿದ್ವಾಂಸರು ಹೇಳುತ್ತಾರೆ.

ಅವಜ್ಞಯಾ ದೀಯತೇ ಯತ್ತಥೈವಾಶ್ರದ್ಧಯಾಪಿ ವಾ ।
ತಮಾಹುರಧಮಂ ದಾನಂ ಮುನಯಃ ಸತ್ಯವಾದಿನಃ ॥೧೯॥

ಅನಾದರಣೆಯಿಂದಲೂ ಅಶ್ರದ್ಧೆಯಿಂದಲೂ ಕೊಡುವ ದಾನವನ್ನು ಸತ್ಯವಾದಿಗಳಾದ ಮುನಿಗಳು ಅಧಮಶ್ರೇಣಿಯ ದಾನವೆನ್ನುತ್ತಾರೆ.

ಅತಿಕ್ರಾಮೇನ್ಮಜ್ಜಮಾನೋ ವಿವಿಧೇನ ನರಃ ಸದಾ ।
ತಥಾ ಪ್ರಯತ್ನಂ ಕುರ್ವೀತ ಯಥಾ ಮುಚ್ಯೇತ ಸಂಶ್ರಯಾತ್ ॥೨೦॥

ನದಿಯಲ್ಲಿ ಮುಳುಗಿಹೋಗುತ್ತಿರುವ ಮನುಷ್ಯನು ಯಾವ ರೀತಿಯಲ್ಲಿ ನಾನಾವಿಧವಾದ ಉಪಾಯಗಳಿಂದ ಅತ್ಯಂತಕಷ್ಟದಿಂದಾದರೂ ಅಪಾಯ ದಿಂದ ಪಾರಾಗಿ ನದಿಯನ್ನು ದಾಟುವನೋ–ಅದೇ ರೀತಿಯಲ್ಲಿ ಈ ಸಂಸಾರ

ಸಮುದ್ರದಿಂದ ಪಾರಾಗಲು ಸತತವಾಗಿ ವಿಧ-ವಿಧವಾದ ಪ್ರಯತ್ನಗಳನ್ನು ಮಾಡುತ್ತಲೇ ಇರಬೇಕು.

ದಮೇನ ಶೋಭತೇ ವಿಪ್ರಃ ಕ್ಷತ್ರಿಯೋ ವಿಜಯೇನ ತು ।
ಧನೇನ ವೈಶ್ಯಃ ಶೂದ್ರಸ್ತು ನಿತ್ಯಂ ದಾಕ್ಷ್ಯೇಣ ಶೋಭತೇ ॥೨೧॥

ಬ್ರಾಹ್ಮಣನು ಇಂದ್ರಿಯಗಳ ಸಂಯಮದಿಂದಲೂ, ಕ್ಷತ್ರಿಯನು ಯುದ್ಧದಲ್ಲಿ ವಿಜಯವನ್ನು ಗಳಿಸುವುದರಿಂದಲೂ, ವೈಶ್ಯನು ಐಶ್ವರ್ಯದ ಸಂಗ್ರಹದಿಂದಲೂ, ಶೂದ್ರನು ಸದಾ ಸೇವಾಕುಶಲತೆಯಿಂದಲೂ ಶೋಭಿಸುತ್ತಾರೆ.”

ಇತಿ ಶ್ರೀ ...

೨೯೩ನೆಯ ಅಧ್ಯಾಯವು ಮುಗಿಯಿತು.

೨೯೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪರಾಶರಗೀತಾ

ಬ್ರಾಹ್ಮಣಾದಿ ವರ್ಣಗಳ ಜೀವಿಕೆ: ನಿಂದನೀಯಕರ್ಮಗಳ ಪರಿತ್ಯಾಗ: ಮನುಷ್ಯರಲ್ಲಿ ಆಸುರೀಭಾವದ ಪ್ರಾದುರ್ಭಾವ: ಭಗವಾನ್ ಶಿವನಿಂದ ಅದರ ನಿವಾರಣೆ: ಸ್ವಧರ್ಮಾನುಸಾರವಾಗಿ ಕರ್ತವ್ಯಪರಿಪಾಲನೆಮಾಡಲು ಆದೇಶ

ಪರಾಶರರು ಹೇಳುತ್ತಾರೆ :

ಪ್ರತಿಗ್ರಹಗತಾ ವಿಪ್ರೇ ಕ್ಷತ್ರಿಯೇ ಯುಧಿ ನಿರ್ಜಿತಾಃ ।
ವೈಶ್ಯೇ ನ್ಯಾಯಾರ್ಜಿತಾಶ್ಚೈವ ಶೂದ್ರೇ ಶುಶ್ರೂಷಯಾರ್ಜಿತಾಃ ।
ಸ್ವಲ್ಪಾಪ್ಯರ್ಥಾಃ ಪ್ರಶಸ್ಯನ್ತೇ ಧರ್ಮಸ್ಯಾರ್ಥೇ ಮಹಾಫಲಾಃ ॥೧॥

“ಜನಕರಾಜ! ಬ್ರಾಹ್ಮಣನಲ್ಲಿ ಪ್ರತಿಗ್ರಹದಿಂದ ಸಂಗ್ರಹಿಸಿದ ಐಶ್ವರ್ಯವೂ, ಕ್ಷತ್ರಿಯನಲ್ಲಿ ಯುದ್ಧಗಳಲ್ಲಿ ಶತ್ರುಗಳನ್ನು ಜಯಿಸಿ ಸಂಗ್ರಹಿಸಿದ ಐಶ್ವರ್ಯವೂ, ವೈಶ್ಯನಲ್ಲಿ ಕೃಷಿ-ಗೋರಕ್ಷಣೆಗಳಿಂದ ಸಂಗ್ರಹಿಸಿದ ಐಶ್ವರ್ಯವೂ, ಶೂದ್ರನಲ್ಲಿ ಸೇವೆಯಿಂದ ಸಂಗ್ರಹಿಸಿದ ಐಶ್ವರ್ಯವೂ–ಸ್ವಲ್ಪವೇ ಆಗಿದ್ದರೂ ಪ್ರಶಂಸೆಗೆ ಅರ್ಹವಾಗಿರುತ್ತವೆ. ಹೀಗೆ ಸಂಪಾದಿಸಿದ ಐಶ್ವರ್ಯವು ಅಲ್ಪವಾಗಿದ್ದರೂ ಧಾರ್ಮಿಕಕಾರ್ಯಗಳಿಗೆ ಉಪಯೋಗಿಸಿದರೆ ಅದರಿಂದ ಮಹಾಫಲವು ಲಭಿಸುತ್ತದೆ.

ನಿತ್ಯಂ ತ್ರಯಾಣಾಂ ವರ್ಣಾನಾಂ ಶುಶ್ರೂಷುಃ ಶೂದ್ರ ಉಚ್ಯತೇ ।
ಕ್ಷತ್ರಧರ್ಮಾ ವೈಶ್ಯಧರ್ಮಾ ನಾವೃತ್ತಿಃ ಪತತೇ ದ್ವಿಜಃ ॥೨॥

ಶೂದ್ರಧರ್ಮಾ ಯದಾ ತು ಸ್ಯಾತ್ತದಾ ಪತತಿ ವೈ ದ್ವಿಜಃ ॥೩॥

ಯಾವಾಗಲೂ ಮೂರೂ ವರ್ಣದವರ ಶುಶ್ರೂಷೆಯನ್ನು ಮಾಡುವವನು ಶೂದ್ರನೆಂದು ಕರೆಯಲ್ಪಡುತ್ತಾನೆ. ಒಂದು ವೇಳೆ ಬ್ರಾಹ್ಮಣನು ಜೀವಿಕೆಯ ಅಭಾವದಿಂದ ಕ್ಷತ್ರಿಯಧರ್ಮವನ್ನಾಗಲೀ–ವೈಶ್ಯಧರ್ಮವನ್ನಾಗಲೀ ಜೀವಿಕೆಗಾಗಿ ಅವಲಂಬಿಸಿದರೆ–ಅದರಿಂದವನು ಪತಿತನಾಗುವುದಿಲ್ಲ. ಆದರೆ ಯಾವಾಗ ಬ್ರಾಹ್ಮಣನು ಜೀವಿಕೆಗಾಗಿ ಶೂದ್ರಧರ್ಮವನ್ನು ಅವಲಂಬಿಸುವನೋ ಆಗ ಅವನು ಪತಿತನಾಗುತ್ತಾನೆ.

ವಾಣಿಜ್ಯಂ ಪಾಶುಪಾಲ್ಯಂ ಚ ತಥಾ ಶಿಲ್ಪೋಪಜೀವನಮ್ ।
ಶೂದ್ರಸ್ಯಾಪಿ ವಿಧೀಯನ್ತೇ ಯದಾ ವೃತ್ತಿರ್ನ ಜಾಯತೇ ॥೪॥

ಶೂದ್ರನಿಗೆ ಸೇವಾವೃತ್ತಿಯಿಂದ ಜೀವನವನ್ನು ನಡೆಸಲು ಸಾಧ್ಯವಾಗದಿದ್ದರೆ–ವ್ಯಾಪಾರ, ಪಶುಪಾಲನೆ ಮತ್ತು ಶಿಲ್ಪಗಳನ್ನೂ ತನ್ನ ಜೀವಿಕೆಗಾಗಿ ಅವಲಂಬಿಸಬಹುದೆಂದು ಶಾಸ್ತ್ರಗಳು ವಿಧಿಸುತ್ತವೆ.

ರಙ್ಗಾವತರಣಂ ಚೈವ ತಥಾ ರೂಪೋಪಜೀವನಮ್ ।
ಮದ್ಯಮಾಂಸೋಪಜೀವ್ಯಂ ಚ ವಿಕ್ರಯಂ ಲೋಹಚರ್ಮಣೋಃ ॥೫॥

ಅಪೂರ್ವಿಣಾ ನ ಕರ್ತವ್ಯಂ ಕರ್ಮ ಲೋಕೇ ವಿಗರ್ಹಿತಮ್ ।
ಕೃತಪೂರ್ವಂ ತು ತ್ಯಜತೋ ಮಹಾನ್ಧರ್ಮ ಇತಿ ಶ್ರುತಿಃ ॥೬॥

ವೇಷವನ್ನು ಧರಿಸಿ ರಂಗಮಂಟಪದಲ್ಲಿ ಕುಣಿಯುವುದು, ನಾನಾವಿಧವಾದ ವೇಷಗಳನ್ನು ಧರಿಸಿ ಅದರಿಂದಲೇ ಜೀವನವನ್ನು ನಡೆಸುವುದು, ಮದ್ಯ-ಮಾಂಸಗಳಿಂದ ಜೀವನವನ್ನು ನಡೆಸುವುದು, ಲೋಹ ಮತ್ತು ಚರ್ಮಗಳ ಕ್ರಯ-ವಿಕ್ರಯಗಳನ್ನು ಮಾಡುವುದು–ಇಂತಹ ಕರ್ಮಗಳನ್ನು ಹಿಂದಿನಿಂದ ನಡೆದುಬಂದಿರದಿದ್ದರೆ–ನಡೆಸಲೇಕೂಡದು. ಈ ಕರ್ಮಗಳು ಲೋಕದಲ್ಲಿ ಅತಿನಿಂದ್ಯವಾದುವುಗಳು. ಒಂದು ವೇಳೆ ಹಿಂದಿನಿಂದ (ತಾತ-ಮುತ್ತಾತಂದಿರ ಕಾಲದಿಂದ) ಈ ವೃತ್ತಿಗಳು ನಡೆದುಬಂದಿದ್ದರೂ ಅವನ್ನು ತ್ಯಜಿಸಿದರೆ ಮಹಾಧರ್ಮಪ್ರದವೆಂದು ಶ್ರುತಿಯು ಹೇಳುತ್ತದೆ.

ಸಂಸಿದ್ಧಃ ಪುರುಷೋ ಲೋಕೇ ಯದಾಚರತಿ ಪಾಪಕಮ್ ।
ಮದೇನಾಭಿಪ್ಲುತಮನಾಸ್ತಚ್ಚ ನ ಗ್ರಾಹ್ಯಮುಚ್ಯತೇ ॥೭॥

ಲೋಕವಿಖ್ಯಾತನಾದ ಪುರುಷನೊಬ್ಬನು ಮದದಿಂದಾಗಲೀ ಮತ್ತು ಲೋಭಯುಕ್ತವಾದ ಮನಸ್ಸಿನಿಂದಾಗಲೀ–ಪಾಪಕಾರ್ಯವನ್ನೇನಾದರೂ ಮಾಡಿದರೆ ಅದು ಇತರರ ಆಚರಣೆಗೆ ಗ್ರಾಹ್ಯವಲ್ಲವೆಂದು ಹೇಳಲ್ಪಟ್ಟಿದೆ.

ಶ್ರೂಯನ್ತೇ ಹಿ ಪುರಾಣೇಷು ಪ್ರಜಾ ಧಿಗ್ದಣ್ಡಶಾಸನಾಃ ।
ದಾನ್ತಾ ಧರ್ಮಪ್ರಧಾನಾಶ್ಚ ನ್ಯಾಯಧರ್ಮಾನುವೃತ್ತಿಕಾಃ ॥೮॥

ಹಿಂದಿನ ಕಾಲದಲ್ಲಿ ಹೆಚ್ಚು ಜನರು ಜಿತೇಂದ್ರಿಯರಾಗಿಯೂ, ಧರ್ಮ ಪ್ರಧಾನರಾಗಿಯೂ, ನ್ಯಾಯೋಚಿತವಾದ ಆಚರಣೆಗಳನ್ನು ಅನುಸರಿಸುವವರಾಗಿಯೂ ಇದ್ದರೆಂದೂ, ಪ್ರಜೆಗಳೆಲ್ಲರೂ 'ಧಿಕ್'* –ದಂಡಮಾತ್ರದಿಂದಲೇ ಶಾಸಿಸಲ್ಪಡುತ್ತಿದ್ದರೆಂದೂ ಪುರಾಣಗಳಲ್ಲಿ ಕೇಳಿಬರುತ್ತದೆ.

ಧರ್ಮ ಏವ ಸದಾ ನೃಣಾಮಿಹ ರಾಜನ್ಪ್ರಶಸ್ಯತೇ ।
ಧರ್ಮವೃದ್ಧಾ ಗುಣಾನೇವ ಸೇವನ್ತೇ ಹಿ ನರಾ ಭುವಿ ॥೯॥

ಈ ಲೋಕದಲ್ಲಿ ಮನುಷ್ಯರಿಗೆ ಸರ್ವಕಾಲದಲ್ಲಿಯೂ ಧರ್ಮ ಮಾರ್ಗವೇ ಪ್ರಶಸ್ತವಾಗಿದೆ. ಧರ್ಮವೃದ್ಧರಾದ ಮನುಷ್ಯರು ಯಾವಾಗಲೂ ಈ ಲೋಕದಲ್ಲಿ ಸದ್ಗುಣಗಳನ್ನೇ ಆಶ್ರಯಿಸಿರುತ್ತಾರೆ.

ತಂ ಧರ್ಮಮಸುರಾಸ್ತಾತ ನಾಮೃಷ್ಯನ್ತ ಜನಾಧಿಪ ।
ವಿವರ್ಧಮಾನಾಃ ಕ್ರಮಶಸ್ತತ್ರ ತೇಽನ್ವಾವಿಶನ್ಪ್ರಜಾಃ ॥೧೦॥

ಜನಾಧಿಪನೇ! ಅಂತಹ ಧರ್ಮವನ್ನು ಅಸುರರು ಸಹಿಸದಾದರು. ಅಧರ್ಮಿಗಳಾದ ಆ ಅಸುರರು ಕ್ರಮವಾಗಿ ವೃದ್ಧಿಹೊಂದಿ ಪ್ರಜೆಗಳ ಶರೀರಗಳಲ್ಲಿಯೇ ಸೇರಿಕೊಂಡುಬಿಟ್ಟರು.

ತಾಸಾಂ ದರ್ಪಃ ಸಮಭವತ್ಪ್ರಜಾನಾಂ ಧರ್ಮನಾಶನಃ ।
ದರ್ಪಾತ್ಮನಾಂ ತತಃ ಪಶ್ಚಾತ್ಕ್ರೋಧಸ್ತಾಸಾಮಜಾಯತ ॥೧೧॥

---

* ಧಿಗ್ದಂಡಃ : 'ಛೀ!' ಅಥವಾ 'ಧಿಕ್' ಎಂಬ ನಿಂದಾಶಬ್ದವನ್ನೇ ದಂಡವನ್ನಾಗಿ ಉಪಯೋಗಿಸುವುದು.

ಅನಂತರ ಪ್ರಜೆಗಳಲ್ಲಿ ಧರ್ಮವನ್ನು ನಷ್ಟಗೊಳಿಸುವ ದರ್ಪವು ಹುಟ್ಟಿಕೊಂಡಿತು. ಅಸುರರ ಆವಿರ್ಭಾವದಿಂದಾಗಿ ಪ್ರಜೆಗಳಲ್ಲಿ ದರ್ಪವುಂಟಾದೊಡನೆಯೇ ದರ್ಪಾತ್ಮರಾದ ಅವರಲ್ಲಿ ಕ್ರೋಧವೂ ಹುಟ್ಟಿಕೊಂಡಿತು.

ತತಃ ಕ್ರೋಧಾಭಿಭೂತಾನಾಂ ವೃತ್ತಂ ಲಜ್ಜಾಸಮನ್ವಿತಮ್ ।
ಹ್ರೀಶ್ಚೈವಾಪ್ಯನಶದ್ರಾಜಂಸ್ತತೋ ಮೋಹೋ ವ್ಯಜಾಯತ ॥೧೨॥

ಪ್ರಜೆಗಳು ಕ್ರೋಧದಿಂದ ಅಭಿಭೂತರಾದೊಡನೆಯೇ ಲಜ್ಜೆಯಿಂದ ಯುಕ್ತವಾದ ಸದಾಚಾರವೂ ಅವರಲ್ಲಿ ಲುಪ್ತವಾಯಿತು. ಅದರಿಂದ ಅವರಿಗೆ ಸಂಕೋಚವೂ ಇಲ್ಲವಾಯಿತು. ಅನಂತರ ಪ್ರಜೆಗಳಲ್ಲಿ ಮೋಹದ ಉತ್ಪತ್ತಿಯೂ ಆಯಿತು.

ತತೋ ಮೋಹಪರೀತಾಸ್ತಾ ನಾಪಶ್ಯನ್ತ ಯಥಾ ಪುರಾ ।
ಪರಸ್ಪರಾವಮರ್ದೇನ ವರ್ಧಯನ್ತ್ಯೋ ಯಥಾಸುಖಮ್ ॥೧೩॥

ಮೋಹವಶರಾದ ಅವರೆಲ್ಲರೂ ಹಿಂದಿನಂತೆ ವಿವೇಕಪೂರ್ಣದೃಷ್ಟಿಯುಳ್ಳವರಾಗಿರಲಿಲ್ಲ. ಆದುದರಿಂದ ಅವರು ಒಬ್ಬರು ಮತ್ತೊಬ್ಬರನ್ನು ದ್ವೇಷಿಸುತ್ತಾ, ಒಬ್ಬರು ಮತ್ತೊಬ್ಬರನ್ನು ವಿನಾಶಗೊಳಿಸುತ್ತಾ ತಮ್ಮ-ತಮ್ಮ ಸುಖಗಳನ್ನು ಹೆಚ್ಚಿಸಿಕೊಳ್ಳುವುದರಲ್ಲಿಯೇ ಆಸಕ್ತರಾದರು.

ತಾಃ ಪ್ರಾಪ್ಯ ತು ಸ ಧಿಗ್ದಣ್ಡೋ ನ ಕಾರಣಮತೋಽಭವತ್ ।
ತತೋಽಭ್ಯಗಚ್ಛನ್ದೇವಾಂಶ್ಚ ಬ್ರಾಹ್ಮಣಾಂಶ್ಚಾವಮನ್ಯ ಹ ॥೧೪॥

ಧಿಗ್ದಂಡವು ಅಂತಹ ಪ್ರಜೆಗಳನ್ನು ಸನ್ಮಾರ್ಗಿಗಳನ್ನಾಗಿ ಮಾಡಲು ಅಸಮರ್ಥವಾಯಿತು. ಅನಂತರ ದುರುಳರಾದ ಆ ಪ್ರಜೆಗಳು ದೇವತೆಗಳನ್ನೂ–ಬ್ರಾಹ್ಮಣರನ್ನೂ ಅಪಮಾನಗೊಳಿಸುತ್ತಾ ಸ್ವೇಚ್ಛೆಯಿಂದ ವರ್ತಿಸತೊಡಗಿದರು.

ಏತಸ್ಮಿನ್ನೇವ ಕಾಲೇ ತು ದೇವಾ ದೇವವರಂ ಶಿವಮ್ ।
ಅಗಚ್ಛಞ್ಶರಣಂ ಧೀರಂ ಬಹುರೂಪಂ ಗುಣಾಧಿಕಮ್ ॥೧೫॥

ಅಂತಹ ದುಃಸ್ಥಿತಿಯು ಒದಗಿಬಂದ ಆ ಕಾಲದಲ್ಲಿ ದೇವತೆಗಳು ದೇವ

ಶ್ರೇಷ್ಠನಾದ, ಬಹುರೂಪನಾದ, ಅಧಿಕಗುಣನಾದ, ಧೀರನಾದ ಶಿವನನ್ನು ಶರಣುಹೊಂದಿದರು.

ತೇನ ಸ್ಮ ತೇ ಗಗನಗಾಃ ಸಪುರಾಃ ಪಾತಿತಾಃ ಕ್ಷಿತೌ ।
ತ್ರಿಧಾಪ್ಯೇಕೇನ ಬಾಣೇನ ದೇವಾಪ್ಯಾಯಿತತೇಜಸಾ ॥೧೬॥

ದೇವತೆಗಳ ಮೂಲಕವಾಗಿ ವೃದ್ಧಿಹೊಂದಿದ ಶಿವನು ತೇಜೋಯುಕ್ತವಾದ ಒಂದೇ ಬಾಣದಿಂದ ಮೂರು ನಗರಗಳ ಸಮೇತವಾಗಿ ಆಕಾಶದಲ್ಲಿದ್ದ ಅಸುರರೆಲ್ಲರನ್ನೂ ಧ್ವಂಸಮಾಡಿ ನೆಲದ ಮೇಲೆ ಬೀಳಿಸಿದನು.

ತೇಷಾಮಧಿಪತಿಸ್ತ್ವಾಸೀದ್ಭೀಮೋ ಭೀಮಪರಾಕ್ರಮಃ ।
ದೇವತಾನಾಂ ಭಯಕರಃ ಸ ಹತಃ ಶೂಲಪಾಣಿನಾ ॥೧೭॥

ದೇವತೆಗಳಿಗೆ ಭಯವನ್ನುಂಟುಮಾಡುತ್ತಿದ್ದ, ಭಯಂಕರನಾದ, ಭಯಂಕರಪರಾಕ್ರಮನಾದ ಆ ಅಸುರರ ಅಧಿಪತಿಯು (ದರ್ಪನು) ಶೂಲಪಾಣಿಯಾದ ಶಿವನಿಂದ ಕೊಲ್ಲಲ್ಪಟ್ಟನು.

ತಸ್ಮಿನ್ಹತೇಽಥ ಸ್ವಂ ಭಾವಂ ಪ್ರತ್ಯಪದ್ಯಂತ ಮಾನವಾಃ ।
ಪ್ರಾಪದ್ಯಂತ ಚ ವೇದಾನ್ವೈ ಶಾಸ್ತ್ರಾಣಿ ಚ ಯಥಾ ಪುರಾ ॥೧೮॥

ಹೀಗೆ ಅಸುರಾಧಿಪತಿಯು (ದರ್ಪನು) ಹತನಾದನಂತರ ಪ್ರಜೆಗಳು ತಮ್ಮ ಪೂರ್ವಸ್ವಭಾವವನ್ನು ಹೊಂದಿದರು. ಹಿಂದಿನಂತೆಯೇ ವೇದ-ಶಾಸ್ತ್ರಗಳ ಜ್ಞಾನವನ್ನು ಪಡೆದುಕೊಂಡರು.

ತತೋಽಭಿಷಿಚ್ಯ ರಾಜ್ಯೇನ ದೇವಾನಾಂ ದಿವಿ ವಾಸವಮ್ ।
ಸಪ್ತರ್ಷಯಶ್ಚಾನ್ವಯುಂಜನ್ನರಾಣಾಂ ದಣ್ಡಧಾರಣೇ ॥೧೯॥

ಅನಂತರ ಸಪ್ತರ್ಷಿಗಳು, ಇಂದ್ರನನ್ನು ದೇವತೆಗಳ ರಾಜನನ್ನಾಗಿ ಸ್ವರ್ಗದಲ್ಲಿ ಪಟ್ಟಾಭಿಷೇಕಮಾಡಿ, ಭೂಲೋಕದಲ್ಲಿ ಪ್ರಜೆಗಳನ್ನು ಶಾಸನ ಮಾಡಲು ತಾವೇ ಉದ್ಯುಕ್ತರಾದರು.

ಸಪ್ತರ್ಷೀಣಾಮಥೋರ್ಧ್ವಂ ಚ ವಿಪೃಥುರ್ನಾಮ ಪಾರ್ಥಿವಃ ।
ರಾಜಾನಃ ಕ್ಷತ್ರಿಯಾಶ್ಚೈವ ಮಣ್ಡಲೇಷು ಪೃಥಕ್ಪೃಥಕ್ ॥೨೦॥

ಸಪ್ತರ್ಷಿಗಳು ಹಲವಾರು ವರ್ಷಗಳು ಭೂಲೋಕವನ್ನು ಆಳಿದನಂತರ

'ವಿಪೃಥು' ಎಂಬ ಹೆಸರಿನ ರಾಜನು ಭೂಮಂಡಲಕ್ಕೆ ಅಧಿಪತಿಯಾದನು. ಅದೇ ಸಮಯದಲ್ಲಿಯೇ ಹಲವಾರು ಕ್ಷತ್ರಿಯರಾಜರು ಭಿನ್ನ-ಭಿನ್ನಮಂಡಲ ಗಳಿಗೆ (ಪ್ರಾಂತಗಳಿಗೆ) ರಾಜರಾದರು.

ಮಹಾಕುಲೇಷು ಯೇ ಜಾತಾ ವೃದ್ಧಾಃ ಪೂರ್ವತರಾಶ್ಚ ಯೇ ।
ತೇಷಾಮಪ್ಯಾಸುರೋ ಭಾವೋ ಹೃದಯಾನ್ನಾಪಸರ್ಪತಿ ॥೨೧॥

ಆ ಸಮಯದಲ್ಲಿ ಮಹಾಕುಲಪ್ರಸೂತರಾದವರು ಅನೇಕರಿದ್ದರು. ಹಿಂದಿನಕಾಲದ ಸಂಪ್ರದಾಯವನ್ನು ಅನುಸರಿಸುತ್ತಿದ್ದ ವಯೋವೃದ್ಧರಿದ್ದರು. ಆದರೆ ಆಸುರಭಾವವು ಅವರ ಹೃದಯದಿಂದಲೂ ಸಂಪೂರ್ಣವಾಗಿ ಹೋಗಿರಲಿಲ್ಲ.

ತಸ್ಮಾತ್ತೇನೈವ ಭಾವೇನ ಸಾನುಷಙ್ಗೇಣ ಪಾರ್ಥಿವಾಃ ।
ಆಸುರಾಣ್ಯೇವ ಕರ್ಮಾಣಿ ನ್ಯಸೇವನ್ಭೀಮವಿಕ್ರಮಾಃ ॥೨೨॥

ಆದುದರಿಂದ ಭಯಂಕರಪರಾಕ್ರಮಿಗಳಾದ ಆ ರಾಜರು ಹೃದಯಾಂತ ರ್ಗತವಾಗಿದ್ದ ಆಸುರಭಾವದಲ್ಲಿಯೇ ಇದ್ದುಕೊಂಡು ಅಸುರೋಚಿತವಾದ ಕರ್ಮಗಳನ್ನೇ ಮಾಡುತ್ತಿದ್ದರು.

ಪ್ರತ್ಯತಿಷ್ಠಂಶ್ಚ ತೇಷ್ವೇವ ತಾನ್ಯೇವ ಸ್ಥಾಪಯನ್ತ್ಯಪಿ ।
ಭಜನ್ತೇ ತಾನಿ ಚಾದ್ಯಾಪಿ ಯೇ ಬಾಲಿಶತರಾ ನರಾಃ ॥೨೩॥

ಮೂರ್ಖರಾದ ಅಂತಹ ಜನರು ಈಗಲೂ ಆ ಆಸುರಭಾವದಲ್ಲಿಯೇ ಸುಸ್ಥಿರರಾಗಿದ್ದಾರೆ. ಅದನ್ನೇ ಎಲ್ಲ ಕಡೆಗಳಲ್ಲಿಯೂ ಸ್ಥಿರಗೊಳಿಸುತ್ತಿದ್ದಾರೆ. ಅವರೆಲ್ಲರೂ ಈಗಲೂ ಸರ್ವಪ್ರಕಾರದಿಂದಲೂ ಆ ಆಸುರಭಾವವನ್ನೇ ಸೇವಿಸುತ್ತಿದ್ದಾರೆ.

ತಸ್ಮಾದಹಂ ಬ್ರವೀಮಿ ತ್ವಾಂ ರಾಜನ್ಸಂಚಿನ್ತ್ಯ ಶಾಸ್ತ್ರತಃ ।
ಸಂಸಿದ್ಧಾಧಿಗಮಂ ಕುರ್ಯಾತ್ಕರ್ಮ ಹಿಂಸಾತ್ಮಕಂ ತ್ಯಜೇತ್ ॥೨೪॥

ಮಹಾರಾಜ! ಆದುದರಿಂದ ನಾನು ಶಾಸ್ತ್ರಾನುಸಾರವಾಗಿ ಚೆನ್ನಾಗಿ ಯೋಚಿಸಿ ಈ ಮಾತುಗಳನ್ನು ನಿನಗೆ ಹೇಳುತ್ತಿದ್ದೇನೆ. ಮನುಷ್ಯನು ಒಳ್ಳೆಯ ಸಿದ್ಧಿಯನ್ನುಂಟುಮಾಡುವ ಕರ್ಮವನ್ನೇ ಮಾಡಬೇಕು. ಹಿಂಸಾತ್ಮಕವಾದ ಕರ್ಮವನ್ನು ಸಂಪೂರ್ಣವಾಗಿ ತ್ಯಜಿಸಬೇಕು.

ನ ಸಂಕರೇಣ ದ್ರವಿಣಂ ಪ್ರಚಿನ್ವೀಯಾದ್ವಿಚಕ್ಷಣಃ ।
ಧರ್ಮಾರ್ಥಂ ನ್ಯಾಯಮುತ್ಸೃಜ್ಯ ನ ತತ್ಕಲ್ಯಾಣಮುಚ್ಯತೇ ॥೨೫॥

ವಿಚಕ್ಷಣನಾದವನು ಧರ್ಮದ ಕಾರ್ಯವನ್ನು ಮಾಡಲು ನ್ಯಾಯವಾದ ಮಾರ್ಗವನ್ನು ಬಿಟ್ಟು ಪಾಪಮಿಶ್ರಿತವಾದ ಮಾರ್ಗದಲ್ಲಿ ಧನವನ್ನು ಸಂಗ್ರಹಿಸಬಾರದು. ಹಾಗೆ ಸಂಪಾದಿಸಿದ ಧನವು ಕಲ್ಯಾಣಕಾರಿಯೆಂದು ವಿದ್ವಾಂಸರು ಹೇಳುವುದಿಲ್ಲ.

ಸ ತ್ವಮೇವಂವಿಧೋ ದಾನ್ತಃ ಕ್ಷತ್ರಿಯಃ ಪ್ರಿಯಬಾನ್ಧವಃ ।
ಪ್ರಜಾ ಭೃತ್ಯಾಂಶ್ಚ ಪುತ್ರಾಂಶ್ಚ ಸ್ವಧರ್ಮೇಣಾನುಪಾಲಯ ॥೨೬॥

ಜನಕರಾಜ! ನೀನೂ ಕೂಡ ಹೀಗೆ ನ್ಯಾಯಮಾರ್ಗದಲ್ಲಿಯೇ ಧನವನ್ನು ಸಂಗ್ರಹಿಸುತ್ತಾ ಜಿತೇಂದ್ರಿಯನಾದ ಕ್ಷತ್ರಿಯನಾಗಿ, ಬಾಂಧವಪ್ರಿಯನಾಗಿ, ಪ್ರಜೆಗಳನ್ನೂ–ಭೃತ್ಯರನ್ನೂ ಮತ್ತು ಪುತ್ರರನ್ನೂ ಸ್ವಧರ್ಮಾನುಸಾರವಾಗಿ ಪರಿಪಾಲಿಸು.

ಇಷ್ಟಾನಿಷ್ಟಸಮಾಯೋಗೋ ವೈರಂ ಸೌಹಾರ್ದಮೇವ ಚ ।
ಅಥ ಜಾತಿಸಹಸ್ರಾಣಿ ಬಹೂನಿ ಪರಿವರ್ತತೇ ॥೨೭॥

ಇಷ್ಟ ಮತ್ತು ಅನಿಷ್ಟಗಳ ಪ್ರಾಪ್ತಿ, ವೈರ, ಸೌಹಾರ್ದ – ಈ ಎಲ್ಲದರ ಅನುಭವಗಳನ್ನೂ ಪಡೆದುಕೊಳ್ಳುತ್ತಾ ಜೀವವು ಅನೇಕಸಹಸ್ರಜನ್ಮಗಳನ್ನು ಕಳೆದಿದೆ.

ತಸ್ಮಾದ್ಗುಣೇಷು ರಜ್ಯೇಥಾ ಮಾ ದೋಷೇಷು ಕದಾಚನ ।
ನಿರ್ಗುಣೋ ಯೋ ಹಿ ದುರ್ಬುದ್ಧಿರಾತ್ಮನಃ ಸೋಽರಿರುಚ್ಯತೇ ॥೨೮॥

ಆದುದರಿಂದ ನಿನಗೆ ಸದ್ಗುಣಗಳಲ್ಲಿಯೇ ಅನುರಾಗವುಂಟಾಗಲಿ ; ದುರ್ಗುಣಗಳಲ್ಲಿ ಯಾವಾಗಲೂ ನಿನಗೆ ಅನುರಾಗವಿಲ್ಲದಿರಲಿ. ಯಾವನು ಗುಣಹೀನನೋ ಮತ್ತು ದುಷ್ಟವಾದ ಬುದ್ಧಿಯುಳ್ಳವನಾಗಿರುವನೋ– ಅವನು ತನಗೆ ತಾನೇ ಶತ್ರುವಾಗುವನೆಂದು ವಿದ್ವಾಂಸರು ಹೇಳುತ್ತಾರೆ.

ಮಾನುಷೇಷು ಮಹಾರಾಜ ಧರ್ಮಾಧರ್ಮೌ ಪ್ರವರ್ತತಃ ।
ನ ತಥಾನ್ಯೇಷು ಭೂತೇಷು ಮನುಷ್ಯರಹಿತೇಷ್ವಿಹ ॥೨೯॥

ಮಹಾರಾಜ! ಧರ್ಮಾಧರ್ಮಗಳು ಮನುಷ್ಯರಲ್ಲಿ ಮಾತ್ರವೇ ಇರುತ್ತವೆ. ಮನುಷ್ಯರಲ್ಲಿ ಧರ್ಮಾಧರ್ಮಗಳಿರುವಂತೆ ಮನುಷ್ಯೇತರಪ್ರಾಣಿಗಳಲ್ಲಿರುವುದಿಲ್ಲ.

ಧರ್ಮಶೀಲೋ ನರೋ ವಿದ್ವಾನೀಹಕೋಽನೀಹಕೋಽಪಿ ವಾ ।
ಆತ್ಮಭೂತಃ ಸದಾ ಲೋಕೇ ಚರೇದ್ಭೂತಾನ್ಯಹಿಂಸಯಾ ॥೩೦॥

ಧರ್ಮಶೀಲನಾದ ವಿದ್ವಾಂಸನು ಪ್ರಾಪಂಚಿಕವಾದ ಸುಖದಲ್ಲಿ ಅಪೇಕ್ಷೆಯುಳ್ಳವನಾಗಿರಲಿ, ಅಪೇಕ್ಷೆಯಿಲ್ಲದವನಾಗಿರಲಿ – ಜಗತ್ತಿನಲ್ಲಿರುವ ಎಲ್ಲ ಪ್ರಾಣಿಗಳನ್ನೂ ಆತ್ಮಭಾವದಿಂದ ಕಾಣುತ್ತಾ ಯಾವ ಪ್ರಾಣಿಗಳನ್ನೂ ಹಿಂಸಿಸದೇ ಜೀವನವನ್ನು ನಡೆಸಬೇಕು.

ಯದಾ ವ್ಯಪೇತಹೃಲ್ಲೇಖಂ ಮನೋ ಭವತಿ ತಸ್ಯ ವೈ ।
ನಾನೃತಂ ಚೈವ ಭವತಿ ತದಾ ಕಲ್ಯಾಣಮೃಚ್ಛತಿ ॥೩೧॥

ಯಾವಾಗ ಮನುಷ್ಯನ ಮನಸ್ಸು ಕಾಮನೆಗಳಿಂದಲೂ–ಪೂರ್ವಜನ್ಮದ ವಾಸನೆಗಳಿಂದಲೂ ರಹಿತವಾಗುವುದೋ ಮತ್ತು ಮನುಷ್ಯನು ಮಿಥ್ಯಾ ಭಾವದಿಂದ ರಹಿತನಾಗುವನೋ (ಅಹಂಕಾರದಿಂದಲೂ ಅಜ್ಞಾನದಿಂದಲೂ ರಹಿತನಾಗುವನೋ)–ಆಗ ಅವನು ಪರಮಕಲ್ಯಾಣವನ್ನು ಹೊಂದುತ್ತಾನೆ."

೨೯೪ನೆಯ ಅಧ್ಯಾಯವು ಮುಗಿಯಿತು.

೨೯೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪರಾಶರಗೀತಾ

ವಿಷಯಾಸಕ್ತನಾದ ಮನುಷ್ಯನಿಗೆ ಪ್ರಾಪ್ತವಾಗುವ ದುರ್ಗತಿ: ತಪೋಬಲದ ಶ್ರೇಷ್ಠತೆ ಮತ್ತು ದೃಢಪೂರ್ವಕವಾಗಿ ಸ್ವಧರ್ಮಪರಿಪಾಲನೆಗೆ ಆದೇಶ

ಧರ್ಮಜ! ಪರಾಶರರು ಜನಕನಿಗೆ ಹೇಳುತ್ತಾರೆ :

ಏಷ ಧರ್ಮವಿಧಿಸ್ತಾತ ಗೃಹಸ್ಥಸ್ಯ ಪ್ರಕೀರ್ತಿತಃ ।
ತಪೋವಿಧಿಂ ತು ವಕ್ಷ್ಯಾಮಿ ತನ್ಮೇ ನಿಗದತಃ ಶೃಣು ॥೧॥

“ಜನಕರಾಜ! ನಾನು ನಿನಗೆ ಗೃಹಸ್ಥಧರ್ಮದ ವಿಧಿ-ನಿಯಮಗಳನ್ನು ಹೇಳಿದೆನು. ಈಗ ತಪಸ್ಸಿನ ವಿಧಿ-ನಿಯಮಗಳನ್ನು ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು :

ಪ್ರಾಯೇಣ ಚ ಗೃಹಸ್ಥಸ್ಯ ಮಮತ್ವಂ ನಾಮ ಜಾಯತೇ ।
ಸಙ್ಗಾಗತಂ ನರಶ್ರೇಷ್ಠ ಭಾವೈ ರಾಜಸತಾಮಸೈಃ ॥೨॥

ಗೃಹಸ್ಥನಿಗೆ ಸಾಮಾನ್ಯವಾಗಿ ರಾಜಸ-ತಾಮಸಭಾವಗಳ ಸಂಸರ್ಗದಿಂದ ವಸ್ತುಗಳಲ್ಲಿ ಮತ್ತು ವ್ಯಕ್ತಿಗಳಲ್ಲಿ ಮಮತೆಯುಂಟಾಗುತ್ತದೆ.

ಗೃಹಾಣ್ಯಾಶ್ರಿತ್ಯ ಗಾವಶ್ಚ ಕ್ಷೇತ್ರಾಣಿ ಚ ಧನಾನಿ ಚ ।
ದಾರಾಃ ಪುತ್ರಾಶ್ಚ ಭೃತ್ಯಾಶ್ಚ ಭವನ್ತೀಹ ನರಸ್ಯ ವೈ ॥೩॥

ಗೃಹಸ್ಥಾಶ್ರಮವನ್ನು ಆಶ್ರಯಿಸಿರುವ ಪುರುಷನಿಗೆ ಹಸುಗಳೂ, ಗದ್ದೆ-ಹೊಲ-ತೋಟಗಳೂ, ಧನ-ಕನಕಗಳೂ, ಪತ್ನೀ-ಪುತ್ರರೂ, ಭೃತ್ಯರೂ ಆಶ್ರಿತರಾಗಿರುತ್ತಾರೆ.

ಏವಂ ತಸ್ಯ ಪ್ರವೃತ್ತಸ್ಯ ನಿತ್ಯಮೇವಾನುಪಶ್ಯತಃ ।
ರಾಗದ್ವೇಷೌ ವಿವರ್ಧೇತೇ ಹ್ಯನಿತ್ಯತ್ವಮಪಶ್ಯತಃ ॥೪॥

ಹೀಗೆ ಪ್ರವೃತ್ತಿಮಾರ್ಗದಲ್ಲಿಯೇ ಇರುತ್ತಾ, ನಿತ್ಯವೂ ತನಗೆ ಸಂಬಂಧಿಸಿದವರ ಮತ್ತು ಸಂಬಂಧಿಸಿದ ವಸ್ತುಗಳ ಯೋಗ-ಕ್ಷೇಮಗಳನ್ನು ನೋಡುತ್ತಿರುವ ಗೃಹಸ್ಥನಿಗೆ–ಅವನು ಆ ವಸ್ತುಗಳ ಅನಿತ್ಯತೆಯನ್ನು ಯೋಚಿಸದೇ ಇರುವುದರಿಂದ–ಅವನ ಮನಸ್ಸಿನಲ್ಲಿ ರಾಗ-ದ್ವೇಷಗಳು ಅಧಿಕಗೊಳ್ಳುತ್ತವೆ.

ರಾಗದ್ವೇಷಾಭಿಭೂತಂ ಚ ನರಂ ದ್ರವ್ಯವಶಾನುಗಮ್ ।
ಮೋಹಜಾತಾ ರತಿರ್ನಾಮ ಸಮುಪೈತಿ ನರಾಧಿಪ ॥೫॥

ನರಾಧಿಪನೇ! ರಾಗ-ದ್ವೇಷಗಳಿಗೆ ವಶೀಭೂತನಾಗಿ ಯಾವಾಗ ಮನುಷ್ಯನು ಧನದಲ್ಲಿಯೇ ಆಸಕ್ತನಾಗುವನೋ–ಆಗ ವ್ಯಾಮೋಹದಿಂದ ಹುಟ್ಟಿದ ರತಿ (ಅನುರಾಗ) ಎಂಬ ಕನ್ಯೆಯು ಅವನ ಬಳಿ ಬರುತ್ತಾಳೆ.

ಕೃತಾರ್ಥಂ ಭೋಗಿನಂ ಮತ್ವಾ ಸರ್ವೋ ರತಿಪರಾಯಣಃ ।
ಲಾಭಂ ಗ್ರಾಮ್ಯಸುಖಾದನ್ಯಂ ರತಿತೋ ನಾನುಪಶ್ಯತಿ ॥೬॥

ಅನಂತರ ರತಿಪರಾಯಣರಾದ ಎಲ್ಲ ಜನರೂ ಭೋಗಾನುಭವ ದಿಂದಲೇ ಕೃತಾರ್ಥರಾದೆವೆಂದು ಭಾವಿಸಿ, ಗ್ರಾಮ್ಯಸುಖವೆಂದು ವಿದ್ವಾಂಸ ರಿಂದ ಪರಿಗಣಿಸಲ್ಪಟ್ಟಿರುವ ರತಿಸುಖಕ್ಕಿಂತಲೂ ಬೇರೆ ಯಾವ ಲಾಭವನ್ನೂ ಅವರು ತಮ್ಮ ಜೀವನದಲ್ಲಿ ಕಾಣುವುದೇ ಇಲ್ಲ.

ತತೋ ಲೋಭಾಭಿಭೂತಾತ್ಮಾ ಸಂಗಾದ್ವರ್ಧಯತೇ ಜಗತ್ ।
ಪುಷ್ಟ್ಯರ್ಥಂ ಚೈವ ತಸ್ಯೇಹ ಜನಸ್ಯಾರ್ಥಂ ಚಿಕೀರ್ಷತಿ ॥೭॥

ಅನಂತರ ಆ ಮನುಷ್ಯನು ಸ್ವಾಭಾವಿಕವಾಗಿಯೇ ಲೋಭಿಯಾಗು ತ್ತಾನೆ. ಸಂಸಾರದಲ್ಲಿ ಆಸಕ್ತನಾಗಿ ಸಂಸಾರವನ್ನು ಹೆಚ್ಚಿಸಿಕೊಳ್ಳುತ್ತಾನೆ. ಬಳಿಕ ಕುಟುಂಬವರ್ಗದವರ ಪಾಲನೆ-ಪೋಷಣೆಗಳಿಗಾಗಿಯೇ ಹೆಚ್ಚು ಧನವನ್ನು ಸಂಗ್ರಹಿಸಲು ಇಷ್ಟಪಡುತ್ತಾನೆ.

ಸ ಜಾನನ್ನಪಿ ಚಾಕಾರ್ಯಮರ್ಥಾರ್ಥಂ ಸೇವತೇ ನರಃ ।
ಬಾಲಸ್ನೇಹಪರೀತಾತ್ಮಾ ತತ್ಕ್ಷಯಾಚ್ಚಾನುತಪ್ಯತೇ ॥೮॥

ಯದ್ಯಪಿ ಧನಸಂಗ್ರಹಕ್ಕಾಗಿ ತಾನು ಮಾಡುತ್ತಿರುವುದು ಅಕಾರ್ಯ ವೆಂದು ಅವನಿಗೆ ತಿಳಿದಿದ್ದರೂ–ಅನಿವಾರ್ಯವಾಗಿ ಆ ಅಕಾರ್ಯವನ್ನೇ ಪುನಃ ಮಾಡುತ್ತಾನೆ. ಮಕ್ಕಳು-ಮರಿಗಳನ್ನು ಪ್ರೀತಿಸುವುದರಲ್ಲಿಯೇ ಅವನ ಮನಸ್ಸು ಹುದುಗಿಹೋಗಿರುತ್ತದೆ. ಪ್ರೀತಿಯ ಮಕ್ಕಳಲ್ಲಿ ಯಾರಾದರೂ ಮರಣಹೊಂದಿದರೆ ಪರಿತಪಿಸುತ್ತಾನೆ.

ತತೋ ಮಾನೇನ ಸಮ್ಪನ್ನೋ ರಕ್ಷನ್ನಾತ್ಮಪರಾಜಯಮ್ ।
ಕರೋತಿ ಯೇನ ಭೋಗೀ ಸ್ಯಾಮಿತಿ ತಸ್ಮಾದ್ವಿನಶ್ಯತಿ ॥೯॥

ಯಾವುದೇ ರೀತಿಯಲ್ಲಿ ಧನವನ್ನು ಸಂಗ್ರಹಿಸಿದರೂ ಧನವಂತನು ಸಮಾಜದಲ್ಲಿ ಮರ್ಯಾದಸ್ಥನಾಗುತ್ತಾನೆ. ಅಂತಹ ಮರ್ಯಾದೆಯನ್ನು ಕಾಪಾಡಿಕೊಳ್ಳಲು ಮನುಷ್ಯನು ಸರ್ವದಾ ಪ್ರಯತ್ನಿಸುತ್ತಲೇ ಇರುತ್ತಾನೆ. 'ನಾನು ಸಕಲಸುಖೋಪಭೋಗಗಳನ್ನೂ ಹೊಂದಿದವನಾಗಿರಬೇಕು'–ಎಂಬ ಒಂದೇ ಉದ್ದೇಶದಿಂದ ಅವನು ಎಲ್ಲ ಕಾರ್ಯಗಳನ್ನೂ ಮಾಡುತ್ತಿರುತ್ತಾನೆ.

ಅಂತಹ ಪ್ರಯತ್ನದಲ್ಲಿರುವಾಗಲೇ ಇನ್ನೂ ಅನೇಕವಿಧವಾದ ಆಕಾಂಕ್ಷೆಗಳು ಪೂರ್ಣವಾಗಬೇಕಾಗಿರುವಾಗಲೇ ಅವನು ಒಂದು ದಿನ ಸಾವನ್ನಪ್ಪುತ್ತಾನೆ.

ತಥಾ ಹಿ ಬುದ್ಧಿಯುಕ್ತಾನಾಂ ಶಾಶ್ವತಂ ಬ್ರಹ್ಮವಾದಿನಾಮ್ ।
ಅನ್ವಿಚ್ಛತಾಂ ಶುಭಂ ಕರ್ಮ ನರಾಣಾಂ ತ್ಯಜತಾಂ ಸುಖಮ್ ॥೧೦॥

ಜನಕರಾಜ! ವಾಸ್ತವವಾಗಿ ಯಾರು ಸಮತ್ವಬುದ್ಧಿಯಿಂದ ಯುಕ್ತರಾಗಿ ಶುಭಕರ್ಮಗಳನ್ನೇ ಅನುಷ್ಠಾನಮಾಡುವರೋ, ಅನಿತ್ಯವಾದ ಪ್ರಾಪಂಚಿಕ ಸುಖವನ್ನು ತ್ಯಾಗಮಾಡುವರೋ–ಅಂತಹ ಬ್ರಹ್ಮನಿಷ್ಠರಿಗೆ ಶಾಶ್ವತವಾದ ಸುಖವು ಲಭಿಸುತ್ತದೆ.

ಸ್ನೇಹಾಯತನನಾಶಾಚ್ಚ ಧನನಾಶಾಚ್ಚ ಪಾರ್ಥಿವ ।
ಆಧಿವ್ಯಾಧಿಪ್ರತಾಪಾಚ್ಚ ನಿರ್ವೇದಮುಪಗಚ್ಛತಿ ॥೧೧॥

ಮಹಾರಾಜ! ಸಂಸಾರಿಗಳು ತಮ್ಮ ಸ್ನೇಹಾಸಕ್ತಿಗಳಿಗೆ ಆಧಾರಭೂತ ರಾದ ಪುತ್ರ-ಪುತ್ರೀ-ಕಳತ್ರಾದಿಗಳ ಸಾವಿನಿಂದಲೂ, ಧನದ ವಿನಾಶದಿಂದಲೂ, ಆಧಿ-ವ್ಯಾಧಿಗಳ ಪೀಡನೆಯಿಂದಲೂ–ವೈರಾಗ್ಯವನ್ನು ಹೊಂದುತ್ತಾರೆ.

ನಿರ್ವೇದಾದಾತ್ಮಸಮ್ಬೋಧಃ ಸಮ್ಬೋಧಾಚ್ಛಾಸ್ತ್ರದರ್ಶನಮ್ ।
ಶಾಸ್ತ್ರಾರ್ಥದರ್ಶನಾದ್ರಾಜಂಸ್ತಪ ಏವಾನುಪಶ್ಯತಿ ॥೧೨॥

ವೈರಾಗ್ಯಲಾಭದಿಂದ ಮನುಷ್ಯನಿಗೆ ಆತ್ಮತತ್ತ್ವದಲ್ಲಿ ಜಿಜ್ಞಾಸೆಯುಂಟಾಗಿ ಶಾಸ್ತ್ರಾನುಸಂಧಾನದಲ್ಲಿ ಆಸಕ್ತಿಯುಂಟಾಗುತ್ತದೆ. ಶಾಸ್ತ್ರಾರ್ಥಗಳ ಮನನದಿಂದ ತಪಸ್ಸೇ ಶ್ರೇಯಸ್ಸಿಗೆ ಮುಖ್ಯವಾದ ಸಾಧನವೆಂಬ ಅರಿವುಂಟಾಗುತ್ತದೆ.

ದುರ್ಲಭೋ ಹಿ ಮನುಷ್ಯೇನ್ದ್ರ ನರಃ ಪ್ರತ್ಯವಮರ್ಶವಾನ್ ।
ಯೋ ವೈ ಪ್ರಿಯಸುಖೇ ಕ್ಷೀಣೇ ತಪಃ ಕರ್ತುಂ ವ್ಯವಸ್ಯತಿ ॥೧೩॥

ಮಹಾರಾಜ! ಆದರೆ ಈ ಪ್ರಪಂಚದಲ್ಲಿ ಪ್ರಿಯರಾದ ಪತ್ನೀ-ಪುತ್ರರೂ, ಅವರ ಸಂಬಂಧದಿಂದ ಲಭಿಸುತ್ತಿದ್ದ ಸುಖವೂ ಕ್ಷೀಣಿಸಿದನಂತರ

ವಾದರೂ ತಪಸ್ಸನ್ನು ಮಾಡಲು ನಿಶ್ಚಯಿಸುವ ಸಾರಾಸಾರವಿವೇಕವುಳ್ಳ ಮನುಷ್ಯನು ದುರ್ಲಭನೇ ಸರಿ.

ತಪಃ ಸರ್ವಗತಂ ತಾತ ಹೀನಸ್ಯಾಪಿ ವಿಧೀಯತೇ ।
ಜಿತೇನ್ದ್ರಿಯಸ್ಯ ದಾನ್ತಸ್ಯ ಸ್ವರ್ಗಮಾರ್ಗಪ್ರವರ್ತಕಮ್ ॥೧೪॥

ತಪಸ್ಸನ್ನು ಮಾಡಲು ಸರ್ವರಿಗೂ ಅಧಿಕಾರವಿದೆ. ಜಿತೇಂದ್ರಿಯನಾದ ಮನೋನಿಗ್ರಹಸಂಪನ್ನನಾದ ಹೀನಜಾತಿಯವನೂ ತಪಸ್ಸನ್ನು ಮಾಡಬಹುದಾಗಿದೆ. ಏಕೆಂದರೆ : ತಪಸ್ಸೆಂಬುದು ಮನುಷ್ಯನನ್ನು ಸ್ವರ್ಗದ ಮಾರ್ಗಕ್ಕೆ ಒಯ್ಯುತ್ತದೆ.

ಪ್ರಜಾಪತಿಃ ಪ್ರಜಾಃ ಪೂರ್ವಮಸೃಜತ್ತಪಸಾ ವಿಭುಃ ।
ಕ್ವಚಿತ್ಕ್ವಚಿದ್ಬ್ರಹ್ಮಪರೋ ವ್ರತಾನ್ಯಾಸ್ಥಾಯ ಪಾರ್ಥಿವ ॥೧೫॥

ಹಿಂದೆ ಪ್ರಭುವಾದ ಪ್ರಜಾಪತಿಯು ಬ್ರಹ್ಮಪರಾಯಣನಾಗಿ ವ್ರತಾನುಷ್ಠಾನಗಳನ್ನು ಮಾಡುತ್ತಾ ಆಗಾಗ ತಪಶ್ಚರಣೆಯಿಂದಲೇ ಪ್ರಜೆಗಳನ್ನು ಸೃಷ್ಟಿಸಿದನು.

ಆದಿತ್ಯಾ ವಸವೋ ರುದ್ರಾಸ್ತಥೈವಾಗ್ನ್ಯಶ್ವಿಮಾರುತಾಃ ।
ವಿಶ್ವೇದೇವಾಸ್ತಥಾ ಸಾಧ್ಯಾಃ ಪಿತರೋಽಥ ಮರುದ್ಗಣಾಃ ॥೧೬॥

ಯಕ್ಷರಾಕ್ಷಸಗನ್ಧರ್ವಾಃ ಸಿದ್ಧಾಶ್ಚಾನ್ಯೇ ದಿವೌಕಸಃ ।
ಸಂಸಿದ್ಧಾಸ್ತಪಸಾ ತಾತ ಯೇ ಚಾನ್ಯೇ ಸ್ವರ್ಗವಾಸಿನಃ ॥೧೭॥

ಆದಿತ್ಯರು, ವಸುಗಳು, ರುದ್ರರು, ಅಗ್ನಿ, ಅಶ್ವಿನೀದೇವತೆಗಳು, ವಾಯು, ವಿಶ್ವೇದೇವತೆಗಳು, ಸಾಧ್ಯರು, ಪಿತೃಗಳು, ಮರುದ್ಗಣಗಳು, ಯಕ್ಷರು, ರಾಕ್ಷಸರು, ಗಂಧರ್ವರು, ಸಿದ್ಧರು ಮತ್ತು ಸ್ವರ್ಗವಾಸಿಗಳಾದ ಇತರ ದೇವತೆಗಳು–ಇವರೆಲ್ಲರೂ ತಪಸ್ಸಿನಿಂದಲೇ ಸಿದ್ಧಿಯನ್ನು ಪಡೆದಿರುತ್ತಾರೆ.

ಯೇ ಚಾದೌ ಬ್ರಾಹ್ಮಣಾಃ ಸೃಷ್ಟಾ ಬ್ರಹ್ಮಣಾ ತಪಸಾ ಪುರಾ ।
ತೇ ಭಾವಯನ್ತಃ ಪೃಥಿವೀಂ ವಿಚರನ್ತಿ ದಿವಂ ತಥಾ ॥೧೮॥

ಬ್ರಹ್ಮನು ಹಿಂದೆ ತಪಸ್ಸಿನಿಂದ ಮರೀಚಿಯೇ ಮೊದಲಾದ ಯಾವ ಬ್ರಾಹ್ಮಣರನ್ನು ಸೃಷ್ಟಿಮಾಡಿದನೋ–ಅವರೆಲ್ಲರೂ ತಪಸ್ಸಿನ ಪ್ರಭಾವ

ದಿಂದಲೇ ಪೃಥಿವಿಯನ್ನೂ ಮತ್ತು ಸ್ವರ್ಗವನ್ನೂ ಪವಿತ್ರಗೊಳಿಸುತ್ತಾ ಸಂಚರಿಸುತ್ತಿದ್ದಾರೆ.

ಮರ್ತ್ಯಲೋಕೇ ಚ ರಾಜಾನೋ ಯೇ ಚಾನ್ಯೇ ಗೃಹಮೇಧಿನಃ ।
ಮಹಾಕುಲೇಷು ದೃಶ್ಯನ್ತೇ ತತ್ಸರ್ವಂ ತಪಸಃ ಫಲಮ್ ॥೧೯॥

ಈ ಮನುಷ್ಯಲೋಕದಲ್ಲಿಯೂ ಮಹಾಕುಲಗಳಲ್ಲಿ ಜನಿಸಿರುವ ರಾಜರೂ ಮತ್ತು ಗೃಹಸ್ಥರೂ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಾರೆ. ಹಾಗೆ ಮಹಾಕುಲಗಳಲ್ಲಿ ಹುಟ್ಟಲು ಅವರು ಹಿಂದೆ ಮಾಡಿದ ತಪಸ್ಸಿನ ಫಲವೇ ಕಾರಣವಾಗಿದೆ.

ಕೌಶಿಕಾನಿ ಚ ವಸ್ತ್ರಾಣಿ ಶುಭಾನ್ಯಾಭರಣಾನಿ ಚ ।
ವಾಹನಾಸನಪಾನಾನಿ ತತ್ಸರ್ವಂ ತಪಸಃ ಫಲಮ್ ॥೨೦॥

ರೇಷ್ಮೆಯ ವಸ್ತ್ರಗಳು, ಸುಂದರವಾದ ಆಭರಣಗಳು, ವಾಹನಗಳು, ಆಸನಗಳು, ಉತ್ತಮವಾದ ಪಾನೀಯಗಳು–ಇವೆಲ್ಲವೂ ತಪಸ್ಸಿನ ಫಲವಾಗಿ ಲಭಿಸತಕ್ಕುವುಗಳಾಗಿವೆ.

ಮನೋಽನುಕೂಲಾಃ ಪ್ರಮದಾ ರೂಪವತ್ಯಃ ಸಹಸ್ರಶಃ ।
ವಾಸಃ ಪ್ರಾಸಾದಪೃಷ್ಠೇ ಚ ತತ್ಸರ್ವಂ ತಪಸಃ ಫಲಮ್ ॥೨೧॥

ಮನಸ್ಸಿಗೆ ಅನುಕೂಲವಾಗಿ ನಡೆದುಕೊಳ್ಳುವ ರೂಪವತಿಯರಾದ ಸಾವಿರಾರು ಯುವತಿಯರನ್ನು ಹೊಂದಿರುವುದು, ದೊಡ್ಡದಾದ ಮತ್ತು ಸುಂದರವಾದ ಉಪ್ಪರಿಗೆಯ ಮನೆಯಲ್ಲಿ ವಾಸಮಾಡುವುದು–ಇವೆಲ್ಲವೂ ತಪಸ್ಸಿನ ಫಲವಾಗಿ ಲಭಿಸತಕ್ಕುವುಗಳಾಗಿವೆ.

ಶಯನಾನಿ ಚ ಮುಖ್ಯಾನಿ ಭೋಜ್ಯಾನಿ ವಿವಿಧಾನಿ ಚ ।
ಅಭಿಪ್ರೇತಾನಿ ಸರ್ವಾಣಿ ಭವನ್ತಿ ಶುಭಕರ್ಮಿಣಾಮ್ ॥೨೨॥

ಪುಣ್ಯಕರ್ಮಗಳನ್ನು ಮಾಡಿದವರಿಗೆ–ಶ್ರೇಷ್ಠವಾದ ಹಾಸಿಗೆಗಳೂ, ವಿಧ-ವಿಧವಾದ ಭೋಜನಪದಾರ್ಥಗಳೂ ಮತ್ತು ಮನೋವಾಂಛಿತವಾದ ಇತರ ಪದಾರ್ಥಗಳೆಲ್ಲವೂ ಲಭಿಸುತ್ತವೆ.

ನಾಪ್ರಾಪ್ಯಂ ತಪಸಃ ಕಿಂಚಿತ್ತ್ರೈಲೋಕ್ಯೇಽಪಿ ಪರಂತಪ ।
ಉಪಭೋಗಪರಿತ್ಯಾಗಃ ಫಲಾನ್ಯಕೃತಕರ್ಮಣಾಮ್ ॥೨೩॥

ಪರಂತಪನೇ! ಮೂರು ಲೋಕಗಳಲ್ಲಿಯೂ ತಪಸ್ಸಿನಿಂದ ಲಭ್ಯ ವಾಗದೇ ಇರತಕ್ಕುದು ಯಾವುದು ಇಲ್ಲ. ಯಾವ ತಪಸ್ಸನ್ನೂ ಮಾಡದೇ ಇರುವವರಿಗೆ ಮೇಲೆ ಹೇಳಿದ ಉಪಭೋಗಗಳೊಂದೂ ಇಲ್ಲದಿರುವುದೇ ಫಲವಾಗುತ್ತದೆ.

ಸುಖಿತೋ ದುಃಖಿತೋ ವಾಪಿ ನರೋ ಲೋಭಂ ಪರಿತ್ಯಜೇತ್ ।
ಅವೇಕ್ಷ್ಯ ಮನಸಾ ಶಾಸ್ತ್ರಂ ಬುದ್ಧ್ಯಾ ಚ ನೃಪಸತ್ತಮ ॥೨೪॥

ನೃಪಶ್ರೇಷ್ಠನೇ! ಮನುಷ್ಯನು ಸುಖಿಯಾಗಿರಲಿ ; ದುಃಖಿಯಾಗಿರಲಿ– ಮನಸ್ಸಿನಿಂದಲೂ ಮತ್ತು ಬುದ್ಧಿಯಿಂದಲೂ ಶಾಸ್ತ್ರಗಳ ತತ್ತ್ವವನ್ನು ಚೆನ್ನಾಗಿ ಪರಿಶೀಲಿಸಿ ಲೋಭವನ್ನು ಪರಿತ್ಯಜಿಸಬೇಕು.

ಅಸಂತೋಷೋಽಸುಖಾಯೇತಿ ಲೋಭಾದಿನ್ದ್ರಿಯಸಮ್ಭ್ರಮಃ ।
ತತೋಽಸ್ಯ ನಶ್ಯತಿ ಪ್ರಜ್ಞಾ ವಿದ್ಯೇವಾಭ್ಯಾಸವರ್ಜಿತಾ ॥೨೫॥

ಅಸಂತುಷ್ಟಿಯು ದುಃಖಕ್ಕೆ ಕಾರಣವಾಗುತ್ತದೆ. ಲೋಭದಿಂದ ಮನಸ್ಸಿನ ಮತ್ತು ಇಂದ್ರಿಯಗಳ ಚಾಂಚಲ್ಯವುಂಟಾಗುತ್ತದೆ. ಮನಸ್ಸಿನ ಚಾಂಚಲ್ಯದಿಂದ–ಏಕಾಗ್ರತೆಯಿಂದ ಮತ್ತೆ-ಮತ್ತೆ ಅಭ್ಯಾಸಮಾಡದಿರುವ ವಿದ್ಯೆಯು ಹಾಳಾಗುವಂತೆ–ಮನುಷ್ಯನ ಪ್ರಜ್ಞೆಯು ಹಾಳಾಗುತ್ತದೆ.

ನಷ್ಟಪ್ರಜ್ಞೋ ಯದಾ ತು ಸ್ಯಾತ್ತದಾ ನ್ಯಾಯಂ ನ ಪಶ್ಯತಿ ।
ತಸ್ಮಾತ್ಸುಖಕ್ಷಯೇ ಪ್ರಾಪ್ತೇ ಪುಮಾನುಗ್ರಂ ತಪಶ್ಚರೇತ್ ॥೨೬॥

ಮನುಷ್ಯನು ಬುದ್ಧಿಯನ್ನು ಕಳೆದುಕೊಂಡರೆ ನ್ಯಾಯವನ್ನು ತಿಳಿಯ ಲಾರನು. (ಕರ್ತವ್ಯಾಕರ್ತವ್ಯಗಳನ್ನು ವಿವೇಚಿಸುವುದಿಲ್ಲ.) ಆದುದರಿಂದ ಸುಖವು ನಷ್ಟವಾಗಿಹೋದನಂತರ ಮನುಷ್ಯನು ಉಗ್ರವಾದ ತಪಸ್ಸನ್ನೇ ಮಾಡಬೇಕು.

ಯದಿಷ್ಟಂ ತತ್ಸುಖಂ ಪ್ರಾಹುರ್ದ್ವೇಷ್ಯಂ ದುಃಖಮಿಹೇಷ್ಯತೇ ।
ಕೃತಾಕೃತಸ್ಯ ತಪಸಃ ಫಲಂ ಪಶ್ಯಸ್ವ ಯಾದೃಶಮ್ ॥೨೭॥

ಮನಸ್ಸಿಗೆ ಯಾವುದು ಪ್ರಿಯವಾಗಿರುವುದೋ–ಅದನ್ನೇ ಸುಖವೆನ್ನುತ್ತಾರೆ. ಮನಸ್ಸಿಗೆ ಯಾವುದು ಪ್ರತಿಕೂಲವಾಗಿರುವುದೋ–ಅದನ್ನೇ ದುಃಖವೆನ್ನುತ್ತಾರೆ. ತಪಸ್ಸನ್ನು ಮಾಡುವುದರಿಂದ ಸುಖವೂ–ತಪಸ್ಸನ್ನು ಮಾಡದೇ ಇರುವುದರಿಂದ ದುಃಖವೂ ಉಂಟಾಗುತ್ತದೆ. ಹೀಗೆ ತಪಸ್ಸನ್ನು ಮಾಡುವುದರಿಂದ ಮತ್ತು ಮಾಡದೇ ಇರುವುದರಿಂದ ಯಾವ ವಿಧವಾದ ಫಲವು ಪ್ರಾಪ್ತವಾಗುವುದೆಂಬುದನ್ನು ನೀನೇ ನಿರ್ಧರಿಸು.

ನಿತ್ಯಂ ಭದ್ರಾಣಿ ಪಶ್ಯನ್ತಿ ವಿಷಯಾಂಶ್ಚೋಪಭುಞ್ಜತೇ ।
ಪ್ರಾಕಾಶ್ಯಂ ಚೈವ ಗಚ್ಛನ್ತಿ ಕೃತ್ವಾ ನಿಷ್ಕಲ್ಮಷಂ ತಪಃ ॥೨೮॥

ಮನುಷ್ಯರು ನಿಷ್ಕಲ್ಮಷವಾದ ತಪಸ್ಸನ್ನು ಮಾಡಿದರೆ–ನಿತ್ಯವೂ ಶುಭವನ್ನೇ ಕಾಣುತ್ತಾರೆ. ಮನೋವಾಂಛಿತವಾದ ವಿಷಯಸುಖಗಳನ್ನೂ ಉಪಭೋಗಿಸುತ್ತಾರೆ. ಪ್ರಪಂಚದಲ್ಲಿ ಖ್ಯಾತಿಯನ್ನೂ ಗಳಿಸುತ್ತಾರೆ.

ಅಪ್ರಿಯಾಣ್ಯವಮಾನಾಂಶ್ಚ ದುಃಖಂ ಬಹುವಿಧಾತ್ಮಕಮ್ ।
ಫಲಾರ್ಥೀ ತತ್ಫಲಂ ತ್ಯಕ್ತ್ವಾ ಪ್ರಾಪ್ನೋತಿ ವಿಷಯಾತ್ಮಕಮ್ ॥೨೯॥

ಸಂಕಲ್ಪರಹಿತವಾದ ತಪಸ್ಸಿನಿಂದ ಪ್ರಾಪ್ತವಾಗುವ ಅಂತಹ ಮಹಾಫಲವನ್ನು ಬಿಟ್ಟು ಮನಸ್ಸಿನಲ್ಲಿ ಕಲ್ಮಷವನ್ನಿಟ್ಟುಕೊಂಡು ಯಾವುದಾದರೂ ಫಲವನ್ನು ಉದ್ದೇಶಿಸಿ ತಪಸ್ಸನ್ನು ಮಾಡುವವನು–ಅಪ್ರಿಯಫಲಗಳನ್ನೂ, ಅವಮಾನಗಳನ್ನೂ, ಬಹುವಿಧವಾದ ದುಃಖವನ್ನೂ ಹೊಂದುತ್ತಾನೆ. ಅಂತಹವನು ಕೇವಲ ವಿಷಯಸುಖವನ್ನು ಮಾತ್ರವೇ ಹೊಂದುತ್ತಾನೆ.

ಧರ್ಮೇ ತಪಸಿ ದಾನೇ ಚ ವಿಚಿಕಿತ್ಸಾಸ್ಯ ಜಾಯತೇ ।
ಸ ಕೃತ್ವಾ ಪಾಪಕಾನ್ಯೇವ ನಿರಯಂ ಪ್ರತಿಪದ್ಯತೇ ॥೩೦॥

ಅಂತಹವನಿಗೆ ಧರ್ಮ, ತಪಸ್ಸು ಮತ್ತು ದಾನಗಳಲ್ಲಿ ಸಂಶಯವುಂಟಾಗುತ್ತದೆ. ಅನಂತರ ಅವನು ಧರ್ಮಬಾಹಿರವಾದ ಅನೇಕಪಾಪ ಕರ್ಮಗಳನ್ನೇ ಮಾಡಿ ನರಕವನ್ನು ಹೊಂದುತ್ತಾನೆ.

ಸುಖೇ ತು ವರ್ತಮಾನೋ ವೈ ದುಃಖೇ ವಾಪಿ ನರೋತ್ತಮ ।
ಸುವೃತ್ತಾದ್ಯೋ ನ ಚಲತೇ ಶಾಸ್ತ್ರಚಕ್ಷುಃ ಸ ಮಾನವಃ ॥೩೧॥

ಮನುಷ್ಯಶ್ರೇಷ್ಠನೇ! ಸುಖದಲ್ಲಿಯೇ ಇರಲಿ, ಕಷ್ಟದಲ್ಲಿಯೇ ಇರಲಿ–ಸದಾಚಾರಗಳಿಂದ ವಿಚಲಿತನಾಗದಿದ್ದರೆ–ಆ ಮನುಷ್ಯನೇ ಶಾಸ್ತ್ರಜ್ಞನು.

ಇಷುಪ್ರಪಾತಮಾತ್ರಂ ಹಿ ಸ್ಪರ್ಶಯೋಗೇ ರತಿಃ ಸ್ಮೃತಾ ।
ರಸನೇ ದರ್ಶನೇ ಘ್ರಾಣೇ ಶ್ರವಣೇ ಚ ವಿಶಾಮ್ಪತೇ ॥೩೨॥

ಧನುಸ್ಸಿನಿಂದ ಹೊರಬಂದ ಬಾಣವು ಭೂಮಿಯ ಮೇಲೆ ಬೀಳಲು ಎಷ್ಟು ವೇಳೆಯಾಗುವುದೋ – ಅಷ್ಟುಹೊತ್ತು ಮಾತ್ರ ಮನುಷ್ಯನು ಸ್ಪರ್ಶೇಂದ್ರಿಯ, ನಾಲಿಗೆ, ಕಣ್ಣು, ಮೂಗು ಮತ್ತು ಕಿವಿಗಳ ಮೂಲಕವಾಗಿ ವಿಷಯಸುಖಗಳನ್ನು ಅನುಭವಿಸುತ್ತಾನೆ. (ಭಕ್ಷ-ಭೋಜ್ಯಾದಿಗಳನ್ನು ಬಾಯೊಳಗೆ ಹಾಕಿಕೊಂಡು ನುಂಗುವವರೆಗೆ ಮಾತ್ರವೇ ರಸನೇಂದ್ರಿಯಕ್ಕೆ ಸುಖವು ಲಭಿಸುತ್ತದೆ. ನಾಲಿಗೆಯಿಂದ ಕೆಳಗೆ ಬಿದ್ದರೆ ನರಕ–ಎಂಬ ಗಾದೆಯೂ ಇದೆ. ಆದುದರಿಂದ ವಿಷಯಸುಖಗಳು ಕ್ಷಣಿಕವಾದುವುಗಳು.)

ತತೋಽಸ್ಯ ಜಾಯತೇ ತೀವ್ರಾ ವೇದನಾ ತತ್ಕ್ಷಯಾತ್ಪುನಃ ।
ಅಬುಧಾ ನ ಪ್ರಶಂಸನ್ತಿ ಮೋಕ್ಷಂ ಸುಖಮನುತ್ತಮಮ್ ॥೩೩॥

ಕ್ಷಣಿಕವಾದ ಇಂದ್ರಿಯಸುಖವು ತಪ್ಪಿಹೋದೊಡನೆಯೇ ಪುನಃ ಆ ಸುಖವನ್ನು ಪಡೆದುಕೊಳ್ಳಲು ಮನಸ್ಸಿನಲ್ಲಿ ತೀವ್ರವಾದ ವೇದನೆಯುಂಟಾಗುತ್ತದೆ. ಪ್ರಯತ್ನಪಟ್ಟು ಪುನಃ ಪಡೆದುಕೊಂಡರೂ ಅದರಿಂದ ಮನಸ್ಸು ತೃಪ್ತವಾಗುವುದಿಲ್ಲ. ಇನ್ನೂ ಹೆಚ್ಚಿನ ವಿಷಯಸುಖವನ್ನು ಮನಸ್ಸು ಅಪೇಕ್ಷಿಸುತ್ತಲೇ ಇರುತ್ತದೆ. ಅದಕ್ಕಾಗಿ ಪ್ರಯತ್ನವನ್ನು ಮಾಡುತ್ತಲೇ ಇರುತ್ತದೆ. ಮನುಷ್ಯನ ಜೀವನಪರ್ಯಂತವಾಗಿ ಮನಸ್ಸಿನ ಈ ಹೊಯ್ದಾಟವು ತಪ್ಪುವುದೇ ಇಲ್ಲ. ಈ ಕಾರಣದಿಂದಲೇ ವಿಷಯಲೋಲುಪರಾದ ಅಜ್ಞಾನಿಗಳು ಉತ್ತಮೋತ್ತಮವಾದ ಮೋಕ್ಷಸುಖವನ್ನು ಪ್ರಶಂಸಿಸುವುದಿಲ್ಲ (ಅಪೇಕ್ಷಿಸುವುದಿಲ್ಲ).

ತತಃ ಫಲಾರ್ಥಂ ಸರ್ವಸ್ಯ ಭವನ್ತಿ ಜ್ಯಾಯಸೇ ಗುಣಾಃ ।
ಧರ್ಮವೃತ್ತ್ಯಾ ಚ ಸತತಂ ಕಾಮಾರ್ಥಾಭ್ಯಾಂ ನ ಹೀಯತೇ ॥೩೪॥

ವಿವೇಕಿಯಾದ ಪುರುಷನ ಮನಸ್ಸಿನಲ್ಲಿ ಮೋಕ್ಷಫಲದ ಪ್ರಾಪ್ತಿಗಾಗಿ

ಶಮ-ದಮಾದಿ ಶ್ರೇಷ್ಠಗುಣಗಳು ಹುಟ್ಟುತ್ತವೆ. ಅವನು ನಿರಂತರವಾಗಿ ಧರ್ಮದ ಜೀವನವನ್ನೇ ನಡೆಸುವುದರಿಂದ ಕಾಮಾರ್ಥಗಳಿಂದಲೂ ವಂಚಿತನಾಗುವುದಿಲ್ಲ.

ಅಪ್ರಯತ್ನಾಗತಾಃ ಸೇವ್ಯಾ ಗೃಹಸ್ಥೈರ್ವಿಷಯಾಃ ಸದಾ ।
ಪ್ರಯತ್ನೇನೋಪಗಮ್ಯಶ್ಚ ಸ್ವಧರ್ಮ ಇತಿ ಮೇ ಮತಿಃ ॥೩೫॥

ಆದುದರಿಂದ ಗೃಹಸ್ಥನಾದವನು ವಿಶೇಷಪ್ರಯತ್ನವಿಲ್ಲದೇ ತಾವಾಗಿಯೇ ಬಂದ ವಿಷಯಗಳನ್ನು ಉಪಭೋಗಿಸಬೇಕು. ಪ್ರಯತ್ನಪೂರ್ವಕವಾಗಿ ತನ್ನ ಧರ್ಮವನ್ನು ಪರಿಪಾಲಿಸಬೇಕು – ಎಂಬುದು ನನ್ನ ಅಭಿಮತವಾಗಿದೆ.

ಮಾನಿನಾಂ ಕುಲಜಾತಾನಾಂ ನಿತ್ಯಂ ಶಾಸ್ತ್ರಾರ್ಥಚಕ್ಷುಷಾಮ್ ।
ಕ್ರಿಯಾಧರ್ಮವಿಮುಕ್ತಾನಾಮಶಕ್ತ್ಯಾ ಸಂವೃತಾತ್ಮನಾಮ್ ॥೩೬॥

ಕ್ರಿಯಮಾಣಂ ಯದಾ ಕರ್ಮ ನಾಶಂ ಗಚ್ಛತಿ ಮಾನುಷಮ್ ।
ತೇಷಾಂ ನಾನ್ಯದೃತೇ ಲೋಕೇ ತಪಸಃ ಕರ್ಮ ವಿದ್ಯತೇ ॥೩೭॥

ಉತ್ತಮಕುಲದಲ್ಲಿ ಹುಟ್ಟಿ ಮಾನಿಷ್ಠರಾಗಿ, ಶಾಸ್ತ್ರಾರ್ಥವನ್ನು ತಿಳಿದಿರುವ ವಿದ್ವಾಂಸರ ಮತ್ತು ಅಸಮರ್ಥತೆಯಿಂದಾಗಿ ಕರ್ಮ-ಧರ್ಮಗಳಿಂದ ರಹಿತರಾಗಿ, ಆತ್ಮತತ್ತ್ವವನ್ನು ತಿಳಿಯದಿರುವ ಅಜ್ಞಾನಿಗಳ ಮಾನುಷವಾದ ಲೌಕಿಕಕರ್ಮಗಳೂ ನಷ್ಟವಾಗಿ ಹೋಗುತ್ತವೆ ಎಂದ ಮೇಲೆ–ವಿದ್ಯಾವಂತ ರಿಗೇ ಆಗಲೀ ಅವಿದ್ಯಾವಂತರಿಗೇ ಆಗಲೀ – ತಪಸ್ಸಿಗಿಂತಲೂ ಮಿಗಿಲಾದ ಬೇರೆಯ ಕರ್ಮವೇ ಇಲ್ಲವೆಂಬುದು ಇದರಿಂದ ಸಿದ್ಧವಾಗುತ್ತದೆ.

ಸರ್ವಾತ್ಮನಾನುಕುರ್ವೀತ ಗೃಹಸ್ಥಃ ಕರ್ಮನಿಶ್ಚಯಮ್ ।
ದಾಕ್ಷ್ಯೇಣ ಹವ್ಯಕವ್ಯಾರ್ಥಂ ಸ್ವಧರ್ಮೇ ವಿಚರನ್ನೃಪ ॥೩೮॥

ನರೇಶ್ವರನೇ! ಗೃಹಸ್ಥನಾದವನು ಸರ್ವಪ್ರಕಾರದಿಂದಲೂ ತನ್ನ ಕರ್ತವ್ಯವನ್ನು ನಿಶ್ಚಯಿಸಿ ಸ್ವಧರ್ಮವನ್ನು ಪಾಲಿಸುತ್ತಾ ಕುಶಲತೆಯಿಂದ ಯಜ್ಞಗಳನ್ನೂ, ಶ್ರಾದ್ಧಾದಿಕರ್ಮಗಳನ್ನೂ ಮಾಡುತ್ತಿರಬೇಕು.

ಯಥಾ ನದೀನದಾಃ ಸರ್ವೇ ಸಾಗರೇ ಯಾನ್ತಿ ಸಂಸ್ಥಿತಿಮ್ ।
ಏವಮಾಶ್ರಮಿಣಃ ಸರ್ವೇ ಗೃಹಸ್ಥೇ ಯಾನ್ತಿ ಸಂಸ್ಥಿತಿಮ್ ॥೩೯॥

ಯಾವ ರೀತಿಯಲ್ಲಿ ಎಲ್ಲ ನದೀ-ನದಗಳೂ ಸಾಗರದಲ್ಲಿಯೇ ಆಶ್ರಯವನ್ನು ಹೊಂದುವುವೋ – ಅದೇ ರೀತಿಯಲ್ಲಿ ಎಲ್ಲ ಆಶ್ರಮಿಗಳೂ ಗೃಹಸ್ಥನಲ್ಲಿಯೇ ಆಶ್ರಯವನ್ನು ಹೊಂದುತ್ತಾರೆ.”

೨೯೫ನೆಯ ಅಧ್ಯಾಯವು ಮುಗಿಯಿತು.

೨೯೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪರಾಶರಗೀತಾ

ವರ್ಣವಿಶೇಷಗಳ ಉತ್ಪತ್ತಿಯ ರಹಸ್ಯ: ತಪೋಬಲದಿಂದ ಉತ್ತಮವರ್ಣಪ್ರಾಪ್ತಿ: ವಿಭಿನ್ನವರ್ಣಗಳ ವಿಶೇಷ ಧರ್ಮಗಳು ಮತ್ತು ಸಾಮಾನ್ಯಧರ್ಮಗಳು: ಸತ್ಕರ್ಮದ ಶ್ರೇಷ್ಠತೆ: ಹಿಂಸಾರಹಿತವಾದ ಧರ್ಮದ ವರ್ಣನೆ

ಧರ್ಮಜ! ಜನಕನು ಪ್ರಶ್ನಿಸುತ್ತಾನೆ :

ವರ್ಣೋ ವಿಶೇಷವರ್ಣಾನಾಂ ಮಹರ್ಷೇ ಕೇನ ಜಾಯತೇ ।
ಏತದಿಚ್ಛಾಮ್ಯಹಂ ಜ್ಞಾತುಂ ತದ್ಬ್ರೂಹಿ ವದತಾಂ ವರ ॥೧॥

“ವಾಗ್ಮಿಗಳಲ್ಲಿ ಶ್ರೇಷ್ಠನಾದವನೇ! ವಿಶೇಷವರ್ಣದವರಿಂದ, ಬ್ರಾಹ್ಮಣರಿಂದ ಮತ್ತೊಂದು ವರ್ಣವು ಹೇಗೆ ಹುಟ್ಟುತ್ತದೆ? ಈ ವಿಷಯವನ್ನು ನಾನು ತಿಳಿದುಕೊಳ್ಳಲು ಇಚ್ಛಿಸಿದ್ದೇನೆ. ಅದನ್ನು ದಯಮಾಡಿ ಹೇಳು.

ಯದೇತಜ್ಜಾಯತೇಽಪತ್ಯಂ ಸ ಏವಾಯಮಿತಿಶ್ರುತಿಃ ।
ಕಥಂ ಬ್ರಾಹ್ಮಣತೋ ಜಾತೋ ವಿಶೇಷಗ್ರಹಣಂ ಗತಃ ॥೨॥

ಮನುಷ್ಯನಿಂದ ಯಾವ ಸಂತಾನವು ಹುಟ್ಟುತ್ತದೆಯೋ–ಆ ಸಂತಾನವು ಅವನೇ – (ಮಗನು ತನ್ನ ಸ್ವರೂಪನೇ ಎಂದು) ಶ್ರುತಿಯು ಹೇಳುತ್ತದೆ. (‘ಆತ್ಮಾ ವೈ ಪುತ್ರನಾಮಾಸಿ–ನೀನು, ನನ್ನ ಆತ್ಮನೇ ಆಗಿರುವೆ. ಆದರೆ ಪುತ್ರ ಎಂಬ ಹೆಸರನ್ನು ಪಡೆದಿರುವೆ’–ಎಂದು ತಂದೆಯು ಮಗನಿಗೆ

ಹೇಳುವ ಮಂತ್ರವು ಇದನ್ನೇ ಪ್ರತಿಪಾದಿಸುತ್ತದೆ.) ಅದರಂತೆಯೇ ಬ್ರಹ್ಮನಿಂದ ಅವನ ಸ್ವರೂಪರಾದ ಬ್ರಾಹ್ಮಣರೇ ಹುಟ್ಟಿದರು. ಬ್ರಾಹ್ಮಣನಿಂದ ಹುಟ್ಟಿದವನು ಬ್ರಾಹ್ಮಣನೇ ಆಗಬೇಕು. ಹೀಗಿರುವಾಗ ಬ್ರಾಹ್ಮಣನಿಂದ ಹುಟ್ಟಿದವನು ವಿಶೇಷಜಾತಿಯನ್ನು ಹೇಗೆ ಪಡೆದನು?"

ಪರಾಶರರು ಹೇಳುತ್ತಾರೆ :

ಏವಮೇತನ್ಮಹಾರಾಜ ಯೇನ ಜಾತಃ ಸ ಏವ ಸಃ ।
ತಪಸಸ್ತ್ವಪಕರ್ಷೇಣ ಜಾತಿಗ್ರಹಣತಾಂ ಗತಃ ॥೩॥

"ಮಹಾರಾಜ! ನೀನು ಹೇಳಿದಂತೆಯೇ ಯಾವನು ಯಾವನಿಂದ (ಯಾವ ವರ್ಣದವನಿಂದ) ಹುಟ್ಟುವನೋ ಅವನು ಅವನೇ (ಅದೇ ವರ್ಣದವನೇ) ಆಗುತ್ತಾನೆ. ಆದರೆ ತಪಸ್ಸಿನ ನ್ಯೂನತೆಯ ಕಾರಣದಿಂದಾಗಿ ಕೆಳಗಿನ ವರ್ಣದವನಾಗುತ್ತಾನೆ.

ಸುಕ್ಷೇತ್ರಾಚ್ಚ ಸುಬೀಜಾಚ್ಚ ಪುಣ್ಯೋ ಭವತಿ ಸಮ್ಭವಃ ।
ಅತೋಽನ್ಯತಂತೋ ಹೀನಾದವರೋ ನಾಮ ಜಾಯತೇ ॥೪॥

ಕ್ಷೇತ್ರವೂ ಉತ್ತಮವಾಗಿದ್ದು ಬೀಜವೂ ಉತ್ತಮವಾಗಿದ್ದರೆ–ಪವಿತ್ರ ವಾದ ಸಂತಾನವು ಹುಟ್ಟುತ್ತದೆ. ಕ್ಷೇತ್ರದಲ್ಲಾಗಲೀ ಬೀಜದಲ್ಲಾಗಲೀ ಯಾವುದಾದರೂ ಒಂದು ಹೀನವಾಗಿದ್ದರೆ ಹೀನಸಂತಾನವು ಹುಟ್ಟುತ್ತದೆ.

ವಕ್ತ್ರಾದ್ಭುಜಾಭ್ಯಾಮೂರುಭ್ಯಾಂ ಪದ್ಭ್ಯಾಂ ಚೈವಾಥ ಜಜ್ಞಿರೇ ।
ಸೃಜತಃ ಪ್ರಜಾಪತೇರ್ಲೋಕಾನಿತಿ ಧರ್ಮವಿದೋ ವಿದುಃ ॥೫॥

ಪ್ರಜಾಪತಿಬ್ರಹ್ಮನು ಮಾನವಜಗತ್ತನ್ನು ಸೃಷ್ಟಿಸಿದ ಸಮಯದಲ್ಲಿ ಅವನ ಮುಖದಿಂದಲೂ, ಬಾಹುಗಳಿಂದಲೂ, ತೊಡೆಗಳಿಂದಲೂ, ಪಾದ ಗಳಿಂದಲೂ – ಮನುಷ್ಯರ ಸೃಷ್ಟಿಯಾಯಿತೆಂದು ಧರ್ಮವಿದರು ತಿಳಿಯು ತ್ತಾರೆ.

ಮುಖಜಾ ಬ್ರಾಹ್ಮಣಾಸ್ತಾತ ಬಾಹುಜಾಃ ಕ್ಷತ್ರಿಯಾಃ ಸ್ಮೃತಾಃ ।
ಊರುಜಾ ಧನಿನೋ ರಾಜನ್ಪಾದಜಾಃ ಪರಿಚಾರಕಾಃ ॥೬॥

ಹೀಗೆ ಬ್ರಹ್ಮನ ಮುಖದಿಂದ ಹುಟ್ಟಿದವರು ಬ್ರಾಹ್ಮಣರಾದರು. ತೋಳುಗಳಿಂದ ಹುಟ್ಟಿದವರು ಕ್ಷತ್ರಿಯರಾದರು. ತೊಡೆಗಳಿಂದ ಹುಟ್ಟಿದವರು ಧನಿಕರಾದ ವೈಶ್ಯರಾದರು. ಪಾದಗಳಿಂದ ಹುಟ್ಟಿದವರು ಸೇವಕರು ಅಥವಾ ಶೂದ್ರರಾದರು.

ಚತುರ್ಣಾಮೇವ ವರ್ಣಾನಾಮಾಗಮಃ ಪುರುಷರ್ಷಭ ।
ಅತೋಽನ್ಯೇ ತ್ವತಿರಿಕ್ತಾ ಯೇ ತೇ ವೈ ಸಂಕರಜಾಃ ಸ್ಮೃತಾಃ ॥೭॥

ಹೀಗೆ ಬ್ರಹ್ಮನ ನಾಲ್ಕು ಅಂಗಗಳಿಂದ ನಾಲ್ಕು ವರ್ಣದವರು ಮಾತ್ರವೇ ಹುಟ್ಟಿದರು. ಈ ನಾಲ್ಕು ವರ್ಣದವರಿಗಿಂತಲೂ ಭಿನ್ನರಾದವರು ಯಾರಿರುವರೋ–ಅವರೆಲ್ಲರೂ ವರ್ಣಗಳ ಸಮ್ಮಿಶ್ರಣ ಅಥವಾ ಸಂಕರದಿಂದ ಹುಟ್ಟಿದವರು.

ಕ್ಷತ್ರಿಯಾತಿರಥಾಮ್ಬಷ್ಠಾ ಉಗ್ರಾ ವೈದೇಹಕಾಸ್ತಥಾ ।
ಶ್ವಪಾಕಾಃ ಪುಲ್ಕಸಾಃ ಸ್ತೇನಾ ನಿಷಾದಾಃ ಸೂತಮಾಗಧಾಃ ॥೮॥

ಅಯೋಗಾಃ ಕರಣಾ ವ್ರಾತ್ಯಾಶ್ಚಾಣ್ಡಾಲಾಶ್ಚ ನರಾಧಿಪ ।
ಏತೇ ಚತುರ್ಭ್ಯೋ ವರ್ಣೇಭ್ಯೋ ಜಾಯನ್ತೇ ವೈ ಪರಸ್ಪರಾತ್ ॥೯॥

ಕ್ಷತ್ರಿಯ, ಅತಿರಥ, ಅಂಬಷ್ಠ, ಉಗ್ರ, ವೈದೇಹ, ಶ್ವಪಾಕ, ಪುಲ್ಕಸ, ಸ್ತೇನ, ನಿಷಾದ, ಸೂತ, ಮಾಗಧ, ಅಯೋಗ, ಕರಣ, ವ್ರಾತ್ಯ, ಚಾಂಡಾಲ–ಇವರೆಲ್ಲರೂ ಬ್ರಾಹ್ಮಣಾದಿ ನಾಲ್ಕು ವರ್ಣಗಳಲ್ಲಿ ಅನುಲೋಮ ಮತ್ತು ವಿಲೋಮವರ್ಣಗಳ ಸ್ತ್ರೀ-ಪುರುಷರ ಪರಸ್ಪರಸಂಯೋಗದಿಂದ ಹುಟ್ಟಿದವರು."

ಜನಕನು ಪ್ರಶ್ನಿಸುತ್ತಾನೆ :

ಬ್ರಹ್ಮಣೈಕೇನ ಜಾತಾನಾಂ ನಾನಾತ್ವಂ ಗೋತ್ರತಃ ಕಥಮ್ ।
ಬಹೂನೀಹ ಹಿ ಲೋಕೇ ವೈ ಗೋತ್ರಾಣಿ ಮುನಿಸತ್ತಮ ॥೧೦॥

"ಮುನಿಶ್ರೇಷ್ಠನೇ! ಬ್ರಹ್ಮನೊಬ್ಬನಿಂದಲೇ ಹುಟ್ಟಿದವರು ಗೋತ್ರಗಳಿಂದ ಹೇಗೆ ಬೇರೆ-ಬೇರೆಯಾದರು? ಈ ಲೋಕದಲ್ಲಿ ಅನೇಕ ಗೋತ್ರಗಳೇ ಇವೆ.

ಯತ್ರ ತತ್ರ ಕಥಂ ಜಾತಾಃ ಸ್ವಯೋನಿಂ ಮುನಯೋ ಗತಾಃ ।
ಶುದ್ಧಯೋನೌ ಸಮುತ್ಪನ್ನಾ ವಿಯೋನೌ ಚ ತಥಾ ಪರೇ ॥೧೧॥

ಮುನಿಗಳು ಎಲ್ಲೆಲ್ಲಿಯೋ ಹೇಗೆ-ಹೇಗೋ ಜನ್ಮವನ್ನು ತಾಳಿದ್ದಾರೆ. ಕೆಲವರು ಶುದ್ಧಯೋನಿಗಳಲ್ಲಿಯೂ ಕೆಲವರು ಅದಕ್ಕೆ ವಿಪರೀತವಾದ (ಹೀನ) ಯೋನಿಗಳಲ್ಲಿಯೂ ಜನ್ಮತಾಳಿದ್ದಾರೆ. ಅವರೆಲ್ಲರೂ ಬ್ರಾಹ್ಮಣತ್ವವನ್ನು ಹೇಗೆ ಹೊಂದಿದರು?"

ಪರಾಶರರು ಹೇಳುತ್ತಾರೆ :

ರಾಜನ್ನೇತದ್ಭವೇದ್ಗ್ರಾಹ್ಯಮಪಕೃಷ್ಟೇನ ಜನ್ಮನಾ ।
ಮಹಾತ್ಮನಾಂ ಸಮುತ್ಪತ್ತಿಸ್ತಪಸಾ ಭಾವಿತಾತ್ಮನಾಮ್ ॥೧೨॥

"ಮಹಾರಾಜ! ತಪಸ್ಸಿನಿಂದ ಪರಿಶುದ್ಧವಾದ ಅಂತಃಕರಣವನ್ನು ಹೊಂದಿರುವ ಮಹಾತ್ಮರ ಜನ್ಮವು ಅಥವಾ ಸಂತಾನವು ನಿಕೃಷ್ಟವಾದ ಕ್ಷೇತ್ರದಲ್ಲಿಯೇ ಆಗಿದ್ದರೂ ಅದು ಗ್ರಾಹ್ಯವೇ ಆಗುತ್ತದೆ.

ಉತ್ಪಾದ್ಯ ಪುತ್ರಾನ್ಮುನಯೋ ನೃಪತೇ ಯತ್ರ ತತ್ರ ಹ ।
ಸ್ವೇನೈವ ತಪಸಾ ತೇಷಾಮೃಷಿತ್ವಂ ವಿದಧುಃ ಪುನಃ ॥೧೩॥

ಮುನಿಗಳು ಎಲ್ಲೆಲ್ಲಿಯೋ (ಯಾವ-ಯಾವ ಕ್ಷೇತ್ರದಲ್ಲಿಯೋ) ಪುತ್ರರನ್ನು ಪಡೆದುಕೊಂಡು ತಮ್ಮ ತಪಸ್ಸಿನ ಪ್ರಭಾವದಿಂದಲೇ ತಮ್ಮ ಮಕ್ಕಳಿಗೆ ಋಷಿತ್ವವನ್ನು ಸಿದ್ಧಮಾಡಿಕೊಟ್ಟರು.

ಪಿತಾಮಹಶ್ಚ ಮೇ ಪೂರ್ವಮೃಷ್ಯಶೃಙ್ಗಶ್ಚ ಕಾಶ್ಯಪಃ ।
ವೇದಸ್ತಾಣ್ಡ್ಯಃ ಕೃಪಶ್ಚೈವ ಕಕ್ಷೀವಾನ್ಕಮಠಾದಯಃ ॥೧೪॥

ಯವಕ್ರೀತಶ್ಚ ನೃಪತೇ ದ್ರೋಣಶ್ಚ ವದತಾಂ ವರಃ ।
ಆಯುರ್ಮತಙ್ಗೋ ದತ್ತಶ್ಚ ದ್ರುಪದೋ ಮತ್ಸ್ಯ ಏವ ಚ ॥೧೫॥

ಏತೇ ಸ್ವಾಂ ಪ್ರಕೃತಿಂ ಪ್ರಾಪ್ತಾ ವೈದೇಹ ತಪಸೋಽಶ್ರಯಾತ್ ।
ಪ್ರತಿಷ್ಠಿತಾ ವೇದವಿದೋ ದಮೇನ ತಪಸೈವ ಹಿ ॥೧೬॥

ಜನಕರಾಜ! ನನ್ನ ಪಿತಾಮಹನಾದ ವಸಿಷ್ಠ, ಕಶ್ಯಪಗೋತ್ರಜನಾದ ಋಷ್ಯಶೃಂಗ, ವೇದ, ತಾಂಡ್ಯ, ಕೃಪ, ಕಕ್ಷೀವಂತ, ಕಮಠನೇ ಮೊದಲಾದ

ವರು, ಯವಕ್ರೀತ, ವಾಗ್ಮಿಗಳಲ್ಲಿ ಶ್ರೇಷ್ಠನಾದ ದ್ರೋಣ, ಆಯು, ಮತಂಗ, ದತ್ತ, ದ್ರುಪದ ಮತ್ತು ಮತ್ಸ್ಯ–ಇವರೆಲ್ಲರೂ ತಪಸ್ಸನ್ನು ಆಶ್ರಯಿಸಿಯೇ ತಮ್ಮ ಶ್ರೇಷ್ಠವಾದ ಪ್ರಕೃತಿಯನ್ನು ಹೊಂದಿದರು. ಇಂದ್ರಿಯಗಳ ಸಂಯಮದಿಂದಲೂ ಮತ್ತು ತಪಸ್ಸಿನಿಂದಲೂ ಅವರು ವೇದವಿದ್ವಾಂಸರೂ ಮತ್ತು ಸಮಾಜದಲ್ಲಿ ಪ್ರತಿಷ್ಠಿತರೂ ಆದರು.

ಮೂಲಗೋತ್ರಾಣಿ ಚತ್ವಾರಿ ಸಮುತ್ಪನ್ನಾನಿ ಪಾರ್ಥಿವ ।
ಅಙ್ಗಿರಾಃ ಕಶ್ಯಪಶ್ಚೈವ ವಸಿಷ್ಠೋ ಭೃಗುರೇವ ಚ ॥೧೭॥

ಕರ್ಮತೋಽನ್ಯಾನಿ ಗೋತ್ರಾಣಿ ಸಮುತ್ಪನ್ನಾನಿ ಪಾರ್ಥಿವ ।
ನಾಮಧೇಯಾನಿ ತಪಸಾ ತಾನಿ ಚ ಗ್ರಹಣಂ ಸತಾಮ್ ॥೧೮॥

ಮೊದಲು ಅಂಗಿರಸ, ಕಶ್ಯಪ, ವಸಿಷ್ಠ ಮತ್ತು ಭೃಗು–ಎಂಬ ನಾಲ್ಕು ಮೂಲಗೋತ್ರಗಳು ಹುಟ್ಟಿದುವು. ಅನ್ಯಗೋತ್ರಗಳು ಕರ್ಮಾನುಸಾರವಾಗಿ ಅನಂತರ ಹುಟ್ಟಿದುವುಗಳು. ಆ ಗೋತ್ರಗಳೂ ಮತ್ತು ಅವುಗಳ ಹೆಸರುಗಳೂ ಆ ಗೋತ್ರಗಳ ಪ್ರವರ್ತಕರಾದ ಋಷಿಗಳ ತಪಸ್ಸಿನ ಪ್ರಭಾವದ ಕಾರಣದಿಂದ ಸತ್ಪುರುಷರಿಂದ ಅಂಗೀಕರಿಸಲ್ಪಟ್ಟುವು."

ಜನಕನು ಪ್ರಶ್ನಿಸುತ್ತಾನೆ :

ವಿಶೇಷಧರ್ಮಾನ್ವರ್ಣಾನಾಂ ಪ್ರಬ್ರೂಹಿ ಭಗವನ್ಮಮ ।
ತತಃ ಸಾಮಾನ್ಯಧರ್ಮಾಂಶ್ಚ ಸರ್ವತ್ರ ಕುಶಲೋ ಹ್ಯಸಿ ॥೧೯॥

"ಭಗವನ್! ನೀವು ನನಗೆ ಪ್ರತಿಯೊಂದು ವರ್ಣಕ್ಕೂ ಇರುವ ವಿಶೇಷಧರ್ಮಗಳನ್ನೂ ಮತ್ತು ಸಾಮಾನ್ಯಧರ್ಮಗಳನ್ನೂ ದಯಮಾಡಿ ಹೇಳಿರಿ. ನೀವು ಎಲ್ಲ ವಿಷಯಗಳಲ್ಲಿಯೂ ಕುಶಲರಾಗಿರುವಿರಿ."

ಪರಾಶರರು ಹೇಳುತ್ತಾರೆ :

ಪ್ರತಿಗ್ರಹೋ ಯಾಜನಂ ಚ ತಥೈವಾಧ್ಯಾಪನಂ ನೃಪ ।
ವಿಶೇಷಧರ್ಮೋ ವಿಪ್ರಾಣಾಂ ರಕ್ಷಾಕ್ಷತ್ರಸ್ಯ ಶೋಭನಾ ॥೨೦॥

"ಜನಕರಾಜ! ದಾನವನ್ನು ತೆಗೆದುಕೊಳ್ಳುವುದು, ಯಜ್ಞವನ್ನು ಮಾಡಿಸುವುದು ಮತ್ತು ವೇದ-ಶಾಸ್ತ್ರಗಳನ್ನು ಹೇಳಿಕೊಡುವುದು–ಇವು

ಬ್ರಾಹ್ಮಣರ ವಿಶೇಷಧರ್ಮಗಳಾಗಿವೆ. ಪ್ರಜೆಗಳ ರಕ್ಷಣೆಯನ್ನು ಮಾಡುವುದು ರಾಜರ ವಿಶೇಷಧರ್ಮವಾಗಿದೆ.

ಕೃಷಿಶ್ಚ ಪಾಶುಪಾಲ್ಯಂ ಚ ವಾಣಿಜ್ಯಂ ಚ ವಿಶಾಮಪಿ ।
ದ್ವಿಜಾನಾಂ ಪರಿಚರ್ಯಾ ಚ ಶೂದ್ರಕರ್ಮ ನರಾಧಿಪ ॥೨೧॥

ಕೃಷಿ, ಪಶುಪಾಲನೆ, ವಾಣಿಜ್ಯ–ಇವುಗಳು ವೈಶ್ಯರ ವಿಶೇಷಧರ್ಮಗಳಾಗಿವೆ. ಬ್ರಾಹ್ಮಣ-ಕ್ಷತ್ರಿಯ-ವೈಶ್ಯರ ಸೇವೆಮಾಡುವುದು ಶೂದ್ರರ ವಿಶೇಷಧರ್ಮವಾಗಿದೆ.

ಮಹಾರಾಜ! ನಿನಗೆ ಪ್ರತಿಯೊಂದು ವರ್ಣದವರ ವಿಶೇಷಧರ್ಮಗಳನ್ನು ಹೇಳಿಯಾಯಿತು. ನಾಲ್ಕು ವರ್ಣದವರಿಗೂ ಇರುವ ಸಾಧಾರಣ ಧರ್ಮಗಳನ್ನು ವಿಸ್ತಾರವಾಗಿ ಕೇಳು.

ಆನೃಶಂಸ್ಯಮಹಿಂಸಾ ಚಾಪ್ರಮಾದಃ ಸಂವಿಭಾಗಿತಾ ।
ಶ್ರಾದ್ಧಕರ್ಮಾತಿಥೇಯಂ ಚ ಸತ್ಯಮಕ್ರೋಧ ಏವ ಚ ॥೨೩॥
ಸ್ವೇಷು ದಾರೇಷು ಸನ್ತೋಷಃ ಶೌಚಂ ನಿತ್ಯಾನಸೂಯತಾ ।
ಆತ್ಮಜ್ಞಾನಂ ತಿತಿಕ್ಷಾ ಚ ಧರ್ಮಾಃ ಸಾಧಾರಣಾ ನೃಪ ॥೨೪॥

ಕ್ರೌರ್ಯವಿಲ್ಲದಿರುವುದು (ದಯಾಪರತೆ) ; ಅಹಿಂಸೆ ; ಪ್ರಮಾದವಿಲ್ಲದಿರುವುದು ; ತನ್ನಲ್ಲಿರುವ ಐಶ್ವರ್ಯವನ್ನು ಯಥಾಯೋಗ್ಯವಾಗಿ ಹಂಚಿಕೊಡುವುದು ; ಪಿತೃಗಳ ತೃಪ್ತಿಗಾಗಿ ಶ್ರಾದ್ಧಕರ್ಮವನ್ನು ಮಾಡುವುದು ; ಅತಿಥಿಸತ್ಕಾರವನ್ನು ಮಾಡುವುದು ; ಸತ್ಯನಿಷ್ಠೆ ; ಅಕ್ರೋಧ ; ತಮ್ಮ-ತಮ್ಮ ಪತ್ನಿಯರಲ್ಲಿಯೇ ಸಂತುಷ್ಟರಾಗುವುದು ; ಪವಿತ್ರತೆ ; ಇತರರಲ್ಲಿ ದ್ವೇಷವೆಣಿಸದೇ ಇರುವುದು ; ಆತ್ಮಜ್ಞಾನ ಮತ್ತು ಸಹನೆ–ಇವೆಲ್ಲವೂ ಎಲ್ಲ ವರ್ಣದವರಿಗೂ ಸಾಧಾರಣಧರ್ಮಗಳಾಗಿವೆ.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಸ್ತ್ರಯೋ ವರ್ಣಾ ದ್ವಿಜಾತಯಃ ।
ಅತ್ರ ತೇಷಾಮಧೀಕಾರೋ ಧರ್ಮೇಷು ದ್ವಿಪದಾಂ ವರ ॥೨೫॥

ನರಶ್ರೇಷ್ಠನೇ! ಬ್ರಾಹ್ಮಣ-ಕ್ಷತ್ರಿಯ-ವೈಶ್ಯವರ್ಣದವರನ್ನು ದ್ವಿಜಾತಿಗಳೆಂದು ಹೇಳುತ್ತಾರೆ. ಮೇಲೆ ಹೇಳಿದ ಧರ್ಮಗಳಿಗೆ ಇವರೆಲ್ಲರೂ ಅಧಿಕಾರಿಗಳೇ ಆಗಿರುತ್ತಾರೆ.

ವಿಕರ್ಮಾವಸ್ಥಿತಾ ವರ್ಣಾಃ ಪತನ್ತೇ ನೃಪತೇ ತ್ರಯಃ ।
ಉನ್ನಮನ್ತಿ ಯಥಾಸನ್ತಮಾಶ್ರಿತ್ಯೇಹ ಸ್ವಕರ್ಮಸು ॥೨೬॥

ಈ ಮೂರು ವರ್ಣದವರೂ ಮೇಲೆ ಹೇಳಿದ ಧರ್ಮಗಳಿಗೆ ವಿರುದ್ಧವಾದ ಧರ್ಮಾಚರಣೆಗಳನ್ನು ಮಾಡಿದರೆ ಪತಿತರಾಗುತ್ತಾರೆ. ಯಾವ ರೀತಿಯಲ್ಲಿರಬೇಕೋ ಹಾಗೆ ತಮ್ಮ-ತಮ್ಮ ಧರ್ಮಗಳಲ್ಲಿ ನಿರತರಾಗಿದ್ದರೆ ಉನ್ನತಿಯನ್ನು ಹೊಂದುತ್ತಾರೆ.

ನ ಚಾಪಿ ಶೂದ್ರಃ ಪತತೀತಿ ನಿಶ್ಚಯೋ
ನ ಚಾಪಿ ಸಂಸ್ಕಾರಮಿಹಾರ್ಹತೀತಿ ವಾ ।
ಶ್ರುತಿಪ್ರವೃತ್ತಂ ನ ಚ ಧರ್ಮಮಾಪ್ನುತೇ
ನ ಚಾಸ್ಯ ಧರ್ಮೇ ಪ್ರತಿಷೇಧನಂ ಕೃತಮ್ ॥೨೭॥

ಶೂದ್ರನಿಗೆ ಉಪನಯನಾದಿ ಸಂಸ್ಕಾರಗಳಿಲ್ಲದಿದ್ದರೂ ಅವನೆಂದಿಗೂ ಪತಿತನಾಗುವುದಿಲ್ಲವೆಂಬುದು ನಿಶ್ಚಯ. ಅವನಿಗೆ ಶ್ರುತಿವಿಹಿತವಾದ ಅಗ್ನಿ ಹೋತ್ರವೇ ಮೊದಲಾದ ಕರ್ಮಗಳನ್ನು ಮಾಡುವ ಅಧಿಕಾರವಿಲ್ಲ. ಆದರೆ ತ್ರೈವರ್ಣ್ಯದವರಿಗೆ ಹೇಳಿರುವ ಸಾಮಾನ್ಯಧರ್ಮಗಳನ್ನು ಆಚರಿಸಕೂಡದೆಂಬ ನಿಷೇಧವೂ ಅವನಿಗೆ ಇರುವುದಿಲ್ಲ. ಅವನು ಕೂಡ ಸಾಧಾರಣಧರ್ಮಗಳ ಅನುಷ್ಠಾನವನ್ನು ಮಾಡಬಹುದು.

ವೈದೇಹ ಕಂ ಶೂದ್ರಮುದಾಹರನ್ತಿ
ದ್ವಿಜಾ ಮಹಾರಾಜ ಶ್ರುತೋಪಪನ್ನಾಃ ।
ಅಹಂ ಹಿ ಪಶ್ಯಾಮಿ ನರೇನ್ದ್ರದೇವಂ
ವಿಶ್ವಸ್ಯ ವಿಷ್ಣುಂ ಜಗತಃ ಪ್ರಧಾನಮ್ ॥೨೮॥

ವಿದೇಹಮಹಾರಾಜ! ವೇದ-ಶಾಸ್ತ್ರಗಳ ಜ್ಞಾನಗಳಿಂದ ಸಂಪನ್ನರಾಗಿರ ತಕ್ಕವರು ಶೂದ್ರನನ್ನು ಪ್ರಜಾಪತಿಗೆ ಸಮಾನನೆಂದು ಹೇಳುತ್ತಾರೆ. ಆದರೆ ನಾನು ಮಾತ್ರ ಶೂದ್ರನನ್ನು ಸಂಪೂರ್ಣಜಗತ್ತಿಗೂ ಪ್ರಧಾನರಕ್ಷಕನಾದ ಮಹಾವಿಷ್ಣುವಿನ ರೂಪದಲ್ಲಿ ಕಾಣುತ್ತೇನೆ.

ಸತಾಂ ವೃತ್ತಮಧಿಷ್ಠಾಯ ನಿಹೀನಾ ಉದ್ದಿಧೀರ್ಷವಃ ।
ಮನ್ತ್ರವರ್ಜಂ ನ ದುಷ್ಯನ್ತಿ ಕುರ್ವಾಣಾಃ ಪೌಷ್ಟಿಕೀಃ ಕ್ರಿಯಾಃ ॥೨೯॥

ಆತ್ಮೋದ್ಧಾರವನ್ನು ಬಯಸುವ ಶೂದ್ರರು ಸತ್ಪುರುಷರ ಸದಾಚಾರಗಳನ್ನು ಅನುಷ್ಠಾನಮಾಡುತ್ತಾ ಮಂತ್ರವರ್ಜವಾದ ಆತ್ಮೋನ್ನತಿಕರವಾದ ಕ್ರಿಯೆಗಳನ್ನು ಮಾಡಬೇಕು. ಹೀಗೆ ಮಾಡುವುದರಿಂದ ಅವರು ದೋಷಕ್ಕೆ ಭಾಗಿಗಳಾಗುವುದಿಲ್ಲ.

ಯಥಾ ಯಥಾ ಹಿ ಸದ್ವೃತ್ತಮಾಲಮ್ಬನ್ತೀತರೇ ಜನಾಃ ।
ತಥಾ ತಥಾ ಸುಖಂ ಪ್ರಾಪ್ಯ ಪ್ರೇತ್ಯ ಚೇಹ ಚ ಮೋದತೇ ॥೩೦॥

ಇತರ ಜಾತಿಯ ಮನುಷ್ಯರು ಯಾವ ಯಾವ ರೀತಿಯಲ್ಲಿ ಸದಾಚಾರಗಳನ್ನು ಆಚರಿಸುವರೋ–ಆಯಾ ರೀತಿಯಲ್ಲಿಯೇ ಶೂದ್ರರೂ ಸುಖವನ್ನು ಹೊಂದಿ ಇಹ-ಪರಗಳೆರಡರಲ್ಲಿಯೂ ಆನಂದಪಡುತ್ತಾರೆ."

ಜನಕನು ಪ್ರಶ್ನಿಸುತ್ತಾನೆ :

ಕಿಂ ಕರ್ಮ ದೂಷಯತ್ಯೇನಮಥೋ ಜಾತಿರ್ಮಹಾಮುನೇ ।
ಸಂದೇಹೋ ಮೇ ಸಮುತ್ಪನ್ನಸ್ತನ್ಮೇ ವ್ಯಾಖ್ಯಾತುಮರ್ಹಸಿ ॥೩೧॥

"ಮಹಾಮುನಿಯೇ! ಒಬ್ಬ ಮನುಷ್ಯನನ್ನು ದೂಷಿತನನ್ನಾಗಿ ಮಾಡುವುದು ಕರ್ಮವೇ ಅಥವಾ ಜಾತಿಯೇ? ಈ ಸಂದೇಹವು ನನಗುಂಟಾಗಿದೆ. ಈ ವಿಷಯವನ್ನು ದಯಮಾಡಿ ವಿವರಿಸಿ ಹೇಳಿರಿ."

ಪರಾಶರರು ಹೇಳುತ್ತಾರೆ :

ಅಸಂಶಯಂ ಮಹಾರಾಜ ಉಭಯಂ ದೋಷಕಾರಕಮ್ ।
ಕರ್ಮ ಚೈವ ಹಿ ಜಾತಿಶ್ಚ ವಿಶೇಷಂ ತು ನಿಶಾಮಯ ॥೩೨॥

"ಮಹಾರಾಜ! ಕರ್ಮ-ಜಾತಿಗಳೆರಡೂ ಒಬ್ಬ ಮನುಷ್ಯನನ್ನು ದೂಷಿತನನ್ನಾಗಿ ಮಾಡುತ್ತವೆ. ಈ ವಿಷಯದಲ್ಲಿ ಸಂಶಯವೇ ಇಲ್ಲ. ಆದರೆ ಇವುಗಳಲ್ಲಿರುವ ವಿಶೇಷವನ್ನು ಹೇಳುತ್ತೇನೆ, ಕೇಳು.

ಜಾತ್ಯಾ ಚ ಕರ್ಮಣಾ ಚೈವ ದುಷ್ಟಂ ಕರ್ಮ ನ ಸೇವತೇ ।
ಜಾತ್ಯಾ ದುಷ್ಟಶ್ಚ ಯಃ ಪಾಪಂ ನ ಕರೋತಿ ಸ ಪೂರುಷಃ ॥೩೩॥

ಜಾತಿಯಿಂದಲೂ ದುಷ್ಟನಾಗದೇ ಶ್ರೇಷ್ಠವಾದ ಕರ್ಮವನ್ನು ಮಾಡುತ್ತಾ ದುಷ್ಟವಾದ ಕರ್ಮವನ್ನು ಮಾಡದೇ ಇರುವವನನ್ನು ಉತ್ತಮ

ಪುರುಷನೆಂದು ಹೇಳುತ್ತಾರೆ. ಹಾಗೆಯೇ ಜಾತಿಯಿಂದ ದುಷ್ಟನಾಗಿದ್ದರೂ ಪಾಪಕರ್ಮಗಳನ್ನು ಮಾಡದಿದ್ದರೆ ಅಂತಹವನನ್ನೂ ಉತ್ತಮಪುರುಷನೆಂದು ಹೇಳುತ್ತಾರೆ.

ಜಾತ್ಯಾ ಪ್ರಧಾನಂ ಪುರುಷಂ ಕುರ್ವಾಣಂ ಕರ್ಮ ಧಿಕ್ಕೃತಮ್ ।
ಕರ್ಮ ತದ್ದೂಷಯತ್ಯೇನಂ ತಸ್ಮಾತ್ಕರ್ಮ ನ ಶೋಭನಮ್ ॥೩೪॥

ಜಾತಿಯಿಂದ ಶ್ರೇಷ್ಠನಾಗಿದ್ದರೂ ನಿಂದಿತವಾದ ಕರ್ಮಗಳನ್ನು ಮಾಡುತ್ತಿದ್ದರೆ–ಆ ಪಾಪಕರ್ಮಗಳು ಜಾತಿಪ್ರಧಾನನನ್ನು ಕಳಂಕಿತನನ್ನಾಗಿ ಮಾಡುತ್ತವೆ. ಆದುದರಿಂದ ಯಾವುದೇ ಕಾರಣದಿಂದಲೂ ಕೆಟ್ಟಕೆಲಸಗಳನ್ನು ಮಾಡುವುದು ಶ್ರೇಯಸ್ಕರವಲ್ಲ."

ಜನಕನು ಪ್ರಶ್ನಿಸುತ್ತಾನೆ :

ಕಾನಿ ಕರ್ಮಾಣಿ ಧರ್ಮ್ಯಾಣಿ ಲೋಕೇಽಸ್ಮಿನ್ದ್ವಿಜಸತ್ತಮ ।
ನ ಹಿಂಸನ್ತೀಹ ಭೂತಾನಿ ಕ್ರಿಯಮಾಣಾನಿ ಸರ್ವದಾ ॥೩೫॥

"ದ್ವಿಜಶ್ರೇಷ್ಠರೇ! ಸರ್ವಕಾಲಗಳಲ್ಲಿಯೂ ಆಚರಿಸಲು ಯೋಗ್ಯವಾದ ಮತ್ತು ಪ್ರಾಣಿಗಳಿಗೆ ಹಿಂಸೆಯಾಗದಿರುವ ಯಾವ ಧರ್ಮಕಾರ್ಯಗಳು ಈ ಲೋಕದಲ್ಲಿವೆ?"

ಪರಾಶರರು ಹೇಳುತ್ತಾರೆ :

"ಮಹಾರಾಜ! ನೀನು ಯಾವ ಧರ್ಮಕಾರ್ಯಗಳ ವಿಷಯವಾಗಿ ಪ್ರಶ್ನಿಸಿದೆಯೋ–ಅದನ್ನೇ ಹೇಳುತ್ತೇನೆ. ಯಾವ ಕರ್ಮಗಳು ಅಹಿಂಸಾ ಯುಕ್ತವಾಗಿದ್ದು ಮನುಷ್ಯನನ್ನು ಎಲ್ಲ ಕಾಲಗಳಲ್ಲಿಯೂ ರಕ್ಷಿಸುತ್ತವೆಯೋ ಅಂತಹ ಕರ್ಮಗಳನ್ನು ಹೇಳುತ್ತೇನೆ.

ಸಂನ್ಯಸ್ಯಾಗ್ನೀನುದಾಸೀನಾಃ ಪಶ್ಯನ್ತಿ ವಿಗತಜ್ವರಾಃ ।
ನೈಃಶ್ರೇಯಸಂ ಕರ್ಮಪಥಂ ಸಮಾರುಹ್ಯ ಯಥಾಕ್ರಮಮ್ ॥೩೬॥
ಪ್ರಶ್ರಿತಾ ವಿನಯೋಪೇತಾ ದಮನಿತ್ಯಾಃ ಸುಸಂಶಿತಾಃ ।
ಪ್ರಯಾನ್ತಿ ಸ್ಥಾನಮಜರಂ ಸರ್ವಕರ್ಮವಿವರ್ಜಿತಾಃ ॥೩೭॥

ಯಾರು ಅಗ್ನಿಗಳನ್ನು ಆತ್ಮಸಮಾರೋಪಣೆ ಮಾಡಿಕೊಂಡು ಸಂನ್ಯಾಸ

ದೀಕ್ಷೆಯನ್ನು ಸ್ವೀಕರಿಸಿ–ಎಲ್ಲವನ್ನೂ ಉದಾಸೀನಭಾವದಿಂದ ನೋಡುವರೋ, ಎಲ್ಲ ವಿಧವಾದ ಚಿಂತೆಗಳಿಂದಲೂ ರಹಿತರಾಗಿರುವರೋ, ಅನುಕ್ರಮವಾಗಿ ಮೋಕ್ಷದಾಯಕವಾದ ಕರ್ಮಮಾರ್ಗವನ್ನು ಹಿಡಿದು ಹೋಗುವರೋ, ವಿಧೇಯರೋ, ವಿನಯದಿಂದ ಯುಕ್ತರಾಗಿರುವರೋ, ಇಂದ್ರಿಯನಿಗ್ರಹವೇ ಮೊದಲಾದ ಗುಣಗಳಿಂದ ಸಂಪನ್ನರಾಗಿರುವರೋ, ಕಠೋರವ್ರತನಿಷ್ಠರೋ–ಅಂತಹವರು ಸರ್ವಕರ್ಮಗಳಿಂದಲೂ ಬಿಡಲ್ಪಟ್ಟವರಾಗಿ ಅವಿನಾಶಿಯಾದ ಸ್ಥಾನವನ್ನು ಹೊಂದುತ್ತಾರೆ.

ಸರ್ವೇ ವರ್ಣಾ ಧರ್ಮಕಾರ್ಯಾಣಿ ಸಮ್ಯ-
ಕ್ಕೃತ್ವಾ ರಾಜನ್ಸತ್ಯವಾಕ್ಯಾನಿ ಚೋಕ್ತ್ವಾ ।
ತ್ಯಕ್ತ್ವಾಧರ್ಮಂ ದಾರುಣಂ ಜೀವಲೋಕೇ
ಯಾನ್ತಿ ಸ್ವರ್ಗೇ ನಾತ್ರ ಕಾರ್ಯೋ ವಿಚಾರಃ ॥೩೯॥

ಜನಕರಾಜ! ಈ ಜೀವಲೋಕದಲ್ಲಿ ಎಲ್ಲ ವರ್ಣದವರೂ ಭಯಾನಕವಾದ ಪಾಪಕರ್ಮಗಳನ್ನು ಸಂಪೂರ್ಣವಾಗಿ ತ್ಯಾಗಮಾಡಿ ಸ್ವವರ್ಣೋಚಿತವಾದ ಧರ್ಮಕಾರ್ಯಗಳನ್ನು ಮಾಡುತ್ತಾ ಸತ್ಯನಿಷ್ಠರಾಗಿದ್ದರೆ ಅವಸಾನಾನಂತರದಲ್ಲಿ ಸ್ವರ್ಗವನ್ನೇ ಸೇರುತ್ತಾರೆ. ಈ ವಿಷಯದಲ್ಲಿ ವಿಚಾರಮಾಡುವ ಅಗತ್ಯವೇ ಇಲ್ಲ."

೨೯೬ನೆಯ ಅಧ್ಯಾಯವು ಮುಗಿಯಿತು.

೨೯೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪರಾಶರಗೀತಾ

ನಾನಾಪ್ರಕಾರವಾದ ಧರ್ಮಗಳ ಮತ್ತು ಕರ್ತವ್ಯಗಳ ಉಪದೇಶ

ಪರಾಶರರು ಹೇಳುತ್ತಾರೆ :

ಪಿತಾ ಸಖಾಯೋ ಗುರವಃ ಸ್ತ್ರಿಯಶ್ಚ
ನ ನಿರ್ಗುಣಾನಾಂ ಹಿ ಭವನ್ತಿ ಲೋಕೇ ।
ಅನನ್ಯಭಕ್ತಾಃ ಪ್ರಿಯವಾದಿನಶ್ಚ
ಹಿತಾಶ್ಚ ವಶ್ಯಾಶ್ಚ ಭವನ್ತಿ ರಾಜನ್ ॥೧॥

“ಜನಕರಾಜ! ನಿರ್ಗುಣರಾದವರಿಗೆ (ಸದಾಚಾರಹೀನರಿಗೆ) ತಂದೆಯಾಗಲೀ, ಸ್ನೇಹಿತರಾಗಲೀ, ಗುರುಗಳಾಗಲೀ, ಭಾರ್ಯೆಯರಾಗಲೀ–ಹಿತರೂ ಆಗುವುದಿಲ್ಲ ; ಅಧೀನರೂ ಆಗಿರುವುದಿಲ್ಲ. ಆದರೆ ಯಾರು ತಂದೆ-ತಾಯಿಗಳಲ್ಲಿ ಅನನ್ಯಭಕ್ತಿಯುಳ್ಳವರಾಗಿರುವರೋ, ಪ್ರಿಯವಾದ ಮಾತುಗಳನ್ನಾಡುವರೋ ಅಂತಹವರಿಗೆ ತಂದೆ-ತಾಯಿಗಳು ಹಿತರೂ ಆಗುತ್ತಾರೆ ; ಸ್ನೇಹಿತರು ಮತ್ತು ಭಾರ್ಯೆಯರು ಅಧೀನರೂ ಆಗುತ್ತಾರೆ.

ಪಿತಾ ಪರಂ ದೈವತಂ ಮಾನವಾನಾಂ
ಮಾತುರ್ವಿಶಿಷ್ಟಂ ಪಿತರಂ ವದನ್ತಿ ।
ಜ್ಞಾನಸ್ಯ ಲಾಭಂ ಪರಮಂ ವದನ್ತಿ
ಜಿತೇನ್ದ್ರಿಯಾರ್ಥಾಃ ಪರಮಾಪ್ನುವನ್ತಿ ॥೨॥

ತಂದೆಯು ಮಾನವಸಾಮಾನ್ಯಕ್ಕೇ ಶ್ರೇಷ್ಠನಾದ ದೇವತೆಯಾಗಿರುತ್ತಾನೆ. ಆದುದರಿಂದ ತಂದೆಯೇ ತಾಯಿಗಿಂತಲೂ ಶ್ರೇಷ್ಠನಾದವನೆಂದು ಹೇಳುತ್ತಾರೆ. ವಿದ್ವಾಂಸರು ಜ್ಞಾನಲಾಭವನ್ನೇ ಶ್ರೇಷ್ಠವಾದ ಲಾಭವೆಂದು ಹೇಳುತ್ತಾರೆ. ಇಂದ್ರಿಯಗಳನ್ನೂ ಮತ್ತು ಇಂದ್ರಿಯಾರ್ಥಗಳನ್ನೂ ಸ್ವಾಧೀನ ಪಡಿಸಿಕೊಂಡಿರುವವರು ಪರಮಪದವನ್ನು ಸೇರುತ್ತಾರೆ.

ರಣಾಜಿರೇ ಯತ್ರ ಶರಾಗ್ನಿಸಂಸ್ತರೇ
ನೃಪಾತ್ಮಜೋ ಘಾತಮವಾಪ್ಯ ದಹ್ಯತೇ ।
ಪ್ರಯಾತಿ ಲೋಕಾನಮರೈಃ ಸುದುರ್ಲಭಾ-
ನ್ನಿಷೇವತೇ ಸ್ವರ್ಗಫಲಂ ಯಥಾಸುಖಮ್ ॥೩॥

ರಣಾಂಗಣದಲ್ಲಿ ಗಾಯಗೊಂಡು ಬಾಣರೂಪವಾದ ಚಿತಾಗ್ನಿಯಲ್ಲಿ ದಗ್ಧನಾಗುವ ಕ್ಷತ್ರಿಯಪುತ್ರನು–ದೇವತೆಗಳಿಂದಲೂ ಹೊಂದಲು ಅಸಾಧ್ಯವಾದ ಪುಣ್ಯಲೋಕಗಳನ್ನು ಹೊಂದುತ್ತಾನೆ ಮತ್ತು ಅಲ್ಲಿ ಸ್ವರ್ಗೀಯಸುಖವನ್ನು ಆನಂದದಿಂದ ಉಪಭೋಗಿಸುತ್ತಾನೆ.

ಶ್ರಾನ್ತಂ ಭೀತಂ ಭ್ರಷ್ಟಶಸ್ತ್ರಂ ರುದನ್ತಂ
ಪರಾಙ್ಮುಖಂ ಪಾರಿಬರ್ಹೈಶ್ಚ ಹೀನಮ್ ।

ಅನುದ್ಯನ್ತಂ ರೋಗಿಣಂ ಯಾಚಮಾನಂ
ನ ವೈ ಹಿಂಸ್ಯಾದ್ಬಾಲವೃದ್ಧೌ ಚ ರಾಜನ್ ॥೪॥

ಬಳಲಿರುವವನನ್ನೂ, ಭಯಪಟ್ಟಿರುವವನನ್ನೂ, ಶಸ್ತ್ರಾಸ್ತ್ರಗಳನ್ನು ಕಳೆದುಕೊಂಡಿರುವವನನ್ನೂ, ರೋದಿಸುತ್ತಿರುವವನನ್ನೂ, ಯುದ್ಧದಿಂದ ಹಿಮ್ಮೆಟ್ಟಿರುವವನನ್ನೂ, ಯುದ್ಧದ ಸಾಮಗ್ರಿಗಳಿಂದಲೂ–ಸೇವಕರಿಂದಲೂ ಅನುಚರರಿಂದಲೂ ವಿಹೀನನಾಗಿರುವವನನ್ನೂ, ಯುದ್ಧದ ಪ್ರಯತ್ನವನ್ನೇ ಸಂಪೂರ್ಣವಾಗಿ ಬಿಟ್ಟಿರುವವನನ್ನೂ, ರೋಗಗ್ರಸ್ತನಾಗಿರುವವನನ್ನೂ, ಪ್ರಾಣ ಭಿಕ್ಷೆಯನ್ನು ಬೇಡುತ್ತಿರುವವನನ್ನೂ, ಬಾಲಕನನ್ನೂ ಮತ್ತು ವೃದ್ಧನನ್ನೂ–ಯಾವುದೇ ಕಾರಣದಿಂದಲೂ ವಧಿಸಬಾರದು.

ಪಾರಿಬರ್ಹೈಃ ಸುಸಂಯುಕ್ತಮುದ್ಯತಂ ತುಲ್ಯತಾಂ ಗತಮ್ ।
ಅತಿಕ್ರಮೇತ್ತಂ ನೃಪತಿಃ ಸಂಗ್ರಾಮೇ ಕ್ಷತ್ರಿಯಾತ್ಮಜಮ್ ॥೫॥

ಯುದ್ಧಸಾಮಗ್ರಿಗಳಿಂದಲೂ–ಸೇವಕರಿಂದಲೂ–ಅನುಚರರಿಂದಲೂ ಸಂಪನ್ನನಾಗಿರುವ, ಯುದ್ಧಮಾಡಲು ಸಿದ್ಧನಾಗಿರುವ, ತನಗೆ ಸಮಾನನಾಗಿರುವ ಕ್ಷತ್ರಿಯಪುತ್ರನನ್ನೇ ರಾಜನಾದವನು ಎದುರಿಸಬೇಕು.

ತುಲ್ಯಾದಿಹ ವಧಃ ಶ್ರೇಯಾನ್ವಿಶಿಷ್ಟಾಚ್ಚೇತಿ ನಿಶ್ಚಯಃ ।
ವಿಹೀನಾತ್ಕಾತರಾಚ್ಚೈವ ಕೃಪಣಾದ್ಗರ್ಹಿತೋ ವಧಃ ॥೬॥

ತನಗೆ ಸಮಾನನಾದವನಿಂದ ಅಥವಾ ತನಗಿಂತಲೂ ಹೆಚ್ಚು ಬಲಶಾಲಿಯಾದವನಿಂದ ವಧಿಸಲ್ಪಡುವುದು ಶ್ರೇಯಸ್ಕರವು. ತನಗಿಂತಲೂ ಹೀನನಾದ ಮನುಷ್ಯನಿಂದಲೂ, ಹೇಡಿಯಿಂದಲೂ, ಕೃಪಣನಿಂದಲೂ ವಧಿಸಲ್ಪಡುವುದು ನಿಂದ್ಯವಾದುದು.

ಪಾಪಾತ್ಪಾಪಸಮಾಚಾರಾನ್ನಿಹೀನಾಚ್ಚ ನರಾಧಿಪ ।
ಪಾಪ ಏವ ವಧಃ ಪ್ರೋಕ್ತೋ ನರಕಾಯೇತಿ ನಿಶ್ಚಯಃ ॥೭॥

ಪಾಪಿಷ್ಠನಿಂದಲೂ, ದುರಾಚಾರಿಯಿಂದಲೂ, ನೀಚಪುರುಷನಿಂದಲೂ ವಧಿಸಲ್ಪಡುವುದು ಪಾಪಹೇತುವೆಂದೇ ಹೇಳಲ್ಪಟ್ಟಿದೆ. ಹಾಗೆ ಅಂತಹವರಿಂದ ವಧಿಸಲ್ಪಟ್ಟವರು ನರಕಕ್ಕೇ ಹೋಗುವರೆಂಬುದು ನಿಶ್ಚಯ.

ನ ಕಶ್ಚಿತ್ತ್ರಾತಿ ವೈ ರಾಜನ್ದಿಷ್ಟಾನ್ತವಶಮಾಗತಮ್ ।
ಸಾವಶೇಷಾಯುಷಂ ವಾಪಿ ಕಶ್ಚಿನ್ನೈವಾಪಕರ್ಷತಿ ॥೮॥

ಜನಕರಾಜ! ಮೃತ್ಯುವಿಗೆ ವಶನಾಗಿರುವ ಮನುಷ್ಯನನ್ನು ಯಾವನೇ ಆದರೂ (ಯಾವ ವೈದ್ಯ, ಶೂರ ಅಥವಾ ಮಂತ್ರವಾದಿಯೇ ಆದರೂ) ಪಾರುಮಾಡುವ ಸಾಧ್ಯತೆಯಿಲ್ಲ. ಹಾಗೆಯೇ ಆಯುಷ್ಯದ ಶೇಷವು ಇನ್ನೂ ಉಳಿದಿರುವವನನ್ನು ಯಾರೂ ಸೆಳೆದುಕೊಳ್ಳಲಾರರು.

ಸ್ನಿಗ್ಧೈಶ್ಚ ಕ್ರಿಯಮಾಣಾನಿ ಕರ್ಮಾಣೀಹ ನಿವರ್ತಯೇತ್ ।
ಹಿಂಸಾತ್ಮಕಾನಿ ಸರ್ವಾಣಿ ನಾಯುರಿಚ್ಛೇತ್ಪರಾಯುಷಾ ॥೯॥

ತನ್ನ ಪ್ರಿಯಜನರೇನಾದರೂ ಹಿಂಸಾತ್ಮಕವಾದ ಕರ್ಮಗಳನ್ನು ಮಾಡುತ್ತಿದ್ದರೆ–ಅವನ್ನು ಅವಶ್ಯವಾಗಿ ತಡೆಯಬೇಕು. ಮತ್ತೊಬ್ಬರ ಆಯುಸ್ಸಿನಿಂದ (ಇತರರ ಪ್ರಾಣಗಳನ್ನು ಬಲಿಗೊಟ್ಟು) ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಇಚ್ಛಿಸಬಾರದು.

ಗೃಹಸ್ಥಾನಾಂ ತು ಸರ್ವೇಷಾಂ ವಿನಾಶಮಭಿಕಾಂಕ್ಷತಾಮ್ ।
ನಿಧನಂ ಶೋಭನಂ ತಾತ ಪುಲಿನೇಷು ಕ್ರಿಯಾವತಾಮ್ ॥೧೦॥

ವತ್ಸ! ಮರಣವನ್ನು ಇಚ್ಛಿಸುವ ಎಲ್ಲ ಗೃಹಸ್ಥರಿಗೂ ಗಂಗೆಯೇ ಮೊದಲಾದ ಪವಿತ್ರನದಿಗಳ ತೀರದಲ್ಲಿ ಶುಭಕರ್ಮಗಳನ್ನು ಮಾಡುತ್ತಿರುವಾಗ ಪ್ರಾಪ್ತವಾಗುವ ಮರಣವು ಶ್ರೇಯಸ್ಕರವಾದುದು.

ಆಯುಷಿ ಕ್ಷಯಮಾಪನ್ನೇ ಪಞ್ಚತ್ವಮುಪಗಚ್ಛತಿ ।
ತಥಾ ಹ್ಯಕಾರಣಾದ್ಭವತಿ ಕಾರಣೈರುಪಪಾದಿತಮ್ ॥೧೧॥

ಆಯುಷ್ಯವು ಕಳೆದೊಡನೆಯೇ ಪ್ರಾಣಿಯು ಮರಣವನ್ನು ಹೊಂದುತ್ತದೆ. ಹೀಗೆ ಯಾವ ಕಾರಣವೂ ಇಲ್ಲದೆಯೇ ಮರಣವು ಸಂಭವಿಸುವಂತೆ ರೋಗಾದಿ ವಿಭಿನ್ನಕಾರಣಗಳಿಂದಲೂ ಮರಣವು ಸಂಭವಿಸುತ್ತದೆ.

ತಥಾ ಶರೀರಂ ಭವತಿ ದೇಹಾದ್ಯೇನೋಪಪಾದಿತಮ್ ।
ಅಧ್ವಾನಂ ಗತಕಶ್ಚಾಯಂ ಪ್ರಾಪ್ತಶ್ಚಾಯಂ ಗೃಹಾದ್ಗೃಹಮ್ ॥೧೨॥

ಹಾಗೆ ಯಾವ ಮನುಷ್ಯನಿಂದ ಪ್ರಯತ್ನಪೂರ್ವಕವಾಗಿ ದೇಹ

ವಿಮೋಚನೆಯು (ಆತ್ಮಹತ್ಯೆಯು) ಮಾಡಿಕೊಳ್ಳಲ್ಪಡುತ್ತದೆಯೋ–ಅವನು (ಕರ್ಮಾನುಭವಕ್ಕೆ ಅನುಗುಣವಾದ ಗತಿಯನ್ನು ಹೊಂದದೇ) ಮಾರ್ಗ ಮಧ್ಯದಲ್ಲಿಯೇ ಒಂದು ದೇಹದಿಂದ ಮತ್ತೊಂದು ದೇಹಕ್ಕೆ ಹೋಗುತ್ತಾನೆ.

ದ್ವಿತೀಯಂ ಕಾರಣಂ ತತ್ರ ನಾನ್ಯತ್ಕಿಂಚನ ವಿದ್ಯತೇ ।
ತದ್ದೇಹಂ ದೇಹಿನಾಂ ಯುಕ್ತಂ ಪಞ್ಚಭೂತೇಷು ವರ್ತತೇ ॥೧೩॥

ಈ ಅವಾಂತರದೇಹವನ್ನು ಹೊಂದುವುದಕ್ಕೆ ಆತ್ಮಹತ್ಯೆಯೇ ಕಾರಣ. ಬೇರಾವ ಕಾರಣವೂ ಇಲ್ಲ. ಆಯುಸ್ಸಿನ ಶೇಷದ ವಾಸನೆಗಳಿಂದ ಕೂಡಿದ ಆ ದೇಹವು ಪಂಚಭೂತಮಯವೇ ಆಗಿರುತ್ತದೆ.

ಶಿರಾಸ್ನಾಯ್ವಸ್ಥಿಸಂಘಾತಂ ಬೀಭತ್ಸಾಮೇಧ್ಯಸಂಕುಲಮ್ ।
ಭೂತಾನಾಮಿನ್ದ್ರಿಯಾಣಾಂ ಚ ಗುಣಾನಾಂ ಚ ಸಮಾಗತಮ್ ॥೧೪॥

ಶರೀರವು ನರ-ನಾಡಿ-ಮೂಳೆಗಳ ಜೋಡಣೆಯಾಗಿದೆ. ಜುಗುಪ್ಸಿತವಾದ ಮಲದಿಂದ ತುಂಬಿದೆ. ಪಂಚಭೂತಗಳು, ಇಂದ್ರಿಯಗಳು ಮತ್ತು ತ್ರಿಗುಣಗಳ ಸೇರುವೆಯಾಗಿದೆ.

ತ್ವಗನ್ತಂ ದೇಹಮಿತ್ಯಾಹುರ್ವಿದ್ವಾಂಸೋಽಧ್ಯಾತ್ಮಚಿನ್ತಕಾಃ ।
ಗುಣೈರಪಿ ಪರಿಕ್ಷೀಣಂ ಶರೀರಂ ಮರ್ತ್ಯತಾಂ ಗತಮ್ ॥೧೫॥

ಅಧ್ಯಾತ್ಮವನ್ನು ವಿವೇಚನೆಮಾಡುವ ವಿದ್ವಾಂಸರು – 'ಈ ದೇಹವು ತ್ವಕ್ ಎಂಬ ಧಾತುವನ್ನು ಕೊನೆಯಲ್ಲಿ ಹೊಂದಿರುವುದು ; ಗುಣಹೀನವಾದುದು ; ಹಾಗೂ ಮರಣಧರ್ಮವುಳ್ಳದು'–ಎಂದು ಹೇಳುತ್ತಾರೆ. (ಇದು ಮೂಳೆ, ಮಾಂಸ, ತ್ವಕ್ಕು ಮುಂತಾದ ಧಾತುಗಳ ಕೂಡಿಕೆ. ಮಲ-ಮೂತ್ರಾದಿಗಳಿಂದ ತುಂಬಿದೆ. ನಾಶಧರ್ಮವುಳ್ಳದು. ವಾಸ್ತವವಾಗಿಯೂ ಇದರಲ್ಲಿ ಸೌಂದರ್ಯಾದಿ ಗುಣಗಳಾವುವೂ ಇಲ್ಲ.)

ಶರೀರಿಣಾ ಪರಿತ್ಯಕ್ತಂ ನಿಶ್ಚೇಷ್ಟಂ ಗತಚೇತನಮ್ ।
ಭೂತೈಃ ಪ್ರಕೃತಿಮಾಪನ್ನೈಸ್ತತೋ ಭೂಮೌ ನಿಮಜ್ಜತಿ ॥೧೬॥

ಜೀವಾತ್ಮನಿಂದ ಪರಿತ್ಯಕ್ತವಾದ ದೇಹವು ಚೇತನಾರಹಿತವಾಗಿ ನಿಶ್ಚೇಷ್ಟವಾಗುತ್ತದೆ. ದೇಹಾಂತರ್ಗತವಾಗಿದ್ದ ಪಂಚಭೂತಗಳೂ ತಮ್ಮ-ತಮ್ಮ

ಮೂಲಸ್ವರೂಪಗಳಲ್ಲಿ ಸೇರಿಹೋಗುತ್ತವೆ. ಸ್ಥೂಲಶರೀರವು ಭೂಮಿಯಲ್ಲಿ ಅಂತರ್ಗತವಾಗುತ್ತದೆ.

ಭಾವಿತಂ ಕರ್ಮಯೋಗೇನ ಜಾಯತೇ ತತ್ರ ತತ್ರ ಹ ।
ಇದಂ ಶರೀರಂ ವೈದೇಹ ಮ್ರಿಯತೇ ಯತ್ರ ಯತ್ರ ಹ ।
ತತ್ಸ್ವಭಾವೋಽಪರೋ ದೃಷ್ಟೋ ವಿಸರ್ಗಃ ಕರ್ಮಣಸ್ತಥಾ ॥೧೭॥

ಕರ್ಮಫಲಯೋಗದಿಂದ ಯುಕ್ತವಾದ ಈ ಶರೀರವು ಎಲ್ಲೆಲ್ಲಿಯೋ ಹುಟ್ಟುತ್ತದೆ. ಎಲ್ಲೆಲ್ಲಿಯೋ ಸಾಯುತ್ತದೆ. (ಹುಟ್ಟುವುದೇ ಒಂದು ಕಡೆ ; ಸಾಯುವುದೇ ಒಂದು ಕಡೆ.) ಕರ್ಮಗಳ ಫಲಸ್ವರೂಪವಾದ ಸ್ವಭಾವಸಿದ್ಧವಾದ ಇಂತಹ ಪುನರ್ಜನ್ಮವನ್ನು ನಾವು ಪ್ರಾಣಿಗಳಲ್ಲಿ ಕಾಣಬಹುದಾಗಿದೆ.

ನ ಜಾಯತೇ ತು ನೃಪತೇ ಕಂಚಿತ್ಕಾಲಮಯಂ ಪುನಃ ।
ಪರಿಭ್ರಮತಿ ಭೂತಾತ್ಮಾ ದ್ಯಾಮಿವಾಮ್ಬುಧರೋ ಮಹಾನ್ ॥೧೮॥

ಜನಕರಾಜ! ದೊಡ್ಡದಾದ ಮೇಘವು ಆಕಾಶದಲ್ಲಿ ಸರ್ವತ್ರ ಸುತ್ತಾಡುತ್ತಿರುವಂತೆ–ಜೀವವು ಒಂದು ಶರೀರವನ್ನು ಪರಿತ್ಯಾಗಮಾಡಿದ ನಂತರ ಸ್ವಲ್ಪಕಾಲದವರೆಗೆ ಸುತ್ತುತ್ತಿರುತ್ತದೆ. ಒಡನೆಯೇ ಪುನರ್ಜನ್ಮವನ್ನು ಪಡೆಯುವುದಿಲ್ಲ.

ನ ಪುನರ್ಜಾಯತೇ ರಾಜನ್ಪ್ರಾಪ್ಯೇಹಾಯತನಂ ನೃಪ ।
ಮನಸಃ ಪರಮೋ ಹ್ಯಾತ್ಮಾ ಇನ್ದ್ರಿಯೇಭ್ಯಃ ಪರಂ ಮನಃ ॥೧೯॥

ಜೀವವು ಆತ್ಮದ ಅಧಿಷ್ಠಾನವನ್ನು ಹೊಂದಿದನಂತರ ಪುನಃ ಹುಟ್ಟುವುದಿಲ್ಲ. ಇಂದ್ರಿಯಗಳಿಗೂ ಅತೀತವಾದುದು ಮನಸ್ಸು. ಮನಸ್ಸಿಗೂ ಅತೀತವಾದುದು ಆತ್ಮ. ಅದೇ ಅಧಿಷ್ಠಾನ.

ವಿವಿಧಾನಾಂ ಚ ಭೂತಾನಾಂ ಜಙ್ಗಮಾಃ ಪರಮಾ ನೃಪ ।
ಜಙ್ಗಮಾನಾಮಪಿ ತಥಾ ದ್ವಿಪದಾಃ ಪರಮಾ ಮತಾಃ ॥೨೦॥

ಪ್ರಪಂಚದಲ್ಲಿರುವ ಸ್ಥಾವರ-ಜಂಗಮಪ್ರಾಣಿಗಳಲ್ಲಿ ಸ್ಥಾವರಪ್ರಾಣಿಗಳಿಗಿಂತಲೂ (ವೃಕ್ಷವೇ ಮೊದಲಾದ ಚಲಿಸದಿರುವ ಪ್ರಾಣಿಗಳಿಗಿಂತಲೂ) ಜಂಗಮಪ್ರಾಣಿಗಳೇ (ಚಲಿಸುವ ಪ್ರಾಣಿಗಳೇ) ಶ್ರೇಷ್ಠವಾದುವುಗಳು.

ಚಲಿಸುವ ಪ್ರಾಣಿಗಳಲ್ಲಿಯೂ ಎರಡು ಕಾಲುಗಳಿರುವ ಪ್ರಾಣಿಗಳು (ಮನುಷ್ಯರು) ಶ್ರೇಷ್ಠರೆಂದು ಹೇಳುತ್ತಾರೆ.

ದ್ವಿಪದಾನಾಮಪಿ ತಥಾ ದ್ವಿಜಾ ವೈ ಪರಮಾಃ ಸ್ಮೃತಾಃ ।
ದ್ವಿಜಾನಾಮಪಿ ರಾಜೇನ್ದ್ರ ಪ್ರಜ್ಞಾವನ್ತಃ ಪರಾ ಮತಾಃ ।
ಪ್ರಜ್ಞಾನಾಮಾತ್ಮಸಮ್ಬುದ್ಧಾಃ ಸಮ್ಬುದ್ಧಾನಾಮಮಾನಿನಃ ॥೨೧॥

ದ್ವಿಪಾದಿಗಳಾದ ಮನುಷ್ಯರಲ್ಲಿ ದ್ವಿಜರು ಶ್ರೇಷ್ಠರೆಂದು ಹೇಳಲ್ಪಟ್ಟಿದ್ದಾರೆ. ದ್ವಿಜರಲ್ಲಿಯೂ ಪ್ರಜ್ಞಾವಂತರು ಶ್ರೇಷ್ಠರು. ಪ್ರಜ್ಞಾವಂತರಲ್ಲಿಯೂ ಆತ್ಮಜ್ಞಾನಿಗಳು ಶ್ರೇಷ್ಠರು. ಆತ್ಮಜ್ಞಾನಿಗಳಲ್ಲಿಯೂ ನಿರಹಂಕಾರಿಗಳು ಪರಮಶ್ರೇಷ್ಠರು.

ಜಾತಮನ್ವೇತಿ ಮರಣಂ ನೃಣಾಮಿತಿ ವಿನಿಶ್ಚಯಃ ।
ಅನ್ತವನ್ತಿ ಹಿ ಕರ್ಮಾಣಿ ಸೇವನ್ತೇ ಗುಣತಃ ಪ್ರಜಾಃ ॥೨೨॥

ಮನುಷ್ಯನಾಗಿ ಹುಟ್ಟಿದೊಡನೆಯೇ ಮರಣವು ಅವನನ್ನು ಹಿಂಬಾಲಿಸುತ್ತದೆಂಬುದು ದೃಢನಿಶ್ಚಯವಾಗಿದೆ. ಸಮಸ್ತಪ್ರಜೆಗಳೂ ಸತ್ತ್ವಾದಿ ಗುಣಗಳಿಂದ ಪ್ರೇರಿತರಾಗಿ ವಿನಾಶವುಳ್ಳ ಕರ್ಮಗಳನ್ನು (ಅಶಾಶ್ವತವಾದ ಫಲಗಳನ್ನು ಕೊಡುವ ಕರ್ಮಗಳನ್ನು) ಆಚರಿಸುತ್ತಾರೆ.

ಆಪನ್ನೇ ತೂತ್ತರಾಂ ಕಾಷ್ಠಾಂ ಸೂರ್ಯೇ ಯೋ ನಿಧನಂ ವ್ರಜೇತ್ ।
ನಕ್ಷತ್ರೇ ಚ ಮುಹೂರ್ತೇ ಚ ಪುಣ್ಯೇ ರಾಜನ್ಸ ಪುಣ್ಯಕೃತ್ ॥೨೩॥

ಸೂರ್ಯನು ಉತ್ತರದಿಕ್ಕಿನೆಡೆಗೆ ತಿರುಗಿದ ನಂತರ (ಉತ್ತರಾಯಣವು ಪ್ರಾರಂಭವಾದನಂತರ) ಉತ್ತಮವಾದ ನಕ್ಷತ್ರದಲ್ಲಿ ಮತ್ತು ಉತ್ತಮವಾದ ಮುಹೂರ್ತದಲ್ಲಿ ಮರಣಹೊಂದುವವನು ಪುಣ್ಯಾತ್ಮನೇ ಸರಿ.

ಅಯೋಜಯಿತ್ವಾ ಕ್ಲೇಶೇನ ಜನಂ ಪ್ಲಾವ್ಯ ಚ ದುಷ್ಕೃತಮ್ ।
ಮೃತ್ಯುನಾತ್ಮಕೃತೇನೇಹ ಕರ್ಮ ಕೃತ್ವಾತ್ಮಶಕ್ತಿಭಿಃ ॥೨೪॥

ಯಾರಿಗೂ ಕಷ್ಟವನ್ನು ಕೊಡದೇ, ಪ್ರಾಯಶ್ಚಿತ್ತಗಳ ಮೂಲಕವಾಗಿ

ತನ್ನ ಪಾಪಗಳನ್ನು ಕಳೆದುಕೊಂಡು, ಶಕ್ತಿಗೆ ಅನುಸಾರವಾಗಿ ಶುಭಕರ್ಮಗಳನ್ನು ಮಾಡುವವನು ಕಾಲಾನುಗುಣವಾಗಿ ಬರುವ ಮೃತ್ಯುವಿಗೆ ಭಯಪಡುವುದಿಲ್ಲ.

ವಿಷಮುದ್ಬನ್ಧನಂ ದಾಹೋ ದಸ್ಯುಹಸ್ತಾತ್ತಥಾ ವಧಃ ।
ದಂಷ್ಟ್ರಿಭ್ಯಶ್ಚ ಪಶುಭ್ಯಶ್ಚ ಪ್ರಾಕೃತೋ ವಧ ಉಚ್ಯತೇ ॥೨೫॥

ವಿಷವನ್ನು ತೆಗೆದುಕೊಂಡು ಪ್ರಾಣಬಿಡುವುದು, ನೇಣುಹಾಕಿಕೊಂಡು ಪ್ರಾಣಬಿಡುವುದು, ಬೆಂಕಿಯನ್ನು ಹೊತ್ತಿಸಿಕೊಂಡು ಪ್ರಾಣಬಿಡುವುದು, ದರೋಡೆಕಾರರಿಂದ ಮರಣಹೊಂದುವುದು, ಕೋರೇಹಲ್ಲುಗಳನ್ನು ಹೊಂದಿರುವ ಹುಲಿ-ಸಿಂಹ ಇತ್ಯಾದಿ ದುಷ್ಟಪ್ರಾಣಿಗಳಿಂದ ಪ್ರಾಣಬಿಡುವುದು–ಇವುಗಳೆಲ್ಲವೂ ಅಧಮಶ್ರೇಣಿಯ ಮರಣವೆಂದು ಹೇಳುತ್ತಾರೆ.

ನ ಚೈಭಿಃ ಪುಣ್ಯಕರ್ಮಾಣೋ ಯುಜ್ಯನ್ತೇ ಚಾಭಿಸಂಧಿಜೈಃ ।
ಏವಂವಿಧೈಶ್ಚ ಬಹುಭಿರಪರೈಃ ಪ್ರಾಕೃತೈರಪಿ ॥೨೬॥

ಪುಣ್ಯಕರ್ಮಿಗಳಾದ ಮನುಷ್ಯರು ಈ ವಿಧವಾದ ಉಪಾಯಗಳಿಂದಲೂ ಇದೇ ವಿಧವಾದ ಇನ್ನೂ ಇತರ ಅಧಮೋಪಾಯಗಳಿಂದಲೂ ಪ್ರಾಣಗಳನ್ನು ಕಳೆದುಕೊಳ್ಳಲು ಇಚ್ಛೆಪಡುವುದಿಲ್ಲ.

ಊರ್ಧ್ವಂ ಭಿತ್ತ್ವಾ ಪ್ರತಿಷ್ಠನ್ತೇ ಪ್ರಾಣಾಃ ಪುಣ್ಯವತಾಂ ನೃಪ ।
ಮಧ್ಯತೋ ಮಧ್ಯಪುಣ್ಯಾನಾಮಧೋ ದುಷ್ಕೃತಕರ್ಮಣಾಮ್ ॥೨೭॥

ಪುಣ್ಯಾತ್ಮರಾದ ಪುರುಷರಿಗೆ ಪ್ರಾಣವು ಬ್ರಹ್ಮರಂಧ್ರವನ್ನು ಭೇದಿಸಿಕೊಂಡು ಹೋಗುತ್ತದೆ. ಪುಣ್ಯ-ಪಾಪಗಳೆರಡನ್ನೂ ಸಮ-ಸಮವಾಗಿ ಮಾಡಿರುವವರಿಗೆ ಪ್ರಾಣವು ಮಧ್ಯದಿಂದ (ಕಣ್ಣು, ಮುಖ, ಮೂಗು, ಕಿವಿಗಳ ಮೂಲಕವಾಗಿ) ಹೋಗುತ್ತದೆ. ದುಷ್ಕೃತ್ಯಗಳನ್ನೇ ಮಾಡಿರುವ ಪಾಪಿಷ್ಠರಿಗೆ ಅಧೋಭಾಗದಿಂದ (ಶಿಶ್ನ ಅಥವಾ ಗುದಗಳ ಮೂಲಕವಾಗಿ) ಪ್ರಾಣವು ಹೋಗುತ್ತದೆ.

ಏಕಃ ಶತ್ರುರ್ನ ದ್ವಿತೀಯೋಽಸ್ತಿ ಶತ್ರು-
ರಜ್ಞಾನತುಲ್ಯಃ ಪುರುಷಸ್ಯ ರಾಜನ್ ।

ಯೇನಾವೃತಃ ಕುರುತೇ ಸಮ್ಪ್ರಯುಕ್ತೋ
ಘೋರಾಣಿ ಕರ್ಮಾಣಿ ಸುದಾರುಣಾನಿ ॥೨೮॥

ಜನಕರಾಜ! ಮನುಷ್ಯನಿಗೆ ಅಜ್ಞಾನವೆಂಬ ಒಬ್ಬನೇ ಒಬ್ಬ ಶತ್ರು ವಿದ್ದಾನೆ. ಅಜ್ಞಾನಕ್ಕೆ ಸಮಾನವಾದ ಎರಡನೆಯ ಶತ್ರುವೇ ಮನುಷ್ಯನಿಗಿರುವುದಿಲ್ಲ. ಅಜ್ಞಾನದಿಂದ ಆವೃತನಾದ ಮತ್ತು ಪ್ರೇರಿತನಾದ ಪುರುಷನು ಸುದಾರುಣವಾದ ಘೋರಕರ್ಮಗಳನ್ನು ಮಾಡುತ್ತಾನೆ.

ಪ್ರಬಾಧನಾರ್ಥಂ ಶ್ರುತಿಧರ್ಮಯುಕ್ತಾ-
ನ್ವೃದ್ಧಾನುಪಾಸ್ಯ ಪ್ರಭವೇತ ಯಸ್ಯ ।
ಪ್ರಯತ್ನಸಾಧ್ಯೋ ಹಿ ಸ ರಾಜಪುತ್ರ
ಪ್ರಜ್ಞಾಶರೇಣೋನ್ಮಥಿತಃ ಪರೈತಿ ॥೨೯॥

ರಾಜಪುತ್ರ! ವೇದ-ವೇದಾಂಗಪಾರಂಗತರಾದ ಧರ್ಮಾತ್ಮರಾದ ವೃದ್ಧರನ್ನು ಉಪಾಸನೆಮಾಡಿ, ಅವರಿಂದ ಜ್ಞಾನವನ್ನು ಪಡೆದುಕೊಂಡು, ಅಜ್ಞಾನರೂಪನಾದ ಶತ್ರುವನ್ನು ಪರಾಜಯಗೊಳಿಸಲು ಪ್ರಯತ್ನಿಸಬೇಕು. ಮಹಾಪ್ರಯತ್ನದಿಂದ ಅಜ್ಞಾನವನ್ನು ಓಡಿಸಲು ಸಾಧ್ಯವಾಗುತ್ತದೆ. ಪ್ರಜ್ಞಾ ಎಂಬ ಬಾಣದಿಂದ ಪೀಡಿಸತೊಡಗಿದರೆ ಅಜ್ಞಾನವು ಓಡಿಹೋಗುತ್ತದೆ.

ಅಧೀತ್ಯ ವೇದಂ ತಪಸಾ ಬ್ರಹ್ಮಚಾರೀ
ಯಜ್ಞಾಞ್ಶಕ್ತ್ಯಾ ಸಂನಿಗೃಹ್ಯೇಹ ಪಞ್ಚ ।
ವನಂ ಗಚ್ಛೇತ್ಪುರುಷೋ ಧರ್ಮಕಾಮಃ
ಶ್ರೇಯಃಸ್ಥಿತ್ವಾ ಸ್ಥಾಪಯಿತ್ವಾ ಸ್ವವಂಶಮ್ ॥೩೦॥

ದ್ವಿಜನಾದವನು ಮೊದಲು ಬ್ರಹ್ಮಚರ್ಯಾಶ್ರಮದಲ್ಲಿದ್ದುಕೊಂಡು ನಿಯಮಾನುಷ್ಠಾನಗಳ ಪೂರ್ವಕವಾಗಿ ವೇದವನ್ನು ಅಧ್ಯಯನಮಾಡಬೇಕು. ಅನಂತರ ವಿವಾಹವಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸಿ, ಐದು ಇಂದ್ರಿಯಗಳನ್ನೂ ನಿಗ್ರಹಿಸಿ, ತನ್ನ ಶಕ್ತಿಗೆ ಅನುಸಾರವಾಗಿ ಪಂಚಮಹಾಯಜ್ಞಗಳನ್ನು ಮಾಡಬೇಕು. ಅನಂತರ ಧರ್ಮಕಾಮನಾದ ಮನುಷ್ಯನು ತನ್ನ

ಮಗನನ್ನು ಗೃಹಕೃತ್ಯದಲ್ಲಿ ನಿಯೋಜಿಸಿ ಮೋಕ್ಷಕಾಮನಾಗಿ ಅರಣ್ಯಕ್ಕೆ ಹೋಗಬೇಕು.

ಉಪಭೋಗೈರಪಿ ತ್ಯಕ್ತಂ ನಾತ್ಮಾನಂ ಸಾದಯೇನ್ನರಃ ।
ಚಣ್ಡಾಲತ್ವೇಽಪಿ ಮಾನುಷ್ಯಂ ಸರ್ವಥಾ ತಾತ ಶೋಭನಮ್ ॥೩೧॥

ಸುಖೋಪಭೋಗಗಳಿಂದ ವಂಚಿತನಾಗಿದ್ದರೂ ಮನುಷ್ಯನು ಆತ್ಮಹತ್ಯೆಯನ್ನು ಮಾಡಿಕೊಳ್ಳಬಾರದು. ಚಂಡಾಲಜಾತಿಯಲ್ಲಿಯೇ ಜನ್ಮವು ಪ್ರಾಪ್ತವಾಗಿದ್ದರೂ ಮನುಷ್ಯತ್ವವು ಸರ್ವಥಾ ಉತ್ತಮವಾದುದೇ ಸರಿ.

ಇಯಂ ಹಿ ಯೋನಿಃ ಪ್ರಥಮಾ ಯಾಂ ಪ್ರಾಪ್ಯ ಜಗತೀಪತೇ ।
ಆತ್ಮಾ ವೈ ಶಕ್ಯತೇ ತ್ರಾತುಂ ಕರ್ಮಭಿಃ ಶುಭಲಕ್ಷಣೈಃ ॥೩೨॥

ಮನುಷ್ಯಯೋನಿಯು ಸರ್ವಶ್ರೇಷ್ಠವಾದುದು. ಇಂತಹ ಮನುಷ್ಯಯೋನಿಯನ್ನು ಪಡೆದು ಶುಭಲಕ್ಷಣಯುಕ್ತವಾದ ಕರ್ಮಗಳಿಂದ ಆತ್ಮವನ್ನು ರಕ್ಷಿಸಿಕೊಳ್ಳಲು (ಆತ್ಮೋದ್ಧಾರಮಾಡಿಕೊಳ್ಳಲು) ಸಾಧ್ಯವಾಗುತ್ತದೆ.

ಕಥಂ ನ ವಿಪ್ರಣಶ್ಯೇಮ ಯೋನಿತೋಽಸ್ಯಾ ಇತಿ ಪ್ರಭೋ ।
ಕುರ್ವನ್ತಿ ಧರ್ಮಂ ಮನುಜಾಃ ಶ್ರುತಿಪ್ರಾಮಾಣ್ಯದರ್ಶನಾತ್ ॥೩೩॥

ಪ್ರಭುವೇ! 'ನಾವು ಈ ಮನುಷ್ಯಯೋನಿಯಿಂದ ಭ್ರಷ್ಟರಾಗಿ ಅಧಮಯೋನಿಗಳನ್ನು ಪಡೆಯದಿರುವುದು ಹೇಗೆ?'–ಹೀಗೆ ಯೋಚಿಸಿ ಮನುಷ್ಯರು ಶ್ರುತಿಪ್ರಾಮಾಣ್ಯದ ಅವಲೋಕನದಿಂದ ಧರ್ಮಕಾರ್ಯಗಳನ್ನು ಮಾಡುತ್ತಾರೆ.

ಯೋ ದುರ್ಲಭತರಂ ಪ್ರಾಪ್ಯ ಮಾನುಷ್ಯಂ ದ್ವಿಷತೇ ನರಃ ।
ಧರ್ಮಾವಮನ್ತಾ ಕಾಮಾತ್ಮಾ ಭವೇತ್ಸ ಖಲು ವಞ್ಚ್ಯತೇ ॥೩೪॥

ಯಾವನು ಪ್ರಾರಬ್ಧಕರ್ಮಫಲದ ಕಾರಣದಿಂದ ಅತ್ಯಂತದುರ್ಲಭವಾದ ಮನುಷ್ಯಶರೀರವನ್ನು ಹೊಂದಿಯೂ ಇತರರನ್ನು ದ್ವೇಷಿಸುವನೋ, ಧರ್ಮವನ್ನು ಹಳಿಯುವನೋ–ಅಂತಹ ಕಾಮಾಭಿಭೂತನಾದ ಮನುಷ್ಯನು ಮುಂದೆ ಮನುಷ್ಯಜನ್ಮದಿಂದ ವಂಚಿತನಾಗುತ್ತಾನೆ.

ಯಸ್ತು ಪ್ರೀತಿಪುರೋಗೇನ ಚಕ್ಷುಷಾ ತಾತ ಪಶ್ಯತಿ ।
ದೀಪೋಪಮಾನಿ ಭೂತಾನಿ ಯಾವದರ್ಥಾನ್ನ ಪಶ್ಯತಿ ॥೩೫॥

ವತ್ಸ! ಯಾವನು ಪ್ರೀತಿಪುರಸ್ಸರವಾದ ದೃಷ್ಟಿಯಿಂದ ಪ್ರಾಣಿಗಳನ್ನು ದೀಪಗಳಂತೆ ಕಾಣುವನೋ (ದೀಪವು ಆರಿಹೋಗದ ರೀತಿಯಲ್ಲಿ ಎಣ್ಣೆಯನ್ನು ಹಾಕುತ್ತಿರುವಂತೆ ಪ್ರಾಣಿಗಳೂ ವಿನಾಶವಾಗದಂತೆ ವಿಶ್ವಾಸಪೂರ್ವಕವಾಗಿ ನೋಡಿಕೊಳ್ಳುವನೋ), ವಿಷಯಗಳ ಕಡೆಗೆ ದೃಷ್ಟಿಯನ್ನೇ ಹಾಯಿಸುವುದಿಲ್ಲವೋ–ಅಂತಹವನು ಪರಲೋಕದಲ್ಲಿಯೂ ಸಮ್ಮಾನಿತನಾಗುತ್ತಾನೆ.

ಸಾನ್ತ್ವೇನಾನ್ನಪ್ರದಾನೇನ ಪ್ರಿಯವಾದೇನ ಚಾಪ್ಯುತ ।
ಸಮದುಃಖಸುಖೋ ಭೂತ್ವಾ ಸ ಪರತ್ರ ಮಹೀಯತೇ ॥೩೬॥

ಕಷ್ಟದಲ್ಲಿರುವವರನ್ನು ಸಂತೈಸುವುದರಿಂದಲೂ, ಅತಿಥಿಗಳಿಗೆ ಭೋಜನ ಮಾಡಿಸುವುದರಿಂದಲೂ, ಎಲ್ಲರೊಡನೆಯೂ ಪ್ರಿಯವಾದ ಮಾತುಗಳನ್ನಾಡುವುದರಿಂದಲೂ, ಸುಖ-ದುಃಖಗಳನ್ನು ಸಮಾನವನ್ನಾಗಿ ಕಾಣುವುದರಿಂದಲೂ ಮನುಷ್ಯನು ಪರಲೋಕದಲ್ಲಿಯೂ ಸಮ್ಮಾನಿತನಾಗುತ್ತಾನೆ.

ದಾನಂ ತ್ಯಾಗಃ ಶೋಭನಾ ಮೂರ್ತಿರದ್ಭ್ಯೋ
ಭೂತಪ್ಲಾವ್ಯಂ ತಪಸಾ ವೈ ಶರೀರಮ್ ।
ಸರಸ್ವತೀನೈಮಿಷಪುಷ್ಕರೇಷು
ಯೇ ಚಾಪ್ಯನ್ಯೇ ಪುಣ್ಯದೇಶಾಃ ಪೃಥಿವ್ಯಾಮ್ ॥೩೭॥

ದಾನಮಾಡುವುದು, ಸರ್ವತ್ಯಾಗಮಾಡುವುದು ಶ್ರೇಯಸ್ಕರವಾದುದು. ಪುಣ್ಯಜಲಗಳಿಂದ ಆಕೃತಿಯನ್ನು (ಶರೀರವನ್ನು) ಪರಿಶುದ್ಧಗೊಳಿಸಬೇಕು. ಹಾಗೂ ಶರೀರವನ್ನು ತಪಸ್ಸಿನಿಂದಲೂ ನೆನೆಸಬೇಕು. ಸರಸ್ವತೀನದಿಯಲ್ಲಿಯೂ, ನೈಮಿಷಾರಣ್ಯ – ಪುಷ್ಕರಗಳಲ್ಲಿಯೂ, ಪೃಥ್ವಿಯಲ್ಲಿರುವ ಇನ್ನೂ ಅನೇಕ ಪುಣ್ಯಕ್ಷೇತ್ರಗಳಲ್ಲಿಯೂ ಸ್ನಾನಮಾಡಬೇಕು.

ಗೃಹೇಷು ಯೇಷಾಮಸವಃ ಪತನ್ತಿ
ತೇಷಾಮಥೋ ನಿರ್ಹರಣಂ ಪ್ರಶಸ್ತಮ್ ।

ಯಾನೇನ ವೈ ಪ್ರಾಪಣಂ ಚ ಶ್ಮಶಾನೇ
ಶೌಚೇನ ನೂನಂ ವಿಧಿನಾ ಚೈವ ದಾಹಃ ॥೩೮॥

ಮನೆಗಳಲ್ಲಿ ಯಾರು ಪ್ರಾಣಬಿಡುವರೋ–ಅವರನ್ನು ಶೀಘ್ರವಾಗಿ ಮನೆಯಿಂದ ಹೊರಗಿಡುವುದು ಪ್ರಶಸ್ತವಾದುದು. ಯಾನದ ಮೂಲಕವಾಗಿ ಸತ್ತವರನ್ನು ಶ್ಮಶಾನಕ್ಕೆ ಸಾಗಿಸಬೇಕು ಮತ್ತು ಪರಿಶುದ್ಧಹೃದಯದಿಂದ ಮತ್ತು ಶಾಸ್ತ್ರವಿಧಿಪೂರ್ವಕವಾಗಿ ಸತ್ತವನಿಗೆ ದಹನಸಂಸ್ಕಾರಮಾಡುವುದು ಮುಖ್ಯವಾದ ಕರ್ತವ್ಯವಾಗಿರುತ್ತದೆ.

ಇಷ್ಟಿಃ ಪುಷ್ಟಿರ್ಯಜನಂ ಯಾಜನಂ ಚ
ದಾನಂ ಪುಣ್ಯಾನಾಂ ಕರ್ಮಣಾಂ ಚ ಪ್ರಯೋಗಃ ।
ಶಕ್ತ್ಯಾ ಪಿತ್ರ್ಯಂ ಯಚ್ಚ ಕಿಂಚಿತ್ಪ್ರಶಸ್ತಂ
ಸರ್ವಾಣ್ಯಾತ್ಮಾರ್ಥೇ ಮಾನವೋಽಯಂ ಕರೋತಿ ॥

ಮನುಷ್ಯನು ತನ್ನ ಶಕ್ತಿಗೆ ಅನುಸಾರವಾಗಿ ಇಷ್ಟಿಗಳನ್ನೂ, ಪುಷ್ಟಿಗಳನ್ನೂ (ಶಾಂತಿ-ಪುಷ್ಟಿ-ತುಷ್ಟಿದಾಯಕಗಳಾದ ಶಾಂತಿಕರ್ಮಗಳನ್ನೂ), ಯಜನ-ಯಾಜನಗಳನ್ನೂ, ದಾನವನ್ನೂ, ಪುಣ್ಯಕರ್ಮಗಳ ಅನುಷ್ಠಾನಗಳನ್ನೂ, ಪಿತೃಸಂಬಂಧವಾದ ಶ್ರಾದ್ಧ-ತರ್ಪಣಾದಿಗಳನ್ನೂ, ಪ್ರಶಸ್ತವಾದ ಇನ್ನೂ ಅನೇಕ ಕರ್ಮಗಳನ್ನೂ ಮಾಡಬೇಕು. ಆ ಎಲ್ಲ ಕರ್ಮಗಳನ್ನೂ ಮನುಷ್ಯನು ಆತ್ಮೋದ್ಧಾರಕ್ಕಾಗಿಯೇ ಮಾಡುತ್ತಾನೆ.

ಧರ್ಮಶಾಸ್ತ್ರಾಣಿ ವೇದಾಶ್ಚ ಷಡಙ್ಗಾನಿ ನರಾಧಿಪ ।
ಶ್ರೇಯಸೋಽರ್ಥೇ ವಿಧೀಯನ್ತೇ ನರಸ್ಯಾಕ್ಲಿಷ್ಟಕರ್ಮಣಃ ॥೪೦॥

ಧರ್ಮಶಾಸ್ತ್ರಗಳು, ಷಡಂಗಯುಕ್ತವಾದ ವೇದಗಳು–ಇವೆಲ್ಲವೂ ಕ್ಲೇಶವಿಲ್ಲದೇ ಕರ್ಮಗಳನ್ನು ಮಾಡುವ ಮನುಷ್ಯನ ಶ್ರೇಯಸ್ಸಿಗಾಗಿಯೇ ವಿಹಿತವಾಗಿವೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಮಹಾತ್ಮರಾದ ಪರಾಶರರು ಈ ಎಲ್ಲ ವಿಷಯಗಳನ್ನೂ ವಿದೇಹರಾಜನಾದ ಜನಕನ ಶ್ರೇಯಸ್ಸಿಗಾಗಿ ಉಪದೇಶಿಸಿದರು.”

೨೯೭ನೆಯ ಅಧ್ಯಾಯವು ಮುಗಿಯಿತು.

೨೯೮ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜನಕನ ವಿವಿಧಪ್ರಶ್ನೆಗಳಿಗೆ ಉತ್ತರ : ಪರಾಶರಗೀತೆಯ ಉಪಸಂಹಾರ

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಮಿಥಿಲಾಧಿಪತಿಯಾದ ಜನಕನು ಧರ್ಮದಲ್ಲಿ ನಿಶ್ಚಯವಾದ ಜ್ಞಾನವನ್ನು ಹೊಂದಿದ್ದ ಮಹಾತ್ಮರಾದ ಪರಾಶರರನ್ನು ಪುನಃ ಪ್ರಶ್ನಿಸಿದನು :

ಕಿಂ ಶ್ರೇಯಃ ಕಾ ಗತಿರ್ಬ್ರಹ್ಮನ್ಕಿಂ ಕೃತಂ ನ ವಿನಶ್ಯತಿ ।
ಕ್ವ ಗತೋ ನ ನಿವರ್ತೇತ ತನ್ಮೇ ಬ್ರೂಹಿ ಮಹಾಮತೇ ॥೨॥

"ಮಹಾಮತಿಗಳೇ! ಬ್ರಾಹ್ಮಣೋತ್ತಮರೇ! ಶ್ರೇಯಸ್ಸಿಗೆ ಸಾಧನವು ಯಾವುದು? ಉತ್ತಮವಾದ ಗತಿಯು ಯಾವುದು? ಯಾವ ವಿಧವಾದ ಕರ್ಮವು ನಷ್ಟವಾಗುವುದಿಲ್ಲ? ಎಲ್ಲಿಗೆ ಹೋದ ಜೀವನು ಪುನಃ ಸಂಸಾರಕ್ಕೆ ಹಿಂದಿರುಗಿ ಬರುವುದಿಲ್ಲ?–ಈ ವಿಷಯಗಳನ್ನು ನನಗೆ ಹೇಳಿರಿ."

ಪರಾಶರರು ಹೇಳುತ್ತಾರೆ :

ಅಸಙ್ಗಃ ಶ್ರೇಯಸೋ ಮೂಲಂ ಜ್ಞಾನಂ ಚೈವ ಪರಾ ಗತಿಃ ।
ಚೀರ್ಣಂ ತಪೋ ನ ಪ್ರಣಶ್ಯೇದ್ವಾಪಃ ಕ್ಷೇತ್ರೇ ನ ನಶ್ಯತಿ ॥೩॥

"ರಾಜನೇ! ನಿಃಸಂಗವೇ (ಅನಾಸಕ್ತಿಯೇ) ಶ್ರೇಯಸ್ಸಿಗೆ ಮೂಲಸಾಧನವಾಗಿರುತ್ತದೆ. ಜ್ಞಾನವೇ ಮನುಷ್ಯನಿಗೆ ಉತ್ತಮಗತಿಯಾಗಿರುತ್ತದೆ. (ಜ್ಞಾನಸ್ವರೂಪನಾದ ಪರಮಾತ್ಮನೇ ಉತ್ತಮಗತಿಯು.) ಶ್ರದ್ಧೆಯಿಂದ ಮಾಡಲ್ಪಟ್ಟ ತಪಸ್ಸು ನಷ್ಟವಾಗುವುದಿಲ್ಲ. ಒಳ್ಳೆಯ ಕ್ಷೇತ್ರದಲ್ಲಿ ಬಿತ್ತಿದ ಬೀಜವು ನಾಶವಾಗುವುದಿಲ್ಲ.

ಛಿತ್ತ್ವಾಧರ್ಮಮಯಂ ಪಾಶಂ ಯದಾ ಧರ್ಮೇಽಭಿರಜ್ಯತೇ ।
ದತ್ತ್ವಾಭಯಕೃತಂ ದಾನಂ ತದಾ ಸಿದ್ಧಿಮವಾಪ್ನುತೇ ॥೪॥

ಮನುಷ್ಯನು ಅಧರ್ಮಮಯವಾದ ಹಗ್ಗವನ್ನು ಕತ್ತರಿಸಿ ಧರ್ಮದಲ್ಲಿಯೇ ಯಾವಾಗ ಅನುರಕ್ತನಾಗಿರುವನೋ, ಎಲ್ಲ ಪ್ರಾಣಿಗಳಿಗೂ ಅಭಯದಾನವನ್ನು ಮಾಡುವನೋ–ಆಗ ಸಿದ್ಧಿಯನ್ನು ಹೊಂದುತ್ತಾನೆ.

ಯೋ ದದಾತಿ ಸಹಸ್ರಾಣಿ ಗವಾಮಶ್ವಶತಾನಿ ಚ ।
ಅಭಯಂ ಸರ್ವಭೂತೇಭ್ಯಃ ಸದಾ ತಮಭಿವರ್ತತೇ ॥೫॥



ಯಾವನು ಸಾವಿರಾರು ಹಸುಗಳನ್ನೂ, ನೂರಾರು ಕುದುರೆಗಳನ್ನೂ ದಾನಮಾಡುವನೋ ಮತ್ತು ಎಲ್ಲ ಪ್ರಾಣಿಗಳಿಗೂ ಅಭಯಪ್ರದಾನಮಾಡುವನೋ–ಅಂತಹವನನ್ನು ಅಭಯವೂ ಅನುಸರಿಸಿಯೇ ಇರುತ್ತದೆ. (ಎಲ್ಲ ಪ್ರಾಣಿಗಳಿಗೂ ಅಭಯದಾನಮಾಡಿದವನಿಗೆ ಎಲ್ಲ ಪ್ರಾಣಿಗಳೂ ಅಭಯವನ್ನೀಯುತ್ತವೆ. ಇವನಿಂದಲೂ ಪ್ರಾಣಿಗಳಿಗೆ ಭಯವಿರುವುದಿಲ್ಲ. ಪ್ರಾಣಿಗಳಿಂದಲೂ ಇವನಿಗೆ ಯಾವ ಭಯವೂ ಇರುವುದಿಲ್ಲ. ಇದು ಅಭಯದಾನದ ಫಲ.)

ವಸನ್ವಿಷಯಮಧ್ಯೇಽಪಿ ನ ವಸತ್ಯೇವ ಬುದ್ಧಿಮಾನ್ ।
ಸಂವಸತ್ಯೇವ ದುರ್ಬುದ್ಧಿರಸತ್ಸು ವಿಷಯೇಷ್ವಪಿ ॥೬॥

ಬುದ್ಧಿವಂತನಾದವನು ವಿಷಯಸುಖಗಳ ಮಧ್ಯದಲ್ಲಿಯೇ ಇದ್ದರೂ ಅಸಂಗನಾಗಿರುವುದರಿಂದ ವಿಷಯಸುಖಗಳ ಮಧ್ಯದಲ್ಲಿ ವಾಸಮಾಡು ತ್ತಿಲ್ಲವೋ ಎಂಬಂತೆಯೇ ಇರುತ್ತಾನೆ. ದುರ್ಬುದ್ಧಿಯು ವಿಷಯಸುಖಗಳ ಮಧ್ಯದಲ್ಲಿ ವಾಸಮಾಡದೇ ಇದ್ದರೂ ಸದಾ ಅವುಗಳಲ್ಲಿಯೇ ಅನುರಕ್ತ ನಾಗಿರುವುದರಿಂದ ಅವುಗಳ ಮಧ್ಯದಲ್ಲಿಯೇ ವಾಸಮಾಡುತ್ತಿರುವನೋ ಎಂಬಂತೆಯೇ ಇರುತ್ತಾನೆ.

ನಾಧರ್ಮಃ ಶ್ಲಿಷ್ಯತೇ ಪ್ರಾಜ್ಞಂ ಪಯಃ ಪುಷ್ಕರಪರ್ಣವತ್ ।
ಅಪ್ರಾಜ್ಞಮಧಿಕಂ ಪಾಪಂ ಶ್ಲಿಷ್ಯತೇ ಜತುಕಾಷ್ಠವತ್ ॥೭॥

ನೀರು ಕಮಲದ ಎಲೆಗೆ ಅಂಟಿಕೊಳ್ಳದಿರುವಂತೆ–ಅಧರ್ಮವು ಪ್ರಾಜ್ಞನನ್ನು ಹಿಡಿದುಕೊಳ್ಳುವುದಿಲ್ಲ. ಮುಳ್ಳಗಸೇಗಿಡವು ಬಟ್ಟೆಗೆ ಬಿಗಿಯಾಗಿ ಅಂಟಿಕೊಳ್ಳುವಂತೆ–ಪಾಪಿಷ್ಠನಾದ ಮೂಢನನ್ನು ಅಧರ್ಮವು ಬಿಗಿಯಾಗಿ ಹಿಡಿದುಕೊಳ್ಳುತ್ತದೆ.

ನಾಧರ್ಮಃ ಕಾರಣಾಪೇಕ್ಷೀ ಕರ್ತಾರಮಭಿಮುಞ್ಚತಿ ।
ಕರ್ತಾ ಖಲು ಯಥಾಕಾಲಂ ತತಃ ಸಮಭಿಪದ್ಯತೇ ॥೮॥

ಅಧರ್ಮವು ತನ್ನನ್ನು ಆಶ್ರಯಿಸಿದವನಿಗೆ ಫಲವು ದೊರೆಯುವ ಕಾಲವನ್ನು ಪ್ರತೀಕ್ಷಿಸುತ್ತಲೇ ಇರುತ್ತದೆ. ಆದುದರಿಂದ ಅದು ತನ್ನ ಪ್ರೇರಣೆಯಂತೆ ಕೆಲಸಮಾಡುತ್ತಿರುವವನನ್ನು ಯಾವುದೇ ಕಾರಣದಿಂದಲೂ ಬಿಟ್ಟುಹೋಗುವುದಿಲ್ಲ. ಆದುದರಿಂದ ಅಧರ್ಮವಾದ ಕಾರ್ಯಗಳನ್ನು ಮಾಡುವವನು ಕಾಲಾನುಗುಣವಾಗಿ ಅದರ ಫಲವನ್ನು ಅನುಭವಿಸಿಯೇ ತೀರುತ್ತಾನೆ.

ನ ಭಿದ್ಯನ್ತೇ ಕೃತಾತ್ಮಾನ ಆತ್ಮಪ್ರತ್ಯಯದರ್ಶಿನಃ ।
ಬುದ್ಧಿಕರ್ಮೇನ್ದ್ರಿಯಾಣಾಂ ಹಿ ಪ್ರಮತ್ತೋ ಯೋ ನ ಬುಧ್ಯತೇ ।
ಶುಭಾಶುಭೇ ಪ್ರಸಕ್ತಾತ್ಮಾ ಪ್ರಾಪ್ನೋತಿ ಸುಮಹದ್ಭಯಮ್ ॥೯॥

ಪವಿತ್ರವಾದ ಅಂತಃಕರಣವುಳ್ಳ ಆತ್ಮಜ್ಞಾನಿಗಳು ಶುಭಾಶುಭಫಲಗಳಿಂದ ವಿಚಲಿತರಾಗುವುದಿಲ್ಲ. ಆದರೆ ಯಾವನು ಅಜಾಗರೂಕತೆಯಿಂದ ಕೂಡಿದವನಾಗಿ ಜ್ಞಾನೇಂದ್ರಿಯಗಳ ಮತ್ತು ಕರ್ಮೇಂದ್ರಿಯಗಳ ಮೂಲಕವಾಗಿ ಆಗುವ ಪಾಪಗಳಿಗೆ ಗಮನವನ್ನು ಕೊಡದೇ ಶುಭಾಶುಭಫಲಗಳಲ್ಲಿ ಆಸಕ್ತನಾಗಿರುವನೋ–ಅಂತಹವನು ಮಹಾಭಯವನ್ನು ಹೊಂದುತ್ತಾನೆ.

ವೀತರಾಗೋ ಜಿತಕ್ರೋಧಃ ಸಮ್ಯಗ್ಭವತಿ ಯಃ ಸದಾ ।
ವಿಷಯೇ ವರ್ತಮಾನೋಽಪಿ ನ ಸ ಪಾಪೇನ ಯುಜ್ಯತೇ ॥೧೦॥

ಯಾವನು ಯಾವುದರಲ್ಲಿಯೂ ಅನುರಕ್ತನಾಗದೇ, ಕೋಪವನ್ನು ಜಯಿಸಿ ಸದಾಚಾರಸಂಪನ್ನನಾಗಿರುವನೋ–ಅವನು ವಿಷಯಸುಖಗಳ ಮಧ್ಯದಲ್ಲಿಯೇ ಇದ್ದರೂ ಪಾಪದಿಂದ ಲಿಪ್ತನಾಗುವುದಿಲ್ಲ.

ಮರ್ಯಾದಾಯಾಂ ಧರ್ಮಸೇತುರ್ನಿಬದ್ಧೋ ನೈವ ಸೀದತಿ ।
ಪುಷ್ಪಸ್ರೋತ ಇವಾಸಕ್ತಃ ಸ್ಫೀತೋ ಭವತಿ ಸಂಚಯಃ ॥೧೧॥

ನದಿಯಲ್ಲಿ ಕ್ರಮಬದ್ಧವಾಗಿ ಕಟ್ಟಿದ ಸೇತುವೆಯು (ಅಣೆಕಟ್ಟು) ಯಾವುದೇ ಕಾರಣದಿಂದಲೂ ಒಡೆದುಹೋಗುವುದಿಲ್ಲ. ಅಂತಹ ಅಣೆಕಟ್ಟೆಯು ನೀರಿನಿಂದ ಸಮೃದ್ಧವಾಗುತ್ತದೆ. ಹಾಗೆಯೇ ಶಿಷ್ಟಾಚಾರದ ಚೌಕಟ್ಟಿನಲ್ಲಿ ಕಟ್ಟಲ್ಪಟ್ಟ ಧರ್ಮವೆಂಬ ಅಣೆಕಟ್ಟು ಎಂದಿಗೂ ನಾಶವಾಗುವುದಿಲ್ಲ. ಅಂತಹ ಧರ್ಮಸೇತುವಿರುವ ಕಾರಣದಿಂದಲೇ ಪುಣ್ಯವು ಅಡಿಗಡಿಗೂ ವೃದ್ಧಿಸುತ್ತಲೇ ಇರುತ್ತದೆ.

ಯಥಾ ಭಾನುಗತಂ ತೇಜೋ ಮಣಿಃ ಶುದ್ಧಃ ಸಮಾಧಿನಾ ।
ಆದತ್ತೇ ರಾಜಶಾರ್ದೂಲ ತಥಾ ಯೋಗಃ ಪ್ರವರ್ತತೇ ॥೧೨॥

ಯಾವ ರೀತಿಯಲ್ಲಿ ಶುದ್ಧವಾದ ಸೂರ್ಯಕಾಂತಮಣಿಯು ಸೂರ್ಯನ ತೇಜಸ್ಸನ್ನು ಗ್ರಹಿಸುವುದೋ–ಹಾಗೆಯೇ ಯೋಗಸಾಧಕನು ಸಮಾಧಿಯ ಮೂಲಕವಾಗಿ (ಧ್ಯಾನದ ಮೂಲಕವಾಗಿ) ಬ್ರಹ್ಮಸ್ವರೂಪವನ್ನು ಗ್ರಹಿಸುತ್ತಾನೆ.

ಯಥಾ ಶಿಲಾನಾಮಿಹ ಪುಷ್ಪಸಂಶ್ರಯಾ–
ತ್ಪೃಥಕ್ಪೃಥಗ್ಯಾತಿ ಗುಣೋಽತಿಸೌಮ್ಯತಾಮ್ ।

ತಥಾ ನರಾಣಾಂ ಭುವಿ ಭಾವಿತಾತ್ಮನಾಂ
ಯಥಾಶ್ರಯಂ ಸತ್ತ್ವಗುಣಃ ಪ್ರವರ್ತತೇ ॥೧೩॥

ಯಾವ ರೀತಿಯಲ್ಲಿ ಎಳ್ಳೆಣ್ಣೆಯು ವಿಧ-ವಿಧವಾದ ಹೂಗಳ ಸಂಯೋಗದಿಂದ ಪ್ರತ್ಯೇಕ-ಪ್ರತ್ಯೇಕವಾದ ಸುಗಂಧದ ವಾಸನೆಯನ್ನು ಹೊಂದುವುದೋ ಹಾಗೆಯೇ ಈ ಭೂಮಿಯಲ್ಲಿ ಮನುಷ್ಯರು ಭಾವಿತಾತ್ಮರಾದ (ಪರಿಶುದ್ಧಾತ್ಮರಾದ) ಮನುಷ್ಯರನ್ನು ಯಾವ ರೀತಿಯಲ್ಲಿ ಆಶ್ರಯಿಸುವರೋ–ಅದಕ್ಕೆ ಅನುಗುಣವಾಗಿ ಅವರಲ್ಲಿ ಸತ್ತ್ವಗುಣವೂ ವೃದ್ಧಿಹೊಂದುತ್ತಿರುತ್ತದೆ.

ಜಹಾತಿ ದಾರಾಂಶ್ಚ ಜಹಾತಿ ಸಮ್ಪದಃ
ಪದಂ ಚ ಯಾನಂ ವಿವಿಧಾಶ್ಚ ಯಾಃ ಕ್ರಿಯಾಃ ।
ತ್ರಿವಿಷ್ಟಪೇ ಜಾತಮತಿರ್ಯದಾ ನರ-
ಸ್ತದಾಸ್ಯ ಬುದ್ಧಿರ್ವಿಷಯೇಷು ಭಿದ್ಯತೇ ॥೧೪॥

ಮನುಷ್ಯನು ಯಾವಾಗ ಸರ್ವೋತ್ತಮವಾದ ದೇವಲೋಕವನ್ನು (ಪರಮಪದವನ್ನು) ಹೊಂದುವ ಮನಸ್ಸುಳ್ಳವನಾಗುವನೋ–ಆಗ ವಿಷಯ ಸುಖಗಳಲ್ಲಿಯೇ ಲೀನವಾಗಿದ್ದ ಅವನ ಬುದ್ಧಿಯು ಒಡೆದುಹೋಗುತ್ತದೆ. (ವಿಷಯಸುಖಗಳಿಂದ ಹಿಂದಿರುಗುತ್ತದೆ.) ಅದರ ಪರಿಣಾಮವಾಗಿ ಆ ಮನುಷ್ಯನು ಪತ್ನಿಯರು, ಐಶ್ವರ್ಯಗಳು, ಅಧಿಕಾರ, ವಾಹನ, ವಿಷಯ ಸುಖಗಳನ್ನು ಪಡೆದುಕೊಳ್ಳಲು ಮಾಡಬೇಕಾದ ನಾನಾವಿಧವಾದ ಕಾಮ್ಯ ಕರ್ಮಗಳು–ಈ ಎಲ್ಲವನ್ನೂ ಪರಿತ್ಯಜಿಸುತ್ತಾನೆ.

ಪ್ರಸಕ್ತ ಬುದ್ಧಿರ್ವಿಷಯೇಷು ಯೋ ನರೋ
ನ ಬುಧ್ಯತೇ ಹ್ಯಾತ್ಮಹಿತಂ ಕಥಂಚನ ।
ಸ ಸರ್ವಭಾವಾನುಗತೇನ ಚೇತಸಾ
ನೃಪಾಮಿಷೇಣೇವ ಝಷೋ ವಿಕೃಷ್ಯತೇ ॥೧೫॥

ಮಹಾರಾಜ! ವಿಷಯಸುಖಗಳಲ್ಲಿಯೇ ಆಸಕ್ತವಾದ ಬುದ್ಧಿಯಿರುವವನು ಆತ್ಮಹಿತವು ಯಾವುದರಿಂದ ಉಂಟಾಗುವುದೆಂಬುದನ್ನು ಬಹಳ ಕಷ್ಟದಿಂದಲೂ ಅರಿತುಕೊಳ್ಳುವುದಿಲ್ಲ. ಮೀನು ಗಾಳದಲ್ಲಿರುವ ಮಾಂಸದಿಂದ

ಆಕರ್ಷಿಸಲ್ಪಟ್ಟು ದುಃಖಕ್ಕೆ ಈಡಾಗುವಂತೆ–ಸಕಲವಿಧವಾದ ಭಾವನೆಗಳನ್ನೂ (ವಿಷಯಸುಖಗಳನ್ನೂ) ಅನುಸರಿಸಿಹೋಗುವ ಬುದ್ಧಿಯಿಂದ ಕೂಡಿರುವ ಮನುಷ್ಯನು ವಿಷಯಸುಖಗಳಿಂದ ಸೆಳೆಯಲ್ಪಟ್ಟು ಅಪಾರವಾದ ದುಃಖಕ್ಕೆ ಗುರಿಯಾಗುತ್ತಾನೆ.

ಸಂಘಾತವನ್ಮರ್ತ್ಯಲೋಕಃ ಪರಸ್ಪರಮುಪಾಶ್ರಿತಃ ।
ಕತಲೀಗರ್ಭನಿಃಸಾರೋ ನೌರಿವಾಪ್ಸು ನಿಮಜ್ಜತಿ ॥೧೬॥

ಯಾವ ರೀತಿಯಲ್ಲಿ ಮನುಷ್ಯನಲ್ಲಿರುವ ಅಂಗಗಳು ಅನ್ಯೋನ್ಯವಾದ ಆಶ್ರಯದಿಂದ ಇರುವುವೋ–ಅದೇ ರೀತಿಯಲ್ಲಿ ಈ ಮರ್ತ್ಯಲೋಕವೂ ಪರಸ್ಪರಾಶ್ರಯದಿಂದ ಜೀವಿಸುವ ಸ್ತ್ರೀ-ಪುತ್ರ-ಬಂಧು-ಮಿತ್ರ ಇವರೇ ಮುಂತಾದವರ ಸಮುದಾಯಗಳಿಂದ ಕೂಡಿದೆ. ಆದರೆ ಈ ಸಂಸಾರವು ಬಾಳೆಯ ಕಂದಿನ ಮಧ್ಯಭಾಗದಲ್ಲಿರುವ ದಿಂಡಿನಂತೆ ನಿಸ್ಸಾರವಾಗಿದೆ. ಪ್ರವಾಹದಲ್ಲಿ ಸಿಕ್ಕಿಬಿದ್ದ ನೌಕೆಯಂತೆ ಕಾಲಾನುಗುಣವಾಗಿ ಮುಳುಗಿಹೋಗುತ್ತದೆ.

ನ ಧರ್ಮಕಾಲಃ ಪುರುಷಸ್ಯ ನಿಶ್ಚಿತೋ
ನ ಚಾಪಿ ಮೃತ್ಯುಃ ಪುರುಷಂ ಪ್ರತೀಕ್ಷತೇ ।
ಸದಾ ಹಿ ಧರ್ಮಸ್ಯ ಕ್ರಿಯೈವ ಶೋಭನಾ
ಯದಾ ನರೋ ಮೃತ್ಯುಮುಖೇಽಭಿವರ್ತತೇ ॥೧೭॥

ಮನುಷ್ಯನು ಧರ್ಮಕಾರ್ಯವನ್ನು ಇಂತಹುದೇ ಕಾಲದಲ್ಲಿ ಮಾಡಬೇಕೆಂದು ಯಾರೂ ನಿಶ್ಚಯಿಸಿರುವುದಿಲ್ಲ. ಅಲ್ಲದೇ ಮನುಷ್ಯನು ಧರ್ಮಗಳನ್ನು ಮಾಡುವವರೆಗೂ ಮೃತ್ಯುವು ನಿರೀಕ್ಷಿಸುತ್ತಾ ಕುಳಿತಿರುವುದೂ ಇಲ್ಲ. ಮನುಷ್ಯನು ಯಾವಾಗಲೂ ಮೃತ್ಯುಮುಖನಾಗಿಯೇ ಇರುವುದರಿಂದ (ಮನುಷ್ಯನಿಗೆ ಮರಣವು ಯಾವುದೇ ಸಮಯದಲ್ಲಾದರೂ ಸಂಭವಿಸಬಹುದಾಗಿರುವುದರಿಂದ) ಸದಾಕಾಲದಲ್ಲಿಯೂ ಧರ್ಮಕಾರ್ಯಗಳನ್ನು ಮಾಡುತ್ತಿರುವುದೇ ಶ್ರೇಯಸ್ಕರವು.

ಯಥಾನ್ಧಃ ಸ್ವಗೃಹೇ ಯುಕ್ತೋ ಹ್ಯಭ್ಯಾಸಾದೇವ ಗಚ್ಛತಿ ।
ತಥಾ ಯುಕ್ತೇನ ಮನಸಾ ಪ್ರಾಜ್ಞೋ ಗಚ್ಛತಿ ತಾಂ ಗತಿಮ್ ॥೧೮॥

ಯಾವ ರೀತಿಯಲ್ಲಿ ಕುರುಡನು ಅಭ್ಯಾಸಬಲದಿಂದ ತನ್ನ ಮನೆಯಲ್ಲಿ ನಿರಾತಂಕವಾಗಿ ತಿರುಗಾಡುವನೋ–ಅದೇ ರೀತಿಯಲ್ಲಿ ಪ್ರಾಜ್ಞನಾದವನು ಯೋಗಯುಕ್ತವಾದ ಮನಸ್ಸಿನಿಂದ ಕೂಡಿ ಈ ಲೋಕದಲ್ಲಿ ತಿರುಗಾಡುತ್ತಾ ಪರಮಗತಿಯನ್ನು ಹೊಂದುತ್ತಾನೆ.

ಮರಣಂ ಜನ್ಮನಿ ಪ್ರೋಕ್ತಂ ಜನ್ಮ ವೈ ಮರಣಾಶ್ರಿತಮ್ ।
ಅವಿದ್ವಾನ್ಮೋಕ್ಷಧರ್ಮೇಷು ಬದ್ಧೋ ಭ್ರಮತಿ ಚಕ್ರವತ್ ।
ಬುದ್ಧಿಮಾರ್ಗಪ್ರಯಾತಸ್ಯ ಸುಖಂ ತ್ವಿಹ ಪರತ್ರ ಚ ॥೧೯॥

ಹುಟ್ಟಿನಲ್ಲಿ ಮರಣವಿದ್ದೇ ಇರುವುದೆಂದು ಹೇಳುತ್ತಾರೆ. (ಹುಟ್ಟಿನ ಜೊತೆಯಲ್ಲಿಯೇ ಮರಣವಿರುತ್ತದೆ.) ಹುಟ್ಟು ಮರಣವನ್ನೇ ಆಶ್ರಯಿಸಿದೆ. ಮೋಕ್ಷಧರ್ಮವನ್ನು ತಿಳಿಯದೇ ಇರತಕ್ಕವನು ಜನನ-ಮರಣಗಳ ಪ್ರವಾಹದಲ್ಲಿ ಸಿಕ್ಕಿ ಚಕ್ರದಂತೆ ಸುತ್ತುತ್ತಿರುತ್ತಾನೆ. ಆದರೆ ಮೋಕ್ಷಧರ್ಮವನ್ನು ತಿಳಿದು ಜ್ಞಾನಮಾರ್ಗವನ್ನು ಆಶ್ರಯಿಸಿರುವವನಿಗೆ ಇಹದಲ್ಲಿಯೂ ಸುಖವಿದೆ ; ಪರದಲ್ಲಿಯೂ ಸುಖವಿದೆ.

ವಿಸ್ತರಾಃ ಕ್ಲೇಶಸಂಯುಕ್ತಾಃ ಸಂಕ್ಷೇಪಾಸ್ತು ಸುಖಾವಹಾಃ ।
ಪರಾರ್ಥಂ ವಿಸ್ತರಾಃ ಸರ್ವೇ ತ್ಯಾಗಮಾತ್ಮಹಿತಂ ವಿದುಃ ॥೨೦॥

ಕರ್ಮಗಳು ವಿಸ್ತಾರವಾದಷ್ಟೂ ಹೆಚ್ಚು ಕ್ಲೇಶಯುಕ್ತವಾಗುತ್ತವೆ. ಸಂಕ್ಷೇಪಕರ್ಮಗಳು ಸುಖದಾಯಕಗಳಾಗುತ್ತವೆ. ಮೇಲಾಗಿ ವಿಸ್ತಾರವಾದ ಕರ್ಮಗಳೆಲ್ಲವೂ (ಯಜ್ಞ-ಯಾಗಾದಿ ಕಾಮ್ಯಕರ್ಮಗಳೆಲ್ಲವೂ) ಪರಾರ್ಥಗಳು. ಇಂದ್ರಿಯಗಳನ್ನು ತೃಪ್ತಿಪಡಿಸುವುದಕ್ಕಾಗಿಯೇ ಮಾಡತಕ್ಕುವುಗಳು. ತ್ಯಾಗವೆಂಬ ಸಂಕ್ಷೇಪಕರ್ಮವು ಆತ್ಮಹಿತಸಾಧಕವೆಂದು ವಿದ್ವಾಂಸರು ತಿಳಿಯುತ್ತಾರೆ. ತ್ಯಾಗವೆಂಬುದು ಸಂಕ್ಷೇಪಕರ್ಮ. ಅದು ಆತ್ಮಹಿತಸಾಧನೆಗಾಗಿ.

ಯಥಾ ಮೃಣಾಲಾನುಗತಮಾಶು ಮುಞ್ಚತಿ ಕರ್ದಮಮ್ ।
ತಥಾತ್ಮಾ ಪುರುಷಸ್ಯೇಹ ಮನಸಾ ಪರಿಮುಚ್ಯತೇ ॥೨೧॥

ಕೆಸರಿನಲ್ಲಿರುವ ಕಮಲಪುಷ್ಪವನ್ನು ದಂಟಿನೊಡನೆ ನೀರಿನಿಂದ ಹೊರ

ತೆಗೆಯುವಾಗ ಯಾವ ರೀತಿಯಲ್ಲಿ ತಾವರೆಯ ದಂಟು ಕೆಸರನ್ನು ಬಿಟ್ಟು ಬಿಡುವುದೋ ಅದೇ ರೀತಿಯಲ್ಲಿ ಆತ್ಮನು ಕಲುಷಿತವಾದ ಮನಸ್ಸನ್ನು ಬಿಡುತ್ತಾನೆ (ಮನಸ್ಸನ್ನು ನಿಗ್ರಹಿಸುತ್ತಾನೆ).

ಮನಃ ಪ್ರಣಯತೇಽತ್ಮಾನಂ ಸ ಏನಮಭಿಯುಞ್ಜತಿ ।
ಯುಕ್ತೋ ಯದಾ ಸ ಭವತಿ ತದಾ ತಂ ಪಶ್ಯತೇ ಪರಮ್ ॥೨೨॥

ಮನಸ್ಸು ಆತ್ಮವನ್ನು ಯೋಗದ ಕಡೆಗೆ ಒಯ್ಯುತ್ತದೆ. ಯೋಗಿಯು ಮನಸ್ಸನ್ನು ಆತ್ಮದಲ್ಲಿ ಲೀನಗೊಳಿಸುತ್ತಾನೆ. ಹೀಗೆ ಮನುಷ್ಯನು ಯೋಗ ಯುಕ್ತನಾದಾಗ (ಮನಸ್ಸನ್ನು ಆತ್ಮದಲ್ಲಿ ಲೀನಗೊಳಿಸಿದಾಗ) ಆತ್ಮವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಪರಾರ್ಥೇ ವರ್ತಮಾನಸ್ತು ಸ್ವಂ ಕಾರ್ಯಂ ಯೋಽಭಿಮನ್ಯತೇ ।
ಇನ್ದ್ರಿಯಾರ್ಥೇಷು ಸಂಯುಕ್ತಃ ಸ್ವಕಾರ್ಯಾತ್ಪರಿಮುಚ್ಯತೇ ॥೨೩॥

ಯಾವನು ಇತರರ ಪ್ರಯೋಜನಕ್ಕಾಗಿಯೇ (ಇಂದ್ರಿಯಗಳ ತೃಪ್ತಿಗಾಗಿಯೇ) ಕಾರ್ಯಮಾಡುತ್ತಾ ಇತರರ ಪ್ರಯೋಜನಕ್ಕಾಗಿ ಮಾಡುವ ಕಾರ್ಯವನ್ನೇ ತನ್ನ ಕಾರ್ಯವೆಂದು ಭಾವಿಸುವನೋ–ಅವನು ಸ್ವಕಾರ್ಯ ದಿಂದ ಚ್ಯುತನಾಗುತ್ತಾನೆ. ತನ್ನ ಕೆಲಸವನ್ನೇ ಮಾಡಿಕೊಳ್ಳಲು ಅವನಿಂದ ಸಾಧ್ಯವಾಗುವುದಿಲ್ಲ.

(ಇದೊಂದು ಲೋಕನೀತಿಯೂ ಹೌದು. ಆದರೆ ಇಲ್ಲಿಯ ಸಂದರ್ಭ ದಲ್ಲಿ ಆತ್ಮಕಲ್ಯಾಣದ ಹೊರತಾಗಿ ಮತ್ತೆಲ್ಲವೂ ಪರಾರ್ಥವೇ ಎಂಬ ಅಭಿಪ್ರಾಯದಲ್ಲಿ ಈ ಶ್ಲೋಕವು ಹೇಳಲ್ಪಟ್ಟಿದೆ. ಪರಾರ್ಥಗಳಲ್ಲಿ ಎಂದರೆ ಕಣ್ಣಿಗೆ ಒಳ್ಳೆಯ ಸೌಂದರ್ಯವಸ್ತುಗಳನ್ನು ನೋಡಲು ಒದಗಿಸಿಕೊಡುವುದು. ನಾಲಿಗೆಗೆ ರುಚಿ-ರುಚಿಯಾದ ಆಹಾರಪದಾರ್ಥಗಳನ್ನು ಒದಗಿಸಿಕೊಡುವುದು. ಕಿವಿಗೆ ಇಂಪಾದ ಗಾಯನಗಳನ್ನು ಒದಗಿಸಿಕೊಡುವುದು. ಮೂಗಿಗೆ ಒಳ್ಳೆಯ ವಾಸನೆಯನ್ನು ಒದಗಿಸಿಕೊಡುವುದು. ತ್ವಚೆಗೆ ಒಳ್ಳೆಯ ಸ್ಪರ್ಶವನ್ನು ಒದಗಿಸಿ ಕೊಡುವುದು. ಇಂದ್ರಿಯವಿಷಯಗಳಲ್ಲಿಯೇ ತಲ್ಲೀನನಾಗಿರುವವ ನೊಬ್ಬನು ಅದೇ ತನ್ನ ಜೀವನದ ಮುಖ್ಯಕಾರ್ಯವೆಂದು ಭಾವಿಸಿಬಿಟ್ಟರೆ

ತನ್ನ ಕಾರ್ಯದಿಂದ (ಆತ್ಮಕಲ್ಯಾಣಕಾರ್ಯದಿಂದ) ಚ್ಯುತನಾಗುತ್ತಾನೆ. (ವಿಷಯಲೋಲುಪನಿಗೆ ಆತ್ಮಸಾಕ್ಷಾತ್ಕಾರವು ಸಾಧ್ಯವಾಗುವುದಿಲ್ಲ.)

ಅಧಸ್ತಿರ್ಯಗ್ಗತಿಂ ಚೈವ ಸ್ವರ್ಗೇ ಚೈವ ಪರಾಂ ಗತಿಮ್ ।
ಪ್ರಾಪ್ನೋತಿ ಸ್ವಕೃತೈರಾತ್ಮಾ ಪ್ರಾಜ್ಞಸ್ಯೇಹೇತರಸ್ಯ ಚ ॥೨೪॥

ಪ್ರಾಜ್ಞನ ಅಥವಾ ಮೂಢನ ಚೇತನವು–ಈ ಲೋಕದಲ್ಲಿ ತಾನು ಮಾಡಿದ ಕರ್ಮಗಳಿಗೆ ಅನುಸಾರವಾಗಿ ನರಕವನ್ನೋ, ಪಶು-ಪಕ್ಷಿಗಳ ಯೋನಿಗಳಲ್ಲಿ ಜನ್ಮವನ್ನೋ, ಸ್ವರ್ಗದಲ್ಲಿ ಶ್ರೇಷ್ಠವಾದ ಸದ್ಗತಿಯನ್ನೋ ಹೊಂದುತ್ತದೆ.

ಮೃಣ್ಮಯೇ ಭಾಜನೇಽಪಕ್ವೇ ಯಥಾ ವೈ ನಶ್ಯತಿ ದ್ರವಃ ।
ತಥಾ ಶರೀರಂ ತಪಸಾತಪ್ತಂ ವಿಷಯಮಶ್ನುತೇ ॥೨೫॥

ಚೆನ್ನಾಗಿ ಬೇಯದಿರುವ ಮಣ್ಣಿನ ಮಡಕೆಯಲ್ಲಿ ಇಟ್ಟ ದ್ರವವು ಅದರಲ್ಲಿಯೇ ಇಂಗಿಹೋಗಿ ನಾಶಹೊಂದುತ್ತದೆ. ಹಾಗೆಯೇ ತಪಸ್ಸಿನಿಂದ ಪಕ್ವವಾಗದೇ ಇರುವ ಶರೀರವು ವಿಷಯಸುಖಗಳನ್ನೇ ಅನುಭವಿಸಿ ನಾಶಹೊಂದಿಬಿಡುತ್ತದೆ.

(ಪಕ್ವವಾದ ಮಣ್ಣಿನ ಪಾತ್ರೆಯಲ್ಲಿಟ್ಟ ನೀರು ಹೇಗೆ ನಾಶಹೊಂದುವುದಿಲ್ಲವೋ–ಹಾಗೆ ತಪಸ್ಸಿನಿಂದ ಪಕ್ವವಾದ ಶರೀರವು ಬ್ರಹ್ಮಲೋಕಾಂತವಾಗಿ ವ್ಯಾಪಿಸುತ್ತದೆ–ಇದು ವ್ಯಾಖ್ಯಾನಕಾರರ ಅರ್ಥವಾಗಿದೆ. ವಿಷಯಂ ಬ್ರಹ್ಮ ಲೋಕಾನ್ತಂ ಅಶ್ನುತೇ ವ್ಯಾಪ್ನೋತಿ–ಇವರ ಪಾಠದಲ್ಲಿ ಭಾಜನೇ-ಪಕ್ವೇ, ನ-ಶ್ಯತಿ, ತಪಸಾ-ತಪ್ತಂ ಎಂದು ಪದವಿಭಾಗ ಮಾಡಿದ್ದಾರೆ. ನಶ್ಯತಿ ಎಂಬುದಕ್ಕೆ ಕೆಲವು ಕಡೆ ನ್ಯಸ್ಯತಿ–ಎಂಬ ಪಾಠಾಂತರವೂ ಕಂಡುಬರುತ್ತದೆ.)

ವಿಷಯಾನಶ್ನುತೇ ಯಸ್ತು ನ ಸ ಭೋಕ್ಷ್ಯತ್ಯಸಂಶಯಮ್ ।
ಯಸ್ತು ಭೋಗಾಂಸ್ತ್ಯಜೇದಾತ್ಮಾ ಸ ವೈ ಭೋಕ್ತುಂ ವ್ಯವಸ್ಯತಿ ॥೨೬॥

ಯಾವ ಜೀವನು ವಿಷಯಸುಖಗಳನ್ನೇ ಅನುಭವಿಸುತ್ತಾನೆಯೋ ಅವನು ತನ್ನ (ಆತ್ಮದ) ರಕ್ಷಣೆಯನ್ನು ಮಾಡಿಕೊಳ್ಳಲಾರನು. ಇದರಲ್ಲಿ

ಸಂಶಯವೇ ಇಲ್ಲ. ಯಾವ ಜೀವನು ವಿಷಯಭೋಗಗಳನ್ನು ತ್ಯಜಿಸುವನೋ ಅವನು ಆತ್ಮರಕ್ಷಣೆಯನ್ನು ಮಾಡಿಕೊಳ್ಳಲು ನಿಶ್ಚಯಿಸುತ್ತಾನೆ. (ಸಮರ್ಥನಾಗುತ್ತಾನೆ.)

ನೀಹಾರೇಣ ಹಿ ಸಂವೀತಃ ಶಿಶ್ನೋದರಪರಾಯಣಃ ।
ಜಾತ್ಯನ್ಧ ಇವ ಪನ್ಥಾನಮಾವೃತಾತ್ಮಾ ನ ಬುಧ್ಯತೇ ॥೨೭॥

ಹುಟ್ಟುಕುರುಡನಿಗೆ ದಾರಿಯು ಕಾಣುವುದಿಲ್ಲ. ಹಾಗೆಯೇ ಮಂಜಿನಂತಿರುವ ಮಾಯೆಯಿಂದ ಆವರಿಸಲ್ಪಟ್ಟ ಲೈಂಗಿಕವಾದ ಮತ್ತು ಉದರ ಸಂಬಂಧವಾದ ವಿಷಯಗಳಲ್ಲಿಯೇ ತತ್ಪರನಾಗಿರುವವನಿಗೆ ಜ್ಞಾನಮಾರ್ಗವು ತಿಳಿಯುವುದಿಲ್ಲ.

ವಣಿಗ್ಯಥಾ ಸಮುದ್ರಾದ್ವೈ ಯಥಾರ್ಥಂ ಲಭತೇ ಧನಮ್ ।
ತಥಾ ಮರ್ತ್ಯಾರ್ಣವೇ ಜನ್ತೋಃ ಕರ್ಮವಿಜ್ಞಾನತೋ ಗತಿಃ ॥೨೮॥

ಯಾವ ರೀತಿಯಲ್ಲಿ ವೈಶ್ಯನು ಸಮುದ್ರಪ್ರಯಾಣಮಾಡಿ ಪರದೇಶಕ್ಕೆ ಹೋಗಿ ತಾನು ಹಾಕಿರುವ ಮೂಲಧನಕ್ಕೆ ಅನುಗುಣವಾಗಿ ಲಾಭವನ್ನು ಸಂಪಾದಿಸಿಕೊಂಡು ಬರುವನೋ–ಅದೇ ರೀತಿಯಲ್ಲಿ ಸಂಸಾರವೆಂಬ ಸಾಗರದಲ್ಲಿ ವ್ಯಾಪಾರಕ್ಕೆ ಹೊರಟಿರುವ ಜೀವನಿಗೆ ಅವನ ಕರ್ಮ ಮತ್ತು ವಿಜ್ಞಾನಗಳಿಗೆ ಅನುರೂಪವಾದ ಲಾಭವು ಅಥವಾ ಗತಿಯು ಸಿಕ್ಕುತ್ತದೆ.

ಅಹೋರಾತ್ರಮಯೇ ಲೋಕೇ ಜರಾರೂಪೇಣ ಸಂಸರನ್ ।
ಮೃತ್ಯುರ್ಗ್ರಸತಿ ಭೂತಾನಿ ಪವನಂ ಪನ್ನಗೋ ಯಥಾ ॥೨೯॥

ಹಗಲು ಮತ್ತು ರಾತ್ರಿಗಳ ರೂಪದಲ್ಲಿರುವ ಈ ಲೋಕದಲ್ಲಿ ಮುಪ್ಪೆಂಬ ರೂಪವನ್ನು ಧರಿಸಿ ಸಂಚರಿಸುತ್ತಿರುವ ಮೃತ್ಯುವು–ಸರ್ಪವು ಗಾಳಿಯನ್ನು ನುಂಗುವಂತೆ–ಸಮಸ್ತಪ್ರಾಣಿಗಳನ್ನೂ ನುಂಗಿಹಾಕುತ್ತದೆ.

ಸ್ವಯಂಕೃತಾನಿ ಕರ್ಮಾಣಿ ಜಾತೋ ಜನ್ತುಃ ಪ್ರಪದ್ಯತೇ ।
ನಾಕೃತ್ವಾ ಲಭತೇ ಕಶ್ಚಿತ್ಕಿಂಚಿದತ್ರ ಪ್ರಿಯಾಪ್ರಿಯಮ್ ॥೩೦॥

ಜೀವವು ಈ ಲೋಕದಲ್ಲಿ ಜನ್ಮವನ್ನು ಪಡೆದು ತಾನೇ ಮಾಡಿದ ಕರ್ಮಗಳ ಫಲವನ್ನು ಉಪಭೋಗಿಸುತ್ತದೆ. ತಾನು ಪುಣ್ಯ-ಪಾಪಗಳನ್ನು

ಮಾಡದೇ ಯಾವುದೇ ಪ್ರಿಯವಾದ ಅಥವಾ ಅಪ್ರಿಯವಾದ ಫಲವನ್ನೂ ಜೀವನು ಅನುಭವಿಸುವುದಿಲ್ಲ.

ಶಯಾನಂ ಯಾನ್ತಮಾಸೀನಂ ಪ್ರವೃತ್ತಂ ವಿಷಯೇಷು ಚ ।
ಶುಭಾಶುಭಾನಿ ಕರ್ಮಾಣಿ ಪ್ರಪದ್ಯನ್ತೇ ನರಂ ಸದಾ ॥೩೧॥

ಮನುಷ್ಯನು ಮಲಗಿರಲಿ ; ಸಂಚರಿಸುತ್ತಿರಲಿ ; ಕುಳಿತಿರಲಿ ಅಥವಾ ವಿಷಯೋಪಭೋಗಗಳಲ್ಲಿ ಪ್ರವೃತ್ತನಾಗಿರಲಿ–ಶುಭಾಶುಭಕರ್ಮಫಲಗಳು ಅವನನ್ನು ಅನುಸರಿಸಿ ಹೋಗುತ್ತಲೇ ಇರುತ್ತವೆ.

ನ ಹ್ಯನ್ಯತ್ತೀರಮಾಸಾದ್ಯ ಪುನಸ್ತರ್ತುಂ ವ್ಯವಸ್ಯತಿ ।
ದುರ್ಲಭೋ ದೃಶ್ಯತೇ ಹ್ಯಸ್ಯ ವಿನಿಪಾತೋ ಮಹಾರ್ಣವೇ ॥೩೨॥

ಕಷ್ಟತರವಾದ ಪ್ರದೇಶದಿಂದ ಹೊರಟು ಸಮುದ್ರವನ್ನು ದಾಟಿ ಸುಖಕರವಾದ ಮತ್ತೊಂದು ತೀರಕ್ಕೆ ಹೋದ ಮನುಷ್ಯನು ಪುನಃ ಅದೇ ಸಮುದ್ರವನ್ನು ದಾಟಿಕೊಂಡು ಹೊರಟ ಸ್ಥಳಕ್ಕೇ ಬಂದು ಸೇರಲು ಇಷ್ಟಪಡುವುದಿಲ್ಲ. ಹಾಗೆಯೇ ಸಂಸಾರಸಾಗರವನ್ನು ದಾಟಿರುವವನು ಪುನಃ ಅದೇ ಸಂಸಾರಸಾಗರದಲ್ಲಿ ಬೀಳುವುದು ಅತ್ಯಂತ ದುರ್ಲಭವಾಗಿ ಕಾಣುತ್ತದೆ.

ಯಥಾ ಭಾವಾವಸನ್ನಾ ಹಿ ನೌರ್ಮಹಾಮ್ಭಸಿ ತನ್ತುನಾ ।
ತಥಾ ಮನೋಭಿಯೋಗಾದ್ವೈ ಶರೀರಂ ಪ್ರಚಿಕೀರ್ಷತಿ ॥೩೩॥

ಯಾವ ರೀತಿಯಲ್ಲಿ ದೊಡ್ಡದಾದ ಸಮುದ್ರದಲ್ಲಿರುವ ನೌಕೆಯು ಹಗ್ಗದಿಂದ ಎಳೆಯಲ್ಪಟ್ಟು ನಾವಿಕನ ಭಾವನೆಗೆ ಅನುಸಾರವಾಗಿ ಪ್ರಯಾಣ ಮಾಡುವುದೋ–ಅದೇ ರೀತಿಯಲ್ಲಿ ಜೀವನು ಶರೀರರೂಪವಾದ ನೌಕೆಯನ್ನು ತನ್ನ ಮನಸ್ಸಿಗೆ ಅನುಗುಣವಾಗಿ ನಡೆಸುತ್ತಿರುತ್ತಾನೆ.

ಯಥಾ ಸಮುದ್ರಮಭಿತಃ ಸಂಶ್ರಿತಾಃ ಸರಿತೋಽಪರಾಃ ।
ತಥಾದ್ಯಾ ಪ್ರಕೃತಿರ್ಯೋಗಾದಭಿಸಂಶ್ರಿಯತೇ ಸದಾ ॥೩೪॥

ಯಾವ ರೀತಿಯಲ್ಲಿ ನದಿಗಳು ಎಲ್ಲ ಕಡೆಗಳಿಂದಲೂ ಹರಿದು ಬಂದು

ಸಮುದ್ರವನ್ನೇ ಸೇರುತ್ತವೆಯೋ–ಅದೇ ರೀತಿಯಲ್ಲಿ ಎಲ್ಲ ಭೂತಗಳೂ ಪ್ರಳಯಕಾಲದಲ್ಲಿ ಮೂಲಪ್ರಕೃತಿಯಲ್ಲಿಯೇ ಸೇರುತ್ತವೆ.

ಸ್ನೇಹಪಾಶೈರ್ಬಹುವಿಧೈರಾಸಕ್ತಮನಸೋ ನರಾಃ ।
ಪ್ರಕೃತಿಸ್ಥಾ ವಿಷೀದನ್ತಿ ಜಲೇ ಸೈಕತವೇಶ್ಮವತ್ ॥೩೭॥

ನಾನಾಪ್ರಕಾರವಾದ ಸ್ನೇಹಪಾಶಗಳಿಂದ ಬಂಧಿಸಲ್ಪಟ್ಟಿರುವ ಮನಸ್ಸುಳ್ಳ ಪ್ರಾಕೃತಜನರು–ನೀರಿನಲ್ಲಿರುವ ಮಳಲಿನ ಮನೆಯಂತೆ ವಿನಾಶಹೊಂದುತ್ತಾರೆ.

ಶರೀರಗೃಹಸಂಜ್ಞಸ್ಯ ಶೌಚತೀರ್ಥಸ್ಯ ದೇಹಿನಃ ।
ಬುದ್ಧಿಮಾರ್ಗಪ್ರಯಾತಸ್ಯ ಸುಖಂ ತ್ವಿಹ ಪರತ್ರ ಚ ॥೩೮॥

ಅಂತಃಶುದ್ಧಿ-ಬಹಿಃಶುದ್ಧಿಗಳಿಂದ ಪುಣ್ಯಕ್ಷೇತ್ರರೂಪವಾಗಿರುವ ಶರೀರವೆಂಬ ಹೆಸರಿನ ಮನೆಯನ್ನು ಹೊಂದಿ, ಜ್ಞಾನಮಾರ್ಗದಲ್ಲಿಯೇ ಹೋಗುತ್ತಿರುವ ಜೀವನಿಗೆ–ಈ ಲೋಕದಲ್ಲಿಯೂ ಸುಖವಿದೆ ; ಪರಲೋಕದಲ್ಲಿಯೂ ಸುಖವಿದೆ.

ವಿಸ್ತರಾಃ ಕ್ಲೇಶಸಂಯುಕ್ತಾಃ ಸಂಕ್ಷೇಪಾಸ್ತು ಸುಖಾವಹಾಃ ।
ಪರಾರ್ಥಂ ವಿಸ್ತರಾಃ ಸರ್ವೇ ತ್ಯಾಗಮಾತ್ಮಹಿತಂ ವಿದುಃ ॥೩೭॥

(ಇದೇ ಅಧ್ಯಾಯದ ೨೦ನೇ ಶ್ಲೋಕವೇ ಪುನಃ ಇಲ್ಲಿಯೂ ಹೇಳಲ್ಪಟ್ಟಿದೆ. ಗೋರಖ್‌ಪುರದ ಪುಸ್ತಕದಲ್ಲಿಯೂ, ನೀಲಕಂಠರ ವ್ಯಾಖ್ಯಾನವಿರುವ ಪುಸ್ತಕದಲ್ಲಿಯೂ ಈ ಶ್ಲೋಕವು ಎರಡು ಕಡೆಗಳಲ್ಲಿಯೂ ಬಂದಿರುತ್ತದೆ. ಭಂ.ರಿ. ಇನ್‌ಸ್ಟಿಟ್ಯೂಟಿನವರು ಮುದ್ರಿಸಿರುವ ಪುಸ್ತಕದಲ್ಲಿ ಒಂದು ಕಡೆಯಲ್ಲಿ ಮಾತ್ರವೇ ಈ ಶ್ಲೋಕವಿದೆ. ೨೦ನೆಯ ಶ್ಲೋಕದಲ್ಲಿಯೇ ಅರ್ಥವನ್ನು ವಿವರಿಸಿದೆ.)

ಸಂಕಲ್ಪಜೋ ಮಿತ್ರವರ್ಗೋ ಜ್ಞಾತಯಃ ಕಾರಣಾತ್ಮಕಾಃ ।
ಭಾರ್ಯಾ ಪುತ್ರಶ್ಚ ದಾಸಶ್ಚ ಸ್ವಮರ್ಥಮನುಯುಜ್ಯತೇ ॥೪೦॥

ಯಾವುದಾದರೂ ಮನೋರಥವನ್ನು ಈಡೇರಿಸಿಕೊಳ್ಳುವ ಸಲುವಾಗಿಯೇ ಮಿತ್ರವರ್ಗವು ಹುಟ್ಟಿಕೊಳ್ಳುತ್ತದೆ. ಜ್ಞಾತಿಗಳೂ ಯಾವು

ದಾದರೂ ಕಾರಣದಿಂದಲೇ ಬಂಧುತ್ವವನ್ನಿಟ್ಟುಕೊಂಡಿರುತ್ತಾರೆ. ಭಾರ್ಯೆ, ಪುತ್ರ ಮತ್ತು ಸೇವಕರು ತಮ್ಮ ಸ್ವಾರ್ಥಗಳಲ್ಲಿಯೇ ದೃಷ್ಟಿಯುಳ್ಳವರಾಗಿರುತ್ತಾರೆ.

ನ ಮಾತಾ ನ ಪಿತಾ ಕಿಂಚಿತ್ಕಸ್ಯಚಿತ್ಪ್ರತಿಪದ್ಯತೇ ।
ದಾನಪಥ್ಯೌದನೋ ಜನ್ತುಃ ಸ್ವಕರ್ಮಫಲಮಶ್ನುತೇ ॥೩೯॥

ತಂದೆಯೇ ಆಗಲೀ, ತಾಯಿಯೇ ಆಗಲೀ–ಯಾರೇ ಆದರೂ ಪರಲೋಕಸಾಧನೆಗೆ ಸ್ವಲ್ಪವಾದರೂ ಸಹಾಯಕರಾಗುವುದಿಲ್ಲ. ಮನುಷ್ಯನು ಯಾವಾಗಲೂ ದಾನವನ್ನೇ ಅಥವಾ ತ್ಯಾಗವನ್ನೇ ಪರಲೋಕಪ್ರಯಾಣ ಕಾಲದಲ್ಲಿ ಪಾಥೇಯವನ್ನಾಗಿ (ದಾರಿಯ ಅನ್ನದ ಬುತ್ತಿಯನ್ನಾಗಿ) ಹೊಂದಿರುತ್ತಾನೆ. ಪ್ರತಿಯೊಬ್ಬ ಮನುಷ್ಯನೂ ತಾನು ಮಾಡಿದ ಕರ್ಮಫಲವನ್ನೇ ಅನುಭವಿಸುತ್ತಿರುತ್ತಾನೆ.

ಮಾತಾ ಪುತ್ರಃ ಪಿತಾ ಭ್ರಾತಾ ಭಾರ್ಯಾ ಮಿತ್ರಜನಸ್ತಥಾ ।
ಅಷ್ಟಾಪದಪದಸ್ಥಾನೇ ಲಕ್ಷಮುದ್ರೇವ ಲಕ್ಷ್ಯತೇ ॥೪೦॥

ತಾಯಿ, ಮಗ, ತಂದೆ, ಸಹೋದರ, ಪತ್ನೀ ಮತ್ತು ಮಿತ್ರಜನರು–ಚಿನ್ನದ ಸಂಪುಟದ ಮೇಲೆ ರಕ್ಷಣೆಯ ಸಲುವಾಗಿ ಒತ್ತಿರುವ ಅರಗಿನ ಮುದ್ರೆಯಂತೆ ಇರುತ್ತಾರೆ.

ಸರ್ವಾಣಿ ಕರ್ಮಾಣಿ ಪುರಾ ಕೃತಾನಿ
ಶುಭಾಶುಭಾನ್ಯಾತ್ಮನೋ ಯಾನ್ತಿ ಜನ್ತೋಃ ।
ಉಪಸ್ಥಿತಂ ಕರ್ಮಫಲಂ ವಿದಿತ್ವಾ
ಬುದ್ಧಿಂ ತಥಾ ಚೋದಯತೇಽನ್ತರಾತ್ಮಾ ॥೪೧॥

ಹಿಂದಿನ ಜನ್ಮಗಳಲ್ಲಿ ಮಾಡಿರುವ ಪ್ರಾಣಿಯ ಎಲ್ಲ ಶುಭಾಶುಭಕರ್ಮಫಲಗಳೂ ಪ್ರಾಣಿಯನ್ನು ಅನುಸರಿಸಿಯೇ ಇರುತ್ತವೆ. ತನಗೆ ಒದಗಿರುವ ಸುಖವನ್ನೋ ಅಥವಾ ಕಷ್ಟವನ್ನೋ ತನ್ನ ಕರ್ಮಫಲವೆಂಬುದಾಗಿ ತಿಳಿದುಕೊಂಡು ಅಂತರಾತ್ಮನು (ಭವಿಷ್ಯದಲ್ಲಿ ತನಗೆ ಕಷ್ಟ-ಸುಖಗಳೆರಡೂ ಪ್ರಾಪ್ತವಾಗದ ರೀತಿಯಲ್ಲಿ) ಬುದ್ಧಿಯನ್ನು ಆತ್ಮನೆಡೆಗೆ ಪ್ರಚೋದಿಸುತ್ತಾನೆ.

ವ್ಯವಸಾಯಂ ಸಮಾಶ್ರಿತ್ಯ ಸಹಾಯಾನ್ಯೋಽಧಿಗಚ್ಛತಿ ।
ನ ತಸ್ಯ ಕಶ್ಚಿದಾರಮ್ಭಃ ಕದಾಚಿದವಸೀದತಿ ॥೪೨॥

ಯಾವನು ಪ್ರಯತ್ನಶೀಲನಾಗಿ ತನ್ನ ಪ್ರಯತ್ನಕ್ಕೆ ಅನುಕೂಲರಾದ ಸಹಾಯಕರನ್ನು ಪಡೆದುಕೊಳ್ಳುವನೋ–ಅಂತಹವನು ಆರಂಭಿಸುವ ಯಾವುದೇ ಕಾರ್ಯವೂ ಯಾವಾಗಲೂ ವಿನಾಶಹೊಂದುವುದಿಲ್ಲ.

ಅದ್ವೈಧಮನಸಂ ಯುಕ್ತಂ ಶೂರಂ ಧೀರಂ ವಿಪಶ್ಚಿತಮ್ ।
ನ ಶ್ರೀಃ ಸಂತ್ಯಜತೇ ನಿತ್ಯಮಾದಿತ್ಯಮಿವ ರಶ್ಮಯಃ ॥೪೩॥

ಕಿರಣಗಳು ಸೂರ್ಯನನ್ನು ತ್ಯಜಿಸದಿರುವಂತೆ–ಡೋಲಾಯಮಾನವಾದ ಮನಸ್ಸಿಲ್ಲದ (ನಿಶ್ಚಲವಾದ ಮನಸ್ಸುಳ್ಳ), ಉದ್ಯೋಗಶೀಲನಾದ, ಶೂರನಾದ, ಧೀರನಾದ ವಿದ್ವಾಂಸನನ್ನು ಸಂಪತ್ತು ಪರಿತ್ಯಜಿಸುವುದಿಲ್ಲ.

ಆಸ್ತಿಕ್ಯವ್ಯವಸಾಯಾಭ್ಯಾಮುಪಾಯಾದ್ವಿಸ್ಮಯಾದ್ಧಿಯಾ ।
ಸಮಾರಭೇದನಿನ್ದ್ಯಾತ್ಮಾ ನ ಸೋಽರ್ಥಃ ಪರಿಷೀದತಿ ॥೪೪॥

ನಿಷ್ಕಳಂಕವಾದ ಹೃದಯವುಳ್ಳ ಯಾವ ಮನುಷ್ಯನು ಆಸ್ತಿಕ್ಯದಿಂದಲೂ, ಪ್ರಯತ್ನದಿಂದಲೂ, ಉಪಾಯದಿಂದಲೂ, ಗರ್ವರಾಹಿತ್ಯದಿಂದಲೂ ಉತ್ತಮವಾದ ಬುದ್ಧಿಯಿಂದ ಕೂಡಿ ಕಾರ್ಯಗಳನ್ನು ಪ್ರಾರಂಭಿಸುವನೋ–ಅವನ ಆ ಕಾರ್ಯಗಳು ಯಾವುದೇ ಕಾರಣದಿಂದಲೂ ನಿಷ್ಫಲವಾಗುವುದಿಲ್ಲ. (ವಿಸ್ಮಯಾತ್ ಎಂಬುದಕ್ಕೆ ವ್ಯಾಖ್ಯಾನಕಾರರು ಸ್ಮಯಃ = ಗರ್ವಃ, ತದಭಾವಾತ್ ವಿಸ್ಮಯಾತ್ = ಗರ್ವವಿಲ್ಲದೇ ಇರುವುದು–ಎಂದು ಅರ್ಥ ಮಾಡಿರುತ್ತಾರೆ.)

ಸರ್ವಃ ಸ್ವಾನಿ ಶುಭಾಶುಭಾನಿ ನಿಯತಂ
ಕರ್ಮಾಣಿ ಜನ್ತುಃ ಸ್ವಯಂ
ಗರ್ಭಾತ್ಸಮ್ಪ್ರತಿಪದ್ಯತೇ ತದುಭಯಂ
ಯತ್ತೇನ ಪೂರ್ವಂ ಕೃತಮ್ ।
ಮೃತ್ಯುಶ್ಚಾಪರಿಹಾರವಾನ್ಸಮಗತಿಃ
ಕಾಲೇನ ವಿಚ್ಛೇದಿನಾ

ದಾರೋಶ್ಚೂರ್ಣಮಿವಾಶ್ಮಸಾರವಿಹಿತಂ
ಕರ್ಮಾನ್ತಿಕಂ ಪ್ರಾಪಯೇತ್ ॥೪೫॥

ಎಲ್ಲ ಪ್ರಾಣಿಗಳೂ–ಪೂರ್ವಜನ್ಮಗಳಲ್ಲಿ ತಾವು ಮಾಡಿದ ಶುಭಾಶುಭ ಕರ್ಮಗಳ ನಿಯತವಾದ ಫಲಗಳನ್ನು–ತಾಯಿಯ ಗರ್ಭವನ್ನು ಪ್ರವೇಶಿಸಿದ ಸಮಯದಿಂದಲೇ ಪಡೆದುಕೊಂಡು ಉಪಭೋಗಿಸುತ್ತವೆ. ಮರವನ್ನು ಕುಯ್ಯುವಾಗ ಗರಗಸದಿಂದ ಉದುರುವ ಮರದ ಹೊಟ್ಟನ್ನು ಗಾಳಿಯು ಯಾವ ರೀತಿಯಲ್ಲಿ ಹಾರಿಸಿಕೊಂಡು ಹೋಗುವುದೋ–ಅದೇ ರೀತಿಯಲ್ಲಿ ಅಪರಿಹಾರ್ಯವಾದ ಮೃತ್ಯುವು ವಿನಾಶಕಾರಿಯಾದ ಕಾಲದೊಡನೆ ಸೇರಿ ಕೊಂಡು ಮನುಷ್ಯನನ್ನು ಹಾರಿಸಿಕೊಂಡು ಹೋಗುತ್ತದೆ (ಮನುಷ್ಯನನ್ನು ಅಂತಗೊಳಿಸುತ್ತದೆ).

ಸ್ವರೂಪತಾಮಾತ್ಮಕೃತಂ ಚ ವಿಸ್ತರಂ
ಕುಲಾನ್ವಯಂ ದ್ರವ್ಯಸಮೃದ್ಧಿಸಂಚಯಮ್ ।
ನರೋ ಹಿ ಸರ್ವೋ ಲಭತೇ ಯಥಾಕೃತಂ
ಶುಭಾಶುಭೇನಾತ್ಮಕೃತೇನ ಕರ್ಮಣಾ ॥೪೬॥

ಎಲ್ಲ ಜನರೂ ತಾವು ಮಾಡಿದ ಶುಭಾಶುಭಕರ್ಮಗಳ ಫಲವಾಗಿಯೇ ಸುರೂಪ ಅಥವಾ ಕುರೂಪಗಳನ್ನೂ, ಯೋಗ್ಯರಾದ ಅಥವಾ ಅಯೋಗ್ಯರಾದ ಮಕ್ಕಳು-ಮೊಮ್ಮಕ್ಕಳನ್ನೂ, ಒಳ್ಳೆಯ ಕುಲದಲ್ಲಿ ಅಥವಾ ದುಷ್ಕುಲದಲ್ಲಿ ಜನ್ಮವನ್ನೂ, ದ್ರವ್ಯಸಮೃದ್ಧಿಯನ್ನೂ ಅಥವಾ ದಾರಿದ್ರ್ಯವನ್ನೂ ಹೊಂದುತ್ತಾರೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಮನೀಷಿಯಾದ ಪರಾಶರಮುನಿಯು ಜನಕನಿಗೆ ಯಥಾವತ್ತಾದ ವಿಷಯಗಳನ್ನು ಹೀಗೆ ನಿರೂಪಿಸಿದನಂತರ ಉತ್ತಮೋತ್ತಮ ವಾದ ಈ ಪ್ರವಚನವನ್ನು ಕೇಳಿ ಧರ್ಮಾತ್ಮರಲ್ಲಿ ಶ್ರೇಷ್ಠನಾದ ಜನಕನು ಆನಂದಭರಿತನಾದನು.”

ಅಧ್ಯಾಯವು ಮುಗಿಯಿತು.

ಹಂಸಗೀತೆ

ಹಂಸರೂಪಧರನಾದ ಬ್ರಹ್ಮನಿಂದ ಸಾಧ್ಯರಿಗೆ ಅಧ್ಯಾತ್ಮೋಪದೇಶ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಸತ್ಯಂ ದಮಂ ಕ್ಷಮಾಂ ಪ್ರಜ್ಞಾಂ ಪ್ರಶಂಸನ್ತಿ ಪಿತಾಮಹ ।
ವಿದ್ವಾಂಸೋ ಮನುಜಾ ಲೋಕೇ ಕಥಮೇತನ್ಮತಂ ತವ ॥೧॥

"ಪಿತಾಮಹನೇ! ಈ ಪ್ರಪಂಚದಲ್ಲಿ ವಿದ್ವಾಂಸರು ಸತ್ಯ, ಇಂದ್ರಿಯ ನಿಗ್ರಹ, ಕ್ಷಮೆ, ಪ್ರಜ್ಞೆ(ಒಳ್ಳೆಯ ಬುದ್ಧಿ)–ಇವುಗಳನ್ನು ಪ್ರಶಂಸೆಮಾಡುತ್ತಾರೆ. ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಸಾಧ್ಯರಿಗೂ ಮತ್ತು ಹಂಸಪಕ್ಷಿಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ಹೇಳುತ್ತೇನೆ :

ಹಿಂದೊಂದು ಸಮಯದಲ್ಲಿ ನಿತ್ಯನಾದ, ಜನ್ಮರಹಿತನಾದ ಪ್ರಜಾಪತಿಯು ಸುವರ್ಣಮಯವಾದ ಹಂಸರೂಪವನ್ನು ಧರಿಸಿ ಮೂರು ಲೋಕಗಳಲ್ಲಿಯೂ ಸಂಚರಿಸುತ್ತಿದ್ದನು. ಹೀಗೆ ಸಂಚರಿಸುತ್ತಿದ್ದಾಗ ಒಮ್ಮೆ ಸಾಧ್ಯರ ಬಳಿಗೆ ಹೋದನು. ಸಾಧ್ಯರು ಹಂಸಪಕ್ಷಿಯನ್ನು ಪ್ರಶ್ನಿಸಿದರು :

"ಹಂಸಪಕ್ಷಿಯೇ! ನಾವು ಸಾಧ್ಯರೆಂಬ ದೇವತೆಗಳು. ನಾವು ನಿನ್ನನ್ನು ಮೋಕ್ಷಧರ್ಮದ ವಿಷಯವಾಗಿ ಪ್ರಶ್ನಿಸಬೇಕೆಂದಿರುತ್ತೇವೆ. ಏಕೆಂದರೆ : ನೀನು ಮೋಕ್ಷಧರ್ಮವನ್ನು ತಿಳಿದಿರತಕ್ಕವನೆಂದು ಸರ್ವತ್ರ ಪ್ರಸಿದ್ಧನಾಗಿರುವೆ.

ಶ್ರುತೋಽಸಿ ನಃ ಪಣ್ಡಿತೋ ಧೀರವಾದೀ
ಸಾಧುಶಬ್ದಶ್ಚರತೇ ತೇ ಪತತ್ರಿನ್ ।
ಕಿಂ ಮನ್ಯಸೇ ಶ್ರೇಷ್ಠತಮಂ ದ್ವಿಜ ತ್ವಂ
ಕಸ್ಮಿನ್ಮನಸ್ತೇ ರಮತೇ ಮಹಾತ್ಮನ್ ॥೩॥

ಮಹಾತ್ಮನೇ! ಪತತ್ರಿಯೇ! ನೀನು ಪಂಡಿತನೆಂದೂ–ವಾದದಲ್ಲಿ ಧೀರನೆಂದೂ ನಾವು ಕೇಳಿದ್ದೇವೆ. ನಿನ್ನ ಉತ್ತಮವಾಣಿಯು ಸರ್ವತ್ರ ಪ್ರಚಾರದಲ್ಲಿದೆ. ಪಕ್ಷಿಯೇ! ನೀನು ಯಾವುದನ್ನು ಎಲ್ಲ ವಸ್ತುಗಳಿಗಿಂತಲೂ ಶ್ರೇಷ್ಠವಾದುದೆಂದು ಭಾವಿಸುವೆ? ನಿನ್ನ ಮನಸ್ಸು ಯಾವುದರಲ್ಲಿ ಸಂತೋಷಿಸುತ್ತದೆ?



ತನ್ನಃ ಕಾರ್ಯಂ ಪಕ್ಷಿವರ ಪ್ರಶಾಧಿ
ಯತ್ಕಾರ್ಯಾಣಾಂ ಮನ್ಯಸೇ ಶ್ರೇಷ್ಠಮೇಕಮ್ ।
ಯತ್ಕೃತ್ವಾ ವೈ ಪುರುಷಃ ಸರ್ವಬನ್ಧೈ-
ರ್ವಿಮುಚ್ಯತೇ ವಿಹಗೇನ್ದ್ರೇಹ ಶೀಘ್ರಮ್ ॥೬॥

ಪಕ್ಷಿರಾಜನೇ! ಖಗಶ್ರೇಷ್ಠನೇ! ಯಾವ ಒಂದು ಕಾರ್ಯವನ್ನು ನೀನು ಎಲ್ಲ ಕಾರ್ಯಗಳಿಗಿಂತಲೂ ಶ್ರೇಷ್ಠತಮವೆಂದು ಭಾವಿಸುವೆಯೋ ಮತ್ತು ಯಾವ ಕಾರ್ಯವನ್ನು ಮಾಡಿದರೆ ಪುರುಷನು ಸರ್ವಬಂಧನಗಳಿಂದಲೂ ವಿಮುಕ್ತನಾಗುವನೋ–ಅಂತಹ ಕಾರ್ಯವನ್ನು ಮಾಡಲು ನಮಗೆ ಆಜ್ಞಾಪಿಸು.”

ಹಂಸವು ಹೇಳುತ್ತದೆ :

ಇದಂ ಕಾರ್ಯಮಮೃತಾಶಾಃ ಶೃಣೋಮಿ
ತಪೋ ದಮಃ ಸತ್ಯಮಾತ್ಮಾಭಿಗುಪ್ತಿಃ ।
ಗ್ರನ್ಥೀನ್ವಿಮುಚ್ಯ ಹೃದಯಸ್ಯ ಸರ್ವಾ-
ನ್ಪ್ರಿಯಾಪ್ರಿಯೇ ಸ್ವಂ ವಶಮಾನಯೀತ ॥೭॥

“ಅಮೃತಭೋಜಿಗಳಾದ ದೇವತೆಗಳೇ! ತಪಸ್ಸು, ಇಂದ್ರಿಯನಿಗ್ರಹ, ಸತ್ಯನಿಷ್ಠೆ, ಮನೋನಿಗ್ರಹ–ಇವುಗಳೇ ಎಲ್ಲ ಕಾರ್ಯಗಳಿಗಿಂತಲೂ ಉತ್ತಮವಾದುವೆಂಬುದನ್ನು ನಾನು ಕೇಳಿದ್ದೇನೆ. ಹೃದಯದಲ್ಲಿರುವ ಸಕಲವಿಧವಾದ ಗ್ರಂಥಿಗಳನ್ನೂ (ರಾಗ-ದ್ವೇಷಾದಿಗಳನ್ನೂ) ಕಿತ್ತುಹಾಕಿ ಪ್ರಿಯಾಪ್ರಿಯಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಬೇಕು. ಪ್ರಿಯವುಂಟಾದಾಗ ಸಂತೋಷಪಡಬಾರದು ; ದುಃಖವುಂಟಾದಾಗ ವ್ಯಸನಪಡಬಾರದು.

ನಾರುನ್ತುದಃ ಸ್ಯಾನ್ನ ನೃಶಂಸವಾದೀ
ನ ಹೀನತಃ ಪರಮಭ್ಯಾದದೀತ ।
ಯಯಾಸ್ಯ ವಾಚಾ ಪರ ಉದ್ವಿಜೇತ
ನ ತಾಂ ವದೇದ್ರುಷತೀಂ ಪಾಪಲೋಕ್ಯಾಮ್ ॥೮॥

ಯಾರೊಬ್ಬರ ಮರ್ಮಸ್ಥಳಗಳಿಗೂ ಆಘಾತವನ್ನುಂಟುಮಾಡಬಾರದು. (ಮನನೋಯಿಸುವ ಮಾತುಗಳನ್ನಾಡಬಾರದು.) ನಿಷ್ಠುರವಾದ ಮಾತುಗಳನ್ನಾಡಬಾರದು. ಹೀನಮನುಷ್ಯನಿಂದ ಪರಾವಿದ್ಯೆಯ ಉಪದೇಶವನ್ನು ಪಡೆಯಬಾರದು. ಯಾವ ಮಾತನ್ನು ಕೇಳಿದರೆ ಇತರರು

ಉದ್ವೇಗಗೊಳ್ಳುವರೋ–ಅಂತಹ ನರಕಪ್ರಾಪಕವಾದ, ಅಮಂಗಳಮಯ ವಾದ ಮಾತನ್ನು ಆಡಲೇಬಾರದು.

ವಾಕ್ಸಾಯಕಾ ವದನಾನ್ನಿಷ್ಪತನ್ತಿ
ಯೈರಾಹತಃ ಶೋಚತಿ ರಾತ್ರ್ಯಹಾನಿ ।
ಪರಸ್ಯ ನಾಮರ್ಮಸು ತೇ ಪತನ್ತಿ
ತಾನ್ಪಣ್ಡಿತೋ ನಾವಸೃಜೇತ್ಪರೇಷು ॥೯॥

ಕಠಿನವಾದ ಮಾತುಗಳು ಮನುಷ್ಯನ ಬಾಯಿಂದ ಬಾಣಗಳೋಪಾದಿ ಯಲ್ಲಿ ಹೊರಬೀಳುತ್ತವೆ. ಅಂತಹ ಕಠೋರವಾದ ವಾಗ್ಬಾಣಗಳಿಂದ ಪ್ರಹೃತನಾದವನು ಹಗಲು-ರಾತ್ರಿಗಳಲ್ಲಿಯೂ ದುಃಖಪಡುತ್ತಿರುತ್ತಾನೆ. ಏಕೆಂದರೆ ಆ ವಾಗ್ಬಾಣಗಳು ಅವನ ಮರ್ಮಸ್ಥಾನವನ್ನು ಬಿಟ್ಟು ಬೇರೆಯ ಸ್ಥಾನದಲ್ಲಿ ಬೀಳುವುದೇ ಇಲ್ಲ. ಆದುದರಿಂದ ಪಂಡಿತನಾದವನು ಅಂತಹ ಕಠಿನವಾದ ವಾಗ್ಬಾಣಗಳನ್ನು ಇತರರ ಮೇಲೆ ಪ್ರಯೋಗಿಸಬಾರದು.

ಪರಶ್ಚೇದೇನಮತಿವಾದಬಾಣೈ-
ರ್ಭೃಶಂ ವಿಧ್ಯೇಚ್ಛಮ ಏವೇಹ ಕಾರ್ಯಃ ।
ಸಂರೋಷ್ಯಮಾಣಃ ಪ್ರತಿಹೃಷ್ಯತೇ ಯಃ
ಸ ಆದತ್ತೇ ಸುಕೃತಂ ವೈ ಪರಸ್ಯ ॥೧೦॥

ಬೇರೆಯವನೇನಾದರೂ ವಿದ್ವಾಂಸನನ್ನು ನಿಂದಾರೂಪವಾದ ವಾಗ್ಬಾಣ ಗಳಿಂದ ಬಲವಾಗಿ ಪ್ರಹರಿಸಿದರೆ–ವಿದ್ವಾಂಸನು ಅದಕ್ಕೆ ಪ್ರತಿಯಾಗಿ ವಾಗ್ಬಾಣ ಗಳನ್ನು ಪ್ರಹರಿಸದೇ ಶಾಂತನಾಗಿಯೇ ಇದ್ದುಬಿಡಬೇಕು. ಒಬ್ಬನು ತನ್ನ ಮೇಲೆ ಕೋಪಗೊಂಡರೂ (ತನ್ನನ್ನು ಕೋಪಗೊಳ್ಳುವಂತೆ ಮಾಡುತ್ತಿದ್ದರೂ) ಯಾವನು ಪ್ರಸನ್ನನಾಗಿಯೇ ಇದ್ದುಬಿಡುವನೋ–ಅವನು ಕೋಪಗೊಂಡವನಲ್ಲಿರುವ ಪುಣ್ಯವನ್ನು ಸೆಳೆದುಕೊಳ್ಳುತ್ತಾನೆ.

ಕ್ಷೇಪಾಯಮಾಣಮಭಿಷಜ್ಞವ್ಯಲೀಕಂ
ನಿಗೃಹ್ಣಾತಿ ಜ್ವಲಿತಂ ಯಶ್ಚ ಮನ್ಯುಮ್ ।
ಅದುಷ್ಟಚೇತಾ ಮುದಿತೋಽನಸೂಯುಃ
ಸ ಆದತ್ತೇ ಸುಕೃತಂ ವೈ ಪರೇಷಾಮ್ ॥೧೧॥

ನರಕದಲ್ಲಿ ತಳ್ಳುವ, ತಡೆದುಕೊಳ್ಳಲಾಗದ ನಿಂದಾವಚನಗಳಿಂದ ಉಂಟಾಗುವ ಪ್ರಜ್ವಲಿಸುವ ಕೋಪವನ್ನು ಯಾವನು ತಡೆದುಕೊಳ್ಳುವನೋ– ಅಂತಹ ಹೃದಯವಿಕಾರವಿಲ್ಲದಿರುವ, ಪ್ರಸನ್ನನಾಗಿರುವ, ಇತರರ ವಿಷಯ ದಲ್ಲಿ ದೋಷವನ್ನೆಣಿಸದಿರುವ ಸತ್ಪುರುಷನು ತನ್ನಲ್ಲಿ ಶತ್ರುಭಾವವನ್ನಿಟ್ಟು ಕೊಂಡಿರುವವರ ಸುಕೃತವನ್ನು ಸೆಳೆದುಕೊಳ್ಳುತ್ತಾನೆ.

ಆಕ್ರುಶ್ಯಮಾನೋ ನ ವದಾಮಿ ಕಿಂಚಿ-
ತ್ಕ್ಷಮಾಮ್ಯಹಂ ತಾಡ್ಯಮಾನಶ್ಚ ನಿತ್ಯಮ್ ।
ಶ್ರೇಷ್ಠಂ ಹ್ಯೇತದ್ಯತ್ಕ್ಷಮಾಮಾಹುರಾರ್ಯಾಃ
ಸತ್ಯಂ ತಥೈವಾರ್ಜವಮಾನೃಶಂಸ್ಯಮ್ ॥೧೨॥

ಒಬ್ಬನು ನನ್ನನ್ನು ನಿಂದಿಸುತ್ತಿದ್ದರೂ ಅದಕ್ಕೆ ಪ್ರತಿಯಾಗಿ ನಾನು ಏನನ್ನೂ ಹೇಳುವುದಿಲ್ಲ. ಒಬ್ಬನು ಪ್ರಹರಿಸುತ್ತಿದ್ದರೂ ಅವನನ್ನು ನಾನು ಕ್ಷಮಿಸಿಬಿಡುತ್ತೇನೆ. ಏಕೆಂದರೆ : ಶ್ರೇಷ್ಠಪುರುಷರು ಕ್ಷಮೆ, ಸತ್ಯ, ಸರಳತೆ ಮತ್ತು ದಯೆ–ಈ ಗುಣಗಳನ್ನೇ ಶ್ರೇಷ್ಠವಾದ ಗುಣಗಳೆಂದು ಹೇಳುತ್ತಾರೆ.

ವೇದಸ್ಯೋಪನಿಷತ್ಸತ್ಯಂ ಸತ್ಯಸ್ಯೋಪನಿಷದ್ದಮಃ ।
ದಮಸ್ಯೋಪನಿಷನ್ಮೋಕ್ಷ ಏತತ್ಸರ್ವಾನುಶಾಸನಮ್ ॥೧೩॥

ವೇದಾಧ್ಯಯನದ ರಹಸ್ಯವು ಸತ್ಯನಿಷ್ಠೆಯೇ ಆಗಿದೆ. ಸತ್ಯನಿಷ್ಠೆಯ ರಹಸ್ಯವು ಇಂದ್ರಿಯನಿಗ್ರಹವೇ ಆಗಿದೆ. ಇಂದ್ರಿಯನಿಗ್ರಹದ ರಹಸ್ಯವು ಅಥವಾ ಫಲವು ಮೋಕ್ಷವೇ ಆಗಿದೆ. ಎಲ್ಲ ಶಾಸ್ತ್ರಗಳ ಉಪದೇಶವೂ ಇದೇ ಆಗಿದೆ.

ವಾಚೋ ವೇಗಂ ಮನಸಃ ಕ್ರೋಧವೇಗಂ
ವಿಧಿತ್ಸಾವೇಗಮುದರೋಪಸ್ಥವೇಗಮ್ ।
ಏತಾನ್ವೇಗಾನ್ಯೋ ವಿಷಹೇದುದೀರ್ಣಾಂ
ಸ್ತಂ ಮನ್ಯೇಽಹಂ ಬ್ರಾಹ್ಮಣಂ ವೈ ಮುನಿಂ ಚ ॥೧೪॥

ಯಾರು ಮಾತಿನ ವೇಗವನ್ನೂ, ಮನಸ್ಸಿನಲ್ಲುಂಟಾಗುವ ಕೋಪದ ವೇಗವನ್ನೂ, ತೃಷ್ಣೆಯ ವೇಗವನ್ನೂ, ಹಸಿವಿನ ವೇಗವನ್ನೂ, ಕಾಮದ ವೇಗ

ವನ್ನೂ–ಪ್ರಚಂಡವಾದ ಈ ಎಲ್ಲ ವೇಗಗಳನ್ನೂ ಸಹಿಸಿಕೊಳ್ಳುವನೋ ಈ ವೇಗಗಳಿಂದ ಸೆಳೆಯಲ್ಪಟ್ಟು ವಿನಾಶಹೊಂದುವುದಿಲ್ಲವೋ–ಅಂತಹವನನ್ನು ನಾನು ಬ್ರಹ್ಮಜ್ಞಾನಿಯೆಂದೂ–ಮುನಿಯೆಂದೂ ಭಾವಿಸುತ್ತೇನೆ.

ಅಕ್ರೋಧನಃ ಕ್ರುಧ್ಯತಾಂ ವೈ ವಿಶಿಷ್ಟ-
ಸ್ತಥಾ ತಿತಿಕ್ಷುರತಿತಿಕ್ಷೋರ್ವಿಶಿಷ್ಟಃ ।
ಅಮಾನುಷಾನ್ಮಾನುಷೋ ವೈ ವಿಶಿಷ್ಟ-
ಸ್ತಥಾಜ್ಞಾನಾಜ್ಜ್ಞಾನವಿದ್ವೈ ವಿಶಿಷ್ಟಃ ॥೧೫॥

ಕೋಪಿಷ್ಠರಿಗಿಂತಲೂ ಕೋಪಗೊಳ್ಳದಿರುವವನು ಶ್ರೇಷ್ಠನು. ಅಸಹನ ಶೀಲನಿಗಿಂತಲೂ ಸಹನಶೀಲನು ಶ್ರೇಷ್ಠನು. ಮನುಷ್ಯೇತರವಾದ ಪ್ರಾಣಿ ಗಿಂತಲೂ ಮನುಷ್ಯನು ಶ್ರೇಷ್ಠನು. ಅಜ್ಞಾನಿಗಿಂತಲೂ ಜ್ಞಾನಿಯು ಶ್ರೇಷ್ಠನು.

ಆಕ್ರುಶ್ಯಮಾನೋ ನಾಕ್ರುಶ್ಯೇನ್ಮನ್ಯುರೇನಂ ತಿತಿಕ್ಷತಃ ।
ಅಕ್ರೋಷ್ಟಾರಂ ನಿರ್ದಹತಿ ಸುಕೃತಂ ಚಾಸ್ಯ ವಿನ್ದತಿ ॥೧೬॥

ಒಬ್ಬನು ತನ್ನನ್ನು ನಿಂದಿಸುತ್ತಿದ್ದರೂ ಅದಕ್ಕೆ ಬದಲಾಗಿ ನಿಂದಿಸುತ್ತಿರು ವವನನ್ನು ಯಾರು ನಿಂದಿಸಹೋಗುವುದಿಲ್ಲವೋ–ಅಂತಹ ಕ್ಷಮಾಶೀಲನ ತಡೆಹಿಡಿಯಲ್ಪಟ್ಟ ಕೋಪವೇ ನಿಂದಿಸುವವನನ್ನು ದಹಿಸಿಬಿಡುತ್ತದೆ ಮತ್ತು ನಿಂದಿಸುವವನಲ್ಲಿರುವ ಸುಕೃತವನ್ನೂ ಕ್ಷಮಾಶೀಲನು ಪಡೆದುಕೊಳ್ಳುತ್ತಾನೆ.

ಯೋ ನಾತ್ಯುಕ್ತಃ ಪ್ರಾಹ ರೂಕ್ಷಂ ಪ್ರಿಯಂ ವಾ
ಯೋ ವಾ ಹತೋ ನ ಪ್ರತಿಹನ್ತಿ ಧೈರ್ಯಾತ್ ।
ಪಾಪಂ ಚ ಯೋ ನೇಚ್ಛತಿ ತಸ್ಯ ಹನ್ತು-
ಸ್ತಸ್ಯೇಹ ದೇವಾಃ ಸ್ಪೃಹಯನ್ತಿ ನಿತ್ಯಮ್ ॥೧೭॥

ಯಾವನು ಬೇರೆಯವನಿಂದ ನಿಂದಿಸಲ್ಪಡುತ್ತಿದ್ದರೂ ಸ್ತುತಿಸಲ್ಪಡು ತ್ತಿದ್ದರೂ–ಕಠಿಣವಾದ ಮಾತುಗಳನ್ನಾಗಲೀ, ಪ್ರಿಯವಾದ ಮಾತುಗಳ ನ್ನಾಗಲೀ ಆಡುವುದಿಲ್ಲವೋ ಮತ್ತು ಬೇರೆಯವನಿಂದ ಹೊಡೆಯಲ್ಪಟ್ಟರೂ

ಮನಃಸ್ಥೈರ್ಯದಿಂದ ಅವನನ್ನು ಪ್ರತಿಯಾಗಿ ಹೊಡೆಯಲು ಹೋಗುವುದಿಲ್ಲವೋ, ಹೊಡೆಯುವವನಿಗೆ ಕೇಡನ್ನೂ ಬಯಸುವುದಿಲ್ಲವೋ–ಅಂತಹ ಮಹಾತ್ಮನನ್ನು ಸಂದರ್ಶಿಸಲು ದೇವತೆಗಳೂ ಕೂಡ ಸದಾಕಾಲದಲ್ಲಿಯೂ ಆಸಕ್ತರಾಗಿರುತ್ತಾರೆ.

ಪಾಪೀಯಸಃ ಕ್ಷಮೇತೈವ ಶ್ರೇಯಸಃ ಸದೃಶಸ್ಯ ಚ ।
ವಿಮಾನಿತೋ ಹತೋತ್ಕ್ರುಷ್ಟ ಏವಂ ಸಿದ್ಧಿಂ ಗಮಿಷ್ಯತಿ ॥೧೮॥

ತನ್ನ ವಿಷಯದಲ್ಲಿ ಅಪರಾಧವನ್ನೆಸಗುವವನು ತನಗಿಂತ ಕೀಳಾದರೂ, ತನಗೆ ಹಿರಿಯನಾಗಿದ್ದರೂ, ತನಗೆ ಸಮಾನನಾಗಿದ್ದರೂ–ಅವನಿಂದ ಅವಮಾನಿಸಲ್ಪಟ್ಟರೆ ಅಥವಾ ಪ್ರಹರಿಸಲ್ಪಟ್ಟರೆ ಅವನನ್ನು ಕ್ಷಮಿಸಿಬಿಡಬೇಕು. ಅವನಿಗೆ ಯಾವ ವಿಧವಾದ ಪ್ರತೀಕಾರವನ್ನೂ ಮಾಡಲು ಹೋಗಬಾರದು. ಅಂತಹ ಕ್ಷಮಾಗುಣವನ್ನೇ ಆಶ್ರಯಿಸುವ ಮನುಷ್ಯನು ಪರಮಸಿದ್ಧಿಯನ್ನು ಹೊಂದುತ್ತಾನೆ.

ಸದಾಹಮಾರ್ಯಾನ್ನಿಭೃತೋಽಪ್ಯುಪಾಸೇ
ನ ಮೇ ವಿಧಿತ್ಸೋತ್ಸಹತೇ ನ ರೋಷಃ ।
ನ ಚಾಪ್ಯಹಂ ಲಿಪ್ಸಮಾನಃ ಪರ್ಯೈಮಿ
ನ ಚೈವ ಕಿಂಚಿದ್ವಿಷಯೇಣ ಯಾಮಿ ॥೧೯॥

ನಾನು ಪರಿಪೂರ್ಣನಾಗಿದ್ದರೂ–ಯಾವಾಗಲೂ ಶ್ರೇಷ್ಠಪುರುಷರನ್ನು ಉಪಾಸನೆಮಾಡುತ್ತಿರುತ್ತೇನೆ. ತೃಷ್ಣೆಯಾಗಲೀ–ರೋಷವಾಗಲೀ ನನ್ನ ವಿಷಯದಲ್ಲಿ ಉತ್ಸಾಹಗೊಂಡು ಕಾರ್ಯಮಾಡುವುದಿಲ್ಲ. (ತೃಷ್ಣೆಯಾಗಲೀ ಕೋಪವಾಗಲೀ ನನ್ನಲ್ಲಿರುವುದಿಲ್ಲ.) ಯಾವುದನ್ನಾದರೂ ಪಡೆದುಕೊಳ್ಳಬೇಕೆಂಬ ಲೋಭದಿಂದ ನಾನು ಧರ್ಮವನ್ನು ಉಲ್ಲಂಘಿಸಿ ನಡೆಯುವುದಿಲ್ಲ. ವಿಷಯಸುಖಗಳನ್ನು ಅರಸಿಕೊಂಡು ಯಾವಾಗಲೂ ಹೋಗುವುದಿಲ್ಲ.

ನಾಹಂ ಶಪ್ತಃ ಪ್ರತಿಶಪಾಮಿ ಕಂಚಿ-
ದ್ದಮಂ ದ್ವಾರಂ ಹ್ಯಮೃತಸ್ಯೇಹ ವೇದ್ಮಿ ।
ಗುಹ್ಯಂ ಬ್ರಹ್ಮ ತದಿದಂ ವೋ ಬ್ರವೀಮಿ
ನ ಮಾನುಷಾಚ್ಛ್ರೇಷ್ಠತರಂ ಹಿ ಕಿಂಚಿತ್ ॥೨೦॥

ನನ್ನನ್ನು ಯಾರಾದರೂ ಶಪಿಸಿದರೂ ಪ್ರತಿಯಾಗಿ ಶಾಪಕೊಡಲು ಹೋಗುವುದಿಲ್ಲ. ಇಂದ್ರಿಯಗಳ ಸಂಯಮವೇ ಮೋಕ್ಷಕ್ಕೆ ದ್ವಾರವೆಂಬುದನ್ನು ತಿಳಿದಿದ್ದೇನೆ. ಈ ಸಮಯದಲ್ಲಿ ನಿಮಗೆ ನಾನೊಂದು ಗುಟ್ಟನ್ನು ಹೇಳುತ್ತೇನೆ, ಕೇಳಿರಿ. ಮನುಷ್ಯಯೋನಿಗಿಂತಲೂ ಶ್ರೇಷ್ಠವಾದ ಯೋನಿಯು ಮತ್ತೊಂದಿಲ್ಲ.

ನಿರ್ಮುಚ್ಯಮಾನಃ ಪಾಪೇಭ್ಯೋ ಘನೇಭ್ಯ ಇವ ಚನ್ದ್ರಮಾಃ ।
ವಿರಜಾಃ ಕಾಲಮಾಕಾಂಕ್ಷನ್ಧೀರೋ ಧೈರ್ಯೇಣ ಸಿದ್ಧ್ಯತಿ ॥೨೧॥

ಮೋಡಗಳಿಂದ ಬಿಡಲ್ಪಟ್ಟ ಚಂದ್ರನು ಆಕಾಶದಲ್ಲಿ ಪ್ರಕಾಶಿಸುವಂತೆ–ಪಾಪಗಳಿಂದ ಮುಕ್ತನಾದ, ನಿರ್ಮಲವಾದ ಅಂತಃಕರಣವುಳ್ಳ, ಧೀರನಾದ ಮನುಷ್ಯನು ಧೈರ್ಯದಿಂದ ಕಾಲವನ್ನು ಪ್ರತೀಕ್ಷಿಸುತ್ತಿದ್ದು ಸಿದ್ಧಿಯನ್ನು ಹೊಂದುತ್ತಾನೆ.

ಯಃ ಸರ್ವೇಷಾಂ ಭವತಿ ಹ್ಯರ್ಚನೀಯ
ಉತ್ಸೈಧನಸ್ತಮ್ಭ ಇವಾಭಿಜಾತಃ ।
ಯಸ್ಮೈ ವಾಚಂ ಸುಪ್ರಸನ್ನಾಂ ವದನ್ತಿ
ಸ ವೈ ದೇವಾನ್ಗಚ್ಛತಿ ಸಂಯತಾತ್ಮಾ ॥೨೨॥

ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡಿರುವ ಯಾವ ಮನುಷ್ಯನು ಮೇಲೆತ್ತಿ ನಿಲ್ಲಿಸಿರುವ ಕಂಭದಂತೆ–ಉಚ್ಚಕುಲದಲ್ಲಿ ಹುಟ್ಟಿ ಎಲ್ಲರ ಆದರ-ಗೌರವಗಳಿಗೂ ಪಾತ್ರನಾಗಿರುವನೋ ಮತ್ತು ಯಾವನ ವಿಷಯದಲ್ಲಿ ಎಲ್ಲರೂ ಒಳ್ಳೊಳ್ಳೆಯ ಮಾತುಗಳನ್ನಾಡುವರೋ–ಅಂತಹವನು ದೇವತೆಗಳನ್ನು ಸೇರುತ್ತಾನೆ. (ದೇವಭಾವವನ್ನು ಹೊಂದುತ್ತಾನೆ.)

ನ ತಥಾ ವಕ್ತುಮಿಚ್ಛನ್ತಿ ಕಲ್ಯಾಣಾನ್ಪುರುಷೇ ಗುಣಾನ್ ।
ಯಥೈಷಾಂ ವಕ್ತುಮಿಚ್ಛನ್ತಿ ನೈರ್ಗುಣ್ಯಮನುಯುಞ್ಜಕಾಃ ॥೨೩॥

ಇತರರ ಬಗೆಗೆ ಮಾತನಾಡುವ ಸ್ವಭಾವವುಳ್ಳ ಮನುಷ್ಯರು ಇತರರ ದೋಷಗಳನ್ನು ಹೇಳಲು ಹೇಗೆ ಇಚ್ಛಿಸುವರೋ ಹಾಗೆ–ಅವರಲ್ಲಿರಬಹುದಾದ ಕಲ್ಯಾಣಗುಣಗಳನ್ನು ಹೇಳಲು ಇಚ್ಛೆಪಡುವುದಿಲ್ಲ.

ಯಸ್ಯ ವಾಙ್ಮನಸೀ ಗುಪ್ತೇ ಸಮ್ಯಕ್ಪ್ರಣಿಹಿತೇ ಸದಾ ।
ವೇದಾಸ್ತಪಶ್ಚ ತ್ಯಾಗಶ್ಚ ಸ ಇದಂ ಸರ್ವಮಾಪ್ನುಯಾತ್ ॥೨೪॥

ಯಾವನ ಮಾತೂ ಮತ್ತು ಮನಸ್ಸೂ ಸದಾ ಸುಗುಪ್ತವಾಗಿ ಪರಮಾತ್ಮನಲ್ಲಿಯೇ ಸೇರಿರುತ್ತವೆಯೋ–ಅವನು ವೇದಾಧ್ಯಯನ, ತಪಸ್ಸು ಮತ್ತು ತ್ಯಾಗ–ಇವೆಲ್ಲದರ ಫಲಗಳನ್ನೂ ಪಡೆದುಕೊಳ್ಳುತ್ತಾನೆ.

ಆಕ್ರೋಶನವಿಮಾನಾಭ್ಯಾಂ ನಾಬುಧಾನ್ಬೋಧಯೇದ್ಬುಧಃ ।
ತಸ್ಮಾನ್ನ ವರ್ಧಯೇದನ್ಯಂ ನ ಚಾತ್ಮಾನಂ ವಿಹಿಂಸಯೇತ್ ॥೨೫॥

ವಿದ್ವಾಂಸನು ನಿಂದೆ ಮತ್ತು ಅವಮಾನಗಳಿಂದ ಅಜ್ಞಾನಿಗಳಿಗೆ ಬೋಧಿಸಲು ಯತ್ನಿಸಬಾರದು. (ಒಳ್ಳೆಯ ಮಾತಿನಿಂದಲೇ ಬೋಧಿಸಬೇಕು.) ಅಂತಹ ಅಜ್ಞಾನಿಗಳ ಎದುರಿನಲ್ಲಿ ಬೇರೆಯವರ ಹೆಚ್ಚಳವನ್ನೂ ಹೇಳಬಾರದು. ಹಾಗೆ ಬೇರೆಯವರ ಹೆಚ್ಚಳವನ್ನು ಹೇಳಲು ಹೋಗಿ ಅವರನ್ನು ಕೆರಳಿಸಿ ಅವರಿಂದ ಆಗುವ ಹಿಂಸೆಗೆ ತನ್ನನ್ನು ಗುರಿಪಡಿಸಿಕೊಳ್ಳಬಾರದು.

ಅಮೃತಸ್ಯೇವ ಸಂತೃಪ್ಯೇದವಮಾನಸ್ಯ ಪಣ್ಡಿತಃ ।
ಸುಖಂ ಹ್ಯವಮತಃ ಶೇತೇ ಯೋಽವಮನ್ತಾ ಸ ನಶ್ಯತಿ ॥೨೬॥

ದುಷ್ಟರ ಮೂಲಕವಾಗಿ ಅವಮಾನವನ್ನು ಹೊಂದಿದ ವಿದ್ವಾಂಸನು ಅಮೃತವನ್ನು ಪಾನಮಾಡಿದವನಂತೆ ಸಂತುಷ್ಟನಾಗಿರಬೇಕು. ಏಕೆಂದರೆ : ಅವಮಾನಿತನಾದ ಪುರುಷನು ಸುಖವಾಗಿ ನಿದ್ರಿಸುತ್ತಾನೆ. ಆದರೆ ಅವಮಾನ ಮಾಡಿದವನು ವಿನಾಶಹೊಂದುತ್ತಾನೆ.

ಯತ್ಕ್ರೋಧನೋ ಯಜತಿ ಯದ್ದದಾತಿ
ಯದ್ವಾ ತಪಸ್ತಪ್ಯತಿ ಯಜ್ಜುಹೋತಿ ।
ವೈವಸ್ವತಸ್ತದ್ಧರತೇ ಚ ಸರ್ವಂ
ಮೋಘಃಶ್ರಮೋ ಭವತಿ ಹಿ ಕ್ರೋಧನಸ್ಯ ॥೨೭॥

ಕ್ರುದ್ಧನಾದ ಮನುಷ್ಯನು ಮಾಡಿದ ಯಜ್ಞವನ್ನೂ, ದಾನವನ್ನೂ, ತಪಸ್ಸನ್ನೂ, ಹೋಮವನ್ನೂ–(ಈ ಎಲ್ಲ ಕರ್ಮಗಳ ಫಲವನ್ನೂ) ಯಮ

ರಾಜನು ಅಪಹರಿಸಿಬಿಡುತ್ತಾನೆ. ಆದುದರಿಂದ ಕೋಪಿಷ್ಠನ ಶ್ರಮವೆಲ್ಲವೂ ವ್ಯರ್ಥವೇ ಆಗುತ್ತದೆ.

ಚತ್ವಾರಿ ಯಸ್ಯ ದ್ವಾರಾಣಿ ಸುಗುಪ್ತಾನ್ಯಮರೋತ್ತಮಾಃ ।
ಉಪಸ್ಥಮುದರಂ ಹಸ್ತೌ ವಾಕ್ಚತುರ್ಥೀ ಸ ಧರ್ಮವಿತ್ ॥೨೮॥

ದೇವೋತ್ತಮರೇ! ಯಾವ ಪುರುಷನ ಉಪಸ್ಥ, ಉದರ, ಕೈಗಳು ಮತ್ತು ಮಾತು–ಈ ನಾಲ್ಕು ದ್ವಾರಗಳು ಸುರಕ್ಷಿತವಾಗಿರುವುವೋ–ಅವನೇ ಧರ್ಮಜ್ಞನು.

ಸತ್ಯಂ ದಮಂ ಹ್ಯಾರ್ಜವಮಾನೃಶಂಸ್ಯಂ
ಧೃತಿಂ ತಿತಿಕ್ಷಾಮತಿಸೇವಮಾನಃ ।
ಸ್ವಾಧ್ಯಾಯನಿತ್ಯೋಽಸ್ಪೃಹಯನ್ಪರೇಷಾ-
ಮೇಕಾನ್ತಶೀಲ್ಯೂರ್ಧ್ವಗತಿರ್ಭವೇತ್ಸಃ ॥೨೯॥

ಯಾವ ಮನುಷ್ಯನು ಸತ್ಯ, ಇಂದ್ರಿಯಸಂಯಮ, ಸರಳತೆ, ದಯೆ, ಧೈರ್ಯ ಮತ್ತು ಕ್ಷಮೆ–ಈ ಶ್ರೇಷ್ಠವಾದ ಗುಣಗಳನ್ನು ಅಧಿಕವಾಗಿ ಆಶ್ರಯಿಸಿರುವನೋ, ವೇದಾಧ್ಯಯನತತ್ಪರನಾಗಿರುವನೋ, ಇತರರ ವಸ್ತುವಿಗೆ ಆಶೆಪಡುವುದಿಲ್ಲವೋ, ಏಕಾಂತದಲ್ಲಿಯೇ ಇರುವ ಸ್ವಭಾವವುಳ್ಳವನೋ–ಅಂತಹವನು ಊರ್ಧ್ವಗತಿಯನ್ನು (ಮೋಕ್ಷವನ್ನು) ಹೊಂದುತ್ತಾನೆ.

ಸರ್ವಾಂಶ್ಚೈನಾನನುಚರನ್ವತ್ಸವಚ್ಚತುರಃ ಸ್ತನಾನ್ ।
ನ ಪಾವನತಮಂ ಕಿಂಚಿತ್ಸತ್ಯಾದಧ್ಯಗಮಂ ಕ್ವಚಿತ್ ॥೩೦॥

ಕರುವು ತನ್ನ ತಾಯಿಯ ನಾಲ್ಕು ಮೊಲೆಗಳಲ್ಲಿರುವ ಹಾಲನ್ನೂ ಕುಡಿಯುವಂತೆ–ಮನುಷ್ಯನು ಮೇಲೆ ಹೇಳಿರುವ ಎಲ್ಲ ಸದ್ಗುಣಗಳನ್ನೂ ಆಚರಣೆಯಲ್ಲಿಟ್ಟುಕೊಳ್ಳಬೇಕು. ನಾನು ಇದುವರೆಗೆ ಸತ್ಯಕ್ಕಿಂತಲೂ ಪಾವನತಮವಾದ ಬೇರೆ ಯಾವ ವಸ್ತುವನ್ನೂ ಯಾರಿಂದಲೂ ಪಡೆದುಕೊಂಡಿರುವುದಿಲ್ಲ.

ಆಚಕ್ಷೇಽಹಂ ಮನುಷ್ಯೇಭ್ಯೋ ದೇವೇಭ್ಯಃ ಪ್ರತಿಸಂಚರನ್ ।
ಸತ್ಯಂ ಸ್ವರ್ಗಸ್ಯ ಸೋಪಾನಂ ಪಾರಾವಾರಸ್ಯ ನೌರಿವ ॥೩೧॥

ನಾನು ಎಲ್ಲ ಕಡೆಗಳಲ್ಲಿಯೂ ಸಂಚರಿಸುತ್ತಾ–ದೇವತೆಗಳಿಗೂ ಮತ್ತು ಮನುಷ್ಯರಿಗೂ ನೌಕೆಯು ಸಮುದ್ರವನ್ನು ದಾಟುವ ಸಾಧನವಾಗಿರುವಂತೆ ಸತ್ಯವು ಸ್ವರ್ಗಕ್ಕೆ ಹೋಗಲು ಸೋಪಾನವಾಗಿದೆಯೆಂದು–ಹೇಳುತ್ತಲೇ ಇರುತ್ತೇನೆ.

ಯಾದೃಶೈಃ ಸಂನಿವಸತಿ ಯಾದೃಶಾಂಶ್ಚೋಪಸೇವತೇ ।
ಯಾದೃಗಿಚ್ಛೇಚ್ಚ ಭವಿತುಂ ತಾದೃಗ್ಭವತಿ ಪೂರುಷಃ ॥೩೨॥

ಮನುಷ್ಯನು ಎಂತಹ ಮನುಷ್ಯರೊಡನೆ ವಾಸಮಾಡುವನೋ, ಎಂತಹ ಪುರುಷರ ಸೇವೆಯನ್ನು ಮಾಡುವನೋ ಮತ್ತು ಯಾವ ರೀತಿ ಇರಬೇಕೆಂದು ಇಚ್ಛಿಸುವನೋ–ಹಾಗೆಯೇ ಆಗುತ್ತಾನೆ.

ಯದಿ ಸನ್ತಂ ಸೇವತಿ ಯದ್ಯಸನ್ತಂ
ತಪಸ್ವಿನಂ ಯದಿ ವಾ ಸ್ತೇನಮೇವ ।
ವಾಸೋ ಯಥಾ ರಂಗವಶಂ ಪ್ರಯಾತಿ
ತಥಾ ಸ ತೇಷಾಂ ವಶಮಭ್ಯುಪೈತಿ ॥೩೩॥

ಬೆಳ್ಳಗೆ ಪರಿಶುದ್ಧವಾಗಿರುವ ಬಟ್ಟೆಯು ತನಗೆ ಯಾವ ಬಣ್ಣವನ್ನು ಹಾಕಿದರೂ ಆಯಾ ಬಣ್ಣದ ಬಟ್ಟೆಯಾಗಿಯೇ ಪರಿವರ್ತನಹೊಂದುವಂತೆ–ಮನುಷ್ಯನು ಸತ್ಪುರುಷರನ್ನು ಸೇವಿಸುತ್ತಿದ್ದರೆ ಸತ್ಪುರುಷನೇ ಆಗುತ್ತಾನೆ. ಕೆಟ್ಟವರ ಸಹವಾಸವನ್ನು ಮಾಡಿದರೆ ಕೆಟ್ಟವನೇ ಆಗುತ್ತಾನೆ. ತಪಸ್ವಿಯ ಸೇವೆಮಾಡುತ್ತಿದ್ದರೆ ತಾನೂ ತಪಸ್ವಿಯೇ ಆಗುತ್ತಾನೆ. ಕಳ್ಳನ ಸಹವಾಸವನ್ನೇ ಮಾಡುತ್ತಿದ್ದರೆ ಕಾಲಾನುಗುಣವಾಗಿ ತಾನೂ ಕಳ್ಳನೇ ಆಗುತ್ತಾನೆ.

ಸದಾ ದೇವಾಃ ಸಾಧುಭಿಃ ಸಂವದನ್ತೇ
ನ ಮಾನುಷಂ ವಿಷಯಂ ಯಾನ್ತಿ ದ್ರಷ್ಟುಮ್ ।
ನೇನ್ದುಃ ಸಮಃ ಸ್ಯಾದಸಮೋ ಹಿ ವಾಯು-
ರುಚ್ಚಾವಚಂ ವಿಷಯಂ ಯಃ ಸ ವೇದ ॥೩೪॥

ದೇವತೆಗಳು ಯಾವಾಗಲೂ ಸತ್ಪುರುಷರ ಸಹವಾಸವನ್ನೇ ಮಾಡುತ್ತಾ ಅವರೊಡನೆ ವಾರ್ತಾಲಾಪವನ್ನು ಮಾಡುತ್ತಿರುತ್ತಾರೆ. ಆದುದರಿಂದ ಅವರು

ಮನುಷ್ಯಸಂಬಂಧವಾದ ಕ್ಷಣಿಕಸುಖಗಳನ್ನು ನೋಡಿಯೂ ಅರಿಯರು ; ಕೇಳಿಯೂ ಅರಿಯರು. ಆದುದರಿಂದ ವಿಷಯಸುಖಗಳನ್ನು ಏರುಪೇರುಗಳುಳ್ಳದ್ದೆಂದೂ ಕ್ಷಣಿಕವಾದುದೆಂದೂ ಯಾವನು ತಿಳಿದಿರುವನೋ–ಅವನಿಗೆ ಚಂದ್ರನೂ ಸಮಾನನಾಗುವುದಿಲ್ಲ ; ವಾಯುವೂ ಸಮಾನನಾಗುವುದಿಲ್ಲ.

ಅದುಷ್ಟಂ ವರ್ತಮಾನೇ ತು ಹೃದಯಾನ್ತರಪೂರುಷೇ ।
ತೇನೈವ ದೇವಾಃ ಪ್ರೀಯನ್ತೇ ಸತಾಂ ಮಾರ್ಗಸ್ಥಿತೇನ ವೈ ॥೩೫॥

ಹೃದಯಾಂತರಾಳದಲ್ಲಿರುವ ಜೀವಾತ್ಮನು ರಾಗ-ದ್ವೇಷರಹಿತನಾಗಿರುವಾಗ ಸತ್ಪುರುಷರ ಮಾರ್ಗಾವಲಂಬಿಯಾಗಿರುವ ಅಂತಹವನಿಂದಲೇ ದೇವತೆಗಳು ಸುಪ್ರೀತರಾಗಿರುತ್ತಾರೆ.

ಶಿಶ್ನೋದರೇ ಯೇ ನಿರತಾಃ ಸದೈವ
ಸ್ತೇನಾ ನರಾ ವಾಕ್ಪರುಷಾಶ್ಚ ನಿತ್ಯಮ್ ।
ಅಪೇತದೋಷಾನಪಿ ತಾನ್ವಿದಿತ್ವಾ
ದೂರಾದ್ದೇವಾಃ ಸಮ್ಪರಿವರ್ಜಯನ್ತಿ ॥೩೬॥

ಯಾರು ಸರ್ವಕಾಲದಲ್ಲಿಯೂ ಶಿಶ್ನೋದರಪರಾಯಣರಾಗಿರುವರೋ, ಕಳ್ಳರಾಗಿಯೂ ಕಠೋರವಾದ ಮಾತುಳ್ಳವರಾಗಿಯೂ ಇರುವರೋ–ಅಂತಹ ಮನುಷ್ಯರು ಪ್ರಾಯಶ್ಚಿತ್ತಾದಿಗಳಿಂದ ದೋಷರಹಿತರಾಗಿರುವರೆಂಬುದನ್ನು ತಿಳಿದುಕೊಂಡಿದ್ದರೂ ದೇವತೆಗಳು ಅವರನ್ನು ದೂರದಿಂದಲೇ ಪರಿತ್ಯಜಿಸುತ್ತಾರೆ.

ನ ವೈ ದೇವಾ ಹೀನಸತ್ತ್ವೇನ ತೋಷ್ಯಾಃ
ಸರ್ವಾಶಿನಾ ದುಷ್ಕೃತಕರ್ಮಣಾ ವಾ ।
ಸತ್ಯವ್ರತಾ ಯೇ ತು ನರಾಃ ಕೃತಜ್ಞಾ
ಧರ್ಮೇ ರತಾಸ್ತೈಃ ಸಹ ಸಮ್ಭಜನ್ತೇ ॥೩೭॥

ಸತ್ತ್ವಗುಣದಿಂದ ರಹಿತನಾಗಿರುವವನು ಮಾಡುವ ಕರ್ಮಗಳಿಂದಲೂ, ಭಕ್ಷ್ಯಾಭಕ್ಷ್ಯಗಳ ವಿವೇಚನೆಯಿಲ್ಲದೇ ಸಿಕ್ಕಿದುದನ್ನು ತಿನ್ನುವ ಸ್ವಭಾವವಿರುವವನು ಮಾಡುವ ಕರ್ಮಗಳಿಂದಲೂ, ಪಾಪಿಷ್ಠನಾದವನು ಮಾಡುವ

ಕರ್ಮಗಳಿಂದಲೂ–ದೇವತೆಗಳು ಸಂತುಷ್ಠರಾಗುವುದಿಲ್ಲ. ಯಾರು ಸತ್ಯನಿಷ್ಠರಾಗಿರುವರೋ, ಮಾಡಿದ ಉಪಕಾರವನ್ನು ಸ್ಮರಿಸುವರೋ, ಧರ್ಮಪರಾಯಣರಾಗಿರುವರೋ–ಅವರುಗಳೊಡನೆ ದೇವತೆಗಳು ನಿಕಟವಾದ ಸಂಬಂಧವನ್ನಿಟ್ಟುಕೊಂಡಿರುತ್ತಾರೆ.

ಅವ್ಯಾಹೃತಂ ವ್ಯಾಹೃತಾಚ್ಛ್ರೇಯ ಆಹುಃ
ಸತ್ಯಂ ವದೇದ್ವ್ಯಾಹೃತಂ ತದ್ದ್ವಿತೀಯಮ್ ।
ಪ್ರಿಯಂ ವದೇದ್ವ್ಯಾಹೃತಂ ತತ್ತೃತೀಯಂ
ಧರ್ಮಂ ವದೇದ್ವ್ಯಾಹೃತಂ ತಚ್ಚತುರ್ಥಮ್ ॥೩೮॥

ವ್ಯರ್ಥಾಲಾಪವನ್ನು ಮಾಡುವುದಕ್ಕಿಂತಲೂ ಮಾತನಾಡದಿರುವುದೇ ಶ್ರೇಯಸ್ಸೆಂದು ವಿದ್ವಾಂಸರು ಹೇಳುತ್ತಾರೆ. ಇದು ಮಾತಿನ ಮೊದಲನೆಯ ನಿಯಮ. ಒಂದು ವೇಳೆ ಮಾತನಾಡಿದರೂ ಸತ್ಯವಾದ ಮಾತನ್ನೇ ಹೇಳಬೇಕು. ಇದು ಮಾತನಾಡುವುದರಲ್ಲಿರುವ ಎರಡನೆಯ ನಿಯಮ. ಸತ್ಯವಾದುದನ್ನೂ, ಪ್ರಿಯವಾದುದನ್ನೂ ಹೇಳಬೇಕು. ಇದು ಮೂರನೆಯ ನಿಯಮ. ಸತ್ಯವಾಗಿಯೂ, ಪ್ರಿಯವಾಗಿಯೂ ಮತ್ತು ಧರ್ಮಸಮ್ಮತವಾಗಿಯೂ ಇರುವ ಮಾತನ್ನೇ ಹೇಳಬೇಕು. ಇದು ಮಾತನಾಡುವುದರಲ್ಲಿರುವ ನಾಲ್ಕನೆಯ ನಿಯಮ."

(ಇವುಗಳಲ್ಲಿ ಮೊದಲನೆಯದಕ್ಕಿಂತಲೂ ಎರಡನೆಯದು ಶ್ರೇಷ್ಠವಾದುದು. ಎರಡನೆಯದಕ್ಕಿಂತಲೂ ಮೂರನೆಯದು ಶ್ರೇಷ್ಠವಾದುದು. ಮೂರನೆಯದಕ್ಕಿಂತಲೂ ನಾಲ್ಕನೆಯದು ಶ್ರೇಷ್ಠವಾದುದು.)

ಸಾಧ್ಯರು ಪ್ರಶ್ನಿಸುತ್ತಾರೆ :

ಕೇನಾಯಮಾವೃತೋ ಲೋಕಃ ಕೇನ ವಾ ನ ಪ್ರಕಾಶತೇ ।
ಕೇನ ತ್ಯಜತಿ ಮಿತ್ರಾಣಿ ಕೇನ ಸ್ವರ್ಗಂ ನ ಗಚ್ಛತಿ ॥೩೯॥

"ಹಂಸಪಕ್ಷಿಯೇ! ಈ ಲೋಕವು ಯಾವುದರಿಂದ ಆವೃತವಾಗಿದೆ? ಯಾವ ಕಾರಣದಿಂದ ಇದರ ಸ್ವರೂಪವು ಪ್ರಕಾಶಿತವಾಗುತ್ತಿಲ್ಲ? ಮನುಷ್ಯನು ಯಾವ ಕಾರಣದಿಂದ ಮಿತ್ರರನ್ನು ಪರಿತ್ಯಜಿಸುತ್ತಾನೆ? ಯಾವ ದೋಷದಿಂದಾಗಿ ಮನುಷ್ಯನು ಸ್ವರ್ಗಕ್ಕೆ ಹೋಗುವುದಿಲ್ಲ?"

ಹಂಸವು ಉತ್ತರಿಸುತ್ತದೆ :

ಅಜ್ಞಾನೇನಾವೃತೋ ಲೋಕೋ ಮಾತ್ಸರ್ಯಾನ್ನ ಪ್ರಕಾಶತೇ ।
ಲೋಭಾತ್ತ್ಯಜತಿ ಮಿತ್ರಾಣಿ ಸಂಗಾತ್ಸ್ವರ್ಗಂ ನ ಗಚ್ಛತಿ ॥೪೦॥

“ಪ್ರಪಂಚವು ಅಜ್ಞಾನದಿಂದ ಆವೃತವಾಗಿದೆ. ಅಸೂಯೆಪಡುವ ಲೋಕವು (ಜನರು) ಪ್ರಕಾಶಿಸುವುದಿಲ್ಲ. ಜನರು ಲೋಭದ ಕಾರಣದಿಂದ ಮಿತ್ರರನ್ನು ತ್ಯಜಿಸುತ್ತಾರೆ. ಪುತ್ರ-ಮಿತ್ರ-ಕಳತ್ರ-ಬಂಧುಗಳಲ್ಲಿ ಅತ್ಯಾಸಕ್ತಿಯ ದೋಷದಿಂದಾಗಿ ಸ್ವರ್ಗಕ್ಕೆ ಹೋಗಲು ಸಾಧ್ಯವಾಗುವುದಿಲ್ಲ.”

ಸಾಧ್ಯರು ಪ್ರಶ್ನಿಸುತ್ತಾರೆ :

ಕಃ ಸ್ವಿದೇಕೋ ರಮತೇ ಬ್ರಾಹ್ಮಣಾನಾಂ
ಕಃ ಸ್ವಿದೇಕೋ ಬಹುಭಿರ್ಜೋಷಮಾಸ್ತೇ ।
ಕಃ ಸ್ವಿದೇಕೋ ಬಲವಾನ್ದುರ್ಬಲೋಽಪಿ
ಕಃ ಸ್ವಿದೇಷಾಂ ಕಲಹಂ ನಾನ್ವವೈತಿ ॥೪೧॥

“ಬ್ರಾಹ್ಮಣರಲ್ಲಿ ಸುಖಿಯಾಗಿರುವವನೊಬ್ಬನು ಯಾರು? ಅನೇಕರ ಜೊತೆಯಲ್ಲಿದ್ದರೂ ಮೌನಿಯಾಗಿರತಕ್ಕವನೊಬ್ಬನು ಯಾರು? ದುರ್ಬಲನಾಗಿದ್ದರೂ ಬಲಿಷ್ಠನಾಗಿರತಕ್ಕವನೊಬ್ಬನು ಯಾರು? ಯಾರೊಡನೆಯೂ ಜಗಳವಾಡದೇ ಇರತಕ್ಕವನೊಬ್ಬನು ಯಾರು?”

ಪ್ರಾಜ್ಞ ಏಕೋ ರಮತೇ ಬ್ರಾಹ್ಮಣಾನಾಂ
ಪ್ರಾಜ್ಞಶ್ಚೈಕೋ ಬಹುಭಿರ್ಜೋಷಮಾಸ್ತೇ ।
ಪ್ರಾಜ್ಞ ಏಕೋ ಬಲವಾನ್ದುರ್ಬಲೋಽಪಿ
ಪ್ರಾಜ್ಞ ಏಷಾಂ ಕಲಹಂ ನಾನ್ವವೈತಿ ॥೪೨॥

“ಬ್ರಾಹ್ಮಣರಲ್ಲಿ ಪ್ರಾಜ್ಞ(ಆತ್ಮಜ್ಞಾನಿ) ನಾಗಿರತಕ್ಕವನೊಬ್ಬನೇ ಸುಖಿಯು. ಪ್ರಾಜ್ಞನಾದವನು ಅನೇಕರ ಜೊತೆಯಲ್ಲಿದ್ದರೂ ಮೌನಿಯಾಗಿರುತ್ತಾನೆ. ಪ್ರಾಜ್ಞನೊಬ್ಬನೇ ದೈಹಿಕವಾಗಿ ದುರ್ಬಲನಾಗಿದ್ದರೂ ಬಲಿಷ್ಠನು. ಪ್ರಾಜ್ಞನಾದವನು ಯಾರೊಡನೆಯೂ ಜಗಳವಾಡುವುದಿಲ್ಲ.”

ಸಾಧ್ಯರು ಪ್ರಶ್ನಿಸುತ್ತಾರೆ :

ಕಿಂ ಬ್ರಾಹ್ಮಣಾನಾಂ ದೇವತ್ವಂ ಕಿಂ ಚ ಸಾಧುತ್ವಮುಚ್ಯತೇ ।
ಅಸಾಧುತ್ವಂ ಚ ಕಿಂ ತೇಷಾಂ ಕಿಮೇಷಾಂ ಮಾನುಷಂ ಮತಮ್ ॥

"ಬ್ರಾಹ್ಮಣರಲ್ಲಿರುವ ದೇವತ್ವವು ಯಾವುದು? ಅವರಲ್ಲಿರುವ ಸಾಧುತ್ವವು ಯಾವುದು? ಅಸಾಧುತ್ವವು ಯಾವುದು? ಅವರಲ್ಲಿರುವ ಮನುಷ್ಯತ್ವವು ಯಾವುದು?"

ಹಂಸವು ಹೇಳುತ್ತದೆ :

ಸ್ವಾಧ್ಯಾಯ ಏಷಾಂ ದೇವತ್ವಂ ವ್ರತಂ ಸಾಧುತ್ವಮುಚ್ಯತೇ ।
ಅಸಾಧುತ್ವಂ ಪರೀವಾದೋ ಮೃತ್ಯುರ್ಮಾನುಷ್ಯಮುಚ್ಯತೇ ॥೪೪॥

"ವೇದ-ಶಾಸ್ತ್ರಗಳ ಅಧ್ಯಯನವೇ ಬ್ರಾಹ್ಮಣರಿಗೆ ದೇವತ್ವಸಾಧಕ ವಾಗಿದೆ. ಉತ್ತಮವಾದ ವ್ರತಗಳನ್ನು ಪರಿಪಾಲಿಸುವುದೇ ಅವರ ಸಾಧುತ್ವ. ಇತರರನ್ನು ನಿಂದಿಸುವುದೇ ಅವರಲ್ಲಿನ ಅಸಾಧುತ್ವವಾಗಿದೆ. ಮರಣಧರ್ಮ ವಿರುವುದರಿಂದಲೇ ಅವರು ಮನುಷ್ಯರೆಂದು ಕರೆಯಲ್ಪಡುತ್ತಾರೆ."

ಯುಧಿಷ್ಠಿರ! ಹೀಗೆ ಸಾಧ್ಯರಿಗೂ ಮತ್ತು ಹಂಸಕ್ಕೂ ನಡೆದ ಶ್ರೇಷ್ಠವಾದ ಸಂವಾದವನ್ನು ಯಥಾವತ್ತಾಗಿ ನಾನು ನಿನ್ನೊಡನೆ ಹೇಳಿದ್ದೇನೆ.

ಕ್ಷೇತ್ರಂ ವೈ ಕರ್ಮಣಾಂ ಯೋನಿಃ ಸದ್ಭಾವಃ ಸತ್ಯಮುಚ್ಯತೇ ॥

"ಎಲ್ಲ ಕರ್ಮಗಳಿಗೂ ಈ ಶರೀರವೇ ಮೂಲಕಾರಣವಾಗಿದೆ. ಸದ್ಭಾವವನ್ನೇ ಸತ್ಯವೆಂದು ಹೇಳುತ್ತಾರೆ."

ಿ೯೯ನೆಯ ಅಧ್ಯಾಯವು ಮುಗಿಯಿತು.

ಿ೦೦ನೆಯ ಅಧ್ಯಾಯ — ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಸಾಂಖ್ಯಕ್ಕೂ ಮತ್ತು ಯೋಗಕ್ಕೂ ಇರುವ ವ್ಯತ್ಯಾಸ:
ಯೋಗಮಾರ್ಗದ ಸ್ವರೂಪ, ಸಾಧನೆ, ಫಲ ಮತ್ತು ಪ್ರಭಾವಗಳು

ಯುಧಿಷ್ಠಿರನು ಹೇಳುತ್ತಾನೆ :

ಸಾಂಖ್ಯೇ ಯೋಗೇ ಚ ಮೇ ತಾತ ವಿಶೇಷಂ ವಕ್ತುಮರ್ಹಸಿ ।
ತವ ಧರ್ಮಜ್ಞ ಸರ್ವಂ ಹಿ ವಿದಿತಂ ಕುರುಸತ್ತಮ ॥೧॥

“ಧರ್ಮಜ್ಞನೇ! ಪಿತಾಮಹ! ಸಾಂಖ್ಯ ಮತ್ತು ಯೋಗಗಳಲ್ಲಿ ಒಂದೊಂದಕ್ಕೂ ಇರುವ ವಿಶೇಷಗುಣಗಳನ್ನು ದಯಮಾಡಿ ಹೇಳು. ಕುರುಸತ್ತಮನೇ! ನಿನಗೆ ಎಲ್ಲ ವಿಷಯಗಳೂ ಸಂಪೂರ್ಣವಾಗಿ ತಿಳಿದಿವೆ.”

ಭೀಷ್ಮನು ಹೇಳುತ್ತಾನೆ :

ಸಾಂಖ್ಯಾಃ ಸಾಂಖ್ಯಂ ಪ್ರಶಂಸನ್ತಿ ಯೋಗಾ ಯೋಗಂ ದ್ವಿಜಾತಯಃ ।
ವದನ್ತಿ ಕಾರಣಂ ಶ್ರೇಷ್ಠಂ ಸ್ವಪಕ್ಷೋದ್ಭಾವನಾಯ ವೈ ॥೨॥

“ಯುಧಿಷ್ಠಿರ! ಸಾಂಖ್ಯರು ಸಾಂಖ್ಯವನ್ನೇ ಶ್ರೇಷ್ಠವೆಂದು ಹೇಳುತ್ತಾರೆ. ಯೋಗವನ್ನು ತಿಳಿದ ದ್ವಿಜರು ಯೋಗಮಾರ್ಗವೇ ಶ್ರೇಷ್ಠವೆಂದು ಹೇಳುತ್ತಾರೆ. ಸಾಂಖ್ಯರೂ ಮತ್ತು ಯೋಗಿಗಳೂ ತಮ್ಮ ತಮ್ಮ ಪಕ್ಷಗಳ ಉತ್ಕೃಷ್ಟತೆಯನ್ನು ಪ್ರತಿಪಾದಿಸಲು ಉತ್ತಮೋತ್ತಮವಾದ ಕಾರಣಗಳನ್ನೂ ನಿರೂಪಿಸಿರುತ್ತಾರೆ.

ಅನೀಶ್ವರಃ ಕಥಂ ಮುಚ್ಯೇದಿತ್ಯೇವಂ ಶತ್ರುಕರ್ಶನ ।
ವದನ್ತಿ ಕಾರಣೈಃ ಶ್ರೈಷ್ಠ್ಯಂ ಯೋಗಾಃ ಸಮ್ಯಙ್ಮನೀಷಿಣಃ ॥೩॥

ಶತ್ರುಸೂದನನೇ! ಯೋಗದ ವಿಷಯವನ್ನು ಚೆನ್ನಾಗಿ ತಿಳಿದಿರುವ ವಿದ್ವಾಂಸರು–ಯುಕ್ತಿಯುಕ್ತವಾದ ಕಾರಣಗಳಿಂದ ಯೋಗಮಾರ್ಗದ ಹಿರಿಮೆಯನ್ನು ಪ್ರತಿಪಾದಿಸುತ್ತಾ, ಈಶ್ವರನ ಅಸ್ತಿತ್ವವನ್ನು ಒಪ್ಪಿಕೊಳ್ಳದಿದ್ದರೆ ಮುಕ್ತಿಯು ಹೇಗಾಗುವುದೆಂದು ಪ್ರಶ್ನಿಸುತ್ತಾರೆ? (ಮೋಕ್ಷವನ್ನು ಪಡೆಯಲು ಈಶ್ವರನ ಅಸ್ತಿತ್ವವು ಇರಲೇಬೇಕೆಂಬುದು ಅವರ ಸಿದ್ಧಾಂತವಾಗಿದೆ.)

ವದನ್ತಿ ಕಾರಣಂ ಚೇದಂ ಸಾಂಖ್ಯಾಃ ಸಮ್ಯಗ್ದ್ವಿಜಾತಯಃ ।
ವಿಜ್ಞಾಯೇಹ ಗತೀಃ ಸರ್ವಾ ವಿರಕ್ತೋ ವಿಷಯೇಷು ಯಃ ॥೪॥

ಊರ್ಧ್ವಂ ಸ ದೇಹಾತ್ಸುವ್ಯಕ್ತಂ ವಿಮುಚ್ಯೇದಿತಿ ನಾನ್ಯಥಾ ।
ಏತದಾಹುರ್ಮಹಾಪ್ರಾಜ್ಞಾಃ ಸಾಂಖ್ಯೇ ವೈ ಮೋಕ್ಷದರ್ಶನಮ್ ॥೫॥

ಸಾಂಖ್ಯಮತವನ್ನು ತಿಳಿದಿರುವ ಮಹಾಜ್ಞಾನಿಗಳಾದ ದ್ವಿಜರು ತಮ್ಮ ಮತವನ್ನು ಯುಕ್ತಿಯುಕ್ತವಾದ ಕಾರಣಗಳಿಂದ ಹೀಗೆ ಪ್ರತಿಪಾದಿಸುತ್ತಾರೆ–

'ಊರ್ಧ್ವಗತಿ, ಮಧ್ಯಗತಿ, ಅಧೋಗತಿ–ಇವುಗಳ ಸ್ವರೂಪ, ಕಾರಣ, ನಿವಾರಣೋಪಾಯಗಳನ್ನು ತಿಳಿದುಕೊಂಡು ಯಾವನು ವಿಷಯಸುಖಗಳಿಂದ ವಿರಕ್ತನಾಗುವನೋ–ಅವನು ದೇಹತ್ಯಾಗಾನಂತರ ಮುಕ್ತನಾಗುತ್ತಾನೆ. ಈ ವಿಷಯವು ಸಾಕ್ಷಾತ್ತಾಗಿ ಎಲ್ಲರ ಅನುಭವಕ್ಕೂ ಬರುವುದಾಗಿದೆ. ಬೇರೆ ಯಾವುದೇ ಉಪಾಯದಿಂದಲೂ ಮೋಕ್ಷವನ್ನು ಪಡೆಯಲು ಸಾಧ್ಯವೇ ಆಗುವುದಿಲ್ಲ'–ಹೀಗೆ ಸಾಂಖ್ಯರು ಮೋಕ್ಷಪ್ರಾಪ್ತಿಯ ಉಪಾಯವನ್ನು ಹೇಳುತ್ತಾರೆ.

ಸ್ವಪಕ್ಷೇ ಕಾರಣಂ ಗ್ರಾಹ್ಯಂ ಸಮಯೇ ವಚನಂ ಹಿತಮ್ ।
ಶಿಷ್ಟಾನಾಂ ಹಿ ಮತಂ ಗ್ರಾಹ್ಯಂ ತ್ವದ್ವಿಧೈಃ ಶಿಷ್ಟಸಮ್ಮತೈಃ ॥೬॥

ಆಯಾ ಪಕ್ಷದವರಿಗೆ ಆಯಾ ಪಕ್ಷದ ವಿದ್ವಾಂಸರು ಹೇಳುವ ಯುಕ್ತಿಯುಕ್ತವಾದ ಕಾರಣಗಳು ಗ್ರಾಹ್ಯವಾಗಿರುತ್ತವೆ. ಸಿದ್ಧಾಂತದ ವಿಷಯದಲ್ಲಿ ಆಯಾ ಮತಗಳಿಗೆ ಸಂಬಂಧಿಸಿದ ಯುಕ್ತಿಯುಕ್ತವಾದ ಮಾತುಗಳೂ ಹಿತವಾಗಿರುತ್ತವೆ. ಆದರೆ ಶಿಷ್ಟಸಮ್ಮತರಾದ ನಿನ್ನಂತಹವರು ಶಿಷ್ಟರ ಮಾತನ್ನೇ ಗ್ರಹಿಸಬೇಕು.

ಪ್ರತ್ಯಕ್ಷಹೇತವೋ ಯೋಗಾಃ ಸಾಂಖ್ಯಾಃ ಶಾಸ್ತ್ರವಿನಿಶ್ಚಯಾಃ ।
ಉಭೇ ಚೈತೇ ಮತೇ ತತ್ತ್ವೇ ಮಮ ತಾತ ಯುಧಿಷ್ಠಿರ ॥೭॥

ಯೋಗದ ವಿದ್ವಾಂಸರು ಪ್ರತ್ಯಕ್ಷಪ್ರಮಾಣವನ್ನೇ ಪ್ರಧಾನವನ್ನಾಗಿಟ್ಟುಕೊಂಡಿರುತ್ತಾರೆ. ಸಾಂಖ್ಯರು ಶಾಸ್ತ್ರಪ್ರಮಾಣದಲ್ಲಿಯೇ ನಿಶ್ಚಯವಾದ ಬುದ್ಧಿಯುಳ್ಳವರಾಗಿದ್ದಾರೆ. ಈ ಎರಡೂ ಮತಗಳೂ ತಾತ್ತ್ವಿಕವಾಗಿಯೇ ಇವೆಯೆಂಬುದು ನನ್ನ ಅಭಿಪ್ರಾಯವಾಗಿದೆ.

ಉಭೇ ಚೈತೇ ಮತೇ ಜ್ಞಾತೇ ನೃಪತೇ ಶಿಷ್ಟಸಮ್ಮತೇ ।
ಅನುಷ್ಠಿತೇ ಯಥಾಶಾಸ್ತ್ರಂ ನಯೇತಾಂ ಪರಮಾಂ ಗತಿಮ್ ॥೮॥

ನರೇಶ್ವರನೇ! ಈ ಎರಡೂ ಮತಗಳೂ ಶಿಷ್ಟಸಮ್ಮತವಾಗಿವೆ. ಶಾಸ್ತ್ರಾನುಸಾರವಾಗಿ ಅನುಷ್ಠಾನಮಾಡಿದರೆ ಸಾಂಖ್ಯ-ಯೋಗಗಳೆಂಬ ಎರಡು ಮತಗಳೂ ಮನುಷ್ಯನನ್ನು ಪರಮಪದಕ್ಕೆ ಒಯ್ಯುತ್ತವೆ.

ತುಲ್ಯಂ ಶೌಚಂ ತಪೋಯುಕ್ತಂ ದಯಾ ಭೂತೇಷು ಚಾನಘ ।
ವ್ರತಾನಾಂ ಧಾರಣಂ ತುಲ್ಯಂ ದರ್ಶನಂ ನ ಸಮಂ ತಯೋಃ ॥೯॥

ಅಂತಶ್ಶುದ್ಧಿ-ಬಹಿಶ್ಶುದ್ಧಿಗಳು, ತಪಸ್ಸು, ಪ್ರಾಣಿಗಳಲ್ಲಿ ದಯೆ, ಅಹಿಂಸೆ-ಸತ್ಯ-ಅಸ್ತೇಯಾದಿ ವ್ರತಗಳ ಪಾಲನೆ–ಇತ್ಯಾದಿ ನಿಯಮಗಳೆಲ್ಲವೂ ಎರಡು ಮತಗಳಿಗೂ ಸಮಾನವಾಗಿಯೇ ಇವೆ. ಆದರೆ ತತ್ತ್ವದಲ್ಲಿ ಇಬ್ಬರಿಗೂ ಮತಭೇದವಿದೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯದಿ ತುಲ್ಯಂ ವ್ರತಂ ಶೌಚಂ ದಯಾ ಚಾತ್ರ ಫಲಂ ತಥಾ ।
ನ ತುಲ್ಯಂ ದರ್ಶನಂ ಕಸ್ಮಾತ್ತನ್ಮೇ ಬ್ರೂಹಿ ಪಿತಾಮಹ ॥೧೦॥

"ಅಹಿಂಸೆ-ಸತ್ಯ-ಅಸ್ತೇಯಾದಿ ವ್ರತಗಳೂ, ಶೌಚಾಚಾರಗಳೂ, ಪ್ರಾಣಿದಯೆ ಮುಂತಾದುವುಗಳೂ ಎರಡೂ ಮತಗಳವರಿಗೂ ಒಂದೇ ಆಗಿದ್ದು ಆ ಕರ್ಮಗಳ ಫಲವೂ ಒಂದೇ ಆಗಿರುವುದಾದರೆ–ತತ್ತ್ವದಲ್ಲಿಯೂ ಅವು ಏಕೆ ಸಮಾನವಾಗಿಲ್ಲ? ಪಿತಾಮಹನೇ! ಈ ವಿಷಯವನ್ನು ನನಗೆ ತಿಳಿಸು."

ಭೀಷ್ಮನು ಹೇಳುತ್ತಾನೆ :

ರಾಗಂ ಮೋಹಂ ತಥಾ ಸ್ನೇಹಂ ಕಾಮಂ ಕ್ರೋಧಂ ಚ ಕೇವಲಮ್ ।
ಯೋಗಾಚ್ಛಿತ್ತ್ವಾ ತತೋ ದೋಷಾನ್ಪಞ್ಚೈತಾನ್ಪ್ರಾಪ್ನುವನ್ತಿ ತತ್ ॥೧೧॥

"ಯೋಗಿಯು ಕೇವಲ ಯೋಗಬಲದಿಂದ ರಾಗ, ಮೋಹ, ಸ್ನೇಹ, ಕಾಮ, ಕ್ರೋಧ–ಈ ಐದು ದೋಷಗಳನ್ನೂ ಮೂಲೋತ್ಪಾಟನಮಾಡಿ ಪರಮಪದವನ್ನು ಸೇರುತ್ತಾನೆ.

ಯಥಾ ಚಾನಿಮಿಷಾಃ ಸ್ಥೂಲಾ ಜಾಲಂ ಛಿತ್ತ್ವಾ ಪುನರ್ಜಲಮ್ ।
ಪ್ರಾಪ್ನುವನ್ತಿ ತಥಾ ಯೋಗಾಸ್ತತ್ಪದಂ ವೀತಕಲ್ಮಷಾಃ ॥೧೨॥

ಯಾವ ರೀತಿಯಲ್ಲಿ ದೊಡ್ಡ-ದೊಡ್ಡ ಮೀನುಗಳು ತಮ್ಮನ್ನು ಬಂಧಿಸಿರುವ ಬಲೆಯನ್ನೇ ಕತ್ತರಿಸಿ ಪುನಃ ನೀರನ್ನು ಸೇರುತ್ತವೆಯೋ–ಅದೇ

ರೀತಿಯಲ್ಲಿ ಯೋಗಿಗಳು ಯೋಗಬಲದಿಂದ ಭವಬಂಧನಗಳೆಲ್ಲವನ್ನೂ ಬಿಡಿಸಿಕೊಂಡು ಪಾಪರಹಿತರಾಗಿ ಪರಮಪದವನ್ನು ಸೇರುತ್ತಾರೆ.

ತಥೈವ ವಾಗುರಾಂ ಛಿತ್ತ್ವಾ ಬಲವನ್ತೋ ಯಥಾ ಮೃಗಾಃ ।
ಪ್ರಾಪ್ನುಯುರ್ವಿಮಲಂ ಮಾರ್ಗಂ ವಿಮುಕ್ತಾಃ ಸರ್ವಬನ್ಧನೈಃ ॥೧೩॥

ಲೋಭಜಾನಿ ತಥಾ ರಾಜನ್ಬನ್ಧನಾನಿ ಬಲಾನ್ವಿತಾಃ ।
ಛಿತ್ತ್ವಾ ಯೋಗಾಃ ಪರಂ ಮಾರ್ಗಂ ಗಚ್ಛನ್ತಿ ವಿಮಲಂ ಶಿವಮ್ ॥

ಹಾಗೆಯೇ ಬಲಿಷ್ಠವಾದ ಮೃಗಗಳು ತಮ್ಮನ್ನು ಬಂಧಿಸಿರುವ ಬಲೆಯನ್ನು ಕಡಿದು ಸಕಲವಿಧವಾದ ಬಂಧನಗಳಿಂದಲೂ ಪಾರಾಗಿ ಕಷ್ಟಗಳಿಂದ ರಹಿತವಾದ ಮಾರ್ಗವನ್ನು ಹಿಡಿದುಹೋಗುತ್ತವೆ. ಅದೇ ರೀತಿಯಲ್ಲಿ ಬಲಿಷ್ಠರಾದ ಯೋಗಿಗಳು ತಮ್ಮ ಯೋಗಬಲದಿಂದ ಲೋಭದಿಂದ ಹುಟ್ಟುವ ಎಲ್ಲ ಬಂಧನಗಳನ್ನೂ ಕಡಿದುಹಾಕಿ ವಿಮಲವಾದ, ಮಂಗಳಕರವಾದ ಮತ್ತು ಶ್ರೇಷ್ಠವಾದ ಮಾರ್ಗವನ್ನು ಹಿಡಿದು ಹೋಗುತ್ತಾರೆ.

ಅಬಲಾಶ್ಚ ಮೃಗಾ ರಾಜನ್ವಾಗುರಾಸು ತಥಾ ಪರೇ ।
ವಿನಶ್ಯನ್ತಿ ನ ಸನ್ದೇಹಸ್ತದ್ವದ್ಯೋಗಬಲಾದೃತೇ ॥೧೫॥

ಯಾವ ರೀತಿಯಲ್ಲಿ ದುರ್ಬಲವಾದ ಮೃಗಗಳೂ ಮತ್ತು ಬಲೆಯಲ್ಲಿ ಸಿಕ್ಕಿಹಾಕಿಕೊಂಡಿರುವ ಇತರ ಪ್ರಾಣಿಗಳೂ ನಿಸ್ಸಂಶಯವಾಗಿ ವಿನಾಶ ಹೊಂದುತ್ತವೆಯೋ–ಅದೇ ರೀತಿಯಲ್ಲಿ ಯೋಗಬಲವಿಲ್ಲದ ಮನುಷ್ಯನೂ ಸಂಸಾರಬಂಧನದಿಂದ ತಪ್ಪಿಸಿಕೊಳ್ಳಲಾಗದೇ ವಿನಾಶಹೊಂದುತ್ತಾನೆ.

ಬಲಹೀನಾಶ್ಚ ಕೌನ್ತೇಯ ಯಥಾ ಜಾಲಂ ಗತಾ ಝಷಾಃ ।
ವಧಂ ಗಚ್ಛನ್ತಿ ರಾಜೇನ್ದ್ರ ಯೋಗಾಸ್ತದ್ವತ್ಸುದುರ್ಬಲಾಃ ॥೧೬॥

ಬೆಸ್ತನ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿರುವ ದುರ್ಬಲವಾದ ಮೀನುಗಳು ಯಾವ ರೀತಿಯಲ್ಲಿ ಬಲೆಯಿಂದ ಬಿಡಿಸಿಕೊಳ್ಳಲಾಗದೇ ವಧಿಸಲ್ಪಡುತ್ತವೆಯೋ–ಅದೇ ದುರವಸ್ಥೆಯು ಯೋಗಬಲದಿಂದ ಸರ್ವಥಾ ಶೂನ್ಯರಾಗಿರುವ ಮನುಷ್ಯರಿಗೂ ಪ್ರಾಪ್ತವಾಗುತ್ತದೆ.

ಯಥಾ ಚ ಶಕುನಾಃ ಸೂಕ್ಷ್ಮಂ ಪ್ರಾಪ್ಯ ಜಾಲಮರಿಂದಮ ।
ತತ್ರ ಸಕ್ತಾ ವಿಪದ್ಯನ್ತೇ ಮುಚ್ಯನ್ತೇ ಚ ಬಲಾನ್ವಿತಾಃ ॥೧೭॥

ಕರ್ಮಜೈರ್ಬನ್ಧನೈರ್ಬದ್ಧಾಸ್ತದ್ವದ್ಯೋಗಾಃ ಪರಂತಪ ।
ಅಬಲಾ ವೈ ವಿನಶ್ಯನ್ತಿ ಮುಚ್ಯನ್ತೇ ಚ ಬಲಾನ್ವಿತಾಃ ॥೧೮॥

ಯಾವ ರೀತಿಯಲ್ಲಿ ಸೂಕ್ಷ್ಮವಾದ ಬಲೆಯಲ್ಲಿ ಸಿಕ್ಕಿಹಾಕಿಕೊಂಡ ದುರ್ಬಲವಾದ ಪಕ್ಷಿಗಳು ಬೇಡನ ಕೈಗೆ ಸಿಕ್ಕಿ ನಾಶಹೊಂದುವುವೋ–ಅದೇ ರೀತಿಯಲ್ಲಿ ಕರ್ಮಗಳಿಂದ ಹುಟ್ಟಿದ ಫಲರೂಪವಾದ ಪಾಶಗಳಿಂದ ನಿಬದ್ಧರಾದ ಮತ್ತು ಯೋಗಬಲವಿಲ್ಲದ ಮನುಷ್ಯರು ವಿನಾಶಹೊಂದುತ್ತಾರೆ. ಬಲಿಷ್ಠವಾದ ಪಕ್ಷಿಗಳು ಬಲೆಯಿಂದ ಬಿಡಿಸಿಕೊಂಡುಹೋಗುವಂತೆ ಯೋಗಬಲಾನ್ವಿತರಾದ ಮನುಷ್ಯರು ಕರ್ಮಬಂಧನಗಳನ್ನು ಕತ್ತರಿಸಿಹಾಕಿ ಮುಕ್ತರಾಗುತ್ತಾರೆ.

ಅಲ್ಪಕಶ್ಚ ಯಥಾ ರಾಜನ್ವಹ್ನಿಃ ಶಾಮ್ಯತಿ ದುರ್ಬಲಃ ।
ಆಕ್ರಾನ್ತ ಇನ್ಧನೈಃ ಸ್ಥೂಲೈಸ್ತದ್ವದ್ಯೋಗೋಽಬಲಃ ಪ್ರಭೋ ॥೧೯॥

ಯಾವ ರೀತಿಯಲ್ಲಿ ಸ್ವಲ್ಪವೇ ಬೆಂಕಿಯು ದಪ್ಪ-ದಪ್ಪ ಕಟ್ಟಿಗೆಗಳಿಂದ ಆವರಿಸಲ್ಪಟ್ಟು ಬಲಹೀನವಾಗಿ ಆರಿಹೋಗುವುದೋ–ಹಾಗೆಯೇ ಅಲ್ಪವಾದ ಯೋಗಬಲವಿರುವವನು ಇತರ ಮಹಾಸಾಧನಗಳಿಂದ ಆವರಿಸಲ್ಪಟ್ಟು ಅವುಗಳ ಭಾರವನ್ನು ತಡೆಯಲಾರದೇ ನಾಶಹೊಂದುತ್ತಾನೆ. (ಕಟ್ಟಿಗೆಗಳು ಬೆಂಕಿಯು ಉರಿಯುವುದಕ್ಕೆ ಸಾಧನಗಳು. ಆದರೂ ಅಗ್ನಿಯು ಕಡಿಮೆಯಾಗಿದ್ದರೆ ಆ ದಹನಸಾಧನಸಾಮಗ್ರಿಯೇ ಅಗ್ನಿಯ ನಾಶಕ್ಕೆ ಕಾರಣವಾಗುತ್ತದೆ. ಹಾಗೆಯೇ ಯೋಗಾಗ್ನಿಯು ಬಲವಾಗಿರದಿದ್ದರೆ ಮೋಕ್ಷದ ಇತರ ಮಹಾಸಾಧನಸಂಪತ್ತುಗಳೂ ಸಾಧಕನಿಗೆ ಬರೀ ಹೊರೆಯಾಗಿ ಅವನ ನಾಶಕ್ಕೇ ಕಾರಣವಾಗುತ್ತವೆ.)

ಸ ಏವ ಚ ಯದಾ ರಾಜನ್ವಹ್ನಿರ್ಜಾತಬಲಃ ಪುನಃ ।
ಸಮೀರಣಗತಃ ಕ್ಷಿಪ್ರಂ ದಹೇತ್ಕೃತ್ಸ್ನಾಂ ಮಹೀಮಪಿ ॥೨೦॥

ಅದೇ ಅಲ್ಪವಾದ ಬೆಂಕಿಯೇ ಗಾಳಿಯ ಸಹಾಯದಿಂದ ವೃದ್ಧಿಹೊಂದಿ ಬಲಿಷ್ಠವಾದರೆ ಅಖಂಡವಾದ ಭೂಮಿಯನ್ನೇ ಸುಟ್ಟುಹಾಕಬಲ್ಲುದು.

ತದ್ವಜ್ಜಾತಬಲೋ ಯೋಗೀ ದೀಪ್ತತೇಜಾ ಮಹಾಬಲಃ ।
ಅನ್ತಕಾಲ ಇವಾದಿತ್ಯಃ ಕೃತ್ಸ್ನಂ ಸಂಶೋಷಯೇಜ್ಜಗತ್ ॥೨೧॥

ಅದೇ ರೀತಿಯಲ್ಲಿ ಮಹಾಬಲನಾದ ಯೋಗಿಯು ಯೋಗಾಭ್ಯಾಸದಿಂದ ತನ್ನ ಬಲವನ್ನು ಮತ್ತಷ್ಟು ಅಧಿಕಗೊಳಿಸಿಕೊಂಡು ಪ್ರದೀಪ್ತವಾದ ತೇಜಸ್ಸನ್ನು ಹೊಂದಿ ಪ್ರಳಯಕಾಲದ ಸೂರ್ಯನು ಸಮಸ್ತಜಗತ್ತನ್ನೂ ಶೋಷಿಸಿಬಿಡುವಂತೆ–ತನ್ನಲ್ಲಿಯೇ ಇರುವ ರಾಗಾದಿದೋಷಗಳನ್ನು ವಿನಾಶಗೊಳಿಸುತ್ತಾನೆ.

ದುರ್ಬಲಶ್ಚ ಯಥಾ ರಾಜನ್ಸ್ರೋತಸಾ ಹ್ರಿಯತೇ ನರಃ ।
ಬಲಹೀನಸ್ತಥಾ ಯೋಗೋ ವಿಷಯೈರ್ಹ್ರಿಯತೇಽವಶಃ ॥೨೨॥

ನದಿಯನ್ನು ದಾಟುವ ಸಮಯದಲ್ಲಿ ದುರ್ಬಲನಾದವನು ಯಾವ ರೀತಿಯಲ್ಲಿ ಪ್ರವಾಹದಿಂದ ಸೆಳೆಯಲ್ಪಡುವನೋ–ಅದೇ ರೀತಿಯಲ್ಲಿ ಬಲಹೀನನಾದ ಯೋಗಿಯು ಇಂದ್ರಿಯಾಧೀನನಾಗಿ ವಿಷಯಗಳಿಂದ ಸೆಳೆಯಲ್ಪಡುತ್ತಾನೆ.

ತದೇವ ಚ ಮಹಾಸ್ರೋತೋ ವಿಷ್ಟಮ್ಭಯತಿ ವಾರಣಃ ।
ತದ್ವದ್ಯೋಗಬಲಂ ಲಬ್ಧ್ವಾ ವ್ಯೂಹತೇ ವಿಷಯಾನ್ಬಹೂನ್ ॥೨೩॥

ಆನೆಯು ಅದೇ ಮಹಾಪ್ರವಾಹವನ್ನೇ ಅಲ್ಲೋಲಕಲ್ಲೋಲಗೊಳಿಸುತ್ತದೆ. ಅದೇ ರೀತಿಯಲ್ಲಿ ಯೋಗಿಯು ಯೋಗಬಲವನ್ನು ಹೊಂದಿ ಬಹುಸಂಖ್ಯಾತವಾದ ವಿಷಯಗಳನ್ನು ತಡೆದುಬಿಡುತ್ತಾನೆ. (ಇಂದ್ರಿಯಗಳೂ ಮತ್ತು ಇಂದ್ರಿಯಾರ್ಥಗಳೂ ಅವನ ವಶದಲ್ಲಿರುತ್ತವೆಯೇ ಹೊರತು ಯೋಗಿಯು ಅವುಗಳ ಪ್ರವಾಹಕ್ಕೆ ಸಿಕ್ಕಿ ಕೊಚ್ಚಿಹೋಗುವುದಿಲ್ಲ.)

ವಿಶನ್ತಿ ಚಾವಶಾಃ ಪಾರ್ಥ ಯೋಗಾದ್ಯೋಗಬಲಾನ್ವಿತಾಃ ।
ಪ್ರಜಾಪತೀನೃಷೀನ್ದೇವಾನ್ಮಹಾಭೂತಾನಿ ಚೇಶ್ವರಾಃ ॥೨೪॥

ಯೋಗಬಲದಿಂದ ಕೂಡಿದ ಯೋಗಿಗಳು ಯೋಗದ ಮೂಲಕವಾಗಿ–ಪ್ರಜಾಪತಿಗಳು, ಋಷಿಗಳು, ದೇವತೆಗಳು ಮತ್ತು ಪಂಚಮಹಾಭೂತಗಳು–ಈ ಎಲ್ಲದರಲ್ಲಿಯೂ ಸ್ವತಂತ್ರವಾಗಿ ಪ್ರವೇಶಿಸುತ್ತಾರೆ. ಹೀಗೆ ಮಾಡಲು ಅವರು ಸಮರ್ಥರಾಗಿರುತ್ತಾರೆ.

ನ ಯಮೋ ನಾನ್ತಕಃ ಕ್ರುದ್ಧೋ ನ ಮೃತ್ಯುರ್ಭೀಮವಿಕ್ರಮಃ ।
ಈಶತೇ ನೃಪತೇ ಸರ್ವೇ ಯೋಗಸ್ಯಾಮಿತತೇಜಸಃ ॥೨೫॥

ಮಹಾರಾಜ! ಕ್ರುದ್ಧನಾದ ಯಮನಾಗಲೀ, ಮಹಾಪರಾಕ್ರಮಿಯಾದ ಮೃತ್ಯುವಾಗಲೀ–ಮಹಾತೇಜಸ್ವಿಯಾದ ಯೋಗಿಯ ಮೇಲೆ ತಮ್ಮ ಅಧಿಕಾರವನ್ನು ಚಲಾಯಿಸಲಾರರು.

ಆತ್ಮನಾಂ ಚ ಸಹಸ್ರಾಣಿ ಬಹೂನಿ ಭರತರ್ಷಭ ।
ಯೋಗಃ ಕುರ್ಯಾದ್ಬಲಂ ಪ್ರಾಪ್ಯ ತೈಶ್ಚ ಸರ್ವೈರ್ಮಹೀಂ ಚರೇತ್ ॥

ಯೋಗಿಯು ಯೋಗಬಲವನ್ನು ಹೊಂದಿ ತನ್ನನ್ನು ಅನೇಕ ಸಹಸ್ರದೇಹಗಳುಳ್ಳವನನ್ನಾಗಿ ಮಾಡಿಕೊಳ್ಳಬಲ್ಲನು. ಹಾಗೆ ಸೃಷ್ಟಿಸಿದ ಯೋಗಿಗಳೊಡನೆ ಪೃಥ್ವಿಯಲ್ಲಿ ಸಂಚರಿಸಬಲ್ಲನು.

ಪ್ರಾಪ್ನುಯಾದ್ವಿಷಯಾಂಶ್ಚೈವ ಪುನಶ್ಚೋಗ್ರಂ ತಪಶ್ಚರೇತ್ ।
ಸಂಕ್ಷಿಪೇಚ್ಚ ಪುನಸ್ತಾತ ಸೂರ್ಯಸ್ತೇಜೋಗುಣಾನಿವ ॥೨೭॥

ಯೋಗಬಲದಿಂದ ಯುಕ್ತನಾದವನು ಅಂತಹ ಅನೇಕಸಹಸ್ರರೂಪಗಳ ಮೂಲಕವಾಗಿ ವಿಷಯಸುಖಗಳನ್ನೂ ಅನುಭವಿಸಬಲ್ಲನು. ಪುನಃ ಅತ್ಯುಗ್ರವಾದ ತಪಸ್ಸನ್ನೂ ಮಾಡಬಲ್ಲನು. ಸೂರ್ಯನು ಸಾಯಂಕಾಲ ವಾಗುತ್ತಲೇ ತನ್ನ ಕಿರಣಗಳನ್ನು ಒಳಕ್ಕೆ ಸೆಳೆದುಕೊಳ್ಳುವಂತೆ–ಸೃಷ್ಟಿಸಿದ್ದ ಎಲ್ಲ ರೂಪಗಳನ್ನೂ ತನ್ನಲ್ಲಿಯೇ ಐಕ್ಯಮಾಡಿಕೊಳ್ಳಬಲ್ಲನು.

ಬಲಸ್ಥಸ್ಯ ಹಿ ಯೋಗಸ್ಯ ಬನ್ಧನೇಶಸ್ಯ ಪಾರ್ಥಿವ ।
ವಿಮೋಕ್ಷಪ್ರಭವಿಷ್ಣುತ್ವಮುಪಪನ್ನಮಸಂಶಯಮ್ ॥೨೮॥

ಮಹಾರಾಜ! ಅಂತಹ ಯೋಗಿಯು ಮಹಾಬಲಿಷ್ಠನು. ಯಾವ ತತ್ತ್ವವನ್ನಾದರೂ ಕಟ್ಟಿಹಾಕುವ ಸಾಮರ್ಥ್ಯವುಳ್ಳವನು. ಹೀಗೆ ಯಾವುದನ್ನಾದರೂ ಬಂಧಿಸುವ ಸಾಮರ್ಥ್ಯವುಳ್ಳ ಅವನಿಗೆ ಯಾವುದನ್ನಾದರೂ ಬಂಧನದಿಂದ ಬಿಡುಗಡೆಮಾಡುವ ಮಹಾಸಾಮರ್ಥ್ಯವೂ ಇದೆಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಬಲಾನಿ ಯೋಗಪ್ರಾಪ್ತಾನಿ ಮಯ್ಯೈತಾನಿ ವಿಶಾಮ್ಪತೇ ।
ನಿದರ್ಶನಾರ್ಥಂ ಸೂಕ್ಷ್ಮಾಣಿ ವಕ್ಷ್ಯಾಮಿ ಚ ಪುನಸ್ತವ ॥೨೯॥

ಪ್ರಜಾಪಾಲಕನೇ! ಯೋಗದಿಂದ ಪಡೆಯಬಹುದಾದ ಬಲದ ವಿಷಯವಾಗಿ ನಿದರ್ಶನಾರ್ಥವಾಗಿ ಮತ್ತೂ ಕೆಲವು ಸೂಕ್ಷ್ಮವಿಷಯಗಳನ್ನು ಪುನಃ ಹೇಳುತ್ತೇನೆ.

ಆತ್ಮನಶ್ಚ ಸಮಾಧಾನೇ ಧಾರಣಾಂ ಪ್ರತಿ ವಾ ವಿಭೋ ।
ನಿದರ್ಶನಾನಿ ಸೂಕ್ಷ್ಮಾಣಿ ಶೃಣು ಮೇ ಭರತರ್ಷಭ ॥೩೦॥

ಭರತಶ್ರೇಷ್ಠನೇ! ಆತ್ಮಸಮಾಧಾನವನ್ನು ಅಥವಾ ಧಾರಣೆಯನ್ನು ಕುರಿತು ಸೂಕ್ಷ್ಮವಾದ ನಿದರ್ಶನಗಳನ್ನು ಹೇಳುತ್ತೇನೆ. ಅವುಗಳನ್ನು ಕೇಳು.

ಅಪ್ರಮತ್ತೋ ಯಥಾ ಧನ್ವೀ ಲಕ್ಷ್ಯಂ ಹನ್ತಿ ಸಮಾಹಿತಃ ।
ಯುಕ್ತಃ ಸಮ್ಯಕ್ತಥಾ ಯೋಗೀ ಮೋಕ್ಷಂ ಪ್ರಾಪ್ನೋತ್ಯಸಂಶಯಮ್ ॥

ಜಾಗರೂಕನಾಗಿರುವ ಬಿಲ್ಲುಗಾರನು ಏಕಾಗ್ರಚಿತ್ತನಾಗಿ ಲಕ್ಷ್ಯವನ್ನು ಭೇದಿಸುವಂತೆ–ಪರಮಾತ್ಮನ ಧ್ಯಾನದಲ್ಲಿಯೇ ಏಕಾಗ್ರತೆಯನ್ನು ಹೊಂದಿರುವ ಯೋಗಿಯು ನಿಸ್ಸಂದೇಹವಾಗಿ ಮೋಕ್ಷವನ್ನು ಹೊಂದುತ್ತಾನೆ.

ಸ್ನೇಹಪೂರ್ಣೇ ಯಥಾ ಪಾತ್ರೇ ಮನ ಆಧಾಯ ನಿಶ್ಚಲಮ್ ।
ಪುರುಷೋ ಯುಕ್ತ ಆರೋಹೇತ್ಸೋಪಾನಂ ಯುಕ್ತಮಾನಸಃ ॥೩೨॥
ಯುಕ್ತಸ್ತಥಾಯಮಾತ್ಮಾನಂ ಯೋಗಃ ಪಾರ್ಥಿವ ನಿಶ್ಚಲಮ್ ।
ಕರೋತ್ಯಮಲಮಾತ್ಮಾನಂ ಭಾಸ್ಕರೋಪಮದರ್ಶನಮ್ ॥೩೩॥

ತಲೆಯ ಮೇಲೆ ಹೊತ್ತಿರುವ ಎಣ್ಣೆತುಂಬಿದ ಪಾತ್ರೆಯ ಮೇಲೆಯೇ ನಿಶ್ಚಲವಾದ ಮನಸ್ಸನ್ನಿಟ್ಟು ಪಾತ್ರೆಯಲ್ಲಿರುವ ಎಣ್ಣೆಯು ಸ್ವಲ್ಪವಾದರೂ ಚೆಲ್ಲಿಹೋಗದ ರೀತಿಯಲ್ಲಿ ಕುಶಲನಾದ ಪುರುಷನು ಮೆಟ್ಟಲುಗಳನ್ನು ಹತ್ತಿ ಮೇಲಕ್ಕೆ ಹೋಗುವಂತೆ–ಯೋಗಿಯು ಯೋಗಯುಕ್ತವಾದ ಮನಸ್ಸಿನಿಂದ ಕೂಡಿದವನಾಗಿ ಆತ್ಮವನ್ನು ಪರಮಾತ್ಮನಲ್ಲಿ ಸೇರಿಸಿದಾಗ ಅವನ ಆತ್ಮವು ಅತ್ಯಂತನಿರ್ಮಲವೂ, ಸ್ಥಿರವೂ, ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದುದೂ ಆಗುತ್ತದೆ.

ಯಥಾ ಚ ನಾವಂ ಕೌಂತೇಯ ಕರ್ಣಧಾರಃ ಸಮಾಹಿತಃ ।
ಮಹಾರ್ಣವಗತಾಂ ಶೀಘ್ರಂ ನಯೇತ್ಪಾರ್ಥಿವಸತ್ತಮ ॥೩೪॥

ತದ್ವದಾತ್ಮಸಮಾಧಾನಂ ಯುಕ್ತ್ವಾ ಯೋಗೇನ ತತ್ತ್ವವಿತ್ ।
ದುರ್ಗಮಂ ಸ್ಥಾನಮಾಪ್ನೋತಿ ಹಿತ್ವಾ ದೇಹಮಿಮಂ ನೃಪ ॥೩೫॥

ಕುಂತೀಪುತ್ರನೇ! ಯಾವ ರೀತಿಯಲ್ಲಿ ಜಾಗರೂಕನಾದ ನಾವಿಕನು ಸಮುದ್ರಕ್ಕೆ ಹೋದ ನೌಕೆಯನ್ನು ಶೀಘ್ರವಾಗಿ ನಿರ್ದಿಷ್ಟವಾದ ಸ್ಥಳಕ್ಕೆ ಒಯ್ಯುವನೋ–ಅದೇ ರೀತಿಯಲ್ಲಿ ತತ್ತ್ವವಿದನಾದ ಯೋಗಿಯು ಯೋಗದ ಮೂಲಕವಾಗಿ ಆತ್ಮನನ್ನು ಪರಮಾತ್ಮನಲ್ಲಿ ಯೋಜಿಸಿ ಸಮಾಧಿಯೋಗವನ್ನೇ ಅಭ್ಯಾಸಮಾಡುತ್ತಾ ದೇಹವನ್ನು ತ್ಯಜಿಸಿ ದುರ್ಗಮವಾದ ಸ್ಥಾನವನ್ನು (ಪರಮಪದವನ್ನು) ಹೊಂದುತ್ತಾನೆ.

ಸಾರಥಿಶ್ಚ ಯಥಾ ಯುಕ್ತ್ವಾ ಸದಶ್ವಾನ್ಸುಸಮಾಹಿತಃ ।
ದೇಶಮಿಷ್ಟಂ ನಯತ್ಯಾಶು ಧನ್ವಿನಂ ಪುರುಷರ್ಷಭ ॥೩೬॥

ತಥೈವ ನೃಪತೇ ಯೋಗೀ ಧಾರಣಾಸು ಸಮಾಹಿತಃ ।
ಪ್ರಾಪ್ನೋತ್ಯಾಶು ಪರಂ ಸ್ಥಾನಂ ಲಕ್ಷ್ಯಂ ಮುಕ್ತ ಇವಾಶುಗಃ ॥೩೭॥

ಯಾವ ರೀತಿಯಲ್ಲಿ ಅತ್ಯಂತಜಾಗರೂಕನಾಗಿರುವ ಸಾರಥಿಯು ಒಳ್ಳೆಯ ಕುದುರೆಗಳನ್ನು ರಥಕ್ಕೆ ಹೂಡಿ, ಧನುರ್ಧರನಾದ ಯೋಧನನ್ನು ಅಭೀಷ್ಟವಾದ ಸ್ಥಳಕ್ಕೆ ಬೇಗನೆ ಒಯ್ಯುವನೋ – ಅದೇ ರೀತಿಯಲ್ಲಿ ನಾಭಿಚಕ್ರ, ಹೃದಯ, ಜಿಹ್ವಾಗ್ರ, ನಾಸಾಗ್ರ, ಶಿರಸ್ಸು – ಇವೇ ಮೊದಲಾದ ಧಾರಣಗಳಲ್ಲಿ ಏಕಾಗ್ರಚಿತ್ತನಾಗಿರುವ ಯೋಗಿಯು ತನ್ನ ಮನಸ್ಸನ್ನು ತನಗೆ ಇಷ್ಟವಾದ ಪರಬ್ರಹ್ಮದ ಕಡೆಗೆ ಒಯ್ಯುತ್ತಾನೆ. ಧನುಸ್ಸಿನಿಂದ ಮುಕ್ತವಾದ ಬಾಣವು ಲಕ್ಷ್ಯದ ಕಡೆಗೆ ಶೀಘ್ರವಾಗಿ ಹೋಗುವ ರೀತಿಯಲ್ಲಿ–ಬಹಳ ಬೇಗ ಪರಮಪದವನ್ನು ಸೇರುತ್ತಾನೆ.

ಪ್ರವೇಶ್ಯಾತ್ಮನಿ ಚಾತ್ಮಾನಂ ಯೋಗೀ ತಿಷ್ಠತಿ ಯೋಽಚಲಃ ।
ಪಾಪಂ ಹನ್ತಿ ಪುನೀತಾನಾಂ ಪದಮಾಪ್ನೋತಿ ಸೋಽಜರಮ್ ॥೩೮॥

ಯಾವ ಯೋಗಿಯು ಸಮಾಧಿಯ ಮೂಲಕವಾಗಿ ಪರಮಾತ್ಮನಲ್ಲಿ

ಆತ್ಮನನ್ನು ಸ್ಥಿರಗೊಳಿಸಿ ಅಚಲನಾಗಿರುವನೋ – ಅವನು ತನ್ನ ಪಾಪವನ್ನು ಕಳೆದುಕೊಳ್ಳುತ್ತಾನೆ ಮತ್ತು ಪವಿತ್ರಾತ್ಮರಿಗೆ ಲಭಿಸುವ ಅವಿನಾಶಿಯಾದ ಪರಮಪದವನ್ನು ಪಡೆದುಕೊಳ್ಳುತ್ತಾನೆ.

ನಾಭ್ಯಾಂ ಕಣ್ಠೇ ಚ ಶೀರ್ಷೇ ಚ ಹೃದಿ ವಕ್ಷಸಿ ಪಾರ್ಶ್ವಯೋಃ ।
ದರ್ಶನೇ ಶ್ರವಣೇ ಚಾಪಿ ಘ್ರಾಣೇ ಚಾಮಿತವಿಕ್ರಮ ॥೩೯॥
ಸ್ಥಾನೇಷ್ವೇತೇಷು ಯೋ ಯೋಗೀ ಮಹಾವ್ರತಸಮಾಹಿತಃ ।
ಆತ್ಮನಾ ಸೂಕ್ಷ್ಮಮಾತ್ಮಾನಂ ಯುಙ್ಕ್ತೇ ಸಮ್ಯಗ್ವಿಶಾಮ್ಪತೇ ॥೪೦॥
ಸ ಶೀಘ್ರಮಚಲಪ್ರಖ್ಯಂ ಕರ್ಮ ದಗ್ಧ್ವಾ ಶುಭಾಶುಭಮ್ ।
ಉತ್ತಮಂ ಯೋಗಮಾಸ್ಥಾಯ ಯದೀಚ್ಛತಿ ವಿಮುಚ್ಯತೇ ॥೪೧॥

ಅಮಿತಪರಾಕ್ರಮನೇ! ಯೋಗಾಭ್ಯಾಸವೆಂಬ ಮಹಾವ್ರತದಲ್ಲಿ ಏಕಾಗ್ರಚಿತ್ತನಾಗಿರುವ ಯೋಗಿಯು – ಹೊಕ್ಕಳು, ಕುತ್ತಿಗೆ, ತಲೆ, ಹೃದಯ, ವಕ್ಷಃಸ್ಥಳ, ಎರಡು ಪಕ್ಕೆಗಳು, ಕಣ್ಣು, ಕಿವಿ, ಮೂಗು – ಈ ಸ್ಥಾನಗಳಲ್ಲಿ ಧಾರಣೆಯ ಮೂಲಕವಾಗಿ ಪರಮಾತ್ಮನೊಡನೆ ಸೂಕ್ಷ್ಮಾತ್ಮನಾದ ಜೀವನನ್ನು ಸಮಾವೇಶಗೊಳಿಸುತ್ತಾನೆ. ಅಂತಹ ಯೋಗಿಯು ಒಂದು ವೇಳೆ ಇಚ್ಛಿಸಿದ್ದೇ ಆದರೆ ಪರ್ವತೋಪಮವಾದ ಶುಭಾಶುಭಕರ್ಮಗಳನ್ನು ಯೋಗಶಕ್ತಿಯ ಮೂಲಕ ಭಸ್ಮಮಾಡಿ ಉತ್ತಮವಾದ ಯೋಗವನ್ನು ಆಶ್ರಯಿಸಿ ಬಹಳ ಶೀಘ್ರವಾಗಿಯೇ ಮುಕ್ತನಾಗಬಲ್ಲನು.”

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಆಹಾರಾನ್ಕೀದೃಶಾನ್ಕೃತ್ವಾ ಕಾನಿ ಜಿತ್ವಾ ಚ ಭಾರತ ।
ಯೋಗೀ ಬಲಮವಾಪ್ನೋತಿ ತದ್ಭವಾನ್ವಕ್ತುಮರ್ಹತಿ ॥೪೨॥

“ಭಾರತನೇ! ಯೋಗಿಯು ಯಾವ ವಿಧವಾದ ಆಹಾರವನ್ನು ಸಿದ್ಧ ಪಡಿಸಿಕೊಂಡು ಮತ್ತು ಏನೇನನ್ನು ಜಯಿಸಿ ಅಸಾಧಾರಣವಾದ ಬಲವನ್ನು ಹೊಂದುತ್ತಾನೆ? ಈ ವಿಷಯವನ್ನು ನನಗೆ ದಯಮಾಡಿ ತಿಳಿಸು.”

ಭೀಷ್ಮನು ಹೇಳುತ್ತಾನೆ :

ಕಣಾನಾಂ ಭಕ್ಷಣೇ ಯುಕ್ತಃ ಪಿಣ್ಯಾಕಸ್ಯ ಚ ಭಾರತ ।
ಸ್ನೇಹಾನಾಂ ವರ್ಜನೇ ಯುಕ್ತೋ ಯೋಗೀ ಬಲಮವಾಪ್ನುಯಾತ್ ॥

“ಧಾನ್ಯಗಳ ನುಚ್ಚನ್ನೂ ಮತ್ತು ಎಳ್ಳು ಮೊದಲಾದ ಎಣ್ಣೆಯ ಕಾಳುಗಳ ಹಿಂಡಿಯನ್ನೂ ತಿನ್ನುವ, ತುಪ್ಪ-ಎಣ್ಣೆ ಮುಂತಾದ ಸ್ನೇಹಪದಾರ್ಥಗಳನ್ನು ಆಹಾರದಲ್ಲಿ ಹೆಚ್ಚಾಗಿ ಉಪಯೋಗಿಸದಿರುವ ಯೋಗಿಯು ಬಲಿಷ್ಠನಾಗುತ್ತಾನೆ.

ಭುಞ್ಜಾನೋ ಯಾವಕಂ ರೂಕ್ಷಂ ದೀರ್ಘಕಾಲಮರಿಂದಮ ।
ಏಕಾಹಾರೋ ವಿಶುದ್ಧಾತ್ಮಾ ಯೋಗೀ ಬಲಮವಾಪ್ನುಯಾತ್ ॥೪೪॥

ಬಹಳ ಕಾಲದವರೆಗೆ ದಿನಕ್ಕೆ ಒಪ್ಪತ್ತು ಜವೇಗೋಧಿಯ ಗಂಜಿಯನ್ನು ತಿನ್ನುವ ಯೋಗಿಯು ಶುದ್ಧಚಿತ್ತನೂ – ಬಲಿಷ್ಠನೂ ಆಗುತ್ತಾನೆ.

ಪಕ್ಷಾನ್ಮಾಸಾನೃತೂಂಶ್ಚೈತಾನ್ಸಂವತ್ಸರಾನಹಸ್ತಥಾ ।
ಅಪಃ ಪೀತ್ವಾ ಪಯೋಮಿಶ್ರಾ ಯೋಗೀ ಬಲಮವಾಪ್ನುಯಾತ್ ॥

ಹಾಲಿನಿಂದ ಮಿಶ್ರವಾದ ನೀರನ್ನು ಯೋಗಿಯು ಮೊದಲು-ಮೊದಲು ಹಗಲಿನಲ್ಲಿ ಒಮ್ಮೆ ಹದಿನೈದು ದಿವಸಗಳವರೆಗೆ ಕುಡಿಯಬೇಕು. ಅನಂತರ ಮಾಸದವರೆಗೂ ಕುಡಿಯಬೇಕು. ಅಭ್ಯಾಸವಾದಂತೆಲ್ಲಾ ಅನೇಕ ಮಾಸಗಳ ವರೆಗೆ ಕುಡಿಯುತ್ತಿರಬೇಕು. ಅನಂತರ ಅನೇಕಸಂವತ್ಸರಗಳವರೆಗೆ ಹಾಲು ಮಿಶ್ರವಾದ ನೀರನ್ನೇ ಕುಡಿಯಬೇಕು. ಇಂತಹ ಆಹಾರಸೇವನೆಯಿಂದ ಯೋಗಿಯು ಬಲವನ್ನು ಹೊಂದುತ್ತಾನೆ.

ಅಖಣ್ಡಮಪಿ ವಾ ಮಾಂಸಂ ಸತತಂ ಮನುಜೇಶ್ವರ ।
ಉಪೋಷ್ಯ ಸಮ್ಯಕ್ಶುದ್ಧಾತ್ಮಾ ಯೋಗೀ ಬಲಮವಾಪ್ನುಯಾತ್ ॥೪೬॥

ಜೀವನಪೂರ್ತಿಯಾಗಿ ಯಾವಾಗಲೂ ಮಾಂಸವನ್ನು ತಿನ್ನದಿರುವ ಪರಿಶುದ್ಧಾತ್ಮನಾದ ಯೋಗಿಯು ಯೋಗಬಲವನ್ನು ಹೊಂದುತ್ತಾನೆ.

ಕಾಮಂ ಜಿತ್ವಾ ತಥಾ ಕ್ರೋಧಂ ಶೀತೋಷ್ಣೇ ವರ್ಷಮೇವ ಚ ।
ಭಯಂ ಶೋಕಂ ತಥಾ ಶ್ವಾಸಂ ಪೌರುಷಾನ್ವಿಷಯಾಂಸ್ತಥಾ ॥೪೭॥

ಅರತಿಂ ದುರ್ಜಯಾಂ ಚೈವ ಘೋರಾಂ ತೃಷ್ಣಾಂ ಚ ಪಾರ್ಥಿವ ।
ಸ್ಪರ್ಶಂ ನಿದ್ರಾಂ ತಥಾ ತನ್ದ್ರೀಂ ದುರ್ಜಯಾಂ ನೃಪಸತ್ತಮ ॥೪೮॥

ದೀಪಯನ್ತಿ ಮಹಾತ್ಮಾನಃ ಸೂಕ್ಷ್ಮಮಾತ್ಮಾನಮಾತ್ಮನಾ ।
ವೀತರಾಗಾ ಮಹಾಪ್ರಾಜ್ಞಾ ಧ್ಯಾನಾಧ್ಯಯನಸಮ್ಪದಾ ॥೪೯॥

ನರಶ್ರೇಷ್ಠನೇ! ಕಾಮ, ಕ್ರೋಧ, ಶೀತ, ಉಷ್ಣ, ಮಳೆ, ಭಯ, ಶೋಕ, ಶ್ವಾಸ, ಮನುಷ್ಯನಿಗೆ ಪ್ರಿಯವನ್ನುಂಟುಮಾಡುವ ವಿಷಯಗಳು, ಜಯಿಸಲು ಅಸಾಧ್ಯವಾದ ಅಸಂತೋಷ, ಘೋರವಾದ ತೃಷ್ಣೆ, ಸ್ಪರ್ಶ, ನಿದ್ರೆ, ದುರ್ಜಯವಾದ ಆಲಸ್ಯ –ಇವುಗಳೆಲ್ಲವನ್ನೂ ಜಯಿಸಿದ, ರಾಗರಹಿತರಾದ, ಮಹಾಪ್ರಾಜ್ಞರಾದ, ಮಹಾತ್ಮರಾದ ಯೋಗಿಗಳು ಧ್ಯಾನ ಮತ್ತು ಅಧ್ಯಯನಗಳ ಸಂಪತ್ತಿನಿಂದ ಬುದ್ಧಿಯ ಮೂಲಕವಾಗಿ ಸೂಕ್ಷ್ಮನಾದ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ.

ದುರ್ಗಸ್ತ್ವೇಷ ಮತಃ ಪನ್ಥಾ ಬ್ರಾಹ್ಮಣಾನಾಂ ವಿಪಶ್ಚಿತಾಮ್ ।
ಯಃ ಕಶ್ಚಿದ್ವ್ರಜತಿ ಹ್ಯಸ್ಮಿನ್ಕ್ಷೇಮೇಣ ಭರತರ್ಷಭ ॥೫೦॥

ಭರತಶ್ರೇಷ್ಠನೇ! ಈ ಯೋಗಮಾರ್ಗವು ಅತ್ಯಂತದುರ್ಗಮವಾದುದೆಂಬುದು ವಿದ್ವಾಂಸರಾದ ಬ್ರಾಹ್ಮಣರ ಅಭಿಪ್ರಾಯವಾಗಿದೆ. ಕೆಲವರು ಮಾತ್ರವೇ ಈ ಮಾರ್ಗದಲ್ಲಿ ಕ್ಷೇಮದಿಂದ ಮುಂದುವರಿಯುತ್ತಾರೆ.

ಯಥಾ ಕಶ್ಚಿದ್ವನಂ ಘೋರಂ ಬಹುಸರ್ಪಸರೀಸೃಪಮ್ ।
ಶ್ವಭ್ರವತ್ತೋಯಹೀನಂ ಚ ದುರ್ಗಮಂ ಬಹುಕಣ್ಟಕಮ್ ॥೫೧॥

ಅಭಕ್ತಮಟವೀಪ್ರಾಯಂ ದಾವದಗ್ಧಮಹೀರುಹಮ್ ।
ಪನ್ಥಾನಂ ತಸ್ಕರಾಕೀರ್ಣಂ ಕ್ಷೇಮೇಣಾಧಿಪತೇದ್ಯುವಾ ॥೫೨॥

ಯೋಗಮಾರ್ಗಂ ತಥಾಸಾದ್ಯ ಯಃ ಕಶ್ಚಿದ್ವ್ರಜತೇ ದ್ವಿಜಃ ।
ಕ್ಷೇಮೇಣೋಪರಮೇನ್ಮಾರ್ಗಾದ್ಬಹುದೋಷೋ ಹಿ ಸ ಸ್ಮೃತಃ ॥೫೩॥

ಅನೇಕಸರ್ಪಗಳಿಂದಲೂ–ವಿಷಜಂತುಗಳಿಂದಲೂ ವ್ಯಾಪ್ತವಾಗಿರುವ, ಗುಹೆಗಳುಳ್ಳ, ನೀರಿಲ್ಲದ, ದುರ್ಗಮವಾದ, ಹೆಚ್ಚು ಮುಳ್ಳುಗಳಿಂದ ಆವೃತವಾಗಿರುವ, ತಿನ್ನಲು ಏನೂ ಸಿಕ್ಕದಿರುವ, ದಾವಾಗ್ನಿಯಿಂದ ಭಸ್ಮವಾದ ವೃಕ್ಷಗಳಿಂದ ಕೂಡಿರುವ, ಕಳ್ಳರಿಂದ ವ್ಯಾಪ್ತವಾಗಿರುವ, ಅರಣ್ಯಪ್ರಾಯವಾಗಿರುವ ಮಾರ್ಗದಲ್ಲಿ ಧೀರನಾದ ಯುವಕನು ಮಾತ್ರವೇ

ಕ್ಷೇಮದಿಂದ ಹೋಗಬಲ್ಲನು. ಹಾಗೆಯೇ ಯೋಗಮಾರ್ಗವನ್ನು ಆಶ್ರಯಿಸಿ ಕೇವಲ ಕೆಲವೇ ಮಂದಿ ದ್ವಿಜರು ಆ ಮಾರ್ಗದ ಮೂಲಕವಾಗಿ ಕ್ಷೇಮದಿಂದ ಪರಮಪದಕ್ಕೆ ಹೋಗುತ್ತಾರೆ. ಏಕೆಂದರೆ : ಯೋಗಮಾರ್ಗವು ಬಹಳ ದೋಷಗಳಿಂದ (ಕಠೋರವಾದ ಅಭ್ಯಾಸಗಳಿಂದ) ಕೂಡಿರುವುದೆಂದು ಹೇಳಲ್ಪಟ್ಟಿದೆ.

ಸುಸ್ಥೇಯಂ ಕ್ಷುರಧಾರಾಸು ನಿಶಿತಾಸು ಮಹೀಪತೇ ।
ಧಾರಣಾಸು ತು ಯೋಗಸ್ಯ ದುಃಸ್ಥೇಯಮಕೃತಾತ್ಮಭಿಃ ॥೫೪॥

ಮಹಾರಾಜ! ಹರಿತವಾದ ಕತ್ತಿಯ ಅಲುಗಿನ ಮೇಲಾದರೂ ಸುಖವಾಗಿ ನಿಂತಿರಬಹುದು. ಆದರೆ ಜಿತೇಂದ್ರಿಯರಲ್ಲದವರಿಗೆ ಯೋಗಕ್ಕೆ ಸಂಬಂಧಿಸಿದ ಧಾರಣೆಗಳಲ್ಲಿ (ನಾಭಿ, ಕಂಠ, ತಲೆ, ಹೃದಯ ಮೊದಲಾದವು ಗಳಲ್ಲಿ) ಏಕಾಗ್ರತೆಯಿಂದ ಮನಸ್ಸನ್ನು ನಿಲ್ಲಿಸುವುದು ದುಷ್ಕರವೇ ಸರಿ.

ವಿಪನ್ನಾ ಧಾರಣಾಸ್ತಾತ ನಯನ್ತಿ ನ ಶುಭಾಂ ಗತಿಮ್ ।
ನೇತೃಹೀನಾ ಯಥಾ ನಾವಃ ಪುರುಷಾನರ್ಣವೇ ನೃಪ ॥೫೫॥

ಸಮುದ್ರದಲ್ಲಿ ನಾವಿಕನಿಲ್ಲದ ನೌಕೆಯು ಯಾವ ರೀತಿಯಲ್ಲಿ ಮನುಷ್ಯ ರನ್ನು ಪಾರುಮಾಡುವುದಿಲ್ಲವೋ–ಅದೇ ರೀತಿಯಲ್ಲಿ ಸಿದ್ಧಿಸದಿರುವ ಧಾರಣೆ ಗಳು ಸಾಧಕನನ್ನು ಶುಭಗತಿಗೆ ಒಯ್ಯುವುದಿಲ್ಲ.

ಯಸ್ತು ತಿಷ್ಠತಿ ಕೌನ್ತೇಯ ಧಾರಣಾಸು ಯಥಾವಿಧಿ ।
ಮರಣಂ ಜನ್ಮ ದುಃಖಂ ಚ ಸುಖಂ ಚ ಸ ವಿಮುಞ್ಚತಿ ॥೫೬॥

ಧಾರಣೆಗಳಲ್ಲಿ (ನಾಭಿಚಕ್ರ, ಹೃದಯ, ವಕ್ಷಃಸ್ಥಳ ಮುಂತಾದುವುಗಳಲ್ಲಿ) ಯಥಾವಿಧಿಯಾಗಿ ಯಾವನು ಮನಸ್ಸನ್ನು ಸ್ಥಿರಗೊಳಿಸುವನೋ– ಅಂತಹ ಮಹಾಯೋಗಿಯು ಮರಣ-ಜನ್ಮ-ದುಃಖ-ಸುಖಗಳೆಲ್ಲವನ್ನೂ ಸುಖವಾಗಿ ತ್ಯಜಿಸುತ್ತಾನೆ. ಎಲ್ಲ ಬಂಧನಗಳಿಂದಲೂ ವಿಮುಕ್ತನಾಗುತ್ತಾನೆ.*

---

* ಧಾರಣಾ ಎಂಬುದಕ್ಕೆ ಪಾತಂಜಲಯೋಗದರ್ಶನದಲ್ಲಿ ಹೀಗೆ ಹೇಳಿದೆ : ದೇಶ ಬನ್ಧಶ್ಚಿತ್ತಸ್ಯ ಧಾರಣಾ – ಧಾರಣೆ ಎಂದರೆ ಒಂದು ನಿರ್ದಿಷ್ಟವಾದ ಸ್ಥಾನದಲ್ಲಿ ಚಿತ್ತವನ್ನು ನಿಲ್ಲಿಸುವುದು. ನಾಭಿಚಕ್ರದಲ್ಲಿ, ಹೃದಯಕಮಲದಲ್ಲಿ, ತಲೆಯ ಜ್ಯೋತಿಸ್ಸಿ

ನಾನಾಶಾಸ್ತ್ರೇಷು ನಿಷ್ಪನ್ನಂ ಯೋಗೇಷ್ವಿದಮುದಾಹೃತಮ್ ।
ಪರಂ ಯೋಗಸ್ಯ ಯತ್ಕೃತ್ಯಂ ನಿಶ್ಚಿತಂ ತದ್ದ್ವಿಜಾತಿಷು ॥೫೮॥

ಯುಧಿಷ್ಠಿರ! ನಾನು ಹೇಳುತ್ತಿರುವುದೆಲ್ಲವೂ ನಾನಾಶಾಸ್ತ್ರಗಳಲ್ಲಿನ ಸಿದ್ಧಾಂತವಾಗಿ ಯೋಗಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಯೋಗಸಾಧನೆಗೆ ಯಾವ ಯಾವ ಕರ್ತವ್ಯವಿದೆಯೋ ಅವೆಲ್ಲವೂ ಜ್ಞಾನಿಗಳಿಂದ ನಿಶ್ಚಯಿಸಲ್ಪಟ್ಟಿವೆ.

ಪರಂ ಹಿ ತದ್ಬ್ರಹ್ಮ ಮಹನ್ಮಹಾತ್ಮ-
ನ್ಬ್ರಹ್ಮಾಣಮೀಶಂ ವರದಂ ಚ ವಿಷ್ಣುಮ್ ।
ಭವಂ ಚ ಧರ್ಮಂ ಚ ಷಡಾನನಂ ಚ
ಯದ್ಬ್ರಹ್ಮಪುತ್ರಾಂಶ್ಚ ಮಹಾನುಭಾವಾನ್ ॥೫೮॥
ತಮಶ್ಚ ಕಷ್ಟಂ ಸುಮಹದ್ರಜಶ್ಚ
ಸತ್ತ್ವಂ ವಿಶುದ್ಧಂ ಪ್ರಕೃತಿಂ ಪರಾಂ ಚ ।
ಸಿದ್ಧಿಂ ಚ ದೇವೀಂ ವರುಣಸ್ಯ ಪತ್ನೀಂ
ತೇಜಶ್ಚ ಕೃತ್ಸ್ನಂ ಸುಮಹಚ್ಚ ಧೈರ್ಯಮ್ ॥೫೯॥
ತಾರಾಧಿಪಂ ಖೇ ವಿಮಲಂ ಸತಾರಂ
ವಿಶ್ವಾಂಶ್ಚ ದೇವಾನುರಗಾನ್ಪಿತೄಂಶ್ಚ ।
ಶೈಲಾಂಶ್ಚ ಕೃತ್ಸ್ನಾನುದಧೀಂಶ್ಚ ಘೋರಾ-
ನ್ನದೀಶ್ಚ ಸರ್ವಾಃ ಸವನಾನ್ಘನಾಂಶ್ಚ ॥೬೦॥
ನಾಗಾನ್ನಗಾನ್ಯಕ್ಷಗಣಾನ್ದಿಶಶ್ಚ
ಗನ್ಧರ್ವಸಂಘಾನ್ಪುರುಷಾನ್ಸ್ತ್ರಿಯಶ್ಚ ।
ಪರಸ್ಪರಂ ಪ್ರಾಪ್ಯ ಮಹಾನ್ಮಹಾತ್ಮಾ
ವಿಶೇತ ಯೋಗೀ ನ ಚಿರಾದ್ವಿಮುಕ್ತಃ ॥೬೧॥

ಮಹಾತ್ಮನೇ! ಯುಧಿಷ್ಠಿರ! ಯೋಗಸಿದ್ಧನಾದ ಮಹಾತ್ಮನಾದ ಪುರುಷನು ಇಚ್ಛಿಸಿದ್ದೇ ಆದರೆ–ಒಡನೆಯೇ ಮುಕ್ತನಾಗಿ ಪರಬ್ರಹ್ಮವನ್ನು

ನಲ್ಲಿ, ನಾಸಿಕಾಗ್ರದಲ್ಲಿ, ನಾಲಿಗೆಯ ತುದಿಯಲ್ಲಿ–ಇವೇ ಮೊದಲಾದ ಸ್ಥಾನಗಳಲ್ಲಿ ಅಥವಾ ಬಾಹ್ಯವಿಷಯದಲ್ಲಿ ಚಿತ್ತದ ವೃತ್ತಿಮಾತ್ರವನ್ನು ನಿಲ್ಲಿಸುವುದು ಧಾರಣೆ.

ಸೇರಬಹುದು. ಯೋಗಬಲದಿಂದ ಭಗವಾನ್ ಬ್ರಹ್ಮನನ್ನೂ, ವರದನಾದ ವಿಷ್ಣುವನ್ನೂ, ಈಶ್ವರನನ್ನೂ, ಯಮಧರ್ಮನನ್ನೂ, ಕಾರ್ತಿಕೇಯನನ್ನೂ, ಬ್ರಹ್ಮನ ಮಾನಸಪುತ್ರರಾದ ಮಹಾನುಭಾವರಾದ ಸನಕಾದಿಗಳನ್ನೂ, ಕಷ್ಟದಾಯಕವಾದ ತಮೋಗುಣದೇವತಾಭಾವವನ್ನೂ, ಮಹತ್ತಾದ ರಜೋಗುಣದೇವತಾಭಾವವನ್ನೂ, ವಿಶುದ್ಧವಾದ ಸತ್ತ್ವಗುಣದೇವತಾಭಾವವನ್ನೂ, ಮೂಲಪ್ರಕೃತಿಯನ್ನೂ, ವರುಣನ ಪತ್ನಿಯಾದ ಸಿದ್ದಿದೇವಿಯನ್ನೂ, ಸಂಪೂರ್ಣವಾದ ತೇಜಸ್ಸನ್ನೂ, ಮಹಾಧೈರ್ಯದೇವತಾಭಾವವನ್ನೂ, ನಕ್ಷತ್ರಗಳೊಡನೆ ಆಕಾಶದಲ್ಲಿ ಪ್ರಕಾಶಿಸುವ ನಿರ್ಮಲನಾದ ತಾರಾಧಿಪತಿಯಾದ ಚಂದ್ರನನ್ನೂ, ವಿಶ್ವೇದೇವತೆಗಳನ್ನೂ, ಉರಗಗಳನ್ನೂ, ಪಿತೃಗಳನ್ನೂ, ಸಮಸ್ತವಾದ ಪರ್ವತಗಳನ್ನೂ, ಭಯಂಕರಗಳಾದ ಸಮುದ್ರಗಳನ್ನೂ, ಅಖಿಲವಾದ ನದಿಗಳನ್ನೂ, ವನಗಳನ್ನೂ, ಮೇಘಗಳನ್ನೂ, ನಾಗಗಳನ್ನೂ, ವೃಕ್ಷಗಳನ್ನೂ, ದಿಕ್ಕುಗಳನ್ನೂ, ಗಂಧರ್ವಗುಣಗಳನ್ನೂ, ಸಮಸ್ತ ಸ್ತ್ರೀ-ಪುರುಷರನ್ನೂ ಸಂಧಿಸಿ, ಅವರಲ್ಲಿ ಪ್ರವೇಶಿಸಲು ಸಮರ್ಥನಾಗುತ್ತಾನೆ. (ಯೋಗಿಯು ಅಪೇಕ್ಷಿಸಿದರೆ ಯಾವ ಭಾವವನ್ನಾದರೂ ಹೊಂದಬಹುದು.)

ಕಥಾ ಚ ಯೇಯಂ ನೃಪತೇ ಪ್ರಸಕ್ತಾ
ದೇವೇ ಮಹಾವೀರ್ಯಮತೌ ಶುಭೇಯಮ್ ।
ಯೋಗೀ ಸ ಸರ್ವಾನಭಿಭೂಯ ಮರ್ತ್ಯಾ-
ನ್ನಾರಾಯಣಾತ್ಮಾ ಕುರುತೇ ಮಹಾತ್ಮಾ ॥೬೨॥

ಬಲದಿಂದಲೂ–ಬುದ್ಧಿಯಿಂದಲೂ ಸಂಪನ್ನವಾದ, ಪರಮಾತ್ಮನ ಸಂಬಂಧವನ್ನು ಕಲ್ಪಿಸುವ ಕಲ್ಯಾಣಕರವಾದ ಈ ಕಥೆಯನ್ನು ನಾನು ಪ್ರಸಂಗವಶದಿಂದ ನಿನಗೆ ಹೇಳಿರುವೆನು. ಒಟ್ಟಿನಲ್ಲಿ ಹೇಳುವುದಾದರೆ ಯೋಗಸಿದ್ಧಿಯನ್ನು ಪಡೆದಿರುವ ಮಹಾತ್ಮನು ಎಲ್ಲ ಮನುಷ್ಯರನ್ನೂ ಅತಿಕ್ರಮಿಸಿ ನಾರಾಯಣಸ್ವರೂಪನಾಗಿ ಸಂಕಲ್ಪಮಾತ್ರದಿಂದಲೇ ಸೃಷ್ಟಿಯನ್ನೂ ಮಾಡಬಲ್ಲನು.”

ಃ೦೦ನೆಯ ಅಧ್ಯಾಯವು ಮುಗಿಯಿತು.

ಸಾಂಖ್ಯಯೋಗಕ್ಕೆ ಅನುಸಾರವಾದ ಸಾಧನೆ ಮತ್ತು ಸಾಧನೆಯ ಫಲ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

"ಪಿತಾಮಹ! ಹಿತೈಷಿಯಾದ ನೀನು ಶಿಷ್ಯನಾದ ನನಗೆ ಶಿಷ್ಟಸಮ್ಮತವಾದ ಈ ಯೋಗಮಾರ್ಗವನ್ನು ಯಥೋಚಿತವಾಗಿ ಹೇಳಿರುವೆ. ನಾನೀಗ ಸಾಂಖ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಇರುವ ಸಮಗ್ರವಾದ ನಿಯಮಗಳನ್ನು ಪ್ರಶ್ನಿಸುತ್ತಿದ್ದೇನೆ. ಅದನ್ನು ದಯಮಾಡಿ ಹೇಳು. ಮೂರು ಲೋಕಗಳಲ್ಲಿರುವ ಎಲ್ಲ ವಿಧವಾದ ಜ್ಞಾನಗಳೂ ನಿನಗೆ ತಿಳಿದಿವೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಆತ್ಮತತ್ತ್ವವನ್ನು ತಿಳಿದಿರುವ ಸಾಂಖ್ಯರ ಸೂಕ್ಷ್ಮವಾದ ಈ ವಿಷಯವನ್ನು ಕೇಳು. ಈಶ್ವರಪ್ರಾಯರಾದ ಕಪಿಲರೇ ಮೊದಲಾದ ಎಲ್ಲ ಯತಿಗಳಿಂದಲೂ ಈ ಸಾಂಖ್ಯಶಾಸ್ತ್ರವು ಪ್ರಕಾಶಿತವಾಗಿದೆ. ಈ ಸಾಂಖ್ಯಶಾಸ್ತ್ರದಲ್ಲಿ ದೋಷಗಳೆಂಬುದೇ ಸ್ವಲ್ಪವಾದರೂ ಕಾಣುವುದಿಲ್ಲ. ಗುಣಗಳಂತೂ ಬಹಳವಾಗಿವೆ. ದೋಷರಹಿತವಾಗಿದೆ.

ಜ್ಞಾನೇನ ಪರಿಸಂಖ್ಯಾಯ ಸದೋಷಾನ್ವಿಷಯಾನ್ನೃಪ ।
ಮಾನುಷಾನ್ದುರ್ಜಯಾನ್ಕೃತ್ಸ್ನಾನ್ಪೈಶಾಚಾನ್ವಿಷಯಾಂಸ್ತಥಾ ॥೫॥

ರಾಕ್ಷಸಾನ್ವಿಷಯಾಞ್ಜ್ಞಾತ್ವಾ ಯಕ್ಷಾಣಾಂ ವಿಷಯಾಂಸ್ತಥಾ ।
ವಿಷಯಾನೌರಗಾಞ್ಜ್ಞಾತ್ವಾ ಗನ್ಧರ್ವವಿಷಯಾಂಸ್ತಥಾ ॥೬॥

ಪಿತೄಣಾಂ ವಿಷಯಾಞ್ಜ್ಞಾತ್ವಾ ತಿರ್ಯಕ್ಷು ಚರತಾಂ ನೃಪ ।
ಸುಪರ್ಣವಿಷಯಾಞ್ಜ್ಞಾತ್ವಾ ಮರುತಾಂ ವಿಷಯಾಂಸ್ತಥಾ ॥೭॥

ರಾಜರ್ಷಿವಿಷಯಾಞ್ಜ್ಞಾತ್ವಾ ಬ್ರಹ್ಮರ್ಷಿವಿಷಯಾಂಸ್ತಥಾ ।
ಆಸುರಾನ್ವಿಷಯಾಞ್ಜ್ಞಾತ್ವಾ ವಿಶ್ವೇದೇವಾಂಸ್ತಥೈವ ಚ ॥೮॥

ದೇವರ್ಷಿವಿಷಯಾಞ್ಜ್ಞಾತ್ವಾ ಯೋಗಾನಾಮಪಿ ಚೇಶ್ವರಾನ್ ।
ಪ್ರಜಾಪತೀನಾಂ ವಿಷಯಾನ್ಬ್ರಹ್ಮಣೋ ವಿಷಯಾಂಸ್ತಥಾ ॥೯॥

ಆಯುಷಶ್ಚ ಪರಂ ಕಾಲಂ ಲೋಕೇ ವಿಜ್ಞಾಯ ತತ್ತ್ವತಃ ।
ಸುಖಸ್ಯ ಚ ಪರಂ ತತ್ತ್ವಂ ವಿಜ್ಞಾಯ ವದತಾಂ ವರ ॥೧೦॥

ಪ್ರಾಪ್ತೇ ಕಾಲೇ ಚ ಯದ್ದುಃಖಂ ಸತತಂ ವಿಷಯೈಷಿಣಾಮ್ ।
ತಿರ್ಯಕ್ಷು ಪತತಾಂ ದುಃಖಂ ಪತತಾಂ ನರಕೇ ಚ ಯತ್ ॥೧೧॥

ಸ್ವರ್ಗಸ್ಯ ಚ ಗುಣಾನ್ಕೃತ್ಸ್ನಾನ್ದೋಷಾನ್ಸರ್ವಾಂಶ್ಚ ಭಾರತ ।
ವೇದವಾದೇಽಪಿ ಯೇ ದೋಷಾ ಗುಣಾ ಯೇ ಚಾಪಿ ವೈದಿಕಾಃ ॥

ಜ್ಞಾನಯೋಗೇ ಚ ಯೇ ದೋಷಾ ಗುಣಾ ಯೋಗೇ ಚ ಯೇ ನೃಪ ।
ಸಾಂಖ್ಯಜ್ಞಾನೇ ಚ ಯೇ ದೋಷಾಸ್ತಥೈವ ಚ ಗುಣಾ ನೃಪ ॥೧೩॥

ಸತ್ತ್ವಂ ದಶಗುಣಂ ಜ್ಞಾತ್ವಾ ರಜೋ ನವಗುಣಂ ತಥಾ ।
ತಮಶ್ಚಾಷ್ಟಗುಣಂ ಜ್ಞಾತ್ವಾ ಬುದ್ಧಿಂ ಸಪ್ತಗುಣಾಂ ತಥಾ ॥೧೪॥
ಷಡ್ಗುಣಂ ಚ ಮನೋ ಜ್ಞಾತ್ವಾ ನಭಃ ಪಞ್ಚಗುಣಂ ತಥಾ ।
ಬುದ್ಧಿಂ ಚತುರ್ಗುಣಂ ಜ್ಞಾತ್ವಾ ತಮಶ್ಚ ತ್ರಿಗುಣಂ ತಥಾ ॥೧೫॥

ದ್ವಿಗುಣಂ ಚ ರಜೋ ಜ್ಞಾತ್ವಾ ಸತ್ತ್ವಮೇಕಗುಣಂ ಪುನಃ ।
ಮಾರ್ಗಂ ವಿಜ್ಞಾಯ ತತ್ತ್ವೇನ ಪ್ರಲಯೇ ಪ್ರೇಕ್ಷಣೇ ತಥಾ ॥೧೬॥

ಜ್ಞಾನವಿಜ್ಞಾನಸಮ್ಪನ್ನಾಃ ಕಾರಣೈರ್ಭಾವಿತಾಃ ಶುಭಾಃ ।
ಪ್ರಾಪ್ನುವನ್ತಿ ಶುಭಂ ಮೋಕ್ಷಂ ಸೂಕ್ಷ್ಮಾ ಇವ ನಭಃ ಪರಮ್ ॥೧೭॥

ಜ್ಞಾನ-ವಿಜ್ಞಾನಸಂಪನ್ನರಾದ, ಮೋಕ್ಷೋಪಯೋಗಿಗಳಾದ ಸಾಧನೆಗಳಿಂದ ಶುದ್ಧಚಿತ್ತರಾದ ವಿದ್ವಾಂಸರು–ವಿಷಯಗಳೆಲ್ಲವೂ ದೋಷಯುಕ್ತವಾದುವುಗಳೆಂಬುದನ್ನು ಜ್ಞಾನದಿಂದ ವಿಶೇಷವಾಗಿ ಪರಿಗಣಿಸಿ, ಆರೋಪಗಳಿಂದ ವಿಮುಕ್ತರಾಗಿ, ಸಾತ್ತ್ವಿಕಭಾವಗಳಿಂದ ಕೂಡಿದವರಾಗಿ, ಪರಮಾಕಾಶವನ್ನು ಹೊಂದುವ ಸೂಕ್ಷ್ಮಭೂತಗಳಂತೆ ಮಂಗಳಕರವಾದ ಮೋಕ್ಷವನ್ನು ಹೊಂದುತ್ತಾರೆ. (ಜ್ಞಾನ-ವಿಜ್ಞಾನಸಂಪನ್ನರಾದ ಸಾಂಖ್ಯಯೋಗಿಗಳು ಹೇಗೆ ಎಲ್ಲವನ್ನೂ ಪರಿಶೀಲಿಸಿದರು ಎಂದರೆ ವಿಷಯಗಳು ಅಥವಾ ಇಂದ್ರಿಯಾರ್ಥಗಳು ಮನುಷ್ಯರಿಗೂ ದೇವತೆಗಳಿಗೂ ಒಂದೇ ಸಮನಾಗಿರುವುದಿಲ್ಲ. ಮನುಷ್ಯರು ಭಕ್ಷ್ಯ-ಭೋಜ್ಯಾದಿಗಳಲ್ಲಿ ಆಸೆಯುಳ್ಳವರಾದರೆ ದೇವತೆಗಳು

ಅಮೃತದಲ್ಲಿ ಆಸೆಯುಳ್ಳವರಾಗಿರುತ್ತಾರೆ. ಆದುದರಿಂದ ಸಾಂಖ್ಯಯೋಗಿಗಳು ಒಂದೊಂದನ್ನಾಗಿ ಪರಿಶೀಲಿಸತೊಡಗಿದರು.) ಮನುಷ್ಯನಿಗೆ ಸಂಬಂಧಿಸಿದ ವಿಷಯಗಳೆಲ್ಲವನ್ನೂ ತಿಳಿದುಕೊಂಡು ಅವುಗಳನ್ನು ದುರ್ಜಯಗಳೆಂದು ಭಾವಿಸಿ, ಅವುಗಳ ನಿವಾರಣೋಪಾಯವನ್ನು ಕಂಡುಹಿಡಿದರು. ಬಳಿಕ ಪಿಶಾಚರಿಗೆ ಸಂಬಂಧಿಸಿದ ವಿಷಯಗಳನ್ನೂ ರಾಕ್ಷಸರಿಗೆ ಸಂಬಂಧಿಸಿದ ವಿಷಯಗಳನ್ನೂ ತಿಳಿದುಕೊಂಡರು. ಯಕ್ಷರಿಗೆ ಸಂಬಂಧಿಸಿದ ವಿಷಯ ಗಳನ್ನೂ ತಿಳಿದುಕೊಂಡರು. ಉರಗಗಳಿಗೆ ಸಂಬಂಧಿಸಿದ ವಿಷಯಗಳನ್ನೂ ತಿಳಿದುಕೊಂಡರು. ಗಂಧರ್ವರಿಗೆ ಸಂಬಂಧಿಸಿದ ವಿಷಯಸುಖಗಳನ್ನು ತಿಳಿದುಕೊಂಡರು. ಪಿತೃಗಳಿಗೆ ಸಂಬಂಧಿಸಿದ ವಿಷಯಸುಖಗಳನ್ನು ತಿಳಿದು ಕೊಂಡರು. ತಿರ್ಯಗ್ಯೋನಿಗಳಿಗೆ ಸಂಬಂಧಿಸಿದಂತೆ ಇರುವ ವಿಷಯಸುಖ ಗಳನ್ನೂ ತಿಳಿದುಕೊಂಡರು. ಗರುಡಪಕ್ಷಿಗಳಿಗೆ ಸಂಬಂಧಿಸಿದಂತೆ–ಮರುತ್ತು ಗಳಿಗೆ ಸಂಬಂಧಿಸಿದಂತೆ ಇರುವ ವಿಷಯಗಳನ್ನೂ ತಿಳಿದುಕೊಂಡರು. ರಾಜರ್ಷಿ ಗಳಿಗೆ ಸಂಬಂಧಿಸಿದಂತೆ ಮತ್ತು ಬ್ರಹ್ಮರ್ಷಿಗಳಿಗೆ ಸಂಬಂಧಿಸಿದಂತೆ ಇರುವ ವಿಷಯಗಳನ್ನು ತಿಳಿದುಕೊಂಡರು. ಅಸುರರಿಗೆ ಸಂಬಂಧಿಸಿದಂತೆ ಮತ್ತು ವಿಶ್ವೇದೇವತೆಗಳಿಗೆ ಸಂಬಂಧಿಸಿದಂತೆ ಇರುವ ವಿಷಯಗಳನ್ನೂ ತಿಳಿದು ಕೊಂಡರು. ದೇವರ್ಷಿಗಳಿಗೆ ಸಂಬಂಧಿಸಿದಂತೆ ಮತ್ತು ಯೋಗಿಗಳಿಗೆ ಸಂಬಂಧಿಸಿದಂತೆ ಇರುವ ವಿಷಯಗಳನ್ನೂ ತಿಳಿದುಕೊಂಡರು. ಪ್ರಜಾಪತಿಗಳಿಗೆ ಸಂಬಂಧಿಸಿದಂತೆ ಮತ್ತು ಬ್ರಹ್ಮನಿಗೆ ಸಂಬಂಧಿಸಿದಂತೆ ಇರುವ ವಿಷಯಗಳನ್ನೂ ತಿಳಿದುಕೊಂಡರು. (ತಿರ್ಯಕ್ಪ್ರಾಣಿಗಳಿಂದ ಬ್ರಹ್ಮಪರ್ಯಂತವಾಗಿ ವಿಷಯಾಭಿಲಾಷೆಯು ಎಲ್ಲರಿಗೂ ಇದ್ದೇ ಇರುತ್ತವೆಯೆಂಬುದನ್ನು ತಿಳಿದುಕೊಂಡರು.) ಲೋಕದಲ್ಲಿ ಮನುಷ್ಯನಿಗೆ ಪರಮಾಯುಷ್ಯಕಾಲವು ಎಷ್ಟೆಂಬುದನ್ನು ಯಥಾವತ್ತಾಗಿ ತಿಳಿದುಕೊಂಡರು. ಐಹಿಕ, ಆಮುಷ್ಮಿಕ ಮತ್ತು ಆಧ್ಯಾತ್ಮಸುಖಗಳ ತತ್ತ್ವವನ್ನು ಚೆನ್ನಾಗಿ ತಿಳಿದುಕೊಂಡರು. ವಿಷಯಾಭಿಲಾಷಿಗಳಿಗೆ ಪದೇ ಪದೇ ಎಂತೆಂತಹ ದುಃಖವು ಸಂಭವಿಸುವುದೆಂಬುದನ್ನೂ ತಿಳಿದುಕೊಂಡರು. ಮಹಾಪಾಪದ ಪರಿಣಾಮವಾಗಿ ತಿರ್ಯಗ್ಯೋನಿಗಳಲ್ಲಿ ಜನ್ಮತಾಳುವವರ ದುಃಖವನ್ನೂ ನರಕದಲ್ಲಿ ಬೀಳುವವರ ದುಃಖವನ್ನೂ ತಿಳಿದುಕೊಂಡರು. ಸ್ವರ್ಗದಲ್ಲಿನ

ಸಮಸ್ತವಾದ ಗುಣಗಳನ್ನೂ ಸಮಗ್ರವಾದ ದೋಷಗಳನ್ನೂ ತಿಳಿದುಕೊಂಡರು. ವೇದಗಳಲ್ಲಿಯೂ–ವೈದಿಕಕರ್ಮಗಳಲ್ಲಿಯೂ ಇರುವ ಗುಣಗಳನ್ನೂ ಮತ್ತು ದೋಷಗಳನ್ನೂ ತಿಳಿದುಕೊಂಡರು. ಜ್ಞಾನಯೋಗದಲ್ಲಿರುವ ಮತ್ತು ಯೋಗಮಾರ್ಗದಲ್ಲಿರುವ ಗುಣ-ದೋಷಗಳನ್ನೂ ತಿಳಿದುಕೊಂಡರು. ಕಡೆಯದಾಗಿ ಸಾಂಖ್ಯಯೋಗದಲ್ಲಿರುವ ಗುಣಗಳನ್ನೂ ಮತ್ತು ದೋಷಗಳನ್ನೂ ತಿಳಿದುಕೊಂಡರು. ಅವರು ಹಾಗೆಯೇ ಜಿಜ್ಞಾಸೆಮಾಡುತ್ತಾ ಸತ್ತ್ವಗುಣದಲ್ಲಿ–ಜ್ಞಾನಶಕ್ತಿ, ವೈರಾಗ್ಯ, ಸ್ವಾಮಿಭಾವ, ತಪಸ್ಸು, ಸತ್ಯ, ಕ್ಷಮೆ, ಧೈರ್ಯ, ಸ್ವಚ್ಛತೆ, ಆತ್ಮಬೋಧ ಮತ್ತು ಅಧಿಷ್ಠಾತೃತ್ವ–ಎಂಬ ಹತ್ತು ಗುಣಗಳಿವೆಯೆಂಬುದನ್ನು ಕಂಡುಕೊಂಡರು. ರಜೋಗುಣದಲ್ಲಿ–ಅಸಂತೋಷ, ಪಶ್ಚಾತ್ತಾಪ, ಶೋಕ, ಲೋಭ, ಅಕ್ಷಮೆ, ದಮನಪ್ರವೃತ್ತಿ, ಕಾಮ, ಕ್ರೋಧ ಮತ್ತು ಈರ್ಷ್ಯೆಗಳೆಂಬ ಒಂಬತ್ತು ಗುಣಗಳಿವೆಯೆಂಬುದನ್ನೂ ತಿಳಿದುಕೊಂಡರು. ತಮೋಗುಣದಲ್ಲಿ–ಅವಿವೇಕ, ಮೋಹ, ಪ್ರಮಾದ, ಸ್ವಪ್ನ, ನಿದ್ರೆ, ಅಭಿಮಾನ, ವಿಷಾದ ಮತ್ತು ಅಪ್ರೀತಿಗಳೆಂಬ ಎಂಟು ಗುಣಗಳಿವೆಯೆಂಬುದನ್ನೂ ತಿಳಿದುಕೊಂಡರು. ಬುದ್ಧಿಯಲ್ಲಿ–ಮಹತ್, ಅಹಂಕಾರ, ಶಬ್ದತನ್ಮಾತ್ರೆ, ಸ್ಪರ್ಶತನ್ಮಾತ್ರೆ, ರೂಪತನ್ಮಾತ್ರೆ, ರಸತನ್ಮಾತ್ರೆ, ಗಂಧತನ್ಮಾತ್ರೆಗಳೆಂಬ ಏಳು ಗುಣಗಳಿವೆಯೆಂಬುದನ್ನೂ ತಿಳಿದುಕೊಂಡರು. ಮನಸ್ಸಿನಲ್ಲಿ–ಶ್ರೋತ್ರ, ತ್ವಚೆ, ನೇತ್ರ, ರಸನೆ, ಘ್ರಾಣ ಮತ್ತು ಮನಸ್ಸು – ಎಂಬ ಆರು ಗುಣಗಳಿವೆಯೆಂಬುದನ್ನೂ ತಿಳಿದುಕೊಂಡರು. ಆಕಾಶವು-ವಾಯು, ಆಕಾಶ, ಅಗ್ನಿ, ಜಲ ಮತ್ತು ಪೃಥ್ವಿಗಳೆಂಬ ಐದು ಗುಣಗಳುಳ್ಳದ್ದೆಂದು ತಿಳಿದುಕೊಂಡರು. ಬುದ್ಧಿಯು ಸಂಶಯ, ನಿಶ್ಚಯ, ಗರ್ವ, ಮತ್ತು ಸ್ಮರಣ–ಎಂಬ ನಾಲ್ಕು ಗುಣಗಳನ್ನು ಹೊಂದಿದೆಯೆಂದು ತಿಳಿದುಕೊಂಡರು. ತಮೋಗುಣವು–ಅಪ್ರತಿಪತ್ತಿ, ವಿಪ್ರತಿಪತ್ತಿ ಮತ್ತು ವಿಪರೀತಪ್ರತಿಪತ್ತಿಗಳೆಂಬ ತ್ರಿಗುಣಾತ್ಮಕವೆಂದೂ–ರಜೋಗುಣವು ಪ್ರವೃತ್ತಿ ಮತ್ತು ದುಃಖಗಳೆಂಬ ದ್ವಿಗುಣಾತ್ಮಕವೆಂದೂ–ಸತ್ತ್ವಗುಣವು ಪ್ರಕಾಶವೆಂಬ* ಏಕಗುಣಾತ್ಮಕವೆಂದೂ ತಿಳಿದುಕೊಂಡರು.

---

* ಸತ್ತ್ವದಲ್ಲಿರುವುದಾಗಿ ಮೇಲೆ ಹೇಳಿರುವ ಹತ್ತು ಗುಣಗಳೂ, ಪ್ರಕಾಶವೆಂಬ ಗುಣದ ವಿಕಾಸಗಳೇ ಆಗಿವೆ.

ಆತ್ಮಪ್ರಾಪ್ತಿಯ ಮಾರ್ಗವನ್ನು ತಿಳಿದುಕೊಂಡರು. ಪ್ರಾಕೃತಪ್ರಳಯದ ವಿಷಯವನ್ನೂ ಮತ್ತು ಆತ್ಮದರ್ಶನದ ವಿಷಯವನ್ನೂ ತತ್ತ್ವಶಃ ತಿಳಿದುಕೊಂಡರು. ಈ ವಿಷಯಗಳೆಲ್ಲವನ್ನೂ ಶಾಸ್ತ್ರಗಳನ್ನೂ ಮಥಿಸಿ ತಿಳಿದುಕೊಂಡ ಸಾಂಖ್ಯಯೋಗಿಗಳು ಮೋಕ್ಷೋಪಯೋಗಿಗಳಾದ ಸಾಧನಗಳಿಂದ ಶುದ್ಧಚಿತ್ತರಾಗಿ ಮೋಕ್ಷವನ್ನು ಪಡೆದುಕೊಂಡರು.

ರೂಪೇಣ ದೃಷ್ಟಿಂ ಸಂಯುಕ್ತಾಂ ಘ್ರಾಣಂ ಗನ್ಧಗುಣೇನ ಚ ।
ಶಬ್ದೇ ಸಕ್ತಂ ತಥಾ ಶ್ರೋತ್ರಂ ಜಿಹ್ವಾಂ ರಸಗುಣೇಷು ಚ ॥೧೮॥

ಕಣ್ಣುಗಳು ರೂಪಗುಣದಿಂದ ಯುಕ್ತವಾಗಿರುವುದೆಂಬುದನ್ನೂ, ಘ್ರಾಣವು (ಮೂಗು) ಗಂಧಗುಣದಿಂದ ಯುಕ್ತವಾಗಿರುವುದೆಂಬುದನ್ನೂ, ಕಿವಿಯು ಶಬ್ದಗುಣದಿಂದ ಯುಕ್ತವಾಗಿರುವುದೆಂಬುದನ್ನೂ, ನಾಲಿಗೆಯು ರಸಗುಣದಿಂದ ಯುಕ್ತವಾಗಿರುವುದೆಂಬುದನ್ನೂ ಸಾಂಖ್ಯಯೋಗಿಗಳು ತಿಳಿದುಕೊಂಡರು.

ತನುಂ ಸ್ಪರ್ಶೇ ತಥಾ ಸಕ್ತಾಂ ವಾಯುಂ ನಭಸಿ ಚಾಶ್ರಿತಮ್ ।
ಮೋಹಂ ತಮಸಿ ಸಂಯುಕ್ತಂ ಲೋಭಮರ್ಥೇಷು ಸಂಶ್ರಿತಮ್ ॥

ಶರೀರವು (ಚರ್ಮವು) ಸ್ಪರ್ಶಗುಣಯುಕ್ತವಾಗಿರುವುದೆಂಬುದನ್ನೂ, ವಾಯುವು ಆಕಾಶವನ್ನು ಆಶ್ರಯಿಸಿದೆಯೆಂಬುದನ್ನೂ, ಮೋಹವು ತಮೋಗುಣದಲ್ಲಿ ಸೇರಿದೆಯೆಂಬುದನ್ನೂ, ಲೋಭವು ಇಂದ್ರಿಯಾರ್ಥಗಳಲ್ಲಿ ಸೇರಿರುವುದೆಂಬುದನ್ನೂ ಸಾಂಖ್ಯರು ತಿಳಿದುಕೊಂಡರು.

ವಿಷ್ಣುಂ ಕ್ರಾನ್ತೇ ಬಲೇ ಶಕ್ರಂ ಕೋಷ್ಠೇ ಸಕ್ತಂ ತಥಾನಲಮ್ ।
ಅಪ್ಸು ದೇವೀಂ ಸಮಾಸಕ್ತಾಮಪಸ್ತೇಜಸಿ ಸಂಶ್ರಿತಾಃ ॥೨೦॥

ತೇಜೋ ವಾಯೌ ತು ಸಂಸಕ್ತಂ ವಾಯುಂ ನಭಸಿ ಚಾಶ್ರಿತಮ್ ।
ನಭೋ ಮಹತಿ ಸಂಯುಕ್ತಂ ಮಹದ್ಬುದ್ಧೌ ಚ ಸಂಶ್ರಿತಮ್ ॥೨೧॥

ಪಾದಗಳಲ್ಲಿ ವಿಷ್ಣುವಿರುವನೆಂಬುದನ್ನೂ, ಬಲದಲ್ಲಿ (ತೋಳುಗಳಲ್ಲಿ) ಇಂದ್ರನಿರುವನೆಂಬುದನ್ನೂ, ಹೊಟ್ಟೆಯಲ್ಲಿ ಅಗ್ನಿಯಿರುವನೆಂಬುದನ್ನೂ, ನೀರಿನಲ್ಲಿ ಭೂದೇವಿಯಿರುವಳೆಂಬುದನ್ನೂ, ನೀರು ತೇಜಸ್ಸಿನಲ್ಲಿ ಸೇರಿದೆ

ಯೆಂಬುದನ್ನೂ, ತೇಜಸ್ಸು ವಾಯುವಿನಲ್ಲಿ ಸೇರಿದೆಯೆಂಬುದನ್ನೂ, ವಾಯುವು ಆಕಾಶವನ್ನು ಆಶ್ರಯಿಸಿರುವುದೆಂಬುದನ್ನೂ, ಆಕಾಶವು ಮಹತ್ತತ್ತ್ವದಲ್ಲಿ ಸೇರಿದೆಯೆಂಬುದನ್ನೂ, ಮಹತತ್ತ್ವವು ಬುದ್ಧಿಯಲ್ಲಿ ಅಧಿಷ್ಠಾನವನ್ನು ಹೊಂದಿದೆಯೆಂಬುದನ್ನೂ ಸಾಂಖ್ಯರು ತಿಳಿದುಕೊಂಡರು.

ಬುದ್ಧಿಂ ತಮಸಿ ಸಂಸಕ್ತಾಂ ತಮೋ ರಜಸಿ ಸಂಶ್ರಿತಮ್ ।
ರಜಃ ಸತ್ತ್ವೇ ತಥಾ ಸಕ್ತಂ ಸತ್ತ್ವಂ ಸಕ್ತಂ ತಥಾತ್ಮನಿ ॥೨೨॥

ಸಕ್ತಮಾತ್ಮಾನಮೀಶೇ ಚ ದೇವೇ ನಾರಾಯಣೇ ತಥಾ ।
ದೇವಂ ಮೋಕ್ಷೇ ಚ ಸಂಸಕ್ತಂ ಮೋಕ್ಷಂ ಸಕ್ತಂ ತು ನ ಕ್ವಚಿತ್ ॥

ಬುದ್ಧಿಯು ತಮೋಗುಣದಲ್ಲಿ ಸೇರಿರುವುದೆಂಬುದನ್ನೂ, ತಮಸ್ಸು ರಜಸ್ಸಿನಲ್ಲಿ ಸೇರಿರುವುದೆಂಬುದನ್ನೂ, ರಜಸ್ಸು ಸತ್ತ್ವದಲ್ಲಿ ಸೇರಿರುವುದೆಂಬು ದನ್ನೂ, ಸತ್ತ್ವಗುಣವು ಆತ್ಮನಲ್ಲಿ ಸೇರಿರುವುದೆಂಬುದನ್ನೂ, ಆತ್ಮವು ಈಶನಾದ ನಾರಾಯಣನಲ್ಲಿ ಸೇರಿರುವುದೆಂಬುದನ್ನೂ, ನಾರಾಯಣನು ಮೋಕ್ಷದಲ್ಲಿ ಸೇರಿರುವನೆಂಬುದನ್ನೂ ಆದರೆ ಮೋಕ್ಷವು ಯಾವುದರೊಂದಿಗೂ ಸೇರಿಲ್ಲವೆಂಬುದನ್ನೂ, ಅದೇ ಅವಿನಾಶೀ ಮತ್ತು ಅನಾಶ್ರಯವೆಂಬುದನ್ನೂ ಸಾಂಖ್ಯರು ತಿಳಿದುಕೊಂಡರು.

ಜ್ಞಾತ್ವಾ ಸತ್ತ್ವಗುಣಂ ದೇಹಂ ವೃತಂ ಷೋಡಶಭಿರ್ಗುಣೈಃ ।
ಸ್ವಭಾವಂ ಚೇತನಾಂ ಚೈವ ಜ್ಞಾತ್ವಾ ದೇಹಸಮಾಶ್ರಿತೇ ॥೨೪॥

ಮಧ್ಯಸ್ಥಮೇಕಮಾತ್ಮಾನಂ ಪಾಪಂ ಯಸ್ಮಿನ್ನ ವಿದ್ಯತೇ ।
ದ್ವಿತೀಯಂ ಕರ್ಮ ವಿಜ್ಞಾಯ ನೃಪತೇ ವಿಷಯೈಷಿಣಾಮ್ ॥೨೫॥

ದೇಹ, ಬುದ್ಧಿ, ಇವೇ ಮೊದಲಾದ ಸತ್ತ್ವಗಳಿಂದ ಯುಕ್ತವಾದ ದೇಹ ವನ್ನು–ದಶೇಂದ್ರಿಯಗಳು, ಮನಸ್ಸು ಮತ್ತು ಪಂಚಪ್ರಾಣಗಳಿಂದ ಯುಕ್ತ ವಾದ ಹದಿನಾರು ಗುಣಗಳುಳ್ಳದ್ದೆಂದು ಸಾಂಖ್ಯರು ತಿಳಿದುಕೊಂಡರು. ಸ್ವಭಾವ ಮತ್ತು ಚೇತನಗಳು ದೇಹವನ್ನು ಆಶ್ರಯಿಸಿರುವುದನ್ನು ತಿಳಿದುಕೊಂಡರು. ಪಾಪರಹಿತನಾದ, ಏಕಮಾತ್ರನಾದ ಆತ್ಮನು ಹೃದಯಕಮಲದ ಮಧ್ಯದಲ್ಲಿ ಉದಾಸೀನನಾಗಿ ಇರುವನೆಂಬುದನ್ನೂ

ಸಾಂಖ್ಯರು ತಿಳಿದುಕೊಂಡರು. ವಿಷಯಸುಖಗಳಲ್ಲಿ ಅಭಿಲಾಷೆಯಿರುವ ಮನುಷ್ಯರ ಯಾವ ಕರ್ಮವಿದೆಯೋ–ಅದು ಆತ್ಮನಿಗೆ ಅತಿರಿಕ್ತವಾದ ಎರಡನೆಯ ತತ್ತ್ವಕ್ಕೆ (ಅಜ್ಞಾನಕ್ಕೆ) ಸಂಬಂಧಿಸಿದುದೆಂಬುದನ್ನೂ ಸಾಂಖ್ಯರು ತಿಳಿದುಕೊಂಡರು.

ಇನ್ದ್ರಿಯಾಣೀನ್ದ್ರಿಯಾರ್ಥಾಂಶ್ಚ ಸರ್ವಾನಾತ್ಮನಿ ಸಂಶ್ರಿತಾನ್ ।
ದುರ್ಲಭತ್ವಂ ಚ ಮೋಕ್ಷಸ್ಯ ವಿಜ್ಞಾಯ ಶ್ರುತಿಪೂರ್ವಕಮ್ ॥೨೬॥

ಇಂದ್ರಿಯಗಳು ಮತ್ತು ಇಂದ್ರಿಯಾರ್ಥಗಳು –ಈ ಎಲ್ಲವೂ ಆತ್ಮನಲ್ಲಿಯೇ ಸೇರಿಬಿಟ್ಟಿವೆಯೆಂಬುದನ್ನೂ –ಈ ಕಾರಣದಿಂದಲೇ ಮೋಕ್ಷವು ಅತ್ಯಂತದುರ್ಲಭವೆಂಬುದನ್ನೂ ವೇದಗಳ ಅಧ್ಯಯನದ ಮೂಲಕವಾಗಿ ಸಾಂಖ್ಯರು ತಿಳಿದುಕೊಂಡರು.

ಪ್ರಾಣಾಪಾನೌ ಸಮಾನಂ ಚ ವ್ಯಾನೋದನೌ ಚ ತತ್ತ್ವತಃ ।
ಅಧಶ್ಚೈವಾನಿಲಂ ಜ್ಞಾತ್ವಾ ಪ್ರವಹಂ ಚಾನಿಲಂ ಪುನಃ ॥೨೭॥

ಸಪ್ತ ವಾತಾಂಸ್ತಥಾ ಜ್ಞಾತ್ವಾ ಸಪ್ತಧಾ ವಿಹಿತಾನ್ಪುನಃ ।
ಪ್ರಜಾಪತೀನೃಷೀಂಶ್ಚೈವ ಮಾರ್ಗಾಂಶ್ಚೈವ ಬಹೂನ್ವರಾನ್ ॥೨೮॥

ದೇಹದಲ್ಲಿರುವ ಪ್ರಾಣ, ಅಪಾನ, ಸಮಾನ, ವ್ಯಾನ ಮತ್ತು ಉದಾನಗಳೆಂಬ ಐದು ವಾಯುಗಳನ್ನೂ, ಆರನೆಯದಾದ ಅಧೋವಾಯುವನ್ನೂ, ಊರ್ಧ್ವಮುಖವಾಗಿರುವ ಪ್ರವಹ ಎಂಬ ಹೆಸರಿನ ಏಳನೆಯ ವಾಯುವನ್ನೂ ತತ್ತ್ವತಃ ತಿಳಿದುಕೊಂಡರು. ಹೀಗೆ ಏಳು ವಾಯುಗಳನ್ನೂ ತಿಳಿದುಕೊಂಡು ಪುನಃ ಅವುಗಳಲ್ಲಿ ಒಂದೊಂದರಲ್ಲಿಯೂ ಇರುವ ಏಳೇಳು ಪ್ರಭೇದಗಳನ್ನೂ–ಹೀಗೆ ಒಟ್ಟು ನಲವತ್ತೊಂಬತ್ತು ಪ್ರಕಾರವಾದ ವಾಯುಗಳಿವೆಯೆಂಬುದನ್ನೂ ಸಾಂಖ್ಯರು ತಿಳಿದುಕೊಂಡರು. ಅವರು ಹೀಗೆಯೇ ಅನೇಕ ಪ್ರಜಾಪತಿಗಳನ್ನೂ, ಅನೇಕರಾದ ಋಷಿಗಳನ್ನೂ ಮತ್ತು ಅವರ ಬಳಿಗೆ ಹೋಗಬಹುದಾದ ಶ್ರೇಷ್ಠವಾದ ಅನೇಕಮಾರ್ಗಗಳನ್ನೂ ಕಂಡುಕೊಂಡರು.

ಸಪ್ತರ್ಷೀಂಶ್ಚ ಬಹೂಞ್ಜ್ಞಾತ್ವಾ ರಾಜರ್ಷೀಂಶ್ಚ ಪರಂತಪ ।
ಸುರರ್ಷೀನ್ಮಹತಶ್ಚಾನ್ಯಾನ್ಬ್ರಹ್ಮರ್ಷೀನ್ಸೂರ್ಯಸಂನಿಭಾನ್ ॥೨೯॥

ಸಪ್ತರ್ಷಿಗಳನ್ನೂ, ಬಹುಸಂಖ್ಯಾತರಾದ ರಾಜರ್ಷಿಗಳನ್ನೂ, ದೇವರ್ಷಿಗಳನ್ನೂ, ಸೂರ್ಯಸದೃಶರಾದ ಬ್ರಹ್ಮರ್ಷಿಗಳನ್ನೂ ಸಾಂಖ್ಯಯೋಗಿಗಳು ತಿಳಿದುಕೊಂಡರು.

ಐಶ್ವರ್ಯಾಚ್ಚ್ಯಾವಿತಾನ್ದೃಷ್ಟ್ವಾ ಕಾಲೇನ ಮಹತಾ ನೃಪ ।
ಮಹತಾಂ ಭೂತಸಂಘಾನಾಂ ಶ್ರುತ್ವಾ ನಾಶಂ ಚ ಪಾರ್ಥಿವ ॥೩೦॥

ಗತಿಂ ಚಾಪ್ಯಶುಭಾಂ ಜ್ಞಾತ್ವಾ ನೃಪತೇ ಪಾಪಕರ್ಮಿಣಾಮ್ ।
ವೈತರಣ್ಯಾಂ ಚ ಯದ್ದುಃಖಂ ಪತಿತಾನಾಂ ಯಮಕ್ಷಯೇ ॥೩೧॥

ಅಂತಹ ಶ್ರೇಷ್ಠವಾದ ಲೋಕಗಳಿಗೆ ಹೋದವರೆಲ್ಲರೂ ಬಹಳ ಕಾಲಾನಂತರ ಅಲ್ಲಿನ ಸಂಪತ್ತಿನಿಂದ ಭ್ರಷ್ಟರಾದುದನ್ನೂ ಸಾಂಖ್ಯಪಂಡಿತರು ನೋಡಿದರು. ದೊಡ್ಡ-ದೊಡ್ಡ ಪ್ರಾಣಿಸಮುದಾಯಗಳೆಲ್ಲವೂ ಒಮ್ಮೆ ಸಂಪೂರ್ಣನಾಶವಾಗುವುದೆಂಬುದನ್ನೂ ಅವರು ಕೇಳಿತಿಳಿದರು. ಪಾಪಕರ್ಮಿಗಳು ಹೊಂದುವ ದುರ್ಗತಿಯನ್ನೂ ಮತ್ತು ವೈತರಣೀನದಿಯಲ್ಲಿ ಬಿದ್ದಾಗ ಅವರು ಅನುಭವಿಸುವ ದುಃಖವನ್ನೂ ಮತ್ತು ಯಮಲೋಕದಲ್ಲಿ ಅವರು ಅನುಭವಿಸುವ ಶಿಕ್ಷೆಯನ್ನೂ ಸಾಂಖ್ಯರು ತಿಳಿದುಕೊಂಡರು.

ಯೋನೀಷು ಚ ವಿಚಿತ್ರಾಸು ಸಂಸಾರಾನಶುಭಾಂಸ್ತಥಾ ।
ಜಠರೇ ಚಾಶುಭೇ ವಾಸಂ ಶೋಣಿತೋದಕಭಾಜನೇ ॥೩೨॥

ಶ್ಲೇಷ್ಮಮೂತ್ರಪುರೀಷೇ ಚ ತೀವ್ರಗನ್ಧಸಮನ್ವಿತೇ ।
ಶುಕ್ರಶೋಣಿತಸಂಘಾತೇ ಮಜ್ಜಾಸ್ನಾಯುಪರಿಗ್ರಹೇ ॥೩೩॥

ಶಿರಾಶತಸಮಾಕೀರ್ಣೇ ನವದ್ವಾರೇ ಪುರೇಽಶುಚೌ ।
ವಿಜ್ಞಾಯ ಹಿತಮಾತ್ಮಾನಂ ಯೋಗಾಂಶ್ಚ ವಿವಿಧಾನ್ನೃಪ ॥೩೪॥

ಜೀವರು ವಿಚಿತ್ರವಾದ ಯೋನಿಗಳಲ್ಲಿ ಜನ್ಮವನ್ನು ಪಡೆದು ಅಶುಭವಾದ (ಪಾಪಭೂಯಿಷ್ಠವಾದ) ಸಂಸಾರಗಳನ್ನು ಸೇರುವರೆಂಬುದನ್ನೂ ಸಾಂಖ್ಯರು ತಿಳಿದುಕೊಂಡರು. ಜೀವನು ಕಫ-ಮೂತ್ರ-ಪುರೀಷಗಳಿಂದ ಯುಕ್ತವಾದ, ತೀಕ್ಷ್ಣವಾದ ವಾಸನೆಯಿಂದ ಕೂಡಿರುವ, ರೇತೋರಕ್ತಗಳ ಸಮಾವೇಶವಿರುವ, ಮಜ್ಜೆ ಮತ್ತು ಸ್ನಾಯುಗಳ ಸಂಗ್ರಹವಿರುವ, ನೂರಾರು

ನರಗಳಿಂದ ವ್ಯಾಪ್ತವಾಗಿರುವ, ಒಂಬತ್ತು ಬಾಗಿಲುಗಳುಳ್ಳ, ಅಶುಚಿಯಾದ ಶರೀರವೆಂಬ ಪುರದಲ್ಲಿ ರಕ್ತಕ್ಕೂ ಮತ್ತು ಮೂತ್ರಕ್ಕೂ ಪಾತ್ರೆಯ ರೂಪದಲ್ಲಿರುವ ಅಪವಿತ್ರವಾದ ಗರ್ಭಾಶಯದಲ್ಲಿ ವಾಸಮಾಡಬೇಕಾಗುವುದೆಂಬುದನ್ನೂ ಸಾಂಖ್ಯರು ತಿಳಿದುಕೊಂಡು ಜೀವನಿಗೆ ಪರಮಹಿತಸ್ವರೂಪನಾದ ಆತ್ಮನನ್ನೂ, ಅವನನ್ನು ತಿಳಿದುಕೊಳ್ಳಲು ಇರುವ ನಾನಾಪ್ರಕಾರವಾದ ಉಪಾಯಗಳನ್ನೂ ಸಾಂಖ್ಯಯೋಗಿಗಳು ತಿಳಿದುಕೊಂಡರು.

ತಾಮಸಾನಾಂ ಚ ಜನ್ತೂನಾಂ ರಮಣೀಯಾವೃತಾತ್ಮನಾಮ್ ॥೩೫॥
ಸಾತ್ತ್ವಿಕಾನಾಂ ಚ ಜನ್ತೂನಾಂ ಕುತ್ಸಿತಂ ಭರತರ್ಷಭ ।
ಗರ್ಹಿತಂ ಮಹತಾಮರ್ಥೇ ಸಾಂಖ್ಯಾನಾಂ ವಿದಿತಾತ್ಮನಾಮ್ ॥೩೬॥

ಭರತಶ್ರೇಷ್ಠನೇ! ಆತ್ಮಜ್ಞಾನಿಗಳಾದ ಸಾಂಖ್ಯಯೋಗಿಗಳಿಂದ ನಿಂದಿಸಲ್ಪಟ್ಟ ತಾಮಸ, ರಾಜಸ ಮತ್ತು ಸಾತ್ತ್ವಿಕಮನುಷ್ಯರ–ಮೋಕ್ಷವಿರೋಧಿಯಾದ ಮತ್ತು ಕುತ್ಸಿತವಾದ ಯಾವ ವ್ಯವಹಾರವಿದೆಯೋ–ಅದನ್ನೂ ಸಾಂಖ್ಯರು ತಿಳಿದಿದ್ದರು.

ಉಪಪ್ಲವಾಂಸ್ತಥಾ ಘೋರಾಞ್ಶಶಿನಸ್ತೇಜಸಸ್ತಥಾ ।
ತಾರಾಣಾಂ ಪತನಂ ದೃಷ್ಟ್ವಾ ನಕ್ಷತ್ರಾಣಾಂ ಚ ಪರ್ಯಯಮ್ ।
ದ್ವನ್ದ್ವಾನಾಂ ವಿಪ್ರಯೋಗಂ ಚ ವಿಜ್ಞಾಯ ಕೃಪಣಂ ನೃಪ ॥೩೭॥

ಘೋರವಾದ ಉತ್ಪಾತಗಳು, ಚಂದ್ರಗ್ರಹಣ ಮತ್ತು ಸೂರ್ಯಗ್ರಹಣಗಳು, ನಕ್ಷತ್ರದೇವತೆಗಳು ಕೆಳಗೆ ಬೀಳುವುದು, ನಕ್ಷತ್ರಗಳ ವಕ್ರಗತಿ, ಪತಿ-ಪತ್ನಿಯರ ದುಃಖಕರವಾದ ವಿಯೋಗ–ಇವುಗಳ ಕಾರಣಗಳೆಲ್ಲವನ್ನೂ ಸಾಂಖ್ಯಯೋಗಿಗಳು ತಿಳಿದಿದ್ದರು.

ಅನ್ಯೋನ್ಯಭಕ್ಷಣಂ ದೃಷ್ಟ್ವಾ ಭೂತಾನಾಮಪಿ ಚಾಶುಭಮ್ ।
ಬಾಲ್ಯೇ ಮೋಹಂ ಚ ವಿಜ್ಞಾಯ ಕ್ಷಯಂ ದೇಹಸ್ಯ ಚಾಶುಭಮ್ ॥

ರಾಗೇ ಮೋಹೇ ಚ ಸಮ್ಪ್ರಾಪ್ತೇ ಕ್ವಚಿತ್ಸತ್ತ್ವಂ ಸಮಾಶ್ರಿತಮ್ ।
ಸಹಸ್ರೇಷು ನರಃ ಕಶ್ಚಿನ್ಮೋಕ್ಷಬುದ್ಧಿಂ ಸಮಾಶ್ರಿತಃ ॥೩೯॥

ಪ್ರಪಂಚದಲ್ಲಿ ಪ್ರಾಣಿಗಳು ಒಬ್ಬರು ಮತ್ತೊಬ್ಬರನ್ನು ಭಕ್ಷಣೆಮಾಡುತ್ತಿರುವ ದುರವಸ್ಥೆಯನ್ನು ನೋಡಿ, ಪ್ರಾಣಿಗಳ ವಿನಾಶವನ್ನು ತಿಳಿಯು

ತ್ತಿದ್ದರು. ಮನುಷ್ಯರು ಬಾಲ್ಯದಲ್ಲಿ ಮೋಹವಶರಾಗುವುದನ್ನು ತಿಳಿದು ವೃದ್ಧಾವಸ್ಥೆಯಲ್ಲಿ ಶರೀರದ ಅಶುಭವಾದ ಕ್ಷಯವಾಗುವುದೆಂಬುದನ್ನೂ ತಿಳಿದಿದ್ದರು. ರಾಗ-ಮೋಹಗಳೆರಡೂ ಮನುಷ್ಯರನ್ನು ಆಶ್ರಯಿಸಿದನಂತರ ಮಾತ್ರವೇ ಸತ್ತ್ವಗುಣವು ಎಲ್ಲಿಯೋ ಕೆಲವರನ್ನು ಆಶ್ರಯಿಸಿದೆಯೆಂಬುದನ್ನೂ, ಸಾವಿರ ಜನರಲ್ಲಿ ಒಬ್ಬಿಬ್ಬರು ಮಾತ್ರವೇ ಮೋಕ್ಷದ ಬುದ್ಧಿಯನ್ನು ಹೊಂದಿರುವರೆಂಬುದನ್ನೂ–ಸಾಂಖ್ಯಯೋಗಿಗಳು ತಿಳಿದಿದ್ದರು.

ದುರ್ಲಭತ್ವಂ ಚ ಮೋಕ್ಷಸ್ಯ ವಿಜ್ಞಾಯ ಶ್ರುತಿಪೂರ್ವಕಮ್ ।
ಬಹುಮಾನಮಲಬ್ಧೇಷು ಲಬ್ಧೇ ಮಧ್ಯಸ್ಥತಾಂ ಪುನಃ ॥೪೦॥

ಸ್ವಾಭಾವಿಕವಾಗಿ ಜನರಿಗೆ ಸಿಕ್ಕದೇ ಇರುವ ವಸ್ತುಗಳಲ್ಲಿ ಹೆಚ್ಚಿನ ಆದರವಿರುವುದನ್ನೂ–ಸಿಕ್ಕಿದ ವಸ್ತುವಿನಲ್ಲಿ ಔದಾಸೀನ್ಯವಿರುವುದನ್ನೂ ಕಂಡು ಕೊಂಡರು. ವೇದಗಳ ಮೂಲಕವಾಗಿ ಮೋಕ್ಷವು ದುರ್ಲಭವೆಂಬುದನ್ನು ತಿಳಿದು, ಅಂತಹ ದುರ್ಲಭವಾದ ಮೋಕ್ಷದ ವಿಷಯದಲ್ಲಿಯೇ ಹೆಚ್ಚು ಆಸಕ್ತಿಯನ್ನು ಸಾಂಖ್ಯರು ಹೊಂದಿದರು.

ವಿಷಯಾಣಾಂ ಚ ದೌರಾತ್ಮ್ಯಂ ವಿಜ್ಞಾಯ ನೃಪತೇ ಪುನಃ ।
ಗತಾಸೂನಾಂ ಚ ಕೌನ್ತೇಯ ದೇಹಾನ್ದೃಷ್ಟ್ವಾ ತಥಾಶುಭಾನ್ ॥೪೧॥

ವಿಷಯಗಳು (ಶಬ್ದ-ಸ್ಪರ್ಶ-ರೂಪ-ರಸ-ಗಂಧಾದಿಗಳು) ದುಷ್ಟವಾದು ವೆಂಬುದನ್ನು ಅರಿತರು. ಪ್ರಾಣಗಳನ್ನು ಬಿಟ್ಟವರ ದೇಹಗಳನ್ನು ಗಮನಿಸಿ ಅವುಗಳು ಅಶುಭವೆಂಬುದನ್ನೂ ತಿಳಿದರು.

ವಾಸಂ ಕುಲೇಷು ಜನ್ತೂನಾಂ ದುಃಖಂ ವಿಜ್ಞಾಯ ಭಾರತ ।
ಬ್ರಹ್ಮಘ್ನಾನಾಂ ಗತಿಂ ಜ್ಞಾತ್ವಾ ಪತಿತಾನಾಂ ಸುದಾರುಣಾಮ್ ॥೪೨॥

ಮನುಷ್ಯರಿಗೆ ಗೃಹವಾಸವೇ ದುಃಖಕರವೆಂಬುದನ್ನು ಸಾಂಖ್ಯರು ತಿಳಿದುಕೊಂಡರು. ಪತಿತರಾದ ಬ್ರಹ್ಮಘಾತಿಗಳಿಗೆ ಸುದಾರುಣವಾದ ದುರ್ಗತಿಯುಂಟಾಗುವುದೆಂಬುದನ್ನು ತಿಳಿದರು.

ಸುರಾಪಾನೇ ಚ ಸಕ್ತಾನಾಂ ಬ್ರಾಹ್ಮಣಾನಾಂ ದುರಾತ್ಮನಾಮ್ ।
ಗುರುದಾರಪ್ರಸಕ್ತಾನಾಂ ಗತಿಂ ವಿಜ್ಞಾಯ ಚಾಶುಭಾಮ್ ॥೪೩॥

ಸುರಾಪಾನದಲ್ಲಿ ಆಸಕ್ತರಾದ ದುರಾತ್ಮರಾದ ಬ್ರಾಹ್ಮಣರಿಗೆ ಸಿಕ್ಕುವ ದುರ್ಗತಿಯನ್ನೂ–ಗುರುಪತ್ನಿಯಲ್ಲಿ ಆಸಕ್ತರಾದವರಿಗೆ ಸಿಕ್ಕುವ ದುರ್ಗತಿಯನ್ನೂ ತಿಳಿದುಕೊಂಡು ಸಾಂಖ್ಯರು ಮೋಕ್ಷಮಾರ್ಗವನ್ನೇ ಹಿಡಿದರು.

ಜನನೀಷು ಚ ವರ್ತನ್ತೇ ಯೇ ನ ಸಮ್ಯಗ್ಯುಧಿಷ್ಠಿರ ।
ಸದೇವಕೇಷು ಲೋಕೇಷು ಯೇ ನ ವರ್ತನ್ತಿ ಮಾನವಾಃ ॥೪೪॥
ತೇನ ಜ್ಞಾನೇನ ವಿಜ್ಞಾಯ ಗತಿಂ ಚಾಶುಭಕರ್ಮಣಾಮ್ ।
ತಿರ್ಯಗ್ಯೋನಿಗತಾನಾಂ ಚ ವಿಜ್ಞಾಯ ಗತಯಃ ಪೃಥಕ್ ॥೪೫॥

ಯುಧಿಷ್ಠಿರ! ತಮ್ಮ ತಾಯಿಯರ ವಿಷಯದಲ್ಲಿ ಯಾರು ಸರಿಯಾಗಿ ನಡೆದುಕೊಳ್ಳುವುದಿಲ್ಲವೋ, ದೇವತೆಗಳ ವಿಷಯದಲ್ಲಿ ಯಾರು ಸರಿಯಾಗಿ ನಡೆದುಕೊಳ್ಳುವುದಿಲ್ಲವೋ ಮತ್ತು ಲೋಕದ ಜನರ ವಿಷಯದಲ್ಲಿ ಯಾರು ಸರಿಯಾಗಿ ನಡೆದುಕೊಳ್ಳುವುದಿಲ್ಲವೋ–ಅಂತಹ ಪಾಪಕರ್ಮಿಗಳಿಗೆ ಪ್ರಾಪ್ತವಾಗುವ ದುರ್ಗತಿಯನ್ನೂ, ಪಶು-ಪಕ್ಷಿಗಳೇ ಮೊದಲಾದ ತಿರ್ಯಗ್ಯೋನಿಗಳಲ್ಲಿ ಹುಟ್ಟಿದುವುಗಳಿಗೆ ಪ್ರಾಪ್ತವಾಗುವ ವಿಭಿನ್ನಗತಿಗಳನ್ನೂ ತಿಳಿದುಕೊಂಡು ಸಾಂಖ್ಯರು ಮೋಕ್ಷಮಾರ್ಗವನ್ನೇ ಅವಲಂಬಿಸಿದರು.

ವೇದವಾದಾಂಸ್ತಥಾ ಚಿತ್ರಾನೃತೂನಾಂ ಪರ್ಯಯಾಂಸ್ತಥಾ ।
ಕ್ಷಯಂ ಸಂವತ್ಸರಾಣಾಂ ಚ ಮಾಸಾನಾಂ ಚ ಕ್ಷಯಂ ತಥಾ ॥೪೬॥

ಪಕ್ಷಕ್ಷಯಂ ತಥಾ ದೃಷ್ಟ್ವಾ ದಿವಸಾನಾಂ ಚ ಸಂಕ್ಷಯಮ್ ।
ಕ್ಷಯಂ ವೃದ್ಧಿಂ ಚ ಚನ್ದ್ರಸ್ಯ ದೃಷ್ಟ್ವಾ ಪ್ರತ್ಯಕ್ಷತಸ್ತಥಾ ॥೪೭॥
ವೃದ್ಧಿಂ ದೃಷ್ಟ್ವಾ ಸಮುದ್ರಾಣಾಂ ಕ್ಷಯಂ ತೇಷಾಂ ತಥಾ ಪುನಃ ।
ಕ್ಷಯಂ ಧನಾನಾಂ ದೃಷ್ಟ್ವಾ ಚ ಪುನರ್ವೃದ್ಧಿಂ ತಥೈವ ಚ ॥೪೮॥

ವೇದಗಳ ನಾನಾವಿಧವಾದ ವಿಚಿತ್ರವಚನಗಳನ್ನೂ–ಋತುಗಳ ಪರಿವರ್ತನೆಗಳನ್ನೂ–ಸಂವತ್ಸರಗಳೂ, ಮಾಸಗಳೂ, ಪಕ್ಷಗಳೂ, ದಿವಸಗಳೂ ಕಳೆದುಹೋಗುತ್ತಿರುವುದನ್ನೂ–ಚಂದ್ರನ ವೃದ್ಧಿ-ಕ್ಷಯಗಳನ್ನೂ, ಸಮುದ್ರಗಳ ವೃದ್ಧಿ-ಕ್ಷಯಗಳನ್ನೂ, ಐಶ್ವರ್ಯಗಳ ವೃದ್ಧಿ-ಕ್ಷಯಗಳನ್ನೂ ಪ್ರತ್ಯಕ್ಷವಾಗಿ ನೋಡಿ–ಇವುಗಳಾವುವೂ ಸ್ಥಿರವಲ್ಲವೆಂಬುದನ್ನು ನಿಶ್ಚಯಮಾಡಿಕೊಂಡು ಸಾಂಖ್ಯರು ಮೋಕ್ಷಮಾರ್ಗವನ್ನೇ ಆಶ್ರಯಿಸಿದರು.

ಸಂಯೋಗಾನಾಂ ಕ್ಷಯಂ ದೃಷ್ಟ್ವಾ ಯುಗಾನಾಂ ಚ ವಿಶೇಷತಃ ।
ಕ್ಷಯಂ ಚ ದೃಷ್ಟ್ವಾ ಶೈಲಾನಾಂ ಕ್ಷಯಂ ಚ ಸರಿತಾಂ ತಥಾ ॥೮೯॥

ವರ್ಣಾನಾಂ ಚ ಕ್ಷಯಂ ದೃಷ್ಟ್ವಾ ಕ್ಷಯಾಂತಂ ಚ ಪುನಃ ಪುನಃ ।
ಜರಾಮೃತ್ಯೂ ತಥಾ ಜನ್ಮ ದೃಷ್ಟ್ವಾ ದುಃಖಾನಿ ಚೈವ ಹ ॥೯೦॥

ಬಂಧು-ಮಿತ್ರಾದಿಗಳ ಸಂಯೋಗಗಳೂ ಮತ್ತು ಕೃತ-ತ್ರೇತಾದಿ ಯುಗಗಳೂ ವಿಶೇಷವಾಗಿ ಕ್ಷಯಿಸುವುದನ್ನೂ, ಪರ್ವತಗಳು ಕ್ಷಯಿಸುವುದನ್ನೂ, ನದಿಗಳು ಕ್ಷಯಿಸುವುದನ್ನೂ, ವರ್ಣಗಳು ಕ್ಷಯಿಸುವುದನ್ನೂ, ಮುಪ್ಪು- ಮೃತ್ಯು ಮತ್ತು ಜನ್ಮಗಳು ಪ್ರಾಣಿಮಾತ್ರಕ್ಕೇ ದುಃಖದಾಯಕವಾಗಿರುವುದನ್ನೂ, ಸರ್ವವೂ ಕ್ಷಯದಲ್ಲಿಯೇ ಪರ್ಯವಸಾನಹೊಂದುವುದನ್ನೂ ಪುನಃ-ಪುನಃ ನೋಡಿ–ಸಾಂಖ್ಯರು ಶಾಶ್ವತವೂ ಸನಾತನವೂ ಆದ ಮೋಕ್ಷಮಾರ್ಗವನ್ನು ಆಶ್ರಯಿಸಿದರು.

ದೇಹದೋಷಾಂಸ್ತಥಾ ಜ್ಞಾತ್ವಾ ತೇಷಾಂ ದುಃಖಂ ಚ ತತ್ತ್ವತಃ ।
ದೇಹವಿಕ್ಲವತಾಂ ಚೈವ ಸಮ್ಯಗ್ವಿಜ್ಞಾಯ ತತ್ತ್ವತಃ ॥೯೧॥

ದೇಹದಲ್ಲಿರುವ ದೋಷಗಳನ್ನೂ, ದೇಹವು ಅನುಭವಿಸಬೇಕಾಗಿರುವ ದುಃಖವನ್ನೂ, ಶರೀರದ ವ್ಯಾಕುಲತೆಯನ್ನೂ ತತ್ತ್ವತಃ ಚೆನ್ನಾಗಿ ತಿಳಿದುಕೊಂಡು ಸಾಂಖ್ಯರು ದೇಹಾಭಿಮಾನವನ್ನೇ ತೊರೆದರು.

ಆತ್ಮದೋಷಾಂಶ್ಚ ವಿಜ್ಞಾಯ ಸರ್ವಾನಾತ್ಮನಿ ಸಂಶ್ರಿತಾನ್ ।
ಸ್ವದೇಹಾದುತ್ಥಿತಾನ್ಗಂಧಾಂಸ್ತಥಾ ವಿಜ್ಞಾಯ ಚಾಶುಭಾನ್ ॥೯೨॥

ಶರೀರದಲ್ಲಿರುವ ದೋಷಗಳನ್ನೂ, ಶರೀರದಲ್ಲಿ ಆಶ್ರಯವನ್ನು ಹೊಂದಿರುವ ವಸ್ತುಗಳನ್ನೂ, ಆ ದೇಹದಿಂದಲೇ ಹೊರಹೊರಟ ದುರ್ಗಂಧವನ್ನೂ ತಿಳಿದುಕೊಂಡು ಸಾಂಖ್ಯರು ದೇಹದ ವಿಷಯದಲ್ಲಿ ಅನಾಸಕ್ತರಾದರು.”

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಾನ್ಸ್ವಗಾತ್ರೋದ್ಭವಾನ್ದೋಷಾನ್ಪಶ್ಯಸ್ಯಮಿತವಿಕ್ರಮ ।
ಏತನ್ಮೇ ಸಂಶಯಂ ಕೃತ್ಸ್ನಂ ವಕ್ತುಮರ್ಹಸಿ ತತ್ತ್ವತಃ ॥೯೩॥

"ಅಮಿತವಿಕ್ರಮನಾದ ಪಿತಾಮಹನೇ! ಶರೀರದಲ್ಲಿ ಯಾವ ಯಾವ ದೋಷಗಳು ಉತ್ಪನ್ನವಾಗುವುದನ್ನು ನೀನು ಗಮನಿಸಿರುವೆ? ಈ ಸಂಶಯವು ನನಗುಂಟಾಗಿದೆ. ಸಮಗ್ರವಾಗಿ ಈ ವಿಷಯವನ್ನು ನೀನು ಯಥಾವತ್ತಾಗಿ ದಯಮಾಡಿ ಹೇಳು."

ಭೀಷ್ಮನು ಹೇಳುತ್ತಾನೆ :

ಪಞ್ಚ ದೋಷಾನ್ಪ್ರಭೋ ದೇಹೇ ಪ್ರವದನ್ತಿ ಮನೀಷಿಣಃ ।
ಮಾರ್ಗಜ್ಞಾಃ ಕಾಪಿಲಾಃ ಸಾಂಖ್ಯಾಃ ಶೃಣು ತಾನರಿಸೂದನ ॥೫೪॥

"ಪ್ರಭುವೇ! ವಿದ್ವಾಂಸರಾದ, ಮೋಕ್ಷಮಾರ್ಗವನ್ನು ತಿಳಿದಿರುವ ಕಪಿಲದೇವರೇ ಮೊದಲಾದ ಸಾಂಖ್ಯಯೋಗಿಗಳು ದೇಹದಲ್ಲಿ ಐದು ವಿಧವಾದ ದೋಷಗಳಿವೆಯೆಂದು ಹೇಳುತ್ತಾರೆ. ಶತ್ರುಮರ್ದನನೇ! ಅದನ್ನು ಹೇಳುವೆನು ; ಕೇಳು.

ಕಾಮಕ್ರೋಧೌ ಭಯಂ ನಿದ್ರಾ ಪಞ್ಚಮಃ ಶ್ವಾಸ ಉಚ್ಯತೇ ।
ಏತೇ ದೋಷಾಃ ಶರೀರೇಷು ದೃಶ್ಯನ್ತೇ ಸರ್ವದೇಹಿನಾಮ್ ॥೫೫॥

ಕಾಮ, ಕ್ರೋಧ, ಭಯ, ನಿದ್ರೆ ಮತ್ತು ಶ್ವಾಸ–ಇವೇ ಆ ಐದು ದೋಷಗಳೆಂದು ಹೇಳಲ್ಪಟ್ಟಿವೆ. ಈ ಐದು ದೋಷಗಳು ಸರ್ವಪ್ರಾಣಿಗಳ ಶರೀರಗಳಲ್ಲಿಯೂ ಕಂಡುಬರುತ್ತವೆ.

ಛಿನ್ದನ್ತಿ ಕ್ಷಮಯಾ ಕ್ರೋಧಂ ಕಾಮಂ ಸಂಕಲ್ಪವರ್ಜನಾತ್ ।
ಸತ್ತ್ವಸಂಸೇವನಾನ್ನಿದ್ರಾಮಪ್ರಮಾದಾದ್ಭಯಂ ತಥಾ ॥೫೬॥

ಛಿನ್ದನ್ತಿ ಪಞ್ಚಮಂ ಶ್ವಾಸಮಲ್ಪಾಹಾರತಯಾ ನೃಪ ॥೫೭॥

ಸಾಂಖ್ಯಪಂಡಿತರು ಕ್ಷಮೆಯಿಂದ–ಕ್ರೋಧವನ್ನೂ, ಸಂಕಲ್ಪತ್ಯಾಗದಿಂದ–ಕಾಮವನ್ನೂ ಕತ್ತರಿಸಿಹಾಕುತ್ತಾರೆ. ಸತ್ತ್ವಗುಣವನ್ನು ಆಶ್ರಯಿಸಿ ನಿದ್ರೆಯನ್ನು ದೂರೀಕರಿಸುತ್ತಾರೆ. ಜಾಗರೂಕತೆಯಿಂದಿರುತ್ತಾ ಭಯವನ್ನು ಹೊಡೆದೋಡಿಸುತ್ತಾರೆ. ಐದನೆಯದಾದ ಶ್ವಾಸದೋಷವನ್ನು ಅಲ್ಪಾಹಾರಸೇವನೆಯಿಂದ ನಾಶಗೊಳಿಸುತ್ತಾರೆ.

ಗುಣಾನ್ಗುಣಶತೈರ್ಜ್ಞಾತ್ವಾ ದೋಷಾನ್ದೋಷಶತೈರಪಿ ।
ಹೇತೂನ್ಹೇತುಶತೈಶ್ಚಿತ್ರೈಶ್ಚಿತ್ರಾನ್ವಿಜ್ಞಾಯ ತತ್ತ್ವತಃ ॥೫೮॥

ಅಪಾಂ ಫೇನೋಪಮಂ ಲೋಕಂ ವಿಷ್ಣೋರ್ಮಾಯಾಶತೈರ್ವೃತಮ್ ।
ಚಿತ್ರಭಿತ್ತಿಪ್ರತೀಕಾಶಂ ನಲಸಾರಮನರ್ಥಕಮ್ ॥೫೯॥

ತಮಃ ಶ್ವಭ್ರನಿಭಂ ದೃಷ್ಟ್ವಾ ವರ್ಷಬುದ್ಬುದಸಂನಿಭಮ್ ।
ನಾಶಪ್ರಾಯಂ ಸುಖಾದ್ಧೀನಂ ನಾಶೋತ್ತರಮಿಹಾವಶಮ್ ॥೬೦॥

ರಜಸ್ತಮಸಿ ಸಂಮಗ್ನಂ ಪಙ್ಕೇ ದ್ವಿಪಮಿವಾವಶಮ್ ।
ಸಾಂಖ್ಯಾ ರಾಜನ್ಮಹಾಪ್ರಾಜ್ಞಾಸ್ತ್ಯಕ್ತ್ವಾ ಸ್ನೇಹಂ ಪ್ರಜಾಕೃತಮ್ ॥೬೧॥

ಜ್ಞಾನಯೋಗೇನ ಸಾಂಖ್ಯೇನ ವ್ಯಾಪಿನಾ ಮಹತಾ ನೃಪ ।
ರಾಜಸಾನಶುಭಾನ್ಗನ್ಧಾಂಸ್ತಾಮಸಾಂಶ್ಚ ತಥಾವಿಧಾನ್ ॥೬೨॥

ಪುಣ್ಯಾಂಶ್ಚ ಸಾತ್ತ್ವಿಕಾನ್ಗನ್ಧಾನ್ಸ್ಪರ್ಶಜಾನ್ದೇಹಸಂಶ್ರಿತಾನ್ ।
ಛಿತ್ತ್ವಾಶು ಜ್ಞಾನಶಸ್ತ್ರೇಣ ತಪೋದಣ್ಡೇನ ಭಾರತ ॥೬೩॥

ಭರತನಂದನನೇ! ಮಹಾರಾಜ! ಮಹಾಬುದ್ಧಿವಂತರಾದ ಸಾಂಖ್ಯ ಯೋಗಿಗಳು ವ್ಯಾಪಕವಾದ ತಮ್ಮ ಸಾಂಖ್ಯಯೋಗದಿಂದ ನೂರು ಪ್ರಕಾರವಾದ ಗುಣಗಳಿಂದ ಗುಣಗಳನ್ನೂ, ನೂರು ಪ್ರಕಾರವಾದ ದೋಷಗಳಿಂದ ದೋಷಗಳನ್ನೂ, ನೂರು ಪ್ರಕಾರವಾದ ವಿಚಿತ್ರಕಾರಣಗಳಿಂದ ವಿಚಿತ್ರ ಕಾರಣಗಳನ್ನೂ ಯಥಾವತ್ತಾಗಿ ತಿಳಿದುಕೊಂಡರು. ಈ ಲೋಕವು ನೀರಿನ ನೊರೆಯಂತೆ ನಶ್ವರ. ಮಹಾವಿಷ್ಣುವಿನ ನೂರಾರು ಮಾಯೆಗಳಿಂದ ಇದು ಆವೃತವಾಗಿದೆ. ಗೋಡೆಯ ಮೇಲಿನ ಚಿತ್ರದಂತೆ ನೋಟಕ್ಕೆ ಚೆನ್ನಾಗಿ ಕಾಣುತ್ತದೆ. ಲಾಳದ ಹುಲ್ಲಿನಂತೆ ಸಾರಹೀನವಾದುದು. ಅನರ್ಥಕರವಾದುದು. ಕತ್ತಲೆಯಿಂದ (ಅಜ್ಞಾನದಿಂದ) ತುಂಬಿಕೊಂಡಿರುವ ಹಗೇವಿನಂತಿದೆ. ವರ್ಷಾಕಾಲದ ಮಳೆಯ ನೀರಿನ ಗುಳ್ಳೆಗಳಂತೆ ಕ್ಷಣಭಂಗುರವಾದುದು. ಸುಖದಿಂದ ವಿಹೀನವಾದುದು. ಅಸ್ವತಂತ್ರವಾದುದು. ಕಡೆಯಲ್ಲಿ ನಷ್ಟವಾಗಿಯೇ ತೀರುವುದು. ಕೆಸರಿನಲ್ಲಿ ಹುದುಗಿಕೊಂಡಿರುವ

ಅಸ್ವತಂತ್ರವಾದ ಆನೆಯಂತೆ ಈ ಪ್ರಪಂಚವು ರಜಸ್ತಮಸ್ಸುಗಳಲ್ಲಿಯೇ ಮುಳುಗಿಹೋಗಿರುವುದು–ಎಂಬುದನ್ನು ಸಾಂಖ್ಯರು ವ್ಯಾಪಕವಾದ ತಮ್ಮ ಸಾಂಖ್ಯಯೋಗದಿಂದ ಅರಿತು, ಸಂತಾನವೇ ಮೊದಲಾದವುಗಳಲ್ಲಿದ್ದ ಆಸಕ್ತಿಯನ್ನೂ ದೂರೀಕರಿಸಿ, ತಪಸ್ಸೆಂಬ ದಂಡದಿಂದಲೂ ಜ್ಞಾನವೆಂಬ ಶಸ್ತ್ರದಿಂದಲೂ ಅಶುಭವಾದ ರಾಜಸ-ತಾಮಸಗಂಧಗಳನ್ನೂ–ಪುಣ್ಯಪ್ರಾಪಕ ವಾದ ಶುಭವಾದ ಸಾತ್ತ್ವಿಕಗಂಧಗಳನ್ನೂ–ದೇಹವನ್ನಾಶ್ರಯಿಸಿರುವ ಸ್ಪರ್ಶವೇ ಮೊದಲಾದ ವಿಷಯಗಳನ್ನೂ ಕತ್ತರಿಸಿಹಾಕಿದರು.

ತತೋ ದುಃಖೋದಕಂ ಘೋರಂ ಚಿನ್ತಾಶೋಕಮಹಾಹ್ರದಮ್ ।
ವ್ಯಾಧಿಮೃತ್ಯುಮಹಾಗ್ರಾಹಂ ಮಹಾಭಯಮಹೋರಗಮ್ ॥೧೪॥

ತಮಃಕೂರ್ಮಂ ರಜೋಮೀನಂ ಪ್ರಜ್ಞಯಾ ಸಂತರನ್ತ್ಯುತ ।
ಸ್ನೇಹಪಙ್ಕಂ ಜರಾದುರ್ಗಂ ಜ್ಞಾನದ್ವೀಪಮರಿಂದಮ ॥೧೫॥

ಕರ್ಮಾಗಾಧಂ ಸತ್ಯತೀರಂ ಸ್ಥಿತವ್ರತಮರಿಂದಮ ।
ಹಿಂಸಾಶೀಘ್ರಮಹಾವೇಗಂ ನಾನಾರಸಸಮಾಕರಮ್ ॥೧೬॥

ನಾನಾಪ್ರೀತಿಮಹಾರತ್ನಂ ದುಃಖಜ್ವರಸಮೀರಣಮ್ ।
ಶೋಕತೃಷ್ಣಾಮಹಾವರ್ತಂ ತೀಕ್ಷ್ಣವ್ಯಾಧಿಮಹಾಗಜಮ್ ॥೧೭॥

ಅಸ್ಥಿಸಂಘಾತಸಂಘಟ್ಟಂ ಶ್ಲೇಷ್ಮಫೇನಮರಿಂದಮ ।
ದಾನಮುಕ್ತಾಕರಂ ಘೋರಂ ಶೋಣಿತಹ್ರದವಿದ್ರುಮಮ್ ॥೧೮॥

ಹಸಿತೋತ್ಕೃಷ್ಟನಿರ್ಘೋಷಂ ನಾನಾಜ್ಞಾನಸುದುಸ್ತರಮ್ ।
ರೋದನಾಶ್ರುಮಲಕ್ಷಾರಂ ಸಂಗತ್ಯಾಗಪರಾಯಣಮ್ ॥೧೯॥

ಪುತ್ರದಾರಜಲೌಕೌಘಂ ಮಿತ್ರಬಾನ್ಧವಪತ್ತನಮ್ ।
ಅಹಿಂಸಾಸತ್ಯಮರ್ಯಾದಂ ಪ್ರಾಣತ್ಯಾಗಮಹೋರ್ಮಿಣಮ್ ॥೨೦॥

ವೇದಾನ್ತಗಮನದ್ವೀಪಂ ಸರ್ವಭೂತದಯೋದಧಿಮ್ ।
ಮೋಕ್ಷದುರ್ಲಾಭವಿಷಯಂ ವಡವಾಮುಖಸಾಗರಮ್ ॥೨೧॥

ತರನ್ತಿ ಯತಯಃ ಸಿದ್ಧಾ ಜ್ಞಾನಯಾನೇನ ಭಾರತ ।
ತೀರ್ತ್ವಾತಿದುಸ್ತರಂ ಜನ್ಮ ವಿಶನ್ತಿ ವಿಮಲಂ ನಭಃ ॥೨೨॥

ಜ್ಞಾನಯೋಗಿಗಳು ಜ್ಞಾನವೆಂಬ ನೌಕೆಯ ಮೂಲಕವಾಗಿ ಸಂಸಾರ ರೂಪವಾದ ಘೋರಸಮುದ್ರವನ್ನು ದಾಟಿ ನಿರ್ಮಲವಾದ ಹೃದಯಾಕಾಶ ವನ್ನು ಸೇರುತ್ತಾರೆ. ಸಂಸಾರಸಾಗರವೆಂಬುದು ಸಾಮಾನ್ಯವಾದುದಲ್ಲ. ದುಃಖ ವೆಂಬುದೇ ಆ ಸಂಸಾರಸಾಗರದ ನೀರು. ಆ ಸಾಗರವು ಅತಿಘೋರ ವಾದುದು. ಚಿಂತಾಶೋಕಗಳೆಂಬ ದೊಡ್ಡ ದೊಡ್ಡ ಮಡುವುಗಳು ಆ ಮಹಾ ಸಂಸಾರಸಾಗರದಲ್ಲಿ ಐಕ್ಯವಾಗಿವೆ. ಆ ಮಹಾಸಾಗರವು ವ್ಯಾಧಿ ಮತ್ತು ಮೃತ್ಯುಗಳೆಂಬ ದೊಡ್ಡ ಮೊಸಳೆಗಳಿಂದ ಕೂಡಿದೆ. ಮಹಾಭಯವೆಂಬ ಮಹಾಸರ್ಪಗಳಿಂದ ಕೂಡಿದೆ. ತಮೋಗುಣವು ಆ ಸಾಗರದಲ್ಲಿ ಆಮೆಯ ರೂಪದಲ್ಲಿದೆ. ರಜೋಗುಣವು ಮೀನುಗಳ ರೂಪದಲ್ಲಿದೆ. ಅಂತಹ ಮಹಾಸಾಗರವನ್ನು ಜ್ಞಾನಯೋಗಿಗಳು ಪ್ರಜ್ಞೆಯೆಂಬ ನಾವೆಯಿಂದ ದಾಟು ತ್ತಾರೆ.

ಸ್ನೇಹವೆಂಬುದು ಆ ಘೋರಸಂಸಾರಸಾಗರದಲ್ಲಿ ಕೆಸರಿನ ರೂಪ ದಲ್ಲಿದೆ. ಮುಪ್ಪೆಂಬುದು ಮಹಾಸಾಗರದ ಅಂಚಿನಲ್ಲಿರುವ ದುರ್ಗದ ರೂಪ ದಲ್ಲಿದೆ. ಜ್ಞಾನವೆಂಬುದು ಆ ಸಾಗರದ ಮಧ್ಯಭಾಗದಲ್ಲಿರುವ ದ್ವೀಪದ ರೂಪದಲ್ಲಿದೆ. ಕರ್ಮವೆಂಬುದೇ ಆ ಸಾಗರದಲ್ಲಿನ ಕಂಡುಹಿಡಿಯಲಾಗದ ಆಳವಾಗಿದೆ. ಸತ್ಯವು ಅದರ ತೀರದ ರೂಪದಲ್ಲಿದೆ. ವ್ರತ-ನಿಯಮಾದಿಗಳೇ ಆ ಸಮುದ್ರದ ಸ್ಥಿರತೆಯಾಗಿದೆ. ಹಿಂಸೆಯೆಂಬುದು ಆ ಮಹಾಸಾಗರದ ಶೀಘ್ರವಾದ ಮಹಾವೇಗರೂಪವಾಗಿದೆ. ಆ ಸಾಗರವು ನಾನಾಪ್ರಕಾರವಾದ ವಿಷಯರಸಗಳಿಂದ ತುಂಬಿಹೋಗಿದೆ. ನಾನಾಪ್ರಕಾರವಾದ ಪ್ರೀತಿಗಳೇ ಆ ಮಹಾಸಾಗರದಲ್ಲಿರುವ ರತ್ನಗಳಾಗಿವೆ. ದುಃಖ-ಸಂತಾಪಗಳು ಸಂಸಾರ ಸಾಗರದ ಮೇಲೆ ಬೀಸುವ ವಾಯುವಾಗಿದೆ.

ಶೋಕ ಮತ್ತು ತೃಷ್ಣೆಗಳು ಆ ಮಹಾಸಾಗರದ ಸುಳಿಗಳಾಗಿವೆ. ತೀಕ್ಷ್ಣವ್ಯಾಧಿಗಳೆಂಬ ದೊಡ್ಡ ಆನೆಗಳಿಂದ ಅದು ಯುಕ್ತವಾಗಿದೆ. ಮೂಳೆಗಳ ಸಮೂಹದಿಂದ ಅದರ ತಳಭಾಗವು ಸಂಘಟಿತವಾಗಿದೆ. ಶ್ಲೇಷ್ಮವೆಂಬುದೇ ಆ ಮಹಾಸಾಗರದ ನೊರೆಯಾಗಿದೆ. ದಾನವೆಂಬುದೇ ಆ ಮಹಾಸಾಗರದಲ್ಲಿರುವ ಮುತ್ತಿನ ರಾಶಿಯಾಗಿದೆ. ಅದರಲ್ಲಿರುವ ರಕ್ತಸರೋ

ವರವೇ ಹವಳದ ರಾಶಿಯಾಗಿದೆ. ಪ್ರಾಣಿಗಳ ಅಟ್ಟಹಾಸಗಳೇ ಸಂಸಾರ ಸಮುದ್ರದ ಭೋರ್ಗರೆಯುವಿಕೆಯಾಗಿದೆ. ನಾನಾಪ್ರಕಾರವಾದ ಅಜ್ಞಾನಗಳೇ ಆ ಮಹಾಸಾಗರವನ್ನು ದಾಟಲು ಸಾಧ್ಯವಾಗದಂತೆ ಮಾಡಿವೆ. ಪ್ರಾಣಿಗಳ ಕಂಬನಿಗಳೇ ಮಲಿನವಾದ ಉಪ್ಪುನೀರಾಗಿದೆ. ವಿಷಯಾಸಕ್ತಿಗಳ ತ್ಯಾಗವೆಂಬುದೇ ಸಾಗರದ ಭೀತಿಯನ್ನು ತಪ್ಪಿಸಿಕೊಳ್ಳಲು ಆಶ್ರಯಸ್ಥಾನ ವಾಗಿದೆ. ಪುತ್ರ-ಕಳತ್ರಾದಿಗಳು ಆ ಮಹಾಘೋರಸಂಸಾರಸಾಗರದಲ್ಲಿ ಜಿಗಣೆ ಗಳ ರೂಪದಲ್ಲಿದ್ದಾರೆ. ಮಿತ್ರರೂ ಮತ್ತು ಬಂಧುಗಳೂ ಸಾಗರದ ತೀರ ದಲ್ಲಿರುವ ಪಟ್ಟಣಗಳ ರೂಪದಲ್ಲಿದ್ದಾರೆ. ಆ ಮಹಾಸಾಗರಕ್ಕೆ ಅಹಿಂಸೆ ಮತ್ತು ಸತ್ಯಗಳೆಂಬುದೇ ಮೇರೆಯಾಗಿವೆ. ಪ್ರಾಣತ್ಯಾಗವೆಂಬುದೇ ಆ ಮಹಾರ್ಣವದ ದೊಡ್ಡ-ದೊಡ್ಡ ಅಲೆಗಳಾಗಿವೆ. ವೇದಾಂತಜ್ಞಾನವೆಂಬುದೇ ಆ ಸಾಗರದ ಮಧ್ಯದಲ್ಲಿರುವ ದ್ವೀಪವಾಗಿದೆ. ಸಮಸ್ತಪ್ರಾಣಿಗಳಲ್ಲಿಯೂ ಇರುವ ದಯಾಭಾವವೇ ಅದರ ಜಲರಾಶಿಯಾಗಿದೆ. ಮೋಕ್ಷವೆಂಬುದು ಸಂಸಾರಸಾಗರಕ್ಕೆ ದುರ್ಲಭವಾದ ವಿಷಯವಾಗಿದೆ. ನಾನಾಪ್ರಕಾರವಾದ ಸಂತಾಪಗಳು ಆ ಮಹಾಸಾಗರದ ವಡವಾನಲಪ್ರಾಯವಾಗಿದೆ. ಅಂತಹ ಭವಸಾಗರವನ್ನು ಸಿದ್ಧರಾದ ಯತಿಗಳು ಜ್ಞಾನವೆಂಬ ನೌಕೆಯಿಂದ ದಾಟು ತ್ತಾರೆ. ಅತಿದುಸ್ತರವಾದ ಸಾಗರವನ್ನು ದಾಟಿ ನಿರ್ಮಲವಾದ ಹೃದಯಾಕಾಶ ವನ್ನು ಸೇರುತ್ತಾರೆ.

ತತ್ರ ತಾನ್ಸುಕೃತೀನ್ಸಾಂಖ್ಯಾನ್ಸೂರ್ಯೋವಹತಿ ರಶ್ಮಿಭಿಃ ।
ಪದ್ಮತಂತುವದಾವಿಶ್ಯ ಪ್ರವಹನ್ವಿಷಯಾನ್ನೃಪ ॥೭೩॥

ಕಮಲದ ದಂಟಿನ ಮೂಲಕವಾಗಿ ಮುಖದಿಂದ ಹೀರಲ್ಪಟ್ಟ ನೀರು ಬಾಯೊಳಗೆ ಪ್ರವೇಶಿಸುವಂತೆ–ಆತ್ಮನೊಳಗೆ ಪ್ರವೇಶಿಸಿರುವ ಮನಸ್ಸಿನ ಮೂಲಕವಾಗಿ ಸೂರ್ಯನು ಒಳಗೆ ಪ್ರವೇಶಿಸಿ ಸುಕೃತಿಗಳಾದ ಸಾಂಖ್ಯರನ್ನು ತನ್ನ ನಾಡಿಗಳ ಮೂಲಕವಾಗಿ ಊರ್ಧ್ವಲೋಕಕ್ಕೆ ಒಯ್ಯುತ್ತಾನೆ.

ತತ್ರ ತಾನ್ಪ್ರವಹೋ ವಾಯುಃ ಪ್ರತಿಗೃಹ್ಣಾತಿ ಭಾರತ ।
ವೀತರಾಗಾನ್ಯತೀನ್ಸಿದ್ಧಾನ್ವೀರ್ಯಯುಕ್ತಾಂಸ್ತಪೋಧನಾನ್ ॥೭೪॥

ಬಳಿಕ ರಾಗ-ಮೋಹಾದಿಗಳಿಂದ ವಿಹೀನರಾದ, ಸಿದ್ಧರಾದ, ವೀರ್ಯ ಯುಕ್ತರಾದ ತಪೋಧನರಾದ ಯತಿಗಳನ್ನು ಹೃದಯಾಕಾಶದಲ್ಲಿ 'ಪ್ರವಹ' ಎಂಬ ಹೆಸರಿನ ವಾಯುವು ಸೂರ್ಯನಿಂದ ಪ್ರತಿಗ್ರಹಿಸುತ್ತದೆ.

ಸೂಕ್ಷ್ಮಃ ಶೀತಃ ಸುಗನ್ಧೀ ಚ ಸುಖಸ್ಪರ್ಶಶ್ಚ ಭಾರತ ।
ಸಪ್ತಾನಾಂ ಮರುತಾಂ ಶ್ರೇಷ್ಠೋ ಲೋಕಾನ್ಗಚ್ಛತಿ ಯಃ ಶುಭಾನ್ ।
ಸ ತಾನ್ವಹತಿ ಕೌನ್ತೇಯ ನಭಸಃ ಪರಮಾಂ ಗತಿಮ್ ॥೭೫॥

ಭಾರತನೇ! ಸೂಕ್ಷ್ಮವಾದ, ಶೀತಲವಾದ, ಸುಗಂಧಯುಕ್ತವಾದ, ಸುಖಸ್ಪರ್ಶಿಯಾದ, ಸಪ್ತಮರುತ್ತುಗಳಲ್ಲಿ ಶ್ರೇಷ್ಠವಾದ, ಶುಭಲೋಕಗಳಲ್ಲಿ ಸಂಚರಿಸುವ ಪ್ರವಹವಾಯುವು ಸಾಂಖ್ಯಯೋಗಿಗಳನ್ನು ಹೃದಯಾಕಾಶದ ಪರಮಗತಿಗೆ ಒಯ್ಯುತ್ತದೆ.

ನಭೋ ವಹತಿ ಲೋಕೇಶ ರಜಸಃ ಪರಮಾಂ ಗತಿಮ್ ।
ರಜೋ ವಹತಿ ರಾಜೇನ್ದ್ರ ಸತ್ತ್ವಸ್ಯ ಪರಮಾಂ ಗತಿಮ್ ॥೭೬॥

ಸತ್ತ್ವಂ ವಹತಿ ಶುದ್ಧಾತ್ಮನ್ಪರಂ ನಾರಾಯಣಂ ಪ್ರಭುಮ್ ।
ಪ್ರಭುರ್ವಹತಿ ಶುದ್ಧಾತ್ಮಾ ಪರಮಾತ್ಮಾನಮಾತ್ಮನಾ ॥೭೭॥

ಪರಮಾತ್ಮಾನಮಾಸಾದ್ಯ ತದ್ಭೂತಾಯತನಾಮಲಾಃ ।
ಅಮೃತತ್ವಾಯ ಕಲ್ಪನ್ತೇ ನ ನಿವರ್ತನ್ತಿ ವಾ ವಿಭೋ ॥೭೮॥

ಲೋಕೇಶ್ವರನೇ! ತಮಸ್ಸಿನ ರೂಪವಾದ ಹೃದಯಾಕಾಶವು ಸಾಂಖ್ಯ ಯೋಗಿಯನ್ನು ರಜೋಗುಣದ ಪರಮಗತಿಗೆ ಒಯ್ಯುತ್ತದೆ. (ಆಕಾಶಾಭಿ ಮಾನಿದೇವತೆಯು ತೇಜೋಮಯವಾದ ವಿದ್ಯುದಭಿಮಾನಿದೇವತೆಯ ಕಡೆಗೆ ಒಯ್ಯುತ್ತದೆ.) ಬಳಿಕ ರಜೋಗುಣವು ಸತ್ತ್ವಗುಣದ ಪರಮಗತಿಗೆ ಒಯ್ಯುತ್ತದೆ. ಶುದ್ಧಾತ್ಮನೇ! ಸತ್ತ್ವವು (ಸತ್ತ್ವಾಭಿಮಾನಿದೇವತೆಯು) ಸಾಂಖ್ಯಯೋಗಿಗಳನ್ನು ಶ್ರೇಷ್ಠನಾದ, ಪ್ರಭುವಾದ ನಾರಾಯಣನ ಬಳಿಗೆ ಒಯ್ಯುತ್ತದೆ. ಶುದ್ಧಾತ್ಮನಾದ ಶ್ರೀಮನ್ನಾರಾಯಣನು ತಾನಾಗಿಯೇ ಸಾಂಖ್ಯಯೋಗಿಗಳನ್ನು ಪರಬ್ರಹ್ಮದ ಬಳಿಗೆ ಒಯ್ಯುತ್ತಾನೆ. ಪರಬ್ರಹ್ಮ

ವನ್ನು ಹೊಂದಿದ ಬಳಿಕ ಆ ಮಹಾಭೂತದಲ್ಲಿಯೇ ಆಶ್ರಯವನ್ನು ಪಡೆದ ಪರಿಶುದ್ಧರಾದ ಸಾಂಖ್ಯಯೋಗಿಗಳು ಅಮೃತಭಾವದಿಂದ ಸಂಪನ್ನರಾಗುತ್ತಾರೆ. ಪುನಃ ಅಲ್ಲಿಂದ ಹಿಂದಿರುಗುವುದಿಲ್ಲ.

ಪರಮಾ ಸಾ ಗತಿಃ ಪಾರ್ಥ ನಿರ್ದ್ವನ್ದ್ವಾನಾಂ ಮಹಾತ್ಮನಾಮ್ ।
ಸತ್ಯಾರ್ಜವರತಾನಾಂ ವೈ ಸರ್ವಭೂತದಯಾವತಾಮ್ ॥೭೯॥

ಪಾರ್ಥ! ಯಾರು ಶೀತೋಷ್ಣ-ಸುಖ-ದುಃಖಾದಿ ದ್ವಂದ್ವಗಳಿಂದ ರಹಿತರಾಗಿರುವರೋ, ಸತ್ಯನಿಷ್ಠರಾಗಿರುವರೋ, ಸರಳತೆಯಿಂದಿರುವರೋ, ಸರ್ವಪ್ರಾಣಿಗಳ ವಿಷಯದಲ್ಲಿಯೂ ದಯಾಪರರಾಗಿರುವರೋ– ಅಂತಹ ಮಹಾತ್ಮರಿಗೆ ಈ ವಿಧವಾದ ಪರಮಗತಿಯು ಪ್ರಾಪ್ತವಾಗುತ್ತದೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಸ್ಥಾನಮುತ್ತಮಮಾಸಾದ್ಯ ಭಗವನ್ತಂ ಸ್ಥಿರವ್ರತಾಃ ।
ಆಜನ್ಮಮರಣಂ ವಾ ತೇ ಸ್ಮರನ್ತ್ಯುತ ನ ವಾನಘ ॥೮೦॥

ಯದತ್ರ ತಥ್ಯಂ ತನ್ಮೇ ತ್ವಂ ಯಥಾವದ್ವಕ್ತುಮರ್ಹಸಿ ।
ತ್ವದೃತೇ ಪುರುಷಂ ನಾನ್ಯಂ ಪ್ರಷ್ಟುಮರ್ಹಾಮಿ ಕೌರವ ॥೮೧॥

"ಪಾಪರಹಿತನೇ! ಪಿತಾಮಹನೇ! ಸ್ಥಿರತೆಯಿಂದ ಶ್ರೇಷ್ಠವಾದ ವ್ರತಗಳನ್ನು ಪಾಲನೆಮಾಡುವ ಸಾಂಖ್ಯಯೋಗಿಗಳು ಭಗವಂತನಾದ ನಾರಾಯಣನನ್ನು ಅಥವಾ ಮೋಕ್ಷವೆಂಬ ಪರಮಪದವನ್ನು ಹೊಂದಿದ ನಂತರ ಹುಟ್ಟಿದಾಗಿನಿಂದ ಸಾಯುವವರೆಗೆ (ಪರಮಪದಕ್ಕೆ ಹೋಗುವವರೆಗೆ) ಮಾಡಿರುವ ಕರ್ಮಗಳನ್ನು ಸ್ಮರಿಸುವರೇ? (ಮೋಕ್ಷಸ್ಥಾನದಲ್ಲಿ ಅವರಿಗೆ ಜನ್ಮ-ಜನ್ಮಾಂತರಗಳ ಸ್ಮರಣೆಯಿರುವುದೇ?) ಇದು ನನ್ನ ಪ್ರಶ್ನೆಯಾಗಿದೆ. ಈ ವಿಷಯದಲ್ಲಿ ಯಾವುದು ತಥ್ಯವೋ ಅದನ್ನು ನೀನು ನನಗೆ ಯಥಾವತ್ತಾಗಿ ಹೇಳು. ನಿನ್ನ ಹೊರತಾಗಿ ನಾನು ಬೇರೆ ಯಾರನ್ನೂ ಹೀಗೆ ಪ್ರಶ್ನಿಸಲಾರೆನು.

ಮೋಕ್ಷೇ ದೋಷೋ ಮಹಾನೇಷ ಪ್ರಾಪ್ಯ ಸಿದ್ಧಿಂ ಗತಾನೃಷೀನ್ ।
ಯದಿ ತತ್ರೈವ ವಿಜ್ಞಾನೇ ವರ್ತನ್ತೇ ಯತಯಃ ಪರೇ ॥೮೨॥

ಪ್ರವೃತ್ತಿಲಕ್ಷಣಂ ಧರ್ಮಂ ಪಶ್ಯಾಮಿ ಪರಮಂ ನೃಪ ।
ಮಗ್ನಸ್ಯ ಹಿ ಪರೇ ಜ್ಞಾನೇ ಕಿಂ ನು ದುಃಖತರಂ ಭವೇತ್ ॥೮೩॥

ಹಾಗಿದ್ದರೆ ಸಿದ್ಧಿಯನ್ನು ಹೊಂದಿದ ಋಷಿಗಳ ಸಂಬಂಧವಾಗಿ ಮೋಕ್ಷದಲ್ಲಿ ಈ ಒಂದು ಮಹಾದೋಷವಿರುವುದೆಂದು ನಾನು ಭಾವಿಸುತ್ತೇನೆ. ಮೋಕ್ಷವು ಪ್ರಾಪ್ತವಾದನಂತರವೂ ಯತಿಗಳಿಗೆ ವಿಶೇಷಜ್ಞಾನವಿರುವುದಾದರೆ, ಅಂದರೆ : ಹಿಂದಿನ ಸ್ಮರಣೆಯೂ ಅವರಿಗೆ ಇರುವುದಾದರೆ ವಿಜ್ಞಾನದಿಂದ ಯುಕ್ತವಾದ ಸಾಂಖ್ಯಯೋಗವು ಪ್ರವೃತ್ತಿಲಕ್ಷಣವುಳ್ಳ ಶ್ರೇಷ್ಠವಾದ ಧರ್ಮವೆಂದು ನಾನು ಭಾವಿಸುತ್ತೇನೆ. ಶ್ರೇಷ್ಠವಾದ ಜ್ಞಾನದಲ್ಲಿ ಮಗ್ನನಾಗಿದ್ದರೂ (ಪರಬ್ರಹ್ಮದಲ್ಲಿಯೇ ಇದ್ದರೂ) ಅಲ್ಲಿಯೂ ಹಿಂದಿನ ಸ್ಮರಣೆಯುಂಟಾಗುವುದಾದರೆ ಅದಕ್ಕಿಂತಲೂ ದುಃಖತರವಾದುದು ಬೇರೆ ಯಾವುದಿದೆ?”

ಭೀಷ್ಮನು ಹೇಳುತ್ತಾನೆ :

ಯಥಾನ್ಯಾಯಂ ತ್ವಯಾ ತಾತ ಪ್ರಶ್ನಃ ಪೃಷ್ಟಃ ಸುಸಂಕಟಃ ।
ಬುಧಾನಾಮಪಿ ಸಮ್ಮೋಹಃ ಪ್ರಶ್ನೇಽಸ್ಮಿನ್ಭರತರ್ಷಭ ॥೮೪॥

“ಮಗು! ಯುಧಿಷ್ಠಿರ! ಉತ್ತರಿಸಲು ಬಹಳ ಜಟಿಲವಾದ, ನ್ಯಾಯಸಮ್ಮತವಾದ ಪ್ರಶ್ನೆಯನ್ನೇ ನೀನು ಕೇಳಿರುವೆ. ಈ ಪ್ರಶ್ನೆಯಲ್ಲಿ ವಿದ್ವಾಂಸರಿಗೂ ಸಂಭ್ರಾಂತಿಯುಂಟಾಗುವ ವಿಷಯವಿದೆ.

ಅತ್ರಾಪಿ ತತ್ತ್ವಂ ಪರಮಂ ಶೃಣು ಸಮ್ಯಙ್ಮಯೇರಿತಮ್ ।
ಬುದ್ಧಿಶ್ಚ ಪರಮಾ ಯತ್ರ ಕಾಪಿಲಾನಾಂ ಮಹಾತ್ಮನಾಮ್ ॥೮೫॥

ಈ ವಿಷಯದಲ್ಲಿ ನಾನು ಸುಸ್ಪಷ್ಟವಾಗಿ ಹೇಳಲಿರುವ ಶ್ರೇಷ್ಠವಾದ ತತ್ತ್ವವನ್ನು ಕೇಳು. ಮಹಾತ್ಮರಾದ ಕಾಪಿಲರ ಶ್ರೇಷ್ಠವಾದ ಬುದ್ಧಿಯು ಆ ತತ್ತ್ವದಲ್ಲಿ ನೆಲೆಸಿದೆ.

ಇನ್ದ್ರಿಯಾಣ್ಯೇವ ಬುಧ್ಯನ್ತೇ ಸ್ವದೇಹೇ ದೇಹಿನಾಂ ನೃಪ ।
ಕಾರಣಾನ್ಯಾತ್ಮನಸ್ತಾನಿ ಸೂಕ್ಷ್ಮಃ ಪಶ್ಯತಿ ತೈಸ್ತು ಸಃ ॥೮೬॥

ದೇಹಧಾರಿಗಳಾದ ಮನುಷ್ಯರ ಶರೀರದಲ್ಲಿರುವ ಇಂದ್ರಿಯಗಳೇ

ವಿಷಯಗಳನ್ನು ತಿಳಿದುಕೊಳ್ಳುತ್ತವೆ ಮತ್ತು ಅನುಭವಿಸುತ್ತವೆ. ಆ ಇಂದ್ರಿಯಗಳೇ ಆತ್ಮನು ತಮಗಿಂತಲೂ ಭಿನ್ನನಲ್ಲವೆಂಬ ಜ್ಞಾನವನ್ನು ಉಂಟುಮಾಡುತ್ತವೆ. ಏಕೆಂದರೆ.: ಸೂಕ್ಷ್ಮಾತ್ಮನು ಆ ಇಂದ್ರಿಯಗಳ ಮೂಲಕವಾಗಿಯೇ ಬಾಹ್ಯವಸ್ತುಗಳನ್ನು ನೋಡುತ್ತಾನೆ. (ಮುಕ್ತಾವಸ್ಥೆಯಲ್ಲಿ ಮನಸ್ಸಿಗೂ ಮತ್ತು ಇಂದ್ರಿಯಗಳಿಗೂ ಸಂಬಂಧವು ಇಲ್ಲದೇ ಇರುವುದರಿಂದ ಶುದ್ಧಾತ್ಮನಲ್ಲಿ ಇಂದ್ರಿಯಜನಿತವಾದ ವಿಶೇಷಜ್ಞಾನವು ಇರುವುದಿಲ್ಲ.)

ಆತ್ಮನಾ ವಿಪ್ರಹೀಣಾನಿ ಕಾಷ್ಠ ಕುಡ್ಯಸಮಾನಿ ತು ।
ವಿನಶ್ಯನ್ತಿ ನ ಸಂದೇಹಃ ಫೇನಾ ಇವ ಮಹಾರ್ಣವೇ ॥೮೭॥

ಮಹಾಸಮುದ್ರದಲ್ಲಿ ಅಲೆಗಳ ಬಡಿತದಿಂದ ಹುಟ್ಟಿದ ನೊರೆಗಳು ವಿನಾಶಹೊಂದುವಂತೆ – ಜೀವಾತ್ಮನಿಂದ ಪರಿತ್ಯಕ್ತವಾದ ಇಂದ್ರಿಯಗಳು ಕಟ್ಟಿಗೆ ಅಥವಾ ಗೋಡೆಗಳಂತಾಗಿ (ಜಡವಾಗಿ) ವಿನಾಶಹೊಂದುತ್ತವೆ. (ಪ್ರಕೃತಿಯಲ್ಲಿ ಲೀನವಾಗುತ್ತವೆ.) ಇದರಲ್ಲಿ ಸಂದೇಹವೇ ಇಲ್ಲ.

ಇನ್ದ್ರಿಯೈಃ ಸಹ ಸುಪ್ತಸ್ಯ ದೇಹಿನಃ ಶತ್ರುತಾಪನ ।
ಸೂಕ್ಷ್ಮಶ್ಚರತಿ ಸರ್ವತ್ರ ನಭಸೀವ ಸಮೀರಣಃ ॥೮೮॥

ಶತ್ರುತಾಪನನೇ! ದೇಹಧಾರಿಯಾದ ಮನುಷ್ಯನು ಇಂದ್ರಿಯಗಳೊಡನೆ ಮಲಗಿರುವಾಗ–ಅಂತರಿಕ್ಷದಲ್ಲಿರುವ ವಾಯುವಿನಂತೆ–ಸೂಕ್ಷ್ಮವಾದ ಶರೀರವು ಸರ್ವತ್ರ ಸುತ್ತುತ್ತಿರುತ್ತದೆ. (ಮನುಷ್ಯನು ಮಲಗಿರುವಾಗ ಸೂಕ್ಷ್ಮಶರೀರವು ನಿದ್ರೆಯಲ್ಲಾಗುವ ಸ್ವಪ್ನವನ್ನು ಅನುಭವಿಸುತ್ತಿರುತ್ತದೆ.)

ಸ ಪಶ್ಯತಿ ಯಥಾನ್ಯಾಯಂ ಸ್ಪರ್ಶಾನ್ಸ್ಪೃಶತಿ ವಾ ವಿಭೋ ।
ಬುಧ್ಯಮಾನೋ ಯಥಾಪೂರ್ವಮಖಿಲೇನೇಹ ಭಾರತ ॥೮೯॥

ಭಾರತನೇ! ಜಾಗ್ರತಾವಸ್ಥೆಯಲ್ಲಿಯಂತೆಯೇ ಸ್ವಪ್ನಾವಸ್ಥೆಯಲ್ಲಿಯೂ ಆ ಸೂಕ್ಷ್ಮಶರೀರವು ಯಥೋಚಿತವಾದ ರೀತಿಯಲ್ಲಿ ನೋಡಬಹುದಾದ ವಸ್ತುಗಳನ್ನು ನೋಡುತ್ತದೆ. ಮುಟ್ಟಬಹುದಾದ ವಸ್ತುಗಳನ್ನು

ಮುಟ್ಟುತ್ತದೆ. ಸಂಪೂರ್ಣವಿಷಯಗಳನ್ನೂ ಜಾಗ್ರತ್ತಿನಂತೆಯೇ ಅನುಭವಿಸುತ್ತದೆ.

ಇನ್ದ್ರಿಯಾಣೀಹ ಸರ್ವಾಣಿ ಸ್ವೇ ಸ್ವೇ ಸ್ಥಾನೇ ಯಥಾವಿಧಿ ।
ಅನೀಶತ್ವಾತ್ಪ್ರಲೀಯನ್ತೇ ಸರ್ಪಾ ಹತವಿಷಾ ಇವ ॥೯೦॥

ಸ್ವಪ್ನಾವಸ್ಥೆಯು ಕಳೆದು ಸುಷುಪ್ತ್ಯವಸ್ಥೆಯು ಪ್ರಾಪ್ತವಾಯಿತೆಂದರೆ (ಗಾಢನಿದ್ರೆಯುಂಟಾದರೆ) ಜೀವನು ಪುರೀತತ್‌ನಾಡಿಯಲ್ಲಿ ಪ್ರವೇಶಿಸಿರುವ ಕಾರಣ ಇಂದ್ರಿಯಗಳು ಒಡೆಯನಿಲ್ಲದೆ–ವಿಷಕಳೆದುಕೊಂಡ ಸರ್ಪಗಳಂತೆ ತಮ್ಮ ತಮ್ಮ ಸ್ಥಾನಗಳಲ್ಲಿ ಲೀನವಾಗುತ್ತವೆ.

ಇನ್ದ್ರಿಯಾಣಾಂ ತು ಸರ್ವೇಷಾಂ ಸ್ವಸ್ಥಾನೇಷ್ವೇವ ಸರ್ವಶಃ ।
ಆಕ್ರಮ್ಯ ಗತಯಃ ಸೂಕ್ಷ್ಮಾಶ್ಚರತ್ಯಾತ್ಮಾ ನ ಸಂಶಯಃ ॥೯೧॥

ಸ್ವಪ್ನಾವಸ್ಥೆಯಲ್ಲಿ ಯದ್ಯಪಿ ಇಂದ್ರಿಯಗಳು ಸ್ವಸ್ಥಾನದಲ್ಲಿಯೇ ಇದ್ದರೂ ಜೀವಾತ್ಮನು ಎಲ್ಲ ಇಂದ್ರಿಯಗಳ ಸೂಕ್ಷ್ಮವಾದ ಗತಿಗಳನ್ನು ಆಕ್ರಮಿಸಿಕೊಂಡು ಸಂಚರಿಸುತ್ತಿರುತ್ತಾನೆ. (ಈ ಕಾರಣದಿಂದಲೇ ಅವನು ಮಲಗಿದ್ದಾಗಲೂ ವಿಷಯಸುಖಗಳನ್ನು ಅನುಭವಿಸಲು ಸಾಧ್ಯವಾಗುತ್ತದೆ.) ಈ ವಿಷಯದಲ್ಲಿ ಸಂಶಯವೇ ಇಲ್ಲ.

ಸತ್ತ್ವಸ್ಯ ಚ ಗುಣಾನ್ಕೃತ್ಸ್ನಾನ್ರಜಸಶ್ಚ ಗುಣಾನ್ಪುನಃ ।
ಗುಣಾಂಶ್ಚ ತಮಸಃ ಸರ್ವಾನ್ಗುಣಾನ್ಬುದ್ಧೇಶ್ಚ ಭಾರತ ॥೯೨॥

ಗುಣಾಂಶ್ಚ ಮನಸಸ್ಚಾಪಿ ನಭಸಶ್ಚ ಗುಣಾಂಶ್ಚ ಸಃ ।
ಗುಣಾನ್ವಾಯೋಶ್ಚ ಧರ್ಮಾತ್ಮಂಸ್ತೇಜಸಶ್ಚ ಗುಣಾನ್ಪುನಃ ॥೯೩॥

ಅಪಾಂ ಗುಣಾಂಸ್ತಥಾ ಪಾರ್ಥ ಪಾರ್ಥಿವಾಂಶ್ಚ ಗುಣಾನಪಿ ।
ಸರ್ವಾಣ್ಯೇವ ಗುಣೈರ್ವ್ಯಾಪ್ಯ ಕ್ಷೇತ್ರಜ್ಞೇಷು ಯುಧಿಷ್ಠಿರ ॥೯೪॥
ಮನೋಽನುಯಾತಿ ಕ್ಷೇತ್ರಜ್ಞಂ ಕರ್ಮಣೀ ಚ ಶುಭಾಶುಭೇ ।
ಶಿಷ್ಯಾ ಇವ ಮಹಾತ್ಮಾನಮಿನ್ದ್ರಿಯಾಣಿ ಚ ತಂ ಪ್ರಭೋ ॥೯೫॥

ಪ್ರಕೃತಿಂ ಚಾಪ್ಯತಿಕ್ರಮ್ಯ ಗಚ್ಛತ್ಯಾತ್ಮಾನಮವ್ಯಯಮ್ ।
ಪರಂ ನಾರಾಯಣಾತ್ಮಾನಂ ನಿರ್ದ್ವನ್ದ್ವಂ ಪ್ರಕೃತೇಃ ಪರಮ್ ॥೯೬॥

ಧರ್ಮಾತ್ಮನಾದ ಯುಧಿಷ್ಠಿರನೇ! ಪರಬ್ರಹ್ಮಪರಮಾತ್ಮನು ಸಮಗ್ರವಾದ ಸತ್ತ್ವಗುಣಗಳನ್ನೂ, ಸಮಗ್ರವಾದ ರಜೋಗುಣಗಳನ್ನೂ, ಸಮಗ್ರವಾದ ತಮೋಗುಣಗಳನ್ನೂ, ಬುದ್ಧಿಯ ಗುಣಗಳನ್ನೂ, ಮನಸ್ಸಿನ ಗುಣಗಳನ್ನೂ, ಆಕಾಶದ ಗುಣಗಳನ್ನೂ, ವಾಯುವಿನ ಗುಣಗಳನ್ನೂ, ತೇಜಸ್ಸಿನ ಗುಣಗಳನ್ನೂ, ನೀರಿನ ಗುಣಗಳನ್ನೂ, ಭೂಮಿಯ ಗುಣಗಳನ್ನೂ – ತನ್ನ ಗುಣಗಳ ಮೂಲಕ ವ್ಯಾಪಿಸಿ ಕ್ಷೇತ್ರಜ್ಞರಲ್ಲಿರುತ್ತಾನೆ. (ಪರಬ್ರಹ್ಮತತ್ತ್ವವು ಸರ್ವತ್ರ ವ್ಯಾಪ್ತವಾಗಿದೆ.) ಶಿಷ್ಯನು ಗುರುವನ್ನು ಅನುಸರಿಸಿಹೋಗುವಂತೆ– ಮನಸ್ಸೂ, ಇಂದ್ರಿಯಗಳೂ ಮತ್ತು ಶುಭಾಶುಭಕರ್ಮಗಳೂ ಜೀವಾತ್ಮನನ್ನೇ ಅನುಸರಿಸಿ ಹೋಗುತ್ತವೆ. ಯಾವಾಗ ಜೀವಾತ್ಮನು ತನ್ನ ಬಳಿಗೆ ಬಂದ ಮನಸ್ಸನ್ನೂ ಇಂದ್ರಿಯಗಳನ್ನೂ ತನ್ನಲ್ಲಿಯೇ ಲೀನಗೊಳಿಸಿ ಪ್ರಕೃತಿಯನ್ನೂ ಅತಿಕ್ರಮಿಸುವನೋ–ಆಗ ಮಾಯೆಯಿಂದ ಅತೀತನಾದ, ನಿರ್ದ್ವಂದ್ವನಾದ (ಶೀತೋಷ್ಣಾದಿಗಳಿಂದ ರಹಿತನಾದ), ಅವ್ಯಯನಾದ, ಶ್ರೇಷ್ಠನಾದ, ಪರಮಾತ್ಮನಾದ ನಾರಾಯಣನನ್ನು ಸೇರುತ್ತಾನೆ.

ವಿಮುಕ್ತಃ ಪುಣ್ಯಪಾಪೇಭ್ಯಃ ಪ್ರವಿಷ್ಟಸ್ತಮನಾಮಯಮ್ ।
ಪರಮಾತ್ಮಾನಮಗುಣಂ ನ ನಿವರ್ತತಿ ಭಾರತ ॥೯೭॥

ಪುಣ್ಯ-ಪಾಪಗಳಿಂದ ವಿಮುಕ್ತನಾದ ಸಾಂಖ್ಯಯೋಗಿಯು–ನಿರ್ಗುಣನಾದ, ನಿರ್ವಿಕಾರನಾದ, ಈತಿಬಾಧಾರಹಿತನಾದ, ನಾರಾಯಣಸ್ವರೂಪನಾದ ಪರಮಾತ್ಮನನ್ನು ಪ್ರವೇಶಿಸಿ ಅಲ್ಲಿಂದ ಪುನಃ ಹಿಂದಿರುಗುವುದಿಲ್ಲ.

ಶಿಷ್ಟಂ ತತ್ರ ಮನಸ್ತಾತ ಇನ್ದ್ರಿಯಾಣಿ ಚ ಭಾರತ ।
ಆಗಚ್ಛನ್ತಿ ಯಥಾಕಾಲಂ ಗುರೋಃ ಸನ್ದೇಶಕಾರಿಣಃ ॥೯೮॥

ಹೀಗೆ ಸಾಂಖ್ಯಯೋಗಿಯ ಜೀವನು ಪರಮಾತ್ಮನೊಡನೆ ಸೇರಿ ಜೀವನ್ಮುಕ್ತಿಯನ್ನು ಹೊಂದಿದರೂ ಪ್ರಾರಬ್ಧಾನುಸಾರವಾಗಿ ಅವನು ಜೀವಿಸಿರುವವರೆಗೆ ಅವನ ಮನಸ್ಸು ಮತ್ತು ಇಂದ್ರಿಯಗಳು ಯಥಾವತ್ತಾಗಿಯೇ ಉಳಿದಿರುತ್ತವೆ. (ಆದರೆ ಆ ಸಮಯದಲ್ಲಿ ಅವುಗಳು ಸ್ವತಂತ್ರವಾಗಿರುವು

ದಿಲ್ಲ.) ಗುರುವಿನ ಆದೇಶವನ್ನು ಪಾಲನೆಮಾಡುವ ಶಿಷ್ಯರಂತೆ–ಸಾಂಖ್ಯ ಯೋಗಿಯ ಆದೇಶದಂತೆ ನಡೆದುಕೊಳ್ಳುತ್ತಿರುತ್ತವೆ.

ಶಕ್ಯಂ ಚಾಲ್ಪೇನ ಕಾಲೇನ ಶಾನ್ತಿಂ ಪ್ರಾಪ್ತುಂ ಗುಣಾರ್ಥಿನಾ ।
ಏವಮುಕ್ತೇನ ಕೌನ್ತೇಯ ಯುಕ್ತಜ್ಞಾನೇನ ಮೋಕ್ಷಿಣಾ ॥೯೯॥

ಈ ಪ್ರಕಾರವಾಗಿ ಹೇಳಿರುವ ಸಾಂಖ್ಯಯೋಗದ ಜ್ಞಾನದಿಂದ ಸಂಪನ್ನನಾದ, ಮೋಕ್ಷಕ್ಕೆ ಅಧಿಕಾರಿಯಾದ, ಆಧ್ಯಾತ್ಮಿಕವಾದ ಉನ್ನತಿಯನ್ನು ಪಡೆಯಲು ಅಭಿಲಾಷೆಯಿರುವ ಮನುಷ್ಯನು ಸ್ವಲ್ಪಕಾಲದಲ್ಲಿಯೇ ಪರಮ ಶಾಂತಿಯನ್ನು ಪಡೆಯುವ ಸಾಧ್ಯತೆಯಿದೆ.

ಸಾಂಖ್ಯಾ ರಾಜನ್ಮಹಾಪ್ರಾಜ್ಞಾ ಗಚ್ಛನ್ತಿ ಪರಮಾಂ ಗತಿಮ್ ।
ಜ್ಞಾನೇನಾನೇನ ಕೌನ್ತೇಯ ತುಲ್ಯಂ ಜ್ಞಾನಂ ನ ವಿದ್ಯತೇ ॥೧೦೦॥

ಕೌಂತೇಯನೇ! ಮಹಾಪ್ರಾಜ್ಞರಾದ ಸಾಂಖ್ಯಯೋಗಿಗಳು ಇಂತಹ ಜ್ಞಾನದಿಂದ ಪರಮಗತಿಯನ್ನು ಹೊಂದುತ್ತಾರೆ. ಈ ಜ್ಞಾನಕ್ಕೆ ಸದೃಶವಾದುದು ಬೇರೆ ಯಾವುದೂ ಇಲ್ಲ.

ಅತ್ರ ತೇ ಸಂಶಯೋ ಮಾ ಭೂಜ್ಜ್ಞಾನಂ ಸಾಂಖ್ಯಂ ಪರಂ ಮತಮ್ ।
ಅಕ್ಷರಂ ಧ್ರುವಮೇವೋಕ್ತಂ ಪೂರ್ಣಂ ಬ್ರಹ್ಮ ಸನಾತನಮ್ ॥೧೦೧॥

ಸಾಂಖ್ಯಜ್ಞಾನವು ಎಲ್ಲ ಜ್ಞಾನಗಳಿಗಿಂತಲೂ ಉತ್ಕೃಷ್ಟವಾದುದು. ಈ ವಿಷಯದಲ್ಲಿ ನಿನಗೆ ಸಂಶಯವೇ ಉಂಟಾಗದಿರಲಿ. ಈ ಶಾಸ್ತ್ರದಲ್ಲಿ ನಾಶರಹಿತವಾದ, ಶಾಶ್ವತವಾದ, ಪರಿಪೂರ್ಣವಾದ ಸನಾತನಬ್ರಹ್ಮವು ಪ್ರತಿಪಾದಿತವಾಗಿದೆ.

ಅನಾದಿಮಧ್ಯನಿಧನಂ ನಿರ್ದ್ವನ್ದ್ವಂ ಕರ್ತೃ ಶಾಶ್ವತಮ್ ।
ಕೂಟಸ್ಥಂ ಚೈವ ನಿತ್ಯಂ ಚ ಯದ್ವದನ್ತಿ ಮನೀಷಿಣಃ ॥೧೦೨॥

ಸನಾತನಬ್ರಹ್ಮವು ಆದಿಮಧ್ಯಾಂತಗಳಿಂದ ರಹಿತವಾದುದು. ವಿರುದ್ಧ ಗುಣಗಳುಳ್ಳ ದ್ವಂದ್ವಗಳಿಂದ ರಹಿತವಾದುದು. ಜಗತ್ತಿನ ಉತ್ಪತ್ತಿಗೆ ಕಾರಣ

ಭೂತವಾದುದು ; ಶಾಶ್ವತವಾದುದು. ಇದನ್ನು ವಿದ್ವಾಂಸರು ಕೂಟಸ್ಥನೆಂದೂ–ನಿತ್ಯನೆಂದೂ ಹೇಳುತ್ತಾರೆ.

ಯತಃ ಸರ್ವಾಃ ಪ್ರವರ್ತನ್ತೇ ಸರ್ಗಪ್ರಲಯವಿಕ್ರಿಯಾಃ ।
ಯಚ್ಚ ಶಂಸನ್ತಿ ಶಾಸ್ತ್ರೇಷು ವದನ್ತಿ ಪರಮರ್ಷಯಃ ॥೧೦೩॥

ಪ್ರಪಂಚದಲ್ಲಿ ಸೃಷ್ಟಿರೂಪವಾದ ಮತ್ತು ಪ್ರಲಯರೂಪವಾದ ಸಮಸ್ತವಿಕಾರಗಳೂ ಆ ಸನಾತನಬ್ರಹ್ಮದಿಂದಲೇ ಹುಟ್ಟುತ್ತವೆ. ಶಾಸ್ತ್ರಗಳಲ್ಲಿ ಆ ಪರಬ್ರಹ್ಮವನ್ನೇ ಪ್ರಶಂಸೆಮಾಡಿದ್ದಾರೆ. ಶ್ರೇಷ್ಠರಾದ ಋಷಿಗಳೂ ಇದರ ವಿಷಯವಾಗಿಯೇ ಮಾತನಾಡುತ್ತಿರುತ್ತಾರೆ.

ಸರ್ವೇ ವಿಪ್ರಾಶ್ಚ ದೇವಾಶ್ಚ ತಥಾ ಶಮವಿದೋ ಜನಾಃ ।
ಬ್ರಹ್ಮಣ್ಯಂ ಪರಮಂ ದೇವಮನನ್ತಂ ಪರಮಚ್ಯುತಮ್ ॥೧೦೪॥

ಪ್ರಾರ್ಥಯನ್ತಶ್ಚ ತಂ ವಿಪ್ರಾ ವದನ್ತಿ ಗುಣಬುದ್ಧಯಃ ।
ಸಮ್ಯಗ್ಯುಕ್ತಾಸ್ತಥಾ ಯೋಗಾಃ ಸಾಂಖ್ಯಾಶ್ಚಾಮಿತದರ್ಶನಾಃ ॥೧೦೫॥

ಸಮಸ್ತಬ್ರಾಹ್ಮಣರೂ, ದೇವತೆಗಳೂ, ಪರಮಶಾಂತಿಯ ಸುಖಾನುಭವಿಗಳಾದ ಜನರೂ, ಯೋಗದಲ್ಲಿ ಉತ್ತಮಸಿದ್ಧಿಯನ್ನು ಪಡೆದವರೂ, ಅಪಾರವಾದ ಜ್ಞಾನವುಳ್ಳ ಸಾಂಖ್ಯಯೋಗಿಗಳೂ–ಬ್ರಾಹ್ಮಣಪ್ರಿಯನಾದ, ಅನಂತನಾದ, ಅಚ್ಯುತನಾದ, ಪರಮದೇವನಾದ ಆ ಭಗವಂತನನ್ನು ಪ್ರಾರ್ಥಿಸುತ್ತಾ ಅವನ ಗುಣ-ಬುದ್ಧಿಗಳನ್ನು ಕೀರ್ತನಮಾಡುತ್ತಾರೆ.

ಅಮೂರ್ತೇಸ್ತಸ್ಯ ಕೌನ್ತೇಯ ಸಾಂಖ್ಯಂ ಮೂರ್ತಿರಿತಿ ಶ್ರುತಿಃ ।
ಅವಿಜ್ಞಾನಾನಿ ತಸ್ಯಾಹುರ್ಮತಂ ಹಿ ಭರತರ್ಷಭ ॥೧೦೬॥

ಕೌಂತೇಯನೇ! ನಿರಾಕಾರನಾದ ಪರಮಾತ್ಮನಿಗೆ ಸಾಂಖ್ಯಶಾಸ್ತ್ರವೇ ಮೂರ್ತಿಸ್ವರೂಪವಾಗಿದೆಯೆಂದು ಹೇಳುತ್ತಾರೆ. ಪರಬ್ರಹ್ಮದ ನೆನಪುಗಳನ್ನು ತರುವ ಶಾಸ್ತ್ರವನ್ನೇ ಸಾಂಖ್ಯಮತವೆನ್ನುತ್ತಾರೆ.

ದ್ವಿವಿಧಾನೀಹ ಭೂತಾನಿ ಪೃಥಿವ್ಯಾಂ ಪೃಥಿವೀಪತೇ ।
ಜಙ್ಗಮಾಗಮಸಂಜ್ಞಾನಿ ಜಙ್ಗಮಂ ತು ವಿಶಿಷ್ಯತೇ ॥೧೦೭॥

ಪೃಥಿವೀಪತಿಯೇ! ಭೂತಲದಲ್ಲಿ ಜಂಗಮ ಮತ್ತು ಸ್ಥಾವರಗಳೆಂಬ ಎರಡು ಪ್ರಕಾರವಾದ ಪ್ರಾಣಿಗಳಿವೆ. ಆ ಎರಡು ಬಗೆಯ ಪ್ರಾಣಿಗಳಲ್ಲಿ ಜಂಗಮಪ್ರಾಣಿಗಳು (ಚಲಿಸುವ ಪ್ರಾಣಿಗಳು) ಶ್ರೇಷ್ಠವಾದುವುಗಳು.

ಜ್ಞಾನಂ ಮಹದ್ಯದ್ಧಿ ಮಹತ್ಸು ರಾಜ-
ನ್ವೇದೇಷು ಸಾಂಖ್ಯೇಷು ತಥೈವ ಯೋಗೇ ।
ಯಚ್ಚಾಪಿ ದೃಷ್ಟಂ ವಿವಿಧಂ ಪುರಾಣೇ
ಸಾಂಖ್ಯಾಗತಂ ತನ್ನಿಖಿಲಂ ನರೇನ್ದ್ರ ॥೧೦೮॥

ಮಹಾರಾಜ! ಮಹಾತ್ಮರಾದ ಬ್ರಹ್ಮವಿದರಲ್ಲಿಯೂ, ವೇದಗಳಲ್ಲಿಯೂ, ಸಾಂಖ್ಯದರ್ಶನಗಳಲ್ಲಿಯೂ, ಯೋಗಶಾಸ್ತ್ರದಲ್ಲಿಯೂ ಮತ್ತು ಪುರಾಣ ಗಳಲ್ಲಿಯೂ–ನಾನಾಪ್ರಕಾರವಾದ ಯಾವ ಉತ್ತಮಜ್ಞಾನಗಳು ಕಂಡು ಬಂದಿವೆಯೋ–ಅವೆಲ್ಲವೂ ಸಾಂಖ್ಯದಿಂದಲೇ ಬಂದುವುಗಳಾಗಿವೆ.

ಯಚ್ಚೇತಿಹಾಸೇಷು ಮಹತ್ಸು ದೃಷ್ಟಂ
ಯಚ್ಚಾರ್ಥಶಾಸ್ತ್ರೇ ನೃಪ ಶಿಷ್ಟಜುಷ್ಟೇ ।
ಜ್ಞಾನಂ ಚ ಲೋಕೇ ಯದಿಹಾಸ್ತಿ ಕಿಂಚಿ-
ತ್ಸಾಂಖ್ಯಾಗತಂ ತಚ್ಚ ಮಹನ್ಮಹಾತ್ಮನ್ ॥೧೦೯॥

ಮಹಾತ್ಮನೇ! ದೊಡ್ಡ ದೊಡ್ಡ ಇತಿಹಾಸಗಳಲ್ಲಿ–ಸತ್ಪುರುಷರಿಂದ ಸೇವಿಸಲ್ಪಡುತ್ತಿರುವ ಅರ್ಥಶಾಸ್ತ್ರಗಳಲ್ಲಿ ಯಾವ ಜ್ಞಾನವು ಕಂಡು ಬರುವುದೋ ಅದು ಸಾಂಖ್ಯದಿಂದಲೇ ಬಂದುದಾಗಿದೆ. ಈ ಪ್ರಪಂಚದಲ್ಲಿ ಪ್ರಚಲಿತವಾಗಿರುವ ಯಾವ ಯಾವ ಮಹಾಜ್ಞಾನವು ಇರುವುದೋ–ಅದೂ ಸಾಂಖ್ಯದಿಂದಲೇ ಬಂದುದಾಗಿದೆ.

ಶಮಶ್ಚ ದೃಷ್ಟಃ ಪರಮಂ ಬಲಂ ಚ
ಜ್ಞಾನಂ ಚ ಸೂಕ್ಷ್ಮಂ ಚ ಯಥಾವದುಕ್ತಮ್ ।

ತಪಾಂಸಿ ಸೂಕ್ಷ್ಮಾಣಿ ಸುಖಾನಿ ಚೈವ
ಸಾಂಖ್ಯೇ ಯಥಾವದ್ವಿಹಿತಾನಿ ರಾಜನ್ ॥೧೧೦॥

ಸಾಂಖ್ಯಶಾಸ್ತ್ರದಲ್ಲಿ ಶಮದ (ಅಂತರಿಂದ್ರಿಯನಿಗ್ರಹದ) ವಿಷಯವಾಗಿ ಹೇಳಲ್ಪಟ್ಟಿದೆ. ಶ್ರೇಷ್ಠವಾದ ಬಲವು ಯಾವುದೆಂಬುದರ ವಿಷಯವಾಗಿ ಮತ್ತು ಅದನ್ನು ಹೇಗೆ ಪಡೆದುಕೊಳ್ಳಬೇಕೆಂಬುದರ ವಿಷಯವಾಗಿ ಹೇಳಲ್ಪಟ್ಟಿದೆ. ಸೂಕ್ಷ್ಮಜ್ಞಾನದ ವಿಷಯವಾಗಿ ಹೇಳಲ್ಪಟ್ಟಿದೆ. ಸೂಕ್ಷ್ಮವಾದ ತಪಸ್ಸಿನ ವಿಷಯವಾಗಿಯೂ ಮತ್ತು ಪ್ರಾಪ್ತವಾಗುವ ಸುಖಗಳ ವಿಷಯವಾಗಿಯೂ ಸಾಂಖ್ಯಶಾಸ್ತ್ರದಲ್ಲಿ ಯಥಾವತ್ತಾಗಿ ಹೇಳಲ್ಪಟ್ಟಿದೆ.

ವಿಪರ್ಯಯೇ ತಸ್ಯ ಹಿ ಪಾರ್ಥ ದೇವಾ-
ನ್ಗಚ್ಛನ್ತಿ ಸಾಂಖ್ಯಾಃ ಸತತಂ ಸುಖೇನ ।
ತಾಂಶ್ಚಾನುಸಂಚಾರ್ಯ ತತಃ ಕೃತಾರ್ಥಾಃ
ಪತನ್ತಿ ವಿಪ್ರೇಷು ಯತೇಷು ಭೂಯಃ ॥೧೧೧॥

ಪಾರ್ಥ! ಸಾಧನೆಯಲ್ಲಿ ಅಲ್ಪ-ಸ್ವಲ್ಪ ನ್ಯೂನತೆಯುಂಟಾದರೂ–ಪರಿಪೂರ್ಣಜ್ಞಾನವುಂಟಾಗದೇ ಇದ್ದರೂ– ಸಾಂಖ್ಯಯೋಗಸಾಧಕರು ದೇವತೆಗಳ ಬಳಿಗೆ ಹೋಗಿಯೇ ಹೋಗುತ್ತಾರೆ. ಅಲ್ಲಿ ನಿರಂತರವೂ ಸುಖವಾಗಿರುತ್ತಾ ದೇವತೆಗಳನ್ನೇ ಅನುಸರಿಸಿ ಆಧಿಪತ್ಯವನ್ನೂ ನಡೆಸಿ, ಕೃತಾರ್ಥರಾಗಿ ಪುಣ್ಯವು ಕ್ಷಯಿಸಿದನಂತರ ಸಾಧನೆಯನ್ನು ಮುಂದುವರಿಸಲು ಭೂಲೋಕದಲ್ಲಿ ಪ್ರಯತ್ನಶೀಲರಾದ ಬ್ರಾಹ್ಮಣರ ಮನೆಯಲ್ಲಿ ಜನ್ಮತಾಳುತ್ತಾರೆ.

ಹಿತ್ವಾ ಚ ದೇಹಂ ಪ್ರವಿಶನ್ತಿ ದೇವಂ
ದಿವೌಕಸೋ ದ್ಯಾಮಿವ ಪಾರ್ಥ ಸಾಂಖ್ಯಾಃ ।
ಅತೋಽಧಿಕಂ ತೇಽಭಿರತಾ ಮಹಾರ್ಹೇ
ಸಾಂಖ್ಯೇ ದ್ವಿಜಾಃ ಪಾರ್ಥಿವ ಶಿಷ್ಟಜುಷ್ಟೇ ॥೧೧೨॥

ಕೌಂತೇಯ! ಸಾಂಖ್ಯಯೋಗಿಗಳು ದೇಹತ್ಯಾಗಮಾಡಿದನಂತರ ದೇವತೆಗಳು ಸ್ವರ್ಗಕ್ಕೆ ಹೋಗುವಂತೆ–ಪರಮದೇವಪರಮಾತ್ಮನನ್ನು ಪ್ರವೇಶಿಸುತ್ತಾರೆ. ಆದುದರಿಂದ ಶಿಷ್ಟಪುರುಷರಿಂದ ಸೇವಿಸಲ್ಪಡುವ ಪರಮಪೂಜ್ಯ

ವಾದ ಸಾಂಖ್ಯಶಾಸ್ತ್ರದ ವಿಷಯದಲ್ಲಿ ಎಲ್ಲ ದ್ವಿಜರೂ ಹೆಚ್ಚಿನ ಆಸಕ್ತಿಯುಳ್ಳವರಾಗಿರುತ್ತಾರೆ.

ತೇಷಾಂ ನ ತಿರ್ಯಗ್ಗಮನಂ ಹಿ ದೃಷ್ಟಂ
ನಾರ್ವಾಗ್ಗತಿಃ ಪಾಪಕೃತಾಧಿವಾಸಃ ।
ನ ವಾ ಪ್ರಧಾನಾ ಅಪಿ ತೇ ದ್ವಿಜಾತಯೋ
ಯೇ ಜ್ಞಾನಮೇತನ್ನೃಪತೇಽನುರಕ್ತಾಃ ॥೧೧೩॥

ಯಾರು ಈ ಸಾಂಖ್ಯಶಾಸ್ತ್ರದಲ್ಲಿ ಅನುರಕ್ತರಾಗಿರುವರೋ–ಅಂತಹ ದ್ವಿಜಾತಿಪ್ರಮುಖರು ಮರಣಾನಂತರ ಪಶು-ಪಕ್ಷಿಗಳೇ ಮೊದಲಾದ ತಿರ್ಯಗ್ಯೋನಿಗಳಲ್ಲಿ ಹುಟ್ಟುವುದಿಲ್ಲ. ನರಕಾದಿ ಅಧೋಗತಿಗಳನ್ನೂ ಹೊಂದುವುದಿಲ್ಲ. ಪಾಪಾಚಾರಿಗಳ ಮಧ್ಯದಲ್ಲಾಗಲೀ–ಅವಿದ್ವಾಂಸರ ಮಧ್ಯದಲ್ಲಾಗಲೀ ಹುಟ್ಟುವುದೂ ಇಲ್ಲ.

ಸಾಂಖ್ಯಂ ವಿಶಾಲಂ ಪರಮಂ ಪುರಾಣಂ
ಮಹಾರ್ಣವಂ ವಿಮಲಮುದಾರಕಾನ್ತಮ್ ।
ಕೃತ್ಸ್ನಂ ಚ ಸಾಂಖ್ಯಂ ನೃಪತೇ ಮಹಾತ್ಮಾ
ನಾರಾಯಣೋ ಧಾರಯತೇಽಪ್ರಮೇಯಮ್ ॥೧೧೪॥

ಸಾಂಖ್ಯವು ಅತ್ಯಂತವಿಶಾಲವಾದುದು ಮತ್ತು ಪರಮಪ್ರಾಚೀನವಾದುದು. ಅದು ಮಹಾಸಾಗರದೋಪಾದಿಯಲ್ಲಿ ಅಗಾಧವೂ, ನಿರ್ಮಲವೂ, ಉದಾರಭಾವದಿಂದ ಪರಿಪೂರ್ಣವೂ, ಅತ್ಯಂತಸುಂದರವೂ ಆಗಿದೆ. ಪರಮಾತ್ಮನಾದ ಭಗವಾನ್ ನಾರಾಯಣನು ಸಮಗ್ರವಾದ ಮತ್ತು ಅಪ್ರಮೇಯವಾದ ಸಾಂಖ್ಯಜ್ಞಾನವನ್ನು ಧರಿಸಿದ್ದಾನೆ.

ಏತನ್ಮಯೋಕ್ತಂ ನರದೇವ ತತ್ತ್ವಂ
ನಾರಾಯಣೋ ವಿಶ್ವಮಿದಂ ಪುರಾಣಮ್ ।
ಸ ಸರ್ಗಕಾಲೇ ಚ ಕರೋತಿ ಸರ್ಗಂ
ಸಂಹಾರಕಾಲೇ ಚ ತದತ್ತಿ ಭೂಯಃ ॥೧೧೫॥
ಸಂಹೃತ್ಯ ಸರ್ವಂ ನಿಜದೇಹಸಂಸ್ಥಂ
ಕೃತ್ವಾಪ್ಸು ಶೇತೇ ಜಗದನ್ತರಾತ್ಮಾ ॥೧೧೬॥

ನರದೇವನೇ! ನಾನು ನಿನಗೆ ಸಾಂಖ್ಯತತ್ತ್ವವನ್ನು ಹೇಳಿರುತ್ತೇನೆ. ಪುರಾತನವಾದ ಈ ವಿಶ್ವವು ನಾರಾಯಣಾತ್ಮಕವೇ ಆಗಿದೆ. ಅವನು ಜಗತ್ಸೃಷ್ಟಿಯ ಸಮಯದಲ್ಲಿ ಜಗತ್ತನ್ನು ಸೃಷ್ಟಿಸುತ್ತಾನೆ. ಸಂಹಾರಕಾಲದಲ್ಲಿ ಜಗತ್ತನ್ನು ತನ್ನಲ್ಲಿಯೇ ವಿಲೀನಗೊಳಿಸುತ್ತಾನೆ. ಹೀಗೆ ಜಗತ್ತಿನ ಅಂತರಾತ್ಮನಾದ ಶ್ರೀಮನ್ನಾರಾಯಣನು ಸಮಗ್ರವಾದ ಜಗತ್ತನ್ನೂ ತನ್ನ ಶರೀರದಲ್ಲಿಯೇ ಉಪಸಂಹರಿಸಿ ಏಕಾರ್ಣವವಾದ ನೀರಿನಲ್ಲಿ ಪವಡಿಸುತ್ತಾನೆ."

೩೦೧ನೆಯ ಅಧ್ಯಾಯವು ಮುಗಿಯಿತು.

೩೦೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ವಸಿಷ್ಠ-ಕರಾಲಜನಕರ ಸಂವಾದ: ಕ್ಷರ ಮತ್ತು ಅಕ್ಷರತತ್ತ್ವಗಳ ನಿರೂಪಣೆ: ಅವುಗಳ ಜ್ಞಾನದಿಂದ ಮುಕ್ತಿ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಿಂ ತದಕ್ಷರಮಿತ್ಯುಕ್ತಂ ಯಸ್ಮಾನ್ನಾವರ್ತತೇ ಪುನಃ ।
ಕಿಂಚ ತತ್ಕ್ಷರಮಿತ್ಯುಕ್ತಂ ಯಸ್ಮಾದಾವರ್ತತೇ ಪುನಃ ॥೧॥

"ಪಿತಾಮಹ! ಯಾವುದನ್ನು ಹೊಂದುವುದರಿಂದ ಪುನಃ ಪ್ರಪಂಚಕ್ಕೆ ಹಿಂದಿರುಗುವುದೇ ಇಲ್ಲವೆಂದು ಹೇಳುವರೋ-ಅಂತಹ ಅಕ್ಷರವೆಂದು ಹೇಳಲ್ಪಡುವ ಆ ವಸ್ತುವು ಯಾವುದು? ಯಾವುದನ್ನು ಹೊಂದುವುದರಿಂದ ಪುನರ್ಜನ್ಮವುಂಟೆಂದು ಹೇಳುವರೋ-ಅಂತಹ ಕ್ಷರವೆಂದು ಹೇಳಲ್ಪಡುವ ಆ ವಸ್ತುವು ಯಾವುದು?

ಅಕ್ಷರಕ್ಷರಯೋರ್ವ್ಯಕ್ತಿಂ ಪೃಚ್ಛಾಮ್ಯರಿನಿಷೂದನ ।
ಉಪಲಬ್ಧುಂ ಮಹಾಬಾಹೋ ತತ್ತ್ವೇನ ಕುರುನನ್ದನ ॥೨॥

ಶತ್ರುನಿಷೂದನನೇ! ಮಹಾಬಾಹುವೇ! ಕುರುಪುತ್ರನೇ! ಕ್ಷರ ಮತ್ತು ಅಕ್ಷರಗಳ ಸ್ವರೂಪವನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವ ಸಲುವಾಗಿಯೇ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ತ್ವಂ ಹಿ ಜ್ಞಾನನಿಧಿರ್ವಿಪ್ರೈರುಚ್ಯಸೇ ವೇದಪಾರಗೈಃ ।
ಋಷಿಭಿಶ್ಚ ಮಹಾಭಾಗೈರ್ಯತಿಭಿಶ್ಚ ಮಹಾತ್ಮಭಿಃ ॥೩॥

ವೇದಪಾರಂಗತರಾದ ವಿಪ್ರರೂ, ಮಹಾಭಾಗ್ಯಶಾಲಿಗಳಾದ ಋಷಿಗಳೂ, ಮಹಾತ್ಮರಾದ ಯತಿಗಳೂ ನಿನ್ನನ್ನು ಜ್ಞಾನನಿಧಿಯೆಂದೇ ಹೇಳುತ್ತಾರೆ.

ಶೇಷಮಲ್ಪಂ ದಿನಾನಾಂ ತೇ ದಕ್ಷಿಣಾಯನಭಾಸ್ಕರೇ ।
ಆವೃತೇ ಭಗವತ್ಯರ್ಕೇ ಗನ್ತಾಸಿ ಪರಮಾಂ ಗತಿಮ್ ॥೪॥

ಸೂರ್ಯನು ದಕ್ಷಿಣಾಯನದಲ್ಲಿರಲಾಗಿ ನಿನ್ನ ಆಯುಷ್ಯದ ದಿವಸಗಳ ಶೇಷವು ಸ್ವಲ್ಪಮಾತ್ರವಿದೆ. ಭಗವಾನ್ ಸೂರ್ಯನು ಉತ್ತರಾಯಣಕ್ಕೆ ಪದಾರ್ಪಣಮಾಡಿದೊಡನೆಯೇ ನೀನು ಪರಮಪದವನ್ನು ಸೇರುವೆ.

ತ್ವಯಿ ಪ್ರತಿಗತೇ ಶ್ರೇಯಃ ಕುತಃ ಶ್ರೋಷ್ಯಾಮಹೇ ವಯಮ್ ।
ಕುರುವಂಶಪ್ರದೀಪಸ್ತ್ವಂ ಜ್ಞಾನದೀಪೇನ ದೀಪ್ಯಸೇ ॥೫॥

ನೀನು ಪರಮಪದವನ್ನು ಸೇರಿದ ಬಳಿಕ ಶ್ರೇಯಸ್ಕರವಾದ ಪ್ರವಚನಗಳನ್ನು ನಾವು ಯಾರಿಂದ ಕೇಳಬಲ್ಲೆವು? ಕುರುವಂಶಪ್ರದೀಪನಾದ ನೀನು ಜ್ಞಾನಜ್ಯೋತಿಯಿಂದ ಬೆಳಗುತ್ತಿರುವೆ.

ತದೇತಚ್ಛ್ರೋತುಮಿಚ್ಛಾಮಿ ತ್ವತ್ತಃ ಕುರುಕುಲೋದ್ವಹ ।
ನ ತೃಪ್ಯಾಮೀಹ ರಾಜೇನ್ದ್ರ ಶೃಣ್ವನ್ನಮೃತಮೀದೃಶಮ್ ॥೬॥

ಕುರುಕುಲಾವತಂಸನೇ! ರಾಜೇಂದ್ರ! ಆದುದರಿಂದ, ನಿನ್ನಿಂದಲೇ ನಾನು ಈ ಎಲ್ಲ ವಿಷಯಗಳನ್ನೂ ತಿಳಿಯಬೇಕೆಂದಿರುತ್ತೇನೆ. ಇಂತಹ ಅಮೃತೋಪಮವಾದ ಪ್ರವಚನವನ್ನು ಕೇಳುತ್ತಿದ್ದಂತೆಲ್ಲಾ ನನಗೆ ತೃಪ್ತಿಯೇ ಉಂಟಾಗುವುದಿಲ್ಲ. ಮತ್ತೂ ಕೇಳಬೇಕೆಂದೆನಿಸುತ್ತದೆ. ಆದುದರಿಂದ ದಯಮಾಡಿ ಕ್ಷರಾಕ್ಷರಗಳ ತತ್ತ್ವವನ್ನು ಹೇಳು.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಈ ವಿಷಯದಲ್ಲಿ ನಾನು ನಿನಗೆ ಹಿಂದೆ ನಡೆದ

ವಸಿಷ್ಠ-ಕರಾಲಜನಕರ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ಹೇಳುತ್ತೇನೆ.

ಹಿಂದೊಮ್ಮೆ ಕರಾಲಜನಕನು–ಋಷಿಶ್ರೇಷ್ಠರಾದ, ಭಾಸ್ಕರಸಮಾನ ತೇಜಸ್ವಿಯಾದ, ಸುಖಾಸನದಲ್ಲಿ ಮಂಡಿಸಿದ್ದ ವಸಿಷ್ಠರನ್ನು ಕುರಿತು ನಿಃಶ್ರೇಯಸಕ್ಕೆ ಕಾರಣವಾದ ಜ್ಞಾನದ ವಿಷಯವಾಗಿ ಪ್ರಶ್ನಿಸಿದನು. ಅಧ್ಯಾತ್ಮ ವಿದ್ಯೆಯಲ್ಲಿ ಕುಶಲರಾದ, ಅಧ್ಯಾತ್ಮಮಾರ್ಗದಲ್ಲಿ ನಿಶ್ಚಯಜ್ಞಾನವುಳ್ಳ, ಮಿತ್ರಾವರುಣರ ಮಕ್ಕಳಾದ ವಸಿಷ್ಠರ ಬಳಿಗೆ ಹೋಗಿ, ಮಹರ್ಷಿಗಳಿಗೆ ಅಭಿವಾದನಪೂರ್ವಕವಾಗಿ ನಮಸ್ಕಾರಮಾಡಿ ಬದ್ಧಾಂಜಲಿಯಾಗಿ, ಒಳ್ಳೆಯ ಅಕ್ಷರಸಂಪತ್ತಿನಿಂದ ಕೂಡಿದ್ದ, ವಿನಯಪೂರ್ಣವಾದ, ಸುಮಧುರವಾದ, ಕುತರ್ಕದಿಂದ ರಹಿತವಾದ ಮಾತಿನಿಂದ ಋಷಿಶ್ರೇಷ್ಠರನ್ನು ಪ್ರಶ್ನಿಸಿದನು :

ಭಗವಞ್ಶ್ರೋತುಮಿಚ್ಛಾಮಿ ಪರಂ ಬ್ರಹ್ಮ ಸನಾತನಮ್ ।
ಯಸ್ಮಾನ್ನ ಪುನರಾವೃತ್ತಿಮಾಪ್ನುವನ್ತಿ ಮನೀಷಿಣಃ ॥೧೧॥

"ಪೂಜ್ಯರೇ! ವಿದ್ವಾಂಸರಾದವರು ಯಾವ ಸ್ಥಳದಿಂದ ಪುನಃ ಸಂಸಾರಕ್ಕೆ ಹಿಂದಿರುಗಿ ಬರುವುದಿಲ್ಲವೋ–ಅಂತಹ ಶ್ರೇಷ್ಠವಾದ, ಸನಾತನವಾದ ಪರಬ್ರಹ್ಮದ ವಿಷಯವಾಗಿ ತಮ್ಮನ್ನು ಕೇಳಬೇಕೆಂದಿರುತ್ತೇನೆ.


ಯಚ್ಚ ತತ್ಕ್ಷರಮಿತ್ಯುಕ್ತಂ ಯತ್ರೇದಂ ಕ್ಷರತೇ ಜಗತ್ ।
ಯಚ್ಚಾಕ್ಷರಮಿತಿ ಪ್ರೋಕ್ತಂ ಶಿವಂ ಕ್ಷೇಮ್ಯಮನಾಮಯಮ್ ॥೧೨॥

ಯಾವುದು ಕ್ಷರವೆಂದು ಹೇಳಲ್ಪಟ್ಟಿದೆ? ಯಾವುದರಲ್ಲಿ ಈ ಜಗತ್ತು ಲಯಹೊಂದುತ್ತದೆ? ಮಂಗಳಕರವಾದ, ಕ್ಷೇಮಕರವಾದ, ಸುಖಸ್ವರೂಪವಾದ ಯಾವುದು ಅಕ್ಷರವೆಂದು ಹೇಳಲ್ಪಟ್ಟಿದೆ? ಈ ವಿಷಯವನ್ನೂ ನಾನು ತಿಳಿಯಬೇಕೆಂದಿದ್ದೇನೆ."

ವಸಿಷ್ಠರು ಹೇಳುತ್ತಾರೆ :

ಶ್ರೂಯತಾಂ ಪೃಥಿವೀಪಾಲ ಕ್ಷರತೀದಂ ಯಥಾ ಜಗತ್ ।
ಯನ್ನ ಕ್ಷರತಿ ಪೂರ್ವೇಣ ಯಾವತ್ಕಾಲೇನ ವಾಪ್ಯಥ ॥೧೩॥

"ಭೂಪಾಲನೇ! ಯಾವ ರೀತಿಯಲ್ಲಿ ಈ ಜಗತ್ತು ವಿಕಾರವನ್ನು (ಪರಿವರ್ತನೆಯನ್ನು) ಹೊಂದುತ್ತದೆಯೆಂಬ ವಿಷಯವನ್ನೂ ಮತ್ತು ಯಾವುದು ಯಾವುದೇ ಕಾಲಕ್ಕಾದರೂ ವಿಕಾರಹೊಂದುವುದಿಲ್ಲವೆಂಬ ವಿಷಯವನ್ನೂ ಹೇಳುವೆನು, ಕೇಳು.



ಯುಗಂ ದ್ವಾದಶಸಾಹಸ್ರಂ ಕಲ್ಪಂ ವಿದ್ಧಿ ಚತುರ್ಯುಗಮ್ ।
ದಶಕಲ್ಪಶತಾವೃತ್ತಮಹಸ್ತದ್ಬ್ರಾಹ್ಮಮುಚ್ಯತೇ ॥೧೪॥

ದೇವಮಾನದ ಪ್ರಕಾರ ಹನ್ನೆರಡು ಸಾವಿರ ವರ್ಷಗಳಿಗೆ ಒಂದು ಚತುರ್ಯುಗವಾಗುತ್ತದೆ. ಇದನ್ನು ಕಲ್ಪವೆಂದೂ ಅಥವಾ ಮಹಾಯುಗ

ವೆಂದೂ ಕರೆಯುತ್ತಾರೆ. ಇಂತಹ ಒಂದು ಸಾವಿರ ಕಲ್ಪಗಳು ಅಥವಾ ಮಹಾಯುಗಗಳು ಬ್ರಹ್ಮನ ಒಂದು ದಿನವಾಗುತ್ತದೆ.

ರಾತ್ರಿಶ್ಚೈತಾವತೀ ರಾಜನ್ಯಸ್ಯಾನ್ತೇ ಪ್ರತಿಬುದ್ಧ್ಯತೇ ।
ಸೃಜತ್ಯನನ್ತಕರ್ಮಾಣಂ ಮಹಾನ್ತಂ ಭೂತಮಗ್ರಜಮ್ ॥೧೫॥

ಮೂರ್ತಿಮನ್ತಮಮೂರ್ತಾತ್ಮಾ ವಿಶ್ವಂ ಶಮ್ಭುಃ ಸ್ವಯಮ್ಭುವಃ ।
ಅಣಿಮಾ ಲಘಿಮಾ ಪ್ರಾಪ್ತಿರೀಶಾನಂ ಜ್ಯೋತಿರವ್ಯಯಮ್ ॥೧೬॥

ಸರ್ವತಃ ಪಾಣಿಪಾದಂ ತತ್ಸರ್ವತೋಽಕ್ಷಿಶಿರೋಮುಖಮ್ ।
ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥೧೭॥

ಬ್ರಹ್ಮನ ರಾತ್ರಿಯೂ ಒಂದು ಸಾವಿರ ಕಲ್ಪಪರ್ಯಂತವೇ ಆಗಿದೆ. ಇಂತಹ ರಾತ್ರಿಯು ಕಳೆದನಂತರ ಬ್ರಹ್ಮನು ಎಚ್ಚರಗೊಳ್ಳುತ್ತಾನೆ. ಅಮೂರ್ತಾತ್ಮನಾದ (ಆಕಾರರಹಿತನಾದ) ಶಂಭುವು ಅನಂತಕರ್ಮನಾದ, ಮಹಾಭೂತನಾದ, ಅಗ್ರಜನಾದ, ಮೂರ್ತಸ್ವರೂಪನಾದ, ವಿಶ್ವರೂಪನಾದ ಹಿರಣ್ಯಗರ್ಭನನ್ನು ಸೃಷ್ಟಿಸುತ್ತಾನೆ.*

ಅಣಿಮಾ, ಲಘಿಮಾ, ಪ್ರಾಪ್ತಿ, ಈಶತ್ವ –ಇವೇ ಮೊದಲಾದ ಅಷ್ಟಸಿದ್ಧಿಗಳೂ ಸ್ವಯಂಭುವಿಗೆ ಸೇರಿದುವುಗಳೇ ಆಗಿವೆ. ಅಂತಹ ಅಷ್ಟೈಶ್ವರ್ಯ ಯುಕ್ತನಾದ ಪರಮಾತ್ಮನು ಜ್ಯೋತಿಃಸ್ವರೂಪನೂ ಅವಿನಾಶಿಯೂ ಆಗಿದ್ದಾನೆ. ಎಲ್ಲ ಕಡೆಗಳಲ್ಲಿಯೂ ಪಾಣಿ-ಪಾದಗಳಿಂದಲೂ ಕಣ್ಣು-ಶಿರಸ್ಸು ಮತ್ತು ಮುಖಗಳಿಂದಲೂ ವ್ಯಾಪ್ತನಾಗಿ ಎಲ್ಲ ಕಡೆಗಳಲ್ಲಿಯೂ ಕಿವಿಗಳನ್ನು ಹೊಂದಿರುವ ಪರಮಾತ್ಮನು ಎಲ್ಲವನ್ನೂ ಆವರಿಸಿ ನಿಂತಿದ್ದಾನೆ.

ಹಿರಣ್ಯಗರ್ಭೋ ಭಗವಾನೇಷ ಬುದ್ಧಿರಿತಿ ಸ್ಮೃತಃ ।
ಮಹಾನಿತಿ ಚ ಯೋಗೇಷು ವಿರಿಞ್ಚಿರಿತಿ ಚಾಪ್ಯಜಃ ॥೧೮॥

ಪರಮೇಶ್ವರನಿಂದ ಉತ್ಪನ್ನನಾದ, ಎಲ್ಲರಿಗಿಂತಲೂ ಮೊದಲನೆಯವ

---

* ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್ । ಸದಾಧಾರಪೃಥಿವೀಂ ದ್ಯಾಮುತೇಮಾಂ ಕಸ್ಮೈ ದೇವಾಯ ಹವಿಷಾ ವಿಧೇಮ ॥ ಎಂಬ ಮಂತ್ರವು ಹಿರಣ್ಯಗರ್ಭನು ಮೊದಲು ಹುಟ್ಟಿದವನೆಂಬುದನ್ನು ಹೇಳುತ್ತದೆ.

ನಾದ ಭಗವಂತನಾದ ಹಿರಣ್ಯಗರ್ಭನು ಮನುಷ್ಯರಲ್ಲಿರುವ ಬುದ್ಧಿಯೆಂದೂ ಹೇಳಲ್ಪಡುತ್ತಾನೆ. ಯೋಗಶಾಸ್ತ್ರಗಳಲ್ಲಿ ಇವನನ್ನೇ 'ಮಹತ್ತು'–ಎಂಬು ದಾಗಿಯೂ ಹೇಳುತ್ತಾರೆ. ಇವನನ್ನು 'ವಿರಿಂಚಿ' ಮತ್ತು 'ಅಜ' ಎಂದೂ ಕರೆಯುತ್ತಾರೆ.

ಸಾಂಖ್ಯೇ ಚ ಪಠ್ಯತೇ ಶಾಸ್ತ್ರೇ ನಾಮಭಿರ್ಬಹುಧಾತ್ಮಕಃ ।
ವಿಚಿತ್ರರೂಪೋ ವಿಶ್ವಾತ್ಮಾ ಏಕಾಕ್ಷರ ಇತಿ ಸ್ಮೃತಃ ॥೧೯॥

ವೃತಂ ನೈಕಾತ್ಮಕಂ ಯೇನ ಕೃತಂ ತ್ರೈಲೋಕ್ಯಮಾತ್ಮನಾ ।
ತಥೈವ ಬಹುರೂಪತ್ವಾದ್ವಿಶ್ವರೂಪ ಇತಿ ಸ್ಮೃತಃ ॥೨೦॥

ಅನೇಕನಾಮಗಳಿಂದಲೂ ಮತ್ತು ರೂಪಗಳಿಂದಲೂ ಯುಕ್ತನಾದ ಹಿರಣ್ಯಗರ್ಭಬ್ರಹ್ಮನ ವರ್ಣನೆಯು ಸಾಂಖ್ಯಶಾಸ್ತ್ರದಲ್ಲಿಯೂ ಹೇಳಲ್ಪಟ್ಟಿದೆ. ವಿಚಿತ್ರರೂಪಧಾರಿಯೆಂದೂ, ವಿಶ್ವಾತ್ಮನೆಂದೂ, ಏಕಾಕ್ಷರನೆಂದೂ ಅಲ್ಲಿ ಹೇಳಿದ್ದಾರೆ. ಅವನು ನಾನಾರೂಪವಾದ ಈ ವಿಶ್ವವನ್ನು ಸೃಷ್ಟಿಸಿ ಅದನ್ನೆಲ್ಲಾ ವ್ಯಾಪಿಸಿಕೊಂಡಿದ್ದಾನೆ. ನಾನಾರೂಪಿಯಾಗಿರುವುದರಿಂದ ವಿಶ್ವರೂಪನೆಂದೂ ಇವನು ಕರೆಯಲ್ಪಡುತ್ತಾನೆ.

ಏಷ ವೈ ವಿಕ್ರಿಯಾಪನ್ನಃ ಸೃಜತ್ಯಾತ್ಮಾನಮಾತ್ಮನಾ ।
ಅಹಙ್ಕಾರಂ ಮಹಾತೇಜಾಃ ಪ್ರಜಾಪತಿಮಹಂಕೃತಮ್ ॥೨೧॥

ಮಹಾತೇಜಸ್ವಿಯಾದ ಭಗವಾನ್ ಹಿರಣ್ಯಗರ್ಭನು ವಿಕಾರವನ್ನು ಹೊಂದಿ ಅಹಂಕಾರವೆಂಬ ಉಪಾಧಿಯನ್ನೂ – ಅದರ ಅಭಿಮಾನಿಯಾದ ಪ್ರಜಾಪತಿವಿರಾಟ್ಪುರುಷನನ್ನೂ ತನ್ನಿಂದಲೇ ಸೃಷ್ಟಿಸಿದನು.

ಅವ್ಯಕ್ತಾದ್ವ್ಯಕ್ತಮಾಪನ್ನಂ ವಿದ್ಯಾಸರ್ಗಂ ವದನ್ತಿ ತಮ್ ।
ಮಹಾನ್ತಂ ಚಾಪ್ಯಹಙ್ಕಾರಮವಿದ್ಯಾಸರ್ಗಮೇವ ಚ ॥೨೨॥

ಅವ್ಯಕ್ತಪರಮಾತ್ಮನಿಂದ ವ್ಯಕ್ತವಾದ ರೂಪವನ್ನು ಹೊಂದಿದ ಮೂಲ ಪ್ರಕೃತಿಯನ್ನು ವಿದ್ಯಾಸರ್ಗವೆಂದೂ–ಮಹತ್ತತ್ತ್ವವನ್ನು ಮತ್ತು ಅಹಂಕಾರವನ್ನು ಅವಿದ್ಯಾಸರ್ಗವೆಂದೂ ಹೇಳುತ್ತಾರೆ.

ಅವಿಧಿಶ್ಚ ವಿಧಿಶ್ಚೈವ ಸಮುತ್ಪನ್ನೌ ತಥೈಕತಃ ।
ವಿದ್ಯಾವಿದ್ಯೇತಿ ವಿಖ್ಯಾತೇ ಶ್ರುತಿಶಾಸ್ತ್ರಾರ್ಥಚಿನ್ತಕೈಃ ॥೨೩॥

ಅವಿಧಿ (ಜ್ಞಾನ) ವಿಧಿ (ಕರ್ಮ)–ಇವೆರಡೂ ಆ ಪರಮಾತ್ಮನಿಂದಲೇ ಹುಟ್ಟಿವೆ. ಶ್ರುತಿಯ ಮತ್ತು ಶಾಸ್ತ್ರಗಳ ಅರ್ಥವನ್ನು ವಿಚಾರಮಾಡುವ ವಿದ್ವಾಂಸರಿಂದ ಅವಿಧಿ ಮತ್ತು ವಿಧಿಗಳು 'ವಿದ್ಯೆ-ಅವಿದ್ಯೆ' ಎಂಬ ಪದಗಳಿಂದ ವಿಖ್ಯಾತವಾಗಿವೆ.

ಭೂತಸರ್ಗಮಹಙ್ಕಾರಾತ್ತೃತೀಯಂ ವಿದ್ಧಿ ಪಾರ್ಥಿವ ।
ಅಹಙ್ಕಾರೇಷು ಸರ್ವೇಷು ಚತುರ್ಥಂ ವಿದ್ಧಿ ವೈಕೃತಮ್ ॥೨೪॥

ಅಹಂಕಾರದಿಂದ ಯಾವ ಸೂಕ್ಷ್ಮಭೂತಗಳ ಸೃಷ್ಟಿಯಾಗುವುದೋ– ಅದನ್ನು ನೀನು ತೃತೀಯಸರ್ಗವೆಂದು ತಿಳಿ. ಸಾತ್ತ್ವಿಕ-ರಾಜಸ-ತಾಮಸ ಭೇದಗಳಿಂದ ಕೂಡಿದ ಮೂರು ಪ್ರಕಾರವಾದ ಅಹಂಕಾರಗಳಿಂದ ಯಾವ ನಾಲ್ಕನೆಯ ಸೃಷ್ಟಿಯಾಗುವುದೋ ಅದನ್ನು ವೈಕೃತಸರ್ಗವೆಂದು ತಿಳಿ.

ವಾಯುರ್ಜ್ಯೋತಿರಥಾಕಾಶಮಾಪೋಽಥ ಪೃಥಿವೀ ತಥಾ ।
ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗನ್ಧಸ್ತಥೈವ ಚ ॥೨೫॥

ಆಕಾಶ, ವಾಯು, ತೇಜಸ್ಸು, ನೀರು, ಪೃಥಿವೀ–ಈ ಐದೂ ಮಹಾ ಭೂತಗಳಾಗಿವೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧ–ಈ ಐದೂ ಪಂಚ ಭೂತಗಳಿಂದ ಹುಟ್ಟಿರುವ ವಿಷಯಗಳು.

ಏವಂ ಯುಗಪದುತ್ಪನ್ನಂ ದಶವರ್ಗಮಸಂಶಯಮ್ ।
ಪಞ್ಚಮಂ ವಿದ್ಧಿ ರಾಜೇನ್ದ್ರ ಭೌತಿಕಂ ಸರ್ಗಮರ್ಥವತ್ ॥೨೬॥

ವಾಯುವೇ ಮೊದಲಾದ ಹತ್ತರ ಉತ್ಪತ್ತಿಯೂ ಏಕಕಾಲದಲ್ಲಾಯಿತು. ಇದರಲ್ಲಿ ಸಂಶಯವೇ ಇಲ್ಲ. ರಾಜೇಂದ್ರ! ಐದನೆಯದನ್ನು ಭೌತಿಕ ಸರ್ಗವೆಂದು ತಿಳಿ. ಇದು ಪ್ರಾಣಿಗಳಿಗೆ ವಿಶೇಷಪ್ರಯೋಜನಕಾರಿಯಾಗಿದೆ.

ಶ್ರೋತ್ರಂ ತ್ವಕ್ಚಕ್ಷುಷೀ ಜಿಹ್ವಾ ಘ್ರಾಣಮೇವ ಚ ಪಞ್ಚಮಮ್ ।
ವಾಕ್ಚ ಹಸ್ತೌ ಚ ಪಾದೌ ಚ ಪಾಯುರ್ಮೇಢ್ರಂ ತಥೈವ ಚ ॥೨೭॥

ಬುದ್ಧೀನ್ದ್ರಿಯಾಣಿ ಚೈತಾನಿ ತಥಾ ಕರ್ಮೇನ್ದ್ರಿಯಾಣಿ ಚ ।
ಸಮುದ್ಭೂತಾನೀಹ ಯುಗಪನ್ಮನಸಾ ಸಹ ಪಾರ್ಥಿವ ॥೨೮॥

ಕಿವಿಗಳು, ಚರ್ಮ, ಕಣ್ಣುಗಳು, ನಾಲಿಗೆ, ಮೂಗು – ಇವು ಜ್ಞಾನೇಂದ್ರಿಯಗಳು. ವಾಕ್, ಕೈಗಳು, ಕಾಲುಗಳು, ಗುದ, ಶಿಶ್ನ–ಇವು ಐದೂ ಕರ್ಮೇಂದ್ರಿಯಗಳು. ಮನಸ್ಸಿನಿಂದ ಯುಕ್ತವಾದ ಈ ಹತ್ತು ಇಂದ್ರಿಯಗಳೂ ಏಕಕಾಲದಲ್ಲಿ ಹುಟ್ಟಿದುವು.

ಏಷಾ ತತ್ತ್ವಚತುರ್ವಿಂಶಾ ಸರ್ವಾಕೃತಿಷು ವರ್ತತೇ ।
ಯಾಂ ಜ್ಞಾತ್ವಾ ನಾಭಿಶೋಚನ್ತಿ ಬ್ರಾಹ್ಮಣಾಸ್ತತ್ತ್ವದರ್ಶಿನಃ ॥೨೯॥

ಮಹತ್ತು, ಅಹಂಕಾರ, ಬುದ್ಧಿ, ಪಂಚಭೂತಗಳು, ಪಂಚತನ್ಮಾತ್ರೆ ಗಳು, ದಶೇಂದ್ರಿಯಗಳು ಮತ್ತು ಮನಸ್ಸು–ಈ ಇಪ್ಪತ್ತುನಾಲ್ಕು ತತ್ತ್ವಗಳು ಎಲ್ಲ ಪ್ರಾಣಿಗಳ ಶರೀರಗಳಲ್ಲಿಯೂ ಇರುತ್ತವೆ. ತತ್ತ್ವದರ್ಶಿಗಳಾದ ಬ್ರಾಹ್ಮಣರು ಈ ಇಪ್ಪತ್ತುನಾಲ್ಕು ತತ್ತ್ವಗಳನ್ನೂ ಯಥಾವತ್ತಾಗಿ ತಿಳಿದುಕೊಂಡು ಯಾವುದೇ ಕಾರಣದಿಂದಲೂ ಶೋಕಪಡುವುದಿಲ್ಲ.

ಏತದ್ದೇಹಂ ಸಮಾಖ್ಯಾತಂ ತ್ರೈಲೋಕ್ಯೇ ಸರ್ವದೇಹಿಷು ।
ವೇದಿತವ್ಯಂ ನರಶ್ರೇಷ್ಠ ಸದೇವನರದಾನವೇ ॥೩೦॥

ಸಯಕ್ಷಭೂತಗನ್ಧರ್ವೇ ಸಕಿನ್ನರಮಹೋರಗೇ ।
ಸಚಾರಣಪಿಶಾಚೇ ವೈ ಸದೇವರ್ಷಿನಿಶಾಚರೇ ॥೩೧॥
ಸದಂಶಕೀಟಮಶಕೇ ಸಪೂತಿಕೃಮಿಮೂಷಿಕೇ ।
ಶುನಿ ಶ್ವಪಾಕೇ ಚೈಣೇಯೇ ಸಚಾಣ್ಡಾಲೇ ಸಪುಲ್ಕಸೇ ॥೩೨॥

ಹಸ್ತ್ಯಶ್ವಖರಶಾರ್ದೂಲೇ ಸವೃಕ್ಷೇ ಗವಿ ಚೈವ ಹ ।
ಯಚ್ಚ ಮೂರ್ತಿಮಯಂ ಕಿಂಚಿತ್ಸರ್ವತ್ರೈತನ್ನಿದರ್ಶನಮ್ ॥೩೩॥

ಮೂರು ಲೋಕಗಳಲ್ಲಿಯೂ ಎಷ್ಟು ದೇಹಧಾರಿಗಳಿರುವರೋ ಅವರೆಲ್ಲರ ದೇಹಗಳೂ ಈ ಇಪ್ಪತ್ತುನಾಲ್ಕು ತತ್ತ್ವಗಳ ಸಮುದಾಯದಿಂದಲೇ ಕೂಡಿರು ವುದೆಂಬುದನ್ನು ತಿಳಿದುಕೊಳ್ಳಬೇಕು. ದೇವತೆಗಳು, ಮನುಷ್ಯರು, ದಾನ ವರು, ಯಕ್ಷರು, ಭೂತಗಣಗಳು, ಗಂಧರ್ವರು, ಕಿನ್ನರರು, ಮಹಾಸರ್ಪರು,

ಚಾರಣರು, ಪಿಶಾಚರು, ದೇವರ್ಷಿಗಳು, ನಿಶಾಚರರು, ಕಾಡುನೊಣಗಳು, ಕೀಟಗಳು, ಸೊಳ್ಳೆಗಳು, ದುರ್ಗಂಧದಿಂದ ಕೂಡಿದ ಕ್ರಿಮಿಗಳು, ಇಲಿಗಳು, ನಾಯಿಗಳು, ಶ್ವಪಾಕರು, ಜಿಂಕೆಗಳು, ಚಾಂಡಾಲರು, ಮ್ಲೇಚ್ಛರು, ಆನೆಗಳು, ಕುದುರೆಗಳು, ಕತ್ತೆಗಳು, ಸಿಂಹಗಳು, ವೃಕ್ಷಗಳು, ಹಸುಗಳು–ಇವೇ ಮೊದಲಾದ ಯಾವ ಮೂರ್ತಿಮಯವಾದ ರೂಪಗಳಿವೆಯೋ–ಅವೆಲ್ಲದರಲ್ಲಿಯೂ ಈ ಇಪ್ಪತ್ತುನಾಲ್ಕು ತತ್ತ್ವಗಳನ್ನು ಕಾಣಬಹುದು.

ಜಲೇ ಭುವಿ ತಥಾಕಾಶೇ ನಾನ್ಯತ್ರೇತಿ ವಿನಿಶ್ಚಯಃ ।
ಸ್ಥಾನಂ ದೇಹವತಾಮಾಸೀದಿತ್ಯೇವಮನುಶುಶ್ರುಮ ॥೩೪॥

ನೀರು, ಪೃಥ್ವೀ ಮತ್ತು ಆಕಾಶಗಳಲ್ಲಿ ಮಾತ್ರವೇ ದೇಹಧಾರಿಗಳ ನಿವಾಸವಿರುವುದೆಂದೂ ಬೇರೆಲ್ಲಿಯೂ ಇಲ್ಲವೆಂಬುದೂ ನಿಶ್ಚಿತವಾಗಿದೆ. ಈ ವಿಷಯವನ್ನು ನಾವು ವಿದ್ವಾಂಸರಿಂದ ಕೇಳಿದ್ದೇವೆ.

ಕೃತ್ಸ್ನಮೇತಾವತಸ್ತಾತ ಕ್ಷರತೇ ವ್ಯಕ್ತಸಂಜ್ಞಿತಮ್ ।
ಅಹನ್ಯಹನಿ ಭೂತಾತ್ಮಾ ತತಃ ಕ್ಷರ ಇತಿ ಸ್ಮೃತಃ ॥೩೫॥

ಸಂಪೂರ್ಣವಾದ ಈ ಜಗತ್ತು ವ್ಯಕ್ತವೆಂಬ ಸಂಜ್ಞೆಯನ್ನು ಪಡೆದಿದೆ. ಪ್ರತಿನಿತ್ಯವೂ ಪಂಚಭೂತಾತ್ಮಕವಾದ ಇದು ವಿಕಾರವನ್ನು ಹೊಂದುತ್ತಲೇ ಇರುತ್ತದೆ. ಆದುದರಿಂದಲೇ ಪಂಚಭೂತಾತ್ಮಕವಾದ ಈ ಜಗತ್ತಿಗೆ ಕ್ಷರವೆಂದು ಹೇಳುತ್ತಾರೆ.

ಏತದಕ್ಷರಮಿತ್ಯುಕ್ತಂ ಕ್ಷರತೀದಂ ಯಥಾ ಜಗತ್ ।
ಜಗನ್ಮೋಹಾತ್ಮಕಂ ಪ್ರಾಹುರವ್ಯಕ್ತಾದ್ವ್ಯಕ್ತಸಂಜ್ಞಕಮ್ ॥೩೬॥

ಕ್ಷರಕ್ಕೆ ವಿಭಿನ್ನವಾದುದು ಅಥವಾ ಅವಿಕಾರಿಯಾದುದು ಅಕ್ಷರವೆಂದು ಹೇಳಲ್ಪಡುತ್ತದೆ. ಅವ್ಯಕ್ತವಾದ ಅಕ್ಷರದಿಂದ ಹುಟ್ಟಿರುವ ವ್ಯಕ್ತಸಂಜ್ಞಕವಾದ ಮೋಹಾತ್ಮಕವಾದ ಜಗತ್ತು ವಿಕಾರವನ್ನು ಹೊಂದುತ್ತಲೇ ಇರುವುದರಿಂದ ಕ್ಷರವೆಂಬ ಹೆಸರನ್ನು ಪಡೆದಿದೆ.

ಮಹಾಂಶ್ಚೈವಾಗ್ರಜೋ ನಿತ್ಯಮೇತತ್ಕ್ಷರನಿದರ್ಶನಮ್ ।
ಕಥಿತಂ ತೇ ಮಹಾರಾಜ ಯನ್ಮಾಂ ತ್ವಂ ಪರಿಪೃಚ್ಛಸಿ ॥೩೭॥

ಕ್ಷರಕ್ಕೆ ಸಂಬಂಧಿಸಿದ ಇಪ್ಪತ್ತುನಾಲ್ಕು ತತ್ತ್ವಗಳಲ್ಲಿ ಎಲ್ಲಕ್ಕಿಂತಲೂ ಮೊದಲು ಮಹತ್ತತ್ತ್ವದ ಸೃಷ್ಟಿಯಾಯಿತು. ಇದು ಕ್ಷರದ ಪರಿಚಯವಾಗಿದೆ. ಮಹಾರಾಜ! ನೀನು ಯಾವ ಕ್ಷರಾಕ್ಷರಗಳ ವಿಷಯವಾಗಿ ಪ್ರಶ್ನಿಸಿದೆಯೋ– ಅವುಗಳ ವಿಷಯವನ್ನು ನಿನಗೆ ಹೇಳಿದ್ದೇನೆ.

ಪಞ್ಚವಿಂಶತಿಮೋ ವಿಷ್ಣುರ್ನಿಸ್ತತ್ತ್ವಸ್ತತ್ತ್ವಸಂಜ್ಞಿತಃ ।
ತತ್ತ್ವಸಂಶ್ರಯಣಾದೇತತ್ತತ್ತ್ವಮಾಹುರ್ಮನೀಷಿಣಃ ॥೩೮॥

ಹಿಂದೆ ಹೇಳಿದ ಇಪ್ಪತ್ತುನಾಲ್ಕು ತತ್ತ್ವಗಳಿಗೂ ಅತೀತನಾದ ಮಹಾ ವಿಷ್ಣುವು ಇಪ್ಪತ್ತೈದನೆಯ ತತ್ತ್ವವೆಂದು ಹೇಳಲ್ಪಟ್ಟಿದ್ದಾನೆ. ಮಹಾವಿಷ್ಣುವು ತತ್ತ್ವಗಳಿಗಿಂತಲೂ ಅತೀತನಾಗಿದ್ದರೂ ತತ್ತ್ವಗಳಿಗೆ ತನ್ನಲ್ಲಿ ಆಶ್ರಯವನ್ನಿತ್ತಿರು ವುದರಿಂದ ವಿದ್ವಾಂಸರು ಅವನನ್ನು ತತ್ತ್ವವೆಂದೇ ಹೇಳುತ್ತಾರೆ.

ಯನ್ಮರ್ತ್ಯಮಸೃಜದ್ವ್ಯಕ್ತಂ ತತ್ತನ್ಮೂರ್ತ್ಯಧಿತಿಷ್ಠತಿ ।
ಚತುರ್ವಿಂಶತಿಮೋಽವ್ಯಕ್ತೋ ಹ್ಯಮೂರ್ತಃ ಪಞ್ಚವಿಂಶಕಃ ॥೩೯॥

ವ್ಯಕ್ತವು (ಮಹತ್ತತ್ತ್ವವು)–ಮರಣಧರ್ಮವುಳ್ಳ (ನಶ್ವರವಾದ) ಯಾವ ಆಕಾರ-ಬುದ್ಧಿ-ಇಂದ್ರಿಯಗಳು ಇವೇ ಮೊದಲಾದ ಪದಾರ್ಥಗಳನ್ನು ಸೃಷ್ಟಿಸಿರುವುದೋ–ಅವೆಲ್ಲವೂ ಯಾವುದೋ ಒಂದು ಮೂರ್ತಿಯನ್ನು ಅಥವಾ ಆಕಾರವನ್ನು ಆಶ್ರಯಿಸಿಯೇ ಇರುತ್ತವೆ. ಹೀಗೆ ಪ್ರಕೃತಿಯಿಂದ ಒಟ್ಟು ಇಪ್ಪತ್ತುನಾಲ್ಕು ವ್ಯಕ್ತತತ್ತ್ವಗಳು ಹುಟ್ಟಿವೆ. ಇಪ್ಪತ್ತೈದನೆಯದು ಅವ್ಯಕ್ತವಾದ ಅಮೂರ್ತವಾದ ಪರಮಾತ್ಮತತ್ತ್ವ.

ಸ ಏವ ಹೃದಿ ಸರ್ವಾಸು ಮೂರ್ತಿಷ್ವಾತಿಷ್ಠತೇಽತ್ಮವಾನ್ ।
ಕೇವಲಶ್ಚೇತನೋ ನಿತ್ಯಃ ಸರ್ವಮೂರ್ತಿರಮೂರ್ತಿಮಾನ್ ॥೪೦॥

ನಿತ್ಯನಾದ, ಸರ್ವಸ್ವರೂಪನಾದ, ನಿರಾಕಾರನಾದ, ಎಲ್ಲರಿಗೂ ಆತ್ಮಭೂತನಾದ, ಅದ್ವಿತೀಯನಾದ ಆ ಚೇತನನೇ ಸರ್ವದೇಹಧಾರಿಗಳ ಹೃದಯಗಳಲ್ಲಿಯೂ ಸ್ಥಿರನಾಗಿದ್ದಾನೆ.

ಸರ್ಗಪ್ರಲಯಧರ್ಮಿಣ್ಯಾ ಅಸರ್ಗಪ್ರಲಯಾತ್ಮಕಃ ।
ಗೋಚರೇ ವರ್ತತೇ ನಿತ್ಯಂ ನಿರ್ಗುಣಂ ಗುಣಸಂಜ್ಞಿತಮ್ ॥೪೧॥

ಯದ್ಯಪಿ ಸೃಷ್ಟಿ-ಪ್ರಳಯಗಳು ಪ್ರಕೃತಿಯ ಧರ್ಮವೇ ಆಗಿದ್ದರೂ ಚೇತನನು ಸರ್ವಥಾ ಅದಕ್ಕೆ ಸಂಬಂಧಿಸದೇ ಇದ್ದರೂ–ಪ್ರಕೃತಿಯೊಡನೆ ಚೇತನನ ಸಂಬಂಧವಿರುವುದರಿಂದ ಚೇತನನೂ ಸೃಷ್ಟಿ ಮತ್ತು ಪ್ರಳಯಗಳ ಧರ್ಮವಿರುವವನಂತೆ ಕಾಣುತ್ತಾನೆ. ಇಂದ್ರಿಯಗಳಿಗೆ ವಿಷಯನಾಗದೇ ಇದ್ದರೂ ಇಂದ್ರಿಯಗಳಿಗೆ ಗೋಚರಿಸುವನೋ ಎಂಬಂತೆ ಕಾಣುತ್ತಾನೆ. ನಿರ್ಗುಣನಾಗಿದ್ದರೂ ಗುಣವಂತನಂತೆ ಕಾಣುತ್ತಾನೆ.

ಏವಮೇಷ ಮಹಾನಾತ್ಮಾ ಸರ್ಗಪ್ರಲಯಕೋವಿದಃ ।
ವಿಕುರ್ವಾಣಃ ಪ್ರಕೃತಿಮಾನಭಿಮನ್ಯತ್ಯಬುದ್ಧಿಮಾನ್ ॥೪೨॥

ಹೀಗೆ ಸೃಷ್ಟಿ ಮತ್ತು ಪ್ರಳಯಗಳ ತತ್ತ್ವವನ್ನು ಚೆನ್ನಾಗಿ ತಿಳಿದಿರುವ (ಸೃಷ್ಟಿ-ಪ್ರಳಯಗಳಿಗೆ ಕಾರಣನಾದ) ಮಹಾತ್ಮನು ಅವಿಕಾರಿಯೇ ಆಗಿದ್ದರೂ ಪ್ರಕೃತಿಯ ಸಂಸರ್ಗದಿಂದಾಗಿ ವಿಕಾರಿಯಾಗುತ್ತಾನೆ. ಪ್ರಾಕೃತವಾದ ಬುದ್ಧಿಯಿಂದ ರಹಿತನಾಗಿದ್ದರೂ ಶರೀರವೇ ತಾನೆಂಬ ಅಭಿಮಾನವನ್ನು ಹೊಂದುತ್ತಾನೆ.

ತಮಃಸತ್ತ್ವರಜೋಯುಕ್ತಸ್ತಾಸು ತಾಸ್ವಿಹ ಯೋನಿಷು ।
ನೀಯತೇ ಪ್ರತಿಬುದ್ಧಿತ್ವಾದಬುದ್ಧಜನಸೇವನಾತ್ ॥೪೩॥

ಪ್ರಕೃತಿಯ ಸಂಸರ್ಗದಿಂದಲೇ ಚೇತನನು ಸತ್ತ್ವಗುಣ-ರಜೋಗುಣ-ತಮೋಗುಣಗಳಿಂದ ಯುಕ್ತನಾಗುತ್ತಾನೆ. ಅಜ್ಞಾನಿಗಳ ಸಹವಾಸದಲ್ಲಿಯೇ ಯಾವಾಗಲೂ ಇರುವುದರಿಂದ ತಾನು ಕೂಡ ದೇಹಾತ್ಮಬುದ್ಧಿಯನ್ನು ಹೊಂದಿದವನಾಗಿ ಆ ಸಂಸ್ಕಾರದಿಂದಲೇ ಮುಂದೆ ಸಾತ್ತ್ವಿಕ-ರಾಜಸ-ತಾಮಸ ಯೋನಿಗಳಲ್ಲಿ ಜನ್ಮತಾಳುತ್ತಾನೆ.

ಸಹವಾಸವಿನಾಶಿತ್ವಾನ್ನಾನ್ಯೋಽಹಮಿತಿ ಮನ್ಯತೇ ।
ಯೋಽಹಂ ಸೋಽಹಮತಿ ಹ್ಯುಕ್ತ್ವಾ ಗುಣಾನೇವಾನುವರ್ತತೇ ॥೪೪॥

ಪ್ರಕೃತಿಯ ಸಹವಾಸದಿಂದಾಗಿ ಚೇತನನಿಗೆ ಸ್ವಸ್ವರೂಪವು ವಿನಾಶ ಹೊಂದುವುದರಿಂದ (ಸ್ವಸ್ವರೂಪಜ್ಞಾನವಿಲ್ಲದೇ ಇರುವುದರಿಂದ) ಚೇತನನು ತಾನು 'ದೇಹದಿಂದ ಬೇರೆಯವನಲ್ಲ'–ಎಂದೇ ಭಾವಿಸುತ್ತಾನೆ. 'ನಾನು

ಯಾರು? ಸರಿ. ನಾನು ಇಂತಹವರ ಮಗನು ; ಇಂತಹ ವರ್ಣದವನು ; ಇಂತಹ ಹೆಸರಿನವನು'–ಹೀಗೆಂಬುದಾಗಿ ಹೇಳುತ್ತಾ ಸತ್ತ್ವಾದಿಗುಣಗಳನ್ನೇ ಅನುಸರಿಸುತ್ತಾನೆ.

ತಮಸಾ ತಾಮಸಾನ್ಭಾವಾನ್ವಿವಿಧಾನ್ಪ್ರತಿಪದ್ಯತೇ ।
ರಜಸಾ ರಾಜಸಾಂಶ್ಚೈವ ಸಾತ್ತ್ವಿಕಾನ್ಸತ್ತ್ವಸಂಶ್ರಯಾತ್ ॥೪೫॥

ಆ ಚೇತನನು ತಮೋಗುಣದಿಂದ ಮೋಹವೇ ಮೊದಲಾದ ತಾಮಸಭಾವಗಳನ್ನೂ, ರಜೋಗುಣದಿಂದ ಪ್ರವೃತ್ತಿಯೇ ಮೊದಲಾದ ರಾಜಸಭಾವಗಳನ್ನೂ, ಸತ್ತ್ವಗುಣದ ಆಶ್ರಯದಿಂದ ಪ್ರಕಾಶವೇ ಮೊದಲಾದ ಸಾತ್ತ್ವಿಕಭಾವಗಳನ್ನೂ ಹೊಂದುತ್ತಾನೆ.

ಶುಕ್ಲಲೋಹಿತಕೃಷ್ಣಾನಿ ರೂಪಾಣ್ಯೇತಾನಿ ತ್ರೀಣಿ ತು ।
ಸರ್ವಾಣ್ಯೇತಾನಿ ರೂಪಾಣಿ ಯಾನೀಹ ಪ್ರಾಕೃತಾನಿ ವೈ ॥೪೬॥

ಸತ್ತ್ವಗುಣ-ರಜೋಗುಣ-ತಮೋಗುಣಗಳಿಂದ ಕ್ರಮವಾಗಿ ಬಿಳುಪು, ಕೆಂಪು ಮತ್ತು ಕಪ್ಪುಬಣ್ಣಗಳು ಪ್ರಕಟವಾಗುತ್ತವೆ. ಪ್ರಕೃತಿಯಲ್ಲಿ ಯಾವ ಯಾವ ರೂಪಗಳು ಪ್ರಕಟವಾಗುವುವೋ–ಅವೆಲ್ಲವೂ ಈ ಮೂರು ವರ್ಣಗಳಲ್ಲಿಯೇ ಅಂತರ್ಗತವಾಗಿವೆ.

ತಾಮಸಾ ನಿರಯಂ ಯಾನ್ತಿ ರಾಜಸಾ ಮಾನುಷಾನಥ ।
ಸಾತ್ತ್ವಿಕಾ ದೇವಲೋಕಾಯ ಗಚ್ಛನ್ತಿ ಸುಖಭಾಗಿನಃ ॥೪೭॥

ತಮೋಗುಣಿಗಳು ನರಕಕ್ಕೆ ಹೋಗುತ್ತಾರೆ. ರಜೋಗುಣಿಗಳು ಪುನಃ ಮನುಷ್ಯರಾಗಿಯೇ ಹುಟ್ಟುತ್ತಾರೆ. ಸತ್ತ್ವಗುಣಿಗಳು ದೇವಲೋಕಕ್ಕೆ ಹೋಗುತ್ತಾರೆ ಮತ್ತು ಅಲ್ಲಿಯ ಸ್ವರ್ಗಸುಖದಲ್ಲಿ ಭಾಗಿಗಳಾಗುತ್ತಾರೆ.

ನಿಷ್ಕೈವಲ್ಯೇನ ಪಾಪೇನ ತಿರ್ಯಗ್ಯೋನಿಮವಾಪ್ನುಯಾತ್ ।
ಪುಣ್ಯಪಾಪೇನ ಮಾನುಷ್ಯಂ ಪುಣ್ಯೇನೈಕೇನ ದೇವತಾಃ ॥೪೮॥

ಸಂಪೂರ್ಣವಾಗಿ ಪಾಪಕರ್ಮಗಳನ್ನೇ ಮಾಡುವುದರಿಂದ ಚೇತನನು ಪಶು-ಪಕ್ಷಿಗಳೇ ಮೊದಲಾದ ತಿರ್ಯಗ್ಯೋನಿಗಳಲ್ಲಿ ಜನ್ಮತಾಳುತ್ತಾನೆ. ಪುಣ್ಯ-

ಪಾಪಗಳೆರಡನ್ನೂ ಮಾಡಿದವನು ಪುನಃ ಮನುಷ್ಯನಾಗಿಯೇ ಹುಟ್ಟುತ್ತಾನೆ. ಕೇವಲ ಪುಣ್ಯವನ್ನೇ ಮಾಡಿದವನು ದೇವಯೋನಿಯಲ್ಲಿ ಜನ್ಮತಾಳುತ್ತಾನೆ.

ಏವಮವ್ಯಕ್ತವಿಷಯಂ ಕ್ಷರಮಾಹುರ್ಮನೀಷಿಣಃ ।
ಪಞ್ಚವಿಂಶತಿಮೋ ಯೋಽಯಂ ಜ್ಞಾನಾದೇವ ಪ್ರವರ್ತತೇ ॥೪೯॥

ಹೀಗೆ ವಿದ್ವಾಂಸರು ಪ್ರಕೃತಿಯಿಂದ ಹುಟ್ಟಿದ ವಸ್ತುಗಳಿಗೆ ಕ್ಷರವೆನ್ನುತ್ತಾರೆ. ಇಪ್ಪತ್ತೈದನೆಯ ತತ್ತ್ವವು ಯಾವನೋ ಅವನೇ ಅಕ್ಷರನು. ಅವನ ಅರಿವು ಕೇವಲಜ್ಞಾನದಿಂದ ಸಾಧ್ಯವಾಗುತ್ತದೆ."

ಃ೦೨ನೆಯ ಅಧ್ಯಾಯವು ಮುಗಿಯಿತು.

ಃ೦ಃನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪ್ರಕೃತಿಯ ಸಂಸರ್ಗದಿಂದಲೇ ಚೇತನನಿಗೆ ಕರ್ತೃತ್ವ-ಭೋಕ್ತೃತ್ವಗಳ ಅನುಭವ ಮತ್ತು ನಾನಾಯೋನಿಗಳಲ್ಲಿ ಜನ್ಮಗ್ರಹಣ

ವಸಿಷ್ಠರು ಹೇಳುತ್ತಾರೆ :

ಏವಮಪ್ರತಿಬುದ್ಧತ್ವಾದಬುದ್ಧಮನುವರ್ತತೇ ।
ದೇಹಾದ್ದೇಹಸಹಸ್ರಾಣಿ ತಥಾ ಸಮಭಿಪದ್ಯತೇ ॥೧॥

"ಜನಕರಾಜ! ಹೀಗೆ ಚೇತನನು ತನ್ನ ನಿಜಸ್ವರೂಪವನ್ನು ತಿಳಿಯದೇ ಇರುವುದರಿಂದ ಅಜ್ಞಾನವನ್ನೇ ಅನುಸರಿಸುತ್ತಾನೆ. ಈ ಕಾರಣದಿಂದಲೇ ಅವನು ಒಂದು ಶರೀರದಿಂದ ಸಾವಿರಾರು ಶರೀರಗಳನ್ನು ಕುರಿತು ಹೋಗುತ್ತಲೇ ಇರುತ್ತಾನೆ.

ತಿರ್ಯಗ್ಯೋನಿಸಹಸ್ರೇಷು ಕದಾಚಿದ್ದೇವತಾಸ್ವಪಿ ।
ಉಪಪದ್ಯತಿ ಸಂಯೋಗಾದ್ಗುಣೈಃ ಸಹ ಗುಣಕ್ಷಯಾತ್ ॥೨॥

ಗುಣಗಳೊಡನೆ ಸಂಬಂಧವಿರುವುದರಿಂದ ಚೇತನನು ಆ ಗುಣಗಳ ಸಾಮರ್ಥ್ಯದಿಂದಲೇ ಸಾವಿರಾರು ತಿರ್ಯಗ್ಯೋನಿಗಳಲ್ಲಿ ಜನ್ಮತಾಳುತ್ತಾನೆ.

ಕೆಲವೊಮ್ಮೆ ಅದೇ ಗುಣಗಳ ಸಾಮರ್ಥ್ಯದಿಂದಲೇ ದೇವತಾಯೋನಿಗಳಲ್ಲಿಯೂ ಹುಟ್ಟುತ್ತಾನೆ.* (ಇದು ವ್ಯಾಖ್ಯಾನಕಾರರ ವ್ಯಾಖ್ಯಾನವನ್ನನುಸರಿಸಿ ಮಾಡಿರುವ ಅರ್ಥವಾಗಿದೆ. ಕ್ಷಯ ಎಂಬುದಕ್ಕೆ ವ್ಯಾಖ್ಯಾನಕಾರರು ಹೇಳಿರುವಂತೆ ಐಶ್ವರ್ಯಾರ್ಥವನ್ನು ಹೇಳದೆ ಸ್ವಾಭಾವಿಕವಾದ ಅರ್ಥವನ್ನೇ ಕಲ್ಪಿಸಿಕೊಂಡು ಹೀಗೂ ಈ ಶ್ಲೋಕಕ್ಕೆ ಅರ್ಥಮಾಡಬಹುದಾಗಿದೆ. ಚೇತನನು ಸತ್ತ್ವ-ರಜಸ್ತಮೋಗುಣಗಳ ಸಂಬಂಧದಿಂದ ಸಾವಿರಾರು ತಿರ್ಯಗ್ಯೋನಿಗಳಲ್ಲಿಯೂ ಅವೇ ಗುಣಗಳ ಕ್ಷಯ ಅಥವಾ ವಿನಾಶದಿಂದ ಕೆಲವೊಮ್ಮೆ ದೇವತಾಯೋನಿಗಳಲ್ಲಿಯೂ ಜನ್ಮತಾಳುತ್ತಾನೆ. ಗುಣಗಳ 'ವಿನಾಶ' ಮೋಕ್ಷ. ತಾರತಮ್ಯ-ಏರುಪೇರಿನಿಂದ ಬೇರೆ-ಬೇರೆ ಯೋನಿಗಳಲ್ಲಿ ಜನ್ಮ.)

ಮಾನುಷತ್ವಾದ್ದಿವಂ ಯಾತಿ ದಿವೋ ಮಾನುಷ್ಯಮೇವ ಚ ।
ಮಾನುಷ್ಯಾನ್ನಿರಯಸ್ಥಾನಮಾನನ್ತ್ಯಂ ಪ್ರತಿಪದ್ಯತೇ ॥೩॥

ಚೇತನನು ಮನುಷ್ಯಜನ್ಮದಿಂದ ದೇವಲೋಕಕ್ಕೂ ಹೋಗುತ್ತಾನೆ. ದೇವಲೋಕದಿಂದ ಚ್ಯುತನಾಗಿ ಪುನಃ ಭೂಮಿಯಲ್ಲಿ ಮನುಷ್ಯತ್ವವನ್ನು ಪಡೆಯುತ್ತಾನೆ. ಮನುಷ್ಯತ್ವದಿಂದ ಕೊನೆಯಿಲ್ಲದ ನರಕವನ್ನೂ ಹೊಂದುತ್ತಾನೆ.

ಕೋಶಕಾರೋ ಯಥಾತ್ಮಾನಂ ಕೀಟಃ ಸಮವರುನ್ಧತಿ ।
ಸೂತ್ರತನ್ತುಗುಣೈರ್ನಿತ್ಯಂ ತಥಾಯಮಗುಣೋ ಗುಣೈಃ ॥೪॥

ರೇಷ್ಮೆಯ ಹುಳುವು ತನ್ನಿಂದಲೇ ಉತ್ಪನ್ನವಾದ ತಂತುಗಳಿಂದ ಗೂಡನ್ನು ಕಟ್ಟಿಕೊಂಡು ತಾನೇ ಆ ಗೂಡಿನಿಂದಲೇ ಯಾವ ರೀತಿಯಲ್ಲಿ ಬಂಧಿಸಲ್ಪಡುವುದೋ–ಅದೇ ರೀತಿಯಲ್ಲಿ ನಿರ್ಗುಣನಾದ ಚೇತನನು ತಾನೇ ಸೃಷ್ಟಿಸಿದ ಗುಣಗಳಿಂದ ಬದ್ಧನಾಗುತ್ತಾನೆ.

ದ್ವನ್ದ್ವಮೇತಿ ಚ ನಿರ್ದ್ವನ್ದ್ವಸ್ತಾಸು ತಾಸ್ವಿಹ ಯೋನಿಷು ।
ಶೀರ್ಷರೋಗೇಽಕ್ಷಿರೋಗೇ ಚ ದನ್ತಶೂಲೇ ಗಲಗ್ರಹೇ ॥೫॥

---

*ಗುಣಕ್ಷಯಾತ್–ಎಂಬುದಕ್ಕೆ ವ್ಯಾಖ್ಯಾನಕಾರರು **ಗುಣಸಾಮರ್ಥ್ಯಾತ್** ಎಂದು ಅರ್ಥಮಾಡಿರುತ್ತಾರೆ. ಕ್ಷಿ–ಕ್ಷಯೈಶ್ವರ್ಯಯೋಃ ಎಂಬ ಧಾತ್ವರ್ಥದಂತೆ ಕ್ಷಿ ಧಾತುವಿಗೆ ಐಶ್ವರ್ಯ ಎಂಬ ಅರ್ಥವೂ ಇದೆ. ಐಶ್ವರ್ಯ ಅರ್ಥಾತ್ ಸಾಮರ್ಥ್ಯ= ಗುಣಗಳ ಸಾಮರ್ಥ್ಯ.

ಜಲೋದರೇ ತೃಷಾರೋಗೇ ಜ್ವರಗಣ್ಡೇ ವಿಷೂಚಿಕೇ ।
ಶ್ವಿತ್ರಕುಷ್ಠೇಽಗ್ನಿದಗ್ಧೇ ಚ ಸಿಧ್ಮಾಪಸ್ಮಾರಯೋರಪಿ ॥೬॥

ಚೇತನನು ಸುಖ-ದುಃಖಾದಿ ದ್ವಂದ್ವಗಳಿಂದ ರಹಿತನಾಗಿದ್ದರೂ ಭಿನ್ನ-ಭಿನ್ನಯೋನಿಗಳಲ್ಲಿ ಜನ್ಮತಾಳುತ್ತಾ ಗುಣಗಳ ಸಾಮರ್ಥ್ಯದಿಂದ ಸುಖ-ದುಃಖಾದಿ ದ್ವಂದ್ವಗಳನ್ನು ಅನುಭವಿಸುತ್ತಾನೆ. ತಲೆನೋವು, ಕಣ್ಣು ನೋವು, ಹಲ್ಲುನೋವು, ಕುತ್ತಿಗೆಯಲ್ಲಿ ಹಿಡಿಯುವುದು, ಜಲೋದರ (ಹೊಟ್ಟೆಯಲ್ಲಿ ನೀರು ತುಂಬುವುದರಿಂದ ಉಂಟಾಗುವ ರೋಗ), ತೃಷಾ ರೋಗ (ಯಾವಾಗಲೂ ಬಾಯಾರಿರುವ ಮತ್ತು ಯಾವಾಗಲೂ ನೀರನ್ನು ಕುಡಿಯಬೇಕೆನ್ನುವ ಒಂದು ರೋಗ), ಜ್ವರ, ಕುರು (ಗಡ್ಡೆ), ವಿಷೂಚಿಕಾ (ವಾಂತಿ-ಭೇದಿ), ತೊನ್ನು, ಕುಷ್ಠ, ಅಗ್ನಿದಾಹ, ಕಪ್ಪು ಅಥವಾ ಬಿಳಿಯ ಚಿಬ್ಬು, ಅಪಸ್ಮಾರ (ಮೂರ್ಛೆರೋಗ)–ಇತ್ಯಾದಿ ರೋಗಗಳಲ್ಲಿ ಬಿದ್ದು ಒದ್ದಾಡುತ್ತಾನೆ.

ಯಾನಿ ಚಾನ್ಯಾನಿ ದ್ವನ್ದ್ವಾನಿ ಪ್ರಾಕೃತಾನಿ ಶರೀರಿಷು ।
ಉತ್ಪದ್ಯನ್ತೇ ವಿಚಿತ್ರಾಣಿ ತಾನ್ಯೇಷೋಽಪ್ಯಭಿಮನ್ಯತೇ ॥೭॥

ಈ ರೋಗಗಳೇ ಅಲ್ಲದೇ ಇನ್ನೂ ಅನೇಕಪ್ರಕಾರವಾದ, ಪ್ರಕೃತಿಜನ್ಯ ವಾದ, ವಿಚಿತ್ರವಾದ ಯಾವ ದ್ವಂದ್ವಗಳು ಶರೀರಗಳಲ್ಲಿ ಹುಟ್ಟುತ್ತವೆಯೋ– ಅವುಗಳೆಲ್ಲವೂ ತನ್ನನ್ನೇ ಆಕ್ರಮಿಸಿವೆಯೆಂದು ಚೇತನನು ಭಾವಿಸುತ್ತಾನೆ.

ತಿರ್ಯಗ್ಯೋನಿಸಹಸ್ರೇಷು ಕದಾಚಿದ್ದೇವತಾಸ್ವಪಿ ।
ಅಭಿಮನ್ಯತ್ಯಭೀಮಾನಾತ್ತಥೈವ ಸುಕೃತಾನ್ಯಪಿ ॥೮॥

ಸಾವಿರಾರು ಪಶು-ಪಕ್ಷಿಗಳ ಯೋನಿಯಲ್ಲಿ ಹುಟ್ಟಿದ ಚೇತನನು ಪಕ್ಷಿ ಅಥವಾ ಪಶುವೇ ತಾನೆಂಬ ಅಭಿಮಾನವನ್ನು ಹೊಂದಿರುತ್ತಾನೆ. ಅದೇ ಚೇತನನು ಕೆಲವು ವೇಳೆ ದೇವತೆಗಳ ಯೋನಿಗಳಲ್ಲಿ ಹುಟ್ಟಿ ಆ ದೇವತೆಯೇ ತಾನೆಂಬ ಅಭಿಮಾನವನ್ನೂ ಹೊಂದುತ್ತಾನೆ. ಹೀಗೆ ದೇಹಾಭಿಮಾನವಿರುವ ಕಾರಣದಿಂದಲೇ ಆಯಾ ಶರೀರಗಳ ಮೂಲಕವಾಗಿ ಮಾಡಿದ ಕರ್ಮಫಲ ಗಳನ್ನೂ ಅವನು ಅನುಭವಿಸುತ್ತಾನೆ.

ಶುಕ್ಲವಾಸಾಶ್ಚ ದುರ್ವಾಸಾಃ ಶಾಯೀ ನಿತ್ಯಮಧಸ್ತಥಾ ।
ಮಣ್ಡೂಕಶಾಯೀ ಚ ತಥಾ ವೀರಾಸನಗತಸ್ತಥಾ ॥೯॥

ಚೀರಧಾರಣಮಾಕಾಶೇ ಶಯನಂ ಸ್ಥಾನಮೇವ ಚ ।
ಇಷ್ಟಕಾಪ್ರಸ್ತರೇ ಚೈವ ಕಣ್ಟಕಪ್ರಸ್ತರೇ ತಥಾ ॥೧೦॥

ಭಸ್ಮಪ್ರಸ್ತರಶಾಯೀ ಚ ಭೂಮಿಶಯ್ಯಾ ತಲೇಷು ಚ ।
ವೀರಸ್ಥಾನಾಮ್ಬುಪಙ್ಕೇ ಚ ಶಯನಂ ಫಲಕೇಷು ಚ ।
ವಿವಿಧಾಸು ಚ ಶಯ್ಯಾಸು ಫಲಗೃದ್ಧ್ಯಾನ್ವಿತಸ್ತಥಾ ॥೧೧॥

ಫಲದ ಆಸೆಯಿಂದ ಬಂಧಿಸಲ್ಪಟ್ಟಿರುವ ಚೇತನನು ನೂತನವಾಗಿರುವ ಬಿಳಿಯ ವಸ್ತ್ರವನ್ನುಡುತ್ತಾನೆ. ಮಲಿನವಸ್ತ್ರವನ್ನು ಉಡುತ್ತಾನೆ. ನೆಲದ ಮೇಲೆ ಮಲಗುತ್ತಾನೆ. ಕಪ್ಪೆಯಂತೆ ಮಲಗುತ್ತಾನೆ. ವೀರಾಸನದಲ್ಲಿ ಕುಳಿತಿರುತ್ತಾನೆ. ಆಕಾಶವನ್ನೇ ಹೊದ್ದಿಕೆಯನ್ನಾಗಿ ಮಾಡಿಕೊಂಡು ಮಲಗುತ್ತಾನೆ. ನಾರು ಮಡಿಯನ್ನುಟ್ಟಿರುತ್ತಾನೆ. ಇಟ್ಟಿಗೆಗಳ ಮೇಲೂ–ಹಾಸುಗಲ್ಲಿನ ಮೇಲೂ ಕುಳಿತಿರುತ್ತಾನೆ. ಮುಳ್ಳಿನ ಮೇಲೆ ಮಲಗುತ್ತಾನೆ. ಬೂದಿಯ ಮೇಲೆ ಮಲಗುತ್ತಾನೆ. ಭೂಮಿಯ ಮೇಲೆ ಮಲಗುತ್ತಾನೆ. ವೃಕ್ಷಗಳ ಕೆಳಗೆ ಮಲಗುತ್ತಾನೆ. ಯುದ್ಧಭೂಮಿಯಲ್ಲಿ ಮಲಗುತ್ತಾನೆ. ನೀರಿನಲ್ಲೂ ಮಲಗುತ್ತಾನೆ. ಕೆಸರಿನಲ್ಲೂ ಮಲಗುತ್ತಾನೆ. ಮರದ ಹಲಗೆಯ ಮೇಲೂ ಮಲಗುತ್ತಾನೆ. (ತಿರ್ಯಕ್, ಮಾನುಷ, ದೇವತಾಯೋನಿಗಳಿಗೆ ಅನುಸಾರವಾಗಿ ಚೇತನನು ವಿಧ-ವಿಧವಾದ ಶಯ್ಯೆಗಳಲ್ಲಿ ಪವಡಿಸುತ್ತಾನೆ.)

ಮುಞ್ಜಮೇಖಲನಗ್ನತ್ವಂ ಕ್ಷೌಮಕೃಷ್ಣಾಜಿನಾನಿ ಚ ।
ಶಾಣೀವಾಲಪರೀಧಾನೋ ವ್ಯಾಘ್ರಚರ್ಮಪರಿಚ್ಛದಃ ॥೧೨॥

ಸಿಂಹಚರ್ಮಪರೀಧಾನಃ ಪಟ್ಟವಾಸಾಸ್ತಥೈವ ಚ ।
ಫಲಕಪರಿಧಾನಶ್ಚ ತಥಾ ಕಣ್ಟಕವಸ್ತ್ರಧೃಕ್ ॥೧೩॥

ಕೀಟಕಾವಸನಶ್ಚೈವ ಚೀರವಾಸಾಸ್ತಥೈವ ಚ ।
ವಸ್ತ್ರಾಣಿ ಚಾನ್ಯಾನಿ ಬಹೂನ್ಯಭಿಮನ್ಯತ್ಯಬುದ್ಧಿಮಾನ್ ॥೧೪॥

ಚೇತನನು ಮೌಂಜಿಯ ನಡುದಾರವನ್ನು ಧರಿಸಿ, ಕೌಪೀನವನ್ನು ಧರಿ

ಸಿರುತ್ತಾನೆ. ನಗ್ನನಾಗಿಯೇ ಇರುತ್ತಾನೆ. ರೇಷ್ಮೆಯ ವಸ್ತ್ರವನ್ನು ಧರಿಸುತ್ತಾನೆ. ಕೃಷ್ಣಾಜಿನವನ್ನೂ ಹೊದೆಯುತ್ತಾನೆ. ನಾರುಬಟ್ಟೆಯನ್ನುಡುತ್ತಾನೆ. (ಚೇತನನು ವ್ಯಾಘ್ರಯೋನಿಯಲ್ಲಿ ಹುಟ್ಟಿದಾಗ) ವ್ಯಾಘ್ರಚರ್ಮವನ್ನು ಹೊದೆದಿರುತ್ತಾನೆ. ಸಿಂಹದ ಚರ್ಮವನ್ನು ಹೊದೆದಿರುತ್ತಾನೆ. ರೇಷ್ಮೆಯ ಪೀತಾಂಬರವನ್ನೇ ಧರಿಸುತ್ತಾನೆ. ತೊಗಲನ್ನೇ ಹೊದ್ದಿರುತ್ತಾನೆ. (ಮುಳ್ಳು ಹಂದಿಯಾಗಿ) ಮುಳ್ಳಿನ ವಸ್ತ್ರವನ್ನು ತೊಟ್ಟಿರುತ್ತಾನೆ. (ಹುಳುವಿನ ಜನ್ಮವನ್ನು ತಾಳಿರುವಾಗ) ಕೀಟಕ ವಸನನಾಗಿರುತ್ತಾನೆ. ಚಿಂದೀಬಟ್ಟೆಯನ್ನುಟ್ಟಿರುತ್ತಾನೆ. ಹೀಗೆ ಅಜ್ಞಾನಿಯಾದ ಜೀವನು ತನ್ನ ಜನ್ಮಕ್ಕೆ ಅನುಸಾರವಾಗಿ ಇನ್ನೂ ಅನೇಕವಾದ ವಸ್ತ್ರಗಳನ್ನುಡುತ್ತಾ ಎಲ್ಲವೂ ತನ್ನದೇ ಎಂಬ ಅಭಿಮಾನವನ್ನಿಟ್ಟುಕೊಂಡಿರುತ್ತಾನೆ.

ಭೋಜನಾನಿ ವಿಚಿತ್ರಾಣಿ ರತ್ನಾನಿ ವಿವಿಧಾನಿ ಚ ।
ಏಕರಾತ್ರಾನ್ತರಾಶಿತ್ವಮೇಕಕಾಲಿಕಭೋಜನಮ್ ॥೧೫॥

ಚತುರ್ಥಾಷ್ಟಮಕಾಲಶ್ಚ ಷಷ್ಠಕಾಲಿಕ ಏವ ಚ ।
ಷಡ್ರಾತ್ರಭೋಜನಶ್ಚೈವ ತಥೈವಾಷ್ಟಾಹಭೋಜನಃ ॥೧೬॥

ಸಪ್ತರಾತ್ರದಶಾಹಾರೋ ದ್ವಾದಶಾಹಿಕಭೋಜನಃ ।
ಮಾಸೋಪವಾಸೀ ಮೂಲಾಶೀ ಫಲಾಹಾರಸ್ತಥೈವ ಚ ॥೧೭॥

ವಾಯುಭಕ್ಷೋಽಮ್ಬುಪಿಣ್ಯಾಕದಧಿಗೋಮಯಭೋಜನಃ ।
ಗೋಮೂತ್ರಭೋಜನಶ್ಚೈವ ಶಾಕಪುಷ್ಪಾದ ಏವ ಚ ॥೧೮॥

ಶೈವಾಲಭೋಜನಶ್ಚೈವ ತಥಾಚಾಮೇನ ವರ್ತಯನ್ ।
ವರ್ತಯಞ್ಛೀರ್ಣಪರ್ಣೈಶ್ಚ ಪ್ರಕೀರ್ಣಫಲಭೋಜನಃ ॥೧೯॥

ಚೇತನನು ತಾನು ಪಡೆದುಕೊಂಡ ಜನ್ಮಕ್ಕೆ ಅನುಸಾರವಾಗಿ ವಿಚಿತ್ರ ವಾದ ಭೋಜನಗಳನ್ನು ಭುಂಜಿಸುತ್ತಾನೆ. ನಾನಾವಿಧವಾದ ರತ್ನಗಳನ್ನು ಧರಿಸುತ್ತಾನೆ. ಒಂದು ರಾತ್ರಿಯ ಅಂತರದಲ್ಲಿ ಭೋಜನಮಾಡುತ್ತಾನೆ. ದಿನಕ್ಕೊಮ್ಮೆ ಭೋಜನಮಾಡುತ್ತಾನೆ. ದಿನದ ನಾಲ್ಕನೆಯ, ಆರನೆಯ ಮತ್ತು ಎಂಟನೆಯ ಮುಹೂರ್ತದಲ್ಲಿ ಊಟಮಾಡುತ್ತಾನೆ. ಆರು ರಾತ್ರಿ ಗಳು ಕಳೆದನಂತರ ಭೋಜನಮಾಡುತ್ತಾನೆ. ಏಳು ದಿವಸಗಳು, ಎಂಟು

ದಿವಸಗಳು, ಹತ್ತು ದಿವಸಗಳು, ಹನ್ನೆರಡು ದಿವಸಗಳು ಕಳೆದನಂತರ ಭೋಜನಮಾಡುತ್ತಾನೆ. ಒಂದು ತಿಂಗಳವರೆಗೆ ಉಪವಾಸವಿದ್ದು ಅನಂತರ ಊಟಮಾಡುತ್ತಾನೆ. ಕಂದ-ಮೂಲಗಳನ್ನೇ ತಿನ್ನುತ್ತಾನೆ. ಹಣ್ಣುಗಳನ್ನೇ ತಿನ್ನುತ್ತಾನೆ. ವಾಯುವನ್ನೇ ಆಹಾರವನ್ನಾಗಿ ಸೇವಿಸುತ್ತಾನೆ. ನೀರನ್ನೇ ಆಹಾರವನ್ನಾಗಿ ಸೇವಿಸುತ್ತಾನೆ. ಹಿಂಡಿಯನ್ನು ತಿನ್ನುತ್ತಾನೆ. ಮೊಸರನ್ನೇ ಆಹಾರವನ್ನಾಗಿ ಸೇವಿಸುತ್ತಾನೆ. ಸಗಣಿಯನ್ನು ತಿನ್ನುತ್ತಾನೆ. ಗೋಮೂತ್ರವನ್ನು ಸೇವಿಸುತ್ತಾನೆ. ಕಾಯಿಪಲ್ಯಗಳನ್ನೇ ತಿನ್ನುತ್ತಾನೆ. ಹೂಗಳನ್ನೇ ತಿನ್ನುತ್ತಾನೆ. ಪಾಚಿಯನ್ನು ತಿನ್ನುತ್ತಾನೆ. ಅನ್ನದ ಗಂಜಿಯನ್ನೇ ಕುಡಿಯುತ್ತಾನೆ. ತರಗೆಲೆಗಳಿಂದಲೇ ಜೀವಿಸುತ್ತಾನೆ. ವೃಕ್ಷದಿಂದ ಬಿದ್ದ ಫಲಗಳನ್ನು ತಿನ್ನುತ್ತಾನೆ.

ವಿವಿಧಾನಿ ಚ ಕೃಚ್ಛ್ರಾಣಿ ಸೇವತೇ ಸಿದ್ಧಿಕಾಂಕ್ಷಯಾ ।
ಚಾನ್ದ್ರಾಯಣಾನಿ ವಿಧಿವಲ್ಲಿಙ್ಗಾನಿ ವಿವಿಧಾನಿ ಚ ॥೨೦॥

ಚಾತುರಾಶ್ರಮ್ಯಪನ್ಥಾನಮಾಶ್ರಯತ್ಯಪಥಾನ್ಯಪಿ ।
ಉಪಾಶ್ರಮಾನಪ್ಯಪರಾನ್ಪಾಷಣ್ಡಾನ್ವಿವಿಧಾನಪಿ ॥೨೧॥

ಚೇತನನು ಸಿದ್ಧಿಯನ್ನು ಪಡೆಯುವ ಸಲುವಾಗಿ ವಿಧ-ವಿಧವಾದ ಕಠೋರವ್ರತಗಳನ್ನು ಆಶ್ರಯಿಸುತ್ತಾನೆ. ವಿಧಿಪೂರ್ವಕವಾಗಿ ಚಾಂದ್ರಾಯಣ ವ್ರತಗಳನ್ನು ಅನುಷ್ಠಾನಮಾಡುತ್ತಾನೆ. ಅನೇಕವಿಧವಾದ ಧಾರ್ಮಿಕ ಚಿಹ್ನೆ ಗಳನ್ನು ಧರಿಸುತ್ತಾನೆ. ನಾಲ್ಕು ವಿಧವಾದ ಆಶ್ರಮಧರ್ಮಮಾರ್ಗಗಳನ್ನು ಹಿಡಿದುಹೋಗುತ್ತಾನೆ. ಆಶ್ರಮಧರ್ಮಕ್ಕೆ ವಿರುದ್ಧವಾದ ಧರ್ಮಗಳನ್ನೂ ಅನುಸರಿಸುತ್ತಾನೆ. ಪಾಶುಪತವೇ ಮೊದಲಾದ ಉಪಾಶ್ರಮಗಳನ್ನೂ, ವಿಧ-ವಿಧವಾದ ವೇದಮತವನ್ನು ಖಂಡಿಸುವ ನಾಸ್ತಿಕಮತಗಳನ್ನೂ ಆಶ್ರಯಿಸು ತ್ತಾನೆ.

ವಿವಿಕ್ತಾಶ್ಚ ಶಿಲಾಚ್ಛಾಯಾಸ್ತಥಾ ಪ್ರಸ್ರವಣಾನಿ ಚ ।
ಪುಲಿನಾನಿ ವಿವಿಕ್ತಾನಿ ವಿವಿಕ್ತಾನಿ ವನಾನಿ ಚ ॥೨೨॥
ದೇವಸ್ಥಾನಾನಿ ಪುಣ್ಯಾನಿ ವಿವಿಕ್ತಾನಿ ಸರಾಂಸಿ ಚ ।
ವಿವಿಕ್ತಾಶ್ಚಾಪಿ ಶೈಲಾನಾಂ ಗುಹಾ ಗೃಹನಿಭೋಪಮಾಃ ॥೨೩॥

ವಿವಿಕ್ತಾನಿ ಚ ಜಪ್ಯಾನಿ ವ್ರತಾನಿ ವಿವಿಧಾನಿ ಚ ।
ನಿಯಮಾನ್ವಿವಿಧಾಂಶ್ಚಾಪಿ ವಿವಿಧಾನಿ ತಪಾಂಸಿ ಚ ॥೨೪॥

ಯಜ್ಞಾಂಶ್ಚ ವಿವಿಧಾಕಾರಾನ್ವಿಧೀಂಶ್ಚ ವಿವಿಧಾಂಸ್ತಥಾ ॥೨೫॥

ಏಕಾಂತದಲ್ಲಿರುವ ಕಲ್ಲಿನ ಮಂಟಪದ ಕೆಳಭಾಗದಲ್ಲಿ ಕುಳಿತುಕೊಳ್ಳು ತ್ತಾನೆ. ಚಿಲುಮೆಗಳ ಸಮೀಪದಲ್ಲಿರುತ್ತಾನೆ. ಏಕಾಂತವಾಗಿರುವ ನದಿಗಳ ಮಳಲಿನಲ್ಲಿ ಕುಳಿತುಕೊಳ್ಳುತ್ತಾನೆ. ಏಕಾಂತವಾಗಿರುವ ವನಗಳಲ್ಲಿಯೇ ವಾಸಮಾಡುತ್ತಾನೆ. ಪುಣ್ಯಕರವಾದ ದೇವಸ್ಥಾನಗಳಲ್ಲಿರುತ್ತಾನೆ. ಏಕಾಂತ ವಾದ ಸರೋವರಪ್ರದೇಶಗಳಲ್ಲಿರುತ್ತಾನೆ. ಪರ್ವತಗಳಲ್ಲಿರುವ ಗೃಹಸದೃಶ ವಾದ ಏಕಾಂತವಾದ ಗುಹೆಗಳಲ್ಲಿರುತ್ತಾನೆ. ಅಂತಹ ಸ್ಥಳಗಳಲ್ಲಿ ನಾನಾ ಪ್ರಕಾರವಾದ ರಹಸ್ಯವಾದ ಜಪ, ವ್ರತ, ನಿಯಮ, ತಪಸ್ಸು, ಹಾಗೆಯೇ ನಾನಾವಿಧವಾದ ಇತರ ಕರ್ಮಗಳನ್ನೂ ಅನುಷ್ಠಾನಮಾಡುತ್ತಾನೆ.

ವಣಿಕ್ಪಥಂ ದ್ವಿಜಂ ಕ್ಷತ್ರಂ ವೈಶ್ಯಶೂದ್ರಾಂಸ್ತಥೈವ ಚ ।
ದಾನಂ ಚ ವಿವಿಧಾಕಾರಂ ದೀನಾನ್ಧಕೃಪಣಾದಿಷು ॥೨೬॥

ಚೇತನನು ವ್ಯಾಪಾರಮಾಡುತ್ತಾನೆ. ದ್ವಿಜನಾಗಿ ಬ್ರಾಹ್ಮಣಕರ್ಮವನ್ನು ಮಾಡುತ್ತಾನೆ. ಕ್ಷತ್ರಿಯನಾಗಿ ಕ್ಷತ್ರಿಯಕರ್ಮವನ್ನು ಮಾಡುತ್ತಾನೆ. ವೈಶ್ಯನಾಗಿ ವೈಶ್ಯಕರ್ಮವನ್ನೂ ಶೂದ್ರನಾಗಿ ಶೂದ್ರಕರ್ಮವನ್ನೂ ಮಾಡುತ್ತಾನೆ. ದೀನರಿಗೂ, ಅಂಧರಿಗೂ, ಕೃಪಣರಿಗೂ ವಿಧ-ವಿಧವಾದ ದಾನಗಳನ್ನು ಮಾಡುತ್ತಾನೆ.

ಅಭಿಮನ್ಯತ್ಯಸಮ್ಬೋಧಾತ್ತಥೈವ ತ್ರಿವಿಧಾನ್ಗುಣಾನ್ ।
ಸತ್ತ್ವಂ ರಜಸ್ತಮಶ್ಚೈವ ಧರ್ಮಾರ್ಥೌ ಕಾಮ ಏವ ಚ ॥೨೭॥

ಚೇತನನು ಹೀಗೆ ದಾನಮಾಡಿ ಅಜ್ಞಾನವಶದಿಂದ ತಾನು ದಾನಮಾಡಿ ದೆನೆಂಬ ಅಭಿಮಾನವನ್ನು ಹೊಂದುತ್ತಾನೆ. ಹಾಗೆಯೇ ಸತ್ತ್ವ-ರಜಸ್ತಮಸ್ಸು ಗಳೆಂಬ ಮೂರು ಗುಣಗಳನ್ನೂ–ಅವುಗಳಿಗೆ ಸಂಬಂಧಿಸಿದಂತೆ ಧರ್ಮಾರ್ಥ ಕಾಮಗಳನ್ನೂ ಚೇತನನು ತನ್ನದೆಂದೇ ಭಾವಿಸುತ್ತಾನೆ.

ಪ್ರಕೃತ್ಯಾತ್ಮಾನಮೇವಾತ್ಮಾ ಏವಂ ಪ್ರವಿಭಜತ್ಯುತ ॥೨೮॥

ಹೀಗೆ ಆತ್ಮನು ಪ್ರಕೃತಿಯ ಮೂಲಕವಾಗಿ ತನ್ನನ್ನೇ ನಾನಾಪ್ರಕಾರವಾಗಿ ವಿಭಾಗಿಸಿಕೊಳ್ಳುತ್ತಾನೆ.

ಸ್ವಧಾಕಾರವಷಟ್ಕಾರೌ ಸ್ವಾಹಾಕಾರನಮಸ್ಕ್ರಿಯಾಃ ।
ಯಾಜನಾಧ್ಯಾಪನಂ ದಾನಂ ತಥೈವಾಹುಃ ಪ್ರತಿಗ್ರಹಮ್ ।
ಯಜನಾಧ್ಯಯನೇ ಚೈವ ಯಚ್ಚಾನ್ಯದಪಿ ಕಿಂಚನ ॥೨೯॥

ಚೇತನನು ಸ್ವಧಾಕಾರ-ವಷಟ್ಕಾರ-ಸ್ವಾಹಾಕಾರ-ನಮಸ್ಕಾರಗಳಲ್ಲಿ ಪ್ರವೃತ್ತನಾಗುತ್ತಾನೆ. ಯಜ್ಞಮಾಡುತ್ತಾನೆ ; ಮಾಡಿಸುತ್ತಾನೆ. ವೇದಾಧ್ಯಯನವನ್ನು ಮಾಡುತ್ತಾನೆ ; ಮಾಡಿಸುತ್ತಾನೆ. ದಾನಮಾಡುತ್ತಾನೆ ; ಪ್ರತಿಗ್ರಹಿಸುತ್ತಾನೆ. ಹೀಗೆ ಅವನು ಇತರ ಅನೇಕಕರ್ಮಗಳನ್ನೂ ಮಾಡುತ್ತಿರುತ್ತಾನೆ.

ಜನ್ಮಮೃತ್ಯುವಿವಾದೇ ಚ ತಥಾ ವಿಶಸನೇಽಪಿ ಚ ।
ಶುಭಾಶುಭಮಯಂ ಸರ್ವಮೇತದಾಹುಃ ಕ್ರಿಯಾಪಥಮ್ ॥೩೦॥

ಚೇತನನು ಹುಟ್ಟುತ್ತಾನೆ. ಸಾಯುತ್ತಾನೆ. ವಿವಾದಮಾಡುತ್ತಾನೆ. ಯುದ್ಧದಲ್ಲಿ ತೊಡಗುತ್ತಾನೆ. ಚೇತನನ ಪ್ರಕೃತಿಸಂಬಂಧವಾದ ಈ ವ್ಯವಹಾರ ಗಳೆಲ್ಲವೂ ಶುಭಾಶುಭಮಯವಾದುದೆಂದೂ–ಕರ್ಮಮಾರ್ಗಕ್ಕೆ ಸೇರಿದು ವೆಂದೂ ವಿದ್ವಾಂಸರು ಹೇಳುತ್ತಾರೆ

ಪ್ರಕೃತಿಃ ಕುರುತೇ ದೇವೀ ಭವಂ ಪ್ರಲಯಮೇವ ಚ ।
ದಿವಸಾನ್ತೇ ಗುಣಾನೇತಾನಭ್ಯೇತ್ಯೈಕೋಽವತಿಷ್ಠ ತೇ ।
ರಶ್ಮಿಜಾಲಮಿವಾದಿತ್ಯಸ್ತತ್ತತ್ಕಾಲೇ ನಿಯಚ್ಛತಿ ॥೩೧॥

ಪ್ರಕೃತಿದೇವಿಯು ವಿಶ್ವದ ಸೃಷ್ಟಿಯನ್ನೂ–ಪ್ರಳಯವನ್ನೂ ಮಾಡುತ್ತಾಳೆ. ಯಾವ ರೀತಿಯಲ್ಲಿ ಸೂರ್ಯನು ಪ್ರಾತಃಕಾಲವಾಗುತ್ತಲೇ ಕಿರಣಗಳನ್ನು ಸರ್ವತ್ರ ಪ್ರಸರಿಸಿ ಸಾಯಂಕಾಲವಾಗುತ್ತಲೇ ಕಿರಣಗಳನ್ನು ತನ್ನಲ್ಲಿಯೇ ಐಕ್ಯಗೊಳಿಸುವನೋ–ಅದೇ ರೀತಿಯಲ್ಲಿ ಆದಿಪುರುಷನಾದ ಪರಬ್ರಹ್ಮನು ಕಲ್ಪಾರಂಭದಲ್ಲಿ ಸತ್ತ್ವ-ರಜಸ್ತಮಗಳೆಂಬ ಮೂರು ಗುಣಗಳನ್ನೂ ವಿಶ್ವದಲ್ಲೆಲ್ಲಾ ಪ್ರಸರಿಸಿ ಅನಂತರ ಕಲ್ಪಾಂತದಲ್ಲಿ ಆ ಮೂರು ಗುಣಗಳನ್ನೂ ತನ್ನಲ್ಲಿಯೇ ಐಕ್ಯಗೊಳಿಸಿಕೊಂಡು ತಾನೊಬ್ಬನೇ ಇರುತ್ತಾನೆ.

ಏವಮೇಷೋಽಸಕೃತ್ಪೂರ್ವಂ ಕ್ರೀಡಾರ್ಥಮಭಿಮನ್ಯತೇ ।
ಆತ್ಮರೂಪಗುಣಾನೇತಾನ್ವಿವಿಧಾನ್ಹೃದಯಪ್ರಿಯಾನ್ ॥೩೨॥

ಹೀಗೆ ಪ್ರಕೃತಿಯಿಂದ ಯುಕ್ತನಾದ ಚೇತನನು ತತ್ತ್ವಜ್ಞಾನವಾಗುವ ಮೊದಲು (ನಿಜಸ್ವರೂಪವನ್ನು ತಿಳಿಯುವ ಮೊದಲು) ಮನಸ್ಸಿಗೆ ಪ್ರಿಯವಾದ, ವಿಧ-ವಿಧವಾದ ಆತ್ಮನಲ್ಲಿ ಕಲ್ಪಿತವಾದ ರೂಪ-ರಸ-ಗಂಧಾದಿ ಗುಣಗಳನ್ನು ಕ್ರೀಡಾರ್ಥವಾಗಿ ಬಾರಿ-ಬಾರಿಗೂ ಅನುಭವಿಸುತ್ತಲೇ ಇರುತ್ತಾನೆ ಮತ್ತು ಹೀಗೆ ಗುಣಗ್ರಹಣಮಾಡುವುದು ತನ್ನ ಕರ್ತವ್ಯವೆಂದೂ ಭಾವಿಸುತ್ತಾನೆ.

ಏವಮೇತಾಂ ವಿಕುರ್ವಾಣಃ ಸರ್ಗಪ್ರಲಯಧರ್ಮಿಣೀಮ್ ॥೩೩॥

ಕ್ರಿಯಾಂ ಕ್ರಿಯಾಪಥೇ ರಕ್ತಸ್ತ್ರಿಗುಣಾಂ ತ್ರಿಗುಣಾಧಿಪಃ ।
ಕ್ರಿಯಾಂ ಕ್ರಿಯಾಪಥೋಪೇತಸ್ತಥಾ ತದಿತಿ ಮನ್ಯತೇ ॥೩೪॥

ಹೀಗೆ ತ್ರಿಗುಣಗಳಿಗೂ ಸ್ವಾಮಿಯಾದ ಚೇತನನು ಸೃಷ್ಟಿ ಮತ್ತು ಪ್ರಳಯಧರ್ಮವುಳ್ಳ, ತ್ರಿಗುಣಾತ್ಮಕವಾದ ಪ್ರಕೃತಿಯನ್ನು ವಿಕೃತಗೊಳಿಸಿ, ಕರ್ಮಮಾರ್ಗದಲ್ಲಿ ಅನುರಕ್ತನಾಗಿ ಮತ್ತು ಪ್ರವೃತ್ತನಾಗಿ, ಪ್ರಕೃತಿಯ ಮೂಲಕವಾಗಿ ನಡೆಯುವ ತ್ರಿಗುಣಾತ್ಮಕವಾದ ಕರ್ಮಗಳನ್ನು – ಇಂತಹ ಕರ್ಮವು ಇಂತಹ ಫಲವುಳ್ಳದ್ದೆಂದು–ಭಾವಿಸುತ್ತಾನೆ.

ಪ್ರಕೃತ್ಯಾ ಸರ್ವಮೇವೇದಂ ಜಗದನ್ಧೀಕೃತಂ ವಿಭೋ ।
ರಜಸಾ ತಮಸಾ ಚೈವ ವ್ಯಾಪ್ತಂ ಸರ್ವಮನೇಕಧಾ ॥೩೫॥

ಪ್ರಕೃತಿಯಿಂದಲೇ ಈ ಸಕಲಜಗತ್ತೂ ಕುರುಡಾಗಿ ಮಾಡಲ್ಪಟ್ಟಿದೆ. ಪ್ರಕೃತಿಯ ಸಂಯೋಗದಿಂದಲೇ ಸಮಸ್ತಪದಾರ್ಥಗಳೂ ಅನೇಕಪ್ರಕಾರವಾಗಿ ರಜೋಗುಣ-ತಮೋಗುಣಗಳಿಂದ ವ್ಯಾಪ್ತವಾಗಿವೆ.

ಏವಂ ದ್ವನ್ದ್ವಾನ್ಯಥೈತಾನಿ ಸಮಾವರ್ತನ್ತಿ ನಿತ್ಯಶಃ ।
ಮಮೈವೈತಾನಿ ಜಾಯನ್ತೇ ಧಾವನ್ತೇ ತಾನಿ ಮಾಮಿತಿ ॥೩೬॥
ನಿಸ್ತರ್ತವ್ಯಾನ್ಯಥೈತಾನಿ ಸರ್ವಾಣೀತಿ ನರಾಧಿಪ ।
ಮನ್ಯತೇಽಯಂ ಹ್ಯಬುದ್ಧತ್ವಾತ್ತಥೈವ ಸುಕೃತಾನ್ಯಪಿ ॥೩೭॥

ಭೋಕ್ತವ್ಯಾನಿ ಮಯ್ಯೈತಾನಿ ದೇವಲೋಕಗತೇನ ವೈ ।
ಇಹೈವ ಚೈನಂ ಭೋಕ್ಷ್ಯಾಮಿ ಶುಭಾಶುಭಫಲೋದಯಮ್ ॥೩೮॥

ಹೀಗೆ ಪ್ರಕೃತಿಯ ಸಂಸರ್ಗದಿಂದಾಗಿ ಸುಖ-ದುಃಖಾದಿ ದ್ವಂದ್ವಗಳು ಅನುದಿನವೂ ಬಂದುಹೋಗುತ್ತಲೇ ಇರುತ್ತವೆ. ಚೇತನನು ಅಜ್ಞಾನದ ಕಾರಣದಿಂದ–'ಈ ದುಃಖಗಳು ನನ್ನ ಸಲುವಾಗಿಯೇ ಹುಟ್ಟಿವೆ. ನನ್ನ ಕಡೆಗೇ ಓಡಿಬರುತ್ತವೆ. ಇವುಗಳೆಲ್ಲವನ್ನೂ ಹೋಗಲಾಡಿಸಿಕೊಳ್ಳಬೇಕು'–ಹೀಗೆ ಭಾವಿಸಿಕೊಳ್ಳುತ್ತಾ ದುಃಖವನ್ನು ಅನುಭವಿಸುತ್ತಲೇ ಇರುತ್ತಾನೆ. ಮಾಯಿಯಿಂದ ಆವೃತನಾದ ಚೇತನನು ಅಜ್ಞಾನದ ಕಾರಣದಿಂದ ಸುಕೃತದ ವಿಷಯದಲ್ಲಿಯೂ ಹೀಗೆಯೇ ಭಾವಿಸಿಕೊಳ್ಳುತ್ತಾನೆ. 'ಪೂರ್ವಜನ್ಮದಲ್ಲಿ ಮಾಡಿದ ಶುಭಾಶುಭಕರ್ಮಗಳ ಫಲವನ್ನು ಈಗ ಅನುಭವಿಸುತ್ತಿದ್ದೇನೆ. ನಾನು ಈ ಜನ್ಮದಲ್ಲಿ ಅನೇಕಪುಣ್ಯಕಾರ್ಯಗಳನ್ನು ಮಾಡಿರುವುದರಿಂದ ದೇವಲೋಕಕ್ಕೆ ಹೋದನಂತರ ನಾನು ಮಾಡಿರುವ ಪುಣ್ಯಕರ್ಮಗಳ ಫಲಗಳನ್ನು ಅಲ್ಲಿ ಅನುಭವಿಸುತ್ತೇನೆ'–ಹೀಗೆ ಶುದ್ಧಾತ್ಮನಾದ ಚೇತನನಿಗೆ ಯಾವುದೂ ಸಂಬಂಧಿಸಿರದಿದ್ದರೂ ಪ್ರಕೃತಿಯ ಸಂಸರ್ಗದಿಂದ ಅವನು ಇವುಗಳೆಲ್ಲವನ್ನೂ ತನ್ನದೇ ಎಂದು ಆರೋಪಿಸಿಕೊಳ್ಳುತ್ತಾನೆ.

ಸುಖಮೇವ ತು ಕರ್ತವ್ಯಂ ಸಕೃತ್ಕೃತ್ವಾ ಸುಖಂ ಮಮ ।
ಯಾವದನ್ತಂ ಚ ಮೇ ಸೌಖ್ಯಂ ಜಾತ್ಯಾಂ ಜಾತ್ಯಾಂ ಭವಿಷ್ಯತಿ ॥೩೯॥

'ನಾನೀಗ ಸುಖಕ್ಕೆ ಸಾಧನಭೂತವಾದ ಪುಣ್ಯಕರ್ಮಗಳನ್ನೇ ಮಾಡಬೇಕು. ನಾನು ಪುಣ್ಯಕರ್ಮವನ್ನು ಒಮ್ಮೆ ಮಾಡಿದರೂ ಬದುಕಿರುವವರೆಗೂ ನನಗೆ ಸೌಖ್ಯವುಂಟಾಗುತ್ತದೆ. ಇಷ್ಟು ಮಾತ್ರವಲ್ಲ. ಜನ್ಮ-ಜನ್ಮಾಂತರಗಳಲ್ಲಿಯೂ ಸೌಖ್ಯವುಂಟಾಗುತ್ತದೆ'–ಎಂಬುದಾಗಿ ಚೇತನನು ಭಾವಿಸುತ್ತಾನೆ.

ಭವಿಷ್ಯತಿ ಚ ಮೇ ದುಃಖಂ ಕೃತೇನೇಹಾಪ್ಯನನ್ತಕಮ್ ।
ಮಹದ್ದುಃಖಂ ಹಿ ಮಾನುಷ್ಯಂ ನಿರಯೇ ಚಾಪಿ ಮಜ್ಜನಮ್ ॥೪೦॥

'ನಾನೇನಾದರೂ ಈ ಜನ್ಮದಲ್ಲಿ ದುಷ್ಟಕಾರ್ಯವನ್ನು ಮಾಡಿದರೆ ಬದುಕಿರುವವರೆಗೂ ಮಹಾದುಃಖವನ್ನೇ ಅನುಭವಿಸಬೇಕಾಗುತ್ತದೆ.

ಮನುಷ್ಯಜನ್ಮವೇ ಮಹಾದುಃಖದಿಂದ ಕೂಡಿದುದಾಗಿದೆ. ಇಷ್ಟುಮಾತ್ರ ವಲ್ಲದೇ ಕೆಟ್ಟಕೆಲಸಗಳನ್ನು ಮಾಡಿದರೆ ನರಕದಲ್ಲಿಯೂ ಬೀಳಲೇಬೇಕಾಗುತ್ತದೆ'–ಹೀಗೆಂದೂ ಚೇತನನು ಭಾವಿಸುತ್ತಾನೆ.

ನಿರಯಾಚ್ಚಾಪಿ ಮಾನುಷ್ಯಂ ಕಾಲೇನೈಷ್ಯಾಮ್ಯಹಂ ಪುನಃ ।
ಮನುಷ್ಯತ್ವಾಚ್ಚ ದೇವತ್ವಂ ದೇವತ್ವಾತ್ಪೌರುಷಂ ಪುನಃ ॥೪೧॥

'ಪಾಪಕರ್ಮದ ಫಲವಾಗಿ ನರಕದಲ್ಲಿ ಬಹಳ ಕಾಲದವರೆಗಿದ್ದು ಅಲ್ಲಿಂದ ಬಿಡುಗಡೆಯನ್ನು ಹೊಂದಿದನಂತರ ನಾನು ಮನುಷ್ಯಜನ್ಮವನ್ನು ಪಡೆದುಕೊಳ್ಳುತ್ತೇನೆ. ಮನುಷ್ಯಜನ್ಮದಲ್ಲಿ ಸುಕೃತಗಳನ್ನು ಮಾಡಿ ದೇವತ್ವವನ್ನು ಪಡೆಯುತ್ತೇನೆ. ಅಲ್ಲಿ ನನ್ನ ಪುಣ್ಯಗಳೆಲ್ಲವೂ ತೀರಿಹೋದ ಬಳಿಕ ಪುನಃ ಪುರುಷನಾಗಿ (ಮನುಷ್ಯನಾಗಿ) ಹುಟ್ಟುತ್ತೇನೆ'–ಎಂದು ಚೇತನನು ಭಾವಿಸುತ್ತಾನೆ.

ಮನುಷ್ಯತ್ವಾಚ್ಚ ನಿರಯಂ ಪರ್ಯಾಯೇಣೋಪಗಚ್ಛತಿ ।
ಯ ಏವಂ ವೇತ್ತಿ ನಿತ್ಯಂ ವೈ ನಿರಾತ್ಮಾತ್ಮಗುಣೈರ್ವೃತಃ ।
ತೇನ ದೇವಮನುಷ್ಯೇಷು ನಿರಯೇ ಚೋಪಪದ್ಯತೇ ॥೪೨॥

ಹೀಗೆ ಚೇತನನು ಪರ್ಯಾಯವಾಗಿ ನರಕಕ್ಕೂ, ಮನುಷ್ಯಲೋಕಕ್ಕೂ, ದೇವಲೋಕಕ್ಕೂ ಹೋಗುತ್ತಿರುತ್ತಾನೆ ; ಬರುತ್ತಿರುತ್ತಾನೆ. ಸ್ವರೂಪರಹಿತವಾದ ಆತ್ಮಗುಣಗಳಿಂದ (ಚೇತನತ್ವ-ಸತ್ಯತ್ವ-ಸುಖತ್ವಾದಿ ಗುಣಗಳಿಂದ ಅಥವಾ ಈ ಸತ್ತ್ವ-ರಜಸ್ತಮೋಗುಣಗಳಿಂದ) ಆವೃತನಾದ ಚೇತನನು ಹೀಗೆ ಭಾವಿಸಿಕೊಳ್ಳುವುದರಿಂದಲೇ ದೇವ-ಮನುಷ್ಯಲೋಕಗಳಲ್ಲಿಯೂ ಮತ್ತು ನರಕದಲ್ಲಿಯೂ ಪರ್ಯಾಯವಾಗಿ ವಾಸಮಾಡುತ್ತಾನೆ.

ಮಮತ್ವೇನಾವೃತೋ ನಿತ್ಯಂ ತತ್ರೈವ ಪರಿವರ್ತತೇ ।
ಸರ್ಗಕೋಟಿಸಹಸ್ರಾಣಿ ಮರಣಾನ್ತಾಸು ಮೂರ್ತಿಷು ॥೪೩॥

ಮಮತ್ವದಿಂದ (ನಾನು-ನನ್ನವರು ಎಂಬ ಭಾವನೆಯಿಂದ) ಆವೃತನಾದ ಚೇತನನು ಸಾವಿರ ಕೋಟಿ ಸೃಷ್ಟಿಕಾಲಪರ್ಯಂತವಾಗಿ (ಅನೇಕ ಸಾವಿರ ಚತುರ್ಯುಗಗಳವರೆಗೆ) ಮರಣವೇ ಅಂತ್ಯವಾಗಿರುವ (ಮರಣ ಧರ್ಮವುಳ್ಳ) ಶರೀರಗಳಲ್ಲಿಯೇ ಸುತ್ತುತ್ತಿರುತ್ತಾನೆ.

ಯ ಏವಂ ಕುರುತೇ ಕರ್ಮ ಶುಭಾಶುಭಫಲಾತ್ಮಕಮ್ ।
ಸ ಏವಂ ಫಲಮಾಪ್ನೋತಿ ತ್ರಿಷು ಲೋಕೇಷು ಮೂರ್ತಿಮಾನ್ ॥

ಯಾವನು (ನಾನು-ನನ್ನದು-ನನಗಾಗಿ-ನನ್ನವರಿಗಾಗಿ) ಎಂಬ ಅಹಂಕಾರ-ಮಮಕಾರಗಳಿಂದ ಶುಭಾಶುಭಫಲದಾಯಕಗಳಾದ ಕರ್ಮಗಳನ್ನು ಮಾಡುವನೋ–ಅವನು ಮೂರು ಲೋಕಗಳಲ್ಲಿಯೂ ಆ ಲೋಕಗಳಿಗೆ ತಕ್ಕುದಾದ ಶರೀರಗಳನ್ನು ಧರಿಸಿ ತಾನು ಸಂಕಲ್ಪಪೂರ್ವಕವಾಗಿ ಮಾಡಿರುವ ಕರ್ಮಗಳಿಗೆ ಅನುರೂಪವಾದ ಫಲವನ್ನು ಹೊಂದುತ್ತಾನೆ.

ಪ್ರಕೃತಿಃ ಕುರುತೇ ಕರ್ಮ ಶುಭಾಶುಭಫಲಾತ್ಮಕಮ್ ।
ಪ್ರಕೃತಿಶ್ಚ ತದಶ್ನಾತಿ ತ್ರಿಷು ಲೋಕೇಷು ಕಾಮಗಾ ॥೪೫॥

ವಾಸ್ತವವಾಗಿ ಪ್ರಕೃತಿಯೇ ಶುಭಾಶುಭಫಲಗಳುಳ್ಳ ಕರ್ಮಗಳನ್ನು ಮಾಡುತ್ತದೆ. ಮೂರು ಲೋಕಗಳಲ್ಲಿಯೂ ಸ್ವೇಚ್ಛೆಯಿಂದ ಸಂಚರಿಸುವ ಆ ಪ್ರಕೃತಿಯೇ ಕರ್ಮಫಲಗಳನ್ನು ಉಪಭೋಗಿಸುತ್ತದೆ. (ಆದರೆ ಅಜ್ಞಾನ ವಶದಿಂದ ಚೇತನನು ತಾನೇ ಕರ್ತೃವೆಂದೂ ಭೋಕ್ತೃವೆಂದೂ ಭಾವಿಸಿ ಕೊಳ್ಳುತ್ತಾನೆ.)

ತಿರ್ಯಗ್ಯೋನಿಮನುಷ್ಯತ್ವಂ ದೇವಲೋಕೇ ತಥೈವ ಚ ।
ತ್ರೀಣಿ ಸ್ಥಾನಾನಿ ಚೈತಾನಿ ಜಾನೀಯಾತ್ಪ್ರಾಕೃತಾನಿ ಹ ॥೪೬॥

ತಿರ್ಯಗ್ಯೋನಿ, ಮನುಷ್ಯಯೋನಿ ಮತ್ತು ದೇವಲೋಕದಲ್ಲಿ ದೇವಯೋನಿ–ಈ ಮೂರು ಕರ್ಮಫಲಗಳನ್ನು ಉಪಭೋಗಿಸುವ ಸ್ಥಾನಗಳಾಗಿವೆ. ಇವುಗಳನ್ನು ಪ್ರಕೃತಿಗೆ ಸಂಬಂಧಿಸಿದುವುಗಳೆಂದು ತಿಳಿಯಬೇಕು

ಅಲಿಙ್ಗಾಂ ಪ್ರಕೃತಿಂ ತ್ವಾಹುರ್ಲಿಙ್ಗೈರನುಮಿಮೀಮಹೇ ।
ತಥೈವ ಪೌರುಷಂ ಲಿಙ್ಗಮನುಮಾನಾದ್ಧಿ ಮನ್ಯತೇ ॥೪೭॥

ಪ್ರಕೃತಿಯನ್ನು ರೂಪರಹಿತವಾದುದೆಂದೂ – ನಿರಾಕಾರವಾದುದೆಂದೂ ಹೇಳುತ್ತಾರೆ. ವಿಶೇಷವಾದ ಚಿಹ್ನೆಗಳಿಂದ ನಾವು ಪ್ರಕೃತಿ ಎಂಬುದು ಇದೆಯೆಂದು ಅನುಮಾನಿಸಿದ್ದೇವೆ. ಅದೇ ರೀತಿಯಲ್ಲಿ ಚೇತನನು ಇರುವನೆಂಬುದೂ ತರ್ಕ-ಊಹೆ-ಸಾದೃಶ್ಯಗಳಿಂದ ತಿಳಿಯಲ್ಪಡುತ್ತದೆ.

ಸ ಲಿಙ್ಗಾನ್ತರಮಾಸಾದ್ಯ ಪ್ರಾಕೃತಂ ಲಿಙ್ಗಮವ್ರಣಃ ।
ವ್ರಣದ್ವಾರಾಣ್ಯಧಿಷ್ಠಾಯ ಕರ್ಮಾಣ್ಯಾತ್ಮನಿ ಮನ್ಯತೇ ॥೪೮॥

ಗಾಯಗಳಿಂದ (ದೋಷಗಳಿಂದ) ವಿಹೀನನಾಗಿರುವ ಚೇತನನು ಪ್ರಕೃತಿಸಂಬಂಧವಾದ ಚಿಹ್ನಸ್ವರೂಪವಾದ ಶರೀರಾಂತರವನ್ನು ಹೊಂದಿ ಆ ಶರೀರದಲ್ಲಿರುವ ದೋಷದ ದ್ವಾರಗಳಾದ ಇಂದ್ರಿಯಗಳನ್ನು ಆಶ್ರಯಿಸಿ ಪ್ರಕೃತಿಗೆ ಸಂಬಂಧಿಸಿರುವ ಇಂದ್ರಿಯಗಳ ಮೂಲಕವಾಗಿ ನಡೆಯುವ ಕರ್ಮಗಳೆಲ್ಲವನ್ನೂ ತನ್ನವೇ ಎಂದು ಭಾವಿಸಿಕೊಳ್ಳುತ್ತಾನೆ.

ಶ್ರೋತ್ರಾದೀನಿ ತು ಸರ್ವಾಣಿ ಪಞ್ಚಕರ್ಮೇನ್ದ್ರಿಯಾಣ್ಯಥ ।
ವಾಗಾದೀನಿ ಪ್ರವರ್ತನ್ತೇ ಗುಣೇಷ್ವಿಹ ಗುಣೈಃ ಸಹ ॥೪೯॥

ಕಿವಿಯೇ ಮೊದಲಾದ ಐದು ಜ್ಞಾನೇಂದ್ರಿಯಗಳೂ, ವಾಕ್ಕು ಮೊದಲಾದ ಐದು ಕರ್ಮೇಂದ್ರಿಯಗಳೂ ತಮ್ಮ-ತಮ್ಮ ಗುಣಗಳೊಡನೆ ಗುಣಮಯವಾದ ಶರೀರದಲ್ಲಿ ಸ್ಥಾಪಿತವಾಗಿವೆ.

ಅಹಮೇತಾನಿ ವೈ ಸರ್ವಂ ಮಯ್ಯೇತಾನೀನ್ದ್ರಿಯಾಣಿ ಹ ।
ನಿರಿನ್ದ್ರಿಯೋ ಹಿ ಮನ್ಯೇತ ವ್ರಣವಾನಸ್ಮಿ ನಿರ್ವ್ರಣಃ ॥೫೦॥

ಚೇತನನು ಇಂದ್ರಿಯಗಳಿಂದ ರಹಿತನಾಗಿದ್ದರೂ (ಇಂದ್ರಿಯಗಳೆಲ್ಲವೂ ಪ್ರಕೃತಿಗೆ ಸಂಬಂಧಿಸಿದ್ದರೂ) 'ನಾನೇ ಈ ಎಲ್ಲ ಕಾರ್ಯಗಳನ್ನೂ ಮಾಡುತ್ತೇನೆ. ನನ್ನಲ್ಲಿಯೇ ಈ ಹತ್ತು ಇಂದ್ರಿಯಗಳೂ ಇವೆ'–ಎಂಬುದಾಗಿ ಭಾವಿಸುತ್ತಾನೆ. ಹೀಗೆಯೇ ಛಿದ್ರಗಳಿಂದ (ದೋಷದಿಂದ) ಶೂನ್ಯನಾಗಿದ್ದರೂ ದೋಷಿಯಾಗಿರುವೆನೆಂದು ಭಾವಿಸುತ್ತಾನೆ.

ಅಲಿಙ್ಗೋ ಲಿಙ್ಗಮಾತ್ಮಾನಮಕಾಲಃ ಕಾಲಮಾತ್ಮನಃ ।
ಅಸತ್ತ್ವಂ ಸತ್ತ್ವಮಾತ್ಮಾನಮತತ್ತ್ವಂ ತತ್ತ್ವಮಾತ್ಮನಃ ॥೫೧॥

ಚೇತನನು ಶರೀರದಿಂದ ವಿಹೀನನಾಗಿದ್ದರೂ ತಾನು ಶರೀರವನ್ನು ಹೊಂದಿರುವವನೆಂದು ಭಾವಿಸಿಕೊಳ್ಳುತ್ತಾನೆ. ಮರಣಧರ್ಮವಿಲ್ಲದವನಾಗಿದ್ದರೂ ತಾನು ಮರಣಧರ್ಮವಿರುವವನೆಂದು ಭಾವಿಸಿಕೊಳ್ಳುತ್ತಾನೆ. (ಕಾಲಾತೀತನಾಗಿದ್ದರೂ ಕಾಲಕ್ಕೆ ಒಳಪಟ್ಟವನೆಂದು ಭಾವಿಸಿಕೊಳ್ಳು

ತ್ತಾನೆ.) ಸತ್ತ್ವಾದಿಗುಣಗಳಿಂದ ರಹಿತನಾಗಿದ್ದರೂ ಸತ್ತ್ವಾದಿಗುಣಗಳಿಂದ ಯುಕ್ತನಾಗಿರುವವನೆಂದು ಭಾವಿಸಿಕೊಳ್ಳುತ್ತಾನೆ. ಪಂಚಮಹಾಭೂತಾದಿ ತತ್ತ್ವಗಳಿಂದ ವಿಹೀನನಾಗಿದ್ದರೂ ತತ್ತ್ವಗಳಿಂದ ಯುಕ್ತನಾಗಿರುವೆನೆಂದು ಭಾವಿಸಿಕೊಳ್ಳುತ್ತಾನೆ.

ಅಮೃತ್ಯುರ್ಮೃತ್ಯುಮಾತ್ಮಾನಮಚರಶ್ಚರಮಾತ್ಮನಃ ।
ಅಕ್ಷೇತ್ರಃ ಕ್ಷೇತ್ರಮಾತ್ಮಾನಮಸರ್ಗಃ ಸರ್ಗಮಾತ್ಮನಃ ॥೩೨॥

ಚೇತನನು ವಾಸ್ತವವಾಗಿ ಮೃತ್ಯುವಿನಿಂದ ರಹಿತನಾಗಿದ್ದರೂ ಮೃತ್ಯುಗ್ರಸ್ತನಾಗಿರುವೆನೆಂದು ಭಾವಿಸಿಕೊಳ್ಳುತ್ತಾನೆ. ಚಲಿಸದೇ ಇರತಕ್ಕವನಾದರೂ ತಾನು ಸಂಚರಿಸತಕ್ಕವನೆಂದು ಭಾವಿಸಿಕೊಳ್ಳುತ್ತಾನೆ. ಕ್ಷೇತ್ರದಿಂದ (ಶರೀರದಿಂದ) ಭಿನ್ನನಾಗಿದ್ದರೂ ತಾನೇ ಶರೀರವೆಂದು ಭಾವಿಸಿಕೊಳ್ಳುತ್ತಾನೆ. (ದೇಹಾತ್ಮಭಾವವನ್ನು ಹೊಂದಿದ್ದಾನೆ.) ಸೃಷ್ಟಿಗೆ ಸಂಬಂಧವಿಲ್ಲದವನಾದರೂ ತಾನು ಇಂತಹವರ ಹೊಟ್ಟೆಯಲ್ಲಿ ಹುಟ್ಟಿದವನೆಂದು ಭಾವಿಸಿಕೊಳ್ಳುತ್ತಾನೆ.

ಅತಪಾಸ್ತಪ ಆತ್ಮಾನಮಗತಿರ್ಗತಿಮಾತ್ಮನಃ ।
ಅಭವೋ ಭವಮಾತ್ಮಾನಮಭಯೋ ಭಯಮಾತ್ಮನಃ ॥೩೩॥

ಅಕ್ಷರಃ ಕ್ಷರಮಾತ್ಮಾನಮಬುದ್ಧಿಸ್ತ್ವಭಿಮನ್ಯತೇ ॥೩೪॥

ಚೇತನನು ಯಾವಾಗಲೂ ತಪಸ್ಸುಮಾಡುವವನಲ್ಲ. ಆದರೂ ತಾನು ತಪಸ್ವಿಯೆಂದು ಭಾವಿಸಿಕೊಳ್ಳುತ್ತಾನೆ. ಗಮನಶೀಲನಲ್ಲದಿದ್ದರೂ ಗಮನಾಗಮನವನ್ನು ಮಾಡುವವನೆಂದು ಭಾವಿಸಿಕೊಳ್ಳುತ್ತಾನೆ. ಸಂಸಾರಿಯಲ್ಲದಿದ್ದರೂ ಸಂಸಾರಿಯೆಂದು ಭಾವಿಸಿಕೊಳ್ಳುತ್ತಾನೆ. ಭಯಹೀನನಾಗಿದ್ದರೂ ಭಯಭೀತನಾಗಿರುವೆನೆಂದು ಭಾವಿಸಿಕೊಳ್ಳುತ್ತಾನೆ. ಅವಿನಾಶಿಯಾಗಿದ್ದರೂ ನಾಶವುಳ್ಳವನೆಂದು ಭಾವಿಸಿಕೊಳ್ಳುತ್ತಾನೆ. ಹೀಗೆ ಜ್ಞಾನರಹಿತನಾಗಿ ಅಭಿಮಾನವನ್ನು ತಾಳುತ್ತಾನೆ.”

೩೦೩ನೆಯ ಅಧ್ಯಾಯವು ಮುಗಿಯಿತು.

ಪ್ರಕೃತಿಯ ಸಂಸರ್ಗದೋಷದಿಂದ ಜೀವನ ಅಧಃಪತನ

ವಸಿಷ್ಠರು ಹೇಳುತ್ತಾರೆ :

ಏವಮಪ್ರತಿಬುದ್ಧತ್ವಾದಬುದ್ಧಜನಸೇವನಾತ್ ।
ಸರ್ಗಕೋಟಿಸಹಸ್ರಾಣಿ ಪತನಾನ್ತಾನಿ ಗಚ್ಛತಿ ॥೧॥

"ಹೀಗೆ ಚೇತನನು ಅಜ್ಞಾನದ ಕಾರಣದಿಂದಲೂ ಮತ್ತು ಅಜ್ಞಾನಿಗಳ ಸಹವಾಸದ ಕಾರಣದಿಂದಲೂ ನಿರಂತರವಾಗಿ ಪತಿತನಾಗುತ್ತಾನೆ. ಹಾಗೂ ಸಾವಿರ ಕೋಟಿ ಜನ್ಮಗಳನ್ನು ಪಡೆಯುತ್ತಾನೆ.

ಧಾಮ್ನಾ ಧಾಮಸಹಸ್ರಾಣಿ ಮರಣಾನ್ತಾನಿ ಗಚ್ಛತಿ ।
ತಿರ್ಯಗ್ಯೋನಿಮನುಷ್ಯತ್ವೇ ದೇವಲೋಕೇ ತಥೈವ ಚ ॥೨॥

ಚೇತನನು ಪಶು-ಪಕ್ಷಿಗಳ ಯೋನಿಗಳಲ್ಲಿಯೂ, ಮನುಷ್ಯಯೋನಿಯಲ್ಲಿಯೂ, ದೇವಲೋಕದಲ್ಲಿ ದೇವತೆಗಳ ಯೋನಿಯಲ್ಲಿಯೂ ಜನ್ಮವನ್ನು ತಾಳುತ್ತಾ, ಒಂದು ಸ್ಥಳದಿಂದ ಸಾವಿರಾರು ಸ್ಥಳಗಳಿಗೆ ಹೋಗುತ್ತಾ ಜನನಗಳಿಗೆ ಅನುರೂಪವಾದ ಮರಣಗಳನ್ನು ಹೊಂದುತ್ತಿರುತ್ತಾನೆ.

ಚನ್ದ್ರಮಾ ಇವ ಭೂತಾನಾಂ ಪುನಸ್ತತ್ರ ಸಹಸ್ರಶಃ ।
ಲೀಯತೇಽಪ್ರತಿಬುದ್ಧತ್ವಾದೇವಮೇಷ ಹ್ಯಬುದ್ಧಿಮಾನ್ ॥೩॥

ತೇಜೋವಿಶಿಷ್ಟವಾದ ವಸ್ತುಗಳಲ್ಲಿ ಚಂದ್ರನು ಸಾವಿರಾರು ಬಾರಿ ಕ್ಷಯವನ್ನೂ, ಸಾವಿರಾರು ಬಾರಿ ವೃದ್ಧಿಯನ್ನೂ ಹೊಂದುತ್ತಲೇ ಇರುವಂತೆ–ಅವಿವೇಕಿಯಾದ ಚೇತನನು ಅಜ್ಞಾನದ ಕಾರಣದಿಂದ ಸಾವಿರಾರು ಬಾರಿ ಲಯಹೊಂದುತ್ತಲೇ ಇರುತ್ತಾನೆ : ಹುಟ್ಟುತ್ತಲೂ ಇರುತ್ತಾನೆ.

ಕಲಾ ಪಞ್ಚದಶೀ ಯೋನಿಸ್ತದ್ಧಾಮ ಪ್ರತಿಬುಧ್ಯತೇ ।
ನಿತ್ಯಮೇತದ್ವಿಜಾನೀಹಿ ಸೋಮಂ ವೈ ಷೋಡಶೀಂ ಕಲಾಮ್ ॥೪॥

ಐದು ಜ್ಞಾನೇಂದ್ರಿಯಗಳೆಂಬ, ಐದು ಕರ್ಮೇಂದ್ರಿಯಗಳೆಂಬ, ಐದು ಮಹಾಭೂತಗಳೆಂಬ ಹದಿನೈದು ಕಲೆಗಳ ಸಮುದಾಯವೇ ಶರೀರಕ್ಕೆ ಯೋನಿ

ಪ್ರಾಯವಾಗಿದೆ. ಪಂಚದಶಕಲಾಸಮುದಾಯದಿಂದ ಹುಟ್ಟಿದ ಈ ಶರೀರವನ್ನೇ ಚೇತನನು ತನ್ನ ಮನೆಯೆಂದು ಭಾವಿಸುತ್ತಾನೆ. ಸೋಮದೇವತಾತ್ಮಕವಾದ ಮನಸ್ಸಿನಲ್ಲಿ ಪ್ರತಿಬಿಂಬಿತನಾಗಿರುವ ಚೇತನನೇ ಹದಿನಾರನೆಯ ಕಲೆ. ಅದನ್ನೇ ನೀನು ನಿತ್ಯವೆಂದು ಭಾವಿಸು.

ಕಲಾಯಾಂ ಜಾಯತೇಽಜಸ್ರಂ ಪುನಃ ಪುನರಬುದ್ಧಿಮಾನ್ ।
ಧಾಮ ತಸ್ಯೋಪಯುಞ್ಜನ್ತಿ ಭೂಯ ಏವೋಪಜಾಯತೇ ॥೫॥

ಪಂಚದಶಕಲಾತ್ಮಕವಾದ ಈ ಶರೀರದಲ್ಲಿಯೇ ಅಜ್ಞಾನಿಯಾದ ಚೇತನನು ಪುನಃ ಪುನಃ ಹುಟ್ಟುತ್ತಾ ಇರುತ್ತಾನೆ. ಚೇತನನ ಶರೀರರೂಪವಾದ ಮನೆಯು ಅವನೊಡನೆಯೇ ಸೇರಿಹೋಗುತ್ತದೆ. (ಚೇತನನು ಶರೀರವನ್ನು ಬೇರೆ ಎಂದು ಭಾವಿಸುವುದೇ ಇಲ್ಲ.) ಈ ಕಾರಣದಿಂದಲೇ ಅವನು ಪುನಃ ಪುನಃ ಹುಟ್ಟುತ್ತಲೇ ಇರುತ್ತಾನೆ.

ಷೋಡಶೀ ತು ಕಲಾ ಸೂಕ್ಷ್ಮಾ ಸ ಸೋಮ ಉಪಧಾರ್ಯತಾಮ್ ।
ನ ತೂಪಯುಜ್ಯತೇ ದೇವೈರ್ದೇವಾನುಪಯುನಕ್ತಿ ಸಾ ॥೬॥

ಹದಿನಾರನೆಯ ಕಲೆಯು ಅತಿಸೂಕ್ಷ್ಮವಾದುದು. ಇದನ್ನೇ ಸೋಮ ಅಥವಾ ಮನಸ್ಸೆಂದು ತಿಳಿಯಬಹುದು. ಇಂದ್ರಿಯಗಳಿಂದ ಮನಸ್ಸು ಉಪಯೋಗಿಸಲ್ಪಡುವುದಿಲ್ಲ. ಮನಸ್ಸು ಇಂದ್ರಿಯಗಳನ್ನು ಉಪಯೋಗಿಸಿಕೊಳ್ಳುತ್ತದೆ. (ಇಂದ್ರಿಯಗಳು ಮನಸ್ಸಿನ ಸಹಕಾರವಿಲ್ಲದೇ ತಾವಾಗಿಯೇ ಏನನ್ನೂ ಮಾಡಲಾರವು.)

ಏತಾಮಕ್ಷಪಯಿತ್ವಾ ಹಿ ಜಾಯತೇ ನೃಪಸತ್ತಮ ।
ಸಾ ಹ್ಯಸ್ಯ ಪ್ರಕೃತಿರ್ದೃಷ್ಟಾ ತತ್ಕ್ಷಯಾನ್ಮೋಕ್ಷ ಉಚ್ಯತೇ ॥೭॥

ಈ ಕಲೆಯನ್ನು (ಮನಸ್ಸನ್ನು) ವಿನಾಶಗೊಳಿಸದೇ ಇರುವುದರಿಂದಲೇ ಚೇತನನು ಪುನಃ ಪುನಃ ಹುಟ್ಟುತ್ತಲೇ ಇರುತ್ತಾನೆ. ಈ ಕಲೆಯೇ (ಮನಸ್ಸೇ) ಚೇತನನ ಪ್ರಕೃತಿಯಾಗಿದೆ. ಮನಸ್ಸಿನ ಕ್ಷಯದಿಂದಲೇ ಮೋಕ್ಷವೆಂದು ಹೇಳಲ್ಪಟ್ಟಿದೆ. (ಮನ ಏವ ಮನುಷ್ಯಾಣಾಂ ಕಾರಣಂ ಬನ್ಧಮೋಕ್ಷಯೋಃ –ಎಂಬುದನ್ನು ಇಲ್ಲಿ ಸ್ಮರಿಸಬಹುದಾಗಿದೆ.)

ತದೇವ ಷೋಡಶಕಲಂ ದೇಹಮವ್ಯಕ್ತಸಂಜ್ಞಕಮ್ ।
ಮಮಾಯಮಿತಿ ಮನ್ವಾನಸ್ತತ್ರೈವ ಪರಿವರ್ತತೇ ॥೮॥

ಷೋಡಶಕಲಾತ್ಮಕವಾದ (ಪಂಚಭೂತಗಳು, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು ಮತ್ತು ಚೈತನ್ಯ) ಅವ್ಯಕ್ತವೆಂಬ ಸಂಜ್ಞೆಯನ್ನು ಪಡೆದಿರುವ ಸೂಕ್ಷ್ಮದೇಹವನ್ನು–'ಈ ದೇಹವು ನನ್ನದು'–ಎಂದು ಭಾವಿಸುತ್ತಾ ಚೇತನನು ಅಲ್ಲಿಯೇ ಸುತ್ತುತ್ತಿರುತ್ತಾನೆ.

ಪಞ್ಚವಿಂಶೋ ಮಹಾನಾತ್ಮಾ ತಸ್ಯೈವಾಪ್ರತಿಬೋಧನಾತ್ ।
ವಿಮಲಸ್ಯ ವಿಶುದ್ಧಸ್ಯ ಶುದ್ಧಾಶುದ್ಧನಿಷೇವಣಾತ್ ॥೯॥

ಅಶುದ್ಧ ಏವ ಶುದ್ಧಾತ್ಮಾ ತಾದೃಗ್ಭವತಿ ಪಾರ್ಥಿವ ।
ಅಬುದ್ಧಸೇವನಾಚ್ಚಾಪಿ ಬುದ್ಧೋಽಪ್ಯಬುದ್ಧತಾಂ ವ್ರಜೇತ್ ॥೧೦॥

ಇಪ್ಪತ್ತೈದನೆಯ ತತ್ತ್ವವು ಮಹಾತ್ಮನಾದ ಮಹಾವಿಷ್ಣುವೇ ಆಗಿದ್ದಾನೆ. ವಿಮಲನಾದ ಮತ್ತು ವಿಶುದ್ಧನಾದ ಅವನಿಗೆ ಪ್ರಕೃತಿಯ ಸಂಸರ್ಗದಿಂದಾಗಿ ತಾನು ಯಾರೆಂಬುದು ತಿಳಿಯದೇ ಇರುವ ಕಾರಣದಿಂದಲೂ–ಶುದ್ಧಾಶುದ್ಧಪದಾರ್ಥಗಳನ್ನು ವಿವೇಚನೆಯೇ ಇಲ್ಲದೇ ಇಂದ್ರಿಯಗಳ ಪ್ರೀತಿಗಾಗಿ ಸೇವಿಸುವ ಕಾರಣದಿಂದಲೂ–ಶುದ್ಧಾತ್ಮನಾಗಿದ್ದರೂ ಅಶುದ್ಧಾತ್ಮನಾಗಿಯೇ ಕಾಣುತ್ತಾನೆ. ವಿವೇಕಶಾಲಿಯೇ ಆಗಿದ್ದರೂ ಅಜ್ಞಾನಿಗಳ ಸಹವಾಸದಿಂದ ಅವಿವೇಕಿಯೇ ಆಗುತ್ತಾನೆ.

ತಥೈವಾಪ್ರತಿಬುದ್ಧೋಽಪಿ ವಿಜ್ಞೇಯೋ ನೃಪಸತ್ತಮ ।
ಪ್ರಕೃತೇಸ್ತ್ರಿಗುಣಾಯಾಸ್ತು ಸೇವನಾತ್ತ್ರಿಗುಣೋ ಭವೇತ್ ॥೧೧॥

ಜನಕರಾಜ! ಅದೇ ರೀತಿಯಲ್ಲಿ ಅವಿವೇಕಿಯೇ ಆಗಿದ್ದರೂ ವಿವೇಕಿಗಳ ಸಹವಾಸದಿಂದ ವಿವೇಕಿಯಾಗುತ್ತಾನೆ. ತ್ರಿಗುಣಾತ್ಮಕವಾದ ಪ್ರಕೃತಿಯ ಸಂಬಂಧದಿಂದ ನಿರ್ಗುಣನಾದ ಆತ್ಮನೂ ತ್ರಿಗುಣಮಯನೇ ಆಗುತ್ತಾನೆ."

ಇ೦೪ನೆಯ ಅಧ್ಯಾಯವು ಮುಗಿಯಿತು.

೩೦೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಕ್ಷರ-ಅಕ್ಷರ ಮತ್ತು ಪ್ರಕೃತಿ-ಪುರುಷರ ವಿಷಯದಲ್ಲಿ ಜನಕನ ಸಂದೇಹ: ವಸಿಷ್ಠರಿಂದ ಶಂಕೆಯ ಪರಿಹಾರ

ಧರ್ಮಜ! ಜನಕನು ಪ್ರಶ್ನಿಸುತ್ತಾನೆ :

ಅಕ್ಷರಕ್ಷರಯೋರೇಷ ದ್ವಯೋಃ ಸಮ್ಬನ್ಧ ಇಷ್ಯತೇ ।
ಸ್ತ್ರೀಪುಂಸೋರ್ವಾಪಿ ಭಗವನ್ನಸಮ್ಬನ್ಧಸ್ತದ್ವದುಚ್ಯತೇ ॥೧॥

“ವಸಿಷ್ಠರೇ! ಪುರುಷನಿಗೂ ಸ್ತ್ರೀಗೂ ದಾಂಪತ್ಯಸಂಬಂಧವಿರುವಂತೆ ಅಕ್ಷರಕ್ಕೂ (ಪುರುಷನಿಗೂ) ಕ್ಷರಕ್ಕೂ (ಪ್ರಕೃತಿಗೂ) ಸಂಬಂಧವಿರುವುದಾಗಿ ತಿಳಿದುಬರುತ್ತದೆ.

ಋತೇ ತು ಪುರುಷಂ ನೇಹ ಸ್ತ್ರೀ ಗರ್ಭಂ ಧಾರಯತ್ಯುತ ।
ಋತೇ ಸ್ತ್ರಿಯಂ ನ ಪುರುಷೋ ರೂಪಂ ನಿರ್ವರ್ತಯೇತ್ತಥಾ ॥೨॥

ಈ ಜಗತ್ತಿನಲ್ಲಿ ಪುರುಷನಿಲ್ಲದೇ ಸ್ತ್ರೀಯು ಗರ್ಭವನ್ನು ಧರಿಸಲಾಗುವುದಿಲ್ಲ. ಹಾಗೆಯೇ ಸ್ತ್ರೀಯಿಲ್ಲದಿದ್ದರೆ ಪುರುಷನೂ ಮತ್ತೊಂದು ಶರೀರವನ್ನು ಕಲ್ಪಿಸಲಾರನು.

ಅನ್ಯೋನ್ಯಸ್ಯಾಭಿಸಮ್ಬನ್ಧಾದನ್ಯೋನ್ಯಗುಣಸಂಶ್ರಯಾತ್ ।
ರೂಪಂ ನಿರ್ವರ್ತಯತ್ಯೇತದೇವಂ ಸರ್ವಾಸು ಯೋನಿಷು ॥೩॥

ದಂಪತಿಗಳ ಪರಸ್ಪರಸಂಬಂಧದಿಂದ–ಪರಸ್ಪರವಾದ ಗುಣಗಳ ಆಶ್ರಯದಿಂದ ಪ್ರತಿರೂಪವನ್ನು (ಮಕ್ಕಳನ್ನು) ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಎಲ್ಲ ತಿರ್ಯಙ್ಮನುಷ್ಯ-ದೇವತಾಯೋನಿಗಳಲ್ಲಿಯೂ ಇದೇ ವಿಧವಾದ ವ್ಯವಹಾರವಿದೆ.

ರತ್ಯರ್ಥಮಭಿಸಮ್ಬನ್ಧಾದನ್ಯೋನ್ಯಗುಣಸಂಶ್ರಯಾತ್ ।
ಋತೌ ನಿರ್ವರ್ತ್ಯತೇ ರೂಪಂ ತದ್ವಕ್ಷ್ಯಾಮಿ ನಿದರ್ಶನಮ್ ॥೪॥

ಯೇ ಗುಣಾಃ ಪುರುಷಸ್ಯೇಹ ಯೇ ಚ ಮಾತೃಗುಣಾಸ್ತಥಾ ।
ಅಸ್ಥಿ ಸ್ನಾಯುಶ್ಚ ಮಜ್ಜಾ ಚ ಜಾನೀಮಃ ಪಿತೃತೋ ಗುಣಾಃ ॥೫॥

ತ್ವಙ್ಮಾಂಸಂ ಶೋಣಿತಂ ಚೇತಿ ಮಾತೃಜಾನ್ಯಪಿ ಶುಶ್ರುಮ ।
ಏವಮೇತದ್ದ್ವಿಜಶ್ರೇಷ್ಠ ವೇದೇ ಶಾಸ್ತ್ರೇ ಚ ಪಠ್ಯತೇ ॥೬॥

ಸ್ತ್ರೀಯ ಋತುಸಮಯದಲ್ಲಿ (ರಜಸ್ವಲೆಯಾದ ನಂತರ ಹದಿನಾರು ದಿವಸಗಳವರೆಗೆ) ರತಿಸುಖಕ್ಕಾಗಿ ಸ್ತ್ರೀಯೊಡನೆ ಪುರುಷನ ಸಂಬಂಧವಾದಾಗ ಇಬ್ಬರ ಗುಣಗಳ ಮಿಶ್ರಣದಿಂದ ರೂಪದ ಉತ್ಪತ್ತಿಯಾಗುತ್ತದೆ. (ಮಗುವು ಹುಟ್ಟುತ್ತದೆ.) ಪುರುಷನ ಯಾವ ಗುಣಗಳು ಮತ್ತು ತಾಯಿಯ ಯಾವ ಗುಣಗಳು ಸೇರಿ ಪ್ರಜೋತ್ಪತ್ತಿಯಾಗುವುದೆಂಬುದನ್ನು ದೃಷ್ಟಾಂತವನ್ನು ಕೊಟ್ಟು ಹೇಳುತ್ತೇನೆ. ಮೂಳೆಗಳು, ನರಗಳು ಮತ್ತು ಮಜ್ಜೆ–ಇವುಗಳು ಮಗುವಿಗೆ ತಂದೆಯಿಂದ ಬಂದುವುಗಳೆಂಬುದನ್ನು ನಾವು ತಿಳಿದಿದ್ದೇವೆ. ಚರ್ಮ, ಮಾಂಸ ಮತ್ತು ರಕ್ತಗಳು ತಾಯಿಯಿಂದ ಬಂದುವುಗಳೆಂಬುದನ್ನು ಕೇಳಿದ್ದೇವೆ. ಈ ವಿಷಯಗಳು ವೇದಗಳಲ್ಲಿಯೂ–ಶಾಸ್ತ್ರಗಳಲ್ಲಿಯೂ ಉಕ್ತವಾಗಿವೆ.

ಪ್ರಮಾಣಂ ಯತ್ಸ್ವವೇದೋಕ್ತಂ ಶಾಸ್ತ್ರೋಕ್ತಂ ಯಚ್ಚ ಪಠ್ಯತೇ ।
ವೇದಶಾಸ್ತ್ರದ್ವಯಂ ಚೈವ ಪ್ರಮಾಣಂ ತತ್ಸನಾತನಮ್ ॥೭॥

ವೇದೋಕ್ತವಾದ ಯಾವ ಪ್ರಮಾಣವಿರುವುದೋ, ಶಾಸ್ತ್ರೋಕ್ತವಾದ ಯಾವ ಪ್ರಮಾಣವನ್ನು ಪಂಡಿತರು ಓದಿ ಹೇಳುವರೋ–ಅಂತಹ ವೇದ-ಶಾಸ್ತ್ರಗಳೆರಡೂ ಸನಾತನಪ್ರಮಾಣಗಳೇ ಆಗಿವೆ.

ಅನ್ಯೋನ್ಯಗುಣಸಂರೋಧಾದನ್ಯೋನ್ಯಗುಣಸಂಶ್ರಯಾತ್ ।
ಏವಮೇವಾಭಿಸಮ್ಬುದ್ಧೌ ನಿತ್ಯಂ ಪ್ರಕೃತಿಪೂರುಷೌ ।
ಪಶ್ಯಾಮಿ ಭಗವಂಸ್ತಸ್ಮಾನ್ಮೋಕ್ಷಧರ್ಮೋ ನ ವಿದ್ಯತೇ ॥೮॥

ಹೀಗೆ ಪ್ರಕೃತಿ-ಪುರುಷರಿಬ್ಬರೂ ಪರಸ್ಪರವಾಗಿ ಗುಣಗಳನ್ನು ತಡೆಗಟ್ಟುವುದರಿಂದಲೂ–ಪರಸ್ಪರವಾದ ಗುಣಗಳ ಆಶ್ರಯದಿಂದಲೂ ಸೃಷ್ಟಿ ಕಾರ್ಯವನ್ನು ಮಾಡುತ್ತಾರೆ.* ಹೀಗೆ ಪ್ರಕೃತಿ-ಪುರುಷರಿಗೆ ನಿತ್ಯಸಂಬಂಧ

* ಪುರುಷನು ಪ್ರಕೃತಿಯನ್ನು ಆಶ್ರಯಿಸಿ ತನ್ನ ಗುಣವಾದ ಆತ್ಮಾನಂದದಿಂದ

ವಿದ್ದೇ ಇರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮೋಕ್ಷಧರ್ಮವೆಂಬುದೇ ಇಲ್ಲವೆಂದು ನಾನು ಭಾವಿಸುತ್ತೇನೆ.

ಅಥವಾನನ್ತರಕೃತಂ ಕಿಂಚಿದೇವ ನಿದರ್ಶನಮ್ ।
ತನ್ಮಮಾಚಕ್ಷ್ವ ತತ್ತ್ವೇನ ಪ್ರತ್ಯಕ್ಷೋ ಹ್ಯಸಿ ಸರ್ವದಾ ॥೯॥

ಪ್ರಕೃತಿಯ ಸಂಬಂಧವಿದ್ದರೂ ಪುರುಷನಿಗೆ ಮೋಕ್ಷದ ಸಾಕ್ಷಾತ್ಕಾರ ವಿರುವ ನಿದರ್ಶನಗಳೇನಾದರೂ ಇದ್ದರೆ ಅದನ್ನೂ ಯಥಾವತ್ತಾಗಿ ನನಗೆ ಹೇಳಿರಿ. ತಮಗೆ ಸರ್ವವಿಷಯಗಳೂ ಪ್ರತ್ಯಕ್ಷವಾಗಿಯೇ ಇವೆ.

ಮೋಕ್ಷಕಾಮಾ ವಯಂ ಚಾಪಿ ಕಾಂಕ್ಷಾಮೋ ಯದನಾಮಯಮ್ ।
ಅದೇಹಮಜರಂ ನಿತ್ಯಮತೀನ್ದ್ರಿಯಮನೀಶ್ವರಮ್ ॥೧೦॥

ನಾವಾದರೋ ಮೋಕ್ಷಕಾಮರೇ ಆಗಿದ್ದೇವೆ. ನಿರ್ವಿಕಾರನಾದ, ನಿರಾಕಾರನಾದ, ಅಜರನಾದ, ಅಮರನಾದ, ನಿತ್ಯನಾದ, ಇಂದ್ರಿಯಾತೀತನಾದ, ಅನೀಶ್ವರನಾದ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲು ನಮಗೂ ಇಚ್ಛೆಯಿದೆ.”

ವಸಿಷ್ಠರು ಹೇಳುತ್ತಾರೆ :

ಯದೇತದುಕ್ತಂ ಭವತಾ ವೇದಶಾಸ್ತ್ರನಿದರ್ಶನಮ್ ।
ಏವಮೇತದ್ಯಥಾ ಚೈತನ್ನಿಗೃಹ್ಣಾತಿ ತಥಾ ಭವಾನ್ ॥೧೧॥

“ಜನಕರಾಜ! ವೇದ-ಶಾಸ್ತ್ರಗಳ ದೃಷ್ಟಾಂತವನ್ನು ಕೊಟ್ಟು ನೀನು ಯಾವ ಪ್ರಕೃತಿ-ಪುರುಷರ ವಿಷಯವನ್ನು ಹೇಳಿದೆಯೋ–ಅದು ಹಾಗೆಯೇ ಸರಿ. ನಿನ್ನ ವಿಷಯಗ್ರಹಣವು ಸಮೀಚೀನವಾಗಿಯೇ ಇದೆ.

ಧಾರ್ಯತೇ ಹಿ ತ್ವಯಾ ಗ್ರನ್ಥ ಉಭಯೋರ್ವೇದಶಾಸ್ತ್ರಯೋಃ ।
ನ ಚ ಗ್ರನ್ಥಸ್ಯ ತತ್ತ್ವಜ್ಞೋ ಯಥಾತತ್ತ್ವಂ ನರೇಶ್ವರ ॥೧೨॥

ತಡೆಯಲ್ಪಟ್ಟು ಪ್ರಕೃತಿಯ ಗುಣವಾದ ದುಃಖವನ್ನು ಹೊಂದುತ್ತಾನೆ. ಪ್ರಕೃತಿಯು ಪುರುಷನನ್ನು ಆಶ್ರಯಿಸಿ ತನ್ನ ಜಡಗುಣವನ್ನು ನಿರೋಧಿಸಿ ಪುರುಷನ ಗುಣವಾದ ಚೈತನ್ಯವನ್ನು ಪಡೆದುಕೊಳ್ಳುತ್ತದೆ.

ನರೇಶ್ವರನೇ! ವೇದ-ಶಾಸ್ತ್ರಗಳ ಸಂಬಂಧದಲ್ಲಿ ಯಾವ ಗ್ರಂಥಗಳಿವೆಯೋ–ಅವುಗಳೆಲ್ಲವನ್ನೂ ನೀನು ಹೃದ್ಗತಮಾಡಿಕೊಂಡಿರುವೆ. ಈ ವಿಷಯದಲ್ಲಿ ಸಂಶಯವೇ ಇಲ್ಲ. ಆದರೆ ಗ್ರಂಥಗಳಲ್ಲಿನ ಯಥಾವತ್ತಾದ ತತ್ತ್ವಗಳನ್ನು ನೀನು ಅರ್ಥಮಾಡಿಕೊಂಡಿರುವುದಿಲ್ಲ.

ಯೋ ಹಿ ವೇದೇ ಚ ಶಾಸ್ತ್ರೇ ಚ ಗ್ರನ್ಥಧಾರಣತತ್ಪರಃ ।
ನ ಚ ಗ್ರನ್ಥಾರ್ಥತತ್ತ್ವಜ್ಞಸ್ತಸ್ಯ ತದ್ಧಾರಣಂ ವೃಥಾ ॥೧೩॥

ಯಾವನು ವೇದ-ಶಾಸ್ತ್ರಗಳನ್ನು ಹೃದ್ಗತಮಾಡಿಕೊಳ್ಳುವುದರಲ್ಲಿಯೇ ತತ್ಪರನಾಗಿರುವನೋ–ಆದರೆ ಅದರ ಯಥಾವತ್ತಾದ ತತ್ತ್ವಗಳನ್ನು ತಿಳಿದುಕೊಂಡಿಲ್ಲವೋ–ಅಂತಹವನಿಗೆ ವೇದ-ಶಾಸ್ತ್ರಗಳ ಧಾರಣೆಯು ವ್ಯರ್ಥವೇ ಸರಿ.

ಭಾರಂ ಸ ವಹತೇ ತಸ್ಯ ಗ್ರನ್ಥಸ್ಯಾರ್ಥಂ ನ ವೇತ್ತಿ ಯಃ ।
ಯಸ್ತು ಗ್ರನ್ಥಾರ್ಥತತ್ತ್ವಜ್ಞೋ ನಾಸ್ಯ ಗ್ರನ್ಥಾಗಮೋ ವೃಥಾ ॥೧೪॥

ಯಾವನು ಗ್ರಂಥದ ಅರ್ಥವನ್ನು ತಿಳಿದುಕೊಂಡಿಲ್ಲವೋ ಕೇವಲ ಬಾಯಿಪಾಠವನ್ನು ಮಾಡಿದ್ದಾನೋ–ಅಂತಹವನು ಅದರ ಭಾರವನ್ನು ಮಾತ್ರವೇ ಹೊತ್ತಿದ್ದಾನೆ. ಅವನಿಗೆ ಅದರಿಂದ ಯಾವ ಪ್ರಯೋಜನವೂ ಇಲ್ಲ. ಯಾವನು ಗ್ರಂಥಗಳ ಅರ್ಥವನ್ನು ಯಥಾವತ್ತಾಗಿ ತಿಳಿದಿರುವನೋ ಅಂತಹವನಿಗೆ ಗ್ರಂಥಗಳನ್ನು ಹೃದ್ಗತಮಾಡಿಕೊಂಡಿರುವುದು ವ್ಯರ್ಥವಾಗುವುದಿಲ್ಲ.

ಗ್ರನ್ಥಸ್ಯಾರ್ಥಸ್ಯ ಪೃಷ್ಟಃ ಸಂಸ್ತಾದ್ಯಶೋ ವಕ್ತುಮರ್ಹತಿ ।
ಯಥಾ ತತ್ತ್ವಾಭಿಗಮನಾದರ್ಥಂ ತಸ್ಯ ಸ ವಿನ್ದತಿ ॥೧೫॥

ಅಂತಹ ವಿದ್ವಾಂಸನೇ (ತತ್ತ್ವಜ್ಞನೇ) ಗ್ರಂಥಾರ್ಥವನ್ನು ಪ್ರಶ್ನಿಸಿದರೆ ಸರಿಯಾದ ತತ್ತ್ವವನ್ನು ತಿಳಿಸಬಲ್ಲನು. ಏಕೆಂದರೆ ಅವನು ಗ್ರಂಥಾರ್ಥವನ್ನು ಯಥಾವತ್ತಾಗಿ ತಿಳಿದಿರುತ್ತಾನೆ.

ನ ಯಃ ಸಂಸತ್ಸು ಕಥಯೇದ್ಗ್ರನ್ಥಾರ್ಥಂ ಸ್ಥೂಲಬುದ್ಧಿಮಾನ್ ।
ಸ ಕಥಂ ಮನ್ದವಿಜ್ಞಾನೋ ಗ್ರನ್ಥಂ ವಕ್ಷ್ಯತಿ ನಿರ್ಣಯಾತ್ ॥೧೬॥

ಯಾವನು ಸ್ಥೂಲವಾದ ಬುದ್ಧಿಯುಳ್ಳವನೋ ಅಂತಹ ಮನುಷ್ಯನು

ವಿದ್ವಾಂಸರ ಸಭೆಯಲ್ಲಿ ಗ್ರಂಥದ ಅರ್ಥವನ್ನು ಹೇಳಲಾರನು. ಅಲ್ಪಜ್ಞನಾದ ಆ ವ್ಯಕ್ತಿಯು ತನಗೇ ತಿಳಿಯದ ಗ್ರಂಥನಿರ್ಣಯವನ್ನು ಹೇಗೆ ತಾನೇ ಹೇಳುವನು?

ನಿರ್ಣಯಂ ಚಾಪಿ ಛಿದ್ರಾತ್ಮಾ ನ ತಂ ವಕ್ಷ್ಯತಿ ತತ್ತ್ವತಃ ।
ಸೋಪಹಾಸಾತ್ಮತಾಮೇತಿ ಯಸ್ಮಾಚ್ಚೈವಾತ್ಮವಾನಪಿ ॥೧೭॥

ಯಾವನ ಬುದ್ಧಿಯು ಶಾಸ್ತ್ರಜ್ಞಾನದಿಂದ ಶೂನ್ಯವಾಗಿರುವುದೋ ಅವನು ಕೂಡ ಯಥಾವತ್ತಾಗಿ ಶಾಸ್ತ್ರವನ್ನು ನಿರ್ಣಯಿಸಿ ಹೇಳಲಾರನು. ಬುದ್ಧಿವಂತನೇ ಆಗಿದ್ದರೂ ಶಾಸ್ತ್ರಜ್ಞಾನವಿಲ್ಲದವನು ಶಾಸ್ತ್ರವನ್ನು ನಿರ್ಣಯಿಸಿ ಹೇಳಲು ಹೋದರೆ ಜನರ ಉಪಹಾಸಕ್ಕೆ ಪಾತ್ರನಾಗುತ್ತಾನೆ.

ತಸ್ಮಾತ್ತ್ವಂ ಶೃಣು ರಾಜೇನ್ದ್ರ ಯಥೈತದನುದೃಶ್ಯತೇ ।
ಯಾಥಾತಥ್ಯೇನ ಸಾಂಖ್ಯೇಷು ಯೋಗೇಷು ಚ ಮಹಾತ್ಮಸು ॥೧೮॥

ರಾಜೇಂದ್ರ! ಆದುದರಿಂದ ಸಾಂಖ್ಯ ಮತ್ತು ಯೋಗಗಳನ್ನು ತಿಳಿದಿರುವ ಮಹಾತ್ಮರಲ್ಲಿ ಮೋಕ್ಷದ ಸಂಬಂಧವಾಗಿ ಎಂತಹ ಅಭಿಪ್ರಾಯವಿರುವುದೆಂಬುದನ್ನು ಯಥಾವತ್ತಾಗಿ ತಿಳಿಸುವೆನು, ಕೇಳು.

ಯದೇವ ಯೋಗಾಃ ಪಶ್ಯನ್ತಿ ಸಾಂಖ್ಯೈಸ್ತದನುಗಮ್ಯತೇ ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಬುದ್ಧಿಮಾನ್ ॥

ಯೋಗಮಾರ್ಗವನ್ನು ಆಶ್ರಯಿಸಿರುವವರು ಯಾವುದನ್ನು ಸಾಕ್ಷಾತ್ಕರಿಸಿಕೊಳ್ಳುವರೋ–ಸಾಂಖ್ಯಯೋಗಿಗಳೂ ಅದನ್ನೇ ಸಾಕ್ಷಾತ್ಕರಿಸಿಕೊಳ್ಳುವರು. ಫಲದ ದೃಷ್ಟಿಯಿಂದ ಯೋಗ-ಸಾಂಖ್ಯಗಳೆರಡೂ ಒಂದೇ ಎಂದು ಯಾವನು ಕಂಡುಕೊಂಡಿರುವನೋ–ಅವನೇ ಬುದ್ಧಿವಂತನು.

ತ್ವಙ್ಮಾಂಸಂ ರುಧಿರಂ ಮೇದಃ ಪಿತ್ತಂ ಮಜ್ಜಾ ಚ ಸ್ನಾಯು ಚ ।
ಅಥ ಚೈನ್ದ್ರಿಯಕಂ ತಾತ ತದ್ಭವಾನಿದಮಾಹ ಮಾಮ್ ॥೨೦॥

ಮಗುವಿನ ಶರೀರದಲ್ಲಿರುವ ಚರ್ಮ, ಮಾಂಸ, ರಕ್ತ, ಮೇದಸ್ಸು ಪಿತ್ತ, ಮಜ್ಜೆ, ಸ್ನಾಯು, ಇಂದ್ರಿಯಸಮುದಾಯ–ಇವೆಲ್ಲವೂ ಮಾತಾ-ಪಿತೃಗಳ ಸಂಬಂಧದಿಂದ ಬಂದುವುಗಳೆಂದು ನೀನು ಹೇಳಿದೆ.

ದ್ರವ್ಯಾದ್ದ್ರವ್ಯಸ್ಯ ನಿರ್ವೃತ್ತಿರಿನ್ದ್ರಿಯಾದಿನ್ದ್ರಿಯಂ ತಥಾ ।
ದೇಹಾದ್ದೇಹಮವಾಪ್ನೋತಿ ಬೀಜಾದ್ಬೀಜಂ ತಥೈವ ಚ ॥೨೧॥

ಯಾವ ರೀತಿಯಲ್ಲಿ ಬೀಜದಿಂದ ಬೀಜದ ಉತ್ಪತ್ತಿಯಾಗುವುದೋ ಅದೇ ರೀತಿಯಲ್ಲಿ ದ್ರವ್ಯದಿಂದ ದ್ರವ್ಯದ ಉತ್ಪತ್ತಿಯೂ, ಇಂದ್ರಿಯದಿಂದ ಇಂದ್ರಿಯದ ಉತ್ಪತ್ತಿಯೂ, ದೇಹದಿಂದ ದೇಹದ ಉತ್ಪತ್ತಿಯೂ ಆಗುತ್ತದೆ.

ನಿರಿನ್ದ್ರಿಯಸ್ಯಾಬೀಜಸ್ಯ ನಿರ್ದ್ರವ್ಯಸ್ಯಾಪ್ಯದೇಹಿನಃ ।
ಕಥಂ ಗುಣಾ ಭವಿಷ್ಯನ್ತಿ ನಿರ್ಗುಣತ್ವಾನ್ಮಹಾತ್ಮನಃ ॥೨೨॥

ಆದರೆ ಪರಮಾತ್ಮನು ಇಂದ್ರಿಯ, ಬೀಜ, ದ್ರವ್ಯ ಮತ್ತು ದೇಹಗಳಿಂದ ರಹಿತನಾಗಿದ್ದಾನೆ. ಮೇಲಾಗಿ ನಿರ್ಗುಣನೂ ಆಗಿದ್ದಾನೆ. ಅಂತಹ ಆತ್ಮನಲ್ಲಿ ಗುಣಗಳು ಹೇಗೆ ಉಂಟಾಗುತ್ತವೆ?

ಗುಣಾ ಗುಣೇಷು ಜಾಯನ್ತೇ ತತ್ರೈವ ನಿವಿಶನ್ತಿ ಚ ।
ಏವಂ ಗುಣಾಃ ಪ್ರಕೃತಿತೋ ಜಾಯನ್ತೇ ನಿವಿಶನ್ತಿ ಚ ॥೨೩॥

ಶಬ್ದ-ಸ್ಪರ್ಶಾದಿಗುಣಗಳು ಮೂಲಪ್ರಕೃತಿಯ ಗುಣಗಳಾದ ಆಕಾಶಾದಿ ಗಳಲ್ಲಿ ಹುಟ್ಟುತ್ತದೆ. ಪುನಃ ಅಲ್ಲಿಯೇ ಲೀನವಾಗುತ್ತವೆ. ಹಾಗೆಯೇ ಸತ್ತ್ವಾದಿ ಗುಣಗಳು ಪ್ರಕೃತಿಯಿಂದ (ಮಾಯೆಯಿಂದ) ಹುಟ್ಟುತ್ತವೆ. ಪುನಃ ಅಲ್ಲಿಯೇ ಲೀನವಾಗುತ್ತದೆ.

ತ್ವಙ್ಮಾಂಸಂ ರುಧಿರಂ ಮೇದಃ ಪಿತ್ತಂ ಮಜ್ಜಾಸ್ಥಿ ಸ್ನಾಯು ಚ ।
ಅಷ್ಟೌ ತಾನ್ಯಥ ಶುಕ್ರೇಣ ಜಾನೀಹಿ ಪ್ರಾಕೃತಾನಿ ವೈ ॥೨೪॥

ಚರ್ಮ, ಮಾಂಸ, ರಕ್ತ, ಮೇದಸ್ಸು, ಪಿತ್ತ, ಮಜ್ಜೆ, ಮೂಳೆ, ನರ–ಈ ಎಂಟು ಪದಾರ್ಥಗಳೂ ವೀರ್ಯದಿಂದ ಉತ್ಪನ್ನವಾಗುತ್ತವೆ. ಆದುದರಿಂದ ಇವುಗಳೆಲ್ಲವೂ ಪ್ರಕೃತಿಗೆ ಸಂಬಂಧಿಸಿದುವುಗಳು ಎಂದು ತಿಳಿ.

ಪುಮಾಂಶ್ಚೈವಾಪುಮಾಂಶ್ಚೈವ ತ್ರೈಲಿಙ್ಗ್ಯಂ ಪ್ರಾಕೃತಂ ಸ್ಮೃತಮ್ ।
ನ ವಾಪುಮಾನ್ಪುಮಾಂಶ್ಚೈವ ಸ ಲಿಙ್ಗೇತ್ಯಭಿಧೀಯತೇ ॥೨೫॥

ವ್ಯವಹಾರದಲ್ಲಿರುವ ಪುರುಷ ಮತ್ತು ಅಪುರುಷ (ಪ್ರಕೃತಿ) ಇವು ಗಳನ್ನು ವ್ಯಕ್ತಪಡಿಸುವ ಸಾತ್ತ್ವಿಕ, ರಾಜಸ, ತಾಮಸಗಳೆಂಬ ತ್ರಿಗುಣಗಳು

ಇವೆಲ್ಲವೂ ಪ್ರಾಕೃತಗಳೇ ಆಗಿವೆ. ಆದರೆ ಪುರುಷನೂ ಅಲ್ಲದ ಅಪುರುಷನೂ (ಪ್ರಕೃತಿಯೂ) ಅಲ್ಲದ ಶುದ್ಧಾತ್ಮನಾದ ಪುರುಷನು ಲಿಂಗೀ ಎಂದು (ಸೂಕ್ಷ್ಮಾತ್ಮನೆಂದು) ಕರೆಯಲ್ಪಡುತ್ತಾನೆ.

ಅಲಿಙ್ಗಾತ್ಪ್ರಕೃತಿರ್ಲಿಙ್ಗೈರುಪಾಲಭ್ಯತಿ ಸಾತ್ಮಜೈಃ ।
ಯಥಾ ಪುಷ್ಪಫಲೈರ್ನಿತ್ಯಮೃತವೋಽಮೂರ್ತಯಸ್ತಥಾ ॥೨೬॥

ಯಾವ ರೀತಿಯಲ್ಲಿ ವೃಕ್ಷಗಳಲ್ಲಿ ಪುಷ್ಪ-ಫಲಗಳಾಗುವಾಗ ಆಯಾ ಕಾಲದ ಋತುಧರ್ಮವು ಯಾವುದೆಂಬುದನ್ನು ಊಹಿಸಲು ಸಾಧ್ಯವಾಗುವುದೋ–ಹಾಗೆಯೇ ನಿರಾಕಾರಪುರುಷನ ಸಂಯೋಗವನ್ನು ಹೊಂದಿ ತನ್ನ ಮೂಲಕವಾಗಿ ಉತ್ಪನ್ನಗೊಳಿಸುವ ಮಹತ್ತತ್ತ್ವವೇ ಮೊದಲಾದ ಚಿಹ್ನೆಗಳಿಂದ 'ಪ್ರಕೃತಿ' – ಎಂಬುದು ಇರುವುದೆಂದು ಊಹಿಸಲು ಸಾಧ್ಯವಾಗುತ್ತದೆ.

ಏವಮಪ್ಯನುಮಾನೇನ ಹ್ಯಲಿಙ್ಗಮುಪಲಭ್ಯತೇ ।
ಪಞ್ಚವಿಂಶತಿಮಸ್ತಾತ ಲಿಙ್ಗೇಷು ನಿಯತಾತ್ಮಕಃ ॥೨೭॥

ಹೀಗೆ ಎಲ್ಲ ವಿಧವಾದ ಚಿಹ್ನೆಗಳಿಂದಲೂ ಭಿನ್ನನಾದ ನಿರಾಕಾರನಾದ ಆತ್ಮನ ಆಸ್ತಿತ್ವವನ್ನೂ ಅನುಮಾನಪ್ರಮಾಣದಿಂದ ಸಿದ್ಧಪಡಿಸಬಹುದಾಗಿದೆ. ಇಪ್ಪತ್ತೈದನೆಯ ತತ್ತ್ವನಾದ ಪರಮಾತ್ಮನು ಎಲ್ಲ ಶರೀರಗಳಲ್ಲಿಯೂ ನಿಯತನಾಗಿದ್ದಾನೆ.

ಅನಾದಿನಿಧನೋಽನನ್ತಃ ಸರ್ವದರ್ಶೀ ನಿರಾಮಯಃ ।
ಕೇವಲಂ ತ್ವಭಿಮಾನಿತ್ವಾದ್ಗುಣೇಷು ಗುಣ ಉಚ್ಯತೇ ॥೨೮॥

ಹುಟ್ಟು-ಸಾವುಗಳಿಲ್ಲದ, ಅನಂತನಾದ, ಸರ್ವದರ್ಶಿಯಾದ, ನಿರ್ವಿಕಾರನಾದ ಪರಮಾತ್ಮನು ಸತ್ತ್ವಾದಿಗುಣಗಳಲ್ಲಿ ಕೇವಲ ಅಭಿಮಾನವುಳ್ಳವನಾಗಿರುವುದರಿಂದಲೇ ಅವನನ್ನು ಗುಣಸ್ವರೂಪನೆಂದು ಹೇಳುತ್ತಾರೆ.

ಗುಣಾ ಗುಣವತಃ ಸನ್ತಿ ನಿರ್ಗುಣಸ್ಯ ಕುತೋ ಗುಣಾಃ ।
ತಸ್ಮಾದೇವಂ ವಿಜಾನನ್ತಿ ಯೇ ಜನಾ ಗುಣದರ್ಶಿನಃ ॥೨೯॥

ಯದಾ ತ್ವೇಷ ಗುಣಾನೇತಾನ್ಪ್ರಾಕೃತಾನಭಿಮನ್ಯತೇ ।
ತದಾ ಸ ಗುಣಹಾನ್ಯೈ ತಂ ಪರಮೇವಾನುಪಶ್ಯತಿ ॥೩೦॥

ಗುಣವಂತನಲ್ಲಿ ಗುಣಗಳಿರುವುದು ಸ್ವಾಭಾವಿಕವೇ ಆಗಿದೆ. ಆದರೆ ನಿರ್ಗುಣನಾದ ಆತ್ಮನಲ್ಲಿ ಗುಣಗಳು ಹೇಗಿರುತ್ತವೆ? ಆದುದರಿಂದ ಗುಣ ದರ್ಶಿಗಳಾದ ಜನರು ಈ ವಿಷಯವನ್ನು ಹೀಗೆ ತಿಳಿದುಕೊಂಡಿರುತ್ತಾರೆ. ಯಾವಾಗ ಚೇತನನು ಈ ಗುಣಗಳನ್ನು ಪ್ರಕೃತಿಗೆ ಸಂಬಂಧಿಸಿದುವುಗಳೆಂದು ಭಾವಿಸುವನೋ (ತನಗೆ ಸಂಬಂಧಿಸಿರುವುದೆಂಬ ಅಭಿಮಾನವನ್ನು ತೊರೆಯುವನೋ)–ಆಗ ಆ ಚೇತನನು ದೇಹಾಭಿಮಾನವನ್ನು ತೊರೆದು ವಿಶುದ್ಧವಾದ ಪರಮಾತ್ಮಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಯತ್ತದ್ಬುದ್ಧೇಃ ಪರಂ ಪ್ರಾಹುಃ ಸಾಂಖ್ಯಾ ಯೋಗಾಶ್ಚ ಸರ್ವಶಃ ।
ಬುಧ್ಯಮಾನಂ ಮಹಾಪ್ರಾಜ್ಞಮಬುದ್ಧಪರಿವರ್ಜನಾತ್ ॥೩೧॥

ಅಪ್ರಬುದ್ಧಮಥಾವ್ಯಕ್ತಂ ಸಗುಣಂ ಪ್ರಾಹುರೀಶ್ವರಮ್ ।
ನಿರ್ಗುಣಂ ಚೇಶ್ವರಂ ನಿತ್ಯಮಧಿಷ್ಠಾತಾರಮೇವ ಚ ॥೩೨॥

ಪ್ರಕೃತೇಶ್ಚ ಗುಣಾನಾಂ ಚ ಪಞ್ಚವಿಂಶತಿಕಂ ಬುಧಾಃ ।
ಸಾಂಖ್ಯಯೋಗೇ ಚ ಕುಶಲಾ ಬುಧ್ಯನ್ತೇ ಪರಮೈಷಿಣಃ ॥೩೩॥

ಸಾಂಖ್ಯರು ಮತ್ತು ಯೋಗಿಗಳು ಯಾವ ಪರಬ್ರಹ್ಮವನ್ನು ಬುದ್ಧಿಗೂ ಆಚೆಯದೆಂದು ಹೇಳುವರೋ – ಅಂತಹ ಅಜ್ಞಾನದ ಪರಿತ್ಯಾಗದಿಂದ ತಿಳಿಯಲ್ಪಡುವ, ಮಹಾಪ್ರಾಜ್ಞನಾದ, ಅಜ್ಞಾತನಾದ, ಅವ್ಯಕ್ತನಾದ, ಈಶ್ವರನನ್ನು ಸಗುಣನೆಂದೂ ಹೇಳುತ್ತಾರೆ ; ನಿರ್ಗುಣನೆಂದೂ ಹೇಳುತ್ತಾರೆ. ನಿತ್ಯವೆಂದೂ ಸಕಲಕಾರ್ಯಗಳ ನಿರ್ಮಾತೃವೆಂದೂ ಹೇಳುತ್ತಾರೆ. ಪ್ರಕೃತಿಯೂ ಮತ್ತು ಅದರ ಗುಣಗಳೂ ಸೇರಿ ಇಪ್ಪತ್ತುನಾಲ್ಕು ತತ್ತ್ವಗಳಿಗೂ ಅತೀತನಾದ ಇಪ್ಪತ್ತೈದನೆಯ ತತ್ತ್ವವೆಂದು ಸಾಂಖ್ಯ ಮತ್ತು ಯೋಗಶಾಸ್ತ್ರಗಳಲ್ಲಿ ಕುಶಲರಾದ ಪರತತ್ತ್ವವನ್ನು ತಿಳಿಯಲು ಇಚ್ಛಿಸಿರುವ ವಿದ್ವಾಂಸರು ತಿಳಿಯುತ್ತಾರೆ.

(ಅಪ್ರಬುದ್ಧಮಥ ವ್ಯಕ್ತಮಗುಣಂ–ಎಂದು ನೀಲಕಂಠರ ಪಾಠ- ಅಗುಣಃ ಎಂಬುದಕ್ಕೆ **ಗುಣೇಭ್ಯಃ ಅನ್ಯಃ** = ಗುಣಗಳಿಗಿಂತ ಬೇರೆಯಾದವನು – ಎಂದೂ ನಿರ್ಗುಣಃ ಎಂಬುದಕ್ಕೆ **ಗುಣಸಮ್ಬನ್ಧಶೂನ್ಯಃ**

ಗುಣಗಳ ಸಂಬಂಧದಿಂದ ಶೂನ್ಯನಾದವನು–ಎಂದೂ ವ್ಯಾಖ್ಯಾನಿಸಿದ್ದಾರೆ.)

ಯದಾ ಪ್ರಬುದ್ಧಾ ಹ್ಯವ್ಯಕ್ತಮವಸ್ಥಾಜನ್ಮಭೀರವಃ ।
ಬುಧ್ಯಮಾನಂ ಪ್ರಬುಧ್ಯನ್ತಿ ಗಮಯನ್ತಿ ಸಮಂ ತದಾ ॥೩೪॥

ಯಾವ ಸಮಯದಲ್ಲಿ ಬಾಲ್ಯ, ಯೌವನ, ಮುಪ್ಪು–ಇವುಗಳ ವಿಷಯದಲ್ಲಿ ಮತ್ತು ಹುಟ್ಟು-ಸಾವುಗಳ ವಿಷಯದಲ್ಲಿ ಭಯಗೊಂಡ ವಿವೇಕಿಗಳು–ತಿಳಿಯಲ್ಪಡಬೇಕಾಗಿರುವ ಅವ್ಯಕ್ತನಾದ ಪರಬ್ರಹ್ಮವನ್ನು ತಿಳಿಯುವರೋ–ಆಗ ಅವರು ಪರಬ್ರಹ್ಮದೊಡನೆ ಸಾಮ್ಯವನ್ನು ಹೊಂದುತ್ತಾರೆ.

ಏತನ್ನಿದರ್ಶನಂ ಸಮ್ಯಗಸಮ್ಯಗನಿದರ್ಶನಮ್ ।
ಬುಧ್ಯಮಾನಾಪ್ರಬುದ್ಧಾನಾಂ ಪೃಥಕ್ಪೃಥಗರಿಂದಮ ॥೩೫॥

ಅರಿಂದಮನೇ! ಸಾಂಖ್ಯಯೋಗದ ಈ ಜ್ಞಾನವು ಯುಕ್ತಿಯುಕ್ತವಾಗಿರುವುದರಿಂದ ಉತ್ತಮವಾಗಿದೆ. ಇದಕ್ಕೆ ವಿಪರೀತವಾದ ಅಜ್ಞಾನಿಗಳ ಯಾವ ಅಪ್ರಾಮಾಣಿಕವಾದ ಜ್ಞಾನವಿರುವುದೋ–ಅದು ಯುಕ್ತಿಯುಕ್ತವಾಗಿಲ್ಲದೇ ಇರುವುದರಿಂದ ಸಮೀಚೀನವಲ್ಲ. ಪೂರ್ವೋಕ್ತವಾದ ಸಾಂಖ್ಯಯೋಗದ ಜ್ಞಾನಕ್ಕಿಂತಲೂ ಅದು ಬೇರೆಯದೇ ಆಗಿದೆ.

ಪರಸ್ಪರೇಣೈತದುಕ್ತಂ ಕ್ಷರಾಕ್ಷರನಿದರ್ಶನಮ್ ।
ಏಕತ್ವಮಕ್ಷರಂ ಪ್ರಾಹುರ್ನಾನಾತ್ವಂ ಕ್ಷರಮುಚ್ಯತೇ ॥೩೬॥

ಕ್ಷರ ಮತ್ತು ಅಕ್ಷರತತ್ತ್ವಗಳನ್ನು ಪ್ರತಿಪಾದಿಸುವ ಉದಾಹರಣೆಯನ್ನು ನಾನು ನಿನಗೆ ಹೇಳಿದ್ದೇನೆ. ಪರಸ್ಪರವಾಗಿ ಅಕ್ಷರಕ್ಕೂ ಮತ್ತು ಕ್ಷರಕ್ಕೂ ಇರುವ ವ್ಯತ್ಯಾಸವನ್ನು ನಿನಗೆ ಹೇಳುತ್ತೇನೆ. ಏಕರೀತಿಯಲ್ಲಿ ಸದಾಕಾಲದಲ್ಲಿಯೂ ಇರುವ ಪುರುಷತತ್ತ್ವಕ್ಕೆ ಅಕ್ಷರವೆಂದು ಹೇಳುತ್ತಾರೆ. ನಾನಾಪ್ರಕಾರವಾಗಿರುವ, ಕ್ಷಣ-ಕ್ಷಣಕ್ಕೂ ವಿಕಾರಗೊಳ್ಳುವ ಪ್ರಕೃತಿತತ್ತ್ವವನ್ನು ಕ್ಷರವೆನ್ನುತ್ತಾರೆ.

ಪಞ್ಚವಿಂಶತಿನಿಷ್ಠೋಽಯಂ ಸದಾ ಸಮ್ಯಕ್ಪ್ರವರ್ತತೇ ।
ಏಕತ್ವಂ ದರ್ಶನಂ ಚಾಸ್ಯ ನಾನಾತ್ವಂ ಚಾಪ್ಯದರ್ಶನಮ್ ॥೩೭॥

ಯಾವಾಗ ಮನುಷ್ಯನು ಇಪ್ಪತ್ತೈದನೆಯ ತತ್ತ್ವದ ಮೇಲೆಯೇ ನಿಷ್ಠೆಯುಳ್ಳವನಾಗಿರುವನೋ–ಆಗ ಅವನು ಅಧ್ಯಾತ್ಮಮಾರ್ಗದಲ್ಲಿ ಚೆನ್ನಾಗಿ ಅಭಿವೃದ್ಧಿಯನ್ನು ಹೊಂದುತ್ತಾನೆ. ಏಕತ್ವದ ತಿಳಿವಳಿಕೆಯೇ ಜ್ಞಾನ. ನಾನಾತ್ವದ ತಿಳಿವಳಿಕೆಯೇ ಅಜ್ಞಾನ.

ತತ್ತ್ವನಿಸ್ತತ್ತ್ವಯೋರೇತತ್ಪೃಥಗೇವ ನಿದರ್ಶನಮ್ ।
ಪಞ್ಚವಿಂಶತಿಸರ್ಗಂ ತು ತತ್ತ್ವಮಾಹುರ್ಮನೀಷಿಣಃ ॥೩೮॥

ನಿಸ್ತತ್ತ್ವಂ ಪಞ್ಚವಿಂಶಸ್ಯ ಪರಮಾಹುರ್ನಿದರ್ಶನಮ್ ।
ಸರ್ಗಸ್ಯ ವರ್ಗಮಾಧಾರಂ ತತ್ತ್ವಂ ತತ್ತ್ವಾತ್ಸನಾತನಮ್ ॥೩೯॥

ತತ್ತ್ವ (ಕ್ಷರ), ನಿಸ್ತತ್ತ್ವ (ಅಕ್ಷರ)–ಇವುಗಳ ಲಕ್ಷಣಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿಯೇ ದೃಷ್ಟಾಂತದಿಂದ ತಿಳಿಯಬೇಕು. ಕೆಲವರು ವಿದ್ವಾಂಸರು ಇಪ್ಪತ್ತೈದು ಗುಣಗಳನ್ನು ಇಪ್ಪತ್ತೈದು ತತ್ತ್ವಗಳೆಂದು ಹೇಳುತ್ತಾರೆ. ಮತ್ತೆ ಕೆಲವರು ಇಪ್ಪತ್ತೈದನೆಯದನ್ನು (ಚೇತನನನ್ನು) ನಿಸ್ತತ್ತ್ವನೆಂದೂ (ತತ್ತ್ವಗಳಿಂದ ಭಿನ್ನನಾದವನೆಂದೂ), ಶ್ರೇಷ್ಠನಾದವನೆಂದೂ ಹೇಳುತ್ತಾರೆ. ಸತ್ತ್ವಾದಿ ಗುಣತ್ರಯಕ್ಕೆ ಪಂಚವರ್ಗಗಳೇ ಆಧಾರಭೂತವಾಗಿವೆ. ಹೀಗೆ ತತ್ತ್ವಗಳ ವಿಮರ್ಶೆಯಿಂದ ಸನಾತನವಾದ ಬ್ರಹ್ಮತತ್ತ್ವವು ಪ್ರತಿಪಾದಿತವಾಗಿದೆ.”

ಇಂ೫ನೆಯ ಅಧ್ಯಾಯವು ಮುಗಿಯಿತು.

ಇಂ೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಯೋಗ ಮತ್ತು ಸಾಂಖ್ಯಗಳ ಸ್ವರೂಪವರ್ಣನೆ : ಆತ್ಮಜ್ಞಾನದಿಂದ ಮುಕ್ತಿ

ಜನಕನು ಪ್ರಶ್ನಿಸುತ್ತಾನೆ :

ನಾನಾತ್ವೈಕತ್ವಮಿತ್ಯುಕ್ತಂ ತ್ವಯೈತದೃಷಿಸತ್ತಮ ।
ಪಶ್ಯಾಮ್ಯೇತದ್ಧಿ ಸಂದಿಗ್ಧಮೇತಯೋರ್ವೈ ನಿದರ್ಶನಮ್ ॥೧॥

“ಮಹರ್ಷಿಗಳೇ! ತಾವು ಕ್ಷರಕ್ಕೆ ನಾನಾತ್ವವನ್ನೂ–ಅಕ್ಷರಕ್ಕೆ ಏಕತ್ವ

ವನ್ನೂ ಹೇಳಿದಿರಿ. ಆದರೆ ಈ ಎರಡು ತತ್ತ್ವಗಳಿಗೂ ಕೊಟ್ಟಿರುವ ದೃಷ್ಟಾಂತ ಗಳಲ್ಲಿ ನನಗೆ ಸಂದೇಹವುಂಟಾಗಿದೆ.

ತಥಾಬುದ್ಧಪ್ರಬುದ್ಧಾಭ್ಯಾಂ ಬುಧ್ಯಮಾನಸ್ಯ ಚಾನಘ ।
ಸ್ಥೂಲಬುದ್ಧ್ಯಾ ನ ಪಶ್ಯಾಮಿ ತತ್ತ್ವಮೇತನ್ನ ಸಂಶಯಃ ॥೨॥

ಅಜ್ಞಾನಿಗಳಾದವರು ಬಹುರೂಪದಿಂದಲೂ–ಜ್ಞಾನಿಗಳಾದವರು ಏಕ ರೂಪದಿಂದಲೂ ಕಾಣುವ ಪರಮಾತ್ಮನ ತತ್ತ್ವವನ್ನು ನಾನು ಸ್ಥೂಲಬುದ್ಧಿ ಯುಳ್ಳವನಾದುದರಿಂದ ತಿಳಿದುಕೊಂಡಿಲ್ಲ. ಈ ವಿಷಯದಲ್ಲಿ ಸಂದೇಹವೇ ಇಲ್ಲ.

ಅಕ್ಷರಕ್ಷರಯೋರುಕ್ತಂ ತ್ವಯಾ ಯದಪಿ ಕಾರಣಮ್ ।
ತದಪ್ಯಸ್ಥಿರಬುದ್ಧಿತ್ವಾತ್ಪ್ರಣಷ್ಟಮಿವ ಮೇಽನಘ ॥೩॥

ನಿಷ್ಪಾಪರೇ! ತಾವು ಕ್ಷರ ಮತ್ತು ಅಕ್ಷರಗಳ ಸ್ವರೂಪವನ್ನು ತಿಳಿಸಲು ಅನೇಕಪ್ರಕಾರವಾದ ಉಕ್ತಿಗಳನ್ನೇನೋ ಹೇಳಿರುವಿರಿ. ಆದರೆ ನನ್ನ ಬುದ್ಧಿಯು ಅಸ್ಥಿರವಾದುದರಿಂದ ತಾವು ಹೇಳಿದ ಮಾತುಗಳೆಲ್ಲವೂ ನನ್ನ ಸ್ಮರಣೆಯಿಂದ ನಷ್ಟವಾಗಿರುವಂತೆಯೇ ಕಾಣುತ್ತದೆ.

ತದೇತಚ್ಛ್ರೋತುಮಿಚ್ಛಾಮಿ ನಾನಾತ್ವೈಕತ್ವದರ್ಶನಮ್ ।
ಬುದ್ಧಂ ಚಾಪ್ರತಿಬುದ್ಧಂ ಚ ಬುಧ್ಯಮಾನಂ ಚ ತತ್ತ್ವತಃ ॥೪॥

ಆದುದರಿಂದ ನಾನು ಪುನಃ ಈ ನಾನಾತ್ವ ಮತ್ತು ಏಕತ್ವರೂಪ ದರ್ಶನಗಳ ವಿಷಯವನ್ನು ತಮ್ಮಿಂದ ಕೇಳಬೇಕೆಂದಿರುತ್ತೇನೆ. ಬುದ್ಧ(ಜ್ಞಾನೀ), ಅಪ್ರತಿಬುದ್ಧ (ಅಜ್ಞಾನೀ), ಬುಧ್ಯಮಾನ (ಜ್ಞೇಯ)–ಇವುಗಳ ವಿಷಯವಾಗಿ ಯಥಾವತ್ತಾಗಿ ತಿಳಿಯಬೇಕೆಂದಿರುತ್ತೇನೆ.

ವಿದ್ಯಾವಿದ್ಯೇ ಚ ಭಗವನ್ನಕ್ಷರಂ ಕ್ಷರಮೇವ ಚ ।
ಸಾಂಖ್ಯಂ ಯೋಗಂ ಚ ಕಾರ್ತ್ಸ್ನ್ಯೇನ ಪೃಥಕ್ಚೈವಾಪೃಥಕ್ಚ ಹ ॥೫॥

ಪೂಜ್ಯರೇ! ನಾನು ವಿದ್ಯೆ-ಅವಿದ್ಯೆ, ಅಕ್ಷರ-ಕ್ಷರ, ಸಾಂಖ್ಯ ಮತ್ತು ಯೋಗ–ಇವುಗಳ ವಿಷಯವನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಪೂರ್ಣರೂಪ ದಿಂದ ತಿಳಿದುಕೊಳ್ಳಬೇಕೆಂದಿರುತ್ತೇನೆ.”

ವಸಿಷ್ಠರು ಹೇಳುತ್ತಾರೆ :

ಹನ್ತ ತೇ ಸಮ್ಪ್ರವಕ್ಷ್ಯಾಮಿ ಯದೇತದನುಪೃಚ್ಛಸಿ ।
ಯೋಗಕೃತ್ಯಂ ಮಹಾರಾಜ ಪೃಥಗೇವ ಶೃಣುಷ್ವ ಮೇ ॥೬॥

"ಮಹಾರಾಜ! ನೀನು ಯಾವ ಯಾವ ಪ್ರಶ್ನೆಗಳನ್ನು ಕೇಳಿರುವೆಯೋ–ಅವುಗಳೆಲ್ಲಕ್ಕೂ ಸಮಂಜಸವಾಗಿಯೇ ಉತ್ತರಗಳನ್ನು ಹೇಳುತ್ತೇನೆ. ಮೊದಲು ಯೋಗದ ವಿಷಯವಾಗಿ ನಾನು ಹೇಳುವುದನ್ನು ಕೇಳು.

ಯೋಗಕೃತ್ಯಂ ತು ಯೋಗಾನಾಂ ಧ್ಯಾನಮೇವ ಪರಂ ಬಲಮ್ ।
ತಚ್ಚಾಪಿ ದ್ವಿವಿಧಂ ಧ್ಯಾನಮಾಹುರ್ವಿದ್ಯಾವಿದೋ ಜನಾಃ ॥೭॥

ಏಕಾಗ್ರತಾ ಚ ಮನಸಃ ಪ್ರಾಣಾಯಾಮಸ್ತಥೈವ ಚ ।
ಪ್ರಾಣಾಯಾಮಸ್ತು ಸಗುಣೋ ನಿರ್ಗುಣೋ ಮನಸಸ್ತಥಾ ॥೮॥

ಯೋಗಿಗಳ ಪ್ರಧಾನವಾದ ಕರ್ತವ್ಯವು ಧ್ಯಾನವೇ ಆಗಿದೆ. ಧ್ಯಾನವೇ ಯೋಗಿಯ ಪರಮಬಲವಾಗಿದೆ. ಯೋಗವಿದ್ವಾಂಸರು ಈ ಧ್ಯಾನವನ್ನು ಎರಡು ವಿಧವಾಗಿ ಹೇಳುತ್ತಾರೆ. ಮೊದಲನೆಯದು : ಮನಸ್ಸಿನ ಏಕಾಗ್ರತೆ. ಎರಡನೆಯದು : ಪ್ರಾಣಾಯಾಮ. ಪ್ರಾಣಾಯಾಮದಲ್ಲಿಯೂ ಸಗುಣ ಪ್ರಾಣಾಯಾಮ, ನಿರ್ಗುಣಪ್ರಾಣಾಯಾಮಗಳೆಂಬ ಎರಡು ವಿಧಾನಗಳಿವೆ. ಯಾವ ಪ್ರಾಣಾಯಾಮದಲ್ಲಿ ಮನಸ್ಸಿನ ಸಂಬಂಧವು ಸಗುಣದಲ್ಲಿರುತ್ತದೆಯೋ–ಅದು ಸಗುಣಪ್ರಾಣಾಯಾಮ. ಯಾವ ಪ್ರಾಣಾಯಾಮದಲ್ಲಿ ಮನಸ್ಸಿನ ಸಂಬಂಧವು ನಿರ್ಗುಣದಲ್ಲಿರುತ್ತದೆಯೋ–ಅದು ನಿರ್ಗುಣಪ್ರಾಣಾಯಾಮ.

ಮೂತ್ರೋತ್ಸರ್ಗಪುರೀಷೇ ಚ ಭೋಜನೇ ಚ ನರಾಧಿಪ ।
ತ್ರಿಕಾಲಂ ನಾಭಿಯುಞ್ಜೀತ ಶೇಷಂ ಯುಞ್ಜೀತ ತತ್ಪರಃ ॥೯॥

ಜನಕರಾಜ! ಮಲತ್ಯಾಗ, ಮೂತ್ರೋತ್ಸರ್ಜನೆ ಮತ್ತು ಭೋಜನ– ಈ ಮೂರು ಕಾಲಗಳಲ್ಲಿ ಯೋಗಾಭ್ಯಾಸವನ್ನು ಮಾಡಬಾರದು. ಉಳಿದೆಲ್ಲ ಕಾಲಗಳಲ್ಲಿಯೂ ಯೋಗಾಭ್ಯಾಸತತ್ಪರನಾಗಿರಬೇಕು.

ಇನ್ದ್ರಿಯಾಣೀನ್ದ್ರಿಯಾರ್ಥೇಭ್ಯೋ ನಿವರ್ತ್ಯ ಮನಸಾ ಶುಚಿಃ ।
ದಶದ್ವಾದಶಭಿರ್ವಾಪಿ ಚತುರ್ವಿಂಶಾತ್ಪರಂ ತತಃ ॥೧೦॥

ಸಂಚೋದನಾಭಿರ್ಮತಿಮಾನಾತ್ಮಾನಂ ಚೋದಯೇದಥ ।
ತಿಷ್ಠನ್ತಮಜರಂ ತಂ ತು ಯತ್ತದುಕ್ತಂ ಮನೀಷಿಭಿಃ ॥೧೧॥

ಬುದ್ಧಿವಂತನಾದ ಯೋಗಿಯು ಪರಿಶುದ್ಧನಾಗಿ ಮನಸ್ಸಿನ ಮೂಲಕವಾಗಿ ಇಂದ್ರಿಯಗಳನ್ನು ಇಂದ್ರಿಯಾರ್ಥಗಳಿಂದ (ವಿಷಯಸುಖಗಳಿಂದ) ಹಿಂದಿರುಗಿಸಬೇಕು. (ಯೋಗದರ್ಶನದಲ್ಲಿ ಇಪ್ಪತ್ತೈದನೆಯ ತತ್ತ್ವವಾದ ಪುರುಷನಿಗಿಂತಲೂ ಅತೀತನಾದ ಈಶ್ವರ ಎಂಬ ತತ್ತ್ವವನ್ನು ಒಪ್ಪುತ್ತಾರೆ. ನಿರೀಶ್ವರರಾದ ಸಾಂಖ್ಯರು ಇಪ್ಪತ್ತೈದು ತತ್ತ್ವಗಳನ್ನು ಮಾತ್ರವೇ ಹೇಳುತ್ತಾರೆ.) ಇಪ್ಪತ್ತೆರಡು ವಿಧವಾದ ಪ್ರೇರಣೆಗಳ ಮೂಲಕವಾಗಿ ಜಡಭಾವರಹಿತನಾದ ಜೀವಾತ್ಮನನ್ನು ಯಾವ ವಿದ್ವಾಂಸರು ಆತ್ಮರೂಪವೆಂದು ಹೇಳುವರೋ–ಯಾರು ಇಪ್ಪತ್ತು ನಾಲ್ಕು ತತ್ತ್ವಗಳ ಸಮುದಾಯರೂಪವಾದ ಪ್ರಕೃತಿಗಿಂತಲೂ ಅತೀತನಾಗಿರುವನೋ–ಅಂತಹ ಪರಬ್ರಹ್ಮಪರಮಾತ್ಮನ ಬಳಿಗೆ ಒಯ್ಯಬೇಕು.*

ತೈಶ್ಚಾತ್ಮಾ ಸತತಂ ಜ್ಞೇಯ ಇತ್ಯೇವಮನುಶುಶ್ರುಮ ।
ವ್ರತಂ ಹ್ಯಹೀನಮನಸೋ ನಾನ್ಯಥೇತಿ ವಿನಿಶ್ಚಯಃ ॥೧೨॥

ಇಪ್ಪತ್ತೆರಡು ವಿಧವಾದ ಪ್ರೇರಣೆಗಳಿಂದ ಪರಬ್ರಹ್ಮಪರಮಾತ್ಮನು ತಿಳಿಯಲ್ಪಡುವನೆಂದು ಗುರುಜನರಿಂದ ಕೇಳಿದ್ದೇವೆ. ಅಹೀನವಾದ (ಪರಿಶುದ್ಧವಾದ) ಮನಸ್ಸುಳ್ಳವನೇ ಈ ಯೋಗವ್ರತವನ್ನು ಆಚರಿಸಲು ಯೋಗ್ಯನು. ಬಹಿರ್ಮುಖವಾದ ಮನಸ್ಸುಳ್ಳವನಿಂದ ಯೋಗವ್ರತವು ಸಾಧ್ಯವಾಗುವುದೇ ಇಲ್ಲ.

---

* ಗಡಿಗೆಯಲ್ಲಿ ನೀರನ್ನು ತುಂಬುವಂತೆ–ಪಾದಾಂಗುಷ್ಠದಿಂದ ಹಿಡಿದು ಶಿರಸ್ಸಿನವರೆಗೂ ಸಂಪೂರ್ಣಶರೀರವನ್ನೂ ಮೂಗಿನ ಛಿದ್ರಗಳ ಮೂಲಕವಾಗಿ ಗಾಳಿಯನ್ನು ಸೆಳೆದುಕೊಂಡು ಅದರಿಂದಲೇ ತುಂಬಬೇಕು. ಮೊದಲು ಬ್ರಹ್ಮರಂಧ್ರದಲ್ಲಿ (ತಲೆಯಲ್ಲಿ) ವಾಯುವನ್ನು ಸ್ಥಿರಗೊಳಿಸಿ ಅಲ್ಲಿಂದ ಅದನ್ನು ಸೆಳೆದುಕೊಂಡು ಹಣೆಯಲ್ಲಿ ಸ್ಥಾಪಿಸಬೇಕು. ಹೀಗೆ ವಾಯುವನ್ನು ಒಂದು ಕಡೆಯಿಂದ ಸೆಳೆದುಕೊಂಡು ಅನು

ವಿಮುಕ್ತಃ ಸರ್ವಸಙ್ಗೇಭ್ಯೋ ಲಘ್ವಾಹಾರೋ ಜಿತೇನ್ದ್ರಿಯಃ ।
ಪೂರ್ವರಾತ್ರೇಽಪರರಾತ್ರೇ ಧಾರಯೀತ ಮನೋಽತ್ಮನಿ ॥೧೩॥

ಸರ್ವವಿಧವಾದ ಆಸಕ್ತಿಗಳಿಂದಲೂ ವಿಮುಕ್ತನಾದ, ಮಿತಾಹಾರಿಯಾದ, ಜಿತೇಂದ್ರಿಯನಾದ ಯೋಗಿಯು ಪೂರ್ವರಾತ್ರಿಯಲ್ಲಾಗಲೀ (ರಾತ್ರಿಯ ಮೊದಲನೆಯ ಯಾಮದಲ್ಲಾಗಲೀ) ಅಪರರಾತ್ರಿಯಲ್ಲಾಗಲೀ (ಕಡೆಯ ಯಾಮದಲ್ಲಾಗಲೀ) ಮನಸ್ಸನ್ನು ಆತ್ಮನಲ್ಲಿ ಏಕಾಗ್ರಗೊಳಿಸಬೇಕು.

ಸ್ಥಿರೀಕೃತ್ಯೇನ್ದ್ರಿಯಗ್ರಾಮಂ ಮನಸಾ ಮಿಥಿಲೇಶ್ವರ ।
ಮನೋ ಬುದ್ಧ್ಯಾ ಸ್ಥಿರಂ ಕೃತ್ವಾ ಪಾಷಾಣ ಇವ ನಿಶ್ಚಲಃ ॥೧೪॥

ಸ್ಥಾಣುವಚ್ಚಾಪ್ಯಕಮ್ಪಃ ಸ್ಯಾದ್ಗಿರಿವಚ್ಚಾಪಿ ನಿಶ್ಚಲಃ ।
ಬುದ್ಧ್ಯಾ ವಿಧಿವಿಧಾನಜ್ಞಾಸ್ತದಾ ಯುಕ್ತಂ ಪ್ರಚಕ್ಷತೇ ॥೧೫॥

ಮಿಥಿಲೇಶ್ವರನೇ! ಯಾವಾಗ ಯೋಗಿಯು ಮನಸ್ಸಿನಿಂದ ಇಂದ್ರಿಯ ಸಮುದಾಯಗಳನ್ನು ಸ್ಥಿರೀಕರಿಸಿ (ಬಂಧಿಸಿ), ಬುದ್ಧಿಯಿಂದ ಮನಸ್ಸನ್ನು ಸ್ಥಿರೀಕರಿಸಿ (ಬಂಧಿಸಿ), ಕಲ್ಲಿನಂತೆ ನಿಶ್ಚಲನೂ, ಮೋಟುಮರದಂತೆ ಕಂಪನವಿಲ್ಲದವನೂ, ಪರ್ವತದಂತೆ ನಿಶ್ಚಲನೂ ಆಗುವನೋ–ಆಗ ಬುದ್ಧಿಯಿಂದ ಯೋಗಶಾಸ್ತ್ರದ ವಿಧಿ-ವಿಧಾನಗಳನ್ನು ತಿಳಿದ ಜ್ಞಾನಿಗಳು ಅವನನ್ನು ಯೋಗಯುಕ್ತನೆಂದು ಹೇಳುತ್ತಾರೆ.

ನ ಶೃಣೋತಿ ನ ಚ ಘ್ರಾತಿ ನ ರಂಸ್ಯತಿ ನ ಪಶ್ಯತಿ ।
ನ ಚ ಸ್ಪರ್ಶಂ ವಿಜಾನಾತಿ ನ ಸಂಕಲ್ಪಯತೇ ನಮಃ ॥೧೬॥

ಕ್ರಮವಾಗಿ ಮತ್ತೊಂದು ಕಡೆಯಲ್ಲಿ ಸ್ಥಾಪಿಸಬೇಕು. ನಡುಹುಬ್ಬು, ಕಣ್ಣುಗಳು, ಮೂಗಿನ ಮೂಲ, ನಾಲಿಗೆಯ ಮೂಲ, ಕಂಠಕೂಪ, ಹೃದಯಮಧ್ಯ, ನಾಭಿಮಧ್ಯ, ಮೇಢ್ರ, ಉದರ, ಗುದ, ತೊಡೆಯ ಮೂಲ, ತೊಡೆಯ ಮಧ್ಯಭಾಗ, ಮೊಣಕಾಲು, ಚಿತಿಮೂಲ, ಜಂಘಾಮೂಲ, ಗುಲ್ಫ, (ಕಾಲಿನ ಹರಡು), ಪಾದಾಂಗುಷ್ಠ–ಈ ಹದಿನೆಂಟು ಸ್ಥಾನಗಳಲ್ಲಿ ವಾಯುವನ್ನು ಸ್ಥಾಪಿಸಬೇಕು. ಇದಕ್ಕೆ ಹದಿನೆಂಟು ವಿಧವಾದ ಪ್ರೇರಣೆಗಳೆಂದು ಹೆಸರು. ಇವುಗಳಲ್ಲದೇ ಧ್ಯಾನ, ಧಾರಣೆ, ಸಮಾಧಿ, ಸತ್ತ್ವಪುರುಷಾನ್ಯತಾಖ್ಯಾತಿ (ಬುದ್ಧಿ ಮತ್ತು ಪುರುಷರಲ್ಲಿ ಭಿನ್ನತೆಯ ಭಾವ)ಗಳೆಂಬ ನಾಲ್ಕು ಪ್ರೇರಣೆಗಳೂ ಸೇರಿ ಒಟ್ಟು ಇಪ್ಪತ್ತೆರಡು ಪ್ರೇರಣೆಗಳಾಗುತ್ತವೆ.

ನ ಚಾಭಿಮನ್ಯತೇ ಕಿಂಚಿನ್ನ ಚ ಬುಧ್ಯತಿ ಕಾಷ್ಠವತ್ ।
ತದಾ ಪ್ರಕೃತಿಮಾಪನ್ನಂ ಯುಕ್ತಮಾಹುರ್ಮನೀಷಿಣಃ ॥೧೭॥

ಯಾವಾಗ ಯೋಗಿಯು ಶಬ್ದವಾಗುತ್ತಿದ್ದರೂ ಏನನ್ನೂ ಕೇಳುವುದಿಲ್ಲವೋ, ವಾಸನೆಯು ಬರುತ್ತಿದ್ದರೂ ಆಘ್ರಾಣಿಸುವುದಿಲ್ಲವೋ, ನಾಲಿಗೆಯ ಮೇಲೆ ಭಕ್ಷ್ಯವನ್ನಿಟ್ಟರೂ ಯಾವ ವಿಧವಾದ ರುಚಿಯನ್ನೂ ತಿಳಿಯುವುದಿಲ್ಲವೋ, ತನ್ನ ಬಳಿಗೆ ಯಾರಾದರೂ ಬಂದರೂ ನೋಡುವುದಿಲ್ಲವೋ, ಯಾರಾದರೂ ಮುಟ್ಟಿದರೂ ಅವನಿಗೆ ಸ್ಪರ್ಶದ ಅರಿವೇ ಆಗುವುದಿಲ್ಲವೋ, ಮನಸ್ಸು ನಿರ್ವಿಷಯವಾಗಿದ್ದು ಸಂಕಲ್ಪದಿಂದ ಹೀನವಾಗಿರುವುದೋ, ಯಾವುದರ ವಿಷಯದಲ್ಲಿಯೂ ತನ್ನದೆಂಬ ಅಭಿಮಾನವೇ ಇರುವುದಿಲ್ಲವೋ, ಕಟ್ಟಿಗೆಯಂತೆ ಜಡನಾಗಿ ಏನನ್ನೂ ತಿಳಿಯುವುದಿಲ್ಲವೋ–ಆಗ ಅವನನ್ನು ಶುದ್ಧಸ್ವರೂಪವನ್ನು ಹೊಂದಿರುವವನೆಂದೂ ಯೋಗಯುಕ್ತನೆಂದೂ ವಿದ್ವಾಂಸರು ಹೇಳುತ್ತಾರೆ.

ನಿರ್ವಾತೇ ಹಿ ಯಥಾ ದೀಪ್ಯನ್ದೀಪಸ್ತದ್ವತ್ಪ್ರಕಾಶತೇ ।
ನಿರ್ಲಿಙ್ಗೋಽಚಲಶ್ಚೋರ್ಧ್ವಂ ನ ತಿರ್ಯಗ್ಗತಿಮಾಪ್ನುಯಾತ್ ॥೧೮॥

ಅಂತಹ ಅವಸ್ಥೆಯಲ್ಲಿ ಸಾಧಕನು – ಗಾಳಿಯಿಲ್ಲದಿರುವ ಸ್ಥಳದಲ್ಲಿರುವ ದೀಪವು ಸ್ವಲ್ಪವಾದರೂ ಅಲುಗಾಡದೆ ಪ್ರಕಾಶಿಸುತ್ತಿರುವಂತೆ–ಪ್ರಕಾಶಿಸುತ್ತಿರುತ್ತಾನೆ. ಆ ಸಮಯದಲ್ಲಿ ಅವನಿಗೂ ಲಿಂಗಶರೀರಕ್ಕೂ ಯಾವ ವಿಧವಾದ ಸಂಬಂಧವೂ ಇರುವುದಿಲ್ಲ. ಆಗ ಅವನು ಊರ್ಧ್ವಗತಿಯನ್ನು ಹೊಂದುತ್ತಾನೆಯೇ ಹೊರತು ಅಡ್ಡವಾದ ಗತಿಯನ್ನು ಹೊಂದುವುದಿಲ್ಲ.

ತದಾ ತಮನುಪಶ್ಯೇತ ಯಸ್ಮಿನ್ದೃಷ್ಟೇ ನು ಕಥ್ಯತೇ ।
ಹೃದಯಸ್ಥೋಽನ್ತರಾತ್ಮೇತಿ ಜ್ಞೇಯೋ ಜ್ಞಸ್ತಾತ ಮದ್ವಿಧೈಃ ॥೧೯॥

ಆಗ ಸಾಧಕನು ಆತ್ಮನನ್ನು ಕಂಡುಕೊಳ್ಳಬಹುದು. ಮಗು! ನಮ್ಮಂತಹವರು (ಯೋಗಿಗಳು) ಗುಹಾಶಯನಾದ ಪರಮಾತ್ಮನನ್ನು ನೋಡಿದನಂತರ–'ಜ್ಞೇಯನಾದ ಹೃದಯಸ್ಥನಾದ ಅಂತರಾತ್ಮನು ತಿಳಿಯಲ್ಪಟ್ಟನು'–ಎಂದು ಹೇಳುತ್ತಾರೆ.

ವಿಧೂಮ ಇವ ಸಪ್ತಾರ್ಚಿರಾದಿತ್ಯ ಇವ ರಶ್ಮಿಮಾನ್ ।
ವೈದ್ಯುತೋಽಗ್ನಿರಿವಾಕಾಶೇ ದೃಶ್ಯತೇಽತ್ಮಾ ತಥಾತ್ಮನಿ ॥೨೦॥

ಧ್ಯಾನನಿಷ್ಠನಾದ ಯೋಗಿಗೆ ತನ್ನ ಹೃದಯದಲ್ಲಿ – ಹೊಗೆಯಿಲ್ಲದ ಅಗ್ನಿಯಂತೆ, ಕಿರಣಗಳಿಂದ ಕೂಡಿದ ಸೂರ್ಯನಂತೆ, ಆಕಾಶದಲ್ಲಿ ವಿದ್ಯುತ್ತಿನಿಂದ ಉಂಟಾಗುವ ಅಗ್ನಿಯಂತೆ (ಮಿಂಚಿನಂತೆ)–ಆತ್ಮನು ಕಾಣಿಸಿಕೊಳ್ಳುತ್ತಾನೆ.

ಯೇ ಪಶ್ಯನ್ತಿ ಮಹಾತ್ಮಾನೋ ಧೃತಿಮನ್ತೋ ಮನೀಷಿಣಃ ।
ಬ್ರಾಹ್ಮಣಾ ಬ್ರಹ್ಮಯೋನಿಸ್ಥಾ ಹ್ಯಯೋನಿಮಮೃತಾತ್ಮಕಮ್ ॥೨೧॥

ಧೈರ್ಯವಂತರಾದ, ವಿದ್ವಾಂಸರಾದ, ಬ್ರಹ್ಮಯೋನಿಯಲ್ಲಿ ಹುಟ್ಟಿದ (ಬ್ರಹ್ಮಬೋಧಕಶಾಸ್ತ್ರಗಳಲ್ಲಿ ನಿಷ್ಠರಾದ) ಮಹಾತ್ಮರಾದ ಬ್ರಾಹ್ಮಣರು ಅಯೋನಿಯಾದ (ಅಜನ್ಮವಾದ) ಅಮೃತಸ್ವರೂಪನಾದ ಬ್ರಹ್ಮನನ್ನು ಹೃದಯಗುಹೆಯಲ್ಲಿ ಕಂಡುಕೊಳ್ಳುತ್ತಾರೆ.

ತದೇವಾಹುರಣುಭ್ಯೋಽಣು ತನ್ಮಹದ್ಭ್ಯೋ ಮಹತ್ತರಮ್ ।
ತತ್ತತ್ತ್ವಂ ಸರ್ವಭೂತೇಷು ಧ್ರುವಂ ತಿಷ್ಠನ್ನ ದೃಶ್ಯತೇ ॥೨೨॥

ಆತ್ಮದರ್ಶಿಗಳು ಆ ಬ್ರಹ್ಮವಸ್ತುವನ್ನೇ ಅಣುಗಳಿಗಿಂತಲೂ ಅಣು–ಎನ್ನುತ್ತಾರೆ. ಮಹತ್ತುಗಳಿಗಿಂತಲೂ ಮಹತ್ತರವೆನ್ನುತ್ತಾರೆ. ಅಂತಹ ಪರಬ್ರಹ್ಮತತ್ತ್ವವು ಸರ್ವಪ್ರಾಣಿಗಳಲ್ಲಿಯೂ ಶಾಶ್ವತವಾಗಿ ಇರುವುದಾದರೂ ಯಾರೊಬ್ಬರ ಕಣ್ಣಿಗೂ ಅದು ಕಾಣಿಸುವುದಿಲ್ಲ.

ಬುದ್ಧಿದ್ರವ್ಯೇಣ ದೃಶ್ಯೇನ ಮನೋದೀಪೇನ ಲೋಕಕೃತ್ ।
ಮಹತಸ್ತಮಸಸ್ತಾತ ಪಾರೇ ತಿಷ್ಠನ್ನತಾಮಸಃ ॥೨೩॥

ಸ ತಮೋನುದ ಇತ್ಯುಕ್ತಃ ಸರ್ವಜ್ಞೈರ್ವೇದಪಾರಗೈಃ ।
ವಿಮಲೋ ವಿತಮಸ್ಕಶ್ಚ ನಿರ್ಲಿಙ್ಗೋಽಲಿಙ್ಗಸಂಜ್ಞಿತಃ ॥೨೪॥

ಯೋಗ ಏವ ಹಿ ಯೋಗಾನಾಂ ಕಿಮನ್ಯದ್ಯೋಗಲಕ್ಷಣಮ್ ।
ಏವಂ ಪಶ್ಯಂ ಪ್ರಪಶ್ಯನ್ತಿ ಆತ್ಮಾನಮಜರಂ ಪರಮ್ ॥೨೫॥

ಬುದ್ಧಿಯೆಂಬ ತುಪ್ಪದಿಂದ ಕೂಡಿದ ಮನಸ್ಸೆಂಬ ದೀಪದಿಂದ ಲೋಕ

ಕರ್ತೃವಾದ ಪರಮಾತ್ಮನನ್ನು ಹೃದಯಾಕಾಶದಲ್ಲಿ ಕಂಡುಕೊಳ್ಳಬೇಕು. ಪರಮಾತ್ಮನು ಮಹಾಂಧಕಾರದಿಂದ ಆಚೆಗೆ ಇರುತ್ತಾ, ತಮೋಗುಣದಿಂದ (ಮಹತ್ತತ್ತ್ವದಿಂದ) ವಿಹೀನನಾಗಿದ್ದಾನೆ. ಆದುದರಿಂದಲೇ ವೇದಪಾರಂಗತರಾದ ಸರ್ವಜ್ಞರಿಂದ ಪರಮಾತ್ಮನು ತಮೋನುದನೆಂದು (ಅಜ್ಞಾನನಾಶಕನೆಂದು) ಕರೆಯಲ್ಪಟ್ಟಿದ್ದಾನೆ. ಪರಮಾತ್ಮನು ನಿರ್ಮಲನು, ತಮೋಗುಣರಹಿತನು, ಶರೀರರಹಿತನು. 'ಅಲಿಂಗ' – ಎಂಬ ಹೆಸರಿನಿಂದ ಕರೆಯಲ್ಪಡುವವನು. (ಉಪಾಧಿಶೂನ್ಯನು.) ಅವನನ್ನು ಹೃದಯಗುಹೆಯಲ್ಲಿ ಕಂಡುಕೊಳ್ಳುವುದೇ ಯೋಗಿಗಳ ಯೋಗವಾಗಿದೆ. ಇದನ್ನು ಬಿಟ್ಟು ಯೋಗಕ್ಕೆ ಬೇರೆ ಯಾವ ಲಕ್ಷಣವಿದೆ? ಹೀಗೆ ಯೋಗಿಗಳು ಎಲ್ಲರಿಂದಲೂ ನೋಡಲ್ಪಡಬೇಕಾಗಿರುವ, ಜರಾಮರಣಗಳಿಲ್ಲದ, ಶ್ರೇಷ್ಠನಾದ ಪರಮಾತ್ಮನನ್ನು ಹೃದಯಕಮಲದ ಮಧ್ಯದಲ್ಲಿ ನೋಡುತ್ತಾರೆ.

ಯೋಗದರ್ಶನಮೇತಾವದುಕ್ತಂ ತೇ ತತ್ತ್ವತೋ ಮಯಾ ।
ಸಾಂಖ್ಯಜ್ಞಾನಂ ಪ್ರವಕ್ಷ್ಯಾಮಿ ಪರಿಸಂಖ್ಯಾನದರ್ಶನಮ್ ॥೨೬॥

ಜನಕರಾಜ! ನಾನು ಇದುವರೆಗೂ ನಿನಗೆ ಯೋಗದರ್ಶನವನ್ನು ಯಥಾವತ್ತಾಗಿ ಹೇಳಿದೆನು. ಇನ್ನು ಮುಂದೆ ನಿಯಮಪೂರ್ವಕವಾಗಿ ವಿಧಿಸಲ್ಪಡುವ ದೃಷ್ಟಾಂತದಿಂದಲೂ, ತತ್ತ್ವಪರಿಗಣನೆಯಿಂದಲೂ ಕೂಡಿರುವ ಸಾಂಖ್ಯಜ್ಞಾನವನ್ನು ಹೇಳುತ್ತೇನೆ.

ಅವ್ಯಕ್ತಮಾಹುಃ ಪ್ರಕೃತಿಃ ಪರಾಂ ಪ್ರಕೃತಿವಾದಿನಃ ।
ತಸ್ಮಾನ್ಮಹತ್ಸಮುತ್ಪನ್ನಂ ದ್ವಿತೀಯಂ ರಾಜಸತ್ತಮ ॥೨೭॥

ರಾಜಶ್ರೇಷ್ಠನೇ! ಪ್ರಕೃತಿಯ ವಿಷಯದಲ್ಲಿ ಹೆಚ್ಚು ತಿಳಿವಳಿಕೆಯಿಂದ ಮಾತನಾಡುವ ವಿದ್ವಾಂಸರು ಮೂಲಪ್ರಕೃತಿಯನ್ನು ಅವ್ಯಕ್ತವೆಂದು ಹೇಳುತ್ತಾರೆ. ಮೊದಲನೆಯದಾದ ಮೂಲಪ್ರಕೃತಿಯಿಂದ ಎರಡನೆಯದಾದ ಮಹತ್ತತ್ತ್ವವು ಹುಟ್ಟಿತು.

ಅಹಙ್ಕಾರಸ್ತು ಮಹತಸ್ತೃತೀಯಮಿತಿ ನಃ ಶ್ರುತಮ್ ।
ಪಞ್ಚಭೂತಾನ್ಯಹಙ್ಕಾರಾದಾಹುಃ ಸಾಂಖ್ಯಾತ್ಮದರ್ಶಿನಃ ॥೨೮॥

ಮಹತ್ತತ್ತ್ವದಿಂದ ಮೂರನೆಯದಾಗಿ ಅಹಂಕಾರವು ಹುಟ್ಟಿತೆಂದು ನಾವು ಕೇಳಿದ್ದೇವೆ. ಅಹಂಕಾರದಿಂದ ಪಂಚಭೂತಗಳು (ಶಬ್ದ-ಸ್ಪರ್ಶಾದಿ ಪಂಚ ತನ್ಮಾತ್ರೆಗಳು) ಹುಟ್ಟಿದುವೆಂದು ಆತ್ಮದರ್ಶಿಗಳಾದ ಸಾಂಖ್ಯರು ಹೇಳುತ್ತಾರೆ.

ಏತಾಃ ಪ್ರಕೃತಯಶ್ಚಾಷ್ಟೌ ವಿಕಾರಾಶ್ಚಾಪಿ ಷೋಡಶ ।
ಪಞ್ಚ ಚೈವ ವಿಶೇಷಾ ವೈ ತಥಾ ಪಞ್ಚೇನ್ದ್ರಿಯಾಣಿ ಚ ॥೨೯॥

ಮೂಲಪ್ರಕೃತಿ, ಮಹತ್ತತ್ತ್ವ, ಅಹಂಕಾರ ಮತ್ತು ಐದು ಭೂತಗಳು–ಇವುಗಳೇ ಎಂಟು ಪ್ರಕೃತಿಗಳು. ಇವುಗಳಿಂದಲೇ ಹದಿನಾರು ತತ್ತ್ವಗಳು ಹುಟ್ಟುತ್ತವೆ. ಅವುಗಳನ್ನು ಅಷ್ಟತತ್ತ್ವಗಳ ವಿಕಾರಗಳೆಂದು ಹೇಳುತ್ತಾರೆ. ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ಮಹಾಭೂತಗಳು ಮತ್ತು ಮನಸ್ಸು–ಎಂಬಿವೇ ಹದಿನಾರು ವಿಕಾರಗಳು. ಇವುಗಳಲ್ಲಿ ಆಕಾಶಾದಿ ಪಂಚತತ್ತ್ವಗಳನ್ನೂ – ಪಂಚಜ್ಞಾನೇನ್ದ್ರಿಯಗಳನ್ನೂ ವಿಶೇಷವಾದುವೆಂದು ಹೇಳುತ್ತಾರೆ.

ಏತಾವದೇವ ಸತ್ತ್ವಾನಾಂ ಸಾಂಖ್ಯಮಾಹುರ್ಮನೀಷಿಣಃ ।
ಸಾಂಖ್ಯೇ ವಿಧಿವಿಧಾನಜ್ಞಾ ನಿತ್ಯಂ ಸಾಂಖ್ಯಪಥೇ ರತಾಃ ॥೩೦॥

ಸಾಂಖ್ಯಶಾಸ್ತ್ರದ ವಿಧಿ-ವಿಧಾನಗಳನ್ನು ತಿಳಿದಿರುವ, ಯಾವಾಗಲೂ ಸಾಂಖ್ಯಮಾರ್ಗಾನುಷ್ಠಾನದಲ್ಲಿಯೇ ನಿರತರಾಗಿರುವ ವಿದ್ವಾಂಸರು ಈ ಇಪ್ಪತ್ತುನಾಲ್ಕನ್ನೇ ಸಾಂಖ್ಯಸಮ್ಮತವಾದ ತತ್ತ್ವಗಳೆಂದು ಹೇಳುತ್ತಾರೆ.

ಯಸ್ಮಾದ್ಯದಭಿಜಾಯೇತ ತತ್ತತ್ರೈವ ಪ್ರಲೀಯತೇ ।
ಲೀಯನ್ತೇ ಪ್ರತಿಲೋಮಾನಿ ಸೃಜ್ಯನ್ತೇ ಚಾನ್ತರಾತ್ಮನಾ ॥೩೧॥

ಯಾವ ತತ್ತ್ವವು ಯಾವುದರಿಂದ ಹುಟ್ಟುವುದೋ – ಆ ತತ್ತ್ವವು ಪುನಃ ಅದರಲ್ಲಿಯೇ ಲೀನವಾಗುತ್ತದೆ. ಅನುಲೋಮಕ್ರಮದಿಂದ ಅವುಗಳ ಉತ್ಪತ್ತಿಯಾಗುತ್ತದೆ. ವಿಲೋಮಕ್ರಮದಿಂದ ಅವುಗಳ ಸಂಹಾರವಾಗುತ್ತದೆ. (ಆಕಾಶದಿಂದ ವಾಯುವೂ, ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ಜಲವೂ, ಜಲದಿಂದ ಭೂಮಿಯೂ ಹುಟ್ಟುತ್ತದೆ. ಇದು ಅನುಲೋಮಕ್ರಮದ ಉತ್ಪತ್ತಿ. ವಿಲಯಕಾಲದಲ್ಲಿ ಭೂಮಿಯು ಜಲತತ್ತ್ವ

ದಲ್ಲಿಯೂ, ಜಲವು ಅಗ್ನಿತತ್ತ್ವದಲ್ಲಿಯೂ, ಅಗ್ನಿತತ್ತ್ವವು ವಾಯುತತ್ತ್ವದಲ್ಲಿಯೂ, ವಾಯುತತ್ತ್ವವು ಆಕಾಶತತ್ತ್ವದಲ್ಲಿಯೂ ವಿಲೀನವಾಗುತ್ತದೆ. ಇದು ವಿಲೋಮಕ್ರಮದ ಸಂಹಾರ.) ಈ ಎಲ್ಲ ತತ್ತ್ವಗಳೂ ಅಂತರಾತ್ಮನಿಂದಲೇ ಸೃಷ್ಟಿಸಲ್ಪಟ್ಟಿವೆ.

ಅನುಲೋಮೇನ ಜಾಯನ್ತೇ ಲೀಯನ್ತೇ ಪ್ರತಿಲೋಮತಃ ।
ಗುಣಾ ಗುಣೇಷು ಸತತಂ ಸಾಗರಸ್ಯೋರ್ಮಯೋ ಯಥಾ ॥೩೨॥

ಯಾವ ರೀತಿಯಲ್ಲಿ ಸಮುದ್ರದಲ್ಲಿ ಹುಟ್ಟುವ ಅಲೆಗಳು ಪುನಃ ಸಮುದ್ರದಲ್ಲಿಯೇ ಲೀನವಾಗುತ್ತವೆಯೋ–ಅದೇ ರೀತಿಯಲ್ಲಿ ಸಂಪೂರ್ಣ ಗುಣಗಳೂ (ತತ್ತ್ವಗಳೂ) ಅನುಲೋಮಕ್ರಮದಲ್ಲಿ ಹುಟ್ಟುತ್ತವೆ. ವಿಲೋಮ ಕ್ರಮದಲ್ಲಿ ಅವುಗಳಿಗೆ ಕಾರಣಭೂತವಾದ ತತ್ತ್ವಗಳಲ್ಲಿ ಅಥವಾ ಗುಣಗಳಲ್ಲಿ ಸೇರಿಕೊಳ್ಳುತ್ತವೆ.

ಸರ್ಗಪ್ರಲಯ ಏತಾವಾನ್ಪ್ರಕೃತೇರ್ನೃಪಸತ್ತಮ ।
ಏಕತ್ವಂ ಪ್ರಲಯೇ ಚಾಸ್ಯ ಬಹುತ್ವಂ ಚ ಯದಾಸೃಜತ್ ॥೩೩॥

ಏವಮೇವ ಚ ರಾಜೇನ್ದ್ರ ವಿಜ್ಞೇಯಂ ಜ್ಞಾನಕೋವಿದೈಃ ।
ಅಧಿಷ್ಠಾತಾರಮವ್ಯಕ್ತಮಸ್ಯಾಪ್ಯೇತನ್ನಿದರ್ಶನಮ್ ॥೩೪॥

ನೃಪಶ್ರೇಷ್ಠನೇ! ಇದೇ ಪ್ರಕೃತಿಯ, ಸೃಷ್ಟಿಯ ಮತ್ತು ಪ್ರಲಯದ ವಿಷಯವಾಗಿದೆ. ಪ್ರಲಯಕಾಲದಲ್ಲಿ ಪ್ರಕೃತಿಗೆ ಏಕತ್ವವುಂಟಾಗುತ್ತದೆ. ಸೃಷ್ಟಿ ಕಾಲದಲ್ಲಿ ಬಹುತ್ವವುಂಟಾಗುತ್ತದೆ. ಜ್ಞಾನಕೋವಿದರು ಪ್ರಕೃತಿಯ ನಾನಾತ್ವ ವನ್ನೂ ಮತ್ತು ಏಕತ್ವವನ್ನೂ ಈ ಬಗೆಯಾಗಿ ತಿಳಿದುಕೊಳ್ಳಬೇಕು. ಅವ್ಯಕ್ತ ಪ್ರಕೃತಿಯೇ ಅಧಿಷ್ಠಾತೃವಾದ ಪುರುಷನನ್ನು ಸೃಷ್ಟಿಕಾಲದಲ್ಲಿ ನಾನಾತ್ವದ ಕಡೆಗೆ ಒಯ್ಯುತ್ತದೆ. ಇದು ಪುರುಷನ ಏಕತ್ವ ಮತ್ತು ಬಹುತ್ವಗಳಿಗೆ ನಿದರ್ಶನ ವಾಗಿದೆ.

ಏಕತ್ವಂ ಚ ಬಹುತ್ವಂ ಚ ಪ್ರಕೃತೇರರ್ಥತತ್ತ್ವವಾನ್ ।
ಏಕತ್ವಂ ಪ್ರಲಯೇ ಚಾಸ್ಯ ಬಹುತ್ವಂ ಚ ಪ್ರವರ್ತನಾತ್ ॥೩೫॥

ಪ್ರಕೃತಿಗೆ ಪ್ರಲಯಕಾಲದಲ್ಲಿ ಏಕತ್ವವೂ–ಸೃಷ್ಟಿಯಕಾಲದಲ್ಲಿ ಅನೇಕ ತ್ವವೂ ಉಂಟಾಗುತ್ತದೆ. ಹಾಗೆಯೇ ಪ್ರಕೃತಿಯಿಂದ ಪ್ರೇರಿತನಾದ ಪುರುಷ

ನಿಗೂ ಪ್ರಲಯಕಾಲದಲ್ಲಿ ಏಕತ್ವವೂ–ಸೃಷ್ಟಿಯ ಕಾಲದಲ್ಲಿ ಅನೇಕತ್ವವೂ ಉಂಟಾಗುತ್ತದೆ. ಅರ್ಥತತ್ತ್ವವನ್ನು ತಿಳಿದಿರತಕ್ಕವನು ಈ ವಿಷಯವನ್ನು ತಿಳಿದುಕೊಂಡಿರಬೇಕು.

ಬಹುಧಾತ್ಮಾ ಪ್ರಕುರ್ವೀತ ಪ್ರಕೃತಿಂ ಪ್ರಸವಾತ್ಮಿಕಾಮ್ ।
ತಚ್ಚ ಕ್ಷೇತ್ರಂ ಮಹಾನಾತ್ಮಾ ಪಞ್ಚವಿಂಶೋಽಧಿತಿಷ್ಠತಿ ॥೩೬॥

ಪ್ರಸವಗುಣವುಳ್ಳ ಪ್ರಕೃತಿಯನ್ನು ಪರಮಾತ್ಮನೇ ಬಹುರೂಪವುಳ್ಳದ್ದನ್ನಾಗಿ ಮಾಡುತ್ತಾನೆ. ಮಹಾತ್ಮನಾದ ಪರಮಾತ್ಮನು ಹೀಗೆ ಬಹುರೂಪಗಳನ್ನಾಗಿ ಕಲ್ಪಿಸಿ ಪ್ರಕೃತಿಯನ್ನೇ ಕ್ಷೇತ್ರವನ್ನಾಗಿ ಮಾಡಿಕೊಂಡು ಆ ಕ್ಷೇತ್ರದಲ್ಲಿ ಇಪ್ಪತ್ತೈದನೆಯ ತತ್ತ್ವವಾಗಿ ಅದಕ್ಕೆ ಅಧಿಷ್ಠಾತೃವಾಗಿ ಕುಳಿತಿರುತ್ತಾನೆ.

ಅಧಿಷ್ಠಾತೇತಿ ರಾಜೇನ್ದ್ರ ಪ್ರೋಚ್ಯತೇ ಯತಿಸತ್ತಮೈಃ ।
ಅಧಿಷ್ಠಾನಾದಧಿಷ್ಠಾತಾ ಕ್ಷೇತ್ರಾಣಾಮಿತಿ ನಃ ಶ್ರುತಮ್ ॥೩೭॥

ಯತಿಶ್ರೇಷ್ಠರು ಅವನನ್ನು 'ಅಧಿಷ್ಠಾತೃ' (ಪ್ರಧಾನ) ಎಂದು ಕರೆಯುತ್ತಾರೆ. ಕ್ಷೇತ್ರಗಳನ್ನು ನಿಯಂತ್ರಿಸುವ ಶಕ್ತಿಯನ್ನು ಅವನು ಹೊಂದಿರುವುದರಿಂದಲೇ ಅಧಿಷ್ಠಾತೃವಾಗಿದ್ದಾನೆ.

ಕ್ಷೇತ್ರಂ ಜಾನಾತಿ ಚಾವ್ಯಕ್ತಂ ಕ್ಷೇತ್ರಜ್ಞ ಇತಿ ಚೋಚ್ಯತೇ ।
ಅವ್ಯಕ್ತಿಕೇ ಪುರೇ ಶೇತೇ ಪುರುಷಶ್ಚೇತಿ ಕಥ್ಯತೇ ॥೩೮॥

ಪರಮಾತ್ಮನು ಅವ್ಯಕ್ತಸಂಜ್ಞಕವಾದ ಕ್ಷೇತ್ರವನ್ನು (ಪ್ರಕೃತಿಯನ್ನು) ತಿಳಿದವನಾದುದರಿಂದ ಅವನನ್ನು ಕ್ಷೇತ್ರಜ್ಞನೆಂದೂ ಕರೆಯುತ್ತಾರೆ. ಅವ್ಯಕ್ತಕ್ಕೆ (ಪ್ರಕೃತಿಗೆ) ಸಂಬಂಧಿಸಿದ ಶರೀರರೂಪವಾದ ಪುರಿಯಲ್ಲಿ ಅಂತರ್ಯಾಮಿಯ ರೂಪದಲ್ಲಿ ಪರಮಾತ್ಮನು ಪವಡಿಸಿರುವುದರಿಂದ ಅವನನ್ನು ಪುರುಷನೆಂದೂ ಹೇಳುತ್ತಾರೆ.

ಅನ್ಯದೇವ ಚ ಕ್ಷೇತ್ರಂ ಸ್ಯಾದನ್ಯಃ ಕ್ಷೇತ್ರಜ್ಞ ಉಚ್ಯತೇ ।
ಕ್ಷೇತ್ರಮವ್ಯಕ್ತಮಿತ್ಯುಕ್ತಂ ಜ್ಞಾತಾ ವೈ ಪಞ್ಚವಿಂಶಕಃ ॥೩೯॥

ವಾಸ್ತವವಾಗಿ ಕ್ಷೇತ್ರವೇ ಬೇರೆ ; ಕ್ಷೇತ್ರಜ್ಞನೇ ಬೇರೆ. ಕ್ಷೇತ್ರವನ್ನು ಅವ್ಯಕ್ತ

ವಾದ ಪ್ರಕೃತಿಗೆ ಸಂಬಂಧಿಸಿದುದೆಂದು ಹೇಳುತ್ತಾರೆ. ಆ ಕ್ಷೇತ್ರವನ್ನು ತಿಳಿದು ಕೊಂಡಿರುವ ಅಧಿಷ್ಠಾತೃವಾದ ಕ್ಷೇತ್ರಜ್ಞನೇ ತಿಳಿಯಲ್ಪಡಬೇಕಾದ ಇಪ್ಪತ್ತೈದ ನೆಯ ತತ್ತ್ವವಾಗಿದ್ದಾನೆ.

ಅನ್ಯದೇವ ಚ ಜ್ಞಾನಂ ಸ್ಯಾದನ್ಯಜ್ಜ್ಞೇಯಂ ತದುಚ್ಯತೇ ।
ಜ್ಞಾನಮವ್ಯಕ್ತಮಿತ್ಯುಕ್ತಂ ಜ್ಞೇಯೋ ವೈ ಪಞ್ಚವಿಂಶಕಃ ॥೪೦॥

ಜ್ಞಾನವನ್ನು (ಬುದ್ಧಿವೃತ್ತಿಯನ್ನು) ಅನ್ಯವಸ್ತುವೆಂದು ಹೇಳುತ್ತಾರೆ. ಜ್ಞೇಯವನ್ನು ಜ್ಞಾನದಿಂದ ಭಿನ್ನವೆಂದೂ ಹೇಳುತ್ತಾರೆ. ಬುದ್ಧಿಯನ್ನು ಅವ್ಯಕ್ತವೆಂದೂ ಹೇಳುತ್ತಾರೆ. ತಿಳಿಯಲ್ಪಡತಕ್ಕವನು ಇಪ್ಪತ್ತೈದನೆಯ ತತ್ತ್ವವಾದ ಪರಮಾತ್ಮನೇ ಆಗಿದ್ದಾನೆ.

ಅವ್ಯಕ್ತಂ ಕ್ಷೇತ್ರಮಿತ್ಯುಕ್ತಂ ತಥಾ ಸತ್ತ್ವಂ ತಥೇಶ್ವರಃ ।
ಅನೀಶ್ವರಮತತ್ತ್ವಂ ಚ ತತ್ತ್ವಂ ತತ್ಪಞ್ಚವಿಂಶಕಮ್ ॥೪೧॥

ಅವ್ಯಕ್ತವನ್ನು (ಪ್ರಕೃತಿಯನ್ನು) ಕ್ಷೇತ್ರವೆಂದು ಕರೆಯಲಾಗಿದೆ. ಸತ್ತ್ವವನ್ನು ಬುದ್ಧಿಯೆಂದು ಕರೆಯಲಾಗಿದೆ. ಈಶ್ವರನನ್ನು ಕ್ಷೇತ್ರಜ್ಞನೆಂದು ಕರೆಯಲಾಗಿದೆ. ಆದರೆ ಇಪ್ಪತ್ತೈದನೆಯ ತತ್ತ್ವವಾದ ಆ ಚೇತನನು ಈಶ್ವರರಹಿತನೂ ತತ್ತ್ವರಹಿತನೂ ಆಗಿದ್ದಾನೆ. ಅರ್ಥಾತ್ ಅವನು ತತ್ತ್ವಗಳಿಗಿಂತಲೂ ಭಿನ್ನನು. ಅವನೇ ಈಶ್ವರನಾದುದರಿಂದ ಅನೀಶ್ವರನು.

(ಚೇತನನೇ ಸರ್ವೇಶ್ವರನೆಂಬುದು ಸಾಂಖ್ಯರ ಮತ. ಆದುದರಿಂದಲೇ ಅವರು ಇಪ್ಪತ್ತೈದು ತತ್ತ್ವಗಳನ್ನು ಹೇಳುತ್ತಾರೆ. ಯೋಗಿಗಳು ಸೇಶ್ವರವಾದಿ ಗಳು. ಚೇತನ ಮತ್ತು ಈಶ್ವರ ಇಬ್ಬರಿರುವರೆಂದು ಯೋಗವಿದರು ಹೇಳು ತ್ತಾರೆ. ಇಪ್ಪತ್ತುನಾಲ್ಕು ತತ್ತ್ವಗಳು ಇಬ್ಬರಿಗೂ ಸಮಾನವೇ.)

ಸಾಂಖ್ಯದರ್ಶನಮೇತಾವತ್ಪರಿಸಂಖ್ಯಾನುದರ್ಶನಮ್ ।
ಸಾಂಖ್ಯಾಃ ಪ್ರಕುರ್ವತೇ ಚೈವ ಪ್ರಕೃತಿಂ ಚ ಪ್ರಚಕ್ಷತೇ ॥೪೨॥

ಜನಕರಾಜ! ಇದೇ ಸಾಂಖ್ಯದರ್ಶನ. ಸಾಂಖ್ಯಯೋಗಿಗಳು ತತ್ತ್ವಗಳ ಸಂಖ್ಯೆಯನ್ನು ಎಣಿಕೆಮಾಡುತ್ತಾರೆ. ಪ್ರಕೃತಿಯೇ ಜಗತ್ತಿಗೆ ಕಾರಣವೆಂದು ಹೇಳುತ್ತಾರೆ. ಆದುದರಿಂದಲೇ ಇದಕ್ಕೆ ಸಾಂಖ್ಯದರ್ಶನವೆಂದು ಹೆಸರಾಗಿದೆ.

ತತ್ತ್ವಾನಿ ಚ ಚತುರ್ವಿಂಶತ್ಪರಿಸಂಖ್ಯಾಯ ತತ್ತ್ವತಃ ।
ಸಾಂಖ್ಯಾಃ ಸಹ ಪ್ರಕೃತ್ಯಾ ತು ನಿಸ್ತತ್ತ್ವಃ ಪಞ್ಚವಿಂಶಕಃ ॥೪೩॥

ಸಾಂಖ್ಯವಿದ್ವಾಂಸರು ಪ್ರಕೃತಿಸಹಿತವಾದ ಇಪ್ಪತ್ತುನಾಲ್ಕು ತತ್ತ್ವಗಳನ್ನು ಎಣಿಕೆಮಾಡುತ್ತಾರೆ. ಚೇತನನನ್ನು ಜಡತತ್ತ್ವಗಳಿಂದ ಭಿನ್ನನಾದ ಇಪ್ಪತ್ತೈದನೆಯವನೆಂದೂ ಅವನು ತತ್ತ್ವವಲ್ಲವೆಂದೂ ಹೇಳುತ್ತಾರೆ.

ಪಞ್ಚವಿಂಶೋಽಪ್ರಕೃತ್ಯಾತ್ಮಾ ಬುಧ್ಯಮಾನ ಇತಿ ಸ್ಮೃತಃ ।
ಯದಾ ತು ಬುಧ್ಯತೇಽತ್ಮಾನಂ ತದಾ ಭವತಿ ಕೇವಲಃ ॥೪೪॥

ಇಪ್ಪತ್ತೈದನೆಯವನಾದ ಚೇತನನು ಪ್ರಕೃತಿಗಿಂತಲೂ ಭಿನ್ನನು. ಜಡವಾದ ಪ್ರಕೃತಿಯನ್ನು ತಿಳಿದುಕೊಂಡ ಪುರುಷನು ಪ್ರಬುದ್ಧನಾಗುತ್ತಾನೆ. ಯಾವಾಗ ಚೇತನನು ತಾನು ಪ್ರಕೃತಿಗೆ ಭಿನ್ನನಾದವನೆಂದೂ ನಿತ್ಯಚಿನ್ಮಯನೆಂದೂ ತಿಳಿಯುವನೋ–ಆಗ ಕೇವಲನೇ ಆಗುತ್ತಾನೆ.

ಸಮ್ಯಗ್ದರ್ಶನಮೇತಾವದ್ಭಾಷಿತಂ ತವ ತತ್ತ್ವತಃ ।
ಏವಮೇತದ್ವಿಜಾನನ್ತಃ ಸಾಮ್ಯತಾಂ ಪ್ರತಿ ಯಾನ್ತ್ಯುತ ॥೪೫॥

ಹೀಗೆ ನಾನು ನಿನಗೆ ಸಾಂಖ್ಯದರ್ಶನವನ್ನು ಯಥಾವತ್ತಾಗಿ ಹೇಳಿರುತ್ತೇನೆ. ಸಾಂಖ್ಯದರ್ಶನವನ್ನು ಹೀಗೆ ತಿಳಿದುಕೊಂಡವರು ಸಾಮ್ಯವನ್ನು ಹೊಂದುತ್ತಾರೆ.

ಸಮ್ಯಙ್ನಿದರ್ಶನಂ ನಾಮ ಪ್ರತ್ಯಕ್ಷಂ ಪ್ರಕೃತೇಸ್ತಥಾ ।
ಗುಣತತ್ತ್ವಾನ್ಯಥೈತಾನಿ ನಿರ್ಗುಣೋಽನ್ಯಸ್ತಥಾ ಭವೇತ್ ॥೪೬॥

ಪ್ರಕೃತಿ ಮತ್ತು ಪುರುಷರ ಪ್ರತ್ಯಕ್ಷದರ್ಶನವೇ (ಅಪರೋಕ್ಷಾನುಭವವೇ) ಸಮ್ಯಗ್ದರ್ಶನವೆಂದು ಹೇಳಲ್ಪಡುತ್ತದೆ. ಪ್ರಕೃತಿಸಹಿತವಾದ ಇಪ್ಪತ್ತು ನಾಲ್ಕು ತತ್ತ್ವಗಳೂ ಗುಣಯುಕ್ತಗಳಾಗಿವೆ. ಇವುಗಳಿಂದ ಭಿನ್ನನಾದವನು ನಿರ್ಗುಣನು.

ನ ತ್ವೇವಂ ವರ್ತಮಾನಾನಾಮಾವೃತ್ತಿರ್ವಿದ್ಯತೇ ಪುನಃ ।
ವಿದ್ಯತೇಽಕ್ಷರಭಾವತ್ವಾದಪರಂ ಪರಮವ್ಯಯಮ್ ॥೪೭॥

ಸಾಂಖ್ಯದರ್ಶನಾನುಸಾರವಾಗಿ ಜ್ಞಾನವನ್ನು ಪಡೆದುಕೊಂಡವರಿಗೆ

ಪುನರಾವೃತ್ತಿ (ಪ್ರಕೃತಿಗೆ ಹಿಂದಿರುಗುವಿಕೆ) ಯಿಲ್ಲ. ಅವರು ಜನನ-ಮರಣಗಳಿಂದ ಮುಕ್ತರಾಗುತ್ತಾರೆ. ಏಕೆಂದರೆ : ಅವರು ಅವಿನಾಶಿಯಾದ ಪರಬ್ರಹ್ಮಭಾವವನ್ನೇ ಹೊಂದುವುದರಿಂದ ಪರಾಪರನಾದ ಅವ್ಯಯನಾದ ಬ್ರಹ್ಮನಲ್ಲಿಯೇ ಅವರಿಗೆ ಸ್ಥಾನವಿರುತ್ತದೆ.

ಪಶ್ಯೇರನ್ನೈಕಮತಯೋ ನ ಸಮ್ಯಕ್ತೇಷು ದರ್ಶನಮ್ ।
ತೇ ವ್ಯಕ್ತಂ ಪ್ರತಿಪದ್ಯನ್ತೇ ಪುನಃ ಪುನರರಿನ್ದಮ ॥೪೮॥

ಅರಿಂದಮನೇ! ಏಕಾಗ್ರವಾದ ಬುದ್ಧಿಯಿಂದ ಕೂಡಿದವರಾಗಿ ಯಾರು ಪರಮಾತ್ಮನನ್ನು ಕಾಣಲು ಪ್ರಯತ್ನಿಸುವುದಿಲ್ಲವೋ–ಅವರಿಗೆ ಸಮ್ಯಗ್ದರ್ಶನವಾಗುವುದಿಲ್ಲ. ಅವರು ವ್ಯಕ್ತವನ್ನು (ಶರೀರವನ್ನು) ಪುನಃ ಪುನಃ ಹೊಂದುತ್ತಲೇ ಇರುತ್ತಾರೆ.

ಸರ್ವಮೇತದ್ವಿಜಾನನ್ತೋ ನಾಸರ್ವಸ್ಯ ಪ್ರಬೋಧನಾತ್ ।
ವ್ಯಕ್ತೀಭೂತಾ ಭವಿಷ್ಯನ್ತಿ ವ್ಯಕ್ತಸ್ಯ ವಶವರ್ತಿನಃ ॥೪೯॥

ಪ್ರಪಂಚದಲ್ಲಿರುವ ಪ್ರಕೃತಿಯ ಸಂಬಂಧವಾದ ಸಕಲವನ್ನೂ ತಿಳಿದುಕೊಳ್ಳುತ್ತಾ ಇವೆಲ್ಲಕ್ಕೂ ಭಿನ್ನನಾದ ಪರಮಾತ್ಮನನ್ನು ತಿಳಿದುಕೊಳ್ಳದೇ ಇರುವುದರಿಂದ ಅವರು ವ್ಯಕ್ತಪ್ರಕೃತಿಗೆ ವಶರಾಗಿ ಶರೀರಧಾರಿಗಳೇ ಆಗುತ್ತಾರೆ.

ಸರ್ವಮವ್ಯಕ್ತಮಿತ್ಯುಕ್ತಮಸರ್ವಃ ಪಞ್ಚವಿಂಶಕಃ ।
ಯ ಏನಮಭಿಜಾನನ್ತಿ ನ ಭಯಂ ತೇಷು ವಿದ್ಯತೇ ॥೫೦॥

ನಿಖಿಲವಾದ ಇಪ್ಪತ್ತುನಾಲ್ಕು ತತ್ತ್ವಗಳೂ ಅವ್ಯಕ್ತಪ್ರಕೃತಿಗೆ ಸಂಬಂಧಿಸಿದುವುಗಳೆಂದು ಹೇಳುತ್ತಾರೆ. ಈ ಸರ್ವಕ್ಕೆ ಸೇರದ (ಇಪ್ಪತ್ತು ನಾಲ್ಕು ತತ್ತ್ವಗಳ ಸಮೂಹಕ್ಕೆ ಸೇರದ) ಇಪ್ಪತ್ತೈದನೆಯವನಾದ ಅಸರ್ವನೇ ಚೇತನನು. ಯಾರು ಚೇತನನನ್ನು ಹೀಗೆ ತಿಳಿದುಕೊಳ್ಳುವರೋ–ಅವರಿಗೆ ಹುಟ್ಟು-ಸಾವುಗಳ ಭಯವೇ ಇರುವುದಿಲ್ಲ."

೩೦೬ನೆಯ ಅಧ್ಯಾಯವು ಮುಗಿಯಿತು.

ವಿದ್ಯೆ-ಅವಿದ್ಯೆಗಳ, ಅಕ್ಷರ-ಕ್ಷರಗಳ ಮತ್ತು ಪ್ರಕೃತಿ-ಪುರುಷರ ಸ್ವರೂಪವರ್ಣನೆ

ಯುಧಿಷ್ಠಿರ! ವಸಿಷ್ಠರು ಹೇಳುತ್ತಾರೆ :

ಸಾಂಖ್ಯದರ್ಶನಮೇತಾವದುಕ್ತಂ ತೇ ನೃಪಸತ್ತಮ ।
ವಿದ್ಯಾವಿದ್ಯೇ ತ್ವಿದಾನೀಂ ಮೇ ತ್ವಂ ನಿಬೋಧಾನುಪೂರ್ವಶಃ ॥೧॥

"ನೃಪಶ್ರೇಷ್ಠನೇ! ಇದುವರೆಗೆ ನಾನು ಸಾಂಖ್ಯದರ್ಶನದ ವಿಷಯವನ್ನು ಹೇಳಿದೆನು. ಈಗ ನಿನಗೆ ವಿದ್ಯೆ ಮತ್ತು ಅವಿದ್ಯೆಗಳ ಸ್ವರೂಪಗಳನ್ನು ಕ್ರಮವಾಗಿ ತಿಳಿಸುವೆನು ; ಕೇಳು.

ಅವಿದ್ಯಾಮಾಹುರವ್ಯಕ್ತಂ ಸರ್ಗಪ್ರಲಯಧರ್ಮಿ ವೈ ।
ಸರ್ಗಪ್ರಲಯನಿರ್ಮುಕ್ತಾಂ ವಿದ್ಯಾಂ ವೈ ಪಞ್ಚವಿಂಶಕಮ್ ॥೨॥

ಸೃಷ್ಟಿ-ಪ್ರಲಯಗಳ ಧರ್ಮವಿರುವ ಅವ್ಯಕ್ತಪ್ರಕೃತಿಯನ್ನು ಅವಿದ್ಯೆಯೆಂದು ಹೇಳುತ್ತಾರೆ. ಸೃಷ್ಟಿ-ಪ್ರಲಯಗಳಿಂದ ಮುಕ್ತನಾದ ಇಪ್ಪತ್ತೈದನೆಯವನಾದ ಚೇತನನನ್ನು ವಿದ್ಯೆಯೆಂದು ಹೇಳುತ್ತಾರೆ.

ಪರಸ್ಪರಸ್ಯ ವಿದ್ಯಾಂ ವೈ ತ್ವಂ ನಿಬೋಧಾನುಪೂರ್ವಶಃ ।
ಯಥೋಕ್ತಮೃಷಿಭಿಸ್ತಾತ ಸಾಂಖ್ಯಸ್ಯಾಭಿನಿದರ್ಶನಮ್ ॥೩॥

ಜನಕರಾಜ! ಋಷಿಗಳು ಯಾವ ರೀತಿಯಲ್ಲಿ ಸಾಂಖ್ಯದರ್ಶನದ ದೃಷ್ಟಾಂತವನ್ನು ಹೇಳಿರುವರೋ–ಅದೇ ರೀತಿಯಲ್ಲಿ ನಾನು ನಿನಗೆ ಅವ್ಯಕ್ತ ಪ್ರಕೃತಿಯಲ್ಲಿ ಯಾವ ಪಾರಸ್ಪರಿಕವಾದ ಭೇದವಿರುವುದೋ ಮತ್ತು ಅವುಗಳಲ್ಲಿ ಯಾವುದು ವಿದ್ಯಾಸ್ವರೂಪವಾಗಿರುವುದೋ (ಶ್ರೇಷ್ಠವಾಗಿರುವುದೋ)–ಅದನ್ನು ಹೇಳುತ್ತೇನೆ. ಅನುಕ್ರಮವಾಗಿ ಈ ವಿಷಯವನ್ನು ಕೇಳು.

ಕರ್ಮೇನ್ದ್ರಿಯಾಣಾಂ ಸರ್ವೇಷಾಂ ವಿದ್ಯಾ ಬುದ್ಧೀನ್ದ್ರಿಯಂ ಸ್ಮೃತಮ್ ।
ಬುದ್ಧೀನ್ದ್ರಿಯಾಣಾಂ ಚ ತಥಾ ವಿಶೇಷಾ ಇತಿ ನಃ ಶ್ರುತಮ್ ॥೪॥

ಸಮಸ್ತವಾದ ಕರ್ಮೇಂದ್ರಿಯಗಳಿಗೆ ಜ್ಞಾನೇಂದ್ರಿಯವು ವಿದ್ಯೆಯೆಂದು (ಕರ್ಮೇಂದ್ರಿಯಗಳಿಗಿಂತಲೂ ಜ್ಞಾನೇಂದ್ರಿಯವು ಶ್ರೇಷ್ಠವಾದುದೆಂದು) ಹೇಳಲ್ಪಟ್ಟಿದೆ. ಹಾಗೆಯೇ ಜ್ಞಾನೇಂದ್ರಿಯಗಳಲ್ಲಿ ಪಂಚಮಹಾಭೂತಗಳು ಶ್ರೇಷ್ಠವಾದುವುಗಳು. ಜ್ಞಾನೇಂದ್ರಿಯಗಳಿಗೆ ವಿದ್ಯೆಯು ಪಂಚಭೂತಗಳು.

ವಿಶೇಷಾಣಾಂ ಮನಸ್ತೇಷಾಂ ವಿದ್ಯಾಮಾಹುರ್ಮನೀಷಿಣಃ ।
ಮನಸಃ ಪಞ್ಚ ಭೂತಾನಿ ವಿದ್ಯಾ ಇತ್ಯಭಿಚಕ್ಷತೇ ॥೫॥

ವಿದ್ವಾಂಸರು ಸ್ಥೂಲಪಂಚಭೂತಗಳ ವಿದ್ಯೆಯು ಮನಸ್ಸೆಂದು ಹೇಳುತ್ತಾರೆ. ಮನಸ್ಸಿಗೆ ಸೂಕ್ಷ್ಮಪಂಚಭೂತಗಳು ವಿದ್ಯೆಯು.

ಅಹಙ್ಕಾರಸ್ತು ಭೂತಾನಾಂ ಪಞ್ಚಾನಾಂ ನಾತ್ರ ಸಂಶಯಃ ।
ಅಹಙ್ಕಾರಸ್ಯ ಚ ತಥಾ ಬುದ್ಧಿರ್ವಿದ್ಯಾ ನರೇಶ್ವರ ॥೬॥

ನರೇಶ್ವರನೇ! ಸೂಕ್ಷ್ಮವಾದ ಪಂಚಭೂತಗಳಿಗೆ ಅಹಂಕಾರವೇ ವಿದ್ಯೆಯು. ಈ ವಿಷಯದಲ್ಲಿ ಸಂಶಯವೇ ಇಲ್ಲ. ಅಹಂಕಾರಕ್ಕೆ ಬುದ್ಧಿಯೇ ವಿದ್ಯೆಯು.

ವಿದ್ಯಾ ಪ್ರಕೃತಿರವ್ಯಕ್ತಂ ತತ್ತ್ವಾನಾಂ ಪರಮೇಶ್ವರೀ ।
ವಿದ್ಯಾ ಜ್ಞೇಯಾ ನರಶ್ರೇಷ್ಠ ವಿಧಿಶ್ಚ ಪರಮಃ ಸ್ಮೃತಃ ॥೭॥

ಅವ್ಯಕ್ತವೆಂಬ ಹೆಸರಿನಿಂದ ಯಾವ ಪರಮೇಶ್ವರೀಪ್ರಕೃತಿಯಿರುವುದೋ ಅದು ಬುದ್ಧಿಯೇ ಮೊದಲಾದ ಎಲ್ಲ ತತ್ತ್ವಗಳಿಗೂ ವಿದ್ಯೆಯಾಗಿದೆ. ನರಶ್ರೇಷ್ಠನೇ! ಈ ವಿದ್ಯೆಯನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕು. ಇದರ ವಿಧಿಯೂ ಪರಮಶ್ರೇಷ್ಠವೆಂದು ಹೇಳುತ್ತಾರೆ.

ಅವ್ಯಕ್ತಸ್ಯ ಪರಂ ಪ್ರಾಹುರ್ವಿದ್ಯಾ ವೈ ಪಞ್ಚವಿಂಶಕಮ್ ।
ಸರ್ವಸ್ಯ ಸರ್ವಮಿತ್ಯುಕ್ತಂ ಜ್ಞೇಯಂ ಜ್ಞಾನಸ್ಯ ಪಾರ್ಥಿವ ॥೮॥

ಇಪ್ಪತ್ತೈದನೆಯವನಾದ ಯಾವ ಚೇತನನಿರುವನೋ–ಅವನನ್ನು ಅವ್ಯಕ್ತಪ್ರಕೃತಿಯ ಪರಮವಿದ್ಯೆಯೆನ್ನುತ್ತಾರೆ. ಆ ಚೇತನನೇ ಸಂಪೂರ್ಣ ಜ್ಞಾನದ ಜ್ಞೇಯರೂಪನಾಗಿದ್ದಾನೆ. (ಸಂಪೂರ್ಣಜ್ಞಾನದಿಂದ ತಿಳಿಯಲ್ಪಡ ತಕ್ಕವನಾಗಿದ್ದಾನೆ.)

ಜ್ಞಾನಮವ್ಯಕ್ತಮಿತ್ಯುಕ್ತಂ ಜ್ಞೇಯೋ ವೈ ಪಞ್ಚವಿಂಶಕಃ ।
ತಥೈವ ಜ್ಞಾನಮವ್ಯಕ್ತಂ ವಿಜ್ಞಾತಾ ಪಞ್ಚವಿಂಶಕಃ ॥೯॥

ಜ್ಞಾನವು (ತಿಳಿವಳಿಕೆಯು) ಅವ್ಯಕ್ತವೆಂದು ಹೇಳಲ್ಪಟ್ಟಿದೆ. ಜ್ಞೇಯನು (ತಿಳಿಯಲ್ಪಡತಕ್ಕವನು) ಇಪ್ಪತ್ತೈದನೆಯವನಾದ ಚೇತನನೇ ಆಗಿದ್ದಾನೆ. ಅದೇ ರೀತಿಯಲ್ಲಿ ಜ್ಞಾನವು ಅವ್ಯಕ್ತವಾದುದು. ಆ ಜ್ಞಾನವನ್ನು ತಿಳಿದಿರುವವನು ಇಪ್ಪತ್ತೈದನೆಯವನಾದ ಚೇತನನೇ ಆಗಿದ್ದಾನೆ. (ಅರ್ಥಾತ್ ಜ್ಞಾನದಿಂದ ತಿಳಿಯಲ್ಪಡತಕ್ಕವನೂ (ಜ್ಞೇಯ) ಅವನೇ ; ತಿಳಿದಿರುವವನೂ 'ಜ್ಞಾನವುಳ್ಳವನೂ' (ವಿಜ್ಞಾತಾ) ಅವನೇ ಆಗಿದ್ದಾನೆ.)

ವಿದ್ಯಾವಿದ್ಯಾರ್ಥತತ್ತ್ವೇನ ಮಯೋಕ್ತಾ ತೇ ವಿಶೇಷತಃ ।
ಅಕ್ಷರಂ ಚ ಕ್ಷರಂ ಚೈವ ಯದುಕ್ತಂ ತನ್ನಿಬೋಧ ಮೇ ॥೧೦॥

ಮಹಾರಾಜ! ನಾನೀಗ ವಿದ್ಯಾಸಹಿತವಾದ ಅವಿದ್ಯೆಯನ್ನು ಯಥಾವತ್ತಾಗಿ ಹೇಳಿದ್ದೇನೆ. ಈಗ ಅಕ್ಷರ ಮತ್ತು ಕ್ಷರಗಳೆಂಬ ಯಾವ ತತ್ತ್ವಗಳು ಹೇಳಲ್ಪಟ್ಟಿವೆಯೋ–ಅವನ್ನು ಕೇಳು.

ಉಭಾವೇವಾಕ್ಷರಾವುಕ್ತಾವುಭಾವೇತಾವನಕ್ಷರೌ ।
ಕಾರಣಂ ತು ಪ್ರವಕ್ಷ್ಯಾಮಿ ಯಾಥಾತಥ್ಯಂ ತು ಜ್ಞಾನತಃ ॥೧೧॥

ಸಾಂಖ್ಯಮತದಲ್ಲಿ ಪ್ರಕೃತಿ-ಪುರುಷರಿಬ್ಬರನ್ನೂ ಅಕ್ಷರರೆಂದೇ ಹೇಳುತ್ತಾರೆ. ಹಾಗೆಯೇ ಪ್ರಕೃತಿ-ಪುರುಷರೂ ಕ್ಷರರೂ ಆಗಿದ್ದಾರೆ. ನನಗೆ ತಿಳಿದಿರುವಮಟ್ಟಿಗೆ ಇದರ ಯಥಾರ್ಥವಾದ ಕಾರಣವನ್ನು ಹೇಳುತ್ತೇನೆ.

ಅನಾದಿನಿಧನಾವೇತಾವುಭಾವೇವೇಶ್ವರೌ ಮತೌ ।
ತತ್ತ್ವಸಂಜ್ಞಾವುಭಾವೇತೌ ಪ್ರೋಚ್ಯತೇ ಜ್ಞಾನಚಿನ್ತಕೈಃ ॥೧೨॥

ಪ್ರಕೃತಿ-ಪುರುಷರಿಬ್ಬರೂ ಆದಿ-ಅಂತ್ಯಗಳೆರಡೂ ಇಲ್ಲದವರು. ಆದುದರಿಂದ ಇಬ್ಬರೂ ಈಶ್ವರರೆಂದೇ ಹೇಳಲ್ಪಟ್ಟಿದ್ದಾರೆ. ತತ್ತ್ವಜ್ಞಾನಚಿಂತಕರಾದ ವಿದ್ವಾಂಸರು ಪ್ರಕೃತಿ-ಪುರುಷರಿಬ್ಬರನ್ನೂ ತತ್ತ್ವಗಳೆಂದೇ ಹೇಳುತ್ತಾರೆ.

ಸರ್ಗಪ್ರಲಯಧರ್ಮತ್ವಾದವ್ಯಕ್ತಂ ಪ್ರಾಹುರಕ್ಷರಮ್ ।
ತದೇತದ್ಗುಣಸರ್ಗಾಯ ವಿಕುರ್ವಾಣಂ ಪುನಃ ಪುನಃ ॥೧೩॥

ಸೃಷ್ಟಿ-ಪ್ರಲಯಗಳ ಧರ್ಮವಿರುವುದರಿಂದ ಪ್ರಕೃತಿಯನ್ನು ಅಕ್ಷರವೆಂದು ಹೇಳುತ್ತಾರೆ. ಅದೇ ಪ್ರಕೃತಿಯು ಮಹತ್ತತ್ತ್ವಾದಿಗುಣಗಳ ಸೃಷ್ಟಿಗಾಗಿ ಪದೇ-ಪದೇ ವಿಕಾರವನ್ನು ಹೊಂದುವುದರಿಂದ ಅದನ್ನು ಕ್ಷರವೆಂದೂ ಕರೆಯುತ್ತಾರೆ.

ಗುಣಾನಾಂ ಮಹದಾದೀನಾಮುತ್ಪತ್ತಿಶ್ಚ ಪರಸ್ಪರಮ್ ।
ಅಧಿಷ್ಠಾನಾತ್ಕ್ಷೇತ್ರಮಾಹುರೇತತ್ತತ್ತ್ವಂ ಚ ವಿಂಶಕಮ್ ॥೧೪॥

ಮಹದಾದಿಗುಣಗಳ ಉತ್ಪತ್ತಿಯು ಪ್ರಕೃತಿ ಮತ್ತು ಪುರುಷರ ಪರಸ್ಪರ ಸಂಯೋಗದಿಂದ ಉಂಟಾಗುವುದರಿಂದಲೂ ಮತ್ತು ಪ್ರಕೃತಿಯು ಪುರುಷನಿಗೂ–ಪುರುಷನು ಪ್ರಕೃತಿಗೂ ಆಶ್ರಯವಾಗಿರುವುದರಿಂದಲೂ ಇಪ್ಪತ್ತೈದನೆಯವನಾದ ಪುರುಷನನ್ನೂ ಕ್ಷೇತ್ರವೆಂದೇ ಕರೆಯುತ್ತಾರೆ.

ಯದಾ ತು ಗುಣಜಾಲಂ ತದವ್ಯಕ್ತಾತ್ಮನಿ ಸಂಕ್ಷಿಪೇತ್ ।
ತದಾ ಸಹ ಗುಣೈಸ್ತೈಸ್ತು ಪಞ್ಚವಿಂಶೋ ವಿಲೀಯತೇ ॥೧೫॥

ಯೋಗಿಯು ಮಹದಾದಿಗುಣಗಳಿಂದ ಕೂಡಿದ ಅವ್ಯಕ್ತಪ್ರಕೃತಿಯನ್ನು ಯಾವಾಗ ಆತ್ಮನಲ್ಲಿ ಲೀನಗೊಳಿಸುವನೋ–ಆಗ ಆ ಇಪ್ಪತ್ತೈದನೆಯವನಾದ ಪುರುಷನೂ ಪರಬ್ರಹ್ಮತತ್ತ್ವದಲ್ಲಿ ಲೀನನಾಗುತ್ತಾನೆ. ಈ ದೃಷ್ಟಿಯಿಂದ ಚೇತನನು ಕ್ಷರನೂ ಆಗುತ್ತಾನೆ.

ಗುಣಾ ಗುಣೇಷು ಲೀಯನ್ತೇ ತದೈಕಾ ಪ್ರಕೃತಿರ್ಭವೇತ್ ।
ಕ್ಷೇತ್ರಜ್ಞೋಽಪಿ ಯದಾ ತಾತ ತತ್ಕ್ಷೇತ್ರೇ ಸಮ್ಪ್ರಲೀಯತೇ ॥೧೬॥

ತದಾ ಕ್ಷರತ್ವಂ ಪ್ರಕೃತಿರ್ಗಚ್ಛತೇ ಗುಣಸಂಶ್ರಿತಾ ।
ನಿರ್ಗುಣತ್ವಂ ಚ ವೈದೇಹ ಗುಣೇಷ್ವಪ್ರತಿವರ್ತನಾತ್ ॥೧೭॥

ವಿದೇಹಾಧಿಪತಿಯೇ! ವಿಲೋಮಕ್ರಮದಿಂದ ಕಾರ್ಯಭೂತವಾದ ಗುಣಗಳೆಲ್ಲವೂ ಕಾರಣಭೂತವಾದ ಗುಣಗಳಲ್ಲಿ ಲೀನವಾದಾಗ–ಪ್ರಕೃತಿಯು ಮಾತ್ರವೇ ಉಳಿದಿರುತ್ತದೆ. ಅದೇ ಕ್ಷೇತ್ರದಲ್ಲಿ ಪರಮಾತ್ಮನೊಡನೆ ಯಾವಾಗ ಇಪ್ಪತ್ತೈದನೆಯವನಾದ ಕ್ಷೇತ್ರಜ್ಞನೂ (ಚೇತನನೂ) ಲೀನವಾಗುವನೋ–

ಆಗ ಮಹದಾದಿಗುಣಗಳಿಂದ ಯುಕ್ತವಾದ ಪ್ರಕೃತಿಯೂ ಕೂಡ ವಿಕಾರತ್ವ ವನ್ನು ಅಥವಾ ವಿನಾಶವನ್ನು ಹೊಂದುತ್ತದೆ. (ಪ್ರಳಯಾನಂತರ ಪ್ರಕೃತಿಯೂ ಗುಣಗಳಲ್ಲಿ ತೊಡಗದಿರುವುದರಿಂದ ನಿರ್ಗುಣವಾಗಿದೆ.) ಪುರುಷನೂ ಕೂಡ ಗುಣಗಳಲ್ಲಿ ಪ್ರವೃತ್ತನಾಗದೇ ಇರುವುದರಿಂದ ನಿರ್ಗುಣವುಳ್ಳವ (ಗುಣಾತೀತ) ನಾಗುತ್ತಾನೆ.

ಏವಮೇವ ಚ ಕ್ಷೇತ್ರಜ್ಞಃ ಕ್ಷೇತ್ರಜ್ಞಾನಪರಿಕ್ಷಯೇ ।
ಪ್ರಕೃತ್ಯಾ ನಿರ್ಗುಣಸ್ತ್ವೇಷ ಇತ್ಯೇವಮನುಶುಶ್ರುಮ ॥೧೮॥

ಇದೇ ರೀತಿಯಲ್ಲಿ ಕ್ಷೇತ್ರಜ್ಞನು ಕ್ಷೇತ್ರಜ್ಞಾನದಿಂದ ರಹಿತನಾಗಿರುವ ಆ ಸಮಯದಲ್ಲಿ (ಪರಮಾತ್ಮನಲ್ಲಿ ಲೀನವಾಗಿರುವ ಸಮಯದಲ್ಲಿ) ಅವನಿಗೆ ಕ್ಷೇತ್ರದ (ಶರೀರದ) ಅರಿವೇ ಇಲ್ಲದೇ ಇರುವುದರಿಂದ ಸ್ವಾಭಾವಿಕವಾಗಿಯೇ ಚೇತನನು ನಿರ್ಗುಣನೇ ಆಗಿರುತ್ತಾನೆಂದು ನಾವು ಕೇಳಿದ್ದೇವೆ.

ಕ್ಷರೋ ಭವತ್ಯೇಷ ಯದಾ ತದಾ ಗುಣವತೀಮಥ ।
ಪ್ರಕೃತಿಂ ತ್ವಭಿಜಾನಾತಿ ನಿರ್ಗುಣತ್ವಂ ತಥಾತ್ಮನಃ ॥೧೯॥

ಯಾವಾಗ ಚೇತನನು ಕ್ಷರನಾಗುವನೋ (ಪರಮಾತ್ಮನಲ್ಲಿ ಲೀನವಾದ ಅನುಭವವನ್ನು ಪಡೆಯುವನೋ)–ಆಗ ಪ್ರಕೃತಿಯ ಸಗುಣತ್ವವನ್ನೂ ತನ್ನ ನಿರ್ಗುಣತ್ವವನ್ನೂ ತಿಳಿದುಕೊಳ್ಳುತ್ತಾನೆ.

ತದಾ ವಿಶುದ್ಧೋ ಭವತಿ ಪ್ರಕೃತೇಃ ಪರಿವರ್ಜನಾತ್ ।
ಅನ್ಯೋಽಹಮನ್ಯೇಯಮಿತಿ ಯದಾ ಬುಧ್ಯತಿ ಬುದ್ಧಿಮಾನ್ ॥೨೦॥

ಬುದ್ಧಿವಂತನಾದ ಚೇತನನು ಪ್ರಕೃತಿಯನ್ನು ವಿಸರ್ಜಿಸಿ ಅಥವಾ ಗುಣ ಸಹಿತಳಾದ ಪ್ರಕೃತಿಯನ್ನು ತನ್ನಲ್ಲಿಯೇ ಲೀನಗೊಳಿಸಿಕೊಂಡು ಪರಮಾತ್ಮ ನನ್ನು ಸೇರಿ ಯಾವಾಗ ಆತ್ಮಾನುಭವವನ್ನು ಪಡೆಯುವನೋ–ಆಗ ತಾನು ಬೇರೆ, ಪ್ರಕೃತಿಯು ಬೇರೆ–ಎಂಬುದನ್ನು ತಿಳಿದು ಶುದ್ಧಸ್ವರೂಪದಲ್ಲಿರುತ್ತಾನೆ.

ತದೈಷ ತತ್ತ್ವತಾಮೇತಿ ನ ಚಾಪಿ ಮಿಶ್ರತಾಂ ವ್ರಜೇತ್ ।
ಪ್ರಕೃತ್ಯಾ ಚೈವ ರಾಜೇನ್ದ್ರ ಮಿಶ್ರೋ ಹ್ಯನ್ಯಶ್ಚ ದೃಶ್ಯತೇ ॥೨೧॥

ಪರಮಾತ್ಮನೊಡನೆ ಲೀನವಾದ ಆ ಸಮಯದಲ್ಲಿ ಚೇತನನು

ಪರತತ್ತ್ವನೇ ಆಗಿರುತ್ತಾನೆ. ಪ್ರಕೃತಿಯೊಡನೆ ಅವನ ಸಂಬಂಧವು ಸ್ವಲ್ಪವಾದರೂ ಇರುವುದಿಲ್ಲ. ಆದರೆ ಚೇತನನು ಪ್ರಕೃತಿಗೆ ಸಂಬಂಧಿಸಿದ ದೇಹವನ್ನು ಧರಿಸಿರುವುದರಿಂದ ಪ್ರಕೃತಿಯೊಡನೆ ಸೇರಿರುವಂತೆ ಕಂಡುಬಂದರೂ–ತಾನು ಬೇರೆ ಪ್ರಕೃತಿಯು ಬೇರೆ–ಎಂಬ ಅನುಭವವು ಚೇತನನಿಗೆ ಚೆನ್ನಾಗಿರುತ್ತದೆ.

ಯದಾ ತು ಗುಣಜಾಲಂ ತತ್ಪ್ರಾಕೃತಂ ವೈ ಜುಗುಪ್ಸತೇ ।
ಪಶ್ಯತೇ ಚ ಪರಂ ಪಶ್ಯಂ ತದಾ ಪಶ್ಯನ್ನ ಸಂತ್ಯಜೇತ್ ॥೨೨॥

ಯಾವಾಗ ಸಾಧಕನು ಪ್ರಕೃತಿಯ ಸಂಬಂಧವಾದ ಗುಣಗಳ ಸಮೂಹವನ್ನು ಕುತ್ಸಿತವೆಂದು ಭಾವಿಸಿ ತ್ಯಾಗಮಾಡುವನೋ–ಆಗ ಅವನು ಪ್ರೇಕ್ಷಣೀಯನಾದ ಪರಮಾತ್ಮನನ್ನು ಹೃದಯಗುಹೆಯಲ್ಲಿ ಕಂಡುಕೊಳ್ಳುತ್ತಾನೆ. ಒಮ್ಮೆ ಕಂಡನಂತರ ಪುನಃ ಆ ಪರತತ್ತ್ವವನ್ನು ಬಿಡುವುದೇ ಇಲ್ಲ.

ಕಿಂ ಮಯಾ ಕೃತಮೇತಾವದ್ಯೋಽಹಂ ಕಾಲಮಿಮಂ ಜನಮ್ ।
ಮತ್ಸ್ಯೋ ಜಾಲಂ ಹ್ಯವಿಜ್ಞಾನಾದನುವರ್ತಿತವಾನಿಹ ॥೨೩॥

ಆತ್ಮಬೋಧವಾದ ಬಳಿಕ ಚೇತನನು ಹೀಗೆ ಯೋಚಿಸುತ್ತಾನೆ : 'ನಾನು ಇದುವರೆಗೂ ಏನು ಮಾಡಿಬಿಟ್ಟೆ? ಅಜ್ಞಾನದ ಕಾರಣದಿಂದಾಗಿ– ಮೀನು ತಾನಾಗಿಯೇ ಹೋಗಿ ಬಲೆಯಲ್ಲಿ ಬೀಳುವಂತೆ–ನಾನು ಇಷ್ಟು ಕಾಲದವರೆಗೂ ಈ ಪ್ರಾಕೃತಶರೀರವನ್ನೇ ಅನುಸರಿಸಿಕೊಂಡು ಹೋಗುತ್ತಿದ್ದೆನಲ್ಲವೇ?

ಅಹಮೇವ ಹಿ ಸಮ್ಮೋಹಾದನ್ಯಮನ್ಯಂ ಜನಾಜ್ಜನಮ್ ।
ಮತ್ಸ್ಯೋ ಯಥೋದಕಜ್ಞಾನಾದನುವರ್ತಿತವಾನಹಮ್ ॥೨೪॥

ಯಾವ ರೀತಿಯಲ್ಲಿ ಮೀನು ಸಮೃದ್ಧವಾಗಿ ನೀರಿರುವ ಕಡೆಗೆ ಹೋಗಬೇಕೆಂಬ ಹವ್ಯಾಸದಿಂದ ಒಂದು ಜಲಾಶಯದಿಂದ ಮತ್ತೊಂದು ಜಲಾಶಯಕ್ಕೆ ಹೋಗುತ್ತಿರುತ್ತದೆಯೋ–ಅದೇ ರೀತಿಯಲ್ಲಿ ನಾನೂ ಕೂಡ ಮೋಹವಶನಾಗಿ ಒಂದು ದೇಹದಿಂದ ಮತ್ತೊಂದು ದೇಹವನ್ನು ಹುಡುಕಿಕೊಂಡು ಹೋಗುತ್ತಿದ್ದೆನು.

ಮತ್ಸ್ಯೋಽನ್ಯತ್ವಂ ಯಥಾಜ್ಞಾನಾದುದಕಾನ್ನಾಭಿಮನ್ಯತೇ ।
ಆತ್ಮಾನಂ ತದ್ವದಜ್ಞಾನಾದನ್ಯತ್ವಂ ನೈವ ವೇದ್ಮ್ಯಹಮ್ ॥೨೫॥

ಯಾವ ರೀತಿಯಲ್ಲಿ ಮೀನು ಅಜ್ಞಾನದ ಕಾರಣದಿಂದ ತಾನು ನೀರಿನಿಂದ ಭಿನ್ನವಾಗಿರುವುದನ್ನು ತಿಳಿದುಕೊಂಡಿಲ್ಲವೋ–ಅದೇ ರೀತಿಯಲ್ಲಿ ನಾನು ಇದುವರೆಗೂ ಅಜ್ಞಾನದ ಕಾರಣದಿಂದ ನನ್ನನ್ನು ಈ ಪ್ರಾಕೃತಶರೀರದಿಂದ ಭಿನ್ನನಾದವನೆಂಬುದನ್ನು ತಿಳಿದುಕೊಂಡೇ ಇರಲಿಲ್ಲ.

ಮಮಾಸ್ತು ಧಿಗಬುದ್ಧಸ್ಯ ಯೋಽಹಂ ಮಗ್ನಮಿಮಂ ಪುನಃ ।
ಅನುವರ್ತಿತವಾನ್ಮೋಹಾದನ್ಯಮನ್ಯಂ ಜನಾಜ್ಜನಮ್ ॥೨೬॥

ನನ್ನ ಮೂರ್ಖತೆಗೆ ಧಿಕ್ಕಾರವಿರಲಿ! ಸಂಸಾರಸಾಗರದಲ್ಲಿ ಮುಳುಗಿದ್ದ ನಾನು ಮೋಹವಶನಾಗಿ ಒಂದು ದೇಹದಿಂದ ಬೇರೆ ಬೇರೆಯ ದೇಹಗಳನ್ನು ಅನುಸರಿಸಿಕೊಂಡು ಹೋಗುತ್ತಲೇ ಇದ್ದೆನು.

ಅಯಮತ್ರ ಭವೇದ್ಬನ್ಧುರನೇನ ಸಹ ಮೇ ಕ್ಷಮಮ್ ।
ಸಾಮ್ಯಮೇಕತ್ವಮಾಯಾತೋ ಯಾದೃಶಸ್ತಾದೃಶಸ್ತ್ವಹಮ್ ॥೨೭॥

ಈ ಜಗತ್ತಿನಲ್ಲಿ ಈಗ ನನಗೆ ಪರಮಾತ್ಮನೇ ಬಂಧುವಾಗಿದ್ದಾನೆ. ಅವನೊಡನೆ ಇರುವುದೇ ನನಗೆ ಉಚಿತವಾಗಿದೆ. ಈಗ ನಾನು ಅವನೊಡನೆ ಸಾಮ್ಯವನ್ನು ಹೊಂದಿದ್ದೇನೆ. ಏಕತ್ವವನ್ನು ಹೊಂದಿದ್ದೇನೆ. ಅವನು ಹೇಗಿರುವನೋ ನಾನೂ ಹಾಗೆಯೇ ಇದ್ದೇನೆ.

ತುಲ್ಯತಾಮಿಹ ಪಶ್ಯಾಮಿ ಸದೃಶೋಽಹಮನೇನ ವೈ ।
ಅಯಂ ಹಿ ವಿಮಲೋ ವ್ಯಕ್ತಮಹಮೀದೃಶಕಸ್ತಥಾ ॥೨೮॥

ನಾನು ಪರಮಾತ್ಮನೊಡನೆ ಸಮಾನವಾಗಿರುವುದನ್ನು ಕಾಣುತ್ತಿದ್ದೇನೆ. ನಾನು ಅವನ ಸದೃಶನಾಗಿದ್ದೇನೆ. ಪರಮಾತ್ಮನು ಅತ್ಯಂತ ಪರಿಶುದ್ಧನಾಗಿರುವನೆಂಬುದನ್ನು ಸ್ಪಷ್ಟವಾಗಿ ಕಾಣುತ್ತಿದ್ದೇನೆ. ನಾನೂ ಅವನಂತೆಯೇ ಅತ್ಯಂತ ಪರಿಶುದ್ಧನಾಗಿದ್ದೇನೆ.

ಯೋಽಹಮಜ್ಞಾನಸಮ್ಮೋಹಾದಜ್ಞಯಾ ಸಮ್ಪ್ರವೃತ್ತವಾನ್ ।
ಸಸಙ್ಗಯಾಹಂ ನಿಃಸಙ್ಗಃ ಸ್ಥಿತಃ ಕಾಲಮಿಮಂ ತ್ವಹಮ್ ॥೨೯॥

ವಾಸ್ತವವಾಗಿ ನಾನು ನಿಸ್ಸಂಗನೇ ಆಗಿದ್ದರೂ ಅಜ್ಞಾನದಿಂದಲೂ ವಿಶೇಷವಾದ ಭ್ರಾಂತಿಯಿಂದಲೂ ಕೂಡಿದವನಾಗಿ ಈ ಸಮಯದವರೆಗೂ ಸಂಗಸ್ವರೂಪಳಾದ, ಜಡಳಾದ ಪ್ರಕೃತಿಯೊಡನೆಯೇ ಇದ್ದುಬಿಟ್ಟೆನು.

ಅನಯಾಹಂ ವಶೀಭೂತಃ ಕಾಲಮೇತಂ ನ ಬುದ್ಧವಾನ್ ।
ಉಚ್ಚಮಧ್ಯಮನೀಚಾನಾಂ ತಾಮಹಂ ಕಥಮಾವಸೇ ॥೩೦॥

ನಾನು ಈ ಪ್ರಕೃತಿಗೆ ವಶನಾಗಿ ಇಷ್ಟು ಕಾಲವು ವ್ಯರ್ಥವಾಗಿ ಕಳೆದು ಹೋಗಿರುವುದನ್ನೇ ತಿಳಿಯದವನಾಗಿದ್ದೆನು. ಪ್ರಕೃತಿಯು ಉತ್ತಮ-ಮಧ್ಯಮ-ನೀಚರಲ್ಲಿ ಯಾವ ತಾರತಮ್ಯವೂ ಇಲ್ಲದೇ ಸೇರಿಕೊಂಡಿರುತ್ತಾಳೆ. ಅಂತಹವಳೊಡನೆ ನಾನು ಇನ್ನು ಮುಂದೆ ಹೇಗೆ ತಾನೇ ವಾಸಮಾಡಲಿ?

ಸಮಾನಯಾನಯಾ ಚೇಹ ಸಹ ವಾಸಮಹಂ ಕಥಮ್ ।
ಗಚ್ಛಾಮ್ಯಬುದ್ಧಭಾವತ್ವಾದೇಷೇದಾನೀಂ ಸ್ಥಿರೋ ಭವೇ ॥೩೧॥

ಇದುವರೆಗೂ ನಾನು ಅಜ್ಞಾನದ ಕಾರಣದಿಂದ ಇವಳ ಸಹವಾಸದಲ್ಲಿಯೇ ಇದ್ದುಬಿಟ್ಟೆನು. ಆದರೆ ಈಗ ನನ್ನೊಡನೆ ಸಮಾನತೆಯನ್ನು ತೋರಿಸಿಕೊಳ್ಳುತ್ತಿರುವ ಈ ಪ್ರಕೃತಿಯ ಸಹವಾಸವನ್ನು ನಾನು ಹೇಗೆ ತಾನೇ ಮಾಡಲಿ? ಈಗ ನಾನು ಆತ್ಮಜ್ಞಾನದಲ್ಲಿಯೇ ಸ್ಥಿರವಾಗಿದ್ದುಬಿಟ್ಟಿದ್ದೇನೆ.

ಸಹವಾಸಂ ನ ಯಾಸ್ಯಾಮಿ ಕಾಲಮೇತದ್ಧಿ ವಞ್ಚನಾತ್ ।
ವಞ್ಚಿತೋಽಸ್ಮ್ಯನಯಾ ಯದ್ಧಿ ನಿರ್ವಿಕಾರೋ ವಿಕಾರಯಾ ॥೩೨॥

ನಾನು ನಿರ್ವಿಕಾರನೇ ಆಗಿದ್ದರೂ ವಿಕಾರಮಯಿಯಾದ ಈ ಪ್ರಕೃತಿಯಿಂದ ವಂಚಿಸಲ್ಪಟ್ಟು ಇವಳ ಈ ವಂಚನೆಯಿಂದಾಗಿ ನಾನು ಈ ಹೊತ್ತಿನವರೆಗೂ ವಿಕಾರವಿರುವವನಂತೆಯೇ ಆಗಿಬಿಟ್ಟಿದ್ದೆನು. ಇನ್ನು ಮುಂದೆ ನಾನು ಇವಳ ಸಹವಾಸವನ್ನು ಖಂಡಿತವಾಗಿಯೂ ಮಾಡುವುದಿಲ್ಲ.

ನ ಚಾಯಮಪರಾಧೋಽಸ್ಯಾ ಹ್ಯಪರಾಧೋ ಹ್ಯಯಂ ಮಮ ।
ಯೋಽಹಮತ್ರಾಭವಂ ಸಕ್ತಃ ಪರಾಙ್ಮುಖಮುಪಸ್ಥಿತಃ ॥೩೩॥

ಆದರೆ ನಿರ್ವಿಕಾರನಾದ ನಾನು ಇವಳೊಡನೆ ಸೇರಿ ವಿಕಾರವಂತನಾದುದಕ್ಕೆ ಇವಳ ಅಪರಾಧವೇನೂ ಇರುವುದಿಲ್ಲ. ಅಪರಾಧವು ನನ್ನದೇ. ಏಕೆಂದರೆ.: ನಾನು ಪರಮಾತ್ಮನ ವಿಷಯದಲ್ಲಿ ಹಿಮ್ಮುಖನಾಗಿ ಇವಳಲ್ಲಿಯೇ ಆಸಕ್ತನಾಗಿದ್ದುಬಿಟ್ಟಿದ್ದೆನು.

ತತೋಽಸ್ಮಿ ಬಹುರೂಪಾಸು ಸ್ಥಿತೋ ಮೂರ್ತಿಷ್ವಮೂರ್ತಿಮಾನ್ ।
ಅಮೂರ್ತಶ್ಚಾಪಿ ಮೂರ್ತಾತ್ಮಾ ಮಮತ್ವೇನ ಪ್ರಧರ್ಷಿತಃ ॥೩೪॥

ಯದ್ಯಪಿ ನಾನು ಸರ್ವಥಾ ಅಮೂರ್ತನೇ ಆಗಿದ್ದರೂ (ಯಾವುದೇ ವಿಧವಾದ ಆಕಾರವನ್ನು ಹೊಂದದೇ ಇದ್ದರೂ) – ಪ್ರಕೃತಿಗೆ ಸಂಬಂಧಿಸಿದ ಅನೇಕರೂಪಗಳ ಮೂರ್ತಿಗಳಲ್ಲಿರುತ್ತಾ, ದೇಹದಿಂದ ರಹಿತನಾಗಿದ್ದರೂ ಮಮಕಾರದಿಂದ ಆಕ್ರಮಿಸಲ್ಪಟ್ಟವನಾಗಿ ದೇಹವೇ ನಾನೆಂಬ ಭಾವನೆಯನ್ನು ಹೊಂದಿದ್ದೆನು.

ಪ್ರಾಕೃತೇನ ಮಮತ್ವೇನ ತಾಸು ತಾಸ್ವಿಹ ಯೋನಿಷು ।
ನಿರ್ಮಮಸ್ಯ ಮಮತ್ವೇನ ಕಿಂ ಕೃತಂ ತಾಸು ತಾಸು ಚ ॥೩೫॥

ಹಿಂದೆ ಪ್ರಕೃತಿಸಂಬಂಧವಾದ ನಾನಾರೂಪವಾದ ಶರೀರಗಳಲ್ಲಿಯೇ ಮಮತ್ವವನ್ನು ಹೊಂದಿದ್ದೆನಾದುದರಿಂದ ಭಿನ್ನ-ಭಿನ್ನವಾದ ಯೋನಿಗಳಲ್ಲಿ ನಾನು ಹುಟ್ಟಬೇಕಾಯಿತು. ನಾನು ಮಮತಾರಹಿತನಾಗಿದ್ದರೂ ಪ್ರಕೃತಿಯ ಸಂಬಂಧದಿಂದ ನಾನಾರೂಪವಾದ ದೇಹಗಳನ್ನು ನನ್ನದೆಂದು ಭಾವಿಸಿ ಆಯಾ ಯೋನಿಗಳಲ್ಲಿ ಜನ್ಮವನ್ನು ತಳೆದಾಗ ಸಾಧಿಸಿದ್ದಾದರೂ ಏನಿದೆ? (ಪುನಃ ಪುನಃ ಅನ್ಯಾನ್ಯಜನ್ಮಗಳನ್ನು ಪಡೆದುಕೊಳ್ಳಲು ಕಾರ್ಯಮಾಡುತ್ತಿದ್ದೆನೇ ಹೊರತು ನಿಜಸ್ವರೂಪವನ್ನು ತಿಳಿದುಕೊಳ್ಳಲು ನಾನು ಪ್ರಯತ್ನಿಸಲೇ ಇಲ್ಲ.)

ಯೋನೀಷು ವರ್ತಮಾನೇನ ನಷ್ಟಸಂಜ್ಞೇನ ಚೇತಸಾ ।
ನ ಮಮಾತ್ರಾನಯಾ ಕಾರ್ಯಮಹಙ್ಕಾರಕೃತಾತ್ಮಯಾ ॥೩೬॥

ನಾನಾಪ್ರಕಾರವಾದ ಯೋನಿಗಳಲ್ಲಿ ಜನ್ಮವನ್ನು ಪಡೆಯುತ್ತಿದ್ದ ನಾನು

ಪ್ರಜ್ಞೆಯನ್ನು ಕಳೆದುಕೊಂಡಿದ್ದೇನೆ. ನಿಜಸ್ವರೂಪವನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಲೇ ಇರಲಿಲ್ಲ. ಈಗ ನಾನು ನನ್ನ ಸ್ವರೂಪವನ್ನು ಅರಿತಿದ್ದೇನೆ. ಆದುದರಿಂದ ಅಹಂಕಾರದಿಂದಲೇ ಮಾಡಲ್ಪಟ್ಟ ಆಕೃತಿಯುಳ್ಳ ಈ ಪ್ರಕೃತಿಯಿಂದ ನನಗೆ ಯಾವ ಕಾರ್ಯವೂ ಆಗಬೇಕಾಗಿಲ್ಲ.

ಆತ್ಮಾನಂ ಬಹುಧಾ ಕೃತ್ವಾ ಯೇಯಂ ಭೂಯೋ ಯುನಕ್ತಿ ಮಾಮ್ ।
ಇದಾನೀಮೇಷ ಬುದ್ಧೋಽಸ್ಮಿ ನಿರ್ಮಮೋ ನಿರಹಂಕೃತಃ ॥೩೭॥

ಈಗಲೂ ಈ ಪ್ರಕೃತಿಯು ಮನಮೋಹಕವಾದ, ಬಹುವಿಧವಾದ ರೂಪಗಳನ್ನು ಕಲ್ಪಿಸಿಕೊಂಡು ಪುನಃ ನನ್ನನ್ನು ತನ್ನೊಡನೆ ಸೇರಿಸಿಕೊಂಡು ಬಿಡುತ್ತಾಳೆ. ಆದರೆ ಈಗ ನಾನು ಜ್ಞಾನಸಂಪನ್ನನಾಗಿದ್ದೇನೆ. ಮಮತಾ ರಹಿತನಾಗಿದ್ದೇನೆ. ಅಹಂಕಾರರಹಿತನಾಗಿದ್ದೇನೆ.

ಮಮತ್ವಮನಯಾ ನಿತ್ಯಮಹಂಕಾರಕೃತಾತ್ಮಕಮ್ ।
ಅಪೇತ್ಯಾಹಮಿಮಾಂ ಹಿತ್ವಾ ಸಂಶ್ರಯಿಷ್ಯೇ ನಿರಾಮಯಮ್ ॥೩೮॥

ಅಹಂಕಾರದಿಂದ ಅಸ್ತಿತ್ವಕ್ಕೆ ಬಂದ ನಿತ್ಯವಾದ ಮಮತ್ವವೆಂಬುದು ಈ ಪ್ರಕೃತಿಯಿಂದಲೇ ನನಗೆ ಉಂಟಾಯಿತು. (ನಾನು ಇದ್ದರೆ ತಾನೇ ನನ್ನದು ಎಂಬುದಕ್ಕೆ ಅಸ್ತಿತ್ವ!) ಆದುದರಿಂದ ನಾನು ಮಮತ್ವವನ್ನು ತ್ಯಜಿಸಿ, ಈ ಪ್ರಕೃತಿಯ ಆಶ್ರಯವನ್ನು ಸಂಪೂರ್ಣವಾಗಿ ಬಿಟ್ಟು, ನಿರಾಮಯನಾದ ಪರಮಾತ್ಮನನ್ನೇ ಚೆನ್ನಾಗಿ ಆಶ್ರಯಿಸುತ್ತೇನೆ.

ಅನೇನ ಸಾಮ್ಯಂ ಯಾಸ್ಯಾಮಿ ನಾನಯಾಹಮಚೇತಯಾ ।
ಕ್ಷೇಮಂ ಮಮ ಸಹಾನೇನ ನೈಕತ್ವಮನಯಾ ಸಹ ॥೩೯॥

ನಾನು ಪರಮಾತ್ಮನನ್ನೇ ಸಂಪೂರ್ಣವಾಗಿ ಆಶ್ರಯಿಸಿ ಅವನೊಡನೆ ಸಾಮ್ಯವನ್ನು ಹೊಂದುತ್ತೇನೆ. ಜಡಳಾದ ಈ ಪ್ರಕೃತಿಯೊಡನೆ ಸಾಮ್ಯವನ್ನು ಹೊಂದುವುದಿಲ್ಲ. ನಿರ್ಗುಣ-ನಿರಾಮಯನಾದ ಪರಮಾತ್ಮನೊಡನೆ ಇರುವುದೇ ನನಗೆ ಮಹಾಕ್ಷೇಮಕರ. ಪ್ರಕೃತಿಯೊಡನೆ ಏಕತ್ವದಿಂದಿರುವುದು ಕ್ಷೇಮವಲ್ಲ."

ಏವಂ ಪರಮಸಮ್ಬೋಧಾತ್ಪಞ್ಚವಿಂಶೋಽನುಬುದ್ಧವಾನ್ ।
ಅಕ್ಷರತ್ವಂ ನಿಯಚ್ಛೇತ ತ್ಯಕ್ತ್ವಾ ಕ್ಷರಮನಾಮಯಮ್ ॥೪೦॥

ಹೀಗೆ ಇಪ್ಪತ್ತೈದನೆಯವನಾದ ಚೇತನನು ಶ್ರೇಷ್ಠವಾದ ವಿವೇಕದ ಮೂಲಕವಾಗಿ ತನ್ನ ಶುದ್ಧಸ್ವರೂಪದ ಜ್ಞಾನವನ್ನು ಪಡೆದುಕೊಂಡು ಕ್ಷರಸ್ವರೂಪವನ್ನು (ಪ್ರಕೃತಿಯ ಸಂಬಂಧದ ವಿಕಾರಸ್ವರೂಪವನ್ನು) ಪರಿತ್ಯಜಿಸಿ ನಿರಾಮಯನಾದ, ಅಕ್ಷರಸ್ವರೂಪನಾದ ಪರಬ್ರಹ್ಮದ ಭಾವವನ್ನು ಹೊಂದಬೇಕು.

ಅವ್ಯಕ್ತಂ ವ್ಯಕ್ತಧರ್ಮಾಣಂ ಸಗುಣಂ ನಿರ್ಗುಣಂ ತಥಾ ।
ನಿರ್ಗುಣಂ ಪ್ರಥಮಂ ದೃಷ್ಟ್ವಾ ತಾದೃಗ್ಭವತಿ ಮೈಥಿಲ ॥೪೧॥

ಮಿಥಿಲಾಧಿಪನೇ! ಹೀಗೆ ಅವ್ಯಕ್ತ ಮತ್ತು ವ್ಯಕ್ತಗಳನ್ನೂ ಸಗುಣ-ನಿರ್ಗುಣಭಾವಗಳನ್ನಾಗಿ ತಿಳಿದು, ಎಲ್ಲಕ್ಕೂ ಆದಿಯೂ ನಿರ್ಗುಣನೂ ಆದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡವನು ಆ ಪರಮಾತ್ಮನಂತೆಯೇ ಆಗುತ್ತಾನೆ.

ಅಕ್ಷರಕ್ಷರಯೋರೇತದುಕ್ತಂ ತವ ನಿದರ್ಶನಮ್ ।
ಮಯೇಹ ಜ್ಞಾನಸಮ್ಪನ್ನಂ ಯಥಾಶ್ರುತಿನಿದರ್ಶನಾತ್ ॥೪೨॥

ಶ್ರುತಿಗಳಲ್ಲಿರುವ ದೃಷ್ಟಾಂತಗಳ ಅನುಸಾರವಾಗಿ ಕ್ಷರ ಮತ್ತು ಅಕ್ಷರಗಳ ವಿವೇಕಾತ್ಮವಾದ ಈ ಜ್ಞಾನವನ್ನು ನಾನು ನಿನಗೆ ನಿದರ್ಶನಪೂರ್ವಕವಾಗಿ ಹೇಳಿದ್ದೇನೆ.

ನಿಃಸಂದಿಗ್ಧಂ ಚ ಸೂಕ್ಷ್ಮಂ ಚ ವಿಬುದ್ಧಂ ವಿಮಲಂ ಯಥಾ ।
ಪ್ರವಕ್ಷ್ಯಾಮಿ ತು ತೇ ಭೂಯಸ್ತನ್ನಿಬೋಧ ಯಥಾಶ್ರುತಮ್ ॥೪೩॥

ಪುನಃ ನಾನು ಶ್ರುತಿಗೆ ಅನುಸಾರವಾಗಿ ಸಂದೇಹರಹಿತವಾದ, ಸೂಕ್ಷ್ಮವಾದ, ಅತ್ಯಂತನಿರ್ಮಲವಾದ, ವಿಶಿಷ್ಟವಾದ ಜ್ಞಾನವನ್ನು ನಿನಗೆ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

ಸಾಂಖ್ಯಯೋಗೌ ಮಯಾ ಪ್ರೋಕ್ತೌ ಶಾಸ್ತ್ರದ್ವಯನಿದರ್ಶನಾತ್ ।
ಯದೇವ ಶಾಸ್ತ್ರಂ ಸಾಂಖ್ಯೋಕ್ತಂ ಯೋಗದರ್ಶನಮೇವ ತತ್ ॥೪೪॥

ನಾನು ಎರಡೂ ಶಾಸ್ತ್ರಗಳ ನಿದರ್ಶನಗಳಿಂದ ಸಾಂಖ್ಯ ಮತ್ತು ಯೋಗ ಈ ಎರಡು ಶಾಸ್ತ್ರಗಳ ಸಾರವನ್ನೂ ಹೇಳಿದ್ದೇನೆ. ಆದರೆ ವಾಸ್ತವವಾಗಿ ಸಾಂಖ್ಯೋಕ್ತವಾದ ಶಾಸ್ತ್ರವು ಯಾವುದೋ–ಅದೇ ಯೋಗಶಾಸ್ತ್ರವೂ ಆಗಿದೆ.

(ಈ ಎರಡು ಶಾಸ್ತ್ರಗಳ ಫಲವೂ ಒಂದೇ ಆಗಿದೆ. ಇವೆರಡರಲ್ಲಿಯೂ ಯಾವ ವ್ಯತ್ಯಾಸವೂ ಇಲ್ಲ. ಏಕಂ ಸಾಂಖ್ಯಂ ಚ ಯೋಗಂ ಚ- ಎಂದು ಶ್ರೀಗೀತೆಯಲ್ಲಿಯೂ ಹೇಳಿದೆ.)

ಪ್ರಬೋಧನಕರಂ ಜ್ಞಾನಂ ಸಾಂಖ್ಯಾನಾಮವನೀಪತೇ ।
ವಿಸ್ಪಷ್ಟಂ ಪ್ರೋಚ್ಯತೇ ತತ್ರ ಶಿಷ್ಯಾಣಾಂ ಹಿತಕಾಮ್ಯಯಾ ॥೪೫॥

ಭೂಪತಿಯೇ! ಸಾಂಖ್ಯರ ಜ್ಞಾನವು ಪ್ರಕೃಷ್ಟವಾದ ಆತ್ಮಜ್ಞಾನವನ್ನು ಉಂಟುಮಾಡತಕ್ಕುದು. ಶಿಷ್ಯರಿಗೆ ಹಿತವಾಗಬೇಕೆಂಬ ಕಾರಣದಿಂದ ಸಾಂಖ್ಯಶಾಸ್ತ್ರದಲ್ಲಿ ಆತ್ಮಾನಾತ್ಮವಿಷಯವು ಬಹಳ ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಬೃಹಚ್ಚೈವಮಿದಂ ಶಾಸ್ತ್ರಮಿತ್ಯಾಹುರ್ವಿದುಷೋ ಜನಾಃ ।
ಅಸ್ಮಿಂಶ್ಚ ಶಾಸ್ತ್ರೇ ಯೋಗಾನಾಂ ಪುನರ್ವೇದೇ ಪುರಃಸರಃ ॥೪೬॥

ವಿದ್ವಾಂಸರಾದ ಪುರುಷರು ಈ ಸಾಂಖ್ಯವನ್ನು ಮಹಾಶಾಸ್ತ್ರವೆಂದು ಕರೆಯುತ್ತಾರೆ. ಏಕೆಂದರೆ : ಈ ಸಾಂಖ್ಯಶಾಸ್ತ್ರದಲ್ಲಿ ಯೋಗಶಾಸ್ತ್ರಗಳ ಜ್ಞಾನವೂ ಅಡಕವಾಗಿದೆ. ವೇದದಲ್ಲಿನ ಜ್ಞಾನವೂ ಅಡಕವಾಗಿದೆ.

(ಸಾಂಖ್ಯಶಾಸ್ತ್ರವು ವೇದ-ಯೋಗಪುರಃಸರವಾಗಿದೆ. ಸಾಂಖ್ಯಕಾರರು 'ನಾವೇದವಿನ್ಮನುತೇ ತಂ ಬೃಹನ್ತಮ್' ಎಂಬ ವೇದವಾಕ್ಯವನ್ನೂ ಅಂಗೀ ಕರಿಸುತ್ತಾರೆ. 'ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ' ಎಂಬ ಯೋಗಶಾಸ್ತ್ರವಾಕ್ಯ ವನ್ನೂ ಅಂಗೀಕರಿಸುತ್ತಾರೆ.)

ಪಞ್ಚವಿಂಶಾತ್ಪರಂ ತತ್ತ್ವಂ ಪಶ್ಯತೇ ನ ನರಾಧಿಪ ।
ಸಾಂಖ್ಯಾನಾಂ ತು ಪರಂ ತತ್ತ್ವಂ ಯಥಾವದನುವರ್ಣಿತಮ್ ॥೪೭॥

ಮಹಾರಾಜ! ಸಾಂಖ್ಯಶಾಸ್ತ್ರದಲ್ಲಿ ಇಪ್ಪತ್ತೈದಕ್ಕಿಂತಲೂ ಹೆಚ್ಚಿನ ಯಾವ ತತ್ತ್ವವನ್ನೂ ಹೇಳಿಲ್ಲ. ಹೀಗೆ ನಾನು ಸಾಂಖ್ಯರ ಶ್ರೇಷ್ಠವಾದ ತತ್ತ್ವವನ್ನು ಯಥಾವತ್ತಾಗಿ ಹೇಳಿದ್ದೇನೆ.

ಬುದ್ಧಮಪ್ರತಿಬುದ್ಧತ್ವಾದ್ಬುಧ್ಯಮಾನಂ ಚ ತತ್ತ್ವತಃ ।
ಬುಧ್ಯಮಾನಂ ಚ ಬುದ್ಧಂ ಚ ಪ್ರಾಹುರ್ಯೋಗನಿದರ್ಶನಮ್ ॥೪೮॥

ಆತ್ಮನು ಸ್ವರೂಪತಃ ಬುದ್ಧನೇ (ಜ್ಞಾನಿಯೇ) ಆಗಿದ್ದಾನೆ. ಆದರೆ ಆ ಅರಿವು ಇಲ್ಲದಿರುವ ಸ್ಥಿತಿಯಲ್ಲಿ ಅವನು ತಾತ್ತ್ವಿಕವಾಗಿ ಬುಧ್ಯಮಾನ (ತಿಳಿಯಲ್ಪಡಹತ್ತಿರುವವ) ನಾಗುತ್ತಾನೆ. ಹೀಗೆ ಯೋಗದಾರ್ಶನಿಕರು 'ಬುಧ್ಯಮಾನ' ಮತ್ತು 'ಬುದ್ಧ' ಎಂದು ಎರಡು ಸ್ಥಿತಿಗಳಲ್ಲಿ ಆತ್ಮನನ್ನು ನಿರೂಪಿಸುತ್ತಾರೆ. (ಗೀತೆಯಲ್ಲಿ ಹೇಳಿರುವ ಆರೂಢನು ಬುದ್ಧ. ಆರುರುಕ್ಷುವಿನ ಸ್ಥಿತಿಯಲ್ಲಿ ಆತ್ಮನು ಬುಧ್ಯಮಾನನಾಗುತ್ತಾನೆ. ಸಿದ್ಧನ ದೃಷ್ಟಿಯಲ್ಲಿ ಬುದ್ಧ; ಸಾಧಕನ ದೃಷ್ಟಿಯಲ್ಲಿ ಬುಧ್ಯಮಾನ.)"

ಇ೦೭ನೆಯ ಅಧ್ಯಾಯವು ಮುಗಿಯಿತು.

ಇ೦೮ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಕ್ಷರ-ಅಕ್ಷರ ಮತ್ತು ಪರಮಾತ್ಮತತ್ತ್ವಗಳ ವರ್ಣನೆ: ಜೀವನ ನಾನಾತ್ವದ ಮತ್ತು ಏಕತ್ವದ ದೃಷ್ಟಾಂತ: ಉಪದೇಶಕ್ಕೆ ಅಧಿಕಾರಿಗಳು ಮತ್ತು ಅನಧಿಕಾರಿಗಳು: ಆತ್ಮಜ್ಞಾನದ ಪರಂಪರೆಯ ಪ್ರಸಂಗದಲ್ಲಿ ವಸಿಷ್ಠ-ಕರಾಲಜನಕರ ಸಂಭಾಷಣೆಯ ಉಪಸಂಹಾರ

ಧರ್ಮಜ! ವಸಿಷ್ಠರು ಹೇಳುತ್ತಾರೆ :

ಅಥ ಬುದ್ಧಮಥಾಬುದ್ಧಮಿಮಂ ಗುಣವಿಧಿಂ ಶೃಣು ।
ಆತ್ಮಾನಂ ಬಹುಧಾ ಕೃತ್ವಾ ತಾನ್ಯೇವ ಪ್ರವಿಚಕ್ಷತೇ ॥೧॥

"ಮಹಾರಾಜ! ಈಗ ನೀನು ಬುದ್ಧನಾದ ಪರಮಾತ್ಮನ ಮತ್ತು ಅಬುದ್ಧನಾದ ಜೀವಾತ್ಮನ ಗುಣವಿಧಾನವನ್ನು ಕೇಳು. ಜೀವಾತ್ಮನು

ತನ್ನನ್ನೇ ಬಹುಪ್ರಕಾರವಾಗಿ ಕಲ್ಪಿಸಿಕೊಂಡು ಆ ಎಲ್ಲ ರೂಪಗಳೂ ನಿಜವಾದುವೆಂದೇ ಹೇಳುತ್ತಿರುತ್ತಾನೆ.

ಏತದೇವಂ ವಿಕುರ್ವಾಣೋ ಬುಧ್ಯಮಾನೋ ನ ಬುಧ್ಯತೇ ।
ಗುಣಾನ್ಧಾರಯತೇ ಹ್ಯೇಷ ಸೃಜತ್ಯಾಕ್ಷಿಪತೇ ತದಾ ॥೨॥

ವಾಸ್ತವವಾಗಿ ಜ್ಞಾನಸಂಪನ್ನನಾಗಿದ್ದರೂ–ಪ್ರಕೃತಿಯ ಸಂಸರ್ಗದಿಂದ ವಿಕಾರವನ್ನು ಹೊಂದುತ್ತಲೇ ಇರುವ ಚೇತನನು ತನ್ನನ್ನು ತಾನು ತಿಳಿದುಕೊಂಡಿರುವುದಿಲ್ಲ. ಪ್ರಕೃತಿಸಂಬಂಧವಾದ ಗುಣಗಳನ್ನು ಧಾರಣೆಮಾಡಿಕೊಂಡು ಕರ್ತೃತ್ವಾಭಿಮಾನವನ್ನು ಹೊಂದಿ ಸೃಷ್ಟಿ-ಲಯಗಳನ್ನು ಮಾಡುತ್ತಿರುತ್ತಾನೆ.

ಅಜಸ್ರಂ ತ್ವಿಹ ಕ್ರೀಡಾರ್ಥಂ ವಿಕರೋತಿ ಜನಾಧಿಪ ।
ಅವ್ಯಕ್ತಬೋಧನಾಚ್ಚೈವ ಬುಧ್ಯಮಾನಂ ವದನ್ತ್ಯಪಿ ॥೩॥

ಜನೇಶ್ವರನೇ! ಪರಮಾತ್ಮನು ಈ ಜಗತ್ತಿನಲ್ಲಿ ನಿರಂತರವಾಗಿ ಆಟವಾಡುವ ಸಲುವಾಗಿಯೇ ವಿಕಾರಗಳನ್ನು ಉಂಟುಮಾಡುತ್ತಿರುತ್ತಾನೆ. ಅವನು ಅವ್ಯಕ್ತವಾದ ಪ್ರಕೃತಿಯನ್ನು ತಿಳಿದಿರುವ ಕಾರಣದಿಂದಲೂ ಅವನನ್ನು 'ಬುಧ್ಯಮಾನ' ತಿಳಿಯಲ್ಪಡತಕ್ಕವನು–ಎಂದು ವಿದ್ವಾಂಸರು ಹೇಳುತ್ತಾರೆ.

ನ ತ್ವೇವ ಬುಧ್ಯತೇಽವ್ಯಕ್ತಂ ಸಗುಣಂ ತಾತ ನಿರ್ಗುಣಮ್ ।
ಕದಾಚಿತ್ತ್ವೇನ ಖಲ್ವೇತದಾಹುರಪ್ರತಿಬುದ್ಧಕಮ್ ॥೪॥

ಚೇತನನು ಸಗುಣನಾಗಿರಲಿ, ನಿರ್ಗುಣನಾಗಿರಲಿ–ಅವ್ಯಕ್ತಪ್ರಕೃತಿಯು (ಜಡವಾದುದರಿಂದ) ಅವನನ್ನು ಯಾವಾಗಲೂ ತಿಳಿಯುವುದಿಲ್ಲ. ಆದುದರಿಂದ ಸಾಂಖ್ಯವಿದ್ವಾಂಸರು ಪ್ರಕೃತಿಯನ್ನು ಅಪ್ರತಿಬುದ್ಧ (ಜ್ಞಾನಶೂನ್ಯ) ವೆಂದು ಹೇಳುತ್ತಾರೆ.

ಬುಧ್ಯತೇ ಯದಿ ವಾವ್ಯಕ್ತಮೇತದ್ವೈ ಪಞ್ಚವಿಂಶಕಮ್ ।
ಬುಧ್ಯಮಾನೋ ಭವತ್ಯೇವ ಸಙ್ಗಾತ್ಮಕ ಇತಿ ಶ್ರುತಿಃ ।
ಅನೇನಾಪ್ರತಿಬುದ್ಧೇತಿ ವದನ್ತ್ಯವ್ಯಕ್ತಮಚ್ಯುತಮ್ ॥೫॥

(ಹೀಗೆ ಅವ್ಯಕ್ತಕ್ಕೂ ವೇದ್ಯವಲ್ಲದಿರುವ) ಇಪ್ಪತ್ತೈದನೆಯದಾದ ಪುರುಷ ತತ್ತ್ವವನ್ನು ವ್ಯಕ್ತಪ್ರಕೃತಿಯು ಹೇಗೆ ತಿಳಿದೀತು? ಪ್ರಕೃತಿಯೊಡನೆ ಪುರುಷನು ಸೇರಿರುವುದರಿಂದಲೇ ಚೇತನನು ಸಂಗಾತ್ಮಕ ಅಥವಾ ಸಂಗಿಯಾಗುತ್ತಾನೆಂದು ಶ್ರುತಿಯು ಹೇಳುತ್ತದೆ. ಈ ಅವ್ಯಕ್ತದ ಸಂಗದೋಷದ ಕಾರಣದಿಂದಾಗಿಯೇ, ಅವಿಕಾರಿಯಾದ ಚೇತನನನ್ನು ವಿದ್ವಾಂಸರು ಅವ್ಯಕ್ತ (ಮೂಢ) ನೆಂದು ಕರೆಯುತ್ತಾರೆ.

ಅವ್ಯಕ್ತಬೋಧನಾಚ್ಚಾಪಿ ಬುಧ್ಯಮಾನಂ ವದನ್ತ್ಯುತ ।
ಪಞ್ಚವಿಂಶಂ ಮಹಾತ್ಮಾನಂ ನ ಚಾಸಾವಪಿ ಬುಧ್ಯತೇ ॥೬॥

ಷಡ್ವಿಂಶಂ ವಿಮಲಂ ಬುದ್ಧಮಪ್ರಮೇಯಂ ಸನಾತನಮ್ ।
ಸ ತು ತಂ ಪಞ್ಚವಿಂಶಂ ಚ ಚತುರ್ವಿಂಶಂ ಚ ಬುಧ್ಯತೇ ॥೭॥

ಇಪ್ಪತ್ತೈದನೆಯ ತತ್ತ್ವನಾದ ಚೇತನನು ಅವ್ಯಕ್ತಪ್ರಕೃತಿಯನ್ನು ತಿಳಿದಿರುವನಾದುದರಿಂದಲೂ ಆ ಮಹಾತ್ಮನನ್ನು (ಚೇತನನನ್ನು) 'ಬುಧ್ಯಮಾನ' ಎಂಬುದಾಗಿ ವಿದ್ವಾಂಸರು ಹೇಳುತ್ತಾರೆ. ಆದರೆ ಆ ಇಪ್ಪತ್ತೈದನೆಯ ಚೇತನನೂ ಕೂಡ ಇಪ್ಪತ್ತಾರನೆಯವನಾದ, ವಿಶುದ್ಧನಾದ, ಜ್ಞಾನಸ್ವರೂಪನಾದ, ಅಪ್ರಮೇಯನಾದ ಸನಾತನಬ್ರಹ್ಮವನ್ನು ತಿಳಿದಿರುವುದಿಲ್ಲ. ಆದರೆ ಆ ಇಪ್ಪತ್ತಾರನೆಯ ತತ್ತ್ವವಾದ ಪರಬ್ರಹ್ಮವು ಇಪ್ಪತ್ತೈದನೆಯವನಾದ ಚೇತನನನ್ನೂ–ಮೂಲಪ್ರಕೃತಿಯೇ ಮೊದಲಾದ ಇಪ್ಪತ್ತುನಾಲ್ಕು ತತ್ತ್ವಗಳನ್ನೂ ತಿಳಿದಿರುತ್ತದೆ.

ದೃಶ್ಯಾದೃಶ್ಯೇ ಹ್ಯನುಗತಂ ಸ್ವಭಾವೇನ ಮಹಾದ್ಯುತೇ ।
ಅವ್ಯಕ್ತಮತ್ರ ತದ್ಬ್ರಹ್ಮ ಬುದ್ಧ್ಯತೇ ತಾತ ಕೇವಲಮ್ ॥೮॥

ಮಹಾದ್ಯುತಿಮಂತನೇ! ಅವ್ಯಕ್ತವಾದ ಮತ್ತು ಕೇವಲವಾದ ಬ್ರಹ್ಮವು–ದೃಶ್ಯಾದೃಶ್ಯವಾದ ಸಮಸ್ತಪದಾರ್ಥಗಳಲ್ಲಿಯೂ ಸ್ವಭಾವದಿಂದಲೇ ಅನುಗತವಾಗಿದೆ. ಈ ವಿಷಯವನ್ನು ಜ್ಞಾನಿಗಳು ತಿಳಿದಿರುತ್ತಾರೆ.

ಕೇವಲಂ ಪಞ್ಚವಿಂಶಂ ಚ ಚತುರ್ವಿಂಶಂ ನ ಪಶ್ಯತಿ ।

ಬುಧ್ಯಮಾನೋ ಯದಾತ್ಮಾನಮನ್ಯೋಽಹಮಿತಿ ಮನ್ಯತೇ ।
ತದಾ ಪ್ರಕೃತಿಮಾನೇಷ ಭವತ್ಯವ್ಯಕ್ತಲೋಚನಃ ॥೯॥

ಯಾವಾಗ ಚೇತನನು ಎಲ್ಲವೂ ಒಂದೇ ಎಂದು ಭಾವಿಸದೆ – 'ತಾನು ಬೇರೆ – ತಾನು ಇಂತಹವನ ಪುತ್ರ' – ಎಂದು ಭಾವಿಸುವನೋ ಆಗ ಅವನು ಇಪ್ಪತ್ತಾರನೆಯವನಾದ ಪರಮಾತ್ಮನ, ತನ್ನ ಮತ್ತು ಪ್ರಕೃತಿಯ ಸ್ವರೂಪ ಗಳನ್ನು ತಿಳಿದಿರುವುದಿಲ್ಲ. ಅವನು ಪ್ರಕೃತಿಯಲ್ಲಿಯೇ ಸೇರಿರುತ್ತಾನೆ. ಸಾಧಕ ನಾದ ಯೋಗಿಯು ಅವ್ಯಕ್ತದರ್ಶನಮಾಡಿ– 'ತಾನು ಬೇರೆ ; ಅವ್ಯಕ್ತ ಪ್ರಕೃತಿಯು ಬೇರೆ' – ಎಂದು ಯಾವಾಗ ತಿಳಿಯುವನೋ ಆಗಲೇ ಅವನು ಪ್ರಕೃತಿಸ್ಥ ಎಂದರೆ ಸ್ವಸ್ವರೂಪನಿಷ್ಠನಾಗುತ್ತಾನೆ. (ಇದಕ್ಕೆ ಸಾಂಖ್ಯಯೋಗ ದರ್ಶನಗಳಲ್ಲಿ 'ಸತ್ತ್ವಪುರುಷಾನ್ಯತಾಖ್ಯಾತಿ' ಎಂದು ಹೆಸರು.)

ಬುಧ್ಯತೇ ಚ ಪರಾಂ ಬುದ್ಧಿಂ ವಿಶುದ್ಧಾಮಮಲಾಂ ಯದಾ ॥೧೦॥

ಷಡ್ವಿಂಶೋ ರಾಜಶಾರ್ದೂಲ ತಥಾ ಬುದ್ಧತ್ವಮಾವ್ರಜೇತ್ ।
ತತಸ್ತ್ಯಜತಿ ಸೋಽವ್ಯಕ್ತಂ ಸರ್ಗಪ್ರಲಯಧರ್ಮಿ ವೈ ॥೧೧॥

ಯಾವಾಗ ಚೇತನವು ವಿಶುದ್ಧವಾದ, ನಿರ್ಮಲವಾದ, ಸರ್ವೋತ್ಕೃಷ್ಟ ವಾದ ಬುದ್ಧಿಯನ್ನು ಹೊಂದುವುದೋ–ಆಗ ಅದು ಜ್ಞಾನಸ್ವರೂಪವನ್ನು ಹೊಂದಿ ಇಪ್ಪತ್ತಾರನೆಯದಾದ ಪರಬ್ರಹ್ಮದಲ್ಲಿ ಲೀನವಾಗುತ್ತದೆ. ಆಗ ಬ್ರಹ್ಮಭೂತವಾದ ಆ ಚೇತನವು ಹುಟ್ಟು-ಸಾವುಗಳಿಗೆ ಸ್ಥಾನಭೂತವಾದ ಅವ್ಯಕ್ತಪ್ರವೃತ್ತಿಯನ್ನು ಸಂಪೂರ್ಣವಾಗಿ ತ್ಯಜಿಸುತ್ತದೆ.

ನಿರ್ಗುಣಃ ಪ್ರಕೃತಿಂ ವೇದ ಗುಣಯುಕ್ತಾಮಚೇತನಾಮ್ ।
ತತಃ ಕೇವಲಧರ್ಮಾಸೌ ಭವತ್ಯವ್ಯಕ್ತದರ್ಶನಾತ್ ॥೧೨॥

ನಿರ್ಗುಣನಾದ ಆ ಚೇತನನು ಪ್ರಕೃತಿಯು 'ತ್ರಿಗುಣಾತ್ಮಕ-ಜಡ' ಎಂದು ಯಾವಾಗ ಅರಿಯುವನೋ–ಆಗ ಅವನು ಅವ್ಯಕ್ತದರ್ಶನದಿಂದ ಕೈವಲ್ಯವನ್ನು ಪಡೆಯುತ್ತಾನೆ.

ಕೇವಲೇನ ಸಮಾಗಮ್ಯ ವಿಮುಕ್ತೋಽತ್ಮಾನಮಾಪ್ನುಯಾತ್ ।
ಏತತ್ತು ತತ್ತ್ವಮಿತ್ಯಾಹುರ್ನಿಸ್ತತ್ತ್ವಮಜರಾಮರಮ್ ॥೧೩॥

ಆ ಕೇವಲಭಾವದೊಡನೆ ಸಂಗಮಪಡೆದವನು ಪೂರ್ಣಮುಕ್ತನಾಗಿ ಪರಮಾತ್ಮನನ್ನು ಹೊಂದುತ್ತಾನೆ. ಇದನ್ನೇ ಜ್ಞಾನಿಗಳು ತತ್ತ್ವಾತೀತವೂ ಜರಾಮರಣವರ್ಜಿತವೂ ಆದ ಪರಮಾರ್ಥತತ್ತ್ವವೆಂದು ಹೇಳುತ್ತಾರೆ.

ತತ್ತ್ವಸಂಶ್ರಯಣಾದೇತತ್ತತ್ತ್ವವನ್ನ ಚ ಮಾನದ ।
ಪಞ್ಚವಿಂಶತಿ ತತ್ತ್ವಾನಿ ಪ್ರವದನ್ತಿ ಮನೀಷಿಣಃ ॥೧೪॥

ಮಾನದನೇ! ಚೇತನನು ತತ್ತ್ವಗಳನ್ನು ಆಶ್ರಯಿಸಿರುವುದರಿಂದ ತತ್ತ್ವ ಸದೃಶನಾಗಿ ಕಾಣುತ್ತಾನೆ. ವಾಸ್ತವವಾಗಿ ಅವನು ತತ್ತ್ವಗಳಿಂದ ಅತೀತನಾದವನು ಅಥವಾ ಭಿನ್ನನಾಗಿರತಕ್ಕವನು. ಹೀಗೆ ವಿದ್ವಾಂಸರು ಮೂಲಪ್ರಕೃತಿಯೇ ಮೊದಲಾದ ಇಪ್ಪತ್ತುನಾಲ್ಕು ತತ್ತ್ವಗಳನ್ನೂ ಇಪ್ಪತ್ತೈದನೆಯವನಾದ ಚೇತನನನ್ನೂ ಸೇರಿಸಿ ಇಪ್ಪತ್ತೈದು ತತ್ತ್ವಗಳನ್ನು ಹೇಳುತ್ತಾರೆ.

ನ ಚೈಷ ತತ್ತ್ವವಾಂಸ್ತಾತ ನಿಸ್ತತ್ತ್ವಸ್ತೇಷ ಬುದ್ಧಿಮಾನ್ ।
ಏಷ ಮುಞ್ಚತಿ ತತ್ತ್ವಂ ಹಿ ಕ್ಷಿಪ್ರಂ ಬುದ್ಧಸ್ಯ ಲಕ್ಷಣಮ್ ॥೧೫॥

ಈ ಚೇತನನು ತತ್ತ್ವವಂತನೂ ಅಲ್ಲ; ತತ್ತ್ವನೂ ಅಲ್ಲ. ಜ್ಞಾನಸ್ವರೂಪನಾದ ಇವನು ತತ್ತ್ವಗಳಿಗಿಂತಲೂ ಅತೀತನಾದವನು. ತಾನಾರೆಂಬುದನ್ನು ಚೇತನನು ಅರಿತುಕೊಂಡೊಡನೆಯೇ ಮೂಲಪ್ರಕೃತಿಯೇ ಮೊದಲಾದ ಇಪ್ಪತ್ತುನಾಲ್ಕು ತತ್ತ್ವಗಳನ್ನೂ ಇವನು ತ್ಯಜಿಸುತ್ತಾನೆ. ಒಡನೆಯೇ ಜ್ಞಾನಸ್ವರೂಪನಾದ ಶುದ್ಧಾತ್ಮದ ಲಕ್ಷಣವನ್ನು ಹೊಂದುತ್ತಾನೆ.

ಷಡ್ವಿಂಶೋಽಹಮಿತಿ ಪ್ರಾಜ್ಞೋ ಗೃಹ್ಯಮಾಣೋಽಜರಾಮರಃ ।
ಕೇವಲೇನ ಬಲೇನೈವ ಸಮತಾಂ ಯಾತ್ಯಸಂಶಯಮ್ ॥೧೬॥

'ನಾನು ಇಪ್ಪತ್ತಾರನೆಯ ತತ್ತ್ವವಾದ ಪರಮಾತ್ಮನಾಗಿದ್ದೇನೆ. ನಿತ್ಯಜ್ಞಾನಸಂಪನ್ನನಾಗಿದ್ದೇನೆ. ತಿಳಿಯಲು ಯೋಗ್ಯನಾದವನಾಗಿದ್ದೇನೆ. ಜರಾ-ಮರಣಗಳಿಂದ ರಹಿತನಾಗಿದ್ದೇನೆ'– ಈ ಪ್ರಕಾರವಾಗಿ ಚೇತನನು ಸತತವಾಗಿ ವಿಚಾರಮಾಡುತ್ತಾ ಕೇವಲ ವಿವೇಕಬಲದಿಂದಲೇ ಪರಬ್ರಹ್ಮ ಪರಮಾತ್ಮನೊಡನೆ ಸಮತ್ವವನ್ನು ಹೊಂದುತ್ತಾನೆ.

ಷಡ್ವಿಂಶೇನ ಪ್ರಬುದ್ಧೇನ ಬುಧ್ಯಮಾನೋಽಪ್ಯಬುದ್ಧಿಮಾನ್ ।
ಏತನ್ನಾನಾತ್ವಮಿತ್ಯುಕ್ತಂ ಸಾಂಖ್ಯಶ್ರುತಿನಿದರ್ಶನಾತ್ ॥೧೭॥

ಚೇತನನು ಇಪ್ಪತ್ತಾರನೆಯವನಾದ ಪರಮಾತ್ಮನ ಪ್ರಕಾರದಿಂದಲೇ ಜಡವಾದ ಇಂದ್ರಿಯಾದಿಗಳನ್ನು ತಿಳಿದುಕೊಂಡರೂ – ಪರಮಾತ್ಮನನ್ನು ತಿಳಿಯದೇ ಇರುವುದರಿಂದ ಅಜ್ಞಾನಿಯಾಗಿಯೇ ಇರುತ್ತಾನೆ. ಈ ಅಜ್ಞಾನವೇ ಚೇತನನ ನಾನಾತ್ವಕ್ಕೆ (ಬಹುಪ್ರಕಾರವಾದ ವಿಕಾರಕ್ಕೆ) ಕಾರಣವೆಂದು ಸಾಂಖ್ಯ ಶಾಸ್ತ್ರದ ದೃಷ್ಟಾಂತದಿಂದ ಹೇಳಲ್ಪಟ್ಟಿದೆ.

ಚೇತನೇನ ಸಮೇತಸ್ಯ ಪಞ್ಚವಿಂಶತಿಕಸ್ಯ ಹ ।
ಏಕತ್ವಂ ವೈ ಭವತ್ಯಸ್ಯ ಯದಾ ಬುದ್ಧ್ಯಾ ನ ಬುಧ್ಯತೇ ॥೧೮॥

ಯಾವಾಗ ಚೇತನನು ಬುದ್ಧಿಯ ಮೂಲಕವಾಗಿ ಇಂದ್ರಿಯಗಳನ್ನೂ ಇಂದ್ರಿಯಾರ್ಥಗಳನ್ನೂ ತನ್ನವೆಂದು ತಿಳಿಯುವುದಿಲ್ಲವೋ–ಆಗ ನಿತ್ಯ ಚೇತನನಾದ ಪರಮಾತ್ಮನೊಡನೆ ಸೇರುವ ಇಪ್ಪತ್ತೈದನೆಯವನಾದ ಚೇತನ ನಿಗೆ ಪರಮಾತ್ಮನೊಡನೆ ಏಕತ್ವವುಂಟಾಗುತ್ತದೆ.

ಬುಧ್ಯಮಾನೋಽಪ್ರಬುದ್ಧೇನ ಸಮತಾಂ ಯಾತಿ ಮೈಥಿಲ ।
ಸಙ್ಗಧರ್ಮಾ ಭವತ್ಯೇಷ ನಿಃಸಙ್ಗಾತ್ಮಾ ನರಾಧಿಪ ॥೧೯॥

ಮಿಥಿಲೇಶನೇ! ಎಲ್ಲಿಯವರೆಗೆ ಜ್ಞಾನರೂಪನಾದ ಚೇತನನು ಪ್ರಕೃತಿಯ ವಿಕಾರವಾದ ಇಂದ್ರಿಯಾದಿಗಳನ್ನು ತನ್ನದೆಂದು ಭಾವಿಸಿಕೊಳ್ಳುವನೋ – ಅಲ್ಲಿಯವರೆಗೂ ಅವನು ಬುಧ್ಯಮಾನ (ಸಾಧಕ) ನಾಗಿದ್ದರೂ ಅಜ್ಞಾನರೂಪವಾದ ಪ್ರಕೃತಿಯೊಡನೆ ಸಮಾನತೆಯನ್ನು ಹೊಂದಿರುತ್ತಾನೆ. ವಾಸ್ತವವಾಗಿ ಅವನು ನಿಸ್ಸಂಗನಾಗಿದ್ದರೂ ಸಂಗಧರ್ಮವುಳ್ಳವನೇ ಆಗಿರು ತ್ತಾನೆ.

ನಿಃಸಙ್ಗಾತ್ಮಾನಮಾಸಾದ್ಯ ಷಡ್ವಿಂಶಕಮಜಂ ವಿಭುಮ್ ।
ವಿಭುಸ್ತ್ಯಜತಿ ಚಾವ್ಯಕ್ತಂ ಯದಾ ತ್ವೇತದ್ವಿಬುಧ್ಯತೇ ।
ಚತುರ್ವಿಂಶಮಸಾರಂ ಚ ಷಡ್ವಿಂಶಸ್ಯ ಪ್ರಬೋಧನಾತ್ ॥೨೦॥

ಯಾವಾಗ ವಿಭುವಾದ ಚೇತನನು – ವಿಭುವಾದ, ಹುಟ್ಟು-ಸಾವು

ಗಳಿಲ್ಲದ, ನಿಸ್ಸಂಗಾತ್ಮನಾದ, ಇಪ್ಪತ್ತಾರನೆಯವನಾದ ಪರಮಾತ್ಮನನ್ನು ಸೇರಿ ಆ ಪರಬ್ರಹ್ಮತತ್ತ್ವವನ್ನು ತಿಳಿದುಕೊಳ್ಳುವನೋ (ಆತ್ಮವನ್ನು ಸಾಕ್ಷಾತ್ಕರಿಸಿ ಕೊಳ್ಳುವನೋ)–ಆಗ ಪರಮಾತ್ಮನ ಜ್ಞಾನದಿಂದ ಅವ್ಯಕ್ತಪ್ರಕೃತಿಯ ವಿಕಾರ ವಾದ ಇಪ್ಪತ್ತುನಾಲ್ಕನ್ನು ಸಾರರಹಿತವನ್ನಾಗಿ ಭಾವಿಸಿ ಪರಿತ್ಯಜಿಸುತ್ತಾನೆ. ಆತ್ಮಾನಂದವನ್ನು ಪಡೆದುಕೊಂಡೊಡನೆಯೇ ಇಂದ್ರಿಯಗಳಿಂದ ಪ್ರಾಪ್ತ ವಾಗುವ ನಶ್ವರಸುಖವನ್ನು ಪರಿತ್ಯಜಿಸುತ್ತಾನೆ.

ಏಷ ಹ್ಯಪ್ರತಿಬುದ್ಧಶ್ಚ ಬುಧ್ಯಮಾನಶ್ಚ ತೇಽನಘ ॥೨೧॥

ಪ್ರೋಕ್ತೋ ಬುದ್ಧಶ್ಚ ತತ್ತ್ವೇನ ಯಥಾಶ್ರುತಿನಿದರ್ಶನಾತ್ ।
ನಾನಾತ್ವೈಕತ್ವಮೇತಾವದ್ದ್ರಷ್ಟವ್ಯಂ ಶಾಸ್ತ್ರದರ್ಶನಾತ್ ॥೨೨॥

ಅನಘನೇ! ಈ ಪ್ರಕಾರವಾಗಿ ನಾನು ನಿನಗೆ ಅಪ್ರತಿಬುದ್ಧ (ಕ್ಷರ), ಬುಧ್ಯಮಾನ (ಸಾಧಕನಾದ ಚೇತನ), ಬುದ್ಧ (ಜ್ಞಾನೀ) – ಈ ಮೂರರ ವಿಷಯವಾಗಿಯೂ ಶ್ರುತಿಯ ನಿರ್ದೇಶಾನುಸಾರವಾಗಿ ಯಥಾವತ್ತಾಗಿ ಪ್ರತಿಪಾದಿಸಿ ಹೇಳಿದ್ದೇನೆ. ಶಾಸ್ತ್ರದೃಷ್ಟಾಂತದಿಂದ ಚೇತನನ ನಾನಾತ್ವ ಮತ್ತು ಏಕತ್ವಗಳನ್ನು ಹೀಗೆಯೇ ಕಂಡುಕೊಳ್ಳಬೇಕು.

ಮಶಕೋದುಮ್ಬರೇ ಯದ್ವದನ್ಯತ್ವಂ ತದ್ವದೇತಯೋಃ ।
ಮತ್ಸ್ಯೋದಕೇ ಯಥಾ ತದ್ವದನ್ಯತ್ವಮುಪಲಭ್ಯತೇ ॥೨೩॥

ಅತ್ತಿಯ ಹಣ್ಣಿನಲ್ಲಿರುವ ಹುಳು ಮತ್ತು ಅತ್ತಿಯ ಹಣ್ಣು ಬೇರೆ-ಬೇರೆಯೇ ಆಗಿದ್ದರೂ ಅತ್ತಿಯ ಹಣ್ಣನ್ನು ಬಿಟ್ಟು ಹುಳುವಾಗಲೀ, ಆ ಹುಳುವನ್ನು ಬಿಟ್ಟು ಅತ್ತಿಯ ಹಣ್ಣಾಗಲೀ ಹೇಗೆ ಇರುವುದಿಲ್ಲವೋ–ಮತ್ತು ನೀರಿಗಿಂತಲೂ ಮೀನು ಬೇರೆಯಾಗಿದ್ದರೂ ನೀರನ್ನು ಬಿಟ್ಟು ಮೀನು ಹೇಗೆ ಇರುವುದಿಲ್ಲವೋ–ಹಾಗೆಯೇ ಪ್ರಕೃತಿ–ಪುರುಷರಲ್ಲಿ ಅನ್ಯೋನ್ಯ ಸಹಯೋಗ ವಿರುತ್ತದೆ. ಪ್ರಕೃತಿಯನ್ನು (ದೇಹವನ್ನು) ಬಿಟ್ಟು ಪುರುಷನಾಗಲೀ–ಪುರುಷ ನನ್ನು (ಚೇತನವನ್ನು) ಬಿಟ್ಟು ಪ್ರಕೃತಿಯಾಗಲೀ (ದೇಹವಾಗಲೀ) ಇರುವುದಿಲ್ಲ.

ಏವಮೇವಾವಗನ್ತವ್ಯಂ ನಾನಾತ್ವೈಕತ್ವಮೇತಯೋಃ ।
ಏತದ್ಧಿ ಮೋಕ್ಷ ಇತ್ಯುಕ್ತಮವ್ಯಕ್ತಜ್ಞಾನಸಂಹಿತಮ್ ॥೨೪॥

ಇದೇ ರೀತಿಯಲ್ಲಿ ಚೇತನನ ನಾನಾತ್ವವನ್ನೂ ಮತ್ತು ಏಕತ್ವವನ್ನೂ ತಿಳಿದುಕೊಳ್ಳಬೇಕು. (ಚೇತನನು ಪ್ರಕೃತಿಯೊಡನೆ ಸಮತ್ವವನ್ನು ಹೊಂದುವುದರಿಂದ ನಾನಾತ್ವವನ್ನು ಪಡೆಯುತ್ತಾನೆ. ಪರಮಾತ್ಮನೊಡನೆ ಸಮತ್ವವನ್ನು ಪಡೆಯುವುದರಿಂದ ಏಕತ್ವವನ್ನು ಹೊಂದುತ್ತಾನೆ. ಪ್ರಕೃತಿಯ ಜ್ಞಾನದಿಂದ ಕೂಡಿರುವ ಇದೇ ಮೋಕ್ಷವೆಂದು ಹೇಳಲ್ಪಟ್ಟಿದೆ.)

ಪಞ್ಚವಿಂಶತಿಕಸ್ಯಾಸ್ಯ ಯೋಽಯಂ ದೇಹೇಷು ವರ್ತತೇ ।
ಏಷ ಮೋಕ್ಷಯಿತವ್ಯೇತಿ ಪ್ರಾಹುರವ್ಯಕ್ತಗೋಚರಾತ್ ॥೨೫॥

ಎಲ್ಲ ಶರೀರಗಳಲ್ಲಿಯೂ ಇರುವ ಇಪ್ಪತ್ತೈದನೆಯವನಾದ ಈ ಚೇತನನನ್ನು ಪ್ರಕೃತಿಗೋಚರವಾದ (ಪ್ರಕೃತಿಗೆ ಸಂಬಂಧಿಸಿದ) ಮಹತ್ತತ್ತ್ವಾದಿ ಬಂಧನಗಳಿಂದ ಬಿಡಿಸಬೇಕೆಂದು ವಿದ್ವಾಂಸರು ಹೇಳುತ್ತಾರೆ.

ಸೋಽಯಮೇವಂ ವಿಮುಚ್ಯೇತ ನಾನ್ಯಥೇತಿ ವಿನಿಶ್ಚಯಃ ।
ಪರೇಣ ಪರಧರ್ಮಾ ಚ ಭವತ್ಯೇಷ ಸಮೇತ್ಯ ವೈ ॥೨೬॥

ಚೇತನನು ಪೂರ್ವೋಕ್ತವಾದ ರೀತಿಯಲ್ಲಿಯೇ ಪ್ರಕೃತಿಯಿಂದ ವಿಮೋಚಿಸಲ್ಪಡಬೇಕು. ಬೇರೆ ಯಾವ ಮಾರ್ಗದಿಂದಲೂ ಚೇತನನ ಮುಕ್ತಿಯು ಸಾಧ್ಯವಾಗುವುದಿಲ್ಲ. ಯಾರೊಡನೆ ಸೇರಿದರೆ ಅವರ ಧರ್ಮವನ್ನು ಹೊಂದುವುದೇ ಚೇತನನ ಸ್ವಭಾವವಾಗಿದೆ. (ಪ್ರಕೃತಿಯೊಡನೆ ಸೇರಿದರೆ ಪ್ರಾಕೃತನಾಗುತ್ತಾನೆ. ಪರಮಾತ್ಮನೊಡನೆ ಸೇರಿದರೆ ಪರಮಾತ್ಮ ಧರ್ಮವುಳ್ಳವನೇ ಆಗುತ್ತಾನೆ.)

ವಿಶುದ್ಧಧರ್ಮಾ ಶುದ್ಧೇನ ಬುದ್ಧೇನ ಚ ಸ ಬುದ್ಧಿಮಾನ್ ।
ವಿಮುಕ್ತಧರ್ಮಾ ಮುಕ್ತೇನ ಸಮೇತ್ಯ ಪುರುಷರ್ಷಭ ॥೨೭॥

ಪುರುಷಶ್ರೇಷ್ಠನೇ! ಜೀವಾತ್ಮನು ಶುದ್ಧನಾದ ಪುರುಷನ ಸಹವಾಸವನ್ನು ಮಾಡಿದರೆ ತಾನೂ ಶುದ್ಧಧರ್ಮನೇ ಆಗುತ್ತಾನೆ. ಜ್ಞಾನಿಯ ಸಹವಾಸವನ್ನು ಮಾಡಿದರೆ ಜ್ಞಾನಿಯೇ ಆಗುತ್ತಾನೆ. ಮುಕ್ತನೊಡನೆ ಸೇರಿದರೆ ವಿಮುಕ್ತಿಧರ್ಮದವನೇ ಆಗುತ್ತಾನೆ.

ವಿಯೋಗಧರ್ಮಿಣಾ ಚೈವ ವಿಮುಕ್ತಾತ್ಮಾ ಭವತ್ಯಥ ।
ವಿಮೋಕ್ಷಿಣಾ ವಿಮೋಕ್ಷಶ್ಚ ಸಮೇತ್ಯೇಹ ತಥಾ ಭವೇತ್ ॥೨೮॥

ಜೀವಾತ್ಮನು ಪ್ರಕೃತಿಯ ಸಂಬಂಧವನ್ನು ತೊರೆದಿರುವವನೊಡನೆ ಸೇರಿದರೆ ಮುಕ್ತಾತ್ಮನೇ ಆಗುತ್ತಾನೆ. ಮೋಕ್ಷಧರ್ಮವಿರುವವನೊಡನೆ ಸೇರಿದರೆ ಮೋಕ್ಷವನ್ನೇ ಹೊಂದುತ್ತಾನೆ.

ಶುಚಿಕರ್ಮಾ ಶುಚಿಶ್ಚೈವ ಭವತ್ಯಮಿತದೀಪ್ತಿಮಾನ್ ।
ವಿಮಲಾತ್ಮಾ ಚ ಭವತಿ ಸಮೇತ್ಯ ವಿಮಲಾತ್ಮನಾ ॥೨೯॥

ಯಾವನ ಆಚಾರ-ವಿಚಾರಗಳು ಶುದ್ಧವಾಗಿವೆಯೋ–ಅಂತಹವನೊಡನೆ ಸೇರಿದರೆ ಚೇತನನು ಶುದ್ಧನೂ ಪವಿತ್ರನೂ ಆಗುತ್ತಾನೆ, ನಿರ್ಮಲವಾದ ಅಂತಃಕರಣವಿರುವವನೊಡನೆ ಸೇರಿದರೆ ತಾನೂ ವಿಮಲಾಂತರಂಗನೂ, ಮಹಾತೇಜಸ್ವಿಯೂ ಆಗುತ್ತಾನೆ.

ಕೇವಲಾತ್ಮಾ ತಥಾ ಚೈವ ಕೇವಲೇನ ಸಮೇತ್ಯ ವೈ ।
ಸ್ವತನ್ತ್ರಶ್ಚ ಸ್ವತನ್ತ್ರೇಣ ಸ್ವತನ್ತ್ರತ್ವಮವಾಪ್ನುತೇ ॥೩೦॥

ಕೇವಲನಾದ ಜ್ಞಾನಿಯೊಡನೆ ಸೇರಿದರೆ ಕೇವಲಾತ್ಮನೇ ಆಗುತ್ತಾನೆ. ಸ್ವತಂತ್ರನಾದ ಪರಮೇಶ್ವರನೊಡನೆ ಸೇರುವುದರಿಂದ ನಿಜವಾದ ಸ್ವಾತಂತ್ರ್ಯವನ್ನು ಪಡೆದು ಸ್ವತಂತ್ರತ್ವವನ್ನೇ (ಸ್ವರಾಜ್ಯವನ್ನೇ) ಹೊಂದುತ್ತಾನೆ.

ಏತಾವದೇತತ್ಕಥಿತಂ ಮಯಾ ತೇ
ತಥ್ಯಂ ಮಹಾರಾಜ ಯಥಾರ್ಥತತ್ತ್ವಮ್ ।
ಅಮತ್ಸರತ್ವಂ ಪರಿಗೃಹ್ಯ ಚಾರ್ಥಂ
ಸನಾತನಂ ಬ್ರಹ್ಮ ವಿಶುದ್ಧಮಾದ್ಯಮ್ ॥೩೧॥

ಮಹಾರಾಜ! ನಾನು ಈರ್ಷ್ಯಾಸೂಯೆಗಳಿಂದ ರಹಿತವಾದ ಭಾವವನ್ನು ಹೊಂದಿ–ನಿನಗೆ ಇದರಿಂದ ಪ್ರಯೋಜನವಾಗುವುದೆಂದು ಭಾವಿಸಿ–ಆದಿಭೂತವಾದ, ಸನಾತನವಾದ, ಸತ್ಯಸ್ವರೂಪವಾದ ವಿಶುದ್ಧಬ್ರಹ್ಮದ ಯಥಾವತ್ತಾದ ತತ್ತ್ವವನ್ನು ಪ್ರೇಮಪೂರ್ವಕವಾಗಿ ಈ ರೀತಿಯಲ್ಲಿ ಹೇಳಿದ್ದೇನೆ.

ನಾವೇದನಿಷ್ಠಸ್ಯ ಜನಸ್ಯ ರಾಜ-
ನ್ಪ್ರದೇಯಮೇತತ್ಪರಮಂ ತ್ವಯಾ ಭವೇತ್ ।
ವಿಧಿತ್ಸಮಾನಾಯ ವಿಬೋಧಕಾರಣಂ
ಪ್ರಬೋಧಹೇತೋಃ ಪ್ರಣತಸ್ಯ ಶಾಸನಮ್ ॥೩೨॥

ಮಹಾರಾಜ! ಯಾವ ಮನುಷ್ಯನಿಗೆ ವೇದಗಳಲ್ಲಿ ನಿಷ್ಠೆಯಿಲ್ಲವೋ-ಅಂತಹವನಿಗೆ ಪರಮಶ್ರೇಷ್ಠವಾದ ಈ ಬ್ರಹ್ಮಜ್ಞಾನವನ್ನು ಉಪದೇಶಿಸಬಾರದು. ವಿಶೇಷವಾದ ಈ ಬ್ರಹ್ಮಜ್ಞಾನದ ವಿಷಯವನ್ನು ತಿಳಿಯಲು ಯಾವನು ಹೆಚ್ಚು ಆಸೆಯುಳ್ಳವನಾಗಿರುವನೋ, ಜ್ಞಾನದ ಸಲುವಾಗಿಯೇ ಯಾವನು ಶರಣಾಗತನಾಗಿ ಬರುವನೋ-ಅಂತಹವನಿಗೆ ಮಾತ್ರವೇ ಇದನ್ನು ಉಪದೇಶಿಸಬೇಕು.

ನ ದೇಯಮೇತಚ್ಚ ತಥಾನೃತಾತ್ಮನೇ
ಶಠಾಯ ಕ್ಲೀಬಾಯ ನ ಜಿಹ್ಮಬುದ್ಧಯೇ ।
ನ ಪಣ್ಡಿತಜ್ಞಾನಪರೋಪತಾಪಿನೇ
ದೇಯಂ ತು ದೇಯಂ ಚ ನಿಬೋಧ ಯಾದೃಶೇ ॥

ಸುಳ್ಳುಹೇಳುವವನಿಗೂ, ಶಠನಿಗೂ, ನೀಚನಿಗೂ, ಕಪಟಿಗೂ, ತಾನೇ ಮಹಾಪಂಡಿತನೆಂದು ತಿಳಿದುಕೊಂಡು ತನ್ನ ಪಾಂಡಿತ್ಯದ ಮೂಲಕವಾಗಿ ಇತರರಿಗೆ ಪರಿತಾಪವನ್ನುಂಟುಮಾಡುವವನಿಗೂ-ಈ ಬ್ರಹ್ಮವಿದ್ಯೆಯನ್ನು ಉಪದೇಶಿಸಲೇಬಾರದು. ಎಂತಹವನಿಗೆ ಇದನ್ನು ಉಪದೇಶಿಸಬಹುದೆಂಬುದನ್ನು ಹೇಳುವೆನು ; ಕೇಳು.

ಶ್ರದ್ಧಾನ್ವಿತಾಯಾಥ ಗುಣಾನ್ವಿತಾಯ
ಪರಾಪವಾದಾದ್ವಿರತಾಯ ನಿತ್ಯಮ್ ।
ವಿಶುದ್ಧಯೋಗಾಯ ಬುಧಾಯ ನಿತ್ಯಂ
ಕ್ರಿಯಾವತೇ ಚ ಕ್ಷಮಿಣೇ ಹಿತಾಯ ॥೩೪॥

ವಿವಿಕ್ತಶೀಲಾಯ ವಿಧಿಪ್ರಿಯಾಯ
ವಿವಾದಹೀನಾಯ ಬಹುಶ್ರುತಾಯ ।

ವಿಜಾನತೇ ಚೈವ ನ ಚಾಹಿತಕ್ಷಮೇ
ದಮೇ ಚ ಶಕ್ತಾಯ ಶಮೇ ಚ ದೇಯಮ್ ॥೩೫॥

ಶ್ರದ್ಧಾಳುವಿಗೂ, ಗುಣವಂತನಿಗೂ, ಪರನಿಂದೆಯಿಂದ ದೂರವಿರುವವನಿಗೂ, ವಿಶುದ್ಧನಾದ ಯೋಗಿಗೂ, ವಿದ್ವಾಂಸನಿಗೂ, ಶಾಸ್ತ್ರೋಕ್ತವಾದ ಕರ್ಮಗಳನ್ನು ಅನುಷ್ಠಾನಮಾಡುವವನಿಗೂ, ಕ್ಷಮಾಶೀಲನಿಗೂ, ಸರ್ವರಿಗೂ ಹಿತವನ್ನು ಬಯಸುವವನಿಗೂ, ಏಕಾಂತವಾಸವನ್ನೇ ಅಪೇಕ್ಷಿಸುವವನಿಗೂ, ಶಾಸ್ತ್ರವಿಧಿಗಳನ್ನು ಆದರಿಸುವವನಿಗೂ, ವಾದಗಳಲ್ಲಿ ತೊಡಗದೇ ಇರುವವನಿಗೂ, ಅನೇಕಶಾಸ್ತ್ರಗಳನ್ನು ತಿಳಿದಿರುವವನಿಗೂ, ತಿಳಿವಳಿಕೆಯುಳ್ಳವನಿಗೂ, ಯಾರಿಗೂ ಅಹಿತವನ್ನು ಮಾಡದೇ ಇರುವವನಿಗೂ, ಇಂದ್ರಿಯಗಳನ್ನು ಅಂಕೆಯಲ್ಲಿಟ್ಟುಕೊಳ್ಳಲು ಮತ್ತು ಮನಸ್ಸನ್ನು ನಿಗ್ರಹಿಸಲು ಸಮರ್ಥನಾದವನಿಗೂ—ಈ ಬ್ರಹ್ಮವಿದ್ಯೆಯನ್ನು ಉಪದೇಶಿಸಬೇಕು.

ಏತೈರ್ಗುಣೈರ್ಹೀನತಮೇ ನ ದೇಯ-
ಮೇತತ್ಪರಂ ಬ್ರಹ್ಮ ವಿಶುದ್ಧಮಾಹುಃ ।
ನ ಶ್ರೇಯಸಾ ಯೋಕ್ಷ್ಯತಿ ತಾದೃಶೇ ಕೃತಂ
ಧರ್ಮಪ್ರವಕ್ತಾರಮಪಾತ್ರದಾನಾತ್ ॥೩೬॥

ಯಾವನು ಈ ಸದ್ಗುಣಗಳಿಂದ ಅತ್ಯಂತಹೀನನಾಗಿರುವನೋ—ಅಂತಹವನಿಗೆ ಇದನ್ನು ಉಪದೇಶಿಸಲೇಬಾರದು. ಪರಬ್ರಹ್ಮಸಂಬಂಧವಾದ ಈ ಜ್ಞಾನವನ್ನು ವಿಶುದ್ಧವಾದುದೆಂದು ಹೇಳುತ್ತಾರೆ. ಗುಣಹೀನನಾದವನಿಗೆ ಇದರ ಉಪದೇಶವು ಕಲ್ಯಾಣಕಾರಿಯಾಗುವುದಿಲ್ಲ. ಅಪಾತ್ರನಾದವನಿಗೆ ಈ ಬ್ರಹ್ಮವಿದ್ಯೆಯನ್ನು ದಾನಮಾಡುವುದರಿಂದ ಧರ್ಮದ ಉಪದೇಶಕನಿಗೂ ಶ್ರೇಯಸ್ಸುಂಟಾಗುವುದಿಲ್ಲ.

ಪೃಥ್ವೀಮಿಮಾಂ ಯದ್ಯಪಿ ರತ್ನಪೂರ್ಣಾಂ
ದದ್ಯಾನ್ನ ದೇಯಂ ತ್ವಿದಮವ್ರತಾಯ ।
ಜಿತೇನ್ದ್ರಿಯಾಯೈತದಸಂಶಯಂ ತೇ
ಭವೇತ್ಪ್ರದೇಯಂ ಪರಮಂ ನರೇನ್ದ್ರ ॥೩೭॥

ಯಾವನು ವ್ರತ-ನಿಯಮಾದಿಗಳನ್ನು ಪಾಲನಮಾಡುವುದಿಲ್ಲವೋ

ಅಂತಹವನು ರತ್ನಪೂರ್ಣವಾದ ಈ ಭೂಮಂಡಲವನ್ನೇ ಕೊಟ್ಟರೂ ಅವನಿಗೆ ಈ ವಿದ್ಯೆಯನ್ನು ಉಪದೇಶಿಸಬಾರದು. ಜಿತೇಂದ್ರಿಯನಾದವನಿಗೆ ಈ ಪರಮವಿದ್ಯೆಯನ್ನು ಉಪದೇಶಿಸಬೇಕು. ನರೇಂದ್ರ! ಈ ವಿಷಯದಲ್ಲಿ ನಿನಗೆ ಸಂಶಯವೇ ಇಲ್ಲದಿರಲಿ.

ಕರಾಲ ಮಾ ತೇ ಭಯಮಸ್ತು ಕಿಂಚಿ-
ದೇತಚ್ಛ್ರುತಂ ಬ್ರಹ್ಮ ಪರಂ ತ್ವಯಾದ್ಯ ।
ಯಥಾವದುಕ್ತಂ ಪರಮಂ ಪವಿತ್ರಂ
ವಿಶೋಕಮತ್ಯನ್ತಮನಾದಿಮಧ್ಯಮ್ ॥೩೮॥
ಅಗಾಧಜನ್ಮಾಮರಣಂ ಚ ರಾಜ-
ನ್ನಿರಾಮಯಂ ವೀತಭಯಂ ಶಿವಂ ಚ ।
ಸಮೀಕ್ಷ್ಯ ಮೋಹಂ ತ್ಯಜ ವಾದ್ಯ ಸರ್ವ-
ಜ್ಞಾನಸ್ಯ ತತ್ತ್ವಾರ್ಥಮಿದಂ ವಿದಿತ್ವಾ ॥೩೯॥

ಕರಾಳಜನಕನೇ! ನೀನಿಂದು ನನ್ನಿಂದ ಪರಬ್ರಹ್ಮಸಂಬಂಧವಾದ ಜ್ಞಾನವನ್ನು ಕೇಳಿರುವೆ. ಇದರಿಂದಲೇ ನಿನ್ನ ಮನಸ್ಸಿನ ಭಯವೆಲ್ಲವೂ ದೂರವಾಗಲಿ. ನಾನು ಹೇಳಿರುವಂತೆ ಪರಬ್ರಹ್ಮವು ಪರಮಪವಿತ್ರವಾದುದು. ಶೋಕರಹಿತವಾದುದು. ಆದಿಮಧ್ಯಾಂತಶೂನ್ಯವಾದುದು. ಅಗಾಧವಾದ ಹುಟ್ಟು-ಸಾವುಗಳಿಂದ ರಹಿತವಾದುದು. ಆಮಯರಹಿತವಾದುದು. ಭಯರಹಿತವಾದುದು ಮತ್ತು ಕಲ್ಯಾಣಪ್ರದವಾದುದು. ಇಂತಹ ಪರಬ್ರಹ್ಮವಸ್ತುವನ್ನು ಹೃದಯಗುಹೆಯಲ್ಲಿ ಚೆನ್ನಾಗಿ ಕಂಡುಕೊಂಡು ಸರ್ವಜ್ಞಾನದ ಈ ತತ್ತ್ವಾರ್ಥವನ್ನು ಯಥಾವತ್ತಾಗಿ ತಿಳಿದುಕೊಂಡು ಮೋಹವನ್ನು ಪರಿತ್ಯಜಿಸು.

ಅವಾಪ್ತಮೇತದ್ಧಿ ಮಯಾ ಸನಾತನಾ-
ದ್ಧಿರಣ್ಯಗರ್ಭಾದ್ಗದತೋ ನರಾಧಿಪ ।
ಪ್ರಸಾದ್ಯ ಯತ್ನೇನ ತಮುಗ್ರಚೇತಸಂ
ಸನಾತನಂ ಬ್ರಹ್ಮ ಯಥಾದ್ಯ ವೈ ತ್ವಯಾ ॥೪೦॥

ನರಾಧಿಪನೇ! ಯಾವ ರೀತಿಯಲ್ಲಿ ನೀನಿಂದು ನನ್ನಿಂದ ಈ ಸನಾತನ

ಬ್ರಹ್ಮದ ಜ್ಞಾನವನ್ನು ಪಡೆದುಕೊಂಡೆಯೋ–ಅದೇ ರೀತಿಯಲ್ಲಿ ನಾನೂ ಮಹಾತೇಜಸ್ವಿಯಾದ ಹಿರಣ್ಯಗರ್ಭನನ್ನು ಪ್ರಯತ್ನಪೂರ್ವಕವಾಗಿ ಪ್ರಸನ್ನ ಗೊಳಿಸಿ ಅವನಿಂದ ಈ ಪರಬ್ರಹ್ಮಜ್ಞಾನವನ್ನು ಪಡೆದುಕೊಂಡೆನು.

ಪೃಷ್ಟಸ್ತ್ವಯಾ ಚಾಸ್ಮಿ ಯಥಾ ನರೇನ್ದ್ರ
ಯಥಾ ಮಯೇದಂ ತ್ವಯಿ ಚೋಕ್ತಮದ್ಯ ।
ತಥಾವಾಪ್ತಂ ಬ್ರಹ್ಮಣೋ ಮೇ ನರೇನ್ದ್ರ
ಮಹಾಜ್ಞಾನಂ ಮೋಕ್ಷವಿದಾಂ ಪರಾಯಣಮ್ ॥೪೧॥

ನರೇಂದ್ರನೇ! ನೀನು ನನ್ನನ್ನು ಸಾಂಖ್ಯ ಮತ್ತು ಯೋಗಗಳ ವಿಷಯವಾಗಿ ಪ್ರಶ್ನಿಸಿದಂತೆಯೇ ನಾನೂ ಹಿರಣ್ಯಗರ್ಭನನ್ನು ಪ್ರಶ್ನಿಸಿದೆನು. ನಾನು ಈಗ ನಿನಗೆ ಈ ಜ್ಞಾನದ ಉಪದೇಶವನ್ನು ಮಾಡಿದಂತೆಯೇ ಬ್ರಹ್ಮನೂ ನನಗೆ–ಮೋಕ್ಷವಿದರಿಗೆ ಆಶ್ರಯಭೂತವಾದ ಈ ಸಾಂಖ್ಯಮಹಾಜ್ಞಾನವನ್ನು ಉಪದೇಶಿಸಿದನು. ಹೀಗೆ ಅವನಿಂದ ನಾನು ಈ ಜ್ಞಾನವನ್ನು ಪಡೆದುಕೊಂಡೆನು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಮಹರ್ಷಿಗಳಾದ ವಸಿಷ್ಠರು ಕರಾಲಜನಕರಾಜನಿಗೆ ಹೇಳಿದಂತೆಯೇ ಬ್ರಹ್ಮತತ್ತ್ವವನ್ನು ನಾನು ನಿನಗೆ ಹೇಳಿದ್ದೇನೆ. ಇಪ್ಪತ್ತೈದನೆ ಯವನಾದ ಚೇತನನು ಈ ಬ್ರಹ್ಮತತ್ತ್ವವನ್ನು ಹೊಂದಿದನಂತರ ಪುನಃ ಸಂಸಾರಕ್ಕೆ ಹಿಂದಿರುಗುವುದಿಲ್ಲ. ಯಾವನು ಈ ಉತ್ತಮಜ್ಞಾನವನ್ನು ಗುರುವಿನ ಮೂಲಕವಾಗಿ ತಿಳಿದ ನಂತರವೂ ಜ್ಞಾನಸ್ವರೂಪನಾದ ಪರ ಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದಿಲ್ಲವೋ–ಅಂತಹವನು ಹುಟ್ಟು-ಸಾವು ಗಳನ್ನು ಅನವರತವಾಗಿ ಹೊಂದುತ್ತಲೇ ಇರುತ್ತಾನೆ. ಯಾರು ಗುರುವಿನಿಂದ ಈ ಮಹಾಜ್ಞಾನವನ್ನು ಪಡೆದುಕೊಂಡು ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಳ್ಳು ವರೋ–ಅವರು ಹುಟ್ಟು-ಸಾವುಗಳಿಂದ ವಿಮುಕ್ತರಾಗುತ್ತಾರೆ. (ಕೇವಲ ವಿಷಯಜ್ಞಾನದಿಂದ ಪ್ರಯೋಜನವಿಲ್ಲ. ಜ್ಞಾನಗಮ್ಯನನ್ನು ಹೊಂದಿದ ನಂತ ರವೇ ಜ್ಞಾನದ ಪ್ರಯೋಜನ.) ಪರಮಶ್ರೇಯಸ್ಕರವಾದ ಈ ಬ್ರಹ್ಮಜ್ಞಾನ ವನ್ನು ನಾನು ನಾರದಮಹರ್ಷಿಗಳಿಂದ ತಿಳಿದೆನು. ನಾನು ತಿಳಿದುದನ್ನು

ಯಥಾವತ್ತಾಗಿಯೇ ನಿನಗೆ ಹೇಳಿದ್ದೇನೆ. ಮಹಾತ್ಮರಾದ ವಸಿಷ್ಠರು ಹಿರಣ್ಯಗರ್ಭನಿಂದ ಈ ಜ್ಞಾನವನ್ನು ಪಡೆದುಕೊಂಡರು. ಮಹರ್ಷಿಗಳಾದ, ಋಷಿಶ್ರೇಷ್ಠರಾದ ವಸಿಷ್ಠರಿಂದ ನಾರದರು ಪಡೆದುಕೊಂಡರು. ನಾರದರಿಂದ ಈ ಸನಾತನಬ್ರಹ್ಮದ ಜ್ಞಾನವು ನನಗೆ ದೊರಕಿತು. ಯುಧಿಷ್ಠಿರ! ಪರಮ ಪದವನ್ನು ಸಾಧಿಸಿಕೊಡುವ ಈ ಬ್ರಹ್ಮಜ್ಞಾನವನ್ನು ಕೇಳಿದನಂತರವಾದರೂ ನೀನು ಶೋಕಿಸಬೇಡ.

ಕ್ಷರ ಮತ್ತು ಅಕ್ಷರಗಳ ತತ್ತ್ವವನ್ನು ಯಾವನು ತಿಳಿದಿರುವನೋ ಅವನಿಗೆ ಭಯವೆಂಬುದೇ ಇರುವುದಿಲ್ಲ. ಯಾವನು ಇದನ್ನು ತಿಳಿದಿಲ್ಲವೋ ಅವನಿಗೆ ಭಯವೆಂಬುದು ತಪ್ಪಿದ್ದಲ್ಲ. ಮೂಢನಾದವನು ಈ ಪರತತ್ತ್ವವನ್ನು ತಿಳಿಯದೇ ಪದೇ ಪದೇ ಈ ಪ್ರಪಂಚಕ್ಕೆ ಬಂದುಹೋಗುತ್ತಲೇ ಇರುತ್ತಾನೆ. ಮರಣಾಂತರವಾದ ಸಾವಿರಾರು ಜನ್ಮಗಳನ್ನು ಪಡೆದುಕೊಂಡು ಕಷ್ಟಗಳನ್ನು ಅನುಭವಿಸುತ್ತಿರುತ್ತಾನೆ. ದೇವಯೋನಿಗಳಲ್ಲಿಯೂ, ತಿರ್ಯಗ್ಯೋನಿಗಳ ಲ್ಲಿಯೂ, ಮನುಷ್ಯಯೋನಿಗಳಲ್ಲಿಯೂ ಪುನಃ ಪುನಃ ಹುಟ್ಟುತ್ತಲೇ ಇರು ತ್ತಾನೆ. ಬಹಳ ಕಾಲವು ಕಳೆದನಂತರ ಕಾಲಧರ್ಮಸಂಯೋಗದಿಂದ ಆ ಚೇತನನು ಶುದ್ಧನಾದರೆ (ಆತ್ಮಸ್ವರೂಪವನ್ನು ತಿಳಿದುಕೊಂಡರೆ) ಅಜ್ಞಾನ ಸಾಗರದಿಂದ ವಿಮುಕ್ತನಾಗಿ ಪರಬ್ರಹ್ಮಪರಮಾತ್ಮನನ್ನು ಹೊಂದುತ್ತಾನೆ. ಅಜ್ಞಾನರೂಪವಾದ ಸಾಗರವು ಘೋರವಾದುದೆಂದೂ, ಅವ್ಯಕ್ತವಾದು ದೆಂದೂ, ಅಗಾಧವಾದುದೆಂದೂ ಹೇಳುತ್ತಾರೆ. ಅಜ್ಞಾನಸಾಗರದಲ್ಲಿ ಅನು ದಿನವೂ ಪ್ರಾಣಿಗಳು ಮುಳುಗುತ್ತಲೇ ಇರುತ್ತವೆ. ಸನಾತನವಾದ, ಅಗಾಧ ವಾದ, ಅವ್ಯಕ್ತವಾದ ಅಜ್ಞಾನಸಾಗರದಿಂದ ನೀನು ಉತ್ತೀರ್ಣನಾಗಿರುವೆ. ಆದುದರಿಂದಲೇ ನೀನು ರಜೋಗುಣ-ತಮೋಗುಣಗಳಿಂದ ರಹಿತನೂ ಆಗಿರುವೆ.”

೩೦೮ನೆಯ ಅಧ್ಯಾಯವು ಮುಗಿಯಿತು.

ಜನಕವಂಶೀಯನಾದ ವಸುಮಂತನಿಗೆ ಭಾರ್ಗವಮುನಿಯಿಂದ ಧರ್ಮೋಪದೇಶ

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಹಿಂದೊಮ್ಮೆ ಜನಕವಂಶೀಯನಾದ ರಾಜಕುಮಾರನೊಬ್ಬನು ಬೇಟೆಯಾಡಲು ನಿರ್ಜನವಾದ ಅರಣ್ಯಪ್ರದೇಶದಲ್ಲಿ ತಿರುಗಾಡುತ್ತಿದ್ದಾಗ – ಭೃಗುವಂಶೋತ್ಪನ್ನನಾದ ಬ್ರಾಹ್ಮಣಶ್ರೇಷ್ಠನಾದ ಋಷಿಯನ್ನು ಸಂಧಿಸಿದನು. ಋಷಿಯ ಬಳಿಗೆ ಹೋದ ವಸುಮಂತನು ಸುಖಾಸನದಲ್ಲಿ ಕುಳಿತಿದ್ದ ಮುನಿಗೆ ತಲೆಬಾಗಿ ನಮಸ್ಕರಿಸಿ ಅವನ ಅನುಮತಿಯನ್ನು ಪಡೆದು ಹೀಗೆ ಪ್ರಶ್ನಿಸಿದನು :

ಭಗವನ್ಕಿಮಿದಂ ಶ್ರೇಯಃ ಪ್ರೇತ್ಯ ಚಾಪೀಹ ವಾ ಭವೇತ್ ।
ಪುರುಷಸ್ಯಾಧ್ರುವೇ ದೇಹೇ ಕಾಮಸ್ಯ ವಶವರ್ತಿನಃ ॥೩॥

"ಪೂಜ್ಯರೇ! ಕ್ಷಣಭಂಗುರವಾದ–ಈ ಶರೀರದಲ್ಲಿ ಕಾಮವಶನಾಗಿರುವ ಮನುಷ್ಯನಿಗೆ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಯಾವುದರಿಂದ ಶ್ರೇಯಸ್ಸಾಗುತ್ತದೆ?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ವಸುಮಂತನು ಮುನಿಯನ್ನು ಸತ್ಕರಿಸಿ ಹೀಗೆ ಪ್ರಶ್ನಿಸಿದನಂತರ ಮಹಾತಪಸ್ವಿಯಾದ, ಮಹಾತ್ಮನಾದ ಆ ಮುನಿಯು ವಸುಮಂತನೊಡನೆ ಶ್ರೇಯಸ್ಕರವಾದ ಈ ಮಾತನ್ನು ಹೇಳಿದನು :

ಮನಸೋಽಪ್ರತಿಕೂಲಾನಿ ಪ್ರೇತ್ಯ ಚೇಹ ಚ ವಾಞ್ಛಸಿ ।
ಭೂತಾನಾಂ ಪ್ರತಿಕೂಲೇಭ್ಯೋ ನಿವರ್ತಸ್ವ ಯತೇನ್ದ್ರಿಯಃ ॥೫॥

"ರಾಜನೇ! ನೀನೇನಾದರೂ ಈ ಲೋಕದಲ್ಲಿಯಾಗಲೀ ಮತ್ತು ಪರಲೋಕದಲ್ಲಿಯಾಗಲೀ ನಿನ್ನ ಮನಸ್ಸಿಗೆ ಅನುಕೂಲವಾದ ವಸ್ತುವನ್ನು ಪಡೆಯುವ ಇಚ್ಛೆಯುಳ್ಳವನಾಗಿದ್ದರೆ–ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಪ್ರಾಣಿಗಳಿಗೆ ಪ್ರತಿಕೂಲವಾಗುವ ಕರ್ಮಾಚರಣೆಗಳಿಂದ ನಿವೃತ್ತನಾಗು.

ಧರ್ಮಃ ಸತಾಂ ಹಿತಃ ಪುಂಸಾಂ ಧರ್ಮಶ್ಚೈವಾಶ್ರಯಃ ಸತಾಮ್ ।
ಧರ್ಮಾಲ್ಲೋಕಾಸ್ತ್ರಯಸ್ತಾತ ಪ್ರವೃತ್ತಾಃ ಸಚರಾಚರಾಃ ॥೬॥



ಧರ್ಮವೇ ಸತ್ಪುರುಷರಿಗೆ ಹಿತವನ್ನುಂಟುಮಾಡುವುದಾಗಿದೆ. ಧರ್ಮವೇ ಸತ್ಪುರುಷರಿಗೆ ಪರಮಾಶ್ರಯವಾಗಿದೆ. ಚರಾಚರಗಳಿಂದ ಯುಕ್ತವಾದ ಮೂರು ಲೋಕಗಳೂ ಧರ್ಮದಿಂದಲೇ ನಡೆಯುತ್ತಿವೆ.

ಸ್ವಾದುಕಾಮುಕ ಕಾಮಾನಾಂ ವೈತೃಷ್ಣ್ಯಂ ಕಿಂ ನ ಗಚ್ಛಸಿ ।
ಮಧು ಪಶ್ಯಸಿ ದುರ್ಬುದ್ಧೇ ಪ್ರಪಾತಂ ನಾನುಪಶ್ಯಸಿ ॥೭॥

ರುಚಿಕರವಾದ ಭೋಗ್ಯವಸ್ತುಗಳನ್ನು ಆಶಿಸುವವನೇ! ದುರ್ಬುದ್ಧಿಯುಳ್ಳವನೇ! ನಿನ್ನ ಕಾಮಪಿಪಾಸೆಯು ಏಕೆ ಶಾಂತವಾಗಿಲ್ಲ? ಈಗ ನೀನು ವೃಕ್ಷದ ಮೇಲಿರುವ ಜೇನುತುಪ್ಪವನ್ನು ಮಾತ್ರವೇ ನೋಡುತ್ತಿರುವೆ. ವೃಕ್ಷದ ಕೆಳಭಾಗದಲ್ಲಿರುವ ಪ್ರಪಾತವನ್ನು ಕಾಣುತ್ತಿಲ್ಲ. (ಭೋಗಗಳ ಮಾಧುರ್ಯದಲ್ಲಿಯೇ ಲುಬ್ಧನಾಗಿರುವೆ. ಅದರಿಂದುಂಟಾಗುವ ಅಧಃಪತನವನ್ನು ಯೋಚಿಸುತ್ತಿಲ್ಲ.)

ಯಥಾ ಜ್ಞಾನೇ ಪರಿಚಯಃ ಕರ್ತವ್ಯಸ್ತತ್ಫಲಾರ್ಥಿನಾ ।
ತಥಾ ಧರ್ಮೇ ಪರಿಚಯಃ ಕರ್ತವ್ಯಸ್ತತ್ಫಲಾರ್ಥಿನಾ ॥೮॥

ಜ್ಞಾನದ ಫಲವನ್ನು ಅಪೇಕ್ಷಿಸುವವನಿಗೆ ಜ್ಞಾನದ ಪರಿಚಯವು ಆವಶ್ಯಕವಾಗಿ ಇರಬೇಕಾಗಿರುವಂತೆ–ಧರ್ಮದ ಫಲವನ್ನು ಅಪೇಕ್ಷಿಸುವವನಿಗೆ ಧರ್ಮದ ಪರಿಚಯವೂ ಆವಶ್ಯಕವಾಗಿ ಇರಲೇಬೇಕು.

ಅಸತಾ ಧರ್ಮಕಾಮೇನ ವಿಶುದ್ಧಂ ಕರ್ಮ ದುಷ್ಕರಮ್ ।
ಸತಾ ತು ಧರ್ಮಕಾಮೇನ ಸುಕರಂ ಕರ್ಮ ದುಷ್ಕರಮ್ ॥೯॥

ದುಷ್ಟನು ಧರ್ಮಾಪೇಕ್ಷಿಯೇ ಆಗಿದ್ದರೂ ಅವನಿಗೆ ವಿಶುದ್ಧವಾದ ಕರ್ಮವು ದುಷ್ಕರವೇ ಸರಿ. ಧರ್ಮಕಾಮನಾದ ಸತ್ಪುರುಷನಾದರೋ ಕಠಿನವಾದ ಕರ್ಮವನ್ನೂ ಸುಲಭವಾಗಿಯೇ ಮಾಡುತ್ತಾನೆ.

ವನೇ ಗ್ರಾಮ್ಯಸುಖಾಚಾರೋ ಯಥಾ ಗ್ರಾಮ್ಯಸ್ತಥೈವ ಸಃ ।
ಗ್ರಾಮೇ ವನಸುಖಾಚಾರೋ ಯಥಾ ವನಚರಸ್ತಥಾ ॥೧೦॥

ಅರಣ್ಯದಲ್ಲಿದ್ದರೂ ಗ್ರಾಮ್ಯವಾದ ಸುಖಗಳನ್ನು ಉಪಭೋಗಿಸುವ ಮನಸ್ಸುಳ್ಳವನಾಗಿದ್ದರೆ – ಅವನು ಗ್ರಾಮದಲ್ಲಿದ್ದಂತೆಯೇ ಸರಿ. ಗ್ರಾಮದಲ್ಲಿದ್ದರೂ ವನವಾಸಿಗಳ ಆಚರಣೆಯಲ್ಲಿದ್ದರೆ – ಅಂತಹವನು ಅರಣ್ಯದಲ್ಲಿದ್ದಂತೆಯೇ (ವಾನಪ್ರಸ್ಥನಂತೆಯೇ) ಸರಿ.

ಮನೋವಾಕ್ಕಾಯಿಕೇ ಧರ್ಮೇ ಕುರು ಶ್ರದ್ಧಾಂ ಸಮಾಹಿತಃ ।
ನಿವೃತ್ತೌ ವಾ ಪ್ರವೃತ್ತೌ ವಾ ಸಮ್ಪ್ರಧಾರ್ಯ ಗುಣಾಗುಣಾನ್ ॥೧೧॥

ಮೊದಲು ನೀನು ನಿವೃತ್ತಿ ಮತ್ತು ಪ್ರವೃತ್ತಿಮಾರ್ಗಗಳಲ್ಲಿರುವ

ಗುಣಾವಗುಣಗಳನ್ನು ಚೆನ್ನಾಗಿ ಪರಿಶೀಲಿಸಿ ಯಾವುದು ಉತ್ತಮವೆಂಬುದನ್ನು ನಿಶ್ಚಯಿಸು. ಅನಂತರ ಏಕಾಗ್ರಚಿತ್ತನಾಗಿ ಮನಸ್ಸು, ಮಾತು ಮತ್ತು ಶರೀರಗಳ ಮೂಲಕವಾಗಿ ಮಾಡಬೇಕಾದ ಧರ್ಮದಲ್ಲಿ ಶ್ರದ್ಧೆಯನ್ನಿಡು.

ನಿತ್ಯಂ ಚ ಬಹು ದಾತವ್ಯಂ ಸಾಧುಭ್ಯಶ್ಚಾನಸೂಯತಾ ।
ಪ್ರಾರ್ಥಿತಂ ವ್ರತಶೌಚಾಭ್ಯಾಂ ಸತ್ಕೃತಂ ದೇಶಕಾಲಯೋಃ ॥೧೨॥

ಪ್ರತಿನಿತ್ಯವೂ ವ್ರತಗಳ ಮತ್ತು ಶೌಚಾಚಾರಗಳ ಪರಿಪಾಲನೆ ಮಾಡುತ್ತಾ, ಉತ್ತಮವಾದ ದೇಶ ಮತ್ತು ಕಾಲಗಳಲ್ಲಿ ಸಾಧುಪುರುಷರ ಪ್ರಾರ್ಥನೆ ಮತ್ತು ಸತ್ಕಾರಗಳ ಪೂರ್ವಕವಾಗಿ ಅಸೂಯಾರಹಿತನಾಗಿ ಅಧಿಕವಾದ ದಾನವನ್ನು ಕೊಡಬೇಕು.

ಶುಭೇನ ವಿಧಿನಾ ಲಬ್ಧಮರ್ಹಾಯ ಪ್ರತಿಪಾದಯೇತ್ ।
ಕ್ರೋಧಮುತ್ಸೃಜ್ಯ ದದ್ಯಾಚ್ಚ ನಾನುತಪ್ಯೇನ್ನ ಕೀರ್ತಯೇತ್ ॥೧೩॥

ಸತ್ಕರ್ಮಗಳ ಮೂಲಕವಾಗಿ ಪ್ರಾಪ್ತವಾದ ಧನವನ್ನು ಸತ್ಪಾತ್ರರಿಗೆ ದಾನಮಾಡಬೇಕು. ಕ್ರೋಧವನ್ನು ಸಂಪೂರ್ಣವಾಗಿ ತ್ಯಜಿಸಿ ದಾನಮಾಡ ಬೇಕು. ದಾನಕೊಟ್ಟನಂತರ ಪಶ್ಚಾತ್ತಾಪಪಡಬಾರದು ಮತ್ತು ದಾನಕೊಟ್ಟು ದನ್ನು ಬೇರೆಯವರೊಡನೆ ಹೇಳಲೂಬಾರದು.

ಅನೃಶಂಸಃ ಶುಚಿರ್ದಾನ್ತಃ ಸತ್ಯವಾಗಾರ್ಜವೇ ಸ್ಥಿತಃ ।
ಯೋನಿಕರ್ಮವಿಶುದ್ಧಶ್ಚ ಪಾತ್ರಂ ಸ್ಯಾದ್ವೇದವಿದ್ದ್ವಿಜಃ ॥೧೪॥

ದಯಾಳುವೂ, ಪವಿತ್ರನೂ, ಜಿತೇಂದ್ರಿಯನೂ, ಸತ್ಯನಿಷ್ಠನೂ, ಋಜುಮಾರ್ಗದಲ್ಲಿ ನಡೆಯತಕ್ಕವನೂ, ಜನ್ಮದಿಂದಲೂ–ಕರ್ಮದಿಂದಲೂ ಪರಿಶುದ್ಧನಾಗಿರುವವನೂ, ವೇದವಿದನೂ ಆಗಿರುವ ಬ್ರಾಹ್ಮಣನು ದಾನಕ್ಕೆ ಸತ್ಪಾತ್ರನಾಗಿರುತ್ತಾನೆ.

ಸತ್ಕೃತಾ ಚೈಕಪತ್ನೀ ಚ ಜಾತ್ಯಾ ಯೋನಿರಿಹೇಷ್ಯತೇ ।
ಋಗ್ಯಜುಃಸಾಮಗೋ ವಿದ್ವಾನ್ಷಟ್ಕರ್ಮಾ ಪಾತ್ರಮುಚ್ಯತೇ ॥೧೫॥

ಸತ್ಪುರುಷರಿಂದ ಸತ್ಕೃತಳಾದ, ಏಕಪತ್ನಿಯಾದ, ಪತಿವ್ರತೆಯಾದ ಸ್ತ್ರೀಯು ಪುತ್ರೋತ್ಪತ್ತಿಗೆ ಒಳ್ಳೆಯ ಸ್ಥಾನಳೆಂದು ಹೇಳುತ್ತಾರೆ. ಅಂತಹವ

ಳಿಂದ ಜನ್ಮವನ್ನು ಪಡೆದವನು ಜನ್ಮಶುದ್ಧನಾಗುತ್ತಾನೆ. ಋಗ್ವೇದ-ಯಜುರ್ವೇದ-ಸಾಮವೇದಗಳಲ್ಲಿ ವಿದ್ವಾಂಸನಾದ ಯಜನ-ಯಾಜನ-ಅಧ್ಯಯನ-ಅಧ್ಯಾಪನ-ದಾನ-ಪ್ರತಿಗ್ರಹಗಳೆಂಬ ಆರು ಕರ್ಮಗಳಲ್ಲಿ ನಿರತನಾದ ಬ್ರಾಹ್ಮಣನು ದಾನಕ್ಕೆ ಪಾತ್ರನೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ.

ಸ ಏವ ಧರ್ಮಃ ಸೋಽಧರ್ಮಸ್ತಂ ತಂ ಪ್ರತಿ ನರಂ ಭವೇತ್ ।
ಪಾತ್ರಕರ್ಮವಿಶೇಷೇಣ ದೇಶಕಾಲಾವವೇಕ್ಷ್ಯ ಚ ॥೧೬॥

ದೇಶ, ಕಾಲ, ಪಾತ್ರ ಮತ್ತು ಕರ್ಮವಿಶೇಷಗಳನ್ನು ವಿಚಾರಮಾಡಿದಾಗ ಒಂದೇ ಕರ್ಮವು ಒಬ್ಬ ಮನುಷ್ಯನಿಗೆ ಧರ್ಮವೂ–ಮತ್ತೊಬ್ಬ ಮನುಷ್ಯನಿಗೆ ಅಧರ್ಮವೂ ಆಗುತ್ತದೆ.

ಲೀಲಯಾಲ್ಪಂ ಯಥಾಗಾತ್ರಾತ್ಪ್ರಮೃಜ್ಯಾತ್ತು ರಜಃ ಪುಮಾನ್ ।
ಬಹುಯತ್ನೇನ ಚ ಮಹತ್ಪಾಪನಿರ್ಹರಣಂ ತಥಾ ॥೧೭॥

ಮನುಷ್ಯನು ತನ್ನ ಶರೀರದ ಮೇಲಿರುವ ಸ್ವಲ್ಪವಾದ ಧೂಳನ್ನು ನಿರಾಯಾಸದಿಂದ ಲೀಲಾಜಾಲವಾಗಿ ಕೊಡವಿಕೊಳ್ಳುತ್ತಾನೆ. ಆದರೆ ಶರೀರದಲ್ಲಿ ಹೆಚ್ಚು ಧೂಳೇನಾದರೂ ಇದ್ದರೆ–ಸ್ನಾನಾದಿ ಅಧಿಕಪ್ರಯತ್ನದಿಂದಲೇ ಆ ಧೂಳನ್ನು ಹೋಗಲಾಡಿಸಿಕೊಳ್ಳಬೇಕಾಗುವುದು. ಹಾಗೆಯೇ ಪಾಪವು ಅಲ್ಪವಾಗಿದ್ದರೆ ಅಲ್ಪಪ್ರಯತ್ನದಿಂದಲೇ ಅದರ ನಿರಸನವಾಗುತ್ತದೆ. ಪಾಪವು ಬಲಿಷ್ಠವಾಗಿದ್ದರೆ ವಿಶೇಷಪ್ರಾಯಶ್ಚಿತ್ತಾದಿಗಳಿಂದಲೇ ಅದನ್ನು ನಿವಾರಣೆ ಮಾಡಿಕೊಳ್ಳಬೇಕಾಗುತ್ತದೆ.

ವಿರಿಕ್ತಸ್ಯ ಯಥಾ ಸಮ್ಯಗ್ಘೃತಂ ಭವತಿ ಭೇಷಜಮ್ ।
ತಥಾ ನಿರ್ಹೃತದೋಷಸ್ಯ ಪ್ರೇತ್ಯ ಧರ್ಮಃ ಸುಖಾವಹಃ ॥೧೮॥

ವಿರೇಚನದಿಂದ ಬರಿದಾದ ಹೊಟ್ಟೆಯುಳ್ಳವನಿಗೆ ತುಪ್ಪವೇ ಯಾವ ರೀತಿಯಲ್ಲಿ ಒಳ್ಳೆಯ ಔಷಧವಾಗುವುದೋ–ಹಾಗೆಯೇ ಸಮಸ್ತವಾದ ದೋಷಗಳಿಂದಲೂ ವಿಮುಕ್ತನಾಗಿರುವವನಿಗೆ ಧರ್ಮವೇ ಪರಲೋಕದಲ್ಲಿ ಸುಖವನ್ನುಂಟುಮಾಡುತ್ತದೆ.

ಮಾನಸಂ ಸರ್ವಭೂತೇಷು ವರ್ತತೇ ವೈ ಶುಭಾಶುಭಮ್ ।
ಅಶುಭೇಭ್ಯಃ ಸದಾಕ್ಷಿಪ್ಯ ಶುಭೇಷ್ವೇವಾವತಾರಯೇತ್ ॥೧೯॥

ಸರ್ವಪ್ರಾಣಿಗಳ (ಸರ್ವಮನುಷ್ಯರ) ಮನಸ್ಸಿನಲ್ಲಿಯೂ ಒಳ್ಳೆಯ ಮತ್ತು ಕೆಟ್ಟ ವಿಚಾರಗಳು ಇದ್ದೇ ಇರುತ್ತವೆ. ವಿವೇಕಿಯಾದವನು ಕೆಟ್ಟ ವಿಚಾರ ಗಳೆಲ್ಲವನ್ನೂ ಮನಸ್ಸಿನಿಂದ ದೂರೀಕರಿಸಿ ಒಳ್ಳೆಯ ವಿಚಾರಗಳಲ್ಲಿಯೇ ಸದಾ ಮಗ್ನನಾಗಿರಬೇಕು.

ಸರ್ವಂ ಸರ್ವೇಣ ಸರ್ವತ್ರ ಕ್ರಿಯಮಾಣಂ ಚ ಪೂಜಯ ।
ಸ್ವಧರ್ಮೇ ಯತ್ರ ರಾಗಸ್ತೇ ಕಾಮಂ ಧರ್ಮೋ ವಿಧೀಯತಾಮ್ ॥

ಎಲ್ಲ ವರ್ಣಗಳ ಮತ್ತು ಆಶ್ರಮಧರ್ಮಗಳ ಅನುಸಾರವಾಗಿ ಎಲ್ಲರಿಂದಲೂ ಎಲ್ಲ ಕಡೆಗಳಲ್ಲಿಯೂ ಮಾಡಲ್ಪಡುವ ಧರ್ಮಗಳನ್ನೂ, ದೇಶಾಚಾರ-ಕುಲಾಚಾರಗಳನ್ನೂ ನೀನು ಗೌರವಿಸಬೇಕು. ಆದರೆ ನಿನ್ನ ಅನುರಾಗವು ನಿನ್ನ ಧರ್ಮದಲ್ಲಿಯೇ ಇರಲಿ. ನಿನ್ನ ಇಚ್ಛಾನುಸಾರವಾಗಿ ಧರ್ಮಕಾರ್ಯಗಳನ್ನು ಮಾಡು.

ಅಧೃತಾತ್ಮನ್ಧೃತೌ ತಿಷ್ಠ ದುರ್ಬುದ್ಧೇ ಬುದ್ಧಿಮಾನ್ಭವ ।
ಅಪ್ರಶಾನ್ತಃ ಪ್ರಶಾಮ್ಯ ತ್ವಮಪ್ರಾಜ್ಞಃ ಪ್ರಾಜ್ಞವಚ್ಚರ ॥೨೧॥

ಅಧೀರಚಿತ್ತನಾದ ವಸುಮಂತನೇ! ಧೈರ್ಯವನ್ನು ಆಶ್ರಯಿಸು. ದುರ್ಬುದ್ಧಿಯೇ! ಬುದ್ಧಿವಂತನಾಗು. ನೀನು ಅಶಾಂತನಾಗಿರುವೆ. ಶಾಂತಿ ಯನ್ನು ಹೊಂದು. ನೀನು ಮೂರ್ಖನಂತೆ ವ್ಯವಹರಿಸುತ್ತಿರುವೆ. ಮುಂದೆ ಪ್ರಾಜ್ಞನಂತೆ ವ್ಯವಹರಿಸು.

ತೇಜಸಾ ಶಕ್ಯತೇ ಪ್ರಾಪ್ತುಮುಪಾಯಃ ಸಹಚಾರಿಣಾ ।
ಇಹ ಚ ಪ್ರೇತ್ಯ ಚ ಶ್ರೇಯಸ್ತಸ್ಯ ಮೂಲಂ ಧೃತಿಃ ಪರಾ ॥೨೨॥

ಸತ್ಪುರುಷರ ಸಹವಾಸವನ್ನು ಮಾಡುವವನು ಇಹ-ಪರಗಳೆರಡರ ಲ್ಲಿಯೂ ಶ್ರೇಯಸ್ಸನ್ನು ಪಡೆದುಕೊಳ್ಳುವ ಉಪಾಯವನ್ನು ಧೈರ್ಯದಿಂದ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಉತ್ತಮವಾದ ಧೃತಿಯೇ (ಧೈರ್ಯವೇ) ಶ್ರೇಯಸ್ಸಿಗೆ ಮೂಲಸಾಧನವಾಗುತ್ತದೆ.

ರಾಜರ್ಷಿರಧೃತಿಃ ಸ್ವರ್ಗಾತ್ಪತಿತೋ ಹಿ ಮಹಾಭಿಷಃ ।
ಯಯಾತಿಃ ಕ್ಷೀಣಪುಣ್ಯೋಽಪಿ ಧೃತ್ಯಾ ಲೋಕಾನವಾಪ್ತವಾನ್ ॥೨೩॥

ರಾಜರ್ಷಿಯಾದ ಮಹಾಭಿಷನು ಅಧೈರ್ಯದ ಕಾರಣದಿಂದಲೇ ಸ್ವರ್ಗ

ದಿಂದ ಚ್ಯುತನಾದನು. ಯಯಾತಿಯು ಕ್ಷೀಣಪುಣ್ಯನಾಗಿ ಸ್ವರ್ಗದಿಂದ ಬೀಳುವುದರಲ್ಲಿದ್ದರೂ ಧೈರ್ಯವನ್ನು ಆಶ್ರಯಿಸಿದ್ದರಿಂದ ಪುನಃ ಉತ್ತಮ ಲೋಕಗಳನ್ನು ಹೊಂದಿದನು.

ತಪಸ್ವಿನಾಂ ಧರ್ಮವತಾಂ ವಿದುಷಾಂ ಚೋಪಸೇವನಾತ್ ।
ಪ್ರಾಪ್ಸ್ಯಸೇ ವಿಪುಲಾಂ ಬುದ್ಧಿಂ ತಥಾ ಶ್ರೇಯೋಽಭಿಪತ್ಸ್ಯಸೇ ॥೨೪॥

ವಸುಮನಸನೇ! ವಿದ್ವಾಂಸರಾದ, ಧರ್ಮಾತ್ಮರಾದ ತಪಸ್ವಿಗಳನ್ನು ಸೇವೆಮಾಡುವುದರಿಂದ ವಿಶಾಲವಾದ ಬುದ್ಧಿಯನ್ನು ಹೊಂದುವೆ. ಹಾಗೆಯೇ ಶ್ರೇಯಸ್ಸನ್ನೂ ಪಡೆದುಕೊಳ್ಳುವೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಒಳ್ಳೆಯ ಸ್ವಭಾವದಿಂದ ಸಂಪನ್ನನಾಗಿದ್ದ ವಸುಮಂತನು ಭಾರ್ಗವಮುನಿಯು ಹೇಳಿದ ಈ ಮಾತುಗಳನ್ನು ಕೇಳಿ ಮನಸ್ಸನ್ನು ಕಾಮೋಪಭೋಗಗಳಿಂದ ಸಂಪೂರ್ಣವಾಗಿ ಹಿಂದಿರುಗಿಸಿ ಧರ್ಮದಲ್ಲಿಯೇ ಸ್ಥಿರಗೊಳಿಸಿದನು."

ಇ೦೯ನೆಯ ಅಧ್ಯಾಯವು ಮುಗಿಯಿತು.

ಇ೧೦ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜನಕನಿಗೆ ಯಾಜ್ಞವಲ್ಕ್ಯರಿಂದ ಉಪದೇಶ: ಸಾಂಖ್ಯರ ಇಪ್ಪತ್ತುನಾಲ್ಕು ತತ್ತ್ವಗಳ ಮತ್ತು ಒಂಬತ್ತು ವಿಧವಾದ ಸರ್ಗಗಳ ನಿರೂಪಣೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಧರ್ಮಾಧರ್ಮವಿಮುಕ್ತಂ ಯದ್ವಿಮುಕ್ತಂ ಸರ್ವಸಂಶಯಾತ್ ।
ಜನ್ಮಮೃತ್ಯುವಿಮುಕ್ತಂ ಚ ವಿಮುಕ್ತಂ ಪುಣ್ಯಪಾಪಯೋಃ ॥೧॥

ಯಚ್ಛಿವಂ ನಿತ್ಯಮಭಯಂ ನಿತ್ಯಮಕ್ಷರಮವ್ಯಯಮ್ ।
ಶುಚಿ ನಿತ್ಯಮನಾಯಾಸಂ ತದ್ಭವಾನ್ವಕ್ತುಮರ್ಹತಿ ॥೨॥

"ಪಿತಾಮಹ! ಯಾವುದು ಧರ್ಮಾಧರ್ಮಗಳಿಂದಲೂ, ಸಕಲವಿಧ

ವಾದ ಸಂಶಯಗಳಿಂದಲೂ, ಹುಟ್ಟು-ಸಾವುಗಳಿಂದಲೂ, ಪುಣ್ಯ-ಪಾಪ ಗಳಿಂದಲೂ ವಿಮುಕ್ತವಾಗಿರುವುದೋ–ನಿತ್ಯವೂ, ನಿರ್ಭಯವೂ, ಕಲ್ಯಾಣ ಮಯವೂ, ಅಕ್ಷರವೂ, ಅವ್ಯಯವೂ (ಅವಿಕಾರಿಯೂ), ಪವಿತ್ರವೂ, ಕ್ಲೇಶ ರಹಿತವೂ ಆಗಿರುವುದೋ–ಆ ಪರತತ್ತ್ವವನ್ನು ಉಪದೇಶಿಸು.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಈ ವಿಷಯದಲ್ಲಿ ಯಾಜ್ಞವಲ್ಕ್ಯರಿಗೂ ಮತ್ತು ಜನಕನಿಗೂ ನಡೆದ ಪುರಾತನವಾದ ಮತ್ತು ಇತಿಹಾಸರೂಪವಾದ ಸಂವಾದವನ್ನು ಹೇಳುತ್ತೇನೆ. ಮಹಾಯಶೋವಂತನಾದ, ದೇವರಾತನ ಮಗನಾದ ಜನಕರಾಜನು–ಪ್ರಶ್ನೆಗಳ ರಹಸ್ಯವನ್ನು ತಿಳಿದಿರುವವರಲ್ಲಿ ಶ್ರೇಷ್ಠರಾದ ಯಾಜ್ಞವಲ್ಕ್ಯರನ್ನು ಪ್ರಶ್ನಿಸಿದನು :

ಕತೀನ್ದ್ರಿಯಾಣಿ ವಿಪ್ರರ್ಷೇ ಕತಿ ಪ್ರಕೃತಯಃ ಸ್ಮೃತಾಃ ।
ಕಿಮವ್ಯಕ್ತಂ ಪರಂ ಬ್ರಹ್ಮ ತಸ್ಮಾಚ್ಚ ಪರತಸ್ತು ಕಿಮ್ ॥೫॥

ಪ್ರಭವಂ ಚಾಪ್ಯಯಂ ಚೈವ ಕಾಲಸಂಖ್ಯಾಂ ತಥೈವ ಚ ।
ವಕ್ತುಮರ್ಹಸಿ ವಿಪ್ರೇನ್ದ್ರ ತ್ವದನುಗ್ರಹಕಾಂಕ್ಷಿಣಃ ॥೬॥

“ವಿಪ್ರಶ್ರೇಷ್ಠರೇ! ಇಂದ್ರಿಯಗಳು ಎಷ್ಟಿವೆ? ಪ್ರಕೃತಿಯಲ್ಲಿ ಎಷ್ಟು ಭೇದಗಳಿವೆ? ಅವ್ಯಕ್ತವೆಂಬುದು ಯಾವುದು? ಅದಕ್ಕಿಂತಲೂ ಅತೀತ ವಾಗಿರುವ ಪರಬ್ರಹ್ಮಪರಮಾತ್ಮನ ಸ್ವರೂಪವೇನು? ಸೃಷ್ಟಿ-ಪ್ರಲಯಗಳೆಂದ ರೇನು? ಕಾಲದ ಗಣನೆಯು ಹೇಗೆ?– ಈ ಎಲ್ಲ ವಿಷಯಗಳನ್ನೂ ನಿಮ್ಮ ಅನುಗ್ರಹವನ್ನೇ ಅಪೇಕ್ಷಿಸುತ್ತಿರುವ ನನಗೆ ತಿಳಿಯಪಡಿಸಿರಿ.

ಅಜ್ಞಾನಾತ್ಪರಿಪೃಚ್ಛಾಮಿ ತ್ವಂ ಹಿ ಜ್ಞಾನಮಯೋ ನಿಧಿಃ ।
ತದಹಂ ಶ್ರೋತುಮಿಚ್ಛಾಮಿ ಸರ್ವಮೇತದಸಂಶಯಮ್ ॥೭॥

ನನ್ನಲ್ಲಿ ಅಜ್ಞಾನವಿರುವ ಕಾರಣದಿಂದ ಈ ಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ನೀವು ಜ್ಞಾನಸ್ವರೂಪರೇ ಆಗಿರುವಿರಿ. ಈ ಎಲ್ಲ ವಿಷಯಗಳನ್ನೂ ಸಂಶಯವಿಲ್ಲದಂತೆ ನಿಮ್ಮಿಂದ ಕೇಳಿ ತಿಳಿದುಕೊಳ್ಳಬೇಕೆಂದಿರುತ್ತೇನೆ.”

ಯಾಜ್ಞವಲ್ಕ್ಯರು ಹೇಳುತ್ತಾರೆ :

“ಜನಕರಾಜ! ನೀನು ಕೇಳುತ್ತಿರುವ ಈ ಪ್ರಶ್ನೆಗಳು ಯೋಗಿಗಳ ಪರಮಾಧ್ಯಾತ್ಮಜ್ಞಾನಕ್ಕೆ–ಅದರಲ್ಲಿಯೂ ವಿಶೇಷವಾಗಿ ಸಾಂಖ್ಯರ ಮತಕ್ಕೆ ಸಂಬಂಧಪಟ್ಟಿವೆ. ಅವನೀಪಾಲನೇ! ಏಕಾಗ್ರಚಿತ್ತನಾಗಿ ಕೇಳು.

ನಿನಗೆ ತಿಳಿಯದಿರುವ ವಿಷಯವೇ ಇಲ್ಲ. ಆದರೂ ನನ್ನಿಂದ ಕೇಳಿ ತಿಳಿದುಕೊಳ್ಳಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿರುವೆ. ಶ್ರದ್ಧೆಯಿಂದ ಯಾವನೇ ಪ್ರಶ್ನಿಸಿದರೂ ಅನುರೂಪವಾದ ಉತ್ತರವನ್ನು ಕೊಡಬೇಕೆಂಬುದೇ ಸನಾತನ ಧರ್ಮವಾಗಿದೆ.

ಅಷ್ಟೌ ಪ್ರಕೃತಯಃ ಪ್ರೋಕ್ತಾ ವಿಕಾರಾಶ್ಚಾಪಿ ಷೋಡಶ ।
ತತ್ರ ತು ಪ್ರಕೃತೀರಷ್ಟೌ ಪ್ರಾಹುರಧ್ಯಾತ್ಮಚಿನ್ತಕಾಃ ॥೧೦॥

ಅವ್ಯಕ್ತಂ ಚ ಮಹಾನ್ತಂ ಚ ತಥಾಹಙ್ಕಾರ ಏವ ಚ ।
ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಞ್ಚಮಮ್ ॥೧೧॥

ಪ್ರಕೃತಿಗಳು ಎಂಟೆಂದು ಹೇಳುತ್ತಾರೆ. ಅವುಗಳ ವಿಕಾರಗಳು ಹದಿನಾರು. ಅಧ್ಯಾತ್ಮಚಿಂತಕರಾದ ವಿದ್ವಾಂಸರು ಎಂಟು ಪ್ರಕೃತಿಗಳನ್ನೂ ಹೀಗೆ ವಿವರಿಸಿದ್ದಾರೆ. ಅವ್ಯಕ್ತ (ಮೂಲಪ್ರಕೃತಿ), ಮಹತ್ತತ್ತ್ವ, ಅಹಂಕಾರ, ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವೀ.

ಏತಾಃ ಪ್ರಕೃತಯಸ್ತ್ವಷ್ಟೌ ವಿಕಾರಾನಪಿ ಮೇ ಶೃಣು ।
ಶ್ರೋತ್ರಂ ತ್ವಕ್ಚೈವ ಚಕ್ಷುಶ್ಚ ಜಿಹ್ವಾ ಘ್ರಾಣಂ ಚ ಪಞ್ಚಮಮ್ ॥೧೨॥

ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗನ್ಧಸ್ತಥೈವ ಚ ।
ವಾಕ್ಚ ಹಸ್ತೌ ಚ ಪಾದೌ ಚ ಪಾಯುರ್ಮೇಢ್ರಂ ತಥೈವ ಚ ॥೧೩॥

ಈ ಎಂಟೂ ಪ್ರಕೃತಿಸಂಜ್ಞಕಗಳು. ಇವುಗಳ ವಿಕಾರಗಳನ್ನು ಹೇಳುವೆನು ; ಕೇಳು. ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು–ಇವು ಐದು ಜ್ಞಾನೇಂದ್ರಿಯಗಳು. ಶಬ್ದ, ಸ್ಪರ್ಶ, ರೂಪ, ರಸ, ಗಂಧ–ಇವು ಐದು ಪಂಚತನ್ಮಾತ್ರೆಗಳು ಅಥವಾ ಇಂದ್ರಿಯರೂಪಗಳು. ನಾಲಿಗೆ, ಕೈಗಳು, ಕಾಲುಗಳು, ಗುದ ಮತ್ತು ಜನನೇಂದ್ರಿಯ – ಇವು ಐದು ಕರ್ಮೇಂದ್ರಿಯಗಳು.

ಏತೇ ವಿಶೇಷಾ ರಾಜೇನ್ದ್ರ ಮಹಾಭೂತೇಷು ಪಞ್ಚಸು ।
ಬುದ್ಧೀನ್ದ್ರಿಯಾಣ್ಯಥೈತಾನಿ ಸವಿಶೇಷಾಣಿ ಮೈಥಿಲ ॥೧೪॥

ವಾಕ್ಪಾಣಿಗಳೇ ಮೊದಲಾದ ಐದು ಕರ್ಮೇಂದ್ರಿಯಗಳೂ ಶಬ್ದ-ಸ್ಪರ್ಶಗಳೇ ಮೊದಲಾದ ಇಂದ್ರಿಯಾರ್ಥಗಳೂ ವಿಶೇಷಗಳೆಂದು ಕರೆಯಲ್ಪಡುತ್ತವೆ. ಐದು ಜ್ಞಾನೇಂದ್ರಿಯಗಳನ್ನು ಸವಿಶೇಷಗಳೆಂದು ಕರೆಯುತ್ತಾರೆ. ವಿಶೇಷ-ಸವಿಶೇಷಗಳೆರಡೂ ಆಕಾಶಾದಿ ಪಂಚಮಹಾಭೂತಗಳಲ್ಲಿಯೇ ಇವೆ.

ಮನಃ ಷೋಡಶಕಂ ಪ್ರಾಹುರಧ್ಯಾತ್ಮಗತಿಚಿನ್ತಕಾಃ ।
ತ್ವಂ ಚೈವಾನ್ಯೇ ಚ ವಿದ್ವಾಂಸಸ್ತತ್ತ್ವಬುದ್ಧಿವಿಶಾರದಾಃ ॥೧೫॥

ಅಧ್ಯಾತ್ಮದ ಗತಿಯನ್ನು ಚಿಂತಿಸುವ ತತ್ತ್ವಬುದ್ಧಿವಿಶಾರದರಾದ ವಿದ್ವಾಂಸರು ಮನಸ್ಸನ್ನು ಹದಿನಾರನೆಯ ವಿಕಾರವೆನ್ನುತ್ತಾರೆ. ನಿನ್ನ ಅಭಿಪ್ರಾಯವೂ ಇದೇ ಆಗಿದೆ.

ಅವ್ಯಕ್ತಾಚ್ಚ ಮಹಾನಾತ್ಮಾ ಸಮುತ್ಪದ್ಯತಿ ಪಾರ್ಥಿವ ।
ಪ್ರಥಮಂ ಸರ್ಗಮಿತ್ಯೇತದಾಹುಃ ಪ್ರಾಧಾನಿಕಂ ಬುಧಾಃ ॥೧೬॥

ಅವ್ಯಕ್ತಮೂಲಪ್ರಕೃತಿಯಿಂದ ಸಮಷ್ಟಿರೂಪದ ಬುದ್ಧಿಯು (ಮಹತ್ತತ್ತ್ವವು) ಉತ್ಪನ್ನವಾಗುತ್ತದೆ. ಇದನ್ನೇ ವಿದ್ವಾಂಸರು ಮೊದಲನೆಯ ಮತ್ತು ಪ್ರಧಾನವಾದ ಸೃಷ್ಟಿಯೆಂದು ಹೇಳುತ್ತಾರೆ.

ಮಹತಶ್ಚಾಪ್ಯಹಙ್ಕಾರ ಉತ್ಪನ್ನೋ ಹಿ ನರಾಧಿಪ ।
ದ್ವಿತೀಯಂ ಸರ್ಗಮಿತ್ಯಾಹುರೇತದ್ಬುದ್ಧ್ಯಾತ್ಮಕಂ ಸ್ಮೃತಮ್ ॥೧೭॥

ಮಹಾರಾಜ! ಮಹತ್ತತ್ತ್ವದಿಂದ (ಸಮಷ್ಟಿರೂಪವಾದ ಬುದ್ಧಿಯಿಂದ) ಅಹಂಕಾರವು ಹುಟ್ಟಿದೆ. ಇದನ್ನು ಎರಡನೆಯ ಸೃಷ್ಟಿಯೆಂದು ಹೇಳುತ್ತಾರೆ. ಈ ಅಹಂಕಾರವನ್ನು ಬುದ್ಧ್ಯಾತ್ಮಕಸೃಷ್ಟಿಯೆಂದು ಹೇಳುತ್ತಾರೆ.

ಅಹಙ್ಕಾರಾಚ್ಚ ಸಮ್ಭೂತಂ ಮನೋ ಭೂತಗುಣಾತ್ಮಕಮ್ ।
ತೃತೀಯಃ ಸರ್ಗ ಇತ್ಯೇಷ ಆಹಙ್ಕಾರಿಕ ಉಚ್ಯತೇ ॥೧೮॥

ಪಂಚಭೂತಗಳ ಮತ್ತು ಇಂದ್ರಿಯಾದಿಗಳ ಗುಣಸ್ವರೂಪವಾದ

ಮನಸ್ಸು ಅಹಂಕಾರದಿಂದ ಹುಟ್ಟಿದೆ. ಮೂರನೆಯ ಈ ಸೃಷ್ಟಿಗೆ 'ಆಹಂಕಾರಿಕ' ಎಂದೂ ಹೇಳುತ್ತಾರೆ.

ಮನಸಸ್ತು ಸಮುದ್ಭೂತಾ ಮಹಾಭೂತಾ ನರಾಧಿಪ ।
ಚತುರ್ಥಂ ಸರ್ಗಮಿತ್ಯೇತನ್ಮಾನಸಂ ವಿದ್ಧಿ ಮೇ ಮತಮ್ ॥೧೯॥

ಮನಸ್ಸಿನಿಂದ ಸೂಕ್ಷ್ಮಪಂಚಭೂತಗಳು ಹುಟ್ಟಿವೆ. ಮಾನಸವೆಂದು ಕರೆಯಲ್ಪಡುವ ಇದನ್ನು ನಾಲ್ಕನೆಯ ಸೃಷ್ಟಿಯೆಂದು ತಿಳಿ.

ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗನ್ಧಸ್ತಥೈವ ಚ ।
ಪಞ್ಚಮಂ ಸರ್ಗಮಿತ್ಯಾಹುರ್ಭೌತಿಕಂ ಭೂತಚಿನ್ತಕಾಃ ॥೨೦॥

ಸೂಕ್ಷ್ಮಪಂಚಭೂತಗಳಿಂದ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳೆಂಬ ಐದು ವಿಷಯಗಳು ಹುಟ್ಟಿವೆ. ಇದನ್ನು ಐದನೆಯ ಸೃಷ್ಟಿಯೆನ್ನುತ್ತಾರೆ. ಭೂತಚಿಂತಕರಾದ ವಿದ್ವಾಂಸರು ಇದನ್ನು ಭೌತಿಕಸೃಷ್ಟಿಯೆನ್ನುತ್ತಾರೆ.

ಶ್ರೋತ್ರಂ ತ್ವಕ್ಚೈವ ಚಕ್ಷುಶ್ಚ ಜಿಹ್ವಾ ಘ್ರಾಣಂ ಚ ಪಞ್ಚಮಮ್ ।
ಸರ್ಗಂ ತು ಷಷ್ಠಮಿತ್ಯಾಹುರ್ಬಹುಚಿನ್ತಾತ್ಮಕಂ ಸ್ಮೃತಮ್ ॥೨೧॥

ಶಬ್ದ-ಸ್ಪರ್ಶಾದಿ ವಿಷಯಗಳಿಂದ ಕಿವಿ, ಚರ್ಮ, ಕಣ್ಣು, ನಾಲಿಗೆ ಮತ್ತು ಮೂಗುಗಳೆಂಬ ಐದು ಜ್ಞಾನೇಂದ್ರಿಯಗಳು ಹುಟ್ಟಿವೆ. ಇದನ್ನು ಬಹು ಚಿಂತಾತ್ಮಕ ಎಂಬ ಹೆಸರುಳ್ಳ ಆರನೆಯ ಸೃಷ್ಟಿಯೆಂದು ವಿದ್ವಾಂಸರು ಹೇಳುತ್ತಾರೆ.

ಅಥಃ ಶ್ರೋತ್ರೇನ್ದ್ರಿಯಗ್ರಾಮ ಉತ್ಪದ್ಯತಿ ನರಾಧಿಪ ।
ಸಪ್ತಮಂ ಸರ್ಗಮಿತ್ಯಾಹುರೇತದೈನ್ದ್ರಿಯಕಂ ಸ್ಮೃತಮ್ ॥೨೨॥

ಶ್ರೋತ್ರವೇ ಮೊದಲಾದ ಜ್ಞಾನೇಂದ್ರಿಯಗಳ ಸೃಷ್ಟಿಯಾದನಂತರ ಐದು ಕರ್ಮೇಂದ್ರಿಯಗಳ ಉತ್ಪತ್ತಿಯಾಗುತ್ತದೆ. ಇದನ್ನು ಏಳನೆಯದಾದ ಐಂದ್ರಿಯಕಸೃಷ್ಟಿಯೆಂದು ಕರೆಯುತ್ತಾರೆ.

ಊರ್ಧ್ವಂ ಸ್ರೋತಸ್ತಥಾ ತಿರ್ಯಗುತ್ಪದ್ಯತಿ ನರಾಧಿಪ ।
ಅಷ್ಟಮಂ ಸರ್ಗಮಿತ್ಯಾಹುರೇತದಾರ್ಜವಕಂ ಸ್ಮೃತಮ್ ॥೨೩॥

ಅನಂತರ ಮೇಲಕ್ಕೆ ಪ್ರವಹಿಸುವ ಪ್ರಾಣವೂ–ಅಡ್ಡಡ್ಡವಾಗಿ ಸಂಚರಿಸುವ ಸಮಾನ, ವ್ಯಾನ ಮತ್ತು ಉದಾನವಾಯುಗಳೂ ಹುಟ್ಟುತ್ತವೆ. ಇದನ್ನು 'ಆರ್ಜವಕ'–ಎಂಬ ಹೆಸರಿನ ಎಂಟನೆಯ ಸೃಷ್ಟಿಯೆನ್ನುತ್ತಾರೆ.

ತಿರ್ಯಕ್ಸ್ರೋತಸ್ತ್ವಧಃಸ್ರೋತ ಉತ್ಪದ್ಯತಿ ನರಾಧಿಪ ।
ನವಮಂ ಸರ್ಗಮಿತ್ಯಾಹುರೇತದಾರ್ಜವಕಂ ಬುಧಾಃ ॥೨೪॥

ಅಡ್ಡಡ್ಡವಾಗಿ ಸಂಚರಿಸುವ ಸಮಾನ-ವ್ಯಾನೋದಾನವಾಯುಗಳು ಅಧೋಗತಿಗೆ ತಿರುಗಿದಾಗ ಅಪಾನವು ಹುಟ್ಟುತ್ತದೆ. ಆರ್ಜವಕವೆಂದೇ ವಿದ್ವಾಂಸರಿಂದ ಕರೆಯಲ್ಪಡುವ ಇದು ಒಂಬತ್ತನೆಯ ಸೃಷ್ಟಿಯಾಗಿದೆ.

ಏತಾನಿ ನವ ಸರ್ಗಾಣಿ ತತ್ತ್ವಾನಿ ಚ ನರಾಧಿಪ ।
ಚತುರ್ವಿಂಶತಿರುಕ್ತಾನಿ ಯಥಾಶ್ರುತಿನಿದರ್ಶನಾತ್ ॥೨೫॥

ಶ್ರುತಿಗೆ ಅನುಸಾರವಾಗಿ ಹೇಳಲ್ಪಟ್ಟಿರುವ ಒಂಬತ್ತು ಸೃಷ್ಟಿಗಳೂ ಇಪ್ಪತ್ತುನಾಲ್ಕು ತತ್ತ್ವಗಳೂ ಇವೇ ಆಗಿವೆ.

ಅತ ಊರ್ಧ್ವಂ ಮಹಾರಾಜ ಗುಣಸ್ಯೈತಸ್ಯ ತತ್ತ್ವತಃ ।
ಮಹಾತ್ಮಭಿರನುಪ್ರೋಕ್ತಾಂ ಕಾಲಸಂಖ್ಯಾಂ ನಿಬೋಧ ಮೇ ॥೨೬॥

ಮಹಾರಾಜ! ಇನ್ನು ಮುಂದೆ ಮಹಾತ್ಮರಾದ ಪುರುಷರು ಹೇಳಿರುವ ಗುಣಯುಕ್ತವಾದ ಈ ಸೃಷ್ಟಿಯ ಕಾಲಪರಿಮಾಣವನ್ನು ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು."

ಾ೩೧೦ನೆಯ ಅಧ್ಯಾಯವು ಮುಗಿಯಿತು.

೩೧೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಅವ್ಯಕ್ತ, ಮಹತ್ತತ್ತ್ವ, ಅಹಂಕಾರ, ಮನಸ್ಸು ಮತ್ತು ವಿಷಯಗಳ ಕಾಲಪರಿಮಾಣ : ಸೃಷ್ಟಿಯ ವರ್ಣನೆ : ಇಂದ್ರಿಯಗಳಲ್ಲಿ ಮನಸ್ಸಿನ ಪ್ರಾಧಾನ್ಯ

ಯಾಜ್ಞವಲ್ಕ್ಯರು ಹೇಳುತ್ತಾರೆ :

ಅವ್ಯಕ್ತಸ್ಯ ನರಶ್ರೇಷ್ಠ ಕಾಲಸಂಖ್ಯಾಂ ನಿಬೋಧ ಮೇ ।
ಪಞ್ಚಕಲ್ಪಸಹಸ್ರಾಣಿ ದ್ವಿಗುಣಾನ್ಯಹರುಚ್ಯತೇ ॥೧॥

"ನರಶ್ರೇಷ್ಠನೇ! ಈಗ ನಾನು ಹೇಳಲಿರುವ ಅವ್ಯಕ್ತದ ಕಾಲ ಪರಿಮಿತಿಯನ್ನು ಕೇಳು. ಹತ್ತುಸಾವಿರ ಕಲ್ಪಗಳು* ಅವ್ಯಕ್ತಕ್ಕೆ ಒಂದು ಹಗಲಾಗುತ್ತದೆ.

ರಾತ್ರಿರೇತಾವತೀ ಚಾಸ್ಯ ಪ್ರತಿಬುದ್ಧೋ ನರಾಧಿಪ ।
ಸೃಜತ್ಯೋಷಧಿಮೇವಾಗ್ರೇ ಜೀವನಂ ಸರ್ವದೇಹಿನಾಮ್ ॥೨॥

ಅವ್ಯಕ್ತದ ರಾತ್ರಿಯೂ ಇಷ್ಟೇ ಪ್ರಮಾಣದ್ದಾಗಿದೆ. (ಹತ್ತುಸಾವಿರ ಕಲ್ಪಗಳುಳ್ಳದ್ದಾಗಿದೆ. ಇಪ್ಪತ್ತು ಸಾವಿರ ಕಲ್ಪಗಳು ಅವ್ಯಕ್ತದ ಒಂದು ದಿವಸವಾಗುತ್ತದೆ.) ಅವ್ಯಕ್ತವು ಸಕಲಪ್ರಾಣಿಗಳ ಜೀವನನಿರ್ವಹಣೆಗಾಗಿ ಮೊದಲು ನಾನಾಪ್ರಕಾರವಾದ ಓಷಧಿಗಳನ್ನು (ಅನ್ನವನ್ನು) ಸೃಷ್ಟಿಸಿತು.

ತತೋ ಬ್ರಹ್ಮಾಣಮಸೃಜದ್ಧಿರಣ್ಯಾಣ್ಡಸಮುದ್ಭವಮ್ ।
ಸಾ ಮೂರ್ತಿಃ ಸರ್ವಭೂತಾನಾಮಿತ್ಯೇವಮನುಶುಶ್ರುಮ ॥೩॥

ಅವ್ಯಕ್ತವು ಓಷಧಿಗಳನ್ನು ಸೃಷ್ಟಿಸಿದನಂತರ ಬ್ರಹ್ಮನನ್ನು ಸೃಷ್ಟಿಸಿತು. ಬ್ರಹ್ಮನು ಸುವರ್ಣಮಯವಾದ ಮೊಟ್ಟೆಯಿಂದ ಹೊರಬಂದನು. ಆ ಬ್ರಹ್ಮನೇ (ವಾಸನಾಮಯವಾದ ಆ ಅಂಡವೇ) ಸರ್ವಪ್ರಾಣಿಗಳಿಗೂ ಜನ್ಮಸ್ಥಾನವೆಂದು ನಾವು ಕೇಳಿದ್ದೇವೆ.

ಸಂವತ್ಸರಮುಷಿತ್ವಾಣ್ಡೇ ನಿಷ್ಕ್ರಮ್ಯ ಚ ಮಹಾಮುನಿಃ ।
ಸಂದಧೇ ಸ ಮಹೀಂ ಕೃತ್ಸ್ನಾಂ ದಿವಮೂರ್ಧ್ವಂ ಪ್ರಜಾಪತಿಃ ॥೪॥

ಮಹಾಮುನಿಯಾದ ಪ್ರಜಾಪತಿಬ್ರಹ್ಮನು ಸುವರ್ಣಮಯವಾದ ಆ ಮೊಟ್ಟೆಯಲ್ಲಿ ಒಂದು ವರ್ಷಪರ್ಯಂತವಾಗಿ ವಾಸಮಾಡುತ್ತಿದ್ದು ಅನಂತರ ಹೊರಕ್ಕೆ ಬಂದು ಅಖಿಲವಾದ ಭೂಮಂಡಲವನ್ನೂ, ಆಕಾಶವನ್ನೂ, ಸ್ವರ್ಗವನ್ನೂ ಸೃಷ್ಟಿಸಿದನು.

ದ್ಯಾವಾಪೃಥಿವ್ಯೋರಿತ್ಯೇಷ ರಾಜನ್ವೇದೇಷು ಪಠ್ಯತೇ ।
ತಯೋಃ ಶಕಲಯೋರ್ಮಧ್ಯಮಾಕಾಶಮಕರೋತ್ಪ್ರಭುಃ ॥೫॥

ಭೂಮಿ ಮತ್ತು ಸ್ವರ್ಗಗಳು 'ದ್ಯಾವಾಪೃಥಿವ್ಯೌ' ಎಂದೇ ವೇದಗಳಲ್ಲಿ ಹೇಳಲ್ಪಟ್ಟಿವೆ. (ಇವೆರಡೂ ಮೊದಲು ಒಂದೇ ಆಗಿದ್ದುವು. ಅನಂತರ

* 864 ಕೋಟಿ ಸೌರವರ್ಷಕ್ಕೆ ಒಂದು ಕಲ್ಪವೆಂದು ಹೆಸರು.

ಇವೆರಡನ್ನೂ ವಿಭಾಗಿಸಿ) ಪ್ರಭುವಾದ ಬ್ರಹ್ಮನು ಎರಡು ತುಂಡುಗಳ ಮಧ್ಯದಲ್ಲಿ ಆಕಾಶವನ್ನು ಸೃಷ್ಟಿಸಿದನು.

ಏತಸ್ಯಾಪಿ ಚ ಸಂಖ್ಯಾನಾಂ ವೇದವೇದಾಙ್ಗಪಾರಗೈಃ ।
ದಶಕಲ್ಪ ಸಹಸ್ರಾಣಿ ಪಾದೋನಾನ್ಯಹರುಚ್ಯತೇ ॥೬॥

ವೇದ-ವೇದಾಂಗಪಾರಂಗತರಾದ ವಿದ್ವಾಂಸರು ಬ್ರಹ್ಮನ (ಎರಡನೆಯ ಸೃಷ್ಟಿಯಾದ ಮಹತ್ತತ್ತ್ವದ) ಕಾಲಪರಿಮಿತಿಯು ಎಷ್ಟೆಂಬುದನ್ನು ವಿಚಾರ ಮಾಡಿ ಹೇಳಿದ್ದಾರೆ. ಹತ್ತುಸಾವಿರ ಕಲ್ಪಗಳಿಗೆ ಒಂದು ಪಾದ ಊನ ಎಂದರೆ ಏಳು ಸಾವಿರದ ಐದು ನೂರು ಕಲ್ಪಗಳು ಬ್ರಹ್ಮನಿಗೆ ಒಂದು ಹಗಲಾಗುತ್ತದೆ.

ರಾತ್ರಿಮೇತಾವತೀಂ ಚಾಸ್ಯ ಪ್ರಾಹುರಧ್ಯಾತ್ಮಚಿನ್ತಕಾಃ ।
ಸೃಜತ್ಯಹಙ್ಕಾರಮೃಷಿರ್ಭೂತಂ ದಿವ್ಯಾತ್ಮಕಂ ತಥಾ ॥೭॥

ಅಧ್ಯಾತ್ಮತತ್ತ್ವಚಿಂತಕರು ಬ್ರಹ್ಮನ ರಾತ್ರಿಯೂ ಇಷ್ಟೇ ಸಂಖ್ಯೆಯುಳ್ಳದ್ದೆಂದು (ಏಳು ಸಾವಿರದ ಐದು ನೂರು ಕಲ್ಪಗಳುಳ್ಳದ್ದೆಂದು) ಹೇಳುತ್ತಾರೆ. ಬ್ರಹ್ಮನು ದ್ಯಾವಾಪೃಥಿವಿಗಳನ್ನೂ – ಅವುಗಳ ಮಧ್ಯದಲ್ಲಿ ಆಕಾಶವನ್ನೂ ಸೃಷ್ಟಿಸಿದನಂತರ ಅಹಂಕಾರವೆಂಬ ಹೆಸರಿನ ದಿವ್ಯವಾದ ಭೂತವನ್ನು ಸೃಷ್ಟಿಸಿದನು.

ಚತುರಶ್ಚಾಪರಾನ್ಪುತ್ರಾನ್ದೇಹಾತ್ಪೂರ್ವಂ ಮಹಾನೃಷಿಃ ।
ತೇ ವೈ ಪಿತೃಣಾಂ ಪಿತರಃ ಶ್ರೂಯನ್ತೇ ರಾಜಸತ್ತಮ ॥೮॥

ರಾಜಸತ್ತಮನೇ! ಮಹರ್ಷಿಯಾದ ಬ್ರಹ್ಮನು ಭೌತಿಕವಾದ ದೇಹದ ಉತ್ಪತ್ತಿಗೆ ಮೊದಲೇ ಬುದ್ಧಿ, ಅಹಂಕಾರ, ಮನಸ್ಸು ಮತ್ತು ಚಿತ್ತಗಳೆಂಬ ನಾಲ್ವರು ಮಕ್ಕಳನ್ನು ಪಡೆದುಕೊಂಡನು. ಆ ನಾಲ್ವರೂ ಪಿತೃಗಳಿಗೂ (ಪಂಚಮಹಾಭೂತಗಳಿಗೂ) ಪಿತೃಗಳೆಂದು ಹೇಳಲ್ಪಟ್ಟಿದ್ದಾರೆ.

ದೇವಾಃ ಪಿತೃಣಾಂ ಚ ಸುತಾ ದೇವೈರ್ಲೋಕಾಃ ಸಮಾವೃತಾಃ ।
ಚರಾಚರಾ ನರಶ್ರೇಷ್ಠ ಇತ್ಯೇವಮನುಶುಶ್ರುಮ ॥೯॥

ನರಶ್ರೇಷ್ಠನೇ! ದೇವತೆಗಳು (ಶ್ರೋತ್ರವೇ ಮೊದಲಾದ ಇಂದ್ರಿಯ

ಗಳು) ಪಿತೃಗಳಿಗೆ (ಪಂಚಮಹಾಭೂತಗಳಿಗೆ) ಮಕ್ಕಳೆಂದು ಕೇಳಿದ್ದೇವೆ. ಅರ್ಥಾತ್ ಎಲ್ಲ ಇಂದ್ರಿಯಗಳೂ ಪಂಚಮಹಾಭೂತಗಳಿಂದಲೇ ಹುಟ್ಟಿವೆ. ಆ ದೇವತೆಗಳಿಂದಲೇ (ಇಂದ್ರಿಯಗಳಿಂದಲೇ) ಚರಾಚರಾತ್ಮಕವಾದ ಸರ್ವ ಲೋಕಗಳೂ ಆವೃತವಾಗಿವೆ. (ಆ ಇಂದ್ರಿಯಗಳಲ್ಲಿಯೇ ಆಶ್ರಯವನ್ನು ಪಡೆದಿವೆ.)

ಪರಮೇಷ್ಠೀ ತ್ವಹಙ್ಕಾರಃ ಸೃಜನ್ಭೂತಾನಿ ಪಞ್ಚಧಾ ।
ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಞ್ಚಮಮ್ ॥೧೦॥

ಉತ್ತಮಸ್ಥಾನದಲ್ಲಿ ಪ್ರತಿಷ್ಠಿತವಾಗಿರುವ ಅಹಂಕಾರವು – ಪೃಥಿವೀ, ವಾಯು, ಆಕಾಶ, ಜಲ, ತೇಜಸ್ಸುಗಳೆಂಬ ಪಂಚಭೂತಗಳನ್ನು ಸೃಷ್ಟಿಸಿದೆ.

ಏತಸ್ಯಾಪಿ ನಿಶಾಮಾಹುಸ್ತೃತೀಯಮಿಹ ಕುರ್ವತಃ ।
ಪಞ್ಚ ಕಲ್ಪಸಹಸ್ರಾಣಿ ತಾವದೇವಾಹರುಚ್ಯತೇ ॥೧೧॥

ಮೂರನೆಯ ಸೃಷ್ಟಿಯಾದ ಅಹಂಕಾರದ ಕಾಲಪರಿಮಾಣವನ್ನು ವಿದ್ವಾಂಸರು ಹೇಳಿದ್ದಾರೆ. ಐದು ಸಾವಿರ ಕಲ್ಪಗಳು ಅಹಂಕಾರದ ಒಂದು ರಾತ್ರಿಯಾಗುತ್ತದೆ. ಅಷ್ಟೇ ಪರಿಮಾಣದ (ಐದು ಸಾವಿರ ಕಲ್ಪಪರ್ಯಂತವಾದ) ಹಗಲೂ ಸೇರಿ ಅಹಂಕಾರದ ಒಂದು ದಿನವಾಗುತ್ತದೆ.

ಶಬ್ದಃಸ್ಪರ್ಶಶ್ಚ ರೂಪಂ ಚ ರಸೋ ಗನ್ಧಸ್ತಥೈವ ಚ ।
ಏತೇ ವಿಶೇಷಾ ರಾಜೇನ್ದ್ರ ಮಹಾಭೂತೇಷು ಪಞ್ಚಸು ॥೧೨॥

ಆಕಾಶ, ವಾಯು, ಅಗ್ನಿ, ಜಲ ಮತ್ತು ಭೂಮಿಗಳೆಂಬ ಪಂಚಭೂತಗಳಲ್ಲಿ ಅನುಕ್ರಮವಾಗಿ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳೆಂಬ ವಿಶೇಷ ಗುಣಗಳಿವೆ.

ಯೈರಾವಿಷ್ಟಾನಿ ಭೂತಾನಿ ಅಹನ್ಯಹನಿ ಪಾರ್ಥಿವ ।
ಅನ್ಯೋನ್ಯಂ ಸ್ಪೃಹಯನ್ತ್ಯೇತೇ ಅನ್ಯೋನ್ಯಸ್ಯ ಹಿತೇ ರತಾಃ ॥೧೩॥

ಅನ್ಯೋನ್ಯಮತಿವರ್ತನ್ತೇ ಅನ್ಯೋನ್ಯಸ್ಪರ್ಧಿನಸ್ತಥಾ ।
ತೇ ವಧ್ಯಮಾನಾ ಹ್ಯನ್ಯೋನ್ಯಂ ಗುಣೈರ್ಹಾರಿಭಿರವ್ಯಯೈಃ ॥೧೪॥

ಸಮಸ್ತಪ್ರಾಣಿಗಳೂ (ಮನುಷ್ಯರು) ಮನೋಹರವಾದ ಮತ್ತು ಸದಾಕಾಲದಲ್ಲಿಯೂ ಇರುವ ಈ ಶಬ್ದಾದಿ ವಿಷಯಗಳಿಂದ ಸಮಾವಿಷ್ಟರಾಗಿ ಒಬ್ಬರು ಮತ್ತೊಬ್ಬರ ಹಿತದಲ್ಲಿ ಆಸಕ್ತರಾಗಿರುತ್ತಾರೆ. ಒಬ್ಬರನ್ನೊಬ್ಬರು ಪ್ರೀತಿಸುತ್ತಾರೆ. ಒಬ್ಬರು ಮತ್ತೊಬ್ಬರೊಡನೆ ಸ್ಪರ್ಧಿಸುತ್ತಾರೆ. ಒಬ್ಬರು ಮತ್ತೊಬ್ಬರನ್ನು ಅತಿಕ್ರಮಿಸಿ ಹೋಗುತ್ತಾರೆ. ಪರಸ್ಪರವಾಗಿ ಬಡಿದಾಡುತ್ತಾರೆ. ಒಬ್ಬರು ಮತ್ತೊಬ್ಬರನ್ನು ಕೊಂದುಹಾಕುತ್ತಾರೆ. (ಇವೆಲ್ಲಕ್ಕೂ ಈ ಇಂದ್ರಿಯವಿಷಯಗಳೇ ಕಾರಣಗಳಾಗಿವೆ.)

ಇಹೈವ ಪರಿವರ್ತನ್ತೇ ತಿರ್ಯಗ್ಯೋನಿಪ್ರವೇಶಿನಃ ।
ತ್ರೀಣಿ ಕಲ್ಪಸಹಸ್ರಾಣಿ ಏತೇಷಾಮಹರುಚ್ಯತೇ ।
ರಾತ್ರಿರೇತಾವತೀ ಚೈವ ಮನಸಶ್ಚ ನರಾಧಿಪ ॥೧೫॥

ಹೀಗೆ ವಿಷಯಾಸಕ್ತವಾದ ಪ್ರಾಣಿಗಳು ಪಶು-ಪಕ್ಷಿಗಳೇ ಮೊದಲಾದ ತಿರ್ಯಗ್ಯೋನಿಗಳಲ್ಲಿ ಪ್ರವೇಶಿಸಿ ಪ್ರಪಂಚದಲ್ಲಿ ಸುತ್ತಾಡುತ್ತಿರುತ್ತವೆ. ಶಬ್ದ-ಸ್ಪರ್ಶಾದಿಗಳ ಕಾಲಮಾನವನ್ನು ಹೀಗೆ ನಿರ್ಣಯಿಸಲಾಗಿದೆ. ಮೂರು ಸಾವಿರ ಕಲ್ಪಗಳು ಈ ವಿಷಯಗಳಿಗೆ ಒಂದು ಹಗಲಾಗುತ್ತದೆ. ಅಷ್ಟೇ ಪರಿಮಾಣದ ಕಲ್ಪಗಳು ಇವುಗಳಿಗೆ ಒಂದು ರಾತ್ರಿಯಾಗುತ್ತದೆ. ವಿಷಯಗಳಿಗೆ ಆರು ಸಾವಿರ ಕಲ್ಪಗಳು ಒಂದು ದಿನವಾಗುತ್ತದೆ. ಮನಸ್ಸಿಗೂ ಕೂಡ ಇದೇ ಕಾಲಮಾನವನ್ನೇ ಹೇಳಿದ್ದಾರೆ.

ಮನಶ್ಚರತಿ ರಾಜೇನ್ದ್ರ ಚಾರಿತಂ ಸರ್ವಮಿನ್ದ್ರಿಯೈಃ ।
ನ ಚೇನ್ದ್ರಿಯಾಣಿ ಪಶ್ಯನ್ತಿ ಮನ ಏವಾನುಪಶ್ಯತಿ ॥೧೬॥

ಚಕ್ಷುಃ ಪಶ್ಯತಿ ರೂಪಾಣಿ ಮನಸಾ ನ ತು ಚಕ್ಷುಷಾ ॥೧೭॥

ಇಂದ್ರಿಯಗಳ ಮೂಲಕ ಸಂಚಾಲಿತವಾದ ಮನಸ್ಸು ಎಲ್ಲ ವಿಷಯಗಳ ಬಳಿಗೂ ಹೋಗುತ್ತದೆ. ಯಾವ ವಿಷಯವನ್ನೇ ಆದರೂ ಇಂದ್ರಿಯಗಳು ನೋಡುವುದಿಲ್ಲ. ಮನಸ್ಸೇ ನೋಡುತ್ತದೆ. ಕಣ್ಣು ರೂಪವನ್ನೇನೋ ನೋಡುತ್ತದೆ. ಆದರೆ ಕಣ್ಣು ಮನಸ್ಸಿನ ಮೂಲಕವಾಗಿ ರೂಪಗಳನ್ನು

ನೋಡುವುದೇ ಹೊರತು ಮನಸ್ಸಿನಿಂದ ರಹಿತವಾಗಿ ರೂಪಗಳನ್ನು ನೋಡಲಾರದು. (ನೋಡುವುದಿಲ್ಲ.)

ಮನಸಿ ವ್ಯಾಕುಲೇ ಚಕ್ಷುಃ ಪಶ್ಯನ್ನಪಿ ನ ಪಶ್ಯತಿ ।
ತಥೇನ್ದ್ರಿಯಾಣಿ ಸರ್ವಾಣಿ ಪಶ್ಯನ್ತೀತ್ಯಭಿಚಕ್ಷತೇ ॥೧೮॥

ಮನಸ್ಸು ವ್ಯಾಕುಲಗೊಂಡಿರುವಾಗ ಕಣ್ಣು ರೂಪಗಳನ್ನು ನೋಡುತ್ತಿರುವಂತೆ ಕಾಣುತ್ತಿದ್ದರೂ ವಸ್ತುತಃ ನೋಡುತ್ತಿರುವುದಿಲ್ಲ. ಜನರು ಭ್ರಾಂತಿಯ ಕಾರಣದಿಂದಾಗಿ– 'ಕಣ್ಣು ನೋಡುತ್ತದೆ. ಕಿವಿಯು ಕೇಳುತ್ತದೆ. ನಾಲಿಗೆಯು ಸವಿನೋಡುತ್ತದೆ. ಮೂಗು ವಾಸನೆಯನ್ನು ಗ್ರಹಿಸುತ್ತದೆ. ಚರ್ಮವು ಸ್ಪರ್ಶಿಸುತ್ತದೆ'–ಎಂದು ಹೇಳುತ್ತಾರೆ. (ಆದರೆ ಎಲ್ಲ ವಿಷಯಗಳನ್ನೂ ಇಂದ್ರಿಯಗಳ ಮೂಲಕವಾಗಿ ಮನಸ್ಸು ಗ್ರಹಿಸುವುದೇ ಹೊರತು ಇಂದ್ರಿಯಗಳು ಮನಸ್ಸಿನ ಸಹಕಾರವಿಲ್ಲದೇ ಯಾವ ವಿಷಯವನ್ನೂ ಗ್ರಹಿಸಲಾರವು.)

ನ ಚೇನ್ದ್ರಿಯಾಣಿ ಪಶ್ಯನ್ತಿ ಮನ ಏವಾತ್ರ ಪಶ್ಯತಿ ।
ಮನಸ್ಯುಪರತೇ ರಾಜನ್ನಿನ್ದ್ರಿಯೋಪರಮೋ ಭವೇತ್ ॥೧೯॥

ಇಂದ್ರಿಯಗಳು ಯಾವ ವಿಷಯಗಳನ್ನೂ ಗ್ರಹಿಸುವುದಿಲ್ಲ. ಮನಸ್ಸೇ ಇಂದ್ರಿಯಗಳ ಮೂಲಕವಾಗಿ ಎಲ್ಲ ವಿಷಯಗಳನ್ನೂ ಗ್ರಹಿಸುತ್ತದೆ. ಮನಸ್ಸು ವಿಷಯಗಳಿಂದ ಉಪರತವಾಗಿಬಿಟ್ಟರೆ ಇಂದ್ರಿಯಗಳೂ ವಿಷಯಗಳಿಂದ ನಿವೃತ್ತವಾಗುತ್ತವೆ. (ಮನಸ್ಸಿಗೆ ಬೇಡವಾದುದು ಇಂದ್ರಿಯಗಳಿಗೂ ಬೇಕಾಗುವುದಿಲ್ಲ.)

ನ ಚೇನ್ದ್ರಿಯವ್ಯುಪರಮೇ ಮನಸ್ಯುಪರಮೋ ಭವೇತ್ ।
ಏವಂ ಮನಃಪ್ರಧಾನಾನಿ ಇನ್ದ್ರಿಯಾಣಿ ಪ್ರಭಾವಯೇತ್ ॥೨೦॥

ಆದರೆ ಇಂದ್ರಿಯಗಳು ವಿರಕ್ತವಾದರೂ ಮನಸ್ಸು ವಿರಕ್ತವಾಗುವುದಿಲ್ಲ. ಇಂದ್ರಿಯಗಳಿಗೆ ಸಿಕ್ಕದಿರುವ ವಿಷಯಗಳನ್ನು ಮನಸ್ಸು ಉಪಭೋಗಿಸುತ್ತಲೇ ಇರುತ್ತದೆ. ಆದುದರಿಂದ ಇಂದ್ರಿಯಗಳೆಲ್ಲವೂ ಮನಸ್ಸೇ ಪ್ರಧಾನವಾಗಿ ಉಳ್ಳವುಗಳೆಂದು ಭಾವಿಸಿಕೊಳ್ಳಬೇಕು.

ಇನ್ದ್ರಿಯಾಣಾಂ ತು ಸರ್ವೇಷಾಮೀಶ್ವರಂ ಮನ ಉಚ್ಯತೇ ।
ಏತದ್ವಿಶನ್ತಿ ಭೂತಾನಿ ಸರ್ವಾಣೀಹ ಮಹಾಯಶಃ ॥೨೧॥

ಮಹಾಯಶೋವಂತನೇ! ಮನಸ್ಸನ್ನು ಎಲ್ಲ ಇಂದ್ರಿಯಗಳಿಗೂ ಒಡೆಯನೆಂದು ಹೇಳುತ್ತಾರೆ. ಜಗತ್ತಿನಲ್ಲಿರುವ ಸರ್ವಪ್ರಾಣಿಗಳೂ ಮನಸ್ಸನ್ನೇ ಆಶ್ರಯಿಸಿರುತ್ತವೆ."

ಇ೧೧ನೆಯ ಅಧ್ಯಾಯವು ಮುಗಿಯಿತು.

೩೧೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಸಂಹಾರಕ್ರಮದ ವರ್ಣನೆ

ಯಾಜ್ಞವಲ್ಕ್ಯರು ಹೇಳುತ್ತಾರೆ :

ತತ್ತ್ವಾನಾಂ ಸರ್ವಸಂಖ್ಯಾ ಚ ಕಾಲಸಂಖ್ಯಾ ತಥೈವ ಚ ।
ಮಯಾ ಪ್ರೋಕ್ತಾನುಪೂರ್ವ್ಯೇಣ ಸಂಹಾರಮಪಿ ಮೇ ಶೃಣು ॥೧॥

"ಜನಕರಾಜ! ನಾನು ಇದುವರೆಗೆ ತತ್ತ್ವಗಳ ಹೆಸರುಗಳನ್ನೂ ಮತ್ತು ಸಂಖ್ಯೆಗಳನ್ನೂ, ಅವ್ಯಕ್ತಾದಿಗಳ ಕಾಲದ ಗಣನೆಯನ್ನೂ ಹೇಳಿದೆನು. ಇನ್ನು ಮುಂದೆ ಸೃಷ್ಟಿಯ ಸಂಹಾರದ ವಿಷಯವನ್ನು ಹೇಳುವೆನು ; ಕೇಳು.

ಯಥಾ ಸಂಹರತೇ ಜನ್ತೂನ್ಸಸರ್ಜ ಚ ಪುನಃ ಪುನಃ ।
ಅನಾದಿನಿಧನೋ ಬ್ರಹ್ಮಾ ನಿತ್ಯಶ್ಚಾಕ್ಷರ ಏವ ಚ ॥೨॥

ಆದ್ಯಂತರಹಿತನಾದ, ಅಕ್ಷರಸ್ವರೂಪನಾದ ಬ್ರಹ್ಮನು ಯಾವ ರೀತಿಯಲ್ಲಿ ಪುನಃ ಪುನಃ ಪ್ರಾಣಿಗಳನ್ನು ಸೃಷ್ಟಿಸುತ್ತಿರುತ್ತಾನೆ ಮತ್ತು ಸಂಹರಿಸುತ್ತಿರುತ್ತಾನೆ–ಎಂಬುದನ್ನು ಏಕಾಗ್ರಚಿತ್ತನಾಗಿ ಕೇಳು.

ಅಹಃಕ್ಷಯಮಥೋ ಬುದ್ಧ್ವಾ ನಿಶಿ ಸ್ವಪ್ನಮನಾಸ್ತಥಾ ।
ಚೋದಯಾಮಾಸ ಭಗವಾನವ್ಯಕ್ತೋಽಹಂಕೃತಂ ನರಮ್ ॥೩॥

ಸೃಷ್ಟಿಗೆ ಮೂಲಕಾರಣನಾದ ಬ್ರಹ್ಮನು (ಅವ್ಯಕ್ತನು) ಹಗಲು ಕಳೆಯಿತೆಂಬುದನ್ನು ತಿಳಿದು ರಾತ್ರಿಯಲ್ಲಿ ಮಲಗಬೇಕೆಂಬ ಮನಸ್ಸುಳ್ಳವ

ನಾಗುತ್ತಾನೆ. ಆಗ ಅಹಂಕಾರಾಭಿಮಾನಿದೇವತೆಯಾದ ರುದ್ರನನ್ನು ಜಗತ್ತಿನ ಸಂಹಾರಕ್ಕಾಗಿ ಪ್ರಚೋದಿಸುತ್ತಾನೆ.

ತತಃ ಶತಸಹಸ್ರಾಂಶುರವ್ಯಕ್ತೇನಾಭಿಚೋದಿತಃ ।
ಕೃತ್ವಾ ದ್ವಾದಶಧಾತ್ಮಾನಮಾದಿತ್ಯೋಽಜ್ವಲದಗ್ನಿವತ್ ॥೪॥

ಬಳಿಕ ಅವ್ಯಕ್ತನಿಂದ ಪ್ರೇರಿತನಾದ ರುದ್ರನು ಪ್ರಚಂಡನಾದ ಶತ ಸಹಸ್ರಾಂಶುವಾದ ಸೂರ್ಯನಾಗಿ ತನ್ನನ್ನು ಹನ್ನೆರಡು ರೂಪಗಳನ್ನಾಗಿ ವಿಭಾಗಿಸಿಕೊಂಡು ಅಗ್ನಿಯೋಪಾದಿಯಲ್ಲಿ ಪ್ರಜ್ವಲಿಸುತ್ತಾನೆ.

ಚತುರ್ವಿಧಂ ಮಹೀಪಾಲ ನಿರ್ದಹತ್ಯಾಶು ತೇಜಸಾ ।
ಜರಾಯುಜಾಣ್ಡಜಸ್ವೇದಜೋದ್ಭಿಜ್ಜಂ ಚ ನರಾಧಿಪ ॥೫॥

ದ್ವಾದಶಾತ್ಮನಾದ ಸೂರ್ಯನು ಬಹಳ ಬೇಗ ತನ್ನ ಪ್ರಖರವಾದ ತೇಜಸ್ಸಿನಿಂದ ಜರಾಯುಜ, ಅಂಡಜ, ಸ್ವೇದಜ ಮತ್ತು ಉದ್ಭಿಜ್ಜಗಳೆಂಬ ನಾಲ್ಕು ಪ್ರಕಾರವಾದ ಪ್ರಾಣಿಗಳನ್ನೂ ಭಸ್ಮಮಾಡುತ್ತಾನೆ.

ಏತದುನ್ಮೇಷಮಾತ್ರೇಣ ವಿನಷ್ಟಂ ಸ್ಥಾಣು ಜಙ್ಗಮಮ್ ।
ಕೂರ್ಮಪೃಷ್ಠಸಮಾ ಭೂಮಿರ್ಭವತ್ಯಥ ಸಮನ್ತತಃ ॥೬॥

ಕಣ್ಣುಮುಚ್ಚಿ-ತೆಗೆಯುವುದರೊಳಗಾಗಿ ಸ್ಥಾವರ-ಜಂಗಮಪ್ರಾಣಿಗಳು ಸಂಪೂರ್ಣವಾಗಿ ನಾಶಹೊಂದುತ್ತವೆ. ಭೂಮಿಯು ಸುತ್ತಲೂ ಆಮೆಯ ಬೆನ್ನಿನಂತೆ ಕಾಣುತ್ತದೆ.

ಜಗದ್ದಗ್ಧ್ವಾಮಿತಬಲಃ ಕೇವಲಾಂ ಜಗತೀಂ ತತಃ ।
ಅಮ್ಭಸಾ ಬಲಿನಾ ಕ್ಷಿಪ್ರಮಾಪೂರಯತಿ ಸರ್ವಶಃ ॥೭॥

ಅಮಿತಬಲನಾದ ರುದ್ರನು ಚರಾಚರಗಳಿಂದ ಕೂಡಿರುವ ಜಗತ್ತೆಲ್ಲ ವನ್ನೂ ಹೀಗೆ ಭಸ್ಮಮಾಡಿ ಏಕಾಕಿಯಾಗಿ ಉಳಿದ ಭೂಮಿಯನ್ನು ಪ್ರಬಲ ವಾದ ನೀರಿನ ಪ್ರವಾಹದಿಂದ ಬಹಳ ಬೇಗ ತುಂಬುತ್ತಾನೆ. (ಪೃಥ್ವೀತತ್ತ್ವವು ಜಲತತ್ತ್ವದಲ್ಲಿ ಲೀನವಾಗುತ್ತದೆ.)

ತತಃ ಕಾಲಾಗ್ನಿಮಾಸಾದ್ಯ ತದಮ್ಭೋ ಯಾತಿ ಸಂಕ್ಷಯಮ್ ।
ವಿನಷ್ಟೇಽಮ್ಭಸಿ ರಾಜೇನ್ದ್ರ ಜಾಜ್ವಲತ್ಯನಲೋ ಮಹಾನ್ ॥೮॥

ಬಳಿಕ ಹುಟ್ಟುವ ಕಾಲಾಗ್ನಿಯ ಜ್ವಾಲೆಗೆ ಸಿಕ್ಕಿ ಆ ಅಪಾರವಾದ ನೀರು ಬತ್ತಿಹೋಗುತ್ತದೆ. ನೀರು ನಷ್ಟವಾಗಿ ಹೋದನಂತರ ದೊಡ್ಡದಾದ ಬೆಂಕಿಯು ಅತ್ಯಂತಭಯಾನಕವಾದ ರೂಪವನ್ನು ಹೊಂದಿ ಸರ್ವತ್ರ ಧಗ-ಧಗಿಸುತ್ತಿರುತ್ತದೆ. (ಜಲತತ್ತ್ವವು ಅಗ್ನಿತತ್ತ್ವದಲ್ಲಿ ಲೀನವಾಗುತ್ತದೆ.)

ತಮಪ್ರಮೇಯೋಽತಿಬಲಂ ಜ್ವಲಮಾನಂ ವಿಭಾವಸುಮ್ ।
ಊಷ್ಮಾಣಂ ಸರ್ವಭೂತಾನಾಂ ಸಪ್ತಾರ್ಚಿಷಮಥಾಞ್ಜಸಾ ॥೯॥

ಭಕ್ಷಯಾಮಾಸ ಭಗವಾನ್ವಾಯುರಷ್ಟಾತ್ಮಕೋ ಬಲೀ ।
ವಿಚರನ್ನಮಿತಪ್ರಾಣಸ್ತಿರ್ಯಗೂರ್ಧ್ವಮಧಸ್ತಥಾ ॥೧೦॥

ಎಲ್ಲ ಪ್ರಾಣಿಗಳಿಗೂ ಶಾಖವನ್ನುಂಟುಮಾಡುವ, ಮಹಾಬಲನಾದ, ಧಗ-ಧಗಿಸುತ್ತಿರುವ ಏಳು ವಿಧವಾದ ಜ್ವಾಲೆಗಳಿಂದ ಕೂಡಿರುವ ಅಗ್ನಿಯನ್ನು–ಅಪ್ರಮೇಯನಾದ, ಮಹಾಬಲಿಷ್ಠನಾದ ಭಗವಾನ್ ವಾಯುವು ಎಂಟು ವಿಧವಾದ ರೂಪಗಳನ್ನು ಧರಿಸಿ ಮೇಲೆ-ಕೆಳಗೆ-ಅಡ್ಡಡ್ಡವಾಗಿ ರಭಸದಿಂದ ಬೀಸುತ್ತಾ ಭಕ್ಷಿಸಿಬಿಡುತ್ತಾನೆ. (ಅಗ್ನಿತತ್ತ್ವವು ವಾಯುತತ್ತ್ವದಲ್ಲಿ ಲೀನವಾಗುತ್ತದೆ.)

ತಮಪ್ರತಿಬಲಂ ಭೀಮಮಾಕಾಶಂ ಗ್ರಸತೇಽತ್ಮನಾ ।
ಆಕಾಶಮಪ್ಯಭಿನದನ್ಮನೋ ಗ್ರಸತಿ ಚಾಧಿಕಮ್ ॥೧೧॥

ಬಳಿಕ ಆಕಾಶವು ಅತ್ಯಂತಬಲಿಷ್ಠವಾದ, ಭಯಂಕರವಾದ ವಾಯುವನ್ನು ಭಕ್ಷಿಸಿಬಿಡುತ್ತದೆ. (ವಾಯುತತ್ತ್ವವು ಆಕಾಶತತ್ತ್ವದಲ್ಲಿ ಲೀನವಾಗುತ್ತದೆ.) ಗರ್ಜನ-ತರ್ಜನಗಳನ್ನು ಮಾಡುವ ಆಕಾಶವನ್ನು ಅದಕ್ಕಿಂತಲೂ ಅಧಿಕವಾದ ಶಕ್ತಿಯನ್ನು ಹೊಂದಿರುವ ಮನಸ್ಸು ನುಂಗಿಬಿಡುತ್ತದೆ. (ಆಕಾಶತತ್ತ್ವವು ಮನಸ್ತತ್ತ್ವದಲ್ಲಿ ಲೀನವಾಗುತ್ತದೆ.)

ಮನೋ ಗ್ರಸತಿ ಭೂತಾತ್ಮಾ ಸೋಽಹಙ್ಕಾರಃ ಪ್ರಜಾಪತಿಃ ।
ಅಹಙ್ಕಾರಂ ಮಹಾನಾತ್ಮಾ ಭೂತಭವ್ಯಭವಿಷ್ಯವಿತ್ ॥೧೨॥

ಭೂತಾತ್ಮವೂ, ಪ್ರಜಾಪತಿಸ್ವರೂಪವೂ ಆದ ಅಹಂಕಾರವು ಮನಸ್ಸನ್ನು ನುಂಗುತ್ತದೆ. (ಮನಸ್ತತ್ತ್ವವು ಅಹಂಕಾರತತ್ತ್ವದಲ್ಲಿ ಲೀನ

ವಾಗುತ್ತದೆ.) ಬಳಿಕ ಭೂತ-ಭವಿಷ್ಯದ್ವರ್ತಮಾನಗಳನ್ನು ತಿಳಿದಿರುವ ಸಮಷ್ಟಿಬುದ್ಧಿಸ್ವರೂಪವಾದ ಮಹತ್ತತ್ತ್ವವು ಅಹಂಕಾರವನ್ನು ನುಂಗುತ್ತದೆ. (ಅಹಂಕಾರತತ್ತ್ವವು ಮಹತ್ತತ್ತ್ವದಲ್ಲಿ ಲೀನವಾಗುತ್ತದೆ.)

ತಮಪ್ಯನುಪಮಾತ್ಮಾನಂ ವಿಶ್ವಂ ಶಮ್ಭುಃ ಪ್ರಜಾಪತಿಃ ।
ಅಣಿಮಾ ಲಘಿಮಾ ಪ್ರಾಪ್ತಿರೀಶಾನೋ ಜ್ಯೋತಿರವ್ಯಯಃ ॥೧೩॥

ಸರ್ವತಃಪಾಣಿಪಾದಾನ್ತಃ ಸರ್ವತೋಽಕ್ಷಿಶಿರೋಮುಖಃ ।
ಸರ್ವತಃಶ್ರುತಿಮಾಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥೧೪॥

ಹೃದಯಂ ಸರ್ವಭೂತಾನಾಂ ಪರ್ವಣಾಙ್ಗುಷ್ಠಮಾತ್ರಕಃ ।
ಅಥ ಗ್ರಸತ್ಯನನ್ತೋ ಹಿ ಮಹಾತ್ಮಾ ವಿಶ್ವಮೀಶ್ವರಃ ॥೧೫॥

ಬಳಿಕ ಯಾವನಿಗೆ ಎಲ್ಲ ಕಡೆಗಳಲ್ಲಿಯೂ ಕೈಗಳಿವೆಯೋ, ಕಾಲುಗಳಿವೆಯೋ, ಕಣ್ಣುಗಳಿವೆಯೋ, ಶಿರಸ್ಸುಗಳಿವೆಯೋ, ಮುಖಗಳಿವೆಯೋ, ಎಲ್ಲ ಕಡೆಗಳಲ್ಲಿಯೂ ಕಿವಿಗಳಿವೆಯೋ, ಯಾವನು ಸಮಸ್ತವಾದ ಲೋಕಗಳನ್ನೂ ಆವರಿಸಿಕೊಂಡು ನಿಂತಿರುವನೋ, ಅಂಗುಷ್ಠದ ಗಿಣ್ಣಿನಷ್ಟು ಮಾತ್ರವೇ ಆಕಾರವನ್ನು ಹೊಂದಿ ಎಲ್ಲ ಪ್ರಾಣಿಗಳ ಹೃದಯಗಳಲ್ಲಿಯೂ ವಿರಾಜಮಾನನಾಗಿರುವನೋ, ಯಾವನು ಅಣಿಮಾ-ಲಘಿಮಾ-ಪ್ರಾಪ್ತಿ–ಇವೇ ಮೊದಲಾದ ಎಂಟು ವಿಧವಾದ ಯೋಗೈಶ್ವರ್ಯಗಳಿಗೂ ಒಡೆಯನೋ, ಎಲ್ಲರಿಗೂ ನಿಯಂತೃವೋ, ಜ್ಯೋತಿಃಸ್ವರೂಪನೋ, ಅವಿನಾಶಿಯೋ, ಕಲ್ಯಾಣಸ್ವರೂಪನೋ–ಅಂತಹ ಪ್ರಜಾಪತಿಯು ಅನುಪಮವಾದ, ವಿಶ್ವರೂಪವಾದ ಬುದ್ಧಿತತ್ತ್ವವನ್ನು (ಮಹತ್ತತ್ತ್ವವನ್ನು) ನುಂಗಿಬಿಡುತ್ತಾನೆ. (ಸಮಷ್ಟಿಬುದ್ಧಿರೂಪವಾದ ಮಹತ್ತತ್ತ್ವವು ಹಿರಣ್ಯಗರ್ಭದಲ್ಲಿ ಲೀನವಾಗುತ್ತದೆ.)

ತತಃ ಸಮಭವತ್ಸರ್ವಮಕ್ಷಯಾವ್ಯಯಮವ್ರಣಮ್ ।
ಭೂತಭವ್ಯಭವಿಷ್ಯಾಣಾಂ ಸ್ರಷ್ಟಾರಮನಘಂ ತಥಾ ॥೧೬॥

ಅನಂತರ ಅಕ್ಷಯ, ಅವ್ಯಯ ಮತ್ತು ನಿರ್ವಿಕಾರನಾದ ಪರಮಾತ್ಮನ ಸ್ವರೂಪವೇ ಎಲ್ಲವೂ ಆದುವು. (ಎಲ್ಲವೂ ಪರಮಾತ್ಮನಲ್ಲಿ ಲೀನವಾದುವು.)

ಅವನಿಂದಲೇ ಭೂತ-ಭವ್ಯ-ಭವಿಷ್ಯಗಳ ಸೃಷ್ಟಿಕರ್ತೃವಾದ ಪಾಪರಹಿತನಾದ ಬ್ರಹ್ಮನ ಸೃಷ್ಟಿಯೂ ಆಯಿತು.

ಏಷೋಽಪ್ಯಯಸ್ತೇ ರಾಜೇನ್ದ್ರ ಯಥಾವತ್ಸಮುದಾಹೃತಃ ।
ಅಧ್ಯಾತ್ಮಮಧಿಭೂತಂ ಚ ಅಧಿದೈವಂ ಚ ಶ್ರೂಯತಾಮ್ ॥೧೭॥

ರಾಜೇಂದ್ರನೇ! ಹೀಗೆ ನಾನು ನಿನಗೆ ಸಂಹಾರಕ್ರಮವನ್ನು ಯಥಾವತ್ತಾಗಿ ಹೇಳಿರುತ್ತೇನೆ. ಮುಂದೆ ನೀನು ಅಧ್ಯಾತ್ಮ, ಅಧಿಭೂತ ಮತ್ತು ಅಧಿದೈವಗಳ ವಿಷಯವನ್ನು ಕೇಳು."

೩೧೨ನೆಯ ಅಧ್ಯಾಯವು ಮುಗಿಯಿತು.

೩೧೩ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಅಧ್ಯಾತ್ಮ-ಅಧಿಭೂತ-ಅಧಿದೈವಗಳ ವರ್ಣನೆ: ಸಾತ್ತ್ವಿಕ-ರಾಜಸ-ತಾಮಸಗುಣಗಳ ಸ್ವಭಾವಲಕ್ಷಣಗಳ ನಿರೂಪಣೆ

ಧರ್ಮಜ! ಯಾಜ್ಞವಲ್ಕ್ಯರು ಹೇಳುತ್ತಾರೆ.

ಪಾದಾವಧ್ಯಾತ್ಮಮಿತ್ಯಾಹುರ್ಬ್ರಾಹ್ಮಣಾಸ್ತತ್ತ್ವದರ್ಶಿನಃ ।
ಗನ್ತವ್ಯಮಧಿಭೂತಂ ಚ ವಿಷ್ಣುಸ್ತತ್ರಾಧಿದೈವತಮ್ ॥೧॥

"ಜನಕರಾಜ! ತತ್ತ್ವವನ್ನು ತಿಳಿದಿರುವ ಬ್ರಾಹ್ಮಣರು ಎರಡು ಕಾಲುಗಳನ್ನು ಅಧ್ಯಾತ್ಮವೆನ್ನುತ್ತಾರೆ. ಹೋಗಬೇಕಾದ ಸ್ಥಾನವು ಅಧಿಭೂತವಾಗಿರುತ್ತದೆ. ಮಹಾವಿಷ್ಣುವೇ ಅಧಿದೈವತನಾಗಿರುತ್ತಾನೆ.

ಪಾಯುರಧ್ಯಾತ್ಮಮಿತ್ಯಾಹುರ್ಯಥಾ ತತ್ತ್ವಾರ್ಥದರ್ಶಿನಃ ।
ವಿಸರ್ಗಮಧಿಭೂತಂ ಚ ಮಿತ್ರಸ್ತತ್ರಾಧಿದೈವತಮ್ ॥೨॥

ತತ್ತ್ವದರ್ಶಿಗಳಾದ ವಿದ್ವಾಂಸರು ಗುದವನ್ನು ಅಧ್ಯಾತ್ಮವೆನ್ನುತ್ತಾರೆ. ಮಲತ್ಯಾಗವನ್ನೇ ಅಧಿಭೂತವೆನ್ನುತ್ತಾರೆ. ಮಿತ್ರನನ್ನು ಅಧಿದೈವತವೆನ್ನುತ್ತಾರೆ.

ಉಪಸ್ಥೋಽಧ್ಯಾತ್ಮಮಿತ್ಯಾಹುರ್ಯಥಾ ಯೋಗಪ್ರದರ್ಶಿನಃ ।
ಅಧಿಭೂತಂ ತಥಾನನ್ದೋ ದೈವತಂ ಚ ಪ್ರಜಾಪತಿಃ ॥೩॥

ಯೋಗಮತವನ್ನು ತಿಳಿದಿರುವ ವಿದ್ವಾಂಸರು ಹೇಳುವ ರೀತಿಯಲ್ಲಿ ಉಪಸ್ಥವು (ಜನನೇಂದ್ರಿಯವು) ಅಧ್ಯಾತ್ಮವಾಗಿರುತ್ತದೆ. ಮೈಥುನಜನಿತವಾದ ಆನಂದವು ಅಧಿಭೂತವಾಗಿರುತ್ತದೆ. ಪ್ರಜಾಪತಿಯು ಅಧಿದೈವತ ನಾಗಿರುತ್ತಾನೆ.

ಹಸ್ತಾವಧ್ಯಾತ್ಮಮಿತ್ಯಾಹುರ್ಯಥಾ ಸಂಖ್ಯಾನದರ್ಶಿನಃ ।
ಕರ್ತವ್ಯಮಧಿಭೂತಂ ತು ಇನ್ದ್ರಸ್ತತ್ರಾಧಿದೈವತಮ್ ॥೪॥

ಸಾಂಖ್ಯದರ್ಶಿಗಳು ಕೈಗಳನ್ನು ಅಧ್ಯಾತ್ಮವೆನ್ನುತ್ತಾರೆ. ಕರ್ತವ್ಯವನ್ನು ಅಧಿಭೂತವೆನ್ನುತ್ತಾರೆ. ಇಂದ್ರನನ್ನು ಅಧಿದೈವತವೆನ್ನುತ್ತಾರೆ.

ವಾಗಧ್ಯಾತ್ಮಮಿತಿ ಪ್ರಾಹುರ್ಯಥಾಶ್ರುತಿನಿದರ್ಶಿನಃ ।
ವಕ್ತವ್ಯಮಧಿಭೂತಂ ತು ವಹ್ನಿಸ್ತತ್ರಾಧಿದೈವತಮ್ ॥೫॥

ವೇದಾರ್ಥವನ್ನು ತಿಳಿದಿರುವ ವಿದ್ವಾಂಸರು ಮಾತನ್ನು ಅಧ್ಯಾತ್ಮವೆನ್ನು ತ್ತಾರೆ. ಹೇಳಬೇಕಾದುದನ್ನು ಅಧಿಭೂತವೆನ್ನುತ್ತಾರೆ. ವಹ್ನಿಯನ್ನು ಅಧಿ ದೈವತವೆನ್ನುತ್ತಾರೆ.

ಚಕ್ಷುರಧ್ಯಾತ್ಮಮಿತ್ಯಾಹುರ್ಯಥಾ ಶ್ರುತಿನಿದರ್ಶಿನಃ ।
ರೂಪಮತ್ರಾಧಿಭೂತಂ ತು ಸೂರ್ಯಶ್ಚಾಪ್ಯಧಿದೈವತಮ್ ॥೬॥

ವೇದದ ದೃಷ್ಟಾಂತವನ್ನು ಹೇಳುವವರು ಕಣ್ಣನ್ನು ಅಧ್ಯಾತ್ಮವೆನ್ನುತ್ತಾರೆ. ರೂಪವನ್ನು ಅಧಿಭೂತವೆನ್ನುತ್ತಾರೆ. ಸೂರ್ಯನನ್ನು ಅಧಿದೈವತವೆನ್ನುತ್ತಾರೆ.

ಶ್ರೋತ್ರಮಧ್ಯಾತ್ಮಮಿತ್ಯಾಹುರ್ಯಥಾ ಶ್ರುತಿನಿದರ್ಶಿನಃ ।
ಶಬ್ದಸ್ತತ್ರಾಧಿಭೂತಂ ತು ದಿಶಶ್ಚಾತ್ರಾಧಿದೈವತಮ್ ॥೭॥

ವೇದದ ಸಿದ್ಧಾಂತವನ್ನು ಹೇಳುವವರು ಕಿವಿಯನ್ನು ಅಧ್ಯಾತ್ಮವೆನ್ನುತ್ತಾರೆ. ಶಬ್ದವನ್ನು ಅಧಿಭೂತವೆನ್ನುತ್ತಾರೆ. ದಿಕ್ಕುಗಳನ್ನು ಅಧಿದೈವತವೆನ್ನುತ್ತಾರೆ.

ಜಿಹ್ವಾಮಧ್ಯಾತ್ಮಮಿತ್ಯಾಹುರ್ಯಥಾ ಶ್ರುತಿನಿದರ್ಶಿನಃ ।
ರಸ ಏವಾಧಿಭೂತಂ ತು ಆಪಸ್ತತ್ರಾಧಿದೈವತಮ್ ॥೮॥

ವೇದದ ದೃಷ್ಟಾಂತವನ್ನು ಹೇಳುವ ವಿದ್ವಾಂಸರು ನಾಲಿಗೆಯನ್ನು ಅಧ್ಯಾತ್ಮವೆನ್ನುತ್ತಾರೆ. ರಸವನ್ನು ಅಧಿಭೂತವೆನ್ನುತ್ತಾರೆ. ನೀರನ್ನು ಅಧಿದೈವತವೆನ್ನುತ್ತಾರೆ.

ಘ್ರಾಣಮಧ್ಯಾತ್ಮಮಿತ್ಯಾಹುರ್ಯಥಾ ಶ್ರುತಿನಿದರ್ಶಿನಃ ।
ಗನ್ಧ ಏವಾಧಿಭೂತಂ ತು ಪೃಥಿವೀ ಚಾಧಿದೈವತಮ್ ॥೯॥

ವೇದದ ದೃಷ್ಟಾಂತವನ್ನು ಹೇಳುವ ವಿದ್ವಾಂಸರು ಘ್ರಾಣೇಂದ್ರಿಯವನ್ನು ಅಧ್ಯಾತ್ಮವೆನ್ನುತ್ತಾರೆ. ಗಂಧವನ್ನು ಅಧಿಭೂತವೆನ್ನುತ್ತಾರೆ. ಪೃಥ್ವಿಯನ್ನು ಅಧಿದೈವತವೆನ್ನುತ್ತಾರೆ.

ತ್ವಗಧ್ಯಾತ್ಮಮಿತಿ ಪ್ರಾಹುಸ್ತತ್ತ್ವಬುದ್ಧಿವಿಶಾರದಾಃ ।
ಸ್ಪರ್ಶಮೇವಾಧಿಭೂತಂ ತು ಪವನಶ್ಚಾಧಿದೈವತಮ್ ॥೧೦॥

ತತ್ತ್ವಬುದ್ಧಿವಿಶಾರದರು ಚರ್ಮವನ್ನೇ ಅಧ್ಯಾತ್ಮವೆನ್ನುತ್ತಾರೆ. ಸ್ಪರ್ಶವನ್ನು ಅಧಿಭೂತವೆಂದೂ–ವಾಯುವನ್ನು ಅಧಿದೈವತವೆಂದೂ ಹೇಳುತ್ತಾರೆ.

ಮನೋಽಧ್ಯಾತ್ಮಮಿತಿ ಪ್ರಾಹುರ್ಯಥಾ ಶಾಸ್ತ್ರವಿಶಾರದಾಃ ।
ಮನ್ತವ್ಯಮಧಿಭೂತಂ ತು ಚನ್ದ್ರಮಾಶ್ಚಾಧಿದೈವತಮ್ ॥೧೧॥

ಶಾಸ್ತ್ರವಿಶಾರದರಾದ ವಿದ್ವಾಂಸರು ಮನಸ್ಸನ್ನು ಅಧ್ಯಾತ್ಮವೆನ್ನುತ್ತಾರೆ. ಮನನಮಾಡಬೇಕಾದುದನ್ನು ಅಧಿಭೂತವೆಂದೂ–ಚಂದ್ರನನ್ನು ಅಧಿದೈವತವೆಂದೂ ಹೇಳುತ್ತಾರೆ.

ಅಹಂಕಾರಿಕಮಧ್ಯಾತ್ಮಮಾಹುಸ್ತತ್ತ್ವನಿದರ್ಶಿನಃ ।
ಅಭಿಮಾನೋಽಧಿಭೂತಂ ತು ರುದ್ರಶ್ಚಾತ್ರಾಧಿದೈವತಮ್ ॥೧೨॥

ತತ್ತ್ವದೃಷ್ಟಾಂತವನ್ನು ಹೇಳುವ ವಿದ್ವಾಂಸರು ಅಹಂಕಾರವನ್ನೇ ಅಧ್ಯಾತ್ಮವೆನ್ನುತ್ತಾರೆ. ಅಭಿಮಾನವನ್ನು ಅಧಿಭೂತವೆಂದೂ–ರುದ್ರನನ್ನು ಅಧಿದೈವತವೆಂದೂ ಹೇಳುತ್ತಾರೆ.

ಬುದ್ಧಿರಧ್ಯಾತ್ಮಮಿತ್ರಾಹುರ್ಯಥಾವದಭಿದರ್ಶಿನಃ ।
ಬೋದ್ಧವ್ಯಮಧಿಭೂತಂ ತು ಕ್ಷೇತ್ರಜ್ಞಶ್ಚಾಧಿದೈವತಮ್ ॥೧೩॥

ಪರತತ್ತ್ವವನ್ನು ಯಥಾವತ್ತಾಗಿ ತಿಳಿದವರು ಬುದ್ಧಿಯನ್ನೇ ಅಧ್ಯಾತ್ಮ

ವೆನ್ನುತ್ತಾರೆ. ತಿಳಿದುಕೊಳ್ಳಬೇಕಾದುದನ್ನು ಅಧಿಭೂತವೆನ್ನುತ್ತಾರೆ. ಕ್ಷೇತ್ರಜ್ಞ ನನ್ನು ಅಧಿದೈವತವೆನ್ನುತ್ತಾರೆ.

ಏಷಾ ತೇ ವ್ಯಕ್ತಿತೋ ರಾಜನ್ವಿಭೂತಿರನುದರ್ಶಿತಾ ।
ಆದೌ ಮಧ್ಯೇ ತಥಾನ್ತೇ ಚ ಯಥಾತತ್ತ್ವೇನ ತತ್ತ್ವವಿತ್ ॥೧೪॥

ತತ್ತ್ವವಿದನೇ! ಸೃಷ್ಟಿ, ಮಧ್ಯಕಾಲ ಮತ್ತು ಅಂತ್ಯಕಾಲಗಳಲ್ಲಿ ಯಥಾವತ್ತಾಗಿ ಪ್ರಕಾಶಿತವಾಗುವ ಜೀವದ ವ್ಯಕ್ತಿಗತವಾದ ವಿಭೂತಿಗಳನ್ನು ಹೇಳಿದ್ದೇನೆ.

ಪ್ರಕೃತಿರ್ಗುಣಾನ್ವಿಕುರುತೇ ಸ್ವಚ್ಛನ್ದೇನಾತ್ಮಕಾಮ್ಯಯಾ ।
ಕ್ರೀಡಾರ್ಥೇ ತು ಮಹಾರಾಜ ಶತಶೋಽಥ ಸಹಸ್ರಶಃ ॥೧೫॥

ಪ್ರಕೃತಿಯು ಸ್ವಚ್ಛಂದದಿಂದ ಆಟವಾಡುವ ಸಲುವಾಗಿ ಸ್ವೇಚ್ಛೆಯಿಂದಲೇ ನೂರಾರು ಸಾವಿರಾರು (ಸತ್ತ್ವ-ರಜಸ್ತಾಮಸಾತ್ಮಕವಾದ) ಗುಣಗಳನ್ನು ಸೃಷ್ಟಿಸುತ್ತದೆ.

ಯಥಾ ದೀಪಸಹಸ್ರಾಣಿ ದೀಪಾನ್ಮರ್ತ್ಯಾಃ ಪ್ರಕುರ್ವತೇ ।
ಪ್ರಕೃತಿಸ್ತಥಾ ವಿಕುರುತೇ ಪುರುಷಸ್ಯ ಗುಣಾನ್ಬಹೂನ್ ॥೧೬॥

ಮನುಷ್ಯನು ಯಾವ ರೀತಿಯಲ್ಲಿ ಒಂದು ದೀಪದಿಂದ ಸಾವಿರಾರು ದೀಪಗಳನ್ನು ಹಚ್ಚುವನೋ–ಅದೇ ರೀತಿಯಲ್ಲಿ ಪ್ರಕೃತಿಯು ಪುರುಷನ ಸಲುವಾಗಿ ಒಂದು ಗುಣದಿಂದ ಅನೇಕ ಗುಣಗಳನ್ನು ಸೃಷ್ಟಿಸುತ್ತದೆ.

ಸತ್ತ್ವಮಾನನ್ದ ಉದ್ರೇಕಃ ಪ್ರೀತಿಃ ಪ್ರಾಕಾಶ್ಯಮೇವ ಚ ।
ಸುಖಂ ಶುದ್ಧಿತ್ವಮಾರೋಗ್ಯಂ ಸಂತೋಷಃ ಶ್ರದ್ದಧಾನತಾ ॥೧೭॥

ಅಕಾರ್ಪಣ್ಯಮಸಂರಮ್ಭಃ ಕ್ಷಮಾ ಧೃತಿರಹಿಂಸತಾ ।
ಸಮತಾ ಸತ್ಯಮಾನೃಣ್ಯಂ ಮಾರ್ದವಂ ಹ್ರೀರಚಾಪಲಮ್ ॥೧೮॥

ಶೌಚಮಾರ್ಜವಮಾಚಾರಮಲೌಲ್ಯಂ ಹೃದ್ಯಸಮ್ಭ್ರಮಃ ।
ಇಷ್ಟಾನಿಷ್ಟವಿಯೋಗಾನಾಂ ಕೃತಾನಾಮವಿಕತ್ಥನಾ ॥೧೯॥

ದಾನೇನ ಚಾತ್ಮಗ್ರಹಣಮಸ್ಪೃಹತ್ವಂ ಪರಾರ್ಥತಾ ।
ಸರ್ವಭೂತದಯಾ ಚೈವ ಸತ್ತ್ವಸ್ಯೈತೇ ಗುಣಾಃ ಸ್ಮೃತಾಃ ॥೨೦॥

ಧೈರ್ಯ (ಒಳ್ಳೆಯತನ), ಆನಂದ, ಪ್ರೀತಿ, ಉತ್ಕರ್ಷ, ಪ್ರಕಾಶ (ಜ್ಞಾನಶಕ್ತಿ), ಸುಖ, ಶುದ್ಧಿ, ಆರೋಗ್ಯ, ಸಂತೋಷ, ಶ್ರದ್ಧೆ, ಅಕಾರ್ಪಣ್ಯ (ದೀನತೆಯ ಅಭಾವ), ಅಸಂರಂಭ (ಕ್ರೋಧವಿಲ್ಲದಿರುವುದು), ಕ್ಷಮೆ, ಧೈರ್ಯ, ಅಹಿಂಸೆ, ಸಮತೆ, ಸತ್ಯ, ಆನೃಣ್ಯ (ಯಾರಿಗೂ ಋಣಿಯಾಗದಿರುವಿಕೆ), ಮೃದುತ್ವ, ಲಜ್ಜೆ, ಅಚಂಚಲತೆ, ಶೌಚ, ಸರಳತೆ, ಸದಾಚಾರ, ಅಲೋಲುಪತೆ, ಇಷ್ಟಪ್ರಾಪ್ತಿಯಾದರೆ ಅನಿಷ್ಟನಿವಾರಣೆಯಾದರೆ ಅಥವಾ ಇಷ್ಟದ ವಿಯೋಗವಾದರೆ ಅನಿಷ್ಟದ ಪ್ರಾಪ್ತಿಯಾದರೆ ಮನಸ್ಸಿನಲ್ಲಿ ಸಂಭ್ರಮವಿಲ್ಲದೇ ಇರುವುದು (ಹಿಗ್ಗದೆ ಅಥವಾ ಕುಗ್ಗದೇ ಇರುವುದು), ಸತ್ಕರ್ಮಗಳನ್ನು ಮಾಡಿದರೆ ಅದನ್ನು ಎಲ್ಲರೊಡನೆಯೂ ಹೇಳಿಕೊಳ್ಳದೇ ಇರುವುದು, ದಾನದಿಂದ ಸರ್ವವನ್ನೂ ತ್ಯಾಗಮಾಡಿ ಆತ್ಮಾನುಸಂಧಾನಮಾಡುವುದು, ಇತರರ ವಸ್ತುವಿನಲ್ಲಿ ನಿಸ್ಪೃಹತೆಯಿಂದಿರುವುದು, ಪರೋಪಕಾರಮಾಡುವುದು, ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ದಯಾಪರತೆ– ಇವೆಲ್ಲವೂ ಸತ್ತ್ವದ ಗುಣಗಳೆಂದು ಹೇಳಲ್ಪಟ್ಟಿವೆ.

ರಜೋಗುಣಾನಾಂ ಸಂಘಾತೋ ರೂಪಮೈಶ್ವರ್ಯವಿಗ್ರಹೌ ।
ಅತ್ಯಾಗಿತ್ವಮಕಾರುಣ್ಯಂ ಸುಖದುಃಖೋಪಸೇವನಮ್ ॥೨೧॥

ಪರಾಪವಾದೇಷು ರತಿರ್ವಿವಾದಾನಾಂ ಚ ಸೇವನಮ್ ।
ಅಹಂಕಾರಮಸತ್ಕಾರಶ್ಚಿನ್ತಾ ವೈರೋಪಸೇವನಮ್ ॥೨೨॥

ಪರಿತಾಪೋಽಭಿಹರಣಂ ಹ್ರೀನಾಶೋಽನಾರ್ಜವಂ ತಥಾ ।
ಭೇದಃ ಪರುಷತಾ ಚೈವ ಕಾಮಃ ಕ್ರೋಧೋ ಮದಸ್ತಥಾ ॥೨೩॥

ದರ್ಪೋ ದ್ವೇಷೋಽತಿವಾದಶ್ಚ ಏತೇ ಪ್ರೋಕ್ತಾ ರಜೋಗುಣಾಃ ।
ತಾಮಸಾನಾಂ ತು ಸಂಘಾತಂ ಪ್ರವಕ್ಷ್ಯಾಮ್ಯುಪಧಾರ್ಯತಾಮ್ ॥೨೪॥

ರೂಪ, ಐಶ್ವರ್ಯ, ವಿಗ್ರಹ, (ಕಲಹ), ತ್ಯಾಗದ ಅಭಾವ, ನಿಷ್ಕರುಣೆ, ಸುಖ-ದುಃಖಗಳ ಉಪಭೋಗ, ಪರನಿಂದೆಯಲ್ಲಿ ಆಸಕ್ತಿ, ವಾದ-ವಿವಾದಗಳಲ್ಲಿ ಅಭಿರುಚಿ, ಅಹಂಕಾರ, ಮಾನನೀಯರನ್ನು ಸತ್ಕರಿಸದಿರುವುದು, ಚಿಂತೆ, ವೈರಭಾವ, ಸಂತಾಪ, ಪರವಿತ್ತಾಪಹಾರ, ನಿರ್ಲಜ್ಜೆ, ಕುಟಿ

ಲತೆ, ಭೇದಬುದ್ಧಿ, ಕ್ರೌರ್ಯ, ಕಾಮ, ಕ್ರೋಧ, ಮದ, ದರ್ಪ, ದ್ವೇಷ, ಹೆಚ್ಚುಮಾತು–ಇವೆಲ್ಲವೂ ರಜಸ್ಸಿನ ಗುಣಗಳೆಂದು ಹೇಳಲ್ಪಟ್ಟಿವೆ.

ಮುಂದೆ ನಾನು ತಮಸ್ಸಿನ ಗುಣಗಳನ್ನು ಹೇಳುತ್ತೇನೆ. ಆಸಕ್ತಿಯಿಂದ ಕೇಳು.

ಮೋಹೋಽಪ್ರಕಾಶಸ್ತಾಮಿಸ್ರಮನ್ಧತಾಮಿಸ್ರಸಂಜ್ಞಿತಮ್ ।
ಮರಣಂ ಚಾನ್ಧತಾಮಿಸ್ರಂ ತಾಮಿಸ್ರಂ ಕ್ರೋಧ ಉಚ್ಯತೇ ॥೨೫॥

ತಮಸೋ ಲಕ್ಷಣಾನೀಹ ಭಕ್ಷಣಾದ್ಯಭಿರೋಚನಮ್ ।
ಭೋಜನಾನಾಮಪರ್ಯಾಪ್ತಿಸ್ತಥಾ ಪೇಯೇಷ್ವತೃಪ್ತತಾ ॥೨೬॥

ಗನ್ಧವಾಸೋ ವಿಹಾರೇಷು ಶಯನೇಷ್ವಾಸನೇಷು ಚ ।
ದಿವಾಸ್ವಪ್ನೇಽತಿವಾದೇ ಚ ಪ್ರಮಾದೇಷು ಚ ವೈ ರತಿಃ ॥೨೭॥

ನೃತ್ಯವಾದಿತ್ರಗೀತಾನಾಮಜ್ಞಾನಾಚ್ಛ್ರದ್ದಧಾನತಾ ।
ದ್ವೇಷೋ ಧರ್ಮವಿಶೇಷಾಣಾಮೇತೇ ವೈ ತಾಮಸಾ ಗುಣಾಃ ॥೨೮॥

ಮೋಹ, ಅಪ್ರಕಾಶ (ಅಜ್ಞಾನ), ಕತ್ತಲೆ, ಕಗ್ಗತ್ತಲೆ – ಇವು ತಮೋ ಗುಣದ ಲಕ್ಷಣಗಳು. ತಾಮಿಸ್ರವು (ಕತ್ತಲೆಯು) ಕ್ರೋಧವೆಂದು ಹೇಳಲ್ಪಟ್ಟಿದೆ. ಅಂಧತಾಮಿಸ್ರವು (ಕಗ್ಗತ್ತಲೆಯು) ಮರಣವೆಂದು ಹೇಳಲ್ಪಟ್ಟಿದೆ. ಯಾವಾಗಲೂ ತಿನ್ನುತ್ತಿರಬೇಕೆಂಬ ಆಸೆ ; ಎಷ್ಟು ಊಟ ಮಾಡಿದರೂ ತೃಪ್ತಿಯಿಲ್ಲದೇ ಇರುವುದು ; ಎಷ್ಟು ಕುಡಿದರೂ ತೃಪ್ತಿಯಿಲ್ಲದಿರುವುದು ; ದುರ್ಗಂಧಯುಕ್ತವಾದ ಮಲಿನವಾದ ಬಟ್ಟೆಗಳನ್ನು ಧರಿಸುವುದು ; ಅನುಚಿತವಾದ ವಿಹಾರಗಳಲ್ಲಿ, ಮಲಗುವುದರಲ್ಲಿ, ಯಾವಾಗಲೂ ಸುಮ್ಮನೇ ಕುಳಿತಿರುವುದರಲ್ಲಿ ಹೆಚ್ಚಿನ ಆಸಕ್ತಿ ; ಹಗಲುನಿದ್ದೆ ; ವಾದ-ವಿವಾದ ಮತ್ತು ಪ್ರಮಾದಗಳಲ್ಲಿ ಪ್ರೀತಿ.; ಅಜ್ಞಾನದ ಕಾರಣದಿಂದ ನೃತ್ಯ-ಗೀತ ಮತ್ತು ನಾನಾವಿಧವಾದ ವಾದ್ಯಸಂಗೀತಗಳಲ್ಲಿ ಅತಿಹೆಚ್ಚಿನ ಶ್ರದ್ಧೆ, ನಾನಾಪ್ರಕಾರವಾದ ಧರ್ಮಕಾರ್ಯಗಳಲ್ಲಿ ದ್ವೇಷ–ಇವೆಲ್ಲವೂ ತಮಸ್ಸಿನ ಗುಣಗಳಾಗಿವೆ.”

ಃ೧೩ನೆಯ ಅಧ್ಯಾಯವು ಮುಗಿಯಿತು.

೩೧೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಸಾತ್ತ್ವಿಕ-ರಾಜಸ-ತಾಮಸಪ್ರಕೃತಿಯ ಜನರು ಹೊಂದುವ ಗತಿ: ಜನಕನ ಪ್ರಶ್ನೆ

ಧರ್ಮಜ! ಯಾಜ್ಞವಲ್ಕ್ಯರು ಹೇಳುತ್ತಾರೆ :

ಏತೇ ಪ್ರಧಾನಸ್ಯ ಗುಣಾಸ್ತ್ರಯಃ ಪುರುಷಸತ್ತಮ ।
ಕೃತ್ಸ್ನಸ್ಯ ಚೈವ ಜಗತಸ್ತಿಷ್ಠನ್ತ್ಯನಪಗಾಃ ಸದಾ ॥೧॥

"ಪುರುಷಶ್ರೇಷ್ಠನೇ! ಸತ್ತ್ವರಜಸ್ತಮಸ್ಸುಗಳೆಂಬ ಈ ಮೂರೂ ಪ್ರಕೃತಿಯ ಗುಣಗಳಾಗಿವೆ. ಈ ಗುಣಗಳು ಸಂಪೂರ್ಣಜಗತ್ತನ್ನೂ ವ್ಯಾಪಿಸಿಕೊಂಡಿವೆ. ಯಾವಾಗಲೂ ಈ ಗುಣಗಳು ಜಗತ್ತನ್ನು ಬಿಟ್ಟು ಹೋಗುವುದೇ ಇಲ್ಲ.

ಅವ್ಯಕ್ತರೂಪೋ ಭಗವಾಞ್ಶತಧಾ ಚ ಸಹಸ್ರಧಾ ।
ಶತಧಾ ಸಹಸ್ರಧಾ ಚೈವ ತಥಾ ಶತಸಹಸ್ರಧಾ ।
ಕೋಟಿಶಶ್ಚ ಕರೋತ್ಯೇಷ ಪ್ರತ್ಯಗಾತ್ಮಾನಮಾತ್ಮನಾ ॥೨॥

ಅವ್ಯಕ್ತರೂಪನಾದ ಭಗವಂತನು ಪ್ರಕೃತಿಯ ಸಾಹಚರ್ಯದಿಂದ ನೂರಾರು, ಸಾವಿರಾರು, ಲಕ್ಷೋಪಲಕ್ಷ, ಕೋಟ್ಯನುಕೋಟಿ ರೂಪಗಳನ್ನು ತನ್ನಿಂದಲೇ ತಾನು ಪ್ರಕಟಪಡಿಸಿಕೊಳ್ಳುತ್ತಾನೆ.

ಸಾತ್ತ್ವಿಕಸ್ಯೋತ್ತಮಂ ಸ್ಥಾನಂ ರಾಜಸಸ್ಯೇಹ ಮಧ್ಯಮಮ್ ।
ತಾಮಸಸ್ಯಾಧಮಂ ಸ್ಥಾನಂ ಪ್ರಾಹುರಧ್ಯಾತ್ಮಚಿನ್ತಕಾಃ ॥೩॥

ಅಧ್ಯಾತ್ಮಶಾಸ್ತ್ರದ ಚಿಂತನವನ್ನು ಮಾಡುವ ವಿದ್ವಾಂಸರು ಸಾತ್ತ್ವಿಕ ಪುರುಷನು ಉತ್ತಮನೆಂದೂ, ರಾಜಸಗುಣವಿರುವವನು ಮಧ್ಯಮನೆಂದೂ, ತಮೋಗುಣವಿರುವವನು ಅಧಮನೆಂದೂ ಹೇಳುತ್ತಾರೆ.

ಕೇವಲೇನೇಹ ಪುಣ್ಯೇನ ಗತಿಮೂರ್ಧ್ವಾಮವಾಪ್ನುಯಾತ್ ।
ಪುಣ್ಯಪಾಪೇನ ಮಾನುಷ್ಯಮಧರ್ಮೇಣಾಪ್ಯಧೋಗತಿಮ್ ॥೪॥

ಕೇವಲ ಪುಣ್ಯಕಾರ್ಯಗಳಿಂದಲೇ ಮನುಷ್ಯನು ಮೇಲಿನ ಲೋಕದ

ಉತ್ತಮಗತಿಯನ್ನು ಹೊಂದುತ್ತಾನೆ. ಪುಣ್ಯ-ಪಾಪಕರ್ಮಗಳೆರಡನ್ನೂ ಮಾಡಿದ್ದರೆ ಪುನಃ ಮನುಷ್ಯಲೋಕದಲ್ಲಿಯೇ ಜನ್ಮತಾಳುತ್ತಾನೆ. ಪಾಪ ಕರ್ಮಗಳನ್ನೇ ಮಾಡಿದ್ದರೆ ಅಧೋಗತಿಯನ್ನು ಹೊಂದುತ್ತಾನೆ.

ದ್ವನ್ದ್ವಮೇಷಾಂ ತ್ರಯಾಣಾಂ ತು ಸಂನಿಪಾತಂ ಚ ತತ್ತ್ವತಃ ।
ಸತ್ತ್ವಸ್ಯ ರಜಸಶ್ಚೈವ ತಮಸಶ್ಚ ಶೃಣುಷ್ವ ಮೇ ॥೫॥

ಸತ್ತ್ವ-ರಜಸ್ತಮೋಗುಣಗಳ ದ್ವಂದ್ವದ ಪರಿಣಾಮವನ್ನೂ (ಎರಡು ಗುಣಗಳು ಸೇರಿದರೆ ಆಗುವ ಪರಿಣಾಮವನ್ನೂ), ಸಂನಿಪಾತದ ಪರಿಣಾಮವನ್ನೂ (ಮೂರೂ ಗುಣಗಳು ಸೇರಿದರೆ ಆಗುವ ಪರಿಣಾಮವನ್ನೂ) ಯಥಾವತ್ತಾಗಿ ಹೇಳುತ್ತೇನೆ ; ಕೇಳು.

ಸತ್ತ್ವಸ್ಯ ತು ರಜೋ ದೃಷ್ಟಂ ರಜಸಶ್ಚ ತಮಸ್ತಥಾ ।
ತಮಸಶ್ಚ ತಥಾ ಸತ್ತ್ವಂ ಸತ್ತ್ವಸ್ಯಾವ್ಯಕ್ತಮೇವ ಚ ॥೬॥

ಅವ್ಯಕ್ತಃ ಸತ್ತ್ವಸಂಯುಕ್ತೋ ದೇವಲೋಕಮವಾಪ್ನುಯಾತ್ ।

ಜೀವಾತ್ಮನಲ್ಲಿ ಸತ್ತ್ವಗುಣದೊಡನೆ ರಜೋಗುಣವು ಸೇರಿರುವುದು ಕಂಡುಬರುತ್ತದೆ. ರಜೋಗುಣದೊಡನೆ ತಮೋಗುಣವು ಸೇರಿರುವುದು ಕಂಡುಬರುತ್ತದೆ. ತಮೋಗುಣದೊಡನೆ ಸತ್ತ್ವಗುಣವು ಸೇರಿರುವುದು ಕಂಡುಬರುತ್ತದೆ. ಕೇವಲ ಸತ್ತ್ವದೊಡನೆ ಜೀವಾತ್ಮನು ಸೇರಿರುವುದೂ ಉಂಟು. (ಇದಕ್ಕೆ ದ್ವಂದ್ವವೆಂದು ಹೆಸರು). ಸರ್ವಪ್ರಾಣಿಗಳಲ್ಲಿಯೂ ಸತ್ತ್ವಗುಣಯುಕ್ತನಾದ ಅವ್ಯಕ್ತನು (ಜೀವಾತ್ಮನು) ದೇವಲೋಕವನ್ನು ಹೊಂದುತ್ತಾನೆ.

ರಜಃಸತ್ತ್ವಸಮಾಯುಕ್ತೋ ಮಾನುಷೇಷು ಪ್ರಪದ್ಯತೇ ।
ರಜಸ್ತಮೋಭ್ಯಾಂ ಸಂಯುಕ್ತಸ್ತಿರ್ಯಗ್ಯೋನಿಷು ಜಾಯತೇ ।
ರಾಜಸೈಸ್ತಾಮಸೈಃ ಸತ್ತ್ವೈರ್ಯುಕ್ತೋ ಮಾನುಷಮಾಪ್ನುಯಾತ್ ॥೭॥

ರಜೋಗುಣ-ಸತ್ತ್ವಗುಣಗಳಿಂದ ಯುಕ್ತವಾದ ಅವ್ಯಕ್ತವು (ಜೀವವು) ಮನುಷ್ಯರಲ್ಲಿ ಹುಟ್ಟುತ್ತದೆ. ರಜೋಗುಣದಿಂದಲೂ ತಮೋಗುಣ ದಿಂದಲೂ ಯುಕ್ತವಾದ ಅವ್ಯಕ್ತವು (ಜೀವವು) ಪಶು-ಪಕ್ಷಿಗಳೇ ಮೊದ ಲಾದ ತಿರ್ಯಗ್ಯೋನಿಯಲ್ಲಿ ಹುಟ್ಟುತ್ತದೆ. ರಾಜಸ, ತಾಮಸ ಮತ್ತು

ಸತ್ತ್ವ–ಈ ಮೂರು ಗುಣಗಳಿಂದಲೂ ಯುಕ್ತವಾದ ಅವ್ಯಕ್ತವು ಮನುಷ್ಯ ಯೋನಿಯನ್ನು ಹೊಂದುತ್ತದೆ.

ಪುಣ್ಯಪಾಪವಿಮುಕ್ತಾನಾಂ ಸ್ಥಾನಮಾಹುರ್ಮಹಾತ್ಮನಾಮ್ ।
ಶಾಶ್ವತಂ ಚಾವ್ಯಯಂ ಚೈವಮಕ್ಷಯಂ ಚಾಮೃತಂ ಚ ತತ್ ॥೯॥

ಯಾರು ಪುಣ್ಯ-ಪಾಪಗಳೆರಡರಿಂದಲೂ ರಹಿತರಾಗಿರುವರೋ–ಅಂತಹ ಮಹಾತ್ಮರಿಗೆ ಶಾಶ್ವತವಾದ, ಅವಿನಾಶಿಯಾದ, ಅಕ್ಷಯವಾದ ಅಮೃತತತ್ತ್ವವು ಪ್ರಾಪ್ತವಾಗುವುದೆಂದು ಹೇಳುತ್ತಾರೆ.

ಜ್ಞಾನಿನಾಂ ಸಮ್ಭವಂ ಶ್ರೇಷ್ಠಂ ಸ್ಥಾನಮವ್ರಣಮಚ್ಯುತಮ್ ।
ಅತೀನ್ದ್ರಿಯಮಬೀಜಂ ಚ ಜನ್ಮಮೃತ್ಯುತಮೋನುದಮ್ ॥೧೦॥

ಜ್ಞಾನಿಗಳಿಗೆ–ಅವಿನಾಶಿಯಾದ, ಚ್ಯುತವಾಗದ, ಇಂದ್ರಿಯಾತೀತ ವಾದ, ಪಾಪ-ಪುಣ್ಯಗಳ ಉತ್ಪತ್ತಿಗೆ ಅವಕಾಶವೇ ಇಲ್ಲದ, ಹುಟ್ಟು-ಸಾವು ಗಳನ್ನೂ ಅಜ್ಞಾನವನ್ನೂ ತೊಡೆದುಹಾಕುವ ಶ್ರೇಷ್ಠವಾದ ಪರಮಪದವು ಪ್ರಾಪ್ತವಾಗುತ್ತದೆ.

ಅವ್ಯಕ್ತಸ್ಥಂ ಪರಂ ಯತ್ತತ್ಪೃಷ್ಟಸ್ತೇಽಹಂ ನರಾಧಿಪ ।
ಸ ಏಷ ಪ್ರಕೃತಿಸ್ಥೋ ಹಿ ತತ್ಸ್ಥ ಇತ್ಯಭಿಧೀಯತೇ ॥೧೧॥

ಅವ್ಯಕ್ತಪ್ರಕೃತಿಯಲ್ಲಿರುವ ಪರಮಾತ್ಮನ ವಿಷಯವಾಗಿ ನೀನು ಯಾವ ಪ್ರಶ್ನೆಯನ್ನು ಕೇಳಿದೆಯೋ ಅದಕ್ಕೆ ಉತ್ತರವು ಹೀಗಿದೆ. ಆ ಪರಮಾತ್ಮನೇ ಪ್ರಕೃತಿರೂಪವಾದ ಶರೀರದಲ್ಲಿರುವುದರಿಂದ ಅವನನ್ನು ಪ್ರಕೃತಿಸ್ಥನೆಂದು ಹೇಳುತ್ತಾರೆ.

ಅಚೇತನಾ ಚೈವ ಮತಾ ಪ್ರಕೃತಿಶ್ಚಾಪಿ ಪಾರ್ಥಿವ ।
ಏತೇನಾಧಿಷ್ಠಿತಾ ಚೈವ ಸೃಜತೇ ಸಂಹರತ್ಯಪಿ ॥೧೨॥

ಮಹಾರಾಜ! ಪ್ರಕೃತಿಯು ಜಡವಾದುದು. ಆದರೆ ಆ ಪ್ರಕೃತಿಯು ಪರಮಾತ್ಮನಿಂದ ಆಶ್ರಯಿಸಲ್ಪಟ್ಟಿರುವುದರಿಂದಲೇ ಅದು ಸೃಷ್ಟಿ-ಸಂಹಾರ ಕಾರ್ಯಗಳನ್ನು ಮಾಡುತ್ತದೆ.”

ಜನಕನು ಪ್ರಶ್ನಿಸುತ್ತಾನೆ :

ಅನಾದಿನಿಧನಾವೇತಾವುಭಾವೇವ ಮಹಾಮತೇ ।
ಅಮೂರ್ತಿಮನ್ತಾವಚಲಾವಪ್ರಕಮ್ಪ್ಯುಗುಣಾಗುಣೌ ॥೧೩॥

“ಮಹಾಮತಿಯೇ! ಪ್ರಕೃತಿ-ಪುರುಷರಿಬ್ಬರೂ ಆದ್ಯಂತರಹಿತರಾದವರು ; ಅಮೂರ್ತರು (ಅವ್ಯಕ್ತರು) ; ಅಚಲರು ; ತಮ್ಮ ತಮ್ಮ ಗುಣಗಳಲ್ಲಿ ಸ್ಥಿರವಾಗಿರತಕ್ಕವರು ಮತ್ತು ನಿರ್ಗುಣರೂ ಆಗಿದ್ದಾರೆ.

ಅಗ್ರಾಹ್ಯಾವೃಷಿಶಾರ್ದೂಲ ಕಥಮೇಕೋ ಹ್ಯಚೇತನಃ ।
ಚೇತನಾವಾಂಸ್ತಥಾ ಚೈಕಃ ಕ್ಷೇತ್ರಜ್ಞ ಇತಿ ಭಾಷಿತಃ ॥೧೪॥

ಋಷಿಶ್ರೇಷ್ಠನೇ! ಪ್ರಕೃತಿ-ಪುರುಷರಿಬ್ಬರೂ ಬುದ್ಧಿಗೆ ಅಗೋಚರರು. ಹೀಗಿರುವಾಗ ಈ ಎರಡು ತತ್ತ್ವಗಳಲ್ಲಿ ಒಂದು ಹೇಗೆ ಜಡವಾಯಿತು? ಮತ್ತೊಂದು ಚೇತನವುಳ್ಳದ್ದು ಹೇಗಾಯಿತು? ಮತ್ತು ಅದನ್ನು ಕ್ಷೇತ್ರಜ್ಞನೆಂದು ಹೇಗೆ ಕರೆಯಲಾಯಿತು?

ತ್ವಂ ಹಿ ವಿಪ್ರೇನ್ದ್ರ ಕಾರ್ತ್ಸ್ನ್ಯೇನ ಮೋಕ್ಷಧರ್ಮಮುಪಾಸಸೇ ।
ಸಾಕಲ್ಯಂ ಮೋಕ್ಷಧರ್ಮಸ್ಯ ಶ್ರೋತುಮಿಚ್ಛಾಮಿ ತತ್ತ್ವತಃ ॥೧೫॥

ವಿಪ್ರೇಂದ್ರನೇ! ನೀನು ಸಂಪೂರ್ಣವಾಗಿ ಮೋಕ್ಷಧರ್ಮವನ್ನು ಆಶ್ರಯಿಸಿರುವೆ. ಆದುದರಿಂದ ಮೋಕ್ಷಧರ್ಮದ ಪೂರ್ಣರೂಪವನ್ನು ಯಥಾವತ್ತಾಗಿ ನಿನ್ನಿಂದ ತಿಳಿಯಬೇಕೆಂದಿರುತ್ತೇನೆ.

ಅಸ್ತಿತ್ವಂ ಕೇವಲತ್ವಂ ಚ ವಿನಾಭಾವಂ ತಥೈವ ಚ ।
ದೈವತಾನಿ ಚ ಮೇ ಬ್ರೂಹಿ ದೇಹಂ ಯಾನ್ಯಾಶ್ರಿತಾನಿ ವೈ ॥೧೬॥

ನೀನು ಪುರುಷನ ಅಸ್ತಿತ್ವ, ಕೇವಲತ್ವ (ಅದ್ವಿತೀಯತ್ವ), ಪ್ರಕೃತಿಯ ಸಂಬಂಧವಿಲ್ಲದೇ ಇರುವಿಕೆ, ದೇಹವನ್ನು ಆಶ್ರಯಿಸಿರುವ ದೇವತೆಗಳು – ಈ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ಹೇಳು.

ತಥೈವೋತ್ಕ್ರಾಮಿಣಃ ಸ್ಥಾನಂ ದೇಹಿನೋ ವೈ ವಿಪದ್ಯತಃ ।
ಕಾಲೇನ ಯದ್ಧಿ ಪ್ರಾಪ್ನೋತಿ ಸ್ಥಾನಂ ತತ್ಪ್ರಬ್ರವೀಹಿ ಮೇ ॥೧೭॥

ಮರಣಹೊಂದುತ್ತಿರುವ ದೇಹಿಯ ಉತ್ಕ್ರಮಣಸಮಯದಲ್ಲಿ ಅವನ ಸ್ಥಾನವು ಯಾವುದು? ಶರೀರದಿಂದ ಹೊರಬಂದನಂತರ ಆ ಜೀವನು ಕಾಲಾನುಗುಣವಾಗಿ ಯಾವ ಸ್ಥಾನವನ್ನು ಪಡೆಯುತ್ತಾನೆ? ಎಂಬುದನ್ನು ನನಗೆ ಹೇಳು.

ಸಾಂಖ್ಯಜ್ಞಾನಂ ಚ ತತ್ತ್ವೇನ ಪೃಥಗ್ಯೋಗಂ ತಥೈವ ಚ ।
ಅರಿಷ್ಟಾನಿ ಚ ತತ್ತ್ವಾನಿ ವಕ್ತುಮರ್ಹಸಿ ಸತ್ತಮ ।
ವಿದಿತಂ ಸರ್ವಮೇತತ್ತೇ ಪಾಣಾವಾಮಲಕಂ ಯಥಾ ॥೧೮॥

ಸತ್ಪುರುಷಶ್ರೇಷ್ಠನೇ! ಹಾಗೆಯೇ ಸಾಂಖ್ಯಜ್ಞಾನವನ್ನೂ–ಯೋಗಶಾಸ್ತ್ರವನ್ನೂ ಪ್ರತ್ಯೇಕವಾಗಿ ಹೇಳು. ಮೃತ್ಯುಸೂಚಕವಾದ ಲಕ್ಷಣಗಳನ್ನೂ ಯಥಾವತ್ತಾಗಿ ತಿಳಿಸು. ಅಂಗೈಯಲ್ಲಿರುವ ನೆಲ್ಲೀಕಾಯಿಯಂತೆ ನಿನಗೆ ಈ ವಿಷಯಗಳೆಲ್ಲವೂ ಸಂಪೂರ್ಣವಾಗಿ ತಿಳಿದಿವೆ.”

ಮೂರುನೂರಹದಿನಾಲ್ಕನೆಯ ಅಧ್ಯಾಯವು ಮುಗಿಯಿತು.

೩೧೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪ್ರಕೃತಿ-ಪುರುಷರ ವಿವೇಕ ಮತ್ತು ಅದರ ಫಲ

ಯಾಜ್ಞವಲ್ಕ್ಯರು ಹೇಳುತ್ತಾರೆ :

ನ ಶಕ್ಯೋ ನಿರ್ಗುಣಸ್ತಾತ ಗುಣೀಕರ್ತುಂ ವಿಶಾಮ್ಪತೇ ।
ಗುಣವಾಂಶ್ಚಾಪ್ಯಗುಣವಾನ್ಯಥಾತತ್ತ್ವಂ ನಿಬೋಧ ಮೇ ॥೧॥

“ಪ್ರಜಾನಾಥನೇ! ನಿರ್ಗುಣನನ್ನು ಸಗುಣನನ್ನಾಗಿಯಾಗಲೀ–ಸಗುಣನನ್ನು ನಿರ್ಗುಣನನ್ನಾಗಿಯಾಗಲೀ ಮಾಡಲು ಸಾಧ್ಯವೇ ಇಲ್ಲ. ಈ ವಿಷಯವನ್ನು ನೀನು ಯಥಾವತ್ತಾಗಿ ಕೇಳು.

ಗುಣೈರ್ಹಿ ಗುಣವಾನೇವ ನಿರ್ಗುಣಶ್ಚಾಗುಣಸ್ತಥಾ ।
ಪ್ರಾಹುರೇವಂ ಮಹಾತ್ಮಾನೋ ಮುನಯಸ್ತತ್ತ್ವದರ್ಶಿನಃ ॥೨॥

ಗುಣಗಳೊಡನೆ ಸಂಪರ್ಕವಿರುವವನನ್ನು ಗುಣವಂತನೆಂದೂ, ಗುಣ

ಗಳೊಡನೆ ಸಂಪರ್ಕವಿಲ್ಲದವನನ್ನು ನಿರ್ಗುಣನೆಂದೂ–ತತ್ತ್ವದರ್ಶಿಗಳಾದ, ಮಹಾತ್ಮರಾದ ಮುನಿಗಳು ಹೇಳುತ್ತಾರೆ.

ಗುಣಸ್ವಭಾವಸ್ತ್ವವ್ಯಕ್ತೋ ಗುಣಾನ್ನೈವಾತಿವರ್ತತೇ ।
ಉಪಯುಙ್ಕ್ತೇ ಚ ತಾನೇವ ಸ ಚೈವಾಜ್ಞಃ ಸ್ವಭಾವತಃ ॥೩॥

ಅವ್ಯಕ್ತಪ್ರಕೃತಿಯು ಸ್ವಾಭಾವಿಕವಾಗಿಯೇ ಗುಣಯುಕ್ತವಾಗಿದೆ. ಅದು ಯಾವಾಗಲೂ ಗುಣಗಳನ್ನು ಅತಿಕ್ರಮಿಸುವುದಿಲ್ಲ. (ಗುಣಗಳ ಪರಿಸರ ದಲ್ಲಿಯೇ ಇರುತ್ತದೆ.) ಆ ಗುಣಗಳನ್ನೇ ತನ್ನ ಅಸ್ತಿತ್ವಕ್ಕಾಗಿ ಸರ್ವದಾ ಉಪಯೋಗಿಸಿಕೊಳ್ಳುತ್ತದೆ. ಅವ್ಯಕ್ತಪ್ರಕೃತಿಯು ಸ್ವಭಾವತಃ ಅಜ್ಞಾನಿಯೂ ಆಗಿದೆ.

ಅವ್ಯಕ್ತಸ್ತು ನ ಜಾನೀತೇ ಪುರುಷೋ ಜ್ಞಃ ಸ್ವಭಾವತಃ ।
ನ ಮತ್ತಃ ಪರಮೋಽಸ್ತೀತಿ ನಿತ್ಯಮೇವಾಭಿಮನ್ಯತೇ ॥೪॥

ಅವ್ಯಕ್ತಪ್ರಕೃತಿಯು–ತನ್ನ ಜೊತೆಯಲ್ಲಿರುವ ಪುರುಷನು ಸ್ವಾಭಾವಿಕ ವಾಗಿಯೇ ಜ್ಞಾನಸ್ವರೂಪನೆಂಬುದನ್ನು ತಿಳಿದಿರುವುದಿಲ್ಲ. ಆದುದರಿಂದ ಪುರುಷನೊಡನಿರುವ ಪ್ರಕೃತಿಯು ತನಗಿಂತಲೂ ಶ್ರೇಷ್ಠವಾದುದು ಯಾವುದೂ ಇಲ್ಲವೆಂದು ನಿತ್ಯವೂ ಭಾವಿಸಿಕೊಳ್ಳುತ್ತದೆ.

ಅನೇನ ಕಾರಣೇನೈತದವ್ಯಕ್ತಂ ಸ್ಯಾದಚೇತನಮ್ ।
ನಿತ್ಯತ್ವಾಚ್ಚಾಕ್ಷರತ್ವಾಚ್ಚ ಕ್ಷರತ್ವಾನ್ನ ತದನ್ಯಥಾ ॥೫॥

ಜ್ಞಾನಸ್ವರೂಪನಾದ ಪುರುಷನು ತನ್ನ ಜೊತೆಯಲ್ಲಿ ಇರುವನೆಂಬುದನ್ನು ತಿಳಿಯದಿರುವ ಕಾರಣದಿಂದಲೇ ಪ್ರಕೃತಿಯು ಜಡವಾಗಿದೆ. ಅದು ಕ್ಷರವೂ, ವಿಕಾರಶೀಲವೂ ಅಥವಾ ವಿನಾಶಶೀಲವೂ ಆಗಿರುವುದರಿಂದ ಪ್ರಕೃತಿಯು ಜಡವಲ್ಲದೆ ಬೇರೆ ಯಾವುದೂ ಆಗಲು ಸಾಧ್ಯವೇ ಇಲ್ಲ. ಪುರುಷನೂ ನಿತ್ಯನೂ, ಅಕ್ಷರನೂ (ಅವಿನಾಶಿಯೂ) ಆಗಿರುವುದರಿಂದ ಚೇತನನಾಗಿದ್ದಾನೆ.

ಯದಾಜ್ಞಾನೇನ ಕುರ್ವೀತ ಗುಣಸರ್ಗಂ ಪುನಃ ಪುನಃ ।
ಯದಾತ್ಮಾನಂ ನ ಜಾನೀತೇ ತದಾತ್ಮಾಪಿ ನ ಮುಚ್ಯತೇ ॥೬॥

ಆದರೆ ಚೇತನನು ಎಲ್ಲಿಯವರೆಗೆ ಅಜ್ಞಾನವಶನಾಗಿ ಪುನಃ ಪುನಃ ಗುಣಗಳ ಸಹವಾಸವನ್ನು ಮಾಡುತ್ತಲೇ ಇರುವನೋ ಮತ್ತು ತನ್ನ ಅಸಂಗ ಸ್ವರೂಪವನ್ನು ತಿಳಿದುಕೊಳ್ಳುವುದಿಲ್ಲವೋ–ಅಲ್ಲಿಯವರೆಗೂ ಅವನು ನಿತ್ಯನೂ, ಅಕ್ಷರನೂ, ಅವಿನಾಶಿಯೂ ಆದ ಆತ್ಮನೇ ಆಗಿದ್ದರೂ ಮುಕ್ತ ನಾಗುವುದಿಲ್ಲ.

ಕರ್ತೃತ್ವಾಚ್ಚಾಪಿ ಸರ್ಗಾಣಾಂ ಸರ್ಗಧರ್ಮಾ ತಥೋಚ್ಯತೇ ।
ಕರ್ತೃತ್ವಾಚ್ಚಾಪಿ ಯೋಗಾನಾಂ ಯೋಗಧರ್ಮಾ ತಥೋಚ್ಯತೇ ॥೭॥

ಚೇತನನು ತನ್ನನ್ನು ಸೃಷ್ಟಿಯ ಕರ್ತೃವೆಂದು ಭಾವಿಸಿಕೊಳ್ಳುವುದರಿಂದ ಅವನನ್ನು ಸರ್ಗಧರ್ಮನೆಂದು ಕರೆಯುತ್ತಾರೆ. ಯೋಗಾಭ್ಯಾಸಮಾಡುತ್ತಾ ಯೋಗಸಾಧಕನೆಂದು ಭಾವಿಸಿಕೊಂಡಾಗ ಅದೇ ಚೇತನನನ್ನು ಯೋಗ ಧರ್ಮನೆಂದೂ ಕರೆಯುತ್ತಾರೆ.

ಕರ್ತೃತ್ವಾತ್ಪ್ರಕೃತೀನಾಂ ಚ ತಥಾ ಪ್ರಕೃತಿಧರ್ಮಿತಾ ॥೮॥

ನಾನಾಪ್ರಕಾರವಾದ ಪ್ರಕೃತಿಧರ್ಮಗಳನ್ನು ತನ್ನದೆಂದು ಭಾವಿಸುವುದ ರಿಂದ ಚೇತನನು ಪ್ರಕೃತಿಧರ್ಮನೂ ಆಗುತ್ತಾನೆ.

ಕರ್ತೃತ್ವಾಚ್ಚಾಪಿ ಬೀಜಾನಾಂ ಬೀಜಧರ್ಮಾ ತಥೋಚ್ಯತೇ ।
ಗುಣಾನಾಂ ಪ್ರಸವತ್ವಾಚ್ಚ ಪ್ರಲಯತ್ವಾತ್ತಥೈವ ಚ ॥೯॥

ಗಿಡ-ಮರ-ಬಳ್ಳಿಗಳೇ ಮೊದಲಾದ ಸ್ಥಾವರಗಳ ಬೀಜಗಳ ಕರ್ತೃ ವಾದುದರಿಂದ ಚೇತನನನ್ನು ಬೀಜಧರ್ಮನೆಂದು ಹೇಳುತ್ತಾರೆ. ಗುಣಗಳ ಉತ್ಪತ್ತಿ ಮತ್ತು ಲಯಗಳಿಗೆ ಕಾರಣನಾದುದರಿಂದ ಗುಣಧರ್ಮನೆಂದೂ ಕರೆಯುತ್ತಾರೆ.

ಉಪೇಕ್ಷತ್ವಾದನನ್ಯತ್ವಾದಭಿಮಾನಾಚ್ಚ ಕೇವಲಮ್ ।
ಮನ್ಯನ್ತೇ ಯತಯಃ ಸಿದ್ಧಾ ಅಧ್ಯಾತ್ಮಜ್ಞಾ ಗತಜ್ವರಾಃ ।
ಅನಿತ್ಯಂ ನಿತ್ಯಮವ್ಯಕ್ತಂ ವ್ಯಕ್ತಮೇತದ್ಧಿ ಶುಶ್ರುಮ ॥೧೦॥

ಅಧ್ಯಾತ್ಮಶಾಸ್ತ್ರವನ್ನು ತಿಳಿದಿರುವ, ನಿರುದ್ವಿಗ್ನರಾದ, ಸಿದ್ಧರಾದ ಯತಿ ಗಳು ಪುರುಷನನ್ನು ಕೇವಲನೆಂದು (ಪ್ರಕೃತಿಯ ಸಂಗದಿಂದ ರಹಿತನಾದವ

ನೆಂದು) ಭಾವಿಸುತ್ತಾರೆ. ಏಕೆಂದರೆ : ಅವನು ಕೇವಲ ಸಾಕ್ಷಿಭೂತನಾದವನು ಮತ್ತು ಅದ್ವಿತೀಯನು. ಅಜ್ಞಾನವಶದಿಂದ ದೇಹಾಭಿಮಾನವನ್ನು ಹೊಂದಿರುವುದರಿಂದ ಚೇತನನು ಸುಖ-ದುಃಖಗಳನ್ನು ಅನುಭವಿಸುತ್ತಾನೆ. ವಾಸ್ತವವಾಗಿ ಚೇತನನು ನಿತ್ಯನೂ–ಅವ್ಯಕ್ತನೂ ಆಗಿದ್ದಾನೆ. ಆದರೆ ಪ್ರಕೃತಿಯ ಸಂಬಂಧದಿಂದಾಗಿ ಅನಿತ್ಯನಂತೆಯೂ–ವ್ಯಕ್ತನಂತೆಯೂ ಕಾಣುತ್ತಾನೆ.

ಅವ್ಯಕ್ತೈಕತ್ವಮಿತ್ಯಾಹುರ್ನಾನಾತ್ವಂ ಪುರುಷೇ ತಥಾ ।
ಸರ್ವಭೂತದಯಾವನ್ತಃ ಕೇವಲಂ ಜ್ಞಾನಮಾಸ್ಥಿತಾಃ ॥೧೧॥

ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ದಯಾಪರರಾಗಿರುವ ಮತ್ತು ಕೇವಲಜ್ಞಾನವನ್ನೇ ಆಶ್ರಯಿಸಿರುವ ಕೆಲವು ಸಾಂಖ್ಯವಿದ್ವಾಂಸರು ಪ್ರಕೃತಿಗೆ ಏಕತ್ವವನ್ನೂ, ಪುರುಷನಿಗೆ ನಾನಾತ್ವವನ್ನೂ ಹೇಳುತ್ತಾರೆ.

ಅನ್ಯಃ ಸ ಪುರುಷೋಽವ್ಯಕ್ತಸ್ತ್ವಧ್ರುವೋ ಧ್ರುವಸಂಜ್ಞಕಃ ।
ಯಥಾ ಮುಞ್ಜ ಇಷೀಕಾಣಾಂ ತಥೈವೈತದ್ಧಿ ಜಾಯತೇ ॥೧೨॥

ಪುರುಷನು ಪ್ರಕೃತಿಯಿಂದ ಭಿನ್ನನು ಹಾಗೂ ನಿತ್ಯನು. ಹಾಗೆಯೇ ಅವ್ಯಕ್ತವೂ (ಪ್ರಕೃತಿಯೂ) ಪುರುಷನಿಂದ ಭಿನ್ನವಾದುದು ಮತ್ತು ಅನಿತ್ಯವಾದುದು. ಹೇಗೆ ಜಂಬುಹುಲ್ಲಿನ ಮಧ್ಯದಲ್ಲಿ ಮುಂಜಹುಲ್ಲಿರುವುದೋ–ಹಾಗೆಯೇ ಪ್ರಕೃತಿಯ ಮಧ್ಯದಲ್ಲಿ ಪುರುಷನ ಆವಿರ್ಭಾವವಿದೆ.

ಅನ್ಯಚ್ಚ ಮಶಕಂ ವಿದ್ಯಾದನ್ಯಚ್ಚೋದುಮ್ಬರಂ ತಥಾ ।
ನ ಚೋದುಮ್ಬರಸಂಯೋಗೈರ್ಮಶಕಸ್ತತ್ರ ಲಿಪ್ಯತೇ ॥೧೩॥

ಅನ್ಯ ಏವ ತಥಾ ಮತ್ಸ್ಯಸ್ತದನ್ಯದುದಕಂ ಸ್ಮೃತಮ್ ।
ನ ಚೋದಕಸ್ಯ ಸ್ಪರ್ಶೇನ ಮತ್ಸ್ಯೋ ಲಿಪ್ಯತಿ ಸರ್ವಶಃ ॥೧೪॥

ಅತ್ತಿಯ ಹಣ್ಣಿನಲ್ಲಿ ಹುಳುಗಳಿರುವುದು ನಿಜ. ಆದರೆ ಹುಳುಗಳೂ ಮತ್ತು ಹಣ್ಣೂ ಒಂದೇ ಅಲ್ಲ. ಹುಳುಗಳೇ ಬೇರೆ–ಹಣ್ಣೇ ಬೇರೆ. ಹಣ್ಣಿನೊಡನೆ ಸಂಯೋಗವಿದ್ದರೂ ಹುಳುಗಳು ಹಣ್ಣಿನಲ್ಲಿ ಅಂಟಿಕೊಂಡಿರುವುದಿಲ್ಲ. ಮೀನು ನೀರಿನಲ್ಲಿರುತ್ತದೆ. ಮೀನನ್ನು ನೀರಿನಿಂದ ಪ್ರತ್ಯೇಕಿಸಲು ಸಾಧ್ಯ

ವಾಗುವುದಿಲ್ಲ. ಆದರೆ ಮತ್ಸ್ಯವೇ ಬೇರೆ–ನೀರೇ ಬೇರೆ. ಮೀನು ನೀರಿನಲ್ಲಿಯೇ ಸತತವಾಗಿದ್ದರೂ ನೀರಿನೊಂದಿಗೆ ಅಂಟಿಕೊಂಡಿರುವುದಿಲ್ಲ.

ಅನ್ಯೋ ಹ್ಯಗ್ನಿರುಖಾಪ್ಯನ್ಯಾ ನಿತ್ಯಮೇವಮವೇಹಿ ಭೋಃ ।
ನ ಚೋಪಲಿಪ್ಯತೇ ಸೋಽಗ್ನಿರುಖಾಸಂಸ್ಪರ್ಶನೇನ ವೈ ॥೧೫॥

ಅಗ್ನಿಯು ಉಖೆಯಲ್ಲಿಯೇ (ಅಗ್ನಿಯನ್ನಿಡುವ ಪಾತ್ರೆ) ಇರುತ್ತದೆ. ಆದರೆ ಅಗ್ನಿಯೇ ಬೇರೆ–ಉಖೆಯೇ ಬೇರೆ. ಉಖೆಯಲ್ಲಿದ್ದ ಮಾತ್ರದಿಂದ ಅಗ್ನಿಯು ಉಖೆಗೆ ಅಂಟಿಕೊಂಡಿರುವುದಿಲ್ಲ.

ಪುಷ್ಕರಂ ತ್ವನ್ಯದೇವಾತ್ರ ತಥಾನ್ಯದುದಕಂ ಸ್ಮೃತಮ್ ।
ನ ಚೋದಕಸ್ಯ ಸ್ಪರ್ಶೇನ ಲಿಪ್ಯತೇ ತತ್ರ ಪುಷ್ಕರಮ್ ॥೧೬॥

ಕಮಲವು ನೀರಿನಲ್ಲಿಯೇ ಇರುವ ವಸ್ತು. ಆದರೆ ಕಮಲವೇ ಬೇರೆ ನೀರೇ ಬೇರೆ. ನೀರಿನಲ್ಲಿರುವುದರಿಂದ ಕಮಲವು ನೀರಿಗೆ ಅಂಟಿಕೊಂಡಿರುವುದಿಲ್ಲ. ಹೀಗೆ ಪ್ರಕೃತಿಯಲ್ಲಿಯೇ ಪುರುಷನಿದ್ದರೂ ಪುರುಷನೇ ಬೇರೆ, ಪ್ರಕೃತಿಯೇ ಬೇರೆ. ಪುರುಷನು ಪ್ರಕೃತಿಯೊಡನಿದ್ದರೂ ಪ್ರಕೃತಿಗೆ ಅಂಟಿಕೊಂಡಿರುವುದಿಲ್ಲ.

ಏತೇಷಾಂ ಸಹವಾಸಂ ಚ ನಿವಾಸಂ ಚೈವ ನಿತ್ಯಶಃ ।
ಯಾಥಾತಥ್ಯೇನ ಪಶ್ಯನ್ತಿ ನ ನಿತ್ಯಂ ಪ್ರಾಕೃತಾ ಜನಾಃ ॥೧೭॥

ಯೇ ತ್ವನ್ಯಥೈವ ಪಶ್ಯನ್ತಿ ನ ಸಮ್ಯಕ್ತೇಷು ದರ್ಶನಮ್ ।
ತೇ ವ್ಯಕ್ತಂ ನಿರಯಂ ಘೋರಂ ಪ್ರವಿಶನ್ತಿ ಪುನಃ ಪುನಃ ॥೧೮॥

ಮಶಕಗಳಿಗೂ–ಅತ್ತೀಹಣ್ಣಿಗೂ, ಮೀನಿಗೂ–ನೀರಿಗೂ, ಅಗ್ನಿಗೂ–ಕುಂಡಕ್ಕೂ, ಕಮಲಕ್ಕೂ–ನೀರಿಗೂ ಇರುವ ಸಹವಾಸಗುಣಗಳನ್ನೂ, ಅವು ನಿತ್ಯವೂ ಹೇಗೆ ಅಲ್ಲಿಯೇ ಇರುತ್ತವೆಯೆಂಬುದನ್ನೂ, ಆದರೂ ಅವು ಬೇರೆ-ಬೇರೆ ಎಂಬುದನ್ನೂ–ಸಾಧಾರಣಮನುಷ್ಯರು ಯಥಾವತ್ತಾಗಿ ತಿಳಿದುಕೊಂಡಿರುವುದಿಲ್ಲ. ಹೀಗೆಯೇ ಯಾರು ಕೇವಲ ಸಹವಾಸ-ನಿವಾಸಗಳಿಂದಲೇ ನೀರಿಗೂ ಮತ್ತು ಮೀನಿಗೂ ಏಕತ್ವವನ್ನು ಹೇಳುವಂತೆ ಪ್ರಕೃತಿಗೂ ಪುರುಷನಿಗೂ ಏಕತ್ವವನ್ನೇ ಹೇಳುವರೋ, ಪುರುಷನು ಪ್ರಕೃತಿಗಿಂತಲೂ ಭಿನ್ನನೆಂದು

ಭಾವಿಸುವುದಿಲ್ಲವೋ–ಅಂತಹವರು ನಿಶ್ಚಯವಾಗಿಯೂ ಘೋರನರಕವನ್ನು ಪುನಃ ಪುನಃ ಪ್ರವೇಶಿಸುತ್ತಲೇ ಇರುತ್ತಾರೆ.

ಸಾಂಖ್ಯದರ್ಶನಮೇತತ್ತೇ ಪರಿಸಂಖ್ಯಾನಮುತ್ತಮಮ್ ।
ಏವಂ ಹಿ ಪರಿಸಂಖ್ಯಾಯ ಸಾಂಖ್ಯಾಃ ಕೇವಲತಾಂ ಗತಾಃ ॥೧೯॥

ಜನಕರಾಜ! ಹೀಗೆ ನಾನು ನಿನಗೆ ವಿಚಾರಪ್ರಧಾನವಾದ, ನಿಯಮ ಪೂರ್ವಕವಾದ ವಿಧಿಗಳಿಂದ ಕೂಡಿರುವ ಉತ್ತಮವಾದ ಸಾಂಖ್ಯದರ್ಶನ ವನ್ನು ಹೇಳಿದ್ದೇನೆ. ಸಾಂಖ್ಯವಿದ್ವಾಂಸರು ಈ ರೀತಿಯ ವಿಚಾರಮಂಥನದಿಂದ ಕೇವಲತ್ವವನ್ನು (ಕೈವಲ್ಯವನ್ನು) ಹೊಂದಿರುತ್ತಾರೆ.

ಯೇ ತ್ವನ್ಯೇ ತತ್ತ್ವಕುಶಲಾಸ್ತೇಷಾಮೇತನ್ನಿದರ್ಶನಮ್ ।
ಅತಃ ಪರಂ ಪ್ರವಕ್ಷ್ಯಾಮಿ ಯೋಗಾನಾಮನುದರ್ಶನಮ್ ॥೨೦॥

ತತ್ತ್ವಕುಶಲರಾದ ಇತರ ಯಾವ ವಿದ್ವಾಂಸರಿರುವರೋ–ಅವರ ಅಭಿಮತವೂ ಇದೇ ಆಗಿರುತ್ತದೆ. ನಾನು ಇನ್ನು ಮುಂದೆ ಯೋಗದ ದರ್ಶನವನ್ನು (ತತ್ತ್ವವನ್ನು) ಹೇಳುತ್ತೇನೆ."

ಞ೧೫ನೆಯ ಅಧ್ಯಾಯವು ಮುಗಿಯಿತು.

ಞ೧೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಯೋಗದ ವರ್ಣನೆ : ಯೋಗಸಾಧನೆಯಿಂದ ಪರಬ್ರಹ್ಮಪ್ರಾಪ್ತಿ

ಯುಧಿಷ್ಠಿರ! ಯಾಜ್ಞವಲ್ಕ್ಯರು ಹೇಳುತ್ತಾರೆ :

ಸಾಂಖ್ಯಜ್ಞಾನಂ ಮಯಾ ಪ್ರೋಕ್ತಂ ಯೋಗಜ್ಞಾನಂ ನಿಬೋಧ ಮೇ ।
ಯಥಾಶ್ರುತಂ ಯಥಾ ದೃಷ್ಟಂ ತತ್ತ್ವೇನ ನೃಪಸತ್ತಮ ॥೧॥

"ನೃಪಶ್ರೇಷ್ಠನೇ! ನಾನು ನಿನಗೆ ಸಾಂಖ್ಯಜ್ಞಾನವನ್ನು ಉಪದೇಶಿಸಿದೆನು. ಈಗ ಯೋಗಜ್ಞಾನವನ್ನು ನಾನು ಹೇಗೆ ಕೇಳಿರುವೆನೋ, ಹೇಗೆ ಅದನ್ನು ಅನುಭವದಲ್ಲಿ ಕಂಡುಕೊಂಡಿರುವೆನೋ–ಹಾಗೆಯೇ ಯಥಾವತ್ತಾಗಿ ಹೇಳುವೆನು ; ಕೇಳು.

ನಾಸ್ತಿ ಸಾಂಖ್ಯಸಮಂ ಜ್ಞಾನಂ ನಾಸ್ತಿ ಯೋಗಸಮಂ ಬಲಮ್ ।
ತಾವುಭಾವೇಕಚರ್ಯೌ ತಾವುಭಾವನಿಧನೌ ಸ್ಮೃತೌ ॥೨॥

ಸಾಂಖ್ಯಜ್ಞಾನಕ್ಕೆ ಸಮಾನವಾದ ಬೇರೆ ಜ್ಞಾನವೇ ಇಲ್ಲ. ಯೋಗಬಲಕ್ಕೆ ಸಮಾನವಾದ ಬೇರೆ ಬಲವೇ ಇಲ್ಲ. ಇವೆರಡರ ಲಕ್ಷ್ಯವೂ ಒಂದೇ ಆಗಿರುವುದು. ಇವೆರಡೂ ಮೃತ್ಯುವನ್ನು ನಿವಾರಿಸತಕ್ಕುವುಗಳೆಂದು ಹೇಳಲ್ಪಟ್ಟಿದೆ.

ಪೃಥಕ್ಪೃಥಕ್ಪ್ರಪಶ್ಯನ್ತಿ ಯೇಽಪ್ಯಬುದ್ಧಿರತಾ ನರಾಃ ।
ವಯಂ ತು ರಾಜನ್ಪಶ್ಯಾಮ ಏಕಮೇವ ತು ನಿಶ್ಚಯಾತ್ ॥೩॥

ಅಜ್ಞಾನದ ಕಾರಣದಿಂದಾಗಿ ಮನುಷ್ಯರು ಸಾಂಖ್ಯ-ಯೋಗಗಳೆರಡನ್ನೂ ಪ್ರತ್ಯೇಕವಾದುವೆಂದು ಹೇಳುತ್ತಾರೆ. ನಾವಾದರೋ ನಿಶ್ಚಯಬುದ್ಧಿಯಿಂದ ಇವೆರಡನ್ನೂ ಒಂದೇ ಎಂದು ಭಾವಿಸಿದ್ದೇವೆ.

ಯದೇವ ಯೋಗಾಃ ಪಶ್ಯನ್ತಿ ತತ್ಸಾಂಖ್ಯೈರಪಿ ದೃಶ್ಯತೇ ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ತತ್ತ್ವವಿತ್ ॥೪॥

ಯೋಗಿಗಳು ಯಾವ ಬ್ರಹ್ಮತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವರೋ ಸಾಂಖ್ಯರೂ ಅದನ್ನೇ ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ಸಾಂಖ್ಯ-ಯೋಗಗಳನ್ನು ಒಂದೇ ಎಂದು ಯಾವನು ತಿಳಿಯುವನೋ–ಅವನೇ ಪರಬ್ರಹ್ಮತತ್ತ್ವವನ್ನು ತಿಳಿದವನಾಗಿರುತ್ತಾನೆ.

ರುದ್ರಪ್ರಧಾನಾನಪರಾನ್ವಿದ್ಧಿ ಯೋಗಾನರಿಂದಮ ।
ತೇನೈವ ಚಾಥ ದೇಹೇನ ವಿಚರನ್ತಿ ದಿಶೋ ದಶ ॥೫॥

ಅರಿಂದಮನೇ! ಯೋಗಸಾಧನಗಳು ರುದ್ರನೇ* (ಪ್ರಾಣವೇ) ಪ್ರಧಾನವಾದುವುಗಳೆಂಬುದನ್ನು ತಿಳಿ. (ಯೋಗಕ್ಕೆ ಪ್ರಾಣವಾಯುವೇ ಪ್ರಧಾನವಾದ ಸಾಧನ.) ಪ್ರಾಣಗಳನ್ನು ನಿಯಂತ್ರಿಸುತ್ತಾ ಯೋಗಿಗಳು ಈ ಶರೀರದಿಂದಲೇ ಹತ್ತು ದಿಕ್ಕುಗಳಲ್ಲಿಯೂ ಸಂಚರಿಸುತ್ತಾರೆ.

---

* ರುದ್ರಾಃ : ಉತ್ಕ್ರಮಣಕಾಲೇ ದೇಹಿನಂ ರೋದಯನ್ತೀತಿ ರುದ್ರಾಃ ಅರ್ಥಾತ್ ಪ್ರಾಣಾಃ–ಶರೀರವನ್ನು ಬಿಟ್ಟು ಹೊರಟುಹೋಗುವ ಕಾಲದಲ್ಲಿ ದೇಹಿಯನ್ನು ರೋದಿಸುವಂತೆ ಮಾಡುವುದರಿಂದ ಪ್ರಾಣವಾಯುಗಳಿಗೆ ರುದ್ರರೆಂದು ಹೆಸರು–ಎಂದು ವ್ಯಾಖ್ಯಾನಕಾರರು ವಿವರಿಸಿದ್ದಾರೆ.

ಯಾವದ್ಧಿ ಪ್ರಲಯಸ್ತಾತ ಸೂಕ್ಷ್ಮೇಣಾಷ್ಟಗುಣೇನ ಹ ।
ಯೋಗೇನ ಲೋಕಾನ್ವಿಚರನ್ಸುಖಂ ಸಂನ್ಯಸ್ಯ ಚಾನಘ ॥೬॥

ಅನಘನೇ! ಯೋಗಿಯು ತನ್ನ ಯೋಗಬಲದಿಂದ ಸ್ಥೂಲಶರೀರವನ್ನು ಭೂಮಿಯಲ್ಲಿಯೇ ಬಿಟ್ಟು ಅಣಿಮಾದಿ ಅಷ್ಟೈಶ್ವರ್ಯಯುಕ್ತವಾದ ಸೂಕ್ಷ್ಮ ಶರೀರವನ್ನು ಧರಿಸಿ ಪ್ರಲಯಕಾಲದವರೆಗೂ ಲೋಕಾಂತರಗಳಲ್ಲಿ ಸುಖವಾಗಿ ಸಂಚರಿಸುತ್ತಿರುತ್ತಾನೆ.

ವೇದೇಷು ಚಾಷ್ಟಗುಣಿನಂ ಯೋಗಮಾಹುರ್ಮನೀಷಿಣಃ ।
ಸೂಕ್ಷ್ಮಮಷ್ಟಗುಣಂ ಪ್ರಾಹುರ್ನೇತರಂ ನೃಪಸತ್ತಮ ॥೭॥

ನೃಪಶ್ರೇಷ್ಠನೇ! ವೇದಗಳಲ್ಲಿ ಸ್ಥೂಲ ಮತ್ತು ಸೂಕ್ಷ್ಮಗಳೆಂಬ ಎರಡು ವಿಧವಾದ ಯೋಗವಿರುವುದೆಂದೂ–ಅಣಿಮಾದಿ ಎಂಟು ಸಿದ್ಧಿಗಳನ್ನು ಉಂಟುಮಾಡುವುದು ಸ್ಥೂಲಯೋಗವೆಂದೂ, ಯಮ-ನಿಯಮ-ಆಸನ-ಪ್ರಾಣಾಯಾಮ-ಪ್ರತ್ಯಾಹಾರ-ಧಾರಣಾ-ಧ್ಯಾನ ಮತ್ತು ಸಮಾಧಿಗಳೆಂಬ ಎಂಟು ಅಂಗಗಳಿಂದ ಕೂಡಿರುವುದು ಸೂಕ್ಷ್ಮಯೋಗವೆಂದೂ ವಿದ್ವಾಂಸರು ಹೇಳುತ್ತಾರೆ. ಈ ಎರಡಕ್ಕಿಂತಲೂ ಬೇರೆಯಾದುದಿಲ್ಲ.

ದ್ವಿಗುಣಂ ಯೋಗಕೃತ್ಯಂ ತು ಯೋಗಿನಾಂ ಪ್ರಾಹುರುತ್ತಮಮ್ ।
ಸಗುಣಂ ನಿರ್ಗುಣಂ ಚೈವ ಯಥಾ ಶಾಸ್ತ್ರನಿದರ್ಶನಮ್ ॥೮॥

ಯೋಗಿಗಳ ಯೋಗದ ಮುಖ್ಯಸಾಧನವನ್ನು ಸಗುಣ ಮತ್ತು ನಿರ್ಗುಣ (ಸಬೀಜ-ನಿರ್ಬೀಜ) ಎಂದು ಎರಡು ಪ್ರಕಾರವಾಗಿ ಹೇಳುತ್ತಾರೆ. ಇದು ಯೋಗಶಾಸ್ತ್ರದ ದೃಷ್ಟಾಂತವಾಗಿದೆ.

ಧಾರಣಂ ಚೈವ ಮನಸಃ ಪ್ರಾಣಾಯಾಮಶ್ಚ ಪಾರ್ಥಿವ ।
ಏಕಾಗ್ರತಾ ಚ ಮನಸಃ ಪ್ರಾಣಾಯಾಮಸ್ತಥೈವ ಚ ॥೯॥

ಮನಸ್ಸನ್ನು ಪೂರಕ-ಕುಂಭಕ-ರೇಚಕಗಳಲ್ಲಿ ಪ್ರಾಣವಾಯುವಿನೊಡನೆ ನಿರೋಧಿಸುವುದು ಪ್ರಾಣಾಯಾಮ. ಮನಸ್ಸನ್ನು ಪ್ರಾಣವಾಯುವಿನೊಡನೆ ಒಂದು ವಸ್ತುವಿನ ಮೇಲೆ ಏಕಾಗ್ರಗೊಳಿಸುವುದಕ್ಕೂ ಪ್ರಾಣಾಯಾಮವೆನ್ನುತ್ತಾರೆ. (ಮನಸ್ಸನ್ನು ಪೃಥಿವ್ಯಾದಿಸ್ಥಾನಗಳಲ್ಲಿ ಧಾರಣೆ

ಮಾಡುವುದು ಸಗುಣಪ್ರಾಣಾಯಾಮವೆಂದೂ ಆತ್ಮವಸ್ತುವಿನ ಮೇಲೆ ಏಕಾಗ್ರಗೊಳಿಸುವುದು ನಿರ್ಗುಣಪ್ರಾಣಾಯಾಮವೆಂದೂ ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ.)

ಪ್ರಾಣಾಯಾಮೋ ಹಿ ಸಗುಣೋ ನಿರ್ಗುಣಂ ಧಾರಯೇನ್ಮನಃ ।
ಯದ್ಯೃಶ್ಯತಿ ಮುಞ್ಚನ್ವೈ ಪ್ರಾಣಾನ್ಮೈಥಿಲಸತ್ತಮ ।
ವಾತಾಧಿಕ್ಯಂ ಭವತ್ಯೇವ ತಸ್ಮಾತ್ತಂ ನ ಸಮಾಚರೇತ್ ॥೧೦॥

ಸಗುಣಪ್ರಾಣಾಯಾಮವು ನಿರ್ಗುಣವಾದ ಮನಸ್ಸನ್ನು ಧರಿಸಿರುತ್ತದೆ. (ಪ್ರಾಣದೊಡನೆ ಮನಸ್ಸೂ ಸಗುಣದಲ್ಲಿಯೇ ಲೀನವಾಗಿರುತ್ತದೆ.) ಮಿಥಿಲಾಧಿಪನೇ! ರೇಚಕ-ಪೂರಕ-ಕುಂಭಕಗಳನ್ನು ಮಾಡುವಾಗ ಯಾವ ದೇವತೆಯನ್ನೂ ಸ್ಮರಿಸದೇ ಕೇವಲ ಅಭ್ಯಾಸಕ್ಕಾಗಿಯೇ ಮಾಡುತ್ತಿದ್ದರೆ ವಾಯುವಿನ ಪ್ರಕೋಪವುಂಟಾಗುತ್ತದೆ. ಆದುದರಿಂದ ಧ್ಯೇಯವಸ್ತುವಿಲ್ಲದೆ (ಅಮಂತ್ರಕವಾಗಿ) ಪ್ರಾಣಾಯಾಮವನ್ನು ಮಾಡಲೇಬಾರದು.[1]

ನಿಶಾಯಾಃ ಪ್ರಥಮೇ ಯಾಮೇ ಚೋದನಾ ದ್ವಾದಶ ಸ್ಮೃತಾಃ ।
ಮಧ್ಯೇ ಸ್ವಪ್ನಾತ್ಪರೇ ಯಾಮೇ ದ್ವಾದಶೈವ ತು ಚೋದನಾಃ ॥೧೧॥

ರಾತ್ರಿಯ ಮೊದಲನೆಯ ಯಾಮದಲ್ಲಿ ಪ್ರಾಣವಾಯುವನ್ನು ಹನ್ನೆರಡು ಪ್ರಕಾರವಾಗಿ ಪ್ರಚೋದಿಸಬೇಕು. ಅನಂತರ ಮಧ್ಯದಲ್ಲಿ ಎಂದರೆ ಎರಡು ಮತ್ತು ಮೂರನೆಯ ಯಾಮಗಳಲ್ಲಿ ನಿದ್ರೆಯನ್ನು ಮಾಡಿ ನಾಲ್ಕನೆಯ ಯಾಮದಲ್ಲಿ ಪುನಃ ಪ್ರಾಣವಾಯುವನ್ನು ಹನ್ನೆರಡು ಪ್ರಕಾರವಾಗಿ ಪ್ರಚೋದಿಸಬೇಕು.*

---

[1] ಪವನಯೋಗಪ್ರಸಂಗದಲ್ಲಿ ಈ ವಿಷಯವನ್ನು ಸ್ಪಷ್ಟವಾಗಿ ಹೇಳಿದ್ದಾರೆ : ಪ್ರಾಣಾಯಾಮೇನ ಯುಕ್ತೇನ ಸರ್ವರೋಗಕ್ಷಯೋ ಭವೇತ್ । ಅಯುಕ್ತಾಭ್ಯಾಸಯೋಗೇನ ಮಹಾರೋಗಸಮುದ್ಭವಃ ॥ ದೇವತಾಧ್ಯಾನಯುಕ್ತವಾದ ಪ್ರಾಣಾಯಾಮದಿಂದ ಸರ್ವ ರೋಗಗಳೂ ಕ್ಷಯಿಸುತ್ತವೆ. ದೇವತಾಧ್ಯಾನಯುಕ್ತವಾಗಿಲ್ಲದ ಅಭ್ಯಾಸದಿಂದ ಮಹಾರೋಗಗಳು ಹುಟ್ಟಿಕೊಳ್ಳುತ್ತವೆ.

* ವ್ಯಾಖ್ಯಾನಕಾರರು ಮೂಲಾಧಾರಾದಿ ನವಚಕ್ರಗಳನ್ನೂ - ಸಮಷ್ಟಿ, ಕಾರಣ ಮತ್ತು ನಿಷ್ಕಲಗಳೆಂಬ ಮೂರನ್ನೂ – ಸೇರಿಸಿ ಹನ್ನೆರಡು ಸ್ಥಾನಗಳಿಗೆ ಮನಸ್ಸನ್ನು ಪ್ರಾಣಾಯಾಮದ ಮೂಲಕವಾಗಿ ಪ್ರಚೋದಿಸಬೇಕೆಂದು ಹೇಳಿರುತ್ತಾರೆ. ಒಂದು

ತದೇವಮುಪಶಾನ್ತೇನ ದಾನ್ತೇನೈಕಾನ್ತಶೀಲಿನಾ ।
ಆತ್ಮಾರಾಮೇಣ ಬುದ್ಧೇನ ಯೋಕ್ತವ್ಯೋಽತ್ಮಾ ನ ಸಂಶಯಃ ॥೧೨॥

ಹೀಗೆ ಪ್ರಾಣಾಯಾಮದ ಮೂಲಕವಾಗಿ ಮನಸ್ಸನ್ನು ವಶಪಡಿಸಿಕೊಂಡು ಶಾಂತನಾದ, ಜಿತೇಂದ್ರಿಯನಾದ, ಏಕಾಂತಶೀಲನಾದ, ಆತ್ಮಾರಾಮನಾದ ಜ್ಞಾನಿಯು ಮನಸ್ಸನ್ನು ಪರಮಾತ್ಮನೊಡನೆ ಲೀನಗೊಳಿಸುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ಪಞ್ಚಾನಾಮಿನ್ದ್ರಿಯಾಣಾಂ ತು ದೋಷಾನಾಕ್ಷಿಪ್ಯ ಪಞ್ಚಧಾ ।
ಶಬ್ದಂ ರೂಪಂ ತಥಾ ಸ್ಪರ್ಶಂ ರಸಂ ಗನ್ಧಂ ತಥೈವ ಚ ॥೧೩॥

ಪ್ರತಿಭಾಮಪವರ್ಗಂ ಚ ಪ್ರತಿಸಂಹೃತ್ಯ ಮೈಥಿಲ ।
ಇನ್ದ್ರಿಯಗ್ರಾಮಮಖಿಲಂ ಮನಸ್ಯಭಿನಿವೇಶ್ಯ ಹ ॥೧೪॥

ಮನಸ್ತಥೈವಾಹಂಕಾರೇ ಪ್ರತಿಷ್ಠಾಪ್ಯ ನರಾಧಿಪ ।
ಅಹಂಕಾರಂ ತಥಾ ಬುದ್ಧೌ ಬುದ್ಧಿಂ ಚ ಪ್ರಕೃತಾವಪಿ ॥೧೫॥

ಏವಂ ಹಿ ಪರಿಸಂಖ್ಯಾಯ ತತೋ ಧ್ಯಾಯನ್ತಿ ಕೇವಲಮ್ ।
ವಿರಜಸ್ಕಮಲಂ ನಿತ್ಯಮನನ್ತಂ ಶುದ್ಧಮವ್ರಣಮ್ ॥೧೬॥
ತಸ್ಥುಷಂ ಪುರುಷಂ ನಿತ್ಯಮಭೇದ್ಯಮಜರಾಮರಮ್ ।
ಶಾಶ್ವತಂ ಚಾವ್ಯಯಂ ಚೈವ ಈಶಾನಂ ಬ್ರಹ್ಮ ಚಾವ್ಯಯಮ್ ॥೧೭॥

ಮಿಥಿಲಾಧಿಪತಿಯೇ! ಪಂಚೇಂದ್ರಿಯಗಳ ಐದು ದೋಷಗಳಾದ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳನ್ನು ತಿರಸ್ಕರಿಸಿ, ಹೊಸ-ಹೊಸದಾದ ವಿಷಯಗಳ ಆಲೋಚನೆಗಳನ್ನೂ ಮತ್ತು ಕರ್ಮಗಳನ್ನೂ ಉಪಸಂಹರಿಸಿ, ಸಕಲವಾದ ಇಂದ್ರಿಯಗಳ ಸಮೂಹವನ್ನೂ ಮನಸ್ಸಿನಲ್ಲಿ ಸ್ಥಿರಗೊಳಿಸಬೇಕು. ಮನಸ್ಸನ್ನು ಅಹಂಕಾರದಲ್ಲಿಯೂ, ಅಹಂಕಾರವನ್ನು ಬುದ್ಧಿಯಲ್ಲಿಯೂ, ಬುದ್ಧಿಯನ್ನು ಪ್ರಕೃತಿಯಲ್ಲಿಯೂ ಸ್ಥಾಪಿಸಬೇಕು. ಹೀಗೆ ಯೋಗಿಗಳು

ಪ್ರಾಣಾಯಾಮದಲ್ಲಿ ರೇಚಕ-ಪೂರಕ-ಕುಂಭಕಗಳೆಂಬ ಮೂರು ವಿಧವಾದ ಚೋದನೆಗಳಿರುತ್ತವೆ. ನಾಲ್ಕು ಪ್ರಾಣಾಯಾಮಗಳನ್ನು ಮಾಡಿದರೆ ಹನ್ನೆರಡು ಪ್ರಕಾರವಾದ ಚೋದನೆಗಳಾಗುತ್ತವೆ. ಪೂರ್ವರಾತ್ರಿ ಮತ್ತು ಅಪರರಾತ್ರಿಗಳಲ್ಲಿ ನಾಲ್ಕು-ನಾಲ್ಕು ಪ್ರಾಣಾಯಾಮಗಳನ್ನು ಮಾಡಬೇಕೆಂದೂ ಇದರ ಅರ್ಥವಾಗುತ್ತದೆ.

ಎಲ್ಲವನ್ನೂ ನಿಯಮಪೂರ್ವಕವಾಗಿ ವಿಲೀನಗೊಳಿಸಿ ಅನಂತರ ಕೇವಲ ಸ್ವರೂಪನಾದ, ರಜಸ್ಸಿನಿಂದ ರಹಿತನಾದ, ನಿರ್ಮಲನಾದ, ನಿತ್ಯನಾದ, ಅನಂತನಾದ, ಶುದ್ಧನಾದ, ವಿಕಾರರಹಿತನಾದ, ಕೂಟಸ್ಥನಾದ, ಅಂತರ್ಯಾಮಿಯಾದ, ಅಭೇದ್ಯನಾದ, ಅಜರನಾದ, ಅಮರನಾದ, ಶಾಶ್ವತನಾದ, ಶಾಸಕನಾದ ಪರಬ್ರಹ್ಮನನ್ನು ಧ್ಯಾನಮಾಡುತ್ತಾರೆ.

ಯುಕ್ತಸ್ಯ ತು ಮಹಾರಾಜ ಲಕ್ಷಣಾನ್ಯುಪಧಾರಯ ।
ಲಕ್ಷಣಂ ತು ಪ್ರಸಾದಸ್ಯ ಯಥಾ ತೃಪ್ತಃ ಸುಖಂ ಸ್ವಪೇತ್ ॥೧೮॥

ಮಹಾರಾಜ! ಈಗ ನಾನು ಸಮಾಧಿಸ್ಥನಾದ ಯೋಗಿಯ ಲಕ್ಷಣಗಳನ್ನು ಹೇಳುವೆನು ಕೇಳು. ಯಾವ ರೀತಿಯಲ್ಲಿ ತೃಪ್ತನಾದ ಮನುಷ್ಯನು ಸುಖವಾಗಿ ಮಲಗುವನೋ ಮತ್ತು ಅವನ ಮನಸ್ಸು ಎಷ್ಟು ಪ್ರಸನ್ನವಾಗಿರುವುದೋ – ಅದೇ ರೀತಿಯಲ್ಲಿ ಯೋಗಯುಕ್ತನಾದ ಯೋಗಿಯ ಚಿತ್ತವು ಸದಾ ಪ್ರಸನ್ನವಾಗಿರುತ್ತದೆ. ಇದು ಅವನ ಮನಃಪ್ರಸನ್ನತೆಯ ಲಕ್ಷಣವಾಗಿದೆ.

ನಿರ್ವಾತೇ ತು ಯಥಾ ದೀಪೋ ಜ್ವಲೇತ್ಸ್ನೇಹಸಮನ್ವಿತಃ ।
ನಿಶ್ಚಲೋರ್ಧ್ವಶಿಖಸ್ತದ್ವದ್ಯುಕ್ತಮಾಹುರ್ಮನೀಷಿಣಃ ॥೧೯॥

ಎಣ್ಣೆಯಿಂದ ಯುಕ್ತವಾದ ದೀಪವು ಗಾಳಿಯಿಲ್ಲದ ಸ್ಥಳದಲ್ಲಿ ಊರ್ಧ್ವ ಶಿಖವಾಗಿಯೂ ನಿಶ್ಚಲವಾಗಿಯೂ ಯಾವ ರೀತಿಯಲ್ಲಿ ಉರಿಯುವುದೋ– ಅದೇ ರೀತಿಯಲ್ಲಿ ಯೋಗಿಯ ಊರ್ಧ್ವಮುಖವಾದ ಮನಸ್ಸು ಆತ್ಮನಲ್ಲಿಯೇ ಸ್ಥಿರವಾಗಿರುವುದೆಂದು ವಿದ್ವಾಂಸರು ಹೇಳುತ್ತಾರೆ.

ಪಾಷಾಣ ಇವ ಮೇಘೋತ್ಥೈರ್ಯಥಾ ಬಿನ್ದುಭಿರಾಹತಃ ।
ನಾಲಂ ಚಾಲಯಿತುಂ ಶಕ್ಯಸ್ತಥಾ ಯುಕ್ತಸ್ಯ ಲಕ್ಷಣಮ್ ॥೨೦॥

ಯಾವ ರೀತಿಯಲ್ಲಿ ಮೇಘಗಳಿಂದ ಹೊರಬಂದ ಜಲಬಿಂದುಗಳಿಂದ ಪ್ರಹೃತವಾದ ಬಂಡೆಯು ಚಲಿಸುವುದಿಲ್ಲವೋ–ಅದೇ ರೀತಿಯಲ್ಲಿ ಯಾವುದೇ ವಿಧವಾದ ವಿಕ್ಷೇಪಗಳಿಂದಲೂ ಯೋಗಿಯ ಮನಸ್ಸು ವಿಚಲಿತವಾಗುವುದಿಲ್ಲ. ಇದು ಯೋಗಿಯ ಲಕ್ಷಣವಾಗಿದೆ.

ಶಙ್ಖದುನ್ದುಭಿನಿರ್ಘೋಷೈರ್ವಿವಿಧೈರ್ಗೀತವಾದಿತೈಃ ।
ಕ್ರಿಯಮಾಣೈರ್ನ ಕಮ್ಪೇತ ಯುಕ್ತಸ್ಯೈತನ್ನಿದರ್ಶನಮ್ ॥೨೧॥

ಶಂಖ-ದುಂದುಭಿಗಳ ಧ್ವನಿಗಳಿಂದಾಗಲೀ, ವಿಧ-ವಿಧವಾದ ಗೀತ-ವಾದನಗಳಿಂದಾಗಲೀ ಸಮಾಧಿಸ್ಥನಾದ ಯೋಗಿಯ ಮನಸ್ಸು ವಿಚಲಿತವಾಗುವುದಿಲ್ಲ. ಯೋಗಿಯು ಸುದೃಢವಾದ ಸಮಾಧಿಯಲ್ಲಿರುವನೆಂಬುದಕ್ಕೆ ಇದು ದೃಷ್ಟಾಂತವಾಗಿದೆ.

ತೈಲಪಾತ್ರಂ ಯಥಾ ಪೂರ್ಣಂ ಕರಾಭ್ಯಾಂ ಗೃಹ್ಯ ಪೂರುಷಃ ।
ಸೋಪಾನಮಾರುಹೇದ್ಭೀತಸ್ತರ್ಜ್ಯಮಾನೋಽಸಿಪಾಣಿಭಿಃ ॥೨೨॥

ಸಂಯತಾತ್ಮಾ ಭಯಾತ್ತೇಷಾಂ ನ ಪಾತ್ರಾದ್ಬಿನ್ದುಮುತ್ಸೃಜೇತ್ ।
ತಥೈವೋತ್ತರಮಾಗಮ್ಯ ಏಕಾಗ್ರಮನಸಸ್ತಥಾ ॥೨೩॥

ಸ್ಥಿರತ್ವಾದಿನ್ದ್ರಿಯಾಣಾಂ ತು ನಿಶ್ಚಲತ್ವಾತ್ತಥೈವ ಚ ।
ಏವಂ ಯುಕ್ತಸ್ಯ ತು ಮುನೇರ್ಲಕ್ಷಣಾನ್ಯುಪಲಕ್ಷಯೇತ್ ॥೨೪॥

ಯಾವ ರೀತಿಯಲ್ಲಿ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡಿರುವ ಮನುಷ್ಯನೊಬ್ಬನು ತುಂಬಿದ ಎಣ್ಣೆಯ ಗಡಿಗೆಯನ್ನು ಕೈಗಳಲ್ಲಿ ಎತ್ತಿಕೊಂಡು ಮೆಟ್ಟಲುಗಳನ್ನು ಹತ್ತಿಹೋಗುತ್ತಿರುವಾಗ ಕತ್ತಿಗಳನ್ನು ಹಿಡಿದಿರುವ ಹಲವರು ಬಂದು ಹೆದರಿಸುತ್ತಿದ್ದರೂ ಅವರಿಗೆ ಭಯಪಟ್ಟು ಒಂದು ತೊಟ್ಟು ಎಣ್ಣೆಯನ್ನಾದರೂ ಕೆಳಕ್ಕೆ ಚೆಲ್ಲಲು ಬಿಡುವುದಿಲ್ಲವೋ – ಅದೇ ರೀತಿಯಲ್ಲಿ ಯೋಗದ ಉನ್ನತಶ್ರೇಣಿಯನ್ನು (ಸಮಾಧಿಯೋಗವನ್ನು) ಮುಟ್ಟಿರುವ ಏಕಾಗ್ರಚಿತ್ತನಾದ ಯೋಗಿಯು ಇಂದ್ರಿಯಗಳ ಸ್ಥಿರತೆಯಿಂದಲೂ, ಮನಸ್ಸಿನ ಅಚಾಂಚಲ್ಯದಿಂದಲೂ ಸಮಾಧಿಯಿಂದ ವಿಚಲಿತನಾಗುವುದೇ ಇಲ್ಲ. ಯೋಗಯುಕ್ತನಾದ ಮುನಿಯಾಗಿದ್ದರೆ ಅವನಲ್ಲಿ ಇಂತಹ ಲಕ್ಷಣಗಳನ್ನು ಕಾಣಬಹುದು.

ಸ್ವಯುಕ್ತಃ ಪಶ್ಯತೇ ಬ್ರಹ್ಮ ಯತ್ತತ್ಪರಮಮವ್ಯಯಮ್ ।
ಮಹತಸ್ತಮಸೋ ಮಧ್ಯೇ ಸ್ಥಿತಂ ಜ್ವಲನಸಂನಿಭಮ್ ॥೨೫॥

ಯಾವನು ಸಮಾಧಿಸ್ಥನಾಗಿರುವನೋ – ಅಂತಹ ಯೋಗಿಯು

ಮಹತ್ತರವಾದ ಅಂಧಕಾರದ ಮಧ್ಯದಲ್ಲಿ ದೇದೀಪ್ಯಮಾನನಾಗಿ ಪ್ರಕಾಶಿಸುವ ಅಗ್ನಿಯಂತಿರುವ, ಅವಿನಾಶಿಯಾದ, ಜ್ಞಾನಸ್ವರೂಪನಾದ ಪರಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಏತೇನ ಕೇವಲಂ ಯಾತಿ ತ್ಯಕ್ತ್ವಾ ದೇಹಮಸಾಕ್ಷಿಕಮ್ ।
ಕಾಲೇನ ಮಹತಾ ರಾಜಞ್ಶ್ರುತಿರೇಷಾ ಸನಾತನೀ ॥೨೬॥

ಈ ಯೋಗಸಾಧನದ ಮೂಲಕವಾಗಿ ಮನುಷ್ಯನು ದೀರ್ಘಕಾಲಾ ನಂತರ ಅಚೇತನವಾದ ಈ ದೇಹವನ್ನು ಪರಿತ್ಯಜಿಸಿ ಪ್ರಕೃತಿಯ ಸಂಸರ್ಗದಿಂದ ರಹಿತನಾದ ಅದ್ವಿತೀಯನಾದ ಪರಬ್ರಹ್ಮಪರಮಾತ್ಮನನ್ನು ಹೊಂದುತ್ತಾನೆ–ಎಂಬುದು ಸನಾತನಶ್ರುತಿಯಾಗಿದೆ.

ಏತದ್ಧಿ ಯೋಗಂ ಯೋಗಾನಾಂ ಕಿಮನ್ಯದ್ಯೋಗಲಕ್ಷಣಮ್ ।
ವಿಜ್ಞಾಯ ತದ್ಧಿ ಮನ್ಯನ್ತೇ ಕೃತಕೃತ್ಯಾ ಮನೀಷಿಣಃ ॥೨೭॥

ಇದೇ ಯೋಗಿಗಳ ಯೋಗವಾಗಿದೆ. ಇದನ್ನು ಬಿಟ್ಟರೆ ಯೋಗಕ್ಕೆ ಬೇರೆ ಯಾವ ಲಕ್ಷಣವಿರಲು ಸಾಧ್ಯವಿದೆ? ಯೋಗಕ್ಕೆ ಸಂಬಂಧಿಸಿದ ಈ ವಿಷಯ ವನ್ನು ತಿಳಿದ ವಿದ್ವಾಂಸರು ತಾವು ಕೃತಕೃತ್ಯರಾದೆವೆಂದು ಭಾವಿಸುತ್ತಾರೆ.”

ಇ೧೬ನೆಯ ಅಧ್ಯಾಯವು ಮುಗಿಯಿತು.

ಇ೧೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ವಿಭಿನ್ನವಾದ ಅಂಗಗಳಿಂದ ಪ್ರಾಣವು ಹೋಗುವುದರ ಫಲಗಳು : ಮೃತ್ಯುಸೂಚಕಲಕ್ಷಣಗಳು : ಮೃತ್ಯುವನ್ನು ಜಯಿಸುವ ಉಪಾಯ

ಯಾಜ್ಞವಲ್ಕ್ಯರು ಹೇಳುತ್ತಾರೆ :

ತಥೈವೋತ್ಕ್ರಮಮಾಣಂ ತು ಶೃಣುಷ್ವಾವಹಿತೋ ನೃಪ ।
ಪದ್ಭ್ಯಾಮುತ್ಕ್ರಮಮಾಣಸ್ಯ ವೈಷ್ಣವಂ ಸ್ಥಾನಮುಚ್ಯತೇ ॥೧॥

“ನರೇಶ್ವರ! ಪ್ರಾಣೋತ್ಕ್ರಮಣದ ಸಮಯದಲ್ಲಿ ಯೋಗಸಾಧಕನ

ಯಾವ ಯಾವ ಭಾಗಗಳಿಂದ ಪ್ರಾಣವು ಹೊರಹೊರಟರೆ–ಅವನಿಗೆ ಎಂತೆಂತಹ ಗತಿಯು ಸಿಕ್ಕುವುದೆಂಬುದನ್ನು ಹೇಳುವೆನು. ಏಕಾಗ್ರಚಿತ್ತನಾಗಿ ಕೇಳು. ಪಾದಗಳ ಮೂಲಕವಾಗಿ ಪ್ರಾಣೋತ್ಕ್ರಮಣವಾದರೆ ಆ ಯೋಗಿಯು ವಿಷ್ಣುಪದವನ್ನು ಸೇರುತ್ತಾನೆ.

ಜಙ್ಘಾಭ್ಯಾಂ ತು ವಸೂನ್ದೇವಾನಾಪ್ನುಯಾದಿತಿ ನಃ ಶ್ರುತಮ್ ।
ಜಾನುಭ್ಯಾಂ ಚ ಮಹಾಭಾಗಾನ್ಸಾಧ್ಯಾನ್ದೇವಾನವಾಪ್ನುಯಾತ್ ॥೨॥

ಮೊಣಕಾಲುಗಳ ಮೂಲಕವಾಗಿ ಪ್ರಾಣೋತ್ಕ್ರಮಣವಾದರೆ ಅವನು ವಸುಗಳೆಂಬ ದೇವತೆಗಳ ಲೋಕವನ್ನು ಸೇರುತ್ತಾನೆ. ಮಂಡಿಗಳ ಮೂಲಕ ವಾಗಿ ಪ್ರಾಣೋತ್ಕ್ರಮಣವಾದರೆ ಮಹಾಭಾಗರಾದ ಸಾಧ್ಯರೆಂಬ ದೇವತೆಗಳ ಲೋಕವನ್ನು ಸೇರುತ್ತಾನೆ.

ಪಾಯುನೋತ್ಕ್ರಮಮಾಣಸ್ತು ಮೈತ್ರಂ ಸ್ಥಾನಮವಾಪ್ನುಯಾತ್ ।
ಪೃಥಿವೀಂ ಜಘನೇನಾಥ ಊರುಭ್ಯಾಂ ಚ ಪ್ರಜಾಪತಿಮ್ ॥೩॥

ಗುದದ್ವಾರದಿಂದ ಪ್ರಾಣೋತ್ಕ್ರಮಣವಾದರೆ ಮೈತ್ರದೇವತೆಯ ಉತ್ತಮಸ್ಥಾನವನ್ನು ಯೋಗಿಯು ಪಡೆಯುತ್ತಾನೆ. ಜಘನಪ್ರದೇಶದಿಂದ (ಸೊಂಟದ ಮುಂಭಾಗದಿಂದ) ಪ್ರಾಣೋತ್ಕ್ರಮಣವಾದರೆ ಪೃಥಿವೀ ದೇವತೆಯ ಸ್ಥಾನವನ್ನು ಪಡೆಯುತ್ತಾನೆ. ತೊಡೆಗಳ ಮೂಲಕವಾಗಿ ಪ್ರಾಣೋತ್ಕ್ರಮಣವಾದರೆ ಪ್ರಜಾಪತಿಯ ಲೋಕಕ್ಕೆ ಹೋಗುತ್ತಾನೆ.

ಪಾರ್ಶ್ವಾಭ್ಯಾಂ ಮರುತೋ ದೇವಾನ್ನಾಭ್ಯಾಮಿನ್ದ್ರತ್ವಮೇವ ಚ ।
ಬಾಹುಭ್ಯಾಮಿನ್ದ್ರಮೇವಾಹುರುರಸಾ ರುದ್ರಮೇವ ಚ ॥೪॥

ಪಕ್ಕೆಗಳ ಮೂಲಕವಾಗಿ ಪ್ರಾಣೋತ್ಕ್ರಮಣವಾದರೆ ಯೋಗಿಯು ಮರುದ್ದೇವತೆಗಳ ಲೋಕವನ್ನು ಹೊಂದುತ್ತಾನೆ. ಹೊಕ್ಕಳಿನ ಮೂಲಕವಾಗಿ ಪ್ರಾಣೋತ್ಕ್ರಮಣವಾದರೆ ಇಂದ್ರಪದವಿಯನ್ನೇ ಹೊಂದುತ್ತಾನೆ. ತೋಳುಗಳ ಮೂಲಕವಾಗಿ ಪ್ರಾಣೋತ್ಕ್ರಮಣವಾದರೂ ಇಂದ್ರನ ಪದವಿಯನ್ನೇ ಪಡೆಯುತ್ತಾನೆ. ವಕ್ಷಃಸ್ಥಳದ ಮೂಲಕವಾಗಿ ಪ್ರಾಣೋತ್ಕ್ರಮಣವಾದರೆ ರುದ್ರನ ಲೋಕವನ್ನು ಯೋಗಿಯು ಹೊಂದುತ್ತಾನೆ.

ಗ್ರೀವಯಾ ತು ಮುನಿಶ್ರೇಷ್ಠಂ ನರಮಾಪ್ನೋತ್ಯನುತ್ತಮಮ್ ।
ವಿಶ್ವೇದೇವಾನ್ಮುಖೇನಾಥ ದಿಶಃ ಶ್ರೋತ್ರೇಣ ಚಾಪ್ನುಯಾತ್ ॥೫॥

ಕುತ್ತಿಗೆಯ ಮೂಲಕವಾಗಿ ಪ್ರಾಣೋತ್ಕ್ರಮಣವಾದರೆ ಮುನಿಗಳಲ್ಲಿ ಶ್ರೇಷ್ಠನಾದ ನರನ ಉತ್ತಮೋತ್ತಮವಾದ ಸಾನ್ನಿಧ್ಯವನ್ನು ಹೊಂದುತ್ತಾನೆ. ಮುಖದಿಂದ ಪ್ರಾಣೋತ್ಕ್ರಮಣವಾದರೆ ವಿಶ್ವೇದೇವತೆಗಳ ಲೋಕವನ್ನು ಹೊಂದುತ್ತಾನೆ. ಕಿವಿಯ ಮೂಲಕವಾಗಿ ಪ್ರಾಣೋತ್ಕ್ರಮಣವಾದರೆ ದಿಗಧಿದೇವತೆಗಳ ಸ್ಥಾನವನ್ನು ಹೊಂದುತ್ತಾನೆ.

ಘ್ರಾಣೇನ ಗನ್ಧವಹನಂ ನೇತ್ರಾಭ್ಯಾಮಗ್ನಿಮೇವ ಚ ।
ಭ್ರೂಭ್ಯಾಂ ಚೈವಾಶ್ವಿನೌ ದೇವೌ ಲಲಾಟೇನ ಪಿತೄನಥ ॥೬॥

ಮೂಗಿನ ಮೂಲಕವಾಗಿ ಪ್ರಾಣೋತ್ಕ್ರಮಣವಾದರೆ ಯೋಗಿಯು ವಾಯುದೇವನ ಸ್ಥಾನವನ್ನೂ, ಕಣ್ಣುಗಳ ಮೂಲಕವಾಗಿ ಪ್ರಾಣೋತ್ಕ್ರಮಣವಾದರೆ ಅಗ್ನಿಯ ಸ್ಥಾನವನ್ನೂ, ಹುಬ್ಬುಗಳ ಮೂಲಕವಾಗಿ ಪ್ರಾಣೋತ್ಕ್ರಮಣವಾದರೆ ಅಶ್ವಿನೀದೇವತೆಗಳ ಸ್ಥಾನವನ್ನೂ, ಹಣೆಯ ಮೂಲಕವಾಗಿ ಪ್ರಾಣೋತ್ಕ್ರಮಣವಾದರೆ ಪಿತೃದೇವತೆಗಳ ಲೋಕಗಳನ್ನೂ ಯೋಗಿಯು ಹೊಂದುತ್ತಾನೆ.

ಬ್ರಹ್ಮಾಣಮಾಪ್ನೋತಿ ವಿಭುಂ ಮೂರ್ಧ್ನಾ ದೇವಾಗ್ರಜಂ ತಥಾ ।
ಏತಾನ್ಯುತ್ಕ್ರಮಣಸ್ಥಾನಾನ್ಯುಕ್ತಾನಿ ಮಿಥಿಲೇಶ್ವರ ॥೭॥

ತಲೆಯ ಮೂಲಕವಾಗಿ ಪ್ರಾಣೋತ್ಕ್ರಮಣವಾದರೆ ಯೋಗಿಯು ದೇವತೆಗಳ ಅಗ್ರಜನಾದ ಬ್ರಹ್ಮನ ಲೋಕವನ್ನು ಹೊಂದುತ್ತಾನೆ. ಯೋಗಿಗೆ ಯಾವ ಯಾವ ಸ್ಥಾನಗಳಿಂದ ಪ್ರಾಣೋತ್ಕ್ರಮಣವಾಗುತ್ತದೆ ಮತ್ತು ಅವನು ಯಾವ ಪುಣ್ಯಲೋಕಗಳನ್ನು ಪಡೆಯುತ್ತಾನೆ–ಎಂಬುದನ್ನು ಹೇಳಿಯಾಯಿತು.

ಅರಿಷ್ಟಾನಿ ಪ್ರವಕ್ಷ್ಯಾಮಿ ವಿಹಿತಾನಿ ಮನೀಷಿಭಿಃ ।
ಸಂವತ್ಸರವಿಯೋಗಸ್ಯ ಸಮ್ಭವನ್ತಿ ಶರೀರಿಣಃ ॥೮॥

ಯೋಗಿಯ ಮರಣವಿಷಯದಲ್ಲಿ ವಿದ್ವಾಂಸರು ಹೇಳಿರುವ ಮರಣ ಸೂಚಕವಾದ ಚಿಹ್ನೆಗಳು ಯಾವುವೆಂಬುದನ್ನು ಮುಂದೆ ಹೇಳುತ್ತೇನೆ.

ಯೋಗಿಯ ಅವಸಾನಕಾಲವು ಇನ್ನೂ ಒಂದು ವರ್ಷವಿದೆಯೆನ್ನುವಾಗಲೇ ಅವನಲ್ಲಿ ಇಂತಹ ಕುರುಹುಗಳು ಕಂಡುಬರುತ್ತವೆ.

ಯೋಽರುನ್ಧತೀಂ ನ ಪಶ್ಯೇತ ದೃಷ್ಟಪೂರ್ವಾಂ ಕದಾಚನ ।
ತಥೈವ ಧ್ರುವಮಿತ್ಯಾಹುಃ ಪೂರ್ಣೇನ್ದುಂ ದೀಪಮೇವ ಚ ।
ಖಣ್ಡಾಭಾಸಂ ದಕ್ಷಿಣತಸ್ತೇಽಪಿ ಸಂವತ್ಸರಾಯುಷಃ ॥೯॥

ಹಿಂದೆ ದೃಷ್ಟಿಗೋಚರವಾಗುತ್ತಿದ್ದ ಅರುಂಧತೀನಕ್ಷತ್ರವನ್ನಾಗಲೀ ಧ್ರುವನಕ್ಷತ್ರವನ್ನಾಗಲೀ ಯಾರು ಕಾಣುವುದಿಲ್ಲವೋ, ದಕ್ಷಿಣದಿಕ್ಕಿಗಿರುವ ಪೂರ್ಣಚಂದ್ರನನ್ನು ಮತ್ತು ದೀಪವನ್ನು ತುಂಡಾಗಿರುವಂತೆ ಯಾರು ಕಾಣುತ್ತಾರೆಯೋ–ಅಂತಹವರು ಮುಂದೆ ಒಂದು ವರ್ಷದವರೆಗೆ ಮಾತ್ರವೇ ಜೀವಿಸಿರುತ್ತಾರೆ.

ಪರಚಕ್ಷುಷಿ ಚಾತ್ಮಾನಂ ಯೇ ನ ಪಶ್ಯನ್ತಿ ಪಾರ್ಥಿವ ।
ಆತ್ಮಚ್ಛಾಯಾಕೃತೀಭೂತಂ ತೇಽಪಿ ಸಂವತ್ಸರಾಯುಷಃ ॥೧೦॥

ಯಾರ ನೆಳಲನ್ನು ಇತರರು ಕಾಣುವುದಿಲ್ಲವೋ–ಅಂತಹವರೂ ಕೂಡ ವರ್ಷದವರೆಗೆ ಮಾತ್ರವೇ ಆಯುಷ್ಯವುಳ್ಳವರಾಗಿರುತ್ತಾರೆ.

ಅತಿದ್ಯುತಿರತಿಪ್ರಜ್ಞಾ ಅಪ್ರಜ್ಞಾ ಚಾದ್ಯುತಿಸ್ತಥಾ ।
ಪ್ರಕೃತೇರ್ವಿಕ್ರಿಯಾಪತ್ತಿಃ ಷಣ್ಮಾಸಾನ್ಮೃತ್ಯುಲಕ್ಷಣಮ್ ॥೧೧॥

ಮನುಷ್ಯನಿಗೆ ಇದ್ದಕ್ಕಿದ್ದಂತೆಯೇ ಹೆಚ್ಚು ತೇಜಸ್ಸುಂಟಾಗುವುದು ಮತ್ತು ಬುದ್ಧಿಮತ್ತೆಯು ಅಧಿಕವಾಗುವುದು – ಇವು ಅವನು ಆರೇ ತಿಂಗಳಲ್ಲಿ ಮೃತ್ಯುವಶನಾಗುವನೆಂಬುದನ್ನು ಸೂಚಿಸುತ್ತದೆ. ಇದ್ದ ಬುದ್ಧಿಯು ಮಂಕಾಗಿಬಿಡುವುದು, ಇದ್ದಕ್ಕಿದ್ದಂತೆಯೇ ಕಳೆಗುಂದುವುದು ಮತ್ತು ಸ್ವಭಾವದಲ್ಲಿ ಬಹಳ ವ್ಯತ್ಯಾಸವಾಗುವುದು–ಈ ಕುರುಹುಗಳೂ ಮನುಷ್ಯನು ಆರು ತಿಂಗಳಲ್ಲಿ ಮೃತ್ಯುವಶನಾಗುವನೆಂಬುದನ್ನು ಸೂಚಿಸುತ್ತದೆ.

ದೈವತಾನ್ಯವಜಾನಾತಿ ಬ್ರಾಹ್ಮಣೈಶ್ಚ ವಿರುಧ್ಯತೇ ।
ಕೃಷ್ಣಶ್ಯಾವಚ್ಛವಿಚ್ಛಾಯಃ ಷಣ್ಮಾಸಾನ್ಮೃತ್ಯುಲಕ್ಷಣಮ್ ॥೧೨॥

ಕಪ್ಪುಬಣ್ಣದವನಾಗಿದ್ದವನು ಕಂದು ಹಳದೀಬಣ್ಣಕ್ಕೆ ತಿರುಗಿದರೆ,

ದೇವತೆಗಳನ್ನು ಅನಾದರಣೆಮಾಡುವ ಮತ್ತು ಬ್ರಾಹ್ಮಣರನ್ನು ವಿರೋಧಿಸುವ ಸ್ವಭಾವವು ಉಂಟಾದರೆ–ಈ ಲಕ್ಷಣಗಳು ಅಂತಹ ಮನುಷ್ಯನು ಆರು ತಿಂಗಳಲ್ಲಿ ಮೃತ್ಯುವಶನಾಗುವನೆಂಬುದನ್ನು ಸೂಚಿಸುತ್ತವೆ.

ಊರ್ಣನಾಭೇರ್ಯಥಾ ಚಕ್ರಂ ಛಿದ್ರಂ ಸೋಮಂ ಪ್ರಪಶ್ಯತಿ ।
ತಥೈವ ಚ ಸಹಸ್ರಾಂಶುಂ ಸಪ್ತರಾತ್ರೇಣ ಮೃತ್ಯುಭಾಕ್ ॥೧೩॥

ಸೂರ್ಯಮಂಡಲವನ್ನು ಮತ್ತು ಚಂದ್ರಮಂಡಲವನ್ನು ಜೇಡರ ಹುಳುವಿನ ಬಲೆಯಂತೆ ಛಿದ್ರಯುಕ್ತವನ್ನಾಗಿ ಕಾಣುವ ಮನುಷ್ಯನಿಗೆ ಏಳು ರಾತ್ರಿಗಳ ಅಂತರದಲ್ಲಿಯೇ ಮೃತ್ಯುವು ಸಂಭವಿಸುತ್ತದೆ.

ಶವಗನ್ಧಮುಪಾಘ್ರಾತಿ ಸುರಭಿಂ ಪ್ರಾಪ್ಯ ಯೋ ನರಃ ।
ದೇವತಾಯತನಸ್ಥಸ್ತು ಸಪ್ತರಾತ್ರೇಣ ಮೃತ್ಯುಭಾಕ್ ॥೧೪॥

ದೇವಸ್ಥಾನದಲ್ಲಿ ಕುಳಿತಿರುವಾಗ ಅಲ್ಲಿ ಬರುತ್ತಿರುವ ಸುಗಂಧವನ್ನು ಶವದ ದುರ್ವಾಸನೆಯಂತೆ ಯಾವನು ಅನುಭವಿಸುವನೋ (ಸರ್ವತ್ರ ಪ್ರಸರಿಸುತ್ತಿರುವ ಸುಗಂಧವು ಯಾವನ ಮೂಗಿಗೆ ಹೆಣದ ವಾಸನೆಯಂತೆ ಭಾಸವಾಗುವುದೋ)–ಅಂತಹವನು ಏಳು ದಿವಸಗಳಲ್ಲಿಯೇ ಸಾವನ್ನಪ್ಪುತ್ತಾನೆ.

ಕರ್ಣನಾಸಾವನಮನಂ ದನ್ತದೃಷ್ಟಿವಿರಾಗಿತಾ ।
ಸಂಜ್ಞಾಲೋಪೋ ನಿರೂಷ್ಮತ್ವಂ ಸದ್ಯೋಮೃತ್ಯುನಿದರ್ಶನಮ್ ॥೧೫॥
ಅಕಸ್ಮಾಚ್ಚ ಸ್ರವೇದ್ಯಸ್ಯ ವಾಮಮಕ್ಷಿ ನರಾಧಿಪ ।
ಮೂರ್ಧತಶ್ಚೋತ್ಪತೇದ್ಧೂಮಃ ಸದ್ಯೋಮೃತ್ಯುನಿದರ್ಶನಮ್ ॥೧೬॥

ಇದ್ದಕ್ಕಿದ್ದಂತೆಯೇ ಯಾವನ ಕಿವಿ ಮತ್ತು ಮೂಗುಗಳು ವಕ್ರವಾಗಿ ಜೋಲುಬೀಳುವುವೋ, ಹಲ್ಲುಗಳು ಮತ್ತು ದೃಷ್ಟಿಯು ಬಣ್ಣಗೆಡುವುವೋ, ಯಾವನಿಗೆ ಸಂಜ್ಞೆಯು ಲೋಪವಾಗಿರುವುದೋ (ಜ್ಞಾನವಿರುವುದಿಲ್ಲವೋ), ಶರೀರವು ತಣ್ಣಗಾಗಿಬಿಟ್ಟಿರುವುದೋ, ಆಕಸ್ಮಿಕವಾಗಿ ಎಡಗಣ್ಣಿನಿಂದ ನೀರು ಸುರಿಯುವುದೋ, ತಲೆಯಲ್ಲಿ ಹೊಗೆಯು ಕಾಣಿಸಿಕೊಳ್ಳುವುದೋ–ಅಂತಹವನಿಗೆ ಒಡನೆಯೇ ಮೃತ್ಯುವು ಸಂಭವಿಸುತ್ತದೆ.

ಏತಾವನ್ತಿ ತ್ವರಿಷ್ಟಾನಿ ವಿದಿತ್ವಾ ಮಾನವೋಽತ್ಮವಾನ್ ।
ನಿಶಿ ಚಾಹನಿ ಚಾತ್ಮಾನಂ ಯೋಜಯೇತ್ಪರಮಾತ್ಮನಿ ॥೧೭॥

ಪ್ರತೀಕ್ಷಮಾಣಸ್ತತ್ಕಾಲಂ ಯತ್ಕಾಲಂ ಪ್ರೇತತಾ ಭವೇತ್ ॥೧೮॥

ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡಿರುವ ಸಾಧಕನು ಮೃತ್ಯು ಸೂಚಕವಾದ ಈ ಲಕ್ಷಣಗಳನ್ನು ತಿಳಿದುಕೊಂಡು ಯಾವ ಕಾಲದಲ್ಲಿ ಪ್ರೇತತ್ವವುಂಟಾಗುವುದೋ ಎಂಬುದನ್ನು ಪ್ರತೀಕ್ಷಿಸುತ್ತಾ ಹಗಲು-ರಾತ್ರಿಗಳೆನ್ನದೇ ಸರ್ವಕಾಲದಲ್ಲಿಯೂ ಮನಸ್ಸನ್ನು ಪರಮಾತ್ಮನಲ್ಲಿ ಯೋಜಿಸಿಯೇ ಇರಬೇಕು. (ಸರ್ವಕಾಲದಲ್ಲಿಯೂ ಪರಮಾತ್ಮನ ಧ್ಯಾನದಲ್ಲಿಯೇ ತತ್ಪರನಾಗಿರಬೇಕು.)

ಅಥಾಸ್ಯ ನೇಷ್ಟಂ ಮರಣಂ ಸ್ಥಾತುಮಿಚ್ಛೇದಿಮಾಂ ಕ್ರಿಯಾಮ್ ।
ಸರ್ವಗನ್ಧಾನ್ರಸಾಂಶ್ಚೈವ ಧಾರಯೀತ ನರಾಧಿಪ ॥೧೯॥

ಒಂದು ವೇಳೆ ಯೋಗಿಯಾದವನಿಗೆ ಮರಣಹೊಂದುವುದು ಇಷ್ಟವಿಲ್ಲದಿದ್ದರೆ ಈ ಜಗತ್ತಿನಲ್ಲಿಯೇ ಇರಲು ಇಷ್ಟಪಡುವುದಾದರೆ–ಅವನು ಈ ಕಾರ್ಯವನ್ನು ಮಾಡಬೇಕು. ಹಿಂದೆ ಹೇಳಿದ ರೀತಿಯಲ್ಲಿ ಪಂಚಭೂತಗಳನ್ನು ಶರೀರದ ಆಯಾ ಸ್ಥಾನಗಳಲ್ಲಿ ನಿರ್ದಿಷ್ಟಕಾಲದವರೆಗೆ ಧಾರಣೆಮಾಡಿ, ಪೃಥಿವಿಯೇ ಮೊದಲಾದ ತತ್ತ್ವಗಳನ್ನು ಜಯಿಸಿ, ತನ್ಮೂಲಕವಾಗಿ ಅವುಗಳಿಗೆ ಸಂಬಂಧಿಸಿದ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳನ್ನು ಧಾರಣೆ ಮಾಡಿಕೊಳ್ಳಬೇಕು.*

ಸಸಾಂಖ್ಯಧಾರಣಂ ಚೈವ ವಿದಿತಾತ್ಮಾ ನರರ್ಷಭ ।
ಜಯೇಚ್ಚ ಮೃತ್ಯುಂ ಯೋಗೇನ ತತ್ಪರೇಣಾನ್ತರಾತ್ಮನಾ ॥೨೦॥

ನರಶ್ರೇಷ್ಠನೇ! ಸಾಂಖ್ಯ ಮತ್ತು ಯೋಗಗಳ ಅನುಸಾರವಾಗಿ ಧಾರಣಾಪೂರ್ವಕವಾಗಿ ಆತ್ಮತತ್ತ್ವವನ್ನು ತಿಳಿದುಕೊಂಡು ಧ್ಯಾನಯೋಗದ

---

* ಧಾರಣೆಯ ಮೂಲಕವಾಗಿ ಯೋಗಿಯು ಪಂಚಭೂತಗಳನ್ನೂ ಜಯಿಸಿದ್ದೇ ಆದರೆ–ಅವನಿಗೆ ಹುಟ್ಟು, ಸಾವು ಮತ್ತು ಮುಪ್ಪುಗಳ ಭಯವಿಲ್ಲವೆಂದು ಯೋಗಶಾಸ್ತ್ರದಲ್ಲಿ ಹೇಳಿದೆ. ಪೃಥ್ವ್ಯಪ್ತೇಜೋಽನಿಲಖೇ ಸಮುತ್ಥಿತೇ ಪಞ್ಚಾತ್ಮಕೇ ಯೋಗ-ಗುಣೇ ಪ್ರವೃತ್ತೇ । ನ ತಸ್ಯ ರೋಗೋ ನ ಜರಾ ನ ಮೃತ್ಯುಃ ಪ್ರಾಪ್ತಸ್ಯ ಯೋಗಾಗ್ನಿಮಯಂ ಶರೀರಮ್ ॥ ಧ್ಯಾನಯೋಗದ ಸಾಧನವನ್ನು ಮಾಡುತ್ತಿರುವ ಯೋಗಿಗೆ

ಮೂಲಕವಾಗಿ ಅಂತರಾತ್ಮನನ್ನು ಪರಮಾತ್ಮನಲ್ಲಿ ಯೋಜಿಸುವುದರ ಮೂಲಕ ಯೋಗಿಯು ಮೃತ್ಯುವನ್ನು ಜಯಿಸುತ್ತಾನೆ.

ಗಚ್ಛೇತ್ಪ್ರಾಪ್ಯಾಕ್ಷಯಂ ಕೃತ್ಸ್ನಮಜನ್ಮ ಶಿವಮವ್ಯಯಮ್ ।
ಶಾಶ್ವತಂ ಸ್ಥಾನಮಚಲಂ ದುಷ್ಪ್ರಾಪಮಕೃತಾತ್ಮಭಿಃ ॥೨೧॥

ಹೀಗೆ ಮಾಡುವುದರಿಂದ ಸಾಧಕನು ಜಿತೇಂದ್ರಿಯರಲ್ಲದವರಿಂದ ಸಾಧಿಸಲು ಅಸಾಧ್ಯವಾದ, ಅಕ್ಷಯವಾದ, ಜನ್ಮರಹಿತವಾದ, ಮಂಗಳಕರವಾದ, ಅವಿನಾಶಿಯಾದ, ಶಾಶ್ವತವಾದ ಮತ್ತು ಸ್ಥಿರವಾದ ಪರಬ್ರಹ್ಮವನ್ನು ಹೊಂದುತ್ತಾನೆ.”

ಇ೧೭ನೆಯ ಅಧ್ಯಾಯವು ಮುಗಿಯಿತು.

ಇ೧೮ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಯಾಜ್ಞವಲ್ಕ್ಯರು ಸೂರ್ಯನಿಂದ ವೇದಗಳನ್ನು ಪಡೆದುಕೊಂಡ ಪ್ರಸಂಗವನ್ನು ಜನಕನಿಗೆ ಹೇಳಿದುದು : ವಿಶ್ವಾವಸುವಿಗೆ ಜೀವಾತ್ಮ-ಪರಮಾತ್ಮರ ಏಕತೆಯ ಉಪದೇಶ

ಯಾಜ್ಞವಲ್ಕ್ಯರು ಹೇಳುತ್ತಾರೆ :

ಅವ್ಯಕ್ತಸ್ಥಂ ಪರಂ ಯತ್ತತ್ಪೃಷ್ಟಸ್ತೇಽಹಂ ನರಾಧಿಪ ।
ಪರಂ ಗುಹ್ಯಮಿಮಂ ಪ್ರಶ್ನಂ ಶೃಣುಷ್ವಾವಹಿತೋ ನೃಪ ॥೧॥

“ನರೇಶ್ವರನೇ! ನೀನು ಅವ್ಯಕ್ತದಲ್ಲಿರುವ ಪರಬ್ರಹ್ಮನ ವಿಷಯದಲ್ಲಿ ಯಾವ ಪ್ರಶ್ನೆಯನ್ನು ಕೇಳಿದೆಯೋ–ಆ ಪ್ರಶ್ನೆಯು ಅತ್ಯಂತಗಹನವಾದುದು. ಏಕಾಗ್ರಚಿತ್ತನಾಗಿ ಕೇಳು.

ಯಾವಾಗ ಪೃಥ್ವೀ, ಜಲ, ತೇಜಸ್ಸು, ವಾಯು ಮತ್ತು ಆಕಾಶ–ಈ ಪಂಚಭೂತಗಳ ಉತ್ಥಾನವಾಗುವುದೋ ಅಥವಾ ಈ ಪಂಚಭೂತಗಳ ಮೇಲೆ ಅಧಿಕಾರವುಂಟಾಗುವುದೋ–ಆಗ ಪಂಚಭೂತಗಳ ಸಂಬಂಧವಾದ ಪಂಚಸಿದ್ಧಿಗಳು ಪ್ರಾಪ್ತವಾಗುತ್ತವೆ. ಯೋಗಾಗ್ನಿಮಯವಾದ ಶರೀರವನ್ನು ಹೊಂದಿರುವ ಆ ಯೋಗಿಗೆ ರೋಗಗಳಾಗಲೀ, ಜರಾ-ಮರಣಗಳಾಗಲೀ ಸಂಭವಿಸುವುದಿಲ್ಲ. ಅವನ ಇಚ್ಛೆಯಿಲ್ಲದೇ ಅವನ ಶರೀರವು ನಷ್ಟಹೊಂದುವುದಿಲ್ಲ. ಅವನು ಚಿರಂಜೀವಿಯಾಗಿಯೇ ಇರಬಲ್ಲನು.

ಯಥಾರ್ಷೇಣೇಹ ವಿಧಿನಾ ಚರತಾವನತೇನ ಹ ।
ಮಯಾದಿತ್ಯಾದವಾಪ್ತಾನಿ ಯಜೂಂಷಿ ಮಿಥಿಲಾಧಿಪ ॥೨॥

ಮಿಥಿಲೇಶ್ವರನೇ! ಹಿಂದೆ ನಾನು ಶಾಸ್ತ್ರಗಳ ವಿಧಿಗೆ ಅನುಸಾರವಾಗಿ ವ್ರತಾಚರಣೆಗಳನ್ನು ಮಾಡಿ ವಿನಮ್ರನಾಗಿ ಸೂರ್ಯಭಗವಂತನಿಂದ ಯಜುಸ್ಸುಗಳನ್ನು (ಶುಕ್ಲಯಜುರ್ವೇದವನ್ನು) ಹೇಗೆ ಪಡೆದುಕೊಂಡೆನೆಂಬುದನ್ನು ಹೇಳುವೆನು, ಕೇಳು.

ಅನಘನೇ! ಹಿಂದೆ ನಾನು ಮಹಾತಪಸ್ಸಿನ ಮೂಲಕವಾಗಿ ಸೂರ್ಯಭಗವಂತನನ್ನು ಆರಾಧಿಸುತ್ತಿದ್ದೆನು. ನನ್ನ ತಪಸ್ಸಿನಿಂದ ಪ್ರಸನ್ನನಾದ, ವಿಭುವಾದ ಸೂರ್ಯದೇವನು ಪ್ರತ್ಯಕ್ಷನಾಗಿ ಹೇಳಿದನು :

ವರಂ ವೃಣೀಷ್ವ ವಿಪ್ರರ್ಷೇ ಯದಿಷ್ಟಂ ತೇ ಸುದುರ್ಲಭಮ್ ।
ತತ್ತೇ ದಾಸ್ಯಾಮಿ ಪ್ರೀತಾತ್ಮಾ ಮತ್ಪ್ರಸಾದೋ ಹಿ ದುರ್ಲಭಃ ॥೪॥

"ವಿಪ್ರರ್ಷಿಯೇ! ಸುದುರ್ಲಭವಾಗಿದ್ದರೂ ನಿನಗೆ ಇಷ್ಟವಾದ ವರವನ್ನು ಕೇಳು. ಪ್ರೀತಾತ್ಮನಾದ ನಾನು ನಿನಗೆ ಆ ವರವನ್ನು ದಯಪಾಲಿಸುತ್ತೇನೆ. ನನ್ನ ಪ್ರಸನ್ನತೆಯೆಂಬುದು ಪ್ರಾಯಶಃ ಎಲ್ಲರಿಗೂ ಸುದುರ್ಲಭವೇ ಸರಿ."

ಸೂರ್ಯದೇವನು ಹೀಗೆ ಹೇಳಿದನಂತರ ನಾನು ಸೂರ್ಯನಿಗೆ ತಲೆಬಾಗಿ ನಮಸ್ಕರಿಸಿ ಹೇಳಿದೆನು :

ಯಜೂಂಷಿ ನೋಪಯುಕ್ತಾನಿ ಕ್ಷಿಪ್ರಮಿಚ್ಛಾಮಿ ವೇದಿತುಮ್ ॥೬॥

"ಸೂರ್ಯದೇವ! ಇದುವರೆಗೂ ಯಾರಿಂದಲೂ ಉಪಯೋಗಿಸಲ್ಪಡದಿರುವ ಯಜುಸ್ಸುಗಳನ್ನು ಬಹಳ ಬೇಗ ತಿಳಿಯಬೇಕೆಂದಿರುತ್ತೇನೆ."

ಸೂರ್ಯಭಗವಂತನನ್ನು ನಾನು ಹೀಗೆ ಪ್ರಾರ್ಥಿಸಲಾಗಿ, ಸೂರ್ಯದೇವನು–"ಬ್ರಾಹ್ಮಣನೇ! ನಾನು ನಿನಗೆ ಯಜುರ್ವೇದವನ್ನು ಪ್ರದಾನ ಮಾಡುತ್ತೇನೆ. ಬಾಯನ್ನು ಅಗಲವಾಗಿ ತೆರೆ. ವಾಗ್ಭೂತಳಾದ ಸರಸ್ವತಿಯು ನಿನ್ನ ಶರೀರವನ್ನು ಪ್ರವೇಶಿಸುತ್ತಾಳೆ"–ಎಂಬುದಾಗಿ ಹೇಳಿದನು.

ಸೂರ್ಯದೇವನ ಆದೇಶದಂತೆ ನಾನು ಬಾಯನ್ನು ಅಗಲವಾಗಿ ತೆರೆದುಕೊಂಡೆನು. ಅಗಲವಾಗಿದ್ದ ನನ್ನ ಬಾಯೊಳಗೆ ಸರಸ್ವತಿಯು ಪ್ರವೇಶಿಸಿದಳು. ಸರಸ್ವತಿಯು ಬಾಯಿಯ ಮೂಲಕವಾಗಿ ನನ್ನನ್ನು ಪ್ರವೇಶಿಸಿದೊಡನೆಯೇ ಭಾಸ್ಕರನ ಮಾಹಾತ್ಮ್ಯವನ್ನು ತಿಳಿಯದಿದ್ದ ಅಸಹನಶೀಲನಾದ ನನ್ನ ಶರೀರವೆಲ್ಲವೂ ಬೆಂದುಹೋಗುತ್ತಿರುವುದೋ ಎಂಬಂತೆ ಭಾಸವಾಗುತ್ತಿದ್ದಿತು. ಆ ಬೇಗೆಯನ್ನು ತಾಳಲಾರದೇ ನಾನು ನೀರಿನಲ್ಲಿ ಮುಳುಗಿದೆನು. ಹೀಗೆ ದಹಿಸಲ್ಪಡುತ್ತಿದ್ದ ನನ್ನನ್ನು ನೋಡಿ ಸೂರ್ಯಭಗವಂತನು ಹೇಳಿದನು :

ಮುಹೂರ್ತಂ ಸಹ್ಯತಾಂ ದಾಹಸ್ತತಃ ಶೀತೀಭವಿಷ್ಯತಿ ॥೯॥

"ಮಹರ್ಷಿಯೇ! ಒಂದು ಮುಹೂರ್ತಕಾಲ ಈ ತಾಪವನ್ನು ಸಹಿಸು. ಅನಂತರ ಶೈತ್ಯವುಂಟಾಗುತ್ತದೆ."

ಸೂರ್ಯಭಗವಂತನು ಹೇಳಿದಂತೆಯೇ ಒಂದು ಮುಹೂರ್ತಕಾಲವು ಕಳೆದಕೂಡಲೇ ನನ್ನ ಶರೀರವು ಶೀತೀಭೂತವಾಯಿತು. ಉದ್ವಿಗ್ನವಾಗಿದ್ದ ನನ್ನ ಮನಸ್ಸೂ ಶಾಂತವಾಯಿತು. ನಾನು ಶೀತೀಭೂತನಾದುದನ್ನು ಕಂಡು ಪುನಃ ಭಾಸ್ಕರನು ನನ್ನೊಡನೆ ಹೇಳಿದನು :

ಪ್ರತಿಷ್ಠಾಸ್ಯತಿ ತೇ ವೇದಃ ಸಖಿಲಃ ಸೋತ್ತರೋ ದ್ವಿಜ ॥೧೦॥

"ವಿಪ್ರವರನೇ! ಖಿಲಗಳಿಂದಲೂ ಮತ್ತು ಉಪನಿಷತ್ತುಗಳಿಂದಲೂ ಸಹಿತವಾದ ಸಂಪೂರ್ಣವೇದವೂ ನಿನ್ನಲ್ಲಿ ಪ್ರತಿಷ್ಠಿತವಾಗುತ್ತದೆ.

ಕೃತ್ಸ್ನಂ ಶತಪಥಂ ಚೈವ ಪ್ರಣೇಷ್ಯಸಿ ದ್ವಿಜರ್ಷಭ ।
ತಸ್ಯಾನ್ತೇ ಚಾಪುನರ್ಭಾವೇ ಬುದ್ಧಿಸ್ತವ ಭವಿಷ್ಯತಿ ॥೧೧॥

ದ್ವಿಜಶ್ರೇಷ್ಠನೇ! ನೀನು ಸಂಪೂರ್ಣವಾದ ಶತಪಥಬ್ರಾಹ್ಮಣವನ್ನು ರಚಿಸಿದನಂತರ ನಿನ್ನ ಬುದ್ಧಿಯು ಮೋಕ್ಷಮಾರ್ಗದಲ್ಲಿಯೇ ಸ್ಥಿರವಾಗಿರುವುದು.

ಪ್ರಾಪ್ಸ್ಯಸೇ ಚ ಯದಿಷ್ಟಂ ತತ್ಸಾಂಖ್ಯಯೋಗೇಪ್ಸಿತಂ ಪದಮ್ ।

ಸಾಂಖ್ಯರಿಗೂ ಮತ್ತು ಯೋಗಿಗಳಿಗೂ ಯಾವ ಪರಮಪದವು ಇಷ್ಟವಾಗಿರುವುದೋ–ಅದನ್ನೇ ನೀನೂ ಪಡೆದುಕೊಳ್ಳುವೆ."

ಜನಕರಾಜ! ಹೀಗೆ ಹೇಳಿ ಸೂರ್ಯಭಗವಂತನು ಅದೃಶ್ಯನಾದನು. (ಅಸ್ತಂಗತನಾದನು.)

ಸೂರ್ಯನು ಹೇಳಿದುದನ್ನು ಕೇಳಿ, ದೇವದೇವನಾದ ದಿವಾಕರನು ಹೊರಟುಹೋದನಂತರ (ಅದೃಶ್ಯನಾದನಂತರ) ನಾನು ಪರಮಹೃಷ್ಟನಾಗಿ ಮನೆಗೆ ಆಗಮಿಸಿ ಸರಸ್ವತೀದೇವಿಯನ್ನು ಸ್ಮರಿಸಿದೆನು. ನಾನು ಸ್ಮರಿಸಿದ ಕೂಡಲೇ ಸ್ವರ ಮತ್ತು ವ್ಯಂಜನವರ್ಣಗಳಿಂದ ವಿಭೂಷಿತಳಾದ ಅತ್ಯಂತ ಮಂಗಲಮಯಿಯಾದ ಸರಸ್ವತೀದೇವಿಯು ಓಂಕಾರವನ್ನು ಉಚ್ಚರಿಸುತ್ತಾ ನನ್ನ ಮುಂದೆ ನಿಂತಳು. ಆಗ ನಾನು ಸರಸ್ವತೀದೇವಿಗೂ, ತಾಪವನ್ನುಂಟು ಮಾಡುವವರಲ್ಲಿ (ಪ್ರಕಾಶಿಸುವವರಲ್ಲಿ) ಶ್ರೇಷ್ಠನಾದ ಸೂರ್ಯಭಗವಂತನಿಗೂ ವಿಧಿಪೂರ್ವಕವಾಗಿ ಅರ್ಘ್ಯಪ್ರದಾನಮಾಡಿ ಅವರನ್ನೇ ಧ್ಯಾನ ಮಾಡುತ್ತಾ ಕುಳಿತೆನು. (ಸರಸ್ವತೀದೇವಿಯು ನನ್ನಲ್ಲಿಯೇ ಪ್ರತಿಷ್ಠಿತಳಾದಳು.) ಆಗ ನಾನು ಅತ್ಯಂತಹರ್ಷದಿಂದ ರಹಸ್ಯದಿಂದಲೂ, ಸಂಗ್ರಹದಿಂದಲೂ ಮತ್ತು ಪರಿಶಿಷ್ಟದಿಂದಲೂ ಯುಕ್ತವಾದ ಸಮಗ್ರವಾದ ಶತಪಥ ಬ್ರಾಹ್ಮಣವನ್ನು ರಚಿಸಿದೆನು. ಅನಂತರ ನಾನು ನೂರು ಮಂದಿ ಉತ್ತಮ ಶಿಷ್ಯರಿಗೆ ಆ ಶತಪಥಬ್ರಾಹ್ಮಣವನ್ನು ಅಧ್ಯಯನಮಾಡಿಸಿದೆನು. ಬಳಿಕ ನಾನು (ನನ್ನನ್ನು ಹಿಂದೆ ತಿರಸ್ಕಾರಭಾವದಿಂದ ಕಂಡಿದ್ದ) ಶಿಷ್ಯಸಹಿತನಾಗಿದ್ದ, ಮಹಾತ್ಮನಾದ, ನನ್ನ ಸೋದರಮಾವನಾದ ವೈಶಂಪಾಯನನಿಗೆ ಪ್ರತೀಕಾರ ಮಾಡುವ ಸಲುವಾಗಿ ಕಿರಣಗಳಿಂದ ಕೂಡಿದ ಸೂರ್ಯನಂತೆ ಶತಶಿಷ್ಯರಿಂದ ಸಮೇತನಾಗಿ ಮಿಥಿಲಾಪಟ್ಟಣಕ್ಕೆ ಹೋಗಿ ಮಹಾತ್ಮನಾದ ನಿನ್ನ ತಂದೆಯನ್ನು ಯಜ್ಞದಲ್ಲಿ ತೊಡಗಿಸಿದೆನು. ಆ ಸಮಯದಲ್ಲಿ ನಾನು ಸೂರ್ಯನಿಂದ ಕಲಿತ ವೇದಕ್ಕೆ ಸಂಬಂಧಿಸಿದಂತೆ ದಕ್ಷಿಣೆಯನ್ನು ಪಡೆಯುವ ವಿಷಯದಲ್ಲಿ ನನಗೂ ಮತ್ತು ನನ್ನ ಮಾವನಾದ ವೈಶಂಪಾಯನನಿಗೂ ಘರ್ಷಣೆಯಾಗುತ್ತಿದ್ದಾಗ ಮಾತುಲಪಕ್ಷೀಯನಾದ ದೇವಲನು ನೋಡುತ್ತಿದ್ದಂತೆಯೇ ನನಗೆ ಸಲ್ಲಬೇಕಾಗಿದ್ದ ಅರ್ಧಭಾಗ ದಕ್ಷಿಣೆಯನ್ನು ನಾನು ತೆಗೆದುಕೊಂಡುಬಿಟ್ಟೆನು. ಅನಂತರ ಸುಮಂತು, ಪೈಲ, ಜೈಮಿನೀ ಇವರೊಡನೆ ಘರ್ಷಣೆಯಾಗುತ್ತಿದ್ದಾಗ ನಿನ್ನ ತಂದೆ ಮತ್ತು ಅಲ್ಲಿದ್ದ ಇತರ ಋಷಿಗಳೆಲ್ಲರೂ ನನ್ನನ್ನು ಆದರಿಸಿ ಗೌರವಿಸಿದರು. ಅನಘನೇ! ಈ ಪ್ರಕಾರವಾಗಿ

ನಾನು ಸೂರ್ಯಭಗವಂತನಿಂದ ಶುಕ್ಲಯಜುರ್ವೇದದ ಹದಿನೈದು ಶಾಖೆಗಳನ್ನೂ ಪಡೆದುಕೊಂಡೆನು. ಹಾಗೆಯೇ ರೋಮಹರ್ಷಣಸೂತನಿಂದ ಪುರಾಣಗಳ ಅಧ್ಯಯನವನ್ನು ಮಾಡಿದೆನು. ಹೀಗೆ ನಾನು ಬೀಜರೂಪವಾದ ಪ್ರಣವವನ್ನೂ – ಸರಸ್ವತೀದೇವಿಯನ್ನೂ ಮುಂದಿಟ್ಟುಕೊಂಡು ಸೂರ್ಯಭಗವಂತನ ಕೃಪೆಯಿಂದ ಶತಪಥಬ್ರಾಹ್ಮಣವನ್ನು ರಚಿಸಲು ಪ್ರಾರಂಭಿಸಿ ಅಪೂರ್ವವಾದ ಆ ಗ್ರಂಥವನ್ನು ಸಂಪೂರ್ಣವಾಗಿ ಮುಗಿಸಿದೆನು. ಯಾವ ಮೋಕ್ಷಮಾರ್ಗವು ನನಗೆ ಅಭೀಷ್ಟವಾಗಿದ್ದಿತೋ–ಅದನ್ನೇ ನಾನು ಆ ಶತಪಥಬ್ರಾಹ್ಮಣದಲ್ಲಿ ಯುಕ್ತಿಯಿಂದ ಸಮರ್ಥಿಸಿದ್ದೇನೆ. ಬಳಿಕ ನಾನು ಸಂಗ್ರಹಯುಕ್ತವಾದ ಸಮಗ್ರವಾದ ಶತಪಥಬ್ರಾಹ್ಮಣವನ್ನು ಶಿಷ್ಯರಿಗೆ ಹೇಳಿಕೊಟ್ಟು ಅವರು ಮನೆಗಳಿಗೆ ಹೋಗುವಂತೆ ಅನುಮತಿಸಿದೆನು. ಪರಿಶುದ್ಧರಾಗಿದ್ದ ನನ್ನ ಆ ಎಲ್ಲ ಶಿಷ್ಯರೂ ಶತಪಥಬ್ರಾಹ್ಮಣವನ್ನು ನನ್ನಿಂದ ಅಧ್ಯಯನಮಾಡಿ ಪರಮಹರ್ಷಿತರಾಗಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಹೀಗೆ ಸೂರ್ಯಭಗವಂತನ ಮೂಲಕವಾಗಿ ಉಪದಿಷ್ಟವಾದ ಸಕಲ ವಿದ್ಯಾರೂಪವಾದ ಶುಕ್ಲಯಜುರ್ವೇದದ ಹದಿನೈದು ಶಾಖೆಗಳನ್ನೂ ಹೃದ್ಗತ ಮಾಡಿಕೊಂಡು ಮುಂದೆ ನನ್ನ ಇಚ್ಛಾನುಸಾರವಾಗಿ ವೇದ್ಯನಾದ ಪರಬ್ರಹ್ಮ ಪರಮಾತ್ಮನನ್ನು ಚಿಂತಿಸತೊಡಗಿದೆನು.

ಆ ಸಮಯಕ್ಕೆ ಸರಿಯಾಗಿ ವೇದಾಂತಜ್ಞಾನದಲ್ಲಿ ಸುಕುಶಲನಾಗಿದ್ದ, ವಿಶ್ವಾವಸುವೆಂಬ ಗಂಧರ್ವನು ನನ್ನ ಬಳಿಗೆ ಬಂದು ಅಧ್ಯಾತ್ಮದ ವಿಷಯವಾಗಿಯೇ ನನ್ನನ್ನು ಪ್ರಶ್ನಿಸಿದನು :

ಕಿಮತ್ರ ಬ್ರಹ್ಮಣ್ಯಮೃತಂ ಕಿಂ ಚ ವೇದ್ಯಮನುತ್ತಮಮ್ ॥೨೬॥

"ಬ್ರಾಹ್ಮಣಜಾತಿಗೆ ಹಿತಕರವಾದುದು ಯಾವುದು? ತಿಳಿಯಬೇಕಾದ ಉತ್ತಮೋತ್ತಮವಾದ ವಸ್ತುವು ಯಾವುದು?"

ಚತುರ್ವಿಂಶಾಂಸ್ತತೋಽಪೃಚ್ಛತ್ಪ್ರಶ್ನಾನ್ವೇದಸ್ಯ ಪಾರ್ಥಿವ ।
ಪಞ್ಚವಿಂಶತಿಮಂ ಪ್ರಶ್ನಂ ಪಪ್ರಚ್ಛಾನ್ವೀಕ್ಷಿಕೀಂ ತದಾ ।
ವಿಶ್ವಾವಿಶ್ವಂ ತಥಾಶ್ವಾತ್ವಂ ಮಿತ್ರಂ ವರುಣಮೇವ ಚ ॥೨೮॥

ಮೇಲಿನ ಎರಡು ಪ್ರಶ್ನೆಗಳನ್ನು ಕೇಳಿದನಂತರ ವಿಶ್ವಾವಸುಗಂಧರ್ವನು ವೇದಕ್ಕೆ ಸಂಬಂಧಿಸಿದಂತೆ ಇಪ್ಪತ್ತುನಾಲ್ಕು ಪ್ರಶ್ನೆಗಳನ್ನು ಕೇಳಿದನು. ಆನ್ವೀಕ್ಷಿಕೀವಿದ್ಯೆಯ (ಅಧ್ಯಾತ್ಮವಿದ್ಯೆಯ) ಸಂಬಂಧದಲ್ಲಿ ಇಪ್ಪತ್ತೈದನೆಯ ಪ್ರಶ್ನೆಯನ್ನು ಕೇಳಿದನು. ಅವನು ಕೇಳಿದ ಇಪ್ಪತ್ತುನಾಲ್ಕು ಪ್ರಶ್ನೆಗಳು ಈ ಪ್ರಕಾರವಾಗಿದೆ.

೧) ವಿಶ್ವವು ಯಾವುದು? ೨) ಅವಿಶ್ವವು ಯಾವುದು? ೩) ಅಶ್ವಾ ಎಂಬುದು ಯಾವುದು? ೪) ಅಶ್ವವು ಯಾವುದು? ೫) ಮಿತ್ರನು ಯಾರು? ೬) ವರುಣನು ಯಾರು?

ಜ್ಞಾನಂ ಜ್ಞೇಯಂ ತಥಾಜ್ಞೋಽಜ್ಞಃ ಕಸ್ತಪಾ ಅತಪಾಸ್ತಥಾ ।
ಸೂರ್ಯಾತಿಸೂರ್ಯ ಇತಿ ಚ ವಿದ್ಯಾವಿದ್ಯೇ ತಥೈವ ಚ ॥೨೯॥

೭) ಜ್ಞಾನವು ಯಾವುದು? ೮) ಜ್ಞೇಯವು ಯಾವುದು? ೯) ಜ್ಞಾತಾ ಎಂಬುವವನು ಯಾರು? ೧೦) ಅಜ್ಞನು ಯಾರು? ೧೧) ಕ–ಎಂಬುವವನು ಯಾರು? ೧೨) ತಪಸ್ವಿಯು ಯಾರು? ೧೩) ಅತಪಸ್ವಿಯು ಯಾರು? ೧೪) ಸೂರ್ಯನು ಯಾರು? ೧೫) ಅತಿಸೂರ್ಯನು ಯಾರು? ೧೬) ವಿದ್ಯೆಯು ಯಾವುದು? ೧೭) ಅವಿದ್ಯೆಯು ಯಾವುದು?

ವೇದ್ಯಾವೇದ್ಯಂ ತಥಾ ರಾಜನ್ನಚಲಂ ಚಲಮೇವ ಚ ।
ಅಪೂರ್ವಮಕ್ಷಯಂ ಕ್ಷಯ್ಯಮೇತತ್ಪ್ರಶ್ನಮನುತ್ತಮಮ್ ॥೩೦॥

೧೮) ವೇದ್ಯವು ಯಾವುದು? ೧೯) ಅವೇದ್ಯವು ಯಾವುದು? ೨೦) ಅಚಲವು ಯಾವುದು? ೨೧) ಚಲವು ಯಾವುದು? ೨೨) ಅಪೂರ್ವವು ಯಾವುದು? ೨೩) ಅಕ್ಷಯವು ಯಾವುದು? ೨೪) ಕ್ಷಯ್ಯವಾದುದು (ವಿನಾಶಶೀಲವಾದುದು) ಯಾವುದು? – ಇವೇ ವಿಶ್ವಾವಸುಗಂಧರ್ವನು ಕೇಳಿದ ಉತ್ತಮೋತ್ತಮವಾದ ಪ್ರಶ್ನೆಗಳಾಗಿದ್ದುವು.

ಜನಕರಾಜ! ಗಂಧರ್ವಶ್ರೇಷ್ಠನಾದ ವಿಶ್ವಾವಸುವು ಈ ಪ್ರಶ್ನೆಗಳನ್ನು ಕೇಳಿದನಂತರ ಅವನೊಡನೆ ನಾನು ಹೀಗೆ ಹೇಳಿದೆನು– "ನೀನು ಅನುಕ್ರಮ

ವಾಗಿ ಉತ್ತಮೋತ್ತಮವಾದ ಪ್ರಶ್ನೆಗಳನ್ನೇ ಕೇಳಿರುವೆ. ನೀನು ಕೇಳಿರುವ ಪ್ರಶ್ನೆಗಳೆಲ್ಲವೂ ಅರ್ಥವತ್ತಾಗಿವೆ. ಮುಹೂರ್ತಕಾಲ ನೀನು ಇಲ್ಲಿಯೇ ವಿಶ್ರಮಿಸಿಕೊಂಡಿರು. ಆ ವೇಳೆಗೆ ನಾನು ನಿನ್ನ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಯೋಚಿಸಿ ಹೇಳುತ್ತೇನೆ.”

ಜನಕರಾಜ! ನನ್ನ ಮಾತಿಗೆ ಗಂಧರ್ವನು ಹಾಗೆಯೇ ಆಗಲೆಂದು ಪ್ರತ್ಯುತ್ತರವನ್ನಿತ್ತು, ಸುಮ್ಮನೆ ಕುಳಿತುಕೊಂಡನು.

ಬಳಿಕ ನಾನು ಸರಸ್ವತೀದೇವಿಯನ್ನು ಮನಸ್ಸಿನಲ್ಲಿಯೇ ಧ್ಯಾನಮಾಡಿದೆನು. ಮೊಸರು ಕಡೆಯುತ್ತಿದ್ದಂತೆಯೇ ಬೆಣ್ಣೆಯು ಹೊರಬರುವಂತೆ– ಗಂಧರ್ವನು ಕೇಳಿದ ಪ್ರಶ್ನೆಗಳಿಗೆ ಉತ್ತರಗಳು ನನ್ನ ಮನಸ್ಸಿನಲ್ಲಿ ಆವಿರ್ಭವಿಸಿದುವು. ಆ ಸಮಯದಲ್ಲಿ ನಾನು ಉಪನಿಷತ್ತನ್ನೂ, ಅದರ ಪರಿಶಿಷ್ಟಭಾಗವನ್ನೂ, ಪರಮಶ್ರೇಷ್ಠವಾದ ಅಧ್ಯಾತ್ಮಶಾಸ್ತ್ರವನ್ನೂ ಮನಸ್ಸಿನಲ್ಲಿಯೇ ಮಥಿಸತೊಡಗಿದೆನು. ಆ ಆನ್ವೀಕ್ಷಿಕೀವಿದ್ಯೆಯು (ತ್ರಯೀ, ವಾರ್ತಾ ಮತ್ತು ದಂಡನೀತಿ ಈ ಮೂರು ವಿದ್ಯೆಗಳ ದೃಷ್ಟಿಯಿಂದ) ನಾಲ್ಕನೆಯ ವಿದ್ಯೆಯಾಗಿದ್ದು ಮೋಕ್ಷಕ್ಕೆ ಸಹಾಯಕವಾಗಿದೆ. ಇಪ್ಪತ್ತೈದನೆಯವನಾದ ಪುರುಷನಿಂದ ಅಧಿಷ್ಠಿತವಾದ ಈ ವಿದ್ಯೆಯನ್ನು ನಾನು ನಿನಗೆ ಉಪದೇಶಿಸಿದ್ದೇನೆ. ಅದನ್ನೇ ನಾನು ವಿಶ್ವಾವಸುಗಂಧರ್ವನಿಗೂ ಹೇಳಿದೆನು.

ಸರಸ್ವತಿಯನ್ನು ಧ್ಯಾನಿಸಿ ಉಪನಿಷತ್ತನ್ನೂ, ಪರಿಶಿಷ್ಟವನ್ನೂ, ಆನ್ವೀಕ್ಷಿಕೀವಿದ್ಯೆಯನ್ನೂ (ಅಧ್ಯಾತ್ಮಶಾಸ್ತ್ರವನ್ನೂ) ಮನಸ್ಸಿನಲ್ಲಿ ಮಥಿಸಿದ ನಂತರ ವಿಶ್ವಾವಸುವನ್ನು ಕುರಿತು ಹೇಳಿದೆನು :

“ವಿಶ್ವಾವಸುಗಂಧರ್ವನೇ! ನೀನು ನಮ್ಮನ್ನು ಕುರಿತು ಯಾವ ಪ್ರಶ್ನೆಗಳನ್ನು ಕೇಳಿರುವೆಯೋ – ಅವೆಲ್ಲಕ್ಕೂ ಯಥಾನುಕ್ರಮವಾಗಿ ಉತ್ತರವನ್ನು ಕೇಳು.

ವಿಶ್ವಾವಿಶ್ವೇತಿ ಯದಿದಂ ಗನ್ಧರ್ವೇನ್ದ್ರಾನುಪೃಚ್ಛಸಿ ।
ವಿಶ್ವಾವ್ಯಕ್ತಂ ಪರಂ ವಿದ್ಯಾದ್ಭೂತಭವ್ಯಭಯಂಕರಮ್ ॥೩೭॥

ಗಂಧರ್ವೇಂದ್ರನೇ! ನೀನು ವಿಶ್ವಾ ಮತ್ತು ಅವಿಶ್ವ ಎಂದರೆ ಯಾವುದೆಂದು ಪ್ರಶ್ನಿಸಿದೆಯಲ್ಲವೇ? ವಿಶ್ವಾ ಎಂಬುದು ಅವ್ಯಕ್ತಪ್ರಕೃತಿಯ ಹೆಸರಾ

ಗಿದೆ. ಅದು ಚೇತನನನ್ನು ಸಂಸಾರಬಂಧನದಲ್ಲಿ ಸಿಲುಕಿಸುವುದರಿಂದ ಭೂತ, ಭವಿಷ್ಯತ್ ಮತ್ತು ವರ್ತಮಾನ – ಈ ಮೂರು ಕಾಲಗಳಲ್ಲಿಯೂ ವಿಶ್ವಾ ಎಂಬುದು ಅತ್ಯಂತಭಯಂಕರವಾಗಿರುವುದೆಂಬುದನ್ನು ತಿಳಿ.

ತ್ರಿಗುಣಂ ಗುಣಕರ್ತೃತ್ವಾದವಿಶ್ವೋ ನಿಷ್ಕಲಸ್ತಥಾ ।
ಅಶ್ವಶ್ಚಾಶ್ವಾ ಚ ಮಿಥುನಮೇವಮೇವಾನುದೃಶ್ಯತೇ ॥೩೮॥

ಹೀಗೆ ವಿಶ್ವಾ ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಅವ್ಯಕ್ತಪ್ರಕೃತಿಯು ತ್ರಿಗುಣಗಳಿಂದ ಕೂಡಿದೆ. ಆದುದರಿಂದಲೇ ಅದು ತ್ರಿಗುಣಾತ್ಮಕವಾದ ಜಗತ್ತನ್ನು ಸೃಷ್ಟಿಸುತ್ತದೆ. ಆ ಪ್ರಕೃತಿಗಿಂತಲೂ ಭಿನ್ನವಾದ ನಿಷ್ಕಲವಾದ (ಕಲೆಗಳಿಂದ ರಹಿತವಾದ) ಯಾವ ಆತ್ಮವಿರುವುದೋ ಅದನ್ನು 'ಅವಿಶ್ವ' ಎಂದು ಕರೆಯುತ್ತಾರೆ. ಇದೇ ರೀತಿಯಲ್ಲಿ ಅಶ್ವಾಶ್ವದ್ವಂದ್ವದ ಅರ್ಥವನ್ನೂ ತಿಳಿದುಕೊಳ್ಳಬೇಕು. (ಅಶ್ವಾ ಎಂಬುದು ಅವ್ಯಕ್ತಪ್ರಕೃತಿಯಾಗಿದೆ. ಅಶ್ವ–ಎಂಬುದು ಪುರುಷವಾಗಿದೆ.)

ಅವ್ಯಕ್ತಂ ಪ್ರಕೃತಿಂ ಪ್ರಾಹುಃ ಪುರುಷೇತಿ ಚ ನಿರ್ಗುಣಮ್ ।
ತಥೈವ ಮಿತ್ರಂ ಪುರುಷಂ ವರುಣಂ ಪ್ರಕೃತಿಂ ತಥಾ ॥೩೯॥

ಅವ್ಯಕ್ತವನ್ನು ಸಗುಣಪ್ರಕೃತಿಯೆಂಬುದಾಗಿ ಹೇಳುತ್ತಾರೆ. ಪುರುಷನನ್ನು ನಿರ್ಗುಣನೆಂಬುದಾಗಿ ಹೇಳುತ್ತಾರೆ. ಹಾಗೆಯೇ ಮಿತ್ರನನ್ನು ಪುರುಷನೆಂದೂ– ವರುಣನನ್ನು ಪ್ರಕೃತಿಯೆಂದೂ ಹೇಳುತ್ತಾರೆ.

ಜ್ಞಾನಂ ತು ಪ್ರಕೃತಿಂ ಪ್ರಾಹುರ್ಜ್ಞೇಯಂ ನಿಷ್ಕಲಮೇವ ಚ ।
ಅಜ್ಞಶ್ಚ ಜ್ಞಶ್ಚ ಪುರುಷಸ್ತಸ್ಮಿನ್ನಿಷ್ಕಲ ಉಚ್ಯತೇ ॥೪೦॥

ಜ್ಞಾನವನ್ನು ಪ್ರಕೃತಿಯೆನ್ನುತ್ತಾರೆ. ಜ್ಞೇಯವನ್ನು ನಿಷ್ಕಲವಾದ ಪುರುಷನೆನ್ನುತ್ತಾರೆ. ಹೀಗೆಯೇ ಅಜ್ಞವೆಂಬುದು ಪ್ರಕೃತಿಯಾಗಿದೆ. ಇದಕ್ಕೆ ಭಿನ್ನನಾದ ನಿಷ್ಕಲನಾದ ಪುರುಷನನ್ನು 'ಜ್ಞ' ಎಂದು ಹೇಳುತ್ತಾರೆ.

ಕಸ್ತಪಾ ಅತಪಾಃ ಪ್ರೋಕ್ತಃ ಕೋಽಸೌ ಪುರುಷ ಉಚ್ಯತೇ ।
ತಪಾಸ್ತು ಪ್ರಕೃತಿಂ ಪ್ರಾಹುರತಪಾ ನಿಷ್ಕಲಃ ಸ್ಮೃತಃ ॥೪೧॥

ಕಃ, ತಪಾಃ, ಅತಪಾಃ ಇವರು ಯಾರು? ಎಂಬ ಪ್ರಶ್ನೆಗೆ ಉತ್ತರಿಸು

ತ್ತೇನೆ. ಪುರುಷನನ್ನು 'ಕ' ಎಂದು ಕರೆಯುತ್ತಾರೆ. 'ತಪಾಃ' ಎಂಬುದು ಪ್ರಕೃತಿಯ ಹೆಸರಾಗಿದೆ. ಕಲೆಗಳಿಂದ ರಹಿತನಾದ ಪುರುಷನೇ 'ಅತಪಾಃ' ಎಂಬ ಹೆಸರಿನವನಾಗಿದ್ದಾನೆ.

ಸೂರ್ಯಮವ್ಯಕ್ತಮಿತ್ಯುಕ್ತಮತಿಸೂರ್ಯಸ್ತು ನಿಷ್ಕಲಃ ।
ಅವಿದ್ಯಾ ಪ್ರಕೃತಿರ್ಜ್ಞೇಯಾ ವಿದ್ಯಾ ಪುರುಷ ಉಚ್ಯತೇ ॥41॥

ಅವ್ಯಕ್ತಪ್ರಕೃತಿಗೆ ಸೂರ್ಯನೆಂದೂ–ನಿಷ್ಕಲನಾದ ಪುರುಷನಿಗೆ ಅತಿಸೂರ್ಯನೆಂದೂ ಹೇಳುತ್ತಾರೆ. ಅವಿದ್ಯೆಯನ್ನು ಪ್ರಕೃತಿಯೆಂದೂ ವಿದ್ಯೆಯನ್ನು ಪುರುಷನೆಂದೂ ತಿಳಿಯಬೇಕು.*

ತಥೈವಾವೇದ್ಯಮವ್ಯಕ್ತಂ ವೇದ್ಯಃ ಪುರುಷ ಉಚ್ಯತೇ ।
ಚಲಾಚಲಮಿತಿ ಪ್ರೋಕ್ತಂ ತ್ವಯಾ ತದಪಿ ಮೇ ಶೃಣು ॥೪೨॥

ಇದೇ ರೀತಿಯಲ್ಲಿ ಅವೇದ್ಯವನ್ನು ಪ್ರಕೃತಿಯೆಂದೂ–ವೇದ್ಯವನ್ನು ಪುರುಷನೆಂದೂ ಹೇಳುತ್ತಾರೆ. ನೀನು ಚಲವು ಯಾವುದು? ಅಚಲವು ಯಾವುದು? ಎಂದೂ ಪ್ರಶ್ನಿಸಿದೆಯಲ್ಲವೇ? ಅದಕ್ಕೂ ಉತ್ತರವನ್ನು ಕೇಳು.

ಚಲಾಂ ತು ಪ್ರಕೃತಿಂ ಪ್ರಾಹುಃ ಕಾರಣಂ ಕ್ಷಯಸರ್ಗಯೋಃ ।
ಆಕ್ಷೇಪಸರ್ಗಯೋಃ ಕರ್ತಾ ನಿಶ್ಚಲಃ ಪುರುಷಃ ಸ್ಮೃತಃ ॥೪೩॥

ಸೃಷ್ಟಿಗೂ ಮತ್ತು ಸಂಹಾರಕ್ಕೂ ಕಾರಣಭೂತಳಾದ ಪ್ರಕೃತಿಯನ್ನು 'ಚಲಾ' ಎಂದು ಕರೆಯುತ್ತಾರೆ. ಸೃಷ್ಟಿ ಮತ್ತು ಪ್ರಲಯಗಳ ಕರ್ತೃವಾದ ನಿಶ್ಚಲನಾದ ಪುರುಷನನ್ನು ಅಚಲನೆಂದು ಕರೆಯುತ್ತಾರೆ.

ತಥೈವ ವೇದ್ಯಮವ್ಯಕ್ತಮವೇದ್ಯಂ ಪುರುಷಸ್ತಥಾ ।
ಅಜ್ಞಾವುಭೌ ಧ್ರುವೌ ಚೈವ ಅಕ್ಷಯೌ ಚಾಪ್ಯುಭಾವಪಿ ॥೪೪॥
ಅಜೌ ನಿತ್ಯಾವುಭೌ ಪ್ರಾಹುರಧ್ಯಾತ್ಮಗತಿನಿಶ್ಚಯಾಃ ॥೪೫॥

ಅದೇ ರೀತಿಯಲ್ಲಿ ಅವ್ಯಕ್ತಪ್ರಕೃತಿಯನ್ನು ವೇದ್ಯ (ತಿಳಿಯಲ್ಪಡ

---

* ಈ ಶ್ಲೋಕವು ಪ್ರಕ್ಷಿಪ್ತವೆಂದು ಪರಿಗಣಿತವಾಗಿದೆ. ಆದರೆ ಈ ಶ್ಲೋಕವಿಲ್ಲದಿದ್ದರೆ ಸೂರ್ಯ-ಅತಿಸೂರ್ಯ, ವಿದ್ಯೆ-ಅವಿದ್ಯೆಗಳು ಯಾವುವೆಂಬ ನಾಲ್ಕು ಪ್ರಶ್ನೆಗಳಿಗೆ ಉತ್ತರವಿಲ್ಲದೆಯೇ ಹೋಗುತ್ತದೆ. ಆದುದರಿಂದ ಪ್ರಕ್ಷಿಪ್ತವೆಂದು ಪರಿಗಣಿತವಾಗಿದ್ದರೂ ಈ ಶ್ಲೋಕವನ್ನು ಕೊಡಲಾಗಿದೆ.

ತಕ್ಕುದು) ಎಂದು ಕರೆಯುತ್ತಾರೆ. ಪುರುಷನನ್ನು ಅವೇದ್ಯ (ತಿಳಿಯಲ್ಪಡದವನು) ಎಂದು ಕರೆಯುತ್ತಾರೆ. ಅಧ್ಯಾತ್ಮತತ್ತ್ವದಲ್ಲಿ ನಿಶ್ಚಯವಾದ ಜ್ಞಾನವುಳ್ಳ ವಿದ್ವಾಂಸರು ಪ್ರಕೃತಿ-ಪುರುಷರಿಬ್ಬರನ್ನೂ ಅಜ್ಞರೆಂದೂ, ಶಾಶ್ವತರೆಂದೂ, ಅಕ್ಷಯರೆಂದೂ, ಅಜನ್ಮರೆಂದೂ ಮತ್ತು ನಿತ್ಯರೆಂದೂ ಹೇಳುತ್ತಾರೆ.

ಅಕ್ಷಯತ್ವಾತ್ಪ್ರಜನನೇ ಅಜಮತ್ರಾಹುರವ್ಯಯಮ್ ।
ಅಕ್ಷಯಂ ಪುರುಷಂ ಪ್ರಾಹುಃ ಕ್ಷಯೋ ಹ್ಯಸ್ಯ ನ ವಿದ್ಯತೇ ॥೪೬॥

ಅನೇಕಜನ್ಮಗಳನ್ನು ಹೊಂದಿದರೂ ಕ್ಷಯರಹಿತನಾದುದರಿಂದ ಜ್ಞಾನಿಗಳು ಪುರುಷನನ್ನು ಅಜನ್ಮನೆಂದೂ, ಅವಿನಾಶಿಯೆಂದೂ, ಅಕ್ಷಯನೆಂದೂ ಕರೆಯುತ್ತಾರೆ. ಪುರುಷನಿಗೆ ಯಾವಾಗಲೂ ಕ್ಷಯವೆಂಬುದೇ ಇಲ್ಲ.

ಗುಣಕ್ಷಯತ್ವಾತ್ಪ್ರಕೃತಿಃ ಕರ್ತೃತ್ವಾದಕ್ಷಯಂ ಬುಧಾಃ ।
ಏಷಾ ತೇಽನ್ವೀಕ್ಷಿಕೀ ವಿದ್ಯಾ ಚತುರ್ಥೀ ಸಾಮ್ಪರಾಯಿಕೀ ॥೪೭॥

ಕಾಲಾನುಗುಣವಾಗಿ ಗುಣಗಳ ಕ್ಷಯವಾಗುವುದರಿಂದ ಪ್ರಕೃತಿಯನ್ನು ಕ್ಷಯಶೀಲವೆಂದೂ–ಪ್ರಕೃತಿಗೆ ಪ್ರೇರಕನಾದುದರಿಂದ ಪುರುಷನನ್ನು ಅಕ್ಷಯನೆಂದೂ ವಿದ್ವಾಂಸರು ಹೇಳುತ್ತಾರೆ. ಗಂಧರ್ವರಾಜನೇ! ಹೀಗೆ ನಿನಗೆ ನಾನು ನಾಲ್ಕನೆಯದಾದ ಮತ್ತು ಮೋಕ್ಷಕ್ಕೆ ಸಹಾಯಭೂತವಾದ ಆನ್ವೀಕ್ಷಿಕೀ (ಅಧ್ಯಾತ್ಮ) ವಿದ್ಯೆಯನ್ನು ಹೇಳಿರುತ್ತೇನೆ.

ವಿದ್ಯೋಪೇತಂ ಧನಂ ಕೃತ್ವಾ ಕರ್ಮಣಾ ನಿತ್ಯಕರ್ಮಣಿ ।
ಏಕಾನ್ತದರ್ಶನಾ ವೇದಾಃ ಸರ್ವೇ ವಿಶ್ವಾವಸೋ ಸ್ಮೃತಾಃ ॥೪೮॥

ವಿಶ್ವಾವಸುವೇ! ಆನ್ವೀಕ್ಷಿಕೀವಿದ್ಯಾಸಹಿತವಾದ ವೇದವಿದ್ಯಾರೂಪವಾದ ಧನವನ್ನು ಪ್ರಯತ್ನಪೂರ್ವಕವಾಗಿ ಉಪಾರ್ಜನೆಮಾಡಿ ನಿತ್ಯಕರ್ಮಗಳಲ್ಲಿ ಯುಕ್ತನಾಗಿರಬೇಕು. ಎಲ್ಲ ವೇದಗಳೂ ಏಕಾಂತದಲ್ಲಿ ಅಧ್ಯಯನ ಮತ್ತು ಮನನಗಳಿಗೆ ಯೋಗ್ಯವಾದುವುಗಳೆಂದು ಹೇಳಲ್ಪಟ್ಟಿವೆ.

ಜಾಯನ್ತೇ ಚ ಮ್ರಿಯನ್ತೇ ಚ ಯಸ್ಮಿನ್ನೇತೇ ಯತಶ್ಚ್ಯುತಾಃ ।
ವೇದಾರ್ಥಂ ಯೇ ನ ಜಾನನ್ತಿ ವೇದ್ಯಂ ಗನ್ಧರ್ವಸತ್ತಮ ॥೪೯॥

ಗಂಧರ್ವಶ್ರೇಷ್ಠನೇ! ಎಲ್ಲ ಪ್ರಾಣಿಗಳು ಮೊದಲು ಯಾವನಲ್ಲಿದ್ದುವೋ

ಮತ್ತು ಯಾವನಿಂದ ಉತ್ಪನ್ನವಾದುವೋ–ಅಂತಹ ವೇದಪ್ರತಿಪಾದ್ಯನಾದ, ಜ್ಞೇಯನಾದ ಪರಮಾತ್ಮನನ್ನು ಯಾರು ತಿಳಿಯುವುದಿಲ್ಲವೋ–ಅಂತಹವರು ಹುಟ್ಟುತ್ತಿರುತ್ತಾರೆ ; ಸಾಯುತ್ತಿರುತ್ತಾರೆ.

ಸಾಙ್ಗೋಪಾಙ್ಗಾನಪಿ ಯದಿ ಯಶ್ಚ ವೇದಾನಧೀಯತೇ ।
ವೇದವೇದ್ಯಂ ನ ಜಾನೀತೇ ವೇದಭಾರ ವಹೋ ಹಿ ಸಃ ॥೫೦॥

ಯಾವನು ಸಾಂಗೋಪಾಂಗವಾಗಿ ವೇದಗಳನ್ನು ಅಧ್ಯಯನಮಾಡಿದ್ದರೂ ವೇದವೇದ್ಯನಾದ ಪರಮಾತ್ಮನನ್ನು ತಿಳಿದಿಲ್ಲವೋ–ಅವನು ಕೇವಲ ವೇದದ ಭಾರವನ್ನು ಹೊರುವವನೇ ಸರಿ.

ಯೋ ಘೃತಾರ್ಥೀ ಖರೀಕ್ಷೀರಂ ಮಥೇದ್ಗನ್ಧರ್ವಸತ್ತಮ ।
ವಿಷ್ಠಾಂ ತತ್ರಾನುಪಶ್ಯೇತ ನ ಮಣ್ಡಂ ನ ಚ ವೈ ಘೃತಮ್ ॥೫೧॥

ಗಂಧರ್ವಶ್ರೇಷ್ಠನೇ! ತುಪ್ಪವನ್ನು ಅಪೇಕ್ಷಿಸುವವನು ಕತ್ತೆಯ ಹಾಲನ್ನು ಕಡೆದರೆ ಅದರಲ್ಲವನು ವಿಷ್ಟೆಯನ್ನು (ಅಮೇಧ್ಯವನ್ನು) ಕಾಣುವನೇ ಹೊರತು ಬೆಣ್ಣೆಯನ್ನಾಗಲೀ–ತುಪ್ಪವನ್ನಾಗಲೀ ಕಾಣುವುದಿಲ್ಲ.

ತಥಾ ವೇದ್ಯಮವೇದ್ಯಂ ಚ ವೇದವಿದ್ಯೋ ನ ವಿನ್ದತಿ ।
ಸ ಕೇವಲಂ ಮೂಢಮತಿರ್ಜ್ಞಾನಭಾರವಹಃ ಸ್ಮೃತಃ ॥೫೨॥

ಹೀಗೆ ಯಾವನು ಸಾಂಗವಾಗಿ ವೇದಾಧ್ಯಯನವನ್ನು ಮಾಡಿಯೂ ವೇದ್ಯ (ಪುರುಷ) ಮತ್ತು ಅವೇದ್ಯ (ಪ್ರಕೃತಿ) ಗಳ ತತ್ತ್ವವನ್ನು ತಿಳಿದುಕೊಳ್ಳುವುದಿಲ್ಲವೋ–ಅಂತಹ ಮೂಢಬುದ್ಧಿಯವನಾದ ಮನುಷ್ಯನು ಜ್ಞಾನದ ಭಾರವನ್ನು ಮಾತ್ರವೇ ಹೊರುವವನಾಗುತ್ತಾನೆ.

ದ್ರಷ್ಟವ್ಯೌ ನಿತ್ಯಮೇವೈತೌ ತತ್ಪರೇಣಾನ್ತರಾತ್ಮನಾ ।
ತಥಾಸ್ಯ ಜನ್ಮನಿಧನೇ ನ ಭವೇತಾಂ ಪುನಃ ಪುನಃ ॥೫೩॥

ಮನುಷ್ಯನು ಸರ್ವದಾ ಅಧ್ಯಾತ್ಮದಲ್ಲಿಯೇ ತತ್ಪರನಾದ ಅಂತರಾತ್ಮನ ಮೂಲಕವಾಗಿ ಪ್ರಕೃತಿ ಮತ್ತು ಪುರುಷರ ಸ್ವರೂಪವನ್ನು ಚೆನ್ನಾಗಿ ಕಂಡುಕೊಳ್ಳಬೇಕು. ಪ್ರಕೃತಿ-ಪುರುಷರ ಜ್ಞಾನದಿಂದ ಮನುಷ್ಯನಿಗೆ ಪುನಃ ಪುನಃ ಹುಟ್ಟು-ಸಾವುಗಳು ಸಂಭವಿಸುವುದಿಲ್ಲ.

ಅಜಸ್ರಂ ಜನ್ಮನಿಧನಂ ಚಿನ್ತಯಿತ್ವಾ ತ್ರಯೀಮಿಮಾಮ್ ।
ಪರಿತ್ಯಜ್ಯ ಕ್ಷಯಮಿಹ ಅಕ್ಷಯಂ ಧರ್ಮಮಾಸ್ಥಿತಃ ॥೫೪॥

ನಿರಂತರವಾದ ಹುಟ್ಟು-ಸಾವುಗಳನ್ನು ಆಲೋಚಿಸುತ್ತಾ, ವೇದಗಳ ಕರ್ಮಕಾಂಡದಲ್ಲಿ ಹೇಳಿರುವ ಕರ್ಮಗಳೂ ಮತ್ತು ಅವುಗಳ ಫಲಗಳೂ ವಿನಾಶಶೀಲಗಳೆಂಬುದನ್ನು ತಿಳಿದುಕೊಂಡು ಅವುಗಳನ್ನು ಪರಿತ್ಯಜಿಸಿ, ಮನುಷ್ಯನು ಅಕ್ಷಯವಾದ ಸಾಂಖ್ಯಧರ್ಮವನ್ನೇ ಆಶ್ರಯಿಸಬೇಕು.

ಯದಾನುಪಶ್ಯತೇಽತ್ಯನ್ತಮಹನ್ಯಹನಿ ಕಾಶ್ಯಪ ।
ತದಾ ಸ ಕೇವಲೀಭೂತಃ ಷಡ್ವಿಂಶಮನುಪಶ್ಯತಿ ॥೫೫॥

ಕಶ್ಯಪನಂದನನೇ! ಯಾವಾಗ ಸಾಧಕನು ಅನುದಿನವೂ ಪರಮಾತ್ಮನ ತತ್ತ್ವವಿಚಾರವನ್ನೂ ಮತ್ತು ಧ್ಯಾನವನ್ನೂ ಮಾಡುತ್ತಿರುವನೋ–ಆಗ ಅವನು ಪ್ರಕೃತಿಯ ಸಂಸರ್ಗದಿಂದ ರಹಿತನಾಗಿ ಇಪ್ಪತ್ತಾರನೆಯ ತತ್ತ್ವರೂಪನಾದ ಪರಬ್ರಹ್ಮಪರಮಾತ್ಮನನ್ನು ನೋಡುತ್ತಾನೆ.

ಅನ್ಯಶ್ಚ ಶಾಶ್ವತೋಽವ್ಯಕ್ತಸ್ತಥಾನ್ಯಃ ಪಞ್ಚವಿಂಶಕಃ ।
ತಸ್ಯ ದ್ವಾವನುಪಶ್ಯೇತಾಂ ತಮೇಕಮಿತಿ ಸಾಧವಃ ॥೫೬॥

ಕೆಲವರು ಇಪ್ಪತ್ತಾರನೆಯವನಾದ, ಶಾಶ್ವತನಾದ, ಅವ್ಯಕ್ತನಾದ ಪರ ಮಾತ್ಮನೇ ಬೇರೆಯೆಂದೂ–ಇಪ್ಪತ್ತೈದನೆಯವನಾದ ಚೇತನನೇ (ಜೀವಾ ತ್ಮನೇ) ಬೇರೆಯೆಂದೂ–ಪರಮಾತ್ಮನನ್ನೇ ಎರಡು ವಿಧವಾಗಿ ಭಾವಿಸುತ್ತಾರೆ. ಆದರೆ ಸತ್ಪುರುಷರು ಇಬ್ಬರನ್ನೂ ಒಬ್ಬನೇ ಎಂದು ಹೇಳುತ್ತಾರೆ.

ತೇ ನೈತನ್ನಾಭಿನನ್ದನ್ತಿ ಪಞ್ಚವಿಂಶಕಮಚ್ಯುತಮ್ ।
ಜನ್ಮಮೃತ್ಯುಭಯಾದ್ಯೋಗಾಃ ಸಾಂಖ್ಯಾಶ್ಚ ಪರಮೈಷಿಣಃ ॥೫೭॥

ಹುಟ್ಟು-ಸಾವುಗಳ ಭಯದಿಂದ ರಹಿತರಾದ ಯೋಗಿಗಳೂ ಮತ್ತು ಪರಮಪದವನ್ನು ಅಪೇಕ್ಷಿಸುವ ಸಾಂಖ್ಯರೂ ಇಪ್ಪತ್ತೈದನೆಯವನಾದ ಚೇತನ ವನ್ನು 'ಇದು ಅದಲ್ಲ.' ಇದು ಆ ಅಚ್ಯುತವಾದ 'ಪರಬ್ರಹ್ಮವಸ್ತುವಲ್ಲ'– ಎಂದೇನೂ ತಿಳಿಯುವುದಿಲ್ಲ. (ಸಾಂಖ್ಯರೂ ಮತ್ತು ಯೋಗರೂ ಅಭೇದವನ್ನೇ ಹೇಳುತ್ತಾರೆ.)"

ವಿಶ್ವಾವಸುವು ಪ್ರಶ್ನಿಸುತ್ತಾನೆ :

ಪಞ್ಚವಿಂಶಂ ಯದೇತತ್ತೇ ಪ್ರೋಕ್ತಂ ಬ್ರಾಹ್ಮಣಸತ್ತಮ ।
ತಥಾ ತನ್ನ ತಥಾ ಚೇತಿ ತದ್ಭವಾನ್ವಕ್ತುಮರ್ಹತಿ ॥೫೮॥

"ಬ್ರಾಹ್ಮಣಶ್ರೇಷ್ಠರೇ! ಇಪ್ಪತ್ತೈದನೆಯ ಚೇತನನ ವಿಷಯವಾಗಿ ನೀವು ಏನು ಹೇಳಿದಿರೋ –ಆ ವಿಷಯದಲ್ಲಿ ನನಗೆ ಸಂದೇಹವುಂಟಾಗಿದೆ. ನಿಶ್ಚಯವಾಗಿಯೂ ಚೇತನನು ಪರಮಾತ್ಮನಿಂದ ಭಿನ್ನನೇ–ಅಲ್ಲವೇ? ಎಂಬುದನ್ನು ದಯಮಾಡಿ ತಿಳಿಸಿರಿ.

ಜೈಗೀಷವ್ಯಸ್ಯಾಸಿತಸ್ಯ ದೇವಲಸ್ಯ ಮಯಾ ಶ್ರುತಮ್ ।
ಪರಾಶರಸ್ಯ ವಿಪ್ರರ್ಷೇರ್ವಾರ್ಷಗಣ್ಯಸ್ಯ ಧೀಮತಃ ॥೫೯॥
ಭೃಗೋಃ ಪಞ್ಚಶಿಖಸ್ಯಾಸ್ಯ ಕಪಿಲಸ್ಯ ಶುಕಸ್ಯ ಚ ।
ಗೌತಮಸ್ಯಾರ್ಷ್ಟಿಷೇಣಸ್ಯ ಗರ್ಗಸ್ಯ ಚ ಮಹಾತ್ಮನಃ ॥೬೦॥

ನಾರದಸ್ಯಾಸುರೇಶ್ಚೈವ ಪುಲಸ್ತ್ಯಸ್ಯ ಚ ಧೀಮತಃ ।
ಸನತ್ಕುಮಾರಸ್ಯ ತತಃ ಶುಕ್ರಸ್ಯ ಚ ಮಹಾತ್ಮನಃ ।
ಕಶ್ಯಪಸ್ಯ ಪಿತುಶ್ಚೈವ ಪೂರ್ವಮೇವ ಮಯಾ ಶ್ರುತಮ್ ॥೬೧॥

ಈ ಹಿಂದೆ ನಾನು ಇದೇ ವಿಷಯದಲ್ಲಿ – ಮುನಿಶ್ರೇಷ್ಠನಾದ ಜೈಗೀಷವ್ಯ, ಅಸಿತ, ದೇವಲ, ಬ್ರಹ್ಮರ್ಷಿಯಾದ ಪರಾಶರ, ಬುದ್ಧಿವಂತನಾದ ವಾರ್ಷಗಣ್ಯ, ಭೃಗು, ಪಂಚಶಿಖ, ಕಪಿಲ, ಶುಕ, ಗೌತಮ, ಆರ್ಷ್ಟಿಷೇಣ, ಮಹಾತ್ಮನಾದ ಗರ್ಗ, ನಾರದ, ಆಸುರಿ, ಬುದ್ಧಿವಂತನಾದ ಪುಲಸ್ತ್ಯ, ಸನತ್ಕುಮಾರ, ಮಹಾತ್ಮನಾದ ಶುಕ ಮತ್ತು ನನ್ನ ತಂದೆಯಾದ ಕಶ್ಯಪ–ಇವರೆಲ್ಲರ ಪ್ರವಚನವನ್ನೂ ಕೇಳಿದ್ದೇನೆ.

ತದನನ್ತರಂ ಚ ರುದ್ರಸ್ಯ ವಿಶ್ವರೂಪಸ್ಯ ಧೀಮತಃ ॥೬೨॥

ದೈವತೇಭ್ಯಃ ಪಿತೃಭ್ಯಶ್ಚ ದೈತೇಯೇಭ್ಯಸ್ತತಸ್ತತಃ ।
ಪ್ರಾಪ್ತಮೇತನ್ಮಯಾ ಕೃತ್ಸ್ನಂ ವೇದ್ಯಂ ನಿತ್ಯಂ ವದನ್ತ್ಯುತ ॥೬೩॥

ಅನಂತರ ನಾನು ಅಲ್ಲಲ್ಲಿ ಸಂಚರಿಸುತ್ತಾ ರುದ್ರ, ಧೀಮಂತನಾದ ವಿಶ್ವರೂಪ, ಇತರ ದೇವತೆಗಳು, ಪಿತೃಗಳು, ದೈತೇಯರು–ಇವರಿಂದಲೂ ಈ ಜ್ಞಾನವನ್ನು ಸಂಪೂರ್ಣವಾಗಿ ಪಡೆದುಕೊಂಡಿರುತ್ತೇನೆ. ಅವರೆಲ್ಲರೂ

ಜ್ಞೇಯನಾದ ಪರಬ್ರಹ್ಮಪರಮಾತ್ಮನನ್ನು ನಿತ್ಯನೆಂದೂ ಪರಿಪೂರ್ಣನೆಂದೂ ಹೇಳುತ್ತಾರೆ.

ತಸ್ಮಾತ್ತದ್ವೈ ಭವದ್ಬುದ್ಧ್ಯಾ ಶ್ರೋತುಮಿಚ್ಛಾಮಿ ಬ್ರಾಹ್ಮಣ ।
ಭವಾನ್ಪ್ರಬರ್ಹಃ ಶಾಸ್ತ್ರಾಣಾಂ ಪ್ರಗಲ್ಭಶ್ಚಾತಿ ಬುದ್ಧಿಮಾನ್ ॥೬೪॥

ಬ್ರಾಹ್ಮಣಶ್ರೇಷ್ಠರೇ! ಅದೇ ವಿಷಯವನ್ನೇ ನಾನು ನಿಮ್ಮ ಬುದ್ಧಿಯ ಮೂಲಕವಾಗಿ ಹೊರಡುವ ಪ್ರವಚನದಿಂದ ತಿಳಿಯಬೇಕೆಂದಿರುತ್ತೇನೆ. ನೀವು ಶಾಸ್ತ್ರವಿದರಲ್ಲಿ ಶ್ರೇಷ್ಠರಾದವರು. ಮಹಾವಾಗ್ಮಿಗಳು, ಅತ್ಯಂತ ಬುದ್ಧಿಶಾಲಿಗಳು.

ನ ತವಾವಿದಿತಂ ಕಿಂಚಿದ್ಭವಾಞ್ಶ್ರುತಿನಿಧಿಃ ಸ್ಮೃತಃ ।
ಕಥ್ಯತೇ ದೇವಲೋಕೇ ಚ ಪಿತೃಲೋಕೇ ಚ ಬ್ರಾಹ್ಮಣ ॥೬೫॥

ಬ್ರಾಹ್ಮಣಶ್ರೇಷ್ಠರೇ! ನಿಮಗೆ ತಿಳಿಯದಿರುವ ವಿಷಯವೇ ಇಲ್ಲ. ನಿಮ್ಮನ್ನು ವೈದಿಕಜ್ಞಾನಕ್ಕೆ ಭಂಡಾರಪ್ರಾಯರೆಂದು ಹೇಳುತ್ತಾರೆ. ನಿಮ್ಮ ವಿಷಯವು ದೇವಲೋಕ-ಪಿತೃಲೋಕಗಳಲ್ಲಿಯೂ ಖ್ಯಾತವಾಗಿದೆ.

ಬ್ರಹ್ಮಲೋಕಗತಾಶ್ಚೈವ ಕಥಯನ್ತಿ ಮಹರ್ಷಯಃ ।
ಪತಿಶ್ಚ ತಪತಾಂ ಶಶ್ವದಾದಿತ್ಯಸ್ತವ ಭಾಷಿತಾ ॥೬೬॥

ತಾಪವನ್ನುಂಟುಮಾಡುವ, ಎಲ್ಲ ಗ್ರಹಗಳಿಗೂ ಅಧಿಪತಿಯಾದ ಆದಿತ್ಯನೇ ನಿಮಗೆ ವೇದಗಳ ಉಪದೇಶಕನೆಂದು ಬ್ರಹ್ಮಲೋಕಕ್ಕೆ ಹೋಗಿರುವ ಮಹರ್ಷಿಗಳೂ ನಿಮ್ಮ ಗುಣಗಾನಮಾಡುತ್ತಾರೆ.

ಸಾಂಖ್ಯಜ್ಞಾನಂ ತ್ವಯಾ ಬ್ರಹ್ಮನ್ನವಾಪ್ತಂ ಕೃತ್ಸ್ನಮೇವ ಚ ।
ತಥೈವ ಯೋಗಶಾಸ್ತ್ರಂ ಚ ಯಾಜ್ಞವಲ್ಕ್ಯ ವಿಶೇಷತಃ ॥೬೭॥

ಯಾಜ್ಞವಲ್ಕ್ಯರೇ! ನೀವು ಸಮಗ್ರವಾದ ಸಾಂಖ್ಯಜ್ಞಾನವನ್ನೂ ಅದರಲ್ಲಿಯೂ ವಿಶೇಷವಾಗಿ ಯೋಗಶಾಸ್ತ್ರವನ್ನೂ ತಿಳಿದುಕೊಂಡಿರುವಿರಿ.

ನಿಃಸಂದಿಗ್ಧಂ ಪ್ರಬುದ್ಧಸ್ತ್ವಂ ಬುಧ್ಯಮಾನಶ್ಚರಾಚರಮ್ ।
ಶ್ರೋತುಮಿಚ್ಛಾಮಿ ತಜ್ಜ್ಞಾನಂ ಘೃತಂ ಮಣ್ಡಮಯಂ ಯಥಾ ॥೬೮॥

ನೀವು ಪೂರ್ಣಜ್ಞಾನಿಗಳಾಗಿರುವಿರಿ. ಸಂಪೂರ್ಣವಾದ ಚರಾಚರ ಜಗತ್ತನ್ನು ತಿಳಿದವರಾಗಿರುವಿರಿ. ಈ ವಿಷಯದಲ್ಲಿ ಸಂದೇಹವೇ ಇಲ್ಲ.

ನೊರೆಯಿಂದ ಹೆಪ್ಪುಗಟ್ಟಿದ ತುಪ್ಪದಂತೆ–ಸಾರಭೂತವಾಗಿರುವ ಆ ತತ್ತ್ವಜ್ಞಾನವನ್ನು ನಿಮ್ಮಿಂದ ಕೇಳಬೇಕೆಂದಿರುತ್ತೇನೆ.”

ಯಾಜ್ಞವಲ್ಕ್ಯರು ಹೇಳುತ್ತಾರೆ :

ಕೃತ್ಸ್ನಧಾರಿಣಮೇವ ತ್ವಾಂ ಮನ್ಯೇ ಗನ್ಧರ್ವಸತ್ತಮ ।
ಜಿಜ್ಞಾಸಸೇ ಚ ಮಾಂ ರಾಜಂಸ್ತನ್ನಿಬೋಧ ಯಥಾಶ್ರುತಮ್ ॥೬೯॥

“ಗಂಧರ್ವಶ್ರೇಷ್ಠನೇ! ನಾನು ನಿನ್ನನ್ನು ಸಂಪೂರ್ಣಜ್ಞಾನವನ್ನು ಧಾರಣಮಾಡಿಕೊಂಡಿರುವವನನ್ನಾಗಿಯೇ ಭಾವಿಸುತ್ತೇನೆ. ನೀನು ಎಲ್ಲ ವನ್ನೂ ತಿಳಿದವನಾಗಿದ್ದರೂ ನನ್ನೊಡನೆಯೂ ಆ ಮಹತ್ತತ್ತ್ವದ ವಿಷಯವನ್ನು ಕುರಿತು ಜಿಜ್ಞಾಸೆಮಾಡುತ್ತಿರುವೆ. ಆದುದರಿಂದ ಪರತತ್ತ್ವದ ವಿಷಯದಲ್ಲಿ ನಾನೀಗ ಹೇಳುವುದನ್ನು ಕೇಳು.

ಅಬುಧ್ಯಮಾನಾಂ ಪ್ರಕೃತಿಂ ಬುಧ್ಯತೇ ಪಞ್ಚವಿಂಶಕಃ ।
ನ ತು ಬುಧ್ಯತಿ ಗನ್ಧರ್ವ ಪ್ರಕೃತಿಃ ಪಞ್ಚವಿಂಶಕಮ್ ॥೭೦॥

ಗಂಧರ್ವನೇ! ವಿಶ್ವಾವಸುವೇ! ತಿಳಿಯದಿರುವ ಪ್ರಕೃತಿಯನ್ನು ಇಪ್ಪತ್ತೈದನೆಯವನಾದ ಚೇತನನು ತಿಳಿಯುತ್ತಾನೆ. ಅಥವಾ ಚೇತನನ ಇರುವಿಕೆಯಿಂದಲೇ ಪ್ರಕೃತಿಯು ತಿಳಿಯಲ್ಪಡುತ್ತದೆ. (ಪುರುಷನ ಸಂಪರ್ಕ ದಿಂದಲೇ ಪ್ರಕೃತಿಯ ವಿಕಾರಗಳಾದ ಇಂದ್ರಿಯಗಳು ಕಾರ್ಯೋನ್ಮುಖ ವಾಗುತ್ತವೆ.) ಆದರೆ ಪ್ರಕೃತಿಗೆ ಇಪ್ಪತ್ತೈದನೆಯವನು ಯಾರೆಂಬುದು ತಿಳಿ ಯದು. (ಇಂದ್ರಿಯಗಳಿಗೆ ಚೇತನನನ್ನು ತಿಳಿಯಲು ಸಾಧ್ಯವಾಗುವುದಿಲ್ಲ.)

ಅನೇನ ಪ್ರತಿಬೋಧೇನ ಪ್ರಧಾನಂ ಪ್ರವದನ್ತಿ ತತ್ ।
ಸಾಂಖ್ಯಯೋಗಾಶ್ಚ ತತ್ತ್ವಜ್ಞಾ ಯಥಾಶ್ರುತಿನಿದರ್ಶನಾತ್ ॥೭೧॥

ತತ್ತ್ವವನ್ನು ತಿಳಿದ ಸಾಂಖ್ಯ-ಯೋಗವಿದ್ವಾಂಸರು ಈ ವಿಧವಾದ ತಿಳಿವಳಿಕೆಯಿಂದ ಶ್ರುತಿಯ ನಿರೂಪಣೆಗೆ ಅನುಸಾರವಾಗಿ ಇಪ್ಪತ್ತೈದನೆಯವ ನಾದ ಚೇತನನನ್ನೇ ಪ್ರಧಾನನೆನ್ನುತ್ತಾರೆ.

ಪಶ್ಯಂಸ್ತಥೈವ ಚಾಪಶ್ಯನ್ಪಶ್ಯತ್ಯನ್ಯಃ ಸದಾನಘ ।
ಷಡ್ವಿಂಶಂ ಪಞ್ಚವಿಂಶಂ ಚ ಚತುರ್ವಿಂಶಂ ಚ ಪಶ್ಯತಿ ॥೭೨॥

ಷಡ್ವಿಂಶನಿಗಿಂತಲೂ ಬೇರೆಯವನಾದ ಪಂಚವಿಂಶನು ಚತುರ್ವಿಂಶಾತ್ಮಕ ವಾದ ಪ್ರಕೃತಿಯನ್ನು ಜಾಗ್ರದವಸ್ಥೆಯಲ್ಲಿ ನೋಡುತ್ತಾನೆ. ಸಮಾಧಿಯಲ್ಲಿ ಚತುರ್ವಿಂಶಾತ್ಮಕವಾದ ಪ್ರಕೃತಿಯನ್ನು ಕಾಣುವುದಿಲ್ಲ. ನಿಜಸ್ವರೂಪವನ್ನೇ ಕಂಡುಕೊಳ್ಳುತ್ತಾನೆ. ಆದರೆ ಷಡ್ವಿಂಶನಾದ ಪರಮಾತ್ಮನು ಪಂಚವಿಂಶನಾದ ಚೇತನನನ್ನೂ ನೋಡುತ್ತಾನೆ. ಚತುರ್ವಿಂಶಾತ್ಮಕವಾದ ಪ್ರಕೃತಿಯನ್ನೂ ನೋಡುತ್ತಾನೆ.

ನ ತು ಪಶ್ಯತಿ ಪಶ್ಯಂಸ್ತು ಯಶ್ಚೈನಮನುಪಶ್ಯತಿ ।
ಪಞ್ಚವಿಂಶೋಽಭಿಮನ್ಯೇತ ನಾನ್ಯೋಽಸ್ತಿ ಪರತೋ ಮಮ ॥೭೩॥

ಆದರೆ ಇಪ್ಪತ್ತೈದನೆಯವನಾದ ಚೇತನನು ತನ್ನನ್ನು ಬಿಟ್ಟು ಬೇರೆ ಯವನೇ ಇಲ್ಲವೆಂದು ಭಾವಿಸಿದರೆ, ಅವನನ್ನು ಯಾವನು ಸರ್ವಕಾಲ ದಲ್ಲಿಯೂ ನೋಡುತ್ತಿರುವನೋ–ಆ ಪರಮಾತ್ಮನು ಚೇತನನನ್ನು ನೋಡು ತ್ತಿದ್ದರೂ ಚೇತನನು ಅವನನ್ನು ಕಾಣುವುದಿಲ್ಲ.

ನ ಚತುರ್ವಿಂಶಕೋ ಗ್ರಾಹ್ಯೋ ಮನುಜೈರ್ಜ್ಞಾನದರ್ಶಿಭಿಃ ।
ಮತ್ಸ್ಯಶ್ಚೋದಕಮನ್ವೇತಿ ಪ್ರವರ್ತೇತ ಪ್ರವರ್ತನಾತ್ ॥೭೪॥

ತಥೈವ ಬುಧ್ಯತೇ ಮತ್ಸ್ಯಸ್ತಥೈಷೋಽಪ್ಯನುಬುಧ್ಯತೇ ।

ತತ್ತ್ವಜ್ಞಾನಿಗಳಾದವರು ಚತುರ್ವಿಂಶಾತ್ಮಕವಾದ ಪ್ರಕೃತಿಯನ್ನೇ (ಶರೀರ ವನ್ನೇ) ಕಾಣಬಾರದು. ಮೀನು ನೀರನ್ನೇ ಅನುಸರಿಸಿ ಹೋಗುತ್ತಿರುತ್ತದೆ. ನೀರು ಹರಿದುಕೊಂಡು ಮುಂದೆ ಹೋದರೆ ತಾನೂ ಅದರೊಡನೆಯೇ ಹೋಗುತ್ತದೆ. ಆದರೆ ತಾನು ನೀರಿನಿಂದ ಪ್ರತ್ಯೇಕವೆಂಬುದನ್ನು ತಿಳಿದಿರುತ್ತದೆ. ಹಾಗೆಯೇ ಚೇತನನು ಪ್ರಕೃತಿಯನ್ನು ಅನುಸರಿಸಿ ಹೋಗಲೇಬೇಕು. ಆದರೆ ಪ್ರಕೃತಿಯಿಂದ ತಾನು ಭಿನ್ನನೆಂಬುವುದನ್ನು ಅರಿತು ಅದರಂತೆ ವರ್ತಿಸಬೇಕು.

ಸಸ್ನೇಹಾತ್ಸಹವಾಸಾಚ್ಚ ಸಾಭಿಮಾನಾಚ್ಚ ನಿತ್ಯಶಃ ॥೭೫॥

ಸ ನಿಮಜ್ಜತಿ ಕಾಲಸ್ಯ ಯದೈಕತ್ವಂ ನ ಬುಧ್ಯತೇ ।
ಉನ್ಮಜ್ಜತಿ ಹಿ ಕಾಲಸ್ಯ ಸಮತ್ವೇನಾಭಿಸಂವೃತಃ ॥೭೬॥

ಆದರೆ ಚೇತನನು ಶರೀರದ ಮೇಲಿನ ಪ್ರೀತಿಯಿಂದಲೂ, ಪುತ್ರ-ಮಿತ್ರ-ಕಳತ್ರಾದಿಗಳ ಸಹವಾಸದಿಂದಲೂ, ತಾನು-ತನ್ನದು ಎಂಬ ಅಭಿಮಾನ ದಿಂದಲೂ ನಿತ್ಯವೂ ವಿಮೋಹಿತನಾಗಿ–ಯಾವಾಗ ಷಡ್ವಿಂಶನಾದ ಪರಮಾತ್ಮ ನೊಡನೆ ತನಗೆ ಏಕತ್ವವಿದೆಯೆಂಬುದನ್ನು ತಿಳಿದುಕೊಳ್ಳುವುದಿಲ್ಲವೋ–ಚತುರ್ವಿಂಶರೂಪವಾದ ಪ್ರಕೃತಿಯೊಡನೆಯೇ ಏಕತ್ವವನ್ನು ಹೊಂದಿರು ವನೋ (ದೇಹಾತ್ಮಭಾವದಿಂದಿರುವನೋ) – ಆಗ ಆ ಚೇತನನು ಕಾಲ ಸಮುದ್ರದಲ್ಲಿ ಮುಳುಗಿಹೋಗುತ್ತಾನೆ. ಪರಮಾತ್ಮನೊಡನೆ ಸಮಭಾವದಿಂದ ಸಂವೃತನಾದವನು (ಪರಮಾತ್ಮನೊಡನೆ ಏಕತ್ವವನ್ನು ಹೊಂದಿದವನು) ಕಾಲಸಮುದ್ರದಿಂದ ಉದ್ಧೃತನಾಗುತ್ತಾನೆ.

ಯದಾ ತು ಮನ್ಯತೇಽನ್ಯೋಽಹಮನ್ಯ ಏಷ ಇತಿ ದ್ವಿಜಃ ।
ತದಾ ಸ ಕೇವಲೀಭೂತಃ ಷಡ್ವಿಂಶಮನುಪಶ್ಯತಿ ॥೭೭॥

ಯಾವಾಗ ಅಧ್ಯಾತ್ಮಸಾಧಕನಾದ ದ್ವಿಜನು – 'ನಾನು ಪ್ರಕೃತಿಗಿಂತಲೂ ಭಿನ್ನನಾದವನು ಮತ್ತು ನನಗಿಂತಲೂ ಈ ಪ್ರಕೃತಿಯು ಬೇರೆಯದು'– ಎಂದು ತಿಳಿಯುವನೋ ಆಗ ಅವನು ಆತ್ಮಭೂತನಾಗಿ ಇಪ್ಪತ್ತಾರನೆಯವನಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಅನ್ಯಶ್ಚ ರಾಜನ್ನವರಸ್ತಥಾನ್ಯಃ ಪಞ್ಚವಿಂಶಕಃ ।
ತತ್ಸ್ಥಾನಾಚ್ಚಾನುಪಶ್ಯನ್ತಿ ಏಕ ಏವೇತಿ ಸಾಧಕಃ ॥೭೮॥

ವಿಶ್ವಾವಸುವೇ! ಇಪ್ಪತ್ತೈದನೆಯ ಚೇತನನು ಇಪ್ಪತ್ತಾರನೆಯವನಾದ ಪರಬ್ರಹ್ಮನಿಗಿಂತಲೂ ಕನಿಷ್ಠನು. ಪರಮಾತ್ಮನನ್ನು ಆಶ್ರಯಿಸಿ ಇಪ್ಪತ್ತೈದನೆ ಯವನಾದ ಚೇತನನಿದ್ದಾನೆ. ಆದರೆ ಇಬ್ಬರೂ ಒಬ್ಬನೇ ಎಂಬುದನ್ನು ಸಮಾಧಿಯೋಗಸ್ಥಾನದಿಂದ ಸತ್ಪುರುಷರು ಕಂಡುಕೊಳ್ಳುತ್ತಾರೆ.

ತೇ ನೈತನ್ನಾಭಿನನ್ದನ್ತಿ ಪಞ್ಚವಿಂಶಕಮಚ್ಯುತಮ್ ।

ಜನ್ಮಮೃತ್ಯುಭಯಾದ್ಭೀತಾ ಯೋಗಾಃ ಸಾಂಖ್ಯಾಶ್ಚ ಕಾಶ್ಯಪ ।
ಷಡ್ವಿಂಶಮನುಪಶ್ಯಂತಃ ಶುಚಯಸ್ತತ್ಪರಾಯಣಾಃ ॥೭೯॥

ಕಾಶ್ಯಪನೇ! ಹುಟ್ಟು-ಸಾವುಗಳ ಭಯದಿಂದ ಭೀತರಾದ, ಪರಿಶುದ್ಧರಾದ, ಭಗವತ್ಪರಾಯಣರಾದ ಯೋಗರು ಮತ್ತು ಸಾಂಖ್ಯರು ಇಪ್ಪತ್ತಾರನೆಯವನಾದ ಪರಬ್ರಹ್ಮಪರಮಾತ್ಮನನ್ನು ಸಮಾಧಿಯೋಗದಲ್ಲಿ ಕಾಣುತ್ತಾ ಇಪ್ಪತ್ತೈದನೆಯವನೂ ಅಚ್ಯುತನಾದ ಪರಮಾತ್ಮನೇ–ಎಂಬ ಈ ಅಭಿಪ್ರಾಯವನ್ನು ಮಾನ್ಯಮಾಡುವುದಿಲ್ಲವೆಂಬುದಿಲ್ಲ. (ಇಪ್ಪತ್ತಾರನೆಯ ತತ್ತ್ವವಿದೆಯೆನ್ನುವವರೂ ಸಮಾಧಿಯೋಗದಲ್ಲಿ ಜೀವಾತ್ಮನ ಅಭೇದವನ್ನೇ ಮಾನ್ಯಮಾಡುತ್ತಾರೆ.)

ಯದಾ ಸ ಕೇವಲೀಭೂತಃ ಷಡ್ವಿಂಶಮನುಪಶ್ಯತಿ ।
ತದಾ ಸ ಸರ್ವವಿದ್ವಿದ್ವಾನ್ನ ಪುನರ್ಜನ್ಮ ವಿಂದತಿ ॥೮೦॥

ಯಾವಾಗ ಪಂಚವಿಂಶನು ಕೇವಲೀಭೂತನಾಗಿ (ಪ್ರಕೃತಿಯ ಸಂಸರ್ಗದಿಂದ ರಹಿತನಾಗಿ) ಇಪ್ಪತ್ತಾರನೆಯವನಾದ ಪರಮಾತ್ಮನನ್ನು ನೋಡುವನೋ–ಆಗ ಅವನು ಸರ್ವಜ್ಞನಾದ ವಿದ್ವಾಂಸನಾಗಿ ಈ ಪ್ರಪಂಚದಲ್ಲಿ ಪುನಃ ಜನ್ಮವನ್ನು ಪಡೆಯುವುದಿಲ್ಲ.

ಏವಮಪ್ರತಿಬುದ್ಧಶ್ಚ ಬುಧ್ಯಮಾನಶ್ಚ ತೇಽನಘ ।
ಬುದ್ಧಶ್ಚೋಕ್ತೋ ಯಥಾ ತತ್ತ್ವಂ ಮಯಾ ಶ್ರುತಿನಿದರ್ಶನಾತ್ ॥೮೧॥

ಪಾಪರಹಿತನಾದ ಗಂಧರ್ವನೇ! ಹೀಗೆ ನಾನು ಅಪ್ರತಿಬುದ್ಧ (ಜಡಪ್ರಕೃತಿ)ದ ವಿಷಯವನ್ನೂ, ಬುಧ್ಯಮಾನ (ಜೀವಾತ್ಮ)ನ ವಿಷಯವನ್ನೂ, ಬುದ್ಧನ (ಬೋಧಸ್ವರೂಪನಾದ ಪರಮಾತ್ಮನ) ವಿಷಯವನ್ನೂ–ಶ್ರುತಿಯ ನಿದರ್ಶನಕ್ಕೆ ಅನುಸಾರವಾಗಿ ಯಥಾವತ್ತಾಗಿ ಹೇಳಿದ್ದೇನೆ.

ಪಶ್ಯಾಪಶ್ಯಂ ಯೋ ನ ಪಶ್ಯೇತ್ಕ್ಷೇಮ್ಯಂ ತತ್ತ್ವಂ ಚ ಕಾಶ್ಯಪ ।
ಕೇವಲಾಕೇವಲಂ ಚಾದ್ಯಂ ಪಞ್ಚವಿಂಶಂ ಪರಂ ಚ ಯತ್ ॥೮೨॥

ಕಶ್ಯಪನಂದನನೇ! ಯಾವನು ಚೇತನನನ್ನೂ ಮತ್ತು ಪ್ರಕೃತಿಯನ್ನೂ ಬೇರೆ-ಬೇರೆ ಎಂದು ತಿಳಿಯುವುದಿಲ್ಲವೋ – ಕ್ಷೇಮಕರವಾದ ತತ್ತ್ವದ ಮೇಲೆ ದೃಷ್ಟಿಯನ್ನಿಡುವುದಿಲ್ಲವೋ – ಕೇವಲನ (ಪ್ರಕೃತಿಯಿಂದ

ರಹಿತನಾದ ಜ್ಞಾನಿಯ) ಮತ್ತು ಅಕೇವಲನ (ಪ್ರಕೃತಿಯಿಂದ ಯುಕ್ತನಾಗಿರುವ ಅಜ್ಞಾನಿಯ) ಲಕ್ಷಣಗಳನ್ನೂ ತಿಳಿದಿಲ್ಲವೋ–ಆದಿಕಾರಣನಾದ, ಶ್ರೇಷ್ಠನಾದ, ಇಪ್ಪತ್ತೈದನೆಯವನಾದ ಪುರುಷನನ್ನು ತಿಳಿದಿಲ್ಲವೋ–ಅಂತಹವನು ಹುಟ್ಟು-ಸಾವುಗಳೆಂಬ ಚಕ್ರಕ್ಕೆ ಸಿಕ್ಕಿಹಾಕಿಕೊಂಡು ತೊಳಲುತ್ತಿರುತ್ತಾನೆ."

ವಿಶ್ವಾವಸುವು ಹೇಳುತ್ತಾನೆ :

ತಥ್ಯಂ ಶುಭಂ ಚೈತದುಕ್ತಂ ತ್ವಯಾ ವಿಭೋ
ಸಮ್ಯಕ್ಕ್ಷೇಮಂ ದೈವತಾದ್ಯಂ ಯಥಾವತ್ ।
ಸ್ವಸ್ತ್ಯಕ್ಷಯಂ ಭವತಶ್ಚಾಸ್ತು ನಿತ್ಯಂ
ಬುದ್ಧ್ಯಾ ಸದಾ ಬುದ್ಧಿಯುಕ್ತಂ ಮನಸ್ತೇ ॥೮೩॥

"ಪ್ರಭುವೇ! ನೀವು ಯಥಾವತ್ತಾಗಿ ಹೇಳಿರುವ, ಎಲ್ಲ ದೇವತೆಗಳಿಗೂ ಆದಿಕಾರಣವಾದ ಪರಬ್ರಹ್ಮದ ವಿಷಯವು ಸತ್ಯವಾಗಿದೆ, ಶುಭಕರವಾಗಿದೆ, ಸುಂದರವಾಗಿದೆ, ಕ್ಷೇಮಕರವಾಗಿದೆ. ಇದೇ ರೀತಿಯಲ್ಲಿ ನಿಮ್ಮ ಮನಸ್ಸು ಯಾವಾಗಲೂ ಜ್ಞಾನದಿಂದ ಯುಕ್ತವಾಗಿರಲಿ. ನಿಮಗೆ ಅಕ್ಷಯವಾದ ಕಲ್ಯಾಣವುಂಟಾಗಲಿ. ನಾನು ಹೋಗಿಬರುತ್ತೇನೆ."

ಯಾಜ್ಞವಲ್ಕ್ಯರು ಹೇಳುತ್ತಾರೆ :

"ಜನಕರಾಜ! ಮಹಾತ್ಮನಾದ, ಗಂಧರ್ವರಾಜನಾದ ವಿಶ್ವಾವಸುವು ಹೀಗೆ ಹೇಳಿ ತನ್ನ ಕಾಂತಿಯುಕ್ತವಾದ ದೃಷ್ಟಿಯಿಂದ ಪ್ರಕಾಶಮಾನನಾಗಿ, ನನಗೆ ಪ್ರದಕ್ಷಿಣೆಮಾಡಿ ಅಭಿನಂದಿಸಿ ಸ್ವರ್ಗಲೋಕಕ್ಕೆ ಹೊರಟುಹೋದನು. ಆ ಸಮಯದಲ್ಲಿ ನಾನೂ ಪರಮಸಂತೋಷದಿಂದ ಅವನ ಕಡೆಗೆ ನೋಡಿದೆನು.

ನರೇಂದ್ರನೇ! ಆಕಾಶಚಾರಿಗಳಾದ ಬ್ರಹ್ಮಾದಿದೇವತೆಗಳಲ್ಲಿ, ಭೂಮಿಯಲ್ಲಿರುವ ಮನುಷ್ಯರಲ್ಲಿ, ಪಾತಾಳಲೋಕದಲ್ಲಿ ವಾಸಮಾಡುವವರಲ್ಲಿ ಯಾರು ಕಲ್ಯಾಣಮಯವಾದ ಮೋಕ್ಷಮಾರ್ಗವನ್ನು ಆಶ್ರಯಿಸಿರುವರೋ–ಅವರೆಲ್ಲರ ಬಳಿಗೆ ಹೋಗಿ ವಿಶ್ವಾವಸುವು ನಾನು ಹೇಳಿದ ಈ ಸಮ್ಯಗ್ದರ್ಶನವನ್ನು ಉಪದೇಶಿಸಿದನು. ಸಾಂಖ್ಯಧರ್ಮದಲ್ಲಿಯೇ ತತ್ಪರರಾಗಿರುವ ಸಾಂಖ್ಯರಿಗೂ, ಯೋಗಧರ್ಮದಲ್ಲಿಯೇ ನಿರತರಾಗಿರುವ ಯೋಗಿಗಳಿಗೂ–

ಇವರೇ ಅಲ್ಲದೇ ಮೋಕ್ಷಾಭಿಲಾಷಿಗಳಾದ ಇನ್ನೂ ಅನೇಕ ಮನುಷ್ಯರಿಗೂ ಈ ತತ್ತ್ವೋಪದೇಶವು ಜ್ಞಾನಫಲವನ್ನು ಪ್ರತ್ಯಕ್ಷವಾಗಿ ಕೊಡುವುದಾಗಿದೆ.

ಜ್ಞಾನಾನ್ಮೋಕ್ಷೋ ಜಾಯತೇ ರಾಜಸಿಂಹ
ನಾಸ್ತ್ಯಜ್ಞಾನಾದೇವಮಾಹುರ್ನರೇನ್ದ್ರ ।
ತಸ್ಮಾಜ್ಜ್ಞಾನಂ ತತ್ತ್ವತೋಽನ್ವೇಷಿತವ್ಯಂ
ಯೇನಾತ್ಮಾನಂ ಮೋಕ್ಷಯೇಜ್ಜನ್ಮಮೃತ್ಯೋಃ ॥೮೭॥

ರಾಜಸಿಂಹನೇ! ಜ್ಞಾನದಿಂದಲೇ ಮೋಕ್ಷವಾಗುವುದೆಂದೂ–ಅಜ್ಞಾನದಿಂದ ಮೋಕ್ಷವಾಗುವುದಿಲ್ಲವೆಂದೂ ವಿದ್ವಾಂಸರು ಹೇಳುತ್ತಾರೆ. ಆದುದರಿಂದ ಯಥಾರ್ಥವಾಗಿ ಜ್ಞಾನವನ್ನು ಅನುಸಂಧಾನಮಾಡಲೇಬೇಕು. ಹೀಗೆ ಮಾಡಿ ತನ್ನನ್ನು ಹುಟ್ಟು-ಸಾವುಗಳ ಬಂಧನದಿಂದ ಬಿಡಿಸಿಕೊಳ್ಳಬೇಕು.

ಪ್ರಾಪ್ಯ ಜ್ಞಾನಂ ಬ್ರಾಹ್ಮಣಾತ್ಕ್ಷತ್ರಿಯಾದ್ವಾ
ವೈಶ್ಯಾಚ್ಛೂದ್ರಾದಪಿ ನೀಚಾದಭೀಕ್ಷ್ಣಮ್ ।
ಶ್ರದ್ಧಾತವ್ಯಂ ಶ್ರದ್ದಧಾನೇನ ನಿತ್ಯಂ
ನ ಶ್ರದ್ಧಿನಂ ಜನ್ಮಮೃತ್ಯೂ ವಿಶೇತಾಮ್ ॥೮೮॥

ಬ್ರಾಹ್ಮಣನಿಂದಾಗಲೀ, ಕ್ಷತ್ರಿಯನಿಂದಾಗಲೀ, ವೈಶ್ಯನಿಂದಾಗಲೀ, ಶೂದ್ರನಿಂದಾಗಲೀ ಅಥವಾ ನೀಚಜಾತಿಯವನಿಂದಾಗಲೀ–ಬ್ರಹ್ಮಜ್ಞಾನವನ್ನು ಪಡೆದುಕೊಂಡು ಶ್ರದ್ಧಾಳುವಾದ ಮನುಷ್ಯನು ಶ್ರದ್ಧೆಯಿಂದ ನಿರಂತರವಾಗಿ ಅನುಸಂಧಾನಮಾಡುತ್ತಲೇ ಇರಬೇಕು. ಯಾವನಲ್ಲಿ ಶ್ರದ್ಧೆಯಿರುವುದೋ–ಅವನನ್ನು ಹುಟ್ಟು-ಸಾವುಗಳೆರಡೂ ಪ್ರವೇಶಿಸುವುದಿಲ್ಲ.

ಸರ್ವೇ ವರ್ಣಾ ಬ್ರಾಹ್ಮಣಾ ಬ್ರಹ್ಮಜಾಶ್ಚ
ಸರ್ವೇ ನಿತ್ಯಂ ವ್ಯಾಹರನ್ತೇ ಚ ಬ್ರಹ್ಮ ।
ತತ್ತ್ವಂ ಶಾಸ್ತ್ರಂ ಬ್ರಹ್ಮಬುದ್ಧ್ಯಾ ಬ್ರವೀಮಿ
ಸರ್ವಂ ವಿಶ್ವಂ ಬ್ರಹ್ಮ ಚೈತತ್ಸಮಸ್ತಮ್ ॥೮೯॥

ಬ್ರಹ್ಮನಿಂದ ಹುಟ್ಟಿರುವ ಕಾರಣ ಎಲ್ಲ ವರ್ಣದವರೂ ಬ್ರಾಹ್ಮಣರೇ ಆಗಿದ್ದಾರೆ. ಸರ್ವರೂ ಸರ್ವಕಾಲದಲ್ಲಿಯೂ ಬ್ರಹ್ಮವನ್ನೇ ಉಚ್ಚರಿಸುತ್ತಿರು

ತ್ತಾರೆ. ನಾನು ಬ್ರಹ್ಮಬುದ್ಧಿಯಿಂದ ಯಥಾರ್ಥವಾದ ಶಾಸ್ತ್ರವನ್ನು ಹೇಳುತ್ತಿದ್ದೇನೆ. ಸಕಲವಾದ ವಿಶ್ವವೂ–ಎಲ್ಲ ದೃಶ್ಯಪ್ರಪಂಚವೂ ಬ್ರಹ್ಮವೇ ಆಗಿದೆ.

ಬ್ರಹ್ಮಾಸ್ಯತೋ ಬ್ರಾಹ್ಮಣಾಃ ಸಮ್ಪ್ರಸೂತಾ
ಬಾಹುಭ್ಯಾಂ ವೈ ಕ್ಷತ್ರಿಯಾಃ ಸಮ್ಪ್ರಸೂತಾಃ ।
ನಾಭ್ಯಾಂ ವೈಶ್ಯಾಃ ಪಾದತಶ್ಚಾಪಿ ಶೂದ್ರಾಃ
ಸರ್ವೇ ವರ್ಣಾ ನಾನ್ಯಥಾ ವೇದಿತವ್ಯಾಃ ॥೯೦॥

ಬ್ರಹ್ಮನ ಮುಖದಿಂದ ಬ್ರಾಹ್ಮಣರು ಹುಟ್ಟಿದರು. ತೋಳುಗಳಿಂದ ಕ್ಷತ್ರಿಯರು ಹುಟ್ಟಿದರು. ನಾಭಿಯಿಂದ (ತೊಡೆಗಳಿಂದ) ವೈಶ್ಯರು ಹುಟ್ಟಿದರು. ಕಾಲಿನಿಂದ ಶೂದ್ರರು ಹುಟ್ಟಿದರು. ಆದುದರಿಂದ ಯಾವ ವರ್ಣದವರಾಗಲೀ ಬ್ರಹ್ಮನಿಂದ ಭಿನ್ನರಾದವರೆಂದು ತಿಳಿಯಬಾರದು.

ಅಜ್ಞಾನತಃ ಕರ್ಮಯೋನಿಂ ಭಜನ್ತೇ
ತಾಂ ತಾಂ ರಾಜಂಸ್ತೇ ತಥಾ ಯಾನ್ತ್ಯಭಾವಮ್ ।
ತಥಾ ವರ್ಣಾ ಜ್ಞಾನಹೀನಾಃ ಪತನ್ತೇ
ಘೋರಾದಜ್ಞಾನಾತ್ಪ್ರಾಕೃತಂ ಯೋನಿಜಾಲಮ್ ॥೯೧॥

ಜನಕರಾಜ! ಮನುಷ್ಯರು ಅಜ್ಞಾನದ ಕಾರಣದಿಂದ ಕರ್ಮಗಳ ಅನುಷ್ಠಾನಗಳನ್ನು ಮಾಡುತ್ತಾ ಭಿನ್ನ-ಭಿನ್ನವಾದ ಯೋನಿಗಳಲ್ಲಿ ಜನ್ಮವನ್ನು ಪಡೆಯುತ್ತಾರೆ. ಹಾಗೆಯೇ ಮರಣವನ್ನೂ ಹೊಂದುತ್ತಾರೆ. ಅದೇ ರೀತಿಯಲ್ಲಿ ಬ್ರಾಹ್ಮಣಾದಿ ವರ್ಣಗಳವರೂ ಜ್ಞಾನಹೀನರಾಗಿ ಭಯಂಕರವಾದ ಅಜ್ಞಾನದ ಕಾರಣದಿಂದ ನಾನಾಪ್ರಕಾರವಾದ ಪ್ರಾಕೃತಯೋನಿಗಳೆಂಬ ಬಲೆಯಲ್ಲಿ ಬೀಳುತ್ತಾರೆ.

ತಸ್ಮಾಜ್ಜ್ಞಾನಂ ಸರ್ವತೋ ಮಾರ್ಗಿತವ್ಯಂ
ಸರ್ವತ್ರಸ್ಥಂ ಚೈತದುಕ್ತಂ ಮಯಾ ತೇ ।
ತತ್ಸ್ಥೋ ಬ್ರಹ್ಮಾ ತಸ್ಥಿವಾಂಶ್ಚಾಪರೋ ಯ-
ಸ್ತಸ್ಮೈ ನಿತ್ಯಂ ಮೋಕ್ಷಮಾಹುರ್ನರೇನ್ದ್ರ ॥೯೨॥

ಆದುದರಿಂದ ಸರ್ವಪ್ರಕಾರದಿಂದಲೂ ಆತ್ಮಜ್ಞಾನವನ್ನು ಪಡೆಯಲು ಪ್ರಯತ್ನಿಸುತ್ತಲೇ ಇರಬೇಕು. ಎಲ್ಲ ವರ್ಣಗಳವರೂ ತಮ್ಮ-ತಮ್ಮ

ಆಶ್ರಮಧರ್ಮಗಳಲ್ಲಿಯೇ ಇದ್ದುಕೊಂಡು ಜ್ಞಾನವನ್ನು ಪಡೆದುಕೊಳ್ಳಬಹುದೆಂಬುದನ್ನು ನಾನು ನಿನಗೆ ಈ ಹಿಂದೆಯೇ ಹೇಳಿದ್ದೇನೆ. ಆದುದರಿಂದ ಜ್ಞಾನನಿಷ್ಠನಾದವನು ಬ್ರಾಹ್ಮಣನೇ ಆಗಿರಲಿ ; ಇತರ ಯಾವ ವರ್ಣದವನೇ ಆಗಿರಲಿ–ಅಂತಹವನಿಗೆ ಶಾಶ್ವತವಾದ ಮೋಕ್ಷವು ಲಭಿಸಿಯೇ ತೀರುವುದೆಂದು ವಿದ್ವಾಂಸರು ಹೇಳುತ್ತಾರೆ.

ಯತ್ತೇ ಪೃಷ್ಟಂ ತನ್ಮಯಾ ಚೋಪದಿಷ್ಟಂ
ಯಾಥಾತಥ್ಯಂ ತದ್ವಿಶೋಕೋ ಭವಸ್ವ ।
ರಾಜನ್ಗಚ್ಛಸ್ವೈತದರ್ಥಸ್ಯ ಪಾರಂ
ಸಮ್ಯಕ್ಪ್ರೋಕ್ತಂ ಸ್ವಸ್ತಿ ತೇ ತ್ವಸ್ತು ನಿತ್ಯಮ್ ॥೯೩॥

ಜನಕರಾಜ! ನೀನು ಯಾವುದನ್ನು ಕೇಳಿದೆಯೋ–ಅದಕ್ಕೆ ಉತ್ತರರೂಪವಾಗಿ ನಾನು ನಿನಗೆ ಯಥಾವತ್ತಾಗಿ ಉಪದೇಶಿಸಿದ್ದೇನೆ. ಈ ನನ್ನ ಉಪದೇಶವನ್ನು ಕೇಳಿದನಂತರ ನೀನು ಶೋಕರಹಿತನಾಗು. ಈ ತತ್ತ್ವಾರ್ಥದಲ್ಲಿ ನೀನೂ ಪಾರಂಗತನಾಗು. ನಾನು ನಿನಗೆ ಜ್ಞಾನವನ್ನು ಚೆನ್ನಾಗಿ ಉಪದೇಶಿಸಿದ್ದೇನೆ. ನಿನಗೆ ನಿರಂತರವಾಗಿ ಮಂಗಳವಾಗಲಿ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಧೀಮಂತರಾದ ಯಾಜ್ಞವಲ್ಕ್ಯರಿಂದ ಹೀಗೆ ಉಪದಿಷ್ಟನಾದ ಮಿಥಿಲಾಧಿಪತಿಯಾದ ಜನಕನು ಬಹಳ ಪ್ರಸನ್ನನಾದನು. ಜನಕನು ಮುನಿಶ್ರೇಷ್ಠರಾದ ಯಾಜ್ಞವಲ್ಕ್ಯರಿಗೆ ಪ್ರದಕ್ಷಿಣೆಯನ್ನು ಮಾಡಿದನಂತರ ಯಾಜ್ಞವಲ್ಕ್ಯರು ಹೊರಟುಹೋದರು. ಮೋಕ್ಷವಿದನಾದ ದೇವರಾತನ ಮಗನಾದ ಜನಕಮಹಾರಾಜನು ಅಲ್ಲಿಯೇ ಕುಳಿತು ಒಂದು ಕೋಟಿ ಗೋವುಗಳನ್ನು ಸ್ಪರ್ಶಿಸಿ ಬ್ರಾಹ್ಮಣರಿಗೆ ದಾನಮಾಡಿದನು. ಹಾಗೆಯೇ ಬ್ರಾಹ್ಮಣರಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಬೊಗಸೆ ರತ್ನಗಳನ್ನೂ–ಸುವರ್ಣವನ್ನೂ ದಾನಮಾಡಿದನು.

ಬಳಿಕ ವಿದೇಹರಾಜನು ವಿದೇಹರಾಜ್ಯದ ಆಡಳಿತವನ್ನು ತನ್ನ ಮಗನಿಗೆ ವಹಿಸಿಕೊಟ್ಟು ತಾನು ಯತಿಧರ್ಮವನ್ನು ಪರಿಪಾಲಿಸುತ್ತಾ ಅಲ್ಲಿಯೇ ವಾಸವಾಗಿದ್ದನು. ಸಾಂಖ್ಯಜ್ಞಾನವನ್ನೂ ಮತ್ತು ಯೋಗಶಾಸ್ತ್ರವನ್ನೂ

ಜನಕನು ಸಂಪೂರ್ಣವಾಗಿ ಅಧ್ಯಯನಮಾಡಿದನು. ಧರ್ಮಾಧರ್ಮಗಳನ್ನು ಪ್ರಾಕೃತವಾದುವುಗಳೆಂದು ಭಾವಿಸಿ ಅವುಗಳನ್ನು ತಿರಸ್ಕರಿಸುತ್ತಾ, ತಾನು ಅನಂತನೆಂದು ಭಾವಿಸಿಕೊಂಡು ನಿತ್ಯವೂ ಅಧ್ಯಾತ್ಮವನ್ನೇ ಚಿಂತಿಸುತ್ತಿದ್ದನು. ಧರ್ಮ-ಅಧರ್ಮ, ಪುಣ್ಯ-ಪಾಪ, ಸತ್ಯ-ಅಸತ್ಯ, ಹುಟ್ಟು-ಸಾವು ಇವೆಲ್ಲವೂ ಪ್ರಕೃತಿಗೆ ಸಂಬಂಧಿಸಿದುವುಗಳೆಂದೂ, ಇವು ವ್ಯಕ್ತದ (ಬುದ್ಧಿಯ) ಅವ್ಯಕ್ತದ (ಪ್ರಕೃತಿಯ) ಕಾರ್ಯಗಳೆಂದೂ ಭಾವಿಸಿ, ಈ ಎಲ್ಲದರ ಸಂಸರ್ಗದಿಂದಲೂ ರಹಿತನಾಗಿ ತನ್ನ ನಿತ್ಯ-ಶುದ್ಧಸ್ವರೂಪವನ್ನೇ ಸತತವಾಗಿ ಚಿಂತಿಸುತ್ತಿದ್ದನು.

ಪಶ್ಯನ್ತಿ ಯೋಗಾಃ ಸಾಂಖ್ಯಾಶ್ಚ ಸ್ವಶಾಸ್ತ್ರಕೃತಲಕ್ಷಣಾಃ ।
ಇಷ್ಟಾನಿಷ್ಟವಿಮುಕ್ತಂ ಹಿ ತಸ್ಥೌ ಬ್ರಹ್ಮ ಪರಾತ್ಪರಮ್ ॥೧೦೧॥

ತಮ್ಮ ತಮ್ಮ ಶಾಸ್ತ್ರಗಳಲ್ಲಿ ಪ್ರಾವೀಣ್ಯವನ್ನು ಪಡೆದಿರುವ ಯೋಗ ವಿದ್ವಾಂಸರೂ ಮತ್ತು ಸಾಂಖ್ಯವಿದ್ವಾಂಸರೂ ಬ್ರಹ್ಮವಸ್ತುವು ಇಷ್ಟಾನಿಷ್ಟಗಳಿಂದ ರಹಿತವಾದುದೆಂದೂ–ಅಚಲವೆಂದೂ ಮತ್ತು ಪರಾತ್ಪರವೆಂದೂ ಕಂಡುಕೊಂಡಿರುತ್ತಾರೆ.

ನಿತ್ಯಂ ತದಾಹುರ್ವಿದ್ವಾಂಸಃ ಶುಚಿ ತಸ್ಮಾಚ್ಛುಚಿರ್ಭವ ।
ದೀಯತೇ ಯಚ್ಚ ಲಭತೇ ದತ್ತಂ ಯಚ್ಚಾನುಮನ್ಯತೇ ॥೧೦೨॥

ದದಾತಿ ಚ ನರಶ್ರೇಷ್ಠ ಪ್ರತಿಗೃಹ್ಣಾತಿ ಯಚ್ಚ ಹ ।
ದದಾತ್ಯವ್ಯಕ್ತ ಇತ್ಯೇತತ್ಪ್ರತಿಗೃಹ್ಣಾತಿ ತಚ್ಚ ವೈ ॥೧೦೩॥

ವಿದ್ವಾಂಸರು ಬ್ರಹ್ಮವಸ್ತುವನ್ನು ನಿತ್ಯವೆಂದೂ ಪವಿತ್ರವಾದುದೆಂದೂ ಹೇಳುತ್ತಾರೆ. ಇದನ್ನು ತಿಳಿದು ನೀನೂ ಶುಚಿಯಾಗಿರು ಮತ್ತು ಪವಿತ್ರನಾಗಿರು. ನರಶ್ರೇಷ್ಠನೇ! ಯಾವ ವಸ್ತುವು ಯಾವನಿಗೆ ಕೊಡಲ್ಪಡುವುದೋ–ಕೊಟ್ಟುದು ಯಾವನಿಗೆ ಸೇರುತ್ತದೆಯೋ–ಕೊಟ್ಟುದನ್ನು ಯಾವನು ಅನುಮೋದಿಸುವನೋ–ಇವೆಲ್ಲವೂ ಪರಮಾತ್ಮನ ಸ್ವರೂಪವೆಂದೇ ತಿಳಿಯಬೇಕು. ಕೊಡತಕ್ಕವನೂ, ಪ್ರತಿಗ್ರಹಿಸುವವನೂ ಪರಮಾತ್ಮನೇ ಆಗಿದ್ದಾನೆಂದು ಭಾವಿಸಬೇಕು.

ಆತ್ಮಾ ಹ್ಯೇವಾತ್ಮನೋ ಹ್ಯೇಕಃ ಕೋಽನ್ಯಸ್ತಸ್ಮಾತ್ಪರೋ ಭವೇತ್ ।
ಏವಂ ಮನ್ಯಸ್ವ ಸತತಮನ್ಯಥಾ ಮಾ ವಿಚಿನ್ತಯ ॥೧೦೪॥

ಯುಧಿಷ್ಠಿರ! “ಏಕಮಾತ್ರನಾದ ಪರಮಾತ್ಮನೇ ನನ್ನವನಾಗಿದ್ದಾನೆ. ಅವನಿಗಿಂತಲೂ ಅಧಿಕನಾದ ಆತ್ಮೀಯನು ಇರಲು ಸಾಧ್ಯವೇ ಇಲ್ಲ’– ನಿರಂತರವಾಗಿ ಹೀಗೆಯೇ ಚಿಂತಿಸುತ್ತಿರು. ಬೇರೆ ಯಾವುದನ್ನೂ ಯೋಚಿಸಲೇಬೇಡ.

ಯಸ್ಯಾವ್ಯಕ್ತಂ ನ ವಿದಿತಂ ಸಗುಣಂ ನಿರ್ಗುಣಂ ಪುನಃ ।
ತೇನ ತೀರ್ಥಾನಿ ಯಜ್ಞಾಶ್ಚ ಸೇವಿತವ್ಯಾ ವಿಪಶ್ಚಿತಾ ॥೧೦೫॥

ಯಾವನಿಗೆ ಅವ್ಯಕ್ತಪ್ರಕೃತಿಯ ಸ್ವರೂಪವು ತಿಳಿದಿಲ್ಲವೋ ಮತ್ತು ಸಗುಣ-ನಿರ್ಗುಣನಾದ ಪರಮಾತ್ಮನ ಸ್ವರೂಪವೂ ತಿಳಿದಿಲ್ಲವೋ (ಕೇವಲ ಕರ್ಮಮಾರ್ಗದಲ್ಲಿಯೇ ನಿಷ್ಣಾತನಾಗಿರುವನೋ)–ಅಂತಹ ವಿದ್ವಾಂಸನು ತೀರ್ಥಯಾತ್ರೆಗಳನ್ನೂ ನಾನಾವಿಧವಾದ ಯಜ್ಞಗಳ ಅನುಷ್ಠಾನವನ್ನೂ ಮಾಡಬೇಕು.

ನ ಸ್ವಾಧ್ಯಾಯೈಸ್ತಪೋಭಿರ್ವಾ ಯಜ್ಞೈರ್ವಾ ಕುರುನನ್ದನ ।
ಲಭತೇಽವ್ಯಕ್ತಿಕಂ ಸ್ಥಾನಂ ಜ್ಞಾತ್ವಾವ್ಯಕ್ತಂ ಮಹೀಯತೇ ॥೧೦೬॥

ಕುರುಕುಮಾರ! ಸ್ವಾಧ್ಯಾಯ, ತಪಸ್ಸು, ಯಜ್ಞಗಳು–ಇವುಗಳಾವುದ ರಿಂದಲೂ ಮೋಕ್ಷದ ಅಥವಾ ಪರಮಪದದ ಪ್ರಾಪ್ತಿಯಾಗುವುದಿಲ್ಲ. ಅವ್ಯಕ್ತಪ್ರಕೃತಿಯ ಸ್ವರೂಪವನ್ನು ತಿಳಿಯುವುದರಿಂದಲೇ ಮನುಷ್ಯನು ಮಹಿಮಾನ್ವಿತನಾಗುತ್ತಾನೆ.

ತಥೈವ ಮಹತಃ ಸ್ಥಾನಮಾಹಙ್ಕಾರಿಕಮೇವ ಚ ।
ಅಹಙ್ಕಾರಾತ್ಪರಂ ಚಾಪಿ ಸ್ಥಾನಾನಿ ಸಮವಾಪ್ನುಯಾತ್ ॥೧೦೭॥

ಹಾಗೆಯೇ ಮಹತ್ತತ್ತ್ವವನ್ನು ಉಪಾಸನೆಮಾಡುವುದರಿಂದ ಮಹತ್ತತ್ತ್ವದ ಸ್ಥಾನವನ್ನೂ–ಅಹಂಕಾರವನ್ನು ಉಪಾಸನೆಮಾಡುವುದರಿಂದ ಅಹಂಕಾರ ತತ್ತ್ವದ ಸ್ಥಾನವನ್ನೂ–ಸಾಧಕನು ಪಡೆದುಕೊಳ್ಳುತ್ತಾನೆ. ಆದರೆ ಮಹತ್ತತ್ತ್ವ– ಅಹಂಕಾರಗಳಿಗಿಂತಲೂ ಶ್ರೇಷ್ಠವಾದ ಸ್ಥಾನಗಳನ್ನು ಸಾಧಕನು ಪಡೆದು ಕೊಳ್ಳಬೇಕು.

ಯೇ ತ್ವವ್ಯಕ್ತಾತ್ಪರಂ ನಿತ್ಯಂ ಜಾನತೇ ಶಾಸ್ತ್ರತತ್ಪರಾಃ ।
ಜನ್ಮಮೃತ್ಯುವಿಮುಕ್ತಂ ಚ ವಿಮುಕ್ತಂ ಸದಸಚ್ಚ ಯತ್ ॥೧೦೮॥

ಯಾರು ಶಾಸ್ತ್ರಾಧ್ಯಯನದಲ್ಲಿ ತತ್ಪರರಾಗಿರುವರೋ–ಅವರು ಪ್ರಕೃತಿಗಿಂತಲೂ ಶ್ರೇಷ್ಠನಾದ, ನಿತ್ಯನಾದ, ಹುಟ್ಟು-ಸಾವುಗಳಿಂದ ವಿಮುಕ್ತನಾದ, ಸಕಲವಿಧವಾದ ಸಂಗಗಳಿಂದಲೂ ರಹಿತನಾದ ಸದಸತ್ಸ್ವರೂಪನಾದ ಪರಮಾತ್ಮನನ್ನು ತಿಳಿಯುತ್ತಾರೆ.

ಏತನ್ಮಯಾಪ್ತಂ ಜನಕಾತ್ಪುರಸ್ತಾ-
ತ್ತೇನಾಪಿ ಚಾಪ್ತಂ ನೃಪ ಯಾಜ್ಞವಲ್ಕ್ಯಾತ್ ।
ಜ್ಞಾನಂ ವಿಶಿಷ್ಟಂ ನ ತಥಾ ಹಿ ಯಜ್ಞಾ
ಜ್ಞಾನೇನ ದುರ್ಗಂ ತರತೇ ನ ಯಜ್ಞೈಃ ॥೧೦೯॥

ಯುಧಿಷ್ಠಿರ! ಈ ದಿವ್ಯಜ್ಞಾನವನ್ನು ಹಿಂದೆ ನಾನು ಜನಕನಿಂದ ತಿಳಿದುಕೊಂಡೆನು. ಜನಕನು ಇದನ್ನು ಯಾಜ್ಞವಲ್ಕ್ಯರಿಂದ ತಿಳಿದುಕೊಂಡನು. ಜ್ಞಾನವೆಂಬುದು ಎಲ್ಲಕ್ಕಿಂತಲೂ ಮಿಗಿಲಾದ ಸಾಧನವು. ಯಜ್ಞಗಳು ಹಾಗೆ ಎಲ್ಲಕ್ಕಿಂತಲೂ ಮಿಗಿಲಾದುದಲ್ಲ. ಜ್ಞಾನದಿಂದಲೇ ಮನುಷ್ಯನು ದುರ್ಗಮವಾದ ಈ ಸಂಸಾರಸಾಗರವನ್ನು ದಾಟಬಲ್ಲನು. ಆದರೆ ಯಜ್ಞಗಳಿಂದ ಸಂಸಾರಸಾಗರವನ್ನು ದಾಟುವ ಸಾಧ್ಯತೆಯಿಲ್ಲ.

ದುರ್ಗಂ ಜನ್ಮ ನಿಧನಂ ಚಾಪಿ ರಾಜ-
ನ್ನ ಭೌತಿಕಂ ಜ್ಞಾನವಿದೋ ವದನ್ತಿ ।
ಯಜ್ಞೈಸ್ತಪೋಭಿರ್ನಿಯಮೈರ್ವ್ರತೈಶ್ಚ
ದಿವಂ ಸಮಾಸಾದ್ಯ ಪತನ್ತಿ ಭೂಮೌ ॥೧೧೦॥

ಜ್ಞಾನಿಗಳಾದವರು ಭೌತಿಕವಾದ ಹುಟ್ಟು-ಸಾವುಗಳು ದುರ್ಗಮವೆಂದು ಹೇಳುತ್ತಾರೆ. ಯಜ್ಞಗಳಿಂದಲೂ, ತಪಸ್ಸುಗಳಿಂದಲೂ, ನಿಯಮಪೂರ್ವಕವಾದ ವ್ರತಾನುಷ್ಠಾನಗಳಿಂದಲೂ ದುರ್ಗಮವಾದ ಈ ಹುಟ್ಟು-ಸಾವುಗಳಿಂದ ಪಾರಾಗಲು ಸಾಧ್ಯವಾಗುವುದಿಲ್ಲ. ಆದರೆ ಯಜ್ಞ-ತಪಸ್ಸು-ನಿಯಮ ವ್ರತಾದಿಗಳ ಅನುಷ್ಠಾನಗಳಿಂದ ಮನುಷ್ಯರು ಸ್ವರ್ಗಕ್ಕೆ ಹೋಗುತ್ತಾರೆ. ಪುಣ್ಯವು ಕ್ಷೀಣಿಸುತ್ತಲೇ ಪುನಃ ಭೂಮಿಯಲ್ಲಿ ಜನ್ಮತಾಳುತ್ತಾರೆ.

ತಸ್ಮಾದುಪಾಸಸ್ವ ಪರಂ ಮಹಚ್ಛುಚಿ
ಶಿವಂ ವಿಮೋಕ್ಷಂ ವಿಮಲಂ ಪವಿತ್ರಮ್ ।

ಕ್ಷೇತ್ರಂ ಜ್ಞಾತ್ವಾ ಪಾರ್ಥಿವ ಜ್ಞಾನಯಜ್ಞ -
ಮುಪಾಸ್ಯ ವೈ ತತ್ತ್ವಮೃಷಿರ್ಭವಿಷ್ಯಸಿ ॥೧೧೧॥

ಯುಧಿಷ್ಠಿರ! ಆದುದರಿಂದ ನೀನು ಪ್ರಕೃತಿಗಿಂತಲೂ ಆಚೆ ಇರುವ, ಮಹಾಂತನಾದ, ಪವಿತ್ರನಾದ, ಕಲ್ಯಾಣಮಯನಾದ, ನಿರ್ಮಲನಾದ, ಶುದ್ಧನಾದ, ಮೋಕ್ಷಸ್ವರೂಪನಾದ ಬ್ರಹ್ಮನ ಉಪಾಸನೆಯನ್ನು ಮಾಡು. ಕ್ಷೇತ್ರವು ಯಾವುದೆಂಬುದನ್ನು ತಿಳಿದು ಜ್ಞಾನವೆಂಬ ಯಜ್ಞವನ್ನು ಉಪಾಸನೆ ಮಾಡಿದರೆ ನಿಶ್ಚಯವಾಗಿಯೂ ನೀನು ತತ್ತ್ವಜ್ಞನಾದ ಋಷಿಯೇ ಆಗುವೆ.

ಯದುಪನಿಷದಮುಪಾಕರೋತ್ತಥಾಸೌ
ಜನಕನೃಪಸ್ಯ ಪುರಾ ಹಿ ಯಾಜ್ಞವಲ್ಕ್ಯಃ ।
ಯದುಪಗಣಿತಶಾಶ್ವತಾವ್ಯಯಂ ತ-
ಚ್ಛುಭಮಮೃತತ್ವಮಶೋಕಮೃಚ್ಛತಿ ॥೧೧೨॥

ಹಿಂದೆ ಯಾಜ್ಞವಲ್ಕ್ಯಮಹರ್ಷಿಗಳು ಜನಕರಾಜನಿಗೆ ಯಾವ ಉಪನಿಷತ್ತನ್ನು [ತತ್ತ್ವಜ್ಞಾನವನ್ನು] ಉಪದೇಶಮಾಡಿದರೋ–ಅದನ್ನು ಸತತವಾಗಿ ಮನನಮಾಡುವುದರಿಂದ ಸಾಧಕನು ಹಿಂದೆ ಹೇಳಿದ ಸನಾತನನಾದ, ಅವಿನಾಶಿಯಾದ, ಶುಭಸ್ವರೂಪನಾದ, ಅಮೃತಮಯನಾದ, ಶೋಕರಹಿತನಾದ ಪರಬ್ರಹ್ಮಪರಮಾತ್ಮನನ್ನು ಹೊಂದುತ್ತಾನೆ."

ಃ೧೮ನೆಯ ಅಧ್ಯಾಯವು ಮುಗಿಯಿತು.

ಇಪ್ಪತ್ತೈದನೆಯ ಸಂಪುಟವು ಮುಗಿಯಿತು.

ಹರಿಃ ಓಂ ಶ್ರೀಕೃಷ್ಣಾರ್ಪಣಮಸ್ತು
ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು
ಓಂ ತತ್ಸತ್

ಪರಿಶಿಷ್ಟ

೮ನೆಯ ಅಧ್ಯಾಯ :– ಕೃಪ-ಕೃತವರ್ಮಾಶ್ವತ್ಥಾಮರು ತಾವು ಕೃತಕೃತ್ಯರಾದೆವೆಂದು ಭಾವಿಸಿಕೊಂಡು ರಾಜನನ್ನು ನೋಡಲು ಹೋಗುತ್ತಾರೆ.

ಈ ಅಧ್ಯಾಯದ ಪೂರ್ತಿಯಾಗಿ ರುದ್ರನು ಕೊಟ್ಟ ಖಡ್ಗದ ವಿಷಯವೇ ಬರುವುದಿಲ್ಲವೆಂಬುದನ್ನು ಗಮನಿಸಬಹುದಾಗಿದೆ. ಧೃತರಾಷ್ಟ್ರನೂ ಆ ವಿಷಯವನ್ನು ಪ್ರಸ್ತಾಪಿಸುವುದಿಲ್ಲ. ೬ ಮತ್ತು ೧ನೆಯ ಅಧ್ಯಾಯಗಳಲ್ಲಿ ಹೇಳಿರುವಂತೆ ರುದ್ರನೇ ಪ್ರಸನ್ನನಾಗಿ ಖಡ್ಗವನ್ನು ಅಶ್ವತ್ಥಾಮನಿಗೆ ಕೊಟ್ಟಿದ್ದಲ್ಲಿ ಅದರ ಪ್ರಶಂಸೆಯು ಒಮ್ಮೆಯಾದರೂ ಬರುತ್ತಿದ್ದಿತೆಂಬುದು ನಮ್ಮ ಅಭಿಪ್ರಾಯವಾಗಿದೆ. ಅಶ್ವತ್ಥಾಮನ ಉದ್ದೇಶವನ್ನು ಬಹಳವಾಗಿ ಪ್ರತಿಭಟಿಸಿದ ಕೃಪರು ಸಂಹಾರಕಾರ್ಯದಲ್ಲಿ ಅಶ್ವತ್ಥಾಮನಿಗೆ ಸಂಪೂರ್ಣ ನೆರವಾದರೆಂಬುದೂ – ಇಂತಹ ಕ್ಷುದ್ರಕಾರ್ಯವು ಮುಗಿದುದಕ್ಕಾಗಿ ಅವರೂ ಸಂತೋಷಪಟ್ಟುದೂ–ಸಮರ್ಥಿಸಲಾಗದ ವಿಷಯಗಳಾಗಿವೆ. ಕೃತವರ್ಮನು ಮೊದಲಿನಿಂದಲೂ ಹಿಂಬಾಲಕನೇ ಹೊರತು ಅವನ ಪಾತ್ರವು ಗಣನೀಯವಾಗಿಲ್ಲ. ಸೇನಾಪತಿಯ ಆಜ್ಞೆ ಮತ್ತು ಅಭಿಪ್ರಾಯಗಳಂತೆ ನಡೆಯುವುದು ತಮ್ಮ ಕರ್ತವ್ಯವೆಂದು ಕೃಪ-ಕೃತವರ್ಮರಿಬ್ಬರೂ ಭಾವಿಸಿ ಹನನಕಾರ್ಯದಲ್ಲಿ ಅನುವಾದರೆಂದು ಸಮಾಧಾನವನ್ನು ಹೇಳಬಹುದಾಗಿದೆ.

೯ನೆಯ ಅಧ್ಯಾಯ :– ಕೃಪಾಶ್ವತ್ಥಾಮ-ಕೃತವರ್ಮರು ಪುನಃ ದುರ್ಯೋಧನನ ಬಳಿಗೆ ಹೋಗಿ ಬಹಳವಾಗಿ ಸಂಕಟಪಡುತ್ತಿದ್ದ ದುರ್ಯೋಧನನನ್ನು ನೋಡಿ ಪರಸ್ಪರವಾಗಿ ಅವನ ಗುಣಗಾನಮಾಡುತ್ತಾ ವಿಲಪಿಸುತ್ತಾರೆ. ನಿನ್ನಿಂದಲೇ ನಮಗೆ ಸಕಲವಿಧವಾದ ಸುಖೋಪಭೋಗಗಳೂ ಲಭಿಸಿತ್ತೆಂದು ಅಶ್ವತ್ಥಾಮನು ದುರ್ಯೋಧನನಿಗೆ ಹೇಳುತ್ತಾನೆ. ಬಳಿಕ ತಾನು ಆ ರಾತ್ರಿಯಲ್ಲಿ ಸಾಧಿಸಿದ ಮಹಾಕಾರ್ಯವನ್ನು ಸಂಕ್ಷೇಪವಾಗಿ ಹೇಳುತ್ತಾ – "ಸಪ್ತ ಪಾಣ್ಡವತಃ ಶೇಷಾ ಧಾರ್ತರಾಷ್ಟ್ರಾಸ್ತ್ರಯೋ ವಯಮ್ (೪೮) ಪಾಂಡವರ ಕಡೆಯಲ್ಲಿ ಏಳು ಮಂದಿ ಉಳಿದಿರುತ್ತಾರೆ. ನಮ್ಮ ಕಡೆಯಲ್ಲಿ ನಾವು ಮೂವರು ಉಳಿದುಕೊಂಡಿರುತ್ತೇವೆ. ಉಳಿದೆಲ್ಲ

ರನ್ನೂ ನಾನು ಸಂಹರಿಸಿದೆನು"–ಎನ್ನುತ್ತಾನೆ. ಆ ಮಾತಿನಿಂದ ದುರ್ಯೋಧನನಿಗೆ ಮಹಾನಂದವಾಗುತ್ತದೆ. "ಕೃಪ-ಕೃತವರ್ಮರೊಡನೆ ಕೂಡಿಕೊಂಡು ನೀನು ಮಾಡಿರುವ ಈ ಕಾರ್ಯವನ್ನು ಭೀಷ್ಮ-ದ್ರೋಣ-ಕರ್ಣರೂ ಮಾಡಲಿಲ್ಲ"–ಎಂದು ದುರ್ಯೋಧನನು ಅಶ್ವತ್ಥಾಮನ ಪ್ರಶಂಸೆ ಮಾಡುತ್ತಾನೆ. ಬಳಿಕ ಎಲ್ಲರಿಗೂ ಮಂಗಳವಾಗಲೆಂದು ಹೇಳಿ ಸಂತೋಷದಿಂದ ಪ್ರಾಣಬಿಡುತ್ತಾನೆ. ಪಾಂಡವರ ಮೇಲಿನ ಹಗೆತನವು ದುರ್ಯೋಧನನಿಗೆ ಕಡೆಯ ಉಸಿರುಹೋಗುವವರೆಗೂ ಉಳಿದಿರುತ್ತದೆ. ಆ ವೇಳೆಗೆ ಸಂಜಯನಿಗೆ ಋಷಿದತ್ತವಾಗಿದ್ದ ದಿವ್ಯದೃಷ್ಟಿಯೂ ಹೊರಟುಹೋಗುತ್ತದೆ. ಸಂಜಯನು ಹಸ್ತಿನಾಪಟ್ಟಣಕ್ಕೆ ಬರುತ್ತಾನೆ. ಧೃತರಾಷ್ಟ್ರನು ಪುತ್ರನ ನಿಧನವಾರ್ತೆಯನ್ನು ಕೇಳಿ ಸುದೀರ್ಘವಾಗಿ ನಿಟ್ಟುಸಿರುಬಿಡುತ್ತಾನೆ. ಇಲ್ಲಿಗೆ ಅಧ್ಯಾಯವು ಮುಗಿಯುತ್ತದೆ.

೧೦ನೆಯ ಅಧ್ಯಾಯ :– ಕೃಪಾಶ್ವತ್ಥಾಮ-ಕೃತವರ್ಮರಿಂದ ಹೇಗೋ ತಪ್ಪಿಸಿಕೊಂಡ ಧೃಷ್ಟದ್ಯುಮ್ನನ ಸಾರಥಿಯು ಬೆಳಗಾಗುತ್ತಲೇ ಯುಧಿಷ್ಠಿರನ ಬಳಿಗೆ ಹೋಗಿ ರಾತ್ರಿ ನಡೆದುದೆಲ್ಲವನ್ನೂ ಹೇಳುತ್ತಾನೆ. ಈ ಸಮಯದಲ್ಲಿ ಯುಧಿಷ್ಠಿರನ ಮಾತುಗಳು ಮಾರ್ಮಿಕವಾಗಿವೆ. ದ್ರೌಪದಿಯನ್ನು ಕರೆತರಲು ಯುಧಿಷ್ಠಿರನು ನಕುಲನನ್ನು ಕಳುಹಿಸಿ ತಾನು ಸಂಪೂರ್ಣವಾಗಿ ಧ್ವಂಸವಾಗಿದ್ದ ಶಿಬಿರದ ಕಡೆಗೆ ಹೋಗುತ್ತಾನೆ. ಶಿಬಿರದಲ್ಲಿ ತನ್ನ ಮಕ್ಕಳೂ ಬಂಧುಗಳೂ ಹತರಾಗಿಬಿದ್ದಿರುವುದನ್ನು ಕಂಡು ಮೂರ್ಛಿತನಾಗುತ್ತಾನೆ.

೧೧ನೆಯ ಅಧ್ಯಾಯ :– ನಕುಲನೊಡನೆ ಬಂದ ದ್ರೌಪದಿಯು ದುಃಖವನ್ನು ಸಹಿಸಿಕೊಳ್ಳಲಾಗದೇ ಯುಧಿಷ್ಠಿರನ ವಿಷಯದಲ್ಲಿ ಚುಚ್ಚುಮಾತುಗಳನ್ನಾಡುತ್ತಾಳೆ. ಅಶ್ವತ್ಥಾಮನನ್ನು ಕೂಡಲೇ ಸಂಹರಿಸಬೇಕೆಂದು ಆಗ್ರಹಪಡಿಸುತ್ತಾಳೆ. ಯುಧಿಷ್ಠಿರನು ಸಮಾಧಾನಪಡಿಸಲು ಯತ್ನಿಸುತ್ತಾನೆ. ಅಶ್ವತ್ಥಾಮನ ತಲೆಯಲ್ಲಿರುವ ಮಣಿಯನ್ನಾದರೂ ತನಗೆ ತಂದುತೋರಿಸಲೇಬೇಕೆಂದು ಹಠಮಾಡುತ್ತಾಳೆ. ಆ ಕಾರ್ಯವನ್ನು ಮಾಡಲು ಭೀಮಸೇನನನ್ನೇ ಪ್ರಚೋದಿಸುತ್ತಾಳೆ. ಭೀಮಸೇನನು ರಥಾರೂಢನಾಗಿ ಅಶ್ವತ್ಥಾಮನು ಹೋದ ಜಾಡನ್ನೇ ಹಿಡಿದು ಹೊರಟೇಬಿಡುತ್ತಾನೆ.

೧೨ನೆಯ ಅಧ್ಯಾಯ :– ಭೀಮಸೇನನೊಬ್ಬನೇ ಅಶ್ವತ್ಥಾಮನೊಡನೆ

ಯುದ್ಧಮಾಡಲು ಹೋದುದು ಶ್ರೀಕೃಷ್ಣನಿಗೆ ಸರಿ ಎನಿಸುವುದಿಲ್ಲ. ಅಶ್ವತ್ಥಾಮನು ಸ್ಥಿರಬುದ್ಧಿಯವನಲ್ಲವೆಂದೂ, ಚಪಲಚಿತ್ತನೆಂದೂ ತಿಳಿಯಪಡಿಸುತ್ತಾನೆ. 'ಅಶ್ವತ್ಥಾಮನು ದುರಾತ್ಮನೂ, ಚಪಲಚಿತ್ತನೂ, ಮಹಾಕೋಪಿಯೂ ಆಗಿರುವುದರಿಂದ ಅವನು ಬ್ರಹ್ಮಶಿರವೆಂಬ ಅಸ್ತ್ರವನ್ನು ಭೀಮಸೇನನ ಮೇಲೆ ಪ್ರಯೋಗಿಸುವುದು ನಿಶ್ಚಯ. ಆ ಮಹಾಸ್ತ್ರದಿಂದ ಭೀಮಸೇನನನ್ನು ಅವಶ್ಯವಾಗಿ ರಕ್ಷಿಸಬೇಕಾಗಿದೆ'–ಎನ್ನುತ್ತಾನೆ ಶ್ರೀಕೃಷ್ಣ. (೪೧)

೧೩ನೆಯ ಅಧ್ಯಾಯ :– ಶ್ರೀಕೃಷ್ಣನ ಸಲಹೆಯಂತೆ ಕೃಷ್ಣಾರ್ಜುನ-ಯುಧಿಷ್ಠಿರರು ಭೀಮಸೇನನನ್ನು ಹಿಂಬಾಲಿಸಿಕೊಂಡು ಹೋಗುತ್ತಾರೆ. ಆದರೆ ಭೀಮಸೇನನನ್ನು ಯುದ್ಧದಿಂದ ವಿಮುಖನನ್ನಾಗಿ ಮಾಡಲು ಸಮರ್ಥರಾಗುವುದಿಲ್ಲ. ಭೀಮಸೇನನು ಅಶ್ವತ್ಥಾಮನಿದ್ದೆಡೆಗೆ ಹೋಗಿ ಅವನನ್ನು ಯುದ್ಧಕ್ಕೆ ಆಹ್ವಾನಿಸುತ್ತಾನೆ. ಯುಧಿಷ್ಠಿರ-ಕೃಷ್ಣಾರ್ಜುನರು ಅವನ ಹಿಂದೆಯೇ ಹೋಗುತ್ತಾರೆ. ಅಶ್ವತ್ಥಾಮನು ಆ ನಾಲ್ವರನ್ನೂ ನೋಡಿ ಪಾಂಡವರ ವಿನಾಶವಾಗಲೆಂದು ಸಂಕಲ್ಪಿಸಿ ದಿವ್ಯವಾದ ಐಷೀಕಾಸ್ತ್ರವನ್ನು ಪ್ರಯೋಗಿಸಿಬಿಡುತ್ತಾನೆ. ಆ ಮಹಾಸ್ತ್ರದ ಮೂಲಕವಾಗಿ ಲೋಕವನ್ನೇ ದಹಿಸುವ ಸಾಮರ್ಥ್ಯವುಳ್ಳ ಅಗ್ನಿಯು ಹುಟ್ಟಿಕೊಳ್ಳುತ್ತದೆ.

೧೪ನೆಯ ಅಧ್ಯಾಯ :– ಅಶ್ವತ್ಥಾಮನ ಇಂಗಿತವನ್ನು ತಿಳಿದ ಶ್ರೀಕೃಷ್ಣನು ಅರ್ಜುನನಿಗೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುವಂತೆ ಪ್ರೇರಣೆ ಮಾಡುತ್ತಾನೆ. ಶ್ರೀಕೃಷ್ಣನ ಸಲಹೆಯಂತೆ ಅರ್ಜುನನು ಬ್ರಹ್ಮಾಸ್ತ್ರಪ್ರಯೋಗಕ್ಕೆ ತೊಡಗುತ್ತಾ ಹೀಗೆ ಸಂಕಲ್ಪಿಸುತ್ತಾನೆ :

ಪೂರ್ವಮಾಚಾರ್ಯಪುತ್ರಾಯ ತತೋಽನನ್ತರಮಾತ್ಮನೇ ।
ಭ್ರಾತೃಭ್ಯಶ್ಚೈವ ಸರ್ವೇಭ್ಯಃ ಸ್ವಸ್ತೀತ್ಯುಕ್ತ್ವಾ ಪರಂತಪಃ (೫)

'ಮೊದಲು ಆಚಾರ್ಯಪುತ್ರನಾದ ಅಶ್ವತ್ಥಾಮನಿಗೆ ಮಂಗಳವಾಗಲಿ'–ಎನ್ನುತ್ತಾನೆ ಅರ್ಜುನ. ಅರ್ಜುನನ ಧೀರೋದಾತ್ತತೆಯನ್ನು ನಾವು ಇಲ್ಲಿಯೂ ಕಾಣಬಹುದಾಗಿದೆ.

ಅರ್ಜುನನು ಹೀಗೆ ಶುಭಸಂಕಲ್ಪಮಾಡಿ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುತ್ತಾನೆ. ಆ ಎರಡು ಮಹಾಸ್ತ್ರಗಳೂ ಅಂತರಿಕ್ಷದಲ್ಲಿ ಪ್ರಜ್ವಲಿಸುತ್ತಿರು

ತ್ತವೆ. ಆ ಸಮಯದಲ್ಲಿ ಆ ಎರಡು ಮಹಾಸ್ತ್ರಗಳ ಉಪಶಮನಾರ್ಥವಾಗಿ ವ್ಯಾಸ-ನಾರದರಿಬ್ಬರೂ ಮಹಾಸ್ತ್ರಗಳ ಮಧ್ಯದಲ್ಲಿ ಕಾಣಿಸಿಕೊಳ್ಳುತ್ತಾರೆ. ಅರ್ಜುನಾಶ್ವತ್ಥಾಮರನ್ನು ಕುರಿತು ಸರ್ವವಿನಾಶಕರವಾದ ಈ ಮಹಾಸ್ತ್ರಗಳನ್ನೇಕೆ ಪ್ರಯೋಗಿಸಿದಿರೆಂದು ಪ್ರಶ್ನಿಸುತ್ತಾರೆ.

೧೫ನೆಯ ಅಧ್ಯಾಯ :– ಋಷಿಗಳಿಬ್ಬರ ಅಭಿಮತದಂತೆ ಅರ್ಜುನನು ಮಹಾಸ್ತ್ರವನ್ನು ಉಪಸಂಹಾರಮಾಡುತ್ತಾನೆ. ಮಹಾಸ್ತ್ರವನ್ನು ಉಪಸಂಹಾರಗೊಳಿಸಲು ಅರ್ಜುನನೊಬ್ಬನ ಹೊರತಾಗಿ ಮತ್ತಾರಿಂದಲೂ ಸಾಧ್ಯವೇ ಇಲ್ಲವೆಂಬುದು ಇಲ್ಲಿ ಪ್ರತಿಪಾದಿತವಾಗಿದೆ. ಅಶ್ವತ್ಥಾಮನಿಗೆ ತಾನು ಬಿಟ್ಟಿದ್ದ ಮಹಾಸ್ತ್ರವನ್ನು ಎಷ್ಟೇ ಪ್ರಯತ್ನಿಸಿದರೂ ಉಪಸಂಹರಿಸಲು ಸಾಧ್ಯವಾಗುವುದಿಲ್ಲ. ವ್ಯಾಸರು ಅಶ್ವತ್ಥಾಮನಿಗೆ ಕೋಪವನ್ನು ದೂರವಿಡಲು ಬೋಧಿಸುತ್ತಾರೆ. ಪ್ರಾಣವುಳಿಸಿಕೊಳ್ಳಲು ಮಣಿಯನ್ನು ಕೊಟ್ಟುಬಿಡುವಂತೆಯೂ ಹೇಳುತ್ತಾರೆ. ಅಶ್ವತ್ಥಾಮನು ಬಹಳ ಕಷ್ಟದಿಂದ ಮಣಿಯನ್ನು ಕೊಡಲು ಒಪ್ಪುತ್ತಾನೆ. ಆದರೆ ಬ್ರಹ್ಮಶಿರವನ್ನು ಉಪಸಂಹಾರಗೊಳಿಸಲು ತನ್ನ ಅಸಾಮರ್ಥ್ಯವನ್ನು ಹೇಳಿಕೊಳ್ಳುತ್ತಾನೆ. ಪಾಂಡವರ ಮೇಲಲ್ಲದಿದ್ದರೂ ಉತ್ತರೆಯ ಗರ್ಭದ ಮೇಲಾದರೂ ಅದು ಬೀಳುವುದೆಂದು ಹೇಳುತ್ತಾನೆ. ಅದಕ್ಕೆ ವ್ಯಾಸರೂ ಅನುಮತಿಸುತ್ತಾರೆ. ಅಶ್ವತ್ಥಾಮನು ಮಹಾಸ್ತ್ರವು ಉತ್ತರೆಯ ಗರ್ಭವನ್ನು ಧ್ವಂಸಮಾಡುವಂತೆ ಅದನ್ನು ಪ್ರಯೋಗಿಸುತ್ತಾನೆ.

೧೬ನೆಯ ಅಧ್ಯಾಯ :– ಶ್ರೀಕೃಷ್ಣನಿಗೆ ಈ ವಿಷಯವು ತಿಳಿದು ಪರಮಹೃಷ್ಟನಾಗಿ ಮಹಾಸ್ತ್ರಪ್ರಯೋಗವೂ ನಿಷ್ಪ್ರಯೋಜಕವಾಗುವುದೆಂಬುದನ್ನು ಅಶ್ವತ್ಥಾಮನಿಗೆ ಮನವರಿಕೆ ಮಾಡಿಕೊಡಲು ಉತ್ತರೆಯೊಡನೆ ಬ್ರಾಹ್ಮಣನೊಬ್ಬನು ಹೇಳಿದ ಮಾತನ್ನು ಅಶ್ವತ್ಥಾಮನಿಗೆ ಹೇಳುತ್ತಾನೆ. ಅದರಿಂದ ಅಶ್ವತ್ಥಾಮನಿಗೆ ಕೋಪವೇ ಬರುತ್ತದೆ. ‘ಪಾಂಡವರ ಗರ್ಭವು ವಿನಾಶಹೊಂದಿಯೇ ತೀರುವುದು’–ಎನ್ನುತ್ತಾನೆ. ಅದಕ್ಕೆ ಉತ್ತರವಾಗಿ ಶ್ರೀಕೃಷ್ಣನು ಸತ್ತ ಶಿಶುವು ಪುನಃ ಬದುಕುವುದೆಂದು ಹೇಳಿ ಅಶ್ವತ್ಥಾಮನು ಕ್ರೂರವಾಗಿ ವರ್ತಿಸಿದುದರಿಂದ ಅವನಿಗೆ ಘೋರಶಾಪವನ್ನು ಕೊಡುತ್ತಾನೆ. ವ್ಯಾಸರೂ ಶ್ರೀಕೃಷ್ಣನಿತ್ತ ಶಾಪವನ್ನು ಅನುಮೋದಿಸುತ್ತಾರೆ. ಬಳಿಕ

ಅಶ್ವತ್ಥಾಮನು ಶ್ರೀಕೃಷ್ಣನು ಹೇಳಿದಂತೆಯೇ ಆಗಲೆಂದು ಹೇಳಿ ಮಣಿಯನ್ನು ತಲೆಯಿಂದ ತೆಗೆದುಕೊಟ್ಟು ವ್ಯಾಸರ ಜೊತೆಯಲ್ಲಿ ಹೊರಟುಹೋಗುತ್ತಾನೆ. ಮಣಿಯನ್ನು ತೆಗೆದುಕೊಂಡು ಶ್ರೀಕೃಷ್ಣಪ್ರಮುಖರಾದ ಪಾಂಡವರು ದ್ರೌಪದಿಯ ಬಳಿಗೆ ಬಂದು ಮಣಿಯನ್ನು ಅವಳಿಗೆ ಒಪ್ಪಿಸುತ್ತಾರೆ. ಆ ಸಮಯದಲ್ಲಿ ಭೀಮಸೇನನು – ದ್ರೌಪದಿಯು ಹಿಂದೆ ಕೋಪಾವಿಷ್ಟಳಾಗಿ ಶ್ರೀಕೃಷ್ಣನೊಡನೆ ಹೇಳಿದ್ದ ಮಾತನ್ನು ಅವಳ ಸ್ಮರಣೆಗೆ ತರುತ್ತಾನೆ. ಈ ಮಾತು ನಿಶ್ಚಯವಾಗಿಯೂ ದ್ರೌಪದಿಗೂ ತನ್ಮೂಲಕವಾಗಿ ಇತರರಿಗೂ ಬೋಧಪ್ರದವಾಗಿದೆ. 'ಯಾವುದೇ ಸಂದರ್ಭದಲ್ಲಿಯೂ ಕೆಟ್ಟ ಮಾತುಗಳನ್ನು ಅಪ್ಪಿತಪ್ಪಿಯೂ ಆಡಬಾರದು. ಆಡಿದರೆ ಅದು ಹಾಗೆಯೇ ನಡೆದು ಹೋಗಬಹುದು. ನಡೆದುಹೋದನಂತರ ಚಿಂತಿಸಿಯೂ ಪ್ರಯೋಜನ ವಿಲ್ಲ'–ಎಂಬ ಮಹೋಪದೇಶವು ಇಲ್ಲಿ ಅಡಗಿದೆ.

ದ್ರೌಪದಿಯೂ ಗುರುಪುತ್ರನನ್ನು ಸಂಹರಿಸದೇ ಇದ್ದುದೇ ಸರಿ ಎನ್ನುತ್ತಾಳೆ. ಭೀಮಸೇನನು ತಂದ ಮಣಿಯನ್ನು ಯುಧಿಷ್ಠಿರನಿಗೆ ಧರಿಸಿಕೊಳ್ಳಲು ಕೊಡುತ್ತಾಳೆ. ಯುಧಿಷ್ಠಿರನು ಆ ಮಣಿಯನ್ನು ಗುರುವಿನ ಪ್ರಸಾದವೆಂಬ ಭಾವನೆಯಿಂದ ತಲೆಯಲ್ಲಿ ಧರಿಸಿಕೊಳ್ಳುತ್ತಾನೆ.

೧೭ನೆಯ ಅಧ್ಯಾಯ :– ೬ ಮತ್ತು ೧ನೆಯ ಅಧ್ಯಾಯಗಳಿಗೆ ಸಂಬಂಧಿಸಿದಂತೆ ಶಿವನ ಗುಣಗಾನಮಾಡುವ ಎರಡು ಅಧ್ಯಾಯಗಳಿವೆ. 'ತನ್ನ ಎಲ್ಲ ಮಕ್ಕಳನ್ನೂ ಮತ್ತು ಪಾಂಚಾಲಪ್ರಮುಖರನ್ನೂ ಒಂದೇ ರಾತ್ರಿಯಲ್ಲಿ ಸಂಹರಿಸಲು ಅಶ್ವತ್ಥಾಮನಿಗೆ ಹೇಗೆ ಸಾಧ್ಯವಾಯಿತು? ಅಂತಹ ಅತುಲ ಪ್ರಭಾವವನ್ನು ಸಂಪಾದಿಸಲು ಅವನು ಯಾವ ಪುಣ್ಯಕರ್ಮವನ್ನು ಮಾಡಿದ್ದನು?' – ಎಂದು ಯುಧಿಷ್ಠಿರನು ಶ್ರೀಕೃಷ್ಣನನ್ನು ಪ್ರಶ್ನಿಸುತ್ತಾನೆ. ಅಶ್ವತ್ಥಾಮನು ಈಶ್ವರನನ್ನು ಶರಣುಹೊಂದಿದ್ದರಿಂದ ಹಾಗೆ ಮಾಡಲು ಸಾಧ್ಯವಾಯಿತೆಂದು ಹೇಳಿ ಶಿವನ ಮಹಿಮೆಯನ್ನು ಹೇಳಲು ಉಪಕ್ರಮಿಸುತ್ತಾನೆ. ೧೭ ಮತ್ತು ೧೮ನೆಯ ಅಧ್ಯಾಯಗಳ ಪೂರ್ತಿಯಾಗಿ ಶಿವನ ಮಾಹಾತ್ಮ್ಯವೇ ಉಕ್ತವಾಗಿದೆ. ಕಡೆಗೆ ಉಪಸಂಹಾರಮಾಡುತ್ತಾ ಶ್ರೀಕೃಷ್ಣನು ಹೇಳುತ್ತಾನೆ :

ನ ತನ್ಮನಸಿ ಕರ್ತವ್ಯಂ ನ ಚ ತದ್ದ್ರೌಣಿನಾ ಕೃತಮ್ ।
ಮಹಾದೇವಪ್ರಸಾದೇನ ಕುರು ಕಾರ್ಯಮನನ್ತರಮ್ ॥೨೬॥

"ಇದಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳಬೇಡ. ಯಾವುದೂ ಅಶ್ವತ್ಥಾಮನು ಮಾಡಿದ್ದಲ್ಲ. ಮಹಾದೇವನ ಪ್ರಸಾದದಿಂದ ಈ ಕಾರ್ಯವು ನಡೆದಿದೆ. ಮುಂದೆ ಮಾಡಬೇಕಾದ ಕಾರ್ಯದಲ್ಲಿ ಆಸಕ್ತನಾಗು."

ಇಲ್ಲಿ ಒಂದೆರಡು ಪ್ರಶ್ನೆಗಳು ಉದ್ಭವಿಸುತ್ತವೆ. ಹಿಂದೆ ಹೇಳಿದಂತೆ ಧೃತರಾಷ್ಟ್ರನು ಅಶ್ವತ್ಥಾಮನು ಮಾಡಿದುದನ್ನು ಕ್ಷುದ್ರಕರ್ಮವೆನ್ನುತ್ತಾನೆ. ಅವನದು ಸಾಹಸಕರ್ಮವಲ್ಲ. ಮಲಗಿದ್ದವರನ್ನು ಕೊಚ್ಚಿಹಾಕಿದ. ಆದರೆ ಒಂದೇ ರಾತ್ರಿಯಲ್ಲಿ ಅಷ್ಟು ಜನರನ್ನು ಕೊಚ್ಚಿಹಾಕಿದುದನ್ನೇ ಸಾಹಸ ಕರ್ಮವೆನ್ನಬಹುದು. ಎಲ್ಲವನ್ನೂ ಮಹಾದೇವನ ಅನುಗ್ರಹದಿಂದಲೇ ಮಾಡಿದ್ದಾದರೆ ಶ್ರೀಕೃಷ್ಣನು ಅಶ್ವತ್ಥಾಮನಿಗೆ ಶಾಪಕೊಡಬಾರದಾಗಿದ್ದಿತು. ಮಹಾದೇವನ ಪ್ರಸಾದದಿಂದಾದುದಕ್ಕೆ ಅಶ್ವತ್ಥಾಮನಿಗೇಕೆ ಶಿಕ್ಷೆ? ಅಶ್ವತ್ಥಾಮನು ತಾನು ಯಾವುದನ್ನೂ ಮಾಡಲಿಲ್ಲ. ಎಲ್ಲವನ್ನೂ ಮಹೇಶನೇ ಮಾಡಿಸಿದನು ಎಂದಾದರೂ ಹೇಳಬಹುದಾಗಿದ್ದಿತು. ಕಥೆಗೆ ಸ್ವಲ್ಪವಾದರೂ ಹೊಂದಿಕೊಳ್ಳುವ ರೀತಿಯಲ್ಲಿ ಈ ಅಧ್ಯಾಯಗಳಿರುವುದಿಲ್ಲ. ಪರ್ವಸಂಗ್ರಹಪರ್ವದಲ್ಲಿ ೬ ಮತ್ತು ೭ನೆಯ ಅಧ್ಯಾಯದ ಪ್ರಸ್ತಾಪವಿದ್ದರೂ ಈ ಎರಡು ಅಧ್ಯಾಯಗಳ ಪ್ರಸ್ತಾಪವಿಲ್ಲ.

ಅತಃ ಪರಂ ಪ್ರವಕ್ಷ್ಯಾಮಿ ಸೌಪ್ತಿಕಂ ಪರ್ವ ದಾರುಣಮ್ ।
ಭಗ್ನೋರುಂ ಯತ್ರ ರಾಜಾನಂ ದುರ್ಯೋಧನಮಮರ್ಷಣಮ್ ॥

ಅಪಯಾತೇಷು ಪಾರ್ಥೇಷು ತ್ರಯಸ್ತೇಽಭ್ಯಾಯಯೂ ರಥಾಃ ।
ಕೃತವರ್ಮಾ ಕೃಪೋ ದ್ರೌಣಿಃ ಸಾಯಾಹ್ನೇ ರುಧಿರೋಕ್ಷಿತಮ್ ॥

ಸಮೇತ್ಯ ದದೃಶುರ್ಭೂಮೌ ಪತಿತಂ ರಣಮೂರ್ಧನಿ ।
ಪ್ರತಿಜಜ್ಞೇ ದೃಢಕ್ರೋಧೋ ದ್ರೌಣಿರ್ಯತ್ರ ಮಹಾರಥಃ ॥೨೯೩॥

ಅಹತ್ವಾ ಸರ್ವಪಾಞ್ಚಾಲಾನ್ಧೃಷ್ಟದ್ಯುಮ್ನಪುರೋಗಮಾನ್ ।
ಪಾಣ್ಡವಾಂಶ್ಚ ಸಹಾಮಾತ್ಯಾನ್ನ ವಿಮೋಕ್ಷ್ಯಾಮಿ ದಂಶನಮ್ ॥೨೯೪॥

ಯತ್ರೈವಮುಕ್ತ್ವಾ ರಾಜಾನಮಪಕ್ರಮ್ಯ ತ್ರಯೋ ರಥಾಃ ।
ಸೂರ್ಯಾಸ್ತಮನವೇಲಾಯಾಮಾಸೇದುಸ್ತೇ ಮಹದ್ವನಮ್ ॥೨೯೫॥

ನ್ಯಗ್ರೋಧಸ್ಯಾಥ ಮಹತೋ ಯತ್ರಾಧಸ್ತಾದ್ವ್ಯವಸ್ಥಿತಾಃ ।
ತತಃ ಕಾಕಾನ್ಬಹೂನ್ರಾತ್ರೌ ದೃಷ್ಟ್ವೋಲೂಕೇನ ಹಿಂಸಿತಾನ್ ॥೨೯೬॥

ದ್ರೌಣಿಃ ಕ್ರೋಧಸಮಾವಿಷ್ಟಃ ಪಿತುರ್ವಧಮನುಸ್ಮರನ್ ।
ಪಞ್ಚಾಲಾನಾಂ ಪ್ರಸುಪ್ತಾನಾಂ ವಧಂ ಪ್ರತಿ ಮನೋ ದಧೇ ॥೨೯೭॥

ಗತ್ವಾ ಚ ಶಿಬಿರದ್ವಾರಿ ದುರ್ದೃಶಂ ತತ್ರ ರಾಕ್ಷಸಮ್ ।
ಘೋರರೂಪಮಪಶ್ಯತ್ಸ ದಿವಮಾವೃತ್ಯ ಧಿಷ್ಠಿತಮ್ ॥೨೯೮॥

ತೇನ ವ್ಯಾಘಾತಮಸ್ತ್ರಾಣಾಂ ಕ್ರಿಯಮಾಣಮವೇಕ್ಷ್ಯ ಚ ।
ದ್ರೌಣಿರ್ಯತ್ರ ವಿರೂಪಾಕ್ಷಂ ರುದ್ರಮಾರಾಧ್ಯ ಸತ್ವರಃ ॥೨೯೯॥

ಪ್ರಸುಪ್ತಾನ್ನಿಶಿ ವಿಶ್ವಸ್ತಾನ್ಧೃಷ್ಟದ್ಯುಮ್ನಪುರೋಗಮಾನ್ ।
ಪಞ್ಚಾಲಾನ್ಸಪರೀವಾರಾನ್ದ್ರೌಪದೇಯಾಂಶ್ಚ ಸರ್ವಶಃ ॥೩೦೦॥

ಕೃತವರ್ಮಣಾ ಚ ಸಹಿತಃ ಕೃಪೇಣ ಚ ನಿಜಘ್ನಿವಾನ್ ।
ಯತ್ರಾಮುಚ್ಯನ್ತ ತೇ ಪಾರ್ಥಾಃ ಪಞ್ಚ ಕೃಷ್ಣಬಲಾಶ್ರಯಾತ್ ॥೩೦೧॥

ಸಾತ್ಯಕಿಶ್ಚ ಮಹೇಷ್ವಾಸಃ ಶೇಷಾಶ್ಚ ನಿಧನಂ ಗತಾಃ ।
ಪಞ್ಚಾಲಾನಾಂ ಪ್ರಸುಪ್ತಾನಾಂ ಯತ್ರ ದ್ರೋಣಸುತಾದ್ವಧಃ ॥೩೦೨॥

ಧೃಷ್ಟದ್ಯುಮ್ನಸ್ಯ ಸೂತೇನ ಪಾಣ್ಡವೇಷು ನಿವೇದಿತಃ ।
ದ್ರೌಪದೀ ಪುತ್ರಶೋಕಾರ್ತಾ ಪಿತೃಭ್ರಾತೃವಧಾರ್ದಿತಾ ॥೩೦೩॥

ಕೃತಾನಶನಸಂಕಲ್ಪಾ ಯತ್ರ ಭರ್ತೄನುಪಾವಿಶತ್ ।
ದ್ರೌಪದೀವಚನಾದ್ಯತ್ರ ಭೀಮೋ ಭೀಮಪರಾಕ್ರಮಃ ॥೩೦೪॥

ಪ್ರಿಯಂ ತಸ್ಯಾಶ್ಚಿಕೀರ್ಷನ್ವೈ ಗದಾಮಾದಾಯ ವೀರ್ಯವಾನ್ ।
ಅನ್ವಧಾವತ್ಸುಸಂಕ್ರುದ್ಧೋ ಭಾರದ್ವಾಜಂ ಗುರೋಃ ಸುತಮ್ ॥೩೦೫॥

ಭೀಮಸೇನಭಯಾದ್ಯತ್ರ ದೈವೇನಾಭಿಪ್ರಚೋದಿತಃ ।
ಅಪಾಣ್ಡವಾಯೇತಿ ರುಷಾ ದ್ರೌಣಿರಸ್ತ್ರಮವಾಸೃಜತ್ ॥೩೦೬॥

ಮೈವಮಿತ್ಯಬ್ರವೀತ್ಕೃಷ್ಣಃ ಶಮಯಂಸ್ತಸ್ಯ ತದ್ವಚಃ ।
ಯತ್ರಾಸ್ತ್ರಮಸ್ತ್ರೇಣ ಚ ತಚ್ಛಮಯಾಮಾಸ ಫಾಲ್ಗುನಃ ॥೩೦೭॥

ದ್ರೌಣೇಶ್ಚ ದ್ರೋಹಬುದ್ಧಿತ್ವಂ ವೀಕ್ಷ್ಯ ಪಾಪಾತ್ಮನಸ್ತದಾ ।
ದ್ರೌಣಿದ್ವೈಪಾಯನಾದೀನಾಂ ಶಾಪಾಶ್ಚಾನ್ಯೋನ್ಯಕಾರಿತಃ ॥೩೦೮॥

ಮಣಿಂ ತಥಾ ಸಮಾದಾಯ ದ್ರೋಣಪುತ್ರಾನ್ಮಹಾರಥಾತ್ ।
ಪಾಣ್ಡವಾಃ ಪ್ರದದುರ್ಹೃಷ್ಟಾ ದ್ರೌಪದ್ಯೈ ಜಿತಕಾಶಿನಃ ॥೩೦೯॥

ಏತದ್ವೈ ದಶಮಂ ಪರ್ವ ಸೌಪ್ತಿಕಂ ಸಮುದಾಹೃತಮ್ ।
ಅಷ್ಟಾದಶಾಸ್ಮಿನ್ನಧ್ಯಾಯಾಃ ಪರ್ವಣ್ಯುಕ್ತಾ ಮಹಾತ್ಮಾ ॥೩೧೦॥

ಶ್ಲೋಕಾನಾಂ ಕಥಿತಾನ್ಯತ್ರ ಶತಾನ್ಯಷ್ಟೌ ಪ್ರಸಂಖ್ಯಯಾ ।
ಶ್ಲೋಕಾಶ್ಚ ಸಪ್ತತಿಃ ಪ್ರೋಕ್ತಾ ಮುನಿನಾ ಬ್ರಹ್ಮವಾದಿನಾ ॥೩೧೧॥

ಪರ್ವಸಂಗ್ರಹದಲ್ಲಿ ೧೭-೧೮ನೆಯ ಅಧ್ಯಾಯಗಳ ಪ್ರಶಂಸೆಯಿರುವುದಿಲ್ಲ. ಆದರೆ ಈ ಪರ್ವದಲ್ಲಿ ೧೮ ಅಧ್ಯಾಯಗಳಿವೆಯೆಂದು ಉಕ್ತವಾಗಿದೆ. ಇಲ್ಲಿ ಹೇಳಿರುವಂತೆ ಶ್ಲೋಕಗಳ ಸಂಖ್ಯೆ ೮೭೦ ಇರಬೇಕಾಗಿದ್ದಿತು. ಭಾಷಾಂತರಿಸುತ್ತಿರುವ ಪಾಠದಲ್ಲಿ ೮೦೯ ಶ್ಲೋಕಗಳು ಮಾತ್ರವೇ ಇವೆ. ಭಂ. ರಿ. ಇನ್‌ಸ್ಟಿಟ್ಯೂಟಿನವರ ಪುಸ್ತಕದಲ್ಲಿಯೂ ೧೮ ಅಧ್ಯಾಯಗಳೇ ಇದ್ದು ಶ್ಲೋಕಸಂಖ್ಯೆಯು ೭೫೨ ಮಾತ್ರವೇ ಇದೆ. ಇದುವರೆಗಿನ ಎಲ್ಲ ಪರ್ವಗಳಲ್ಲಿಯೂ ಪರ್ವಸಂಗ್ರಹಪರ್ವದಲ್ಲಿ ಹೇಳಿರುವ ಶ್ಲೋಕಗಳ ಸಂಖ್ಯೆಗಿಂತಲೂ ಪಾಠಕ್ರಮದ ಶ್ಲೋಕಸಂಖ್ಯೆಯು ಸಾಮಾನ್ಯವಾಗಿ ಹೆಚ್ಚೇ ಇರುತ್ತದೆ. ಆದರೆ ಈ ಪರ್ವದಲ್ಲಿ ಪರ್ವಸಂಗ್ರಹಪರ್ವದಲ್ಲಿನ ಶ್ಲೋಕ ಸಂಖ್ಯೆಯು ಅಧಿಕವಾಗಿದ್ದು ಪಾಠಕ್ರಮದಲ್ಲಿ ಬಂದಿರುವ ಶ್ಲೋಕಗಳ ಸಂಖ್ಯೆಯು ಕಡಿಮೆ ಇರುತ್ತದೆ. ಮುಂದಿನ ಪರ್ವದೊಡನೆ ಸೇರಿಹೋಗಿರಬಹುದೆಂದು ಅನುಮಾನಿಸಬಹುದಾಗಿದೆ.

ಸ್ತ್ರೀಪರ್ವವು ಹನ್ನೊಂದನೆಯ ಪರ್ವ. ಜನಮೇಜಯನ ಪ್ರಶ್ನೆಯಿಂದ ಮೊದಲನೆಯ ಅಧ್ಯಾಯವು ಪ್ರಾರಂಭವಾಗುತ್ತದೆ. ದುರ್ಯೋಧನನು ಹತನಾದನಂತರ ಯುಧಿಷ್ಠಿರ-ಕೃತವರ್ಮ-ಕೃಪಾಶ್ವತ್ಥಾಮರು ಮುಂದೇನು

ಮಾಡಿದರೆಂದು ಪ್ರಶ್ನಿಸುತ್ತಾನೆ. ಜನಮೇಜಯನು ಮತ್ತೊಂದು ಪ್ರಶ್ನೆಯನ್ನು ಕೇಳುತ್ತಾ ಹೀಗೆ ಹೇಳುತ್ತಾನೆ : **ಅಶ್ವತ್ಥಾಮ್ನಃ ಶ್ರುತಂ ಕರ್ಮ ಶಾಪಾದನ್ಯೋನ್ಯಕಾರಿತಾತ್ ।** ಇಲ್ಲಿ **ಶಾಪಾದನ್ಯೋನ್ಯಕಾರಿತಾತ್** : ಎಂದರೆ ಪರಸ್ಪರವಾಗಿ ಶಾಪಕೊಟ್ಟುದರ ದೆಸೆಯಿಂದ ಆದ ಪರಿಣಾಮವನ್ನು ಕೇಳಿದೆನು–ಎಂದು ಅರ್ಥವಾಗುತ್ತದೆ. ಇಲ್ಲಿ ಶ್ರೀಕೃಷ್ಣನು ಅಶ್ವತ್ಥಾಮನಿಗೆ ಶಾಪಕೊಡುವ ಪ್ರಸಂಗವು ಬರುತ್ತದೆಯೇ ಹೊರತು ಅಶ್ವತ್ಥಾಮನು ಶ್ರೀಕೃಷ್ಣನಿಗೆ ಶಾಪಕೊಟ್ಟ ಪ್ರಸಂಗವು ಬರುವುದಿಲ್ಲ. ತಾನು ಬಿಟ್ಟ ಬ್ರಹ್ಮಾಸ್ತ್ರವು ಉತ್ತರೆಯ ಗರ್ಭದ ಮೇಲೆ ಬೀಳುವುದೆಂದು ಅಶ್ವತ್ಥಾಮನು ಘೋಷಿಸುತ್ತಾನೆ. (ಹೀಗೆ ನಾವೂ ಅರ್ಥಮಾಡಿರುತ್ತೇವೆ) ಹೀಗೆ ಹೇಳುವುದು ಶಾಪವಾಗುವುದಿಲ್ಲ. ಪಾಠಾಂತರದಲ್ಲಿಯೂ 'ಶಾಪಶ್ಚಾನ್ಯೋನ್ಯಕಾರಿತಃ : ಪರಸ್ಪರವಾಗಿ ಶಾಪವು ಕೊಡಲ್ಪಟ್ಟಿತು'–ಎಂಬುದಾಗಿಯೇ ಇದೆ. ಬ್ರಹ್ಮಾಸ್ತ್ರವು ಪಾಂಡವರ ಗರ್ಭದ ಮೇಲೆ ಬಿದ್ದೇ ಬೀಳುತ್ತದೆ. **ಪತಿಷ್ಯತಿ ತದಸ್ತ್ರಂ ಹಿ ಗರ್ಭೇ ತಸ್ಯ ಮಯೋದ್ಯತಮ್** ಎಂದು ಅಶ್ವತ್ಥಾಮನು ಹೇಳಿದುದನ್ನೇ ಶಾಪವೆಂದು ಭಾವಿಸಬೇಕಾಗಿದೆ.

ಸಂಜಯನು, ದುರ್ಯೋಧನನ ಮರಣಕ್ಕಾಗಿ ಶೋಕಿಸಿ ಫಲವಿಲ್ಲವೆಂದೂ, ಹದಿನೆಂಟು ಅಕ್ಷೌಹಿಣೀಸೈನ್ಯಗಳೂ ಹತವಾಗಿಹೋದುವೆಂದೂ, ಗತಿಸಿದವರ ಪ್ರೇತಕಾರ್ಯಗಳನ್ನು ಮಾಡಬೇಕೆಂದೂ–ಧೃತರಾಷ್ಟ್ರನಿಗೆ ಹೇಳುತ್ತಾನೆ. ಧೃತರಾಷ್ಟ್ರನು ತಾನು ಹಿಂದೆ ಮಾಡಿದ ಅಪರಾಧಗಳೆಲ್ಲವನ್ನೂ ನೆನೆಸಿಕೊಂಡು ಶೋಕಪಡುತ್ತಾನೆ. ಸಂಜಯನು ಅನೇಕ ದೃಷ್ಟಾಂತಗಳ ಮೂಲಕವಾಗಿ ಧೃತರಾಷ್ಟ್ರನಿಗೆ ಸಮಾಧಾನವನ್ನು ಹೇಳುತ್ತಾನೆ. ಅವನು ಕೊಡುವ ದೃಷ್ಟಾಂತಗಳು ಹೃದಯಂಗಮವಾಗಿವೆ. ಅಧ್ಯಾಯದ ಕಡೆಯವರೆಗೂ ಸಂಜಯನ ಮಾತುಗಳೇ ಇವೆ.

೭ನೆಯ ಅಧ್ಯಾಯ :– ಧೃತರಾಷ್ಟ್ರನಿಗೆ ಸಮಾಧಾನವಾಗದಿರಲು ವಿದುರನು ಅವನಿಗೆ ಸಮಾಧಾನಮಾಡಲು ಪ್ರಯತ್ನಿಸುತ್ತಾನೆ. ೨ನೆಯ ಅಧ್ಯಾಯದಿಂದ ೭ನೆಯ ಅಧ್ಯಾಯದ ಪೂರ್ತಿಯಾಗಿ ವಿದುರನು ಹೇಳಿದ ಅಮೃತರೂಪವಾದ ಮಾತುಗಳಿವೆ. ಈ ಮಧ್ಯದಲ್ಲಿ ಅವನು ಒಮ್ಮೆಯಾದರೂ ದುರ್ಯೋಧನನನ್ನು ನಿಂದಿಸುವುದಿಲ್ಲ. ಶರೀರವು ಅಶಾಶ್ವತವೆಂಬುದನ್ನು

ಮನದಟ್ಟಾಗುವಂತೆ ಹೇಳುತ್ತಾನೆ. ಇದನ್ನು 'ವಿದುರಗೀತೆ' ಎಂದೇ ಹೇಳಬಹುದು.

೮ನೆಯ ಅಧ್ಯಾಯ :– ವಿದುರನ ಈ ಗಹನವಾದ ಮಾತನ್ನು ಕೇಳಿದ ನಂತರವೂ ಧೃತರಾಷ್ಟ್ರನು ಶೋಕಪೀಡಿತನಾಗಿ ಮೂರ್ಛೆಬೀಳುತ್ತಾನೆ. ವ್ಯಾಸರೇ ಆದಿಯಾಗಿ ಎಲ್ಲರೂ ರಾಜನಿಗೆ ಶೈತ್ಯೋಪಚಾರಮಾಡುತ್ತಾರೆ. ಸ್ವಲ್ಪಹೊತ್ತಿನ ಮೇಲೆ ಎಚ್ಚರಗೊಂಡ ರಾಜನು ಈ ಶೋಕಕ್ಕಿಂತಲೂ ಮರಣವೇ ಲೇಸೆಂದು ಉದ್ಗಾರಮಾಡುತ್ತಾನೆ. ಆಗ ವ್ಯಾಸರು ರಾಜನಿಗೆ ಸಮಾಧಾನವನ್ನು ಹೇಳಲು ಪ್ರಾರಂಭಿಸುತ್ತಾರೆ. ಭೂಭಾರವನ್ನು ಕಡಿಮೆ ಮಾಡುವ ಸಲುವಾಗಿಯೇ ದುರ್ಯೋಧನನು ಹುಟ್ಟಿದ್ದನೆಂಬ ದೇವರಹಸ್ಯವನ್ನು ವ್ಯಾಸರು ಬಹಿರಂಗಪಡಿಸುತ್ತಾರೆ. 'ನೀನು ಹೀಗೆಯೇ ಶೋಕಿಸುತ್ತಿದ್ದರೆ ಯುಧಿಷ್ಠಿರನೂ ಪ್ರಾಣತೊರೆಯುವನು' – ಎನ್ನುತ್ತಾರೆ. ಕಟ್ಟಕಡೆಗೆ ಧೃತರಾಷ್ಟ್ರನು, ಎಲ್ಲವೂ ದೈವಸಂಕಲ್ಪದಂತೆ ನಡೆದಿರುವುದೆಂಬುದನ್ನು ಮನಗಂಡು ಸಮಾಧಾನಹೊಂದುತ್ತಾನೆ. ವ್ಯಾಸರು ಅದೃಶ್ಯರಾಗುತ್ತಾರೆ.

೯ನೆಯ ಅಧ್ಯಾಯ :– ಈ ಅಧ್ಯಾಯದಲ್ಲಿ ಬರುವ ಮೊದಲನೆಯ ಶ್ಲೋಕವೊಂದನ್ನು ಬಿಟ್ಟು ಉಳಿದ ಶ್ಲೋಕಗಳೆಲ್ಲವೂ ೧ ಮತ್ತು ೨ನೆಯ ಅಧ್ಯಾಯದಲ್ಲಿರುವುವೇ ಆಗಿವೆ. ಹೀಗೆ ಬಂದಿರುವುದು ಅಸಂಗತವಾಗಿಯೂ ಕಾಣುತ್ತದೆ. ಈ ಅಧ್ಯಾಯವು ಹೆಚ್ಚು ಪಾಠವಿರಬಹುದೆಂಬುದು ನಮ್ಮ ಅಭಿಪ್ರಾಯವಾಗಿದೆ. ಭಂ. ರಿ. ಇನ್‌ಸ್ಟಿಟ್ಯೂಟಿನವರ ಪುಸ್ತಕದಲ್ಲಿ ಈ ಅಧ್ಯಾಯವಿರುವುದಿಲ್ಲ. ನಾವೂ ಈ ಅಧ್ಯಾಯವನ್ನು ಭಾಷಾಂತರಿಸುವಾಗ ಪುನರುಕ್ತಿಯಾಗುವುದೆಂಬ ಕಾರಣದಿಂದ ಶ್ಲೋಕಗಳನ್ನು ಕೊಡದೇ ಭಾಷಾಂತರವನ್ನು ಮಾತ್ರವೇ ಕೊಟ್ಟಿರುತ್ತೇವೆ. ಆದರೆ ಇಲ್ಲಿ ಮತ್ತೊಂದು ಸ್ವಾರಸ್ಯವಿದೆ. ೧೦ನೆಯ ಅಧ್ಯಾಯದ ಮೊದಲನೆಯ ಶ್ಲೋಕವು ಹೀಗೆ ಬಂದಿರುತ್ತದೆ : ವಿದುರಸ್ಯ ತು ತದ್ವಾಕ್ಯಂ ಶ್ರುತ್ವಾ ತು ಪುರುಷರ್ಷಭಃ । ಯುಜ್ಯತಾಂ ಯಾನಮಿತ್ಯುಕ್ತ್ವಾ ಪುನರ್ವಚನಮಬ್ರವೀತ್ ॥ ವಿದುರನು ಹೇಳಿದ ಮಾತನ್ನು ಕೇಳಿ ಪುರುಷರ್ಷಭನಾದ ಧೃತರಾಷ್ಟ್ರನು ರಥವನ್ನು ಸಿದ್ಧಗೊಳಿಸುವಂತೆ ಸಾರಥಿಗೆ ಆಜ್ಞಾಪಿಸಿ ವಿದುರ

ನಿಗೆ ಪುನಃ ಹೇಳಿದನು–ಈ ವಾಕ್ಯವಿರುವುದರಿಂದ ಹಿಂದಿನ ಅಧ್ಯಾಯದಲ್ಲಿ ವಿದುರನೇ ಮಾತನಾಡುತ್ತಿದ್ದಿರಬೇಕಲ್ಲವೇ? ಈ ದೃಷ್ಟಿಯಿಂದ ಹಿಂದಿನ ಅಧ್ಯಾಯವು ಸಮಂಜಸವಾಗಿ ಕಾಣುವುದು ನಿಶ್ಚಯ. ವಿದುರನ ಮಾತೇ ಇರಬೇಕೆಂಬ ಕಾರಣದಿಂದಲೂ ಈ ಅಧ್ಯಾಯವನ್ನು ಸೃಷ್ಟಿಸಿರಬಹುದು. ಈ ೯ನೆಯ ಅಧ್ಯಾಯವಿಲ್ಲದೆ ೮ನೆಯ ಅಧ್ಯಾಯದಿಂದಲೇ ಕಥೆಯು ೧೦ನೆಯ ಅಧ್ಯಾಯಕ್ಕೆ ಮುಂದುವರಿದಿದೆಯೆಂದು ಇಟ್ಟುಕೊಂಡರೆ– ೮ನೆಯ ಅಧ್ಯಾಯ ಪೂರ್ತಿಯಾಗಿ ವ್ಯಾಸರ ಮಾತುಗಳಿವೆ. ವ್ಯಾಸರ ಮಾತುಗಳನ್ನು ಕೇಳಿದ ನಂತರ '**ವಿದುರಸ್ಯ ತು ತದ್ವಾಕ್ಯಂ**' ಎಂದು ಧೃತರಾಷ್ಟ್ರನು ಹೇಳಿರಲಾರನು. ಇದರಿಂದ ೮ನೆಯ ಅಧ್ಯಾಯವೂ ಹೆಚ್ಚಿನದೇ ಎಂದು ಸಂದೇಹಿಸಲು ಅವಕಾಶವಾಗುತ್ತದೆ. ೮ನೆಯ ಅಧ್ಯಾಯದ ಮೊದಲನೆಯ ಶ್ಲೋಕದಲ್ಲಿಯೂ **ವಿದುರಸ್ಯ ತು ತದ್ವಾಕ್ಯಂ ನಿಶಮ್ಯ ಕುರುಸತ್ತಮಃ ।** ಎಂದು ಶ್ಲೋಕದ ಪೂರ್ವಾರ್ಧವಿದ್ದು, ಉತ್ತರಾರ್ಧದಲ್ಲಿ **ಪುತ್ರಶೋಕಾಭಿಸಂತಪ್ತಃ ಪಪಾತ ಭುವಿ ಮೂರ್ಛಿತಃ ॥** ಎಂಬುದಾಗಿದೆ. ೬ನೆಯ ಅಧ್ಯಾಯದಲ್ಲಿ ವಿದುರನು ಹೇಳಿದ ಮಾತುಗಳು ಧೃತರಾಷ್ಟ್ರನ ಮೇಲೆ ಯಾವ ವಿಧವಾದ ಪರಿಣಾಮವನ್ನೂ ಉಂಟುಮಾಡಲಿಲ್ಲವೇ? – ಎಂಬ ಸಂದೇಹವೂ ಇದರಿಂದ ಉಂಟಾಗುತ್ತದೆ. ವಿದುರನು ತನ್ನ ಮಾತನ್ನೊಳಗೊಂಡ ಮೊದಲನೆಯ ಅಧ್ಯಾಯವನ್ನು ಮುಗಿಸುತ್ತಲೇ (ಅನುಕ್ರಮದಲ್ಲಿ ಇದು ಎರಡನೆಯ ಅಧ್ಯಾಯವಾಗುವುದು) ಮೂರನೆಯ ಅಧ್ಯಾಯದ ಪ್ರಾರಂಭದಲ್ಲಿ ಧೃತರಾಷ್ಟ್ರನು ಈ ಮಾತನ್ನು ಹೇಳುತ್ತಾನೆ. **ಸುಭಾಷಿತೈರ್ಮಹಾಪ್ರಾಜ್ಞ ಶೋಕೋಽಯಂ ವಿಗತೋ ಮಮ ।ಭೂಯ ಏವ ತು ವಾಕ್ಯಾನಿ ಶ್ರೋತುಮಿಚ್ಛಾಮಿ ತತ್ತ್ವತಃ** (೧) "ಮಹಾಪ್ರಾಜ್ಞನೇ! ನಿನ್ನ ಯುಕ್ತಿಯುಕ್ತವಾದ ಧರ್ಮಸಮ್ಮತವಾದ ಸುಭಾಷಿತಗಳನ್ನು ಕೇಳಿದನಂತರ ನನ್ನ ಶೋಕವು ಹೊರಟುಹೋಯಿತು." ಎನ್ನುತ್ತಾನೆ. ಮುಂದಿನ ಅಧ್ಯಾಯಗಳಲ್ಲಿಯೂ ಧೃತರಾಷ್ಟ್ರನು ಉತ್ಸಾಹದಿಂದಲೇ ಪ್ರಶ್ನೆಗಳನ್ನು ಕೇಳುತ್ತಾನೆ. ಧರ್ಮರಹಸ್ಯವನ್ನು ವಿಸ್ತಾರವಾಗಿ ಹೇಳುವಂತೆ ಕೇಳುತ್ತಲೇ ಇರುತ್ತಾನೆ. ಆದುದರಿಂದಲೇ ವಿದುರನ ಉಪದೇಶವು ೭ನೆಯ ಅಧ್ಯಾಯದವರೆಗೂ ನಾನಾಮುಖವಾಗಿ ಬೆಳೆಯುತ್ತದೆ.

ಇಷ್ಟು ಹೇಳಿದನಂತರ ಧೃತರಾಷ್ಟ್ರನಿಗೆ ಸಮಾಧಾನವಾಗಲೇಬೇಕು. ವಿದುರನ ಮಾತನ್ನು ಕೇಳಿದನಂತರ ಪುನಃ ಧೃತರಾಷ್ಟ್ರನು ದುಃಖದಿಂದ ಮೂರ್ಛಿತನಾಗಿ ಕೆಳಗೆ ಬಿದ್ದನು (೧-೮) – ಎಂದು ಹೇಳಿರುವುದು ಅಸಂಗತವಾಗಿ ಕಾಣುತ್ತದೆ. ಈ ಕಾರಣದಿಂದ ೮ ಮತ್ತು ೯ನೆಯ ಎರಡು ಅಧ್ಯಾಯಗಳೂ ಹೆಚ್ಚಿಂದು ಭಾವಿಸಬಹುದಾಗಿದೆ. ಭಂ. ರಿ. ಇನ್‌ಸ್ಟಿಟ್ಯೂಟಿನವರ ಪುಸ್ತಕದಲ್ಲಿ '**ವಿದುರಸ್ಯ ತು ತದ್ವಾಕ್ಯಂ**' ಎಂದು ಶ್ಲೋಕಕ್ಕೆ ಬದಲಾಗಿ '**ಗತೇ ಭಗವತಿ ವ್ಯಾಸೇ**' ಎಂಬ ಶ್ಲೋಕವಿದ್ದು ೨ನೆಯ ಶ್ಲೋಕವು ಹೀಗೆ ಬರುತ್ತದೆ. **ಏತಚ್ಛ್ರುತ್ವಾ ನರಶ್ರೇಷ್ಠ ಚಿರಂ ಧ್ಯಾತ್ವಾ ತ್ವಚೇತನಃ। ಸಂಜಯಂ ಯೋಜಯೇತ್ಯುಕ್ತ್ವಾ ವಿದುರಂ ಪ್ರತ್ಯಭಾಷತ ॥೨॥** ಹೀಗಾದರೂ ಪಾಠಾನುಕ್ರಮವು ಇರಬೇಕಾಗುವುದು.

೧೦ನೆಯ ಅಧ್ಯಾಯ :– ವಿದುರನ ಹಿತೋಪದೇಶವನ್ನು ಕೇಳಿದ ಧೃತರಾಷ್ಟ್ರನು ಸಮಾಧಾನಗೊಂಡು ರಥವನ್ನು ಸಿದ್ಧಗೊಳಿಸುವಂತೆ ಸಾರಥಿಗೆ ಹೇಳಿ ವಿದುರನಿಗೆ ಗಾಂಧಾರೀ-ಕುಂತಿಯರೇ ಮೊದಲಾದ ಅಂತಃಪುರದ ಸ್ತ್ರೀಯರನ್ನು ಕರೆತರಲು ಹೇಳುತ್ತಾನೆ. ಅರಮನೆಯಿಂದ ಹೊರಟಾಗ ಸ್ತ್ರೀಯರ ಗೋಳಿನ ವರ್ಣನೆಯು ಹೃದಯವಿದ್ರಾವಕವಾಗಿದೆ. ಅಧ್ಯಾಯದ ಕಡೆಯವರೆಗೂ ಈ ಅಳುವಿನ ವರ್ಣನೆಯೇ ಇದೆ.

[ಮುಂದುವರಿಯುವುದು .]

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.